P
for Quality Snuff
H. Rama Rao
and Sons.
High Class Snuff Manufacturers
Mangalore, S. I.
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your
family TODAY
Buy a policy in the
THE BOMBAY LIFE
Madras Branch Secretaries
Kochikar Brothers,
Udipi Mangalore, Bangalore, Madras, Bombay
and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೨ನೇ ಶುಕ್ರವಾರ ಅಗೋಸ್ತು ೧೯೩೫. (2-8-'35) ಸಂಚಿಕೆ ೩೦

# ಯಾವ ಶರ್ತವೂ ಇಲ್ಲದೆ ಶ್ರೀ ಶರಚ್ಚಂದ್ರ ಬೋಸರನ್ನು ಅಕಸ್ಮಾತ್ ಬಿಟ್ಟರು!

## ಸರಕಾರದ ಮೇಲೆ ದಾವೆ!

### ಲಾಹೋರ್ ಎಕ್ಸಿಕ್ಯೂಟಿವ್ ಆಫೀಸರರಿಗೆ ಸಂಬಳವಿಲ್ಲ!

ಲಾಹೋರ್, ಜುಲ್ಯ ೩೦.

ಪಂಜಾಬ್ ಎಕ್ಸಿಕ್ಯೂಟಿವ್ ಆಫೀಸರರ ಶಾಸನದ ಮೇರೆಗೆ—ಪಂಜಾಬಿನಲ್ಲಿ ಮುನಿಸಿಪಾಲಿಟಿಗಳನ್ನು ಸಜ್ಜುಗೊಳಿಸುವುದಕ್ಕಾಗಿ—ಎಕ್ಸಿಕ್ಯೂಟಿವ್ ಆಫೀಸರರನ್ನು ನೇಮಿಸಲಾಗಿತ್ತು.

ಲಾಹೋರು ಮುನಿಸಿಪಾಲಿಟಿಯು ತನ್ನ ಜವಾಬ್ದಾರಿಕೆಯಿಂದ ಎಕ್ಸಿಕ್ಯೂಟಿವ್ ಆಫೀಸರನನ್ನು ನೇಮಿಸಲಿಲ್ಲ. ಅದಕ್ಕಾಗಿ ಸರಕಾರವು ರೈಬಹದೂರ್ ಲಾಲಾ ಶಂಕರ ದಾಸರನ್ನು ಈ ಸ್ಥಾನಕ್ಕೆ ೧೯೩೨ನೇ ಜುಲ್ಯ ೮ರಲ್ಲಿ ನೇಮಕ ಮಾಡಿತು. ೧೯೩೫ನೇ ಜುಲ್ಯ ೮ರಲ್ಲಿ ಈ ಉದ್ಯೋಗಸ್ಥರ ಅವಧಿಯು ಮುಗಿಯಿತು. ಆದರೆ ಸರಕಾರವು—ತನಗೆ ಆ ಆಫೀಸರರನ್ನು ಪುನಃ ನೇಮಿಸುವ ಹಕ್ಕು ಇದೆಯೆಂದು ತಿಳಿದು ಅವರನ್ನು ಮಾಸಿಕ ೧೨೦೦ ರೂಪಾಯಿ ಸಂಬಳ ಮತ್ತು ೧೦೦ ರೂಪಾಯಿ ಭತ್ತೆಯ ಮೇಲೆ ಎರಡು ವರ್ಷಗಳ ಹೆಚ್ಚಿನ ಅವಧಿಗೆ ನೇಮಕ ಮಾಡಿತು.

ಒಡನೆ ಮೂವರು ತೆರಿಗೆದಾರರು ಲಾಹೋರು ಸಬ್ ಜಡ್ಜರ ಕೋರ್ಟಿನಲ್ಲಿ ಒಂದು ಮೊಕದ್ದಮೆ ಹೂಡಿ ಸರಕಾರವು ಈ ನೇಮಕವನ್ನು ಮಾಡಿದುದು ಅಸಮಂಜಸವಿದೆಯೆಂದೂ, ಅದರಿಂದ ಮುನಿಸಿಪಾಲಿಟಿಯು ಎಕ್ಸಿಕ್ಯೂಟಿವ್ ಆಫೀಸರರಿಗೆ ಮುಂದಿನ ಸಂಬಳವನ್ನಾಗಲೀ ಭತ್ತೆಯನ್ನಾಗಲೀ ಕೊಡಬಾರದೆಂದು ಪ್ರಾರ್ಥಿಸಿಕೊಂಡರು. ಸೆಕ್ರೆಟರಿ ಒಫ್ ಸ್ಟೇಟರನ್ನು ಒಂದು ಪಾರ್ಟಿಯನ್ನಾಗಿ ಮಾಡಿ ಸರಕಾರದ ಮೇಲೆ ದಾವೆಯು ನಡೆಯಿತು. ತಾವು ಒಂದು ಪಾರ್ಟಿಯಲ್ಲವೆಂದು ಸರಕಾರವು ಹೇಳಿತು. ಆದರೆ ಕೋರ್ಟು ಅವರನ್ನು ಒಂದು ಪಾರ್ಟಿಯಾಗಿ ತೆಗೆದುಕೊಂಡು, ನ್ಯಾಯವಿಚಾರಣೆ ಮಾಡಿ, ಲಾಹೋರು ಮುನಿಸಿಪಾಲಿಟಿಯು ಎಕ್ಸಿಕ್ಯೂಟಿವ್ ಆಫೀಸರರಿಗೆ ಸಂಬಳವನ್ನಾಗಲೀ ಭತ್ತೆಯನ್ನಾಗಲೀ ಕೊಡಕೂಡದೆಂದು ಪರ್ಮನೆಂಟ್ ಇಂಜಕ್ಷನನ್ನು ಕೊಟ್ಟಿತು.

ಸರಕಾರವು ಕೋರ್ಟಿನೊಡನೆ ಪ್ರಾರ್ಥಿಸಿ ತನ್ನನ್ನು ಪಾರ್ಟಿಯನ್ನಾಗಿ ತೆಗೆದುಕೊಳ್ಳಬಾರದೆಂದು ಹೇಳಿದೆ.

## ಸರಕಾರದ ಧೋರಣೆಯು ಬದಲಾಗುವುದೇ?

ರೆಗ್ಯುಲೇಷನ್ ೩ರ ಪ್ರಕಾರ ಇವರ ತಾ. ೬-೨-೩೨ರಿಂದ ರಾಜಬಂಧಿಗಳಾಗಿದ್ದರು. ಇವರು ಎಸೆಂಬ್ಲಿಗೆ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾಗಿದ್ದು, ತಾವು ಬಂಧನದಲ್ಲಿರುವುದರಿಂದ ಎಸೆಂಬ್ಲಿ ಸದಸ್ಯರಾಗಿದ್ದು ಏನೂ ಪ್ರಯೋಜನವಿಲ್ಲವೆಂದು ರಾಜೀನಾಮೆಯಿತ್ತರು. ಇವರು ಶ್ರೀ ಸುಭಾಷ್ಚಂದ್ರ ಬೋಸರವರ ಸಹೋದರ. ಶ್ರೀ ಬೋಸರವರ ಬಿಡುಗಡೆಗೆ ಯಾವ ಶರ್ತವನ್ನೂ ಹಾಕಲಾಗಲಿಲ್ಲ. ಬಹು ದಿನಗಳಿಂದಲೂ ಶ್ರೀ ಬೋಸರವರನ್ನು ಕುರ್ಸಿಯಾಂಗಿನಲ್ಲಿ ಬಂಧಿಸಲಾಗಿತ್ತು. ಆದರೆ ೧೫ ದಿನಗಳ ಹಿಂದೆ ಇವರನ್ನು ಕಲ್ಕತ್ತೆಗೆ ಕರೆತರಲಾಯಿತು. ಇವರ ತಾಯಿಯು ಕಾಯಿಲೆಯಿಂದ ನರಳುತ್ತಿದ್ದಾಗ ಅವರ ಹತ್ತಿರ ಇರಲು ಇವರಿಗೆ ಅವಕಾಶ ಕೊಡಲಾಗಿತ್ತು. ತಾಯಿಯು ಹಾಸಿಗೆಯ ಹತ್ತಿರ ಶ್ರೀ ಬೋಸರವರು ಕುಳಿತಿದ್ದರು. ಆಗ ಪೋಲೀಸ್ ಡೆಪ್ಯುಟಿ ಕಮಿಶನರು ಬಂದು ಅವರ ಬಿಡುಗಡೆಯ ಸಮಾಚಾರವನ್ನು ತಿಳಿಸಿದರು. 'ಹಾಗಾದರೆ ನನ್ನನ್ನು ಹೈಕೋರ್ಟಿಗೆ ಹೋಗಲು ಅವಕಾಶ ಕೊಡಿ' ಎಂದು ಬೋಸರು ಕೇಳಿದರು. ಅದಕ್ಕೆ ಅಪ್ಪಣೆಯು ದೊರೆಯಿತು. ತತ್‌ಕ್ಷಣವೇ ಬೋಸರು ಹೈಕೋರ್ಟಿಗೆ ಹೋದರು. ಹೈಕೋರ್ಟಿನಲ್ಲಿ ಶ್ರೀ ಬೋಸರನ್ನು ಸ್ನೇಹಿತರೆಲ್ಲರೂ ಸ್ವಾಗತೀಕರಿಸಿದರು. ನೋಡಲು ಬೋಸರು ಸ್ವಲ್ಪ ವಯಸ್ಸಾದವರಂತೆ ಕಂಡರೂ, ಯುವಕನ ಉತ್ಸಾಹವು ಅವರಲ್ಲಿ ಕಾಣುತ್ತಿತ್ತು.

ಎಸೋಸಿಯೇಟೆಡ್ ಪ್ರತಿನಿಧಿಯು ಬೋಸರನ್ನು ಸಂದರ್ಶಿಸಿ ಕೇಳಲಾಗಿ 'ನಾನು ಒಂದು ಸಂದೇಶವನ್ನು ಕೊಡಬೇಕೆಂದು ಒತ್ತಾಯಪಡಿಸುವುದಾದರೆ ನಾನು ನನ್ನ ದೇಶಕ್ಕೆ ವಂದಿಸ್ತು ಮಾತ ಹೇಳಬಲ್ಲೆ' ಎಂದರು.

ಶ್ರೀ ಶರಚ್ಚಂದ್ರ ಬೋಸರವರು ಎಸೆಂಬ್ಲಿ ಸ್ಥಾನಕ್ಕೆ ಶ್ರೀ ಶರಚ್ಚಂದ್ರ ಬೋಸರವರು ಸದಸ್ಯರಾಗಿದ್ದರು. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತು ಶ್ರೀ ಬೋಸರವರನ್ನು ಪುನಃ ಚುನಾವಣೆಗೆ ನಿಲ್ಲುವಂತೆ ಒತ್ತಾಯಪಡಿಸುವುದಾಗಿ ಗೊತ್ತಾಗಿದೆ.

ಸರಕಾರವು ೧೯೩೨ರಲ್ಲಿ ಜಾರಿಗೆ ತಂದ ನೀತಿಗೂ ಈಗಿನ ನೀತಿಗೂ ವ್ಯತ್ಯಾಸವಿದೆಯೆಂದು ಕಾಣುತ್ತದೆ. ಈಗ ನಿರ್ಬಂಧಿಗಳಾಗಿರುವವರೆಲ್ಲರೂ ಉದ್ಯೋಗವನ್ನು ಹೊಂದುವಂತೆ ಮಾಡುವುದಕ್ಕೂ, ಕಾಲಾನುಸಾರ ನಿಯಮಿತವಾದಂತಹ ಬಿಡುಗಡೆಗಳನ್ನು ಮಾಡುವುದಕ್ಕೂ ಸರಕಾರದ ಆಲೋಚನೆಯಿದೆಯೆಂದು ತಿಳಿಯಲಾಗಿದೆ.

ಬಂಗಾಳದ ಗವರ್ನರರು ಕಲ್ಕತ್ತೆಗೆ ಈ ಮಳೆಗಾಲದಲ್ಲಿ ಬರುವುದರಲ್ಲಿ ಒಂದು ವಿಶೇಷ ವಿದ್ಯಮಾನ ಇರಬೇಕೆಂದೂ ಒಂದು ವೇಳೆ ಅವರು ಕಲ್ಕತ್ತೆಗೆ ಬಂದುದರಲ್ಲಿ ಇದೇ ಆಶಯವಿರಬಹುದೇ ಎಂದು ಊಹೆ. ಸರಕಾರದ ಮುಂದಿನ ವಿಧಾನವನ್ನು ನಿರೀಕ್ಷಿಸಲಾಗಿದೆ.

## Latest News.

ತಾ. ೩೧-೭-೩೫

ಕೊಂಗ್ರೆಸ್ ಪಕ್ಷೀಯರು ಸರಕಾರ ದಡಿಯಲ್ಲಿ ಅಧಿಕಾರಗಳನ್ನು ಸ್ವೀಕರಿಸಬೇಕೊ ಬೇಡವೋ ಎಂಬ ಪ್ರಶ್ನೆಯನ್ನು ವಾರ್ಧಾದ ಸಭೆಯಲ್ಲಿ ಸದ್ಯಕ್ಕೆ ಹಿಂದಿರಿಸಲಾಗಿದೆ.

ರಂಗೂನ್ ಜುಲ್ಯ ೩೧.

ರಂಗೂನಿನ ಬಂದರದಲ್ಲಿ 'ಬರ್ನೆಸ್ಟನ' ಎಂಬ ಸ್ಟೀಮರು ಮುಳುಗಿತು.

ಲಾಹೋರ ಜುಲ್ಯ ೩೧.

ಲಾಹೋರಿನ ಗಲಭೆಯು ಕಡಮೆಯಾಗಿದೆ. ಶಾಂತಸ್ಥಾಪನೆಯಾಗುತ್ತಲಿದೆ.

ಲಾಹೋರ ಜುಲ್ಯ ೩೧.

ಲಾಹೋರು ಮುನಿಸಿಪಾಲಿಟಿಯ ಚುನಾವಣೆಯ ಸಮಯ ಹಿಂದೂವಿನ ವೇಷ ಹಾಕಿ ವೋಟು ಕೊಟ್ಟ ಮುಸ್ಲಿಮನಿಗೆ ೮ ತಿಂಗಳ ಕಠಿಣ ಸಜೆ ವಿಧಿಸಿದರು.

ಸಂತಾಲಿಯಾ ಜುಲ್ಯ ೩೧.

ಮಂಚೂರಿಯಾದ ಸಿಂಕಿಂಗ್ ಎಂಬಲ್ಲಿ ಚೀನೀಯ ಭಂಡಾಯಗಾರರು ಒಂದು ರೈಲನ್ನು ಹತ್ತಿ ೧೧ ಮಂದಿಯನ್ನು ಕೊಂದು ಸಿಕ್ಕಿದುದನ್ನು ದೋಚಿಕೊಂಡು ನಡೆದರು.

## ಸಬ್ ಕಲೆಕ್ಟರರಿಗೆ ಶಿಕ್ಷೆಯಾಯಿತು

ಢಾಕ್ಕಾ - ಜುಲ್ಯ 31.

ಶ್ರೀ ಭುವದೇವ ಮುಖರ್ಜಿ, ಸಬ್ ಡೆಪ್ಯುಟಿ ಕಲೆಕ್ಟರ್ ಮತ್ತು ಸರ್ಕಲ್ ಆಫೀಸರ್ ಇವರು ಢಾಕ್ಕಾ ಜಿಲ್ಲೆಯ ರೈತರಿಗೆ ಕೊಡಲ್ಪಟ್ಟ ಸರಕಾರದ ದ್ರವ್ಯವನ್ನು ದುರ್ವಿನಿಯೋಗಗೊಳಿಸಿದರೆಂಬ ಅಪವಾದನೆಯು ನಡೆದು ಸೆಶನ್ ಜಡ್ಜರಲ್ಲಿ ಇವರ ತಪ್ಪುಸ್ಥಾಪನೆಯಾಗಿ ೩ ವರ್ಷಗಳ ಕಠಿಣ ಸಜೆಗೂ, ೩೦೦೦ ರೂಪಾಯಿಗಳ ಜುಲುಮಾನೆಗೂ ಒಳಗಾಗಬೇಕಾಯಿತು. ಈ ದಂಡವನ್ನು ತೆರಲಾಗದಿದ್ದರೆ ಮತ್ತೂ ೧೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಡುವುದು!

## ೩೨ ಮಂದಿ ಮೃತರಾದರು!

### ಈಸ್ಟ್ ಇಂಡಿಯಾ ರೈಲ್ವೇ ಗಣಿಯಲ್ಲಿ ಸ್ಫೋಟನ!!

ಗಿರಿಧ, ಜುಲ್ಯ ೩೧.

ಜೋಗಿತಿಬಾಗ್ ಗಣಿಯಲ್ಲಿ ಒಂದು ಭಯಂಕರ ಸ್ಫೋಟನವಾಯಿತು. ಲಿಕ್ವಿಡ್ ಒಕ್ಸಿಜನ್ ಹಂಡೆಗೆ ಪೆಟ್ಟು ತಗಲಿದುದೇ ಇದಕ್ಕೆ ಕಾರಣ. ೭೩ ಜನರು ಗಾಯಗೊಂಡರು. ೩೨ ಮಂದಿ ಮೃತರಾದರು. ಈಸ್ಟ್ ಇಂಡಿಯನ್ ರೈಲ್ವೆ ಕಂಪೆನಿಯ ಏಜಂಟರು ಗಿರಿಧಗೆ ಹೋಗಿರುವರು.

## ಕ್ವೆಟ್ಟಾದಲ್ಲಿ ಭೂಕಂಪ!

### ೮ ಸೆಕುಂದಗಳ ತನಕ ಭೂಮಿಯು ನಡುಗಿತು!

ಜುಲ್ಯ ೩೧.

ಈ ದಿನ ಸಂಜೆ ನಾಲ್ಕು ಘಂಟೆಗೆ ಕ್ವೆಟ್ಟಾದಲ್ಲಿ ಪುನಃ ಭೂಕಂಪವಾಯಿತು. ೮ ಸೆಕುಂದಗಳ ತನಕ ಭೂಮಿಯು ನಡುಗಿ, ಅಳಿದುಳಿದ ಕಟ್ಟಡಗಳನ್ನು ಪುನಃ ನಿರ್ಮೂಲಗೊಳಿಸಿತು.

## ಚಕ್ರ

(All Rights Reversed)

ಏನಯ್ಯಾ? ಶರಚ್ಚಂದ್ರ ಬೋಸರೆ? ಹೇಗೆ? ಮೂರು ವರ್ಷಗಳ ಕಾರಾವಾಸದ ಅನುಭವವು ಹೇಗೆ? ನಿಮ್ಮನ್ನು ಹೇಳದೆ ಕೇಳದೆ ಥಟ್ಟನೆ ಸೆರೆಯಿಂದ ಬಿಟ್ಟು ಬಿಟ್ಟರಂತೆ! ನಿಮ್ಮ ಪುಣ್ಯವಯ್ಯಾ! ಮಹಾ ಪುಣ್ಯ!

ಯಾರನ್ನಾದರೂ ಸೆರೆಯಿಂದ ಬಿಟ್ಟುಬಿಡ ಬೇಕಾದಲು ಬಂಗಾಳದವರು ಸಾಯ್ಮನವರಂಥವರೊಡನೆ ಮೊದಲು ವಿಚಾರಿಸಿ, ತಿಳಿದುಕೊಳ್ಳುತ್ತಿದ್ದರು. ಆದರೆ, ನಿಮ್ಮನ್ನು ಬಿಡುವಾಗ ನಿಮ್ಮ ಕೋಣೆಯಲ್ಲಿದ್ದ ನೊಣಗಳಿಗೂ ಗೊತ್ತಿಲ್ಲ. ಪಾಪ, ನಿಮ್ಮೊಡನೆ ಗಾನ ನರ್ತನ ಮಾಡುವ ಪ್ರೊಗ್ರಾಮನ್ನು ಇಟ್ಟುಕೊಂಡಿದ್ದ ನುಸಿಗಳಿಗೆ ಬಹು ದುಃಖವಾಗಬಹುದು!

ನಿಮ್ಮನ್ನು ಬಿಡುಗಡೆ ಮಾಡಬಂದ ದಿಪ್ಯುಟಿ ಕಮಿಶನರರು ನಿಮ್ಮ ಬಳಿಗೆ ಬಂದು "ಯು ಆರ್ ಎ ಫ್ರೀಮೇನ್, ಮಿಸ್ಟರ್ ಬೋಸ್" ಎಂದು ಹೇಳಿದರಲ್ಲ! ಅದರ ಅರ್ಥವೇನು ಗೊತ್ತೇ? ನೀವು ದೊಡ್ಡ ಬ್ಯಾರಿಸ್ಟರರಾಗಿರಬಹುದು, ಸರಕಾರದ ಕೃಪೆಗೆ ಪಾತ್ರರಾಗಿರುವ ಮಹನೀಯರಿರಬಹುದು, ಆದರೆ ಆ ಅರ್ಥವು ನಿಮಗೆ ತಿಳಿದಿರಲಾರದು!

"ಯು ಆರ್ ಎ ಫ್ರೀಮೆನ್" ಎಂದರೆ "ನೀನು ಈಗ ಸ್ವತಂತ್ರನಾದೆ" ಎಂದು ಅದನ್ನು ಅವರು ಏಕೆ ಹೇಳಿದರು ಗೊತ್ತೇ? ನೀವು ನಿಮ್ಮ ಸ್ವಾತಂತ್ರ್ಯವೇನೆಂದು ತಿಳಿದ ಮೇಲೆ ನೀವು ಸೆರೆಯಾಳಾಗುವುದು ಖಂಡಿತ ಆದುದರಿಂದ ನೀವು ಫ್ರೀಮೆನ್ ಅಲ್ಲವೆಂದು ತಿಳಿಯಬೇಕು, ಓಹೋ!

ನೀವು ಸ್ವಲ್ಪ ಹಳಬರಂತೆ ಕಾಣುತ್ತಿರುವಿರೆಂದು ನಿಮ್ಮ ಮಿತ್ರರು ಕೆಲವರು ಹೇಳಿದರಂತೆ. ಅದನ್ನು ನೋಡಿಯೇ, ಇನ್ನು ಈ ಮನುಷ್ಯನಿಂದ ಏನೂ ನಡೆಯಲಾರದೆಂದು ನಿಮ್ಮನ್ನು ಸೆರೆಯಿಂದ ಬಿಟ್ಟರೋ?—ಹೇಗೆ?

ಜೈಲಿನೊಳಗಣ ಊಟ ಉಡಿಗೆಗಳು ಹೇಗಿದ್ದುವು? ಏನಾದರೂ, ಬಂಗಾಳ ಸರಕಾರವಲ್ಲವೇ? ನಿಮಗೆ ಮೃಷ್ಟಾನ್ನ ಭೋಜನವನ್ನು ಕೊಡದಿದ್ದೀತೇ? ಆದರೂ ನೀವು ಹಳಬರಾದುದು ನಿಮ್ಮ ದುರ್ದೈವ!

ನಾನು ಮೊನ್ನೆ ಬಾಬು ಜವಾಹಿರಲಾಲರನ್ನು ಫಾರ್ ಖಾನರನ್ನೂ ಭೇಟಿಮಾಡಿ ಅವರೊಡನೆ ಮಾತನಾಡಿ ಹಿಂದಿರುಗಿದ್ದೆ. ಅವರು ಎಷ್ಟು ಮಾತ್ರಕ್ಕೂ ಹೊರಗೆ ಹೋಗಬಾರದೆಂದು ಅವರಿಗೆ ಹೇಳುತ್ತೇನೆ.

ನೀವೇಕೆ ಹೊರಗೆ ಬಂದಿರಿ? ಅವರು ನಿಮ್ಮನ್ನು ಬಹುಮಾನಮಾಡಿಬಿಟ್ಟರೂ ನೀವು ಹೊರಗೆ ಬರಬಾರದಿತ್ತು. ಬರುತ್ತಿದ್ದರೂ ನಿಮ್ಮ ಕೋಣೆಗೆ ಗುಡ್ ಬೈ ಹೇಳಿ ಹೊರಡಬಾರದಿತ್ತೇ?

ನಿಮ್ಮ ಹರಕು ಪೆಟ್ಟಿಗೆ ನಿಮ್ಮ ಸ್ಟೀಲ್ ಉಡಿಗೆ ತೊಡಿಗೆಗಳನ್ನೆಲ್ಲ ತಂದಿರುವಿರೋ ಇಲ್ಲವೋ! ಅವುಗಳನ್ನು ತರಬೇಕಿತ್ತು! ಅವುಗಳನ್ನು ಸ್ಮಾರಕಗಳನ್ನಾಗಿ ಇಡಬೇಕಿತ್ತು!

ನೀವು ಲೆಜಿಸ್ಲೇಟಿವ್ ಕೌನ್ಸಿಲಿಗೆ ಹೋಗಲಿರುವಿರಂತೆ! ನೋಡೋಣ ಏನೆಲ್ಲ ಮಾಡಲಿರುವಿರೆಂದು! ಮುಂದಕ್ಕೆ ಸ್ವಾತಂತ್ರ್ಯವನ್ನು ಸಾಧಿಸಲೇ ಬಾರದೆಂದು ಮಾತ್ರ ಬೇಡುತ್ತೇನೆ.

ಅಯ್ಯಾ ಬೋಸರೇ ನಿಮ್ಮನ್ನು ಸೆರೆಯಿಡಿದ ಕಾರಣವೇನೆಂದು ನಿಮಗೆ ಈಗಲಾದರೂ ತಿಳಿದಿದೆಯೋ ಇಲ್ಲವೋ? ಜನರಿಗಂತೂ ತಿಳಿದೇ ಇಲ್ಲವಂತೆ!

ನೀವು ಈಗ ಫ್ರೀಮೇನ್ ಎಂದಿದ್ದರೂ ನಿಮ್ಮ ಬೆನ್ನ ಹಿಂದೆ ಸಿ ಐ ಡಿ ಗಳು ಕಾವಲಿಯಾಗುವುದನ್ನು ನಾನು ನಂಬಲಾರೆ. ಆದುದರಿಂದ ನೀವು ಫ್ರೀಮೇನೋ, ಸ್ಲೇವೋನೋ ಎಂದು ನೀವೇ ತಿಳಿಯಿರಿ.

ನಿಮ್ಮ ಸಹೋದರ ಸುಭಾಷ್ಚಂದ್ರಬೋಸರು ಹೇಗಿರುವರಂತೆ? ಉಪ್ಪುಮಾಡಿ ದಣಿಯುತ್ತಾರೆಂದು ಅವರನ್ನು ಪರದೇಶಕ್ಕೆ ಕಳುಹಿಸಿರುವರಷ್ಟೆ! ಅವರು ಅಲ್ಲಿಯೂ ಉಪ್ಪುಮಾಡುತ್ತಿರುವರೋ ಇಲ್ಲವೋ?

ಉಪ್ಪುಮಾಡುವ ವ್ಯಾಪ್ತಿ ಯಾರಿಗಾದೀತಯ್ಯಾ! ಕತ್ತಲೆ ಹಣ್ಣುಗಳನ್ನೂ ಬಾದಾಮಿಯನ್ನೂ ತಿನ್ನುವ ಗಾಂಧಿಯವರಿಗೂ, ತಾಂಬಾಕುಹಾಲಿನ ಮಾಳಿಗೆಯ ವಾಸದಲ್ಲಿರುವ ಸರೋಜಿನಿದೇವಿಯವರಿಗೂ ಅದು ಸಾಧ್ಯ! ರಾತ್ರಿಕಾಲದ ಸೂರ್ಯನ ಉಷ್ಣವನ್ನು ಸಹಿಸಲಾರದ ನಿಮಗೆಲ್ಲ ಅದು ಸಾಧ್ಯವೇ!

ಮಿ ಜೆ ಪಟೇಲರು ವಿಲ್ಲಿನಲ್ಲಿ ಬರೆದಿಟ್ಟಿದ್ದ ಒಂದು ಲಕ್ಷ ರೂಪಾಯಿ ಸುಭಾಷ್ಚಂದ್ರರಿಗೆ ಸಿಕ್ಕಿತೋ ಇಲ್ಲವೋ? ಸಿಕ್ಕಿದೆಯಾದರೆ ಅದರ ಅರ್ಧವನ್ನು ನನ್ನ ವಿಳಾಸಕ್ಕೆ ಕೇಬ್ಲ್ ಮೂಲಕ ರವಾನಿಸಿಕೊಡಲು ದಯವಿಟ್ಟು ತಿಳಿಸಿರಿ, ಪುರುಸೊತ್ತಾದಾಗ ಹಿಂದೆ ಕೊಡುವೆ!

'ಸಾಯ್ಬ'.

ರಾತ್ರಿ ಮಲಗಲು ಹೋಗುವ ಮೊದಲು ಒಂದು ಕಪ್ 'ಓವಲ್ಟಿನ್' ಸೇವಿಸಿದಿರೆಂದರೆ, ನಿಮಗೆ ಸುಖವಾದ ಸ್ವಸ್ಥವಾದ ನಿದ್ರೆಯು ಲಭಿಸುವುದು. ಈ ನಿದ್ರೆಯು ನಿಮ್ಮ ಸ್ನಾಯುಗಳನ್ನು ಶಾಂತಗೊಳಿಸಿ, ಅದಕ್ಕೆ ಹೊಸ ಚೇತನದ ಬಲವನ್ನೀಯುವುದು. 'ಓವಲ್ಟಿನ್' ಬಳಲಿದ ದೇಹವನ್ನೂ ಮನಸ್ಸನ್ನೂ ಪುನರ್ರಚಿಸುತ್ತದೆ. ಬೆಳಗ್ಗೆ ಏಳುವಾಗ ನೀವು ನೂತನ ಚೇತನವುಳ್ಳವರಾಗುವಿರಿ.

ಓವಲ್ಟಿನ್ ಪೂರ್ಣವಾಗಿ ಶುದ್ಧವಾದ ಪೋಷಕಯ ವಸ್ತು. ಪ್ರಕೃತಿಸಿದ್ಧವಾದ ಬೆಳೆದ ಬಾರ್ಲಿ, ದನದ ಕೆನೆಹಾಲು, ವಿಶಿಷ್ಟವಾದ ಕೊಕ್ಕೊಗಳಿಂದ ತಯಾರಾಗಿದೆ. ಟೋನಿಕ್ ಆಹಾರವೂ, ಪಾನಕವೂ ಆದ ಇದನ್ನು ಬಿಡದೆ ಸೇವಿಸುತ್ತಾ ಬಂದಲ್ಲಿ ದೇಹಕ್ಕೆ ಶಕ್ತಿ ಬಾಳಿಕೆಗಳನ್ನು ಕೊಡುತ್ತದೆ.

ನಿಮ್ಮ ಚಹಾಕ್ಕೆ ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ, ಮತ್ತು ಶಕ್ತಿದಾಯಕ.

# ಓವಲ್ಟಿನ್

ಟೋನಿಕ್ ಆಹಾರ ಪಾನಕ— ಶಾಂತಮಯ ಸುಖನಿದ್ರೆಯನ್ನುಂಟುಮಾಡುತ್ತದೆ.

# OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್—ಜೇಮ್ಸ್ ರೈಟ್ 60 ಎ ರಿಪನ್‌ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮತ್ತು ಮದ್ರಾಸು

OV/333

## ಮೂಲ್ಕಿ ಆಸ್ಪತ್ರೆಯ ನಿರಾಶ್ರಿತ ಫಂಡಿನ ಸಹಾಯಾರ್ಥವಾಗಿ

"ಕರ್ನಾಟಕ ನೂತನ ಸಂಗೀತ ಸಭೆಯವರು ಸತ್ಯ ಹರಿಶ್ಚಂದ್ರ" ಎಂಬ ನಾಟಕವನ್ನು ಮುಂಬಾಯಿಯ ಭಂಗವಾಡಿ ಪ್ರಿನ್ಸೆಸ್ ಥಿಯೇಟರಿನಲ್ಲಿ ಇದೇ ೧೯೩೫ನೇ ಇಸವಿ ಆಗೋಸ್ತು ೩ನೇ ೧೦ನೇ ಮಂಗಳವಾರ ರಾತ್ರಿಘಂಟೆಗೆ ಅಭಿನಯಿಸುವರು. ಮೂಲ್ಕಿ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ನಿರಾಶ್ರಿತ ಫಂಡಿನ ಕಡೆಯಿಂದ ಕಟ್ಟಿಸಲು ಅಸ್ತಿವಾರದ ಕಲ್ಲನ್ನು ಹಾಕಿರುವ ಕಟ್ಟಡದ ವಾರ್ಡಿನ ಸಹಾಯಾರ್ಥವಾಗಿ ಮುಂಬಾಯಿಯಲ್ಲಿರುವ ಮೂಲ್ಕಿ ಸ್ವಾಮಿಗಳೆಲ್ಲರೂ ಮತ್ತು ದಕ್ಷಿಣ ಕನ್ನಡಿಗರೆಲ್ಲರೂ ಬಡಜನರ ಹಿತದೃಷ್ಟಿಯಿಂದ ಅವರಿಗೆ ಹೆರಿಗೆಯ ಸೌಕರ್ಯಗಳನ್ನು ಕೊಡಲು ಅನುಕೂಲವಾಗುವಂತೆ ಈ ಸದುದ್ದೇಶಕ್ಕೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮುಂಬಾಯಿಯ ಫೋರ್ಟಿನಲ್ಲಿ ಈ ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ನಾಟಕದ ಟಿಕೇಟುಗಳು ದೊರೆಯುವುವು ೧. ಕರ್ನಾಟಕ ನೂತನ ಸಂಗೀತ ಸಭಾ, ೩೦ ಮೂರು ಲೇನ್, ೨ ಕರ್ನಾಟಕ ಚಿತ್ರಪಿ ಕಂಪೆನಿ, ಕಾಮತ್ಸ ಪಕೇಲ್ಸ್ ಸ್ಟ್ರೀಟ್, ೩ ನಮ್ಮ ಹಿಂದೂ ರೆಸ್ಟೋರೆಂಟ್, ಗೋಫಾಸ್ಟ್ರೀಟ್, ೪ ಪಿ. ಟಿ ಸುವರ್ಣ ಎಸ್‌ಕ್ವಾಯರ್, ೧೪೫ ಮೋದಿಸ್ಟ್ರೀಟ್, ೫. ಕೆ. ಟಿ ದೇವಜೀ ಎಸ್ಕ್ವಾಯರ್, ೨೪೧ ಬಝಾರಗೇಟ್ ಸ್ಟ್ರೀಟ್.

ಮೂಲ್ಕಿ, ೨೫—೭—೩೫. ಚಾರ್ಲ್ಸ್ ಪಿ. ಅರಂಜಾ, ನಿರಾಶ್ರಿತ ಫಂಡಿನ ಗೌರವ ಜತೆ ಕಾರ್ಯದರ್ಶಿ

Estd 1920] THE [1920ರಲ್ಲು ಸ್ಥಾಪಿತವಾದದ್ದು.

## Kanara Enterprise Ltd.,

PUTTUR

## ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

### ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur, Dated 10—4—1935.

G N Lakshman Pai, Secretary.

# ಸಾಹಿತ್ಯ ಸಂಗ್ರಹ.

## ಕೊಡಗೂ ಸಾಹಿತ್ಯವೂ.

ಶ್ರೀ ಎಮ್. ಎಸ್. ಅನಂತ ಪದ್ಮನಾಭರಾವ್, ಮಡಿಕೇರಿ—ಇವರು 'ಸುಬೋಧ'ದಲ್ಲಿ ಮೇಲಿನ ಶೀರ್ಷಿಕೆಯಿಂದ ಬರೆದ ಲೇಖನದಲ್ಲಿ ಹೀಗೆಂದಿರುವರು "ಕನ್ನಡ ಗ್ರಂಥ ಮುಂತಾದುವುಗಳನ್ನು ಪ್ರತಿಯೊಬ್ಬನೂ ಸಂಗ್ರಹ ಮಾಡಿಟ್ಟುಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಸಾರ್ವಜನಿಕ ಪುಸ್ತಕಭಂಡಾರಗಳೂ ಮತ್ತು ವಾಚನಾಲಯಗಳೂ ಇರಬೇಕು. ನಮ್ಮಲ್ಲಿ ಅಲ್ಲಲ್ಲಿ ಇಂಥ ಸಂಸ್ಥೆಗಳು ಇರುತ್ತವಾದರೂ ಕನ್ನಡಕ್ಕೆ ಸಂಬಂಧಪಟ್ಟ ಉತ್ತಮ ವರ್ಗದ ಪುಸ್ತಕಗಳೂ ಮತ್ತು ಮಾಸಪತ್ರಿಕೆಗಳೂ ಅಲ್ಲಿ ಹೆಚ್ಚಾಗಿ ಸಿಗುವಂತಿಲ್ಲ. ಅಷ್ಟು ಮಾತ್ರವಲ್ಲದೆ, ಸಾರ್ವಜನಿಕ ಸಂಸ್ಥೆಗಳು ಇಲ್ಲವೇ ಇಲ್ಲ. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಮಾಡಿ ನಮ್ಮ ಪಂಡಿತರ, ಕವಿಗಳ, ವಿದ್ವಾಂಸರ ಮತ್ತು ಇತರರ ಪರಿಚಯವನ್ನು ಮಾಡಿಕೊಟ್ಟು, ಅವರಲ್ಲಿ ಭಾಷಾಪ್ರೇಮವನ್ನು ಪ್ರಾರಂಭದಲ್ಲೇ ಬೇರೂರಿಸಿದರೆ ನಮ್ಮ ನಾಡಿನಲ್ಲಿ ಭಾಷಾಕಲೆಯು ಹೆಚ್ಚುವುದು. ವಿದ್ಯಾರ್ಥಿನಿಲಯಗಳಲ್ಲಿ ಕರ್ನಾಟಕ ಸಂಘವನ್ನೇರ್ಪಡಿಸಿ ಕರ್ನಾಟಕದ, ಇತರ ಪ್ರಾಂತ್ಯಗಳ ಮತ್ತು ಸಂಘಗಳ ಕ್ರಮಗಳನ್ನೂ, ನೀತಿಗಳನ್ನೂ ಅನುಸರಿಸಿ ನಮ್ಮ ಸಂಸ್ಕೃತಿಯನ್ನು ಉತ್ತಮಗೊಳಿಸಿಕೊಂಡರೆ, ನಮ್ಮ ವಿದ್ಯಾರ್ಥಿವರ್ಗದಿಂದ ಸಮರ್ಥರಾಗಿ ಭಾಷಾಸೇವೆ ಸಲ್ಲುವುದು. ಅಲ್ಲದೆ, ಅವರು ಪ್ರವರ್ಧಮಾನರಾದಂತೆಲ್ಲ ಅವರ ಅನುಯಾಯಿಗಳೂ ಅವರ ಉಪದೇಶವನ್ನು ಪಡೆದು ಭಾಷಾಪ್ರಪಂಚಕ್ಕೆ ಪ್ರವೇಶಿಸುವರೆಂಬ ಭರವಸೆ ಇದೆ. ಉಪಾಧ್ಯಾಯ ಸಂಘದವರು ಸಾಹಿತ್ಯಕಲೆಗೆ ಪ್ರೋತ್ಸಾಹಿಸಬೇಕಾದುದು ಸ್ವಾಭಾವಿಕವು. ಕವಿತಾಕಲೆಯು ಕೊಡಗು ಕರ್ನಾಟಕದಲ್ಲಿ ಇನ್ನೂ ಚೆನ್ನಾಗಿ ಬೆಳೆದಿಲ್ಲ. ಈಚೆಗೆ ಅನೇಕರು ಕವಿತೆಗೆ ಕೈಹಚ್ಚುತ್ತಿದ್ದರೂ, ಯಶಸ್ವಿಗಳಾಗಿರುವುದಿಲ್ಲ. ಅವರು ಕೃತಕಾರ್ಯರಾಗಿರಲು ಅಭ್ಯಾಸವೂ ಸಾಹಿತ್ಯಾವಲೋಕನವೂ ಕವಿಗಳ ಸಹವಾಸವೂ ಅವರಿಗೆ ಬೇಕಾಗಿರಬೇಕು. ಉಪಾಧ್ಯಾಯ ವರ್ಗದವರಿಗೆ ಸಾಹಿತ್ಯವು ಸಲೀಸಾಗಿರುವುದರಿಂದ ಅವರು ಇತರರ ಮಾರ್ಗದರ್ಶಕರಾಗಲು ಅವಕಾಶವುಂಟು. ಆದುದರಿಂದ ಅಲ್ಲಲ್ಲಿ ಕರ್ನಾಟಕ ಸಂಘಗಳ ಸ್ಥಾಪನೆಯಾಗಿ ಭಾಷಾಸೇವೆಯು ಯಥಾಮತಿಯಾಗಿ ನಡೆಯಬೇಕು.

ಸಾಹಿತ್ಯವೆಂದರೆ ಸಾಮಾನ್ಯವಾದುದಲ್ಲ. ಸಾಹಿತ್ಯ ಸಾಮ್ರಾಜ್ಯದಲ್ಲಿ ಭಾವನಾಪ್ರಪಂಚವು ಮೂಲಗಿರುವುದು ಮತ್ತು ಭಕ್ತಿಸೂಕ್ತಿಗಳು ಅದರ ಧ್ವಜಸ್ತಂಭಗಳು. ಸಾಹಿತ್ಯ ಕಲೆಸುಖ ಪಡೆದವರು ಮೋಕ್ಷಮಾರ್ಗದರ್ಶಕರು. ಅವರೇ ಚಿರಂಜೀವಿಗಳು. ಸಾಹಿತ್ಯದೇವಿಯು ತನ್ನನ್ನು ನಂಬಿದವರನ್ನು ಅವರು ಅಪೇಕ್ಷಿಸದಿದ್ದರೂ ಅವರ ಆತ್ಮವನ್ನು ಪರಮಾತ್ಮನಲ್ಲಿ ಲೀನಗೊಳಿಸುವಳು. ನಮ್ಮ ಕರ್ನಾಟಕದಲ್ಲಿ ಲಕ್ಷ್ಮೀಶ, ಪಂಪ ರನ್ನ, ಪೊನ್ನ, ಕುಮಾರವ್ಯಾಸ ಮತ್ತು ಅನೇಕ ಕವಿಗಳು ಈಗಲೂ ಎಲ್ಲರ ಹೃದಯದಲ್ಲಿ ನಲಿಯುತ್ತಿರುವರು. ಮುಂದೂ ಜೀವಿಸುವರು. ಸಹಜವಾದ ಸ್ವಾಭಾವಿಕ ಕಲೆಯು ಎಂದೂ ಅಳಿಯದು. ಆದುದರಿಂದ ನಮ್ಮ ನಾಡಿನವರು ಹಿಂದಾದ ಲೋಕಸನಾಡಿ ಜಾಗ್ರತರಾಗಿ ಸಾಹಿತ್ಯಜೀವನಕ್ಕೆ ಬೇಕಾಗುವ ಸಲಕರಣೆಗಳನ್ನೊದಗಿಸಲು ಪ್ರಯತ್ನಪಡಬೇಕಾದುದು ಪ್ರಥಮ ಕರ್ತವ್ಯವು.

ಈಗ ನಮ್ಮಲ್ಲಿರುವ ವಾರಪತ್ರಿಕೆಗಳಿಂದ ಸಾಹಿತ್ಯ ಪ್ರೇಮಿಗಳಿಗೆ ಸಾಕಷ್ಟು ಸಹಾಯವು ದೊರೆಯಲು ಅನುಕೂಲವಿಲ್ಲ. ರಾಷ್ಟ್ರೀಯ ಚಳವಳಿಯ ಭರದಲ್ಲಿ ಸಾಹಿತ್ಯದೃಷ್ಟಿಯು ದೂರವಾಗಿರಲು ನಮಗೆ ಮಾಸಿಕಪತ್ರಿಕೆಗಳ ಅವಶ್ಯಕತೆಯೇ ಹೆಚ್ಚು. ಅಂಥಾ ಮಾಸಪತ್ರಿಕೆಯು ಒಂದಾದರೂ ಕೊಡಗಭೂಮಿಯಲ್ಲಿ ಜನ್ಮಿಸಿದರೆ ನಮ್ಮ ಭಾಷಾಸೇವಕರಿಗೆ ನವಸ್ಫೂರ್ತಿಯು ಉದಯಿಸುವುದು. ಆದರೆ ಮಾಸಪತ್ರಿಕೆಗಳು ತಲೆಯೆತ್ತುವುದಷ್ಟೇ ಅಲ್ಲ. ಯಾವತ್ತು ಕೊಡುವವರ ಕನ್ನು ಮನ್ನ ಧನ ಸಹಾಯವು ಅತ್ಯವಶ್ಯ. ಸಾಹಿತ್ಯೋಪಯೋಗಿಗಳಿಗೆ ಬೇಕಾಗುವ ಪುಸ್ತಕಭಂಡಾರವೂ ವಾಚನಾಲಯವೂ ಅವಶ್ಯವಾದುದರಿಂದ ಇವುಗಳು ಮುಖ್ಯ ಪಟ್ಟಣಗಳಲ್ಲಿ ತೆರೆಯುವಂತೆ ಪ್ರಯತ್ನಿಸಬೇಕು. ಹೈಸ್ಕೂಲುಗಳಲ್ಲಿ ಕರ್ನಾಟಕ ಸಂಘಗಳ ಸ್ಥಾಪನೆಯಾಗಬೇಕು. ಇವಿಷ್ಟಾದರೆ ಸಾಕಷ್ಟು ಭಾಷಾಸೇವೆಯು ನಡೆಯುವುದರಲ್ಲಿ ಸಂಶಯವಿಲ್ಲ. ಕೇವಲ ಪಾಂಡಿತ್ಯದೃಷ್ಟಿಯಿಂದ ಸಾಹಿತ್ಯಕಲೆಯನ್ನು ಉತ್ತಮಗೊಳಿಸಿಕೊಂಡರೆ ಸಾಲದು, ಭಾಷೆಯು ಹೆಚ್ಚು ಪ್ರಚಾರವಾಗಬೇಕಾದರೆ ಸುಲಭಶೈಲಿಯಲ್ಲಿ ಪಾಮರರಿಗೂ ಅರ್ಥವಾಗುವಂತೆ ವಿಷಯಗಳನ್ನು ಪ್ರಕಟಿಸಬೇಕು. ಪದ್ಯಗಳೂ ಮನೋರಂಜಕವಾಗಿರಬೇಕು. ಕಲಾಪ್ರೇಮವನ್ನು ಈಗಿನಿಂದಲೇ ನಮ್ಮ ಬಾಲಕರಲ್ಲಿ ಕಲಿಸಿದರೆ ಕಾಲಕ್ರಮೇಣ ವೃದ್ಧಿಹೊಂದಿ ಇಡೀ ಕರ್ನಾಟಕದೊಡನೆ ಕೊಡಗು ಸ್ಪರ್ಧೆಗೆ ನಿಲ್ಲುವುದರಲ್ಲಿ ಸಂಶಯವಿಲ್ಲ. ನಮ್ಮ ವಿದ್ಯಾರ್ಥಿಗಳು ಇತರ ರಾಜರ ಚರಿತ್ರೆಯನ್ನೋದಿ ಆನಂದಿಸುವಂತೆ, ನಮ್ಮನ್ನು ಆಳಿದ ಅರಸರ ಪೀಳಿಗೆ, ಅವರ ರಾಜಕಾರ್ಯಗಳು, ಅವರ ರಾಜ್ಯಭಾರ ಕ್ರಮ ಇವೇ ಮುಂತಾದ ಪರಿಶಿಷ್ಟ ವಿಷಯಗಳನ್ನು ಒಳಕೊಂಡ ಕೊಡಗು ಸಿಂಹಾಸನದ ಚರಿತ್ರೆಯನ್ನೂ ಹೊರಗಿನವರು ಓದುವಂತಾದರೆ ನಮ್ಮ ಕರ್ತವ್ಯವಾದಂತಾಗುವುದು."

## ಉದಯಶಂಕರ

ಶ್ರೀಮಾನ್ ಕೆ. ವಿ. ರಾಮಚಂದ್ರನ್, ಮದ್ರಾಸು ಇವರು ಜಯಕರ್ನಾಟಕದ 'ನಾಟ್ಯಾಂಕ'ದಲ್ಲಿ ಪ್ರಕಟಿಸಿದ ಲೇಖನದಲ್ಲಿ ಹೀಗೆಂದಿರುವರು. "ಈ ಇಪ್ಪತ್ತು ವರ್ಷಗಳ ವರೆಗೆ ನೃತ್ಯ ವಿರೋಧಕ ವಿಚಾರಗಳ [illegible] ಕೊನೆಗೊಮ್ಮೆ ಜನರ ಲಕ್ಷ್ಯವು ಭಾರತೀಯ ನೃತ್ಯದ ಕಡೆಗೆ ತಿರುಗುವುದೆಂಬ [illegible] ತೋರಿದಾಗ ಸರಿ ಅದರ ಪುನರುಜ್ಜೀವನಕ್ಕಾಗಿ ಉದಯಶಂಕರ ಸಂಘದವರು ನಡೆಸಿದ ಯತ್ನಗಳು ಪ್ರಶಂಸನೀಯವಾಗಿವೆ. ಉದಯಶಂಕರನಿಗೆ ಸಂಬಂಧವಾದ [illegible] ಅನುಕೂಲ್ಯವಿದೆ. ಇತರರಂತೆ ಈತನೂ ಭಾರತೀಯ ನೃತ್ಯವು ಏನೋ ಒಂದು [illegible] ಒಂದು ಬಗೆ ಸರಿಹೊಂದದಾಗಿತ್ತು. ತನ್ನ ಜೊತೆಗಾರರನ್ನು ವೇಷಭೂಷಣಗಳನ್ನು ಆರಿಸುವುದರಲ್ಲಿ ಈತನ ಅಭಿಜಾತ ಅಭಿರುಚಿಯು ವ್ಯಕ್ತವಾಗಿದೆ. ಈತನ ಕೆಲವು ಶಿಲ್ಪಾತ್ಮಕ ನ್ಯಾಸಗಳು ಸೌಂದರ್ಯಪೂರ್ಣವಾಗಿರುವುವು. ಕಥಕಳಿಯೊಂದಿಗೆ ಈತನು ನಡೆಸುವ ಗಜಾಸುರ ನೃತ್ಯವು ಓಜಸ್ವಿಯೂ [illegible] ಆಗಿರುವುದು. ಮೊದಲು ಭಾರತೀಯ ನೃತ್ಯದ ವೈಶಿಷ್ಟ್ಯವನ್ನು ಪರಿಶೀಲಿಸುವುದಗತ್ಯ. ಉದಯಶಂಕರನ ಕುಂದುಕೊರತೆಗಳನ್ನು ಹಿಂದೆ ತೆಗೆದು ಅವನ ಉತ್ಸಾಹವನ್ನು ಕುಗ್ಗಿಸುವುದಕ್ಕಲ್ಲ—ಅವನ ನೃತ್ಯ ಕಲೆಯ ಯಾವ ಅಂಗಗಳಲ್ಲಿ ಸುಧಾರಣೆಗೆ ಅವಕಾಶವಿದೆಯೆಂಬುದನ್ನು ಪರೀಕ್ಷಿಸುವುದಕ್ಕಾಗಿ.

ಅಭಿನಯವೆಂದರೆ ಅನುಕರಣ ನಿಜವಾಗಿ ಅದೊಂದು ಆವಿಷ್ಕರಣ. ಅದರಲ್ಲಿ ನಾಲ್ಕು ಆಕಾರಗಳು. (೧) ಅನುರೂಪವೇಷ ಭೂಷಣಗಳಿಂದ ಮಾಡಿದ ಆವಿಷ್ಕರಣ. (೨) ಶಬ್ದದಿಂದ—ವಿಶೇಷತಃ ಸಂಗೀತದ ಲಘುವಿನ್ಯಾಸಗಳಿಂದ ಮಾಡಿದ ಆವಿಷ್ಕರಣ. (೩) ವಿಕ್ಷೇಪಗಳಿಂದಲೂ ಅಂಗಭಂಗಿಗಳಿಂದಲೂ ಮಾಡಿದ ಆವಿಷ್ಕರಣ. (೪) ರೋಮಾಂಚನ ಪುಳಕ ಮೊದಲಾದ ದೈಹಿಕ ಸ್ಥಿತ್ಯಂತರಗಳ ಯಥಾರ್ಥಾತ್ಮಕ ಆವಿಷ್ಕರಣ. ಈ ಚತುರ್ವಿಧ ಆವಿಷ್ಕರಣಗಳಲ್ಲಿ ನಾಟ್ಯದ ಸಂಗತಿಯಿದ್ದೇ ಇದೆ. ನಾಟಕವು ರಂಗದ ಮೇಲೆ ಬಂದಾಗ ಅಭಿನಯದ ವ್ಯಕ್ತ ಸ್ವರೂಪವು ನಾಟ್ಯದ ಆವಿಷ್ಕರಣದಿಂದಲೇ ಆಗುತ್ತಿತ್ತು. [illegible] ನಾಟಕಗಳ ಪ್ರಯೋಗಗಳ ಸ್ವರೂಪ ವೇಷಭೂಷಣಗಳಿಲ್ಲದೆ, ಅಂದರೆ ಮೊದಲಿನ ಪ್ರಕಾರವನ್ನು ಬಿಟ್ಟು ಉಳಿದವುಗಳನ್ನವಲಂಬಿಸಿ ನಟನೆ ಮಾಡುವುದೇ ನೃತ್ಯ. ಅಥವಾ 'ತಾಂಡವ'ವೆಂಬ ಹೆಸರೂ 'ಕರಣ'ಗಳೆಂಬ ಲಯವಿನ್ಯಾಸಗಳಿಂದ ಕೂಡಿದ್ದು, ಅನೇಕ ಅಭಿಜಾತ 'ಅಂಗಹಾರ'ಗಳ ಸಮುಚ್ಚಯಗಳಾಗಿವೆ. ಅವುಗಳ ವಿಕ್ಷೇಪಕ್ಕೊಂದು ಪರಿಭಾಷೆಯಿದೆ. ತಾಂಡವವು ಅರ್ಥಭಾವಗಳಿಗೆ ಅತೀತವಾದ ಒಂದು ಕಲ್ಪನಾ ನೃತ್ಯ. ಅದೊಂದು ರಮಣೀಯತೆ, ರಾಗದ ಪ್ರತಿಮಾಹಿನಿ ಅಲ್ಲಿ ಸಾಧ್ಯ ಸಾಧನಗಳು ಅಧಿಕವಾಗಿರುವುವು. [illegible]ಗಳು ಬೇರೆಬೇರೆಯಾಗಿರುತ್ತವೆ, ವಿಷಯವೂ ಅದರ ಆವಿಷ್ಕರಣವೂ ಅಲ್ಲಿ ಸ್ವಯಂಭೂವಾಗಿ ಪ್ರಕಟವಾಗುವುವು! ಪ್ರತಿಕರಣದ ಹಿಂದೆ ಒಂದು [illegible] ಅಧ್ಯಾಹಾರವೂ ಆಗಾಮಿ ಸ್ಥಿತಿಯ ಪೂರ್ವ ಕಲ್ಪನೆಯೂ ಇರುತ್ತದೆ. ಗಾತ್ರಗಳ ಚಲನದಲ್ಲಿ ಒಂದು ಸಂಗತಿ ಇರುತ್ತದೆ. ವಕ್ಷಃಸ್ಥಲವು [illegible] ಆಗಿದೆ ಗಾತ್ರಗಳು ಮೋಹಕವಾಗಿ ಅಲೆಯುತ್ತಿವೆ. ಹಸ್ತಗಳನ್ನು ಚಾಚಿದ ಪ್ರಮಾಣಕ್ಕೆ ತಕ್ಕಂತೆ ಪಾದಗಳ ನಡುವಿನ ಅಂತರವೆಂದರೆ ಇಂಥ ಮೋಹಕ ಸ್ಥಿತಿಗಳ ಸಂಗತಿ ಹಸ್ತಪಾದಗಳದೊಂದು ರಾಗಬದ್ಧ ತಾಲಬದ್ಧ ವಿನ್ಯಾಸ ಇಂಥ ಅನೇಕ ಕರಣಗಳು ಕೂಡಿ ಒಂದು ಅಂಗಹಾರವಾಗುವುದು.

ಈ ನೃತ್ಯದ ಸಂಕೇತಗಳೆಲ್ಲ ಗಹನವಾಗಿದ್ದರೂ ಎಲ್ಲವೂ ನಿಯಮಬದ್ಧವಾಗಿರುವುವು. ನರ್ತಕನ ಕಲ್ಪನಾಶಕ್ತಿಗೆ ಯಾವ ಮಾತನ್ನೂ ಬಿಟ್ಟಿಲ್ಲ. ಆತನು ತನ್ನ ವಿಕ್ಷೇಪವಿನ್ಯಾಸಗಳಲ್ಲಿ ಮೋಹಕತೆಯ [illegible] ಬದ್ಧತೆಯನ್ನು ತಂದುಕೊಂಡರೆ ತೀರಿತು. ಗಾಯಕನಿಗೆ ಹೊಸಹೊಸ ತಾಲಗಳನ್ನು ನಿರ್ಮಿಸಲಿಕ್ಕೆ ಎಷ್ಟು ಸ್ವಾತಂತ್ರ್ಯವೋ ಅದೇ ಈತನಿಗೆ ಸ್ವಾತಂತ್ರ್ಯ!

ಭರತನ ನಾಟ್ಯಶಾಸ್ತ್ರ ಆ ಮೇಲೆ ಯುಗಾನುಯುಗವಾಗಿ ಬೆಳೆದು ಬಂದ ವಾಙ್ಮಯ—ಇವೇ ನಮ್ಮ ಈಗಿನ ಆಧಾರ ಗ್ರಂಥಗಳು. ಇವುಗಳ ಹಾಗೂ ಚಿದಂಬರಂ ಮತ್ತು ಬೇರೆ ಕಡೆಯಲ್ಲಿಯ ಶಿಲ್ಪ ಸಂಪತ್ತಿನ ಸಹಾಯದಿಂದ ನಾವು ಈ ಸ್ಮೃತಿಶೇಷವಾದ ಕಲೆಯ ಬಗ್ಗೆ ತಿಳಿದುಕೊಳ್ಳಬಹುದು. ಈಗ ದಕ್ಷಿಣದಲ್ಲಿ 'ಅಭಿನಯಶಾಸ್ತ್ರ'ವಾದ ನರ್ತನವನ್ನು ರಕ್ಷಿಸಿರುವುದು ತಂಜಾವೂರು, ಸಯ್ಯಾಮ್, [illegible] ಮುಂತಾದ ಪ್ರದೇಶಗಳಲ್ಲಿ ರೂಢವಿದ್ದ ಪರಂಪರೆಗಳಿಗಿಂತ ಹೆಚ್ಚು ಶುದ್ಧ ಪದ್ಧತಿಯು ಇಲ್ಲಿದ್ದರೂ ಅಲ್ಲಿಯ ನೃತ್ಯವೂ ಅಭ್ಯಾಸಕನಿಗೆ ಮಾರ್ಗದರ್ಶಕವಾಗದಿದೆ. ಚಿದಂಬರದಲ್ಲಿಯ ಶಿಲ್ಪದಲ್ಲಿ ನೃತ್ಯದ ವಿವಿಧ ಆವಿಷ್ಕರಣವಿರುವುದು. ಬೇರೆ ಕಡೆಗೆ ಸರ್ವಸಾಮಾನ್ಯವಾಗಿ ಹಸ್ತವಿನ್ಯಾಸ ಮತ್ತು ಸ್ಥಿತಿಗಳನ್ನಷ್ಟೇ ನೋಡಬಹುದು. ಚಿತ್ರಕಾರನಾಗಲಿ, ಶಿಲ್ಪಿಯಾಗಲಿ ನೃತ್ಯವನ್ನು ನಿರೂಪಿಸಬೇಕಾದರೆ ತನ್ನ ಕಾರ್ಯಕ್ಷೇತ್ರದ ಮಿತಿಯನ್ನು [illegible] ಕೊಳ್ಳುತ್ತಿದ್ದನು. ಇಂಥ ಸಾಧನ ಸಾಮಗ್ರಿಯು ಅಷ್ಟು ವಿಶ್ವಸನೀಯವಾಗಲಾರದು. [illegible] ಗ್ರಂಥಗಳ ವಿಶ್ವಸನೀಯತೆಯನ್ನು ಕೂಡಾ ಪರೀಕ್ಷಿಸಿ ಪ್ರಮಾಣಿಸಿಕೊಳ್ಳುವುದು ಉಚಿತ.

ಉದಯಶಂಕರನು ಕೇವಲ ನಿರ್ದಿಷ್ಟವಾದ ಶಿಲ್ಪಗಳನ್ನವಲಂಬಿಸಿದ್ದಾನೆ. ಬೇರೆ ವಿಷಯ ಸರ್ವಸಾಧಾರಣವಾದ ಶಿಲ್ಪಚಿತ್ರಗಳನ್ನು ಅವುಗಳ ವಿಶ್ವಸನೀಯತೆಯನ್ನು ಪರೀಕ್ಷಿಸದೆ ಅವಲಂಬಿಸಿದ್ದರಿಂದ ಆತನ ಕೆಲವು ಅಂಗಹಾರಗಳು ಅಯಥಾರ್ಥವಾಗಿವೆ. ಪರಂಪರೆಯಿದ್ದ ನೃತ್ಯದಲ್ಲಿ ಮನಃಪೂತ ನರ್ತನವು ವಿಘಾತಕವೇ ಸರಿ. ಉದಯಶಂಕರನ ಕೆಲವು [illegible] ಹಾಕಿದ ಕಲ್ಪನೆಗಳ ಬಲದಿಂದ ಜಾನಪದ (Patois) ನೃತ್ಯಗಳನ್ನು ರಚಿಸಲಿ, ಅದು ಅಭಿಜಾತ ನೃತ್ಯವೆಂದು ಸಾರಿದರೆ ಅದಕ್ಕೆ ಘನತೆ ಒಪ್ಪಿಗೆಯಿಲ್ಲ. ಚಿತ್ರ ಶಿಲ್ಪಗಳಿಂದ ಸಂಕಲಿಸಿದ ನಾಲ್ಕು ಹಸ್ತಗಳ ಅನುಕರಣವನ್ನು ಬಿಟ್ಟರೆ ಆತನ [illegible] ಅಭಿನಯದಲ್ಲಿ ಅನಭಿಜ್ಞತೆಯನ್ನೇ ವ್ಯಕ್ತಗೊಳಿಸುವುವು.

ಉದಯಶಂಕರನು ಅಭಿಜಾತ ನೃತ್ಯದ ಸಂಗತಿ (Sequences) ಗಳನ್ನು ಬಿಟ್ಟು ಏನೇನೋ ಹಸ್ತಪಾದ ವಿನ್ಯಾಸಗಳನ್ನು ನಡೆಸಿ ಶಿಲಾಮೂರ್ತಿಗಳ ಸ್ಥಿತಿಗಳನ್ನು ಪ್ರದರ್ಶಿಸಿದನು. ಆದರೆ ಅವುಗಳನ್ನು ಚೇತನಗೊಳಿಸುವ ಜ್ಞಾನವು ಆತನಿಗಿರಲಿಲ್ಲ. [illegible] ತಾವು ಮೂರ್ತಿಯು ತಾಂಡವವು ಶಿಲ್ಪಿಯ ಕಲ್ಪನೆಯಿಂದ ನರ್ತಕನ ಆವಿಷ್ಕರಣವು ಬೇರೆಯಾಗಿರುವುದೆಂಬುದು ಆತನಿಗೆ ತಿಳಿದಿಲ್ಲ. ಕೇರಳದ ದೇವದಾಸಿಯರಿಗೆ ಕೂಡಾ ಆ [illegible] ವಿನ್ಯಾಸಗಳ ಅಭ್ಯಾಸವಿಲ್ಲದೆ ತಾಂಡವದ ಆವಿಷ್ಕರಣವು ಸುಲಭವಾಗುವುದಿಲ್ಲ.

ಉದಯಶಂಕರನು ಹಿಂದುಸ್ಥಾನದಲ್ಲಿಯೇ ಇದ್ದು ನಲ್ಲೂರ [illegible] ಸ್ವಾಮಿ ಅಯ್ಯರರಂಥ ಪ್ರಾಜ್ಞವಂತರ ಬಳಿ ಅಧ್ಯಯನ ಮಾಡಿ ಆ ಅಧ್ಯಯನಕ್ಕೆ ಗ್ರಂಥಗಳ ಪರಿಶೀಲನದ ಜೋಡು ಕೊಟ್ಟರೆ ಅಷ್ಟು ಸುಂದರ! ಅದೊಂದು ಕಲ್ಪನಾರಮ್ಯವಾದ ಮಾತು. ಪಾಶ್ಚಾತ್ಯರ ಪ್ರಶಂಸೆಯೊಂದರಿಂದ ಜನ್ಮದ ಸಾರ್ಥಕ್ಯವಲ್ಲ, ಅಲ್ಲಿಯ ಜನರಿಗೆ ಎಲ್ಲಾ ಕಲಾಶೈಲಿಯ ಬಗ್ಗೆ ಅಷ್ಟು ಜ್ಞಾನವಿರದು. ಉದಯಶಂಕರನಲ್ಲಿಯೂ ಮಹತ್ವಾಕಾಂಕ್ಷೆ ಇರುವುದು. ಆತನು ಈ ಕಲೆಯ ಸಮ್ಯಕ್ ಜ್ಞಾನವನ್ನು ಪಡೆದುಕೊಂಡರೆ ಯಶಸ್ವಿಯಾಗದಿರನು."

## ಮಾತೃಪ್ರೇಮ!

ಮಾತೃಪ್ರೇಮ ಅಥವಾ ಪಿತೃಪ್ರೇಮ ಎಂಬುದು ಅಭ್ಯಾಸಬಲದಿಂದ ಬರುವಂಥದಲ್ಲ. ಇದು ನಮ್ಮ ರಕ್ತದೊಂದಿಗೆ [illegible] ಹುಟ್ಟುವಂಥದಲ್ಲ. ಅದು ಸ್ವಭಾವವಾಗಿಯೇ ಹುಟ್ಟುವುದು. ಹಸುವಿಗೆ ತನ್ನ ಕರುವಿನ ಮೇಲೆ, [illegible] ತನ್ನ [illegible] ಮೇಲೆ, ಹಕ್ಕಿಗೆ ತನ್ನ ಮರಿಯ ಮೇಲೆ ಸ್ವಾಭಾವಿಕವಾದ ಪ್ರೇಮ. ಅದಕ್ಕೆ ಆಳವಿಲ್ಲ, ಅಳತೆಯಿಲ್ಲ. ಆ ಎರಡು ಪ್ರಾಣಿಗಳ [illegible] ದೇಹದ ಪಂಜರದೊಳಗಿರುವ ಪ್ರಾಣ ಇರುವಷ್ಟು ಕಾಲ ಆ ಪ್ರೇಮವು ಇರುವುದು. ಆದರೆ ಮೃಗಸಾಮ್ರಾಜ್ಯದಲ್ಲಿ ಒಂದೇ ಒಂದು [illegible] ಮೃಗಕ್ಕೆ ತನ್ನ ಮರಿಗಳ ಮೇಲೆ ಪ್ರೇಮವಿರುವುದಿಲ್ಲ. [illegible] ಮರಿಗಳು ಹುಟ್ಟಿದ ಕೂಡಲೇ ಅವುಗಳನ್ನು ಬಾಯಿಯಲ್ಲಿ ಹಿಡಿದುಕೊಂಡು [illegible] ಓಡುವುದನ್ನು ನಾವು ನೋಡಬಹುದು. [illegible] ಬೆಕ್ಕು ಆ ಮರಿಗಳನ್ನೆಲ್ಲ ತಿಂದುಬಿಡುವುದು! [illegible] ಮೃಗಗಳಲ್ಲಿ, ತಂತಮ್ಮ ಮರಿಗಳ ಮೇಲೆ ಅವುಗಳಿಗೆ [illegible] ಅಪಾರ [illegible] ಪ್ರೇಮವಿರುವುದಂತೆ. ಬೆಕ್ಕಿಗೂ ಹಾಗೆಯೇ. ಮರಿಗಳಿಗೆ ಮೊಲೆ [illegible] ಕೆಲವು ಕಾಲ [illegible] ಅವುಗಳ ವಿಷಯ ಮತ್ತೆ ಒಮ್ಮೆಯೇ ಇಲ್ಲ. ನಾಯಿಗಳೂ ಹಾಗೆಯೇ. [illegible] ಮಾತಾಪಿತೃ [illegible] ಅದನ್ನು [illegible] ವಿಚಿತ್ರವಿದೆ. [illegible] ಗಂಡನ್ನು ಓಡಿಸುವುದು. ಅನಂತರ [illegible] ಮೊಟ್ಟೆಗಳ ಮೇಲೆ ಕುಳಿತು ಮರಿಮಾಡುವುದು. ಮರಿಗಳು ಹುಟ್ಟಿದನಂತರವೂ ಅದು ಅವುಗಳ ಮೇಲಿನ ಮಮತೆಯಿಂದಲೋ ಆಹಾರವಿಲ್ಲದ [illegible] ಸತ್ತರೂ ಚಲಿಸದು. ಆ [illegible] ಅದು ಎಲ್ಲಿಂದ? ಅವು ತನ್ನ [illegible] ಒಂದೆರಡು ದಿನಗಳಲ್ಲಿ ಆ ಮರಿಗಳು [illegible] ಪೂರ್ಣವಾಗಿ [illegible] ಅಲ್ಲಿ ತೊರೆದು— ತಾವು ಸಾಕಷ್ಟು [illegible] ಆಹಾರವನ್ನು ಹುಡುಕುತ್ತ [illegible] ತೊಡಗುವುವು.

Amrith Bazar Pathrika.

## ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು!
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಋಷಿಯ ಮುನಿ ಬರೆದಿಟ್ಟುದಿಹುದೆಮಗೆ ಕಣ್ಣೇನು?
ನಿನ್ನೆದೆಯ ದನಿಯೆ ಋಷಿ, ಮುನಿ ನಿನಗೆ ನೀನು!

ನೀರಡಿಸಿ ಬಂದ [illegible] ನೀರನು ಕೊಡಲು
ಮನುಧರ್ಮ ಶಾಸ್ತ್ರದನುಮತಿ ಬೇಕೇನು?
ನೊಂದವರ ಕಂಬನಿಯನೊರಸಿ ಸಂತೈಸುವೆ
ಶಾಸ್ತ್ರ ಪುರಾಣಗಳ ಬೇಕೇನು?

[illegible] ಶಿಶುಗಳೊಡನೆ ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ನೋಡುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮಹತ್ಯೆ ತಟ್ಟುವುದೆಂದು
ಸುಮ್ಮನಿದ್ದರೆ ಶಾಸ್ತ್ರ ಸಮ್ಮತವೇನು?

ಅಂತು ಮನಸಾ ಏನು ಹೇಳುತಿರುವುದೊ,
ಹೇಳುವುದನೆ ಶಾಸ್ತ್ರವೆಂದು ನಂಬು,
ಸ್ವರ್ಗ ದೊರೆಯಲಿ ಮತ್ತೆ ನರಕ ಬಂದರು ಬರಲಿ,
ಎದೆಯ ಧ್ವನಿಯನೆ ಮಾಡಿ ಜೀವನದ ಗೆಲ್ಲು!

ಸ್ವರ್ಗ ದೊರೆಯುವುದಿಲ್ಲ, ನರಕ ಬರುವುದು ಇಲ್ಲ,
ಸ್ವರ್ಗ ನರಕಗಳೇನು ಶಾಸ್ತ್ರ ಕಲ್ಪನೆಗಳು!
ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು, ಅದನುಳಿದು ಋಷಿಯು ಬೇರಿಲ್ಲ!

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ!
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೆ ನಮಗೆ ಧರ್ಮಸೂತ್ರ!

ಕೆ. ವಿ. ಪುಟ್ಟಪ್ಪ.

# ಲೋಧ್ರ

**ಸುಪ್ರಸವಕ್ಕಾಗಿ ದಿವ್ಯ ಟಾನಿಕ್**

**ಸ್ತ್ರೀಯರಿಗೊಂದು ಮಹಾ ವರ**

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

## ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ. 3 ಮತ್ತು 1—10—0

**ಕೇಸರಿ ಕುಟೀರಂ**

**ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,**

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

**ಪೋಪ್ಯುಲರ್ ಸ್ಟೋರ್ಸ್**, ಮಂಗಳೂರು

---

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ

ಡಿ. ಗೋಪಾಲಾಚಾರ್ಲುರವರ

# ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು.

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

---

ಚಾತುಕುಟ್ಟಿ ವೈದ್ಯರ

## ವಿಶೂಚಿಕಾ ಸಂಹಾರಿ
**Vishuchika Samhari**
(PILCO)

ಕಾಲರಕ್ಕೆ ದಿವ್ಯೌಷಧ ಉಪಯೋಗಿಸಿದರೆ ಗುಣ ಖಾತ್ರಿ

ಕ್ರಯ ಡಬ್ಬಿ 1ಕ್ಕೆ ರೂ 1—0—0

## ಗುಹ್ಯರೋಗ ನಿವಾರಿಣೀ ತೈಲ
**Anti-Veneral Oil**
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 2—8—0

**ಕೆ ವಿ. ಕೃಷ್ಣನ್,**
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

---

## ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಗೌರವ ಕಾರ್ಯದರ್ಶಿ,
**ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.**

---

ಚಿತ್ರಾಯುತ ಸಮೇತ

## ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)

ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

**ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.**

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಿಸಹಿತ

**ಬೆಲೆ ಆಣೆ 3.**

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

---

## ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

**ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು**



ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ -

The Scientific Gold Bangles Co., Ltd.,
Head Office 43, Byragimatam Street,
Post Box No. 208, Madras.

---

# ಕಿರ್ಲೋಸ್ಕರ

## ಕಲ್ಯಾಣ ಡೆಕೋರ್ಟಿಕೇಟರ್.



ನೆಲಗಡಲೆ ಒಡೆಯುವ ಉತ್ತಮ ಶಕ್ತಿಯುಳ್ಳದು

ಗಂಟೆಗೆ 75ರಿಂದ 80 ಗೋಣಿಗಳನ್ನು ಒಡೆಯಬಹುದು

6 B H. P ಅಶ್ವಶಕ್ತಿ ಬೇಕು

ಕೈ ಮತ್ತು ವಿದ್ಯುಚ್ಛಕ್ತಿಯ ಯಂತ್ರಗಳ ವಿವಿಧ ರೀತಿಯ ಸಚಿತ್ರ ಕೆಟಲಾಗು ಕಳುಹಿಸಲಾಗುತ್ತದೆ

ಹೆಚ್ಚಿನ ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ

**ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,** ಕಿರ್ಲೋಸ್ಕರವಾಡಿ. ಸತಾರಾ

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

---

## ರೈಲುಬಂಡಿಗಳ ಸಮಯ.

| ಗಾಡಿಗಳು | ಹೊರಡುವ ಘಂಟೆ | ತಲಪುವ ಘಂಟೆ |
|---|---|---|
| ಮೈಲು | ಬೆಳಿಗ್ಗೆ 9 50 | ಸಂಜೆ 4 20 |
| ಮಿಕ್ಸೆಡ್ | ,, 5 55 | ರಾತ್ರಿ 8 50 |
| ಪಾಸ್ಟ್ ಪೆಸೆಂಜರ್ | ಮ. 2 45 | ಮ 12 40 |
| ಶಿಟಲ್ | ಸಂಜೆ 5 25 | ಬೆಳಿಗ್ಗೆ 9-25 |
| ಕಾಂಞಂಗಾಡ್ ಪೆಸೆಂಜರು | ಬೆ 8 25 | ಮ 1 20 |
| ಕಾಸರಗೋಡು ಪೆಸೆಂಜರು | ಸಂಜೆ 3 20 | ಸಂಜೆ 6 15 |

---

**ಕುಷ್ಠ ರೋಗ ಮತ್ತು ಫರಂಗಿ ರೋಗ**

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ, ಯಾವ ಕಾರಣವೇ ಇರಲಿ ನೀವು ಮತ್ತೆ ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗ್ಯಾರಂಟಿ.

ವಿವರಕ್ಕೆ ಬರೆಯಿರಿ.

**Kamala Works,**
Panchpota Bengal S B
C P S

---

# ತಯಾರಾಗಿದೆ!

ಗೌ ಹಾ ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

**ಸಮಾಜಶಾಸ್ತ್ರ**

ಅಥವಾ

**ಸೋಶಿಯೊಲೊಜಿ.**

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ಗೌರ್ನಮೆಂಟ ಪಠ್ಯಕ್ರಮಾನುಸಾರವಾಗಿ ತಯಾರಿಸಲಾಗಿದೆ—

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಅಚ್ಚಿನಲ್ಲಿದೆ.

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುವು.

ಇಲ್ಲಿಗೆ ಕೂಡಲೇ ಬರೆಯಿರಿ

**ಮೆನೇಜರ್,**
ಶಾರದಾ ಛಾಪಖಾನೆ,
**ಮಂಗಳೂರು.**

---

# "ಸ್ವದೇಶಾಭಿಮಾನಿ"

ಉತ್ತಮವರ್ಗದ ವಾರಪತ್ರಿಕೆ.

ಇಂದೇ ಪಡಕೊಳ್ಳಿರಿ— ಓದಿರಿ!

ಇಂದೇ ಚಂದಾದಾರರಾಗಿರಿ! ಕನ್ನಡದ ರುಚಿಯನ್ನರಿಯಿರಿ!

---

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ಸಮೂದಿಸತಕ್ಕದ್ದು. ಸಂ. ಸ್ವ.

## ಘೋರಬೋಲೇ ಇವರ ಲಾರಿಯ ಸಾಹಸ.

(ಬರೋಡದ ನಮ್ಮ ಪ್ರತಿನಿಧಿಗಳ ಪತ್ರ.)

ಲಾಠೀವೀರ ಬಾಬೂರಾವ್ ರಾಮಚಂದ್ರ ಘೋರಬೋಲೆ-ಖಾನಗಾಂವ್ ಇವರು ಬಿಡದೆ ೧೪ ತಾಸು ಲಾರಿಯನ್ನು ತಿರುಗಿಸಿ ಹೊಸ ದಾಖಲೆಯನ್ನು ಮಾಡಿರುವರು!

ಶ್ರೀ। ಬಾಬೂರಾವ್ ಘೋರಬೋಲೆಯವರ ವಯಸ್ಸು ೨೧; ಅವರು ಚಿಕ್ಕಂದಿನಿಂದಲೂ ವ್ಯಾಯಾಮ ಪ್ರೇಮಿಗಳು. ಶರೀರ ಪ್ರಕೃತಿಯು ಬಹು ಕೃಶವಾದುದಾದರೂ ವ್ಯಾಯಾಮ ಕ್ಷೇತ್ರದಲ್ಲಿಯ ಎಲ್ಲಾ ಕೆಲಸವನ್ನೂ ಅವರು ಬಹು ಸುಲಭಸಾಧ್ಯವಾಗಿ ಮಾಡಬಲ್ಲರು. "ಮಾಣಿಕ್" ವ್ಯಾಯಾಮ ಶಾಲೆಯಲ್ಲಿ—ಘೋರಬೋಲೆಯವರು ವಿದ್ಯಾರ್ಥಿಯಾಗಿರುವುದರಿಂದ ಈ ಸಂಸ್ಥೆಯು ಬೇರೆ ಬೇರೆ ಕಡೆಯಲ್ಲಿ, ಬೇರೆ ಬೇರೆ ವಿಷಯಗಳಲ್ಲಿ ಯಾವ ಯಾವ ಬಹುಮಾನಗಳನ್ನೂ ಅಥವಾ ಪ್ರಶಸ್ತಿಪತ್ರಿಕೆಗಳನ್ನು ಪಡೆದಿರುವುದೋ ಅವೆಲ್ಲವುಗಳಲ್ಲೂ ಇವರು ಭಾಗವನ್ನು ವಹಿಸಿರುವರು. ಸಾತಾರಾ ಜಿಲ್ಲೆಯಲ್ಲಿ ನಡೆದ ಪರಿಗಡ್ಡದ ಪಂದ್ಯಾಟದಲ್ಲಿ ಇವರೇ ಮೊದಲನೆಯ ಬಹುಮಾನವನ್ನು ಪಡೆದರು; ೧೯೩೧ನೇ ಇಸವಿಯಲ್ಲಿ ಇವರೇ ೧೩ ತಾಸುಗಳ ತನಕ ಲಾರಿಯನ್ನು ತಿರುಗಿಸಿ ರಿಕಾರ್ಡನ್ನು ಮಾಡಿಟ್ಟಿದ್ದರು. ಮತ್ತು ಈಗಲೂ ಇವರೇ, ೧೩ ತಾಸು ೧೩ ಮಿನಿಟುಗಳ ಮಾಡಿಟ್ಟ ಲಾರಿಯ ರಿಕಾರ್ಡನ್ನು ಮುರಿದಿರುವರು.

ಭವ್ಯವಾಗಿ ಶೃಂಗರಿಸಲ್ಪಟ್ಟ "ಮಾಣಿಕ್" ವ್ಯಾಯಾಮ ಮಂದಿರದ ಪರಾಂಗಣದಲ್ಲಿ ಇವರು ತಾ. ೧೩-೭ ೩೫ನೇ ದಿನ ಸಂಜೆ ಘಂಟೆ ೮-೩೦ಕ್ಕೆ ಲಾರಿಯನ್ನು ತಿರುಗಿಸಲು ಪ್ರಾರಂಭಿಸಿದರು. ಡಾ। ಕಾಳೆ ಮತ್ತು ಡಾ। ಕಾಲಗಾಂವಕರ್ ಇವರು ಆಗಾಗ ಘೋರಬೋಲೆಯವರ ಪ್ರಕೃತಿಯನ್ನು ಪರೀಕ್ಷಿಸುತ್ತಲಿದ್ದರು, ಅಲ್ಲದೆ ಡಾಕ್ಟರರ ಅಭಿಪ್ರಾಯದಂತೆ ಅವರಿಗೆ ಆಗಾಗ ಲಿಂಬೆಹಣ್ಣಿನ ಶರಬತ್ತು ಕೊಡಲ್ಪಡುತ್ತಿತ್ತು. ಲಾರಿ ತಿರುಗಿಸುವಾಗ ಅವರಿಗೆ ಬೇಸರವುಂಟಾಗಬಾರದೆಂದು ಬೇರೆ ಜನರೂ ಸರತಿಯಿಂದ ಲಾರಿಯನ್ನು ತಿರುವುತ್ತಿದ್ದರು. ಅವರ ಪೈಕಿ ಶಾಂತಾ ಜೋಗ್ ಎಂಬ ೭ ವರ್ಷ ಪ್ರಾಯದ ಬಾಲಕನು ಒಂದು ತಾಸು ಲಾರಿಯನ್ನು ತಿರುಗಿಸಿದುದಲ್ಲದೆ ಶ್ರೀ। ಕಾಲೇಕರ್ ಎಂಬ ವಕೀಲರ ೫ ವರ್ಷ ಪ್ರಾಯದ ಹುಡುಗಿಯೂ ಕೂಡ ಲಾರಿಯನ್ನು ತಿರುಗಿಸಿದಳು. ಈ ಕಾರ್ಯಕ್ರಮಕ್ಕೆ ಶ್ರೀಮಂತ ಬಯ್ಯಾ ಸಾಹೇಬ್ ಪಟವರ್ಧನ್, ಶ್ರೀ। ಲಗಡೇ ಮುನ್ಸಿಪಲ್ ಪ್ರೆಸಿಡೆಂಟ್, ಶ್ರೀ। ಚವ್ಹಾಣ್; ಶ್ರೀ। ಪರಾಂಜಪೇ ವಕೀಲ್, ಶ್ರೀ। ಮೈಸಕರ್ ವಕೀಲ್ ಮೊದಲಾದವರೂ, ಸಾಂಗಲೀ, ಕರ್ಹಾಡ್ ಮೊದಲಾದ ಬೇರೆ ಬೇರೆ ಕಡೆಯ ಅತಿಥಿಗಳೂ ಹಾಜರಿದ್ದರು.

### ೧೪ ತಾಸಿನ ಭಯಂಕರ ಸಾಹಸ:

ಶ್ರೀ। ಘೋರಬೋಲೆಯವರು ತಿರುಗಿಸುತ್ತಲಿದ್ದ ಲಾರಿಯ ತೂಕವು ೪೦ ತೊಲೆಯದ್ದು ಅದು ಕಿವಿಯ ವರೆಗೂ ಮುಟ್ಟುತ್ತಲಿತ್ತು. ಲಾರಿಯನ್ನು ತಿರುಗಿಸುವ ಸ್ಥಳವು ಸುಮಾರು ೪೦ ಫೀಟ್ ಉದ್ದದ ಸರಳರೇಖೆಯಲ್ಲಿತ್ತು. ಅಲ್ಲಿ ಪ್ರೊ। ಮಾಣಿಕ್ ರಾವ್, ಇವರ ಪದ್ಧತಿಯಂತೆ ನಮಸ್ತೇ ಯೇಕ್, ದುಹೆರಿಬೇಲ್, ದೋರುಕ್ ಬೇಲ್, ದುಹೇರಿ ಹೋಲ್, ದೋಮುಲ್ ಬೇಲ್ ಮೊದಲಾದ ಲಾರಿಯ ಕೈಗಳನ್ನು ತಿರುಗಿಸುತ್ತಲಿದ್ದು ಲಾರಿಯು ಸುತ್ತುವಿಕೆಯ ಪ್ರಮಾಣವು ಮಿನಿಟಿಗೆ ಸಂಖ್ಯೆ ೪೦ರಿಂದ ೯೦ರ ವರೆಗೂ ಇತ್ತು. ಈ ೧೪ ತಾಸುಗಳಲ್ಲಿ ಅವರ ನಡಿಗೆಯು ಎಷ್ಟಾಗಿದೆ ಎಂದು ನೋಡುವುದಾದರೆ ನಡಿಗೆಯ ವೇಗವು ಕನಿಷ್ಠ ಪಕ್ಷ ಘಂಟೆಗೆ ೩॥ ಮೈಲಿನಂತೆ ಸರಾಸರಿ ೪೨ ಮೈಲುಗಳಾಗುವುದು. ೧೪ ತಾಸಿನ ವರೆಗೂ ನಡೆದಾಡುತ್ತ ಶರೀರದ ಸುತ್ತಲೂ ಲಾರಿಯನ್ನು ತಿರುಗಿಸುವಾಗ ಅವನ ಸ್ಥಿತಿಯು ಏನಾಗಬಹುದೆಂಬ ಕಲ್ಪನೆಯು ಮನಸ್ಸಿಗೆ ಹೊಳೆಯದಿರಲಾರದು. ಆದರೆ ಘೋರಬೋಲೆಯವರು ಈ ವಿಷಯವನ್ನು ಕೂಡ ಸಾಧ್ಯಮಾಡಿ ತೋರಿಸಿರುವರು ಈ ೧೪ ತಾಸುಗಳಲ್ಲಿ ಅವರ ಮುಖದ ಮೇಲೆ ಏನೊಂದೂ ದಣಿವು ತೋರುತ್ತಿರಲಿಲ್ಲ. ಸ್ನೇಹಿತರ ಜತೆಯಲ್ಲಿ ಸುಖವಾಗಿ ಮಾತನಾಡುತ್ತಿದ್ದರು. ಯಾವ ತರದ ದಣಿಯೂ ಉಂಟಾಗಲಿಲ್ಲ. ಈ ೧೪ ತಾಸುಗಳ ನಡಿಗೆಯಲ್ಲೂ ಕಾಲು ಸೋತಂತೆ ತೋರುತ್ತಿರಲಿಲ್ಲ. ಅಥವಾ ಲಾರಿಯು ನೆಲಕ್ಕೆ ಮುಟ್ಟಲಿಲ್ಲ, ಕೆಳಗೂ ಬೀಳಲಿಲ್ಲ.

ಶನಿವಾರ ಸಾಯಂಕಾಲ ೮-೩೦ಕ್ಕೆ ಪ್ರಾರಂಭಿಸಿ ಆದಿತ್ಯವಾರ ಬೆಳಿಗ್ಗೆ ೧೦-೩೦ಕ್ಕೆ ಲಾರಿ ತಿರುಗಿಸುವುದನ್ನು ನಿಲ್ಲಿಸಿದರು. ಈ ರೀತಿ ೧೪ ತಾಸುಗಳ ಲಾರಿಯ ರಿಕಾರ್ಡನ್ನು (ಪ್ರಯೋಗ) ಮಾಡಿ ಶ್ರೀ। ಘೋರಬೋಲೆಯವರು ಮಹಾರಾಷ್ಟ್ರದಲ್ಲಿ ಮಾತ್ರವಲ್ಲದೆ-ಪೂರ್ಣ ಹಿಂದುಸ್ಥಾನದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವರು

(೯ನೇ ಪುಟಕ್ಕೆ ಮುಂದುವರಿದುದು)

## ಮಂಗಳೂರು ಸಬ್ ಕೋರ್ಟು ಕ್ರಮ ನಂಬ್ರ 47/1921 ಕ್ರಮ ಅಮಲಜಾರಿ ನಂಬ್ರ 142/1922ನೇ ಸ್ಕೀಮ್ ರೂಲು ಪ್ರಕಾರ

**ಕಾಪು ಶ್ರೀ ಹಳೇ ಮಾರಿಯಮ್ಮ ದೇವರ ಭಂಡಾರದ ಬಾಬ್ತು ಆಧ್ಯ ಭಾವ ಸಂ।ರದ ಆಶಾಡ ಬ। ೧ ತಾ. 27-7-1934ರಿಂದ ಆಧ್ಯ ಯುವ ಸಂ।ರದ ಆಶಾಡ ಬ। ೧೦ ಯು ತಾ. 25-7-1935 ವರೇಗಿನ ವರ್ಷ 1ರ ಜಮಾ ಖರ್ಚಿನ ಗೋಶ್ವಾರೆ.**

**ಜಮಾ**

| ನಂಬ್ರ | ತಪಶೀಲು | ಸೇಯಾಳ ಕ್ಯಾ | ಅಕ್ಕಿ ಬೆಳ್ತಿಗೆ ಮು | ಸೇ | ಅಕ್ಕಿ ಕೊಚ್ಚಲು ಮು | ಸೇ | ನಗದು ರೂ. | ಅ. | ಪೈ. |
|---|---|---|---|---|---|---|---|---|---|
| 1 | ಗುದಸ್ತ ಶಿಲ್ಕು | | | 6 | 2 | | 101 | 0 | 8 |
| 2 | ಗದ್ದಿಗೆ ಪೂಜೆಗಳ ಬಾಬ್ತು | | | | | | 1558 | 15 | 3 |
| 3 | ಕುಂಕುಮಾರ್ಚನೆಗಳಿಗೆ | | | | | | 52 | 14 | |
| 4 | ಗುದಸ್ತ ಶಿಲ್ಕಿನ ಪವನ 1¼ ವಿಕ್ರಿಬಾಬ್ತು | | | | | | 30 | | |
| 5 | ನವರಾತ್ರಿ ವಿನಿಯೋಗಗಳಿಗೆ | | 4 | 21 | | | 12 | 9 | 3 |
| 6 | ದಾರಿಪೂಜೆಗಳ ಕಾಣಿಕೆ | | | | | | 398 | 15 | 5 |
| 7 | ದನಗಳಿಗೆ ಗೇಣಿ ಬಾಬ್ತು<br>ಡಿ ಹುಲ್ಲು ಸೂಡಿ 600 | 825 | 6 | | 162 | 14 | 295 | 8 | 6 |
| | ಜುಮಲಾ | 825 | 10 | 27 | 164 | 14 | 2449 | 15 | 1 |

**ಖರ್ಚು**

| ನಂಬ್ರ | ತಪಶೀಲು | ಸೇಯಾಳ ಕ್ಯಾ | ಅಕ್ಕಿ ಬೆಳ್ತಿಗೆ ಮು | ಸೇ | ಅಕ್ಕಿ ಕೊಚ್ಚಲು ಮು | ಸೇ | ನಗದು ರೂ. | ಅ. | ಪೈ. |
|---|---|---|---|---|---|---|---|---|---|
| 1 | ಗದ್ದಿಗೆ ಪೂಜೆಗಳಿಗೆ | 775 | | | | | 118 | 15 | 7 |
| 2 | ಕುಂಕುಮಾರ್ಚನೆಗಳಿಗೆ | | | | | | 35 | 4 | 0 |
| 3 | ನವರಾತ್ರಿ ವಿನಿಯೋಗಗಳಿಗೆ | | 4 | 16 | | | 142 | 12 | 10 |
| 4 | ದಾರಿಪೂಜೆಗಳಿಗೆ | | | | | | 301 | 12 | 5 |
| 5 | ವ್ಯವಹರಣೆಗಳಿಗೆ | | | | | | 19 | 3 | 0 |
| 6 | ನೌಕರರಿಗೆ ಸಂಬಳ | | | | 20 | | 563 | 12 | 9 |
| 7 | ಅಸ್ತಿಗಳ ತೀರ್ವೆ ಬತ್ತ ಕೂಡಾ | | | | | | 199 | 4 | 6 |
| 8 | ಅಸೂರಿ ಖರ್ಚು | | | | | | 106 | 6 | 8 |
| 9 | ಅಸ್ತಿಗಳಲ್ಲಿ ಕೃತ್ಯಗಳು ಮಾಡಿಸಿದಕ್ಕೆ | | | | | | 140 | 1 | 11 |
| 10 | ವೆಂಕಟ್ರಮಣ ದೇವರ ಕಟ್ಟೋಣಗಳಿಗೆ | | | | | | 91 | 8 | 6 |
| 11 | ಮಾರಿಗುಡಿ ಜೀರ್ಣೋದ್ಧಾರಕ್ಕೆ | | | | | | 19 | 8 | 0 |
| 12 | ವೆಂಕಟ್ರಮಣ ದೇವಸ್ಥಾನಕ್ಕೆ | 50 | 6 | | | | | | |
| 13 | ಚಿನ್ನ ಬೆಳ್ಳಿ ದಾಗಿನ ಉಸ್ತುವಾರಿ ವಾಸ್ತವ ಕಮ್ಮಿ ಫೀಜು | | | | | | 27 | | |
| 14 | ದನಗಳ ಮೇವಿಗೆ ಹುಲ್ಲು 600 | | | | | | | | |
| 15 | ಈ ವರ್ಷದ ಅಖೈರ ಶಿಲ್ಕು | | | 11 | 114 | 14 | 574 | 4 | 11 |
| | ಜುಮಲಾ | 825 | 10 | 27 | 164 | 14 | 2449 | 15 | 1 |

## ಹರಿಕೆಗೆ ಬಂದ ಚಿನ್ನ ಬೆಳ್ಳಿ ಡಾಗಿನಿಗಳು ಈ ವರ್ಷದ ಆಖೈರ ಶಿಲ್ಕು ವಿವರ

| ತಪಶೀಲು | ಗುದಸ್ತ ಶಿಲ್ಕಿನ ಸಂಖ್ಯೆ. | ಈ ವರ್ಷದ ಹರಿಕೆ ಬಂದ ಸಂಖ್ಯೆ | ಜುಮ್ಲ ಶಿಲ್ಕು ಸಂಖ್ಯೆ |
|---|---|---|---|
| ಚಿನ್ನದ ಮೂಗುತಿಗಳು | 36 | 21 | 57 |
| ಡಿ ಮಿಸ್ರಿಗಳು | 1 | 1 | 2 |
| ಡಿ ಮಣಿಗಳು | 0 | 6 | 6 |
| ಡಿ ಪವನುಗಳು | 0 | 3 | 3 |
| ಡಿ ಕಂಠಿ ಕರಿಮಣಿ | 0 | 1 | 1 |
| ಡಿ ಬೊಟ್ಟುಗಳು | 8 | 2 | 10 |
| ಡಿ ಪುಷ್ಯರಾಗದ ಬೆಂಡೋಲೆ | 0 | 2 | 2 |
| ಡಿ ಉಂಗುರಗಳು | 2 | 2 | 2 |
| ಡಿ ಕಿವಿ ಮುರುಗಳು | 6 | 0 | 6 |
| ಡಿ ಕೆಂಪಿನ ಚಂದ್ರಮುರು | 1 | 0 | 1 |
| ಡಿ ಪಚ್ಚದ ತಲೆಮೊಳೆ | 1 | 0 | 1 |
| ಡಿ ಕೆಂಪಿನ ಬೆಂಡೋಲೆ | 0 | 2 | 2 |
| ಡಿ ದೃಷ್ಟಿಗಳು | 6 | 0 | 6 |
| ಡಿ ತೊಟ್ಲು ಮಗುಚೂರು | 0 | 1 | 1 |
| ಬೆಳ್ಳಿಯ ಕರಿಮಣಿಗಳು | 2 | 1 | 3 |
| ಡಿ ಚೂರು 11 ಬೆಳ್ಳಿ ಸೇರು 3 ತೊಲೆ 10½ಲ್ಲಿ ಸೇರು 2 ತೊ 4½—ಸೇರು 1 ತೊ 6 ಕೂಡಾ ಸೇರು 3-10½ | | | |
| ಜುಮಲಾ | 63 | 40 | 103 |

ದೊಡ್ಡಾಂ ಕಾಪು,
ತಾ. 25—7—1935

**K. Vasudeva Kamath,**
*Commissioner*, Udipi.

**ಶ್ರೀಧರ ಶಾನುಭಾಗ ಪಟೇಲ್**

## ಶ್ರೀಮತಿ ರಮಾನಂದ ಚೆಟರ್ಜಿ ಯವರ ಮರಣ.

'ಮೋಡರ್ನ್ ರಿವ್ಯೂ' ಮತ್ತು 'ಪ್ರವಾಸಿ' ಪತ್ರಿಕೆಗಳ ಸಂಪಾದಕರಾದ ಶ್ರೀ। ರಮಾನಂದ ಚೆಟರ್ಜಿಯವರ ಧರ್ಮಪತ್ನಿ ಶ್ರೀಮತಿ ಮನೋರಮಾ ದೇವಿಯವರು ತಮ್ಮ ೬೧ನೇ ವಯಸ್ಸಿನಲ್ಲಿ ಕಾಲವಶವಾದರು.

## ಮದ್ರಾಸಿಗೆ ಫೋರೆಸ್ಟ್ ರೇಂಜರರು.

### ೯ ಸ್ಥಾನಗಳಿಗೆ ೫೩೦ ಅರ್ಜಿದಾರರು.

ಫೋರೆಸ್ಟ್ ರೇಂಜರರ ಸ್ಥಾನಗಳಿಗೆ ಉಮೇದ್ವಾರರನ್ನಾರಿಸುವುದಕ್ಕಾಗಿ ತಾ. ೧೯ನೇ ದಿನ ರಾವ್ ಬಹದ್ದೂರ್ ಎಂ. ನರಸಿಂಹಂ ಪಂತುಲು ಮತ್ತು ರತ್ನಸ್ವಾಮಿ (ಪಬ್ಲಿಕ್ ಸರ್ವಿಸ್ ಕಮಿಶನ್ ಇದರ ಸದಸ್ಯರು) ಇಲ್ಲಿಗೆ ಬಂದಿದ್ದರು. ಸಂಸ್ಥಾನದಲ್ಲಿನ ೯ ಸ್ಥಾನಗಳಿಗೆ ಒಟ್ಟು ೧೫೩೦ ಅರ್ಜಿಗಳು ಬಂದುವೆಂದು ತಿಳಿದುಬಂದಿದೆ. ಮದ್ರಾಸು ಮತ್ತು ಕೊಯಂಬುತ್ತೂರುಗಳಲ್ಲಿ ಅವರು ಉಮೇದ್ವಾರರನ್ನು ಪರೀಕ್ಷಿಸಿ ಇಲ್ಲಿಗೆ ಬಂದರು. ೧೫೩೦ ಅರ್ಜಿಗಳಲ್ಲಿ ೧೩೩೦ರನ್ನು ತೆಗೆದು ಹಾಕಿದರು. ಉಳಿದ ೨೦೦ರಲ್ಲಿ ಏಳು ಮಂದಿಯನ್ನು ಚುನಾಯಿಸಲಿರುವರು. ೬೦ ಉಮೇದ್ವಾರರು ಈ ಕೇಂದ್ರದಲ್ಲಿ ಹಾಜರಿದ್ದರು.

## ಕೃಷ್ಣ ಜಿಲ್ಲಾ ಆಂಧ್ರ ಮಹಾಸಭೆ

### ರಾಯಲಸೀಮೆಯೊಡನೆ ಮನವಿ.

ತಾ. ೨೧ನೇ ದಿನ ಕೃಷ್ಣ ಜಿಲ್ಲಾ ಆಂಧ್ರ ಮಹಾಸಭೆಯು ಮಚಲೀಪಟ್ಟಣದ ಟೌನ್ ಹೋಲಿನಲ್ಲಿ ರಾವ್ ಬಹದ್ದೂರ್ ಎಸ್. ವಿ ನರಸಿಂಹರಾವ್ ಪಂತುಲುರವರ ಅಧ್ಯಕ್ಷತೆಯಲ್ಲಿ ಜರಗಿ, ಬಳ್ಳಾರಿಯ ಅದೋನಿ, ಆಲೂರು ಮತ್ತು ರಾಯದುರ್ಗಗಳಲ್ಲಿ ಕನ್ನಡ ಪ್ರಚಾರವಾಗುವುದನ್ನು ಖಂಡಿಸಿ, ಆಂಧ್ರರು ಅಧಿಕ ಸಂಖ್ಯೆಯಲ್ಲಿರುವ ಈ ಪ್ರಾಂತ್ಯಗಳಲ್ಲಿ ಆಂಧ್ರಭಾಷಾ ಪ್ರಚಾರವಾಗಬೇಕೆಂದು ಠರಾವಾಯಿತು. ಮದ್ರಾಸನ್ನು ತಮಿಳು ನಾಡಿಗೆ ಸೇರಿಸುವ ಯತ್ನವನ್ನು ಖಂಡಿಸಿ ಮದ್ರಾಸು ಆಂಧ್ರ ದೇಶಕ್ಕೇ ಸೇರಿದುದೆಂದು ಠರಾವು ಮಾಡಿದರು ರಾಯಲ ಸೀಮೆಯವರ ಆಂಧ್ರ ವಿಶ್ವವಿದ್ಯಾಲಯಗಳ ಆವರಣಕ್ಕೆ ಬರಬಹುದೆಂದು ಕೇಳಿಕೊಳ್ಳಲಾಯಿತು ಮೈಸೂರು ಸರಕಾರವು ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರುಗಳಲ್ಲಿ ಆಂಧ್ರ ದೇಶಸ್ಥರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಜನರಿಗೆ ತೆಲುಗು ಭಾಷೆಯನ್ನು ಕಲಿಸುವ ಏರ್ಪಾಡು ಮಾಡಬೇಕೆಂದು ಅರಿಕೆ ಮಾಡಲಾಯಿತು

## ವಿವಾಹವಿಚ್ಛೇದಗಳು.

ರಷ್ಯದಲ್ಲಿ ಕಡಮೆಯಿಲ್ಲ. ಒಬ್ಬ ಸಿವಿಲ್ ಅಧಿಕಾರಿಯ ಮುಂದೆ ಗಂಡನಾಗಲಿ, ಹೆಂಡತಿಯಾಗಲಿ, ಹೇಳಿಕೆಕೊಟ್ಟು ವಿವಾಹಬಂಧನವನ್ನು ಕಳೆದುಕೊಳ್ಳಬಹುದು ಈ ವರ್ಷದ ಮೇ ತಿಂಗಳಲ್ಲಿ ಒಟ್ಟು ೬೩೮೧ ವಿವಾಹಗಳು ನಡೆದುವು. ೨೦೪೦ ವಿವಾಹವಿಚ್ಛೇದನಗಳು ನಡೆದುವು. ಈ ಅವ್ಯವಸ್ಥೆಯನ್ನು ಕಂಡ ಸರಕಾರವು ಅಲ್ಲಲ್ಲಿ ಗ್ರಾಮ ಪಂಚಾಯತುಗಳನ್ನು ಸ್ಥಾಪಿಸಿ ವಿವಾಹವಿಚ್ಛೇದವಾಗುವ ಮೊದಲು ಆ ದಂಪತಿಗಳಿಗಿರುವ ಮಕ್ಕಳ ಜೀವನಾಂಶದ ಏರ್ಪಾಡು ಮಾಡಿಕೊಳ್ಳಬೇಕೆಂದು ತೀರ್ಮಾನವಾಗಿದೆ

## ಆರು ಜನರನ್ನು ಕೊಲೆ ಮಾಡಿದರು!

### ಸಿಖ್ಖನು ಸಿಕ್ಕಿಹೋದನು!

### ಮೃತರಾದವರಲ್ಲಿ ಮೂವರು ಸ್ತ್ರೀಯರು!

ಅಮೃತಸರದ ಸಿಕ್ಖನೊಬ್ಬನು ರೇಗಿಕೊಂಡು ಆರು ಜನರನ್ನು ಕೊಂದಿಕ್ಕಿದನು. ಯಲ್ಲಿ ತರುಣಿಯೊಬ್ಬಳನ್ನು ಕಲಸ ...

---


**Shiromani Narayanacharya**

*Choukhamba* *Benares City*

THIS MAN
OUR CUSTOMER

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವ ರೋಗಿಸವರೇ, ರಾಜಮಹಾರಾಜರುಗಳೇ ಪೂರ್ವಿಕರ ಆತ್ಮೀಯ ಗೃಹ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಅಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ದೀರ್ಘವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು. ಹೀಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಕ್ಕಿ ಪ್ರಮಾಣದ ಕಂಠಿಸರ 1ಕ್ಕೆ ಆಣೆ 10ರಿಂದ ರೂ. ೨೫ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 5ರಿಂದ ರೂ. ೨೫ರ ವರೆಗೆ, ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ. 50ರ ವರೆಗೆ ಮುಖ್ಯ ೩–4–5–6–7–8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10. ಮುಖ್ಯ 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ 1ರಿಂದ 30ರ ವರೆಗೆ 12–13–14 ಮುಖದ ಕಾಳು 1ಕ್ಕೆ ರೂಪಾಯಿ 4ರಿಂದ 100ರ ವರೆಗೆ, ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ, ದೊಡ್ಡ ರುದ್ರಾಕ್ಷೀ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿಪಿಕ್ಕೆ ಖರ್ಚುಗಳಿಗೆ ಬೇರೆ ಆಣೆ ಕೊಡಬೇಕು 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು — 1 ಚಿತ್ರಪಟ, 1 ಕಾಶೀ ಪಟ್ಟ 1 ಕಾಶಿ ಪಂಚಾಂಗ ಕಳುಹಿಸಿಕೊಡುವೆ 3 ಇನಾಮುಗಳು)

**ಶಿರೋಮಣಿ ನಾರಾಯಣಾಚಾರ್ಯ**

ಚೌಖಂಬಾ, ಬೆನಾರಿಸ್ (ಕಾಶೀ)



**ಕುಷ್ಠರೋಗ ಮತ್ತು ವಾತರೋಗ ನೊಂದು ಕಂಗೆಟ್ಟು ಹೋಗಿರುವವರಿಗೆ**

ಮೂಲಿಕೆಯ ಔಷಧಿಗಳಿಂದ ಆಶ್ಚರ್ಯಕರವಾಗಿ ಪೂರ್ಣ ಗುಣವಾಗುತ್ತದೆ ಅದ್ಭುತಕರ ವಿವರಣೆ ಓದಿರಿ

**Yeshajalaya, Chandanpur**
Khulna, Bengal (A W)



**೧೦೦ ರೂಪಾಯಿ ಬಹುಮಾನ**

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು, ಬಹಳ ಕ್ಲಿಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ ರೋಗ ದೂರವಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ದಾಸರಾಗಿ ಬೇಡುವ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ. ಬೆಲೆ ರೂ ೨ ಮಾತ್ರ

ಲಿ.P.B 5–7 Bengal Mesmerism House Panchpota, Bengal (B.R.)


ಕ್ಕಿಟ್ಟುಕೊಳ್ಳಬಾರದೆಂದು ತನ್ನಹೆಂಡತಿಯು ತಡೆದುದಕ್ಕಾಗಿ ಅವನು ರೇಗಿಕೊಂಡು ಹೆಂಡತಿಯನ್ನೂ, ಇತರ ಕೆಲವರನ್ನೂ ಕೊಂದನು.

---


**New Era Technical School.**

Near Market Square, Udipi.

Commercial classes–approved by the Madras Government–New session opens in June.

**ನ್ಯೂ ಈರಾ ಟೆಕ್ನಿಕಲ್ ಸ್ಕೂಲ್**

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟ್ಯಾಪ್‌ರ್ಯಾಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.


## ಮಂಗಳೂರಿನ ಪೇಟೆಧಾರಣೆ.

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ರಾಶಿ ಅಕ್ಕಿ | 3—14 | 4—4 |
| ಮುಷ್ಟಿ ... | 4—6 | 4—10 |
| ಗುಡ್ಡು . | 4—0 | 4—8 |
| ಊರ ಅವ್ವಲ್ ಬೆಳ್ತಿಗೆ .. | 4—4 | 4—8 |
| ರಂಗೂನು ಬೆ. ಗೋ. ೧ಕ್ಕೆ | 6—10 | 7—4 |
| ಎಲ್ಲೂರು ಬೆ. ಮು. ೧ಕ್ಕೆ | 4—4 | 4—8 |
| ಗೋಧಿ ಗೋಣಿ ೧ಕ್ಕೆ | 10—0 | 12—8 |
| ತೊಗರಿ ಗೋಣಿ ೧ಕ್ಕೆ | 10—8 | 11—0 |
| ಹುರುಳಿ ಗೋಣಿ ೧ಕ್ಕೆ | 7—8 | 7—12 |
| ಕಡಲೆ ಗೋಣಿ ೧ಕ್ಕೆ | 7—8 | 10—8 |
| ತೊಗರಿಬೇಳೆ ಗೋಣಿ ೧ಕ್ಕೆ | 10—0 | 17—0 |
| ಉದ್ದು ಗೋಣಿ ೧ಕ್ಕೆ | 8—0 | 8—8 |
| ಹೆಸರು ಗೋಣಿ ೧ಕ್ಕೆ | 9—4 | 9—12 |
| ಊರುಬೆಲ್ಲ ಖಂಡಿ ೧ಕ್ಕೆ | 35—0 | 40—0 |
| ಉಪ್ಪು ಗೋಣಿ ೧ಕ್ಕೆ | 4—12 | 5—2 |
| ಕೊಬ್ರಿ ಖಂಡಿ ೧ಕ್ಕೆ | 48—0 | 55—0 |
| ಕೊಬ್ರಿ ಹಿಂಡಿ ಖಂಡಿ ೧ಕ್ಕೆ | 20—0 | — |
| ಎಳ್ಳಿಂಡಿ ಖಂಡಿ ೧ಕ್ಕೆ | 30—0 | 3[illegible]—0 |
| ಕೊಬ್ರಿ ಎಣ್ಣೆ ಮಣ ೧ಕ್ಕೆ | 3—14 | 4—14 |
| ಎಳ್ಳೆಣ್ಣೆ ಮಣ ೧ಕ್ಕೆ | 5—2 | 6—0 |
| ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ | 5—8 | 5—12 |
| ಮೋರಿಸ ಸಕ್ಕರೆ ಮು. ೧ಕ್ಕೆ | 3—11 | 3—13 |
| ಮೆಣಸು | 4—6 | 5—[illegible] |
| ಸಾಸಿವೆ ಮುಡಿ ೧ಕ್ಕೆ | 5—12 | 6—0 |
| ಶಾಲುಮೆಣಸು ಖ. ೧ಕ್ಕೆ | 100—0 | 110—0 |
| ಯೇಲಕ್ಕಿ ಮಣ ೧ಕ್ಕೆ | 23—0 | 30—0 |
| ಗೇರುಬೀಜ ಮು. ೧ಕ್ಕೆ . | 4—4 | 4—6 |
| ಕಚ್ಚಿಗೆ ಖಂಡಿ ೧ಕ್ಕೆ | 39—0 | 39—8 |
| ತಾಂಬ್ರತಗಡು ಮು. ೧ಕ್ಕೆ . | 9—8 | 9—8 |
| ತಾಂಬ್ರಪಾತ್ರಗಳು ಮು ೧ಕ್ಕೆ | 11—0 | 12—0 |
| ಚೀನಿಬೆಳ್ಳಿ ಸೇರು ೧ಕ್ಕೆ | 14—12 | 15—0 |
| ಹಿತ್ತಾಳೆ ತಗಡು ಮು. ೧ಕ್ಕೆ | 8—12 | 9—0 |
| ಪವನು ೧ಕ್ಕೆ | 22—8 | 23—0 |
| ಹುಣಸೆ ಹುಳಿ ಖಂಡಿ ೧ಕ್ಕೆ | 20—0 | 25—8 |
| ನೇಟಿವ್ ಕಾಫಿ ಖಂಡಿ ೧ಕ್ಕೆ | 170—0 | 180—0 |
| ಫಟೇರಿ ಕಾಫಿ ಖಂಡಿ ೧ಕ್ಕೆ | 220—0 | 230—0 |
| ಮಡಿಕೇರಿ ಏಲಕ್ಕಿ . | 23—0 | 25—0 |
| ಸಕಲೇಶಪುರ ಏಲಕ್ಕಿ .. | 28—0 | 38—0 |

---


LOOK SHARP! LOOK AHEAD

**Murdeshwar's Banking Institute.**

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

**Ladies are also admitted.**

Enrol yourself NOW. Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

*For further particulars apply to—*

D R Murdeshwar,
Dip Econ, F R Econ; S. (Lond.)
Principal.
Ganapathy High School Street,
Mangalore.



**Comfortable like an Aeroplane**



Use our swadeshi Mosquitonet for health, Comfort and sound sleep, as if you are in an Aeroplane Sample cutting free More convenient if some advance sent with order.

| L | B | H | Price. | Best. |
|---|---|---|---|---|
| 6 Fit | 3½ Fit | 3½ Fit | Rs. 1/12 | 2/6 |
| 6 „ | 4 „ | 4 „ | „ 2/4 | 3/- |
| 6½ „ | 4½ „ | 4½ „ | „ 2/8 | 3/8 |
| 7 „ | 5 „ | 5 „ | „ 3/2 | 4/10 |
| 7½ „ | 6 „ | 6 „ | „ 4/4 | 5/12 |

G N. Sharma, Post Box F 6706.
Calcutta



**ಕಣ್ಣಿನ ಪರಿ.**

"ಐ–ಸನ್" ಎಂಬ ನೇತ್ರಭಾಸ್ಕರ–ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇವುಗಳನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ ಖಾತರಿ ಗುಣವಾಗಿ. ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Haryyasram, Panchpota, Bengal.


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಶ್ರಾವಣ ಶು। ೪ ಶನಿವಾರದಿಂದ ಶ್ರಾವಣ ಶು। ೧೦ ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ಕರ್ನಾಟಕ ಪಟ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ವಿಶೇಷ |
|---|---|---|---|---|---|---|---|
| 3 | ಶನಿ | ೪ | ೪೨ | ಉತ್ತರಾ | ೩೧ | ೧೮ | ನಾಗಚತುರ್ಥಿ |
| 4 | ಆದಿ | ೫ | ೪೬ | ಉತ್ತರಾ | ೫ | ೧೯ | |
| 5 | ಸೋಮ | ೬ | ೫೦ | ಹಸ್ತ | ೧೧ | ೨೦ | |
| 6 | ಕುಜ | ೭ | ೫೩ | ಚಿತ್ರಾ | ೧೬ | ೨೧ | |
| 7 | ಬುಧ | ೮ | ೫೪ | ಸ್ವಾತೀ | ೨೦ | ೨೨ | |
| 8 | ಗುರು | ೯ | ೫೪ | ವಿಶಾಖಾ | ೨೨ | ೨೩ | |
| 9 | ಶುಕ್ರ | ೧೦ | ೫೩ | ಅನುರಾಧಾ | ೨೩ | ೨೪ | |

## ಕಮ್ಯೂನಿಸ್ಟರನ್ನು ಹೊರಗಿಡಿ!
### ಟ್ರೇಡ್ ಯೂನಿಯನ್‌ಗಳಿಗೆ ಅವರು ಬೇಡ!

ಲಂಡನ್,

ಟ್ರೇಡ್ ಯೂನಿಯನ್ ಸಂಸ್ಥೆಗಳಿಗೆ ಕಮ್ಯೂನಿಸ್ಟರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳಬಹುದೋ ಕೂಡದೋ ಎಂಬುದೊಂದು ದೊಡ್ಡ ಸಮಸ್ಯೆಯಾಗಿ ತಲೆಯೆತ್ತಿದೆ ಕಳೆದ ಅಕ್ಟೋಬರಿನಲ್ಲಿ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನವರು ಒಂದು ಸರ್ಕ್ಯೂಲರನ್ನು ಹೊರಡಿಸಿದ್ದರು ಗಲಭೆಯನ್ನುಂಟುಮಾಡುವ ಯಾವುದೊಂದೇ ಸಂಸ್ಥೆಯ ಸದಸ್ಯರನ್ನು ಟ್ರೇಡ್ ಯೂನಿಯನ್ ಸಂಸ್ಥೆಗೆ ಸೇರಿಸಿಕೊಳ್ಳಕೂಡದೆಂದೂ ಈಗಿರುವ ಕಮ್ಯೂನಿಸ್ಟ್ ಸದಸ್ಯರ ಪಟ್ಟಿಯೊಂದನ್ನು ತಯಾರಿಸಬೇಕೆಂದೂ ತಿಳಿಸಿದ್ದರು ಆದರೆ ಕೈಸ್ತೀ ಕೆಲಸಗಾರರು ಈ ಸರ್ಕ್ಯೂಲರನ್ನು ವಿರೋಧಿಸಿದರು. ಹೇಸ್ಟಿಂಗ್ಸ್‌ನಲ್ಲಿ ನಡೆದ ಜನರಲ್ ಸಭೆಯಲ್ಲಿ ಸರ್ಕ್ಯೂಲರನ್ನು ನಿರಾಕರಿಸಬೇಕೆಂದಾಯಿತು

## ಸರಕಾರಕ್ಕೆ ಸಹಾಯ

ನ್ಯೂಯೋರ್ಕ್

500 ಮಿಲಿಯ ಡೋಲರುಗಳ ಸಾಲವನ್ನು ಅಮೇರಿಕ ಸರಕಾರವು ತೆಗೆದುಕೊಳ್ಳಲು ನಿರ್ಧರಿಸಿತಷ್ಟೆ. ಈ ಸಾಲಕ್ಕೆ ಬರಬೇಕಾದುದಕ್ಕಿಂತಲೂ ಮೂರರಷ್ಟು ಚಂದಾವು ಒಂದೇ ತಿಂಗಳೊಳಗೆ ಬಂದಿದೆ

## ಯುದ್ಧ ನಾವೆಗಳ ಸಿದ್ಧತೆ

ಟೋಕಿಯೋ

ಜಪಾನಿನ ನೌಕಾ ಸೈನ್ಯಕ್ಕಾಗಿ ಎಷ್ಟು ಸಮಯವೂ ವೆಚ್ಚವಾಗುತ್ತಲಿದ್ದುದಕ್ಕಿಂತ ಶೇಕಡಾ 30ರಷ್ಟು ಹೆಚ್ಚು ವೆಚ್ಚವನ್ನು ಮಾಡಬೇಕೆಂದು ನಿರ್ಣಯಿಸಿಕೊಂಡಿರುವರು ಈ ಬೇಳಿಕೆ ಕೇಳಿಕೆಯು ಅಧಿಕಾರ ಪಕ್ಷೀಯರಿಂದಲೇ ಬಂದಿತು ಸಮುದ್ರ ಸಚಿವರು ಈ ಮೊತ್ತವು ಕೂಡಲೇ ಕೊಡಲ್ಪಡಬೇಕೆಂದು ಕೇಳಿರುವರಾದರೂ, ಆರ್ಥಿಕ ಮಂತ್ರಿಯು ಒಪ್ಪುರುವುದಿಲ್ಲ

## ಇಂಡಿಯಾ ಬಿಲ್

ಲಂಡನ್

ಇಂಡಿಯಾ ಬಿಲ್ಲಿನ ಕುರಿತಾದ ರಿಪೋರ್ಟು ಅಂತ್ಯ ವಿವಾದಕ್ಕೊಳಗಾಗಿದೆ. ಜುಲಾಯಿ 24ರಲ್ಲಿ ಅದರ ಪೂರ್ಣ ಪರ್ಯಾಯವು ನಡೆಯಲಿರುವುದು

## ಮಸಾನಿಯವರ ಮೇಲೆ ನಿರ್ಬಂಧ

ಲಂಡನ್,

ಇಂಡಿಯನ್ ಸೋಶಿಯಲಿಸ್ಟ್ ಪಾರ್ಟಿಯ ಕಾರ್ಯದರ್ಶಿಯರಾದ ಮಸಾನಿಯವರು ಕಳೆದ ಶುಕ್ರವಾರ ಲಂಡನಿಗೆ ತಲಪಿದರು ಕ್ರೈನಾಲ್ಸ್ ಪತ್ರಿಕೆಯು ತಿಳಿಸುವಂತೆ ಇವರಿಗೆ ಕೊಡಲ್ಪಟ್ಟಿರುವ ಪಾಸ್‌ಪೋರ್ಟನ್ನು ಸರಕಾರವು ಹಿಂತೆಗೆದುಕೊಂಡಿದೆಯೆಂದು ಗೊತ್ತಾಗಿದೆ ಇವರು ಲಂಡನಿನಲ್ಲಿ ಎಲ್ಲಿ ಬೇಕಾದರೂ ತಿರುಗಾಡಬಹುದು! ಮಾತ್ರ ಯೂರೋಪು ಖಂಡಕ್ಕೆ ಕಾಲಿಡಬಾರದು ಹಿಂದೂದೇಶಕ್ಕೆ ಹಿಂದಿರುಗುವುದಾದರೆ ಈ ಪಾಸ್‌ಪೋರ್ಟನ್ನು ಸರಕಾರವು ಇವರಿಗೆ ಹಿಂತಿರುಗಿ ಕೊಡುವುದು

## ಹಿಂದೀಯರಿಗೆ ಬಹಿಷ್ಕಾರ!
### ನೀರು ಮುಟ್ಟಕೂಡದು

ಲಂಡನ್,

ಲಂಡನ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಬ್ಬರಿಗೆ ಪೇಟೆಯ ಹೊರಗಿರುವ ಈಜುವ ಕೊಳದಲ್ಲಿ ಇತರ ವರ್ಣದವರು ಸ್ನಾನಮಾಡಬಾರದೆಂದು ನಿಬಂಧನೆಯಿರುವುದೆಂದು ತಿಳಿಸಲಾಗಿದೆ. ಈ ಸಂಬಂಧವಾಗಿ ಹೋಮ್ ಆಫೀಸಿಗೆ ಈ ವಿದ್ಯಾರ್ಥಿಗಳ ಮನವಿ ಹೋಗಿದೆ.

## ಕೋರ್ಟಿನಲ್ಲಿ ಬೊಬ್ಬಿಟ್ಟುದಕ್ಕಾಗಿ

ಪೊಂಡಿಚೆರಿಯ ಕೋರ್ಟಿನಲ್ಲಿ ಬೊಬ್ಬಿಟ್ಟು ನ್ಯಾಯಾಧೀಶರಿಗೆ ತೊಂದರೆಕೊಟ್ಟ ವೈದ್ಯಲಿಂಗಂ ಗೋಪಾಲನ್, ಬೊನಚಾಲ ಎಂಬ ಮೂವರನ್ನು ಸೆರೆಹಿಡಿದು 24 ತಾಸುಗಳ ಶಿಕ್ಷೆ ಕೊಟ್ಟು ಕ್ಷಮೆ ಬೇಡಿದುದರಿಂದ ಆಗಲೇ ಬಿಟ್ಟುಬಿಟ್ಟರು.

## ಆಯುಷ್ಯ ಮಹಿಮೆ

ಕೊಚ್ಚಿಯ ದೇಶ ಮಂಗಲಂ ಎಂಬಲ್ಲಿ ಒಬ್ಬ ನಾಯರನು ತನ್ನ ಹೆಂಡತಿಯನ್ನು ಕೊಂದು ಒಡನೆ ಬಾವಿಗೆ ಹಾರಿದನು ಆದರೆ ಆಯುಷ್ಯ ಮಹಿಮೆ! ಅವನನ್ನು ಕೆಲವರು ಕೂಡಿ ಎತ್ತಿ ಆಸ್ಪತ್ರೆಗೆ ಕಳುಹಿಸಿದರು ಪಾಪದವನಿಗೆ ಪಾಪ ಶಿಕ್ಷೆಯಾಗದಿದ್ದೀತೆ

## ಭೂಮಿಯು ಇಬ್ಭಾಗವಾಯಿತು
### ಸಿಡಿಲಿನ ಬಡಿತ

ಕೊಚ್ಚಿಯ ಪೆರುಂಬವೂರ್ ಎಂಬಲ್ಲಿ ಸಿಡಿಲು ಬಡೆದುದರಿಂದಾಗಿ ಒಂದು ಫರ್ಲಂಗು ವರೆಗೆ ಭೂಮಿಯು ಇಬ್ಭಾಗವಾಗಿದೆ 1000 ಅಡಿಗಳಷ್ಟು ಆಳವಿದೆ ಒಂದು ಇಂಚು ಅಗಲವಿದೆ

## ಎರಡು ಕುತ್ತಿ ಹಾಲು ಕೊಡುವ ಗಂಡು ಆಡು

ಸಂಯುಕ್ತ ಪ್ರಾಂತದಲ್ಲಿ ಬಾಬು ರಾಮ ಬಹದೂರ್ ಪ್ರಸಾದರೆಂಬ ಕಾಂಗ್ರೆಸ್ ಪಕ್ಷೀಯರ ಮನೆಯಲ್ಲಿರುವ ಗಂಡು ಆಡು ದಿನವೊಂದಕ್ಕೆ ಎರಡು ಕುತ್ತಿ ಹಾಲು ಕೊಡುತ್ತದೆ ಈ ವಿಚಿತ್ರವನ್ನು ನೋಡುವುದಕ್ಕಾಗಿ ಸಾವಿರಾರು ಜನರು ಅತ್ತ ಹೋಗುತ್ತಿರುವರು. ಈ ಆಡನ್ನು ಕಮರ್ಾವಸ್ ಎಂಬಲ್ಲಿ ಬಹಿರಂಗವಾಗಿ ಪ್ರದರ್ಶಿಸುತ್ತಿರುವರು.

## ಹೆಂಡತಿ ತೀರಿಕೊಂಡುದಕ್ಕಾಗಿ

ಕೊಲಂಬೋಯಿನ ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಮೋರಿಯೇಜಸ್ ಉದ್ಯೋಗದಲ್ಲಿದ್ದ ಮಿ. ಆಲ್ಬರ್ಟ್ ಪೆರೆರಾ ಪತ್ನಿಯಾಕೆ ಎಂಬವರು, ತನ್ನ ಪತ್ನಿಯ ಮರಣ ದುಃಖವನ್ನು ಸಹಿಸಲಾರದೆ ಎದೆಗೆ ಗುಂಡು ಹೊಡೆದುಕೊಂಡು ಕಾಲವಶರಾದರು

## ಕಾರು ಕಳ್ಳರು ಮದ್ರಾಸಿನಲ್ಲಿರುವರು

ಮೋಟರ್ ಕಾರುಗಳನ್ನು ಕದಿಯುವವರು ಇಷ್ಟರ ತನಕ ಅಮೇರಿಕಾದಲ್ಲಿದ್ದರು ಈಗ ಮದ್ರಾಸಿಗೆ ಬಂದಿರುವರು. ಮದ್ರಾಸ್ ಕ್ಲಬ್ಬಿನ ಪರಾರದಲ್ಲಿ ಒಬ್ಬ ಮಹಾಶಯರಿಟ್ಟಿದ್ದ ಮೋಟರ್ ಕಾರ್ ಒಂದನ್ನು ಯಾರೋ ಅಪಹರಿಸಿದರು. ಪೋಲೀಸರಿಗೆ ತಿಳಿಸಿ ವಿಚಾರಿಸಿದಾಗ ಸಿಟಿ ಪೋಲೀಸ್ ಆಫೀಸರರ ಪರಾರದಲ್ಲಿ ಅದು ಸಿಕ್ಕಿತು

## ಸಮಾಜೋದ್ಧಾರಕ್ಕಾಗಿ

೧೯೦೦ರಲ್ಲಿ ೩೬೦, ೧೯೦೮ರಲ್ಲಿ ೬೩೦, ೧೯೨೦ರಲ್ಲಿ ೩೦೭೦, ೧೯೩೦ರಲ್ಲಿ ೪೬೮೦, ೧೯೩೨ರಲ್ಲಿ ೪೯೦೦ ಲಕ್ಷ ಪವನುಗಳು ಬ್ರಿಟಿಷ ಸರಕಾರದ ವೆಚ್ಚಗಳು ೧೯೩೩ರಲ್ಲಿ ೪೨೦ ಲಕ್ಷ ೧೯೩೪ರಲ್ಲಿ ೫೬೬ ಲಕ್ಷ ಪವನುಗಳು ನಿರುದ್ಯೋಗಿಗಳ ಸಹಾಯಕ್ಕಾಗಿಯೂ, ಮುದುಕರ ಸಹಾಯಕ್ಕಾಗಿ ೬೦ ಲಕ್ಷ ಪವನುಗಳೂ ಹಂಚಲ್ಪಟ್ಟಿವೆ ವಿಧವೆಯರಿಗೆ, ಬಡವರಿಗೆ, ಭೋಜನ ಮಂದಿರಗಳಿವೆ. ಅನಾಥ ಮಕ್ಕಳಿಗೆ ಊಟ ಬಟ್ಟೆ ವಸತಿಗಳ ಏರ್ಪಾಡಿದೆ.


# ಯೋಗ್ಯರಾದವರಿಗೆ ಸುಸಂದರ್ಭ

## ದಿ ನಾರ್ದನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಇದು ಮದ್ರಾಸು ಪ್ರಾಂತ್ಯದಲ್ಲಿ ಬಹುಮುಖವಾದ ಸಂಘಟನೆಯನ್ನೂ ಪ್ರಚಾರ ಕಾರ್ಯವನ್ನೂ ಕೈಕೊಂಡಿದೆ ಮತ್ತು

## ಪ್ರಕಟಿಸುವುದೇನೆಂದರೆ,—

ಪ್ರಮುಖ ಕೇಂದ್ರಗಳಲ್ಲಿ ಕೆಲಸಮಾಡಲು ಉತ್ಸಾಹಿಗಳಾದ ಹೊಸ ಜನರಲ್ ಒರ್ಗನೈಜರರ ಕಂಟ್ರಾಕ್ಟನ್ನು ಮಾಡುವುದರಲ್ಲಿದೆ

ಏಜನ್ಸಿ ಪ್ರಸಾರಣೆಯ ಧೋರಣೆಯ ಮೇಲೆಯೇ ಈ ಹೊಸ ಕಂಟ್ರಾಕ್ಟು ಕ್ರಮವನ್ನಿಡಲಾಗಿದೆ ಇದರಂತೆ ಯೋಗ್ಯ ಸಂಬಳ, ವ್ಯಕ್ತಿಪರವಾದ ವ್ಯಾಪಾರದಲ್ಲಿ ಸಂಚಾರ ಭತ್ತೆ, ಉದಾರ ಕಮಿಶನ್, ಪ್ರೊವಿಡೆಂಟ್ ಫಂಡ್ ಮತ್ತು ಬಾಹೀರಾತುಗಳ ಸೌಕರ್ಯಗಳಿವೆ. ಇಂಡಿಯಾದಲ್ಲಿರುವ ಯಾವ ವಿಮಾ ಕಂಪೆನಿಗಿಂತಲೂ ಅತ್ಯುತ್ಕೃಷ್ಟ ಕಂಟ್ರಾಕ್ಟು ಇದೆಂದು ನಿಸ್ಸಂದೇಹವಾಗಿ ಹೇಳಬಹುದು

ಇಂಡಿಯನ್ ಜೀವವಿಮೆಯ ರಂಗದಲ್ಲಿ 'ದಿ ನಾರ್ದನ್ ಲೈಫ್ ಪಾಲಿಸಿ' ಎಂಬುದು ಧೈರ್ಯಪೂರ್ಣ ಸಾಹಸ ನಿರುದ್ಯೋಗದಲ್ಲಿ, ದೌರ್ಬಲ್ಯದಲ್ಲಿ, ಅಪಘಾತದಲ್ಲಿ, ವೈದ್ಯಕೀಯ ಸಹಾಯಕ್ಕೆ ಆರ್ಥಿಕ ಬೆಂಬಲಕ್ಕೆ, ಮನೆಗೆ ಬೇಕಾದ ಸಾಮಾನುಗಳನ್ನು ಪಡೆಯುವುದಕ್ಕೆ ರಕ್ಷಣೆಗಳಲ್ಲದೆ ಜೀವವಿಮೆಯ ಸರ್ವಿಸಿನಲ್ಲಿ ಅತ್ಯುತ್ತಮ ಸೌಲಭ್ಯಗಳನ್ನೊದಗಿಸಿಕೊಡುತ್ತದೆ

ಸರ್ ಚಿನೂಭಾಯಿ ಮಾಧವಲಾಲ್ ಬೆರೊನೆಟ್, ಮಿಲ್ ಮ್ಹಾಲಕರ ಮತ್ತು ವ್ಯಾಪಾರಿಗಳು, ಶ್ರೀ ಬಿ ವಿ ಜಾಧವ್, ಎಂ ಎ, ಎಲ್ ಎಲ್ ಬಿ ಮಾಜಿ ಎಂ ಎಲ್ ಎ ಮತ್ತು ಮುಂಬಾಯಿ ಸರಕಾರದ ಮಂತ್ರಿಗಳು, ಕೊಲ್ಹಾಪುರದ ಮಾಜಿ ದಿವಾನರು–ಇವರಂತಹ ಪ್ರಖ್ಯಾತ ಮತ್ತು ಯಶಸ್ವೀ ವಾಣಿಜ್ಯಪಟುಗಳಿಂದಲೇ ಕಂಪೆನಿಯನ್ನು ಸಮರ್ಪಕವಾಗಿಯೂ ಆರ್ಥಿಕವಾಗಿಯೂ ನಡೆಸಲಾಗುತ್ತದೆ 1934ರ ಇದರ ವಹಿವಾಟವು ಅಭೂತಪೂರ್ವ ವಿಜಯವನ್ನು ಹೊಂದಿದೆ ಕಳೆದ ವರ್ಷ 35,00,000 (35 ಲಕ್ಷ) ರೂಪಾಯಿಗಳ ವಹಿವಾಟವನ್ನು ನಡೆಸಿದೆ, ಕಂಪನಿಯ ದಿಗಂತವ್ಯಾಪ್ತವಾದ ಖ್ಯಾತಿಗೂ ಅದರ ಜಯಸಂಕೇತಕ್ಕೂ ಇದೇ ನಿದರ್ಶನವಾಗಿದೆ

ಶಕ್ತರೂ, ಸಂಘಟನೆ ಮಾಡಲು ಸಮರ್ಥರೂ ಆದ ಗೃಹಸ್ಥರೂ ಆಗಿರುವವರು ಕೆಳಗೆ ಸಹಿಯಿಟ್ಟವರನ್ನು ರವಿವಾರವೊಂದಲ್ಲದೆ ಬೇಕಾದ ದಿನಗಳಲ್ಲಿ 12ರಿಂದ 6 ಗಂಟೆಯ ಒಳಗೆ ಮುಖತಃ ಕಂಡು ಮಾತನಾಡಿದರೆ ಪ್ರಯೋಜನವಾದೀತು.

C ಮದ್ರಾಸು ಬ್ರಾಂಚ್ ಆಫೀಸು — ಎಸ್. ಎಚ್. ಥಾಕರ್
12 ಕಂಬ ಚೆಟ್ಟಿ ಸ್ಟ್ರೀಟ್ ಮದ್ರಾಸು — ಜನರಲ್ ಮೆನೇಜರ್ (ಪ್ರವಾಸದಲ್ಲಿರುವವರು)

# THERE IS A WHITE LIGHT SHINING

FULL & SQUARE in the piercing light of PUBLIC OPINION each bank stands revealed to the people whom it serves.

The service which any bank renders is never better nor worse than people believe it to be Public opinion determines its success or failure. The strong bank receives not only the deposits of people, but also the hearty support which prompts them to recommend it to their friends.

Estd 1906

## CANARA BANK LTD.

MANGALORE.

OFFICES AT —

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—City, Mangalore—Bunder, Kasaragod, Puttur, Buntwal, Karkala, Coondapoor, Udipi & Gangoli.

| Capital | Reserves | Working Capital |
|---|---|---|
| 3,31,000 | 4,50,000 | 73,49,000 |

ಶಕ್ತಿಯಿಂದಲೇ ದೃಷ್ಟಿಸಲಾಗದ

**ಬೊಡ್ಡು**

ಮತ್ತು

**ಕಳೆಗಳು**

ಮಾಯವಾಗುವುವು

ಸಸ್ಯಜನ್ಯ ಔಷಧಿಯಾದ

ಸಾಂಬಕನ್ನೇ ಉಪಯೋಗಿಸಿರಿ

ದೃಷ್ಟಿಸಲಾಗದ ಬೊಡ್ಡುಗಳಿಂದಾಗಲಿ, ಕಳೆ ಮತ್ತು ಕಚ್ಚಗಳಿಂದಾಗಲಿ, ಬಾಧಿತರಾಗಬೇಡಿ. ದಿನಂಪ್ರತಿ ಸಾಂಬಕ್ ತಗಲಿಸಿ ನಿಮ್ಮ ಚರ್ಮವನ್ನು ಆರೋಗ್ಯಕರವನ್ನಾಗಿ ಇಡಿ. ಈ ಸಸ್ಯಜನ್ಯ ಔಷಧಿಯು ಚರ್ಮರಂಧ್ರಗಳೊಳಗೆ ಸುಲಭವಾಗಿ ಸೇರುತ್ತದೆ, ಇದು ಚರ್ಮವನ್ನು ಪೋಷಿಸುತ್ತದೆ, ರೋಗಗಳನ್ನು ಬುಡದಿಂದಲೇ ಕೀಳುತ್ತದೆ. ಅದ್ಭುತಕರವಾಗಿ ವೇದನೆಯನ್ನು ಗುಣಮಾಡುತ್ತದೆ. ಬಾತುಹೋದ ಅಂಗವನ್ನು ಒಣಗಿಸಿ ಒಳಗಿಂದಲೇ ಗುಣಪಡಿಸುತ್ತದೆ. ಕಳೆಗಳನ್ನುಂಟುಮಾಡುವುದಿಲ್ಲ. ಶುದ್ಧವಾದ ಸಸ್ಯಗಳಿಂದಲೇ ಸಾಂಬಕನ್ನು ತಯಾರಿಸಲಾಗುತ್ತದೆ. ಚರ್ಮರೋಗಗಳಿಗೂ ಘಾಯಗಳಿಗೂ ಇದನ್ನು ಉಪಯೋಗಿಸಿರಿ.

ಎಲ್ಲಾ ಔಷಧಿ ವಿಕ್ರಯಗಾರರಲ್ಲೂ ರೂ. 1 ಮತ್ತು 2-4-0ಕ್ಕೆ ದೊರೆಯುತ್ತದೆ.

ಏಜಂಟರು:—ದೋಥಾ ಎಂಡ್ ಕೋ., ಪಿ. ಟಿ. ಮದ್ರಾಸು.

ಪ್ರಾಣಿಜನ್ಯ ಕೊಬ್ಬು ಇಲ್ಲವೆಂದು ಗೇರಂಟಿ ಇದೆ.

**ಸಾಂಬಕ್**

**Zam-Buk**


# ಹಿಂದೂದೇಶದಲ್ಲಿ ನಿಕೃಷ್ಟ ತರಗತಿ ಮತ್ತು ಪೆಟ್ರೋಲಿನ ಅಧಿಕ ಬೆಲೆ

## ಗೆಲನಿಗೆ ೧೪ ಆಣೆಯಿಂದ ಹಿಡಿದು ೨ ರೂಪಾಯಿಗಳ ಅಧಿಕ ಬೆಲೆ

### ಎಣ್ಣೆಯ ವ್ಯಾಪಾರದಲ್ಲಿ ಹಿಂದೀಯ ಕಂಪೆನಿಯ ಸಾಹಸದಿಂದಾಗಿ ದೇಶಕ್ಕೆ ಅತಿರೇಕ ಪ್ರಯೋಜನಗಳು

ಹಿಂದೂದೇಶದಲ್ಲಿ ಬಹು ನಿಕೃಷ್ಟ ತರಗತಿಯ ಪೆಟ್ರೋಲನ್ನು ವಿಕ್ರಯಿಸಲಾಗುತ್ತದೆ. ಅದು ಕೂಡಾ ಹಾಸ್ಯಾಸ್ಪದವಾದ ಅಧಿಕ ಬೆಲೆಗೆ. ಆದರೆ ಕಳೆದ ಎರಡು ಮೂರು ವರ್ಷಗಳಿಂದ ಅದೊಂದು ಕಂಪೆನಿಯು ಚಿಮಿಣಿ ಎಣ್ಣೆ ಮತ್ತು ಪೆಟ್ರೋಲನ್ನು ಸಿಕ್ಕ ಸಿಕ್ಕಲ್ಲಿಂದ ಆಮದು ಮಾಡಲಾರಂಭಿಸಿದಂದಿನಿಂದ ಆ ಪ್ರಾಂತ್ಯಗಳಲ್ಲೆಲ್ಲ ಕ್ರಯವು ಇಳಿಸಲ್ಪಟ್ಟಿತು. ಆದರೆ ಇಂಡಿಯದ ಕಂಪೆನಿಗಳ ಸ್ಟೋಕ್ ಕಡಿಮೆಯಾದೊಡನೆ ಕ್ರಯಗಳೂ ಪುನಃ ಏರಿಸಲ್ಪಟ್ಟುವು. ಹಾಗೆ ಸಾರ್ವಜನಿಕರ ಮೇಲೆ ಮಹಾ ಸಂಕಷ್ಟವನ್ನು ಹೊರಿಸಲಾಗುತ್ತಿತ್ತು. ಈಗ ಮುಂಬಾಯಿಯಲ್ಲಿ ಗೆಲನಿಗೆ ರೂಪಾಯಿ 0-14-0ಯಂತೆ ಪೆಟ್ರೋಲನ್ನು ವಿಕ್ರಯಿಸಲಾಗುತ್ತದೆ! ಆದರೆ ದೇಶದ ಇತರ ಕಡೆಗಳಲ್ಲಿ ಗೆಲನಿಗೆ ರೂ. 2/-ರಂತೆ ದರವಿದೆ.

ಹೊಸ ಹಿಂದೀಯ ಪೆಟ್ರೋಲ್ ಕಂಪೆನಿಯು ಬಹು ವ್ಯಾಪಕ ರೀತಿಯಿಂದ ಸ್ಥಾಪಿಸಲ್ಪಡಲಿದ್ದು ಇಂಡಿಯನ್ ಮಾರ್ಕೆಟಿಗೆ ಪೆಟ್ರೋಲ್ ಮತ್ತು ಎಣ್ಣೆಗಳನ್ನು ಎಡೆಬಿಡದೆ ಆಯಾತ ಮಾಡುತ್ತದೆ. ಹೀಗಿರುವುದರಿಂದ ದೇಶದ ಹಲವೆಡೆಗಳಲ್ಲೂ ಚಿಮಿಣಿ ಎಣ್ಣೆ ಮತ್ತು ಪೆಟ್ರೋಲ್‌ಗಳನ್ನು ನ್ಯಾಯಪರ ಬೆಲೆಗೆ ವಿಕ್ರಯಿಸುವಂತೆ ಖಂಡಿತ ಮಾಡಬಹುದು. ಹೀಗಿರುವುದರಿಂದ ವರ್ಷಕ್ಕೆ ಕೋಟಿಗಟ್ಟಲೆಯಾಗಿ ದೇಶದ ಹೊರಗೆ ಹೋಗುವ ಲಾಭವು ದೇಶದಲ್ಲೇ ಉಳಿಯುವುದು. ಇಂಡಿಯದ ಸಾರ್ವಜನಿಕರು ಅದರ ಫಲವನ್ನು ಪಡೆಯಬಹುದು.

---

## ಖಾದಿ

ನಮ್ಮ ನಿತ್ಯ ಜೀವನಕ್ಕೆ ಬೇಕಾಗುವ ಎಲ್ಲ ವಸ್ತುಗಳೂ ಇಂದು ನಮ್ಮ ದೇಶದಲ್ಲೇ ತಯಾರಾಗುತ್ತಿವೆ. ಆದರೆ ಇವುಗಳಲ್ಲಿನ ಹೆಚ್ಚಿನ ಕೈಗಾರಿಕೆಗಳು ಜನತೆಯ ಪ್ರೋತ್ಸಾಹದ ಅಭಾವದಿಂದ ಬಹು ಕಷ್ಟದಿಂದ ಮುಂದುವರಿಯಬೇಕಾಗಿದೆ. ನಿಜವಾಗಿಯೂ ನಮ್ಮ ದೇಶದಲ್ಲಿ ನಮಗೆ ವಾತ್ಸಲ್ಯವಿದ್ದರೆ ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸತಕ್ಕದ್ದು ಅತೀ ಅಗತ್ಯ; ಮತ್ತು ಪ್ರಥಮದ ಕರ್ತವ್ಯವಾಗಿರುತ್ತದೆ. ಆರ್ಥಿಕ ದುಃಸ್ಥಿತಿಯಿಂದಾಗಿ ಜನರಲ್ಲಿ ಸರ್ವಸಾಧಾರಣ ನಿರುತ್ಸಾಹ, ನಿರಾಶೆಯು ಎಲ್ಲೆಲ್ಲೂ ಕೋರಿಬರುತ್ತದೆ; ಮತ್ತು ಅದು ಸಹಜವೂ ಸ್ವಾಭಾವಿಕವೂ ಆಗಿದೆ. ಈ ಆರ್ಥಿಕ ದುಃಸ್ಥಿತಿಯ ಮುಖ್ಯ ಕಾರಣವೆಂದರೆ ದೇಶದ ಸಂಪತ್ತೆಲ್ಲಾ ವಿದೇಶಕ್ಕೆ ಒಯ್ಯಲ್ಪಡುತ್ತಿರುವುದೇ. ಆದುದರಿಂದ ದೇಶೀಯ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟು ದೇಶದ ಸಂಪತ್ತನ್ನು ಸಾಧ್ಯವಿದ್ದಷ್ಟು ದೇಶದಲ್ಲೇ ಉಳಿಸುವಂತೆ ಯತ್ನಿಸುವುದು ನಮ್ಮ ಕರ್ತವ್ಯ.

ಇಂದು ನಮ್ಮ ದೇಶಕ್ಕೆ ವಿಲಿಯಗಟ್ಟಲೆ ಬೆಲೆಬಾಳುವ ಬಟ್ಟೆ, ಸಕ್ಕರೆ, ಉಪ್ಪು, ಸಾಬೂನು, ಕಾಗದ, ಯಂತ್ರಸಾಮಗ್ರಿ, ಮಾದಕಪದಾರ್ಥ ಮುಂತಾದುವು ಆಮದಾಗುತ್ತಿವೆ. ಎಂದಿನ ತನಕ ನಾವು ಈ ವಸ್ತುಗಳನ್ನು ಪರರಾಷ್ಟ್ರಗಳಿಂದ ತರಿಸುತ್ತೇವೆಯೋ, ಅಂದಿನ ತನಕ ನಮ್ಮ ದೇಶದ ದಾರಿದ್ರ್ಯವು ನಮ್ಮನ್ನು ಬಿಟ್ಟು ಹೋಗದು, ಮಾತ್ರವಲ್ಲದೆ ಇನ್ನೂ ಪ್ರಬಲವಾದೀತು.

ಪ್ರಪಂಚದಲ್ಲಿ ಯಾವ ನಾಗರಿಕ ಜನಾಂಗದಲ್ಲೂ ಜನರ ಸರಾಸರಿ ದಿನದ ಉತ್ಪತ್ತಿಯು ನಮ್ಮ ದೇಶದಷ್ಟು ಕಡಮೆಯಿಲ್ಲ. ಅಮೇರಿಕದಲ್ಲಿ ದಿನದ ಸರಾಸರಿ ಉತ್ಪತ್ತಿಯು ರೂ. ೩; ಆಸ್ಟ್ರೇಲಿಯದಲ್ಲಿ ರೂ. ೨-೪-೦; ಗ್ರೇಟ್ ಬ್ರಿಟನ್ (ವಿಲಾಯತಿ)ಯಲ್ಲಿ ರೂಪಾಯಿ ೨-೦-೪; ಕೆನಡಾದಲ್ಲಿ ೧-೧೦-೮ ಮತ್ತು ನಮ್ಮ ಈ ಭರತಖಂಡದಲ್ಲಿ ಕೇವಲ ೦-೧-೮ ಮಾತ್ರ. ಇಷ್ಟು ಶೋಚನೀಯ ಸ್ಥಿತಿಯು ನಮ್ಮದಾದರೂ ನಿರಾಶೆಗೆ ಆಸ್ಪದವಿಲ್ಲ. ಕಾರಣ, ನಮ್ಮ ದೇಶದ ಕೈಗಾರಿಕೆಗೆ ಪ್ರತಿಯೊಬ್ಬನೂ ಪ್ರೋತ್ಸಾಹವನ್ನಿತ್ತು ಪ್ರತಿಯೊಬ್ಬನ ಆದಾಯವನ್ನು ಹೆಚ್ಚಿಸಿದರೆ ಹಿಂದಿನಂತೆ ಇಂದೂ ಆಗುವುದಕ್ಕೆ ಸಾಧ್ಯವಿದೆ.

ಏತರಿಂದ ನಮ್ಮ ಜನಾಂಗದ ಸಂಪತ್ತನ್ನು ವೃದ್ಧಿಗೊಳಿಸಲು ಸಾಧ್ಯವಿದೆ! ಏತರಿಂದ ದೇಶದ ಪ್ರತಿಯೊಬ್ಬನಿಗೂ ಹೊಟ್ಟೆಬಟ್ಟೆಗೆ ಗತಿಯೊದಗಿಸಲು ಸಾಧ್ಯವಿದೆ ಎನ್ನುವಿರಾದರೆ ಅದು "ಪ್ರಬಲವಾದ ಸ್ವದೇಶೀ ಪ್ರಚಾರದಿಂದ" ಎಂದು ಧೈರ್ಯವಾಗಿ ಹೇಳಬಹುದು. ಆದುದರಿಂದ ಭರತಖಂಡದಲ್ಲಿ ಹುಟ್ಟಿ, ಭರತಖಂಡದಲ್ಲಿ ಬೆಳೆದು ಭಾರತೀಯನೆನಿಸಿಕೊಂಡ ಪ್ರತಿಯೊಬ್ಬನೂ 'ಸ್ವದೇಶೀ ವಸ್ತುವನ್ನೇ ಉಪಯೋಗಿಸುವೆನು" ಎಂಬ ದೃಢ ಪ್ರತಿಜ್ಞೆಯನ್ನು ಕೈಗೊಳ್ಳುವುದು ಅವನವನ ಕರ್ತವ್ಯವಾಗಿರುತ್ತದೆ.

ದ. ಕ. ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯು ಉತ್ಸಾಹದಿಂದ ತನ್ನ ಕಾರ್ಯವನ್ನು ಮಾಡಲು ನಿರ್ಧರಿಸಿರುತ್ತದೆ. ಅಲ್ಲದೆ ಉದಾರಿಗಳಾದ ಭಾರತೀಯರೆಲ್ಲರೂ ವರುಷಕ್ಕೆ ನಾಲ್ಕಾಣೆಯ ಚಂದಾ ಕೊಟ್ಟು ಸಭೆಯ ಕಾರ್ಯದಲ್ಲಿ ಸಹಾಯಕರಾಗಬೇಕೆಂದು ಕೇಳಿಕೊಳ್ಳುತ್ತದೆ.

ಒಂದು ಕಾಲದಲ್ಲಿ ಕಾಂಗ್ರೆಸ್ಸು ಕೆಲವು ಗಿರಣಿಗಳಿಗೆ ಶಿಫಾರಸು ಪತ್ರವನ್ನು ಕೊಟ್ಟುದರಿಂದ—ಗಿರಣಿ ಬಟ್ಟೆಗೆ ಉತ್ತೇಜನ ದೊರೆತುದರಿಂದ—ಎಲ್ಲ ಅಂಗಡಿಗಾರರೂ 'ಮಿಲ್ ಖಾದಿ' ಎಂದು ಬಟ್ಟೆಗಳನ್ನು ಮಾರಾಟ ಮಾಡಲಾರಂಭಿಸಿದರು. ಅಂತೆಯೇ ಜನರೂ ಶುದ್ಧ ಖಾದಿಗಿಂತ ಅದರ ಕ್ರಯವು ಕಡಮೆಯಾದುದರಿಂದ ಅದನ್ನೇ ಕೊಂಡುಕೊಳ್ಳಲಾರಂಭಿಸಿದರು. ಹಾಗೆಯೇ ಅಂಗಡಿಗಾರರೂ ಕೂಡಾ ಸ್ವದೇಶಿ ಬಟ್ಟೆ ಎಂದೂ—ಸ್ವದೇಶೀ ಅಂಗಡಿಯೆಂದೂ ನಾಮಕರಣ ಮಾಡಿ ಕೊನೆಗೆ—ಪ್ರಕೃತ—ಪರದೇಶೀ ಬಟ್ಟೆಗಳನ್ನು ಮಿಲ್ ಖಾದಿ ಎಂದು ಜನರಿಗೆ ಮೋಸಪಡಿಸಿ ವ್ಯಾಪಾರ ಮಾಡುತ್ತಿರುವುದರಿಂದ ಈಗ ಖಾದಿಯ ಮಾರಾಟವು ಬಹಳವಾಗಿ ತಗ್ಗಿದೆ ಎಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಆದುದರಿಂದ ನಿಜವಾದ ವಿಷಯವೇನೆಂದರೆ 'ಮಿಲ್ ಖಾದಿ' ಎಂಬುದು ಶುದ್ಧ ತಪ್ಪು. ಗಿರಣಿಯಲ್ಲಾಗುವ ಬಟ್ಟೆಯನ್ನು ಯಾರನ್ನು ಖಾದಿ ಎನ್ನಲು ಎಂದಿಗೂ ಬಾರದು. ಹಾಗೆ ನಾವು ಖಾದಿ ಬಿಟ್ಟು ಗಿರಣಿ ಬಟ್ಟೆಯನ್ನು ಕೊಂಡುಕೊಳ್ಳುವುದಿದ್ದರೆ ಅದು ಹಲವು ಹಸಿದವರನ್ನು ವಂಚಿಸಿ ಗಿರಣಿ ಮ್ಹಾಲಿಕನೊಬ್ಬನನ್ನು ಧನಿಕನನ್ನಾಗಿ ಮಾಡಿದಂತಾಗುತ್ತದೆ.

ಅದೀಗ ನಮಗೆ ಬೇಡ. ಹಸಿದವರಿಗೆ ಒಂದಿಷ್ಟು ಅನ್ನವೀಯೋಣ. ಹಸಿದವನು ಸುಮ್ಮಗೆ ಇರದೆ—ನೂಲನ್ನು ನೂಲಲಿ. ಅವನಿಗೆ ಅದೊಂದು ಕೆಲಸದಿಂದಲಾದರೂ ಉದರಪೋಷಣೆಯಾಗಲಿ. ಅಲ್ಲದೆ ಗಾಂಧಿಜೀಯವರು ಸ್ವತಹ ಸಬರ್ಮತಿ ಆಶ್ರಮದಲ್ಲಿ ತೋರಿಸಿದಂತೆ, ವೇಳೆ ಸಿಕ್ಕಿದಾಗ ನೂಲು ನೂತರೆ ಅದರಿಂದಲೇ ಒಂದು ಕುಟುಂಬಕ್ಕೆ ಬೇಕಾಗುವಷ್ಟು ಬಟ್ಟೆ ಮಾಡಿಸಬಹುದು. ಮನೆಯಲ್ಲೇ ವ್ಯರ್ಥ ಕಾಲಹರಣ ಮಾಡುವವನು ನೂತು ತನಗೆ ಬೇಕಷ್ಟು ಬಟ್ಟೆಯನ್ನು ಮಾಡಬಹುದಲ್ಲ. ಇದನ್ನು ಪ್ರೋತ್ಸಾಹಿಸುವುದರಿಂದ ಎಷ್ಟು ಜನರ ಹೊಟ್ಟೆಗೆ ಹಿಟ್ಟು ಬೀಳುವುದೋ ನೋಡಿ:

ಪ್ರತಿಯೊಂದು ರೂಪಾಯಿಯ ಖಾದಿಯಲ್ಲಿ ೩ ಆಣೆ ಹತ್ತಿ ಬೆಳೆಸಿದವನಿಗೆ, ೬ ಪೈ ಬೀಜ ತೆಗೆದವನಿಗೆ, ೧ ಆಣೆ ೯ ಪೈ ಹಿಂಜುವವನಿಗೆ, ೨-೪-೯ ನೂಲುವವನಿಗೆ, ೨-೪-೯ ನೇಯುವವನಿಗೆ, ೬ ಪೈ ಮಡಿವಾಳನಿಗೆ ಮತ್ತು ೧ ಆಣೆ ದಲಾಲಿಗೆ ಸೇರುತ್ತದೆ. ಹೀಗೆ ಖಾದಿಯ ಪ್ರತಿಯೊಂದು ಪೈಯೂ ಜನರಲ್ಲಿ ಹಂಚಲ್ಪಡುವುದರಿಂದ ಬಡವರ ಹಿತವಾದಿಗಳು ಹೆಚ್ಚೇಕೆ ಭಾರತೀಯರು ಅನರು—ಎಂತಹ ವಾದಿಗಳೇ ಆದರೂ ಖಾದಿಯನ್ನು ಪ್ರೋತ್ಸಾಹಿಸದೆ ಇರಲಾರರೆಂದು ನಂಬುತ್ತೇವೆ.

ಇನ್ನು ಬಟ್ಟೆಯು ಭಾರ ಎನ್ನುವಿರಾ; ಭರತಖಂಡವು ಎಂತೆಂತಹ ಭಾರಗಳನ್ನು ಹೊತ್ತಿತ್ತೆಂಬುದನ್ನು ಯೋಚಿಸಿರಿ. ಹಿಂದಿನವರು ಉಕ್ಕಿನ ಕವಚಗಳನ್ನು ತೊಟ್ಟುಕೊಂಡು ತಿಂಗಳುಗಳ ಪರ್ಯಂತ ಯುದ್ಧ ಮಾಡುತ್ತಿದ್ದರು. ಹಾಗಿರುವಲ್ಲಿ ನಮಗೆ ಇದೊಂದು ಖಾದಿಯನ್ನು ಧರಿಸಲು ಭಾರವಾಗುವುದೆಂದಾದರೆ ನಾವೇ ಭೂಭಾರಕರಲ್ಲವೇ? ನಮಗೆ ಆಗ ಎಲ್ಲವೂ ಭಾರವಾಗಿ ಕಂಡರೆ ನಗ್ನದಾನಿ ತಿರುಗಾಡಬೇಕಾಗುವ ಅವಸ್ಥೆ ಬರಬಹುದಲ್ಲವೇ!

ಅದರಿಂದ ಇನ್ನೊಮ್ಮೆ ಎಲ್ಲರೂ—ಬಡವರೂ ಸಬಲರೂ ದೇಶೀ ವಸ್ತುಗಳನ್ನೇ ಕೊಂಡುಕೊಂಡು ದೇಶವನ್ನು ಬಡತನದ ಬಲೆಯಿಂದ ಕಾಪಾಡಿರೆಂದು ಬೇಡಿಕೆ.

ಸೂರಪ್ಪಯ್ಯ ಹಳ್ಳನಾಡು,
ಕಾರ್ಯದರ್ಶಿ,
ಜಿಲ್ಲಾ ಸ್ವದೇಶೀ ಸಭೆಯ ಪರವಾಗಿ

---

## ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 158/1935

ಕಾಮಾಕ್ಷಿ ಯಾನೆ ರುಕ್ಮಿಣಿ ಅಮ್ಮ ವಾದಿಳು.

ಮತ್ತು

ಮಹಾರುದ್ರ ಶ್ಯಾನುಭಾಗ ಕೂಡಾ ಪ್ರತಿವಾದಿಗಳು.

ಈ ವ್ಯಾಜ್ಯದ 1ನೇ ಪ್ರತಿವಾದಿ ಮಹಾರುದ್ರ ಶ್ಯಾನುಭಾಗ—ತಕಹಿತ್ಲು ನಾರಾಯಣ ಶ್ಯಾನುಭಾಗ ಮಗ, 2ನೇ ಪ್ರತಿವಾದಿಳು ರಾಜೀವಿ ಯಾನೆ ಗುಲಾಬಿ ಅಮ್ಮ—1ನೇಯವನ ಹೆಂಡತಿ. 11ನೇ ಪ್ರತಿವಾದಿ ರತ್ನಾಬಾಯಿ ಯಾನೆ ತಾರಾಬಾಯಿ, 1ನೇಯವನ ತಾಯಿ 9—10ನೇ ಪ್ರತಿವಾದಿರು—ಸೀಜು ಮಸ್ತ, Hon ಮಸ್ತಾ—ಬರ್ಕಟ ಸಿನ್ನನ ಸುಬ್ರಾಯನ ಮಗಂದಿರು 12ನೇ ಪ್ರತಿವಾದಿ—ವಿಠಲ ಸ್ವಾಮಿ, ಇಮಾಮ ಸಾಬ ಮಗ 13ನೇ ಪ್ರತಿವಾದಿ ಮುಲ್ಲಾ ಇಬ್ರಾಹಿಂ ಸಾಬ ಖಾದೀರ ಸಾಬನ ಮಗ 14ನೇ ಪ್ರತಿವಾದಿ, ದುಮ್ಮ ಪಿಂಟೋ ಸ್ವಾಮಿ 13ನೇಯವನ ಮಗ. 15ನೇ ಪ್ರತಿವಾದಿಳು ಫಾತಿಮಾಬಿ, ಅಬ್ದುಲ್ಲ ರಹಿಮಾನನ ಹೆಂಡತಿ 16ನೇ ಪ್ರತಿವಾದಿ, ವೆಂಕಟೇಶ ಮಸ್ತ, ಭಕ್ತಿಯ ನಾಗ್ರ ಮಸ್ತನ ಮಗ. ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲೆ ಕಾಣಿಸಿದ ವಾದಿಳು ತನಗೆ ಆಸ್ತಿಯ ಜವಾಬ್ದಾರಿಯಿಂದ ಬರಬೇಕಾದ ಆಸ್ತಿ ಮುಂದಿಗೆ 21 ಕ್ರಯ ರೂ. 68—4—0 ದ ಭಿಕ್ಷಿ ಬಗ್ಗೆ ಮಾಡಿದ ಈ ದಾವೆಯು ತಾ. 10—8—35ಕ್ಕೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ತನ್ನಿಕೆಗೆ ಇಡಲಾಗಿಯದೆ. ಆ ದಿವಸ ಸದ್ರಿ ಪ್ರತಿವಾದಿರು ಹಾಜರು ಆಗದಿಕ್ಕೆ ತಕ್ಕ ಪರ ಸದ್ರಿಯವರನ್ನು ಎಕ್ಸ್‌ಪಾರ್ಟೆ ಮಾಡಿ ಮುಂದಿನ ತನ್ನಿಕೆಯು ನಡೆಯುವುದು.

ಕುಂದಾಪುರ, 29—7—35. | G. Sanjiva Rao, Pleader for Plaintiff

## ನೋಟೀಸು.

ದಕ್ಷಿಣ ಕನ್ನಡ ಸಬ್ ಕೋರ್ಟಿನಲ್ಲಿ.

R. E. P. 195/1934.
R. E. A. 109/1935.
(ಕ್ರಮ ಸಂಖ್ಯ 36/1924)

ಡೊಂಗರಕೇರಿ ಶ್ರೀ ವೆಂಕಟರಮಣ ದೇವಸ್ಥಾನದ ಭಂಡಾರಿ ಅಮ್ಮಣ್ಣಾರಿ } ಅರ್ಜಿದಾರ

ಮತ್ತು

1. ಕದಿಯಮ್ಮ, ಭಂಡ್ಸಾಲೆ ಕೊಯಸನೆ ಬ್ಯಾಂಗಳ ವಿಧವೆ. 2 ಮಂಜಿ ಕುಂಞ ಬ್ಯಾರಿ, ಸದ್ರಿ ಕೊಯಸನೆ ಬ್ಯಾರಿ ಮಗ
3. ಪಾತುಮ್ಮ, 4. ಇಬ್ರಾಯಿ, 5. ಅಕಂಮ್ಮ, 6 ಹುಮ್ಮದ ಕುಂಞ— ಸದ್ರಿ ಕೊಯಸನೆ ಬ್ಯಾರಿ ಮಕ್ಕಳು
7. ಐಸಮ್ಮ (ಮ್ಯಾನರ) ಇವಳ ಗಾರ್ಡಿಯನ್ 1ನೇ ಕದಿಯಮ್ಮ 8. ಮಂಜುನಾಥ ಪಾಳ, ಲಕ್ಷ್ಮಣ ಪಾಳರ ಮಗ
1ರಿಂದ 7ನೇ ಯವರು ಕೃಳಂಗಳ ಗ್ರಾಮದಲ್ಲಿ ಲಕ್ಕಣ್ಣ ರೈ ಸ್ಥಳದಲ್ಲಿರುವ ಮನೆಯಲ್ಲಿ ವಾಸ್ತವ್ಯ ಮಾಡುವವರು 8ನೇಯವರು ಮಂಗಳೂರು ಶಹರಿನಲ್ಲಿ } ಕೌಂಟರ್ ಪೆಟಿಷನರ್

ಮೇಲಣ ಅಮಲ್ ಜ್ಯಾರಿಯಲ್ಲಿ ಯೆಕ್ಸೊರ್ಡರ್ ಡಿಕ್ರಿ ಪ್ರಕಾರ ಅರ್ಜಿದಾರರಿಗೆ ಸಲ್ಲತಕ್ಕ ಐವೇಜಿಗೆ ಜವಾಬ್ದಾರಿಯಿರುವ ಸ್ಥಿರಾಸ್ತಿಗಳ ಏಲಂ ಕುರಿತು ಅರ್ಜಿದಾರರ ಕಕ್ಷಿಯಿಂದ ದಾಖಲಾದ ಏಲಂ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸಯಿಸಲಿಕ್ಕೂ ವ ಏಲಂ ಸಮಯ ಅರ್ಜಿದಾರ ದೇವಸ್ಥಾನಕ್ಕೆ ಏಲಹಿಗೆ ನಿಲ್ಲುವರೆಯೂ ವ ನಿತ್ತರೆ ದರ್ಕಾಸ್ತು ಹಣ ಪೈಸ್ಲಿ ಹಣಕ್ಕೆ ಮುಚ್ರೆ ಕೊಡುವರೆ ಪರ್ಮಿಶನ್ ಕೊಡಲಿಕ್ಕೂ ಸಹಾ ಸಂ 1935ನೇ ಇಸವಿ ಆಗೋಸ್ತು ತಿಂಗಳ ತಾ 13ನೇ ಪೂರ್ವಾಹ್ನ ಘಂಟೆ 11ಕ್ಕೆ ನಿಶ್ಚಯಿಸೋಣವಾಗಿಯದೆಂತ ಈ ಮೂಲಕ ತಿಳಿದಿರತಕ್ಕದ್ದು. ಆಕ್ಷೇಪವಿದ್ದವರು ಆ ದಿವಸ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬಹುದು

*Sd/* **B. Venkatrao Baliga,**
*Pleader for Petitioner.*

(೫ನೇ ಪುಟದಿಂದ ಮುಂದುವರಿದುದು.)

### ಜಾಹೀರಾತು ಸತ್ಕಾರ ಸಮಾರಂಭ

ತಾ. ೧೪ನೇ ಆದಿತ್ಯವಾರ ಸಾಯಂಕಾಲ ಮಾಣಿಕ್ಯ ವ್ಯಾಯಾಮ ಶಾಲೆಯ ಪಟಾಂಗಣದಲ್ಲಿ ಧರ್ಮಭಾಸ್ಕರ ವಿನಾಯಕ ಮಹಾರಾಜ್ ಮಸೂರ್‌ಕರ್ ಇವರ ಅಧ್ಯಕ್ಷತೆಯಲ್ಲಿ ಜಾಹೀರು ಸಭೆಯು ನಡೆದು ಅಭಿನಂದಿಸಲಾಯಿತು ಶ್ರೀಮಂತ ಕಮಲಿನೀಬಾಯಿ ಸಾಹೇಬ್ ಪೇಶ್ವೆ, ಶ್ರೀಮಂತ ಪಹಿನೀ ಸಾಹೇಬ್ ಪಟವರ್ಧನ್, ಪ್ರೊ। ವಿಶ್ವನಾಥ ರಾವ್ ಮಾಳಿ, ನಾಮುವಾರ ಪೀಟಿ ಕಾಲಿಮ್, ಶ್ರೀ। ಭವಾನೀ ಮಂಡಲ, ಶ್ರೀ। ಹಿಂಗ ಭೀರೆ, ಶ್ರೀ। ದೇಸಾಯಿ, ಶ್ರೀ। ಪೇಟಕರ್ ಮೊದಲಾದ ಸದ್ಗೃಹಸ್ಥರು ಘೋರಬೋಲೆಯವರಿಗೆ ಪದಕವನ್ನೂ ನಗದು ರೂಪಾಯಿಗಳನ್ನೂ ಕೊಟ್ಟು ಗೌರವಿಸಿದರು. ಜನಪದ ವಿದ್ಯಾಪೀಠದ ಅಧ್ಯಕ್ಷರಾದ ಧರ್ಮಭಾಸ್ಕರ ವಿನಾಯಕ ಮಹಾರಾಜ್ ಮಸೂರ್‌ಕರ್ ಇವರಿಗೆ ಸುಂದರವಾಗಿ ಮುದ್ರಿಸಲ್ಪಟ್ಟ ಪ್ರಶಸ್ತಿಪತ್ರವನ್ನು ಕೊಟ್ಟುದಲ್ಲದೆ—'ಲಾಠೀವೀರ' ಎಂಬ ಪದವಿಯನ್ನು ಕೊಟ್ಟು ಗೌರವಿಸಿದರು.

### ೩೨ ಮಂದಿಯ ಸಂಕಷ್ಟ!
### ಕಾಡಿನಲ್ಲಿ ಬಿಟ್ಟು ಬಂದ ಬಸ್ಸು!

ಕರಾಚಿ ಜುಲೈ ೨೩

೩೨ ಮಂದಿ ಸ್ತ್ರೀ ಪುರುಷರು ಮತ್ತು ಬಾಲಕರು ಹೈದರಾಬಾದ್ ಜಿಲ್ಲೆಯುಂದ ಕರಾಚಿಯ ಮಿರ್‌ಪುರಕ್ಕೆ ಬಸ್ ಮೂಲಕ ಹೊರಟರು. ಒಂದು ಕಾಡಿನ ಮಧ್ಯೆ ಹೋಗುತ್ತಲೇ ಭಯಂಕರ ಬಿರುಗಾಳಿ ಮಳೆಯು ಬಂದು ಬಸ್ಸು ನಿಲ್ಲಿಸಲ್ಪಟ್ಟಿತು. ಮಳೆಯು ನಿಂತೊಡನೆ ಬಸ್ ಡ್ರೈವರನು ಅವರೆಲ್ಲರನ್ನೂ ಕೆಳಗಿಳಿಯ ಹೇಳಿ ತಾನು ಇನ್ನೊಂದು ಬಸ್ಸನ್ನು ಒಡನೆ ತರುವೆನೆಂದು ನಂಬಿಸಿ, ಬಸ್ಸಿನ ಮಾಡಿನಲ್ಲಿದ್ದ ಸಾಮಾನುಗಳೊಡನೆ ಹಿಂತೆರಳಿದನು ೨ ದಿನಗಳು ಕಳೆದರೂ ಅವನು ಹಿಂತಿರುಗಲಿಲ್ಲ ಅವರ್ಣನೀಯ ಸಂಕಷ್ಟಗಳನ್ನು ಹೊಂದಿ ಪ್ರವಾಸಿಗಳು ಕಾಲ್ನಡಿಯಿಂದಲೇ ಹಿಂದಿರುಗಿದರು ಈಗ ಡ್ರೈವರನ ಮೇಲೆ ಮೊಕದ್ದಮೆ ಹೂಡಿರುವರು

### ಸ್ಥಾನದ ಪ್ರತಿಷ್ಠೆ ರಕ್ಷಣೆಗಾಗಿ ನ್ಯಾಯಾಧೀಶರು ರಾಜೀನಾಮೆ ಕೊಟ್ಟರು'

ಕೊಲೊಂಬೊ ಜುಲೈ, 2೭

ಮಿ। ಸ್ಟೆನ್ಲಿ ಒಬೆಸೆಕೆರೆ ಕೆ ಸಿ. (ಎಸ್ಸೈಜ್ ಕಮಿಶನರು) ಸುಪ್ರೀಂಕೋರ್ಟ್ ಬೆಂಚಿನೊಡನೆ ತನಗಿದ್ದ ಮನಃಕ್ಲೇಶದ ಪರಿಣಾಮವಾಗಿ ತನ್ನ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟಿರುವರು. ಸ್ಥಳೀಕ ಪತ್ರಿಕೆಯೊಂದು ಅವರ ಮೇಲೆ ಆರೋಪವನ ನಡಿಸಿತೆಂದೂ, ಆ ಪತ್ರಿಕೆಯ ವರ್ತನೆಯನ್ನು ಚೀಫ್ ಜಸ್ಟಿಸರು ವಿಚಾರಿಸಲಿಲ್ಲವೆಂದೂ, ಅದ ದರಿಂದ ತನ್ನ ಸ್ಥಾನದ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ತಾನು ರಾಜೀನಾಮೆ ಕೊಟ್ಟೆನೆ ದೂ ಸ್ಟೆನ್ಲಿ ಯವರ ಹೇಳಿಕೆ

### ನಾಯಿಯನ್ನು ಮಗುವು ಬದುಕಿಸಿತು

ಅಮೃತ ಬಜಾರ ಪತ್ರಿಕೆಯ ವಾರ್ತಾದಾಯಕನು ಹೀಗೆ ತಿಳಿಸುತ್ತಾನೆ —ತಾ ೨೬ನೇ ದಿನ ಬೆಳಗ್ಗೆ ಹೊಲೆಯನೊಬ್ಬನು ಒಂದು ದೊಣ್ಣೆಯನ್ನು ಹಿಡಿದುಕೊಂಡು ಬೀದಿಯಲ್ಲಿದ್ದ ನಾಯಿಯೊಂದನ್ನು ಕೊಲ್ಲಲು ಅದನ್ನು ಹಿಂಬಾಲಿಸುತ್ತಿದ್ದನು. ಅಷ್ಟರಲ್ಲಿ ಐದು ವರ್ಷ ಪ್ರಾಯದ ಒಂದು ಮಗುವು ಓಡಿ ಬಂದು, ಆ ನಾಯಿಯನ್ನು ತಬ್ಬಿ ಹಿಡಿದು 'ಎನ್ನಕ್ಕೂ ಈ ನಾಯಿಯನ್ನು ಕೊಲ್ಲದಿರು' ಎಂದು ಅತ್ತಿತು. ಹೊಲೆಯನ ಕರುಳು ಕರಗಿತು ಆದರೆ ತನ್ನ ವೃತ್ತಿಯೇ ಅದೆಂದೂ, ತನ್ನನ್ನು ಸರಕಾರವು ಕಳುಹಿಸಿದೆಯೆಂದೂ ಅವನು ಆ ಮಗುವಿಗೆ ತಿಳಿಸಿದನು ಆದರೆ ಮಗುವು ಮತ್ತೂ ಅಳುತ್ತಾ 'ನಾಯಿಯನ್ನು ಹೊಡೆಯಬಾರದು' ಎಂದೇ ಚಂಡಿ ಹಿಡಿಯಿತು ಹೊಲೆಯನಿಗೆ ಕರುಣೆ ಹುಟ್ಟಿತು ಮಗುವಿನ ಮಾತಿಗೊಪ್ಪಿದನು. ನಾಯಿಯನ್ನು ಮಗುವು ಬಿಟ್ಟೊಡನೆ ಅದು ಓಡಿಹೋಯಿತು ನಾಯಿಯು ಮಗುವಿನದ್ದಲ್ಲ'

### The Canara Public Conveyance Company Ltd, Mangalore

## NOTICE.

Notice is hereby given to the Shareholders that Mr U Gopal krishna Nayak, a Shareholder of the Company, has given notice of his intention to nominate to the office of the Auditor of the Company for the year 1935-'36, Mr A Umarath Rao, B A D A, R A, registered Accountant and Auditor, Mangalore

Registered Office of the Company Kodialbail 31-7-1935

Sd/ M K Shridhra Kudva
Secretary


# ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ
# ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು.

## Motor Accessories Of Approved Manufacture Always in Stock.

| | |
|---|---|
| **Exide Batteries Uncharged** | **Rs. 20-0-0** |
| **Fully Charged** | **Rs. 24-0-0** |
| **Genuine Lockheed Hydraulic Brake fluid Quart tins factory Sealed** | **Rs. 2-8-0** |
| **Genuine Lockheed " locally filled** | **Rs 2-0-0** |

**All Hydraulic Brake parts held in stock and available at Bombay Prices less 5% discount.**

**Chevrolet Springs of approved American Make available at less than Bombay Prices**

Brake liners, Automobile lamp bulbs, Bronze bushings and bars, Bolts and Nuts of S. A. E. threads, Special tools, Drilling Machines, Spanner sets of all types

**An Enquiry with us will save you money**

**ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,** ಕೊಡಿಯಾಲಬೈಲು, ಮಂಗಳೂರು

**The Canara Public Conveyance Company Ltd., Kodialbail, Mangalore.**

## ಅನುಕ್ರಮಣಿಕೆ.

ಚಿತ್ರ ೩
ಸಾಹಿತ್ಯ ಸಂಗ್ರಹ ೪
ಘೋರ ಬೋಲೇ ಇವರ ಲಾಠಿಯ ಸಾಹಸ. ೫
ಬಾಷ್ಪಕ್ರಂಪ ೭
ಖಾದಿ ೮
ಅಗ್ರಲೇಖ
ಸ್ಫುಟವಿಚಾರಗಳು ೧೦
ಜೀವನೋಪಾಯ ಶಿಕ್ಷಣ. ೧೦
ವರ್ತಮಾನ ಸಂಗ್ರಹ
ಎಬಿಸೀನಿಯಾ ಸಮಸ್ಯೆ. ೧೪
ಮಂಗಳೂರು, ತಾಲೂಕುಗಳಿಂದ ೧೧
ವಿವಿಧ ಸಮಾಚಾರಗಳು. ೧೬
ನಡೆದ ಕತೆಗಳು ೧೮

# ಸ್ವದೇಶಾಭಿಮಾನಿ.

ತಾ ೨ನೇ ಶುಕ್ರವಾರ ಅಗೋಸ್ತು '೩೫

## ಜೀವನೋಪಾಯ ಶಿಕ್ಷಣ.

ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಪ್ರೊಫೆಸರ್ ವಾಡಿಯಾರವರು ಮೊನ್ನೆ ಭಾಷಣಮಾಡುವಾಗ,—ವೃತ್ತಿ ಕೈಗಾರಿಕೆಗಳನ್ನು ಕಲಿಸುವುದರಿಂದ ತಾನೇ ಈಗಣ ಬಗೆಯ ಶಿಕ್ಷಣದಿಂದುಂಟಾಗುವ ನಿರುದ್ಯೋಗತೆಯ ಸಮಸ್ಯೆಯು ಬಗೆ ಹರಿಯಲಾರದೆಂದು ನುಡಿದರು ಯಾವುದೊಂದು ಬಗೆಯ ಜೀವನೋಪಾಯಕ್ಕಾಗಿ, ಎಂತಹದೊಂದು ಕಸಬನ್ನಾದರೂ ಕೈಕೊಳ್ಳಲು ಅನುಕೂಲವಾಗುವ ಹಾಗೆ ಪುಸ್ತಕ ಪಾಠಕಾಲದಲ್ಲೇ ಶಾಲೆಗಳಲ್ಲಿ ಕಲಿಸಿಕೊಡುವುದರಿಂದ, ಅಂತಹ ಶಾಲೆಗಳಿಂದ ಹೊರಬೀಳುವವರಿಗೆ, ಇವರಿಗೆ ಕಲಿಸಿಕೊಟ್ಟ ವೃತ್ತಿಯ ಅಥವಾ ಕಸಬಿನ ಶಿಕ್ಷಣವೇ ಅವರಿಗೆ ಇನ್ನಷ್ಟು ಬಾಧಕರವಾಗಿ ಪರಿಣಮಿಸಿತೆಂದೇ ಪ್ರೊಫೆಸರರ ಮಾತು ಯಾವುದೊಂದು ವಿಷಯವನ್ನೆ ಮಾತ್ರ ವಿಶೇಷವಾಗಿ ಕಲಿತುಕೊಳ್ಳುವುದರಲ್ಲಿ ಮುಂದೆ ಗಂಡಾಂತರವಿದೆ ಎಂದು ಹೇಳಬರುತ್ತಿದೆಯಾದರೂ, ಈಗಣ ಕ್ರಮದ ಶಿಕ್ಷಣವು ಏಕಮುಖವೇ ಆಗಿದ್ದು ಅಷ್ಟೇ ಗಂಡಾಂತರವನ್ನು ತಂದೊದಗಿಸಿರುವುದೆಂದು ಹೇಳಬರುವುದಿಲ್ಲವೇ? ಉಪಾಧ್ಯಾಯ, ವಕೀಲ, ಇಂಜಿನಿಯರು, ಡಾಕ್ಟರು ಮೊದಲಾದವರಿಗೆ ಸಿಗುವ ಶಿಕ್ಷಣವು, ಮುಂದೆ ಅನುಭವವಿಲ್ಲದೆ ಯಾವ ಉಪಯೋಗಕ್ಕೆ ಬರುವಂತಹದಾಗಿದೆ? ಒಂದೆಂದು ವೃತ್ತಿ ಅಥವಾ ಜೀವನೋಪಾಯವನ್ನು ಕೈಕೊಂಡವರೊಳಗೆ ಇನ್ನೆಷ್ಟು ಮಂದಿ ಹಟ್ಟಿಗೆ ಸೇರಲು ಅವಕಾಶ ದೊರೆಯಬಹುದೆಂಬುದನ್ನು ನೋಡಿಯೆ, ಆಯಾ ವೃತ್ತಿ ಅಥವಾ ಉದ್ಯೋಗಕ್ಕೆ ಅನುಕೂಲವಾಗಿರುವ ಶಿಕ್ಷಣವನ್ನು ಕೊಡುವಂತಿಲ್ಲ, ಅಥವಾ ಮುಂದೆ ಎಂದಾದರೂ ಅವಕಾಶ ಸಿಗಬಹುದೆಂದು ಅಂತಹ ಶಿಕ್ಷಣವನ್ನು ಕೊಟ್ಟು, ಪಾಸಾದವರನ್ನು ಹಾಗೆ ಅವಕಾಶ ದೊರೆವವರೆಗೆ 'ದಾಸ್ತಾನು' ಇರಿಸಬರುವುದೇ? ಹೀಗಿರುವ ಕಾರಣ, ವೃತ್ತಿ ಶಿಕ್ಷಣವನ್ನಷ್ಟೆ ಕೊಟ್ಟು ದೇಶೋದ್ಧಾರವಾಗಲಾರದು, ವಿದ್ಯಾರ್ಥಿಗಳು ಮುಂದೆ ಹೇಗೆ ಜೀವಿಸಬಹುದೆಂದು ಕಲ್ಪಿಸುವುದಕ್ಕೆ ಅವರ ರಕ್ಷಕರೂ ಶಿಕ್ಷಕರೂ ಜವಾಬುದಾರರು ಹಾಗೆ, ಶಿಕ್ಷಣ ಹೊಂದಬೇಕೆಂದು ಬರುವವರಿಗೆ ಆದರದಿಂದ ಶಿಕ್ಷಣ ಕೊಡುವುದಷ್ಟೆ ಯೂನಿವರ್ಸಿಟಿಗಳ ಕರ್ತವ್ಯ, ಅಷ್ಟೆ ಆ ಕರ್ತವ್ಯವು ಅಲ್ಲಿಗೇ ಮುಗಿಯುವುದು ಎಂದು ಪ್ರೊಫೆಸರೆನ್ನುವರು

ಆದರೆ, ಶಿಕ್ಷಿತರಿಗೆ ಜೀವನೋಪಾಯವನ್ನು ಕಲ್ಪಿಸಿಕೊಡಲು ಯಾವ ಯೂನಿವರ್ಸಿಟಿಯೂ ವಹಿಸಿಕೊಂಡುದಿಲ್ಲವೆಂದು ಹೇಳಬರುತ್ತಿದೆಯಾದರೂ, ಎಷ್ಟೋ ಯೂನಿವರ್ಸಿಟಿಗಳು ತನ್ನಲ್ಲಿಂದ ಶಿಕ್ಷಣ ಹೊಂದಿದವರ ಸಲುವಾಗಿ ಅವರನ್ನೆಲ್ಲಿ ಉದ್ಯೋಗಕ್ಕೆ ಹಚ್ಚಬಹುದೆಂದೂ ಬಹಳ ವಾತ್ಸಲ್ಯದಿಂದ ಸಾಧಿಸಿ, ಕೃತಾರ್ಥವಾದುದೂ ಇದೆ ತಮ್ಮ ಆಶ್ರಯದಲ್ಲಿ ಇಷ್ಟು ಆಯುಷ್ಯವನ್ನೂ ಹಣವನ್ನೂ ವ್ಯಯಿಸಿ, ಕಷ್ಟ ನಿಷ್ಠುರಗಳನ್ನೂ ಸಹಿಸಿ, ಉತ್ತೀರ್ಣರೆನಿಸಿರುವ ವಿದ್ಯಾರ್ಥಿಗಳಿಗಾಗಿ, ಒಂದೇ ತಟಿಕು ಕಣ್ಣೀರನ್ನಾಗಲಿ, ಒಂದು ಹನಿ ಬೆವರನ್ನಾಗಲಿ, ಈ ಯೂನಿವರ್ಸಿಟಿ ತಾಯಂದಿರು ಸುರಿಯಬೇಡವೆ? ಸರ್ಟಿಫಿಕೇಟು, ಎರಡು ಯಾ ಮೂರಕ್ಷರದ ಬಿರುದು ಅಥವಾ ಪದವಿಯನ್ನು ಅನುಗ್ರಹಿಸಿದರೆ, ಯೂನಿವರ್ಸಿಟಿಯ ಕರ್ತವ್ಯ ಮುಗಿಯಿತೆ? ಪರೀಕ್ಷಾಕಾಲದಲ್ಲಿ ವಿದ್ಯಾರ್ಥಿಗಳು ಹೆಸರು ಬರೆಯದೆ ನಂಬರ ಮಾತ್ರ ಬರೆಯಬೇಕಾಗಿರುವುದೆಂದು, ಅಷ್ಟು ಜನರು ಬರೀ ಅಂಕೆ ಅಥವಾ ಸಂಖ್ಯೆಗಳಾಗಿ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡು ಸೊನ್ನೆಗಳಾಗಿಯೆ ಇರಬೇಕೆ? ಯೂನಿವರ್ಸಿಟಿಯು ವಾತ್ಸಲ್ಯವುಳ್ಳ ಮಾತೆಯಾದರೆ, ವಿದ್ಯಾದಾಯಿನಿಯಾದರೆ, ಮಕ್ಕಳ ಕಡೆಗೆ ಅವು ಬೆಳೆದಷ್ಟೆ ಚೆನ್ನಾಗಿ ಬಾಳುವ ಹಾಗೆ ಮಮತೆಯಿಂದ ಕಣ್ಣಿಡಬೇಡವೆ? ಅತ್ಯುತ್ತಮ ಪಾಸಿನ ಸ್ಥಾನಗಳನ್ನು ಪಡೆದವರ ಸಮಾನತೆಗೆ ಇತರರು ಬರಲಾರರಾದರೂ, ಮಾತೃ ಹೃದಯವು ಎಲ್ಲರಿಗೂ ಸಮಾನವಾಗಿ ಪ್ರೇಮಾಮೃತವನ್ನು ಹಂಚಿಕೊಡಬೇಡವೆ? ಸುಮ್ಮನೆ 'Alma Mater' ಎಂದು ಯಾರೂ ಡಿಗ್ರಿ ಪಡೆದುದಕ್ಕಾಗಿ ಹಿಗ್ಗಿಕೊಳ್ಳಲಾರರು, ತಾಯಿಗೂ ಒಂದು ಧರ್ಮವಿದೆ ತಾಯಿ ಗಾದೆಯ ಮಲತಾಯಿಯಾಗಬಾರದು

## ಇದೂ ಸಮದೃಷ್ಟಿಯೇ?

ಅಬಿಸೀನಿಯಕ್ಕಾಗಲಿ, ಇಟೆಲಿಗಾಗಲಿ, ಇಂಗ್ಲೆಂಡಿನಿಂದ ಯುದ್ಧಕ್ಕೆ ಉಪಯುಕ್ತವಾಗಬಹುದಾದ ಸರಂಜಾಮನ್ನು ಕಳುಹಬಾರದೆಂದು ಇಂಗ್ಲೆಂಡು ನಿರ್ಧರಿಸಿಯದೆ ತೋರಿಕೆಗೆ ಇಂತಹ ಸಮದೃಷ್ಟಿಯು ನಿಸ್ಪೃಹನೀಯವಾಗಿದೆ ಆದರೆ, ಅದು ತೋರಿಕೆಗೆ ಮಾತ್ರ, ನ್ಯಾಯದೃಷ್ಟಿಯುಳ್ಳದ್ದೇ ಇಲ್ಲ ಎನ್ನುವ ವಿಚಾರಿಗಳೂ ಇದ್ದಾರೆ

ಅಬಿಸೀನಿಯವು, ಇಟೆಲಿಯ ಹಾಗೆ, ತಾನೆ ಯುದ್ಧದ ಹತ್ಯಾರುಗಳನ್ನು ತಯಾರಿಸಿಕೊಳ್ಳುವ ದೇಶವಾಗಿಲ್ಲದುದರಿಂದ, ಈ ಬಗೆಯ ನಿರಾಕರಣ ಸೂತ್ರದಿಂದ ವಿಗ್ರಹ ದೇಶಗಳ ಮೇಲೆ ಒಂದೇ ಸಮನಾದ ಪರಿಣಾಮವು ಉಂಟಾಗಲಾರದು.

ಆದರೆ, ಅಬಿಸೀನಿಯಕ್ಕಾಗಿ ಒಂದು ಅಸ್ತ್ರ ಕಳುಹಬಹುದಾದ ಯುದ್ಧಸಾಮಗ್ರಿಗಳನ್ನು ಬ್ರಿಟಿಷ ವಸಾಹತುಗಳ ಮಾರ್ಗವಾಗಿ ಒಯ್ಯಬಹುದಾಗಿಯೂ ಪಾರ್ಲಿಮೆಂಟು ನಿಷ್ಕರ್ಷೆ ಮಾಡಿಯದೆ, ನಿಜ, ಪರಂತು, ಅವನ್ನು ಕಳುಹುವವರಾರು? ಇದನ್ನು ನೋಡಿದರೆ, ಅತ್ತ—ಅಬಿಸೀನಿಯಕ್ಕೆ ಹತ್ಯಾರುಗಳು ಸಿಗಲು ಆತಂಕವಿರದಂತೆಯೂ, ಇತ್ತ—ಹತ್ಯಾರುಗಳನ್ನು ಕಳುಹುವುದು ಆಕ್ಷೇಪಕರವೆನ್ನುವಂತೆಯೂ ಈ ನಿರ್ಣಯವು ಇಬ್ಬಾಯಿ ಮಾತಾಗಿರುವ ಪ್ರಯುಕ್ತ, ಸ್ವಲ್ಪಮಟ್ಟಿಗೆ, ಕಾಪಟ್ಯದಲಾಂಛನವನ್ನೂ ತಳೆದಿದೆಯೆಂದೇ ತೋರುತ್ತಿದೆ ಅದೂ ಅಲ್ಲದೆ ಅಬಿಸೀನಿಯಕ್ಕೆ ಹೇಗೆ ಇದರಿಂದ ನ್ಯಾಯಸಿಗದಂತಾಗಿದೆಯೋ, ಬ್ರಿಟಿಷರಲ್ಲಿ ಹತ್ಯಾರುಗಳನ್ನು ತಯಾರಿಸುವ ಕಾರ್ಖಾನೆಗಳಿಗೂ ನ್ಯಾಯಸಿಗದಂತಾಗಿದೆ ಅಂತೂ, ಇಟೆಲಿಯ ಮನಸ್ಸು ನೋಯುವುದೇನೋ ಎಂಬ ಅಭಿಪ್ರಾಯದಿಂದ ಈ ಬಗೆಯಾಗಿ ಸರ್ ಸಾಮುವೇಲ್ ಹೋರರು ಹೂಡಿದ ನಿರ್ಣಯವಿದೆಂದೇ ತೋರುತ್ತಿದೆ

ಇದು ಪ್ರಕಟವಾದ ದಿನವೇ,—ಇಟಲಿಯೂ ಯುದ್ಧಾತುರತೆಯನ್ನು ತಡೆದು, ಪುನಃ ರಾಜೀಪ್ರಸ್ತಾಪವನ್ನೆತ್ತಿರುವಂತೆಯೂ ಜನಾಂಗ ಸಂಘದ ಸಭೆಗೆ ತನ್ನ ಪ್ರತಿನಿಧಿಯನ್ನು ಕಳುಹಲು ಒಪ್ಪಿರುವಂತೆಯೂ ಒಂದು ಹೊಸ ಸಂತೋಷ ವಾರ್ತೆಯೂ ಪ್ರಕಟವಾಗಿದೆ ಆದರೆ, ಅಬಿಸೀನಿಯದ ಸರಹದ್ದಿನಲ್ಲಿ, ಇನ್ನೂ ಜಮೆಯಾಗುತ್ತಿರುವ ಇಟೆಲಿಯ ಸೈನ್ಯ ಸರಂಜಾಮುಗಳನ್ನು ನೋಡಿದರೆ, ಈ ಸಂತೋಷವೆಂಬುದು ಸ್ವಲ್ಪ ಮುಚ್ಚುಕಟ್ಟಿದಂತಾಗಿ ತೋರುವುದು ಇದರಿಂದ,—ಇಟೆಲಿಯು ಇತ್ತ ಪ್ರಸ್ತಾಪಗಳ ಮುಖಾಂತರ ಕಾಲಹರಣ ಮಾಡುತ್ತಲಿರುವಾಗಲೇ, ಅಲ್ಲಿ ಇನ್ನೂ ಇನ್ನೂ ಅಗತ್ಯವಿರುವ ಎಲ್ಲ ಸನ್ನಾಹವನ್ನು ಅಣಿಮಾಡಿಕೊಂಡು ಸಂಪೂರ್ಣ ಸಿದ್ಧತೆಯ ಕಡೆಗೇ ಗಮನಕೊಟ್ಟಿರುವಂತೆ ಅರ್ಥಮಾಡಿಕೊಳ್ಳಲೂ ಬರುವುದಲ್ಲವೆ? ಉತ್ತಮ ಮುಹೂರ್ತ ನೋಡಿಯೆ ಇಟೆಲಿಯು ಯುದ್ಧಾರಂಭಮಾಡುವುದು ಕೆಲವೇ ದಿನಗಳ ಹಿಂದೆ, ಮುಸ್ಸೋಲಿನಿಯೇ ವಿಜಯಯಾತ್ರೆಗೆ ಒಕ್ಟೋಬರ ಪ್ರಾರಂಭವೇ ಅನುಕೂಲವೆಂದುದನ್ನು ಇಷ್ಟರಲ್ಲೇ ಮರೆಯಲಾಗುತ್ತಿದೆಯೋ? ಈ ವಾರವೇ, ಅಗೋಸ್ತು ತಿಂಗಳ ಮೊದಲಿನ ವಾರವೇ, ಜೈತ್ರಯಾತ್ರೆಗೆ ಅನುಕೂಲವಾಗಿದೆ ಎಂದರೂ ಎನ್ನಬಹುದಲ್ಲ?



### ಮಹಾ ಪ್ರಭುಗಳ ಮಂಜೂರಾತಿ.

ಇಂಡಿಯಾ ಬಿಲ್ಲು 'ಪ್ರಭು ಮಂದಿರ'ದಲ್ಲಿ ಮುನ್ನೂರು ಚಿಲ್ಲರೆ ತಿದ್ದುಪಡಿಗಳ ಆಲೋಚನಾ ನಂತರದಲ್ಲಿ ಮಂಜೂರಾಗಿದೆ ಇನ್ನಿದನ್ನು ಪುನಃ ಸಾಮಾನ್ಯರ ಸಭೆಯು ಆಲೋಚಿಸಿ, ತಲೆದೂಗಿದ ಬಳಿಕ,—ಮತ್ತಿದರಲ್ಲಿ ಆತಂಕಗಳಿಲ್ಲವೆಂದು ತೋರುತ್ತಿದೆ—ಸಮ್ರಾಜರ ಅಂಗೀಕಾರಕ್ಕಾಗಿ ಬಿಲ್ಲನ್ನೊಪ್ಪಿಸುವರು ಈ ಕಾನೂನು ಜಾರಿಗೆ ಬಂದ ಕೂಡಲೇ, ಹಿಂದೂದೇಶವು ಸ್ವರ್ಣಭೂಮಿಯಾಗುವುದು ಇಲ್ಲವೆ ಹಾಗಾಗಲು ನಿಧಾನವಾಗಿ ಮಾರ್ಪಡಲು ಅನುಕೂಲವಾಗುವುದು ಎನ್ನುವ ಒಂದು ಪಕ್ಷವೂ, ಬ್ರಿಟಿಷ ಸಾಮ್ರಾಜ್ಯವೇ ಭೂಕಂಪಕಿಸ್ಸಳಿಗಾದಂತೆ ಒಡೆದು ಹೋಗಲು ಅನುಕೂಲವಾಗುವುದು ಎನ್ನುವ ಮತ್ತೊಂದು ಪಕ್ಷವೂ ನಮ್ಮ ಎರಡು ಕಣ್ಣುಗಳಿಗೆ ಎರಡು ಬೇರೆ ಬೇರೆ ಕಡೆ ಒಂದೇಸಲ ನೋಡಲು ಪ್ರೇರಿಪಿಸುವ ಮೂಲಕ ಬಿಲ್ಲಿನ ಮರ್ಮವನ್ನು ಇನ್ನಷ್ಟು ಮರೆಯಾಗಿಯೇ ಇರಿಸುವ ಪ್ರಯತ್ನಗಳು ನಡೆಯುತ್ತಲಿವೆ "ಹಿಂದೀಯರು ಒಂದು ಒಂದು ಜನಾಂಗವಾಗಿ ಒಂದು ಪ್ರೌಢಸ್ಥಿತಿಗೆ ಬಂದಿರುವರೆಂಬುದಕ್ಕೆ ಇದು ನಮ್ಮ ಸರ್ಟಿಫಿಕೇಟು" ಎಂದೊಬ್ಬ ಭಾರತ ಪ್ರೇಮಿಗಳೂ, 'ಸರ್ಟಿಫಿಕೇಟು ಹೇಗಿದ್ದರೂ, ರಾಜಕಾರಣ ಬಲ್ಲವರಿಗೆ ತರಬೇತಿಗಾಗಿಯಾದರೂ ಇದು ಅನುಕೂಲವಾಗಿದೆ' ಎಂದಿನ್ನೊಬ್ಬರೂ ಬ್ರಿಟಿಷ ಜನಾಂಗವು ಇಂತಹ ಶಿಕ್ಷಣ ಪದ್ಧತಿಯನ್ನು ತೋರಿಸಿಕೊಟ್ಟು ಹಿಂದೀಯರನ್ನು ಸಮಾನತೆಗೆ ಕ್ರಮೇಣ ತರುವುದರಲ್ಲಿದ್ದಾರೆ ಎಂದು ಮತ್ತೊಬ್ಬರೂ, 'ಈಗ ಸ್ವೇಡಣೆಯೆ ಇಲ್ಲದವರಲ್ಲಿ ಇನ್ನು ಕೃತಜ್ಞತೆ ನೊಳೆಯಲಿಕ್ಕಿದೆ' ಎಂದು ಹಲವರೂ ಈ ಬಿಲ್ಲನ್ನು ಶಿಫಾರಸು ಮಾಡುತ್ತ, ನಮಗೆ ದಾನ ಮಾಡುವ ಭರದಲ್ಲಿ ಸೂಚನೆ ಕೊಟ್ಟಿಂದರು ಮತ್ತೇನೂ ಆಗದಿರುವಾಗ, ಕೊಟ್ಟುದನ್ನು ಪಡೆದು ಸುಮ್ಮನೆ ಕೊರಗುತ್ತಿರದೆ, ಅದರಿಂದ ಸಾಧ್ಯವಾದಷ್ಟು ಉಪಯೋಗಮಾಡಿಕೊಳ್ಳಲು ಪ್ರಯತ್ನಿಸುವುದಷ್ಟೆ ನಮ್ಮ ಪಾಲಿನ ಭಾಗ್ಯವಾಗಿರುವಾಗ, ಉಳಿದ ಮಾತಿಂದೇನು ಫಲ?

### ಹಿಂದಣದೊಂದು ದೃಷ್ಟಾಂತ.

ಇಸ್ರಯೇಲದ ಜನರು ಈಜಿಪ್ತದಿಂದ ಪಲಾಯನ ಮಾಡಿ ಕೆಂಪು ಸಮುದ್ರವನ್ನು ದಾಟುತ್ತಿರಲು, ಈಜಿಪ್ತದ ಸೇನೆಗಳು ಅವರನ್ನು ಹಿಂಬಾಲಿಸಲು, ಇಸ್ರಯೇಲರು ಸಮುದ್ರ ಪಾರಾಗುವ ಸಂದರ್ಭದಲ್ಲಿ ಈಜಿಪ್ತದ ಸೇನೆಗಳು ಕೆಂಪು ಸಮುದ್ರದ ತಳದ ಮೇಲೆ ಬರುವಾಗಲೆ, ದೇವರ ದಂಡನೆಯಿಂದ ಸಮುದ್ರವೆಲ್ಲ ಹರಿದು ತುಂಬಿ ಅವರನ್ನು ಕೊಂದಿಕ್ಕಿದ ಕಥೆಯಿದೆ. ಒಬ್ಬ ಪ್ರವೀಣ ಚಿತ್ರಕಾರನು ಈ ಚಿತ್ರವನ್ನು ಬರೆದು ಕೊಡಲು ಅನುಜ್ಞೆಪಡೆದಿದ್ದನು, ಧಾರಾಳವಾದ ಬಹುಮಾನ ದ್ರವ್ಯವೂ ಮೊದಲಾಗಿ ಅರ್ಪಿಸಲಾಗಿದ್ದಿತು ಎಷ್ಟೋ ಕಾಲದ ಮೇಲೆ ದಾತನು ಚಿತ್ರ ನೋಡಲು ಬಂದನು ಬರೀ ಗೋಡೆಯೆ ಮಾತ್ರ ತೋರಿತು ದಾತನು ಚಿತ್ರಕಾರರನ್ನು ಪ್ರಶ್ನಿಸಲು, ಚಿತ್ರಕಾರನು—ಈಜಿಪ್ತದ ಸೇನಿಕರು ಮುಳುಗಿ ಸತ್ತರು, ಅದರಿಂದ ಅವರ ಚಿತ್ರವಿಲ್ಲ, ಇಸ್ರಯೇಲರು ಸಮುದ್ರ ದಾಟಿದರು, ಆದರಿಂದ ಅವರ ಚಿತ್ರವಿಲ್ಲ ಎಂದನಂತೆ ನಮ್ಮ ಇಂಡಿಯಾ ಬಿಲ್ಲಿನ ಕಥೆ ಇದರಂತಾಗಿದೆ ಏಳೆಂಟು ವರ್ಷಗಳ ಹಿಂದೆ ನಮ್ಮಲ್ಲಿದ್ದ ಧೋರಣೆಯು ಅದರಲ್ಲಿಲ್ಲ, ಚಕ್ರಗೋಷ್ಠಿಯ ಕಾಲದಲ್ಲಿ ಏನಾದರೊಂದು ವಿಷಯ ಚರ್ಚೆಯಾಗುವಾಗ, ಒಬ್ಬೊಬ್ಬರು ತಮ್ಮ ತಮ್ಮ ವೈಯಕ್ತಿಕ ವಿಚಾರಗಳಿಂದ ತಾರತಮ್ಯ ಬುದ್ಧಿಯಿಂದ ವಾದಿಸಿ ದೇಶದ ವಿಚಾರಗಳನ್ನು ಮರೆತು ಏನು ಮಾಡಹೋಗಿದ್ದರೋ ಅದೊಂದನ್ನೂ ಮಾಡದೆ ಇದ್ದುದರಿಂದ ಆ ವಿಚಾರಗಳೂ ಅದರಲ್ಲಿಲ್ಲ ಡೊಮಿನಿಯನ್ ಸ್ಟೇಟಸ್ ಆ ಮಾತಿನ ಅರ್ಥವೇ ಈಗ ಬೇರೆ ಎಂದು ಅದನ್ನು ಈ ಬಿಲ್ಲಿನಲ್ಲಿ ಎತ್ತಿದಿಲ್ಲ ಕುಂದುಗಳೂ ಕೊರತೆಗಳೂ ಊನಗಳೂ ನ್ಯೂನಗಳೂ ತುಂಬಿರುವುದಕ್ಕೆ, ಆ ಪಕ್ಷವು ಈ ಪಕ್ಷವನ್ನೂ ಇದು ಅದನ್ನೂ ಪರಸ್ಪರವಾಗಿ ದೂರುವುದಲ್ಲದೆ, ಇಬ್ಬರೂ ಒಂದಾಗಿ ಯಾವುದೊಂದು ಸೂಚನೆಯನ್ನು ಅದರಲಿ ರೂಪಿಸಿ ತರುವಂತೆ ಯತ್ನಿಸಿಲ್ಲ ಬಿಲ್ಲು ಆ ಚಿತ್ರದಂತೆ ನಿಂತಿದೆ ಬರೀ ಗೋಡೆ ಸ್ವರಾಜ್ಯದ ಕಡೆಗೆ ಅದು ಮುಖಮಾಡಿ ನಿಂತಿದೆ ಎನ್ನುವವರು ಕೊಡುತ್ತಾರೆ, ಸ್ವರಾಜ್ಯದ ಕಡೆಗೆ ಅದು ಬೆನ್ನು ತಿರುಗಿಸಿ ನಿಂತಿದೆ, ಎನ್ನುತ್ತಾರೆ,—ನೋಡುವವರು ಆದರೂ ಇಷ್ಟಕ್ಕೆ ಏಳು ವರ್ಷದ ಸಾಧನೆ ಬೇಕಾಗಿದ್ದಿತೆ? ಎಂಬ ಪ್ರಶ್ನೆ ಮಾತ್ರ ಉಳಿದಿದೆ

### ಜಪಾನಿನ ಉದಾಹರಣೆ

ಸುವ್ಯವಸ್ಥೆ ಮತ್ತು ಜನಾಂಗದ ದೃಢನಿಶ್ಚಿತ ಇವೆರಡೇ ಕಾರಣಗಳಿಂದ ಜಾಪಾನು ಚೇತನತುಂಬಿ ಯುರೋಪು ಅಮೇರಿಕಗಳೊಡನೆ ಜಟ್ಟೀಕಾಳಗಕ್ಕೆ ನಿಂತಿದೆ ಯಂತ್ರ ಸನ್ನಾಹಗಳ ಪರಿಚಯವಾಗಲಿ, ದೈವದತ್ತವಾದ ಮಹಾ ಸಂಪತ್ತಾಗಲಿ ಇಲ್ಲದೆ, ಜಾಪಾನು ಇಂದು ಇಷ್ಟು ಮಹೋನ್ನತ ಪದವಿಗೆ ಹೇಗೆ ಏರಿತು? ಜಾಪಾನಿನಲ್ಲಿ ತಯಾರಾಗುವ ಕಾಲುಚೀಲಗಳನ್ನು, ಮೆಂಚೆಸ್ಟರಿನಲ್ಲಿ ಮಾರುತ್ತಾರೆ, ಲಂಡನಿನ ಹೊಟೆಲುಗಳಲ್ಲಿ ಜಾಪಾನಿನ ಉಪಕರಣಗಳು ಬಳಕೆಗೆ ಬಂದಿವೆ ಎಂದರೆ, ಜಾಪಾನು 'ಯುರೋಪಿನಲ್ಲೆಷ್ಟು ನುಗ್ಗಿದೆ' ಎಂದು ತಿಳಿಯಬಹುದಲ್ಲ? ಈ ಬಗೆಯ ಸುವ್ಯವಸ್ಥೆ, ದೃಢನಿಶ್ಚಿತಗಳು ನಮ್ಮಲ್ಲಿ ಮೂಡಿ ಬೆಳೆದರೆ, ಎಂತಹ ರಕ್ಷಾಕವಚಗಳಿಂದಲಾದರೂ ಬಿಗಿದು ಭಾರತವನ್ನು ಪೂರ್ಣತೆಗೆ ಏರದಂತೆ ಹಲ್ಲದಂತೆ ತಡೆಯಲಾಗುವುದಿಲ್ಲ. ದೇಶವತ್ಸಲರೂ, ಸ್ವಾರ್ಥರಹಿತರೂ, ದೂರದರ್ಶಿಗಳೂ ಮಂತ್ರಿಗಳಾಗುವಲ್ಲಿ, ಅವರ ಕೈಗೇ ಒಪ್ಪಿಸಲಾಗುವ ಎಲ್ಲ ಇಲಾಖೆಗಳ ಮೂಲಕ ದೇಶದ ಅಭಿವೃದ್ಧಿಯಾಗುವುದೇ ಮಾತ್ರವಲ್ಲ, ಎಡರುಗಳು ನಾಶವಾಗಿ, ರಕ್ಷಾಕವಚವೇ ಪುಡಿಯೊಡೆಯುವುದು ನಿಜ.

## ಮಂಗಳೂರು.

ಅತ್ತಾವರ ಮುನ್ಸಿಪಲ್ ಶಾಲೆಯಲ್ಲಿ ಇಲ್ಲಿಯ ಡಿ. ಸಿ. ಯಂ. ಇವರು ನಡೆಯಿಸುತ್ತಿರುವ ರಾತ್ರಿ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವ ಸಮಾರಂಭ ವನ್ನು ಇದೇ ಕಳೆದ ತಾ ೨೭ನೇ ಶನಿವಾರ ರಾತ್ರಿ ಶ್ರೀ ಪುಂಡಲೀಕಶ್ಯಾನುಭೋಗರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ವಿದ್ಯಾರ್ಥಿಗಳಿಂದ ದೇವತಾ ಪ್ರಾರ್ಥನೆ ಯಾದ ಬಳಿಕ ಅಧ್ಯಾಪಕ ಶ್ರೀ ಉಮಾನಾಥರಾಯರು ಸಭೆಯ ಉದ್ದೇಶಗಳನ್ನು ವಿವರಿಸಿದ ಮೇಲೆ, ಅಧ್ಯಕ್ಷರು ಸುಸರಸವಾದ ಭಾಷಣವಿತ್ತು, ಯೋಗ್ಯರಾದವರಿಗೆ ಬಹು ಮಾನಗಳನ್ನು ಹಂಚಿದರು. ಕೊನೆಗೆ ಡಿ ಸಿ ಎಂ. ಶಾಲಾ ಹೆಡ್ಮಾಸ್ತರ್ ರಾ। ಗೋವಿಂದರಾಯರೂ ಸಮ ಯೋಚಿತವಾದ ಕೆಲವು ಮಾತುಗಳನ್ನಾಡಿ ಕರುವಾಂತ್ಯ ಈ ಸಮಾರಂಭವು ಕೊನೆಗಂಡಿತು.

ತಾ. ೨೭-೬-೩೬ಕ್ಕೆ ಅಂತ್ಯವಾಗುವ ಒಂದು ವಾರ ದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೪ ಮರಣಗಳೂ ೫೩ ಜನನಗಳೂ ಆಗಿವೆಯೆಂದು ವರದಿ ಯಿಂದ ತಿಳಿದುಬರುತ್ತದೆ.

ಮಂಗಳೂರಿನ ತೃತೀಯ ತೋಟಗಾರಿಗಳ ಪ್ರದರ್ಶ ನವು ಇದೇ ಬರುವ ಸಪ್ಟೆಂಬರ ಕೊನೆಯ ವಾರದಲ್ಲಾಗಲೀ ಅಕ್ಟೋಬರ ಪ್ರಥಮ ವಾರದಲ್ಲಾಗಲೀ ಜರಗಿಸಲ್ಪಡುವು ದೆಂದು ತಿಳಿದುಬರುತ್ತದೆ. ಇದನ್ನು ಐದು ವಿಭಾಗಗಳ ನ್ನಾಗಿ ಮಾಡುವುದೆಂದೂ, ಪ್ರಥಮದ ವಿಭಾಗದಲ್ಲಿ ವಿವಿಧ ಗಿಡಗಳು, ಎರಡನೆಯದರಲ್ಲಿ ಹೂಗಿಡಗಳನ್ನು ನಾನಾ ರೀತಿಯಲ್ಲಿ ಹೂವ ವಿಧಾನ, ಮೂರನೆಯದರಲ್ಲಿ ಪುಷ್ಪಗಳ ಸೌಂದರ್ಯ, ಚತುರ್ಥ ವಿಭಾಗದಲ್ಲಿ ಬೇರೆ ಬೇರೆ ಜಾತಿಯ ತರಕಾರಿಗಳು, ಕಡೆಯದರಲ್ಲಿ ಹಣ್ಣುಹಂಪಲುಗಳು—ಈ ರೀತಿಯ ವ್ಯವಸ್ಥೆಯಿಂದ ಪ್ರದರ್ಶನವು ತೆರೆಯಲಾಗು ವುದು.

ಜಿಲ್ಲಾ ವೋಟರರ ಹಂಗಾಮಿ ಪಟ್ಟಿಯು ಇದೇ ೧೫ಕ್ಕೆ ಪ್ರಕಟಿಸಲ್ಪಟ್ಟು ತಾ ೩೧ರೊಳಗೆ ತಕ್ಕ ಆಕ್ಷೇಪಣೆ ಬದ ಲಾವಣೆಗಳ ಅರ್ಜಿಗಳು ದಾಖಲ್ಪಡಬೇಕಾಗಿರುವುದರಿಂದ ಈಗಿನ ಕ್ರಮದಂತೆ ಮತದಾನ ಹಕ್ಕು ವಿಸ್ತೃತವಾಗಿರು ವುದರಿಂದ ಅನೇಕ ಹೆಸರುಗಳು ಬಿಟ್ಟುಹೋಗುವ ಸಂಭರ್ಭವಿದೆ. ಸಿವಿಲ್ ಪರಿಜ್ಞಾನವುಳ್ಳವರ ಹಾಗೂ ಸಿವಿಲ್ ಬೋರ್ಡು ಇಲ್ಲವೆ ಇತರ ಉಮೇದ್ವಾರರು ಆದಷ್ಟು ಮತದಾರರ ಹೆಸರುಗಳನು ಪರಿಶೀಲಿಸಿ, ಪಟ್ಟಿ ಯಲ್ಲಿ ದಾಖಲು ಮಾಡಿಸುವುದು ಯೋಗ್ಯ.

ಸ್ಥಳೀಯ ಶ್ರೀ ಕೃಷ್ಣ ಸಿನೆಮಾದಲ್ಲಿ ಇದೇ ತಾ ೧೨ರಿಂದ ನ್ಯೂ ಥಿಯೇಟರ್ಸ್‌ರವರ ಅತ್ಯುತ್ತಮ ಹಿಂದೀ ಚಿತ್ರವಾದ "ದೇವದಾಸ್" ಎಂಬುದು ಪ್ರದರ್ಶಿಸಲ್ಪಡುವುದು. ಅನಂತರ ಇದೇ ತಾ ೪೦ರಿಂದ ಸಿಪ್ರಿ ಥಿಯೇಟರ್ಸ್‌ನವರ "ಕವನ್ ಇ ಹಯಾತ್" ಎಂಬ ಪ್ರಖ್ಯಾತ ಚಿತ್ರವು ಪ್ರದರ್ಶಿಸಲ್ಪಡುವುದು.

ನಮ್ಮ ಮುನಿಸಿಪಾಲಿಟಿಯಲ್ಲಿ ಸ್ಯಾನಿಟರಿ ಇನ್ಸಪೆಕ್ಟರ ರಾಗಿದ್ದ ಮಿ। ಬಿ ಪಿಂಟೋರವರು ಕೆಲಕಾಲದಿಂದ ಅಸ್ವಸ್ಥದಲ್ಲಿದ್ದು, ಚಿಕಿತ್ಸೆ ಪಡೆಯುತ್ತಿದ್ದವರು ಕಳೆದ ವಾರ ಕಂಕನಾಡಿ ಆಸ್ಪತ್ರೆಯಲ್ಲಿ ಅಕಾಲಮೃತ್ಯುವಶರಾದ ರೆಂದು ತಿಳಿಸಲು ತುಂಬ ವಿಷಾದವಾಗುತ್ತದೆ. ಶವಸಂಸ್ಕಾ ರವು ಜನಭರಿತವಾಗಿ ನಡೆಯಿತು.

ಬರುವ ಅಕ್ಟೋಬರ ೨೩ ೧೬ಕ್ಕೆ ಮಂಗಳೂರಿಗೆ ಆಗ ಮಿಸುವ ಮಾನ್ಯ ಮದ್ರಾಸು ಗವರ್ನರರು ಕಾರ್ಕಳ, ಉಡುಪಿ, ಮೂಡಬಿದರೆ, ಬಾರ್ಕೂರು, ಮೊದಲಾದ ಕಡೆ ಗಳಿಗೂ ಭೇಟಿ ಕೊಡುವರಾಗಿ ಪ್ರಕಟವಾಗಿದೆ.

ಇದೇ ತಿಂಗಳು ೧೦ನೇ ದಿನ ಬೋಳೂರಪಟ್ಣದ ಶಾಲೆ ಯಲ್ಲಿ ಒಂದು ಪ್ರದರ್ಶನವನ್ನು ತೋರಿಸಿ ಕೂಡಿಬಂದ ಹಣವನ್ನು ಮುನಿಸಿಪಾಲಿಟಿ ಕಮಿಶನರರ ಮುಖಾಂತರ ಕ್ಷೇಮ ನಿಧಿಗೆ ಕೊಟ್ಟು ಆಲಿಲುಸೇವೆಯನ್ನು ಮಾಡುವು ದಾಗಿ ನಿಶ್ಚೈಸಿದ್ದಾರೆ. ಸಣ್ಣ ಮಕ್ಕಳ ಉದ್ದೇಶಗಳಿಗೆ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಮಹಾಜನರಲ್ಲಿ ವಿನಂತಿ.

ಕಾಂಗ್ರೆಸ್ ಸಿವಿಲ್ ಬೋರ್ಡಿನ ಕಾರ್ಯಕಾರಿ ಸಮಿ ತಿಯು ಕಳೆದ ತಾ ೨೦ರಲ್ಲಿ ಸಭೆ ಸೇರಿ, ಕೆಲವೊಂದು ಅತ್ಯಮುಖ್ಯ ಠರಾವುಗಳನ್ನು ಶ್ರೀ ಕೋಟೆ ರಾಮ ಕೃಷ್ಣ ಕಾರಂತರ ಅಧ್ಯಕ್ಷತೆಯಲ್ಲಿ ಮಂಜೂರುಮಾಡಿರು ವರು. ಅವುಗಳಲ್ಲಿ ಈ ಬೋರ್ಡಿನ ಕಾರ್ಯದರ್ಶಿ ಗಳು ಜಿಲ್ಲೆಯಲ್ಲಿ ಸಂಚರಿಸಿ, ಚುನಾವಣೆಯ ಕುರಿತು ಜನಾಭಿಪ್ರಾಯವನ್ನು ಸಂಗ್ರಹಿಸಿ ವರದಿ ಬರೆಯಬೇಕೆಂಬ ಒಂದು ಕರಾರಿಗೆ ಅನುಗುಣವಾಗಿ ಕಾರ್ಯದರ್ಶಿಯವರು ಉಡುಪಿಗೆ ತೆರಳಿ, ಅಲ್ಲಿ ಕೆಲವು ಮುಖಂಡರ ಅಭಿಪ್ರಾಯ ವನ್ನು ಸಂಗ್ರಹಿಸುತ್ತಿರುವುದಾಗಿ ತಿಳಿದುಬರುತ್ತದೆ.

## ತಾಲೂಕುಗಳಿಂದ.

**ಕಾರ್ಕಳ**:—ಈ ಹಿಂದೆ ಪ್ರಕಟವಾದಂತೆ ಶ್ರೀ ಭದ್ರ ಸಾಲಿವೈಶ್ಯಸಮಾಜ ಸೇವಾ ಯುವಕ ಸಂಘದ ತ್ರೈಮಾಸಿಕ ವಿಶೇಷ ಸಭೆಯು ಕಳೆದ ತಾ ೨೦ರಲ್ಲು ಸಮಾಜದ ಪ್ರಮುಖರಲ್ಲೊಬ್ಬರಾದ ಶ್ರೀ ಲೋಕ ವಿದ್ಯಾಕುಶಲಿ ರಾಮಶೆಟ್ಟಿಗಾರರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬ್ರಹ್ಮಾನಂದರವರು ಜಿಲ್ಲಾ ಪ್ರಚಾರ ಮತ್ತು ಯುವಕ ಪರಿಷತ್ತಿನ ತೀವ್ರ ಆವಶ್ಯಕತೆಯನ್ನು ಮನಗಾಣಿಸಿ, ವರ್ಧಂತಿಯ ಸಮಯದಲ್ಲಿ ಜಿಲ್ಲಾ ಯುವಕ ಪರಿಷತ್ತೊಂದನ್ನು ಕಾರ್ಕಳದಲ್ಲಿ ಜರಗಿಸ ಬೇಕಾಗಿ ಠರಾವನ್ನು ತರಲಾಗಿ, ಪರಿಷತ್ತು ಅನಿವಾರ್ಯ ವವುದಾದರೂ, ಮೊದಲು ಪ್ರಚಾರಕಾರ್ಯವನ್ನು ಕೈಕೊ ಗಾಣಿಸಿ, ನಂತರ ಪರಿಷತ್ತಿನ ನಿರ್ಣಯಮಾಡಬೇಕಾಗಿ ನಿಶ್ಚಯಿಸಲಾಯಿತು. ಪ್ರಚಾರದ ಕರಡಾದ ನಿರ್ಣಯ ಗಳನ್ನು ಕಾರ್ಯಕಾರಿ ಸಮಿತಿಗೆ ಒಪ್ಪಿಸಲಾಯಿತು.

ಸಕಾಲದಲ್ಲಿ ಕಾರ್ಯಕಾರಿ ಸಮಿತಿಯು ಸಭೆಸೇರಿ, 'ತೀರ್ಥಹಳ್ಳಿ ಪದ್ಮಶಾಲಿ ಸಮಾಜ ಸೇವಾ ಸಂಘ', ಶಿವ ಮೊಗ್ಗದ ರಾ। ಎಸ್ ಮಂಜುನಾಥಯ್ಯ ಮತ್ತು ಶ್ರೀ ಎಂ ಎಸ್ ಎಲ್ ಶೆಟ್ಟಿಗಾರರವರ ಸಲಹೆಗಳನ್ನು ಅಭಿನಂದಿಸಿ, ಪ್ರಥಮ ಪ್ರಚಾರ ಕಾರ್ಯಕ್ಷೇತ್ರಗಳನ್ನಾಗಿ ಕಲ್ಯಾಣಪುರ ಮತ್ತು ಕಿನ್ನಿಮುಲ್ಕಿ (ಉಡುಪಿ) ಗಳನ್ನು ಆರಿಸಲಾಯಿತು.

**ಉಡುಪಿ**—ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದ ಭಜನೆ ಸಪ್ತಾಹ ಕಾರ್ಯಾಲಯದ ಶ್ರೀ ಸನ್ನಿಧಿಯಲ್ಲಿ ಪರಂಪರಾ ನಡೆದುಬರತಕ್ಕ ಭಜನೆ ಸಪ್ತಾಹ ಮಹೋತ್ಸವವು ಎಂದಿನಂತೆ ಈ ವರ್ಷವೂ ಇದೇ ತಾ ೪-೮-೩೬ನೇ ರವಿವಾರ ಮೊದಲ್ಗೊಂಡು ತಾ ೧೧-೮-೩೬ನೇ ರವಿವಾರ ಸರ್ಯಂತ ನಡೆಯ ಲಿರುವುದು.

ಉದ್ಯಾವರ ಕೆಥೋಲಿಕ್ ಹಾ। ಎ ಶಾಲಾ ಅಧ್ಯಾಪಕ ರಾಗಿದ್ದ ಶ್ರೀ। ಶಂಕರ್‌ಲು ರಾಮಯ್ಯಶೆಟ್ಟರು ಇದೇ ಕಳೆದ ತಾ ೧೯ನೇ ದಿನ ಎಂದಿನಂತೆ ತಮ್ಮ ಶಾಲಾ ಕೆಲಸವನ್ನು ಮುಗಿಸಿ ಮನೆಗೆ ಹೋದವರು ಅದೇ ದಿನ

ದ ಕ ಜಿಲ್ಲಾ ಭೂಮಾಲಿಕರ ಸಂಘದ ವಾರ್ಷಿಕ ಜನರಲ್ ಮೀಟಿಂಗು ಇದೇ ಆಗೋಸ್ತು ೨೪ನೇ ಶನಿವಾರ ಮಂಗಳೂರು ಜಿಲ್ಲಾ ಬೋರ್ಡು ಕಛೇರಿಯಲ್ಲಿ ನಡೆಯ ಲಿರುವುದು. ಈ ಕೆಳಗಿನ ಕಾರ್ಯಕ್ರಮವನ್ನು ಅನುಸ ರಿಸುವರು—ಸಭೆಯು ಒಂದು ವರ್ಷದಲ್ಲಿ ಮಾಡಿದ ಕೆಲಸದ ವರದಿ. ೨ ಸಂಘದ ಕಾರ್ಯಕಾರಿ ಮಂಡಲದ ಸದಸ್ಯರ ಚುನಾವಣೆ, ೩ ಶಾಸನ ಮತ್ತು ಇತರ ಸಂಬಂಧವಾದ ಕಷ್ಟಗಳನ್ನು ಕುರಿತು ವಿಚಾರ, ೪ ಇತರ ವಿಷಯಗಳು.

ಬೋಳೂರುಪಟ್ಣದ ಎಡ್ವರ್ಡ್ ಹೈ ಎ ಶಾಲೆಯ ವಿವೇಕಾನಂದ ಸ್ಕೌಟು ದಳದವರು ಕಳೆದ ತಾ ೩೭ನೇ ಶನಿವಾರ ದಿನ ಬೆಳಗ್ಗೆ ೮ ಗಂಟೆಗೆ ಒಂದು ಸ್ಪೆಶ್ಯಲ್ ಕಾರು ಮಾಡಿಕೊಂಡು ಗುರುಪುರ ಗಂಜಿಮಠ, ಮೂಡಬಿದರೆ ಕಾರ್ಕಳ, ಉಡುಪಿ ಮಲ್ಪೆ ಕಾಪು ದೀಪಸ್ತಂಭ ಪಡು ಬಿದರೆ ಮೊದಲಾದ ಸ್ಥಳಗಳ ಪ್ರಾಮುಖ್ಯ ವಿಷಯಗಳನ್ನು ನೋಡಿಕೊಂಡು ಕಾರ್ಕಳ ಮಾರ್ಗವಾಗಿ ಸಾಯಂ ಗಂಟೆ ೮ಕ್ಕೆ ಸರಿಯಾಗಿ ಮಂಗಳೂರಿಗೆ ಬಂದು ಸೇರಿದರು. ಕಾರ್ಕಳ ಶ್ರೀನಿವಾಸ ಅಸ್ಸಿಸ್ಟೆಂಟ್ ಕಮಿಶನರಾದ ರಾ। ವಕೀಲ ಕೆ ಪಿ ಕಾಮತ್ ಇವರಲ್ಲಿ ಭೋಜನ ಇತ್ಯಾದಿ ಆತಿಥ್ಯವನ್ನೂ, ಉಡುಪಿಯಲ್ಲಿ ಐಡುದಿದ್ರ ಸದಾಶಿವ ರಾಯರ ಫಲಹಾರಾದಿ ಉಪಚಾರವನ್ನೂ ಪಡೆದುದಕ್ಕಾಗಿ ಕೃತಜ್ಞತೆಯನ್ನರ್ಪಿಸುತ್ತಾರೆ.

ಬೋರ್ಡು ಸರ್ವಿಸಿನಲ್ಲಿದ್ದ ಉಪಾಧ್ಯಾಯರ ಸಂಬ ಳದ ವಿಷಯವಾಗಿ ಸರಕಾರದ ಹುಕುಂ ಒಂದು ಈಗ ತಾನೆ ಜಿಲ್ಲಾ ಬೋರ್ಡಿಗೆ ಬಂದಿರುವುದೆಂದು ತಿಳಿದು ಬರುತ್ತದೆ. ಈಗ ಜಾರಿಗೆ ಬಂದಿರುವ ಹೊಸ ಸಂಬಳದ 'ಮೆಕ್ಸಿಮುಂ' ಸಂಬಳಕ್ಕಿಂತ ಹೆಚ್ಚು ಸಂಬಳವನ್ನು ಈಗ ಯಾವ ಉಪಾಧ್ಯಾಯರು ಪಡೆಯುತ್ತಾರೋ ಅವರ ಅಧಿಕ ವೇತನವನ್ನು ಖಾಸಗಿ ವೇತನವಾಗಿ ಕೊಡಿಸುವು ದಕ್ಕೆ ಸರಕಾರದ ಆಕ್ಷೇಪವೇನೂ ಇಲ್ಲವಂತೆ.

ದ್ರಾವಿಡ ಬ್ರಾಹ್ಮಣ ಸಮಾಜದಲ್ಲಿ ಮೃತಹೊಂದುವ ವರ ಉತ್ತರಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶ ದಿಂದ 'ಫೆಮಿಲಿ ಬೆನಿಫಿಟ್ ಸೊಸೈಟಿ' ಎಂಬ ಹೆಸರಿನ ಸಂಘವೊಂದು ಸ್ಥಾಪಿಸಲ್ಪಟ್ಟಿದೆಯೆಂದೂ, ಇದು ಕಾನೂನಿನ ಪ್ರಕಾರ ರಿಜಿಸ್ಟ್ರ ಮಾಡಲ್ಪಟ್ಟಿರುವುದೆಂದೂ ತಿಳಿದು ಬರುತ್ತದೆ.

ರಾತ್ರಿ ಸುಮಾರು ೧೧ ಗಂಟೆಗೆ ಹೃದ್ರೋಗದಿಂದ ಅಕಾಲ ಮರಣಕ್ಕೆ ತುತ್ತಾದ ಸಂಗತಿಯನ್ನು ತಿಳಿಸುವರೆ ಬಹಳ ವಿಷಾದವಾಗುತ್ತದೆ. ಇವರು ಲೇಖಕರಾಗಿಯೂ ಕಥೆ ಗಾರರಾಗಿಯೂ ಇದ್ದುದಲ್ಲದೆ, ಉಡುಪಿ ತಿರಿಯರ ಪ್ರಪಂಚದ ಕಿರಿಯರಲ್ಲೊಬ್ಬರಾಗಿ ಮನಃಪೂರ್ವಕವಾದ ಕೆಲಸವನ್ನು ಗೈಯುತ್ತಿದ್ದರು. ಇವರ ಆತ್ಮಕ್ಕೆ ದೇವರು ಶಾಂತಿಯನ್ನೀಯಲಿ.

ತಾ. ೨೧-೭-೩೬ರಲ್ಲಿ ಕಟಪಾಡಿ ತರುಣರ ಸಭೆ ಯೊಂದು ಶ್ರೀ ರಾಮಕೃಷ್ಣಾಚಾರ್, ಬಿ ಎ., ವಿಶಾರದ ಇವರ ಅಧ್ಯಕ್ಷತೆಯಲ್ಲಿ ಜರಗಿ, ದಿವಂಗತರ ಗುಣಗಾನಾದಿ ಗಳು ನಡೆದುವು ಮಾತ್ರವಲ್ಲದೆ, ಮೃತರ ಕುಟುಂಬಕ್ಕೆ ಧನಸಹಾಯಾರ್ಥವಾಗಿ ಒಂದು ನಿಧಿಯನ್ನು ಸಂಗ್ರಹಿಸ ಬೇಕೆಂಬ ನಿರ್ಧಾರವಾಗಿ ಅದಕ್ಕೊಂದು ಕಮಿಟಿಯೂ ಆಯಿತು. ಶ್ರೀಯುತ ಮಾಂಗಾಳ ಲಕ್ಷ್ಮೀನಾರಾಯಣ ನಾಯಕರು ಆ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪ ಟ್ಟಿರುವರು.

ಕಳೆದ ತಾ ೨೬ನೇ ಸಂಜೆ ರಾ।ಗಳಾದ ಎ ಬಿ ಶೆಟ್ಟಿ, ಜಿಲ್ಲಾ ಬೋ। ಪ್ರೆಸಿಡೆಂಟ್ ಮತ್ತು ಬಿ ವೆಂಕಪ್ಪ ರೈ, ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯ ಕ್ಷರು, ಸದ್ಯ ನಮ್ಮ ಜಿಲ್ಲೆಯೊಳಗೆ ನಡೆಯಲಿರುವ ಬೋರ್ಡು ಚುನಾವಣೆ ಸಂಬಂಧವಾಗಿ ಜಿಲ್ಲಾ ಸಿವಿಲ್ ಬೋರ್ಡಿನ ನಿರ್ಣಯಕ್ಕನುಸಾರವಾಗಿ ಜನಮತ ಸಂಗ್ರಹಿ ಸುವರೆ ಚಿತ್ತೈಸಿದ್ದರು. ಮಲ್ಪೆಯಿಂದ ಶ್ರೀ। ರಾಮ ಕೃಷ್ಣ ಪುಂಜರೂ ಮರುದಿನ ಶ್ರೀ। ಎಚ್ ಸೂರಪ್ಪಯ್ಯ ಇವರೂ ಬಂದಿದ್ದರು. ಎರಡು ದಿನಗಳಲ್ಲೂ ಹಲವು ಮುಖಂಡರನ್ನು ಮಾತನಾಡಿಸಿ ಕಾಂಗ್ರೆಸ್ ಉಮೇದ್ವಾ ರರು ಯಾರ್‍ಯಾರಾಗಬಹುದೆಂಬುದಾಗಿಯೂ, ಕಾಂಗ್ರೆಸ್ ಉಮೇದ್ವಾರರಿಗೆ ಸಹಾಯ ಪ್ರೋತ್ಸಾಹವೀಯಬೇಕಾ ಗಿಯೂ ಪ್ರಚಾರಗೈದಿರುವರು.

ತನ್ನಷ್ಟೆ ಸಿವಿಲ್ ಬೋರ್ಡಿನಲ್ಲಾದ ವಾದ ವಿಷಯಕ ಚರ್ಚೆಯಿಂದಾಗಿ ಜನತೆಯಲ್ಲಿ ಭೇದವುಂಟಾಗಿದೆ. ಕಾಂಗ್ರೆಸ್ ಪಾರ್ಲಮೆಂಟರಿ ಬೋರ್ಡಿನಿಂದ ಕೂಡಾ ಎಸೆಂಬ್ಲಿ ಚುನಾವಣೆಯಲ್ಲಿ ಸೀತ ಭಾವಿಧಾರಣದ ಆವಶ್ಯಕತೆಯು ಅಂಗೀಕೃತವಾಗದ್ದು ಕಾಂಗ್ರೆಸ್‌ನ ಒ ದೇ ಒಂದು ಚಿಹ್ನೆಯಾಗಿರುವ ಖಾದಿಧಾರಣದ ಬಗ್ಗೆ ನಮ್ಮ ಸಿವಿಲ್ ಮುಂದಾಳುಗಳಲ್ಲಿ ಉದಾಸೀನತೆಗೇ ಆಸ್ಪದವಾಗಲೀ ವ್ಯಕ್ತಪಡಿಸಲಾಪದ್ದು ಶೋಚನೀಯ. ಹಿಂದೆ ಸೂಚಿಸಿದಂತೆ ಪ್ರಾಂತಿಕ ಇಲ್ಲವೆ ಅಖಿಲ ಭಾರತ ಬೋರ್ಡಿನಿಂದ ಈ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ತರಿಸಿಕೊಂಡು ಹಾಗೆ ಆಚರಿಸುವುದುತ್ತಮ. ಅಲ್ಲದಿದ್ದರೆ ಕಳೆದ ಅಖಿಲ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಮೇಳೆಗೆ ಮಿಲ್ಲು ಬಟ್ಟೆಯ ಸಮೇತ ಸ್ವದೇಶಿ ಪ್ರದರ್ಶನವನ್ನು ಜರಗಿಸುವುದರಿಂದ ಹಾಗೆಯೇ ಅಸಮಂಜಸವಾಗುತ್ತದಷ್ಟೆ!

**ಸಂಪಾಜೆ**—ಕೊಡಗು ಸರಕಾರದವರು ನಡೆಸುತ್ತಿದ್ದ ಇಲ್ಲಿಯ ಹಂಗಾಮಿ ಆಸ್ಪತ್ರೆಯನ್ನು ಇದೇ ಜುಲಾಯಿ ತಾ ೧೫ರಿಂದ ಮೂರು ತಿಂಗಳು ಕಾಯಂ ತೆರೆಯುವಂತೆ ಸಮ್ಬಂಧಪಟ್ಟ ಅಧಿಕಾರಿಗಳು ಹುಕುಂ ಕೊಟ್ಟಿರುವುದ ರಿಂದ, ಇಲ್ಲಿಯ ಬಡ ಗ್ರಾಮವಾಸಿಗಳಿಗೆ ತುಂಬಾ ಉಪಕಾರವಾಯಿತು.

**ದೇವಚಳ್ಳ**—ಈ ಗ್ರಾಮದ ಆಢ್ಯ ಮನೆತನದವರೂ ಗೌಡ ಸಮಾಜದ ಪ್ರಮುಖರಲ್ಲೊಬ್ಬರೂ, ಗೌಡ ವಿದ್ಯಾ ಸಂಘದ ಡೈರೆಕ್ಟರರೂ ಆದ ಶ್ರೀ। ಮುಂಡೋಡಿ ತಿಮ್ಮಪ್ಪ ಗೌಡರು ಹೃದ್ರೋಗ ಪೀಡಿತರಾಗಿದ್ದು ತಾ ೧೯-೭-೩೬ನೇ ದಿವಸ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಕರ.

ದಕ್ಷಿಣ ಕನ್ನಡ ಗೌಡ ವಿದ್ಯಾಸಂಘದ ಆಡಳಿತ ಸಭೆಯು ಕಳೆದ ತಾ ೧೪ರಲ್ಲಿ ಪುತ್ತೂರಲ್ಲಿ ಜರಗಿ ೪೧ ವಿದ್ಯಾರ್ಥಿ ಗಳಿಗೆ ರೂ ೬೬೫/ ನಿಬದ್ಧ ಸಾಲ ಸೆಂಕ್ಷನ್ ಮಾಡಿರು ತ್ತದೆ. ವೇತನದ ಅರ್ಜಿಗಳನ್ನು ಮುಂದಿನ ಆಡಳಿತ ಸಭೆಗೆ ತೀರ್ಮಾನಕ್ಕೆ ಬಿಟ್ಟಿರುತ್ತದೆ.

**ತೋಕೂರು ಜೋಗಟ್ಟೆ**—ನಡೆಯಲಿರುವ ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಇಲ್ಲಿಗೆ ಸೇರಿದ ಸುರತ್ಕಲ್ ಸರ್ಕಲಿನಿಂದ ಶ್ರೀ। ವಕೀಲ ಶ್ರೀ। ದಾಸ ಆಳ್ವರು ಮತ್ತು ಕೂಳೂರು ದೇವ್ಪುಣಿಗುತ್ತು ಶ್ರೀ। ಕೋಚಣ್ಣಶೆಟ್ಟಿ ಉಮೇದ್ವಾರರಾಗಿ ಎರಡು ಕಡೆ ಯವರೂ ತುಂಬಾ ಕೆಲಸ ಮಾಡುತ್ತಿದ್ದಾರೆ.

**ಪುತ್ತೂರು**—ದಕ್ಷಿಣ ಕನ್ನಡ ಜಿಲ್ಲಾ ಮಂಗಲ ಸಮಾ ಜದ ಶ್ರೀ। ಶಾರದಾ ಸಂಘವು ೧೯೩೫ನೇ ಮೇ ೧೫ರಲ್ಲಿ ರಚಿಸ್ಪ ಮಾಡಲ್ಪಟ್ಟಿದೆ. ಸದರಿ ಸಂಘದ ಈ ವರುಷದ ಜನೇ ಆಡಳಿತ ಸಭೆಯನ್ನು ಮತ್ತು ನಿಬಂಧನೆಗಳಿಗನು ಸಾರವಾಗಿ ಸ್ಥಳೀಯ ಸಬ್ ಕಮಿಟಿಯನ್ನು ಏರ್ಪಡಿಸುವ ಸಲುವಾಗಿ ಇದೇ ಆಗೋಸ್ತು ೩೦ ನೇ ಆದಿತ್ಯವಾರ ಅಪರಾಹ್ನ ಘಂಟೆ ೧ಕ್ಕೆ ಶಾಸಗೋದು ತಾಲೂಕು ಪಡ್ನೂರು ಗ್ರಾಮದ ಪಕ್ಕದ ಎಡಮಂಗಲ ಶಾಲೆಯಲ್ಲಿ ಸಭೆ ಜರಗಿಸುವುದೆಂದು ನಿಶ್ಚೈಸಿರುತ್ತದೆ. ಆದುದರಿಂದ ಸಂಘದ ಆಡಳಿತ ಮೆಂಬರರೂ ಮತ್ತು ಗ್ರಾಮದೊಳಗಿನ ಅಥವಾ ನೆರೆಗ್ರಾಮಗಳ ಸ್ವಜಾತಿ ಸದ್‌ಗೃಹಸ್ಥರೆಲ್ಲರೂ ತಪ್ಪದೆ ಬರಬೇಕಾಗಿ ವಿಸ್ತರಿಸುವುದಲ್ಲದೆ ಮುಖ್ಯವಾಗಿ ಗುವಾದ ಇತರ ಮಹನೀಯರೂ ಅಧಿಕಾರಿಗಳೂ ಇರುವ ನಮ್ಮ ಸಮಾಜಕ್ಕೆ ಕೈಕೊಟ್ಟು ಮೇಲಕ್ಕೆ ಎತ್ತಬೇಕಾಗಿ ವಿನಯ ಪೂರ್ವಕ ಪ್ರಾರ್ಥಿಸಿಕೊಳ್ಳುತ್ತೇನೆಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

## ಲಸ್ಟರ್ (Regd)

ಜೀರ್ಣಕೋಶ ಪಿತ್ತಕೋಶ ಮೂತ್ರಕೋಶ ಮತ್ತು ನರಗಳ ಮೇಲೆ ಅಪ್ರತಿಮವಾದ ಟಾನಿಕ್ ಅಥವಾ ಶಕ್ತಿವರ್ಧಕ ಸೌಂದರ್ಯ ಮುಖದ ಕಾಂತಿ ಉತ್ಸಾಹ ವೀರತ್ವ ಇವು ಗಳು ಆರೋಗ್ಯದ ಚಿನ್ಹೆಗಳು. ನರಗಳ ನಿರ್ಬಲತ್ವವೇ ವ್ಯಾಧಿಗಳ ತವರುಮನೆ ಶರೀರದ ಗ್ರಂಥಿಗಳು ತಮ್ಮ ಕಾರ್ಯವನ್ನು ಮಾಡದೆ ಜಡತ್ವವನ್ನೊಂದಿದಲ್ಲಿ ರಕ್ತವೃದ್ಧಿ ಮಾಡಿ ವೀರ್ಯವನ್ನುತ್ಪತ್ತಿ ಮಾಡುವ 'ಲಸ್ಟರ್' ಉಪಯೋಗಿಸಿರಿ.

ನಿಮಗೆ ಆರೋಗ್ಯವೂ, ಉತ್ಸಾಹವೂ, ಕಾಂತಿಯೂ ಬರುವುದು. ಇದರ ಸೇವನೆ ಯಿಂದ ವಾತ, ಪಿತ್ತ, ಗಳಿಚಾಡ್ಯ, ಚರ್ಮರೋಗಗಳು ನಿವಾರಣೆಯಾಗುವುವು ಹೊಟ್ಟೆ ಶೂಲೆ, ಕೈಕಾಲುರಿ, ಕಣ್ಣುರಿ ನಾಶವಾಗಿ ಶರೀರವು ತಂಪಾಗಿ ವೀರ್ಯವು ಗಟ್ಟಿಯಾಗುವುದು. ಬಹಳ ಹಳೇ ಉಬ್ಬಸ, ಗೂರ್ಲು, ದಮ್ಮು, ಕೆಮ್ಮು, ಜ್ವರಗಡ್ಡೆಗಳು ನಾಶವಾಗಿ ಜಠರಾಗ್ನಿ ಹೆಚ್ಚುವುದು. ಅಂಗಾಂಗಗಳಲ್ಲಿಯ ನಿರ್ಬಲತ್ವವು ನಾಶವಾಗಿ ಅಮಿತ ಪೌರುಷವುಂಟಾಗಿ, ರಕ್ತಶುದ್ಧಿಯಾಗಿ ಮಾಂಸಮಜ್ಜಾದಿಗಳಿಗೆ ಶಕ್ತಿಯುಂಟಾಗುವುದು. ಕೆಲಸಗಾರರಿಗೂ ಉದ್ಯೋಗಸ್ಥರಿಗೂ, ವಿದ್ಯಾರ್ಥಿಗಳಿಗೂ, ನಿರ್ಬಲರಾದವರಿಗೂ 'ಕ್ಷಯದ ದೆ ನೆರಳೆತ್ತ ವರಿಗೂ' ಇದರ ಉಪಯೋಗ ಹೇಳತೀರದು. ಇದರ ಸೇವನೆಯಿಂದ ಬುದ್ಧಿ ಚುರುಕಾ ಗುವುದು. ಮನುಷ್ಯನು 'ಚಿನ್ನಕ್ಕೆ ಪುಟವಿಟ್ಟಂತಾಗಿ' ಕಾಂತಿಯುತನಾಗುವನು.

ಕ್ರಯ—ದೊಡ್ಡ ಸೈಜು 3-8-0 ಮೀಡಿಯಂ 2-0-0 ಚಿಕ್ಕದು 1-1-0.

ತಯಾರಿಸುವವರು — **ಲಸ್ಟರ್ ಮೆನ್ಯುಫೆಕ್ಚರಿಂಗ್ ಕೋ., ಚಿಕ್ಕಮಗಳೂರು.**

**ಡಿಪೋ — ಚಿಕ್ಕಪೇಟೆ, ಬೆಂಗಳೂರು.**

**ಏಜಂಟರು — ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.**

## ಡಚ್ ಮಂತ್ರಿಮಂಡಲದ ರಾಜಿನಾಮೆ.

ಜುಲೈ ೩೧.

ಕಾಲಿನ್‌ರವರ ಮುಖ್ಯ ಮಂತ್ರಿತ್ವದಲ್ಲಿರುವ ನೆದರ್ಲೇಂಡ್ ಸರಕಾರವು ಈ ದಿನ ರಾಜಿನಾಮೆಯಿತ್ತಿದೆ. ಮಹಾರಾಣಿಯವರು ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸುತ್ತಿರುವರು.

ಈ ಬೆಳಿಗ್ಗೆ ಮಂತ್ರಿಮಂಡಲವು ಸೇರಿದ್ದಿತು. ರಾಜಿನಾಮೆ ಕೊಡಬೇಕೋ ಬೇಡವೋ ಎಂಬ ಪ್ರಶ್ನೆಯನ್ನು ಚರ್ಚಿಸಲಾಯಿತು. ಕೊನೆಗೆ ರಾಜಿನಾಮೆ ಕೊಡಬೇಕೆಂದು ನಿರ್ಧಾರವಾಯಿತು.

ಹೊಲೆಂಡಿನಲ್ಲಿ ಈ ಪರಿಸ್ಥಿತಿಯುಂಟಾಗಬೇಕಾದರೆ ಮುಖ್ಯ ಕಾರಣವು—ದ್ವಿತೀಯ ಶಾಸನ ಸಭೆಯು ಮಂಗಳವಾರ ನಡೆದ ಒಂದು ಘಟನೆಯೇ ಆಗಿರುತ್ತದೆ. ಸರಕಾರದ ಮೇಲೆ ವಿಶ್ವಾಸವನ್ನು ವ್ಯಕ್ತಪಡಿಸುವ ಒಂದು ಠರಾವು ಈ ಶಾಸನ ಸಭೆಗೆ ಬಂದಾಗ ಕೆಥೊಲಿಕ್ ಪಾರ್ಟಿಯೂ ಸೋಶಿಯಲಿಸ್ಟ್ ಪಾರ್ಟಿಯೂ ಇದಕ್ಕೆ ಬೆಂಬಲವನ್ನೀಯಲಿಲ್ಲ. ಸರಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡಲಾಯಿತು. ಡಚ್ ನಾಣ್ಯದ ಬೆಲೆಯನ್ನು ವ್ಯವಸ್ಥೆಗೊಳಿಸದಿದ್ದಲ್ಲಿ ಡಚ್ ಕರೆನ್ಸಿಯನ್ನು ರಕ್ಷಿಸಲು ಸರಿಯಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ತಿಳಿಸಲಾಯಿತು. ಅದೇ ಸಂದರ್ಭದಲ್ಲಿ ಸಭೆಯಲ್ಲಿ ವಿರೋಧಾಭಿಪ್ರಾಯಗಳನೇಕ ಹೊರಟವು. ಸರಕಾರದ ಹಣಕಾಸಿನ ಸ್ಥಿತಿಯು ಸಮರ್ಪಕವಾಗಿಲ್ಲವೆಂದು ಅಲ್ಲಲ್ಲಾ ಗಲಭೆಯಾಯಿತು.

## ಸ್ಪೆನಿಶ್ ಟ್ರೈನು ಢಿಕ್ಕಿ ಬಡೆಯಿತು!

ಬಾರ್ಸಿಲೋನಾ, ಜುಲೈ ೩೦.

ಸಾನ್ ವಿನ್ಸೆಂಟ್ ಡಿ. ಕಾಲ್ಡೆಸ್ ಎಂಬಲ್ಲಿ ಎರಡು ಪೆಸೆಂಜರ್ ಟ್ರೈನ್‌ಗಳು ಢಿಕ್ಕಿ ಬಡೆದುಕೊಂಡುವು. ಕಡಮೆಯೆಂದರೆ ೧೦೦ ಜನರಾದರೂ ಗಾಯಗೊಂಡಿರುವರೆಂಬ ಲೆಕ್ಕವಿದೆ.

## ಲಂಚ ಕೊಟ್ಟುದಕ್ಕಾಗಿ

ಲಾಹೋರು, ಜುಲೈ ೨೯

೧೦ ರೂ. ಅನೀತಿಪರನೆಂದು ಹೆಸರಾಂತ ಒಬ್ಬ ಪೋಲೀಸನು, ಘಟನೆ ಸಂಬಂಧಿಗನಾಗಿ, ಸಾರ್ವಜನಿಕರಲ್ಲಾರಾದರೂ ತನಗೆ ಲಂಚ ಕೊಟ್ಟರೆಂದು ಆರೋಪಿಸಿದರೆ ಅಂತಹ ಮೊಕದ್ದಮೆಯಲ್ಲಿ ನಾವು ಜಾಗ್ರತೆಯಿಂದಿರಬೇಕಾಗಿದೆ ಎಂದ ಸೇಷನ್ ಜಡ್ಜರು ಒಬ್ಬ ವಿದ್ಯಾರ್ಥಿಯನ್ನು ಒಂದು ವರ್ಷದ ಶಿಕ್ಷೆಯಿಂದ ವಿಮುಕ್ತಗೊಳಿಸಿದರು.

ಕಥೆಯೇನೆಂದರೆ—ಒಂದು ದಿನ ಈ ವಿದ್ಯಾರ್ಥಿಯು ಪೋಲೀಸನೊಬ್ಬನಿಗೆ ಮಾರ್ಗದ ನೋಟಿ ಒಂದು ರೂಪಾಯಿ ಲಂಚ ಕೊಟ್ಟನೆಂದು, ಆಪೀಲಿನಲ್ಲಿ ಜಡ್ಜರು [illegible] ತೀರ್ಮಾನಿಸಿದರು.

## ರಾಜಕೀಯ ಕೈದಿಗಳನ್ನು ಬಿಡಿ!

### ಲೋರ್ಡ್ ಪೆಟಿಕ್‌ಲೇಂಡರ ಅರಿಕೆ!

ಇಂಡಿಯಾ ಬಿಲ್ ಲೋರ್ಡ್ಸ್ ಸಭೆಯಲ್ಲಿ ಮಂಜೂರುಗೊಂಡಾಗ, ಲೋರ್ಡ್ ಲೋಯ್ಡ್‌ರವರು ಒಂದು ಮಸೂದೆಯನ್ನು ತಂದು, ಹಿಂದೀಯನು ತಂದೆಯಾಗಿ ತಾಯಿಯು ಆಂಗ್ಲಳಾಗಿದ್ದರೆ, ಅಂಥವರಿಗೆ ಹುಟ್ಟಿದ ಮಕ್ಕಳನ್ನು ಆಂಗ್ಲೋ ಇಂಡಿಯನರೆಂದು ವಿಭಾಗಿಸಬೇಕೆಂದು ಹಟಹಿಡಿದರೂ ಸಾರ್ಥಕವಾಗಲಿಲ್ಲ. ಸೆಕ್ರೆಟರಿ ಒಫ್ ಸ್ಟೇಟರಾದ ಮಾರ್ಕ್ವಿಸ್ ಒಫ್ ಜೆಟ್‌ಲೇಂಡರು ಕಾರ್ಯಕ್ರಮಗಳನ್ನು ಬಹು ವಿಚಕ್ಷಣತೆಯಿಂದ ನಡೆಸಿದರು; ಯಾವ ಕಲಹವೂ ತಲೆದೋರದಂತೆ ನಿರ್ವಹಿಸಿದರು. ಅವರು ಬುದ್ಧನ ಗಾದೆಯೊಂದನ್ನು ಹೇಳಿ, ಭಾರತೀಯರು ಈ ಸುಧಾರಣೆಗಳನ್ನು ಅವುಗಳು ಕೊಡಲ್ಪಟ್ಟ ಭಾವವಿಶ್ವಾಸದಿಂದಲೇ ಸ್ವೀಕರಿಸಬೇಕೆಂದು ಕೇಳಿಕೊಂಡರು. ಬ್ರಿಟನ್ ಮತ್ತು ಇಂಡಿಯಾಗಳೊಳಗಣ ಮೈತ್ರಿಸ್ಥಾಪನೆಗೆ ಇದೊಂದೇ ದಾರಿಯೆಂದೂ ಅವರು ತಿಳಿಸಿದರು. ಲೋರ್ಡ್ ಸ್ನೆಲ್ಲರವರು ಬ್ರಿಟಿಷ್ ಲೇಬರ್ ಪಾರ್ಟಿಯ ಅನ್ಯಕಥೆಯನ್ನು ಹೇಳಿದರು. ಅವರು ಭಾಷಣಮಾಡುತ್ತಾ ನವಸುಧಾರಣೆಗಳ ಸಂಸ್ಥಾಪನೆಯಾಗುವಾಗ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡಬೇಕೆಂದು ಸೂಚಿಸಿದರು.

## ವಿದ್ಯಾರ್ಥಿನಿಯನ್ನು ಸೆರೆಹಿಡಿದರು!

### ಕ್ರಾಂತಿಕಾರರ ಪಕ್ಷೀಯಳೋ?

ಕಲ್ಕತ್ತದಲ್ಲಿ ಮಿಸ್ ಕಮಲಮುಖರ್ಜಿ ಎಂಬ ವಿದ್ಯಾರ್ಥಿನಿಯೊಬ್ಬಳ ಮನೆಯಲ್ಲಿ ಸ್ಪೆಶಲ್ ಬ್ರೆಂಚ್ ಪೋಲೀಸರು ಜಡ್ತಿ ನಡೆಸಿರುವರು. ನಿಷಿದ್ಧ ಸಾಹಿತ್ಯಗಳು ಕೆಲವು ದೊರೆತಿವೆ. ನೋರ್ತ್ ಮತ್ತು ಸೆಂಟ್ರಲ್ ಕಲ್ಕತ್ತದಲ್ಲಿ ಪೋಲೀಸರು ಆರು ಮನೆಗಳನ್ನು ಜಡ್ತಿ ನಡೆಸಲಾಗಿ [illegible] ಮೂವರು ತರುಣರನ್ನು ಸೆರೆಹಿಡಿಯುವ ಪ್ರಸಂಗವೊದಗಿತು.

## ಕೊಂಗ್ರೆಸ್ ಉದ್ಯೋಗಗಳನ್ನು ಸ್ವೀಕರಿಸುವುದೇ?

ವಾರ್ಧಾಗಂಜ್, ಜುಲಾಯಿ, ೨೭

ಜುಲಾಯಿ ತಾ ೨೯ರಿಂದ ಬಾಬೂ ರಾಜೇಂದ್ರ ಪ್ರಸಾದ, ಸರದಾರ ಪಟೇಲ್, ಶೇಟ್ ಜಮ್ನಾಲಾಲ್ ಬಜಾಜ್, ಶ್ರೀ ಗಂಗಾಧರರಾವ್ ದೇಶಪಾಂಡೆ, ಆಚಾರ್ಯ ಕೃಪಾಲನಿ, ಡಾ। ಸಯ್ಯದ್ ಮಹಮ್ಮದ್ ಮೊದಲಾದ ಕೊಂಗ್ರೆಸ್ ವರ್ಕಿಂಗ್ ಕಮಿಟಿಯವರು [illegible] ನಡೆಸಿ ಕೊಂಗ್ರೆಸ್ ಸದಸ್ಯರು ಸರಕಾರೀ ಉದ್ಯೋಗಗಳನ್ನು ಸ್ವೀಕರಿಸಬೇಕೋ ಬೇಡವೋ ಎಂದು ನಿರ್ಧರಿಸಿಕೊಳ್ಳುತ್ತಿರುವರು.

ನವರಾಜ್ಯಭಾರಕ್ರಮದಲ್ಲಿ ಮಂತ್ರಿ ಪದವಿಗಳನ್ನು ಕೊಂಗ್ರೆಸ್ ಸದಸ್ಯರು ಪಡೆಯಬಹುದೋ ಎಂಬುದೇ ಮಹದ್ವಿಚಾರ.

ಚುನಾವಣೆಯು ನಡೆಯಲು ಇನ್ನೂ ಒಂದು ವರ್ಷವು ತಗಲಬಹುದಾದುದರಿಂದ ಈ ಪ್ರಶ್ನೆಯನ್ನು ಈಗ ಚರ್ಚಿಸುವುದು ಅಗತ್ಯವಿಲ್ಲವೆಂದು ಕೆಲವು ಸದಸ್ಯರ ಹೇಳಿಕೆ. ಆದರೂ ವರ್ಕಿಂಗ್ ಕಮಿಟಿಯು ಈ ಕುರಿತಾಗಿ ಖಾಸಗಿ ನಿರ್ಣಯಗಳನ್ನು ಮಾಡಿಕೊಳ್ಳಲಿರುವುದು.

ಬಾಬೂ ರಾಜೇಂದ್ರ ಪ್ರಸಾದರೊಡನೆ ವಿಚಾರಿಸಿದ್ದಲ್ಲಿ ಅವರು ತನ್ನ ಪ್ರವಾಸದಲ್ಲಿ ಈ ವಿಷಯವಾದ ಅಭಿಪ್ರಾಯವು ಭಿನ್ನಭಿನ್ನವಾಗಿ ಕಂಡುಬಂದಿದೆ ಎಂದರು.

## ಇಡೀ ಕುಟುಂಬವೇ ಕಟ್ಟಡದಡಿಯಲ್ಲಿ ಬಿತ್ತು!

ಆರು ಮಂದಿ ಇರುವ ಒಂದು ಕುಟುಂಬದವರು ಕರಾಚಿಯಲ್ಲಿ ಒಂದು ಕೋಣೆಯಲ್ಲಿ ರಾತ್ರಿ ಮಲಗಿದ್ದಾಗ, ಕಟ್ಟಡವು ಬಿದ್ದುಹೋಗಿ ಆರು ಜನರೂ ಕೊಂಪೆಯಡಿಯಲ್ಲಿ ಸಿಲುಕಿಕೊಂಡರು. ನೆರೆಹೊರೆಯವರು ಬೊಬ್ಬೆಯನ್ನು ಕೇಳಿ ಓಡಿಬಂದು ಆದಷ್ಟು ಸಹಾಯವಿತ್ತು ಪೆಟ್ಟುಗೊಂಡವರನ್ನು ಹೊರಗೆಳೆದು ಆಸ್ಪತ್ರೆಗೆ ಕಳುಹಿಸಿದರು.

## ಡಾ। ಅನ್ಸಾರಿ ಮೊದಲಾದವರ ವರ್ತನೆಯನ್ನು ಖಂಡಿಸಿದರು.

ಡಾ। ಅನ್ಸಾರಿ, ಡಾ। ಬಿ. ಸಿ. ರೋಯ್, ಚೌಧರಿ, ಖಲಿಕ್ ಉಜ್ ಜಮಾನ್ ಮತ್ತು ಆಸಾಫ್ ಅಲಿಯವರು ಸಹಿಮಾಡಿ ಹೊಸ ರಾಜ್ಯಭಾರದಲ್ಲಿ ಕೊಂಗ್ರೆಸ್ ಪಕ್ಷೀಯರು ಉದ್ಯೋಗಗಳನ್ನು ಪಡೆಯಬೇಕೆಂದು ಪ್ರಕಟಿಸಿದರು. ದಿಲ್ಲಿ ಕೊಂಗ್ರೆಸ್ ಕಮಿಟಿಯವರು ಈ ಪ್ರಕಟನೆಯನ್ನು ಖಂಡಿಸಿ ಈ ಮನವಿಯು ಕೊಂಗ್ರೆಸ್ ಅಧ್ಯಕ್ಷರ ಅಭಿಪ್ರಾಯಕ್ಕೆ ವಿರೋಧವಾಗಿರುವುದರಿಂದ ತ್ಯಾಜ್ಯವೆಂದು ಪ್ರಕಟಿಸಿದರು.

## ಸಣ್ಣ ಸಣ್ಣ ಪಂಗಡಗಳಾಗಿ ಮುಂದೆ ನುಗ್ಗುವ ಕಾರ್ಯಕ್ರಮ.

ಲಾಹೋರು ಜುಲೈ ೩೧

ಶಾಹಿದ್ ಗಂಜ್‌ನ ಪರಿಸ್ಥಿತಿಯು ಈ ದಿನ ವಿಚಿತ್ರ ಸ್ವರೂಪವನ್ನು ತಾಳಿದೆ. ಮುಸ್ಲಿಮರು ಶಾಹಿದ್ ಗಂಜ್ ಗುರುದ್ವಾರದ ಕಡೆಗೆ ಒಟ್ಟಿಗೇ ಹೋಗಲು ಇಷ್ಟು ದಿನಗಳಲ್ಲಿ ಪ್ರಯತ್ನಿಸುತ್ತಿದ್ದರು. ಆದರೆ ಇನ್ನು ಮೇಲೆ ಸಣ್ಣ ಸಣ್ಣ ಗುಂಪುಗಳನ್ನು ಮಾಡಿಕೊಂಡು ಅತ್ತ ಕಳುಹಿಸಲು ನಿರ್ಧಾರವಾಗಿರುತ್ತದೆ. ಸರಕಾರದವರು ತಮ್ಮ ಆಜ್ಞೆಯನ್ನು ಸ್ಥಿರಪಡಿಸಿಕೊಳ್ಳಲು, ಬೇಕಾದರೆ ದಸ್ತಗಿರಿಯನ್ನಾದರೂ ಮಾಡಲಿ ಎಂದು ನಿರ್ಣಯಿಸಿರುವರು. ಈ ಪರಿಸ್ಥಿತಿಯೊದಗಬಹುದೆಂದು ಕಳೆದ ಭಾನುವಾರ ಜನರ ಗುಂಪನ್ನು ಚದರಿಸಿದಾಗಲೇ ನಿರೀಕ್ಷಿಸಲಾಗಿತ್ತು. ಆದುದರಿಂದ ಪೋಲೀಸ್ ದಳವನ್ನು ಹೆಚ್ಚಿಸಿ ಬಂದೋಬಸ್ತು ಮಾಡಲಾಗಿತ್ತು. ಆಗಿನಿಂದ ಜನರ ಗುಂಪು ವಾಜಿರ್ ಖಾನ್ ಮಸೀದಿಯ ಹತ್ತಿರ ಸೇರುತ್ತಾ ಭಾನುವಾರ ರಾತ್ರಿ ಸೋಮವಾರ ಪೂರ್ತಿ ಇದ್ದಿತು. ಈ ಜನರ ಗುಂಪು ಮನೆಯನ್ನು ಬಿಟ್ಟದ್ದು ಶುಕ್ರವಾರ ಮಧ್ಯಾಹ್ನ ಶಾಹಿದ್‌ಗಂಜ್ ಕಡೆ ಹೋಗಬೇಕೆಂದು ನಿರ್ಧರಿಸಿ ಬಂದವರು. ಇವರು ನಿನ್ನೆ ಅವರ ಮತಾಚಾರ್ಯರಾದ ಉಲೇಮಾಗಳು ಈ ಮುಸ್ಲಿಮರ ಗುಂಪಿನಲ್ಲಿ ಭಾಷಣವಿತ್ತು ಜನರನ್ನು ಉತ್ತೇಜಿಸಿದರು. ಸರಕಾರದ ಆಜ್ಞೆಯನ್ನು ಮುರಿಯಬೇಕೆಂದು ಪ್ರಯತ್ನ ಮಾಡಿದರು. ಗುರುದ್ವಾರದ ಕಡೆ ಸಣ್ಣ ಸಣ್ಣ ಗುಂಪುಗಳನ್ನು ಕಳುಹಿಸಿ ಕಾನೂನುಸಲ್ಲಂಘನೆ ಮಾಡಬೇಕೆಂದಾಗಿದೆ.

## ೨೭೦ ಮಂದಿಯ ದಸ್ತಗಿರಿ.

ಲಾಹೋರ್, ಜುಲಾಯಿ, ೩೧.

ಮಾಲೇರ್‌ಕೋಟ್ಲಾ ಹಿಂದೂಮುಸ್ಲಿಂ ಗಲಭೆಯ ಸಂಬಂಧವಾಗಿ ಅಧಿಕಾರಯುಕ್ತವಾದ ವರದಿಗಳಿಂದ ಗೊತ್ತಾಗುವ ವಿವರಗಳಿವು.

ಪ್ರಾರ್ಥನೆ ಮತ್ತು ಆರತಿಯ ಕಾಲದಲ್ಲಿ ಹಿಂದೂ ಮುಸ್ಲಿಂ ಘರ್ಷಣವು ತಾ. ೨೦ನೇ ದಿನದಿಂದಲೂ ಬಹು ಉತ್ಕಟಾವಸ್ಥೆಯಲ್ಲಿದ್ದಿತು. ಮಸೀದಿಯೂ ದೇವಸ್ಥಾನವೂ ಅಕ್ಕಪಕ್ಕದಲ್ಲಿಯೇ ಇರುವುದರಿಂದ ಘರ್ಷಣವುಂಟಾಗದಂತೆ ನೋಡಿಕೊಳ್ಳುವುದು ಅಸಾಧ್ಯವಾಯಿತು. ೨೦ನೇ ತಾರೀಕಿನ ಸಂಜೆ ಪ್ರಾರ್ಥನೆಯ ಸಮಯ ಮುಸ್ಲಿಂ ಜಾತಾಗಳು ಆ ಸ್ಥಳಕ್ಕೆ ಬಂದವು. ಆದರೆ ಮಸೀದಿಗೂ ದೇವಸ್ಥಾನಕ್ಕೂ ಪ್ರವೇಶಿಸದಂತೆ ಅವರನ್ನು ತಡೆಯಲಾಯಿತು. ಪೋಲೀಸರು ಲಾಠೀಪ್ರಹಾರ ಮಾಡಿ ಜನರನ್ನು ಚದರಿಸಿದರು. ಅವರಲ್ಲಿ ೧೦ ಜನರಿಗೆ ಗಾಯಗಳಾಗಿವೆ. ಹಿಂದೂಗಳು ಹರತಾಳವನ್ನಾಚರಿಸಿದರು.

ತಾ ೨೧ರಲ್ಲೂ ಅವರ ಹರತಾಳವು ಕೊನೆಗಂಡಿತು. ಎರಡು ಗುಂಪು ಮುಸ್ಲಿಮರು ಪಕ್ಕದ ಜಿಲ್ಲೆಗಳಿಂದ ತಾ ೨೨ರಲ್ಲಿ ಬಂದರೆಂದೂ ಅವರನ್ನು ಲಾಠೀಪ್ರಹಾರದಿಂದ ತಡೆಯಲಾಯಿತೆಂದೂ ತಿಳಿದುಬಂದಿದೆ. ೨೭೦ ಜನರನ್ನು ದಸ್ತಗಿರಿ ಮಾಡಲಾಗಿದೆ. ಹೊರಗಿನಿಂದ ಜಾತಾಗಳು ಬರದಂತೆ ಏರ್ಪಾಡು ಮಾಡುವುದಕ್ಕಾಗಿ ಸರಕಾರವು ಆಜ್ಞೆಯಿತ್ತಿದೆ. ಇಂಡಿಯನ್ ಸ್ಟೇಟ್ ಪ್ರೊಟೆಕ್ಷನ್ ಆಕ್ಟಿನ ಮೇರೆಗೆ ಶಾಸನವನ್ನು ಜಾರಿಗೆ ತರಲಾಗಿದೆ. ಪಂಜಾಬ್ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟನ್ನು ಇಲ್ಲಿಯೂ ಪ್ರಚಾರಮಾಡಬೇಕೆಂದಿರುವರು. ಲಾಠಿಗಳನ್ನಾಗಲೀ ಇತರ ಶಸ್ತ್ರಗಳನ್ನಾಗಲೀ ಜನರು ಹಿಡಿದುಕೊಂಡು ಅತ್ತ ಹೋಗಬಾರದಾಗಿ ಸಾರಲಾಗಿದೆ. ಹಿಂದೂಗಳ ಆರತಿ ಮತ್ತು ಮುಸ್ಲಿಮರ ಪ್ರಾರ್ಥನೆಯು ಬೇರೆ ಬೇರೆ ಕಾಲಗಳಲ್ಲಿ ನಡೆಯುವಂತೇರ್ಪಡಿಸಿ ಯಾವ ಕಲಹವೂ ಮುಂದಕ್ಕೆ ನಡೆಯದಂತೆ ನೋಡಿಕೊಳ್ಳಬೇಕೆಂದು ಆಲೋಚನೆಯಾಗಿದೆ.


# ವಜ್ರಗಳು! —— ವಜ್ರಗಳು

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

*Part Proprietors of —*

**Sri Krishna Mills & Co**
Oil Manufacturers
Bunder, Mangalore

**Bhagavan Ganesh Pai & Co**
Copper Sheet & Twist
Merchants, Camp Bazar,
Cannanore.

*Representatives for the W.C.*

**M/s. A & F Harvey**
Cotton Spinners,
Tuticorin, Madura &c

**Guardian Assurance Co., Ltd.**
(Incorporated in England)
Head Office: 68, King
William Street,
London, E. C. 4.



Rock-bottom charges. Please come & visit once. Try once atleast Do not miss & do not repent.

# Royal Gold House,

(*Prop* —M. Vaman Nayak & Sons)

**Hampankatta—MANGALORE—S Kanara**

NICKEL PLATING WILL BE UNDERTAKEN ON GUARANTEED SYSTEM.

Motor parts, Cycle parts, Gramophone parts, Surgical instruments and etc, are plated in most scientific method under guaranteed system.

**Under special request at the time of depression**

**Platings are undertaken at Moderate Charges**

18ct. Rolled Gold Jewels Guaranteed for 10 Years.

## ದಿ ರೊಯಲ್ ಗೋಲ್ಡ್ ಹೌಸ್,

ಬಹಳ ಸುಲಭ ದರದಲ್ಲಿ ಗೇರಂಟಿಕೊಟ್ಟು ಎಲ್ಲಾ ಒಡವೆಗಳಿಗೆ ಪ್ಲೇಟಿಂಗ್ ಮಾಡಲಾಗುವುದು.

ಇತರ ವಿಚಾರಗಳಿಗೆ:—

**ಎಮ್. ವಾಮನ ನಾಯಕ್ ಎಂಡ್ ಸನ್ಸ್,**

18Ct. ರೋಲ್ಡ್ ಗೋಲ್ಡ್ ಜುವೆಲರ್ಸ್,
ಹಂಪನಕಟ್ಟೆ, ಮಂಗಳೂರು, ದ. ಕ.

## ಒಂದಕ್ಕಿಂತ ಹೆಚ್ಚು ಕತ್ತಿಯನ್ನು ಹಿಡಿದುಕೊಂಡುದಕ್ಕಾಗಿ ಸಿಕ್ಖರ ಕೈದಾಯಿತು!

ಒಂದು ಕತ್ತಿಗಿಂತ ಹೆಚ್ಚನ್ನು ಹಿಡಿದುಕೊಂಡುದಕ್ಕಾಗಿ ಲಾಹೋರಿನ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಸಿಕ್ಖರಿಗೆ ಲಾಹೋರಿನಲ್ಲಿ ಶಿಕ್ಷೆಯಾಯಿತು.

## ಜಪಾನಿನ ವ್ಯಾಪಾರ.

ಜಪಾನ್ ದೇಶದಲ್ಲಿ ಅತ್ಯಂತ ಅಗ್ಗವಾಗಿ ತಯಾರಾಗುವ ಕೈಗಾರಿಕೆಗಳಲ್ಲಿ ನೂಲಿನ ಮತ್ತು ರೇಷ್ಮೆ ಬಟ್ಟೆಗಳು ಮುಖ್ಯವಾದುವು. ಬಂಗಾಳದೇಶದ ಕೆಲವು ನೇಯಿಗೆ ಕಾರ್ಖಾನೆಯವರು ಜಪಾನಿನಿಂದ ಇವುಗಳನ್ನು ತರಿಸಿಕೊಂಡು, ಇವುಗಳ ಮೇಲೆ 'ಇಂಡಿಯಾದಲ್ಲಿ ತಯಾರಾದುದು' ಎಂದು ಛಾಪಾ ಹಾಕಿ, ದೇಶೀಯ ಸಾಮಾನುಗಳೆಂಬ ನೆಪದ ಮೇಲೆ ಹೆಚ್ಚು ಧಾರಣೆಗೆ ಮಾರುತ್ತಿರುವರೆಂದು ವರ್ತಮಾನ ಹುಟ್ಟಿದೆ ಕಲ್ಕತ್ತಾ ನಗರದ ವರ್ತಕ ಮಂಡಲಿಯವರು ಇಂಡಿಯಾ ಸರಕಾರಕ್ಕೆ ಮನವಿಮಾಡಿಕೊಂಡು, ದೇಶದ್ರೋಹಕ್ಕೆ ಕಾರಣವಾದ ಇಂತಹ ವ್ಯಾಪಾರವನ್ನು ನಿಲ್ಲಿಸುವುದಕ್ಕೆ ತಕ್ಕ ಏರ್ಪಾಟನ್ನು ಮಾಡಬೇಕೆಂದು ಪ್ರಾರ್ಥಿಸಿದ್ದಾರೆ

## ಲಾಹೋರಿನಲ್ಲಿ ಗುಂಡು ಹಾಕಿದರು! ಅಪಾದಿತನ್ನು ಸೆರೆಹಿಡಿದರು!

ಲಾಹೋರು, ಜುಲೈ ೨೫.

ಇಲ್ಲಿಯ ಎಂಪ್ರೆಸ್ ರೋಡ್‌ನಲ್ಲಿಯ ಒಂದು ಹೊಟೇಲಿನಲ್ಲಿ ಒಬ್ಬನ ಕೊಲೆಯಾಯಿತು, ರಾತ್ರಿ ತರುಣಿಯೊಬ್ಬಳು ಬೊಬ್ಬಿಟ್ಟಳು ತನ್ನನ್ನು ಒಬ್ಬನು ಅತ್ಯಾಚಾರಕ್ಕೆಳೆದನೆಂದು ಆರ್ಭಟಿಸಿದಳು. ಒಡನೆ ಗಂಡನು ಎದ್ದುಕೊಂಡನು ಅವನನ್ನು ಹಿಂಬಾಲಿಸುತ್ತ ಓಡಿದನು. ಓಡುತ್ತಿದ್ದವನು ಥಟ್ಟನೆ ಹಿಂತಿರುಗಿ ಕೈಯಲ್ಲಿದ್ದ ತುಪಾಕಿಯನ್ನು ಹಾರಿಸಿ ಅವಳ ಗಂಡನನ್ನು ಬೀಳಿಸಿದನು ಪೋಲೀಸರು ಓಡಿಹೋಗಿ ಗಾಯಗೊಂಡವನನ್ನು ಆಸ್ಪತ್ರೆಗೊಯ್ದರು ಕೊಲೆಗಡಕನನ್ನು ಸೆರೆಹಿಡಿಯಲಾಗಿದೆ ಅವನ ತುಪಾಕಿಯೂ ಸಿಕ್ಕಿದೆ

## ೪೦೦ ಮನೆಗಳು ಸುಟ್ಟುವು ಹಳ್ಳಿಗರ ಹೃದಯದ್ರಾವಕ ಸಂಕಷ್ಟ!

ನೆಲ್ಲೂರು, ಜುಲೈ ೨೬

ಇಲ್ಲಿಯ ಗುಡೂರಿನ ಬಳಿಯ ಇಂದೂರ್ ಎಂಬಲ್ಲಿ ಆಕಸ್ಮಾತ್ ಬೆಂಕಿಯು ಹಲಿಯುತ್ತಿಕೊಂಡಿತು ಒಟ್ಟು ೪೦೦ ಮನೆಗಳು ಗಾಳಿಯ. ಓಟದಿಂದ ಸುಟ್ಟುಹೋದುವು ಮನೆಗಳೊಳಗಿಂದ ಸಾಮಗ್ರಿಗಳನ್ನು ತೆಗೆಯುವಷ್ಟು ಬಿಡುವೂ ಜನರಿಗೆ ಸಿಗಲಿಲ್ಲ ಅಕ್ಕಿ, ದವಸ ಧಾನ್ಯಗಳು ಸಟ್ಟು ಭಸ್ಮವಾದುವು ತನ್ನ ಸಾಮಾನುಗಳನ್ನು ಹೊರಹಾಕುವ ಯತ್ನ ಮಾಡಿದ ಹಳ್ಳಿಗನು ಬೆಂಕಿಯಲ್ಲಿ ಬಿದ್ದು ಭಸ್ಮವಾದನು ದೊಡ್ಡ ಹಳ್ಳಿಯೊಂದು ನಾಶವಾಯಿತು

## ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ.

ವಿ-ಮೊ-ಲ

**VIM-O-LA**

**ಅಮೆರಿಕಾದ ಜೀವಸಾರ ವಸ್ತು.**

— ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂದಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

*Manufactured by*

**American Herbal Products Co.,**

Sole representatives for above medicine

The National Kanara News Agency,

Sir Phirozsha Metha Road

Fort Bombay

## "GUPTA MANTRA"

A reward of Rs 100

The objects, which cannot be achieved by spending lacs of rupees may be had by repeating this Mantra seven times There is no necessity of undergoing any hardship to make it effective. It is effective without any preparation. This is a "WASHIKARAN MANTRA." It will make you forunate give you service and advancement and bring you profit in trade A reward of Rs. 100, if proved fallible. Price including postage etc. Rs 2-7-0

Siddha Mantra Ashram,

KATRISARAI (GAYA)

M A A

## WHITE LEPROSY AND LEUCODERMA

A few days application of this medicine cures WHITE LEPROSY and LEUCODERMA radically Get rid of this horrible disease by application of this medicine inspite of failure by hundreds of Hakims, Doctors, Kavirajas and advertisers, Rs 500 rewarded if proved fallible Price Rs 2 -

VAIDYARAJ AKHIL KISHORE RAM

P O KATRISARAI (GAYA)

M A A

## ೧೪ ವರ್ಷಗಳ ಅಗ್ನಿಮಾಂದ್ಯ, ವಾತ ಮತ್ತು ಚಳಿಜ್ವರ.

ಆ ಮೇಲೆ ಪೂರ್ಣ ಗುಣ

14 ವರ್ಷಗಳ ಅಗ್ನಿಮಾಂದ್ಯದ ಪೀಡೆಯ ಬಾಧೆ ಆ ಮೇಲೆ ಪೂರ್ಣ ಮತ್ತು ಶಾಶ್ವತ ಗುಣ' ಯೋಚಿಸಿರಿ! Mrs M ಇವರ ಜಪಾದ ಅನುಭವ ವಾಯು ಬಾಧೆ ಮತ್ತು ಚಳಿಜ್ವರವಿಲ್ಲದೆ ಅವರಿಗೆ ಒಂದು ದಿನ ನಿದ್ದೆ ಇಲ್ಲ ಎಲ್ಲಾ ಉದರವೇದನೆಗಳೂ ಅತ್ಯಮೋಘವೂ ಆಸ್ಪತ್ರೆಗಳಲ್ಲಿ ಡಾಕ್ಟರರು ಶಿಫಾರಸು ಮಾಡಿದುದೂ ಆದ ಮೆಕ್‌ಲೀನ್ ಬ್ರೇಂಡ್ ಸ್ಟೊಮೆಕ್ ಪೌಡರನ್ನು ಸೇವಿಸುವ ವರೆಗೆ ಅವರಿಗೆ ಈ ಕಷ್ಟ

Mrs. M ಬರೆದ ಪತ್ರದ ಸಾರ —

"ನಿಮ್ಮ ಅದ್ಭುತಕರ ಮೆಕ್‌ಲೀನ್ ಬ್ರೇಂಡ್ ಪೌಡರನ್ನುಪಯೋಗಿಸಿ ನನಗೆ ಒದಗಿದ ಗುಣಕ್ಕಾಗಿ ನಿಮಗೆ ವಂದನೆಗಳು. ವಾತ ಮತ್ತು ಅಗ್ನಿಮಾಂದ್ಯಗಳಿಂದ ಕಳೆದ 14 ವರ್ಷಗಳಿಂದಲೂ ಬಾಧಿತಳಾಗುತ್ತಿದ್ದೆ ರಾತ್ರಿ ಊಟಮಾಡಿದೊಡನೆ ವಿಶೇಷವಾಗಿ ಗಂಟೆಗಟ್ಟಳೆಯಾಗಿ ವಾಯುವಿನ ಉಪದ್ರವವು ಇರುತಿತ್ತು ಹೃದಯ ನಡುಕವುಂಟಾಗುತ್ತಿತ್ತು ... ದೇಹವು ಕಾಂತಿಹೀನವಾಗುತ್ತಿತ್ತು ಸಣ್ಣ ತುಂಡು ಬ್ರೆಡನ್ನು ತಿಂದೊಡನೆ ನನ್ನ ಹೊಟ್ಟೆಯು ಅಡಿಮೇಲಾದಂತಾಗುತ್ತಿತ್ತು ಎಲ್ಲಾ ಬಗೆಯಿಂದಲೂ ಸಾಧಿಸಿದೆ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನುಪಯೋಗಿಸುವವರೆಗೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ

Mrs M ಗೆ ದೊರೆತಷ್ಟೇ ಗುಣವು ನಿಮಗೂ ಸಿಗಬಹುದು. ಆದರೆ ಕೆಲವು ಅಣೆಗಳ ಲಾಭಕ್ಕಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ. ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ. ಸೀಲು, ರಕ್ಷಾಪತ್ರ ಮತ್ತು ಬಿಲ್ಲೆಗಳ ಮೇಲೆ



ಎಂಬ ಸಹಿಯು ಮುದ್ರೆ ಬಿಲ್ಲೆ ಮತ್ತು ಚೀಟಿಗಳ ಮೇಲಿದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

**ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,**

15 ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—

ಇಲ್ಲಿಗೆ ಬರೆಯಿರಿ.

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ



## ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು'

ಓದಿರಿ ಬಿಳಿಯರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ದುರುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು —

### ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟವಾಗುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ (... ಇದರ ಪುಟ 59ನ್ನು ನೋಡಿ)

### ವನಸ್ಪತಿ ತೈಲವಲ್ಲ ಮೀನಿನ ತೈಲ' ತಿಳಿಯಿತೇ!

'ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್ ಇದರ "ಇಂಡಿಯನ್ ... ಕಮಿಟಿ' ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (... ದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ 'ವನಸ್ಪತಿ'ಯೆಂಬುದಾಗಿ ಮಾರಾಟಮಾಡುತ್ತಿರುವರೆಂದು ... ಆದರೆ,

### ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನು ... ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒವೆಷ್ಟೊ ಸಂದೇಹಕರ ... ಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ವಿಲ್ಲಿಯಮ್ಸ್ ಫ್ರೊಮ್ ವೇಸ್ಟ್" ... ಗ್ರಂಥವನ್ನೋದಿರಿ)

### ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

**ಕವೀಂದ್ರ ರವೀಂದ್ರ:**— "ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ... ಇನ್ನು ಮುಂದ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ **ಡಾ॥ ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳ ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

**ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ॥ ಅನ್ಸಾರಿಯವರು**— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ. ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

**ಗೊಡ್ರೆಜ್** ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

**ನಾದಿರ ಷಾ ಪ್ರಿಂಟರ್ ಎಂಡ್ ಕೊ,** 165/C, ಬ್ರೋಡ್ವೆ, ಮದರಾಸು.

ಹೆಡ್ ಆಫೀಸು: ಬೊಂಬಾಯಿ. ಇತರ ಶಾಖೆಗಳು— ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ.

ವಿ. ಸೂ:—ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಬಟ್ಟೆ ಒಗೆಯುವ) ಸಾಬೂನುಗಳಲ್ಲಿ ಗೋದ್ರೆಜರವರಿಗೆ ಸಂಬಂಧವಿಲ್ಲ.

# ಕಾಲಿನ ವಾತವು ಸರಕು ಮಾರುವವನನ್ನು ಬಂಧಿಸಿಟ್ಟಿತು!

## ೩೭ ವರ್ಷಗಳ ಕೆಲಸದ ನಂತರ ಅವನೀಗ ಕ್ರುಶೆನನ್ನು ಶಿಫಾರಸು ಮಾಡುತ್ತಿರುವನು

"ನನ್ನ ವ್ಯಾಪಾರ ಕ್ರಮದಲ್ಲಿ ನಾನು ಬದ್ಧನೆಂದು ನನಗೆ ಭಾಸವಾಯಿತು" ಎಂದು ಈ ಸರಕು ಮಾರುವವನು ಬರೆಯುತ್ತಾನೆ. ಅವನ ಕಾಲು ವಾತಕ್ಕಾಗಿ ಕ್ರುಶೆನನ್ನು ಪ್ರಯೋಗಿಸುವ ಮೊದಲು ಅವನು ಹೀಗೆ ಹೇಳಿದನು. ಅವನು ಈಗ ಏನು ಹೇಳುವನೆಂದು ಓದಿರಿ:—

"ಕೆಲವು ವಾರಗಳ ಹಿಂದೆ ನನ್ನ ಕಾಲಿನ ಹಿಂಗಡೆಯಿದ್ದ ವಾತದಿಂದಾಗಿ ನಡೆಯಲಾರದಷ್ಟು ಕಷ್ಟಪಟ್ಟೆ. ಭಯಂಕರ ನೋವು ಇತ್ತು. ನಾನು ಸರಕು ಮಾರುವ ಸಂಚಾರಿ. ನನ್ನ ಕೆಲಸದ ಅವಸಾನವಾಯಿತೆಂದು ಭಾವಿಸಿದೆ. ಅಷ್ಟರಲ್ಲಿ ಕ್ರುಶೆನ್ ಸೋಲ್ಟನ್ನು ನನ್ನೊಬ್ಬ ಮಿತ್ರರು ಶಿಫಾರಸು ಮಾಡಿದರು. ಅದು ನನ್ನನ್ನು ಗುಣಪಡಿಸುವುದೆಂದು ಹೇಳಿದರು. ಒಂದು ವಾರದ ತನಕ ಪ್ರತಿ ಬೆಳಿಗ್ಗೆ ನಾನು ಅದನ್ನು ತೆಗೆದುಕೊಂಡೆ. ಪ್ರತಿ ದಿನ ಬೆಳಿಗ್ಗೆ ನಾನದನ್ನು ನನ್ನ ಕಾಫಿಯಲ್ಲಿ ಸಣ್ಣ ಸಣ್ಣ ಡೋಜುಗಳನ್ನಾಗಿ ಸೇವಿಸುತ್ತಿರುವೆನು. ಅನೇಕರಿಗೆ ನಾನು ಅದನ್ನು ಶಿಫಾರಸು ಮಾಡುತ್ತಿದ್ದೇನೆ. ಕೆಲವರು ನಾನು ಈ ಸೋಲ್ಟಿನ ಏಜಂಟನೆಂದು ತಿಳಿದಿರುವರು. ಕಳೆದ ೩೭ ವರ್ಷಗಳಿಂದ ನಾನು ಸಂಚಾರಿಯಾಗಿ ಕೆಲಸಮಾಡುತ್ತಿದ್ದೇನೆ. ಈ ದೇಶದಲ್ಲಿ ನನಗೆ ಅನೇಕ ಮಿತ್ರರಿರುವರು.

W. A. D.




ಅಗ್ನಿಮಾಂದ್ಯ ವಾತಗಳೆಂದರೆ ದೇಹದ ಭಯಂಕರ ರೋಗಗಳ ಲಕ್ಷಣ. ಅಶುದ್ಧ ರಕ್ತದ ಸೂಚನೆ. ವಿಷವು ರಕ್ತದೊಡನೆ ಸೇರಿದೆಯೆಂದು ತೋರಿಸುತ್ತದೆ. ಕ್ರುಶೆನ್ ಲವಣವು ಅಂಗಾಂಗಗಳನ್ನು ಶುದ್ಧವಾಗಿಡುತ್ತದೆ. ಅಶುದ್ಧಿಯನ್ನು ನಿವಾರಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ

**ಕ್ರುಶೈನ್ ಸೋಲ್ಟ್ ದೊರೆಯುತ್ತದೆ.**







### ಎಬಿಸೀನಿಯಾ ಸಮಸ್ಯೆ.

### ಲೀಗ್ ಕೌನ್ಸಿಲನ್ನು ಕರೆದಿರುವರು.

#### ಎಬಿಸೀನಿಯಾಧಿಪತಿಯ ಧೋರಣೆ!

ಜಿನೀವಾ, ಜುಲೈ ೩೦.

ಎಬಿಸೀನಿಯಾ ಸಮಸ್ಯೆಯ ಕುರಿತಾಗಿ ಯೋಚಿಸಿಕೊಳ್ಳುವುದಕ್ಕಾಗಿ ಎವೆನೊಲವರು ಲೀಗ್ ಕೌನ್ಸಿಲನ್ನು ಆಮಂತ್ರಿಸಿರುವರು. ಗಡಿನಾಡಿನಲ್ಲಾದ ಅತ್ಯಾಚಾರಗಳನ್ನು ಶಾಂತಿಭಂಗಕ್ಕೆ ಪ್ರಾಮುಖ್ಯ ಕಾರಣವನ್ನಾಗಿ ನಿರ್ಣಯಿಸುವುದೋ ಬೇಡವೋ ಎಂದು ತರ್ಕಿಸಿಕೊಳ್ಳಲಿರುವರು.

ಪೆರಿಸ್, ಜುಲೈ ೩ೀ.

'ವಸಾಹತುಗಳ ಮಟ್ಟಿಗಾಗಲೀ, ದುಡ್ಡಿನ ಮಟ್ಟಿಗಾಗಲೀ ಇಟಲಿಗೆ ಯಾವ ಬಗೆಯ ರಿಯಾಯಿತಿಯನ್ನೂ ಕೊಡಲಾರೆವು' ಎಂದು ಎಬಿಸೀನಿಯಾದ ಸಮ್ರಾಟರವರು ಹೇಳಿರುವರು. ನಮ್ಮ ಸೈನ್ಯವನ್ನು ಏಳು ಮುಖ್ಯ ನಾಯಕರು ಪ್ರತಿಯೊಂದು ದಳದಲ್ಲಿ ನಡೆಸುವನು. ವಿಶಿಷ್ಟ ವಿಷಯಗಳಲ್ಲಿ ಅವರಿಗೆ ಸ್ವಾತಂತ್ರ್ಯವಿರುವುದಾದರೂ ಅವರೆಲ್ಲರೂ ಏಕಸ್ಥರಾಗಿ ಕೆಲಸಮಾಡುವರು. ಶಸ್ತ್ರಗಳ ಮಟ್ಟಿನ ಎಬಿಸೀನಿಯಾದ ದುರ್ಬಲತೆಯು ನಮ್ಮನ್ನು ಆಧುನಿಕ ಸಾಹಿತ್ಯೋಪಕರಣಗಳ ಪ್ರಯೋಗಕ್ಕೆಡೆಗೊಡುವುದಿಲ್ಲ. ಆದರೆ ನಮ್ಮ ಸೈನ್ಯಗಳನ್ನು ಅಜನ್ಮ ಯೋದ್ಧರಾಗಿರುವ ಸ್ಕಾಟ್ ದಳಗಳು ಮೇಲ್ವಿಚಾರ ನಡೆಸಿ ಸಂಘಟಿಸುವವೆಂಬ ಧೈರ್ಯವು ನಮಗಿದೆ. ಆದರೆ ಸಾಕಷ್ಟು ಮದ್ದು ಗುಂಡುಗಳಿರದಿರುವುದೇ ನಮ್ಮನ್ನು ತಿನ್ನುವ ಒಂದು ಪ್ರಶ್ನೆ.

### ಇಂಗ್ಲೆಂಡಿನಲ್ಲಿ ಶಿಕ್ಷಣ.

ಇಂಗ್ಲೆಂಡು ದೇಶದಲ್ಲಿ ಸುಪ್ರಸಿದ್ಧವಾದ ಪಬ್ಲಿಕ್ ಸ್ಕೂಲ್‌ಗಳ ಮಾದರಿಯನ್ನು ಅನುಸರಿಸಿ ಈ ದೇಶದ ಡೆಹರಾಡೂನ್ ನಗರದಲ್ಲಿ ಒಂದು ಪಬ್ಲಿಕ್ ಸ್ಕೂಲ್ ಸ್ಥಾಪನೆಯಾಗಿದೆ. ಈ ಸ್ಕೂಲನ್ನು ಈ ದೇಶೀಯರಲ್ಲಿ ಜನರಂಜನೆ ಸುಪ್ರಸಿದ್ಧಿ ಮಾಡಲು ಹೆಡ್ಮಾಸ್ತರಾದ ಮಿ॥ ಫೂಟ್ ಎಂಬವರು ಇಂಡಿಯಾದೇಶದ ಪ್ರೋಲಿ ಸಂಚಾರ ಹೊರಟಿರುವರು. ಬೊಂಬಾಯಿ, ಪೂನಾ, ಮದ್ರಾಸ್, ನಾಗಪುರ ಪ್ರಾಂತಗಳನ್ನು ಸುತ್ತಿಕೊಂಡು ಬೆಂಗಳೂರಿಗೂ ಇದೇ ತಿಂಗಳ ೩೧ರಲ್ಲಿ ಬಂದಿದ್ದರು. ಇಂಗ್ಲೆಂಡಿನ ದೇಶಸೇವಕರೆಂದು ಪ್ರಸಿದ್ಧಿ ಪಡೆದ ಪುರುಷರೆಲ್ಲರೂ ಪಬ್ಲಿಕ್ ಸ್ಕೂಲುಗಳಲ್ಲಿ ತರಬೇತಿಯಾಗುತ್ತಿದ್ದರು. ಅಲ್ಲಿನ ಶಿಕ್ಷಣ ಕ್ರಮವೇ ಇಂಡಿಯಾ ದೇಶದ ಪಬ್ಲಿಕ್ ಸ್ಕೂಲಿನಲ್ಲಿಯೂ ಜ್ಯಾರಿಯಲ್ಲಿ ಬರುವುದಲ್ಲದೆ, ಇಂಥ ಸ್ಕೂಲುಗಳು ದೇಶದ ಮೇಲೆ ಅಲ್ಲಲ್ಲಿ ಸ್ಥಾಪನೆಯಾಗುವುದು ಅಗತ್ಯವೆಂದು ಕಂಡುಬಂದಿದೆ.

---

ಮಧ್ಯ ಇಂಡಿಯಾ ಪ್ರಾಂತದಲ್ಲಿ ಚಾಂದಾ ಡಿಸ್ಟ್ರಿಕ್ಟಿಗೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಮಳೆಬೆಳೆಗಳು ಏಕಪ್ರಕಾರವಾಗಿ ಕೆಲವು ವರ್ಷಗಳಿಂದ ಸಿಗದೆ ಇದ್ದುದರಿಂದ, ಅದ್ಯ ಮತ್ತು ತಿನ್ನು ಎಂಬಿಬ್ಬರು ಹಳ್ಳಿಯವರು ಮೂಢಭಕ್ತಿಯಿಂದ ಅಲ್ಲಿನ ಗ್ರಾಮ ದೇವತೆಗೆ ನರಬಲಿಯನ್ನು ಕೊಟ್ಟರು. ಇವರು ಭೀಮ ಎಂಬವನನ್ನು ಹಿಡಿದು ದೇವತೆಯ ಎದುರಿನಲ್ಲಿ ಅಗ್ನಿಕುಂಡಕ್ಕೆ ನೂಕಿದರು. ಭೀಮನು ತಪ್ಪಿಸಿಕೊಂಡು ಹೊರಬಿದ್ದನು. ಅದ್ಯ ಅವನನ್ನು ಪುನಃ ಹಿಡಿದು, ಕತ್ತಿಗೆಯನ್ನು ಮುರಿದು ಬೆಂಕಿಯಲ್ಲಿ ಹಾಕಿ ಸುಟ್ಟುಬಿಟ್ಟನು. ಈ ಕ್ರೂರ ಕೃತ್ಯಕ್ಕಾಗಿ ಸೆಷನ್ಸ್ ಜಡ್ಜರು ಇವರಿಬ್ಬರಿಗೂ ಮರಣದಂಡನೆಯನ್ನು ವಿಧಿಸಿ, ಇವರಿಗೆ ಸಹಾಯಕರಾಗಿದ್ದ ಇನ್ನೂ ಮೂರು ಮಂದಿಗೆ ಜೀವಾವಧಿ ದ್ವೀಪಾಂತರವಾಸ ಶಿಕ್ಷೆಯನ್ನು ಕೊಟ್ಟಿರುವರು.

---

ನೀಲಗಿರಿಯಲ್ಲಿ ನೀಲಾಂಬೂರ್ ರಾಜರಿಗೆ ಸೇರಿದ ನೀಲಾಂಬೂರ್ ಕಣಿವೆಯಲ್ಲಿ ಭಂಗಾರವು ದೊರೆಯುತ್ತದೆಂದು ಅಲ್ಲಿ ಗಣಿ ಕೆಲಸಗಳನ್ನು ನಡೆಸಲು ಏರ್ಪಾಡು ನಡೆಯುತ್ತಿರುವುದು. ಸುಮಾರು ೬೦೦ ಚದರ ಮೈಲುಗಳ ವಿಸ್ತಾರವಾದ ಪ್ರಾಂತದಲ್ಲಿ ಚಿನ್ನ ಸಿಗುವುದಾಗಿಯೂ, ಅದರಲ್ಲಿ ೫೦೦ ಚದರ ಮೈಲುಗಳಷ್ಟು ಭೂಮಿಯಲ್ಲಿ ಸಿಗುವ ಅದುರಿನಿಂದ ಲಾಭಕರವಾಗಿ ಗಣಿ ಕೆಲಸ ನಡೆಸಬಹುದೆಂದೂ ಶಾಸ್ತ್ರಜ್ಞರು ಊಹಿಸುತ್ತಾರೆ. ನೀಲಾಂಬೂರ್ ನದಿಯ ಮರಳಿನಲ್ಲಿ ೬೦ ರೂಪಾಯಿ ಖರ್ಚಿನಿಂದ ೭೫ ರೂಪಾಯಿ ಚಿನ್ನವನ್ನು ಪಡೆದವರೂ, ಎರಡು ಮಂದಿ ಕೂಲಿಯವರ ಸಹಾಯದಿಂದ ೨೦೦೦ ಭಂಗಾರವನ್ನು ಸಂಪಾದಿಸಿದವರೂ, ಅಲ್ಲಿ ಸಿಗುವ ಭಂಗಾರಕ್ಕೆ ಸಾಕ್ಷಿಯಾಗಿದ್ದಾರೆ.

### ಎಬಿಸೀನಿಯದ ಭಾರತೀಯರೂ ಬ್ರಿಟಿಷ ಪ್ರಜೆಗಳೂ ರಕ್ಷಿತರಾಗಲಿ!

ಸಿಮ್ಲಾ, ಜುಲೈ ೨೯.

ಬ್ರಿಟಿಷ ಸರಕಾರವು ಇಂಡಿಯಾ ಸರಕಾರಕ್ಕೆ ವರ್ತಮಾನ ಮುಟ್ಟಿಸಿ ಎಬಿಸೀನಿಯಾದಲ್ಲಿ ಯುದ್ಧವು ನಡೆದರೆ ಭಾರತೀಯರಿಗಾಗಲೀ, ಬ್ರಿಟಿಷ ಪ್ರಜೆಗಳಿಗಾಗಲೀ ಹಾನಿಯಾಗದಂತೆ, ಬ್ರಿಟಿಷ ಸರಕಾರವು ಎಬಿಸೀನಿಯಾದ ಸಮ್ರಾಟರಿಗೆ ತಿಳಿಸಿತೆಂದೂ ಅದಕ್ಕುತ್ತರವಾಗಿ ಎಬಿಸೀನಿಯಾ ಚಕ್ರವರ್ತಿಗಳು ತಾನು ಆ ಬಗ್ಗೆ ಕೂಡಿದಷ್ಟು ಸಾಧನೆ ಮಾಡುವೆನೆಂದು ತಿಳಿಸಿರುವರೆಂದೂ ತಿಳಿದುಬಂದಿದೆ.

# WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

**C. H SHAMBULINGAPPA,**
The South Indian General Assurance Co. Ltd.
1, Purniah Chatram Road, Balepet,
BANGALORE CITY.

ಡಾಕ್ಟರ ವಾಮನ ಗೋಪಾಳರವರ




ಏಶಿಯಾಟಿಕ್
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು.
ಅಶ್ಯಕ್ತ ಮಾ ಟಾನಿಕ್.

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨.
ಸ್ಟಾಕಿಸ್ಟ ಶಾ ಕಂಪನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

## ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

**ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.**



ಮೂರು ಪ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ಇವು ಹೊಸ ಡಿಸೈನಿನಲ್ಲಿ ಬಂಗಾರದ್ಹಾಗೆ ಹೊಳೆಯುತ್ತಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೀ ಟೈಂ ಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಅತಿ ಬೆಳ್ಳಿಯ ಫಂಟಿಂಗ್ ಟಾರ್ಚ್ ಲೈಟ್ ದೀಪ ಮತ್ತು ಬಂಗಾರದ ಪ್ಲೇಟ್ ಮಾಡಿದ್ದ ಹಾಕಿದ ವಸ್ತ್ರಕಾಜ್ಯ ಪೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ನಿಮಗೆ ಇಷ್ಟವಿಲ್ಲ ದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

**ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,**
ಪೋಸ್ಟ್ ಬಾಕ್ಸ್ ನಂಬ್ರ ೭೪೧೭ 8 A ಕಲ್ಕತ್ತಾ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವ

## ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂಧವಾಗುವುದು ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಜಿ. ಎ ವೈದ್ಯ, ಎಲ್ ಸಿ ಪಿ ಎಸ್, ಕೊಳವಾಪೂರಿನ ಅವರ ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ದಪ್ಪಿ ಕಿಮ್ಮತ್ತು ರೂ ೪–೦–೦ ವಿ ಪಿ, ಆಠ ಆ.

ವಿಳಾಸ—ಸಂಜೀವಿನೀ ಔಷಧಾಲಯ ನಂ ೬ ಪೊ ವಿಂಚಿ, S M C

# NEW ARRIVALS.

## Medicines.

Dr Schuessler's Twelve Tissue Remedies 5 gr. bot. As. 4/-
Homœopathy Medicines 5 gr. bot As 5/—
Sugar of Milk Dr Schwabe's original bot 1 lb Rs. 2/-
Haarlem Oil-a world renowned remedy As 8/-per phial
Dr Hacle's New Curative Earth–Radium Cure Rs 4/-per lb

Dr Schwabe's other special remedies are always in stock

*Please call us for your requirements*

Kanarese Book a Family Guide to Biochemistry Re 1 -
,, Domestic Homoeopathy Re 1-1 -

If you own these two Books you will be able to pick up treatment and administer Tissue & Homœopathy Medicines successfully without consulting others

## German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2 6

Delightful in aroma, charming in appearance. Please try

## Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc. and stock—

Pipes and pipe fittings at cheap prices Coir Mats and Mattings

**Steadler Pencils and Stationeries**

We are the recognised agents for STEADLER'S all stationeries and shall be glad to serve you.

## Olympia Typwriter.

An up-to-date Machine in Standard and portable sizes.

*For Futher particulars please write to—*

**Basel Mission Book & Tract Depository,**
Mangalore, S. K. or Hubli S. M.

# The Popular Insurance Company, Ltd.

**Head Office:—MANGALORE, S India**

**The Pioneer Life Office of the West Coast.**

## A FEW PRESS OPINIONS.

Established as recently as 1929, the Popular Insurance Co Ltd, has already made considerable progress having at the end of 1934 a total business of over Rs 10 lakhs in force with a premium income of over Rs 52,000. The Life Fund of the Company stood at the same date at over Rs. 50,000. The expenses of the office are moderate and mortality experience extremely favourable. During the year 1934, the Company completed business of over Rs. 5,40,000 with a premium income of over Rs 26,000 The first quinquennial valuation of the Company is in progress and the report of the Actuary expected to be placed before the Directors of the Company before the end of May 1935 From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position.

*Insurance & Finance Review, Calcutta.*

ದಿ ಪೊಪ್ಯುಲರ್ ಇನ್ಶ್ಯುರೆನ್ಸ್ ಕಂಪೆನಿ ಲಿಮಿಟೆಡ್—ಮಂಗಳೂರು—ಮೇಲಿನ ವಿಮಾ ಕಂಪೆನಿಯವರು ಕಳುಹಿಸಿರುವ ವರದಿಯನ್ನೂ ಲೆಕ್ಕ ಪತ್ರ ವಿವರದ ಪಟ್ಟಿಯನ್ನೂ ನೂತನವಾದ ಪ್ರಾಸ್ಪೆಕ್ಟಸನ್ನೂ ಆತ್ಮಾದರದಿಂದ ಸ್ವೀಕರಿಸುತ್ತೇವೆ. ಸ್ಥಾಪಿತವಾಗಿ ಐದು ವರ್ಷಗಳೊಳಗಾಗಿಯೇ ಈ ಕಂಪೆನಿಯು ಬಹಳ ವಹಿವಾಟುಗಳನ್ನು ನಡೆಸಿರುವುದು ಸಂತೋಷಕರವಾದ ಸಂಗತಿ ವಿಮಾ ನಿಧಿಯು ಏರುತ್ತಾ ಸಾಗಿದಂತೆಲ್ಲಾ ಖರ್ಚಿನ ಆದರಿಂದಲೇ ಕಂಪೆನಿಯು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆಯೆಂಬುದು ಗೊತ್ತಾಗುವುದು ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿತವಾದುದು ಇದೊಂದೇ ವಿಮಾ ಕಂಪೆನಿ ಇಷ್ಟು ದಕ್ಷತೆಯಿಂದ ನಡೆಸಿಕೊಂಡು ಬರುವ ಕಂಪೆನಿಯ ಸಂಚಾಲಕರಿಗೆ ಧನ್ಯವಾದಗಳನ್ನರ್ಪಿಸಬೇಕು ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿ ಹೊಂದಿ ಭರತಖಂಡದಲ್ಲಿ ಒಂದು ಪ್ರಧಾನ ಸ್ಥಾನವನ್ನು ಹೊಂದಿ ನಮ್ಮ ದೇಶದಿಂದ ಪ್ರಕೃತ ವಿದೇಶಕ್ಕೆ ಹೋಗತಕ್ಕ ನಿಧಿಯನ್ನು ಇಲ್ಲಿ ನಿಲ್ಲಿಸುವರೆ ಶಕ್ತಿಯುಳ್ಳದಾಗಲೆಂದು ಹಾರೈಕೆ.

ರಾಷ್ಟ್ರಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿಯು ವರ್ಷ ವರ್ಷ ಊರ್ಜಿತಸ್ಥಿತಿಗೆ ಬರುತ್ತಿರುವುದು ಶ್ಲಾಘನೀಯವಾದ ವಿಚಾರ ಈ ಕಂಪೆನಿಯು ಸ್ಥಾಪಿತವಾದುದು ಐದು ವರ್ಷಗಳ ಹಿಂದೆ; ಅಂದಿನಿಂದ ಜೀವವಿಮೆ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹೆಸರುವಾಸಿ ಪಡೆಯುತ್ತಲೇ ಇದೆ × × × × × ಈ ಕಂಪೆನಿಯ ಐದನೆ ವಾರ್ಷಿಕ ವರದಿಯು ತೃಪ್ತಿಕರವಾಗಿದೆ. ಕರ್ಣಾಟಕದ ಈ ಕಂಪೆನಿಯು ವರ್ಷ ವರ್ಷ ಅಭಿವೃದ್ಧಿ ಹೊಂದಲೆಂಬುದೇ ನಮ್ಮ ಹಾರೈಕೆ

'ಪ್ರಜಾಮತ,' ಮದರಾಸು

**Wanted influential Agents in unrepresented areas on liberal terms.**

# ನಡೆದ ಕತೆಗಳು.

## True Stories

ಓದಿ ಮುಗಿಸುವ ಸಮಯ—ಮೂರೇ ನಿಮಿಷಗಳು

*All Rights Reserved.*

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದೇ 'ನಡೆದ ಕತೆಗಳು'—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು, ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಪಾತ್ರಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.

೧೩.

### ಅವರ ಗುಟ್ಟು.

ಕಂಕನಾಡಿಯ ಸೀನಪ್ಪನವರೆಂದರೆ ಮಂಗಳೂರಲ್ಲಿ ಹೆಚ್ಚಿನ ಹೆಸರುಳ್ಳವರು "ಮಿಸ್ಟರ್ ಹಂಪನ್‌ಕಟ್ಟೆ ಸೀನಪ್ಪ"—ಎಂದು ವಿಳಾಸ ಬರೆದು, ಅಮೆರಿಕಾದ ಪಶ್ಚಿಮ ಪ್ರಾಂತ್ಯದ ಪಟ್ಟಣವಿಯಲ್ಲಿ ಕೂಡಾ ಒಂದು ಕಾರ್ಡನ್ನು ಟಪ್ಪಾಲಾಫೀಸಿಗೆ ಹಾಕಿದರೆ, ಅದು ನೆಟ್ಟಗೆ, ಮಂಗಳೂರಿಗೆ ಬರುವುದು 'ಮಂಗಳೂರು' ಎಂದು ಟಪ್ಪಾಲಾಫೀಸನ್ನು ಕೂಡಾ ಕಾರ್ಡಿನಲ್ಲಿ ಕಾಣಿಸಬೇಕೆಂದಿಲ್ಲ (ಅಗತ್ಯವಿದ್ದರೆ ಅಂಚೆಯ ಆಫೀಸಿನ ಕರಣೀಕರೇ ಅದನ್ನು ಬರೆಯುವರು.) ಅಷ್ಟು ಹೆಸರುಳ್ಳವರು ನಮ್ಮ ಸೀನಪ್ಪನವರು

ತನ್ನ ಯೌವನ ಪ್ರಾಯದಲ್ಲಿ ಸೀನಪ್ಪನವರು ಹೇಗೋ ಹೇಗೋ ಮಾಡಿ ಸ್ವಲ್ಪ ಹಣ ಸಂಚಯಮಾಡಿ ಪೋರ್ನೆಲ್ ಬಾಯಿಯವರ ಆಸ್ತಿಯಲ್ಲೊಂದು ಸಣ್ಣ ತುಂಡನ್ನು ಕ್ರಯಕ್ಕೆ ಪಡೆದು ಒಂದು ದೊಡ್ಡ ಮನೆಗಟ್ಟಿದರು ಆದರೆ ಅದನ್ನು ಹೆಚ್ಚು ಸಮಯ ಇಟ್ಟುಕೊಳ್ಳುವ ಭಾಗ್ಯವು ಅವರಿಗೆ ದೊರಕದೆ ಹೋಯಿತು ಮುಂಬಾಯಿಯ ಹವೇರೊ ಟ್ರೇಡಿಂಗ್ ಕಂಪೆನಿಯ ರಮಾನಾಥನೆಂಬವನಿಗೆ ತನ್ನ ಮಗಳನ್ನು ಕೊಟ್ಟು ಮಾಡಿದ ವಿವಾಹದ ಭರದಲ್ಲಿ ಆ ಮನೆಯೂ ಹಿತ್ತಲೂ ಪೋರ್ನೆಲ್‌ಬಾಯಿಗೇ ಅಡವು ಹಾಕಲ್ಪಟ್ಟು, ನಾಲ್ಕು ವರ್ಷಗಳಲ್ಲಿ ಮುಳುಗಿಹೋದುವು

ಸೀನಪ್ಪನವರು ಯಾವ ಕೆಲಸವನ್ನೇ ಮಾಡಲಿ,—ಹೊರಗಿನ ಎರಡು ಜನರಿಗಾದರೂ ತಿಳಿಸದೆ ಮಾಡಲಾರರು ಯಾವ ಶುಭಾಶುಭಕೆಲಸವನ್ನೂ ಅವರು ಮಾಡಲಿ,—ಎಲ್ಲರನ್ನೂ ಸಂತೃಪ್ತಿಗೊಳಿಸುವ ವಿಷಯದಲ್ಲಿ ತನ್ನ ಪೂರ್ಣ ಜ್ಞಾನವನ್ನು ವೆಚ್ಚಮಾಡದಿರುತ್ತಿದ್ದಿಲ್ಲ

ಕೋಮಲವಿಲಾಸದಲ್ಲಿ ಅವರೂ ಅವರ ಸಂಗಾತಿಯೊಬ್ಬರೂ ಕಾಫಿ ಕುಡಿಯುತ್ತಾರೆಂದು ಭಾವಿಸಿಕೊಳ್ಳಿ ಅಷ್ಟರಲ್ಲಿ ಅಪರಿಚಿತ ವ್ಯಕ್ತಿಯೊಂದು ಅವರ ಎದುರಿನ ಬೆಂಚಿನ ಮೇಲೆ ಕುಳಿತುಕೊಂಡಿತೆಂದೂ ಊಹಿಸಿರಿ ಸೀನಪ್ಪನವರು ತನ್ನ ಸಂಗಾತಿಯೊಡನೆ ಗಟ್ಟಿಯಾಗಿ—ವಿಲಾಸದ ಮಾಲಿಗೆಯಡಿಯಲ್ಲಿರುವ ಮನೆಜರರಿಗೂ—ಕೇಳಿಸುವಂತೆ ನುಡಿಯುವುದನ್ನು ಕಂಡು ಆ ಅಪರಿಚಿತ ವ್ಯಕ್ತಿಯು—"ಇವನಾರು ಡಂಭ ಮೂರ್ತಿ" ಎಂದು ತನ್ನೊಳಗೆ ತಾನು ನಕ್ಕರೆ, ಅದನ್ನು ಕಂಡ ಸೀನಪ್ಪನವರು ಆ ಅಪರಿಚಿತನನ್ನು ಒಡನೆ ಸಂಬೋಧಿಸಿ, "ಏನು ಸ್ವಾಮಿ, ನಾನು ಹೇಳಿದುದು ಸರಿಯಷ್ಟೆ"—ಎಂದು ತನ್ನ ಭಾಷಣದಲ್ಲಿ ಆ ವ್ಯಕ್ತಿಯನ್ನೂ ಸೇರಿಸಿಕೊಂಡು, ಕೆಳಗಿಳಿಯುವಾಗ, ತನ್ನ ಜೇಬಿನೊಳಗಣ ದೊಡ್ಡ ಪೊಕೇಟನ್ನು ತೆಗೆದು, ಕರೆನ್ಸಿ ನೋಟನ್ನು ಈಚೆಗೆಳೆದು, ಆ ಅಪರಿಚಿತ ವ್ಯಕ್ತಿಯ ಬಿಲ್ಲಿನ ದುಡ್ಡನ್ನೂ ಒತ್ತಾಯದಿಂದ ಕೊಡುವರು ಇಂತಹ ವಿಚಿತ್ರ ಸ್ವಭಾವ ಸೀನಪ್ಪನವರದು

ಮುಂದೇನಾಯಿತು ಗೊತ್ತೇ?—ದೂರದೃಷ್ಟಿರಹಿತರಾದ ಸೀನಪ್ಪನವರು ದುಂದುವೆಚ್ಚಮಾಡಿದ ಪರಿಣಾಮವಾಗಿ ಅವರ ಮಧ್ಯವಯಸ್ಸಿನಲ್ಲಿ ಅವರು ತೀರ ಬಡವರಾದರು. ಅವರ ಹೆಂಡತಿ ನಾರಾಯಣಿಯ ನಗಗಳೆಲ್ಲಾ ಕೊಲಿದಾರ ಶೇಟರ ಕೋಶಗಳನ್ನು ಸೇರಿದುವು ಕ್ರಮೇಣ, ಸೀನಪ್ಪನವರು ಕೆಲಸಕ್ಕಿದ್ದ ಕಂಪೆನಿಯ ಮೆನೆಜರನು ಕಾಲವಶನಾಗಿ ಆ ಕಂಪೆನಿಯೇ ದಿವಾಳಿಯಾಯಿತು,

ಪ್ರಾಯವು ಇಷ್ಟು ದಾಟಿದ ಮೇಲೆ ಅವರೇನು ಮಾಡಿಯಾರು? ಸರಾಸರಿ ದಿನಕ್ಕೆರಡು ರೂಪಾಯಿಗಳ ಸಂಪಾದನೆಯನ್ನು ಮಾಡಿ ಅವುಗಳ ೩ನೇ ೧ ಅಂಶವನ್ನು ಮಾತ್ರ ಮನೆಗೆ ತಂದು ಮಿಕ್ಕಾಂಶವನ್ನು ಸ್ವಸುಖೋಪಭೋಗಗಳಿಗಾಗಿ ವ್ಯಯಮಾಡಿ, ದಿನಗಳೆದ ಅವರಿಗೆ ಸಣ್ಣ ಕೆಲಸಗಳಿಗೆ ಕೈಯಿಕ್ಕಲು ಇಂದು ಮನಸ್ಸಾಗುವುದೇ?—ಒಂದು ಕಾಲದಲ್ಲಿ ತನ್ನ ದೊಡ್ಡ ಪೊಕೆಟನ್ನು ಎಡಗೈಯಲ್ಲಿ ಬಿಡಿಸಿ ಅದರೊಳಗಣ ಹಣವನ್ನು ಠಣ ಠಣ ಮಾಡಿ ಬಡವರ ಹೊಟ್ಟೆಯುರಿಯೆಬ್ಬಿಸುತ್ತಿದ್ದ ಅವರಿಗೆ ಈಗ ತನ್ನ ಗುಟ್ಟನ್ನು ಬಿಡಲು ಸಾಧ್ಯವಾಗುವುದೇ?—ಹೀಗೆಯೇ ಗುಟ್ಟಿನ ಕಷ್ಟದಿಂದ ಅವರ ಸಂಸಾರವು ನಡೆಯುತ್ತಿತ್ತು

ದುರ್ದೈವವಶಾತ್, ಅವರ ಪತ್ನಿ ನಾರಾಯಣಿಯು ಹೆಣ್ಣು ಮಗುವೊಂದನ್ನು ಹೆತ್ತು ಆಗಲೇ ಕಾಲಾಧೀನಳಾದಳು ಕೈಯಲ್ಲಿ ಕಾಸಿಲ್ಲದ ಈ ದುರ್ದಿನಗಳಲ್ಲಿ ಇಂತಹ ಆಘಾತಕ್ಕೆ ಸಿದ್ಧರಿರುವುದಾದರೂ ಹೇಗೆ? ಆದರೂ ಅವರು ಧೃತಿಗೆಡಲಿಲ್ಲ. ಅವಳು ಪ್ರಾಣಬಿಟ್ಟೊಡನೆ ಅವರ ಪರಮಮಿತ್ರ ಗುತ್ತೇದಾರ ಗೋವಿಂದರವರತ್ತ ಓಡಿದರು 'ನನ್ನ ಹೆಂಡತಿ ತೀರಿಕೊಂಡಳು ಶವತೆಗೆಸಲು ದುಡ್ಡಿಲ್ಲ ೫೦ ರೂಪಾಯಿ ಸಾಲ ಕೊಡಿ' ಎಂದು ಕೇಳಿದರು ಗುತ್ತೇದಾರರಾಗಿದ್ದರೂ ಗೋವಿಂದರವರು ಸ್ವಲ್ಪ ತಿಳಿವಿದ್ದವರು "ಯಾಕಯ್ಯಾ, ಐವತ್ತು? ಹತ್ತು ರೂಪಾಯಿಗಳಿದ್ದರೆ ಸಾಲದೇ? ಸುಮ್ಮ ಸುಮ್ಮಗೆ ದರ್ಬಾರಿಗಾಗಿ ದುಂದ್ವ್ಯಯ ಮಾಡಬೇಡಿ"ಎಂದು ಬೋಧಿಸಿದರು "ಛೆ ಛೆ ಹತ್ತು ಜಾತಿಗೃಹಸ್ಥರು ಮನೆಯ ಬಾಗಲಿಗೆ ಬರುವ ದಿನ,—ನನ್ನ ಪ್ರೀತಿಯ ಹೆಂಡತಿ ಇಂತಹ ವೇಳೆಯಲ್ಲಿ ದುಡ್ಡಿನಾಶೆ ಮಾಡುವುದೇ?" ಎಂದು ಉತ್ತರವಿತ್ತು, ಗೋವಿಂದರವರನ್ನು ಹೇಗಾದರೂ ನಂಬಿಸಿ ಸೀನಪ್ಪನವರು ಐವತ್ತು ರೂಪಾಯಿಗಳನ್ನು ತಂದರು ಇಪ್ಪತ್ತೈದು ರೂಪಾಯಿಗಳನ್ನು ಕೊಟ್ಟು ಒಂದು ಶವದ ಪೆಟ್ಟಿಗೆಯನ್ನು ಮಾಡಿಸಿದರು. ಅದಕ್ಕೆ ವೆಲ್‌ವೆಟ್ ವಸ್ತ್ರವೇನು? ಹೂ, ಗಂಧ, ಊದುಬತ್ತಿಗಳೇನು?—ವಿಜೃಂಭಣೆಯಿಂದಲೇ ಶವಸಂಸ್ಕಾರವಾಯಿತು. ಆ ರಾತ್ರೆ ಮನಸ್ಸಿನಲ್ಲಿ ಅವರು ಲೆಕ್ಕ ತೆಗೆದಾಗ, ಶವ ಹೊತ್ತ ಒಂಭತ್ತು ಮಂದಿಗೆ ಶರಾಯಿ ಕೆಗಿಡ ಕೊಟ್ಟ ಹನ್ನೊಂದು ರೂಪಾಯಿಗಳ ಮೇಲು ಬಾಕಿಯೇ ಉಳಿಯಿತು!

ಇದಾಗಿ ಹದಿನೆಂಟು ದಿನಗಳು ಕಳೆಯುತ್ತಲೇ ತಾಯಿಯನ್ನು ನುಂಗಿದ ಆ ಮಗುವೂ ಅವಳನ್ನು ಹುಡುಕುತ್ತ ಹೋಯಿತು ಪಾಪ ಸೀನಪ್ಪನವರು ಏನು ಮಾಡಿಯಾರು!

ಸ್ವಲ್ಪ ಯೋಚಿಸಿಕೊಂಡರು ನೆಟ್ಟಗೆ ಕಂಟ್ರಾಕ್ಟರ್ ಚೂಡಪ್ಪನವರಲ್ಲಿಗೆ ಹೋದರು ಐವತ್ತು ರೂಪಾಯಿ ಸಾಲ ಬೇಡಿದರು ಕಂಟ್ರಾಕ್ಟರರ ಉಪದೇಶವಾಯಿತಾದರೂ, ಸೀನಪ್ಪನವರು—"ಜನರೇನೆಂದಾರು? ಇಷ್ಟು ಸಣ್ಣ ಮಗುವಿನ ಶವತೆಗೆಯಲು ಇವನಿಗೆ ಗತಿಯಿಲ್ಲವೆಂದು ಹೇಳಲಾರರೇ?" ಎಂದು ತರ್ಕಿಸಿಕೊಂಡರು. "ಹದಿನೆಂಟು ದಿನಗಳ ಮಗುವಿನ ಶವತೆಗೆಯಲು ಇವನಿಗೆ ಐವತ್ತು ರೂಪಾಯಿಗಳು ಬೇಕಂತೆ! ಒಂದು ರೂಪಾಯಿ ವೆಚ್ಚ ಮಾಡಿ ಸಣ್ಣ ಪೆಟ್ಟಿಗೆಯೊಂದನ್ನು ತಯಾರಿಸಿ ಒಂದು ಚೆಂಡು ಹೂವನ್ನು ಶವದ ಮೈಮೇಲೆ ಹಾಕುವ ಬದಲು, ಇವನು ಐವತ್ತು ರೂಪಾಯಿಗಳನ್ನು ವೆಚ್ಚಮಾಡುವುದರಲ್ಲಿರುವನು ಮೂಢ! ತೋಟ ಶೃಂಗಾರ ಒಳಗೆ ಗೋಳಿಸೊಪ್ಪು" ಎಂದು ಚೂಡಪ್ಪನವರು ಮನದಲ್ಲೇ ಆಲೋಚಿಸಿಕೊಂಡರು ಬಡ್ಡಿ ಸಿಗುತ್ತದೆಂಬ ಕಾರಣದಿಂದ ಸಾಲವನ್ನು ಕೊಟ್ಟರು

ಶವದ ಅಂತ್ಯವಾಯಿತು ಈ ಸಲವೂ ಸೀನಪ್ಪನವರಿಗೆ ಎಂಟು ರೂಪಾಯಿ ಸಾಲ! ಒಟ್ಟು ನೂರ ಇಪ್ಪತ್ತೈದು ರೂಪಾಯಿ ಸಾಲವಾದಂತಾಯಿತು

ಪಾಪ! ಎರಡು ಸಣ್ಣ ಸಣ್ಣ ಮಕ್ಕಳು ಅನ್ನ ಅನ್ನವೆಂದು ಮನೆಯೊಳಗೆ ಅಳುತ್ತಿವೆ ಡಾಂಭಿಕತನದ ಬಲಿಗೆ ಬಿದ್ದ ಸೀನಪ್ಪನವರು ಸಾಲ ತೀರಿಸುವ ಉಪಾಯವನ್ನು ಹುಡುಕುತ್ತಿದ್ದಾರೆ

ಮ. ಜಾ.

# ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು]

(ಕಾಲು ಮುರಿದು ಸುಮ್ಮಗೆ ಕುಳಿತುಕೊಂಡ ಮಗ ಬಸವನನ್ನು ಕಂಡು—)

ತಂದೆ—ಮಗು ಬಸವಾ ಕಾಲಿಗೇನಾಯ್ತೋ?

ಬಸವ.—(ಭಯದಿಂದ) ಜಗಲಿ ಹಾರಿ ಬಿದ್ದುಬಿಟ್ಟೆ ಅಪ್ಪಾ

ತಂದೆ—ಎಲೋ ಕತ್ತೆ, ಏತಕ್ಕೋ ಜಗಲಿ ಹಾರಿದಿ?

ಬಸವ—ನಿನ್ನೆ ನಮ್ಮ ಶಾಲೆಯಲ್ಲಿ ಮೇಸ್ಟ್ರು ಜಗಲಿ ಹಾರಿ ಗಗನ ಹಾರಬೇಕೆಂದು ಹೇಳಿದ್ರು ಅಪ್ಪಾ

\+ \+ \+ \+

| ಕಾಳುಮೆಣಸು ಖ. ಗಿ ಕ್ಕೆ | 100— 0 | 110— 0 |
| ಮೆಂತ್ಯ ಬೀಜ ಮುಡಿ ಗಿ ಕ್ಕೆ | 28— 0 | 32— 0 |
| ಗೇರುಬೀಜ ಮೂ. ಗಿ ಕ್ಕೆ | 4— 4 | 4 — 6 |
| ಕಬ್ಬಿಣ ಖಂಡಿ ಗಿ ಕ್ಕೆ | 38— 0 | 30— 8 |
| ಶಾಂಡ್ಯಾಕಗಳು ಮೂ. ಗಿ ಕ್ಕೆ | 9— 8 | 9— 8 |
| ಶಾಂಡ್ಯಾಪಾತ್ರಗಳು ಮೂ ಗಿ ಕ್ಕೆ | 11— 0 | 12— 0 |
| ಹುಣಿಸೆಹುಳಿ ಸೇರು ಗಿ ಕ್ಕೆ | 18— 0 | 20— 0 |
| ಹತ್ತಿ ಶಗಡು ಮೂ. ಗಿ ಕ್ಕೆ | 8— 12 | 9— 0 |
| ಹವನು ಗಿ ಕ್ಕೆ | 22— 6 | 22— 8 |
| ಹುಣಿಸೆ ಹುಳಿ ಖಂಡಿ ಗಿ ಕ್ಕೆ | 20— 0 | 25— 8 |
| ನೇಟಿವ್ ಕಾಫಿ ಖಂಡಿ ಗಿ ಕ್ಕೆ | 170— 0 | 180— 0 |
| ಪ್ಲಾಂಟೇಶನ್ ಕಾಫಿ ಖಂಡಿ ಗಿ ಕ್ಕೆ | 220— 0 | 230— 0 |
| ಮಂಡಿಕೇರಿ ಏಲಕ್ಕಿ | 23— 0 | 26— 0 |
| ಸಕಲೇಶಪುರ ಏಲಕ್ಕಿ | 28— 0 | 38 - 0 |


LOOK SHARP! LOOK AHEAD

## Murdeshwar's Banking Institute,

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

**Ladies are also admitted.**

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

*For further particulars apply to* —

D. R. Murdeshwar,

Dip. Econ, F. R. Econ, S. (Lond.)

Principal

Ganapathy High School Street,

Mangalore.

## Comfortable like an Aeroplane

Use our swadeshi Mosquitonet for health, Comfort and sound sleep, as if you are in an Aeroplane. Sample cutting free. More convenient if some advance sent with order.

| L | B | H | Price. | Best. |
|---|---|---|---|---|
| 6 Fit | 3½ Fit. | 3½ Fit | Rs 1/12 | 2/8 |
| 6 „ | 4 „ | 4 „ | „ 2/4 | 3/- |
| 6½ „ | 4½ „ | 4½ „ | „ 2/8 | 3/6 |
| 7 „ | 5 „ | 5 „ | „ 3/2 | 4/10 |
| 7½ „ | 6 „ | 6 „ | „ 4/4 | 5/12 |

G. M. Sharma, Post Box F 6706.

Calcutta

## ಕಣ್ಣಿನ ಪರೆ.

"ಅ—ಜನ" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣವಾಗುತ್ತದೆ. ಗುಣವಾಗದಿದ್ದರೆ ಹಣ ಪರತ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Haryyasram, Panchpota, Bengal.


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಶ್ರಾವಣ ಶು॥ ೧೧ ಶನಿವಾರದಿಂದ ಶ್ರಾವಣ ಬ॥ ೨ ಶುಕ್ರವಾರದ ವರೇಗಿನ ಪಂಚಾಂಗ. (೧೯೩೫ನೇಯ ಆಗೋಸ್ಟು ಅಟು)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ಹಬ್ಬ |
|---|---|---|---|---|---|---|---|
| 10 | ಶನಿ | ೧೧ | ೫೨ | ಜ್ಯೇಷ್ಠಾ | ೨೩ | ೨೫ | * ನಾಗಪಂಚಮಿ |
| 11 | ರವಿ | ೧೨ | ೪೭ | ಮೂಲಾ | ೨೨ | ೨೬ | |
| 12 | ಸೋಮ | ೧೩ | ೪೩ | ಪೂ ಷಾಢಾ | ೨೦ | ೨೭ | |
| 13 | ಮಂಗಳ | ೧೪ | ೩೮ | ಉ ಷಾಢಾ | ೧೭ | ೨೮ | |
| 14 | ಬುಧ | ೧೫ | ೩೨ | ಶ್ರವಣ | ೧೪ | ೨೯ | |
| 15 | ಗುರು | ೧ | ೨೬ | ಧನಿಷ್ಠಾ | ೧೧ | ೩೦ | |
| 16 | ಶುಕ್ರ | ೨ | ೨೦ | ಶತಭಿಷಾ | ೭ | ೩೧ | |

# ಸಂಪಾದಕರ ಟಪ್ಪಾಲುಪೆಟ್ಟಿಗೆ

[ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಆರ್ಯಾಪು ಪಂಚಾಯತ ಬೋರ್ಡು ಆಫೀಸು,
ಪುತ್ತೂರು ತಾಲೂಕು,
೧೭ನೇ ಜುಲಾಯಿ, ೧೯೩೬.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಪಂಚಾಯತ ಬೋರ್ಡು ಪ್ರೆಸಿಡೆಂಟರುಗಳ ಪರ್ಯಾಲೋಚನೆ ಮತ್ತು ಸಹಕಾರದ ಬಗ್ಗೆ ತಿಳಿಯಪಡಿಸುವುದೇನೆಂದರೆ —

ಇಂಡಿಯಾ ಸರಕಾರವು ಗ್ರಾಮಗಳ ಉದ್ಧಾರಕ್ಕಾಗಿ ಇಟ್ಟ ಒಂದು ಕೋಟಿ ರೂಪಾಯಿಗಳಲ್ಲಿ ನಮ್ಮ ಮದ್ರಾಸು ಸಂಸ್ಥಾನಕ್ಕೆ ೧೪ ಲಕ್ಷ ಸಿಕ್ಕುವುದೂ ಈ ೧೪ ಲಕ್ಷದಲ್ಲಿ ಗ್ರಾಮಗಳ ರಸ್ತೆಗಳಿಗಾಗಿಯೇ ಕೆಲವಂಶ ಹಣ ಪ್ರತ್ಯೇಕಿಸಲ್ಪಟ್ಟಿರುವುದೂ ಎಲ್ಲರೂ ತಿಳಿದಿರುವ ಸಂಗತಿಯೆಂದು ಗ್ರಹಿಸುತ್ತೇನೆ.

ಈ ರೀತಿ ಗ್ರಾಮಗಳಿಗಾಗಿಯೇ ಇಡಲ್ಪಟ್ಟ ಹಣವು ಪ್ರತಿ ಜಿಲ್ಲೆಗೆ ಅಂದಾಜು ರೂಪಾಯಿ ಇಪ್ಪತ್ತೈದು ಸಾವಿರ (೨೫,೦೦೦)ವೆಂದೂ, ಈ ಹಣವು ಯಾವ ಸ್ಥಳಗಳಲ್ಲಿ ಖರ್ಚುಮಾಡಲ್ಪಡಬೇಕೆಂದೂ, ನಿಶ್ಚಯಿಸುವ ಒಂದು ಹುಕುಂ ಈಗೀಟಿಗೆ ಮದ್ರಾಸು ಸರಕಾರದಿಂದ ಹೊರಟಿದೆ. ಈ ಹುಕುಮಿನ ನಿಯಮ ಪ್ರಕಾರ ಸದರಿ ಗ್ರಾಂಟು ಈ ಹಿಂದೆ ಬರೇ ಗ್ರಾಮಪಂಚಾಯತುಗಳಿಗಿದ್ದು, ಈಗ ಪಂಚಾಯತ ಬೋರ್ಡುಗಳು ಎಂದು ಕರೆಯಲ್ಪಡುವ ಸಂಸ್ಥೆಗಳ ಕಾರ್ಯಕ್ಷೇತ್ರದ ಹೊರತಾಗಿ ಜಿಲ್ಲೆಯ ಇತರ ಎಲ್ಲಾ ಸ್ಥಳಗಳಲ್ಲೂ ಖರ್ಚುಮಾಡಲ್ಪಡಲು ಆಲೋಚಿಸಲ್ಪಟ್ಟಿರುವುದಾಗಿ ತಿಳಿದುಬರುತ್ತದೆ. ಹಾಗೆ ಆದರೆ, ಈ ಜಿಲ್ಲೆಯ ಮಟ್ಟಿಗೆ ಪಂಚಾಯತ ಬೋರ್ಡುಗಳಿರುವಲ್ಲೆಲ್ಲಾ ಈ ಹಣದ ಸೋಂಕು ಇಲ್ಲ — ಪಂಚಾಯತುಗಳಿಲ್ಲದ ಸ್ಥಳಗಳಲ್ಲಿ ಮಾತ್ರ ಖರ್ಚು ಮಾಡಲ್ಪಡಬಹುದೆಂದು ಅರ್ಥವಾಗುತ್ತದೆ.

ನಮ್ಮ ಜಿಲ್ಲೆಯಲ್ಲಿ ಅನೇಕ ಬೋರ್ಡುಗಳು ಈಗಾಗಲೇ ಅನೇಕ ರಸ್ತೆಗಳನ್ನು ಮಾಡಿ ಆರ್ಥಿಕ ಹೀನಸ್ಥಿತಿಯಿಂದ ಆ ರಸ್ತೆಗಳನ್ನು ಅಪೂರ್ಣಾವಸ್ಥೆಯಲ್ಲಿ ಬಿಟ್ಟಿವೆ. ನಮ್ಮ ಈ ಚಿಕ್ಕ (Minor) ಪಂಚಾಯತ ಬೋರ್ಡುಗಳು ಆರ್ಥಿಕ ಸ್ಥಿತಿಯಲ್ಲಿ ಯೂನಿಯನ್ ಬೋರ್ಡುಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗಿಂತ ಎಷ್ಟೋ ಪಟ್ಟು ಹೀನಸ್ಥಿತಿಯಲ್ಲಿವೆ. ಈ ಕಾರಣದಿಂದ ಚಿಕ್ಕ ಬೋರ್ಡುಗಳಿಗೆ ಸಹಾಯ ಅಗತ್ಯ ಮತ್ತು ನ್ಯಾಯವಾದದ್ದು. ನಮ್ಮ ಜಿಲ್ಲೆಯಲ್ಲಿ ಚಿಕ್ಕ ಪಂಚಾಯತ ಬೋರ್ಡುಗಳೇ ಇರುವುದರಿಂದ, ಈಗಿನ ಪ್ರಸಂಗದಲ್ಲಿ — ಮೇಲೆ ಹೇಳಿದ ಹುಕುಂ ಪ್ರಕಾರ — ಜಿಲ್ಲೆಯ ಅನೇಕಾನೇಕ ಗ್ರಾಮಗಳು ಸಹಾಯವನ್ನು ಹೊಂದಲು ಅನರ್ಹವಾಗಿವೆ. ಸರಕಾರದ ಸಹಾಯವನ್ನು ಪಡೆಯಲು ಅತಿ ಅರ್ಹತೆಯುಳ್ಳವುಗಳಾಗಿದ್ದರೂ, ಚಿಕ್ಕದಾಗಿರುವ ಒಂದೇ ಕಾರಣದಿಂದ ಅನರ್ಹವಾಗಿರುವುದು ಅತಿ ಆಶ್ಚರ್ಯ ಮತ್ತು ಅನ್ಯಾಯ. ಆದ್ದರಿಂದ ನಮ್ಮ ಎಲ್ಲಾ ಗ್ರಾಮಗಳ ಹಿತದೃಷ್ಟಿಯಿಂದ ಎಲ್ಲಾ ಗ್ರಾಮಗಳ ಬೋರ್ಡುಗಳು ಕೂಡಲೇ ಎಚ್ಚತ್ತು ತಮಗೂ ಈ ಸರಕಾರಿ ಗ್ರಾಂಟು ಸಿಕ್ಕುವಂತೆ ಪ್ರಯತ್ನಮಾಡಬೇಕು. ಇದು ತಾ ೫ ೮ ೧೯೩೬ರ ಒಳಗೆನೇ ನಡೆಯುವುದು ಉತ್ತಮ.

ನಮ್ಮ ಬೋರ್ಡು ಈ ಕೆಳಗಿನಂತೆ ನಿರ್ಣಯಗಳನ್ನು ಮಾಡಿ, ಪುತ್ತೂರಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಪಂಚಾಯತುಗಳ ಪರವಾದ, ಪ್ರೆಸಿಡೆಂಟ್ ಡೆಲಿಗೇಟರವರ ಮುಖಾಂತರ ಮದ್ರಾಸು ಗವರ್ನಮೆಂಟಿಗೂ ಮತ್ತು ಅಗತ್ಯವುಳ್ಳ ಶಿಫಾರಸು ಸಹಾಯಗಳ ಬಗ್ಗೆ ನಿರ್ಣಯದ ಕಡೆಯ(?) ಭಾಗದಲ್ಲಿ ಕಾಣಿಸಿರುವ ಉದ್ಯೋಗಸ್ಥರಿಗೂ ಕಳುಹಿಸಿರುತ್ತದೆ. ಸಾಮುದಾಯಿಕವಾದ ಕಾರ್ಯಗಳಿಂದ ಹೆಚ್ಚಿನ ಫಲ ಸಿಕ್ಕಬಹುದಾದ್ದರಿಂದ ತಾವುಗಳೆಲ್ಲಾ ಕಾರ್ಯಕ್ಕೆ ಕೂಡಲೇ ಮುಂದರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಬೋರ್ಡಿನ ನಿರ್ಣಯಗಳು ಈ ಕೆಳಗೆ ಕೊಟ್ಟಂತೆ ಇವೆ —

"I. ಮದ್ರಾಸು ಗವರ್ನಮೆಂಟಿನ ಸದ್ಯದ ಒಂದು ಹುಕುಮಿನಲ್ಲಿ ಗ್ರಾಮರಸ್ತೆಗಳ ಬಗ್ಗೆಯ ಇಂಡಿಯಾ ಸರಕಾರದ ಗ್ರಾಂಟು ಚಿಕ್ಕ ಪಂಚಾಯತುಗಳು — ಅಂದರೆ, "ನಾನ್-ಯೂನಿಯನ್ ಬೋರ್ಡುಗಳು" — ಹೊಂದಕೂಡದೆಂಬುದಾಗಿ ಇದೆಯೆಂದು ಈ ಬೋರ್ಡು ತಿಳಿಯುತ್ತದೆ. ಸದರಿ ಹುಕುಮಿನ ನಿಯಮದ ದೆಸೆಯಿಂದ — ಇತರ ಜಿಲ್ಲೆಗಳಿಗೆ ಹೇಗೆ ಪರಿಣಮಿಸಬಹುದಾದಾಗ್ಯೂ — ಈ ಜಿಲ್ಲೆಯ ಅನೇಕಾನೇಕ ಗ್ರಾಮಗಳು ಸರಕಾರಿ ಸಹಾಯದಿಂದ ವಿಹಾಯಿಸಲ್ಪಡುತ್ತವೆ(?). ಈ ರೀತಿಯ ಬಹಿಷ್ಕಾರವನ್ನು ಈ ಬೋರ್ಡು ದುಃಖದಿಂದ ಖಂಡಿಸುತ್ತದೆ.

II. ಚಿಕ್ಕ ಬೋರ್ಡುಗಳು ಡಿಸ್ಟ್ರಿಕ್ಟ್ ಬೋರ್ಡು ಮತ್ತು ಯೂನಿಯನ್ ಬೋರ್ಡುಗಳ ಆರ್ಥಿಕ ಸಂಪತ್ತಿಗಿಂತ ಎಷ್ಟೋ ಹೀನಸ್ಥಿತಿಯಲ್ಲಿರುವುದರಿಂದ, ಅವುಗಳ ಅನೇಕ ರಸ್ತೆಕೆಲಸಗಳು ಹಣವಿಲ್ಲದೆ ಬಾಕಿ ನಿಂತಿವೆ, ಈಗ ಅವುಗಳು ಸಹಾಯಕ್ಕೆ ಅತಿ ಅರ್ಹವಾಗಿರುವುದರಿಂದ, ಸರಕಾರವು ನಮ್ಮ ಈ ಬೋರ್ಡುಗಳಿಗೂ ಸರಕಾರಿ ಗ್ರಾಂಟು ಸಿಕ್ಕುವಂತೆ ಹುಕುಂ ಕೊಡಿಸಬೇಕಾಗಿ ಮದ್ರಾಸು ಸರಕಾರವನ್ನು ಈ ಬೋರ್ಡು ಬೇಡಿಕೊಳ್ಳುತ್ತದೆ.

III ಈ ನಿರ್ಣಯದ ನಕಲನ್ನು ಈ ಕೆಳಗಿನವರಿಗೆ ಅಗತ್ಯವುಳ್ಳ ಸಹಾಯ ಶಿಫಾರಸುಗಳ ಬಗ್ಗೆ ಪಂಚಾಯತುಗಳ ಪರವಾದ, ಡಿಸ್ಟ್ರಿಕ್ಟ್‌ಬೋರ್ಡಿನ ಪ್ರೆಸಿಡೆಂಟ್ ಡೆಲಿಗೇಟರವರ ಮುಖಾಂತರ ಕಳುಹಿಸತಕ್ಕದ್ದು.

೧. ಲೋಕಲ್ ಬೋರ್ಡುಗಳ ಇನ್ಸ್‌ಪೆಕ್ಟರವರು
೨. ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರವರು.
೩. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರು
೪. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ ಆಫೀಸರವರು.

ತಮ್ಮಗಳ ವಿಧೇಯ,
ಎ ಪಿ ಸುಬ್ಬಯ್ಯ,
ಆರ್ಯಾಪು ಪಂಚಾಯತ ಬೋರ್ಡು ಅಧ್ಯಕ್ಷ

## ದಕ್ಷಿಣ ಕನ್ನಡ ಜಿಲ್ಲೆಗೆ ಗವರ್ನರರ ಆಗಮನ

### ಪ್ರೋಗ್ರಾಮ್ ತಯಾರಿಸುವಾಗ ಮುಂದೆ ಇಡಬೇಕಾದ ವಿಷಯಗಳು.

೧ ಮಂಗಳೂರಿನಿಂದ ಉಡುಪಿಯ ವರೆಗಿನ ಕರಾವಳಿಯ ಹೊಳೆಗಳಿಗೆ ಸೇತುವೆಗಳ ಅವಶ್ಯಕತೆಯನ್ನು ಕಣ್ಣಾರೆ ತೋರಿಸುವುದು.

೨ ಕುಮಾರಧಾರಾ-ಚಿಕ್ಕಮುಡ್ನೂರು ಹೈಡ್ರೋ ಇಲೆಕ್ಟ್ರಿಕ್ ಸ್ಕೀಮನ್ನು ಧೊರೆಗಳ ಮುಂದಿಟ್ಟು ಉಪ್ಪಿನಂಗಡಿ ಸೇತುವೆಯನ್ನು ಕಟ್ಟಲು ಹೇಳಿದಾಗ ಸ್ಥಳವನ್ನು ತೋರಿಸುವುದು

೩ ಬಂಟವಾಳ, ಚಾರ್ಮಾಡಿ, ಮೈಸೂರುಗಾಟಿ ರೋಡಿನ ದುರವಸ್ಥೆಯನ್ನು ಧೊರೆಗಳು ಕಣ್ಣಾರೆ ನೋಡುವಂತೆ ಮಾಡುವುದು.

೪. ಗವರ್ನಮೆಂಟ್ ಕೋಲೇಜಿನ ಹೈಸ್ಕೂಲ್ ಕ್ಲಾಸುಗಳನ್ನು ತೆಗೆದುಹಾಕಿ ಅದನ್ನು ಅದೇ ಖರ್ಚಿನಿಂದ ಫಸ್ಟ್‌ಗ್ರೇಡ್ ಕೋಲೇಜು ಮಾಡುವಂತೆ ಅಂಗೀಕಾರ ಮಾಡುವುದು.

೫. ಮಂಗಳೂರಲ್ಲಿ ಒಂದು ಒರಿಯಂಟಲ್ ಲೈಬ್ರೆರಿಯನ್ನು ತೆರೆಯುವಂತೆ ಅನುಕೂಲತೆ ಮಾಡುವ ವಿಷಯವನ್ನು ಮುಂದಿಡುವುದು

ಜನಪ್ರಿಯರೂ, ದೇಶೋದ್ಧಾರದ ಕಾರ್ಯಗಳಲ್ಲಿ ಸದಾ ನಿರತರಾದವರೂ ಆದ ನಮ್ಮ ಗವರ್ನರ್ ಧೊರೆಗಳವರು ಒಕ್ಟೋಬರ ತಿಂಗಳ ಮಧ್ಯಭಾಗದಲ್ಲಿ ನಮ್ಮ ಜಿಲ್ಲೆಗೆ ದಯಮಾಡಿಸಲಿರುವರು ಆ ಸಮಯದಲ್ಲಿ ಅಷ್ಟರವರೆಗಿನ ಪ್ರೋಗ್ರಾಮುಗಳ ಕ್ರಮಗಳನ್ನೇ ಅನುಸರಿಸದೆ ದೇಶೋದ್ಧಾರದ ಮೇಲಿನ ವಿಷಯಗಳನ್ನು ಗವರ್ನರ ಧೊರೆಗಳವರು ಸ್ವತಹ ಕಣ್ಣಾರೆ ನೋಡುವಂತೆ ನಮ್ಮ ಜಿಲ್ಲೆಯ ಜನರಿಗೆ ಹಲವು ತರದ ಮಹದುಪಕಾರಗಳನ್ನು ಮಾಡುತ್ತಿರುವ ನಮ್ಮ ಮಹಾಜನರವರ ಪ್ರತಿನಿಧಿಗಳಾಗಿರುವ ಕಲೆಕ್ಟರ ಧೊರೆಗಳವರು ಪ್ರೋಗ್ರಾಮನ್ನು ತಯಾರಿಸಬೇಕಾಗಿ ನಮ್ಮ ಅಪೇಕ್ಷೆ.

ಕುಮಾರಧಾರಾ—ಚಿಕ್ಕಮುಡ್ನೂರು ಹೈಡ್ರೋ ಇಲೆಕ್ಟ್ರಿಕ್ ಸ್ಕೀಮು ಅದರಿಂದ ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಲು ಅನುಕೂಲವಿದೆ. ಮರಸಿಗಿಯುವ ಯಂತ್ರಗಳನ್ನಿಟ್ಟು, ಮೋಪು ತಯಾರಿಸುವುದು ಪೇಪರ್‌ಪಲ್ಪ್ ಎಂಬ ಕಾಗದ ತಯಾರಿಸುವ ಹಿಟ್ಟು ತಯಾರಿಸುವುದು, ಕಾಲುವೆಗಳನ್ನು ತೋಡಿ ಉಪ್ಪಿನಂಗಡಿ ತಾಲೂಕನ್ನು ಉದ್ಧಾರಮಾಡುವುದು, ನೆರೆನೀರಿನಿಂದ ಹಾಳಾಗುವ ಉಪ್ಪಿನಂಗಡಿ, ಬಂಟವಾಳ, ಪಾಣೆಮಂಗಳೂರು ಊರುಗಳನ್ನು ರಕ್ಷಿಸುವುದಕ್ಕಾಗಿ ಕುಮಾರಧಾರಾ ನದಿಯ ನೀರನ್ನು ಕಾಲುವೆ ತೋಡಿ ಪೊಕ್ಕತ್ತೂರು (ಉಪ್ಪಳ) ಹೊಳೆಗೆ ಹೋಗುವಂತೆ ಅನುಕೂಲತೆ ಮಾಡುವುದು. ಉಪ್ಪಿನಂಗಡಿ ತಾಲೂಕಿನ ಶಿರಾಡಿ, ಸುಬ್ರಮಣ್ಯ ಮಲೆಗಳಿಂದ ಮರ ಮಟ್ಟು ತರುವುದಕ್ಕಾಗಿ ಫೋರೆಸ್ಟ್ ಟ್ರೇಮನ್ನು ಚಿಕ್ಕಮುಡ್ನೂರಿನಿಂದ ಪುತ್ತೂರು, ವಿಟ್ಲ ಪಾಣೆಮಂಗಳೂರು. ಬಂಟವಾಳ ಕ್ರೋಸ್‌ರೋಡಿನ ದಾರಿಯಾಗಿ ಮಂಗಳೂರಿಗೆ ಕೊಂಡುಹೋಗುವುದು ಇಷ್ಟು ಕೆಲಸಗಳನ್ನು ಈ ಒಂದು ಸ್ಕೀಮಿನಿಂದ ಮಾಡಬಹುದು ನಮ್ಮ ಸಂಸ್ಥಾನದ ಮಂತ್ರಿಗಳೆಲ್ಲರೂ ತಮಿಳು ಮತ್ತು ಆಂಧ್ರ ದೇಶದವರಾದ್ದರಿಂದ ಅವರ ದೇಶಗಳನ್ನು ಉದ್ಧಾರ ಮಾಡುವುದಕ್ಕಾಗಿ ಮೆಟ್ಟೂರು, ಪೈಕಾರಾ ಲೋವರ್ ಭವಾನಿ ತಾಮ್ರಪರ್ಣಿ ತುಂಗಭದ್ರಾ ಪ್ರೊಜೆಕ್ಟುಗಳನ್ನು ನಡೆಸಲು ಅನುಕೂಲಮಾಡಿರುವರು. ನಮ್ಮ ಜಿಲ್ಲೆಯವ ಒಬ್ಬನೇ ಒಬ್ಬನಾದರೂ ಇಷ್ಟರ ವರೆಗೆ ಮಂತ್ರಿಗಳಾದವರಿಲ್ಲ ನಮ್ಮ ಎಂ ಎಲ್ ಸಿ ಗಳು ಕೌನ್ಸಿಲಿನಲ್ಲಿದ್ದರೂ ಅವರಿಗೆ ಜಿಲ್ಲೆಯ ಉದ್ಧಾರದ ಈ ಸ್ಕೀಮನ್ನು ಅಲ್ಲಿ ಮುಂದೆತರಲು ಅವರಿಗೆ ಇಷ್ಟರ ವರೆಗೆ ಆಲೋಚನೆ ಬರಲಿಲ್ಲ ಅವರು ಅಲ್ಲಿಯ ಸಂತಾನ ಮಕ್ಕಳ ಸಂತಾನವಾಗಬೇಕು ಮುದುಕರು ಯೌವನ ಪ್ರಾಯದ ಹುಡುಗಿಯರನ್ನು ಮದುವೆಯಾಗದಂತೆ ತಡೆಗಟ್ಟಬೇಕು ದೇವಸ್ಥಾನಗಳನ್ನು ಸುಧಾರಿಸಬೇಕು ಒಳ್ಳೇ [illegible] ಸಿಕ್ಕುವಂತೆ ಅರಗು ಹಾಕಿ ಬಂದುಮಾಡಿದ ಬಾಟ್ಲಿಗಳಲ್ಲಿ ಮಾರುವಂತೆ ಮಾಡಬೇಕಾಗಿ ಮುಂತಾದ ಕಾನೂನು ಮಾಡಲು ಸಾಧಿಸುವುದರಲ್ಲಿಯೇ ನಿರತರಾಗಿದ್ದಾರೆ. ಆದುದರಿಂದ ಜಿಲ್ಲಾ ಕಲೆಕ್ಟರ ಧೊರೆಗಳೇ ಇದನ್ನು ಗವರ್ನರ್ ಧೊರೆಗಳ ಮುಂಗಿಡಬೇಕಾಗಿ ವಿನಂತಿ.

ಕರಾವಳಿ ಹೊಳೆಗಳಿಗೆ ಸೇತುವೆಗಳು — ನಮ್ಮ ಜಿಲ್ಲೆಯಲ್ಲಿ ಮಂಜೇಶ್ವರ ಬಾಂಗಾಳ ಮತ್ತು ಉಚ್ಚಿಲ ತೋಡಿಗೆ ಸಂಕಗಳಿವೆಯಲ್ಲದೆ, ಕರಾವಳಿಯಲ್ಲಿರುವ ದೊಡ್ಡ ನದಿಗಳಲ್ಲಿ ಒಂದೇ ಒಂದು ರೋಡಿಗಾದರೂ ಸೇತುವೆಗೇ ಇಲ್ಲ. ದಕ್ಷಿಣ ಭಾಗದಲ್ಲಿ ರೈಲ್ವೆ ಇದ್ದು ಜನರಿಗೆ ಹೋಗಿಬರುವ ಕಷ್ಟಗಳು ಕಡಿಮೆಯಾಗಿವೆ ಉತ್ತರ ಭಾಗದಲ್ಲಿ ಸೇತುವೆಗಳನ್ನು ಮಾಡುವ ಅವಶ್ಯಕತೆ ಎಷ್ಟೆಂಬುದನ್ನು ಗವರ್ನರ್ ಧೊರೆಗಳವರು ಸ್ವತಹ ಕಣ್ಣಾರೆ ಸಂಚರಿಸಿದರೆ ತಿಳಿದುಬರುವುದು. ಆದುದರಿಂದ ಕಲೆಕ್ಟರ್ ಧೊರೆಗಳವರು ಗವರ್ನರ್ ಧೊರೆಗಳು ಈ ದಾರಿಯಾಗಿ ಹೋಗುವಂತೆ ಮಾಡಿದರೆ ಮಹದುಪಕಾರವಿತ್ತು.

ಬಂಟವಾಳ - ಚಾರ್ಮಾಡಿ ಮೈಸೂರು ಗಾಟ್ ರೋಡ್ ಈ ಮಾರ್ಗದಲ್ಲಿ ವ್ಯಾಪಾರ ಸಹಿವಾಟು ನಡೆಯುವಷ್ಟು ಬೇರೆ ಯಾವ ಘಾಟಿಮಾರ್ಗದಲ್ಲಿಯೂ ನಡೆಯುವುದಿಲ್ಲ ಆದರೆ ಇದರ ದುರುಸ್ತಿಯು ಸರಿಯಿಲ್ಲದೆ ಮಾರ್ಗವು ಬಹಳ ಹೀನಸ್ಥಿತಿಯಲ್ಲಿದೆ ಎಂಬುದು ಕಲೆಕ್ಟರ್ ಧೊರೆಗಳವರಿಗೆ ಸ್ವತಹ ತಿಳಿದಿದೆ. ಈ ಮಾರ್ಗ ಈಗ ಟ್ರಂಕ್‌ರೋಡೆಂದು ಹೆಸರಿಗೆ ಮಾತ್ರವೇ ರಾ॥ ಜೆರೋಮ್ ಸಾಲ್ಡಾಂಛಾರ ಸಾಹಸದಿಂದ ಆಗಿದೆ. ಗವರ್ನರ್ ಧೊರೆಗಳವರು ಈ ಮಾರ್ಗವನ್ನು ನೋಡಿದರೆ ನಿಜಸ್ಥಿತಿಯು ಗೊತ್ತಾಗುವುದು.

ಗವರ್ನಮೆಂಟ್ ಕೋಲೇಜನ್ನು ಫಸ್ಟ್‌ಗ್ರೇಡ್ ಕೋಲೇಜಾಗಿ ಮಾಡುವುದು. ಈಗ ಈ ಕೋಲೇಜು ಅರ್ಧ ಕೋಲೇಜಾಗಿದೆ ಇದರಲ್ಲಿ I ಫೋರ್ಮಿನಿಂದ VI ನೇ ಫೋರ್ಮಿನ ವರೆಗೆ ಇರುವ ಕ್ಲಾಸುಗಳನ್ನು ತೆಗೆದುಹಾಕಿ ಫಸ್ಟ್‌ಗ್ರೇಡ್ ಕೋಲೇಜನ್ನಾಗಿ ಮಾಡುವ ಅನುಕೂಲತೆ ಆಗಬೇಕು ಮೇಲೆ ಹೇಳಿದ ಫೋರ್ಮುಗಳು ಮಂಗಳೂರಲ್ಲಿರುವ ಎಲ್ಲಾ ಹೈಸ್ಕೂಲುಗಳಲ್ಲಿಯೇ ಕುಂದಾಪುರ ಕಲ್ಯಾಣಪುರ, ಉಡುಪಿ [illegible] ಬಂಟವಾಳ ಪುತ್ತೂರು [illegible] ಹೈಸ್ಕೂಲುಗಳಲ್ಲಿಯೂ ಇವೆ ಆದುದರಿಂದ ಈ ಕ್ಲಾಸುಗಳನ್ನು ತೆಗೆದುಹಾಕಿದರೆ ವಿದ್ಯಾರ್ಥಿಗಳಿಗೆ ಯಾವ ಬಾಧೆಯೂ ತಟ್ಟಲಾರದು ಈ ರೀತಿಯಲ್ಲಿ ಉಳಿಯುವ ಹಣದಿಂದ ಕೋಲೇಜನ್ನು ಫಸ್ಟ್‌ಗ್ರೇಡ ಕೋಲೇಜಾಗಿ ಮಾಡಬಹುದು.

ಆದುದರಿಂದ ಮೇಲಿನ ಎಲ್ಲಾ ವಿಷಯಗಳನ್ನು ಮಾನ್ಯ ಗವರ್ನರ ಧೊರೆಗಳವರ ಮುಂದಕ್ಕೆ ತರುವಂತೆ ನಮ್ಮ ಜನಪ್ರಿಯರಾದ ಕಲೆಕ್ಟರ್ ಧೊರೆಗಳು ಮಾಡಿಯಾರೆಂದು ನಂಬಿಕೆ.

## ಮೊಸಳೆಯೊಡನೆ ತರುಣನ ಕಾದಾಟ!

ಒಬ್ಬ ತರುಣನು ಒಂದು ಕಾಲುವೆಯ ಬಳಿ ದನಕರುಗಳನ್ನು ಮೇಯಿಸುತ್ತಿದ್ದನು. [illegible] ಕಾಲುವೆಯಲ್ಲಿ [illegible] ಮೊಸಳೆಯೊಂದು ಅವನ ಕಾಲನ್ನು ಕಚ್ಚಿಹಿಡಿಯಿತು. ತರುಣನು ಬಹಳ ಪ್ರಯಾಸಪಟ್ಟರೂ ಬಿಡಿಸಲಾಗಲಿಲ್ಲ. [illegible] ಅವನನ್ನು ನೀರಿನೊಳಗೆ ಎಳೆಯುತ್ತಾ [illegible] ಜೀವದ ಹಂಗನ್ನು ತೊರೆದ ತರುಣನು ಅದರ ಕಣ್ಣುಗಳನ್ನು ಬಿಗಿಯಾಗಿ ಒತ್ತಿಹಿಡಿದನು. ನೋವನ್ನು ಸಹಿಸಲಾರದೆ ಮೊಸಳೆ ಅವನನ್ನು ರಭಸದಿಂದ ಕೈಬಿಟ್ಟಿತು. ಬದುಕಿದನು ಗಾಯಾಳು. ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದಾನೆ.


**KANNADA**

**Savings Certificates can be cashed even before maturity.**

Full Particulars from—

CANARA BANK LTD

OFFICES AT —

| | |
|---|---|
| Bombay—Fort, | Mangalore—City, |
| Bombay—Mandvi, | Mangalore—Bunder, |
| Hubli, | Kasaragod, |
| Calicut, | Puttur, |
| Cochin, | Buntwal, |
| Ernakulam, | Karkala, |
| Alleppey, | Coondapoor, |
| Bangalore, | Udipi, |
| Davangere, | & |
| Chickmagalur, | Gangoli. |

AVAILABLE IN DENOMINATIONS OF Rs. 10 UPWORDS

**TOTAL YIELD RS 4-6-0 P.A.**

Paid once half yearly at 3½ p. a with an additional 1¼% p. a on maturity

If Left To Accumulate

**RS. 100/-**

Will Amount to

**RS. 122-13-6**

ESTD. 1906

**CANARA BANK**

LIMITED

| Subscribed Capital | | Paid up Capital |
|---|---|---|
| 6,00,000 | | 3,31,000 |
| Reserves | Deposits | Working Capital |
| 4,50,000 | 58,62,000 | 73,49,000 |

# ಇಟಲಿ-ಎಬಿಸೀನಿಯಾ!

## ಇನ್ನೊಂದು ಯುದ್ಧವು ಇದರಿಂದಾಗಿಯೇ ಸಂಘಟಿಸಬಹುದೇ?

ಜರ್ಮನರ ಕಳೆದ ಘೋರ ಯುದ್ಧದ ಫಲಿತಾಂಶವಿನ್ನೂ ಜನರ ಅನುಭವದಲ್ಲಿದೆ. ಇಷ್ಟರಲ್ಲಿಯೇ ಆಫ್ರಿಕಾ ಖಂಡದ ಎಬಿಸೀನಿಯಾ ದೇಶದಲ್ಲಿ ಮತ್ತೊಂದು ಸಮರವು ತಲೆದೋರುವ ಸೂಚನೆಯು ದೃಗ್ಗೋಚರವಾಗುತ್ತಿದೆ. ಈ ಯುದ್ಧಕ್ಕೆ ಮೊದಮೊದಲು ಇಬ್ಬರು ಮಾತ್ರವೇ ಪ್ರತಿದ್ವಂದ್ವಿಗಳಾಗಿ ನಿಂತರೂ, ಕಾರಣಾಂತರಗಳಿಂದಾಗಿ ಯೂರೋಪಿಯನ್ ಮತ್ತು ಏಶ್ಯಾಖಂಡದ ರಾಷ್ಟ್ರಗಳೂ ಅಮೇರಿಕವೂ ತಮತಮಗೆ ಮನಬಂದಂತೆ ಪಕ್ಷಗಳನ್ನು ವಹಿಸಬಹುದೆಂಬ ಶಂಕೆಯೂ ಇದೆ ಹೀಗಾದರೆ ಜರ್ಮನ್ ಯುದ್ಧಕ್ಕಿಂತ ಇದು ಕಠೋರವಾಗಿಯೇ ನಡೆಯಬಹುದಲ್ಲದೆ, ಪ್ರಪಂಚದ ಪ್ರತಿಯೊಂದು ದಿಕ್ಕಿಗೂ ಹರಡಬಹುದೆಂದೂ ಶಂಕಿಸಲಾಗಿದೆ

ಎಬಿಸೀನಿಯವು ಆಫ್ರಿಕ ಖಂಡದ ಈಶಾನ್ಯ ಭಾಗದಲ್ಲಿರುವ ಒಂದು ದೇಶೀಯ ರಾಜ್ಯ ದೇಶೀಯ ಪ್ರಭುಗಳಿಂದ ಆಳಲ್ಪಡುವ ಆಫ್ರಿಕ ರಾಜ್ಯವು ಈಗ ಇದೊಂದೇ 8000 ಅಡಿಗಳ ಎತ್ತರದಲ್ಲಿರುವುದರಿಂದ ಈ ದೇಶದಲ್ಲೆಲ್ಲಾ ದಟ್ಟವಾದ ಕಾಡುಗಳೂ ಬೆಟ್ಟ ಗುಡ್ಡಗಳೂ ಅಪಾರವಾಗಿರುವುವು ಹವೆಯೂ ಕೂಡಾ ಬಹು ಶೀತವಾಗಿದೆ ನೆಲವು ಫಲವತ್ತಾಗಿರುತ್ತದೆ ಇಲ್ಲಿ ಜನ್ಮವೆತ್ತುವ ನೀಲನದಿಯ ಫಲವತ್ತಾದ ಭೂಮಿಯಲ್ಲಿ ಉತ್ಕೃಷ್ಟ ಬೆಳೆಯನ್ನು ಬೆಳೆಯುಸ ತ್ತಾರೆ ಈ ದೇಶದಲ್ಲಿ ಉತ್ತಮವಾದ ಹತ್ತಿಯನ್ನು ಬೆಳೆಯುವ ಜಮೀನುಗಳು ಸಮೃದ್ಧವಾಗಿವೆ ಇಲ್ಲಿಯ ಸಂಪತ್ತು ಯೂರೋಪು ಖಂಡ ಮತ್ತು ಜಪಾನ್‌ಗಳ ಅಸೂಯೆಗೆ ಕಾರಣವಾಗಿದೆ

ಎಬಿಸೀನಿಯದ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಇಟಲಿ ಸರಕಾರವು ತನ್ನ ಕ್ಷಾತ್ರ[illegible]ಗಳನ್ನು ಪಡೆದಿರುವುದು ಇವುಗಳ ಬೆಂಗಾಡು ಪ್ರಾಂತ್ಯಗಳಾಗಿರುವುದರಿಂದ ಎಬಿಸೀನಿಯದ ಮೇಲೆ ಇಟಲಿಯವರಿಗೆ ಬಹು ಕಾಲದಿಂದಲೂ ಕಣ್ಣಿದೆ ಹಿಂದೆ ಒಂದಾವರ್ತಿ ಇಟಲಿಯವರು ಈ ದೇಶದ ಮೇಲೆ ಯುದ್ಧ ಹೂಡಿ ಸಂಪೂರ್ಣವಾಗಿ ಸೋತುಹೋದರ ಈ ಸೋತನ್ನು ತೀರಿಸಿಕೊಳ್ಳಬೇಕೆಂಬ ಆಶೆಯು ಇವರಿಗೆ ಈಗ ಬಹಳವಾಗಿದೆ

ಎಬಿಸೀನಿಯದಲ್ಲಿ ಬೆಲೆ ಬಾಳುವ ಖನಿಜಗಳೂ ರತ್ನಗಳೂ [illegible] ಇವುಗಳ [illegible]ಗಳಲ್ಲಿ ಕೆಲಸವು ಹೆಚ್ಚಾಗಿ ನಡೆಯುವುದಿಲ್ಲ ಹಿಂದಿನ ಎಬಿಸೀನಿಯ ಚಕ್ರವರ್ತಿನಿಯಾಗಿದ್ದ ಶೇಬರಾಣಿಯ ಅಪಾರವಾದ ಐಶ್ವರ್ಯಗಳು ಇಲ್ಲಿಯ [illegible]ಗಳಲ್ಲಿ [illegible] ಇದೆ

ಎಬಿಸೀನಿಯಾದಲ್ಲಿ ಶಾಶ್ವತವಾಗಿ [illegible]ಲು ಅನೇಕ ರಾಷ್ಟ್ರಗಳು ಆಶಿಸುತ್ತಿವೆ ಅಲ್ಲಿರುವ ಸೌನಾ ಎಂಬ ಸರೋವರಕ್ಕೆ ಒಂದು ಅಣೆಕಟ್ಟೆಯನ್ನು ಹಾಕಿದರೆ ಈ ದೇಶದಲ್ಲಿ ಹತ್ತಿ ಬೆಳೆಸುವ ದೊಡ್ಡ ದೊಡ್ಡ ಪ್ರದೇಶಗಳನ್ನು ರಚಿಸಬಹುದೆಂದು ಹಲವು ಸರಕಾರಗಳು ಸೂಚಿಸಿದುವು ಅಲ್ಲಿಯ ಚಕ್ರವರ್ತಿಗಳಿಂದ ಇದಕ್ಕೆ ಅವಕಾಶವನ್ನು ಪಡೆಯಬೇಕೆಂದು ಅಮೇರಿಕ ಕೆನಡ, ಜಪಾನ್ ದೇಶಗಳವರು ಸಾಧಿಸಿದರು ತಮ್ಮ ಈ ಕಾರ್ಯಸಾಧನೆಯಾಗಬೇಕೆಂದು ಚಕ್ರವರ್ತಿಯ ಮಗನಿಗೆ ಜಪಾನಿನ ಶ್ರೀಮಂತನೊಬ್ಬನ ಮಗಳನ್ನು ವಿವಾಹ ಮಾಡಬೇಕೆಂದು ಹವಣಿಸಿದರು ಇದನ್ನು ಕಾಣಲಾರದೆ ಇತರ ಸರಕಾರಗಳು ಗುಲ್ಲೆಬ್ಬಿಸಿ ಜಪಾನು ಎಬಿಸೀನಿಯಾವನ್ನು ನುಂಗುವ ತಂತ್ರವಿದು ಎಂದು ಎಚ್ಚರಿಸಿದರು ಇದರಿಂದಾಗಿ ಮದುವೆಯ ಸದ್ದೇ ಅಡಗಿತು ಒಂದು ವೇಳೆ ಈ ವಿವಾಹವು ನಡೆದುಹೋಗುತ್ತಿದ್ದರೆ ಜಪಾನಿಯರಿಗೆ ಈ ದೇಶದಲ್ಲಿ ಹೆಚ್ಚಿನ ಅಧಿಕಾರವು ದೊರೆತು ಅವರು ಹಾವಳಿಯನ್ನು ನಡೆಸುವುದು ಖಂಡಿತವಿತ್ತು. 10 ಲಕ್ಷ ಎಕ್ರೆ ಭೂಮಿಯಲ್ಲಿ ಹತ್ತಿಯ ಬೆಳೆಯೂ ಆಗುತ್ತಿತ್ತು

ಎಬಿಸೀನಿಯದ ಚಕ್ರವರ್ತಿಯ ಹೆಸರು ರಾಸ್‌ಟಫಾರಿ ಎಂದು. (ಚಿತ್ರ ನೋಡಿ) ಇವರು ಇಂಗ್ಲಿಷ್, ಫ್ರೆಂಚ್, ಜರ್ಮನ್ ಭಾಷೆಗಳಲ್ಲಿ ಚೆನ್ನಾಗಿ ಮಾತನಾಡುತ್ತಾರೆ ರಾಜನೀತಿ ಕಲಾಕೋವಿದರು ಸ್ವಂತ ವೆಚ್ಚದಿಂದಲೇ ಅನೇಕ ಮಂದಿ ದೇಶೀಯ ಯುವಕರನ್ನು ಯೂರೋಪು ದೇಶಕ್ಕೆ ಕಳುಹಿಸಿ ಶಿಕ್ಷಣ ದಾನ ಮಾಡಿದವರು ಸರಕಾರದಲ್ಲಿ ವಿದೇಶೀಯರನ್ನೇ ಹೆಚ್ಚಾಗಿ ನೇಮಿಸಿ ರಾಜ್ಯಭಾರವು ಸಮರ್ಪಕವಾಗಿ ನಡೆಯುವಂತೇರ್ಪಡಿಸಿರುವರು

ಯೂರೋಪು ಖಂಡದ ಒಂದಲ್ಲ ಒಂದು ರಾಷ್ಟ್ರವು ತನ್ನ ದೇಶದ ಮೇಲೆ ಒಂದಲ್ಲ ಒಂದು ದಿನ ಬೀಳುವುದು ವಾಸ್ತವವೆಂದು ತಿಳಿದ ಇವರು ಯುದ್ಧ ಸನ್ನದ್ಧರಾಗಿಯೇ ಇರುವರು ಇವರು ಜನಾಂಗ ಸಭೆಯಲ್ಲೂ ಇರುವರು ಇತರ ರಾಷ್ಟ್ರಗಳು ಶಸ್ತ್ರಧಾರಣೆಯ ಅಧಿಕಾರವನ್ನು [illegible] ಇವರಲ್ಲಿ ವಿಮಾನಪಡೆಗಳು [illegible] ಲಕ್ಷ [illegible] ಎಬಿಸೀನಿಯಾದ [illegible] ದೊಡ್ಡ ದೊಡ್ಡ ಮಾರ್ಗಗಳ [illegible]

ರಾಸ್ ಟಫಾರಿಯವರು ಬೆಳಿಗ್ಗೆ [illegible] ಮಧ್ಯರಾತ್ರಿಯವರೆಗೂ ರಾಜ್ಯಾಡಳಿತದ ಕೆಲಸದಲ್ಲಿ ನಿರತರಾಗಿರುತ್ತಾರೆ ವಿದೇಶಗಳ ಅಧಿಕಾರಿಗಳು ಅವರ ಸರಕಾರದಲ್ಲಿದ್ದರೂ ಅವರಿಗೆ [illegible] ಕೊಡುವುದಿಲ್ಲ ಸೇನಾ [illegible]ನಾಗಿರುವ ಬೆಲ್ಜಿಯನ್ ಅಧಿಕಾರಿ[illegible]ಗೆ [illegible] ಮಾತ್ರ ಸಂಬಳ [illegible] ಬೇಕೆ [illegible] ನಾವು ಲೆಕ್ಕವಿಡಬಹುದು

ರಾಸ್ ಟಫಾರಿಯವರು.

ಎಬಿಸೀನಿಯದ ಮೇಲೆ ಇಟಲಿಯು ದಂಡೆತ್ತುವುದು ನಿಜ ಆದರೆ [illegible] ಮೈಲು ದೂರದಲ್ಲಿರುವ ಜಪಾನೀಯರ ಭಯವೂ ಇಟಲಿಗಿದೆ ಜಪಾನ ಇಟಲಿಯನ್ನು ನಿರೋಧಿಸಿ ಎಬಿಸೀನಿಯಾದ ಸಹಾಯಕ್ಕೆ ನಿಲ್ಲುವುದೂ ಸಂಭವನೀಯ ಎಬಿಸೀನಿಯಾವು ಇಟಲಿಯ ಕೈವಶ ಆದರೆ ತನಗೆ ಬೇಕಾದ ಹತ್ತಿಯು ಅಗ್ಗವಾಗಿ ದೊರೆಯುವುದು ದುರ್ಲಭವೆಂದು ಬ್ರಿಟನಿಗೆ ಗೊತ್ತಿದೆ

ಎಬಿಸೀನಿಯಾದ ದರ್ಪವನ್ನಿಳಿಸಬೇಕೆಂದು ಇಟಲಿಯ ಹಟ' ತನ್ನ ದೌರ್ಬಲ್ಯವನ್ನು ಕಂಡು ಇಟಲಿಯು ವಿಜೃಂಭಿಸುವುದನ್ನು ಕಂಡು ಎಬಿಸೀನಿಯಾಕ್ಕೆ ಪ್ರತಿಷ್ಠೆಯ ಆಗ್ರಹ ಇಟಲಿಗೆ ಬಗ್ಗೆನೆಂದು ರಾಸ್ ಟಫಾರಿಯವರು ಕೋವಿಯನ್ನು ಹಿಡಿದು ಪ್ರತಿಜ್ಞೆಮಾಡಿದರು ಮುಸೊಲಿನಿಯವರು ಸ್ವಸ್ಥ[illegible]ನ್ನು ಪ್ರೋತ್ಸಾಹಿಸಿ ದೇಶದ ಗೌರವವನ್ನು ಕಾಯಬೇಕೆ ವಿರುವರು

[illegible] ಸೇಶನ್ಸ್ ರಾಜಿ ಪಂಚಾಯ್ತಿ ನಡೆಸಿ ಈ ಸಮಸ್ಯೆಯನ್ನು ತೀರ್ಮಾನಿಸಲು ಯತ್ನಿಸುತ್ತಿದೆ ಆದರೆ ಮುಸೊಲಿನಿಯವರ ಹಟವು ಯಾವ ಸ್ಥಾನದಲ್ಲಿ ನಿಲ್ಲುವುದೆಂದು ಹೇಳಲಾಗುವುದಿಲ್ಲ

---

### ಭಯಂಕರ ಒಳಸಂಚು'
### ನ್ಯಾಯಾಧೀಶರ ಮೇಲೆ ದ್ವೇಷ'

ಕಲ್ಕತ್ತಾ, ಆಗೋಸ್ತು ತಾ [illegible]

ಅಲಿಪುರದ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜಿ, ಮಿ| ಟಿ ಎಚ್ ಎಲ್ಲಿಸ್‌ರನ್ನು ಕೊಲ್ಲಲು ಬಗೆದ ಐದು ಮಂದಿ ಬಂಗಾಳಿ ಒಳಸಂಚುಗಾರರನ್ನು ಸೆರೆಹಿಡಿದಿದ್ದಾರೆ ಪೋರ್ಟ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅವರನ್ನು ಆಗೋಸ್ತು [illegible]ರ ತನಕ ರಿಮಾಂಡಿನಲ್ಲಿಡುವಂತೆ ಆಜ್ಞಾಪಿಸಿದ್ದಾರೆ

ರಾಜಶಾಸನವನ್ನುಲ್ಲಂಘಿಸಿದ ಇನ್ನಿಬ್ಬರನ್ನು ನಿನ್ನೆ ಸೆರೆಹಿಡಿದು ಅದೇ ಮೆಜಿಸ್ಟ್ರೇಟರ ಅಪ್ಪಣೆಯ ಮೇರೆಗೆ ಆಗೋಸ್ತು ತಾ [illegible]ರ ತನಕ ರಿಮಾಂಡಿನಲ್ಲಿ ಇಟ್ಟಿದ್ದಾರೆ

---

### ಡಕಾಯಿತರೊಡನೆ
### ಮೂರು ತಾಸುಗಳ ಹೋರಾಟ!
### ಅಹ್ಮದಾಬಾದ್ ಪೋಲೀಸರ ದಾಳಿ!

ಅಹ್ಮದಾಬಾದ್ ಆಗೋಸ್ತು [illegible]

ಅಹ್ಮದಾಬಾದಿನ ಬಳಿ ಇರುವ ಮೊಡಾಜೆ ಹಳ್ಳಿಯಲ್ಲಿ ಡಕಾಯಿತರಿಗೂ ಶಸ್ತ್ರಧಾರಿ ಪೋಲೀಸರಿಗೂ ಹೋರಾಟವಾಯಿತೆಂದು ತಿಳಿದುಬಂದಿದೆ ಅಹ್ಮದಾಬಾದಿನ ಹಳ್ಳಿಗಳಲ್ಲಿಯೂ ಕೈರಾ ಡಿಸ್ಟ್ರಿಕ್ಟಿನಲ್ಲಿಯೂ ಸೂರೆಸುಲಿಗಳನ್ನು ಮಾಡುತ್ತಿದ್ದರಾದ ಕಾರಣ ಅವರನ್ನು ಹಿಡಿಯಲು ಪೋಲೀಸರು ಬಹಳ ಕಾಲದಿಂದ ಪ್ರಯಾಸಪಡುತ್ತಿದ್ದರು ಕೊನೆಗೆ ಮೊಡಾಜೆಯಲ್ಲಿ ಅವರು ಸಿಕ್ಕಿದರು ಡಕಾಯಿತರು ಗುಂಡನ್ನೆಸೆದರು ಪೋಲೀಸರು ಗುಂಡನ್ನೆಸೆದರು ಹೀಗೆ ಮೂರು ತಾಸುಗಳ ತನಕ ಸೆಣಸಾಟವಾದನಂತರ ಡಕಾಯಿತರು ತಮ್ಮ ಕುದುರೆಗಳನ್ನು ಅಲ್ಲಿಯೇ ಬಿಟ್ಟು ಪಲಾಯನಗೈದರು ಬಹಳ ಪೆಟ್ಟಾದ್ದರಿಂದ ಒಬ್ಬನು ಅಲ್ಲೇ ನರಳುತ್ತಿದ್ದನು ಅವನನ್ನು ಪೋಲೀಸರು ಆಸ್ಪತ್ರೆಗೆ ಒಯ್ದಿದ್ದಾರೆ.


# ಹೃದಯ ವೇದನೆ.

ಶೀತ, ಕೆಮ್ಮು,

ನೇವಸಗಳು

ಪೆಪ್ಸ್‌ನಿಂದ ಶೀಘ್ರವಾಗಿ

ಗುಣವಾಗುತ್ತವೆ.

ನಿಮಗೆ ಶೀತವು ಫಕ್ಕನೆ ಆಗುತ್ತದೆಯೇ? ಹೃದಯ ದುರ್ಬಲಗೊಳಿಸುವ ಛಳಿಯಿಂದಾಗಲೀ ವಿಪರೀತ ಕೆಮ್ಮಿನಿಂದಾಗಲೀ ಆಗಾಗ ಬಾಧಿಸಲ್ಪಡುವಿರಾ? ಹಾಗಾದರೆ, ಮೂಸಿಯೇ ಸೇವಿಸುವ ಈ ಅದ್ಭುತಕರ ಪೆಪ್ಸ್‌ಗಳ ಬಿಲ್ಲೆಗಳನ್ನುಪಯೋಗಿಸಿರಿ

ಪೆಪ್ಸಿನ ಒಂದು ಬಿಲ್ಲೆಯನ್ನು ಬಾಯಿಯಲ್ಲಿ ಹಾಕಿಕೊಂಡರೆ ಔಷಧ ರೂಪದಲ್ಲಿನ ಪರಿಮಳವು ಉಂಟಾಗುತ್ತದೆ ಇದನ್ನು ಎದೆಯೊಳಗೆ ಉಚ್ಛ್ವಾಸಿಸಿಕೊಳ್ಳಬಹುದು ಪೆಪ್ಸ್ ಬಹು ಸೌಮ್ಯವಾದುದು ರುಚಿಕರವಾದುದು ಆದರೆ ರೋಗನಿವಾರಣೆಯ ಪೂರ್ಣ ಶಕ್ತಿಯುಳ್ಳದು ಅಂಟು ರೋಗವು ಕ್ರಿಮಿಗಳನ್ನು ಕೊಲ್ಲುತ್ತದೆ ದೇಹದೊಳಗಣ ಗಾಳಿಯ ನಳಿಗಳಲ್ಲಿರುವ ಕೆಟ್ಟ ವಸ್ತುಗಳನ್ನು ಹೊರಗೆ ದೂಡಿ, ಕೆಮ್ಮು ಮತ್ತು ಶೀತಗಳನ್ನು ಮಾಯಗೊಳಿಸುತ್ತದೆ

ಬಾಟ್ಲಿಗೆ ಒಂದು ರೂಪಾಯಿಯಂತೆ ಎಲ್ಲಾ ಔಷಧಿ ವಿಕ್ರಯಗಾರರು ಪೆಪ್ಸನ್ನು ಮಾರುತ್ತಾರೆ.

ಏಜಂಟರು — ದಾಥಾ ಎಂಡ್ ಕೊ, ಮದ್ರಾಸು

ರೋಗ ನಿವಾರಕ ಉಚ್ಛ್ವಾಸಕರ ಬಿಲ್ಲೆಗಳು.

## ಪೆಪ್ಸ್ PEPS



## ಬೇಕಾಗಿದ್ದಾರೆ

ನಮ್ಮ ಕಂಪೆನಿಗೆ ಕನ್ನಡನಾಡಿನಲ್ಲಿ ಏಜಂಟರುಗಳು ಬೇಕಾಗಿರುವರು ಅವರಿಗೆ ಕನ್ನಡ ಮತ್ತು ಇಂಗ್ಲಿಷ್‌ಗಳ ಪರಿಚಯವಿರಬೇಕು. ವ್ಯಾಪಾರದಲ್ಲಿ ಸರಿಯಾದ ಅನುಭವವೂ ಇರಬೇಕು [illegible] ನುಡಿಗಳಿಂದ ಜನರ ಮನವೊಲಿಸುವ ವಿಚಕ್ಷಣರಾಗಿರಬೇಕು, ತಿಂಗಳಿಗೆ ಕಡಮೆಯಿಲ್ಲದೆ [illegible] ರೂಪಾಯಿಗಳ ನಮ್ಮ ಮಾಲನ್ನು ತಪ್ಪದೆ ವಿಕ್ರಯಿಸಬೇಕು ಯಾವಾಗ ಬೇಕಾದರೂ ಒಂದು ಸಾವಿರ ರೂಪಾಯಿಗಳ ಮಾಲನ್ನು ಕೊಡುತ್ತೇವೆ. ಎಷ್ಟು ಬೇಕಾಗುತ್ತದೋ ಅಷ್ಟನ್ನು ವಿಕ್ರಯಿಸಿ, ಉಳಿದುವುಗಳನ್ನು ಹಿಂದೆ ಕೊಟ್ಟು ಬೇಕಾದುವುಗಳನ್ನು ಪಡೆಯಬಹುದು, ಏಜಂಟರಾಗಿಸ್ವತರು 1025 ರೂ. ಗಳ ನಗದು ಜಾಮೀನ್ ಕೊಡಬೇಕು, ಆ ಹಣಕ್ಕೆ ಸೇಕಡಾ [illegible] ಬಡ್ಡಿಯನ್ನು ಕಂಪೆನಿಯು ಕೊಡುವುದು ಏಜಂಟರಾಗುವವರಿಗೆ ರೂ 50 ಸಂಬಳ, 20 ರೂಪಾಯಿ ಬತ್ತೆ, ಹೆಚ್ಚು ಮಾಲು ವಿಕ್ರಯಿಸಿದರೆ ತಕ್ಕ ಬೋನಸ್ ಕೊಡಲಾದೀತು, ವ್ಯಾಪಾರವು ತಿಂಗಳಿಗೆ ಸಾವಿರ ರೂಪಾಯಿಗಳಿಗೆ ಕಡಮೆಯಾಗಲೇ ಬಾರದು. ಹೆಚ್ಚಿನ ವಿವರಗಳಿಗೆ—

**S. U. Narayanacharya & Co.,**
Embroidery Silk Manufacturers,
Benares City.

9/8

# ಮದ್ರಾಸು ಕೌನ್ಸಿಲಿನಲ್ಲಿ ನಡೆದ ಸಂಭಾಷಣೆ!

[ತಾ ೩ನೇ ದಿನ ಮದ್ರಾಸು ಕೌನ್ಸಿಲಿನ ಸಭೆಯು ಮಾನ್ಯ ಬಿ. ರಾಮಚಂದ್ರ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರಗಿತು. ನಮಗೆ ಸಂಬಂಧಿಸಿರುವ ಪ್ರಶ್ನೆಗಳನ್ನು ನಾವಿಲ್ಲಿ ಸಂಕ್ಷಿಪ್ತಗೊಳಿಸಿ ಕೊಟ್ಟಿದ್ದೇವೆ. ಸಂ. ಸ್ವ.]

ಶ್ರೀ ಯು. ಸಿ. ಸುಬ್ರಹ್ಮಣ್ಯ ಭಟ್ಟರು: "ಮಂಗಳೂರಿನ, ಪೆಂಟ್‌ಲೇಂಡ್ ಪೇಟೆಯ ಹಾಳು ನೆಲದ ಒಂದು ಸಣ್ಣ ಭಾಗವನ್ನು ತಮಗೆ ರಿಯಾಯಿತಿ ಕ್ರಯಕ್ಕೆ ಕೊಡಬೇಕಾಗಿ ಸರಕಾರೀ ಕರಣೀಕರು ಕೆಲವರು ಕೇಳಿದುದು ಹೌದೋ? ಕಲೆಕ್ಟರರ ಶಿಫಾರಸನ್ನು ಬೋರ್ಡ್ ಒಫ್ ರೆವೆನ್ಯೂ ವಾಪಸು ಮಾಡಿದುದು ಹೌದೋ? ಆ ಸ್ಥಳವನ್ನು ಬಹಿರಂಗ ಏಲಂನಲ್ಲಿ ಮಾರಬೇಕೆಂದು ತೀರ್ಮಾನಿಸಿದುದು ನಿಜವೋ?"

ರೆವೆನ್ಯೂ ಮೆಂಬರರು—'ಮಂಗಳೂರಿನ ಸರಕಾರೀ ಆಫೀಸುಗಳಲ್ಲಿನ ಐದುಮಂದಿ ಕ್ಲಾರ್ಕರು ಪೆಂಟ್‌ಲೇಂಡ್ ಪೇಟೆಯ ಈ ಭೂಭಾಗವೊಂದನ್ನು ಕೇಳಿದುದು ಹೌದು ಇದನ್ನು ರಿಯಾಯಿತಿ ದರದಲ್ಲಿ ವಿಕ್ರಯಿಸಬಹುದೆಂದು ಕಲೆಕ್ಟರರು ಶಿಫಾರಸು ಮಾಡಿದರು. ಆದರೆ ಬೋರ್ಡ್ ಒಫ್ ರೆವೆನ್ಯೂ ಅದನ್ನು ಮಂಜೂರುಮಾಡಲಿಲ್ಲ ಆ ಕ್ಲಾರ್ಕರಿಗೆ ಆ ಸ್ಥಳವನ್ನು ಕೊಟ್ಟನಂತರ ಅವರು ಆ ಸ್ಥಳವನ್ನು ತಮ್ಮ ವರ್ಗವಾದರೆ ಇತರ ಸರಕಾರೀ ಕೆಲಸಗಾರರಿಗೇನೆ ಬಾಡಿಗೆಗೆ ಕೊಡುವರೋ ಇಲ್ಲವೋ ಎಂಬ ಭರವಸೆಯೇನು?—ಈ ವ್ಯವಹಾರದಲ್ಲಿ ದ್ರವ್ಯವನ್ನು ಸಂಪಾದಿಸಬಹುದಿತ್ತು ಆದರೆ ಖಾತೆಗೆ ಏನು ಫಲವಿದೆ?'

ಶ್ರೀ ಎ. ಬಿ ಶೆಟ್ಟರು "ದಕ್ಷಿಣಕನ್ನಡ ಜಿಲ್ಲೆಯಲ್ಲಿ ೧೯೩೪ರಿಂದ ೧೯೩೭ರ ವರೆಗೆ ಎಷ್ಟು ಮಂದಿಯು ಮೇಲೆ ಹುಲಿಗಳಾಗಲೀ ಚಿರತೆಗಳಾಗಲೀ ಬಿದ್ದುವು? ಈ ನರಭಕ್ಷಕ ಮೃಗಗಳನ್ನು ಕೊಲ್ಲಲು ಯಾವ ಏರ್ಪಾಡನ್ನು ಮಾಡಲಾಗಿದೆ?"

ರೆವೆನ್ಯೂ ಮೆಂಬರರು—"೧೯೩೬ರಲ್ಲಿ ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳಲ್ಲಿ ೫ ಮಂದಿ ಈ ನರಭಕ್ಷಕರ ಬಾಯಿಗೆ ತುತ್ತಾದರು ಬೇರೆ ತಾಲೂಕುಗಳಲ್ಲಿ ೧೯೩೬ರಲ್ಲಿ ಇಂತಹ ಮರಣಗಳಾಗಿರುವುದಿಲ್ಲ ೧೯೩೫ರಲ್ಲಿ ಎಷ್ಟು ಜನರು ಇವುಗಳಿಗೆ ತುತ್ತಾದರೆಂಬ ಲೆಕ್ಕವು ಸಿಕ್ಕಿಲ್ಲ ಬೋರ್ಡಿನ ಸ್ಟೆಂಡಿಂಗ್ ಓರ್ಡರ್ ನಂಬ್ರ ೧೯೬ ಮೇರೆಗೆ, ಹುಲಿ ಮತ್ತು ಚಿರತೆಗಳನ್ನು ಕೊಂದವರಿಗೆ ಬಹುಮಾನವೀಯಲಾಗುತ್ತದೆ. ೧೯೩೬ರ ನವ್ಹೆಂಬರದಲ್ಲಿ ಕಾರ್ಕಳ ತಹಶೀಲ್ದಾರರೂ ಫೊರೆಸ್ಟ್ ರೇಂಜ್ ಆಫೀಸರರೂ ಬೇಟೆಯಾಡಿದರು ಒಂದು ನರಭಕ್ಷಕನು ಹಾವಳಿ ನಡೆಸುತ್ತಿದೆ ಎಂದು ಸುದ್ದಿಯಿತ್ತು. ಈಗ ಅದರ ಸದ್ದಡಗಿದೆ."

ಶ್ರೀಮತಿ ಲಕ್ಷ್ಮೀಪತಿ—'ತಾಲೂಕು ಬೋರ್ಡುಗಳನ್ನು ಪುನಃ ನಿರ್ಮಾಣಮಾಡುವ ಯೋಜನೆಯು ಸರಕಾರಕ್ಕಿದೆಯೇ?'

ಬೊಬ್ಬಿಲಿ ರಾಜರು—'ತಾಲೂಕು ಬೋರ್ಡುಗಳನ್ನು ಪುನರುಜ್ಜೀವಿಸುವ ಯೋಜನೆಯು ಸರಕಾರಕ್ಕಿಲ್ಲ'

ಶ್ರೀ ಎ ಬಿ ಶೆಟ್ಟಿ—'ಸ್ಥಾನಿಕ ಸರಕಾರಗಳ ಆರ್ಥಿಕ ಸ್ಥಿತಿ ಸುಧಾರಣೆಯ ದೃಷ್ಟಿಯಿಂದ ಟೋಲ್‌ಗೇಟ್ ಫೀಸನ್ನು ವಸೂಲ್ಮಾಡುವ ಆಲೋಚನೆಯು ಸರಕಾರಕ್ಕಿದೆಯೇ?'

ಲೋಕಲ್ ಸೆಲ್ಫ್ ಗವರ್ನಮೆಂಟ್ ಮಂತ್ರಿಗಳು—"ಈ ಕುರಿತು ಆಲೋಚಿಸುತ್ತಿದ್ದೇವೆ"

ಶ್ರೀ ಗೋಪಾಲ ಸ್ವಾಮಿ ಮುದಲಿಯಾರರು—'ಸಾರ್ವಜನಿಕರು ಈ ಸುಂಕವನ್ನು ವಸೂಲ್ಮಾಡುವುದಕ್ಕೆ ಸಿದ್ಧರಿರುತ್ತಾರೋ?'

ಬೊಬ್ಬಿಲಿ ರಾಜರು—'ಅದನ್ನು ನಾನು ಹೇಳಲಾರೆ. ಡಿಸ್ಟ್ರಿಕ್ಟ್ ಬೋರ್ಡುಗಳ ಆಡಳಿತದಲ್ಲಿರುವವರು ಈ ವಿಷಯಕ್ಕೆ ಸಮ್ಮತಿಸುತ್ತಾರೆಂದು ಭಾವಿಸುತ್ತೇನೆ'

ಶ್ರೀ ಮುನಿಸ್ವಾಮಿ ಪಿಳ್ಳೆ—'ಸರಕಾರವು ಯಾವಾಗ ತೀರ್ಮಾನ ಮಾಡೀತೆಂದು ನಿರೀಕ್ಷಿಸಬಹುದು'

ಬೊಬ್ಬಿಲಿ ರಾಜರು—'ಅದನ್ನು ಹೇಳುವುದು ಕಷ್ಟ'

ಕೃಷ್ಣಯ್ಯ ಚೌಧರಿ—"ಟೋಲ್ ಸುಂಕವನ್ನು ಪುನರುಜ್ಜೀವಿಸುವರೋ ಇಲ್ಲವೋ ಎಂದು ಖಂಡಿತವಾಗಿ ಏಕೆ ಹೇಳಬಾರದು!"

ಬೊಬ್ಬಿಲಿ ರಾಜರು—'ಸರಕಾರವನ್ನು ವಾಗ್ಬದ್ಧ ಮಾಡುವ ಅಧಿಕಾರವು ನನಗಿರುವುದಿಲ್ಲ!'

ಕೃಷ್ಣಯ್ಯ ಚೌಧರಿ—'ಗ್ರಾಮೋದ್ಧಾರ ಕಾರ್ಯಾರ್ಥವಾಗಿ ಸರಕಾರದ ಯೋಜನೆಯಿದೆಯೋ?'

ಬೊಬ್ಬಿಲಿ ರಾಜರು—'ಇಲ್ಲ'

ಫೈನಾನ್ಸ್‌ಮೆಂಬರರು—'ಇಕೊನೊಮಿಕ್ ಕೌನ್ಸಿಲ್ ಸ್ಥಾಪನೆಯಾದ ಮೇಲೆ ಈ ವಿಷಯವನ್ನು ಅದು ತೀರ್ಮಾನಿಸುವುದು'

ಕೃಷ್ಣಯ್ಯ ಚೌಧರಿ—'ಟ್ರೈನಿಂಗ್ ಶಾಲೆ ಮತ್ತು ಟ್ರೈನಿಂಗ್ ಕೊಲೇಜ್‌ಗಳ ವಿದ್ಯಾರ್ಥಿಗಳಿಂದ ದರಗಳನ್ನು ವಸೂಲ್ಮಾಡುವ ಆಲೋಚನೆಯು ಸರಕಾರಕ್ಕಿದೆಯೇ?'

ಉತ್ತರ—'ಟ್ರೈನಿಂಗ್ ಶಾಲೆ ಮತ್ತು ಟ್ರೈನಿಂಗ್ ಕೊಲೇಜ್‌ಗಳ ವಿದ್ಯಾರ್ಥಿಗಳಿಂದ ದರಗಳನ್ನು ವಸೂಲು ಮಾಡುವ ಧೋರಣೆಯು ಸರಕಾರದಲ್ಲಿ ಇರುವುದಿಲ್ಲ'

ಕೃಷ್ಣಯ್ಯ ಚೌಧರಿ—"ಜಿಲ್ಲೆಗಳಲ್ಲಿ ಕಡ್ಡಾಯ ಶಿಕ್ಷಣವನ್ನು ಪ್ರಚಾರಗೊಳಿಸುವ ಕಾರ್ಯಕ್ರಮಗಳನ್ನೇನಾದರೂ ಸರಕಾರವು ಹೊಸತಾಗಿ ರಚಿಸಿರುವುದೇ? ಮಾಡಿರುವುದಿಲ್ಲವಾದರೆ ಅದಕ್ಕೆ ಕಾರಣವೇನು? ಈ ವಿಷಯವಾಗಿ ಮುನಿಸಿಪಾಲಿಟಿಗಳಿಗೂ ಪಂಚಾಯತುಗಳಿಗೂ ಸೂಚನೆಗಳು ಹೋಗಿವೆಯೇ? ಇಲ್ಲದಿದ್ದರೆ, ಅದಕ್ಕೆ ಕಾರಣವೇನು?"

ವಿದ್ಯಾಮಂತ್ರಿ "ಸಾರ್ವತ್ರಿಕವಾದ ಪ್ರಾಥಮಿಕ ಶಿಕ್ಷಣ ಪ್ರಚಾರಾರ್ಥ ಒಂದು ಕಾರ್ಯಕ್ರಮವು ಪರ್ಯಾಲೋಚಿಸಲ್ಪಡುತ್ತಿದೆ"

## ಸಂಬಳ ಕಡಿಮೆದಕ್ಕಾಗಿ ಮುಷ್ಕರ!

### ಜಿ. ಐ ಪಿ. ರೈಲ್ವೆಯ ಕೆಲಸಗಾರರ ಆಗ್ರಹ!

ಜಿ ಐ ಪಿ ರೈಲ್ವೆಯ ವಾದಿ ಬಂದರ್ ಗೂಡ್ಸ್‌ಯಾರ್ಡಿನಲ್ಲಿ ಕೆಲಸಮಾಡುತ್ತಿದ್ದ ೫೦೦ ಕೂಲಿಕಾರರ ಮಂಜೂರಿಯನ್ನು ಕಡಿಮೆದಕ್ಕಾಗಿ ಅವರು ಮುಷ್ಕರ ಹಿಡಿದಿರುವರೆಂದು ಮುಂಬಾಯಿಯಿಂದ ಬಂದ ವಾರ್ತೆಯಿಂದ ತಿಳಿದುಬರುತ್ತದೆ

## ಸದಾನಂದರ ಪತ್ರಿಕೆಗಳ ಅವಸಾನ

ಶ್ರೀ ಸದಾನಂದರು ನಡೆಸುತ್ತಿದ್ದ ಹೊಸ 'ಡೈಲಿ ಸನ್' ಪತ್ರಿಕೆಯೂ, "ನವಭಾರತ' 'ನವಶಕ್ತಿ' ಎಂಬ ದೇಶಭಾಷಾ ಪತ್ರಿಕೆಗಳೂ ನಿಲ್ಲಿಸಲ್ಪಟ್ಟಿವೆ ಇವುಗಳ ಪುನರುಜ್ಜೀವನಾರ್ಥ ಶ್ರೀ ಸದಾನಂದರು ಯತ್ನಿಸುತ್ತಿರುವರು.

## ೧೦೦೦ ಜನರ ಮರಣ!

### ಮಂಚೂಕೋವಿನಲ್ಲಿ ನೆರೆಯ ಹಾವಳಿ!

### ೧,೦೨೦,೦೦೦ ಪೌಂಡುಗಳ ನಷ್ಟ!

ಮಂಚೂಕೋವಿನಿಂದ ಬಂದ ವಾರ್ತೆಯಿಂದಾಗಿ ಗೊತ್ತಾಗುವಂತೆ—ಅಲ್ಲಿನ ಅನ್‌-ಟುಂಗ್ ಮತ್ತು ಶಿಂಗೀಷು ಎಂಬ ಪಟ್ಟಣಗಳು ನೆರೆಯುಪಾಲಾಗಿವೆ. ೧೦೦೦ ಜನರು ಮೃತರಾದರು. ೧,೦೦೦,೦೦೦ ಪೌಂಡುಗಳ ನಷ್ಟವಾಗಿರಬಹುದೆಂಬುದು ಅಂದಾಜು ನಕಾತೋಶಿಮಾ ಎಂಬಲ್ಲಿನ ಜನನಿಬಿಡ ಪ್ರಾಂತ್ಯದಲ್ಲಿ ೧೨೦೦ ಜನರು ನೀರುಪಾಲಾದರು. ೪೭೦೦ ಮನೆಗಳು ಮುಳುಗಿವೆ ಅನ್‌-ಟುಂಗ್‌ನಲ್ಲಿ ೧೫,೦೦೦ ಮನೆಗಳೊಳಗೆ ನೀರು ಹೊಕ್ಕಿದ ಪರಿಣಾಮವಾಗಿ ೩೦೦೦ ಮಂದಿ ತಂತಮ್ಮ ಮನೆ ಮಾಡುಗಳಲ್ಲಿ ರಾತ್ರಿಂದಿವ ಇರಬೇಕಾಯಿತು.

## ಲಾಹೋರಿನಲ್ಲಿ ಶಾಂತಿ.

ಲಾಹೋರಿನಲ್ಲಿ ೩೦ ೨ರಿಂದ ಶಾಂತಿಯುಂಟಾಗಿದೆ ಕರ್ಫ್ಯೂ ಶಾಸನವು ಹಿಂತೆಗೆಯಲ್ಪಟ್ಟಿದೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಒಂದು ಪ್ರಕಟಣೆಯನ್ನು ಮಾಡಿ ಜನರ ಸಹಕಾರಕ್ಕಾಗಿ ಅವರನ್ನು ವಂದಿಸಿ ಇದೇ ರೀತಿ ಶಾಂತಿಯಿರಲೆಂದು ಹಾರೈಸಿರುವರು

## ಕೊಂಗ್ರೆಸಿನವರು ಅಧಿಕಾರ ಸ್ವೀಕರಿಸುವ ಕುರಿತಾಗಿ ಭಿನ್ನಾಭಿಪ್ರಾಯಗಳು

ವಾರ್ಧಾಗಂಜ್ ಜುಲೈ ೩೦.

ಈ ಮಧ್ಯಾಹ್ನ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತನ್ನ ಚರ್ಚೆಯನ್ನು ಪ್ರಾರಂಭಿಸಿದಾಗ ಬಲವಾದ ವಾಗ್ಯುದ್ಧವಾಯಿತೆಂದು ತಿಳಿದುಬಂದಿದೆ ಹೊಸ ರಾಜ್ಯಾಂಗದಲ್ಲಿ ಕಾಂಗ್ರೆಸ್ಸಿನವರು ಮಂತ್ರಿಮಂಡಲದ ಪದವಿಗಳನ್ನು ವಹಿಸಬೇಕೇ ಬೇಡವೇ ಎಂಬ ಕಡುತರವಾದ ಪ್ರಶ್ನೆಯು ಚರ್ಚೆಗೆ ಬಂದಾಗ ಈ ವಾಗ್ಯುದ್ಧಗಳಾದುವೆಂದು ತಿಳಿದುಬಂದಿದೆ

ಸರ್ದಾರ್ ಸರ್ದೂಲ ಸಿಂಗರು ಮಂತ್ರಿಮಂಡಳದ ಪದವಿಗಳನ್ನು ವಹಿಸಕೂಡದೆಂದು ವಿರೋಧಿಸಿದ ಪಂಜಾಬ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರ ನಿರ್ಧಾರವನ್ನು ಸಭೆಯ ಮುಂದೆ ತಂದು ಶ್ರೀ ಸತ್ಯಮೂರ್ತಿಯವರ ಸೂಚನೆಯನ್ನು ವಿರೋಧಿಸಿ ಮಾತನಾಡಿದರು ಶಾಸನ ಸಭೆಗಳೆಲ್ಲವನ್ನೂ ಕಾಂಗ್ರೆಸ್ಸಿನವರೇ ಆಕ್ರಮಿಸಿ ಹೊಸ ರಾಜ್ಯಾಂಗವನ್ನು ಮುರಿದು ಬೀಳುವಂತೆ ಮಾಡಬಹುದೆಂದರು

ದಕ್ಷಿಣ ದೇಶದ ಕಾಂಗ್ರೆಸ್ ಮುಖಂಡರಾಗಿಯೂ ಮತ್ತು ಜಸ್ಟಿಸ್ ಪಂಗಡದೊಡನೆ ಬಲವಾದ ಹೋರಾಟವನ್ನು ನಡೆಸುತ್ತಿರುವವರೂ ಆದ ಶ್ರೀ ಎಸ್ ಸತ್ಯಮೂರ್ತಿಯವರು ಈ ವಿಷಯವಾಗಿ ಮೊದಲು ಮಾತನಾಡಿದರು. ಒಳ್ಳೆ ವಾದಸಾಮರ್ಥ್ಯದಿಂದಲೂ ಮತ್ತು ಚೆನ್ನಾಗಿಯೂ ಭಾಷಣ ಮಾಡಿ ಶ್ರೀ ಸತ್ಯಮೂರ್ತಿಯವರು ಮಂತ್ರಿಮಂಡಲದ ಅಧಿಕಾರಗಳನ್ನು ಕಾಂಗ್ರೆಸ್ಸಿನವರ ವಹಿಸುವ ಯುಕ್ತಾಯುಕ್ತತೆಯನ್ನು ವಿಶದಪಡಿಸಿದರು ಕಾಂಗ್ರೆಸ್ಸಿನವರು ಹೊಸ ರಾಜ್ಯಾಂಗದಲ್ಲಿ ಅಧಿಕಾರಗಳನ್ನು ವಹಿಸಬೇಕೆಂದು ಅವರು ವಾದಿಸಿದರು. ಅವರ ವಾದವಿಷ್ಟೆ "ಈಗ ಕಾಂಗ್ರೆಸ್ಸಿನವರಿಗೆ ಪಾರ್ಲಿಮೆಂಟರಿ ಮನೋಬಲವು ಆವರಿಸಿ ಅದು ಅವರಲ್ಲಿ ಉಳಿದು ಅವರನ್ನು ಕೆಲಸ ಮಾಡಿಸುತ್ತಿದೆ ಹೀಗೆ ಕಾಂಗ್ರೆಸ್ಸಿನವರನ್ನು ಪಾರ್ಲಿಮೆಂಟರೀ ಮನೋಭಾವವು ಒಂದು ಆವರಿಸಿದಾಗ ಅವರು ಅದನ್ನು ಅನುಸರಿಸಿ ಅವರ ಪರಮಾವಧಿಯನ್ನು ಮುಟ್ಟಲೇ ಬೇಕು. ಹೊಸ ರಾಜ್ಯಾಂಗದಲ್ಲಿ ಮಂತ್ರಿಮಂಡಲದ ಸ್ಥಾನಗಳನ್ನು ವಹಿಸಿ ಎಲ್ಲಾ ಪ್ರಾಂತಗಳಲ್ಲಿಯೂ ಕೆಲಸ ಮಾಡುವುದೆಂಬ ನಿರ್ಧಾರದಿಂದ ಚುನಾವಣೆಗಳಲ್ಲಿ ಭಾಗವಹಿಸಿದರೆ ಆಗ ಅದರಿಂದ ಒಳ್ಳೆಯ ಪರಿಣಾಮಕಾರಿಯಾದ ಕೆಲಸವಾಗುವುದರಲ್ಲಿ ಸಂದೇಹವಿಲ್ಲ.

ಶ್ರೀ ಸತ್ಯಮೂರ್ತಿಯವರು ತಮ್ಮ ಭಾಷಣದಲ್ಲಿ ಈ ವಿಷಯವಾಗಿ ದಕ್ಷಿಣ ದೇಶದಲ್ಲಾದ ನಿರ್ಣಯಗಳನ್ನೂ ಈಚೆಗೆ ಕಡಲೂರಿನಲ್ಲಾದ ನಿರ್ಣಯಗಳನ್ನೂ ಸಭೆಯಲ್ಲಿ ಸೂಚಿಸಿದರು. ಮತ್ತು ಅಧಿಕಾರ ಸೂತ್ರವನ್ನು ವಹಿಸಬೇಕೆಂದು ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಮಾಡಿದ ನಿರ್ಣಯಗಳನ್ನೂ ಸಭಿಕರ ಮುಂದಿಟ್ಟರು

ಶ್ರೀ ಸತ್ಯಮೂರ್ತಿಯವರು ಅಂತ್ಯದಲ್ಲಿ ಹೀಗೆಂದರು:—

"ಈ ಪ್ರಶ್ನೆಯನ್ನು ವರ್ಕಿಂಗ್ ಕಮಿಟಿಯವರು ಭಿನ್ನಾಭಿಪ್ರಾಯಗಳೆಲ್ಲವನ್ನು ಒತ್ತಟ್ಟಿಗಿಟ್ಟು ಪರ್ಯಾಲೋಚಿಸಬೇಕು ವೈಯಕ್ತಿಕವಾದ ಭಿನ್ನಭಾವಗಳನ್ನು ದೂರದಲ್ಲಿಟ್ಟು ಇದಕ್ಕೆ ಗಮನ ಕೊಡಬೇಕು ಈಗ ಆರು ತಿಂಗಳುಗಳಿಂದಲೂ ದೇಶವು ಈ ಪ್ರಶ್ನೆಯ ನಿರ್ಧಾರಕ್ಕೆ ಕಾದುಕೊಂಡಿದೆ ಆದ ಕಾರಣ ಈಗ ನಾನು ಈ ಪ್ರಶ್ನೆಯನ್ನು ತಂದಿರುವುದು. ಬಹಳ ಅಗತ್ಯವಾಗಿದೆ" ಎಂದರು.

## ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು ಇದರ ಏಜಂಟರ ಪರಿಷತ್ತು.

ದಿ ಕೆನರಾ ಬೇಂಕ್ ಲಿಮಿಟೆಡ್, ಇದರ ಎಲ್ಲಾ ಏಜಂಟರ ಒಂದು ಪರಿಷತ್ತು ಇದೇ ಮಂಗಳವಾರ ಬುಧವಾರ ಮತ್ತು ಗುರುವಾರಗಳಲ್ಲಿ ಶ್ರೀ ಎ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಬಂದರದಲ್ಲಿ ಜರಗಿ ತಮ್ಮ ಗಿರಾಕಿಗಳಿಗೆ ತಮ್ಮಿಂದ ಯಾವ ಉತ್ತಮ ಸೌಲಭ್ಯಗಳನ್ನೊದಗಿಸಿ ಕೊಡಬಹುದು,—ತಾವು ಮುಂದಕ್ಕೆ ಹೇಗೆ ಯಾವ ರೀತಿಯ ಧೋರಣೆಯನ್ನು ಅನುಸರಿಸಬೇಕೆಂಬ ಕುರಿತು ವಿವೇಚಿಸಿಕೊಳ್ಳಲಾಯಿತು ಪರಿಷತ್ತಿನ ಪ್ರಥಮ ದಿನದಲ್ಲಿ ಸಾರ್ವಜನಿಕರಿಗೂ ಸ್ವಾಗತವಿತ್ತು ಸಾರ್ವಜನಿಕರಿಂದ ಅನೇಕ ಸಲಹೆಗಳು. ಸ್ವೀಕಾರ್ಯವಾಗಿವೆ ಬೇಂಕಿನ ಜನರಲ್ ಮೆನೆಜರರಾದ ಶ್ರೀ ಸರ್ವೋತ್ತಮ ನಾಯಕ್ ಬಿ ಎ ಬಿ ಎಲ್ ರವರು ಏಜಂಟರ ಪರವಾಗಿ ಭಾಷಣ ಮಾಡಿ ತಾವು ತಮ್ಮ ಕುಳುವಾರುಗಳ ಹಿತಾಕಾಂಕ್ಷಿಗಳಾಗಿ ಯಾವ ಸೂತ್ರಗಳನ್ನೆಲ್ಲ ಪರಿಪಾಲಿಸುತ್ತಿರುವೆವು ಎಂದು ಮೊದಲಾಗಿ ಸೂಚಿಸಿದರು ಅಧ್ಯಕ್ಷರ ಸರಸವೂ ಭಾವಭರಿತವೂ ಆದ ಭಾಷಣವಾಗಿ ಊಟ ಉಪಚಾರಗಳೊಂದಿಗೆ ಸಭಾಂತ್ಯವಾಯಿತು.


ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಕೊಲ್ಲುವ ಸಂಧಿಯನ್ನು ಕಳೆದುಕೊಳ್ಳಬೇಡಿ.



ಎಂತಹ ಹುಡುಕಲ್ಪಿಸಿದರೂ ನಮ್ಮ ಗಡಿಯಾರ ಮುಖಾಂತರ 24 ಗಂಟೆಗಳಿಗಾಗಿ ವಿ.ಪಿ ಮಾಡುತ್ತದೆ, ಇದನ್ನು ಪ್ರಸಿದ್ಧಿಗೆ ತರುವುದಕ್ಕಾಗಿ ಒಂದೇ ಸಲ 24 ಡಬ್ಬಿಗಳನ್ನು 8 ರೂಪಾಯಿಗೆ ಕೊಂಡುಕೊಳ್ಳುವವರಿಗೆ ಬ್ಯಾಂಡ್ ಸಹಿತ 1 ಕಪ್ಪು ಕೈಗಡಿಯಾರ, ಚೈನ್ ಸಹಿತ 1 ಇನ್‌ಪಂಟ್ ಪಾಕೆಟ್ ಗಡಿಯಾರ 10 ವರ್ಷ ಗ್ಯಾರಂಟಿಯಾದ ಕರಾಂವಾಳ್ ಕಾಲ ತೋರಿಸುವ ಟೈಂಪೀಸ್, ಬ್ಯಾಟರಿ ಸಹಿತ 1 ಟಾರ್ಚ್ ಲೈಟ್, ಗೋಲ್ಡ್ ನಿಬ್ಬಿನ 1 ಫೌಂಟನ್ ಪೆನ್, 1 ಇಮಿಟೇಷನ್ ಪರ್ಲ್ ನೆಕ್‌ಲೇಸ್, ಸೇಫ್ಟಿ ರೇಜರ್ ಬ್ಲೇಡ್ ಸಹಿತ ಅಥವಾ ಪಾರಂಗ್ಪೆನ್ ಕೋಟು (ಅಳತೆ ಮತ್ತು ಬಣ್ಣ ತಿಳಿಸಬೇಕು) ಉಚಿತವಾಗಿ ಕೊಡಲ್ಪಡುವುವು, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ, ತಪ್ಪಿದ್ದಲ್ಲಿ ದಿಪ್ಪಟ್ಟು ಹಣ ವಾಪಾಸ್.

International Trading Co, Post Box No. 6714 (B. IT) CALCUTTA

C P. S 9/8

## ಅನುಕ್ರಮಣಿಕೆ.


ಪತ್ರ ... ೨
ಸಾಹಿತ್ಯ ಸಂಗ್ರಹ ... ೩
ತಂದೆಯನ್ನು ಕಾರಾವಾಸಕ್ಕೆ ಕಳುಹಿಸಿದ ಮಗ ... ೫
ಪತ್ರವ್ಯವಹಾರ ... ೭
ಇಟಲಿ ಎಬಿಸೀನಿಯಾ ... ೮

ಅಗ್ರಲೇಖ
ಸ್ಫುಟವಿಚಾರಗಳು ... ೧೦
ಇಂಡಿಯಾ ಆಕ್ಟು ... ೧೧

ವರ್ತಮಾನ ಸಂಗ್ರಹ
ಸೆರೆಗಳಲ್ಲಿ ಚಡಿ ಹೊಡೆಯಬಹುದೇ? ... ೧೪
ಮಂಗಳೂರು, ತಾಲೂಕುಗಳಿಂದ. ... ೧೧
ವಿವಿಧ ಸಮಾಚಾರಗಳು ... ೧೬
ನಗಬಾರದು ... ೧೮


ಸ್ವದೇಶಾಭಿಮಾನಿ.

ತಾ. ೯ನೇ ಶುಕ್ರವಾರ ಅಗೋಸ್ತು '೧೯

# ಇಂಡಿಯಾ ಆಕ್ಟು.

ಏಳೂವರೆ ವರ್ಷದ ಪರಿಶ್ರಮದಿಂದ ಹೊಸದೊಂದು ಮನ್ವಂತರವನ್ನುಂಟುಮಾಡಲು, ನವೀನವಾದ ಒಂದು ಆಕ್ಟು ಮೊನ್ನೆ (ಅಗೋಸ್ತು 2ನೇ ತಾರೀಖಿನಲ್ಲಿ) ನಮ್ಮ ಚಕ್ರವರ್ತಿ ಸಮ್ರಾಜರವರ ಸ್ವಹಸ್ತ ಮಂಜೂರಾತಿಯನ್ನು ಪಡೆದು ಶಾಸನಗೆಂಡಿತು ಕನ್ಸರ್ವೇಟಿವ್ ಪಕ್ಷವೇ ಪ್ರಬಲಾಧಿಕಾರವನ್ನು ಕಳೆದು ಹೊರಡಿಸಿರುವ ಈ ಮನುಧರ್ಮ ಶಾಸ್ತ್ರದಲ್ಲಿ 478 ಸೆಕ್ಷನುಗಳು, 16 ಶೆಡ್ಯೂಲುಗಳು 456 ಪುಟಗಳ ಬರಹ ಎಲ್ಲವೂ ಇದ್ದು, ಬ್ರಿಟಿಷ ಪಾರ್ಲಿಮೆಂಟಿನ ಇತಿಹಾಸದಲ್ಲೆಲ್ಲ ಇದೇ ಮಜಭೂತಾದ ಶಾಸನವೆಂದು ಹೆಸರ್ಗೊಂಡಿದೆ ಬ್ರಿಟಿಷ ಚಕ್ರಾಧಿಪತ್ಯಗಳ ಪುಟ್ಟ ಭೂಭಾಗದಲ್ಲಿ, ಇಂತಹುದಷ್ಟು ಜನಭರಿತವಾದ ಬೇರೊಂದು ಭಾಗವೆಲ್ಲಿ? ಅದಕ್ಕಾಗಿಯೇ ಹಿಮಾಲಯದಷ್ಟೆತ್ತರದ ರಿಕಾರ್ಡು ಇಲ್ಲದೆ ಅದನ್ನಾಳುವ ಆಕ್ಟು ಸಂಜನಿಸೀತೆ? ಹನ್ನೊಂದು ಬ್ರಿಟಿಷ ಆಧಿಪತ್ಯಗಳನ್ನೂ ಇವುಗಳೊಡನೆ ಸೇರಲಿಚ್ಛಿಸುವ ದೇಶೀಯ ಸಂಸ್ಥಾನಗಳನ್ನೂ ಕೂಡಿದ್ದಾಗುಳ್ಳ ಒಂದು ಫೆಡರೇಶನು ಸ್ಥಾಪಿತವಾಗಿ, ಜನರ ಪ್ರತಿನಿಧಿಗಳಿಂದೊಡಗೂಡಿರುವ ಎಸೆಂಬ್ಲಿಗಳಿಗೆ ಜವಾಬುದಾರರಾಗಿರುವ ಮಂತ್ರಿಗಳೇ ಎಲ್ಲಾ ಇಲಾಖಾಧೀಶರಾಗಲು, ದೇಶದ ಸಂರಕ್ಷಣೆ, ಹೊರದೇಶಗಳ ಸಂಬಂಧ, ಇಂಗ್ಲಿಷ ದೇವಾಲಯಗಳ ವಿಚಾರ ಇವೇ ಮಾತ್ರ ಮಂತ್ರಿಗಳಿಗೆ ಅಧೀನವಾಗಿರದ ವಿಷಯಗಳಾಗಿ ಗವರ್ನರರ ಅಧೀನವೇ ಇರಲು, ಗವರ್ನರರು ಜಾದಾ ಅಧಿಕಾರಗಳನ್ನುಳ್ಳವರಾಗಿ ಕೆಲವು ಜವಾಬುದಾರಿಗಳನ್ನು ತಾವೇ ವಹಿಸಿ ನಡೆಸಿ ಬರಲು ಅಧಿಕಾರವುಳ್ಳವರಾಗಿರಲು, ವಿಶಿಷ್ಟ ದೇಶಹಿತಕರವಾದ ರಕ್ಷಾ ಕವಚಗಳು ಕಾಪಾಡಲು, ಈ ರಾಜ್ಯಭಾರ ಶಾಸನವು ಮೇಲೆ ಹೇಳಿರುವಂತೆ ಪಾರ್ಲಿಮೆಂಟಿನ ಇತಿಹಾಸದಲ್ಲೆಲ್ಲ ಘಾತವೇ ಆಗಿರುವುದಾದರೂ, ಬ್ರಿಟಿಷರೂ ಹಿಂದೀಯರೂ ಒಕ್ಕೀ ಮನಸ್ಸಿನಿಂದ ಸಹಕರಿಸಿದರೆ ಹಗುರವಾಗಿಯೆ ರಾಜ್ಯವನ್ನು ಉನ್ನತ ಸ್ಥಿತಿಗೆ ತರುವುದೆಂದು ಆಕ್ಟಿನ ಕರ್ತರ ನಂಬುಗೆಯಿದೆ

ಚಕ್ರವರ್ತಿಯವರ ಮಂಜೂರಾತಿಯು ದೊರೆವಂದು, ಪ್ರಭುಮಂದಿರದಲ್ಲಿ ಹತ್ತೆಂಟು ಮಾತ್ರವೇ ಹಾಜರಿದ್ದರು ಮಿಕ್ಕ ಮಹಾಪ್ರಭುಗಳಿಗೆ ಆಮಂತ್ರಣವೆಲ್ಲಿದ್ದಿತೋ 305 ತಿದ್ದುಪಡಿಗಳನ್ನು ಸೂಚಿಸಿದ್ದವರಲ್ಲಿ ಒಬ್ಬರೂ ಇದ್ದಿಲ್ಲವೆ! ಕಾರಣವೇನು? ಹಳೆಯ ಪುರಾಣಗಳ ಸಾಲಿಗೆ ಈ ಆಕ್ಟನ್ನು ಅಲ್ಲಿಟ್ಟಿದ್ದಾರೆ ಇದು ಹೊಲಸೆಂದವರು, ಇನ್ನೊಂದು ಹೊಲಸು ರಿಮಾರ್ಕನ್ನು ಕೂಡಿಸುವರು, ಇದು ಉತ್ಕೃಷ್ಟವೆಂದವರು, ಮತ್ತೊಂದು ಶಿಫಾರಸನ್ನು ಕೂಡಿಸುವರು,—ಹೊರತಾಗಿ ಬ್ರಿಟಿಷರಲ್ಲಿ ಹತ್ತೆಂಟು ಮಂದಿ ಮಾತ್ರ ಈ ಆಕ್ಟನ್ನು ಸ್ಮರಣೆಯಲ್ಲಿಟ್ಟುಕೊಂಡಿರುವರೋ ಏನೋ! ವಿಕ್ಕವರ ವಿಚಾರದಲ್ಲಿ ಇದು ಎಂದಿನದ್ದೋ ಒಂದು ರಿಕಾರ್ಡಾಗಿ ತವಖಾನೆಗೆ ಬಂದಂತಿದೆ. ಮತ್ತೊಂದು ಕಾರಣವನ್ನು ಹೇಳಬಹುದು; ಈ ಭಾಗದಲ್ಲಿ ಬ್ರಿಟಿಷರು ಮಾಡತಕ್ಕದ್ದೆಲ್ಲವನ್ನೂ ಕೂಡಿಯೇ ಆಯಿತೆನ್ನಿ; ಇನ್ನು ಇದು ಹಿಂದೀಯರ ಬಾಗಿಲಿಗೋ ಹೆಗಲಿಗೋ ಬಂದಿದೆ

ಬ್ರಿಟಿಷರಲ್ಲಿನ ನಾನಾ ಪಕ್ಷಗಳ ಅಭಿಪ್ರಾಯಗಳನ್ನು ಪ್ರಕಟಿಸುವ ಮುಖಪತ್ರಗಳು ಈ ವಿಷಯವಾಗಿ ಭಿನ್ನಾಭಿಪ್ರಾಯಗಳನ್ನು ಬರೆದಿವೆ "ಈಗಿನ ವಿದ್ಯಮಾನಗಳೂ ಕಚ್ಚಾಟಗಳೂ ಮರೆತ ಬಳಿಕ, ಈಗಣ ಪಾರ್ಲಿಮೆಂಟಿನ ಧೈರ್ಯವನ್ನೂ ದೂರದರ್ಶಿತೆಯನ್ನೂ ಮುಂದಣ ಸೀಳಿಗೆಗಳು ಕೊಂಡಾಡುವುವು" ಎಂದು ಟೈಮ್ಸು ಪತ್ರಿಕೆಯು ತನ್ನ ಬೆನ್ನು ಕಟ್ಟಿಕೊಂಡಿದೆ "ಗವರ್ನರ ಜನರಲ್‌ರವರ ಕೈಯಲ್ಲಿ ಬಜೇಟಿನೊಳಗಣ ಹಣದಲ್ಲಿ ಸೇಕಡಾ 100ರಲ್ಲಿ 80ರ ಮೇಲೆ ಅಧಿಕಾರವಿರುವುದರಿಂದ, ಇಂಡಿಯಕ್ಕೆ ಹಣ ದೊರೆವ (ಸಾಲದ) ಭದ್ರತೆ ವಿಶ್ವಾಸಗಳು ತುಂಬಾ ಇವೆ," ಎಂದು ಸಾಲಮೂಲಗಳನ್ನೇ ಮೂಲವಾಗಿಟ್ಟುಕೊಂಡು ಇಂಡಿಯವನ್ನು ಆರ್ಥಿಕ ಕನ್ನಡಕದಿಂದ ನೋಡುವವರ ಸಲುವಾಗಿ ಫೈನೆನ್ಶಿಯಲ್ ನ್ಯೂಸ್ ಹೇಳುತ್ತಿದೆ "ಇನ್ನು ಪ್ರಗತಿಯು ಹಿಂದೀಯರ ಕೈಯಲ್ಲೇ ಇದೆ ನ್ಯಾಯವಾದ ರಾಜನೀತಿಯ ಕ್ರಮದಿಂದ ಅವರು ಮುಂದರಿದರೆ ವೈಸರಾಯರ ಅಥವಾ ಗವರ್ನರರ ಕೈಗೊಪ್ಪಿಸಿರುವ ಮಹಾಸ್ತ್ರಗಳನ್ನು ಅವರು ಉಪಯೋಗಿಸದಂತೆ ಮಾಡಬಹುದಾಗಿದೆ" ಎಂದು ನ್ಯೂಸ್ ಕ್ರಾನಿಕಲ್ ಪತ್ರಿಕೆಯೂ, "ಇಂಡಿಯದಲ್ಲಿ ನಮ್ಮ ಸಾಮ್ರಾಜ್ಯವು ನಾಶ ಹೊಂದುವ ಹಾಗೆ ಇದೊಂದು ಆಕ್ಟನ್ನು ಮಾಡಿಯಾಗಿದೆ ನಮಗೇನ? ಇದರಿಂದಾಗುವ ಅನಾಹುತಗಳಿಗೆ ನಾವೇನ ಜವಾಬ್ದಾರರಲ್ಲ" ಎಂದು ಡಾಯಿ ಹಾರ್ಡರದಾದ ಮೋರ್ನಿಂಗ್ ಪೋಸ್ಟ್ ಎನ್ನುತ್ತಿದೆ

"ನಮ್ಮೊಳಗಣ ಪಂಗಡಗಳು ಎಷ್ಟರ ಮಟ್ಟಿಗೆ ಏರ್ಪಾಡವಾಗಿ ಸೌಕರ್ಯಗಳನ್ನು ವಿಯಾಯಿತಿಗಳನ್ನೂ ಕೊಡಬಹುದೋ ಅಷ್ಟರಲ್ಲಿ ಈ ಆಕ್ಟಿನ ಮೂಲಕ ಕೊಟ್ಟಿದ್ದೇವೆ ಸದ್ಯಕ್ಕೆ ಇಷ್ಟು ಸಾಕು ಇದನ್ನು ಅಂಗೀಕರಿಸಿಕೊಂಡ ಕಾರ್ಯ ನಿರ್ವಹಿಸಿರಿ ಸುಮ್ಮನೆ ಇದಕ್ಕೆ ಅಸ್ತಿ ಮಾಡಿ ಆಕ್ಷೇಪಿಸಿ ಇನ್ನಷ್ಟು ಸಿಗಬೇಕಾಗಿದ್ದಿತೆಂದು ಚಡಪಡಿಸಬೇಡಿರಿ ಕೆಲಸದಲ್ಲಿ ಹೇಗೆ ಸಾಗುತ್ತಿದೆಯೆಂದು ನೋಡಿ, ನಿಮ್ಮ ಯೋಗ್ಯತೆ ಹೆಚ್ಚಿಸಿಕೊಂಡು, ಮುಂದೆ ಇನ್ನಷ್ಟು ಪಡೆವ ಹಾಗೆ, ನಾವು ಕೊಡುವ ಹಾಗೆ, ಬೇಚಾರಾಗಿ ನಡೆದುಕೊಳ್ಳಿರಿ" ಎಂಬಂತೆ ಸಾಮುದಾಯಿಕವಾದ ಪ್ರೇರೇಪಣೆಯನ್ನು ಬ್ರಿಟಿಷರು ಹಿಂದೀಯರಿಗೆ ಈ ಆಕ್ಟಿನ ಮೂಲಕ ಮಾಡುತ್ತಿರುವರು

ಯಾವುದೊಂದು ಜನಾಂಗವು ಎಂದಾದರೂ ಇಂತಹ ಅಮೋಘವಾದ ವರವನ್ನು ತನಗೆ ಅಧೀನವಾದ ರಾಜ್ಯಕ್ಕೆ ಕೊಟ್ಟುದಿಲ್ಲ ಎಂಬ ಅಭಿಪ್ರಾಯವನ್ನು ಬ್ರಿಟಿಷರು ತಾವೇ ಸಾರಿ, ಇತರರೂ ಸಾರುವರಂತೆ ಮಾಡಿರುವರು ಸ್ವಯಂ-ನಿರ್ಧಾರ ಎಂಬುವ ಒಂದು ತತ್ವವು ಯೂರೋಪಿನಲ್ಲಾದ ಮಹಾಯುದ್ಧದ ಕೊನೆಗೆ ಅತಿ ನಿರ್ಧಾರವಾಗಿ, ಒಂದು ದೊಡ್ಡ ರಾಜ್ಯವು ಹಲವು ಚಿಕ್ಕ ಸ್ವತಂತ್ರ ರಾಜ್ಯಗಳಾಗಿ ಒಡೆದುದನ್ನು ತಿಳಿದೂ, ನಮ್ಮ ಸೆಕ್ರೆಟರಿಯಾಗಿದ್ದ ಹೋರರು ಆ ತತ್ವವನ್ನು ತಾನೆಂದೂ ಮನ್ನಿಸಿದವನಲ್ಲ ಎಂದು ನುಡಿದು,—ಒಬ್ಬರ ದಾನವನ್ನು ಮತ್ತೊಬ್ಬರು ಸ್ವೀಕರಿಸಬೇಕೆಂಬುದೇನೂ ಇಲ್ಲವೆಂಬ ಮಾತನ್ನು ಮರೆತಿರುವ ಹಾಗೂ ತೋರುತ್ತಿದೆ ಈ ಟೋರಿಗಳ ಅಭಿಪ್ರಾಯದಲ್ಲಿ, ಹಿಂದೀಯರಿಗೆ ಇದರಿಂದ ತೃಪ್ತಿಯಿಲ್ಲವೆಂದು ತಿಳಿದೂ, ತಮ್ಮವರ ಸಾಮಾನ್ಯ ತ್ಯಾಗಬುದ್ಧಿಯು ಇಷ್ಟರ ವರೆಗೆ ಇದೆ ಎಂದು ಮಾತ್ರ ಈ ದಾನವನ್ನು ಸ್ವೀಕರಿಸಿರಿ ಎಂದು ಒಂದು ವಾಕ್ಯವು ಪ್ರಕಟವಾಗಿದೆ. ಭಾರತೀಯರು ಇಷ್ಟು ಒತ್ತಾಯಪಡಿಸಿ ಸ್ವಲ್ಪವಾದರೂ ತಮ್ಮ ಚೇತನದ ಪರಿಚಯವನ್ನು ಮಾಡಿಕೊಡದಿದ್ದಲ್ಲಿ, ಈ ದಾನವೆಂಬುದು ತಾವಾಗಿ ಬ್ರಿಟಿಷರಿಂದ ಬರುತ್ತಿದ್ದಿತೆ? ಎಂಬ ಒಂದು ಪ್ರಶ್ನೆ ಇದೆ. ಬರುತ್ತಿದ್ದುದಾದರೆ, ಎಲ್ಲರಿಗೂ ತೃಪ್ತಿಕರವಾಗುವ ರೀತಿಯಲ್ಲಿ ಈ ದಾನವನ್ನು ಕೊಡಬಹುದಾಗಿರಲಿಲ್ಲವೆ? ಬ್ರಿಟಿಷರು ದಾನ ಕೊಡಲೂ, ಭಾರತೀಯರು ದಾನ ಸ್ವೀಕರಿಸಲೂ ಮಾತ್ರ ಜನ್ಮವೆತ್ತಿದವರೆ? ಈಗ ಕೊಟ್ಟಿರುವ ದಾನವನ್ನು ತೃಪ್ತಿಯಿಂದ ಕಂಡಪಕ್ಷಗಳೆಷ್ಟು ಯಾವುವು ಎಂಬುದನ್ನು ವಿಮರ್ಶಿಸೋಣವೆಂದರೆ, ಏಳೂ ವರ್ಷಗಳಲ್ಲಿ ಈ ಶಾಸನವನ್ನು ರೂಪಿಸುವಾಗ ಶನಿಯ ಬಾಧೆಯಂತೆ ನಾನಾ ಪೀಡೆಗಳಿದ್ದುದರಿಂದ ಈ ಆಕ್ಟು ಇನ್ನಷ್ಟು ಅಪ್ರಿಯವಾಗಲೂ ಕಾರಣವಾಯಿತೆಂದೂ ಹೇಳಬೇಕಾಗಿದೆ

ನಾವೂ ನೀವೂ ಸೇರಿ ಒಂದು ಮಸೂದೆಯನ್ನು ತಯಾರಿಸೋಣವೆಂದು ಚಕ್ರಗೋಷ್ಠಿಗೆ ಆಮಂತ್ರಣವಾಗಿದ್ದಿತು ಎರಡನೆ ವರ್ಷದಲ್ಲಿ, ಇತ್ತಂಡಗಳೂ ಸೇರಿದುದು ನಿಜವಾದರೂ, ಸಹೃದಯತೆಯ ಪ್ರಸ್ತಾಪ ಹಿಂಜರಿಯಿತು, ಹೆಚ್ಚೇಕೆ, ಲೇಬರ್ ಪಕ್ಷವೇ ಹಿಂತೆಗೆಯಿತು ಲಿಬರಲ್ ಪಂಗಡದವರೂ ಆಕ್ಟಿನ ಮೂಲಸೂತ್ರಗಳೇ ತಪ್ಪೆಂದು ಅಭಿಪ್ರಾಯ ತೋರಿಸಿಯದೆ ಹೀಗಾಗಿ, ಈಗ ಬ್ರಿಟಿಷ ಪಾರ್ಲಿಮೆಂಟಿನ ಕೈಯಿಂದ ಬರೆಯಲಾದ ಆಕ್ಟು ಎಂಬುದು ಬರೀ ಕನ್ಸರ್ವೇಟಿವ ಒಕ್ಕಣೆ ತುಂಬಿರುವಂತಹದಾಗಿದೆ ಮಸೂದೆಯನ್ನು ತಯಾರಿಸುವ ಮೊದಲಿದ್ದ ಧ್ಯೇಯವು, ತಯಾರಿಸುವಾಗ ಇದ್ದಿಲ್ಲ; ಈ ಧ್ಯೇಯವೇ ಆದರೂ ತಯಾರಾದಾಗ ಮಾಯವಾಗಿ ಮೂರನೆಯದೊಂದು ಸೂತ್ರವು ಓಡಿಯಿತು, ಕಮಿಟಿಯಲ್ಲಿ ಚರ್ಚಿಸುವಾಗ ಅದೂ ಬದಲಾಯಿತು ನವಿಲನ್ನು ಬರೆಯಲೆಳಸಿ, ಕೋಳಿಯಂತೆ ಅಂಕಿಸಿ, ಕಾಗೆಯ ತೆ ಬಣ್ಣ ಕೊಟ್ಟಿದ್ದರೂ ಚಿಂತೆಯಿದ್ದಿಲ್ಲ, ನವಿಲಿನ ಆಕಾರವಾದ ಹಾವಿನಂತೆ ಈ ಚಿತ್ರವು ಹೊರಬಿದ್ದಿತೆಂದೇ ವಿಮರ್ಶಿಸುವವರಿದ್ದಾರೆ ಸ್ವರಾಜ್ಯ ಅಥವಾ ಡೊಮಿನಿಯನ್ ಸ್ಟೇಟಸ್ ಎಂಬ ಮಾತುಗಳೇ ಎದ್ದು ಹೋಗಿವೆ, ಇನ್ನು ಇಂಗ್ಲಿಷ ಶಬ್ದಕೋಶದಿಂದ ಆ ಮಾತುಗಳೇ ಮಾಯವಾಗಬಹುದು (ಸ್ಪಿರಿಟ್) ಅದರ ತತ್ವವು ತಿಳಿದವರಿಗೆ ಮಾತಿನಿಂದೇನಾಗಲೀ ಎಂಬ ದೇಶ ಸ್ವರಾಜ್ಯದ ತಿರುಳನ್ನು ಕೊಡಿ, ಹೊರತು ಬರೀ ನೆರಳನ್ನಲ್ಲ ಎಂದು ಕೇಳಿದ ಹಿಂದೀಯರಿಗೆ ಈಗ ಬೋಧಿಸಲಾಗುವ ವಿಚಾರವಾಗಿದೆ ಹಿಂದೀ ಅಧಿಕಾರಿಗಳನ್ನು ಹೆಚ್ಚಿಸಿರೆಂದರೂ ಸಾಧ್ಯವಿಲ್ಲ, ಸೈನ್ಯಗಳನ್ನು ಕಡಿಮೆ ಮಾಡಿ, ಅಥವಾ ಹಿಂದೀಯರನ್ನು ಸೈನ್ಯದಲ್ಲಿ ಹೆಚ್ಚಿಸಿರಿ ಎಂದರೂ ಆಗದು, ವಾಣಿಜ್ಯದಲ್ಲೂ ಹಾಗೆಯೇ ಹಿಂದೀಯರಿಗೆ ಸ್ಪರ್ಧೆಯಿಂದ ಕೆಡುವ ಹಾಗೇನೂ ವಿದೇಶೀಯರು ಪ್ರಯತ್ನಿಸಿದಂತೆ ಮಾಡಿಕೊಂಡರೂ ಅದಾಗದೆಂದಾಯಿತು ಅಧಿಕಾರಿಗಳಿಗೆ ರಕ್ಷಾ ಕವಚಗಳು ಎಷ್ಟಿವೆಯೆಂದರೆ ಸ್ವರಾಜ್ಯ ಚಳವಳವೇ ಮರೆತು ಹೋಗುವ ವರೆಗೂ ಈ ಸರ್ವಿಸುಗಳ ಒತ್ತಾಟವು ಕುಂದದಾರದಂತಿದೆ

ಯಾವುದನ್ನು ಕುರಿತಾಗಿ ತಿದ್ದುಪಡಿಯಾಗಬೇಕೆಂದೂ, "ಈ ದೇಶದ ವಿದ್ಯಮಾನಗಳು ನೆಟ್ಟಗಿಲ್ಲ, ಪಾರ್ಲಿಮೆಂಟಿನಂತಹ ಕ್ರಮವನ್ನು ಈ ಉಷ್ಣಹವೆಯ ದೇಶಗಳಲ್ಲಿ ಜ್ಯಾರಿಗೆ ತರುವುದು ಕಷ್ಟ"ವೆಂದು ಬೋಧನೆಯಾಗುತ್ತ, ವೋಟರರ ಸಂಖ್ಯೆ ಹೆಚ್ಚಿಸಿರುವುದನ್ನು ಅಭ್ಯುದಯವೆಂದೆನ್ನುತ್ತ, ಪ್ರತಿನಿಧ್ಯದ ಗೌರವವು ಪ್ರತಿನಿಧಿತ್ವವೂ ನಿಷ್ಪ್ರಯೋಜಕವಾಗುವ ಹಾಗೆ ಮಾಡಲಾಗಿದೆ ಎಂದೊಂದು ದೂರು ಬಹಳವಾಗಿ ಕೇಳಿಸುತ್ತಿದೆ

ವರಿಷ್ಠ ಸರಕಾರದ ಆಯವ್ಯಯವನ್ನು ಗೊತ್ತುಹಚ್ಚುವ ವಿಷಯದಲ್ಲಿ ರೂಪ್ಯಾಯಲ್ಲಿ ಹಸ್ತಾಂತರದ ಮೇಲೆ ಪ್ರಜಾಧಿಕಾರವಿಲ್ಲವಾಗಿದೆ. ಪ್ರತಿಯೊಂದು ಪ್ರಾಂತ್ಯದ ಗವರ್ನರರೂ ತಮಗೆ ಸಂದೋರಿದಂತೆ ಕಾನೂನನ್ನು ತಾವೇ ಹೊರಡಿಸಬಹುದೆಂದು ಈಗ ವೈಸರಾಯರಿಗೆ ಮಾತ್ರ ಇರುವ ಅಧಿಕಾರವನ್ನು ಹದಿಮೂರು ಮಂದಿಗೆ ನಿರಂಕುಶವಾಗಿ ಕೊಡಲಾಗಿದೆ ಅಧಿಪತ್ಯಗಳಿಗೆಲ್ಲ ಒಂದರ ಮೇಲೊಂದಾಗಿ ಎರಡು ಕೌನ್ಸಿಲುಗಳನ್ನು ಕೊಟ್ಟು, ಪ್ರಜಾಸಮೂಹದ ಅಭಿಪ್ರಾಯವನ್ನು ಪ್ರಭುಗಳು ಮುರಿದಿಕ್ಕುವ ಹಾಗೆ ಆ ಯೋಜನೆಯಿದೆ ಎಲ್ಲಕ್ಕೂ ಮೊದಲಾಗಿ ಫೆಡರೇಶನಿಗೆ ಅಗತ್ಯವಾಗಿ ಸ್ಥಳೀಯ ರಾಜ್ಯಗಳೊಳಗಣ ಅರೆವಾಸಿ ಪ್ರಜೆಗಳುಳ್ಳ ರಾಜ್ಯಗಳು ಮೆಂಬರರಾಗಿ ಅಧಿಪತ್ಯಗಳೊಡನೆ ಸೇರಬೇಕಾಗಿದೆ

ಹಲವು ಆಕ್ಷೇಪಣೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಡಲಾಗಿದೆ ಇಂತಹ ನಿಬಂಧನೆಗಳನ್ನು ಸ್ವೀಕರಿಸಿ ಕಾರ್ಯನಿರ್ವಹಿಸುವುದೆಂದರೆ, ಕಾರ್ಯನಿರ್ವಹಿಸಿದಾಗಲಾದರೂ ಕೊಂಚ ಗೊಣಗುತ್ತಲೇ ಆದರೂ ಈ ದೋಷಗಳೆಲ್ಲವು ಮೂಡಿ ನಿಲ್ಲುವುದಕ್ಕಿದೆ ಆದರೂ, ಕಾರ್ಯತಃ ಮುಂದರಿದು ಸ್ವರಾಜ್ಯಾರ್ಹರೆಂದು ತೋರಿಸಿಕೊಂಡು, ಇನ್ನೂ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆಯಬಹುದಾಗಿ ಆಕ್ಟಿನ ಹಿಂಬಲವು ಪ್ರೇರೇಪಣೆ ಕೊಟ್ಟಿರುವುದು ಈ ಆಕ್ಟನ್ನು ಉಪಯೋಗಿಸುವ ಬದಲಾಗಿ ಅದನ್ನು ಮುರಿದು ಆತಂಕಿಸಿ, ಹೆಚ್ಚಿನ ಸ್ವಾತಂತ್ರ್ಯ ಪಡೆಯಬಹುದೆಂದೂ ಅಥವಾ ಬೇಕೆಂದೂ ಸಾರುವ ಒಂದು ಪಂಗಡವು ಈಗಲೇ ಬಲವಾಗಿ ಹೇಳುತ್ತಿರುವ ಹಾಗೆಯೆ, ಆಕ್ಟನ್ನು ಸ್ವೀಕರಿಸಿ ಪ್ರಾತಿನಿಧ್ಯ ಪಡೆದು ಆಳಲು ತೊಡಗಬೇಕೆಂದು ಮುಂದಡಿಯಿಡಲು ಪಕ್ಷಕಟ್ಟಿಕೊಳ್ಳುವವರೂ ಒತ್ತಿ ಹೇಳುತ್ತ ಸಾರುತ್ತಿರುವರು ಹೀಗಾದರೆ, ಮುಂದೆ ದೇಶದಲ್ಲಿ ಸೋದರತೆ ಬೆಳೆವುದಕ್ಕಾಗಲಿ, ಬ್ರಿಟಿಷರೊಡನೆ ಬಾಂಧವ್ಯ ಹೆಚ್ಚುವುದಕ್ಕಾಗಲಿ ಹೆಚ್ಚಿನ ಪ್ರೋತ್ಸಾಹ ಹುಟ್ಟೀತೆ? ಈ ಪ್ರಶ್ನೆಗೆ ಎರಡು ವರ್ಷಗಳ ಅವಕಾಶವೇ ಉತ್ತರ ಕೊಡಬಹುದು

ಸೆಕ್ರೆಟರಿ ಲೋರ್ಡ್ ಜೆಟ್ಲೆಂಡರ ಮಾತೂ, ಮಹಾತ್ಮಾ ಗಾಂಧಿಯವರ ಮಾತೇ ಆಗಿದ್ದು, ಈ ಆಕ್ಟು ಮಂಜೂರಾಗುವಾಗ ಪ್ರಕಟವಾಗಿದ್ದುದು ಎಲ್ಲರ ನೆನಪಿನಲ್ಲಿರಲಿ — ಹಗೆಯನ್ನು ಹಗೆಯಿಂದ ಅಣಗಿಸಲಾಗುವುದಿಲ್ಲ, ಪ್ರೇಮವೇ ಹಗೆಯನ್ನು ಗೆಲ್ಲುವುದು ಬ್ರಿಟಿಷರಾಗಲಿ, ಹಿಂದೀಯರಾಗಲಿ, ಅಥವಾ ಇವರಲ್ಲಿನ ಪಕ್ಷಗಳಾಗಲಿ, ಬುದ್ಧದೇವನ ಈ ವಾಕ್ಯವನ್ನು ಮರೆಯದಿರಲಿ ಪರಸ್ಪರ ಪ್ರೇಮ-ದೇಶಹಿತ-ಇವೆರಡನ್ನೆ ಅಂಗೀಕರಿಸಿ ನಡೆಯುವಂತೆ ಸರ್ವರಿಗೂ ಈ ಹೊಸ ಶಾಸನವು ಪ್ರೇರೇಪಿಸಲಿ

# ಸ್ಫುಟವಿಚಾರಗಳು.

**ಡಾ॥ ಭಗವಾನದಾಸರ ವಿವಾಹ ಮಸೂದೆ**

ವಿಠಂಗಕ ಪಟೇಲರು ಒಮ್ಮೆ 1918ರಲ್ಲಿ ಮುಂತಂದು ಹಿಂತೆಗೆದ ಅಂತರ್ಜಾತೀಯ ವಿವಾಹಗಳ ಮಸೂದೆಯನ್ನು ಶ್ರೀಮಾನ್ ಭಗವಾನ ದಾಸರು ಎಸೆಂಬ್ಲಿಯ ಮುಂದೆ ತರಲಿರುವರು ಹಿಂದೂ ವಿವಾಹಗಳ ಸಿಂಧುತ್ವದ ಕಾನೂನು ಎಂದು ಇದಕ್ಕೆ ಹೆಸರು ಕನ್ಯೆಯು ವಿವಾಹವಾದ ಕೂಡಲೆ ಗೋತ್ರವು ಬದಲಾಗುವುದು ಹಾಗೆಯೆ, ವರ್ಣವೂ ಬದಲಾಗುವುದಕ್ಕೆ ಅಡ್ಡಿಯಿಲ್ಲವೆಂದು ಶಾಸ್ತ್ರಾಧಾರವನ್ನು ಕೊಟ್ಟು,—ಒಂದೇ ಜಾತಿಯವರಲ್ಲವಾದರೂ ಇಂತಹ ವಿವಾಹದಲ್ಲಿ ಯಾವ ಹಿಂದೂ ವಧೂವರರು ಸೇರಬಹುದೆಂದೂ, ಅವರಿಬ್ಬರೂ ಒಂದೇ ಜಾತಿಯವರಾಗುವ ಅಗತ್ಯವೇ ಇಲ್ಲವೆಂದೂ, ಯಾವುದೊಂದು ಪದ್ಧತಿ ಅಥವಾ ಒಂದೂ ಲೋಕ ಹೇಗಿದ್ದರೂ ಈ ತೆರದ ವಿವಾಹಗಳು ಸಿಂಧುವಾಗಬೇಕೆಂದೂ ಈ ಮಸೂದೆಯ ಸುಲಭ ಸಾಧನೆಯಿದೆ ಅಂತೂ, ಸನಾತನಿಗಳಿಗೆ ವಿರಾಮವಿಲ್ಲ.

# ಮಂಗಳೂರು.

ಮಂಗಳೂರು ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲಾ ಸದನದಲ್ಲಿ ತಾ. ೨೬-೭-೪೮ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ಸೆಂಟರಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಕಾರ್ಯ ನಿರ್ವಾಹಕ ಸಭೆಯು ಸದರಿ ಮಂಗಳೂರು ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿರುವ ಮ. ರಾ. ಸಂಜೀವಭಟ್ ಎಂ.ಎ., ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ದಿನ ೮೬ ಮಂದಿ ಉಪಾಧ್ಯಾಯರೂ ೧೫ ಮಂದಿ ಉಪಾಧ್ಯಾಯಿನಿಯವರೂ ಹಾಜರಿದ್ದರು. ಕ್ರಮದಂತೆ ಕಳೆದ ಮಾರ್ಚ್ ತಿಂಗಳಲ್ಲಿ ಸೇರಿದ ಸಭೆಯ ವರದಿಯನ್ನು ಸಭೆಯ ಮುಂದಿಟ್ಟು, ಡೆಪ್ಯುಟಿ ಇನ್ಸ್‌ಪೆಕ್ಟರರ ಆಫೀಸಿನಿಂದ ಬಂದ ಸರ್ಕಿಲಾರು ನಂಬ್ರ R. C. ೭೯೫/೪೮ನ್ನು ಪ್ರಕಟಿಸಿ ಸದ್ರಿ ಆಫೀಸಿನಿಂದಲೇ ಕಳುಹಿಸಲ್ಪಟ್ಟದ್ದ C. ೭೩೬/೪೮ನೇ ಸರ್ಕಿಲಾರುಗಳನ್ನು ಆಫೀಸಿನ ಸೂಚನೆಯ ಮೇರೆಗೆ ಸಭೆಗೆ ಬಂದಿದ್ದ ಬೋ. ಶಾಲೆಗಳ ಮುಖ್ಯ ಅಧ್ಯಾಪಕರಿಗೆ ಬಟ್ವಾಡೆ ಮಾಡಿದ ಬಳಿಕ ಆಫೀಸಿನ ೧೯೩೬ನೇ ಇಸವಿಯ R. C. ನಂಬ್ರ ೬೦೬/೩೬ನೇ ಸರ್ಕಿಲಾರಿನಲ್ಲಿ ಹೇಳಿದ ಮೇರೆಗೆ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸೆಕ್ರಿಟರಿಗಳ ಚುನಾವಣೆಗಳು ನಡೆದುವು. ಸಂಘದ ಮೆಂಬರರ ಅಪೇಕ್ಷೆಗನುಸರಿಸಿ ಸದರಿ ಮಂಗಳೂರು ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರರು 'ಎಕ್ಸ್ ಒಫಿಶಿಯೋ ಪ್ರೆಸಿಡೆಂಟ್'ರಾಗಲು ಸಮ್ಮತಿಸಿದರು. ಮೇಲೆ ಹೇಳಿದ ಸೆಂಟರಿಗೆ ಸೇರಿದ ಬಲ್ಮಠ ಮಿಶ್ಯನ್ ಶಾಲೆಯ ಮುಖ್ಯ ಅಧ್ಯಾಪಕ ರಾ. ಬ. ಜೀವೋತ್ತಮ ರಾವ್ ವೈಸ್ ಪ್ರೆಸಿಡೆಂಟರಾಗಿಯೂ, ಬೆಂದೂರು ಸೈಂಟ್ ಸೆಬೆಸ್ತಿಯನ್ಸ್ ಹಾ. ಎ. ಶಾಲೆಯ ಅಧ್ಯಾಪಕ ಶ್ರೀ ಪಿ. ಸರ್ವೋತ್ತಮರಾಯರು ಕಾರ್ಯದರ್ಶಿಗಳಾಗಿಯೂ, ಸದರಿ ಶಾಲಾ ಅಧ್ಯಾಪಕ ಶ್ರೀ ಎಂ. ಲಕ್ಷ್ಮೀನಾರಾಯಣ ರಾಯರು ಜತೆಕಾರ್ಯದರ್ಶಿಗಳಾಗಿಯೂ ನಿಯಮಿಸಲ್ಪಟ್ಟಿರುವರು.

"ಕಳೆದ ತಾ. ೩೦-೬-೪೮ರಲ್ಲಿ ಮಂಗಳೂರಲ್ಲಿ ಜರುಗಿದ ಕಾರ್ಯಕಾರೀ ಮಂಡಳಿಯ ಸಭೆಯಲ್ಲಿ ನಿರ್ಣಯಿಸಿದ ಮೇರೆಗೆ ಇದೇ ಆಗೋಸ್ತು ತಿಂಗಳ ತಾ. ...ನೇ ರವಿವಾರ ಶ್ಯಾಮ ಘಂಟೆ ೩ಕ್ಕೆ ಮಂಗಳೂರು ಜಿಲ್ಲಾ ಬೋ. ಆಫೀಸಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವರ್ಗದಾರರ ಸಂಘದ ಮಹಾಸಭೆಯು ಜರಗುವುದು. ಸಂಘದ ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ. ವಿಶೇಷ ಸೂಚನೆ — ಕಾಡಿನ ರಿಯಾಯಿತಿಗಳ ರದ್ದಿನ ಕುರಿತು ಕಾಡಿನ ಇಲಾಖೆಯ ಆಡಳ್ತೆ ನಡೆಸುವ ಮಾನ್ಯ ಲಾ ಮೆಂಬರರು ಈ ಜಿಲ್ಲೆಯಲ್ಲಿ ಸಂಚರಿಸುವರೆ ಬರುವ ಸಪ್ಟಂಬರ ತಿಂಗಳಲ್ಲಿ ಬರುವರೆಂದು ತಿಳಿಯುತ್ತೇವೆ. ಈ ವಿಷಯ ಪತ್ರಿಕೆಗಳಲ್ಲಿ ಈ ಮುಂಚೆ ಸೂಚಿಸಿದ ಮೇರೆಗೆ ಸಂಘದ ಪರವಾಗಿ ತಯಾರಿಸಿದ ಕಮಿಟಿಯ ರಿಪೋರ್ಟ್ ಮತ್ತು ಅದರ ಪ್ರತಿ ಅವರಿಗೆ ಕಳುಹಿಸಿಯದೆ. ಅದಕಾರಣ (೧) ಸದರಿ ರಿಯಾಯಿತಿಗಳ ರದ್ದತಿ ಕುರಿತು ಮತ್ತು (೨) ಕಾಡಿನ ಬಾಬಿನಲ್ಲಿ ಜನರಿಗೆ ಇರುವ ಇತರ ಯಾವತ್ತು ಸಂಕಷ್ಟಗಳನ್ನು ಮಾನ್ಯ ಮೆಂಬರರು ತಿಳಿಯ ಯಾ ಸಂದರ್ಶಿಸಬೇಕೆಂತ ಇರುವವರು ಬರಹ ಮೂಲಕ ಕೂಡಲೇ ನನಗೆ ಕಡ್ಡಾಯವಾಗಿ ದಯಮಾಡಿ ತಿಳಿಸುವುದಲ್ಲದೆ, ಮೇಲೆ ಕಾಣಿಸಿದ ಮಹಾಸಭೆಗೂ ಬರಬೇಕಾಗಿ ವಿನಂತಿ" ಎಂದು ಶ್ರೀ ಕೋಟಿ ರಾಮಕೃಷ್ಣ ಕಾರಂತರು ತಿಳಿಸುತ್ತಾರೆ.

ಉಳ್ಳಾಲ ಅದ್ವೈತಾಶ್ರಮದಲ್ಲಿ ತಾ. ೭-೭-೪೮ನೇ ಅಧಿವೇಶನದಲ್ಲಿ, ಅದ್ವೈತ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯವರು ನಿರ್ಣಯಿಸಿದಂತೆ ಮಂಗಳೂರು ಕದ್ರಿಯಲ್ಲಿ ಶ್ರೀ ಶಂಕರ ವಾಚನಾಲಯವೆಂಬ ಓದುವ ಸಂಸ್ಥೆಯು ತಾ. ೧-೮-೪೮ನೇ ದಿನ ಮ. ರಾ. ಮುಟ್ಟಾಪೊರವರ ಕಟ್ಟಡದ ಉಪ್ಪರಿಗೆಯಲ್ಲಿ ರಾ. ಪಂಡಿತ ಶಿವ ಕೃಷ್ಣಯ್ಯ ಕರ್ನಾಟಕ ಪಂಡಿತ, ಸೈಂಟ್ ಎಲೋಸಿಯಸ್ ಕಾಲೇಜ್ ಮಂಗಳೂರು ಮತ್ತು ಅದ್ವೈತ ಸಮಿತಿಯ ಅಧ್ಯಕ್ಷರವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

---

ತಾ. ೧-೮-೪೮ರಲ್ಲಿ ಸೇರಲಿಕ್ಕಿದ್ದ ಅದ್ವೈತ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯ ದ್ವಿತೀಯಾಧಿವೇಶನಕ್ಕೆ ಕಾರಣಾಂತರ ಇಲ್ಲದ್ದರಿಂದ ಆ ಸಭೆಯನ್ನು ಇದೇ ತಾ. ೧೫-೮-೪೮ನೇ ಆದಿತ್ಯವಾರ ೩ ಘಂಟೆಗೆ ಸಮಿತಿಯ ಕಾರ್ಯಾಲಯದಲ್ಲಿ ಜರುಗಿಸುವಂತೆ ನಿರ್ಣಯವಾಗಿದೆ.

---

ಇದೇ ಆಗೋಸ್ತು ತಾ. ೩ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೪೫ ಮರಣಗಳೂ ೩೯ ಜನನಗಳೂ ಆಗಿವೆ, ೧ ಮರಣಗಳು ಮಾಂಸಿಬೇದಿಯಿಂದಾಗಿ.

ಇಲ್ಲಿಯ ಮಿತ್ರಮಂಡಳಿಯ ಅಭ್ಯಾಸಗೋಷ್ಠಿಯು ಇದೇ ತಾ. ೧೧ನೇ ಆದಿತ್ಯವಾರ ೪॥ ಗಂಟೆಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಸೇರಲಿರುವುದು. ಚರ್ಚಾ ವಿಷಯವು ಶ್ರೀಯುತ ಕಡೆಂಗೋಡ್ಲು ಶಂಕರ ಭಟ್ಟರ ಕವಿತೆಗಳು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ. ಇತರರಿಗೂ ಸ್ವಾಗತವಿದೆಯೆಂದು ಮಿತ್ರಮಂಡಳಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇದೇ ತಾ. ೧೧ರಿಂದ ಸ್ಥಳೀಯ ಶ್ರೀ ಕೃಷ್ಣಸಿನೆಮದಲ್ಲಿ ಪ್ರಖ್ಯಾತ ಪ್ರೊಡ್ಯೂಸರ್ ಇವರ "ದಿ ಏಕ್ಸ್" ಅಥವಾ "ಬೊಂಬ್ಯಾ-ಕಿ-ಸೋಹನಿ" ಎಂಬ (ಹೃದಯಸ್ಪಂದಗೊಳಿಸುವ ಪತ್ತೇದಾರಿ ಕಥೆ) ಚಲಚ್ಚಿತ್ರವು ಪ್ರದರ್ಶಿಸಲ್ಪಡುವುದು. ಈ ಚಿತ್ರದಲ್ಲಿ ರೂಪಿಣಿ ಪತ್ನ, ಅಲಕ್‌ನಂದ, ಮಾ. ಬಚ್ಚು, ಕಾಶೀನಾಥ ಮೊದಲಾದ ಹೆಸರುವಾಸಿ ಅಭಿನಯಗಾರರು ಅಭಿನಯಿಸಿರುವರು.

ಯುನಿವರ್ಸಿಟಿ ಎಕ್ಸ್‌ಟೆನ್ಶನ ಮಂಗಳೂರು, ಇದರ ನೇತೃತ್ವದಲ್ಲಿ ಇದೇ ತಾ. ೧೦ ಮತ್ತು ೧೧ನೇ ದಿನಗಳಲ್ಲಿ ಸಂಜೆ ಘಂಟೆ ೫-೩೦ಕ್ಕೆ ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಶ್ರೀ ಎ. ಶ್ರೀನಿವಾಸಯ್ಯ, ಬಿ. ಎ. ಬಿ. ಎಲ್. ಇವರು 'ಬ್ರಿಟಿಷ್ ಇಂಡಿಯಾದಲ್ಲಿ ಕಾನೂನುಗಳ ಮತ್ತು ಅವುಗಳ ಪ್ರಯೋಗ'ವೆಂಬುದರ ಕುರಿತು ಭಾಷಣ ಮಾಡಲಿರುವರು. ದಿವಾನ್ ಬಹದೂರ್ ಬಿ. ವೆಂಕಟರಾಯರು ಅಧ್ಯಕ್ಷರು.

"ತಾ. ೯-೮-೪೮ನೇ ಸೋಮವಾರ ಸಂಜೆ ಘಂಟೆ ೬-೩೦ಕ್ಕೆ ಮಂಗಳೂರು ಬಿ. ಸಿ. ಮಿಶನಿನಲ್ಲಿ ಜಿಲ್ಲಾ ಹರಿಜನ ಸೇವಾ ಸಂಘದವರು ನಡೆಸುತ್ತಿರುವ ಟೈಲರಿಂಗ್ ಕ್ಲಾಸನ್ನು ನೋಡುವುದಕ್ಕಾಗಿ ಶ್ರೀ ಬಿ. ಆರ್. ಕಕ್ಕೇರರು ತಮ್ಮ ಪ್ರಿಯ ಸಹೋದರಿಯೊಡನೆ ಬಂದಿದ್ದರು. ಸಂತೋಷವನ್ನು ಸೂಚಿಸಿ ಸಂಘಕ್ಕೆ ರೂ. ೧೫ ದಾನ ಕೊಟ್ಟಿರುವರು. ಮತ್ತು ವರ್ಷಕ್ಕೆ ರೂ. ೧೦೦ರಂತೆ ಆದರ ಆಯವ್ಯಯ ಪ್ರತಿ ತಿಂಗಳಲ್ಲಿ ಕೊಡುತ್ತಾ ಬರುವುದಾಗಿ ತಮ್ಮ ಪುತ್ರಿಯ ಮೂಲಕ ಹೇಳಿಸಿರುವರು. ಮಂಗಳೂರಿನವರಿಗೆ ಧನಸಹಾಯವನ್ನು ಪಡೆದು ಆಸ್ತಾಮಿನಲ್ಲಿ ಈ ಮಹಿಳೆಯರ ಈ ಪ್ರಶ್ನೆ ಕೆಲಸವು ಶೀಘ್ರ ಸ್ಥಾಪಿಸುವಂತೆ ಸಂಘದ ಕಡೆಯಿಂದ ಅವರಿಗೆ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇವೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಾಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ಅದರ ಆಫೀಸಿನಲ್ಲಿ ಇದೇ ತಾ. ೧೯ನೇ ದಿನ ಪೂರ್ವಾಹ್ನ ಘಂಟೆ ೧೧ಕ್ಕೆ ಜರಗಲಿರುವುದು.

ದಿ ಸಿ. ಪಿ. ಕಂಪೆನಿ ಲಿಮಿಟೆಡ್, ಇದರ ಈ ವರ್ಷದ ಜನರಲ್ ಮೀಟಿಂಗು ಇದೇ ತಾ. ೨೧ಕ್ಕೆಂದು ನಿರ್ಣಯಿಸಿರುವರು. ಈ ಕಂಪೆನಿಯು ಈ ವರ್ಷ ತನ್ನ ಪಾಲುಗಾರರಿಗೆ ಶೇಕಡಾ ೧೫ರಷ್ಟು ಡಿವಿಡೆಂಟ್ ಕೊಟ್ಟಿರುತ್ತದೆ. ಸಿಬ್ಬಂದಿಗೆ ಭತ್ತಿ ಬೋನಸ್ ಕೊಟ್ಟಿರುತ್ತದೆ.

ನಿನ್ನೆ ರಾತ್ರಿ ಇಲ್ಲಿಯ ಮಹಾಮ್ಮಾಯಿ ದೇವಸ್ಥಾನದ ಬಳಿಯಿರುವ ಡಾ. ಕೆ. ಮಾಧವಶೆಣ್ಯೆಯವರ ಡಿಸ್ಪೆನ್ಸರಿಗೆ ಕಳ್ಳರು ನುಗ್ಗಿರುವರು. ಬೆಲೆಬಾಳುವ ಕಳವಾಗಿರುವುದಿಲ್ಲವೆಂದು ತಿಳಿದುಬಂದಿದೆ.

## ಬೊಕ್ಕಪಟ್ಣದಲ್ಲಿ ಇಬ್ಬರು ಮೊಗವೀರರ ಮರಣ!

### ಸಮುದ್ರದ ತೆರೆಗಳ ರೋಷಕ್ಕೆ ತುತ್ತಾದರು

ತಾ. ೪-೮-೪೮ನೇ ಪೂರ್ವಾಹ್ನ ೧೦ ಗಂಟೆಗೆ ಇಲ್ಲಿಯ ಬೊಕ್ಕಪಟ್ಣದ ಪ್ರಸಿದ್ಧ ಮೊಗವೀರರಾದ ಶ್ರೀ ದೇಜ ಮತ್ತು ಶ್ರೀ ಬಬ್ಬು ಎಂಬಿಬ್ಬರು ಸಮುದ್ರಕ್ಕೆ ಮೀನು ಹಿಡಿಯ ಹೋದವರು ಅಕಸ್ಮಾತ್ತಾಗಿ ತೆರೆಗಳ ಬಲೆಗೆ ಸಿಲುಕಿ ಮೃತರಾದರು. ಇವರಿಬ್ಬರ ಶವಗಳು ಈ ವಾರ್ತೆಯು ಕೊಡಲ್ಪಡುವ ವರೆಗೆ ಸಿಕ್ಕಿರುವುದಿಲ್ಲ. ಇವರೊಡನಿದ್ದ ಮತ್ತು ಕೆಲವರು ಪ್ರಾಣಾಪಾಯದಿಂದ ಹೇಗಾದರೂ ತಪ್ಪಿಸಿಕೊಂಡರು. ನೀರುಪಾಲಾದವರನ್ನು ರಕ್ಷಿಸಹೋದವರು ಕೂಡಾ ಜಖಂಗೊಂಡಿರುವರು.

---

**ಕುಂದಾಪುರ:**— ಕಳೆದ ವಾರ ಇಲ್ಲಿನ 'ಕುಂದಾಪುರ ಕ್ಲಬ್'ನಲ್ಲಿ ಜಿಲ್ಲಾ ಸಬ್ ಕಲೆಕ್ಟರರಾದ ಶ್ರೀಯುತ ಎಸ್. ವೆಂಕಟೇಶ್ವರನ್, ಎಂ. ಎ. ಐ. ಸಿ. ಎಸ್.ರವರು ಪುರಜನರ ಸಭೆ ಕರೆದು, ಕ್ಷಾಮ ಭೂಕಂಪದಿಂದ ನಿರ್ಗತಿಕರಾದವರಿಗೆ ತಕ್ಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡುವ ಬಗ್ಗೆ ಸರ್ವರೂ ಯಥಾಶಕ್ತಿ ಸಹಾಯವನ್ನೀಯಬೇಕೆಂಬುದಾಗಿ ಭಾಷಣ ಮಾಡಿದರು. ಜನಸಂದಣಿಯು ಕಿಕ್ಕಿರಿದಿತ್ತು.

# ತಾಲೂಕುಗಳಿಂದ

**ಕಾರ್ಕಳ:**— ದಿ ಕೆನರಾ ನೆಸ್ಸೈಸ್ ಬಜಾರಿನ ಆಫೀಸಿನ ರಶೀದಿ ಪುಸ್ತಕ ನಂಬ್ರ ೩೦೫ರಿಂದ ೪೦೦ರ ವರೆಗೆ ಕಾಣೆಯಾಗಿ ಹೋಗಿದೆಯೆಂದೂ, ಈ ಪುಸ್ತಕಗಳಿಗೆ ಸಂಬಂಧಪಟ್ಟ ರಶೀದಿಗಳನ್ನು ನಂಬಿ ಯಾರಾದರೂ ಹಣ ಕೊಟ್ಟರೆ ಅಥವಾ ಅವುಗಳನ್ನು ಪಡಕೊಂಡರೆ ಅದಕ್ಕೆ ತಾನು ಜವಾಬ್ದಾರನಲ್ಲವೆಂದೂ ಸದ್ರಿ ಬಜಾರಿನ ಪ್ರೊಪ್ರೈಟರರಾದ ಶ್ರೀ ಬಿ. ಅಚ್ಯುತ ಪೈಗಳು ತಿಳಿಸುತ್ತಾರೆ.

ತಾ. ೨೮-೭-೪೮ನೇ ದಿನ ಮದ್ರಾಸು ಕೃಷಿ ಇಲಾಖೆಯ ಅಧಿಕಾರಿಗಳಿಂದ ಇಲ್ಲಿಯ ದನಕರುಗಳ ಪರೀಕ್ಷೆ ನಡೆದು ಹಾಲು ಕೊಡುವ ೧೦ ತಿಂಗಳು ಪ್ರಾಯದ ವಕೀಲ ಶ್ರೀಯುತ ಕೆ. ಪಿ. ಕಾಮತರ ದನದ ಗಂಡು ಕರುವೂ ಕೆ. ಪಿ. ಶೇಷಗಿರಿ ಪ್ರಭುಗಳ ದನದ ಹೆಣ್ಣು ಕರುವೂ ಆರೋಗ್ಯ ಮತ್ತು ದೇಹಘಟನೆಯ ದೃಷ್ಟಿಯಿಂದ ಅತ್ಯುತ್ತಮವಾಗಿರುವುವೆಂದು ನಿರ್ಣಯಿಸಲ್ಪಟ್ಟು ಅವುಗಳಿಗೆ ಅಧಿಕಾರಿಗಳಿಂದ ಐದೈದು ರೂಪಾಯಿಗಳ ಬಹುಮಾನಗಳು ದೊರೆತುವು. ಜಾನುವಾರುಗಳನ್ನು ಚೆನ್ನಾಗಿ ಪೋಷಿಸುವವರಿಗೆ ಇದು ತಕ್ಕ ಪ್ರೋತ್ಸಾಹ.

ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರರಾದ ಮಿ. ಅಬ್ದುಲ್ ಕರಿಂ ಸಾಹೇಬ್, ಬಿ. ಎ. ಇವರು ಇಲ್ಲಿಯ ಬಳ್ಳಂಜೆ ಸಂಬ್ರಾಯರಿಗೆ ಬರೆದ ಒಂದು ಪತ್ರದಲ್ಲಿ, ಸಂಸಾರತಾಪತ್ರಯಗಳಲ್ಲಿ ಸಿಲುಕಿಕೊಂಡ ತನಗೆ ಭಗವದ್ಗೀತೆಯು ಮಾರ್ಗದರ್ಶಿಯೂ ದೇವಸಂದೇಶವೂ ಆಗಿತ್ತೆಂದು ಪ್ರಸ್ತಾಪಿಸುವುದಲ್ಲದೆ ಜೈಲುಗಳಲ್ಲಿ ಸ್ವಾತಂತ್ರ್ಯದ ಪ್ರಶ್ನೆಕಟ್ಟನ್ನಾಗಿದ್ದಕ್ಕೆ ಉಪಯೋಗವಾಗಿದ್ದವೆಂದೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಗಸ್ಟ್ ೧೫ರ ಆಗಬೇಕಾದ ಸಾರ್ವತ್ರಿಕ ಗೀತಾಪ್ರಚಾರಕ್ಕೆ ಈ ವಿಷಯಗಳಿಂದ ತುಂಬ ಪ್ರಯೋಜನವಾಗಲಿದೆ.

**ಪುತ್ತೂರು:**— ಕಾಂಗ್ರೆಸ್ಸಿನ ಪರವಾಗಿ ನಮ್ಮ ಪುತ್ತೂರು ತಾಲೂಕು ಕಮಿಟಿಯನ್ನು ಪ್ರತಿನಿಧಿಸುವರೆಯೂ, ಬರುವ ಜಿಲ್ಲಾ ಬೋರ್ಡು ಚುನಾವಣೆ ಕುರಿತು ತಾಲೂಕು ಕಮಿಟಿಯ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಪ್ರತಿನಿಧಿಗಳನ್ನು ಚುನಾಯಿಸುವರೆಯೂ ಇದೇ ತಿಂಗಳು ತಾ. ೧೫ನೇ ಆದಿತ್ಯವಾರ ಸಂಜೆ ಘಂಟೆ ೪-೩೦ಕ್ಕೆ ಪುತ್ತೂರು ರೂರಲ್ ಕ್ರೆಡಿಟ್ ಸೊಸೈಟಿಯ ಕಟ್ಟಡದಲ್ಲಿ ಸೇರುವ ಸಭೆಗೆ ತಾಲೂಕಿನ ಎಲ್ಲಾ ಸದಸ್ಯರೂ ಬರಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ ಎಂದು ಸದಾಶಿವರಾವ್ ಪತ್ತೇಕರ್ (ಸಂಚಾಲಕ) ಇವರು ತಿಳಿಸುತ್ತಾರೆ.

**ಪತಿಮಾರು:**— ಇಲ್ಲಿನ ... ಕಟ್ಟೋಣದ ನೆಲ ಪಸ್ತೈಕೆ ಹಾಳಾಗಿರುವುದರಿಂದ ... ಮೂಲಕ ಪ್ರವಾಸಿಗಳ ಮನಸ್ಸನ್ನು ಉದ್ದಿಕ್ತಗೊಳಿಸಿ ಮಳ್ಳಿಯದರ ನಾಟಕದ ತಂಡಿಯಾಗುತ್ತಿದೆ.

ಕಳೆದ ತಿಂಗಳ ತಾ. ೨೩ನೇ ಶುಕ್ರವಾರ ಪೋಸ್ಟಲ್ ಸುಪರಿಂಟೆಂಡೆಂಟ್ ಥೋಮಸ್‌ರವರು ಫಲಿಮಾರಿಗೆ ಬಂದು ಇಲ್ಲಿಯ ಬ್ರಾಂಚ್ ಪೋಸ್ಟ್ ಆಫೀಸಿನ ಇನ್ಸ್‌ಪೆಕ್ಷನ್ ಮುಗಿಸಿದರು. ಈ ಸಂದರ್ಭದಲ್ಲಿ ಇಲ್ಲಿ ಓವರ್ ಪೋಸ್ಟ್‌ಮೇನ್ ಕೊಡಬೇಕೆಂದು ಗ್ರಾಮಸ್ಥರು ತಮ್ಮ ಕಾಲಾವಳಿಗಳನ್ನು ಹೇಳಿಕೊಂಡರು. ಮಾನ್ಯ ದೊರೆಗಳವರು ಹಳ್ಳಿಗರ ಶಾಂತ್ರೆಯನ್ನು ಪೂರೈಸುವ ಆಶೆಯನ್ನು ತೋರಿಸಿರುತ್ತಾರೆ.

ತಾ. ೨ನೇ ಸೋಮವಾರ ರಾತ್ರಿ ಮೈಸೂರಿನ ಕೀರ್ತನಕಾರರಾದ ಮ. ಶ್ರೀಹರಿ ದಾಸರಿಂದ ಒಂದು ಹರಿಕಥಾ ವ್ಯಾಖ್ಯಾನವು ಇಲ್ಲಿಯ ಭವ್ಯವಾದ ಶಾಲಾ ಹಾಲಿನಲ್ಲಿ ಜರಗಿತು.

ಕಳೆದ ತಿಂಗಳಲ್ಲಿ ಇಲ್ಲಿಗೊಂದು ಪಂಚಾಯ್ತಿ ಬೋರ್ಡ್ ರಚನೆಗಾಗಿ ಮೆಂಬರರ ಚುನಾವಣೆಯು ನಡೆದು, ಐತ್ಯಕ ಸಾಹುಕಾರ ನರಸಿಂಹ ಪ್ರಭುಗಳು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಬೋ. ಹಾ. ಎ. ಶಾಲೆಯ ವರ್ಷಾವಧಿ ಪರೀಕ್ಷೆಯು ಕಳೆದ ಜುಲೈ ತಿಂಗಳ ಆಖೈರಿಯಲ್ಲಿ ಉಡುಪಿ ರೇಂಜಿನ ಡಿ. ಇನ್ಸ್‌ಪೆಕ್ಟರರವರಿಂದ ಜರಗಿಸಲ್ಪಟ್ಟಿತು. ಮಾನ್ಯ ಡಿಪ್ಯುಟಿ ಇನ್ಸ್‌ಪೆಕ್ಟರರವರು ಇಲ್ಲಿಯ ಪ್ರತಿಯೊಂದು ತರದ ಚಟುವಟಿಕೆಗಳನ್ನು ನೋಡಿ ಬಹು ಸಂತೋಷಪಟ್ಟುದಲ್ಲದೆ, ಇಷ್ಟು ಉತ್ತಮ ರೀತಿಯಲ್ಲಿರುವ ಈ ಶಾಲೆಯಲ್ಲಿ ಸ್ಥಳ ಸಂಕೋಚವಾದ ಬಗ್ಗೆ ಜಿಲ್ಲಾ ಬೋರ್ಡಿನವರು ಕೂಡಲೇ ಒಂದು ಹೊಸ ಕಟ್ಟೋಣವನ್ನು ಕಟ್ಟಿಸುವುದುತ್ತಮವೆಂದು ತಮ್ಮ ರಿಮಾರ್ಕಿನಲ್ಲಿ ಬರೆದಿರುತ್ತಾರೆ. ಮಾನ್ಯ ಬೋರ್ಡಿನವರು ಕೂಡಾ ಈ ಬಡ ಹಳ್ಳಿಯ ಶಾಲೆಯ ಮೇಲೆ ಕೃಪೆಯಿಟ್ಟು, ಕಟ್ಟೋಣದ ಬಗ್ಗೆ ಹಣ ಸೆಂಕ್ಷನ್ ಮಾಡಬಾರದೇ?

**ಮುಲ್ಕಿ:**— ಸ್ಥಳೀಯ ಸೆಂಟರಿನ ಉಪಾಧ್ಯಾಯರ ಒಂದು ಸಾಮಾನ್ಯ ಸಭೆಯು ಕಳೆದ ತಾ. ೩೧ನೇ ಶನಿವಾರ ಇಲ್ಲಿಯ ಬೋ. ಹುಡುಗಿಯರ ಶಾಲೆಯಲ್ಲಿ ಕೂಡಿತ್ತು. ಕಾಸರಗೋಡು ಬೋರ್ಡ್ ಹೈಸ್ಕೂಲಿನ ಕನ್ನಡ ಪಂಡಿತ ರಾ. ವಿದ್ವಾನ್ ಎಸ್. ಸುಬ್ಬರಾವ್ ಅಧ್ಯಕ್ಷರಾಗಿದ್ದರು.

ಸಂಘದ ವರ್ಧಂತಿಯನ್ನು ಇದೇ ಬರುವ ತಾ. ೨೧ನೇ ಶನಿವಾರ ಸೆಂಟರ್ ಸ್ಕೂಲಿನಲ್ಲಿ ಜರಗಿಸುವುದಾಗಿ ನಿರ್ಣಯಿಸಲಾಯಿತು. ಆ ಮೇಲೆ ಇನ್ನಿತರ ಕಾರ್ಯಭಾಗಗಳು ನಡೆದು, ಸಭಾಧ್ಯಕ್ಷರ ಭಾಷಣದ ನಂತರ ಉಪಕಾರಸ್ಮರಣೆಯ ಕಾರ್ಯವು ನಡೆದು ಸಭಾಂತ್ಯವಾಯಿತು.

ಮಂಗಳೂರು ತಾಲೂಕಿನ ಬೋರ್ಡ್ ಶಾಲಾ ಉಪಾಧ್ಯಾಯರಿಗೆಲ್ಲ ಜೂನ್ ತಿಂಗಳ ವೇತನವು ಬಟವಾಡೆಯಾಯಿತೆಂಬ ವರ್ತಮಾನವು ಸ್ಥಳೀಯ ಪತ್ರಿಕೆಗಳ ಅಂಬೋಣ. ಮುಲ್ಕಿ ವಲಯದವರ ಸಂಬಳ ಮಾತ್ರ ಇಂದಿನ ವರೆಗೆ (೨-೬-೪೮) ಈ ಕಡೆ ಬಂದಿಲ್ಲ. ಬಹುಶಃ ವಿಳಾಸ ತಪ್ಪಿಹೋಗಿ ದೇಶಾಂತರ ಹೋಯಿತೋ ಏನೋ! ಸಂಬಂಧಪಟ್ಟ ಅಧಿಕಾರಿ ವರ್ಗವು ವಿಚಾರಿಸುವುದೇ?

ನೂತನವಾಗಿ ಇಲ್ಲಿ ಸ್ಥಾಪಿಸಲ್ಪಟ್ಟ ಪಂಚಾಯತ ಬೋರ್ಡಿಗೆ ಶ್ರೀ ವಿ. ಕೆ. ಪ್ರಭುಗಳು ಅಧ್ಯಕ್ಷರಾಗಿಯೂ ಮಿ. ಚಾರ್ಲ್ಸ್ ಪಿ. ಅರಾನ್ಹಾರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರು.

**ಕಾಸರಗೋಡು:**— ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಭೆಯು ತಾ. ೩-೮-೪೮ರಲ್ಲಿ ಶ್ರೀಯುತ ಕೆ. ಶಿವಯ್ಯಾನವರ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಸಾರ್ವಜನಿಕ ಪುಸ್ತಕಭಂಡಾರವನ್ನು ಬೋರ್ಡ್ ಎಲಿಮೆಂಟರಿ ಶಾಲೆಗಳ ಅಧ್ಯಾಪಕರಿಗೆ ಧರ್ಮಾರ್ಥವಾಗಿ ಉಪಯೋಗಿಸಿಕೊಳ್ಳುವರೆ ಅನುಮತಿಯನ್ನು ದಯಪಾಲಿಸಬೇಕೆಂದು ಮಾನ್ಯ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರವರಿಗೆ ಕೇಳಿಕೊಳ್ಳುವುದೆಂದು ನಿರ್ಣಯಿಸಿತು. ಲೋವರ್ ಗ್ರೇಡ್ ತರಬೇತಾದವರನ್ನು ಹೊರಡಿಸಿದ ಬಳಿಕ ಹಾಯರ್ ಗ್ರೇಡ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಉಪಾಧ್ಯಾಯರಿಗೆ ಹಿಂದಣ 'ಸರ್ವಿಸ್' ಕೂಡಿಸಿ ತಳಬಾಗ್ಸು ನಿಶ್ಚಯಿಸುವಂತೆ ಮಾನ್ಯ ಸರಕಾರದವರೊಡನೆ ಮನವಿ ಮಾಡಿಕೊಳ್ಳಬೇಕೆಂದು ... ೩ ೧೯ಕ್ಕೆ ನಡೆಯಲಿರುವ ಜಿಲ್ಲಾ ಸಭೆಯಲ್ಲಿ ತಿಳಿಸಬೇಕೆಂದು ನಿರ್ಣಯವಾಯಿತು.

**ಹಂಗಾರಕಟ್ಟೆ:**— ಇಲ್ಲಿ ತಾ. ೩ರಲ್ಲಿ ಸ್ಥಳೀಯ ಬೋರ್ಡ್ ಹಾ. ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಗಣಪತಿ ಅಡ್ಯಪ್ಪ ಐತ ಮತ್ತು ಸಂಬಂಧಿಕರ ಸಹಾಯದಿಂದ ... ದಕ್ಷಿಣ ಕನ್ನಡ ಹಿಂದೀ ಪ್ರಚಾರ ಸಂಘದ ಹಿಂದೀ ಪ್ರಚಾರಕರಾದ ಶ್ರೀ ಕಟೀಲು ಗೋಪಾಲಕೃಷ್ಣರು ಹಿಂದೀ ಕ್ಲಾಸೊಂದನ್ನು ತೆರೆದಿರುವರಾಗಿ ತಿಳಿಯುತ್ತೇವೆ.

**ಉಡುಪಿ:**— ಶ್ರೀ ಸೋದೆ ವಾಸುದೇವ ಜ್ಯೋತಿಷಿಯವರು ಸ್ಥಳೀಯ ಡಿ. ಮು. ಕೋರ್ಟಿನಲ್ಲಿ ಜೇಡಪ್ಪನ ತಕ್ಸೀರಿಗಾಗಿ ಒಂದು ವಾರದ ಕಾರಾವಾಸವನ್ನನುಭವಿಸಿದ ನಂತರ ಅಪೀಲು ಮಾಡಿದ್ದಲ್ಲಿ ಮುನ್ಸೀಫರ ತೀರ್ಪನ್ನು ರದ್ದು ಮಾಡಿದ್ದರು. ಶ್ರೀ ಜ್ಯೋತಿಷಿ ಪುನಃ ಮದ್ರಾಸು ಹೈಕೋರ್ಟಿಗೆ ಈ ಬಗ್ಗೆ ಪರಿಹಾರವನ್ನಪೇಕ್ಷಿಸಿ ಅರ್ಜಿ ಮಾಡಿರುವರಾಗಿಯೂ ಮದ್ರಾಸಿನಿಂದ ಜಿಲ್ಲಾ ಜಡ್ಜಿಯವರಿಗೆ ಇದರ ತನಿಖೆ ಮಾಡಬೇಕಾಗಿ ಪತ್ರವ್ಯವಹಾರ ಬಂದಿರುವುದಾಗಿಯೂ, ಜಿಲ್ಲಾ ಜಡ್ಜಿಯವರ ಅಪೇಕ್ಷೆ ಮೇರೆಗೆ ಸ್ಥಳೀಯ ಡಿ. ಮು. ಮಿ. ... ಎಲ್. ಕುಲಿಗೆಸೊ ಬಿ. ಎ. ಎಲ್. ಎಲ್. ಇವರು ತಮ್ಮ ಉತ್ತರವನ್ನು ಮಂಗಳೂರಿಗೆ ಹೋಗಿ ಕೊಟ್ಟು ಬಂದಿರುವುದಾಗಿಯೂ ತಿಳಿದುಬರುತ್ತದೆ.

ಈಚೆಗೆ ಇಲ್ಲಿ ಆಸುಪಾಸುಗಳಲ್ಲಿ ಕಳ್ಳರ ಉಪದ್ರವಗಳಾಗುತ್ತಿದ್ದು, ಇಂತಹ ತಕ್ಸೀರಿನ ಮೇಲೆ ಇಬ್ಬರು ರೋಮನ್ ಕ್ರಿಶ್ಚನ್ ಹುಡುಗರು ಕೈದ ಮಾಡಲ್ಪಟ್ಟು, ಜಾಮೀನಿನ ಮೇಲೆ ಬಿಡುಗಡೆಮಾಡಲ್ಪಟ್ಟಿರುತ್ತಾರೆ. ಕಳವಿನ ಕೆಲವು ಸೊತ್ತುಗಳೂ ಇವರ ಬಳಿ ಸಿಕ್ಕಿರುತ್ತವೆಯಂತೆ. ಅಲ್ಲದೆ ಪೆಡ್ರಿಕ್ ಎಂಬ ಮಹಮ್ಮದೀಯನೊಬ್ಬನು ನಗರದ ಸಮಯ ಮನೆಯೊಳಕ್ಕೆ ಕಳವು ಮಾಡುತ್ತಿರುವಾಗಲೇ ಕಂಡುಹಿಡಿಯಲ್ಪಟ್ಟು ಓಡಿಹೋಗುತ್ತಿರುವವನನ್ನು ಹಿಡಿದು ಪೋಲೀಸರ ವಶಕೊಡಲ್ಪಟ್ಟನು. ಈತನು ತಕ್ಸೀರಿಗೊಳಗಾಗಿಯೂ ಅಸ್ಪೃಶ್ಯ ಸಿಪಾಯಿ ಕುಂದಾಪುರ ಆಸ್ಪತ್ರೆಯಿಂದ ತಪ್ಪಿಸಿಕೊಂಡಿದ್ದವನಾಗಿಯೂ, ಈತನು

(೨ನೇ ಪುಟಕ್ಕೆ ಮುಂದುವರಿದಿದೆ)

(೧೧ನೇ ಪುಟದಿಂದ ಮುಂದುವರಿದುದು)

ಉಡುಪಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳ್ಳುತ್ತಿರುವಾಗಲೇ ತಪ್ಪಿಸಿಕೊಳ್ಳಲೆತ್ನಿಸಿ ನಿಷ್ಫಲಹೊಂದಿದವನಾಗಿಯೂ ತಿಳಿದು ಬರುತ್ತದೆ. ಆದಾಗ್ಯೂ ಚಿಕ್ಕ ಕಳವುಗಳನ್ನು ಮಾಡುತ್ತಿರುವ ಪೋಕರಿಗಳ ತಂಡವು ಬೇರೆ ಇರಬಹುದಾಗಿ ಇವರ ಮೇಲೆ ಕಣ್ಣಿಟ್ಟು ತೀವ್ರ ಇವರನ್ನು ಕಂಡುಹಿಡಿಯುವ ಯತ್ನವು ಪೋಲೀಸರಿಂದ ಆಗತಕ್ಕದ್ದು

ಇದೇ ತಾ. ೮ಕ್ಕೆ ಕೈಟ್ಟು ರಿಲೀಫ್ ಫ್ಯಾಸರಾಯ ನಿಧಿಯ ಬಗ್ಗೆ ಸ್ಥಳೀಯ ಶ್ರೀ ಕೃಷ್ಣಮಾರುತಿ ನಾಟಕ ಸಭಾ, ಇವರ "ಗೃಹಲಕ್ಷ್ಮಿ" ಎಂಬ ಕಥಾನಕವು ಅಭಿನಯಿಸಲ್ಪಡುವುದಿದೆ. ಅದೇ ದಿನ ಉಡುಪಿ ತಾಲೂಕು ಸೇಂದಿಗುತ್ತಿಗೆಗಳ ಹರಾಜು ನಡೆಯಲಿರುವುದು. ದೂಸ್ತ ಕುಂದಾಪುರ ಡಿವಿಜನಲ್ ಆಫೀಸರರವರೂ ಉಪ್ಪಿ ಮೊಕ್ಕಾಮಿನಲ್ಲಿ ಹರಾಜಿನ ಸಂಬಂಧ ಹಾಜರಿರುತ್ತಾ ಇವರ ಆಶ್ರಯದಲ್ಲಿ ಹೆಚ್ಚಿನ ಉಮೇದ್ವಾರಿಕೆಯೂ ದ್ರವ್ಯ ಸಂಚಯವೂ ಆಗಬಹುದೆಂದು ನಿರೀಕ್ಷಿಸಲಾಗಿದೆ

ಕಳೆದ ತಿಂಗಳ ಆಖೈರಿಗೆ ಜಿಲ್ಲಾ ಬೋರ್ಡ ಪ್ರೆಸಿಡೆಂಟರು ಕಾರ್ಯನಿಮಿತ್ತವಾಗಿ ಇಲ್ಲಿಗೆ ಬಂದಿದ್ದಾಗ, ಸ್ಥಳೀಯ ಬೋರ್ಡು ಹೈಸ್ಕೂಲು ಕಟ್ಟಡ ವಿಸ್ತರಣದ ವಿಚಾರದಲ್ಲಿ ತೀವ್ರ ಕಾರ್ಯಕ್ಕೆ ಪ್ರವರ್ತಿಸಬೇಕಾಗಿ ಶಾಲಾ ಎಡ್ವೈಸರಿ ಬೋರ್ಡಿನ ಕಡೆಯಿಂದ ಪ್ರಸ್ತಾಪಿಸಲಾದಲ್ಲಿ, ದೂಸ್ತ ಅಧ್ಯಕ್ಷರು ಸಹಾನುಭೂತಿಯಿಂದ ಮಾತನಾಡುತ್ತಾ, ಬೇಗನೇ ಇದರ ಇತ್ಯರ್ಥವಾಗಲಾಗುವುದೆಂದು ಭರವಸೆ ಕೊಟ್ಟಿರುವರಾಗಿ ತಿಳಿದುಬರುತ್ತದೆ

## ಕುಷ್ಠರೋಗ ನಿವಾರಣೆ.

### ಜಿಲ್ಲಾ ಮೆಜಿಸ್ಟ್ರೇಟರ ಸಾಧನೆ!

ಜಿಲ್ಲಾ ಎಡ್ಯುಕೇಶನಲ್ ಆಫೀಸರರಾಗಿರುವ ಶ್ರೀ ಕಣ್ಣಪ್ಪನವರಿಂದ ಬರೆಯಲ್ಪಟ್ಟಿರುವ ಈ ಲೇಖನವನ್ನು ನಮ್ಮ ಜಿಲ್ಲಾ ಮೆಜಿಸ್ಟ್ರೇಟರಾದ ಮಿ॥ ಇ. ಎಚ್. ಗೋರ್ನ್ ವಿ. ಸಿ. ಎಸ್. ಇವರು ನಮ್ಮಲ್ಲಿಗೆ ಕಳುಹಿಸಿ ಕುಷ್ಠರೋಗ ನಿವಾರಣೆಗಾಗಿ ಇಲ್ಲಿಯ ಲೆಪ್ರೊಸಿ ಕೌನ್ಸಿಲು ಮಾಡುತ್ತಿರುವ ಸಾಹಸದಲ್ಲಿ ಸಹಕರಿಸಬೇಕೆಂದು ಕೇಳಿಕೊಂಡಿರುವರು —

"ಯಾವ ಕಾಲದಲ್ಲೂ ಕುಷ್ಠರೋಗವೆಂಬುದು ಮನುಷ್ಯಮಾತ್ರನಿಗೆ ಮಹಾ ಅನರ್ಥಕಾರೀ ರೋಗವಾಗಿ ಪರಿಣಮಿಸಿರುವುದು. ಹಿಂದೂಸ್ಥಾನದಲ್ಲಿ ೧೦೦೦೦೦೦ ಕುಷ್ಠರೋಗಿಗಳಿರುವರೆಂದು ಲೆಕ್ಕಹಿಡಲಾಗಿದೆ. ಇಷ್ಟು ಹಾನಿಕರವಿದ್ದೂ ಈ ರೋಗದ ಬಗ್ಗೆ ಹಿತ ಲಾಗಿ ಗೊತ್ತಾಗಲಿಲ್ಲ. ಕೆಲವು ಶತಮಾನಗಳ ಹಿಂದೆ—ಇತರ ದೇಶಗಳ ಜನರನ್ನು ಬಾಧಿಸುತ್ತಿರುವಂತೆಯೇ—ಈ ರೋಗವು ಯೂರೋಪಖಂಡವನ್ನು ಬಾಧಿಸುತ್ತಿತ್ತು. ಆದರೆ ಈಗ ಅಲ್ಲಿಯವರ ಶ್ರಮದಿಂದಾಗಿ ಈಗ ಅಲ್ಲಿ ಇದರ ಹೆಸರೇ ಇಲ್ಲದಂತಾಗಿದೆ

ಯೂರೋಪಖಂಡದಲ್ಲಿ ಸಾಧ್ಯವಾದುದು ಇಲ್ಲಿಯೂ ಸಾಧ್ಯವಾಗಬಹುದು. ಮಾತ್ರ ಸರಿಯಾದ ಏರ್ಪಾಡು ಮಾಡಬೇಕು. ನಮ್ಮ ಜಿಲ್ಲೆಯೊಂದರ ಪ್ರತಿಯೊಂದು ಮಾರ್ಗದಲ್ಲಿ ಹತ್ತುಮಂದಿಗೊಬ್ಬ ಕುಷ್ಠರೋಗಿ ಇರುವನು. ಇವರ ರಕ್ಷಣೆಯಾಗಬೇಕಾಗಿದೆ. ಇದಕ್ಕಾಗಿ ಡಿಸ್ಟ್ರಿಕ್ಟ್ ಲೆಪ್ರೊಸಿ ಕೌನ್ಸಿಲ್ ಎಂಬುದು ಸ್ಥಾಪಿತವಾಗಿದೆ. ಇದಕ್ಕೆ ನಮ್ಮ ಕಲೆಕ್ಟರರೇ ಅಧ್ಯಕ್ಷರು. ಜಿಲ್ಲೆಯ ಹಲವೆಡೆಗಳಲ್ಲಿ ಕುಷ್ಠರೋಗಿಗಳಿಗೆ ಚಿಕಿತ್ಸೆನಡೆಸುವುದಕ್ಕಾಗಿ ಅಲ್ಲಲ್ಲಿ ಚಿಕಿತ್ಸಾಮಂದಿರಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ೧೯೩೪ನೇ ಮೇ ತಿಂಗಳಿಂದ ೧೯೩೫ರ ಜೂನ್ ತಿಂಗಳ ವರೆಗೆ ಈ ಸಂಖ್ಯೆಪ್ರಕಾರ ಚಿಕಿತ್ಸೆ ನಡೆದಿದೆ. ಮೇ ೧೫೭, ಜೂನ್ ೧೫೩, ಜುಲೈ ೧೫೪, ಆಗೋಸ್ತು ೨೦೧ ಸಪ್ಟಂಬರ ೨೨೦ ಒಕ್ಟೋಬರ ೨೧೪ ನವಂಬರ ೨೪೪ ಡಿಸೆಂಬರ ೨೫೪ ಜನವರಿ ೧೯೩೫ರಲ್ಲಿ ೨೫೮, ಫೆಬ್ರುವರಿ ೨೪೭ ಮಾರ್ಚ ೨೪೩, ಮುತ್ತರಡು ಮಾಸಗಳಲ್ಲಿಯೂ ಹಾಗೆಯೇ ಚಿಕಿತ್ಸೆನಡೆದಿದೆ

[ಜಿಲ್ಲಾ ಸಂಸ್ಥೆಯ ಈ ಸಾಹಸದಲ್ಲಿ ಮಹಾಜನರು ಸಹಕರಿಸಬೇಕಾಗಿ ಪ್ರಾರ್ಥನೆ. ಸಂ. ಸ್ವ.]

## ಜವಾಹರಲಾಲರ ಆರೋಗ್ಯ.

ಪಂಡಿತ ಜವಾಹರಲಾಲರು ದಿನ ಹೋಗುತ್ತ ಹೋಗುತ್ತ ಕ್ಷೀಣರಾಗುತ್ತ ಬರುವಂತಿದೆ. ಶ್ರೀ ಆರ್. ಎಸ್. ಪಂಡಿತರ ಹೇಳಿಕೆಯಮೇರೆಗೆ ಅವರು ಮುಂಚಿಗಿಂತಲೂ ಭಾರದಲ್ಲಿ ೧೫ ಪೌಂಡು ಕಮ್ಮಿಯಾಗಿದ್ದಾರಂತೆ.

## ಲಕ್ನೋಟಿಯಲ್ಲಿನ ನೋಟುಗಳು ಕಾಣೆ!

### ಪೋಸ್ಟ್ ಆಫೀಸಿನ ಮೇಲೆ ದಾವೆ!

ಕೌಲಾಲಂಪುರ, ಅಗೋಸ್ತು ೩

ಸ್ಥಳೀಯ ಇಂಪೀರಿಯಲ್ ಬೇಂಕಿನ ಮತ್ತು ಪೋಸ್ಟಾಫೀಸಿನ ಮೇಲೆ ಕೋರ್ಟಿನಲ್ಲಿ ದಾವೆಯು ನಡೆಯುತ್ತಿದೆ. ಕಾರಣ, ಬೇಂಕಿನವರು ಸಟಿಸ್‌ಫರಂಗದಲ್ಲಿರುವ ಶ್ರೀ ಚಂದಾ ಎಂಬವರಿಗೆ ಪೋಸ್ಟಲ್ ಇನ್ಸೂರೆನ್ಸ್‌ದ್ವಾರಾ ರೂ. ೨೫೦೦ ರವಾನಿಸಿದರು. ಆದರೆ, ಶ್ರೀಯುತರು ಟಿಪ್ಪಾಲಿನ ಲಕ್ಕೋಟೆಯನ್ನು ಒಡೆದು ನೋಡಿದಾಗ, ಅದರಲ್ಲಿ ಮತ್ತೇನೂ ಇಲ್ಲದೆ ಖಾಲಿ ಕಾಗದಗಳು ಮಾತ್ರ ಕಾಣಸಿಕ್ಕಿದುವು. ಚಂದಾರವರು ಲಕ್ಕೋಟೆಯನ್ನು ಒಡೆದು ನೋಡುತ್ತಿದ್ದಾಗ ಅಲ್ಲಿ ಉಪಸ್ಥಿತರಾಗಿದ್ದ ನಿವೃತ್ತ ಡಿಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರರು ಕೂಡಾ ಲಕ್ಕೋಟೆಯನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸಿದ್ದಲ್ಲಿ, ಲಕ್ಕೋಟೆಯ ಒಂದು ಬದಿಯನ್ನು ವಿಚಕ್ಷಣತೆಯಿಂದ ಕತ್ತರಿಸಿ ಪುನಃ ಯಾರಿಗೂ ಅದು ಗೋಚರವಾಗದ ರೀತಿಯಲ್ಲಿ ಮುಚ್ಚಿದ ಗುರುತನ್ನು ಕಂಡರು. ಪೋಲೀಸರು ಎಷ್ಟು ಪ್ರಯತ್ನಿಸಿದರೂ ಕಳ್ಳವನಾರೆಂದು ಅವರಿಂದ ಕಂಡುಹಿಡಿಯಲಾಗಲಿಲ್ಲ

ಪಟ್ನಕೋರ್ಟಿನಲ್ಲಿ ಬೇಂಕಿನ ಮತ್ತು ಪೋಸ್ಟಾಫೀಸಿನ ಮೇಲೆ ವ್ಯಾಜ್ಯವು ನಡೆಯಿತು. ನ್ಯಾಯಾಧೀಶರು ಬೇಂಕಿನವರಿಂದ ಯಾವ ತಪ್ಪು ಆಗಿಲ್ಲವೆಂದೂ ಟಿಪ್ಪಾಲ್ ಇಲಾಖೆಯವರೆ ಇದಕ್ಕೆ ಹೊಣೆಯೆಂದೂ ವ್ಯಾಜ್ಯವನ್ನು ತೀರ್ಮಾನಿಸಿದರು

## ಕೇಡಿಯ ದಸ್ತಗಿರಿ.

ಬೆಂಗಳೂರು ಆಗೋಸ್ತು ೩

ಸಂಜೀವ ಎಂಬ ಕೇಡಿಯು ನಗರದ ಕ್ರೈಮ್ ಶಾಖಾ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟಿರುವನು. ಈ ದಸ್ತಗಿರಿಯ ಫಲವಾಗಿ ಪೋಲೀಸರಿಗೆ ಇತ್ತೀಚೆಗೆ ನಗರದಲ್ಲಿ ನಡೆದ ಐದು ಆರು ಕಳ್ಳತನಗಳಿಗೆ ಸಂಬಂಧಪಟ್ಟ ಕೆಲವು ಮಾಲುಗಳು ದೊರೆತಿವೆ. ಕೇಡಿಯು ಬಂಧನದಲ್ಲಿಡಲ್ಪಟ್ಟು ಮುಂದಿನ ತನಿಖೆ ನಡೆಯುತ್ತಿದೆ

## ಲೀಡರ್ ಮೊಕದ್ದಮೆಯಲ್ಲಿ ಕ್ಷಮಾಪಣೆ.

ಅಲ್ಲಹಾಬಾದ್ ಅಗೋಸ್ತು ೩

ಲೀಡರ್ ಪತ್ರಿಕೆಯ ಮೇಲೆ ಕೋರ್ಟಿನ ನಿಂದನೆಯ ಅಪವಾದದ ಮೊಕದ್ದಮೆಯಿದ್ದು ಅದರಲ್ಲಿ ಶ್ರೀಗಳಾದ ಸಿ. ವೈ. ಚಿಂತಾಮಣಿ ಮತ್ತು ಕಪಿಲದೇವ ಮಾಲವೀಯರಿಗೆ ಜುಲ್ಮಾನೆ ವಿಧಿಸಲಾಗಿತ್ತು. ಅನಂತರ ಮೇಲೆ ಪ್ರಿವೀ ಕೌನ್ಸಿಲಿಗೆ ಹೋಗಿದ್ದ ಅಪೀಲು ನಿರಾಕರಿಸಲ್ಪಟ್ಟಿತು. ಈಗ ಕಪಿಲದೇವ ಮಾಲವೀಯರು ಈ ದಿನ ಕ್ಷಮಾಪಣೆಯನ್ನು ಹೈಕೋರ್ಟಿನಲ್ಲಿ ಕೇಳಿಕೊಂಡರು. ಈ ಕ್ಷಮಾಪಣೆಯನ್ನು ಚೀಫ್ ಜಸ್ಟೀಸರು ಅಂಗೀಕರಿಸಿ ಅವರ (ಮಾಲವೀಯರ) ಮೇಲೆ ಯಾವುದೂ ಕಾರ್ಯಕ್ರಮವನ್ನು ನಡೆಸಕೂಡದೆಂದು ತೀರ್ಪಿತ್ತಿರುವರು

## ಇಂಡಿಯಾ ಮಸೂದೆಯು ಶಾಸನವಾಯಿತು!

### ರಾಜಸಮ್ಮತಿಯ ಸಮಾರಂಭ.

ಲಂಡನ್ ಆಗೋಸ್ತು ೩

ಇಂಡಿಯಾ ಮಸೂದೆಯು ಶಾಸನವಾದಾಗ ಲಾರ್ಡ್ ಚಾನ್ಸಲರೂ ಸ್ವಾನ್‌ಹೋವರೂ ಹಯಾಡ್‌ರರೂ ಇದ್ದರು. ಈ ಮೂರು ಮಹನೀಯರನ್ನೂ ಚಕ್ರವರ್ತಿ ಸಾರ್ವಭೌಮರು ಕಮಿಶನಿನ ಸದಸ್ಯರನ್ನಾಗಿ ನಿಯಮಿಸಿ ಚಕ್ರವರ್ತಿಗಳ ಗೈರುಹಾಜರಿಯಲ್ಲಿ ಇಂಡಿಯಾ ಮಸೂದೆಗೆ ರಾಜಮುದ್ರೆಯನ್ನೀಯಬೇಕೆಂದು ಆಜ್ಞಾಪಿಸಿದ್ದರು. ಪೋರ್ಟ್ಸ್‌ಮೌತ್ ಬಿಷಪರೂ ಲಾರ್ಡ್ ಜೆಟ್ಲೆಂಡರೂ, ಲಾರ್ಡ್ ಲಂಡನ್‌ಡೆರ್ರಿಯವರೂ ಒಸ್ಟಿನ್ ಸ್ಟ್ರೀಟ್ ಲೆಂಡರೂ ಇದ್ದರು

ವಿರೋಧಪಕ್ಷದ ಬೆಂಚುಗಳಲ್ಲಿ ಸದಸ್ಯರುಗಳೇ ಇರಲಿಲ್ಲ

ಇದುವರೆಗೂ ರಾಜಸಮ್ಮತಿ ದೊರೆತ ಮಸೂದೆಗಳಲ್ಲಿ ಇಂಡಿಯಾ ಮಸೂದೆಯು ೧೫ನೇ ಸ್ಥಾನವನ್ನು ಪಡೆದಿದೆ. ಇದುವರೆಗೆ ೯೫ ಮಸೂದೆಗಳು ರಾಜಮುದ್ರೆಯನ್ನು ಹೊಂದಿ ಶಾಸನವಾಗಿವೆ

'ಲಿ ರಾಯ್ ಲಿ, ವೂಲ್' ಎಂಬ ಪರಂಪರಾನುಗತದ ನಾರ್ಮನ್-ಫ್ರೆಂಚ್ ನುಡಿಯೊಡನೆ ಇಂಡಿಯಾ ಮಸೂದೆಗೆ ರಾಜಸಮ್ಮತಿಯು ದೊರೆಯಿತು

## ನೆಹರೂರವರು ನೈನಿ ಜೈಲಿಗೆ.

ಅಲಹಾಬಾದ್, ಆಗೋಸ್ತು ೩

ಪಂಡಿತ ಜವಾಹರಲಾಲ್ ನೆಹರೂರವರು ಅಲ್ಮೋರಾದಿಂದ ನೈನಿ ಸೆಂಟ್ರಲ್ ಜೈಲಿಗೆ ಸಪ್ಟಂಬರ ತಿಂಗಳಲ್ಲಿ ವರ್ಗಾಯಿಸಲ್ಪಡುವರೆಂದು ಅಧಿಕಾರಯುತವಾಗಿ ತಿಳಿದುಬಂದಿದೆ.

## ಆತ್ಮಗೌರವಕ್ಕಾಗಿ ಆತ್ಮಹತ್ಯೆ.

ಇಟಾವಾದಲ್ಲಿಯ ಶಾಖಾ ಉದ್ಯಾನವನದಲ್ಲಿ ಕೆಲಸ ಮಾಡುತ್ತಿದ್ದ ಕೂಲಿಯವನು ಯಜಮಾನನ ನಿಂದ್ಯಾಸ್ಪದವಾದ ಬೈಗಳನ್ನು ಕೇಳಲಾಗದೆ ಆತ್ಮಹತ್ಯವನ್ನು ಮಾಡಿಕೊಂಡನೆಂದು ತಿಳಿದುಬಂದಿದೆ. ಈ ಕೂಲಿಯವನಿಗೆ ಕಳೆದ ಹಲವು ತಿಂಗಳ ಸಂಬಳವು ಬಾಕಿಯಾಗಿತ್ತು. ಅವನು ಅದನ್ನು ಕೊಡಬೇಕಾಗಿ ಪ್ರಾರ್ಥಿಸಿದ್ದಲ್ಲಿ, ಯಜಮಾನನು ಅವನಿಗೆ ತುಂಬಾ ಬೈದನು. ಅದನ್ನು ಕೇಳಿ, ಕೂಲಿಯವನು ತುಂಬಾ ಖೇದಗೊಂಡು ಉದ್ಯಾನವನದ ಬಾವಿಯಲ್ಲಿ ಹಾರಿ ಪ್ರಾಣಕಳಕೊಂಡನು.

## ಕಾಂಗ್ರೆಸ್ಸಿನ ಸುವರ್ಣೋತ್ಸವ.

### ವರ್ಕಿಂಗ್ ಕಮಿಟಿಯ ನಿರ್ಣಯಗಳು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾಗಂಜ್‌ನಲ್ಲಿ ಸಭೆಗೂಡಿ ಹಲವು ಮಹತ್ವಾದ ವಿಷಯಗಳ ಮೇಲೆ ತೀರ್ಮಾನಗಳನ್ನಿತ್ತು. ಮುಖ್ಯವಾಗಿದೆ ಭೂಕಂಪಪೀಡಿತರ ಮೇಲೆ ಸಹಾನುಭೂತಿಯ ಠರಾವಾಯಿತು. ಕಾಂಗ್ರೆಸಿನ ಸುವರ್ಣೋತ್ಸವವನ್ನು ಜರಗಿಸಬೇಕೆಂದು ನಿರ್ಣಯಿಸಲಾಯಿತು. ಈ ಬಗ್ಗೆ ಒಂದು ಉಪಸಮಿತಿಯು ಸ್ಥಾಪಿತವಾಗಿದೆ. ಬಾ. ರಾಜೇಂದ್ರಪ್ರಸಾದರು, ಡಾ॥ ಪಟ್ಟಾಭಿ ಸೀತಾರಾಮಯ್ಯನವರು, ಜಮ್ನಾಲಾಲ್ ಬಜಾಜರು, ಗೋವಿಂದ ವಲ್ಲಭಪಂತರು, ಜಯರಾಮದಾಸ್ ದೌಲತರಾಮರವರು, ಶ್ರೀ ಕೃಪಾಲನಿಯವರು ಉಪಸಮಿತಿಯ ಸದಸ್ಯರು

## ಕಾಂಗ್ರೆಸ್ಸಿನ ನಿರ್ಣಯ.

### ಪದವಿಗಳನ್ನು ಸ್ವೀಕರಿಸಬೇಕೋ ಬೇಡವೋ?

ವಾರ್ಧಾಗಂಜ್‌ನಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ಜರಗಿ ಈ ರೀತಿಯ ಠರಾವು ಮಂಜೂರಾಯಿತು. "ಪದವಿಗಳನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ಕುರಿತಾಗಿ ಹಲವು ಕಾಂಗ್ರೆಸ್ ಕಮಿಟಿಗಳ ಸಲಹೆಗಳನ್ನು ಓದಿದ ಈ ಕಮಿಟಿಯು ಈ ವಿಷಯವನ್ನು ಈಗ ತೀರ್ಮಾನಿಸುವುದು ಸಾಮಯಿಕವಲ್ಲವೆಂದೂ ಇದನ್ನು ಕಾಂಗ್ರೆಸ್ಸಿನ ಮುಂದಿನ ಅಧಿವೇಶನದಲ್ಲೇ ತೀರ್ಮಾನಿಸಬೇಕೆಂದೂ ನಿರ್ಣಯಿಸುತ್ತದೆ. ಕಾಂಗ್ರೆಸ್‌ಪಕ್ಷೀಯರು ವೈಯಕ್ತಿಕರಾಗಿ ಕೊಡುವ ಅಭಿಪ್ರಾಯಕ್ಕೆ ಕಾಂಗ್ರೆಸ್ ಹೊಣೆಯಾಗಿಲ್ಲ"

## ಪೆಸೆಂಜರ್ ಟ್ರೈನ್ ಅಡ್ಡಬಿತ್ತು.

ಮಧುರಾದಿಂದ ಡಿಂಡಿಗಲ್‌ಗೆ ಓಡುತ್ತಿದ್ದ ಪೆಸೆಂಜರ್ ಟ್ರೈನ್ ಒಂದು ತಾ ೩ರಲ್ಲಿ ವೆಲ್ಲೋಡ್ ಸ್ಟೇಶನ್ ಬಳಿ ಅಡ್ಡಬಿತ್ತು. ಪ್ರಯಾಣಿಕರಾರಿಗೂ ಅಪಾಯಗಳಾಗಿರುವುದಿಲ್ಲ. ಜನರೆಲ್ಲರೂ ಕುಳಿತ ಸ್ಥಳದಿಂದ ಎಸೆಯಲ್ಪಟ್ಟರು. ಗಾರ್ಡರ ಬಲಗಣ್ಣಿಗೆ ಪೆಟ್ಟಾಗಿದೆ. ಡ್ರೈವರನೂ ಫೋರ್‌ಮೆನನೂ ಬದುಕಿಕೊಂಡರು.

## ಮಾರ್ವಾಡಿ ಸ್ತ್ರೀಯ ಕೊಲೆ!

ಜಾಪುರ್, ಅಗೋಸ್ತು ೩

ಮಾರ್ವಾಡಿ ಸ್ತ್ರೀಯೋರ್ವಳನ್ನು ಕೊಂದುದಕ್ಕಾಗಿ ವಾಕ್ಸೀ ಎಂಬವನಿಗೆ ಮರಣಶಿಕ್ಷೆಯನ್ನು ವಿಧಿಸಿದರು. ಕೊಲೆಗಾರನು ತಾನು ತಪ್ಪಿತಸ್ಥನಲ್ಲವೆಂದು ಮನವಿ ಮಾಡಿದರೂ ಫಲಕಾರಿಯಾಗಲಿಲ್ಲ

## 4 ತಿಂಗಳೊಳಗೆ ಜವಾಹರಲಾಲರ ಬಿಡುಗಡೆ?

ಪಂಡಿತ ಜವಾಹರಲಾಲ ನೆಹರೂರವರು ಅಕ್ಟೋಬರ ತಿಂಗಳಲ್ಲಿ ಬಿಡುಗಡೆಹೊಂದುವರೆಂದು ಯುನೈಟೆಡ್ ಪ್ರೆಸ್ಸಿಗೆ ತಿಳಿದುಬಂದಿದೆ. ಅಂದರೆ, ಅವರ ಶಿಕ್ಷೆಯ ಅವಧಿಯಲ್ಲಿ ೪ ತಿಂಗಳು ಕಡಿಮೆಯಾಗುವುದು

## ಬಾವಿಯಲ್ಲಿ ಸಿಡಿಮದ್ದು.

ನ್ಯೂಡಿಲ್ಲಿ ಅಗೋಸ್ತು ೩

ಮಸ್ಜಿದ್ ಬೆಹರಾಮ್ ಎಂಬಲ್ಲಿಯ ಬಾವಿಯ ಕೆಸರನ್ನು ತೆಗೆಯುವಾಗ ಸಿಡಿಮದ್ದು ಸಿಕ್ಕಿದೆ. ಅದು ಅಲ್ಲಿಗೆ ಹೇಗೆ ಬಂತೆಂದು ಇನ್ನೂ ತಿಳಿಯಲಿಲ್ಲ. ಪೋಲೀಸರು ಸಿಡಿಮದ್ದನ್ನು ಬಾವಿಯಲ್ಲಿ ಹಾಕಿದವನ ಶೋಧನೆಯಲ್ಲಿದ್ದಾರೆ

## ಶಾಂತಿಸ್ಥಾಪನೆಯ ಅವತಾರ.

ಶಾಲೆಗಳಲ್ಲಿ ಯಾರ ಭಾವಚಿತ್ರಗಳು ಅಗತ್ಯ? ಪ್ರತಿಯೊಂದು ಶಾಲೆಯಲ್ಲಿಯೂ ರಾಜನ ಮತ್ತು ರಾಣಿಯ ಭಾವಚಿತ್ರಗಳನ್ನು ತೂಗಾಡಿಸಬೇಕೆಂಬ, ಸಂಯುಕ್ತ ಪ್ರಾಂತದ ಸರಕಾರದ ನಿಬಂಧನೆಯನ್ನು ನೋಡಿ ಕಾನ್ಪುರದ ಮುನಿಸಿಪಾಲಿಟಿಯ ಸದಸ್ಯರಾದ ಶ್ರೀ ಪಂಡಿತ ರಘುವರದಯಾಳ ಭಟ್ಟರು ಈ ಮನವಿಯನ್ನು ವಿದ್ಯಾಸಮಿತಿಗೆ ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ. ಏನೆಂದರೆ "ಭಾವೀ ಜನಾಂಗದ ಹೃದಯದಲ್ಲಿ ದೇಶೋನ್ನತಿಯ ಬೀಜವನ್ನು ಬಿತ್ತಲು ಶಾಂತಮೂರ್ತಿಯ ಅವತಾರವೆನಿಸಿದ ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನು ಪ್ರತಿಯೊಂದು ಶಾಲೆಯಲ್ಲಿಯೂ ತೂಗಾಡಿಸುವುದು ಅಗತ್ಯವೆಂದು ಭಾವಿಸುತ್ತೇನೆ"

# ಲಸ್ಟರ್ (Regd)

ಜೀರ್ಣಕೋಶ, ಪಿತ್ತಕೋಶ, ಶ್ವಾಸಕೋಶ ಮತ್ತು ನರಗಳ ಮೇಲೆ ಅಪ್ರತಿಮವಾದ ಟಾನಿಕ್ ಅಥವಾ ಶಕ್ತಿವರ್ಧಕ ಸೌಂದರ್ಯ ಮುಖದ ಕಾಂತಿ ಉತ್ಸಾಹ ವೀರತ್ವ ಇವುಗಳು ಆರೋಗ್ಯದ ಚಿಹ್ನೆಗಳು. ನರಗಳ ನಿರ್ಬಲತ್ವವೇ ವ್ಯಾಧಿಗಳ ತವರುಮನೆ. ಶರೀರದ ಗ್ರಂಥಿಗಳು ತಮ್ಮ ಕಾರ್ಯವನ್ನು ಮಾಡದೆ ಜಡತ್ವವನ್ನೊಂದಿದಲ್ಲಿ ರಕ್ತನ್ಯಾಡಿ ನಾಡಿ ವೀರ್ಯವನ್ನುತ್ಪತ್ತಿಮಾಡುವ 'ಲಸ್ಟರ್' ಉಪಯೋಗಿಸಿರಿ

ನಿಮಗೆ ಆರೋಗ್ಯವೂ, ಉತ್ಸಾಹವೂ, ಕಾಂತಿಯೂ ಬರುವುದು. ಇದರ ಸೇವನೆಯಿಂದ ವಾತ, ಪಿತ್ಥ, ಗರ್ಭಜಾಡ್ಯ, ಚರ್ಮರೋಗಗಳು ನಿವಾರಣೆಯಾಗುವುವು. ಹೊಟ್ಟೆ ಶೂಲೆ, ಕೈಕಾಲುರಿ, ಕಣ್ಣುರಿ ನಾಶವಾಗಿ ಶರೀರವು ತಂಪಾಗಿ ವೀರ್ಯವು ಗಟ್ಟಿಯಾಗುವುದು. ಬಹಳ ಹಳೇ ಉಬ್ಬಸ, ಗೂರ್ಲು, ದಮ್ಮು, ಕೆಮ್ಮು, ಜ್ವರಗಡ್ಡೆಗಳು ನಾಶವಾಗಿ ಜಠರಾಗ್ನಿ ಹೆಚ್ಚುವುದು. ಅಂಗಾಂಗಗಳಲ್ಲಿಯ ನಿರ್ಬಲತ್ವವು ನಾಶವಾಗಿ ಅಮಿತ ವೀರ್ಯವುಂಟಾಗಿ, ರಕ್ತಶುದ್ಧಿಯಾಗಿ ಮಾಂಸಮಜ್ಜಾದಿಗಳಿಗೆ ಶಕ್ತಿಯುಂಟಾಗುವುದು. ಕೆಲಸಗಾರರಿಗೂ ಉದ್ಯೋಗಸ್ಥರಿಗೂ, ವಿದ್ಯಾರ್ಥಿಗಳಿಗೂ, ನಿರ್ಬಲರಾದವರಿಗೂ 'ಕ್ಷಯದಿಂದ ನರಳತಕ್ಕವರಿಗೂ' ಇದರ ಉಪಯೋಗ ಹೇಳತೀರದು. ಇದರ ಸೇವನೆಯಿಂದ ಬುದ್ಧಿ ಚುರುಕಾಗುವುದು. ಮನುಷ್ಯನು 'ಚಿನ್ನಕ್ಕೆ ಪುಟವಿಟ್ಟಂತಾಗಿ' ಕಾಂತಿಯುತನಾಗುವನು.

ಕ್ರಯ—ದೊಡ್ಡ ಸೈಜು 3-8-0 ಮಿಡಿಯಂ 2-0-0. ಚಿಕ್ಕದು 1-1-0.

ತಯಾರಿಸುವವರು.— ಲಸ್ಟರ್ ಮೆನ್ಯುಫೆಕ್ಚರಿಂಗ್ ಕೋ., ಚಿಕ್ಕಮಗಳೂರು,

ಡಿಪೋ:—ಚಿಕ್ಕಪೇಟೆ, ಬೆಂಗಳೂರು.

ಏಜಂಟರು.—ಪೋಪ್ಯೂಲರ್ ಸ್ಟೋರ್ಸ್, ಮಂಗಳೂರು

## ಶಿಕ್ಷಣಕ್ಕಾಗಿ ಸರಕಾರವು ಮಾಡುವ ಖರ್ಚು.

ಹಿಂದೂದೇಶದ ಜನಗಣತಿಗಳ ಅಂಕೆ ಸಂಖ್ಯೆಗಳನ್ನು ಪರಿಶೀಲಿಸಿದ್ದಾದರೆ ಈ ದೇಶದಲ್ಲಿ ೧೯೦೧ರಲ್ಲಿ ಶೇಕಡಾ ೯೨-೨ರಷ್ಟು ನಿರಕ್ಷರಕುಕ್ಷಿಗಳಿದ್ದ ಹಾಗೂ ೧೯೧೧ರಲ್ಲಿ ಅವರ ಸಂಖ್ಯೆ ಸ್ವಲ್ಪ ಮಾತ್ರ ಕಡಿಮೆಯಾಗಿ ಶೇಕಡಾ ೯೨ರಷ್ಟು ಆದ ಹಾಗೂ ತಿಳಿದುಬರುತ್ತದೆ. ಆದರೆ ಹತ್ತು ವರ್ಷಗಳ ಅವಧಿಯಲ್ಲಿ ನಿರಕ್ಷರ ಕುಕ್ಷಿಗಳ ಸಂಖ್ಯೆಯು ಶೇಕಡಾ ೯ರಷ್ಟು ನಿಜವಾಗಿಯೂ ಕಡಮೆಯಾಯಿತೆ, ಅಷ್ಟರ ಮಟ್ಟಿಗೆ ಓದುಬರಹ ಬಲ್ಲವರ ಸಂಖ್ಯೆ ಬೆಳೆಯಿತೆ, ಎಂಬುದು ಮಾತ್ರ ಅನುಮಾನದ ಸಂಗತಿಯಾಗಿದೆ ಕಾರಣ, ೧೯೦೧ರಲ್ಲಿ ಅಕ್ಷರ ಜ್ಞಾನವಿಲ್ಲದವರ ಸಂಖ್ಯೆ ೨೯,೩೪,೩೧,೫೪೦ ಇದ್ದಿತ್ತಾದರೆ ಅದು ೧೯೧೧ರಲ್ಲಿ ಕಡಮೆಯಾಗುವುದರ ಬದಲು ಹೆಚ್ಚಿಗೆ ಆಗಿ ೩೨,೧೬,೨೪,೦೦೩ ಆಯಿತು ಹೀಗೆ ಹತ್ತು ವರ್ಷಗಳೊಳಗೆ ಸುಮಾರು ಎರಡು ಕೋಟಿ ಜನಸಂಖ್ಯೆ ಹೆಚ್ಚಿದ್ದಂತೆ ಸುಮಾರಾಗಿ ಅಷ್ಟೇ ಅಕ್ಷರ ಜ್ಞಾನವಿಲ್ಲದವರ ಸಂಖ್ಯೆಯೂ ಬೆಳೆಯಿತು ತಾತ್ಪರ್ಯ, ೧೯೦೧ರಲ್ಲಿ ಶಿಕ್ಷಣ ಪ್ರಚಾರವು ಯಾವ ಗತಿಯಿಂದ ನಡೆಯುತ್ತಿದ್ದಿತೋ ಮುಂದೆ ಹತ್ತು ವರ್ಷಗಳಲ್ಲಿ ಹೆಚ್ಚು ಕಡಮೆ ಅದೇ ಗತಿಯಿಂದ ನಡೆಯುತ್ತಿದ್ದಿತೆಂದೂ, ನಿಜವಾದ ಅಭಿವೃದ್ಧಿಯೇನೂ ಆಗಲಿಲ್ಲವೆಂದೂ ಊಹಿಸಲಿಕ್ಕಾಗುತ್ತದೆ

ಕಾರಣವಿಲ್ಲದೆ ಯಾವ ಕಾರ್ಯವೂ ಆಗುವುದಿಲ್ಲವಷ್ಟೆ ಆದ್ದರಿಂದ ೧೯೦೧ರಿಂದ ೧೯೧೧ರ ವರೆಗಿನಲ್ಲಿ, ಮತ್ತು ಸುಮಾರಾಗಿ ಆ ಮೇಲಿನ ವರ್ಷಗಳಲ್ಲಿಯೂ ಕೂಡ ಶಿಕ್ಷಣ ಪ್ರಚಾರವು ಹೆಚ್ಚೆಚ್ಚು ಜರಗದರಲಿಕ್ಕೂ ಒಂದು ಕಾರಣವಿರಬೇಕು ಪ್ರಜೆಗಳ ಹಿತಾಭಿವೃದ್ಧಿಗಿರುವ ಇತರ ಸ್ವತಂತ್ರ ನಾಗರಿಕ ದೇಶಗಳ ಸರಕಾರಗಳು ಶಿಕ್ಷಣದ ಬಗ್ಗೆ ಮಾಡುವ ಖರ್ಚಿನೊಂದಿಗೆ ನಮ್ಮ ದೇಶದ ಸರಕಾರವು ಮಾಡುವ ಖರ್ಚನ್ನು ಹೋಲಿಸಿ ನೋಡಿದರೆ ಈ ಕಾರಣವು ಸುವ್ಯಕ್ತವಾಗುತ್ತದೆ ಇಂಗ್ಲೆಂಡಿನಂಥ ಚಿಕ್ಕ ದೇಶದ ಒಂದು ಜಿಲ್ಲೆಯಲ್ಲಿ ಮಾತ್ರ ಅಲ್ಲಿಯ ಸರಕಾರವು ಶಿಕ್ಷಣ ಪ್ರಚಾರಕ್ಕಾಗಿ ಮಾಡುವ ಖರ್ಚಿಗಿಂತಲೂ, ಅತ್ಯಂತ ವಿಶಾಲವಾದ ಮತ್ತು ೩೫ ಕೋಟಿಯಷ್ಟು ಜನಸಂಖ್ಯೆಯುಳ್ಳ ಈ ದೇಶದ ಸರಕಾರವು ಸಮಸ್ತ ಬ್ರಿಟಿಷ ಇಂಡಿಯದಲ್ಲಿ ಮಾಡುವ ಶಿಕ್ಷಣ ಪ್ರಚಾರದ ಖರ್ಚು ಬಹಳ ಕಡಮೆಯಾಗಿರುವುದೆಂಬುದನ್ನು ಕೇಳಿ ಬಹುಜನ ಬೆರಳಿಡಬಹುದು' ಆದರೆ ವಾಸ್ತವಿಕಾಂಶವು ಹಾಗೆಯೇ ಇಂಗ್ಲೆಂಡಿನ ಸರಕಾರವು ಸೇನೆಯ ವೆಚ್ಚಕ್ಕಾಗಿ ತನ್ನ ಒಟ್ಟು ರಾಜಾದಾಯದ ಶೇಕಡಾ ೧೩ರಷ್ಟು ಖರ್ಚು ಮಾಡುವುದಾದರೆ ನಮ್ಮ ಸರಕಾರವು ಶೇಕಡಾ ೬೨ರಷ್ಟು ಖರ್ಚುಮಾಡುತ್ತಿರುವುದೆಂದು ಸ್ಕ್ಯಾಮನ ಕಮೀಶನಿನ ವರದಿಯಲ್ಲಿ ಸರ್ ವಾಲ್ಟರ್ ಲೇಟನ್ ಸಾಹೇಬರಿಂದರು ಈಗ ಭಾರತ ಸರಕಾರದ ಸೇನೆಯ ಖರ್ಚು ಅಲ್ಪಸ್ವಲ್ಪ ಕಡಮೆಯಾಗಿರುವುದೆಂದರೂ ಕೂಡ ಅದು ಸಾಮ್ರಾಜ್ಯದ ರಕ್ಷಣೆಯನ್ನೇ ಮಾಡಬೇಕಾದ ಇಂಗ್ಲೆಂಡಿನಷ್ಟು ಚಿಕ್ಕ ಪರಿಮಾಣಕ್ಕೆ ಬಾರದೆ ಅದಕ್ಕಿಂತ ೪ ಪಾಲು ಗಳಷ್ಟಾದರೂ ಹೆಚ್ಚಾಗಿರುವುದು ಪರಂತು ಇಂಗ್ಲೆಂಡಿನ ಒಂದು ಜಿಲ್ಲೆ ಎನಿಸುವ ಲಂಡನ್ ಕೌಂಟಿಯ ಕೌನ್ಸಿಲ ೧೯೩೩ ೩೪ರಲ್ಲಿ ಸುಮಾರು ೧೭,೦೦,೦೦,೦೦೦ ರೂಪಾಯಿಗಳನ್ನು ಶಿಕ್ಷಣ ಪ್ರಚಾರಕ್ಕಾಗಿಯೇ ಖರ್ಚುಮಾಡಿತು, ಆದರೆ ಭಾರತ ಸರಕಾರವು ೧೯೩೦-೩೧ರಲ್ಲಿ ಬ್ರಿಟಿಷ ಇಂಡಿಯದಲ್ಲಿ ಶಿಕ್ಷಣ ಪ್ರಚಾರಕ್ಕಾಗಿ ಖರ್ಚುಮಾಡಿದುದು ಸುಮಾರು ೧೧,೦೦,೦೦,೦೦೦ ಮಾತ್ರ ಲಂಡನ ಜನಸಂಖ್ಯೆ ೪೪,೦೦,೦೦೦ ಬ್ರಿಟಿಷ ಇಂಡಿಯದ ಜನಸಂಖ್ಯೆ ೨೭,೦೦,೦೦,೦೦೦. ಜನಸಂಖ್ಯೆಯ ಮಾನದಿಂದ ಲಂಡನ್ ಕೌಂಟಿಯ ಮತ್ತು ಬ್ರಿಟಿಷ ಇಂಡಿಯದ ಸರಕಾರಗಳ ಖರ್ಚನ್ನು ವಿಭಾಗಿಸಿ ' ಹಾಕುವುದಾದರೆ—ಲಂಡನ್ ಕೌಂಟಿಯ ಕೌನ್ಸಿಲು ಒಬ್ಬೊಬ್ಬ ಮನುಷ್ಯನಿಗಾಗಿ ವರ್ಷಾವಧಿ ೩೮ ರೂಪಾಯಿಗಳನ್ನು ಖರ್ಚು ಮಾಡುವಾಗ ನಮ್ಮ ಸರಕಾರವು ಒಬ್ಬೊಬ್ಬ ಭಾರತೀಯನಿಗಾಗಿ ವರ್ಷಾವಧಿ ಖರ್ಚುಮಾಡುವುದು ಬರೇ ಎಂಟಾಣೆ ಮಾತ್ರ! ಲಂಡನ್ ಕೌಂಟಿಯಲ್ಲಿ ಖರ್ಚಾಗುವುದಕ್ಕಿಂತ ೭೫-೭೬ ಪಾಲು ಕಡಮೆ!

ಹಣದ ತಗಾದೆಯೇ ಇದಕ್ಕೆ ಕಾರಣವೆಂದು ಸರಕಾರವು ಹೇಳುತ್ತದೆ ಆದರೆ ಸೇನೆಯ ವೆಚ್ಚಕ್ಕಾಗಿ ೫೦, ೬೦ ಕೋಟಿ ರೂಪಾಯಿಗಳನ್ನು ಖರ್ಚುಮಾಡುವಾಗ, ಅದಕ್ಕೂ ಮಿಗಿಲೆನಿಸಿರುವ ಶಿಕ್ಷಣಪ್ರಚಾರಕ್ಕಾಗಿ ಬರೇ ೧೨ ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಬೇಕೆ? ಈ ಪ್ರಶ್ನೆಗೆ ದೇಶೀಯರಿಗೆ ಸಮಾಧಾನವಾಗುವಂಥ ಉತ್ತರವು ಸರಕಾರದಿಂದ ದೊರೆತಿಲ್ಲ ರಾಜಾಯದ ಒಂದು ದೊಡ್ಡ ಅಂಶವು ಸೇನೆಯ ಪೋಷಣೆಗಾಗಿಯೇ ಖರ್ಚಾಗುವುದರಿಂದ ಶಿಕ್ಷಣಪ್ರಚಾರದಂಥ ಉಳಿದ ಬಾಬುಗಳು ಅಭಿವೃದ್ಧಿಯನ್ನು ಹೊಂದಿಲ್ಲವೆಂದು ಸರ್ ವಾಲ್ಟರ್ ಲೇಟನ್ ಸಾಹೇಬರೇ ಹೇಳುತ್ತಾರೆ ಸರಕಾರವು ಈ ವರೆಗೆ ನೂರಾರು ಕೋಟಿ ರೂಪಾಯಿಗಳ ಸಾಲವನ್ನೆತ್ತಿದ ವಾಗಲೂ ಶಿಕ್ಷಣಪ್ರಚಾರ ಮಾಡುವಂಥ ಒಂದು ಉದ್ದೇಶದಿಂದ ಒಂದು ಚಿಕ್ಕಾಸಿನ ಸಾಲವನ್ನು ಎತ್ತಿ [illegible] ಆಗಲಿಲ್ಲ ಆದರೆ ಶಿಕ್ಷಣಪ್ರಚಾರ [illegible] ಹಣದ ತಗಾದೆ ಇದು [illegible] ಸರಕಾರವು [illegible] ಪ್ರಜೆಗಳನ್ನು [illegible] ಪ್ರಜೆಗಳು [illegible] ಹೇಳುತ್ತಿದ್ದಾರೆ

ಹೀಗೆ ಸರಕಾರವು ಒಬ್ಬೊಬ್ಬ ಭಾರತೀಯನಿಗಾಗಿ ವರ್ಷಾವಧಿ ಖರ್ಚುಮಾಡುವುದು ಪ್ರಾಥಮಿಕ ಶಿಕ್ಷಣಕ್ಕಾಗಿ ಮಾತ್ರ ಎಂದು ತಿಳಿದು ಕೆಲವರು ಮೋಸಹೋಗಬಹುದು ಹಾಗಾಗಿದ್ದರೆ ಸ್ವಲ್ಪವಾದರೂ ಸಮಾಧಾನ ಪಡಬಹುದಿತ್ತು. ವರ್ಷಾವಧಿ ಆಗುವ ಈ ಎಂಟಾಣೆಯ ಖರ್ಚಿನಲ್ಲಿ ಪ್ರಾಥಮಿಕ ಶಿಕ್ಷಣದ ಖರ್ಚು ಮಾತ್ರವಲ್ಲದೆ, ಮಾಧ್ಯಮಿಕ, ಪ್ರೌಢಶಿಕ್ಷಣದ ವೆಚ್ಚ, ಕೈಗಾರಿಕೆ, ಕೃಷಿ ಶಿಲ್ಪ, ವಾಣಿಜ್ಯ ಶಿಕ್ಷಣ ಮೊದಲಾದುವುಗಳ ವೆಚ್ಚ—ಹೀಗೆ ಶಿಕ್ಷಣಸಂಬಂಧವುಳ್ಳ ಎಲ್ಲಾ ಬಾಬುಗಳ ವೆಚ್ಚಗಳೂ ಸೇರಿವೆ ಸಾರ್ವಜನಿಕ ಪ್ರಾಥಮಿಕ ಶಿಕ್ಷಣಪ್ರಚಾರದಿಂದಲೇ ವಾಸ್ತವಿಕ ದೇಶೋನ್ನತಿಯಾಗುವುದು ಮಾತ್ರವಲ್ಲ, ಸರಕಾರಕ್ಕೆ ನಿಜವಾದ ಭದ್ರತೆಯೂ ದೊರೆಯುವುದೆಂಬ ಮಾತು ಪ್ರಚಲಿತ ಘಟನೆಗಳಿಂದಲೂ, ಇತಿಹಾಸದಿಂದಲೂ ಸಿದ್ಧವಾಗುತ್ತಾದರೂ ಸರಕಾರವು ಅಂಥ ಪ್ರಾಥಮಿಕ ಶಿಕ್ಷಣಕ್ಕಾಗಿ ಮಾತ್ರ ಖರ್ಚುಮಾಡುವುದೆಷ್ಟೆಂಬುದನ್ನು ವಾಚಕರೇ ಊಹಿಸಬಹುದು ಹೇಗಿದ್ದರೂ ಪ್ರತಿಯೊಬ್ಬ ಭಾರತೀಯನ ಪ್ರಾಥಮಿಕ ಶಿಕ್ಷಣಕ್ಕಾಗಿಯೇ ಸರಕಾರವು ಮಾಡುವ ವರ್ಷಾವಧಿಯ ಖರ್ಚು ಎಂಟಾಣೆಗಿಂತಲೂ ಬಹಳ ಕಡಮೆಯಾಗಿರುತ್ತದೆಂಬುದನ್ನು ಮರೆಯತಕ್ಕದ್ದಲ್ಲ

ಶಿಕ್ಷಣಪ್ರಚಾರ ಮಾಡುವುದೆಂದರೆ ಅನ್ನಪಾನ [illegible] ಮಾಡುವುದಲ್ಲ, ಕಾರ್ಯ ವಾರ್ಷವು [illegible] ಆದರೆ ಈಗಿನ ಖರ್ಚಿನಲ್ಲೇ ಇನ್ನೂ ಹೆಚ್ಚು ಶಿಕ್ಷಣಪ್ರಚಾರ ಮಾಡಬಹುದೆನ್ನುತ್ತಾರೆ [illegible] ಇದ ನಿಜವಾಗಿರುತ್ತದೆ ಆದರೆ [illegible] ಸರಕಾರವು ಶಿಕ್ಷಣಪ್ರಚಾರಕ್ಕಾಗಿ [illegible] ಹಣವನ್ನು ಖರ್ಚುಮಾಡಿ ಮಾತ್ರ [illegible] ಬೇಗ ಕೂಡ

(೧೪ನೇ ಪುಟಕ್ಕೆ ಮುಂದುವರಿಯುವುದು)


# ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

**ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವಿಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ**

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರಿ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪॥ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

**ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ.**

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ

**The Canara Public Conveyance Co., Ltd., Kodialbail Mangalore.**

**The Sakaleshwara Motor Service Ltd., Saklaspur.**

## ಸೆರೆಗಳಲ್ಲಿ ಚಡಿ ಹೊಡೆಯಬಹುದೇ?

### ಭಾರತದಲ್ಲಿ ಮಾತ್ರ ಈ ಅಭ್ಯಾಸವೇಕೆ?

ತಾ. ೨೨ನೇ ಜುಲಾಯಿ ದಿನ ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಮಿ॥ ಡೇವಿಡ್ ಗ್ರೆನ್ ಫೆಲ್‌ರವರು ಅಂಡರ್ ಸೆಕ್ರೆಟರಿಯವರಿಗೆ ಪ್ರಶ್ನೆಗಳನ್ನಿಟ್ಟು ಹಿಂದೂದೇಶದ ಕ್ರಿಮಿನಲ್ ಕೋರ್ಟುಗಳಲ್ಲಿ ಎಷ್ಟು ಮಂದಿಗೆ ಚಡಿ ಹೊಡೆಯಲಾಗುತ್ತದೆ—ಎಂದು ವಿಚಾರಿಸಿ ಅದರ ಸಂಖ್ಯೆಯನ್ನು ಸಭೆಯೆದುರಿಡಬೇಕೆಂದರು. ಮಿ॥ ಬಟ್ಲರರು ಸಂಖ್ಯೆಯನ್ನು ಸಭೆಗೆ ತಿಳಿಸುತ್ತಾ "ಸದ್ಯಕ್ಕೆ ಸರಕಾರದ ಧೋರಣೆಯು ಬದಲಾಗುವುದಿಲ್ಲ" ಎಂದರು. ಹಿಂದೂದೇಶದಲ್ಲಿ ಚಡಿಯೇಟು ತಿಂದ ಜನರ ಲೆಕ್ಕ ಹೀಗಿದೆ. 1929ರಲ್ಲಿ 8100, 1930ರಲ್ಲಿ 7648, 1931ರಲ್ಲಿ 6809, 1932ರಲ್ಲಿ 6514, 1933ರಲ್ಲಿ 4987, 1933ರಲ್ಲಿ ಪಂಜಾಬ್ ಮತ್ತು ಆಗ್ರಾಗಳಲ್ಲಿ ಚಡಿಯೇಟು ತಿಂದವರ ಲೆಕ್ಕವನ್ನು ಹಿಡಿಯಲಾಗಲಿಲ್ಲ. ಜೈಲ್ ನಿಬಂಧನೆಗಳನ್ನುಲ್ಲಂಘಿಸಿ ಚಡಿಯೇಟು ತಿಂದವರ ಸಂಖ್ಯೆ ಹೀಗಿದೆ:—1929ರಲ್ಲಿ 221, 1930ರಲ್ಲಿ 220, 1931ರಲ್ಲಿ 174, 1932ರಲ್ಲಿ 286; 1933ರಲ್ಲಿ 255

## ೩೦೦೦ ಇಟೆಲಿ ಸೈನಿಕರು ಅಸ್ವಸ್ಥರಾಗಿ ಸ್ವದೇಶಕ್ಕೆ ತೆರಳಿದರು.

### ಜನರಲ್ ಗ್ರೆಜಿಯೂನಿಯ ಮೇಲೆ ಅಪವಾದ.

ಪರಿಸ್ ಆಗೋಸ್ಟು, ೩.

ಜ್ವರದ ಪೀಡೆಯನ್ನು ಸಹಿಸಲಾರದೆ ಸ್ಟೀಮರ್ ಹತ್ತಿ ೩೦೦೦ ಇಟೆಲಿ ಸೈನಿಕರು ಆಫ್ರಿಕದಿಂದ ಇಟೆಲಿಗೆ ಬಂದಿಳಿದಿರುವರು ಅವರ ಚಿಕಿತ್ಸೆಯು ಇಟೆಲಿಯ ಆಸ್ಪತ್ರೆಗಳಲ್ಲಿ ಬಹಳ ಶ್ರದ್ಧೆಯಿಂದ ಸಾಗುತ್ತಿದೆ ಎಂದು ನೆಪಲ್ಸಿನಿಂದ ಸಮಾಚಾರವು ಬಂದಿದೆ

ಸೈನಿಕರೊಡನೆ ಅನೇಕ ಕೂಲಿಯಾಳುಗಳು ಬಂದಿರುವರು ಅವರ ಹೇಳಿಕೆಯ ಮೇರೆಗೆ ತಿಳಿದುಬರುವುದೇನೆಂದರೆ, ಜನರಲ್ ಗ್ರೀಜಿಯೂನಿಯು ಅವರನ್ನು ಗದರಿಸುವುದರಿಂದಲೂ, ಸಂಬಳವನ್ನು ಸರಿಯಾಗಿ ಕೊಡದೆ ಇದ್ದುದರಿಂದಲೂ, ಅವರಿಗೆ ಈ ದುಃಸ್ಥಿತಿಯು ಬರಲು ಕಾರಣವಾಯಿತು ಇದರಿಂದ ಆಫ್ರಿಕದ ವಸಾಹತುಗಳಲ್ಲಿಯ ರೀತಿ ನೀತಿಗಳು, ಶಿಸ್ತುಗಳು ಬಹಳ ಕಠಿಣ ತರದ್ದೆಂದು ತೋರಿಬರುತ್ತದೆ.

ಸೈನಿಕರ ಮತ್ತು ಕೂಲಿಯಾಳುಗಳು ಹಿಂದಿರುಗಿದುದನ್ನು ಕಂಡು ಇಟೆಲಿಯ ಉತ್ಸಾಹವು ಕುಗ್ಗಿದಂತಿದೆ

## ನಗಬೇಕೋ? ಅಳಬೇಕೋ?

ಗ್ವಾಲಿಯರ್ ಜೂನ್, ೩೧

ಇಷ್ಟು ದಿನ ಹೆಂಡರ ಕಾಟವೆಂದು ಗಂಡಸರಿಗಿತ್ತು. ಈಗ ಹೆಂಗಸರಿಗೂ ಬಂದಿದೆ ಅದೇ ಕಾಟ ಗ್ವಾಲಿಯರ್ ಸಂಸ್ಥಾನ ಎಂಬಲ್ಲಿ ಒಂದು ಸಂಗತಿ ನಡೆದಿದೆ ತಂದೆಗೂ ಮಗನಿಗೂ ಜಗಳವಿತ್ತಂತೆ ಮಗಳು ಪ್ರಾಯಸ್ಥಳಾದಳೆಂದು ತಂದೆಯು ಒಬ್ಬ ವರನನ್ನು ಗೊತ್ತು ಮಾಡಿದ ಮಗನೂ ತಂಗಿಗೆ ಅನುಚಿತನಾದವನೋರ್ವನನ್ನು ಆರಿಸಿದನು. ಮದುವೆಗಾಗಿ ಎಲ್ಲವೂ ಸಿದ್ಧವಾಯಿತು. ನೆಂಟರೂ ಬಂದರು. ಆದರೆ ದಿಬ್ಬಣವು ಮಾತ್ರ ಇಕ್ಕಡೆಯಿಂದಲೂ ಬಂದು ಗದ್ದಲವೆದ್ದಿತು. ಪೋಲೀಸರು ಬಂದು ದಿಬ್ಬಣಿಗರನ್ನು ಓಡಿಸಿದರು.

## ಭಯಂಕರ ಡಿಕ್ಕಿ!

ಮದರಾಸು ಆ ೩.

ತಂಬಾರಮ್ ಗೂಡ್ಸ್ ಸ್ಟೇಶನಿನಲ್ಲಿ ಕೆಲಸ ಮಾಡುತ್ತಿದ್ದಾಗ ಅಕಸ್ಮಾತ್ ರೈಲು ಬಂದಿಯು ಬಂದು ಛಾಜಸಿಳ್ಳಿ ಎಂಬವನು ಬಹುದೂರ ದಬ್ಬಿಬಿಟ್ಟಿತು. ಪಾಪ, 35 ವರುಷ ಪ್ರಾಯದವನಾದ ಅವನಿಗೆ ಮೈಯೆಲ್ಲಾ ಗಾಯಗಳಾಗಿವೆ. ಬದುಕುವುದು ಕಷ್ಟವೆಂದು ತಿಳಿದುಬಂದಿದೆ. ಅಲ್ಲಿಯ ಗವರ್ನಮೆಂಟ್ ಆಸ್ಪತ್ರೆಯಲ್ಲಿ, ಚಿಕಿತ್ಸೆಯು ನಡೆಯುತ್ತಿದೆ.

## ಪತ್ನಿಯ ಕೊಲೆ!

ಕ್ವಿಲನ್, ಆಗೋಸ್ಟು.

ಅಯ್ಯಪ್ಪನ್ ಎಂಬ 30 ವರುಷ ಪ್ರಾಯದ ಮನುಷ್ಯನಿಗೆ ಮರಣದಂಡನೆಯಾಯಿತು. ಇವನು ಕಾಳಿ ಎಂಬ ತರುಣಿಯೊಡನೆ ಒಂಭತ್ತು ತಿಂಗಳು ವಾಸಿಸುತ್ತಿದ್ದನು. ಈ ಸಂಗತಿಯು ಕಾಳಿಯ ಕುಟುಂಬಿಕರಿಗೆ ಗೊತ್ತಿರಲಿಲ್ಲ, ತಿಳಿದ ಕೂಡಲೆ ಅವರು ಕಾಳಿಯನ್ನು ಕರೆದುಕೊಂಡು ಹೋದರು. ಅಯ್ಯಪ್ಪನು ಪುನಃ ಅವಳನ್ನು ಬರಲು ಕೇಳಿದಾಗ ಅವಳೊಪ್ಪದಿರಲು ಅವನು ಅವಳನ್ನು ಕೊಂದೇ ಬಿಟ್ಟನು. ಕಾಳಿಯ ಕುಟುಂಬಿಕರು ಅವನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ವಿಚಾರಣೆಯಾಗಿ ಮರಣದಂಡನೆಯನ್ನು ವಿಧಿಸಿದರು.

ಹಿಂದೂ, ಕೆನಡಾ ದೇಶಗಳ ಮೈತ್ರಿಯು ಬೆಳೆಯುವಂತಿದೆ. ಮೊನ್ನೆ ತಾನೆ ಆಗ್ರಾ ಮತ್ತು ಔಧ್ ಸಂಸ್ಥಾನದ ಗವರ್ನಮೆಂಟಿನವರು ಕೆನಡಾ ಪ್ರಾಂತ್ಯದ ಮುಖ್ಯ ಮಂತ್ರಿಗೆ ಅಚ್ಚುಮೆಚ್ಚಿನ ಬಹಳ ಬೆಲೆ ಬಾಳುವ ಹುಲಿಯ ಚರ್ಮವನ್ನು ಕಳುಹಿಸಿ ಕೊಟ್ಟಿದ್ದಾರೆ ಅದಲ್ಲದೆ ಅಲ್ಲಿ ರಾಷ್ಟ್ರೀಯ ವಸ್ತುಪ್ರದರ್ಶನಕ್ಕೆ ಸಂಯುಕ್ತ ಪ್ರಾಂತದೊಳಗಿನ ಸಾಮಗ್ರಿಗಳನ್ನು ಕೊಂಡೊಯ್ಯುವ ಏರ್ಪಾಡನ್ನು ಮಾಡಲು ಮಿಸೆಸ್ ಎಡೆಲ್ ಮುಲ್ಲಾನಿಯವರು ಕೆನಡಕ್ಕೆ ತೆರಳಿರುವರಾಗಿಯೂ ಸಮಾಚಾರವಿದೆ

## ದೇವಸ್ಥಾನದಲ್ಲಿ ಕಳವಾಯಿತು

ಚಿಂಗಲ್‌ಪೇಟೆ, ಆಗೋಸ್ಟು ೩.

ಕಳೆದ ಸೋಮವಾರ ಗುಡುವಂಚೇರಿಯ ಎರಡು ದೇವಾಲಯಗಳಲ್ಲಿ ಚಿನ್ನಾಭರಣಗಳು ಕಳವಾಗಿ ಹೋಯಿತೆಂಬ ಸಮಾಚಾರವು ಬಂದಿದೆ

ಈ ಎರಡು ದೇವಸ್ಥಾನಗಳು ಒಂದೊಂದು ಫರ್ಲಾಂಗು ದೂರದಲ್ಲಿವೆ ಸೋಮವಾರ ದಿನ ರಾತ್ರೆ ಕಳ್ಳರು ಆ ದೇವಸ್ಥಾನಗಳನ್ನು ನುಗ್ಗಿ ರೂ ೮೦ ಬೆಲೆ ಬಾಳುವ ಚಿನ್ನಾಭರಣಗಳನ್ನು ದೇವರ ಭಂಡಾರದಿಂದ ತೆಗೆದುಕೊಂಡು ಹೋದರು ಪೋಲೀಸ್ ಠಾಣೆಗೆ ವರ್ತಮಾನವನ್ನು ಕಳುಹಿಸಲು, ಅವರು ಕಳ್ಳರ ಶೋಧದಲ್ಲಿ ನಿರತರಾಗಿದ್ದಾರೆ.

## ಆಫ್ರಿಕದ ಸೇವೆಗೆ ಇಟಲಿಯ ದಳ

ರೋಮ್, ಆಗೋಸ್ಟು ೩

ತಮ್ಮ ಮುಂದಿನ ಸೌಕರ್ಯಕ್ಕಾಗಿ ಇಟಲಿಯು ಇಂದೇ ಕಷ್ಟಪಡುತ್ತಿದೆ ಇಷ್ಟರವರೆಗೆ ಆಫ್ರಿಕಕ್ಕೆ ಕಳುಹಿಸಿದ ನಾಲ್ಕು ಸೈನ್ಯಗಳು ಸಾಲವೆಂದು ಅವರು ಇನ್ನೊಂದು ಸೈನ್ಯವನ್ನು ಸಿದ್ಧಗೊಳಿಸುವುದರಲ್ಲಿ ನಿರತರಾಗಿದ್ದಾರೆ

## ಸ್ಥಳಕ್ಕಾಗಿ ಬಸ್ಸಿನಲ್ಲಿ ಜಗಳ

### ಪೋಲೀಸನು ದಂಡ ತೆರಬೇಕಾಯಿತು

ಕಲ್ಕತ್ತಾ, ಆಗೋಸ್ಟು ೧

ಬಸ್ಸಿನಲ್ಲಿ ಸ್ಥಳವಿಲ್ಲದಿದ್ದರೂ, ತನಗೆ ಸ್ವಲ್ಪ ಸ್ಥಳವನ್ನು ಬಿಟ್ಟುಕೊಡಬೇಕಾಗಿ ಪೋಲೀಸನು ಒಬ್ಬ ಪ್ರಯಾಣಿಕನಿಗೆ ಹೇಳಿದನು. ಪ್ರಯಾಣಿಕನು ಏಳದಿರಲು ಪೋಲೀಸನು ಕೋಪಗೊಂಡು ಅವನಿಗೆ ಹೊಡೆದನು ಪ್ರಯಾಣಿಕನಿಗೆ ಬಹಳ ಜಖಂ ಆಗಿದೆ. ಪೋಲೀಸನು ರೂ. ೮೦ ದಂಡ ತೆರಬೇಕು ಅಥವಾ ೩ ತಿಂಗಳ ಕಠಿಣ ಸಜೆಗೆ ಗುರಿಯಾಗಬೇಕೆಂದು ಮೆಜಿಸ್ಟ್ರೇಟರ ಆಜ್ಞೆ.

## ಪುನಃ ಭೂಕಂಪ!

ಕ್ವೆಟ್ಟಾ, ಆಗೋಸ್ಟು, ೫.

ನಿನ್ನೆ ಸಾಯಂಕಾಲ ೫ ನಿಮಿಷಗಳ ತನಕ ಭೂಮಿಯು ಕಂಪಿಸಿತು ಈ ಕಂಪನದೊಡನೆ ದೊಡ್ಡ ಶಬ್ದವು ಕೇಳಿ ಬಂತೆಂದು ವರ್ತಮಾನವಿದೆ.

ಭೂಕಂಪದಿಂದುಂಟಾದ ಹಾವಳಿಗಳನ್ನು ವಿಮರ್ಶಿಸಿಕೊಳ್ಳುವುದಕ್ಕಾಗಿನೇಮಕಪಟ್ಟ ಮಿ॥ ಬಿ. ಎಮ್. ಸ್ಪೇಗರು ಆಗೋಸ್ಟು ೬ಕ್ಕೆ ಕ್ವೆಟ್ಟಾಕ್ಕೆ ಚಿತ್ತೈಸಲಿರುವರು.

(೧ನೇ ಪುಟದಿಂದ ಮುಂದುವರಿದುದು)

ದೆಂಬುದು ಪ್ರಭೆಗಳ ಬಿನ್ನಪವಾಗಿರುತ್ತದೆ. ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಕೊಡುವುದೇ ಸರಕಾರದ ಗುರಿಯೆಂದು ತಿಳಿಯುತ್ತೇವೆ. ಆದರೆ ಸರಕಾರವು ಇನ್ನು ಮುಂದೆಯೂ ಶಿಕ್ಷಣಪ್ರಚಾರ ಸಂಬಂಧವಾಗಿ ಅದನ್ನು ಕೈ ಗಿದ್ದ ಮಾಡಿ ಸ್ವಲ್ಪ ಸ್ವಲ್ಪ ಹಣವನ್ನು ಖರ್ಚು ಮಾಡುತ್ತ ಬರುವುದರ ಮೂಲಕ, ಮೇಲೆ ಬರೆದ ಪ್ರಕಾರ ಹತ್ತತ್ತು ವರ್ಷಗಳ ಅವಧಿಯಲ್ಲಿ ಸುಮಾರಾಗಿ ಶೇಕಡಾ ೧೦ರಷ್ಟು ಹೆಚ್ಚೆಚ್ಚು ಜನರು ಓದುಬರಹ ಜ್ಞಾನಬಲ್ಲವರಾಗುವರಾದರೆ, ಪೂರ್ಣ ಗುರಿಯನ್ನು ಮುಟ್ಟಲಿಕ್ಕೆ ಶತಮಾನಗಳೇ ಬೇಕಾಗುವವಲ್ಲ ಹೀಗಾಗಕೂಡದು ಆದ್ದರಿಂದ ಶಿಕ್ಷಣಪ್ರಚಾರಕ್ಕಾಗಿ ಹೆಚ್ಚೆಚ್ಚು ಹಣವನ್ನು ಸರಕಾರವು ಖರ್ಚುಮಾಡಬೇಕು ಹಾಗೆ ಖರ್ಚುಮಾಡುವ ಹಣವು ಸಾರ್ಥಕವೂ ಆಗಬೇಕು. ಹಣದ ತಗಾದೆಯ ಮೂಲಕ ಶಿಕ್ಷಣಪ್ರಚಾರಕ್ಕಾಗಿ ಹಣವನ್ನು ದೊರಕಿಸಲಿಕ್ಕೆ ಸರಕಾರಕ್ಕೆ ಬೇರೆ ಉಪಾಯಗಳಿಂದ ಸಾಧ್ಯವಾಗದೆ ಹೋದರೆ ಶಿಕ್ಷಣಪ್ರಚಾರ ಮಾಡುವ ಉದ್ದೇಶದಿಂದಲೇ ಒಂದು ಸಾಲವನ್ನಾದರೂ ಎತ್ತಿ ಆ ಸಂಬಂಧವಾದ ಹಣದ ತಗಾದೆಯನ್ನು ದೂರ ಮಾಡುವುದು ವಿಹಿತವಾಗಿದೆ ದೇಶವಾಸಿಗಳೆಲ್ಲರೂ ಶಿಕ್ಷಿತರಾದಾಗ ಈ ಸಾಲದ ಹಣವು ಪರ್ಯಾಯವಾಗಿ ಕೂಡಿಬರುವುದು ನಿಶ್ಚಯವಾದ್ದರಿಂದ ಹಾಗೆ ಸಾಲ ಮಾಡುವುದು ನಿಜವಾಗಿಯೂ ಸಾಲವೆನಿಸುವುದಿಲ್ಲ ಪ್ರಜೆಗಳೂ ಅಂಥ ಸಾಲವು ತುಂಬಿಬರುವುದಕ್ಕಾಗಿ ಒತ್ತಾಸೆಯನ್ನು ಮಾಡಿಯೇ ಮಾಡುವರು ನಮ್ಮ ಸರಕಾರವು ಇದನ್ನು ಪರ್ಯಾಲೋಚಿಸುವುದೆ?

ಕಟಪಾಡಿ ಶ್ರೀನಿವಾಸ ಶೆಟ್ಟಿ


# N.I.P.

ಅತ್ಯುತ್ಕೃಷ್ಟವಾದ

ಪೆಟ್ರೋಲ್

ಚಿಮಿಣಿ ಎಣ್ಣೆ

ಡೀಸೆಲ್ ಎಣ್ಣೆ

ಮುಂದಿನ ವಿವರಗಳಿಗೆ ಈ ಪತ್ರಿಕೆಯ ಕಲಮುಗಳಲ್ಲಿ ನಿರೀಕ್ಷಿಸಿರಿ.


## ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S 80/1935.

ವಾದಿ—ರಾಮಕ್ಕಮ್ಮ.

ಪ್ರತಿವಾದಿರು—ನಾರಾಯಣ ಹೊಳ್ಳ ಕೂಡಾ

3 ಸುಬ್ರಾಯ ಹೊಳ್ಳ 4 ಕೃಷ್ಣ ಹೊಳ್ಳ—ರಾಮಚಂದ್ರ ಹೊಳ್ಳರ ಮಕ್ಕಳು ವಡೇರ ಹೋಬಳಿ ಗ್ರಾಮ—ಇವರಿಗೆ

ವಾದಿಯು ಪ್ರತಿವಾದಿರ ಮೇಲೆ ಈಡಿನ ಅಸಲು ಬಡ್ಡಿ ಹಣಗಳ ಬಗ್ಗೆ ಮಾಡಿದ ಮೊಕ್ಕಂದ ದಾವೆಯು ತಾ 19–8–'35ಕ್ಕೆ ಇಟ್ಟಿರುತ್ತದೆ ಆ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ಆ ದಿವಸ ಸದ್ರಿ ಕೋರ್ಟು ಮುಂದೆ ಖಾವಾಗಿ ಜವಾಬುದಾರಿಕೊಳ್ಳತಕ್ಕದ್ದು.

ಕುಂದಾಪುರ, 6–8–35 — K Narasimha Kamath, *Pleader for Petitioner*


"ನವರತ್ನಾ" **ದ್ರಾಕ್ಷಾಸವ** (ಔಷಧಯುಕ್ತವಾದ)

ಅತ್ಯುಚ್ಛ ತರಗತಿಯ ದ್ರಾಕ್ಷೆ ಹಣ್ಣಲ್ಲದೆ ಮತ್ತಿನ್ನಿತರ ಎಷ್ಟೋ ಔಷಧಗಳನ್ನು ಕೂಡಿಸಿರುವುದರಿಂದಲೆ ಇದನ್ನು 'ದ್ರಾಕ್ಷಾಸವ' ಔಷಧಯುಕ್ತವೆಂದು ನಾಮಕರಣಮಾಡಲಾಗಿದೆ.

ಅಗ್ನಿಮಾಂದ್ಯ, ಹೊಟ್ಟೆಯುರಿ, ಕೆಮ್ಮು, ವಾಂತಿ, ಸಾಮಾನ್ಯ ನರಗಳ ಅಕ್ರಮ, ಸ್ಮೃತಿನಾಶ, ನಿದ್ರಾನಾಶ, ಮಲನಿರೋಧ ಮತ್ತು ಇತರ ರೋಗಗಳಲ್ಲಿ ಇದು ಅಪೇಕ್ಷಿತ ಫಲವನ್ನು ಕೊಡುವುದು

ತೀವ್ರ ಮತ್ತು ದೀರ್ಘಕಾಲದ ಶ್ವಾಸಕೋಶ ಸಂಬಂಧವಾದ ರೋಗಗಳಲ್ಲಿ ಇದು ಬಲವರ್ಧಕ ರಸಾಯನವಾಗಿ ಕೆಲಸಮಾಡುತ್ತದೆ,—ಕೆಮ್ಮನ್ನು ಗುಣಪಡಿಸುತ್ತದೆ. ನಾಯಿಕೆಮ್ಮು ಇದ್ದಾಗ ಮಕ್ಕಳಿಗೆ ಇದನ್ನು ಉಪಶಮನೋಪಕಾರಿಯಾಗಿ ಭರವಸೆಯಿಂದ ಕೊಡಬಹುದು ಶೀತಕಾಲ ಮತ್ತು ಮಳೆಗಾಲದಲ್ಲಿ ಕೆಮ್ಮು ಸರ್ವಸಾಮಾನ್ಯವಾಗಿ ಇರುವ ಕಾರಣ ಇದನ್ನು ಸಕಾಲದಲ್ಲಿ ಕೊಟ್ಟು ಸುರಕ್ಷಿತವಾಗಬಹುದು

ಕ್ರಯ 24 ಔನ್ಸ್ ರೂ. 2–0–0 16 ಔನ್ಸ್ ರೂ. 1–8–0.
8 ಔನ್ಸ್ ರೂ 0–13–0.

ತಯಾರಿಸುವವರು:— **ನವರತ್ನಾ ಫಾರ್ಮೆಸಿ, ಕೊಚ್ಚಿ.**

ಏಜಂಟರು — **ಪೊಪ್ಯುಲರ್ ಸ್ಟೋರ್ಸ್,** ಮಂಗಳೂರು.

ಕೊಚ್ಚಿಯ ನವರತ್ನ ಫಾರ್ಮೆಸಿಯವರ "ದ್ರಾಕ್ಷಾಸವ" ಔಷಧಿಯು ದೇಹಕ್ಕೆ ಶಕ್ತಿಯನ್ನೂ ಉತ್ತೇಜನವನ್ನೂ ಕೊಡತಕ್ಕದೆಂದು ಸಂತೋಷದಿಂದ ಹೇಳಬಲ್ಲೆ. ಮಲೇರಿಯಾಜ್ವರ, ಕಾಸಜ್ವರ, ಪ್ರಯಾಸಪ್ರಸವ, ಸರಿಯಾದ ಆಹಾರವಿಲ್ಲದಿರೋದು ಮತ್ತು ದೇಹಕೃಶವಾಗುವುದು ಇತ್ಯಾದಿಗಳಿಗೆ ಚಿಕಿತ್ಸೆಯಾದ ಮೇಲೆ ಸ್ವಕಟ್ಟು ಬಲಬರುವುದಕ್ಕೆ ಈ ಔಷಧಿಯು ಬಹಳ ಪ್ರಯೋಜನಕಾರಿ.

ರಾಯಪುರಂ—ಮದರಾಸು. 9—9—1933.

(ರುಜು) ಪಿ. ವೆಂಕಟಗಿರಿ, ಎಂ. ಡಿ.
ಲೆಕ್ಚರರ್ ಇನ್ ಮಿಡ್ವೈಫರಿ ರಾಯಪುರಂ ಮೆಡಿಕಲ್ ಸ್ಕೂಲ್,
ರೆಸಿಡೆಂಟ್ ಮೆಡಿಕಲ್ ಆಫೀಸರ್, ಇಂಗ್ಲಿಷ್ ಹಾಸ್ಪಿಟಲ್,
ರಾಯಪುರಂ.

# WANTED

Energetic, Active and Influential men to work as organisers and gents on very attractive terms in areas mentioned below—

1. Mysore, Hassanand Kadur districts
2. Coorg, South Canara, Shimoga and Chitaldrug districts
3. Tumkur, Kolar, Bangalore and civil and Military Stations, angalore Cantonment

Please apply in person or by letter,

**C. H. SHAMBULINGAPPA,**
The South Indian General Assurance Co Ltd.
1, Parniah Chatram Road, Balepet,
BANGALORE CITY



ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್ಡ
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿದರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫ್ರೊಸ್ಫರಸ್ ಗುಳಿಗೆಗಳು

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ ಮುಂಬಾಯಿ ೨
ಸ್ಟೋಕಿಸ್ಟ್ ಪಾ ಕಂಪನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ



## ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ರೋಲ್ಡ್ ಗೋಲ್ಡಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ... ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಬೀ ... ಫೇಸ್ ... ಗಂಟೆಯನ್ನು ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವದಿಲ್ಲ ಗ್ಯಾರಂಟಿ ೮ ವರ್ಷ ... ಓಂಗ್ ... ಪ್ಲೇಟ್ ... ಹಾಕಿದ ... ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ನಿಮಗೆ ಇಷ್ಟಪಡದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಕಮರ್ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ... S A ಕಲ್ಕತ್ತಾ



ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್ ... ಅವರ

## ಸತಂತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ... ಬಹಳ ... ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯೂ ನೇಮದಂತೆ ಸುರುವಿರುತ್ತದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ನೋಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳಗಾಣಿಸಿರುವ ... ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ದಬ್ಬಿ ಕಿಮ್ಮತ್ತು ರೂ ೪ ೦—೦ ವಿ ಪಿ ಅಣೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ವಿರಜಿ, S M C



# NEW ARRIVALS.

## Medicines.

Dr Schuessler's Twelve Tissue Remedies 5 gr bot As 4
Hom eopathy Medicines a gr bot As 5/—
Sugar of Milk Dr Schwabe s original bot 1lb Rs 2
Haarlem Oil—a world renowned remedy As 8 per phial
Dr Hick s New Curative Earth—Radium Cure Rs 1 per lb
Dr Schwabe s other special remedies are always in stock
*H u dl us f j ju c al*
Kannese B k a Family Guide to Bio chemistry Re 1
D mestic H m e path Rs 1 1
If y u wn these tw B oks y u ll be able t pick up treatment and administer Tissue & Home pathy M d cines successfully without consulting others

## German Toilet Soaps Shaving sticks and Washing and Bleaching powders.

T let soaps t suit all tastes a d prices fr m As 2 6
D l ghtful in ar ma charming in appearance Please try

## Kirloskar Pumps

We are the Representatives for Kirloskar Brothers for their reliable Shallow well and Deep well Pumps, Spring Gates Spring Buckets etc and steel —
Pipes and pipe fittings at ch ap pri es Coir Mats and Mattings

**Steadler Pencils and Stationeries**

We are the recognised agents for STEADLER S all stationeries and shall be glad to serve y u

## Olympia Typwriter.

An up to date Machine in Standard and portable sizes
*F r Father pa ti ula s pleas rite t —*

**Basel Mission Book & Tract Depository**
Mangalore S K or Hubli S M



# The Popular Insurance Company, Ltd.

**Head Office —MANGALORE, S India**

**The Pioneer Life Office of the West Coast.**

## A FEW PRESS OPINIONS

Established as recently as 1929 the Popular Insurance Co Ltd has already made considerable progress having at the end of 1934 a total business of over Rs 10 lakhs in force with a premium income of over Rs 52 000 The Life Fund of the Company stood at the same date a over Rs 50,000 The expenses of the office are moderate and mortality experience extremely favourable During the year 1934, the Company completed business of over Rs 5,40,000 with a premium income of over Rs 26 000 The first quinquennial valuation of the Company is in progress and the report of the Actuary expected to be placed before the Directors of the Company before the end of May 1935 From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position —*Insurance & Finance Review Calcutta*

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ ಮಂಗಳೂರು ಮೇಲಿನ ವಿಮಾ ಕಂಪೆನಿಯವರು ಕಳುಹಿಸಿರುವ ವರದಿಯನ್ನೂ ಲೆಕ್ಕಪತ್ರ ವಿವರದ ಪಟ್ಟಿಯನ್ನೂ ನೂತನವಾದ ಪ್ರೊಸ್ಪೆಕ್ಟಸ್ಸನ್ನೂ ಆತ್ಮಾದರದಿಂದ ಸ್ವೀಕರಿಸುತ್ತೇವೆ ಸ್ಥಾಪಿತವಾಗಿ ಐದು ವರ್ಷಗಳೊಳಗಾಗಿಯೇ ಈ ಕಂಪೆನಿಯು ಬಹಳ ವಹಿವಾಟುಗಳನ್ನು ನಡೆಸಿರುವುದು ಸಂತೋಷಕರವಾದ ಸಂಗತಿ ವಿಮಾ ನಿಧಿಯು ಐವತ್ತು ಸಾವಿರಕ್ಕಿಂತಲೂ ಹೆಚ್ಚಿದೆ ಇದರಿಂದಲೇ ಕಂಪೆನಿಯು ಎಷ್ಟು ಚೆನ್ನಾಗಿ ಕೆಲಸಮಾಡುತ್ತಿದೆಯೆಂಬುದು ಗೊತ್ತಾಗುತ್ತದೆ ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿತವಾದುದು ಇದೊಂದೇ ವಿಮಾ ಕಂಪೆನಿ ಇಷ್ಟು ದಕ್ಷತೆಯಿಂದ ನಡೆಸಿಕೊಂಡು ಬರುವ ಕಂಪೆನಿಯ ಸಂಚಾಲಕರಿಗೆ ಧನ್ಯವಾದಗಳನ್ನರ್ಪಿಸಬೇಕು ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿ ಹೊಂದಿ ಭರತಖಂಡದಲ್ಲಿ ಒಂದು ಪ್ರಧಾನ ಸ್ಥಾನವನ್ನು ಹೊಂದಿ ನಮ್ಮ ದೇಶದಿಂದ ಪ್ರಕೃತ ವಿದೇಶಕ್ಕೆ ಹೋಗತಕ್ಕ ನಿಧಿಯನ್ನು ಇಲ್ಲೇ ನಿಲ್ಲಿಸುವರೆ ಶಕ್ತಿಯುಳ್ಳವಾಗಲೆಂದು ಹಾರೈಕೆ —ರಾಷ್ಟ್ರಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯು ವರ್ಷ ವರ್ಷ ಊರ್ಜಿತಸ್ಥಿತಿಗೆ ಬರುತ್ತಿರುವುದು ಶ್ಲಾಘನೀಯವಾದ ವಿಚಾರ ಈ ಕಂಪೆನಿಯು ಸ್ಥಾಪಿತವಾದುದು ಐದು ವರ್ಷಗಳ ಹಿಂದೆ, ಅಂದಿನಿಂದ ಜೀವವಿಮೆ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹೆಸರುವಾಸಿ ಪಡೆಯುತ್ತಲೇ ಇದೆ × × × × × ಈ ಕಂಪೆನಿಯ ಐದನೆ ವಾರ್ಷಿಕ ವರದಿಯು ತೃಪ್ತಿಕರವಾಗಿದೆ. ಕರ್ಣಾಟಕದ ಈ ಕಂಪೆನಿಯು ವರ್ಷ ವರ್ಷ ಅಭಿವೃದ್ಧಿಹೊಂದಲೆಂಬುದೇ ನಮ್ಮ ಹಾರೈಕೆ —'ಪ್ರಜಾಮತ,' ಮದರಾಸು

**Wanted influential Agents in unrepresented areas on liberal terms.**

## 104 ವರ್ಷ ಪ್ರಾಯದ ಮುದುಕನ ಮೇಲೆ ಮೊಕದ್ದಮೆ.

ಕೊಲಂಬೊ, ಅಗೋಸ್ತು ೨

ಮಾಟುಂಗ ಪೋಲಿಸ್ ಕೋರ್ಟಿಗೆ ೧೦೪ ವರ್ಷ ಪ್ರಾಯದ ಮುದುಕನೊಬ್ಬನು ಬಂದು ತಾನೊಬ್ಬ ನೆರೆ ಹೊರೆಯವನಿಗೆ ಹೊಡೆದುದು ತಪ್ಪೆಂದು ಒಪ್ಪಿಕೊಂಡನು. ಅವನನ್ನು ವಿಚಾರಿಸಲಾಗಿ, ಅವನಿಗೆ ೮ ಮಂದಿ ಹೆಂಡಿರಿದ್ದರೆಂದೂ ಅವರೆಲ್ಲರೂ ಕಾಲವಶರಾಗಿದ್ದರೆಂದೂ ತಿಳಿದುಬಂತು. ಇವರ ಕುರಿತಾದ ಮುಂದಿನ ವಿಚಾರಣೆಯಾಗುತ್ತಲಿದೆ

## ಒಂದು ಮಂಗನಿಗೆ ಹತ್ತು ಆಣೆ ಅವುಗಳ ಗಡೀಪಾರು.

ಕಂಜೀವರಂ; ಜುಲಾಯಿ ೩೦

ಕಂಜೀವರಂ ನಗರಸಭೆಯು ಜರಗಿತು. ಅಲ್ಲಿರುವ ಮಂಗಗಳನ್ನು ಒಂದಕ್ಕೆ ೧೦ ಆಣೆಯಂತೆ ಗಡೀಪಾರು ಮಾಡುವ ವ್ಯಯಕ್ಕೆ ಮಾಡಬೇಕಾದ ರೂ. ೨೦೦ನ್ನು ಮಂಜೂರು ಮಾಡಿದರು. ಕಳೆದ ವರ್ಷವೂ ಇದೇ ಬೆಲೆ!

## ಟ್ರೆಜರಿಯನ್ನು ಲೂಟಿಮಾಡಿದರು!

ಕೊಮಿಲ್ಲ, ಅಗೋಸ್ತು ೨

ಕಾಶೀನಗರದ ಗ್ರಾಮದಲ್ಲಿ ತ್ರಿಪುರ ಸ್ಟೇಟ್ ಟ್ರೆಜರಿಗೆ ೩೦ ಮಂದಿ ಶಸ್ತ್ರಧಾರಿಗಳು ಬಂದು ಬಾಗಿಲೊಡೆದು ಮೆನೆಜರನನ್ನೂ ಅವನ ೬ ಮಂದಿ ಕೆಲಸಗಾರರನ್ನೂ ಹಿಮ್ಮೆಟ್ಟಿಸಿ ೩೦೦೦ ರೂಪಾಯಿ ನಗದಿಯನ್ನೂ ಹಿಡಿದುಕೊಂಡು ಓಡಿದರು. ದರೋಡೆಗಾರರು ಯುರೋಪಿಯನ್ ಪೋಷಾಕು ಧರಿಸಿದ್ದರು. ಇಂಗ್ಲಿಷು ಮಾತನಾಡುತ್ತಿದ್ದರು. ಅವರು ಎರಡು ಪಂಗಡಗಳಾಗಿ ಬಂದು ಒಂದು ಪಂಗಡವು ಗಾರ್ಡರನ್ನು ಹಗ್ಗದಿಂದ ಕಟ್ಟಿತು. ಇನ್ನೊಂದು ಪಂಗಡವು ಪೆಟ್ಟಿಗೆಯನ್ನು ಒಡೆಯಿತು. ಕೊಮಿಲ್ಲಾ ಆಸ್ಪತ್ರೆಗೆ ನಾಲ್ವರನ್ನು ಒಯ್ದರು.

## ರಷ್ಯಾದ ಪ್ರಥಮ ನೌಕಾನಾಯಕಿ.

ಕೊಲೊಂಬೊ, ಅಗೋಸ್ತು ೨

ಇಲ್ಲಿಗೆ ಚಾವಿಚಟ್ ಎಂಬ ಸ್ಟೀಮರ್ ಬರಲಿದೆ. ಇದರ ನಾಯಕಿಯು ಅನ್ನಾ ಐವಾನೋವಾನ ಷಟಿನಯಾ ಎಂಬ ಸ್ತ್ರೀಯೊಬ್ಬಳು. ಇವಳು ರಷ್ಯಾದ ಪ್ರಥಮ ನೌಕಾ ನಾಯಕಿ. ಇವಳು ೧೦ ವರ್ಷಗಳಿಂದ ನೌಕಾ ಶಾಸ್ತ್ರವನ್ನು ಕಲಿಯುತ್ತಿರುವಳು. ಇವಳ ಸ್ಟೀಮರಿನಲ್ಲಿರುವ ಜನರೆಲ್ಲರೂ ತರುಣರೇ. ಹೇಂಬರ್ಗಿನಲ್ಲಿ ಆರು ದಿನಗಳ ತನಕ ಇವಳ ಸ್ಟೀಮರು ಮಂಜಿನೊಳಗೆ ಸಿಲುಕಿತು. ಆದರೆ, ಇವಳು ಅದನ್ನು ವಿಚಕ್ಷಣತೆಯಿಂದ ದಾಟಬಂದಳು

## 8 ಆಣೆಗಳಿಗಾಗಿ ಭಯಂಕರ ಕಲಹ

ಎಲ್ಲೂರಿನಲ್ಲಿ ಚಿಂತಾದು ಎಂಬವನು ವೆಂಕಟು ಎಂಬವನಿಗೆ ಎಂಟಾಣೆ ಸಾಲಕೊಟ್ಟಿದ್ದನು. ನಿನ್ನೆ ಅವನ ಸಾಲಗಾರನ ಮನೆಗೆ ಹೋಗಿ ತನ್ನ ಎಂಟಾಣೆಗಳನ್ನು ಹಿಂದೆ ಕೊಡಬೇಕೆಂದನು. ಮಾತಿಗೆ ಮಾತು ಬೆಳೆದು ಕೈಕೈಗೆ ಬಂತು. ಚಿಂತಾದುವು ಒಂದು ದೊಣ್ಣೆಯಿಂದ ವೆಂಕಟುವಿನ ತಲೆಗೊಡೆದು ಕೊಂದೇ ಬಿಟ್ಟನು. ನ್ಯಾಯ ವಿಚಾರಣೆಯಾಗಿ, ಚಿಂತಾದುವು ಸಿಟ್ಟಿನ ಭರದಿಂದ ಹಿಂದು ಮುಂದು ನೋಡದೆ ಈ ಕೃತ್ಯವನ್ನು ಮಾಡಿದುದರಿಂದ ಅವನು ಕೊಲೆಪಾತಕಿಯಲ್ಲವೆಂದು ನಿರ್ಧಾರವಾಗಿ, ಚಿಂತಾದುವಿಗೆ ೬ ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು

## ಶ್ರೀಯುತ ಪಿ. ಆರ್. ರಾವ್, ಇವರಿಗೆ ಮೋಡರ್ನ್ ಕೇಫೆಯಲ್ಲಿ ಸತ್ಕಾರ.

ಬ್ರಿಟಿಷ್ ಇಂಡಿಯಾ ಸರಕಾರದ ಉಚ್ಚ ನೌಕರಿ ಶ್ರೇಣಿಯ ಶ್ರೀ ಪಣಂಬೂರು ರಾಘವೇಂದ್ರರಾಯರು ಜುಲಾಯಿ ತಿಂಗಳ ೩೧ನೇ ತಾರೀಕು ಮದ್ರಾಸಿಗೆ ಚಿತ್ತೈಸಿದ್ದರಷ್ಟೆ. ಅವರನ್ನು ಮೋಡರ್ನ್ ಕೇಫೆಯ ಪ್ರೊಪ್ರೈಟರರಾದ ಶ್ರೀ ಕೆ. ಸೀತಾರಾಮರಾಯರು ಇತರ ಹಲವು ಮಹನೀಯರೊಡನೆ ತಮ್ಮ ಕೇಫೆಗೆ ಆಮಂತ್ರಿಸಿ ಅದೇ ತಾ. ೨೯ನೇ ಸಾಯಂ ಗಂಟೆ ೫ಕ್ಕೆ ಫಲಾಹಾರ ಉಪಹಾರಾದಿಗಳಿಂದ ಸತ್ಕರಿಸಿದರು. ಶ್ರೀಗಳಾದ ಬಿ. ಸೀತಾರಾಮರಾವ್, ಎಡ್ವೋಕೇಟ್; ಡಾ। ಪಿ. ವೆಂಕಟಗಿರಿ, ಡಾ। ಪಿ. ಶ್ರೀನಿವಾಸರಾವ್; ಡಾ। ಕೆ. ಶ್ರೀನಿವಾಸರಾವ್, ಡಾ। ಪಿ. ರಾಮರಾವ್, ಡಾ। ಎ. ಕೃಷ್ಣಯ್ಯ, ಡಾ। ಆರ್. ಆರ್. ಕಲ್ಯಾಡಿ, ಕಟಪಾಡಿ ಶ್ರೀನಿವಾಸ ರಾವ್, ಎಡ್ವೊಕೇಟ್, ಡಾ। ಎಚ್. ಎಚ್. ನಾರಾಯಣರಾವ್ ಇವರೇ ಮೊದಲಾದವರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು

## ಡೆಪ್ಯುಟಿ ತಹಶೀಲ್ದಾರರಿಗೆ ದಂಡವಾಯಿತು!

### ಅಂಗಡಿಗಾರನಿಗೆ ಹೊಡೆದರಂತೆ!

ವಿಜಯನಗರಂ, ಅಗೋಸ್ತು, ೧

ಬೊಬ್ಬಿಲಿಯ ಡಿ. ಸೂರ್ಯನಾರಾಯಣ ನಾಯುಡು ಎಂಬ ಡೆಪ್ಯುಟಿ ತಹಶೀಲ್ದಾರರು, ತಾಲೂಕು ಆಫೀಸಿನಲ್ಲಿ ಪಂಕಾ ಎಳೆಯುವವನೂ, ಬಳಿಯ ಅಂಗಡಿಯ ಮಹಮದ್ ಅಬ್ದುಲ್ ಜಬಾರ್ ಎಂಬವನೂ ಜಗಳ ಮಾಡುತ್ತಿದ್ದಾಗ, ಮಹಮ್ಮದನನ್ನು ಹಿಡಿದು ಆಫೀಸಿನಲ್ಲಿ ಹೊಡೆಸಿದರೆಂದೂ, ಹೊಡೆದರೆಂದೂ ಆರೋಪ ನಡೆಯಿತು. ಮಹಮ್ಮದನು ವೈದ್ಯಕೀಯ ಸರ್ಟಿಫಿಕೇಟನ್ನೂ ಮುಂದಿಟ್ಟನು. ಆದರೆ, ಸೂರ್ಯನಾರಾಯಣರು ವಾದಿಸಿ ಬೊಬ್ಬಿಲಿಯ ಅಸಿಸ್ಟಂಟ್ ಸರ್ಜನರಿಗೂ ತನಗೂ ಮನಸ್ತಾಪವಿರುವುದರಿಂದ ಅವರು ಅಂತಹ ವೈದ್ಯಕೀಯ ಸರ್ಟಿಫಿಕೇಟನ್ನು ಕೊಟ್ಟರೆಂದು ಹೇಳಿದರು. ನ್ಯಾಯಾಧೀಶರು ನಂಬದೆ, ಸೂರ್ಯನಾರಾಯಣರು ೧೫ ರೂಪಾಯಿ ದಂಡ ಕೊಡಬೇಕು, ಅಥವಾ ಒಂದು ಪಕ್ಷದ ಕಾರಾವಾಸ ಅನುಭವಿಸಬೇಕು—ಎಂದು ತೀರ್ಮಾನಿಸಿದರು

## ಓಮದ ನೀರಿನ ಬದಲು ಸ್ಪಿರಿಟ್ ಕೊಟ್ಟನು.

### ಅಂಗಡಿಗಾರನ ಅಜಾಗ್ರತೆ!

ತಂಜಾವೂರು ಜುಲಾಯಿ ೩೧

ತಿರುವತ್ತಿಯೂರು ಎಂಬಲ್ಲಿ ಪಾರ್ಥಸಾರಥಿ ಗ್ರಾಮಣಿ ಎಂಬವನು ಔಷಧಿ ವಿಕ್ರಯ ಮಾಡುತ್ತಿದ್ದನು. ಎಪ್ರಿಲ್ ತಾ. ೧೪ರಲ್ಲಿ ಅಪ್ಪದೊರೆ ನಾಯಕನ್ ಎಂಬವನು ತನ್ನ ಮಗುವಿಗೆ ಔಷಧವನ್ನಾಗಿ ಒಂದು ಬಾಟ್ಲಿ ಓಮದ ನೀರನ್ನು ಕೇಳಿದನು. ಪಾರ್ಥಸಾರಥಿಯು ಒಂದು ಬಾಟ್ಲಿಯನ್ನು ಕೊಟ್ಟನು. ಪಾರ್ಥಸಾರಥಿಯ ಈ ನೀರನ್ನು ಮಗುವಿಗೆ ಕುಡಿಸಿದೊಡನೆ ಅದು ತೀರಿಹೋಯಿತು. ಆ ಮಗುವಿನ ಮೃತಶರೀರವನ್ನು ಆಸ್ಪತ್ರೆಯಲ್ಲಿ ಪರೀಕ್ಷಿಸಲಾಗಿ, ಮಗುವು ಸ್ಪಿರಿಟ್ ಕುಡಿದು ತೀರಿಕೊಂಡಿತೆಂದು ಕಂಡುಹಿಡಿಯಲಾಯಿತು. ಅಂಗಡಿಗಾರನು ತಾನು ಸ್ಪಿರಿಟನ್ನು ಕೊಡಲೇ ಇಲ್ಲ; ತಾನು ಓಮದ ನೀರನ್ನೇ ಕೊಟ್ಟೆನೆಂದನು. ನ್ಯಾಯಾಧೀಶರು ತೀರ್ಪನ್ನು ಕೊಡುತ್ತಾ ಪಾರ್ಥಸಾರಥಿಯು ಬೇಕೆಂದು ಈ ದ್ರಾವಕವನ್ನು ಕೊಟ್ಟಿರುವುದಿಲ್ಲವೆಂದೂ, ಕೈತಪ್ಪಿ ಕೊಟ್ಟನೆಂದೂ ಹೇಳಿ ಅವನು ಅಜಾಗ್ರತೆಯಿಂದ ಮಾಡಿದ ತಪ್ಪಿಗಾಗಿ ೨೫ ರೂಪಾಯಿ ದಂಡವಿಧಿಸಿದರು.

## ಹೆಂಡತಿಯೂ ಅವಳ ವಲ್ಲಭನೂ ಸತ್ತರು.

ತಿರುಚಿನಾಪಳ್ಳಿ, ಅಗೋಸ್ತು ೩

ಚಿನ್ನಮ್ಮಾಳ್ ಎಂಬವಳು ಪೊಟ್ಟೆಯಂಡಿ ಎಂಬವನ ಪತ್ನಿ. ಇವಳು ಕಲಿಯಾನ್ ಎಂಬವನ ಮೈತ್ರಿ ಬೆಳೆಸಿ ೨೭ ೧೮ನೇ ದಿನ ವಿಷಪದಾರ್ಥವನ್ನು ಗಂಡನಿಗೆ ತಿನ್ನಿಸಿ, ಅವನು ಜೀವದಿಂದಿರುವಾಗಲೇ ಅವನ ಕುತ್ತಿಗೆಗೆ ಸೀರೆಯೊಂದನ್ನು ಸುತ್ತಿದಳು. ಇಬ್ಬರೂ ಕೂಡಿ ಹೆಣವನ್ನು ಮನೆಯ ಪಕ್ಕಾಸಿಗೆ ಹಗ್ಗದಲ್ಲಿ ನೇತಾಡಿಸಿ, ಆತ್ಮಹತ್ಯೆಯಾಯಿತೆಂದು ಬೊಬ್ಬಿಟ್ಟರು. ಇವರನ್ನು ವಿಚಾರಿಸಲಾಗಿ ನ್ಯಾಯಾಧೀಶರು ಇವರನ್ನು ಕೊಲೆಪಾತಕಿಗಳೆಂದು ನಿರ್ಧರಿಸಿ ಮರಣಶಿಕ್ಷೆ ವಿಧಿಸಿದರು.


**The**

**Bombay Life Assurance Co, Ltd.**

Mr M Mohan Pandit of Mathibettu, holder of our Policy No. 1251 having notified that he has either lost or misplaced his policy and having requested us to issue a duplicate thereof in his favour, notice is hereby given that a duplicate policy will be issued to him by the company should there be no objection recorded in our office, to our doing so, within a month of this notice.

*(Sd/)* **Jyotendra L. Mehta,**
*Manager,*
Bombay Life Assurance Co., Ltd.


## ವಿಚಿತ್ರ ಕಳವು!

ಕಲ್ಲಿಕೋಟೆ, ಅಗೋಸ್ತು ೧.

ಜುಲಾಯಿ ತಾ. ೨೮ನೇ ಶನಿವಾರ ರಾತ್ರಿ ತನ್ನ ಮನೆಯ ಬಳಿ ಇರುವ ಕೆರೆಯಲ್ಲಿ ಓರ್ವ ಮುಸ್ಲಿಂ ತರುಣಿಯು ಸ್ನಾನ ಮಾಡುತ್ತಿದ್ದಾಗ, ಸದ್ದಾಗದೆ ಹಿಂದಿನಿಂದ ಬಂದು ಅವಳ ಕೇಶರಾಶಿಯನ್ನು ಹಿಡಿದು, ಮುಖವನ್ನು ನೀರಿನಲ್ಲಿ ಮುಳುಗಿಸಿ, ಕುತ್ತಿಗೆಯಲ್ಲಿದ್ದ ಆಭರಣವನ್ನೂ ಕಿವಿಯ ಆಭರಣವನ್ನೂ ಸೆಳೆದು, ಅವಳನ್ನು ನೀರಿಗೆ ದೊಬ್ಬಿ ಒಬ್ಬ ಯುವಕನು ಪಲಾಯನಮಾಡಿದ್ದಾನೆ. ಪೋಲೀಸರು ಅವನ ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದಾರೆ.

## ಬೆಂಕಿಯ ಹಾವಳಿ!

ಕಡಲೂರು, ಅಗೋಸ್ತು ೧

ಕಲ್ಲಾಕುರುಚಿಯಲ್ಲಿ ಈ ದಿನ ಮಧ್ಯಾಹ್ನ ಆಕಸ್ಮಾತ್ತಾಗಿ ಬೆಂಕಿ ತಗಲಿ ಹತ್ತು ಹನ್ನೆರಡು ಮನೆಗಳು ಭಸ್ಮವಾದುವು. ಮುಸಲ್ಮಾನರ ಮನೆಯೊಂದರಲ್ಲಿ ಬೆಂಕಿ ಉರಿಸುವಾಗ ಕಿಡಿಯು ಮೇಲಕ್ಕೆ ಹಾರಿ ಮಾಡಿಗೆ ಬೆಂಕಿ ತಗಲಿತು. ಅದರೊಂದಿಗೆ ಬಾಕಿ ಮನೆಗಳಿಗೂ ಬೆಂಕಿ ತಗಲಿತು. ಇದನ್ನು ಕಂಡು ಸಬ್ ಮೆಜಿಸ್ಟ್ರೇಟರೂ ತಹಶೀಲ್ದಾರರೂ, ಸಬ್ ಇನ್ಸ್‌ಪೆಕ್ಟರರೂ ಇತರರೊಂದಿಗೆ ಧಾವಿಸಿಬಂದು ಬೆಂಕಿಯನ್ನು ನಂದಿಸಲು ಬಹಳ ಪ್ರಯತ್ನಪಟ್ಟರು. ಆದರೂ ೧೨ ಮನೆಗಳು ಸುಟ್ಟು ಭಸ್ಮೀಭೂತವಾದುವು. ರೂ. ೨೦೦೦ ನಷ್ಟವಾದೀತೆಂದು ಅಂದಾಜು ಮಾಡಲಾಗಿದೆ

## ಶಿಶುಹತ್ಯಕ್ಕಾಗಿ ತಾಯಿಗೆ ಶಿಕ್ಷೆ!

ಸಲೇಂ ಅಗೋಸ್ತು ೧

ಮಾತೆಯು ತನಗೆ ವ್ಯಭಿಚಾರದಿಂದ ಜನಿಸಿದ ಶಿಶುವನ್ನು ಯಾರಿಗೂ ತಿಳಿಯದಂತೆ ಹುಟ್ಟಿದೇ ಇರುವ ರಾತ್ರಿ ನೆಲ್ಲಿಯ ಬಾವಿಯಲ್ಲಿ ಬಿಸಾಡಿದ್ದಳು. ಅದೃಷ್ಟವಶಾತ್ ಈ ಮಗುವಿನ ಮೃತಶರೀರವು ಪೋಲೀಸರಿಗೆ ಸಿಕ್ಕಲು, ಅವರು ಅದರ ವಿಷಯ ತನಿಖೆ ನಡೆಸಿ ಮಾತಾ ಮುತ್ತು ಅವಳ ತಾಯಿ ಅಮ್ಮಕ್ಕ ಎಂಬವರನ್ನು ಕೋರ್ಟಿಗೊಯ್ದು ವಿಚಾರಣೆಯಾಗಲು ಇಬ್ಬರಿಗೂ ಅವರಬ್ಬರಿಗೂ ೩೧ನೇ ಸೆಕ್ಷನ್ನು ಪ್ರಕಾರ ಸಜೆ ವಿಧಿಸಿದರು

## ಆಸ್ತಿಗಾಗಿ ತಂದೆಯ ಕೊಲೆ!

ಶ್ರೀರಂಗಪಟ್ಟಣ, ಅಗೋಸ್ತು ೯

ನೊರೆಯಾಪಳ್ಳಿ ಹಳ್ಳಿಯ ಬಂಗಾರ ಶೆಟ್ಟಿ ನಾರಾಯಣ ಎಂಬವನು ತನ್ನ ತಂದೆಯೊಡನೆ ಆಸ್ತಿಯ ಪಾಲನ್ನು ಕೇಳಿದನು. ತಂದೆಯು ಈಗ ಕೊಡಲಾಗುವುದಿಲ್ಲವೆನ್ನಲು, ಮಗನು ಒಳಹೊಕ್ಕು ಒನಕೆಯಿಂದ ತಂದೆಯ ತಲೆಗೆ ಹೊಡೆದು, ಅವನನ್ನು ತ್ವರೆಯಾಗಿ ಯಮನಪಟ್ಟಣಕ್ಕೆ ಕಳುಹಿಸಿದನು. ಅದಕ್ಕಾಗಿ ಕೋರ್ಟಿನಲ್ಲಿ ಈಗ ಇವನ ವಿಚಾರಣೆಯಾಗುತ್ತಲಿದೆ.

## ದಕಾಯಿತನು ಬದುಕಿದನು!

ತಿನ್ನವೆಲ್ಲಿ, ಜುಲಾಯಿ ೩೧

ದಕಾಯಿತನ ಮಾಡಿದುದಕ್ಕಾಗಿ, ಅರಂಟನ್ನಾರಿನ ಶ್ರೀವೈಕುಂಠನಾದ ಎ ಎಸ್. ಮಹಮ್ಮದ್ ಮತ್ತು ಅವನ ಹತ್ತೆಂಟು ಅನುಯಾಯಿಗಳ ಮೇಲೆ ತಿರುಚೆಂದೂರಿನ ಕೋರ್ಟಿನಲ್ಲಿ ಮೊಕದ್ದಮೆ ನಡೆಯಿತು. ಈ ಆಪಾದಿತರು ಕಳೆದ ೧೯೩೪ನೇ ಜುಲಾಯಿ ತಾ. ೧೫ರಲ್ಲಿ ಕಲ್ಲೂಲ್ಲಾ ಹಮೀದ್ ಮತ್ತು ಅವನ ೪ ಮಂದಿ ಗೆಳೆಯರನ್ನು ಯಾರೂ ಇಲ್ಲದ ಸಮಯ, ಮಾರ್ಗದಲ್ಲಿ ತಡೆದು, ಬಲಾತ್ಕಾರದಿಂದ ಪ್ರತಿಯೊಬ್ಬರಿಂದಲೂ ರೂ ೫೦೦ ಪಡಕೊಂಡಿದ್ದರು. ವಿಚಾರಣೆಯ ಸಮಯ—ಮಹಮ್ಮದನು 'ಇದೆಲ್ಲಾ ಸುಳ್ಳು. ಅವನಿಗೂ ನನಗೂ ಪರಸ್ಪರ ದ್ವೇಷವಿದ್ದುದರಿಂದ ನನ್ನ ಮೇಲೆ ಇಂತಹ ಆರೋಪವನ್ನು ಹೊರಿಸಿದ್ದಾನೆಂದು ಹೇಳಿದನು. ಮಹಮ್ಮದನ ಕಡೆಯ ವಕೀಲರು ಅದನ್ನು ಧೃಢೀಕರಿಸಿ ವಾದಿಸಿದ ನಂತರ ಜಡ್ಜರು 'ಇದು ಸುಳ್ಳು ವ್ಯಾಜ್ಯವೆಂದು' ತೀರ್ಮಾನಮಾಡಿದರು.

## ಒಂದಾಣೆಯೊಳಗೆ ಮದುವೆ.

### ಶ್ರೀ ಭುಲಾಭಾಯಿಯವರ ನವೀನ ಏರ್ಪಾಡು!

ಹಳ್ಳಿಗರ ಪುನರುದ್ಧಾರಕಾರ್ಯದಲ್ಲಿ ತನ್ನ ತನುಮನಧನಗಳನ್ನು ಅರ್ಪಿಸಿದ ಶ್ರೀ ಭುಲಾಭಾಯಿ ದೇಸಾಯರು ನವೀನ ಏರ್ಪಾಡು ಮಾಡಿದ್ದಾರೆ.

ಪುರಾತನ ಕಾಲದಿಂದಲೂ ಆಚರಣೆಯಲ್ಲಿರುವ ವರದಕ್ಷಿಣೆಯನ್ನು ತೆತ್ತುಗೆಯುವ ಮನಸ್ಸು ಇದರದು ಇದರಿಂದ ಉಭಯಪಕ್ಷಕ್ಕೂ ಕ್ಷೇಮವಲ್ಲವೇ? ಮೊನ್ನೆ ತಾನೇ ಒಂದೆಡೆಯಲ್ಲಿ ಇವರು ಈ ಕ್ರಮವನ್ನು ಪ್ರಚಾರಕ್ಕೆ ತಂದರು

ಒಂದೂರ ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣನು ಒಂದು ದೇವಾಲಯದಲ್ಲಿ ದೇವರನ್ನು ಪ್ರತಿಷ್ಠೆಗೊಳಿಸಿ, ಪ್ರತಿಯೊಬ್ಬರೂ ಅಲ್ಲಿಯೇ ಬಂದು ಮದುವೆ ಮಾಡಿಕೊಳ್ಳಬೇಕೆಂದು ಬೇಡಿಕೊಂಡಿದ್ದನು. ಪ್ರತಿಯೊಂದು ಮದುವೆಯ ಖರ್ಚಿಗೂ ೮ ಆಣೆ ಹಣವನ್ನು ಮಾತ್ರ ಬ್ರಾಹ್ಮಣನಿಗೆ ಕೊಡಬೇಕಾಗಿತ್ತು. ಶ್ರೀಯುತ ದೇಸಾಯರು ಇದನ್ನು ತಿಳಿದು, ಆ ಹಳ್ಳಿಯ ಪಟೇಲರಿಗೆ ಇನ್ನೊಂದು ಕಡೆಯಲ್ಲಿ ದೇವರ ಮೂರ್ತಿಯನ್ನು ಸ್ಥಾಪಿಸುವಂತೆ ಹೇಳಿ, ಜನರು ಅಲ್ಲಿಗೆ ಬಂದು ತಮ್ಮ ಮದುವೆಯನ್ನು ಧರ್ಮಾರ್ಥವಾಗಿ ಮಾಡಿಕೊಳ್ಳಬಹುದೆಂದು ಏರ್ಪಾಡು ಮಾಡಿದರು. ಪುರೋಹಿತನಿಗಾಗಿ ಬರೇ ಒಂದಾಣೆ ಖರ್ಚು. ಇಂತಹ ೯೯ ಮದುವೆಗಳು ಅಲ್ಲಿ ಆದುವಂತೆ.


# ವಜ್ರಗಳು! —— ವಜ್ರಗಳು

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

# ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

*Part Proprietors of —*
**Sri Krishna Mills & Co**
Oil Manufacturers
Bunder, Mangalore
**Bhagavan Ganesh Pai & Co**
Copper Sheet & Twist
Merchants, Camp Bazar,
Cannanore.

*Representatives for the W. C.*
**M/s. A & F. Harvey**
Cotton Spinners,
Tuticorin, Madura &c.
**Guardian Assurance Co., Ltd.**
(Incorporated in England)
Head Office: 68, King
William Street,
London, E. C. 4.

# ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ – (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ – (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ವಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

## ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.

Distributors for South Kanara —

**Raghavendra Ranga Pai, Car Street, Mangalore.**



ಇಂದೇ ಆರಂಭಿಸಿರಿ!

ನಮ್ಮ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಡಬ್ಬಿ ರೂ 1

ಕಾಮಶಾಸ್ತ್ರವನ್ನೋದಿರಿ.

—Shah Company, Mangalore
„ Pearl & Sons, Mangalore.

Atank Nigrah Pharmacy
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು



ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

## ಸಾಮಾನ್ಯ ವಿಜ್ಞಾನ.

**ಚರಿತ್ರೆ ಮತ್ತು ಕಥೆಗಳು.**

| | ರೂ. | ಆ. | ಪೈ. |
|---|---|---|---|
| ನಾಲ್ಕನೇ ದರ್ಜೆ | 0 | 6 | 0 |
| ಮೂರನೇ „ | 0 | 4 | 6 |
| ಎರಡನೇ „ | 0 | 4 | 0 |

**ಸಮಾಜಶಾಸ್ತ್ರ.**

| | ರೂ. | ಆ. | ಪೈ. |
|---|---|---|---|
| ಐದನೇ ದರ್ಜೆ | 0 | 3 | 0 |
| ನಾಲ್ಕನೇ „ | 0 | 3 | 0 |
| ಮೂರನೇ „ | 0 | 2 | 6 |

**ಸಾಮಾನ್ಯ ವಿಜ್ಞಾನ.**

| | ರೂ | ಆ | ಪೈ |
|---|---|---|---|
| ಎರಡನೇ ದರ್ಜೆ | 0 | 3 | 0 |
| ಮೂರನೇ „ | 0 | 3 | 0 |
| ನಾಲ್ಕನೇ „ | 0 | 5 | 0 |
| ಐದನೇ „ | 0 | 6 | 0 |

## ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅಗಳೆ ಮುದ್ದೆ
ಇಲಿಗಳ ಧಕ್ಕ ದೈ
ಅಂಗಳ ದುಗ್ಗ
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ.
(ಇವುಗಳ ಕ್ರಯ 1ಕ್ಕೆ 0–0–9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ' — ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

## ಶಾರದಾ ಛಾಪಖಾನೆ, ಮಂಗಳೂರು.



ಶಿವರಾಮ ಕಾರಂತ ವಿರಚಿತ

# ಜ್ಞಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.

ದಪ್ಪಗಿನ ಆಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ¼ ಆಕಾರದ ೧೮೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು

# ನಗಬಾರದು.

[ಸ್ವಕಪೋಲಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ಮೇಸ್ತ್ರು:-(ಒಂದು ಅಂಗಡಿಯಲ್ಲಿ ನಿಂತು ದಾರಿಯಲ್ಲಿ ಬೀಡಿ ಎಳೆಯುತ್ತ ಹೋಗುವ ತನ್ನ ವಿದ್ಯಾರ್ಥಿಯನ್ನು ಕಂಡು) ಎಲಾ ಹುಡುಗಾ! ಬೀಡಿ ಎಳೆಯಬಾರದೆಂದು ನಿನಗೆ ನಿನ್ನೆ ಹೇಳಿದ್ದೆನಲ್ಲಾ!

ಹುಡುಗ:—ಓ ಸಾರ್! ನೀವು ಇಲ್ಲಿ ನಿಂತಿದ್ದೀರೆಂದು ನನಗೆ ಗೊತ್ತಿರಲಿಲ್ಲ ಸಾರ್! ಗೊತ್ತಿದ್ದರೆ ನಾನು ಎಳೆಯುತ್ತಿದ್ದಿಲ್ಲ.

\+ \+ \+ \+

ಗಂಡ:—ಹೌದೇನೇ, ನೀನು ಇವತ್ತಿನ ಮೇಲೋಗರಕ್ಕೆ ಉಪ್ಪು ಹೆಚ್ಚು ಹಾಕಿದೆಯಾ?

ಹೆಂಡತಿ:—ಹೌದಂತೀನೆ, ನೀವು ಇವತ್ತು ಮೇಲೋಗರ ಮಾಡಿದ ಮುದಿಕೆ ಕಂದದ್ದು ಮಳ್ಳೆಯಿಂದಲ್ಲಾ!

\+ \+ \+ \+

ತಂದೆ:—ಮಗೂ! ಕಪ್ಪು ಬಣ್ಣದ ಒಂದು ವಸ್ತುವಿನ ಹೆಸರು ಹೇಳು.

ಮಗ:-ಅಪ್ಪಾ, ನಿಮ್ಮ ಮುಖ!

\+ \+ \+ \+

ಉಪಾಧ್ಯಾಯ -ಹೌದೊ, ಬೀಡಿ ಎಳೆಯುವುದರಿಂದ ಏನು ಪ್ರಯೋಜನವೊ?

ಹುಡುಗ -ನಮ್ಮ ದೇಶದ ಬೀಡಿ ವ್ಯಾಪಾರಿಗಳನ್ನು ಉದ್ಧರಿಸಿದಂತಾಗುವುದು.

\+ \+ \+ \+

ಉಪಾಧ್ಯಾಯ.-ರಾಮು! ನೀನು ಯಾವಾಗಲೂ ಶಾಲೆಗೆ ತಡಮಾಡಿ ಬರುತ್ತಿ; ಆದಕಾರಣ ನಿನ್ನನ್ನು 'ಲೇಟ್ ಲತೀಫ್' ಎಂದು ಕರೆಯುತ್ತೇನೆ ನೋಡು.

ರಾಮು.-ಸಾರ್, ಹಾಗೆ ಕರೆದರೆ ಚಿಂತಿಲ್ಲ ಸಾರ್, ಆದರೆ ಅದರನಂತ್ರ ಯಾವಾಗಲೂ ತಡಮಾಡಿ ಬಂದರೆ ಹೊಡೆಯುವುದಿಲ್ಲವಲ್ಲಾ! ಅದು ಮಾತ್ರ ನೆನಪಿರಲಿ.

ಎಸ್ ಶೇಷಗಿರಿ ನಾಯಕ್.

ಒಬ್ಬ-ವಿವೇಕವಿಲ್ಲದವನಿಗೆ ಅವಿವೇಕಿಯೆಂದೂ, ವಿಚಾರ ಇಲ್ಲದವನಿಗೆ ಅವಿಚಾರಿಯೆಂದೂ ಹೇಳುವರು

ಇನ್ನೊಬ್ಬ -ಹಾಗಾದರೆ, ಕಾಲು ಇಲ್ಲದವನಿಗೆ ಅಕಾಲನೆಂದೂ, ತಲೆ ಇಲ್ಲದನಿಗೆ ಅತಲನೆಂದೂ, ಬಾಲವಿಲ್ಲದ್ದಕ್ಕೆ ಅಬಾಲವೆಂದೂ ಕರೆಯುವರೇ?

\+ \+ \+ \+

ಅವನು.-ನಾವು ಯಾವಾಗಲೂ ಸ್ವದೇಶಿ ಸಾಮಾನುಗನ್ನು ತೆಗೆದುಕೊಳ್ಳಬೇಕು. ಅಲ್ಲವೆ?

ಇವನು:-ಓಹೊ! ಏನೆದ್ದಿ? ನಾನು ಯಾವಾಗಲೂ, ಊರ ಅಕ್ಕಿ, ಊರ ಮೆಣಸು, ಊರ ಬೆಲ್ಲ, ಊರ ಗೋದಿಹಿಟ್ಟು, ಇವನ್ನೇ ಕೊಂಡುಕೊಳ್ಳುವುದು. ನನ್ನ ದೇಶಪ್ರೇಮ, ದೇಶಸೇವೆ, ಅವಿಳ ದೇಶಸೇವೆಯ ಹಾಗೆ ತಿಳಿಯಿತೆ?

\+ \+ \+ \+

ಇನ್ಸ್‌ಪೆಕ್ಟರ.-ನಿಮ್ಮ ಉಪಾಧ್ಯಾಯರು ನಿಮಗೆ ಕಲಿಸಿದ 'ನಾಯಿಯ ಪಾಠ'ದಲ್ಲಿ ಒಂದು ಪ್ರಶ್ನೆ ಕೇಳುವೆನು. ಉತ್ತರಕೊಡಬಲ್ಲಿರೊ?

ವಿದ್ಯಾರ್ಥಿಗಳು.—ಎಲ್ಲರೂ ಒಟ್ಟು ಕೂಡಿ "ಕೊಡಬಲ್ಲೆವು" ಎಂದರು.

ಇನ್ಸ್‌ಪೆಕ್ಟರ್.—ಹಾಗಾದರೆ ನಾಯಿಗೆ ಇರುವ ಒಂದು ವಿಶೇಷ ಗುಣ ಯಾವುದು?

ಉತ್ಸಾಹದಿಂದ ಓರ್ವ ವಿದ್ಯಾರ್ಥಿ:—ನಾಯಿಯು ಯಾವುದಾದರೂ ಒಂದು ವಸ್ತುವನ್ನು ಕಂಡಾಕ್ಷಣ ಒಂದು ಕಾಲನ್ನು ಮೇಲಕ್ಕೆತ್ತಿ ಉಚ್ಚೆ ಮಾಡುತ್ತದೆ ಸಾರ್!

(ಕೊಟ್ಟ ಉತ್ತರ ತಪ್ಪಲ್ಲ. ಮಾತ್ರ ಅದು ಪಾಠದಲ್ಲಿಲ್ಲ.

ಕೆ. ಅಚ್ಯುತ ಪೈ.

ಉಪಾಧ್ಯಾಯ:—ಕ್ವೆಟ್ಟಾ ಭೂಕಂಪ ನಿಧಿಗೆ ಎಷ್ಟು ಹಣ ಹೋಗಿದೆ?

(ಒಬ್ಬ ಹುಡುಗನು ಎದ್ದು ನಿಂತು):—ಒಂದು ವಾರದ ರಜಾ ಕೊಡಬೇಕು ಸಾರ್.'

ಉಪಾಧ್ಯಾಯ:—ಯಾವುದಕ್ಕೆ?

ಹುಡುಗ:—ಪಟ್ಟಿ ನೋಡಲಿಕ್ಕೆ ಸಾರ್.

\+ \+ \+ \+

ಗೋವಿಂದನನ್ನು ಎಲ್ಲರೂ ದಾಡೆರಾಯ ದಾಡೆರಾಯ ಎಂದು ಕರೆಯುತ್ತಿದ್ದರು.

ಗೋವಿಂದನ ಕ್ಲಾಸಿನವ:—ಎಲೋ ಗೋವಿಂದ ನಿನ್ನ ದಾಡೆಯಲ್ಲಿ ಉಂಟೋ?

ಗೋವಿಂದ:—ಅನೆಗೆ ಬಾಡಿಗೆಗೆ ಕೊಟ್ಟಿದ್ದೇನೆ.

\+ \+ \+ \+

ಇನ್ಸ್‌ಪೆಕ್ಟರ್:—ಕಾಮನಬಿಲ್ಲು ಬಂದರೆ ಏನಾಗುತ್ತದೆ?

ನಿದ್ರೆಯಿಂದಚ್ಚೆತ್ತ ಒಬ್ಬ ಹುಡುಗನು:—ಬಿಲ್ಲಿಗೆ ಬಾಣ ಜೋಡಿಸಿ ಹೊಡೆಯುತ್ತಾರೆ ಸಾರ್.

\+ \+ \+ \+

ಗೋಪಾಲ.—ಸರ್ಜನರೆ ನನಗೆ ಕಣ್ಣು ನೋವಾಗುತ್ತದೆ. ಸ್ವಲ್ಪ ಪರೀಕ್ಷಿಸಿರಿ

ಸರ್ಜನರು.—ಕಣ್ಣನ್ನು ಸರಿಯಾಗಿ ಪರೀಕ್ಷಿಸಿ, 'ಲೋ! ನಿನ್ನ ಕಣ್ಣಿಗೆ ಹೂ ಬಂದಿದೆ.

ಗೋಪಾಲ:—ಹೌದು, ನನ್ನ ತಂಗಿಯು ಮೊನ್ನೆ ಹೂ ಬಿಸಾಡಿದ್ದು ಕಾಣುತ್ತೆ.

ಬಿ. ಶ್ರೀನಿವಾಸ ಶಿಪಿ.

(ತನ್ನ ತಾಯಿಯು ಸತ್ತುಹೋದ ಕೂಡಲೇ ಹೆಂಡತಿಯಿದ್ದಲ್ಲಿಗೆ ಕೂಗುತ್ತಾ ಓಡಿಬಂದು.)

ಗಂಡ —ತಾಯಿ ಸತ್ತುಹೋದಳಲ್ಲಾ. (ಎಂದು ಕೂಗುವವನು)

ಹೆಂಡತಿ.—ಅಯ್ಯಯ್ಯೋ ನನಗೆ ಕೂಗೋಕೆ ದನಿಯೇ ಹೋಗ್ಯದಲ್ಲಾ. ಒಂದಿಷ್ಟು ಧಿಮಿಜನ್ ಕಾಫಿಯಾದ್ರೂ ತಂದು ಕೊಡೀಂದ್ರೆ

\+ \+ \+ \+

ತಂದೆ —(ಮಗನೊಡನೆ) ನೀನು ಪಾಠ ಸರಿಯಾಗಿ ಕಲಿಯಬೇಕು.

ಮಗ —ನೀನು ಪಾಠ ಸರಿಯಾಗಿ ಕಲಿಯಬೇಕು.

ತಂದೆ —ನನಗೆ ನೀನು ಬುದ್ಧಿ ಹೇಳಿಕೊಡುವೆಯಾ?

ಮಗ.—ತಂದೆ ಹೇಳಿದಂತೆ ಕೇಳಬೇಕೆಂದು ನಿನ್ನೆ ಉಪಾಧ್ಯಾಯರು ಹೇಳಿದ್ದರು. ಅಪ್ಪಾ, ಅದ್ರಂತೆ ಕೇಳಿದೆ.

\+ \+ \+ \+

ಮೇಸ್ತ್ರು.—ಕಾಗೆಯ ಬಣ್ಣ ಯಾವ ರೀತಿ ಇರುತ್ತದೆ ಎಂಬುದಕ್ಕೆ ಒಂದು ಉದಾಹರಣೆ ಕೊಡಿರಿ.

ಹುಡುಗರು:—ಹಿರಿಯರೆದುರು ಉದಾಹರಣೆ ಕೊಡಬಾರದೆಂದು ನಿನ್ನೆ ನೀವೇ ಹೇಳಿದ್ದಲ್ಲೊ ಸಾರ್.

ಬಿ ಕೆ ಜನಾರ್ಧನ

ತಾಯಿ—ಮಗು ಸುಂದರಾ ನೀನೇ ನನ್ನ ಚಿನ್ನಾಭರಣ.

ಮಗು.-ಹಾಗಾದ್ರೆ ಈದಿನ ಮೇಲೆ ಎರಡು ಆಣೆಗಳನ್ನಾದರೂ ಕೊಡಮ್ಮ.

\+ \+ \+ \+

ಹುಡುಗ.—ಏನೂ ಮಾಡದೆ ಕೂತವರಿಗೆ ಹೊಡೆಲಿಕ್ಕೆ ಉಂಟೋ ಸಾರ್?

ಮೇಸ್ತ್ರು —ಇಲ್ಲ, ಯಾತಕೆನ್ನು?

ಹುಡುಗ ನೀವು ನಿನ್ನೆ ಹೇಳಿದ ಪ್ರಕಾರ ನಾನು ಪುಗ್ಗಿ ಬಾಯಿಪಾಠ ಮಾಡಲಿಲ್ಲ ಸಾರ್.

ಕೆ. ಪಿ. ಪ್ರಭು

(ರಸ್ತೆಯಲ್ಲಿ ಹೋಗುವ ಒಬ್ಬ ಹಳ್ಳಿಯವನನ್ನು ನೋಡಿ ಅಂಗಡಿಯವನು ಬೊಬ್ಬಿಟ್ಟು ಕೂಗುವನು. ಆಗ-)

ಹಳ್ಳಿಯವನು.—ಏನು ಸಾಹುಕಾರರೇ? ಹೀಗೇಕೆ ದುಃಖಿಸುತ್ತಿರುವಿರಿ?

ಅಂಗಡಿಯವ—ಮತ್ತೇನಿಲ್ಲವಯ್ಯಾ, ನಾನು ಬಹು ಪ್ರೀತಿಯಿಂದ ಸಾಕಿಕೊಂಡಿದ್ದ ಒಂದು ಕಪಿಯು ಮೊನ್ನೆ ತಾನೇ ಸತ್ತುಹೋಯಿತು. ನಿಮ್ಮ ಮುಖ ನೋಡಿದ ಕೂಡಲೇ ಅದರಂತೆ ಕಡು ಥಟ್ಟನೆ ದುಃಖಬಂದುಬಿಟ್ಟಿತು.

\+ \+ \+ \+

ದಾರಿ ನಡೆಯುವವ:—ಎಲಾ ಹುಡುಗನೇ, ಈ ದಾರಿ ಎಲ್ಲಿಗೆ ಹೋಗುತ್ತದೆ?

ಹುಡುಗ:-ಅದು ಎಲ್ಲಿಗೂ ಹೋಗುವುದಿಲ್ಲ ಸ್ವಾಮಿ, ಅಲ್ಲೇ ಇರುತ್ತದೆ.

\+ \+ \+ \+

ಆತ:-ವಕೀಲರ ಭೇಟಿಗೆ ಹೋಗುವಾಗ್ಯೆ ಹೀಗೇಕೆ ಅಂಕೆಯೇ ಹೋಗುವಿರಿ-ಕೈಯಲ್ಲಿ ಏನಾದರೂ ಬೇಡವೇನಯ್ಯಾ?

ಈತ:—ಬೇಕಯ್ಯ ಅಗತ್ಯ ಬೇಕು-ಇಲ್ಲವಾದರೆ ನಮ್ಮನ್ನು ಯಾರು ಮಾತನಾಡಿಸುತ್ತಾರೆ.

ಆತ:-ಹಾಗಾದರೆ ಕಯ್ಯಲ್ಲಿ ಏನಿದೆ?

ಈತ:-ಕಯ್ಯಲ್ಲಿ ತುಂಬಾ ಕಜ್ಜಗಳಿವೆ, ಸಾಲದೇ?

\+ \+ \+ \+

ಮೇಸ್ತ್ರು-ನಾಲ್ಕಕ್ಕೆ ಮೂರು ಕೂಡಿಸಿದರೆ ಎಷ್ಟೋ ಹುಡುಗಾ?

ಹುಡುಗ:-ಮೌನ

ಮೇಸ್ತ್ರು:-ನಾಲ್ಕಕ್ಕೆ ಮೂರು ಕೂಡಿಸಿದರೆ ಏಳು ಆಗುತ್ತದೆ ಏನು?

ಹುಡುಗ.-ನಿಮಗೆ ಗೊತ್ತಿರುತ್ತಾ ನನ್ನೊಡನೆ ಕೇಳಿದ್ದು ಯಾಕೆ ಸಾರ್?

\+ \+ \+ \+

ಗೃಹಸ್ಥ:—ಪುರೋಹಿತರೇ! ನಾಳೆ ನಮ್ಮಲ್ಲಿ ಶ್ರಾದ್ಧವಾದುದರಿಂದ ತಾವು ಅಗತ್ಯ ಚಿತ್ತೈಸಬೇಕು.

ಪುರೋಹಿತ:-ಸಾಧಾರಣ ಮೂರು ಘಂಟೆಗೆ ಬಂದರೆ ಸಾಲದೇ?

ಗೃಹಸ್ಥ.-ಅದೇನು ಹಾಗೆನ್ನುವಿರಿ? ಬೇರೇನಾದರೂ ಕೆಲಸಗಳಿವೆಯೇ?

ಪುರೋಹಿತ.-ನಮಗೆ ಬೇರೆ ಕೆಲಸಗಳೇನು, ಎರಡು ಘಂಟೆಗೆ ಹೀಗೆಯೇ ಬೇರೊಂದು ಕಡೆ ಶ್ರಾದ್ಧದ ಊಟಕ್ಕೆ ವಹಿಸಿಕೊಂಡಿರುತ್ತೇನಪ್ಪ

× × × ×

(ಒಂದು ವಿವಾಹದ ಕುರಿತು ವರದಕ್ಷಿಣೆಯ ವಿಚಾರ ಮಾತನಾಡುತ್ತಾ)

ವರನ ತಂದೆ.—ನೀವು ವರದಕ್ಷಿಣೆಯಾಗಿ ಏನು ಕೊಡುವಿರಿ?

ಹುಡುಗಿಯ ತಂದೆ:—ನನ್ನ ಹೆಸರಲ್ಲಿರುವುದನ್ನೆಲ್ಲ ಬರೆದು ಕೊಡಬಹುದಯ್ಯಾ,

ವರನ ತಂದೆ.—ನಿಮ್ಮ ಹೆಸರಲ್ಲಿ ಏನೆಲ್ಲಾ ಇದೆ?

ಹುಡುಗಿಯ ತಂದೆ:—ಮೂರು ಅಕ್ಷರಗಳೂ ಒಂದು ಸೊನ್ನೆಯೂ ಇದೆ.

ವರನ ತಂದೆ-ಹಾಗೆಂದರೆ?

ಹು. ತಂದೆ-ಹಾಗೆಂದರೆ 'ಶಂಕರ'ನೆಂದು.

ಯು ಪಿ ಭಟ್ಟ

(ಒಂದು ಊರಿನಲ್ಲಿ ಒಬ್ಬ ಮುದುಕನು ಇದ್ದನು. ಅವನಿಗೆ ಕಿವಿಗಳು ಕೇಳುತ್ತಿರಲಿಲ್ಲ. ಒಂದು ದಿನ ಆತನ ಅಳಿಯನಿಗೆ ವಿಪರೀತ ಕಾಯಿಲೆಯೆಂಬುದಾಗಿ, ಕಾಗದ ಬಂತು. ಕೂಡಲೇ ಮುದುಕನು ಅಳಿಯನ ಮನೆಗೆ ಹೊರಟುಹೋದನು.

ಮುದುಕ:-ಈಗ ಅಳಿಯನಿಗೆ ಹೇಗೆ ಇದೆ?

ಮನೆಯವರು:—ನಿಮ್ಮ ಅಳಿಯನು ಕೆಲವು ಗಂಟೆಗಳ ಮೊದಲು ತೀರಿಹೋದನು.

ಮುದುಕ:—(ಸೌಖ್ಯವಿದ್ದಾನೆಂದು ಹೇಳಿರಬಹುದು ಎಂದೆಣಿಸಿ) ಆಗಲಿಯಪ್ಪಾ, ಆಗಲಿ ಮದ್ದು ಯಾರದು?

ಮನೆಯವರು:-ಮದ್ದು ಯಮನದ್ದು.

ಮುದುಕ:-(ಊರ ವೈದ್ಯರ ಹೆಸರನ್ನು ಹೇಳಿರಬಹುದು ಎಂದು ಎಣಿಸಿ) ಆಗಲಿಯಪ್ಪಾ ಅವರೇ ಒಳ್ಳೇ ವೈದ್ಯರು. ಅವರದ್ದೇ ಮದ್ದು ಒಳ್ಳೇಯದು.

× × × ×

ದೇವಸ್ಥಾನದ ಪೂಜಾರಿ ದೇವರ ಚಿನ್ನದ ಮೂರು ನಾಮಗಳ ಪೈಕಿ ಒಂದು ನಾಮವನ್ನು ಕದ್ದಿದ್ದನು. ಒಬ್ಬ ತಂಬೂರಿದಾಸನು ಪೂಜಾರಿಯ ಮನೆಗೆ ಬಂದು, ಸ್ವಾಮಿ ಗಾಯನ ಮಾಡಲೇ ಎಂದನು!

ಪೂಜಾರಿ:-ಆಗಲಿ.

ತಂಬೂರಿದಾಸ:—ನಾಮವೊಂದೇ ಸ್ಥಾಲದೇ ಗೋವಿಂದನ (ಎಂದು ಹಾಡಿದನು).

ಪೂಜಾರಿ:-(ಮನಸ್ಸಿನಲ್ಲಿ) ನಾನು ನಾಮವನ್ನು ಕದ್ದದ್ದು ಇವನಿಗೆ ಹೇಗೆ ತಿಳಿಯಿತು? ಒಂದು ವೇಳೆ ತಿಳಿದರೂ ಅದನ್ನು ಪ್ರಚಾರಮಾಡಬೇಕಿತ್ತೇ? ಎಂದು ಸಿಟ್ಟುಗೊಂಡು, "ನಾನು ದೇವರ ನಾಮ ಕದ್ದರೆ ನಿನಗೇನಯ್ಯಾ?" ಎಂದನು.

× × × ×

ಏಕಾದಶಿ ದಿವಸ ಅವಲಕ್ಕಿ ನಿಷೇಧ್ಯ;ಆದರೆ ಒಬ್ಬ ಮುದುಕಿಗೆ ಏಕಾದಶಿ ಆಚರಿಸಬೇಕೆಂದು ಆಸೆಯಿಂದ ಮನೆಯಲ್ಲಿ ಅಕ್ಕಿ ತಕ್ಕ ಹುಡುಕಿದಳು. ಅವಲಕ್ಕಿ ವಿನಹ ಬೇರೇನೂ ಇರಲಿಲ್ಲ. ಹಗಲು ಹೊತ್ತು ಉಪವಾಸವಿದ್ದಳು. ರಾತ್ರಿ ಅವಲಕ್ಕಿಯನ್ನು ಮೊಸರಿನಲ್ಲಿ ನೆನೆ ಹಾಕಿ ಊರ ದೇವಸ್ಥಾನದಲ್ಲಿ ಜರುಗುವ ಹರಿಕೀರ್ತನೆ ಕೇಳಿ ಹಿಂತಿರುಗಿ ಬಂದ ನಂತರ ತಿನ್ನಬಹುದೆಂದೆಣಿಸಿ ಹರಿಕೀರ್ತನೆಗೆ ಹೋದಳು. (ಹರಿಕೀರ್ತನೆ ಅತಿವಾಸಿ ಮುಗಿಯುವ ಸಂದರ್ಭದಲ್ಲಿ)

ಹರಿದಾಸ:-ನೆನೆಯಬೇಕು .... ಎಂಬ ಪದ್ಯವನ್ನು ಹಾಡುತ್ತಾನೆ.

ಮುದುಕಿ:-(ಮನಸ್ಸಿನಲ್ಲಿ) ಕೆಟ್ಟೆನಯ್ಯಾ ಕೆಟ್ಟೆ, ನಾನು ಅವಲಕ್ಕಿ ಮೊಸರಿನಲ್ಲಿ ಹಾಕಿ ಇಟ್ಟದ್ದು ಎಲ್ಲಿಯೋ ಈ ಮಹಾರಾಯ, ನೋಡಿಬಿಟ್ಟ. ಇದಕ್ಕೆ ಒಂದು ಉಪಾಯವನ್ನು ಮಾಡುವೆನು. (ಗುಟ್ಟಿನಿಂದ) ಅಯ್ಯಾ ಹರಿದಾಸರೇ ೫ ರೂಪಾಯಿ ಕೊಡುತ್ತೇನೆ.

ಹರಿದಾಸ:-ತನ್ನ ಪದ್ಯಕ್ಕೆ ಮೆಚ್ಚಿ ಮುದುಕಿಯು ೫ ರೂ.ಗಳನ್ನು ಕೊಡುತ್ತೇನೆಂದು ಹೇಳಿರಬಹುದು ಎಂದು ಎಣಿಸಿ, ಪುನಃ "ನೆನೆಯಬೇಕು ....

ಮುದುಕಿ—"ನಾನು ಅವಲಕ್ಕಿಯನ್ನು ಮೊಸರಿನಲ್ಲಿ ನೆನೆ ಹಾಕಿದರೆ ನಿನಗೆ ಬಂದ ಸಂಕಟವೇನಯ್ಯಾ?" ಎಂದು ಗದರಿಸಿದಳು.

ಎನ್. ವಿ ಪೈ.

[ಸೂಚನೆ —ಹಾಸ್ಯಗಳು ಚುಟುಕಾಗಿ ಭಾವವತ್ತಾಗಿಯೂ ವಿನೋದಪೂರ್ಣವಾಗಿಯೂ ಇರಬೇಕು;ನೂತನ ಭಾವಪ್ರಚೋದಿತವಾಗಿರಬೇಕು, ಅಶ್ಲೀಲ ಪಿರಬಾರದು, ಇಷ್ಟರ ತನಕ ಪ್ರಕಟಿಸಿದುವುಗಳಲ್ಲಿ ಹೋಲಿಸಿದರೆ ಉತ್ತಮ ಹಾಸ್ಯಗಳಿಗೆ ಮುಂದಕ್ಕೆ ವಿಶಿಷ್ಟ ಪಾರಿತೋಷಕಗಳು ಕೊಡಲ್ಪಡುವುವು]

## ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಗ್ರಾಮ ಪಂಚಾಯತ್ ಬೋರ್ಡುಗಳ ವೋಟರರ ರಿಜಿಸ್ಟ್ರಿಯನ್ನು ಈ ಕೆಳಗೆ ನಮೂದಿಸಿದ ದಿವಸಗಳಲ್ಲಿ ಪ್ರಕಟಿಸೋಣಾಗುವುದು:—

1 ಪ್ರಾಥಮಿಕ ರಿಜಿಸ್ಟ್ರಿ ತಾ 15-8-'35

2. ದಾವೆಗಳು ಮತ್ತು ಆಕ್ಷೇಪಣೆಗಳು ಜಿಲ್ಲಾ ಇಲೆಕ್ಷನ್ ಆಫೀಸರರಿಗೆ ತಲಪುವ ಆಖೈರು ತಾ. 30-8-'35.

3. ದಾವೆಗಳ ಮತ್ತು ಆಕ್ಷೇಪಣೆಗಳ ಪಟ್ಟಿ ತಾ. 7-9-'35.

4. ದಾವೆಗಳ ಮತ್ತು ಆಕ್ಷೇಪಗಳ ಕುರಿತು ಮಂಗಳೂರು ಜಿಲ್ಲಾ ಆಫೀಸಿನಲ್ಲಿ ತನಿಕೆ ಮಾಡುವ ತಾ. 16-9-'35.

5. ಆಖೈರು ರಿಜಿಸ್ಟ್ರಿ ತಾ. 30—9-'35.

ದಾವೆಗಳ ಮತ್ತು ಆಕ್ಷೇಪಣೆಗಳ ಛಾಪಾ ಫೋರ್ಮುಗಳು ಗ್ರಾಮ ಪಂಚಾಯತ ಬೋರ್ಡು ಆಫೀಸುಗಳಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿಯೂ, ಮತ್ತು ಜಿಲ್ಲಾ ಇಲೆಕ್ಷನ್ ಆಫೀಸಿನಲ್ಲಿಯೂ ಮನವಿ ಮಾಡಿದ್ದಲ್ಲಿ ಮಾಫಿಯಾಗಿ ಕೊಡಲಾಗುವುದು. ಒಂದು ವೇಳೆ ಛಾಪಾ ಫೋರ್ಮುಗಳು ಸಿಕ್ಕದಿದ್ದಲ್ಲಿ, ಅವುಗಳ ಮಾದರಿಯಲ್ಲಿ ಖಾಲಿ ಕಾಗದಗಳಲ್ಲಿ ದಾವೆಗಳನ್ನು ಮತ್ತು ಆಕ್ಷೇಪಣೆಗಳನ್ನು ಬರೆದು ಕಳುಹಿಸಿದ್ದಲ್ಲಿ ಅಂಗೀಕರಿಸಲಾದೀತು.

ಜಿಲ್ಲಾ ಇಲೆಕ್ಷನ್ ಆಫೀಸು ಮಂಗಳೂರು, ತಾ. 8—8—35.

ಬಿ. ಗಣೇಶ್,
ಜಿಲ್ಲಾ ಇಲೆಕ್ಷನ್ ಆಫೀಸರ್.

**Kanara Watch Works, Mangalore.**

Suppliers of standard Watches, Time pieces, Wrist watches, Clocks and various kinds of sporting materials etc., Quality and price unassailable. Visit our Show Room and be satisfied

An Advertisement in

**Swadeshabhimani**

REACHES CRORES!

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್, 6 ಒಲಿವರ್ ರೋಡ್, ಮೈಲಾಪುರ ಮದ್ರಾಸು

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ ಕೇಶವರ್ಧಿನಿಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ. ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವರಾಗಿರಬೇಡಿ ಅಥವಾ ತಲೆಕೂದಲು ಅಕಾಲಿಕ ಸಮಯದಲ್ಲಿ ಬಿಳಿಯಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12 'ಕೇಶವರ್ಧಿನಿ' ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಪಟ್ಟಣ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, 117 Road, Mylapore Madras

ನಮ್ಮ ಕರ್ನಾಟಕ ಏಜೆಂಟರು: [illegible] ರಥಬೀದಿ ಮಂಗಳೂರು

# 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು

## ಧಾತುಪುಷ್ಟಿ ಲೇಹ

(ಸುವರ್ಣ, ಸಂಲಾಮಿಶ್ರಿ, ಕಲ್ಲದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಉಚ್ಚುವುದು, ಮಲಬದ್ಧತೆ, ವಿಷಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹುಟ್ಟಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

## ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ವಾಂತಿ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ  3 ಬಾಟ್ಲಿಗಳಿಗೆ ರೂ 1-12-0

[illegible] ಬಾಲಗ್ರಹ ತೈಲ, ಬಾಲಗ್ರಹ ದವ ಸಹಾ ದೊರೆಯುತ್ತವೆ [illegible] ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1-0-0

## ಮಲೇರಿಯಾ ನಿವಾರಿಣಿ

[illegible] ಜ್ವರ, ದಿನಬಿಟ್ಟು ಬರುವ ಜ್ವರ, ತಾತ್ಕಾಲಿಕ ಜ್ವರ, [illegible] ಜ್ವರ, ಜ್ವರಗಡ್ಡೆ ಇವುಗಳನ್ನೆಲ್ಲಾ [illegible] ಶಕ್ತಿಯನ್ನು ಉಂಟುಮಾಡುವುದು [illegible] ಜ್ವರ [illegible]ಗಳಲ್ಲಿ ವಾಸಿಸುವವರಿಗೆ ಇದು [illegible] ಉತ್ತಮವಾದ ಔಷಧಿ [illegible]

ಬಾಟ್ಲಿ 1ಕ್ಕೆ ರೂ 1-8-0  ಸಣ್ಣ ಬಾಟ್ಲಿ 1ಕ್ಕೆ ಆಣೆ 13

## ಮೇಹಕುಠಾರ

[illegible], ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, [illegible] ದ್ವಾರದಿಂದ ಕೀವು ಬರುವುದು, [illegible] ಧಾತು ಹೋಗುವುದು [illegible] [illegible] ಸಾಧ್ಯವಿಲ್ಲದಿರುವುದು, [illegible] 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು [illegible] 1ಕ್ಕೆ ರೂ 2-8-0 ಮಾತ್ರ

ಎಮ್ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:- ಶ್ರೀ ರಾಮಾ ಸ್ಟೇಷನರಿ ಹೌಸ್, ಶ್ರೀರಾಮ ಪೇಟೆ ಕಾಸರಗೋಡು. [illegible] ಮೆಸರ್ಸ್ [illegible] ಬ್ರದರ್ಸ್ 91 [illegible] ಬೆಂಗಳೂರು [illegible] ಮೆಸರ್ಸ್ ಕಾಮತ್ ಎಂಡ್ ಕೊ, [illegible], ಗಿರಿಗಾಂವ್ [illegible] ಮುಂಬಯಿ, ನಂ 4 ದಿ ವೆಂಕ್ಟಟ [illegible], [illegible] ಫಾರ್ಮಸಿ [illegible]

# The Laxhmi Insurance Company Ltd, Lahore.

# ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

## 1924. ಪ್ರಗತಿ ಸೂಚಕ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

| ಕೆಲಸದ ಫಲಿತಾಂಶ. | | ಲೈಫ್ ಫಂಡ್ |
|---|---|---|
| 1925– | ರೂ 21,24 250 | 500 |
| 1929– | ರೂ 1,66,18,620 | 9 33,900 |
| 1934– | ರೂ ,46,77,223 | 49 08 771 |

ಕ್ಲೈಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ  ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ.  1933–34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ  ಲಾಭಹೊಂದಬೇಕಾಗಿದೆ  ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
*Madras Branch,*
No. 6, Sankuram Chetty St., G. T. MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6 ಸಂಕುರಾಮ ಚೆಟ್ಟಿ ಬೀದಿ ಜಿ. ಟಿ ಮದ್ರಾಸು

# ಸ್ವದೇಶಾಭಿಮಾನಿ ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

# The Canara Banking Corporation Udipi, Ltd.

**Head office:—UDIPI,** S. K. (Incorporated in British India) Tel: 'BANKING' **ESTD. 1906.**

**Branches:—1. Udipi, 2. Coondapoor, 3. Car Street, Mangalore, 4. Shimoga, 5. Madras** (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg).

1 ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಚಂದಾ ಹಾಕಲು ಏಕ್ತಿದ ಮೂಲಧನ ರೂ. 3,50,000. 2. ತೆತ್ತು ಬಂದ ಮೂಲಧನ ತಾ. 10-7-35ಕ್ಕೆ ರೂ. 2,69,795. 3. ಕ್ಷೇಮನಿಧಿ ವಗೈರೆ ಅವಧ್ಧನಗಳು ರೂ. 3,21,326.

1. ಕಾಯಂ ಠೇವಣಾತಿಗಳು ಶೇಕಡಾ ದರ ತನಕ ಸ್ವೀಕರಿಸಲ್ಪಡುವುವು.

2. ಅಲ್ಪಾವಧಿ, ಸೇವಿಂಗ್ಸ್ ಬೇಂಕ್, ಚಾಲ್ತಿ (ಕರೆಂಟ), ಸಂಚಯ ಮುಂತಾದ ಠೇವಣಾತಿಗಳೂ ಇವೆ.

ಠೇವಣಾತಿಯಾಗಿ ಇಡುವ ಮುಂಚಿತವಾಗಿ ನಮ್ಮ ರಥಬೀದಿ (ಮಂಗಳೂರು) ಯಾ ಬಂದರ (ಮಂಗಳೂರು) ಆಫೀಸುಗಳಿಗೆ ಸ್ವತಹಾ ಬಂದು ಹೆಚ್ಚಿನ ಮಾಹಿತಿ ಪಡಕೊಳ್ಳಬಹುದು.

Office of the Corporation Udipi, 10th July 1935. **M. Shrinivas Prabhu,**
*Manager.*

Regd)

# ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

## ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

## ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

**Our Silver Jubilee Year!** **Our Silver Jubilee Year!**

## Messrs. KOCHIKAR BROTHERS (Estd. 1910)

Branch Secretaries for Madras Presidency including Indian States
Chief Agents for Bombay City and Suburbs

## The Bombay Life Assurance Co. Ltd.

Attractive Schemes of Assurances with rebate on annual premiums and additional rebate on larger assurances.

Excellent Bonuses to agents for Jubilee Year Business.

IT PAYS YOU TO REPRESENT US.

**Wanted agents in unrepresented areas.**

Apply to any of the following Offices:—

| | | | | | |
|---|---|---|---|---|---|
| P. B. No. 337, Mount Road, Madras. | Visweswarapuram Circle, Bangalore City. | Huzur Road, Calicut. | Car Street, Mangalore. | UDIPI, S. India. | Esmail Bldg., Loharchawl, Bombay No. 2. |

## ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರುಮಾಡಿದ ಅಮೋಘ ಔಷಧ. ಇದು ಗರ್ಭಕೋಶದೊಳಗಣ ಎಲ್ಲಾ ತರದ ನಂಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಸ್ಥಮಾಣದಲ್ಲಿ ನಿಲ್ಲಿಸುವುದು. ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು.

## ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ.

**ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ**

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧಗಳೂ, ಶಾಸ್ತ್ರೋಕ್ತ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಫೌಂಟನ್ ಪೇನು ಶಾಯಿಗಳೂ ತಯಾರಾಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ:—

**ವೆಂಕಟ್ರಾಯ ಅಣ್ಣಪ್ಪ ಬಾಳಿಗ—ಮೆನೇಜಿಂಗ್ ಡೈರೆಕ್ಟರ್.**

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋಗಳು:—(1) ರಥಬೀದಿ ಮಂಗಳೂರು. (2) 1/70 ವ್ಯಾಸಪ್ಪ ನಾಯ್ಕನ ಬೀದಿ, ಪಾರ್ಕ್‌ಟೌನ್ ಮದ್ರಾಸು. (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

**Karnataka Chemical and Pharmaceutical Works, Ltd., Udipi. (South India)**


Edited, Printed & Published By A. S. Kamath at the Sharada Press, Car Street, Mangalore.

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR -
RAMA SNUFF
The charm of Snuff Users!

# ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in THE BOMBAY LIFE
Madras; Branch Secretaries.
Kochikar Brothers,
Udipi Mangalore Bangalore, Madras Bombay and Calicut

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ

ಪುಸ್ತಕ ೨೯.  ಮಂಗಳೂರು ತಾ. ೧೬ನೇ ಶುಕ್ರವಾರ ಅಗೋಸ್ತು ೧೯೩೫ (16-8-'35)  ಸಂಚಿಕೆ ೩೩

## ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮಾಪ್ರಪಂಚದಲ್ಲಿ - ಯೋಗ್ಯ ಸ್ಥಾನವನ್ನೂ, ಉಚ್ಚ ಗೌರವವನ್ನೂ ಸಂಪಾದಿಸಿರುವ ಕನ್ನಡಿಗರದೇ ಆದ ಮಂಗಳೂರಿನ

## ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ
ನಾಡಿನ ವಾತ್ಸಲ್ಯ ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ
ಇಡೀ ಜೀವನವನದ ವಿಮೆ ಹೆಂಗಸರ ವಿಮೆ! ಉಂಬಳಿ ವಿಮಾಪತ್ರಗಳು! ರೂಪಾಯಿಯ ವಿಮಾಪತ್ರಗಳು!
ಸಂಕ್ಷೇಪತಃ ಯಾವತ್ತು ಅತ್ಯಾಧುನಿಕ ಶಾಸ್ತ್ರೀಯ ವಿಮಾಕ್ರಮಗಳು
ಮೊದಲನೇ 5 ವರ್ಷಗಳ ಮೂಲ್ಯವೇತನದ ಫಲಿತಾಂಶವು ಇದೇ ಈಗ ಪ್ರಕಟವಾಗಿದೆ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

### ವರ್ಷ ಒಂದರ ರೂಪಾಯಿ 10ರ ಬೋನಸ್ ಕೊಡಲಾಗುವುದು.

ಭಾರತ ವಿಮಾಮಂಡಲದಲ್ಲಿ, ಮೊದಲನೆಯ ಬಾರಿಗೆ ಇಷ್ಟು ಚಿತ್ತಾಕರ್ಷಕವಾದ 'ಬೋನಸ'ನ್ನು ಹಂಚಿದ ಸಂಸ್ಥೆಗಳಲ್ಲಿಯೋ- ಕೆಲವು; ಅತಿ ವಿರಳ.
ನಿಖಿಲ ಕರ್ಣಾಟಕದಲ್ಲಿ, ದಕ್ಷಿಣ ಹಿಂದೂಸ್ಥಾನದಲ್ಲಿ ಕೂಡ, ಇಷ್ಟು ಹೆಚ್ಚಿನ ಬೋನಸನ್ನು, ಪ್ರಥಮ ಮೂಲ್ಯವೇತನದಲ್ಲಿಯೇ
ಹಂಚಿದ ಒಂದೇ ಒಂದು ಸಂಸ್ಥೆ ಇದೇ ನೋಡಿ

## "ಪೋಪ್ಯುಲರ್"

**ಇದು ಭಾವೀಭದ್ರತೆಯ ಅಡಿಗಲ್ಲು! ವಿಮಾದಾರರಿಗೆ ಸುಭದ್ರತೆಯ ಹೆಗ್ಗುರುತು!!**
**ಸಂಸ್ಥೆಯ ಇಂದಿನ ಮುಂದಿನ ಬೆಳವಣಿಗೆಯ ಸಲ್ಲಕ್ಷಣ!!!**

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು
ಅವರಿಗೆ ವಿಪುಲ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ.
ತಪ್ಪದೆ ಪತ್ರವ್ಯವಹಾರ ಬೆಳೆಸಿರಿ

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ.-
ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

To insure with or represent get in touch with the first and foremost Insurance Institution of
BRITISH KARNATAKA

**The Popular Insurance Co., Ltd., Mangalore. S. India.**

# ಚಕ್ರ

(All Rights Reversed)

ಸಾಯ್ಬನ ಚಕ್ರವು ತಿರುಗುವಂತೆ ಹಿಂದೂದೇಶದ ಭಾಗ್ಯ ಚಕ್ರವೂ ತಿರುಗುತ್ತಿದೆ! ನಮ್ಮ ಮಹಾಮಹಿಮ ಲೋರ್ಡ್ ವಿಲ್ಲಿಂಗ್ಡನ್‌ರ ವೈಸರಾಯ ಪದವಿಯ ಅವಧಿಯು ಮುಗಿದೊಡನೆ ಲೋರ್ಡ್ ಲಿನ್‌ಲಿತ್ ಗೋ ಇವರು ಅವರ ಪದವಿಗೆ ಬಂದು ಹಿಂದೂದೇಶವನ್ನಾಳಲಿರುವರೆಂದು ತಿಳಿದು ಬರುತ್ತದೆ, ಗೋರೆವರನ್ನು ನೇಮಕವೂ ಆಗಿದೆ.

× × × × × ×

ತುಫಾನನ್ನು ದಾಟಿಹೋಗಬೇಕೆಂದಾದರೆ ಚೆನ್ನಾಗಿ ಆ ತುಫಾನನ್ನು ಎದುರಿಸುವಷ್ಟು ಸಶಕ್ತವಾದ ದೋಣಿಯನ್ನೋ ಹಾಯಿಯನ್ನೋ ಬೇಕಾಬೇಕಾದ ಸಲಕರಣೆಗಳನ್ನೋ ಒಯ್ಯುವ ಪದ್ಧತಿ. ಹಾಗೆ ನವರಾಜ್ಯಾಂಗದಾನವನ್ನು ಕೊಡುವ ಈ ವೇಳೆಯಲ್ಲಿ ಭಾರತದೇಶದಲ್ಲಿ ನಡೆಯುವ ಪ್ರತಿಭಟನೆಯನ್ನು ಎದುರಿಸಲು ಸಮರ್ಥರಾದ ಗಂಡಾಳುಗಳನ್ನೇ ಬ್ರಿಟಿಷ ಸರಕಾರವು ನೇಮಿಸುವುದು ಸಂತೋಷಕರ!

× + × × × ×

ಲಿನ್ಲಿತ್ ಗೋರವರನ್ನು ನೇಮಿಸಿದುದು ಅತ್ಯಂತ ಯೋಗ್ಯವಾದುದೆಂದು ಅನೇಕ ಪತ್ರಿಕೆಗಳು ಆನಂದ ಸೂಚನೆಯನ್ನು ಮಾಡಿವೆ. ಅಪರಿಚಿತನೊಬ್ಬನನ್ನು ಅವನ ಗುಣನಡತೆ, ಗಡ್ಡವಿಲಾಸಗಳನ್ನು ನೋಡದೆ ಈ ಪತ್ರಿಕೆಗಳು ಒಮ್ಮೆಲೇ 'ಶಹಭಾಸ್'ಗಿರಿಗೆ ಎತ್ತುವುದನ್ನು ನೋಡುವಾಗ ನಿನಗೂ ನಂ— ಹೊಟ್ಟೆಯೊಳಗೆ ಇಲಿ ಕ್ರಿಕೆಟ್ ಕಂಪೆನಿಯವರ ದೊಡ್ಡ ಇಂಜಿನು ತಿರುಗುವಂತಾಗುವುದು ಖಂಡಿತ!

× × × × × ×

ಲೋರ್ಡ್ ವಿಲ್ಲಿಂಗ್ಡನ್ನರು ವೈಸರಾಯರಾಗಿ ನೇಮಿಸಲ್ಪಟ್ಟಾಗಲೂ ಇದೇ ಸ್ಥಿತಿ- ಆನಂದಗೊಂಡೆವು ಆನಂದ ತುಂದಿಲರಾದೆವು, ಆನಂದಬಾಷ್ಪಗಳನ್ನು ಸುರಿಯುವೆವು' ಎಂದು ಹಲವು ರೀತಿಯಿಂದ ಅವರನ್ನು ಸ್ವಾಗತೀಕರಿಸಿದವರಿದ್ದರು. ಆದರೆ ಅವರ ಆರ್ಡಿನೆನ್ಸುಗಳ ಸುರಿಮಳೆಯನ್ನು ಕಂಡ ಈ ಜನರೇ 'ವ್ಯಸನಗೊಳ್ಳುವೆವು ದುಃಖಿತರಾದೆವು ಬದುಕಲಾರೆವು' ಎಂದರು.

× × × × × ×

ಲೋರ್ಡ್ ಎರ್ಸ್ಕಿನರವರು ದಕ್ಷಿಣ ಕನ್ನಡ ಜಿಲ್ಲೆಗೆ ಇದೇ ಬರುವ ತಿಂಗಳಲ್ಲಿ ಬಂದು ನಮ್ಮ ದಸರೆಯಲ್ಲಿ ಭಾಗವಹಿಸಲಿದೆ ಎರಡು ಉಪಂದಕರ ಪಾರ್ಟಿಯನ್ನು ಕೇಳಿದೆವು ... ಸಮುದ್ರದಲ್ಲಿ ನಾಲಿಪಕಗಳ ಒಂದು ಪ್ರದರ್ಶನವನ್ನೇರ್ಪಡಿಸಿದರಂತೆ.

× × × × × ×

ಮದ್ರಾಸು ಕೌನ್ಸಿಲಿನಲ್ಲಿ ಮೊನ್ನೆ ಒಬ್ಬರು ಪ್ರಶ್ನೆ ಹುಟ್ಟು, "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಲಿಗಳು ಎಷ್ಟು ಜನರನ್ನು ಉಪದ್ರವಿಸಿವೆ?" ಎಂದು ಕೇಳಿದರು. ನಮ್ಮ ಜಿಲ್ಲೆಯ ಹುಲಿಗಳ ರೂಪವನ್ನು ಕೇವಲ ಫೋಟೋದರ್ ಗವರ್ನರರಿಗೆ ತೋರಿಸಬಹುದಲ್ಲ—ಎಂದು ಸಾಯ್ಬನ ಸೂಚನೆ.

× × × × × ×

ಗವರ್ನರರ ಸ್ವಾಗತೋತ್ಸವದಂದಗಳಲ್ಲಿ ಸಮರ್ಪಿಸಲ್ಪಡಲು ನೂರಾರು (ಸಾವಿರಾರೂ ಇರಬಹುದು) ಡೆಪ್ಯುಟೇಶನ್‌ಗಳ ನಕಲುಗಳು ನೂರಾರು ಮುದ್ರಾಲಯಗಳನ್ನು ಇಷ್ಟರಲ್ಲೇ ಸೇರಿ ಮುದ್ರಕರ ಡಿಪ್ರೆಶನ್ ಹೋಗಿರಬಹುದೆಂಬುದು ನನ್ನ ಊಹೆ! ಈ ಡೆಪ್ಯುಟೇಶನ್‌ದಾರರ ಶ್ರಮಕ್ಕೆ ಅತ್ರಮವು ಸಿಗಲೆಂದು ನಾನು ಹಾರೈಸುವೆನು.

× + × × × ×

ಅಲ್ಲದೆ, ಇಷ್ಟರಲ್ಲೇ ಪುಷ್ಪಮಾಲಿಕೆಗಳ ರಚನಾಕಾರ್ಯವೆಲ್ಲಾ ಆಶಕ್ತರಾದ ಜಿಲ್ಲೆಯ ಉತ್ಸಾಹಿಗಳಿಂದ ಬಹುದು. ಅಯ್ಯೋ, ಈಗಲೇ ಇಷ್ಟು ಉತ್ಸಾಹಬೇಡ ಹೂಮಾಲೆಯು ಒಣಗಿ ಹೋದೀತು!

× × × × × +

ಗವರ್ನರರನ್ನು ನೋಡುವುದಕ್ಕಾಗಿ ಬರಲಿರುವ ಅನೇಕ ಕೊಂಗ್ರೆಸ್ ಪಕ್ಷೀಯರೆಲ್ಲ ಅಂದು—ಜಿಲ್ಲೆಯಲ್ಲಿ ಕೊಂಗ್ರೆಸ್ಸಿನ ಶಕ್ತಿಯೆಷ್ಟಿದೆಯೆಂದು ಪ್ರದರ್ಶಿಸಬೇಕೆಂದು—ಹೊಸ ಹೊಸ ಗಾಂಧಿ ಟೋಪಿಗಳನ್ನು ಪಡೆಯುವ ನಿರ್ಧಾರವಾಡಿಯೂ ಇರಬಹುದೆಂದು ನನ್ನ ಕಲ್ಪನೆ. ಹಾಗಿರುವುದಾದರೆ, ಅವರೆಲ್ಲ ಆ ಟೋಪಿಗಳನ್ನು ಒಮ್ಮೊಮ್ಮೆ ಮಡಿಗೆ ಕೊಟ್ಟರೆ ಉತ್ತಮ! ಅವುಗಳು ಬಹು ಶುಭ್ರವಾಗಿ ಕಾಣಿಸಿ, ಗವರ್ನರರ ದೃಷ್ಟಿಯನ್ನಾಕರ್ಷಿಸಬಹುದು!

× × × × × ×

ಒಮ್ಮೆ ಪಮೊಕ್ಕಾಂಗೆ ಒಬ್ಬ ಗವರ್ನರರು ಚಿತ್ತೈಸಿದ್ದರಂತೆ. ಆ ಗ್ರಾಮದ ಅಕ್ಕಿಯ ಬೆಲೆಯೂ ಬಹು ಹೆಚ್ಚಿತ್ತಂತೆ. "ಅಕ್ಕಿಯ ಬೆಲೆಯನ್ನು ಇಳಿಸಬೇಕೆ"ಂದು ಹಲವು ಮನವಿಮಾಡಿದರಂತೆ ಗವರ್ನರರು ನೋಡೋಣ ಎಂದರಂತೆ! ತನ್ಮಧ್ಯೆ ಕೆಲವು ಜಮೀನ್ದಾರರು ದೊಡ್ಡ ದೊಡ್ಡ ಗೆಣಸುಗಳನ್ನು ಸಂಗ್ರಹಿಸಿ ಅವುಗಳನ್ನು ಗವರ್ನರರ ಮೋಗಿನಡಿಯಲ್ಲಿಟ್ಟು "ಇವನ್ನೆಲ್ಲ ಈ ಊರಿನಲ್ಲಿ ತಿನ್ನುತ್ತಾರೆ. ಒಂದು ಗೆಣಸನ್ನು ತಿಂದೊಡನೆ ಹೊಟ್ಟೆಯೊಳಗೆ ಗಾಳಿ ತುಂಬಿ ಹಸಿವಡಗುತ್ತದೆ" ಎಂದರಂತೆ. ಇದನ್ನು ಕೇಳಿದ ಗವರ್ನರರು ಯೋಚನೆಗೆ ತೊಡಗಿದರಂತೆ. ಸ್ವಲ್ಪ ಹೊತ್ತು ಆಲೋಚಿಸಿದರಂತೆ. ನಂತರ "ನಿಮ್ಮೂರಲ್ಲಿ ಇಷ್ಟಿಷ್ಟು ದೊಡ್ಡ ಗೆಣಸುಗಳಿರುವಾಗ ನಿಮಗೆ ಅಕ್ಕಿಯು ಅಗತ್ಯವೇನು? ಈ ಗೆಣಸುಗಳನ್ನೇ ತಿಂದು ನೀವು ಜೀವಿಸಬಹುದಲ್ಲ! ಆದುದರಿಂದ ಅಕ್ಕಿಯ ಬೆಲೆಯನ್ನಿಳಿಸಲಾರೆವು" ಎಂದರಂತೆ!

× × × × × ×

ಅಯ್ಯೋ ಇದು ನಮ್ಮ ಅಜ್ಜನು ಹೇಳಿದ ಕತೆಯಂತೆ! ಸುಳ್ಳೋ ಸತ್ಯವೋ ಏನೆಂದು ಸಾಯ್ಬನು ಹೇಳಲಾರನಂತೆ. ಆದರೂ ನಮ್ಮ ಜಿಲ್ಲೆಯವರು ಈ ಗೆಣಸಿನ ಸಂತೆಯನ್ನಿಟ್ಟು ತಲೆಗೆ ಟೊಪ್ಪಿಹಾಕಿಕೊಂಡಿದ್ದರಂತೆ!

× × × × × ×

ನಮ್ಮ ಅಜ್ಜ ಸ್ವಲ್ಪ ವಿಪರೀತ ಜನ! ಅವನಲ್ಲಿ ಪಿರಿಪಿರಿ ಜಾಸ್ತಿ! ಅವನ ಮೆದುಳಿನ ಓಟದಲ್ಲಿ ಸ್ವಲ್ಪ ಮಿಸ್ಟೇಕ್ ಕೂಡಾ ಇತ್ತು. ಹಾಗಿದ್ದುದರಿಂದ ಅವನೀ ಕತೆಯನ್ನು ನಮಗೆ ಹೇಳಿರಬಹುದೋ ಏನು! ಎಂತಹ ಹಾಳು ಕತೆಯಿದು! ಅವನು ಹಲವು ವರ್ಷಗಳ ಹಿಂದೆ ಯಾರಿಗೂ ತಿಳಿಸದೆ ಸತ್ತು ಪಾತಾಳವನ್ನೇ ಸೇರಿದನೆಂಬುದು ಸಂತೋಷಕರ! ಬಿಡಿ ಅವನ ಸುದ್ದಿಯನ್ನು!

'ಸಾಯ್ಬ'.


## ಅವನಿಗೆ ನಾನೇ ಮೊಲೆಯುಣ್ಣಿಸುತ್ತೇನೆ

ತನ್ನ ಮಗುವಿಗೆ ತಾನೇ ಮೊಲೆಯುಣ್ಣಿಸುವಂತೆ ಪ್ರತಿಯೊಬ್ಬ ತಾಯಿಯೂ ಎದ್ದಿರಬೇಕು. ಮಗುವಿನ ಆರೋಗ್ಯಪಾಲನೆಗೂ, ಅದು ಬಾಲರೋಗಗಳಿಗೆ ತುತ್ತಾಗದಂತೆಯೂ ಅದಕ್ಕೆ ಸ್ವಾಭಾವಿಕವಾಗಿ ಮೊಲೆಯುಣ್ಣಿಸಬೇಕು. ಎದೆ ಹಾಲು ನಿಮ್ಮ ಮಗುವಿಗೆ ಸಮರ್ಪಕವಾದ ಆಹಾರವಾಗಿದೆ. ಇದು ಮಗುವಿನ ಸೂಕ್ಷ್ಮ ಜೀರ್ಣಶಕ್ತಿಗೆ ತಕ್ಕುದಾದ ಆಹಾರವಾಗಿದೆ. ಮಗುವಿನ ಆರೋಗ್ಯಕರ ಬೆಳವಣಿಗೆಗೂ ವೃದ್ಧಿಗೂ ಸಾಧಕವಾದ ಪೌಷ್ಟಿಕ ಸಾರವು ಇದರಲ್ಲಿದೆ.

'ಓವಲ್ಟಿನ್' ಪಾನೀಯವನ್ನು ಮಗು ಜನಿಸುವ ಮೊದಲೂ, ಹುಟ್ಟಿ ಬೆಳೆಯುತ್ತಿರುವಾಗಲೂ ಅನುಕ್ರಮವಾಗಿ ಸೇವಿಸುತ್ತಾ ಇದ್ದರೆ, ಎದೆ ಹಾಲು ನಿಶ್ಚಿತವಾಗಿ ವೃದ್ಧಿಹೊಂದುತ್ತದೆ. ಅಲ್ಲದೆ ತಾಯಿಯ ಬಲ ಸತ್ವ ಚೈತನ್ಯವು ಕಾಪಾಡಲ್ಪಡುತ್ತದೆ. 'ಓವಲ್ಟಿನ್' ಎಂಬುದು ಪ್ರಕೃತಿಸಿದ್ಧ ಆಹಾರ. ಇದನ್ನು, ಒಳಿದ ಬಾರ್ಲಿ ಬೀಜ, ದನದ ಕೆನೆ ಹಾಲು ಮತ್ತು ಕೋಳಿಮೊಟ್ಟೆಗಳಿಂದ ತಯಾರಿಸಲಾಗುತ್ತದೆ. ಆರೋಗ್ಯ, ಶಕ್ತಿ ಮತ್ತು ಚೈತನ್ಯ ರಕ್ಷಣೆಗೆ ಇದು ಅತ್ಯಮೂಲ್ಯ ಪಾನಕ. ಪಡೆಯುವಾಗ ತಾಜಾ ಓವಲ್ಟಿನನ್ನೇ ಪಡೆಯಿರಿ. ನಕಲಿಗಳನ್ನು ತ್ಯಜಿಸಿರಿ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

## ಓವಲ್‌ಟಿನ್

ಟೋನಿಕ್ ಆಹಾರ ಪಾನಕ.

# OVALTINE

ತಾಯಂದಿರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕೊಟ್ಟು ಸಾಕುವಂತೆ ಸಹಕರಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರ ಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್—ಜೇಮ್ಸ್ ರೈಟ್ 8೬ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮದ್ರಾಸ.

OV/301



Estd 1920] THE [1920ರಲ್ಲಿ ಸ್ಥಾಪಿತವಾದದ್ದು

## Kanara Enterprise Ltd.,

PUTTUR

## ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

### ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur, Dated 10—4—1935.

G. N. Lakshman Pai, Secretary.

# ಸಾಹಿತ್ಯ ಸಂಗ್ರಹ—

## ಬರ್ಲಿನ್‌ನಲ್ಲಿಯ ಕಾವ್ಯಕಾರ್ಖಾನೆ.

ಶ್ರೀ ಎಂ. ಎನ್ ಕಾಮತರು ಭಾರತೀಯ ಒಂದು ಸಂಚಿಕೆಯಲ್ಲಿ ಮೇಲಿನ ಶೀರ್ಷಿಕೆಯಿಂದ ಭಾಷಾಂತರಿಸಿ ಸಂಕ್ಷೇಪಿಸಿ ಹೀಗೆ ಬರೆದಿದ್ದಾರೆ ಬರ್ಲಿನ್ ನಗರದಲ್ಲಿ ಮೂರು ಮಾಳಿಗೆಗಳುಳ್ಳ ಒಂದು ಮಹಾ ಭವನ, ಅದರ ಕತ್ತಲ ಮೂಲೆಯಲ್ಲಿ 'ಕಪಿಮೂಲ' ಎಂಬ ಚಿಕ್ಕ ಕೋಣೆ, ನಮ್ಮಲ್ಲಿನ 'ಗಂಗಾಮೂಲ' ಎಂಬುದರಂತೆ, ಇಲ್ಲಿಂದ ಕವಿಗಳೇ ಹೊರಡುವರು,—ಶಾನ್ಯವಲ್ಲ ನೋಡಿ ಶ್ರೀಯುತ ದಿನಕರ ಗಂಗಾಧರ ಕೇಳಕರ, ಎಂ ಎಸ್‌ಸಿ., ಪಿ ಎಚ್. ಡಿ ಎಂಬವರೇ ಅದೇ ಭವನದಲ್ಲಿ ಶಾಸ್ತ್ರೀಯ ಶೋಧಗಳನ್ನು ಮಾಡಿ, ಡಿಗ್ರಿ ಪಡೆದುಕೊಂಡಿರುವರು ಅವರ ಶೋಧಗಳನ್ನು ಬರ್ಲಿನ್ ಯುನಿವರ್ಸಿಟಿಯ ಕೆಲೆಂಡರಿನಲ್ಲಿ ನೋಡಬಹುದು. ಅವನ್ನು ಈಗ ವಿವರಿಸುತ್ತೇನೆ. ಇದರ 'ಕೋಪಿರೈಟ' ಹಕ್ಕು ಅವರಿಗೇ ಸೇರಿದೆ.

ಶ್ರೀ ಕೇಳಕರರು ಎರಡು ವರ್ಷಗಳ ವರೆಗೆ ಮಹಾ ಶೋಧಗಳನ್ನು ಮಾಡಿದರು ಮನುಷ್ಯನ ಮೆದುಳುಗಳನ್ನು ಪರೀಕ್ಷಿಸಿ, ಅದರ ತತ್ವಗಳನ್ನು ಸಂಗ್ರಹಿಸುವುದೇ ಅವರ ಶೋಧನಕಾರ್ಯ. ಮೆದುಳಿನ ಸೂಕ್ಷ್ಮ ನಿರೀಕ್ಷಣೆಯಿಂದ ಹಲವು ಅಜ್ಞಾತವಿಷಯಗಳೂ ಇವರಿಗೆ ತಿಳಿದು ಬಂದುವು. ಒಹೋ, ಮೆದುಳುಗಳಲ್ಲಿ ವರ್ಗಗಳೆಷ್ಟು ಉಪವರ್ಗಗಳೆಷ್ಟು! ಭಗವಂತನು ಅವನ್ನೆಲ್ಲ ಸೃಷ್ಟಿಸಿರುವನಲ್ಲದೆ, ಅವುಗಳ ತತ್ವವನ್ನೆಲ್ಲ ಬಲ್ಲನು! ನೋಡಿ ಆಕಾಶದಲ್ಲಿನ ನಕ್ಷತ್ರಗಳನ್ನಾದರೂ ಲೆಕ್ಕಹಾಕಿಂದರೆ ಸಾಧ್ಯವು ದೊರಕೀತು, ಈ ಮೆದುಳುಗಳ ಸಂಶೋಧನಾ ಕಾರ್ಯವು ಜೀವಬೇಡವೆನಿಸುವುದು. ಮೆದುಳಿನಲ್ಲಿ ಅದೊಂದು ಬಗೆಯ ಅದೃಶ್ಯಶಕ್ತಿಯಿದೆ. ಇದೇ ಮೆದುಳಿನ ಎಲ್ಲ ಕೆಲಸಕ್ಕೂ ಮೂಲ. ಇದನ್ನು ಶೋಧಿಸಿ ತಜ್ಞ ಕೇಳಕರರ ಮೆದುಳಿನ ಶಕ್ತಿಯು. ಮೂಲವಸ್ತು ಕೆಲಸಕ್ಕೆ ಬಾರದಂತಾಗಿಯೂ ಹೋಗಬಹುದೆಂದು ಹೆದರುವ ದಿನಗಳಿದ್ದುವು. ಆದರೆ, ಕೇಳಕರರು ಹೆದರಲಿಲ್ಲ. ಅಕಸ್ಮಾತ್ತಾಗಿ ಅವರು ಈ ಶಕ್ತಿಯನ್ನು ಹಿಡಿದು ಪ್ರತ್ಯೇಕಿಸಿ ಕಟ್ಟಿ ಹಾಕಿದರು. ಇದೇ ಮೆದುಳಿನ ಪ್ರಾಣಶಕ್ತಿ, ಅದೃಶ್ಯ ಶಕ್ತಿ. ಕೇಳ್ಕರರು ಶೋಧಿಸಿದುದರಿಂದ ಇದನ್ನು ಈಗಲೂ ಈ ಯುನಿವರ್ಸಿಟಿಯಲ್ಲಿ 'ಕೆಲ್‌ಫೋರ್ಸ್' ಎಂದು ಕರೆಯುವರು. ಜಗತ್ತಿನ ಶಾಸ್ತ್ರಜ್ಞರೆಲ್ಲರೂ ಇಷ್ಟುದ್ದ ಹೆಸರಿನ ಬದಲಾಗಿ 'ಕಾರ' ಎಂದೇ ಇದನ್ನು ಮುದ್ದಾಗಿ ಕರೆಯುವರು. ಮನುಷ್ಯನು ಸತ್ತಕೂಡಲೇ ಅವನ ದೇಹದಿಂದ ಈ 'ಕಾರ್' ಶಕ್ತಿಯು ಹೊರಟು, ಅಂತರಿಕ್ಷದಲ್ಲೇ ತೂಗುತ್ತಾ ಅಲೆದಾಡುತ್ತಾ ಇರುವುದು. ಸೂಜಿಕಲ್ಲಿನಿಂದ ಕಬ್ಬಿಣದ ಚೂರು ಸೆಳೆವಂತೆ ಯಾವನೊಬ್ಬ ಮನುಷ್ಯನ ಈ 'ಕಾರ್' ಶಕ್ತಿಯನ್ನು ಈ ಶೋಧನಾಗಾರದಲ್ಲಿ ಸೆಳೆದು ಪ್ರತ್ಯೇಕಿಸಲಾಗುತ್ತಿದೆ ಮನುಷ್ಯನು ಸಾಯಲೇಬೇಕೆಂದಿಲ್ಲ, ಜೀವಂತನಾಗಿದ್ದರೂ ಅವನ 'ಕಾರ್' ಶಕ್ತಿಯನ್ನು ಸೆಳೆಯಬಹುದು. ಈ ಶಕ್ತಿಯು ಪ್ರಭಾವದಲ್ಲಿ ಒಂದು ಕೀಡೆ ಇದೆ, ಅದು ಇನ್ನೂ ಸರಿಪಡಿಸಲಾಗಲಿಲ್ಲ. ಜೀವಂತ ವಿದ್ವಾಂಸನ ಮೇಲೆ ಈ 'ಕಾರ್' ಶಕ್ತಿಯನ್ನು ಪ್ರಯೋಗಿಸಿದರೆ ಅವನು ಕೇವಲ ಮೂರ್ಖನಾಗುವನು. ಆದುದರಿಂದಲೇ ಜೀವಂತ ಮೂರ್ಖರ ಮೇಲೆ ಈ ಶಕ್ತಿಯನ್ನು ಪ್ರಯೋಗಿಸಿದರೆ, ಅವರು ಕೂಡಲೇ ವಿದ್ವಾಂಸರಾಗುತ್ತಾರೆ. ಹೋಮಿಯೋಪಥಿ ಚಿಕಿತ್ಸೆಯ ಮತ್ತೊಂದು ವಿಧಾನವಿದು.

ಇರಲಿ. ಇಂತಹ ಮಹಾ ಸಂಶೋಧನೆಯ ಪ್ರಯೋಜನಗಳು ಯಾವುವು? ಉದಾಹರಣೆಯಿಂದ ವಿವರಿಸುವೆನು. ಸರ್ ವಾಲ್ಟರ್ ಸ್ಕಾಟ್, ಬಂಕಿಮಚಂದ್ರ ಛಟರ್ಜೀ ಮೊದಲಾದವರ ಮೆದುಳಿಂದ ಹೊರಟ ಕಾರ್ ಶಕ್ತಿಯನ್ನು ನೀವು ಬಗಲಲ್ಲಿ ಇಟ್ಟುಕೊಂಡಿರುವಿರೆನ್ನುವ. ಸಾಮಾನ್ಯ ಮೂರ್ಖನೊಬ್ಬನ ಮೇಲೆ ಈ ಕಾರ್ ಶಕ್ತಿಯನ್ನು ಪ್ರಯೋಗಿಸಿದರೆ, ಸ್ಕಾಟ್ ಅಥವಾ ಬಂಕಿಮಚಂದ್ರನಂತೆ ಅವನು ಸರಾಗವಾಗಿ ಕಾದಂಬರಿಗಳನ್ನು ಬರೆಯುತ್ತಲೇ ಹಲವು ದಿನಗಳಲ್ಲಿ ಸಾಯುವನು. ಶೆಲ್ಲಿ ಮಹಾಕವಿಯ 'ಕಾರ್' ಸತ್ವವನ್ನು ಯಾವನೊಬ್ಬ ನಿರಕ್ಷರನ ಮೇಲೆ ಪ್ರಯೋಗಿಸಿದರೆ, ಅವನು ಕೂಡಲೇ ಶೆಲ್ಲಿ ಮಹಾಕವಿಯ ಕವಿತೆಗಳಂತಹ ಸಾವಿರಾರು ವಿಚಿತ್ರ ಅನೇಕ ದಿವ್ಯ ಕವಿತೆಗಳನ್ನು ಕಣ್ಣುಮುಚ್ಚಿ ಕಣ್ಣು ತೆರೆಯುವುದರಲ್ಲೇ ಮುಗಿಸಿಕೊಂಡರಂತೆ ಬರೆವನು. ಹೀಗೆ ಅತಿ ಸುಲಭದ ರೀತಿಯಲ್ಲಿ ಉತ್ತಮೋತ್ತಮ ಗ್ರಂಥಗಳನ್ನು ಹೊತ್ತಲ್ಲಿ ಬೆಳೆಸಬಹುದಾಗಿದೆ ಬೆಳೆಸಬರುತ್ತಿದೆ. ಪರೀಕ್ಷೆಗಾಗಿ ಹಣ ಕಟ್ಟಿದ ಬಳಿಕ, ಆಯಾ ಪರೀಕ್ಷೆಯ ವಿಷಯಗಳಲ್ಲಿ ಅತ್ಯುತ್ತಮ ಗ್ರಂಥಗಳನ್ನು ಬರೆದವರ ಕಾರ್ ಶಕ್ತಿಯನ್ನು ಪ್ರಯೋಗಮಾಡಿಕೊಂಡರೆ (= ಸೂಜಿಮೊನೆಯಿಂದ ಚುಚ್ಚಿಕೊಂಡರೆ) ಪರೀಕ್ಷಕನ ಮೆದುಳಿಗೆ ನಿಲುಕದ ಉತ್ತಮೋತ್ತಮ ಲೇಖನಗಳನ್ನು ಬರೆದು, ಅವರಾದ ಪರೀಕ್ಷಕನಿಂದ ಶ್ಲಾಘಿಸಿಕೊಳ್ಳುವ ಯೋಗ್ಯತೆಯು ವಿದ್ಯಾಗಂಧವಿಲ್ಲದ ವಿದ್ಯಾರ್ಥಿಗೆ ಬರುವುದು. ಕೆಲವೇಳೆ, ಕಾಲೇಜಿನಲ್ಲಿ ವ್ಯರ್ಥ ರೂಪನೆಂದು ಖ್ಯಾತನಾದವನು ಪರೀಕ್ಷೆಯಲ್ಲಿ ಬಹಳ ಮೇಲ್ದರಗತಿಯಲ್ಲಿ ಉತ್ತೀರ್ಣನಾಗುವುದಕ್ಕೂ ಇದೇ ಕಾರ್ ಶಕ್ತಿಯ ಪ್ರಯೋಗವೇ ಕಾರಣವಾಗಿದೆ ಎಂದೂ ಬರ್ಲಿನಿನಲ್ಲೆಲ್ಲ ಪ್ರಸಿದ್ಧವಾಗಿದೆ

'ಕಾರ್' ಶಕ್ತಿಯನ್ನು ಇಂಜೆಕ್ಷನ್ ಮೂಲಕ ಮಾರಾಟಮಾಡುವರೆ, The New Oriental Kavya Manufacturing Company ಎಂಬ ದೊಂದು ಸಂಘವೇ ಬರ್ಲಿನಿನಲ್ಲಿ ಸ್ಥಾಪನೆಗೊಂಡಿದೆ ಶ್ರೀ ಕೇಳಕರ್, ಎಮ್ ಎಸ್ ಸಿ, ಪಿ ಎಚ್ ಡಿ, ಇವರೇ ಅದರ ಡೈರೆಕ್ಟರರು. ಈಗ ಕೆಳಗೆ ಕೊಟ್ಟಿರುವ ನಾನಾ ಮಹಾಕವಿಗಳ ಕಾರ್ ಶಕ್ತಿ ಮಾತ್ರವೇ ಮಾರಾಟಕ್ಕೆ ಸಿಗಬಹುದು. ಶೆಲ್ಲಿ, ಕಾಟ್ಸ್, ಬ್ರೌನಿಂಗ್ ಮೊದಲಾದಂತ ಶ್ರೀಮಾನ ಪಂಡಿತ ಪಂಪ, ಲಕ್ಷ್ಮೀಶ ನಾರಣಪ್ಪ, ಶ್ರೀ ರವೀಂದ್ರನಾಥರ ಮತ್ತು ಶ್ರೀ ಸರೋಜಿನಿ ದೇವಿಯವರ ಕಾರ್ ಶಕ್ತಿಯನ್ನು ಪ್ರಯೋಗಕ್ಕಾಗಿ ಕೂಡಿಸುವರೆ ಅವರ ಅನುಮತಿಯನ್ನು ಪಡೆಯಲಾಗಿದ್ದಿತು. ಕೊನೆಗೆ ಅವರಿಬ್ಬರೂ ಹಾಗೆಲ್ಲ ಕೊಪಿರೈಟ್ ಶಕ್ತಿಯನ್ನು ಧರ್ಮಕ್ಕೆ ಕೊಡಲಾಗುವುದಿಲ್ಲವೆಂದರು, ಅವರಿಗೆ ಲಕ್ಷಾಂತರ ಹಣಕೊಟ್ಟು ಆ ಶಕ್ತಿಯನ್ನು ಕೂಡಿಸಿಯೂ ಗರೀಬ ಲೇಖಕರಿಗೆ ಒದಗಿಸಿ ಅವರಿಂದ ಬರೆಯಿಸಿದ ಕವಿತೆಗಳಿಂದ ಅವರ ಇನ್ನೂ ಗರೀಬರಾಗಿರೆ ... ಸಹಜವಾಗಿ ವುದೇ ಕಾರಣ, ಸಂಸ್ಕೃತ ನಕಲೀ ... ನಕಲೀ ಸರೋಜಿನಿ ಎಂಬ ಕೃತಕಶಕ್ತಿಗಳನ್ನೆ ಬರ್ಲಿನ್ ಲೆಬೊರೆಟರಿ ಪ್ರಯೋಗಶಾಲೆಯಲ್ಲಿ ನಿರ್ಮಾಣಿಸಲಾಗಿದೆ

ಪ್ರತಿಯೊಂದು ಕಾರ್ ಶಕ್ತಿಯನ್ನೂ ೩ ನಮೂನೆಗಳಲ್ಲಿ ದೊರಕಿಸಿಕೊಳ್ಳಬಹುದು (೧) ಸೌಮ್ಯ (೨) ಮಧ್ಯಮ (೩) ಬಲಿಷ್ಠ ಇವುಗಳನ್ನು ಸೂಜಿಯ ಮೇಲೆ ಮಾತ್ರವಲ್ಲದೆ ಪ್ರಾಣಿಗಳ ಮೇಲೆಯೂ ವನಸ್ಪತಿಗಳ ಮೇಲೆಯೂ ಪ್ರಯೋಗಿಸಬಹುದು. ಪ್ರಯೋಗದಲ್ಲಿ ಪ್ರಮಾಣ (ಡೋಜ) ಮಾತ್ರ ಬೇರೆಯಾಗುವುದು

(೧) ಸೌಮ್ಯತರದ ಕಾರ್ ಯಾವ ಕವಿಯ ಕಾರ್ ಶಕ್ತಿಯನ್ನು ಚುಚ್ಚಿಕೊಳ್ಳಲಾಗುವದೋ ಅವನಂತೆ ಆರಂಭದ ... ವರೆಗೆ ಬರೆಯಬಲ್ಲ ಕವಿತೆಯನ್ನು ಬರೆಯಬಲ್ಲನು. ಇದು ಶಾಲಾ ವಿದ್ಯಾರ್ಥಿಗಳಿಗೆ ಒಳ್ಳೇದು. ಪತ್ರಿಕೆಗಳಲ್ಲಿನ ಕವಿತಾ ಉತ್ಪತ್ತಿಗೆ ಬಹಳ ಧಾರಾಳವಾಗಿ ಉಪಯೋಗಿಸಲ್ಪಡುತ್ತಿದೆ ಎಂದು ಬರ್ಲಿನ ಲೆಬೊರೆಟರಿಯ ರಿಪೋರ್ಟು.

(೨) ಮಧ್ಯಮ ಶಕ್ತಿಯದನ್ನು ಪ್ರಯೋಗಿಸಿದ ಕ್ಷಣದಿಂದ ಆ ಮನುಷ್ಯನು ಕವಿಯಂತೆ ಕಾಣುತ್ತ ಸರ್ವಸಾಧಾರಣ ಗೀತಗಳನ್ನು ಮಾಡುವನು. ಇಂಜೆಕ್ಷನ್ ಮಾಡಿದ ಕೂಡಲೇ, ಇವನು ಬಹಳ ರಭಸದಿಂದ ಬರೆಯುತ್ತಲೂ ತಾನೇ ಮಹಾ ಕವಿ ಎಂಬಂತೆ ಜಂಬದಿಂದ ವರ್ತಿಸುತ್ತಲೂ ಇದ್ದು, ಬಂಧುಬಳಗಕ್ಕೂ ಆಪ್ತಮಿತ್ರರಿಗೂ ಸ್ವಲ್ಪ ವಿಶೇಷ ಲಕ್ಷಣಗಳುಳ್ಳವನಂತೆ ತೋರ ತೊಡಗುವನು

(೩) ಬಲಿಷ್ಠ ಶಕ್ತಿಯ ಕಾರ್ ಉಪಯೋಗಿಸಿದರೆ ಅವನು ಪ್ರತ್ಯಕ್ಷ ಕವಿಯೇ ಆಗುವನು. ಯಾವಾಗ ನೋಡಿದರೂ ಕಾವ್ಯನಿದ್ರೆಯಲ್ಲಿಯೇ ಇರುವನು, ಅವನ ಕಣ್ಣು ಆದೃಶ್ಯವಾಗಿರುವುದನ್ನೇ ನೋಡುವುದು, ಗ್ರಂಥಿನಾಡಿಗಳ ನಡುವೆ ನಿಂತರೂ ಅವನಿಗೇನೂ ಕೇಳಿಸದೆ ವ ಧುರ ಮುರಲಿಯೇ ಕೇಳಿಸುವುದು ಏನೆಂದರೆ ಮನುಷ್ಯನು ಇರುವ ಮನೆಯನ್ನು ಕೂಡಲೇ ವಿಮೆಯ ಮೂಲಕ ಸಂರಕ್ಷಿಸಬೇಕಾಗುವುದು. ಅವನನ್ನು ಮಾತ್ರ ಯಾವ ವಿಮಾ ಕಂಪೆನಿಯೂ ಸ್ವೀಕರಿಸಲಾರದು.—ಅವನ ಹೃದಯಸ್ಪಂದನವು ಅಷ್ಟು ಪ್ರಬಲ

ಜನರ ಮೇಲೆ ಅಷ್ಟು ಪರಿಣಾಮವಿದೆ, ಜಾನುವಾರುಗಳ ಮೇಲೆ? ಬರ್ಲಿನ್ ಮಾಹಿತೀ ಪತ್ರಕದಲ್ಲಿ ಹೀಗಿದೆ—

ಜಾನುವಾರುಗಳು ಕವಿತೆಗಳನ್ನು ಬರೆಯಲಾರವು. ಸುಂದರ ಮನೋಹರ, ಮಾಂಡ, ಬೆಹಾಗ್, ದುರ್ಗಾ ಇತ್ಯಾದಿ ರಾಗಗಳಲ್ಲಿ ಸಂಪೂರ್ಣವಾಗಿ ಸರ್ವಾಂಗ ಚಲನೆಯನ್ನೂ ಪ್ರದರ್ಶಿಸಿ ಗಾನಹೊರಡಿಸುವುವು ಗ್ರಾಮಾಫೋನ್ ಸಂಗೀತಕ್ಕೆಲ್ಲ ಕಾರಣವು ಇದೇ ಶಕ್ತಿ. ಮೊದಲಾಗಿ "ಹೀಸ್ ಮಾಸ್ಟರ್ಸ್ ವಾಯ್ಸ್" ಎಂಬ ಅಟ್ಟದ ಗುರುತಿನಲ್ಲಿ ಆ ನಾಯಿಯು ನಕ್ಷೆಯೊಡೆಯಲ್ಲ,—ಎಲ್ಲ ಗೀತಗಳೂ ಹೊರಡುವುದೂ ಇದರ ಕಾರಣೀಕ ಶಕ್ತಿಯಿಂದ. ಜ್ಞಾನೇಶ್ವರನು ಕೋಣದ ಬಾಯಿಯಿಂದ ವೇದಗಳನ್ನು ಹೇಳಿಸಲಿಲ್ಲವೇ!—ಇದೇ ಶಕ್ತಿಯ ಪ್ರಭಾವದಿಂದ ಆದದ್ದಾಗಿಯೇ, ಜಾನುವಾರುಗಳ ಮೇಲಾಗಲೀ ಜನರ ಮೇಲಾಗಲೀ ಪ್ರಯೋಗಿಸಬಹುದಾದ 'ಕಾರ್' ಇಂಜೆಕ್ಷನಿನ ಪ್ರವೃತ್ತಿಯುಳ್ಳ ಚಿಕ್ಕ ಸೀಸೆಗಳ ಮೇಲೆ ಬಾಯ್ತೆರೆದ ಕೋಣದ ಚಿತ್ರವಿದೆ.

ಈಗ ಇಂಜೆಕ್ಷನುಗಳ ಪ್ರಕಾರಗಳನ್ನು ಮಾಹಿತೀ ಪತ್ರಕದಿಂದ ತಿಳಿಸುವೆನು —

(೧) ದೊಡ್ಡ ಅಂಶ ಅಥವಾ ನಂಬ್ರ ೧ನೇ ಡೋಜ್ ಯಾವುದೊಂದು ಕತ್ತೆಯ ಮೇಲೆ ಇದರ ಪ್ರಯೋಗವಾಗಲೀ, ಕೂಡಲೇ ಅದು ಕವಿತೆಗಳನ್ನು ಅಭಂಗಗಳನ್ನೂ ಹಾಡುವುದು ಆದರೆ ಯಾವ ಮೃತ ಕವಿಯ 'ಕಾರ್' ಶಕ್ತಿಯನ್ನು ಪ್ರಯೋಗಿಸಲಾಗಿದೆಯೋ ಅವನ ಕವಿತೆಗಳನ್ನೆ ಮಾತ್ರ ಹಾಡೀತು, ಅಲ್ಲದೆ ಬೇರೆ ಸಾಧ್ಯವಿಲ್ಲ ಇಂತಹ ಕತ್ತೆಗಳನ್ನು ಬರ್ಲಿನಿನಲ್ಲಿ ಸಂಘಗಳ ವರ್ಧಂತಿ ಸಾಹಿತ್ಯ ಸಮ್ಮೇಳನ ಮೊದಲಾದುವು ಜರಗಿದಾಗ ಪ್ರದರ್ಶಿಸಿದ್ದುಂಟು. ಅಲ್ಲಿನ ಕೀರ್ತನಕಾರರೂ ಗಾಯಕರೂ ಈ ಕತ್ತೆಗಳನ್ನು ಕಂಡು ತಮ್ಮ ವೃತ್ತಿಗೆ ಸೊನ್ನೆ ಬಿದ್ದಿತೆಂದು ಬಡ್ಡಿಯಿಂದ ಇವನ್ನು ಬಹಿರ್ದೇಶಗಳಿಗೆ ಹಿಂದುಗೂಡಿಸಿ ಕಳುಹಿಸುತ್ತಿದ್ದಾರೆ

(೨) ಮಧ್ಯಮ ಡೋಜ್, B 2 ಇದನ್ನು ನಾಯಿಗಳ ಮೇಲೆ ಪ್ರಯೋಗಿಸುವರು ಅಂತಹ ನಾಯಿಯನ್ನು ಕಟ್ಟಿಹಾಕಿ ನೋಡಿರಿ (ಸಾಧಾರಣವಾಗಿ ಕನ್ಯಾಮಾಸದಲ್ಲಿ ಈ ಔಷಧವು ನಾಯಿಗಳ ಮೇಲೆ ಒಡನೆ ತನ್ನಾಣೆ ಸಾಧಿಸುತ್ತಿದೆ) ನಾಯಿ ಆಗಲೇ ಸಾಧಾರಣ ಕಾವ್ಯಸ್ವರವಲ್ಲೇ ಗಾನಮಾಡುವುದು ಅಂಗ್ಲಕ್ಲೇಶ ಮಾಡಿಗಾ ಆದರೆ ಸ್ವರಗಳನ್ನು ಸೀದಿ ಮಾಡುವದಿಲ್ಲ ವುದು. ನಾಯಿಯ ಮೈಬಣ್ಣವೇ ಹಲವು ಚುಕ್ಕೆಗಳುಳ್ಳದ್ದಾಗಿದ್ದರೆ ಸ್ತ್ರೀಕಂಠವೇ ಹೊರಡುವುದು. ವಿಶ್ವದೇಶೀಯ ಸಂಗೀತದಲ್ಲಿ ಇಂತಹ ನಾಯಿಗಳನ್ನು ಸಾಕುತ್ತಿದ್ದಾರೆ

(೩) ಕನಿಷ್ಠ ಡೋಜ್, C 3 ಇದು ಇಲಿಗಳ ಬಗ್ಗೆ. ನೀವು ಇಟ್ಟಿರೋ ಇರಲಿ ಚಿಕ್ಕ ಕೋಣೆಯಲ್ಲಿ ನೀವು ಗುನುಗುನು ಹಾಡುತ್ತ ಇರುತ್ತ ಇರುವ ಅಗತ್ಯವೇ ಇಲ್ಲ! ನಿಮ್ಮ ಸ್ನಾನಾಗಾರದಲ್ಲಿ ಒಂದು ಇಂತಹ ಇಲಿಯನ್ನು ಸಾಕಿಕೊಳ್ಳಿರಿ, ವ್ಹಾ, ಅದರ ಇಂಪಿದೇ ಬೇರೆ

ಈ ಇಂಜೆಕ್ಷನುಗಳ ಮೇಲೆ Baby austin ಮೋಟರುಗಳಿನ ನಕ್ಷೆಯಾದ 'ಕಾರ್' ನಂಬ್ರ ಇದೆ. ಕೇಳ್ಕರರ ಸ್ವಹಸ್ತ ಸಹಿ ಇದೆ.

ಈಗ ಎರಡೇ ಪಕ್ಷಿಗಳ ಮೇಲೆ ಮಾತ್ರ ಈ ಕಾರ್ ಶಕ್ತಿಯನ್ನು ಪ್ರಯೋಗಿಸಲಾಗಿದೆ. (ಮೈನಾ ಮತ್ತು ಗಿಳಿ) ಇದರಿಂದ ಕಂಡುಬಂದುದೇನೆಂದರೆ,—ಯಾವ ದೊಡ್ಡವರ ಸಭೆಯಲ್ಲಿ ನಿಂತು ಭಾಷಣ ಮಾಡುವ ಸಂದರ್ಭವು ಒದಗಿದರೆ, ಗಂಡವರ್ಣದ ಚಿಕ್ಕದೊಂದು ಗಿಳಿಯ ಮೇಲೆ ಈ ಶಕ್ತಿಯನ್ನು ಪ್ರಯೋಗಿಸಿ ಅದನ್ನು ತನ್ನ ಸಿಲ್ಕಾರವಾದ ಜೇಬಿನಲ್ಲಿ ಕುರುಕಿಸಿಟ್ಟುಕೊಂಡರೆ ಸಾಕಾಗುವುದು. ಸಾಕೋ ಸಾಕೆನ್ನುವ ವರೆಗೆ ಈ ಗಿಳಿಯು ಭಾಷಣ ಮಾಡಿಯೇ ಮಾಡುವುದು. ಭಾಷಣಕರ್ತನೆಂಬವರು ಬರೇ ಕೈಕಾಲು ಅಭಿನಯಮಾಡಿ, ಮುಖ ವಕ್ರತೆಯನ್ನು ತೋರಿಸಿದರೆ—ಅದೇ ವಕ್ತೃತೆಯಾಗುವುದು. ಹಲವು ಕಾಲೇಜುಗಳ ಪ್ರೊಫೆಸರರುಗಳೂ ಇದೇ ಉಪಾಯದಿಂದ ತಮಗಿರುವ ಪಾಂಡಿತ್ಯದರಿವು ಭಾಷಣಗಳನ್ನು ಪ್ರಕಟಿಸುತ್ತಿರುವರು. ಬರ್ಲಿನಿನಲ್ಲಿ ಮೈನಾ ಪಕ್ಷಿಗಳಲ್ಲಿ ಇದುವರೆಗೆ ಈ ಪ್ರಯೋಗಕ್ಕೆ ಒಳಪಟ್ಟವು ಬರೇ ಕೆಲವು ಮಾತ್ರ. ಉಳಿದವು ಇನ್ನೂ ಕೋಮಲ ಹೃದಯದ ಹಕ್ಕಿಗಳು. ಸಾಯುವುದು ಕೆಲವೇ ಮಾತ್ರವಾದರೂ ಇವುಗಳಿಗೆ ರಂಜನೆಗಳೇ ಪತ್ರಿಯಾದವರಾಗುವಷ್ಟು ಯೋಗ್ಯತೆ ಹುಟ್ಟಿದೆ"

(೧೩ನೇ ಪುಟಕ್ಕೆ ಮುಂದುವರಿಯುವುದು)

BUY
ADVERTISED GOODS

# ಯೋಗ್ಯರಾದವರಿಗೆ ಸುಸಂದರ್ಭ

## ದಿ ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಇದು ಮದ್ರಾಸು ಪ್ರಾಂತ್ಯದಲ್ಲಿ-ಬಹುಮುಖವಾದ ಸಂಘಟನೆಯನ್ನೂ ಪ್ರಚಾರ ಕಾರ್ಯವನ್ನೂ ಕೈಕೊಂಡಿದೆ ಮತ್ತು

## ಪ್ರಕಟಿಸುವುದೇನೆಂದರೆ,—

ಪ್ರಮುಖ ಕೇಂದ್ರಗಳಲ್ಲಿ ಕೆಲಸಮಾಡಲು ಉತ್ಸಾಹಿಗಳಾದ ಹೊಸ ನರಲ ಆರ್ಗನೈಜರರ ಕಂಟ್ರಾಕ್ಟನ್ನು ಮಾಡುವುದರಲ್ಲಿದೆ

ವಿಜಯಿ ಪ್ರಸಾರಣದ ದೋರಣೆಯ ಮೇರೆಯೇ ಈ ಹೊಸ ಕಂಟ್ರಾಕ್ಟು ಕ್ರಮವನ್ನು ಹಿಡಿಯಲಾಗಿದೆ ಇದರಂತೆ ಯೋಗ್ಯ ಸಂಬಳ, ವ್ಯಕ್ತಿಪರವಾದವ್ಯಾಪಾರದಲ್ಲಿ ಸಂಚಾರ ಭತ್ತೆ, ಉದಾರ ಕಮಿಶನ್, ಪ್ರಾವಿಡೆಂಟ್ ಫಂಡ್ ಮತ್ತು ಬಾಹೀರಾತ್ ಗಳ ಸೌಕರ್ಯಗಳಿವೆ ಇಂಡಿಯದಲ್ಲಿರುವ ಯಾವ ವಿಮಾ ಕಂಪೆನಿಗಿಂತಲೂ ಉತ್ಕೃಷ್ಟ ಕಾಂಟ್ರಾಕ್ಟು ಇದೆಂದು ನಿಸ್ಸಂದೇಹವಾಗಿ ಹೇಳಬಹುದು.

ಇಂಡಿಯನ್ ಜೀವವಿಮೆಯ ರಂಗದಲ್ಲಿ 'ದಿ ನಾರ್ದರ್ನ್ ಲೈಫ್ ಪೋಲಿಸಿ' ಎಂಬುದು ಧೈರ್ಯಪೂರ್ಣ ಸಾಹಸ. ನಿರುದ್ಯೋಗದಲ್ಲಿ, ದೌರ್ಬಲ್ಯದಲ್ಲಿ, ಅಪಘಾತದಲ್ಲಿ, ವೈದ್ಯಕೀಯ ಸಹಾಯಕ್ಕೆ, ಆರ್ಥಿಕ ಬೆಂಬಲಕ್ಕೆ, ಮನೆಗೆ ಬೇಕಾದ ಸಾಮಾನುಗಳನ್ನು ಪಡೆಯುವುದಕ್ಕೆ ರಕ್ಷಣೆಗಳಿತ್ತು, ಜೀವವಿಮೆಯ ಸರ್ವಿಸಿನಲ್ಲಿ ಅತ್ಯುತ್ತಮ ಸೌಲಭ್ಯಗಳನ್ನೊದಗಿಸಿಕೊಡುತ್ತದೆ

ಸರ್ ಚಿನೂಭಾಯಿ ಮಾಧವಲಾಲ್ ಬೆರೊನೆಟ್, ಡೈರೆಕ್ಟರ್ ವ್ಯಾಪಾರಕರು ಮತ್ತು ವ್ಯಾಪಾರಿಗಳು, ಶ್ರೀ ಎ ವಿ ಜಾಧವ್, ಎಂ ಎ, ಎಲ್. ಎಲ್ ಬಿ ಮಾಜಿ ಎಂ ಎಲ್ ಎ ಮತ್ತು ಮುಂಬಾಯಿ ಸರಕಾರದ ಮಂತ್ರಿಗಳು, ಕೊಲ್ಹಾಪುರದ ಮಾಜಿ ದಿವಾನರು—ಇವರಂತಹ ಪ್ರಖ್ಯಾತ ಮತ್ತು ಯಶಸ್ವೀ ವಾಣಿಜ್ಯವಟುಗಳಿಂದಲೇ ಕಂಪೆನಿಯನ್ನು ಸಮರ್ಥಕವಾಗಿಯೂ ಆರ್ಥಿಕವಾಗಿಯೂ ನಡೆಸಲಾಗುತ್ತದೆ 1934ರ ಇದರ ವಹಿವಾಟವು ಅಭೂತಪೂರ್ವ ವಿಜಯವನ್ನು ಹೊಂದಿದ. ಕಳೆದ ವರ್ಷ 35,00,000 (35 ಲಕ್ಷ) ರೂಪಾಯಿಗಳ ವಹಿವಾಟನ್ನು ನಡೆಸಿದೆ, ಕಂಪೆನಿಯ ದಿಗಂತವ್ಯಾಪ್ತವಾದ ಖ್ಯಾತಿಗೂ ಅವರ ಜಯಸಂಕೇತಕ್ಕೂ ಇದೇ ನಿದರ್ಶನವಾಗಿದೆ

ಶಕ್ತರೂ, ಸಂಘಟನೆ ಮಾಡಲು ಸಮರ್ಥರೂ ಆದ ಗೃಹಸ್ಥರೂ ಆಗಿರುವವರು ಕೆಳಗೆ ಸಹಿಯಿಟ್ಟವರನ್ನು ರವಿವಾರವೊಂದಲ್ಲದೆ ಬೇಕಾದ ದಿನಗಳಲ್ಲಿ 12ರಿಂದ 6 ಗಂಟೆ ಸಂಜೆಯೊಳಗೆ ಮುಖತಃ ಕಂಡು ಮಾತನಾಡಿದರೆ ಪ್ರಯೋಜನವಾದೀತು.

C/o ಮದ್ರಾಸು ಬ್ರೇಂಚ್ ಆಫೀಸು,
12 ತಂಬುಚೆಟ್ಟಿ ಸ್ಟ್ರೀಟ್, ಮದ್ರಾಸು.

ಎಸ್. ಎಚ್. ಠಾಕ್ಕರ್,
'ಜನರಲ್ ಮೆನೇಜರ್ (ಪ್ರವಾಸದಲ್ಲಿರುವರು)

# ಲೋಧ್ರ

**ಸುಪ್ರಸವಕ್ಕಾಗಿ ದಿವ್ಯ ಟಾನಿಕ್**

**ಸ್ತ್ರೀಯರಿಗೊಂದು ಮಹಾ ವರ**

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ಮೀರಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

## ಲೋಧ್ರ

ಎರಡ ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1—10—0

**ಕೇಸರಿ ಕುಟೀರಂ**

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

---

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ

ಡಿ. ಗೋಪಾಲಾಚಾರ್ಲುರವರ

## ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಆರೋಗ್ಯವಾದ ಗುಣ, ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 93, ಚಿಕ್ಕಪೇಟೆ, ಬೆಂಗಳೂರು ಸಿಟಿ.

---

ಜಾತುಕುಟ್ಟಿ ವೈದ್ಯರ

## ವಿಶೂಚಿಕಾ ಸಂಹಾರಿ
**Vishuchika Samhari**
(PILCO)

ಕೋಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ 1—0—0

## ಗುಹ್ಯರೋಗ ನಿವಾರಿಣೀ ತೈಲ
**Anti-Veneraei Oil**
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ಪತಗಳಿದ ರೋಗವು ಗುಣವಾಗುವುದು. ಸಿರೋಗಿಗಳ ಹೊಟ್ಟೆಯ ಶುದ್ಧಿಗಾಗಿ ಇದಾಬಿನ ಶುದ್ಧನಂತೆ ತೆಗೆದುಕೊಳ್ಳಬಹುದು

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 2—8—0

**ಕೆ ವಿ. ಕೃಷ್ಣನ್,**
ಕಲ್ಪಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

---

Rock-bottom charges. Please come & visit once Try once atleast Do not miss & do not repent.

## Royal Gold House,
(*Prop*—M Vaman Nayak & Sons)

**Hampankatta—MANGALORE—S Kanara**

NICKEL PLATING WILL BE UNDERTAKEN ON GUARANTEED SYSTEM

Motor parts Cycle parts, Gramophone parts, Surgical instruments and etc, are plated in most scientific method under guaranteed system

**Under special request at the time of depression**

**Platings are undertaken at Moderate Charges**

18ct Rolled Gold Jewels Guaranteed for 10 Years

## ದಿ ರೊಯಲ್ ಗೋಲ್ಡ್ ಹೌಸ್,

ಬಹಳ ಸುಲಭ ದರದಲ್ಲಿ ಗೇರೆಂಟಿಕೊಟ್ಟು ಎಲ್ಲಾ ಒಡವೆಗಳಿಗೆ ಪ್ಲೇಟಿಂಗ್ ಮಾಡಲಾಗುವುದು.

ಇತರ ವಿಚಾರಗಳಿಗೆ —

**ಎಮ್ ವಾಮನ ನಾಯಕ್ ಎಂಡ್ ಸನ್ಸ್,**
18Ct ರೋಲ್ಡ್ ಗೋಲ್ಡ್ ಜುವೆಲರ್ಸ್
ಹಂಪನಕಟ್ಟೆ, ಮಂಗಳೂರು, ದ ಕ

---

## ರೈಲು ಬಂಡಿಗಳ ಸಮಯ.

| ಗಾಡಿಗಳು | ಹೊರಡುವ ಘಂಟೆ | ತಲಪುವ ಘಂಟೆ |
|---|---|---|
| ಮೈಲು | ಬೆಳಗ್ಗೆ 9 50 | ಸಂಜೆ 4 30 |
| ಮಿಕ್ಸಡ್ | ,, 5 55 | ರಾತ್ರಿ 8 50 |
| ಫಾಸ್ಟ್ ಪಸೆಂಜರ್ | ಮ. 2 45 | ಮ 12 40 |
| ಶಿಟಲ್ | ಸಂಜೆ 5 25 | ಬೆಳಗ್ಗೆ 9-25 |
| ಕಾಂಞಂಗಾಡ್ ಪಸೆಂಜರು | ಬೆ 8 25 | ಮ 1 20 |
| ಕಾಸರಗೋಡು ಪಸೆಂಜರು | ಸಂಜೆ 3 20 | ಸಂಜೆ 6 15 |

---

## ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ, ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗೇರಂಟಿ.

ವಿವರಕ್ಕೆ ಬರೆಯಿರಿ

**Kamala Works,**
Panchpota Bengal S B.

C P. S.

---

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

---

## 'ಸ್ವದೇಶಾಭಿಮಾನಿ'

ಉತ್ತಮವರ್ಗದ ವಾರಪತ್ರಿಕೆ.

ಇಂದೇ ಪಡಕೊಳ್ಳಿರಿ—ಓದಿರಿ!

---

## ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

---

ಚಿತ್ರಾಯುತ ನಮೋಕ

## ಋಗ್ವೇದೀ ಸಂಧ್ಯಾವಂದನೆ

(ಸ್ನಾನವಿಧಿ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

**ಬೆಲೆ ಆಣೆ 3.**

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

---

## ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ -

The Scientific Gold Bangles Co., Ltd,
Head Office—43, Byragimutam Street,
Post Box No. 203, Madras.

---

## ತಯಾರಾಗಿದೆ!

ಗ್ರಾ ಹಾ ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

**ಸಮಾಜಶಾಸ್ತ್ರ**

ಅಥವಾ

**ಸೋಸಿಯೊಲೊಜಿ.**

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ, ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ, ಇದನ್ನು ಗ್ರಾ ಹಾ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಅಚ್ಚಿನಲ್ಲಿದೆ,

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುವು,

ಇಲ್ಲಿಗೆ ಕೂಡಲೇ ಬರೆಯಿರಿ

**ಮ್ಯಾನೇಜರ್,**
ಶಾರದಾ ಛಾಪಖಾನೆ,
ಮಂಗಳೂರು.

# ಹುಲಿಯೊಡನೆ ಹೋರಾಟ! ಇಬ್ಬರು ಮಕ್ಕಳನ್ನು ಬಲಿಕೊಟ್ಟ ವೃದ್ಧೆ!

## ಆಕಾಶದಿಂದ ಕಲ್ಲುಗಳ ಸುರಿಮಳೆ.

### ಟಿಪ್ಪೆರದಲ್ಲಿಯ ಅದ್ಭುತಕರ ವಿದ್ಯಮಾನ!

ಕೊಮಿಲ್ಲಾ, ಜುಲೈ ೩೧

ನಕ್ಷತ್ರಗಳ ಮಿನುಗಾಟದ ನಂತರ, ಸೋಮವಾರ ಮಧ್ಯಾಹ್ನ ಕಿಂಗೊಲ್ಕಟ್ ಎಂಬಲ್ಲಿ ಆಕಾಶದಿಂದ ಕಲ್ಲುಗಳು ಬಿದ್ದವೆಂದೂ ಜನರು ಇದನ್ನು ಕಂಡು ಬೆರಗಾಗಿ ತಮ್ಮ ಜೀವ ಭಯದಿಂದ ಆ ಪ್ರಾಂತದಲ್ಲೋ ಸುಂಗ ಮನೆಯೊಳಗೆ ಧಾವಿಸಿದರೆಂತಲೂ ತಿಳಿದುಬಂದಿದೆ. ಕಲ್ಲುಗಳನ್ನು ಪರೀಕ್ಷಿಸಿದ್ದಲ್ಲಿ ಚಂದನಾ ಜಾತಿಯವುಗಳಾಗಿ ಕಂಡುಬಂದವು. ಬಿದ್ದ ಕಲ್ಲುಗಳಲ್ಲಿ ಒಂದು ೭॥ ಸೇರು ಭಾರವಿತ್ತು. ಇದು ಭೂತಲದಲ್ಲಿ ಆರು ಅಡಿ ಆಳಕ್ಕೆ ಹೂತು ಹೋಗಿತ್ತು. ಅಲ್ಲಿಯ ಕಲೆಕ್ಟರರು ಆ ಕಲ್ಲನ್ನು ಇಂಡಿಯದ ಜಿಯಲೋಜಿಕಲ್ ಲೆಬರೆಟರಿಗೆ ಪರೀಕ್ಷೆಗಾಗಿ ಕಳುಹಿಸಲು ಅವರಿಂದ ತಿಳಿದು ಬಂದುದೇನೆಂದರೆ, ಆಕಾಶದಲ್ಲಿ ಹನೆಯ ಬದಲಾವಣೆಯಿಂದಾಗಿ ಹಲವು ನಕ್ಷತ್ರಗಳು ಸಿಡಿದು ಚೂರುಚೂರಾಗಿ ಕೆಳಗೆ ಬೀಳುವವೆಂದೂ, ಇದಕ್ಕೆ ಇಂಥಾ ಸಮಯವೆಂಬ ನಿರ್ಧಾರವಿಲ್ಲವೆಂದೂ ತಿಳಿಸುತ್ತಾರೆ.

### ಕಾಡಿನಲ್ಲಿ ಪ್ರತಿಮೆ ಸಿಕ್ಕಿತು

### ಭೀಮನ ಪ್ರತಿಮೆಯು ೪೫ ಅಡಿ ಉದ್ದವಿದೆ

೪೫ ಅಡಿ ಉದ್ದವಿರುವ ಭೀಮಸೇನನ ಪ್ರತಿಮೆಯೊಂದು ಕಾಂಬೋಥಿಯ ಕಾಡಿನಲ್ಲಿ ಸಿಕ್ಕಿದೆ ಎಂಬುದಾಗಿ ಸೂರತ್‌ನಿಂದ ತಿಳಿದು ಬಂದಿದೆ. ಪಗಡೆಯಾಟದ ನಿಮಿತ್ತ ಪಾಂಡವರಿಗೆ ವನವಾಸ ಪ್ರಾಪ್ತವಾಗಿತ್ತಷ್ಟೆ. ಬಹುಶಃ ಅದರ ಸ್ಮಾರಕಾರ್ಥವಾಗಿ ಅದನ್ನು ಅಲ್ಲಿ ಸ್ಥಾಪಿಸಿದ್ದಿರಬೇಕು.

### ಕೋರ್ಟಿನ ಬಳಿ ತಿರುಗಾಡಿದ್ದಕ್ಕಾಗಿ ಶಿಕ್ಷೆ!

ಆಲೀಪುರದ ಕೋರ್ಟಿನ ಬಳಿ ಅಲೆಯುತ್ತಿದ್ದ ಬಂಗಾಳಿ ಯುವಕರೀರ್ವರನ್ನು ಶಾಸನ ನಿಷಿದ್ಧವಾದ 'ಸಮಿತಿ'ಯ ಸದಸ್ಯರಾಗಿರಬೇಕೆಂದು, ಪೋಲೀಸರು ಅವರನ್ನು ಕೈದು ಮಾಡಿ ರಿಮಾಂಡಿನಲ್ಲಿಟ್ಟಿದ್ದಾರೆ. ವಿಚಾರಣೆಯಾಗಿಲ್ಲ.

### ಹುಲಿಯೊಡನೆ ಹೋರಾಟ!

### ಸಿಕ್ಖನ ರಕ್ಷಣೆಗೆ ಮುಸ್ಲಿಮನು ಇಬ್ಬರೂ ಘಾಯಗೊಂಡರು.

ರಾವಲ್‌ಪಿಂಡಿ, ಆಗೋಸ್ತು ೧೨

ಈ ದಿನ ಇಲ್ಲಿ ಒಬ್ಬ ಸಿಕ್ಖನನ್ನು ಒಂದು ದೊಡ್ಡ ಹುಲಿಯು ಹಿಡಿದು ಕೊಲ್ಲುವುದರಲ್ಲಿತ್ತು. ಅಷ್ಟರಲ್ಲಿ ಒಬ್ಬ ಮುಸ್ಲಿಮನು ಓಡಿ ಹೋಗಿ ಆ ಹುಲಿಯೊಡನೆ ಕಾದಾಡಿ ಅದನ್ನು ಕೊಲ್ಲುವಂತೆ ಮಾಡಿದನು. ಈ ಹುಲಿಯು ಜೆಲೂಮ್ ಜಿಲ್ಲೆಯಲ್ಲಿ ಹಲವು ತಿಂಗಳುಗಳಿಂದ ಹಾನಿ ಮಾಡುತ್ತಿದ್ದು ಅನೇಕರನ್ನು ಆಹುತಿಯಾಗಿ ಪಡೆದಿದ್ದಿತು. ಸಿಕ್ಖನನ್ನೂ ಮುಸ್ಲಿಮನನ್ನೂ ಆಸ್ಪತ್ರೆಗೊಯ್ದಿರುವರು.

### ಉಚ್ಚ ಸ್ವಾಮಿನಿಷ್ಠೆ

ಕ್ವೆಟ್ಟಾ, ಆಗೋಸ್ತು ೧೦

ಪೂರ್ವದಲ್ಲಿ ಪೊಂಪೆ ನಗರದಲ್ಲಿ ನಾಯಿಯೊಂದು ತನ್ನ ಯಜಮಾನನ ಮಗನನ್ನು ಮೂರು ಸಲ ಮೃತ್ಯುವಿನ ಬಾಯಿಯಿಂದ ರಕ್ಷಿಸಿದುದಲ್ಲದೆ ಕೊನೆಗೆ ಆ ಮಗನೊಡನೆ ಸತ್ತಿತು. ನಾಯಿಯ ಸ್ವಾಮಿಭಕ್ತಿಯೆಂದರೆ ಅಷ್ಟು ಗಹನವಾದದ್ದು. ಈಗ ಕ್ವೆಟ್ಟದಲ್ಲಿ ಅಂತಹ ನಾಯಿಯು ಸಿಕ್ಕಿದೆ. ಮಿ। ಪಿ. ಎಚ್. ಡಬ್ಲ್ಯು. ಹೋಗ ಮತ್ತು ಅವನ ಬಳಿದವರು ಕ್ವೆಟ್ಟದಲ್ಲಿ ಸತ್ತವರ ಹೆಣಗಳನ್ನು ಹಾಳುಬಿದ್ದಲ್ಲಿಂದ ತೆಗೆಯುವಾಗ ಒಂದು ಕಡೆ ನಾಯಿಯೊಂದು ತನ್ನ ಯಜಮಾನಿಯ ಶವವನ್ನು ಕಾದು ಕೂತಿತ್ತು. ಆ ಶವವನ್ನು ತೆಗೆಯಬೇಕಾದರೆ ನಾಯಿಯನ್ನು ಹೊಡೆದೋಡಿಸಬೇಕಾಯಿತು. ಸಾಧಾರಣ ಎರಡು ತಿಂಗಳಿಂದಲೂ ಅದು ಅಲ್ಲೇ ಇತ್ತೆಂದು ವರ್ತಮಾನವಿದೆ.

### ಮಸೀದಿಯೆದುರು ಭಜನ

### ಹಿಂದೂ ಮುಸ್ಲಿಮರೊಳಗೆ ಒಪ್ಪಂದ

ಕೈಲಸ್, ಆಗೋಸ್ತು ೮

ಇಲ್ಲಿಯ ಹಿಂದೂ ಮುಸ್ಲಿಮರೊಳಗಿದ್ದ ವಿವಾದವೊಂದು ಮೊನ್ನೆ ಇಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮಿ। ಎಂ. ಸಿ. ಜೋಶರ ಮನೆಯಲ್ಲಿ ನಡೆದ ದ್ವಿಪಕ್ಷಗಳ ಸಭೆಯು ಸಮಾಧಾನವಾಗಿ ಕೊನೆಗಂಡಿತು. ಕಳೆದ ವರ್ಷ ಅಷ್ಟಮಿ ರೋಹಿಣಿಯ ಸಮಯ, ಇಲ್ಲಿಯ ಹಿಂದೂಗಳು ಚೀನಾಬಜಾರ್ ಮಸೀದಿಯ ಬಳಿಯ ದಾರಿ ಭಜನೆಯನ್ನು ನಡೆಸುತ್ತಾ ಮೆರವಣಿಗೆ ಮಾಡಿದರು. ಒಡನೆ ಹಿಂದೂ ಮುಸಲ್ಮಾನರೊಳಗೆ ಜಗಳವು ನಡೆಯಿತು. ಈಗಿನ ತೀರ್ಮಾನದ ಪ್ರಕಾರ ಹಿಂದುಗಳು ಮಸೀದಿಯ ಬಳಿ ಬರುವಾಗ ಡೋಲನ್ನಾಗಲೀ, ತಮಟೆಯನ್ನಾಗಲೀ ಹೊಡೆಯಬಾರದು. ನಾಗಸ್ವರವೂ ಅಥವಾ ಇನ್ನಿತರ ಬಗೆಯ ಸೌಮ್ಯ ರೀತಿಯ ವಾದ್ಯಗಳನ್ನು ಬಾರಿಸಬಹುದು. ಆದರೆ ಮುಸ್ಲಿಮರ ಕಡೆಯಿಂದ ಕೆಲವು ಯುವಕರು ಮಾತ್ರ ಈ ತೀರ್ಮಾನದಿಂದ ಸಂತುಷ್ಟರಾಗದೆ ಮಸೀದಿಯ ಬಳಿ ಯಾವ ರೀತಿಯ ವಾದ್ಯವೂ ಬಾರಿಸಲ್ಪಡಬಾರದಾಗಿ ಹಟತೊಟ್ಟಿರುವರು.

### ಇಬ್ಬರು ಮಕ್ಕಳನ್ನು ಬಲಿಕೊಟ್ಟ ವೃದ್ಧೆ'

### ಕುಬೇರನ ಪ್ರೇಮಸಂಪಾದನೆಗಾಗಿ ಯತ್ನ!

ಹೈದರಾಬಾದ್ (ಡೆಕ್ಕನ್) ಇಲ್ಲಿಂದ ತಾ ೨ಕ್ಕೆ ಬಂದ ವಾರ್ತೆಯು ಅತಿ ಭಯಂಕರವಾಗಿದೆ. ಅಲ್ಲಿಯ ನಲ್‌ಗೊಂಡಾ ಜಿಲ್ಲೆಯ ಸುರಿಯಾಪೇಟೆ ತಾಲೂಕಿನ ತಿಮ್ಮಾಪುರ ಗ್ರಾಮದಲ್ಲಿ ಒಬ್ಬಳು ಮುದುಕಿಯು ತನ್ನ ಮನೆಯನ್ನು ದುರುಸ್ತಿಪಡಿಸುತ್ತಿದ್ದಳು. ಅಷ್ಟರಲ್ಲಿ ಅವಳನ್ನು ಒಂದು ಧನಿಯು ಕರೆದು, 'ನೀನು ಚೆನ್ನಾಗಿ ಹುಡುಕಿದರೆ ನಿನಗೆ ಹೇರಳ ಧನವು ಲಭ್ಯವಾಗುವುದು' ಎಂದಿತು. ಅವಳು ಹುಡುಕಿದಳು. ಆದರೆ ನಿಧಿಯು ದೊರೆಯಲಿಲ್ಲ. ಕೊನೆಗೆ ಅವಳಿಗೊಂದು ಉಪಾಯವು ಹೊಳೆಯಿತು. ಮನೆದೇವತೆಗೆ ನರಬಲಿ ಕೊಡುವುದೇ ಸುಲಭೋಪಾಯವೆಂದು ನಿರ್ಧರಿಸಿದಳು. ಬಳಿಯ ಗ್ರಾಮಕ್ಕೆ ಹೋಗಿ ಆರಾರು ವರ್ಷ ಪ್ರಾಯದ ಇಬ್ಬರು ಹುಡುಗಿಯರನ್ನು ಮನೆಗೆ ಬರಮಾಡಿಕೊಂಡಳು. ಪಾಪಿಣಿ, ಹೇಗೋ ಅವರಿಬ್ಬರನ್ನೂ ಕೊಂದು, ಅವರ ರಕ್ತವನ್ನು ಭೂಮಿಯ ಮೇಲೆಲ್ಲಾ ಚೆಲ್ಲಿ ದೇವತಾರಾಧನೆ ಮಾಡಿದಳು. ಎರಡು ಶವಗಳನ್ನೂ ನೆರೆಹೊರೆಯಲ್ಲಿ ಒಂದು ಮನೆಯ ಕೋಣೆಯೊಂದರೊಳಗೆ ಯಾರಿಗೂ ತಿಳಿಯದಂತೆ ರಾತ್ರಿ ಇಟ್ಟುಬಿಟ್ಟಳು. ದುರ್ದೈವವೆನ್ನಿ; ಅವಳ ಹೇಯಕೃತ್ಯವು ಹೊರಗೆ ಬಿತ್ತು. ಅವಳನ್ನು ಸೆರೆಹಿಡಿದಿರುವರು.

### ಹೊಸ ರಾಜ್ಯಾಂಗ ರಚನೆಗಾಗಿ ಮದ್ರಾಸು ಸಂಸ್ಥಾನಕ್ಕೆ ತಗಲುವ ವೆಚ್ಚ.

ಹೊಸ ರಾಜ್ಯಾಂಗರಚನೆಗಾಗಿ ಮದ್ರಾಸು ಸಂಸ್ಥಾನಕ್ಕೆ ರೂ. ೧೯,೦೦,೦೦೦ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಇನ್ನು ಆಗಾಗ್ಗೆ ಆಕಸ್ಮಿಕವಾಗಿ ಸಂಭವಿಸಬಹುದಾದ ಕೆಲಸಗಳಿಗೆ ಸಾಧಾರಣ ರೂ ೫,೫೦,೦೦೦ ಬೇಕಾದೀತು.

### ಫೌಜುದಾರರನ್ನೂ ಪೋಲೀಸರನ್ನೂ ಪರ್ವತವಾಸಿಗಳು ನಾಲ್ದೆಸೆಗಳಿಂದಲೂ ಮುತ್ತಿದರು!

### ಪ್ರಾಣರಕ್ಷಣೆಗಾಗಿ ಗುಂಡು ಹಾರಿಸಬೇಕಾಯಿತು.

### ಪಂಜಾಬಿನಲ್ಲಿ ಮೂವರು ಸತ್ತರು! ೪೭ ಮಂದಿ ಗಾಯಗೊಂಡರು'

ಸಿಮ್ಲಾ, ಆಗೋಸ್ತು ೯

ಸಶಸ್ತ್ರಪಾಣಿಗಳಾದ ೧೦೦೦ ಮಂದಿ ಪರ್ವತವಾಸಿಗಳ [illegible] ಸಿಪಾಯಿಗಳೂ ಪೋಲೀಸರೂ ತಮ್ಮ ದೇಹರಕ್ಷಣೆಗಾಗಿ ಗುಂಡು ಹಾರಿಸಬೇಕಾಯಿತು. ಪರ್ವತವಾಸಿಗಳಲ್ಲಿ ಮೂವರು ಸತ್ತುಹೋದರು, ೪೭ ಮಂದಿಗಳಿಗೆ ಗಾಯವಾಗಿದೆ.

ಡೇಹಾರ ಎಂಬಲ್ಲಿ ಶಸ್ತ್ರಪಾಣಿಗಳಾದ ಈ ಪರ್ವತವಾಸಿಗಳ ಗುಂಪೊಂದನ್ನು ಪೋಲೀಸರು ಆಗೋಸ್ತು ತಾ ೬ನೇ ದಿನ ರಾತ್ರಿ ಚದರಿಸಿದ್ದರು. ಆದುದರಿಂದ ಅವರು ಪುನಃ ಡೇಹಾರದಿಂದ ಏಳು ಮೈಲಿ ದೂರದಲ್ಲಿರುವ ಕಿರಿಗ್ವಾನಿ ಎಂಬಲ್ಲಿ ಒಟ್ಟುಗೂಡಿದರು. ಅವರನ್ನು ಸರೆಹಿಡಿಯಲು ಸರಕಾರದವರು [illegible] ಪೋಲೀಸರನ್ನೂ, ೩೦ ಸಿಪಾಯಿಗಳನ್ನೂ ಕಳುಹಿಸಿದ್ದರು. ಆದರೆ ಈ ಪರ್ವತವಾಸಿಗಳು ಆ ಪಡೆಯನ್ನು ಸುತ್ತುಗಟ್ಟಿ ಕೊಂದರೆಕೊಡಲು ಪ್ರಾರಂಭಿಸಿದರು. ಸಾಧಾರಣ ೧೦೦೦ ಮಂದಿ ಇದ್ದುದರಿಂದ ಪೋಲೀಸರ್ಗೆ ಅವರನ್ನು ಕೈದು ಮಾಡಲು ಅಸಾಧ್ಯವಾಯಿತು. ಕೊನೆಗೆ ಜೀವ ಹಾನಿಯಿಂದ ಗುಂಡನ್ನು ಹಾರಿಸಬೇಕಾಯಿತು. ೪೭ ಮಂದಿಗೆ ಗಾಯವಾಗಿ ೩ ಮಂದಿ ಸತ್ತುಹೋದರು.

### ಶಸ್ತ್ರ ಸಿದ್ಧಮಾಡುವ ಕಾರ್ಖಾನೆ

ರಂಗೂನಿನಲ್ಲಿ ಲೈಸನ್ಸು ಇಲ್ಲದ ಬಂದೂಕುಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿತ್ತು. ಯಾವ ಕಾರಣದಿಂದೆಂದು ಅಧಿಕಾರಿಗಳಿಗೆ ತಿಳಿದುಬರಲಿಲ್ಲ. ಬಂದೂಕುಗಳನ್ನು ಪರೀಕ್ಷಿಸಲಾಗಿ ಅವುಗಳು ದೇಶದಲ್ಲೇ ಸಿದ್ಧವಾದವುಗಳೆಂದು ತಿಳಿದುಬಂತು. ನ್ಯಾಯಗನ್ ಗ್ರಾಮದಲ್ಲಿ ಶೋಧನೆ ನಡೆಸಲಾಗಿ ಅಲ್ಲಿ ಕಾವರ ಕೂಡಿ ಬಂದೂಕು ತಯಾರಿಸುವ ಒಂದು ದೊಡ್ಡ ಕಾರ್ಖಾನೆಯನ್ನೇ ಗುಟ್ಟಾಗಿ ಇಟ್ಟಿದ್ದರೆಂದು ಗೊತ್ತಾಯಿತು. ಕೆಲವು ಕೋವಿಗಳೂ ಅವುಗಳಿಗೆ ಅಗತ್ಯವಿರುವ ಮದ್ದುಗಳೂ ದೊರಕಿವೆ. ಕೆಲವು ಮಂದಿ ಬರ್ಮೀಯರನ್ನು ಸೆರೆಹಿಡಿಯಲಾಗಿದೆ.

### ಲೋರಿ ಡ್ರೈವರನಿಗೆ ಶಿಕ್ಷೆಯಾಯಿತು

ಪೊಂಡಿಚೇರಿ ಆಗೋಸ್ತು ೮

ಕಳೆದ ಜೂನ್ ತಿಂಗಳ ೨೮ನೇ ತಾರೀಕಿನ ದಿವಸ ನಿಷ್ಕಾರಣವಾಗಿ ಲೋರಿಯನ್ನು ಓರ್ವ ಮುದುಕಿಯ ಮೇಲೆ ಕೊಂಡುಹೋದುದಕ್ಕಾಗಿ ಪೊಂಡಿಚೇರಿಯಲ್ಲಿ ಆ ಲೋರಿ ಡ್ರೈವರನಿಗೆ ೩ ತಿಂಗಳ ಕಠಿಣ ಸಜೆಯಾಗಿದೆ. ಮುದುಕಿಯು ಎರಡು ದಿನ ಬದುಕಿದ್ದು ನಂತರ ಪರಲೋಕವಾಸಿಯಾದಳು.

### ಲಾಹೋರಿನಲ್ಲಿ ಹಿಂದೂ ಮುಸಲ್ಮಾನರ ಹೊಡೆದಾಟ!

ಸಿಕ್ಖರ ೩೦೦ ಅಡಿಗಳನ್ನು ಬುರೇವಲ್ಲಿಲಾ ಮಂಜ್ ಬೀಯನ್ ಎಂಬಲ್ಲಿ ಮುಸ್ಲಿಮ ಬೇಸಾಯಗಾರರು ಸ್ವಾಧೀನಪಡಿಸಿಕೊಂಡುದರ ಫಲವಾಗಿ ಮೊನ್ನೆ ಲಾಹೋರಿನಲ್ಲಿ ಭಯಂಕರ ಹೋರಾಟವು ನಡೆಯಿತು. ಕತ್ತಿಕೈದುಗಳು ಉಪಯೋಗಿಸಲ್ಪಟ್ಟಿತ್ತು. ದ್ವಿಪಕ್ಷಗಳ ೧೭ ಮಂದಿ ಜಖಂಗೊಂಡಿರುವರು. ಮೂವರು ಬಹು ವಿಷಮಾವಸ್ಥೆಯಲ್ಲಿರುವರು. ಶೇಖುಪುರದ ಪೋಲೀಸರು ಅತ್ತ ಧಾವಿಸಿರುವರು.

### ಭೀಷಣ ಪ್ರತೀಕಾರ.

### ಪ್ರಣಯಿಗಳು ಪರಾರಿಯಾದುದಕ್ಕೆ ಕುಟುಂಬಕ್ಕೆ ಬಿತ್ತು ಪೆಟ್ಟು!

### ಸಿಖ್ ಕುಟುಂಬಗಳ ಕಾದಾಟ! ಇಬ್ಬರ ಮರಣ! ೮ ಮಂದಿಯ ಕೊಲೆ!

ಶಿಕಾರ್ಪುರ ಆಗೋಸ್ತು ೯

ವಿಕೃತಿಯ ವಿಶಾದಮಯ ವರ್ತಮಾನ. ದಾಯಾದಿಯೊಬ್ಬನ ಸಂಗಡ ಓಡಿಹೋದುದಕ್ಕಾಗಿ, ತರುಣ ತರುಣಿಯರ ಕುಟುಂಬಿಕರೊಳಗೆ ಭಯಂಕರ ಕಾದಾಟಗಳು ನಡೆದುದಾಗಿ ತಿಳಿದುಬಂದಿದೆ.

ಕೆಲವರುಷಗಳ ಹಿಂದೆ ಒಬ್ಬ ಹುಡುಗನು ತನ್ನ ಸೋದರಮಾವನ ಮಗಳನ್ನು ಮೋಹಿಸಿದ. ಆದರೆ ಅವರೀರ್ವರು ಒಂದೇ ಗೋತ್ರಕ್ಕೆ ಸೇರಿದವರೆಂದುದರಿಂದ [illegible] ಯಾಗಲು ಕೂಡದೆಂದು [illegible] ಹೇಳಿಬಿಟ್ಟ. ಉಭಯ ಪಕ್ಷದವರಿಗೂ ಆ [illegible] ಬೇಯಾಗಕೂಡದೆಂದು ಮನಸ್ಸಿನಲ್ಲಿತ್ತು. ಆದರೆ ಪ್ರಣಯಿಗಳೀರ್ವರೂ ಹೇಳದೆ ಕೇಳದೆ ಜಾರಿಬಿಟ್ಟರು. ಅದರಿಂದಾಗಿ [illegible] ಕುಟುಂಬದವರಿಗೂ [illegible] ಉತ್ಕೃಷ್ಟವಾಗಿ ಈ ಕೇಳಿಗೆಳಿಗೆ ಕಾರಣ [illegible] [illegible]

ಇದಾದ ನಂತರ ಒಂದು ದಿನ ಈ [illegible] ಭಯಂಕರ [illegible] ಇಬ್ಬರಿಗೆ [illegible] ಪೋಲೀಸರು [illegible] ಸೆರೆಹಿಡಿದರು. ಕೋರ್ಟಿನಲ್ಲಿ ಇವರ ವಿಚಾರಣೆ ನಡೆದು [illegible] ಕಠಿಣ [illegible] ವಿಧಿಸಲ್ಪಟ್ಟಿತು.


## ನೋಟೀಸು

ದಿ ಕೆನರಾ ಬ್ಯಾಂಕ ಲಿಮಿಟೆಡ್, ಪುತ್ತೂರು.

ಈ ಕೆಳಗೆ ಹೆಸರು [illegible] ಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ವಿಳಂಬ ಮಾಡಿದುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರು ಮೃತಪಟ್ಟುದರಿಂದ, ವಾಪಸು ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರಿಂದ ಬರಬೇಕಾದ ಸಲ್ಲತಕ್ಕ ಸಾಲದ ಅಸಲು, ಬಡ್ಡಿ, ರಿಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ಕೂಡಿಸಿ ತಾರೀಕು 30-8-1935ರ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯುಳಿದಲ್ಲಿ ಈಡಿಟ್ಟ ನಗಗಳನ್ನು ತಾರೀಕು 10-9-1935ನೇ ಮಂಗಳವಾರ ಮಧ್ಯಾಹ್ನ ಘಂಟೆ ಎರಡಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ನಿಲಾಂ ಮಾರಲಾಗುವುದು.

L 70/33 Manjunath Bhandary Rai s/o Kunhanna Rai Land holder Perne grama, Uppinangady Post Rs 140/—

Canara Bank Ltd, Puttur 9—8—35 | U Ramachandra Kini

## "GUPTA MANTRA"

**A reward of Rs. 100.**

The objects, which cannot be achieved by spending lacs of rupees may be had by repeating this Mantra seven times. There is no necessity of undergoing any hardship to make it effective. It is effective without any preparation. This is a "WASHIKARAN MANTRA." It will make you forunate give you service and advancement and bring you profit in trade. A reward of Rs. 100, if proved fallible. Price including postage etc., Rs 2-7-0.

**Siddha Mantra Ashram,**
KATRISARAI ..(GAYA.)

M A A.

## WHITE LEPROSY AND LEUCODERMA

A few day's application of this medicine cures WHITE LEPROSY and LEUCODERMA radically Get rid of this horrible disease by application of this medicine inspite of failure by hundreds of Hakims, Doctors, Kavirajas and advertisers Rs 500 rewarded if proved fallible, Price Rs. 2/-

VAIDYARAJ AKHIL KISHORE RAM
P O KATRISARAI (GAYA)

M A A

## ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ.

ವಿ - ಮೊ - ಲ

**VIM-O-LA**

**ಅಮೆರಿಕಾದ ಜೀವಿಸಾರ ವಸ್ತು.**

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬಂದಿ ಸಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

**"Vimola Depot"**

*Manufactured by*

**American Herbal Products Co.,**
Sole representatives for above medicine.

The National Kanara News Agency,
Sir Phirozsha Metha Road
Fort Bombay.

## ಕುಷ್ಠರೋಗ ಮತ್ತು ವಾತರೋಗ

ನೊಂದು ಕಂಗೆಟ್ಟು ಹೋಗಿರುವವರಿಗೆ ಮೂಲಿಕೆಯ ಔಷಧಿಗಳಿಂದ ಆಶ್ಚರ್ಯಕರವಾಗಿ ಪೂರ್ಣ ಗುಣವಾಗುತ್ತದೆ. ಅದ್ಭುತಕರ ನಿವಾರಣೆ ಉಚಿತ

**Yeshajalaya, Chandanpur**
Khulna, Bengal (A W)

## Shiromani Narayanacharya

*Choukhamba Benares City*

THIS MAN
OUR CUSTOMER

ಶಾಸ್ತ್ರಿಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು ಅದರಿಂದ ಏನು ಫಲ? ಅದನ್ನು ಧರಿಸಿದರೆ ಆಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ನಪ್ಪಾ ಅಕ್ಷ ಪ್ರಮಾಣದ ಕಂಠಸರ 1 ಕ್ಕೆ ಆಣೆ 10ಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3ರಿಂದ ರೂ. 25ರ ವರೆಗೆ, ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3ರಿಂದಲೂ 50ರ ವರೆಗೆ ಮತ್ತು 1–4 5–6–7–8 ಮುಖಗಳ ಕಾಳು 1 ಕ್ಕೆ ಆಣೆ 4ರಿಂದ ರೂಪಾಯಿ 10 ಮತ್ತು 9 10 11 ಮುಖಗಳುಳ್ಳ ಕಾಳು 1 ಕ್ಕೆ ರೂ 100ದ 300 ವರೆಗೆ 12–13–14 ಮು ಏದ ಕಾ. 1 ಕ್ಕೆ ರೂಪಾಯಿ 400ದ 1000 ವರೆಗೆ, ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷಿ ಅದಕ್ಕಿಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕಟಲಾಗ್ಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ 1 ಆರ್ಡರ್ ಸಲ್ಲಿಸಿದ್ದು ಕಳುಹಿಸಿದರೆ 3 ಇನಾಮುಗಳು – 1 ಪಿಕ್ಚರ್ ಬುಕ್, 1 ಕಾಶೀ ನಕ್ಷೆ 1 ಕಾಶಿ ಚಿತ್ರಗಳು ಲೆಟರುಗಳಿವಾಣಕೆ 3 ಇನಾಮುಗಳು)

**ಶಿರೋಮಣಿ ನಾರಾಯಣಾಚಾರ್ಯ**
ಚೌಖಂಬಾ ಬನಾರಸ (ಕಾಶೀ)

## ಮುಂಬ್ಯಾಯಲ್ಲಿ

– ಸ್ವದೇಶಾಭಿಮಾನಿಯು
ಬಿಡಿಸಂಚಿಕೆಗಳು ಇಲ್ಲಿ ಸಿಗುತ್ತವೆ:

**The National Kanara**
**News Agency,**
Sir Phirosha Metha Road,
Fort Bombay.

9/8

## ೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಕಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ ರೋಗ ವಾಸಿಯಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ, ಬೆಲೆ ರೂ ೩ ಮಾತ್ರ,

01 P. 8 Bengal Mesmarism House
5–7 Panchpota, Bengal (s.n.)

## New Era Technical School.

Near Market Square, Udipi.

Commercial classes-approved by the Madras Government-New session opens in June.

**ನ್ಯೂ ಈರಾ ಟೆಕ್ನಿಕಲ್ ಸ್ಕೂಲ್**
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

**ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.**

Join our 'Special Commercial Course' and inusre against unemployment. Details may be had on application to the Manager.


## ಮಂಗಳೂರಿನ ಪೇಟೆಧಾರಣೆ.

| ಸಾಮುಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ರಾಶಿ ಅಕ್ಕಿ | 3—13 | 4— 4 |
| ಮುಕ್ಕತಿ | 4— 6 | 4—10 |
| ಗುಡ್ಡು | 4— 0 | 4— 4 |
| ಊರ ಅವ್ವಲ್ ಬೆಳ್ತಿಗೆ | 4— 4 | 4— 8 |
| ರಂಗೂನು ಬೆ. ಗೋ. ಗೆಕ್ಕೆ | 6—10 | 7— [illegible] |
| ಎಲ್ಲೂರು ಬೆ. ಮು. ಗೆಕ್ಕೆ | 4— 4 | 4— 8 |
| ಗೋಧಿ ಗೋಣಿ ಗೆಕ್ಕೆ | 10— 0 | 12— 8 |
| ತೊಗರಿ ಗೋಣಿ ಗೆಕ್ಕೆ | 10 —8 | 11— 0 |
| ಹುರುಳಿ ಗೋಣಿ ಗೆಕ್ಕೆ | 7— 8 | 7 —12 |
| ಕಡಲೆ ಗೋಣಿ ಗೆಕ್ಕೆ | 7 — 8 | 10— 8 |
| ತೊಗರಿಬೇಳೆ ಗೋಣಿಗೆಕ್ಕೆ | 10— 0 | 17— 0 |
| ಉದ್ದು ಗೋಣಿ ಗೆಕ್ಕೆ | 8— 0 | 8— 8 |
| ಹೆಸರು ಗೋಣಿ ಗೆಕ್ಕೆ | 9— 4 | 9—12 |
| ಊರುಬೆಲ್ಲ ಖಂಡಿ ಗೆಕ್ಕೆ | 40— 0 | 42— 8 |
| ಉಪ್ಪು ಗೋಣಿ ಗೆಕ್ಕೆ | 4—12 | 5— 2 |
| ಕೊಬ್ರಿ ಖಂಡಿ ಗೆಕ್ಕೆ | 48— 0 | 55— 0 |
| ಕೊಬ್ರಿ ಹಿಂಡಿ ಖಂಡಿ ಗೆಕ್ಕೆ | 20— 0 | 20— 8 |
| ಎಳ್ಳೆಂಡಿ ಖಂಡಿ ಗೆಕ್ಕೆ | 27 — 8 | 32— 0 |
| ಕೊಬ್ರಿ ಎಣ್ಣೆ ಮುಡಿ ಗೆಕ್ಕೆ | 3—14 | 4— 14 |
| ಎಳ್ಳೆಣ್ಣೆ ದುಡ್ಡ ಗೆಕ್ಕೆ | 5— 2 | 6— 0 |
| ಚರುಬಿಎಣ್ಣೆ ಪಟ್ಟಿಗೆ ಗೆಕ್ಕೆ | 5— 8 | 5—12 |
| ಮೋರಿಸ ಸಕ್ಕರೆ ಮು. ಗೆಕ್ಕೆ | 3—11 | 3—13 |
| ಮೆಣಸು | 4— 6 | 5— 0 |
| ಸಾಸಿವೆ ಮುಡಿ ಗೆಕ್ಕೆ | 5 —12 | 6— 0 |
| ಕಾಳುಮೆಣಸು ಖ. ಗೆಕ್ಕೆ | 100— 0 | 110— 0 |
| ಯೇಲಕ್ಕಿಬೀಜ ಮುಡಿಗೆಕ್ಕೆ | 28— 0 | 32— 0 |
| ಗೇರುಬೀಜ ಮು. ಗೆಕ್ಕೆ | 4— 4 | 4 — 8 |
| ಕಬ್ಬಿಣ ಖಂಡಿ ಗೆಕ್ಕೆ | 39— 0 | 39— 8 |
| ತಾಂಬ್ರತಗಡು ಮು ಗೆಕ್ಕೆ | 9— 5 | 9— 8 |
| ತಾಂಬ್ರಪಾತ್ರಗಳು ಮು ಗೆಕ್ಕೆ | 11— 0 | 12— 0 |
| ಬೀಡಬೆಳ್ಳಿ ಸೇರು ಗೆಕ್ಕೆ | 18— 0 | 20— 0 |
| ಹಿತ್ತಾಳೆ ತಗಡು ಮು. ಗೆಕ್ಕೆ. | 8— 12 | 9— 0 |
| ಪವನು ಗೆಕ್ಕೆ | 22— 6 | 22— 8 |
| ಹುಣಸೆ ಹುಳಿ ಖಂಡಿ ಗೆಕ್ಕೆ | 20— 0 | 25— 8 |
| ನೇಟಿವ್ ಕಾಫಿ ಖಂಡಿ ಗೆಕ್ಕೆ | 170— 0 | 180— 0 |
| ಫಟೇರಿ ಕಾಫಿ ಖಂಡಿ ಗೆಕ್ಕೆ.. | 220— 0 | 230— 0 |
| ಪಾಡಿಕೇರಿ ವೀಳ್ಯ | 28— 0 | 35— 0 |
| ಸಕಲೇಶಪುರ ವೀಳ್ಯ | 28— 0 | 38 — 0 |


LOOK SHARP! LOOK AHEAD

## Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C R A, F. C. R. A, F I. S A., A C I I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

**Ladies are also admitted.**

Enrol yourself NOW Classes are in full swing. Expert tuition (Oral or Postal) by well-qualified and experienced Lecturers

FEES VERY MODERATE

*For further particulars apply to —*

D R Murdeshwar,
Dip Econ, F. R Econ, S. (Lond.)
Principal
Ganapathy High School Street,
Mangalore.

## ಬೇಕಾಗಿದ್ದಾರೆ

ನಮ್ಮ ಕಂಪನಿಗೆ ಕನ್ನಡನಾಡಿನಲ್ಲಿ ಏಜಂಟರುಗಳು ಬೇಕಾಗಿರುವರು ಅವರಿಗೆ ಕನ್ನಡ ಮತ್ತು ಇಂಗ್ಲಿಷ್ ಗಳ ಪರಿಚಯವಿರಬೇಕು. ವ್ಯಾಪಾರದಲ್ಲಿ ಸರಿಯಾದ ಅನುಭವವೂ ಇರಬೇಕು ಮೃದು ನುಡಿಗಳಿಂದ ಜನರ ಮನವೊಲಿಸುವ ವಿಚಕ್ಷಣಶಾಲಿಗಳಾಗಿರಬೇಕು ತಿಂಗಳಿಗೆ ಕಡಿಮೆಯಿಲ್ಲದೆ ೧೦೦೦ ರೂಪಾಯಿಗಳ ನಮ್ಮ ಮಾಲನ್ನು ತಪ್ಪದೆ ವಿಕ್ರಯಿಸಬೇಕು ಯಾವಾಗ ಬೇಕಾದರೂ ಒಂದು ಸಾವಿರ ರೂಪಾಯಿಗಳ ಮಾಲನ್ನು ಕೊಡುತ್ತೇವೆ. ಎಷ್ಟು ಖರ್ಚಾಗುತ್ತದೋ ಅಷ್ಟನ್ನು ವಿಕ್ರಯಿಸಿ, ಉಳಿದವುಗಳನ್ನು ಹಿಂದೆ ಕೊಟ್ಟು ಬೇರೆಯವುಗಳನ್ನು ಪಡೆಯಬಹುದು ಏಜಂಟರಾಗುವವರು 1025 ರೂ. ಗಳ ನಗದು ಜಾಮೀನ್ ಕೊಡಬೇಕು ಆ ಹಣಕ್ಕೆ ಸೇಕಡಾ ೬ರಂತೆ ಬಡ್ಡಿಯನ್ನು ಕಂಪೆನಿಯು ಕೊಡುವುದು ಏಜಂಟರಾಗುವವರಿಗೆ ರೂ. 50 ಸಂಬಳ 20 ರೂಪಾಯಿ ಭತ್ತೆ ಹೆಚ್ಚು ಮಾಲು ವಿಕ್ರಯಿಸಿದರೆ ತಕ್ಕ ಬೋನಸ್ ಕೊಡಲಾಗುವುದು, ವ್ಯಾಪಾರವು ತಿಂಗಳಿಗೆ ಸಾವಿರ ರೂಪಾಯಿಗಳಿಗೆ ಕಡಿಮೆಯಾಗಲೇ ಬಾರದು ಹೆಚ್ಚಿನ ವಿವರಗಳಿಗೆ

**S U. Narayanacharya & Co,**
Embroidery Silk Manufacturers,
Benares City

9/8


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಶ್ರಾವಣ ಬ ೩ ಶನಿವಾರದಿಂದ ಶ್ರಾವಣ ಬ. ೧೦ ಶುಕ್ರವಾರದ ವರೇಗಿನ ಪಂಚಾಂಗ. (೧೯೩೫ನೇಯ ಸಿಂಹ ಸೋಣ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೋಣ ದಿನ | ವಿಶೇಷ |
|---|---|---|---|---|---|---|---|
| 17 | ಶನಿ | ೩ | ೧೪ | ಪೂ. ಭಾ. | ೨ | ೧ | * ಶ್ರೀಕೃಷ್ಣ ಜಯಂತಿ |
| 18 | ರವಿ | ೧೪ | ೮ | ರೇವತೀ | ೫೪ | ೨ | |
| 19 | ಸೋಮ | ೫ | ೩ | ಅಶ್ವಿನೀ | ೫೧ | ೩ | |
| 20 | ಕುಜ | ೬ | ೫೪ | ಭರಣೀ | ೪೯ | ೪ | |
| 21 | * ಬುಧ | ೮ | ೫೧ | ಕೃತಿಕಾ | ೪೮ | ೫ | |
| 22 | ಗುರು | ೯ | ೪೯ | ರೋಹಿಣೀ | ೪೮ | ೬ | |
| 23 | ಶುಕ್ರ | ೧೦ | ೪೮ | ಮೃಗಶಿರಾ | ೪೯ | ೭ | |

# ದಿವಂಗತ ಖಾನ್ ಬಹದ್ದೂರ್ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬರು

## ದಿ ಕೆನರಾ ಬೇಂಕಿಂಗ್ ಕೊರ್ಪರೇಶನಿನ ಜನಕರೂ ಹಿತೈಷಿಗಳೂ ಕಾಲವಶರಾದರು.

ಖಾನ್ ಬಹದ್ದೂರ್ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬರವರು ಇದೇ ತಾ 12ನೇ ದಿನ ಉಡುಪಿಯಲ್ಲಿ ಕಾಲವಾದರೆಂಬ ದುಃಖ ವಾರ್ತೆಯನ್ನು ತಿಳಿಯಲೆಳಸುವಾಗ, ದಿವಂಗತರ ಗುಣಕಥನವನ್ನು ಮಾಡುವ ನಮ್ಮ ಕರ್ತವ್ಯವನ್ನು ಮರೆಯಲಾಗುವುದಿಲ್ಲ

ದಿ ಕೆನರಾ ಬೇಂಕಿಂಗ್ ಕೊರ್ಪರೇಶನ್ ಉಡುಪಿ ಲಿಮಿಟೆಡ್, ಇದರ ಜನನಕ್ಕೆ ಮೂಲ ಪುರುಷರೇ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬರವರು. 1906ನೇ ಇಸವಿಯ ಅತ್ತಲಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅದರಲ್ಲೂ ಉಡುಪಿಯಂತಹ ಸಣ್ಣ ಸಣ್ಣ ತಾಲೂಕುಗಳಲ್ಲಿ ಜನರಿಗೆ ಬೇಂಕಿಂಗ್ ವ್ಯವಹಾರಗಳ ಕುರಿತಾಗಿ ಹೆಚ್ಚಿನ ಜ್ಞಾನವೇ ಇದ್ದಿಲ್ಲ ಆ ಕಾಲದಲ್ಲಿ ಜಿಲ್ಲೆಯ ಕೇಂದ್ರ ತಾಲೂಕಾದ ಮಂಗಳೂರಿನಲ್ಲೂ ಹೆಚ್ಚಿನ ಬೇಂಕುಗಳಿರಲಿಲ್ಲ ಬೇಂಕ್ ಆಫ್ ಮದ್ರಾಸು ಎಂಬುದಿದ್ದು, ಅದು ಮಾತ್ರ ಸ್ವಲ್ಪಸ್ವಲ್ಪ ವಹಿವಾಟನ್ನು ನಡೆಸುತ್ತಿತ್ತು ಅದರ ಏಜಂಟರೇ ಪಕ್ಷಕ್ಕೊಮ್ಮೆ ಉಡುಪಿಗೆ ಬಂದು ಇಲ್ಲಿಯ ಜನರೊಡನೆ ವ್ಯವಹಾರವನ್ನು ನಡೆಸುತ್ತಿದ್ದರು.

ಇಂತಹ ಪರಿಸ್ಥಿತಿಯಲ್ಲಿ ಉಡುಪಿಯಲ್ಲಿ ಕೆಲವು ಆಢ್ಯ ಗೃಹಸ್ಥರು ಒಂದು ಬೇಂಕನ್ನು ತೆರೆಯುವ ದೃಢ ಸಂಕಲ್ಪ ಮಾಡಿದರ ಕೆಲವು ಪಾಲುಗಳನ್ನು ಸೇರಿಸಿ 1906ನೇ ಇಸವಿ ಫೆಬ್ರವರಿ 19ನೇ ತಾರೀಕಿನ ದಿನ ದಿ ಕೆನರಾ ಬೇಂಕಿಂಗ್ ಕೊರ್ಪರೇಶನ್ ಉಡುಪಿ ಲಿಮಿಟೆಡ್ ಎಂಬೀ ಸಂಸ್ಥೆಯನ್ನು ಇದರ ಪ್ರಥಮ ಅಧ್ಯಕ್ಷರಾಗಿ ಆರಿಸಲ್ಪಟ್ಟ ಅಬ್ದುಲ್ಲ ಹಾಜಿಯವರ ಮನೆಯ ಕೋಣೆಯೊಂದರಲ್ಲಿ ಸ್ಥಾಪಿಸಲಾಯಿತು ಕಾಸಿಮ್ ಸಾಹೇಬರ ಸಾರ್ವಜನಿಕ ಹಿತದೃಷ್ಟಿಯನ್ನೇ ಲಕ್ಷ್ಯದಲ್ಲಿಟ್ಟುಕೊಂಡಿದ್ದು, ಬೇಂಕಿನ ಉದ್ಧಾರವೇ ಜನರ ಉದ್ಧಾರವೆಂದು ಭಾವಿಸಿ ಬೇಂಕ್ ಇಟ್ಟ ಕೋಣೆಯ ಬಾಡಿಗೆಯನ್ನು ಕೂಡಾ ಸ್ವೀಕರಿಸಲಿಲ್ಲ ಇವರ ಇಂತಹ ಪ್ರೋತ್ಸಾಹ ಬಲದಿಂದಾಗಿಯೇ ಈ ಸಂಸ್ಥೆಯು ಸ್ಥಾಪನೆ ಹೊಂದಿದ 9 ತಿಂಗಳುಗಳೊಳಗೆ 206 ಮಂದಿ ಇದರ 1017 ಪಾಲಗಳನ್ನು ಪಡೆದುಕೊಂಡರು

ದಿನೇ ದಿನೇ ಬೇಂಕು ಪ್ರಗತಿಯನ್ನು ಹೊಂದುತ್ತಾ ಬಂತು ಅದರೊಡನೆ ಕಾಸಿಮ್ ಸಾಹೇಬರ ಸಾರ್ವಜನಿಕ ಸೇವಾ ಕಾರ್ಯಪರಂಪರೆಗಳೂ ಹೆಚ್ಚುತ್ತಾ ಒಂದುವು ಅವರು ನ್ಯಾಯವಿಧಾಯಕ ಸಭೆಗೂ ಹಾಜ್ ಕಮಿಟಿಗೂ ಚುನಾಯಿಸಲ್ಪಟ್ಟರು. ಅವರು ಸರಕಾರದ ದೃಷ್ಟಿಯಿಂದಲೂ ಗಣ್ಯರಾದರು. 1909ರಲ್ಲಿ ಅವರಿಗೆ ಖಾನ್ ಸಾಹೇಬ್ ಬಿರುದು ದಯಪಾಲಿಸಲ್ಪಟ್ಟಿತು ಅವರ ಆದರ್ಶ ಗುಣವಿಶೇಷತೆಗಳು ಅವರನ್ನು ಜನರ ಪ್ರೇಮಾದರಗಳಿಗೆ ಪಾತ್ರವನ್ನಾಗಿ ಮಾಡಿದುವು. ಒಂದು ಕಡೆಯಿಂದ ಸ್ಥಳೀಕ ಸಂಸ್ಥೆಗಳ ಕಾರ್ಯಭಾರಗಳು ಅವರ ಮೇಲಿದ್ದುವು. ಒಂದು ಕಡೆಯಿಂದ ಕುಂದಾಪುರ ತಾಲೂಕು ಬೋರ್ಡಿಗೆ ಅಧ್ಯಕ್ಷರಾದರು ಅಲ್ಲದೆ ಉಡುಪಿ ತಾಲೂಕು ಬೋರ್ಡಿಗೂ ಸರ್ವಾನುಮತದಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು

1919ರಲ್ಲಿ ಮದ್ರಾಸು ನ್ಯಾಯವಿಧಾಯಕ ಸಭೆಯ ಪಶ್ಚಿಮ ಕರಾವಳಿ ಮತ್ತು ನೀಲಗಿರಿಯ ಭೂಮ್ಯಾಲಿಕರ ಪ್ರತಿನಿಧಿಗಳಾಗಿಯೂ ಆರಿಸಲ್ಪಟ್ಟರು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಅವರು ಮಹಮ್ಮದೀಯ ಕೊನ್ಸ್ಟಿಟುಯೆನ್ಸಿಯನ್ನು ಪ್ರತಿನಿಧಿಸುತ್ತಿದ್ದರು.

ಕೆಲವು ವರ್ಷಗಳಲ್ಲಿ ಕಾಸಿಮ್ ಸಾಹೇಬರ ಸಾರ್ವಜನಿಕ ಸೇವೆಯು ಬಹುಮುಖವಾಯಿತು ತನ್ನಿಮಿತ್ತ 1920ರಲ್ಲಿ ಅವರಿಗೆ ಖಾನ್ ಬಹದ್ದೂರ್ ಬಿರುದೂ ಬಹುಮಾನಿಸಲ್ಪಟ್ಟಿತು

ಅಬ್ದುಲ್ಲ ಸಾಹೇಬರು ಬಹು ಉದಾರ ಮನಸ್ಕರೆಂದು ಕೀರ್ತಿಗಳಿಸಿದ್ದರು ಎಷ್ಟೋ ವಿದ್ಯಾರ್ಥಿಗಳಿಗೆ ಸಹಾಯ ಧನವನ್ನಿತ್ತು ಅವರು ಉಪಕಾರ ಮಾಡಿದ್ದರು ಅವರ ಆಶ್ರಯವನ್ನು ಕೋರಿದವರಲ್ಲಿ ನಿರಾಶರಾಗಿ ಹಿಂದಿರುಗುತ್ತಿದ್ದವರೇ ಇರಲಿಲ್ಲ. ತನ್ನಲ್ಲಿಗೆ ಬಂದವರು ಎಷ್ಟು ಬಡವರಾದರೆ ಅವರಿಗೆ ಅವರ ಮೇಲೆ ಅಷ್ಟು ಮಮತೆ

ಹಿಂದೂ ಮುಸ್ಲಿಮ್ ಐಕ್ಯಮತ್ಯಕ್ಕಾಗಿ ಆಗಿನ ಕಾಲದಲ್ಲಿ ಸಾಧಿಸಿದವರ ಹೆಸರುಗಳನ್ನೆತ್ತುವಾಗ ಹಾಜಿಯವರ ಹೆಸರು ಹಿಂದೆ ಬೀಳುವುದಿಲ್ಲ "ದೇಶದ ಉದ್ಧಾರವಾಗಬೇಕಾದರೆ ಜನರು ಅಂತಃಕಲಹಕ್ಕೆ ಮನಸ್ಸು ಕೊಡಬಾರದು, ಜಾತಿಭೇದರಹಿತರಾಗಿಯೇ ಯಾವ ಸಂಸ್ಥೆಯಲ್ಲೂ ಇರಬೇಕು, ಹಿಂದೂ ಮುಸ್ಲಿಮರು ಸದಾ ಅಣ್ಣತಮ್ಮಂದಿರಂತೆ ಇದ್ದು, ತಂತಮ್ಮ ಧರ್ಮಗಳನ್ನನುಸರಿಸಿ ನೆಮ್ಮದಿಯಿಂದ ಜೀವಿಸುವುದಕ್ಕಿಂತ ಸುಖಕರ ವಿಷಯವಿಲ್ಲ" ಎಂದು ಅವರು ಆಗಾಗ ಹೇಳುತ್ತಿದ್ದರು.

ಮುಂದಕ್ಕೆ ಅವರ ಕರ್ತವ್ಯಕೋಟಿಗಳು ಅವರನ್ನು ಈ ಬೇಂಕಿನ ನಾಯಕರನ್ನಾಗಿರಲು ಬಿಡಲಿಲ್ಲ 1929ರಲ್ಲಿ ಅವರು ಬೇಂಕಿನ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟರು

ದಿ ಕೆನರಾ ಬೇಂಕಿಂಗ್ ಕೊರ್ಪರೇಶನಿನ ಶಾಖೆಗಳು ಅಲ್ಲಲ್ಲಿ ಜನನವಾಗುತ್ತಾ ಬರುತ್ತಿರುವುದನ್ನು ಕಂಡು ಅವರು ಆನಂದಗೊಳ್ಳುತ್ತಿದ್ದರು. ತನ್ನ ಆಶೀರ್ವಾದವು ಅದರ ಮೇಲೆ ಪೂರ್ಣವಾಗಿರಬೇಕೆಂದು ಬಯಸುತ್ತಿದ್ದರು

ಅವರು ಬೇಂಕಿನ ಪರವಾಗಿ ಹೊರಡಿಸಿದ ಮನವಿಯೊಂದರ ಭಾವಾರ್ಥವನ್ನು ತಿಳಿದರೆ ಅವರ ಅಂತರ್ಯದ ಪ್ರತಿಬಿಂಬವು ಹೇಗಿತ್ತೆಂಬ ಕಲ್ಪನೆಯಾಗದಿರದು

"ಜಾತಿಮತ ಭೇದವಿಲ್ಲದೆ ಎಲ್ಲರೂ ಮಿತವ್ಯಯವನ್ನು ಅಭ್ಯಸಿಸುವಂತಾಗಬೇಕೆಂದು ಈ ಕೊರ್ಪರೇಶನನ್ನು ಸಂಸ್ಥಾಪಿಸಲಾಯಿತು ಎಲ್ಲರೂ ಅನ್ಯೋನ್ಯರಾಗಿರಬೇಕೆಂಬುದು ಇದರ ಉದ್ದೇಶ ಇದಕ್ಕೀಗ ಸರಳವೂ ಶುದ್ಧವೂ ಆದ ಸ್ವದೇಶಿಪ್ರಿಯತೆಯೆನ್ನುವರು ಇಂತಹ ಉದ್ದೇಶ ಸಾಫಲ್ಯವಾಗಬೇಕಾದರೆ ಜನರು ಸಹಕಾರವನ್ನು ನೀಡಬೇಕು" ಎಂತಹ ಸೌಜನ್ಯ! ಎಂತಹ ವಿಕಸಿತಭಾವ!

ಅಬ್ದುಲ್ಲಾ ಸಾಹೇಬರನ್ನು ಕಳೆದುಕೊಂಡಿರುವ ಜಿಲ್ಲೆಯು ಮಹಾ ನಷ್ಟವನ್ನೇ ಹೊಂದಿತೆಂದು, ಈ ನಷ್ಟವನ್ನು ತುಂಬುವ ಕೆಲಸವು ದುಸ್ಸಾಧ್ಯವೆಂದು ಹೇಳಿ, ಅವರ ಮಹದುದ್ದೇಶಗಳು ನೆರವೇರಿ ಬರುವಂತೆ ಮಾಡಲು ನಮ್ಮೆಲ್ಲರಿಗೂ ಆ ಜಗದೀಶ್ವರನು ಬುದ್ಧಿಯನ್ನೀಯಲಿ ದೂ ಕೋರಿ, ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನೂ ಬಂಧುಬಳಗಕ್ಕೆ ಚಿತ್ತಶಾಂತಿಯನ್ನೂ ಪ್ರಾರ್ಥಿಸಿ ಈ ಸಂಕ್ಷಿಪ್ತ ಲೇಖನವನ್ನು ಮುಗಿಸುವೆವು

[ನಮ್ಮ ಉಡುಪಿಯ ಬಾತ್ಮಿಯನ್ನು ಓದುವುದು]

— ಅಬ್ದುಲ್ ಗಫರ್ ಖಾನರ ವರ್ಗ

ಅಹಮ್ಮದಾಬಾದ ಆಗೋಸ್ತು ೧೦

ಅಹ್ಮದಾಬಾದಿನ ಸಬರ್ಮತಿ ಜೈಲಿನಲ್ಲಿದ್ದ ಖಾನ್ ಅಬ್ದುಲ್ ಗಫರ್ ಖಾನರನ್ನು ಸಂಯುಕ್ತ ಪ್ರಾಂತ್ಯದ ಬಾರೇಲಿ ಜೈಲಿಗೆ ಒಪ್ಪಿಸಿದರು, ಅಹ್ಮದಾಬಾದಿನ ಹವಾಗುಣವು ಖಾನರಿಗೆ ಸರಿಹೋಗಲಿಲ್ಲವಂತೆ. ಮಹಾತ್ಮಾ ಗಾಂಧಿಯವರ ಹೇಳಿಕೆಯ ಮೇರೆಗೆ ... ಸಬರ್ಮತಿ ಜೈಲಿನಲ್ಲಿ ಖಾನರ ಭೇಟಿ ಮಾಡಿದರು ಅವರನ್ನು ಕಂಡು ... ಖಾನರು ಪ್ರಸನ್ನವದನರಾಗಿಯೂ ಆರೋಗ್ಯಶಾಲಿಗಳಾಗಿಯೂ ಇರುವರೆಂದು ತಿಳಿಸಿದರು

ದಿ ಖಾನ್ ಬಹದ್ದೂರ್ ಹಾಜಿ ಅಬ್ದುಲ್ ಕಾಸಿಮ ಸಾಹೇಬರವರು


**KANNADA**

**Savings Certificates can be cashed even before maturity.**

Full Particulars from—

CANARA BANK LTD

OFFICES AT.—

| | |
|---|---|
| Bombay—Fort, | Mangalore—City, |
| Bombay—Mandvi, | Mangalore—Bunder, |
| Hubli, | Kasaragod, |
| Calicut, | Puttur, |
| Cochin, | Buntwal, |
| Ernakulam, | Karkala, |
| Alleppey, | Coondapoor, |
| Bangalore, | Udipi, |
| Davangere, | & |
| Chickmagalur, | Gangoli. |

AVAILABLE IN DENOMINATIONS OF Rs. 10 UPWORDS.

**TOTAL YIELD RS 4-6-0% P.A.**

Paid once half yearly at 3⅛% p. a. with an additional 1¼% p. a. on maturity If Left To Accumulate

**RS. 100/-**

Will Amount to

**RS. 122-13-6**

Estd 1906

**CANARA BANK**

**LIMITED**

| Subscribed Capital | | Paid up Capital |
|---|---|---|
| 6,00,000 | | 3,31,000 |
| Reserves | Deposits | Working Capital |
| 4,50,000 | 58,62,000 | 73,49,000 |

## ಸಂಘ ಸಮಿತಿಗಳೂ ಜನಸತ್ತೆಯು ಕುಂದುಕೊರತೆಗಳೂ.

ಒಂದು ಸಂಘ (ಸಮಿತಿ)ವನ್ನು ಯಾವನೊಬ್ಬನೇ ಕಾರ್ಯನಿರ್ವಹಿಸಿ ನಡೆಯಿಸಿಕೊಂಡು ಬರುತ್ತಿರುವುದು ವಿಶೇಷವೇ ಸರಿ ಆದರೆ, ನಮ್ಮ ದೇಶದಲ್ಲಿ ಅಂತಹನ ಸಹಾಯಕರಾಗಿ ಹಲವು ಮಹನೀಯರು ಸಹಕರಿಸುತ್ತಲಿರುವುದೂ, ಪ್ರತಿಯೊಬ್ಬನು ತನ್ನ ಸ್ವಾರ್ಥವನ್ನು ಬದಿಗೊತ್ತಿ ಸಂಘವು ವೃದ್ಧಿಹೊಂದುವಂತೆ ಅವನೊಬ್ಬನೊಡನೆ ಒಮ್ಮನಸಾಗಿ ನಡೆವುದೂ ಮಾತ್ರ ಅದಕ್ಕಿಂತಲೂ ವಿಶೇಷವೇ ಆಗಿದೆ ಹೀಗೆ ಸಂಘದ ಅಭಿವೃದ್ಧಿಗಾಗಿ ದುಡಿಯುವ ಅವನೊಬ್ಬನು, ತನ್ನ ಕೂಟದವರ ಕುಂದುಗಳನ್ನು ತಿಳಿದಿದ್ದರೂ, ಆ ಕಾರಣದಿಂದಾಗಿ ಎದೆಗುಂದುವುದಿಲ್ಲ ಆದುದರಿಂದ ಕೃತಕೃತ್ಯನಾಗುತ್ತಾನೆ

ಸಂಘದ ಸಭೆಗಳನ್ನು ಜರಗಿಸುವಾಗ ಎಷ್ಟೋ ಸಲ, 'ಕೋರಂ' ಅಥವಾ ಕನಿಷ್ಠ ಹಾಜರಿಯ ಸಂಖ್ಯೆಯಷ್ಟು ಮಂದಿ ಸದಸ್ಯರೂ ಸಿಗುವ ಹಾಗಿಲ್ಲ ಎಂಬುದು ನಮ್ಮ ಸಂಘಗಳನ್ನು ನಡೆಯಿಸುವವರಿಗೆ ತಿಳಿದೇ ಇರುವ ವಿಷಯಗಳಲ್ಲಿ ಒಂದು ಸಂಘವು ಸ್ಥಾಪನೆ ಹೊಂದುದಾಗ, ನಾವೆಲ್ಲರೂ ಸೇರಿ, ಬಹಳ ಉತ್ಸಾಹದಿಂದ ಸಂಘವನ್ನು ಸ್ಥಾಪಿಸುವುದರಲ್ಲಿ ಭಾಗವಹಿಸಿ ಅತ್ತಿತ್ತ ಓಡಾಡುತ್ತ ಪ್ರತಿಯೊಬ್ಬರೂ ಈ ಸಂಘದ ಭಾಗ್ಯ ದೇವತೆಗಳೆಂಬಂತೆ ಮೆರೆಯುತ್ತೇವೆ ಯಾರಾದರೂ ಒಬ್ಬನೆ ಮುಂದೆ ಇಂತಹ ಸಂಘವನ್ನು ಏಕನಾಯಕನಾಗಿ ನಡೆಯಿಸದಂತೆ, ನಿಬಂಧನೆಗಳನ್ನು ರಚಿಸಿ, ಯಾವ ಕಲಸಕ್ಕೂ ಕಾರ್ಯಕಾರೀ ಮಂಡಲದ ಸಭೆ ಸೇರಿಯೆ ನಿರ್ಧಾರವಾಗಬೇಕೆಂದೂ, ಅಂತಹ ಸಭೆಗೆ ಇಂತಿಷ್ಟು ಮಂದಿ ಹಾಜರಿರಬೇಕೆಂದೂ ಈ ಕನಿಷ್ಠ ಹಾಜರಿಯನ್ನು ನಮೂದಿಸುತ್ತೇವೆ ಆಗ ಏಕನಾಯಕತ್ವವು ತಪ್ಪಬೇಕೆಂದೂ ಪ್ರಜಾಸತ್ತೆಯೇ ಊರ್ಜಿತವಿರಬೇಕೆಂದೂ ನಮ್ಮ ಭಾವನೆಯಾಗಿರುವುದು. ಇರಲಿ ಕಾರ್ಯದರ್ಶಿ ಕೋಶಾಧ್ಯಕ್ಷರುಗಳನ್ನು ನೇಮಿಸಿದ ಬಳಿಕ, ಅವರ ಸಭೆಕೂಡಬೇಕಾಗಿ ಪ್ರಾರ್ಥನೆ ಮಾಡಿಕೊಂಡು —ಇಂತಿಂತಹ ಕಾರ್ಯವಿದೆ, ಒಂದು ಕಾರ್ಯ ಮಾಡಲು ನಮಗೆ ಅಪ್ಪಣೆ ಕೊಡಿರಿ ಎಂದು ಬೇಡಿದರೆ, "ಹೋಗಿರಪ್ಪ ನಮ್ಮಲ್ಲಿ ನಮಗೆ ತುಂಬಾ ವಿಶ್ವಾಸವಿದೆ ಏನಾಗಬೇಕಿದೆಯೋ ಅದನ್ನೆಲ್ಲಾ ಮಾಡಿರಿ ನಾವು ನಿಮ್ಮ ಬೆನ್ನ ಹಿಂದೆಯಲ್ಲಿದ್ದೇವೆ ನಿಮ್ಮ ಕೆಲಸಕ್ಕೆ ನಮ್ಮ ಸಂಪೂರ್ಣ ಸಹಾನುಭೂತಿ ಸಹಕಾರಗಳು ಇದ್ದೇ ಇವೆ ನಾವು ಅಲ್ಲಿದ್ದೇವೆ ಎಂದೇ ನೆನಸಿ, ಪ್ರೊಸಿಡಿಂಗ್ಸ್‌ಗಳನ್ನು ಬರೆದು ಕಳ್ಳಿ" ಎಂದು ಅಭಯವನ್ನೆ ಸಾರುವರು ಹೀಗೆಲ್ಲ ನಡೆವುದು ಬಹಳವಿದೆ ಎಂದೇ, ಎರಡುಸಲ ನೋಟೀಸು ಕೊಟ್ಟು ಸಭೆಗೆ ಕೋರಂ ಇಲ್ಲದೆ, ಸಭಾಕಾರ್ಯ ಸಾಗದಿರುವಲ್ಲಿ, ಮೂರನೆಯ ಸಲ ಸೆಕ್ರೆಟರಿಯೊಬ್ಬನೇ ಇದ್ದರೂ ಸಹ, ಸಭೆಸೇರಿ ತನಗೆ ಬೇಕಾದಂತೆ ಪ್ರೊಸಿಡಿಂಗ್ಸ್ ಬರೆಯಬಹುದಾಗಿಯೂ ನಿಬಂಧನೆ ಬರೆದುದುಂಟು ಹಾಗೆಯೇ ಮೂರೂ ಸಭೆಗಳಿಗೆ ಹಾಜರಾಗದೆ ಇರುವ ಅಂತಹ ಸದಸ್ಯರು ಸಭೆಯ ಸದಸ್ಯತೆಯನ್ನು ಕಳೆದುಕೊಂಡವರಂತೆ ಭಾವಿಸಲೂ ನಿಬಂಧನೆಗಳಿವೆ ಇದೇನು ಪ್ರಜಾಸತ್ತೆಯ ಅವಲಕ್ಷಣವೆ? ಲಕ್ಷಣವೆ? ವರ್ಷಕ್ಕೊಮ್ಮೆ ಸದಸ್ಯರ ಪ್ರತಿನಿಧಿಯಾಗಿ ಕಾರ್ಯಕಾರೀ ಸಭೆಗೆ ಚುನಾವಣೆ ಹೊಂದಿ ಬರುವಂತಾದರೆ ಮಾತ್ರ ಪ್ರಜಾಸತ್ತೆಯನ್ನು ಪಾಲಿಸಿಬಂದಂತಾಯಿತೆ? ಅಥವಾ ಹಾಗೆ ಯಾವನು ಚುನಾವಣೆ ಹೊಂದುವನೋ ಅವನ ಸಹಾಯಕರೆಲ್ಲವೂ ಅಂತಹ ವೋಟರರ ಅಭಿಮತದಂತೆ ಆ ಸಭೆಯ ಕಾರ್ಯಕ್ಕಾಗಿ ಬೇಕಾದಾಗ ವಿನಿಯೋಗಿಸಲು ಒದಗಬೇಕೋ ಬೇಡವೆ? ಅಂತವರು ಸಭಾಬಂಗಾರಕ್ಕಾಗಿ, ಅಥವಾ ಹೇಗಾದರೂ ಚಳವಳಿಗಳು ನಡೆದಾಗ ಮಾತ್ರವೇ ಪ್ರತ್ಯಕ್ಷನಾಗುತ್ತಾನೆ? ಬರೀ ಕಾರ್ಯನಿರ್ವಾಹದ ಪ್ರಸಂಗಕಾಲದಲ್ಲೂ ಈತನು ರಂಗಸ್ಥಳದಲ್ಲಿರಬೇಡವೆ? ಹಾಗೆ ನಡೆಯುತ್ತಿದ್ದರೆ ಮಾತ್ರ ಸಂಘವು ದಿನದಿನಕ್ಕೆ ಮುಂದರಿಯುತ್ತ ಬರುವುದರಲ್ಲಿ ಅವನು ಕೈಕೊಟ್ಟಂತಾಗುವುದಲ್ಲವೆ! ಎಲ್ಲ ಸಂಘಾದಿಗಳಲ್ಲಿ ಕಾರ್ಯನಿರ್ವಹಣವು ಈ ರೀತಿಯಾಗಿ ಸಾಗಲಾರದೆಂದು ಎಷ್ಟು ದಿನ ತೋರುವುದೋ ಅಷ್ಟುವರೆಗೆ ನಮ್ಮಲ್ಲಿ ಪ್ರಜಾಸತ್ತೆಯಲ್ಲಿ ಭಕ್ತಿಯಿಲ್ಲವೆಂದೂ, ನಾವು ಪ್ರಜಾಧಿಕಾರಹೊಂದಲೂ ಅನರ್ಹರೆಂದೂ ಅರ್ಥವಾಗುವುದೆಂದೇ ತಿಳಿಯಬೇಕು ಸಂಘವು ಸ್ಥಾಪನೆ ಹೊಂದುವಂದು ಸಂಪೂರ್ಣ ಚಟುವಟಿಕೆ ತೋರಿಸುತ್ತಿದ್ದವರು, ಆ ಮುಹೂರ್ತ ದಾಟಿದ ಬಳಿಕ, ಸ್ವಕೀಯ ವ್ಯಾಪ್ತಿಯಲ್ಲಿಯೆ ನಿರತರಾಗಿ, ತಾವು ಒಂದು ಸಂಘಕ್ಕೆ ಸೇರಿದ್ದು ಜೀವನವನ್ನೂ ಪರಿಶ್ರಮ ಶಕ್ತಿಯನ್ನೂ ಅದಕ್ಕೊಪ್ಪಿಸಲು ಸಿದ್ಧರಿರಬೇಕೆಂಬುದನ್ನು ಮರೆತೇ ಹೋಗಿ, ಸಂಘದ ವಿಷಯ ಜಡನರಾಗಿರುವರು ಇಂಥವರಿಂದ ಸಂಘಕ್ಕೆ ತೃಪ್ತಿಯಿಲ್ಲ

(ಮಾನ್ಯ ಶ್ರೀನಿವಾಸ ಶಾಸ್ತ್ರಿಯವರ ಭಾಷಣದಿಂದ)

\+ + + +

ಮ್ಯುನಿಸಿಪಲ್ ಕಮಿಶನರುಗಳೆಂಬ ನವೀನ ಅಧಿಕಾರಿಗಳನ್ನು ನಿಯಮಿಸಿದಂದೇ ನಾನಾ ಬಗೆಯಾಗಿ ನಾನಾ ಕಡೆಯಿಂದ ಕೂಗು ಕೇಳಿಸಿದ್ದಿತು ಕೌನ್ಸಿಲಿನ ಕಾರ್ಯಗಳಿಗೆ ಮಿತಿಹಾಕಿ, ಸರಕಾರವು ಸರ್ವಾಧಿಕಾರಿಗಳನ್ನು ಈ ತನ್ನ ಆಫೀಸರರ ಕೈಗೊಪ್ಪಿಸಿ, ತನ್ನ ಕೆಲಸವನ್ನೆ ಮಾಡಿಸಿಕೊಳ್ಳುತ್ತಿದೆ ಎಂದು ದೂರುವವರಿದ್ದರು ಕಮಿಶನರರಂತಹ ಸಮದರ್ಶಿಗಳೂ ಸರ್ವಜ್ಞರೂ ಸುಸಿಪುಣರೂ ಇನ್ನೆಲ್ಲಿಯೂ ಇಲ್ಲವೆಂದೂ ಇವರ ಸರ್ವಾಧಿಕಾರವನ್ನು ಕೊಂಡಾಡಿ, ಈ ಆಫೀಸರರನ್ನು ಸೃಷ್ಟಿಸಿದ ಬ್ರಹ್ಮನೇ ಬೇರೆ ಎಂಬ ತಿಲ್ಲ ತೋರಿಸಿಕೊಟ್ಟು, ಇವರನ್ನು ಮ್ಯುನಿಸಿಪಲ್ ಗವರ್ನರರನ್ನಾಗಿ ಮಾಡಲಾಯಿತು ಕೌನ್ಸಿಲಿಗೂ ಮನಥೋರಣೆಯ ನೂತನ ಚಟುವಟಿಕೆಯು ಆಫೀಸರುಗಳಿಗೂ ಸರಿಹೋಗದುದು ಅಲ್ಲಲ್ಲಿ ಕಷ್ಟವಾಯಿತು ಎಷ್ಟೋ ಸಲ ಈ ಮಹನೀಯರು ಆಯಾ ಜಿಲ್ಲೆಯ ದೇಶಭಾಷೆ ತಿಳಿದವರೇ ಅಲ್ಲ, ಜನರನ್ನಾಗಲೀ ಅವರ ಅಭಿಪ್ರಾಯವನ್ನಾಗಲೀ ತಾವು ತಿಳಿದುಕೊಳ್ಳಬೇಕು ಎಂಬಷ್ಟು ವಿನಯವುಳ್ಳವರೇ ಅಲ್ಲ ಸರ್ವಾಧಿಕಾರದಿಂದ ಮನಸ್ಸಿ ಕೆಲಸ ಮಾಡುತ್ತಿದ್ದರು ಎಂದು ಕೌನ್ಸಿಲುಗಳಿಗೆ ದೂರು ತಲುಪಿತು ಮಂತ್ರಿಗಳು ತಾವು ಹೂಡಿದ ಮಸೂದೆಯಿಂದಾದ ಕೌನ್ಸಿಲರರು, ಹೊಸ ಯಜ್ಞದಿಂದ ಹುಟ್ಟಿದ ಯಜ್ಞಪುರುಷರು, ನಾಳಿನ ಇಲೆಕ್ಷನಿನ ಹೊತ್ತಿಗೆ ಬೇಕಾದಂತಹ ಮಹತ್ಕಾರ್ಯಗಳನ್ನು ಮಾಡಿ ತೋರಿಸಬಲ್ಲ ಅಗ್ನಿಕುಲದವರು ಎಂದೇ ಇವರ ತಲೆಯ ಜೂ ಬಾಡದಂತೆ, ಕೂದಲು ನರೆಯದಂತೆ, ಇವರು ಹೇಳಿದುದನ್ನೆ ತಾವೂ ಕಪ್ಪು ಕೆಂಪು ಗೆರೆಗಳಿಂದ ಇನ್ನಷ್ಟು ದಪ್ಪನಾಗಿ ಕಾಣಿಸುತ್ತ ಬಂದರು ಆದರೆ, ಎಸೆಂಬ್ಲಿ ಚುನಾವಣೆ ನಡೆಯಿತು ತಾತ್ಕಾಲಿಕವಾಗಿ ಎಸೆಂಬ್ಲಿಗೇ ಅಲ್ಲಿಗೆ ಕೌನ್ಸಿಲು ಚುನಾವಣೆಗಳೂ ನಡೆದುವು ಫಲವುತ್ತಮವಾಗಲಿಲ್ಲ. ಜನತೆಗೂ ತಮ್ಮ ಕೃತಿಗಳಿಗೂ ವಾತ್ಸಲ್ಯದ ಗಂಟಿಲ್ಲವೆಂದು ಮಂತ್ರಿಗಳು ತಿಳಿಯುವ ಹಾಗಾಯಿತು ಈ ವಾತ್ಸಲ್ಯವು ಕುಂದುವುದಕ್ಕೆ ಈ ಕಮಿಶನರುಗಳೇ ಸ್ವಲ್ಪವಾದರೂ ಕಾರಣರು ಇತರ ಸರ್ವಾಧಿಕಾರದಿಂದ ಸರ್ವಬಾಧೆಗಳೂ ಮೊಳೆಯತೊಡಗಬಹುದೆಂದು ಮಂತ್ರಿಗಳು ಸ್ವಲ್ಪ ಕಣ್ತೆರೆದರು—ಇದೊಂದೇ ವರದಲ್ಲಿ ಆದ ಕೆಲವು ವಿಚಿತ್ರಗಳಿವೆ. ಇವರಿಗೆ ೮೦ ರೂಪಾಯಿವರೆಗಿನ ಸಂಬಳದ ನೌಕರರನ್ನು ನೇಮಿಸುವ ಅಧಿಕಾರ ಕೊಡಲಾಗಿದ್ದಿತು ಈಗ ಮಂತ್ರಿಗಳೇ ಒಂದು ಮಸೂದೆ ತಂದು, ಆ ಅಧಿಕಾರವನ್ನು ೫೦ಕ್ಕೆ ಇಳಿಸಿದರು ಅದೂ ಸಹ ಆ ಮಸೂದೆಯನ್ನು ಮೂರೂಸಲ ಓದಿ ಚರ್ಚಿಸಿ ತೀರ್ಮಾನವಾಡಿ ಮಂಜೂರಾತಿ ನಡೆಯುದಕ್ಕೆ ಒಂದೇ ದಿನದೊಳಗೆ ಇಷ್ಟವಸರವಾಯಿತೇಕೆ? ಹಲವು ಮ್ಯುನಿಸಿಪಾಲಿಟಿಗಳಲ್ಲಿ ಈ ಸರ್ವಾಧಿಕಾರಿಗಳು ವಬ್ಬಿಸಿರುವ ಕಿರುಕುಳಗಳು ಸ್ವಲ್ಪವಲ್ಲ ಒಂದು ಕಡೆ ಕೆಲಸದಲ್ಲಿದ್ದ ೭೯ ಮಂದಿಯನ್ನು ನಿವೃತ್ತಪಡಿಸಿ ೧೧೧ ಜನರನ್ನು ನೇಮಕಮಾಡಿದರು, ಒಂದು ಕಡೆ ಒಬ್ಬ ಗುಮಾಸ್ತನು, ಆಕ್ಟಿಂಗ್ ಕೆಲಸಕ್ಕೆ ಬೇಕಾಗಿರಲು, ಮುನಿಸಿಪಾಲಿಟಿಯ ಊರಲ್ಲಿದ್ದ ಉಮೇದ್ವಾರರನ್ನು ಹಾಗೇ ಬಿಟ್ಟು, ತನ್ನ ಊರಿಂದ ಒಬ್ಬರನ್ನು ಕರೆಸಿ ನೇಮಕಮಾಡಿದರು ಆ ಜಾತಿಯವರು ಊರ ಉಮೇದ್ವಾರರಲ್ಲಿದ್ದಿಲ್ಲವಂತೆ, ಜಾತಿವಾರಾಗಿ ನೇಮಿಸಲೇಬೇಕಾಗಿ ಸರಕಾರದ ಅಪ್ಪಣೆ ಇದ್ದಿಲ್ಲವಾದರೂ ತಾವೇ ಹಾಗೆ ಮಾಡಿದ್ದೆಂದು ಕಮಿಶನರ ಉದಾಹರಣೆ ಉಪಾಧ್ಯಾಯರ ತಲಬಿನ ವಿಚಾರದಲ್ಲಿ ಕೌನ್ಸಿಲು ನಿರ್ಣಯಿಸಿದುದನ್ನು ಇನ್ನೂ ಮಾಡಿಲ್ಲವೇಕೆಂದರೆ,—ಸಂಶಯವಿದೆ, ಅದರ ನಿವಾರಣೆಗಾಗಿ ಸರಕಾರಕ್ಕೆ ಬರೆದುಕೊಂಡಿದ್ದೇನೆ ಎಂದರು ಇಂತಹ ಚಿಕ್ಕ ಕಿರುಕುಳಗಳ ಮೂಲಕ ಈ ಮಹಾಧಿಕಾರಿಗಳು, ಜಾಗರೂಕತೆಯಿಂದ ಜನಪ್ರೀತಿಗೆ ಪಾತ್ರರಾಗುವ ಬದಲು 'ಸ್ವಾಧಿಕಾರಾತ್ ಪ್ರಮತ್ತಃ' ಆಗಿದ್ದಾರೆಯೋ ಎಂಬ ಪ್ರಶ್ನೆಯೂ ಕೌನ್ಸಿಲಿನಲ್ಲಿ ಕೇಳಲಾಗಿದ್ದಿತು, ಆಕ್ಟಪ್ರಕಾರ ಇವರನ್ನು ನೇಮಕ ಮಾಡಿದವರೇ ಉತ್ತರಕೊಡಬೇಕಾಗಿ ಬರಲು,— "ಉಹೂಂ ಹಾಗೇನೂ ಅಲ್ಲವಯ್ಯ" ಎಂದು ಮಾತುಬಂದಿತು ಅರ್ಥ ಹೇಗೋ ಹಾಗೆ

---

## ೩೦ ವರ್ಷಗಳ ತನಕ ಉದರ ವೇದನೆಯಿಂದ ಬಾಧೆ!

ವಿಪರೀತವಾದ ಅಜೀರ್ಣದಿಂದಲೂ ಉದರ ಬಾಧೆಯಿಂದಲೂ ಪೀಡಿಸಲ್ಪಡುವವರ ಅನುಲಕ್ಷ್ಯಕ್ಕರ್ಹವಾದ ಒಂದು ವಿಷಯವಿದೆ ಹಲವು ವರ್ಷಗಳಿಂದಲೇ ನೋವಿನಿಂದ ಬಾಧಿಸಲ್ಪಡುತ್ತಿರುವಿರಾದರೆ ಫಲವಿಲ್ಲದೆ ಅನೇಕ ಔಷಧಿಗಳನ್ನು ಪ್ರಯೋಗಿಸಿ ಬೇಸರಿಸಿರುವಿರಾದರೆ ನೀವು ಪಿ. M ರವರು ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸೇವಿಸಿದಂತೆ ಸೇವಿಸಿದರೆ ನೀವು ಇನ್ನು ಗುಣಹೊಂದುವಿರಿ

ಅವರೇ ಅವರೇ ತನ್ನ ಕಥೆಯನ್ನು ಹೇಳಿ ಪತ್ರವಿಲ್ಲಿದೆ—"ಮೂವತ್ತು ವರ್ಷಗಳಿಂದ ನಾನು ಉದರ ಬಾಧೆಯಿಂದ ಪೀಡಿಸಲ್ಪಡುತ್ತಿದ್ದೆ ನನ್ನನ್ನು ಹಲವು ಸಲ ಪರೀಕ್ಷಿಸಲಾಯಿತು. ಹಲವು ಔಷಧಿಗಳನ್ನು ಪರಿಣಾಮವೇನೂ ಇಲ್ಲದೆ ಸೇವಿಸಿದೆ ಆರು ತಿಂಗಳ ತನಕ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸೇವಿಸಿದ ನಂತರ—ನಾನು ನಿಜವಾಗಿ ಹೇಳುತ್ತೇನೆ—ನನಗೆ ಇವರ ಬಾಧೆಯೇ ಇಲ್ಲ—ಅಲ್ಲದೆ ಈಗ ಈ ಪೌಡರನ್ನು ಸೇವಿಸುವುದೂ ಇಲ್ಲ ಈ ವಿಷಯವನ್ನು ಪ್ರತಿಜ್ಞಾಬದ್ಧನಾಗಿ ಪುನಃ ಪುನಃ ಹೇಳಲೂ ನನ್ನ ಅಡ್ಡಿಯಿಲ್ಲ

ಈ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ ಇಷ್ಟು ಬೇಗ ಶೀಘ್ರವಾಗಿ ಗುಣವನ್ನು ಕೊಡುವುದಾದರೆ ಅದನ್ನುಪಯೋಗಿಸಿ ಪರೀಕ್ಷಿಸದಿರಬಾರದು !

ಆದರೆ ಕೆಲವು ಆಣೆಗಳ ಲಾಭಕ್ಕಾಗಿ ಕೀಳು ದರ್ಜೆಯ ವಸ್ತುವನ್ನು ಪಡೆದು ಅಸಂತೃಪ್ತರಾಗಬೇಡಿ. ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ. ಸೀಲು ರಕ್ಷಾಪತ್ರ ಮತ್ತು ಬಿಲ್ಲೆಗಳ ಮೇಲೆ

Alex. C. Maclean

ಎಂಬ ಸಹಿಯೂ ಮುದ್ರೆ ಬಿಲ್ಲೆ ಮತ್ತು ಚೀಟಿಗಳ ಮೇಲಿದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವದೆ ಕಷ್ಟವಿರುವುದಾದರೆ—

**ಮಾರ್ಟಿನ್ಸ್ ಎಂಡ್ ಹೆರಿಸ್ ಲಿಮಿಟೆಡ್,**

೧೫ ಸಂಕ ರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—

ಇಲ್ಲಿಗೆ ಬರೆಯಿರಿ.

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ

**N.I.P.**

ಅತ್ಯುತ್ಕೃಷ್ಟವಾದ

ಪೆಟ್ರೋಲ್

ಚಿಮಿಣಿ ಎಣ್ಣೆ

ಡೀಸೆಲ್ ಎಣ್ಣೆ

ಮುಂದಿನ ವಿವರಗಳಿಗೆ ಈ ಪತ್ರಿಕೆಯ ಕಲಮುಗಳಲ್ಲಿ ನಿರೀಕ್ಷಿಸಿರಿ.

---

## ಕೂಸುಗಳನ್ನು ತಿನ್ನುವ ಮೃಗ. ಹಾಸಿಗೆಯಲ್ಲಿದ್ದ ಕೂಸುಗಳು ಕಾಣೆ!

ಮಧುಬಾನಿ, ಆಗೋಸ್ಟು ೩

ಬನಿಪಟ್ಟಿಯಲ್ಲಿ ನಾಯಿಯೊಳಿಸಾದಿಯಲ್ಲಿರುವ ಕೆಲವು ಮೃಗಗಳು ಕೂಸುಗಳನ್ನು ನಿದ್ರಿಸಿದ ಸ್ಥಳದಿಂದಲೆ ಕದ್ದೊಯ್ದು ತಿಂದಿವೆ ಎಂಬುದಾಗಿ ತಿಳಿದುಬಂದಿದೆ ಈ ಮೃಗಗಳು ಹಗಲುಹೊತ್ತಿನಲ್ಲಿ ಸಂಚರಿಸದೆ, ನಡುರಾತ್ರಿಯಲ್ಲಿ ಊರನ್ನು ನುಗ್ಗಿ ಹಾಸಿಗೆಯಲ್ಲಿ ಮಲಗಿದ್ದ ಕೂಸುಗಳನ್ನು ಸದ್ದಾಗದಂತೆ ಪ್ರಥಮತಃ ಕೊಂದು ನಂತರ ಯಾರೂ ಇಲ್ಲದ ಸ್ಥಳಕ್ಕೊಯ್ದು ಭಕ್ಷಿಸುತ್ತವೆ ಮರು ದಿನ ಹಾಸಿಗೆಯಲ್ಲಿ ಮಗು ಇಲ್ಲದೆಂದು ಹುಡುಕಲು, ಅದರ ಎಲುಬುಗಳು ಮಾತ್ರ ಮನೆಯಿಂದ ಸ್ವಲ್ಪ ದೂರ ಪೊದೆಯಲ್ಲಿಯೋ ಅಥವಾ ಮರದ ಕೆಳಗೋ ಕಾಣಿಸಿಗುತ್ತವೆ ಈ ಜಂತುಗಳನ್ನು ನಾಶಗೊಳಿಸಲು ಪ್ರಯತ್ನಿಸುತ್ತಲಿದ್ದಾರೆ, ಆದರೆ ಇಷ್ಟರ ವರೆಗೆ ಒಂದನ್ನೂ ಕೊಲ್ಲಲಾಗಲಿಲ್ಲ.

---

## ಬೌದ್ಧ ತರುಣಿಯರ ದೀನಾವಸ್ಥೆ ಮುಸ್ಲಿಮರ ಪೈಶಾಚಿಕ ಕೃತ್ಯ!

ದಿಬ್ರುಗರ್ ಆಗೋಸ್ಟು ೧.

ಸಾಂಗ್ಯೆ ಪರ್ವತದ ಬಳಿ ವಾಸಿಸುತ್ತಿದ್ದ ಬೌದ್ಧ ತರುಣಿಯರು ಸಾಮಾನುಗಳನ್ನು ಮಾರಾಟ ಮಾಡಲೋಸುಗ, ಕಳೆದ ಮೇ ೨೪ನೇ ದಿನ ದಿಡೊ ಎಂಬಲ್ಲಿಗೆ ಬಂದರು. ಅಲ್ಲಿ ರಾಮ್ಜೀ ಲಾಲಿನಲ್ಲಿ ಸಾಮಾನು ಖರೀದಿ ಮಾಡುವಾಗ, ಟುನ್ಸುಕಿಯಾದಲ್ಲಿ ರಾಜನ ರಜತೋತ್ಸವದ ಬಗ್ಗೆ ಹಲವು ವಿನೋದಗಳು ಅಭಿನಯಿಸಲ್ಪಡುವುವು ಎಂಬುದಾಗಿ ಕೇಳಿ ಅಲ್ಲಿಗೆ ಹೋಗಲು ಅಪೇಕ್ಷಿಸಿದರು ರಾಮ್ಜೀ ಲಾಲನು ಅಲ್ಲಿಗೆ ಹೋಗುವವನಾದುದರಿಂದ ಅವನೊಡನೆಯೇ ತೆರಳಿದರು ಆದರೆ ಟಿನ್ಸುಕಿಯಾವನ್ನು ಮುಟ್ಟಿದಾಕ್ಷಣ ರಾಮ್ಜೀಯು ಅವರಿಂದ ತಪ್ಪಿಸಿಕೊಂಡದ್ದರಿಂದ ಅಪರಿಚಿತ ವ್ಯಕ್ತಿಗಳಾದ ಅವರು ಬಹಳ ಗೊಂದಲದಲ್ಲಿದ್ದರು. ಅಬ್ದುಲ್ ಖಾದರ್ ಎಂಬ ಮುಸ್ಲಿಂ ಯುವಕನು ಇದನ್ನು ತಿಳಿದು, ಅವರನ್ನು ಒಂದು ಹೊಟೇಲಿಗೆ ಕರಕೊಂಡೊಯ್ದು ತುಂಬಾ ಸಾರಾಯಿಯನ್ನು ಕುಡಿಸಿದ ನಂತರ ತನ್ನ ಮಿತ್ರನಾದ ನಿಜಯಾ ಶೇಕ್ ಎಂಬವನ ಮನೆಗೆ ಕರಕೊಂಡು ಹೋದನು. ಇಬ್ಬರೂ ಆ ತರುಣಿಯರ ಸತೀತ್ವವನ್ನು ಬಲಾತ್ಕಾರ ಪೂರ್ವಕ ನಷ್ಟಗೊಳಿಸಿ ಮಜಾ ಮಾಡಿದರು. ಅಷ್ಟೇ ಅಲ್ಲದೆ ಅವರನ್ನು ರಕ್ಷಿಸಿ ಮೇ ೨೯ರ ವರೆಗೆ ಬಂದೂರಿಂದ ಇನ್ನೊಂದೂರಿಗೆ ಅವರನ್ನೆಳೆದೊಯ್ದು ಭಯಂಕರ ರೀತಿಯಲ್ಲಿ ಅವರನ್ನು ಹಿಂಸಿಸಿದರು. ಕೊನೆಗೆ ಮೇ ೨೯ನೇ ದಿನ ಶ್ರೀ ಚಂದ್ರನಾಥನೆಂಬವನು ಇದನ್ನು ತಿಳಿದು ಅವರನ್ನು ರಕ್ಷಿಸಿದನು. ಮುಸ್ಲಿಮರಿಬ್ಬರಿಗೂ ೯ ವರುಷಗಳ ಕಠಿಣ ಶಿಕ್ಷೆಯಾಗಿದೆ.

# ಗಾಂಧಿಜೀಯುವರ ಕೊರಳಲ್ಲಿ ಸರ್ಪ!

## ಪಾಂಚಲೆಗಾಂವಕರ ಮಹಾರಾಜರು ಮಹಾತ್ಮಾಜಿಯುವರನ್ನು ಕಂಡರು!

ವಾರ್ಧಾ, ಆಗೋಸ್ತು ೬.

ನಿನ್ನೆ ನಾಗರಪಂಚಮಿಯ ದಿನ ಸರ್ಪಜ್ಯೋತಿ ಶಾಸ್ತ್ರಜ್ಞರಾದ ಶ್ರೀ। ಪಾಂಚಲೀ ಗಾಂವಕರ ಮಹಾರಾಜ ಇವರು ತಮ್ಮೊಂದಿಗೆ ಕೆಲವು ಸರ್ಪಗಳನ್ನು ತೆಗೆದುಕೊಂಡು ಮಹಾತ್ಮಾ ಗಾಂಧಿಯವರ ಭೇಟಿಗಾಗಿ ಆಶ್ರಮಕ್ಕೆ ಬಂದಿದ್ದರು. ಅವರು ತಮ್ಮ ಎಲ್ಲ ಇತಿಹಾಸವನ್ನು ಮಹಾತ್ಮಾಜಿಯವರಿಗೆ ನಿವೇದಿಸಿದರು. ಎಲ್ಲ ಜಾತಿಯ ಸರ್ಪದ ಬಗ್ಗೆ ಅಭ್ಯಾಸಮಾಡಬೇಕೆಂಬಿಚ್ಛೆಯು ನಾಗರಪಂಚಮಿಯ ದಿವಸವೇ ನನ್ನಲ್ಲಿ ಉತ್ಪನ್ನವಾಯಿತು, ಮತ್ತು ನಾನು ಮಣ್ಣಿನ ಹಾವನ್ನು ಪೂಜಿಸುವುದಕ್ಕಿಂತ ನಿಜವಾದ ಸರ್ಪವನ್ನೇ ಪೂಜಿಸಲಿಕ್ಕೆ ಪ್ರಯತ್ನಿಸಿದೆನು ಎಲ್ಲಾ ಸರ್ಪಗಳಲ್ಲಿ ಕೇವಲ ೪ ಪ್ರಕಾರದ ವಿಷಹಾರಿ ಹಾವುಗಳಿರುವುವೆಂದು ಮಹಾರಾಜರ ಅಂಬೋಣವಿರುವುದು ಹಾವಿನ ದವಡೆಯಲ್ಲಿರುವ ವಿಷದ ಚೀಲ ಮತ್ತು ಹಲ್ಲುಗಳನ್ನು ಅವರು ಗಾಂಧಿಜಿಯವರಿಗೆ ತೋರಿಸಿದರು. ಹಾವನ್ನು ಕಡಿಸಿಕೊಳ್ಳಲು ಮಹಾರಾಜರು ಜಮ್ನಾಲಾಲ ಬಜಾಜರ ಅಣ್ಣನ ಮಗನಿಗೆ ಹೇಳಿದರು ಅವರು ಅದಕ್ಕೆ ಒಪ್ಪಿದರು ಆದರೆ ಸರ್ಪವು ಅವರನ್ನು ಕಡಿಯಲು ನಿರಾಕರಿಸಿತು

ಈ ವೇಳೆಯಲ್ಲಿ ಆಶ್ರಮದೊಳಗೆ ಸರದಾರ ವಲ್ಲಭಭಾಯಿ ಪಟೇಲ್, ಶ್ರೀ। ಶಂಕರಲಾಲ ಬ್ಯಾಂಕರ್, ಪಟ್ಟಾಭಿ ಸೀತಾರಾಮಯ್ಯ ಮೊದಲಾದ ಬಹುಜನ ಮುಂದಾಳುಗಳು ಹಾಜರಿದ್ದರು. ಕೊನೆಗೆ ಶ್ರೀ। ಪಾಂಚಲೀ ಗಾಂವಕರ ಇವರು ಮಹಾತ್ಮಾಜಿಯವರಿಗೆ ಒಂದು ಸರ್ಪವನ್ನು ಸ್ವತಃ ಮೈಮೇಲೆ ಹಾಕಿಕೊಳ್ಳಬೇಕೆಂದು ವಿನಂತಿಮಾಡಿಕೊಂಡರು. ಮಹಾತ್ಮರ ಸುತ್ತುಮುತ್ತಲೂ ಕುಳಿತ ಜನರು ಇದಕ್ಕೆ ಸೌಮ್ಯವಾಗಿ ವಿರೋಧಿಸಿದರು ಆದರೆ ಗಾಂಧಿಜಿಯವರು ಇದಕ್ಕೆ ಅನುಮೋದಿಸಿದರು

ಸುಮಾರು ೬-೭ ಅಡಿ ಉದ್ದ ಮತ್ತು ೫-೬ ಅಂಗುಲ ಅಗಲವಾದ ಒಂದು ಪಟ್ಟೆಗಳುಳ್ಳ ಸರ್ಪವನ್ನು ಗಾಂಧಿಜಿಯವರ ಕೊರಳಲ್ಲಿ ೨-೩ ಮಿನಿಟುಗಳ ವರೆಗೆ ಆಡುತ್ತಿದ್ದಿತು ಆ ವೇಳೆಯಲ್ಲಿ ಮಹಾತ್ಮಾಜಿಯವರ ಮುಖವು ಬಹಳ ಮೋಹಕವಾಗಿ ಕಾಣಿಸುತ್ತಿದ್ದಿತು ಕೊರಳಿನಿಂದ ಹಾವನ್ನು ತೆಗೆಯುವಾಗ ಅದು ತನ್ನ ಬಾಲದ ತುದಿಯಿಂದ ಸ್ವಲ್ಪ ಜೋರಾಗಿ ಹೊಡೆಯಿತೆಂದು ಮಹಾತ್ಮಾಜಿಯವರು ಹೇಳಿದರು ಶ್ರೀ ಪಾಂಚಲೆ ಗಾಂವಕರರ ಈ ಜ್ಞಾನದ ಬಗ್ಗೆ ಗಾಂಧಿಜಿಯವರು ಸಮಾಧಾನವನ್ನು ವ್ಯಕ್ತಗೊಳಿಸಿದರು

ಮಹಾತ್ಮಾಜಿಯವರ ಮೇಲೆ ಹಾವು ಆಡುತ್ತಿರುವಾಗ ಅವರ ೨-೩ ಫೋಟೋಗಳನ್ನು ತೆಗೆದಿರುವರು

## ನೋಟೀಸು.

### ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R I A 268/'35 (in O P 76/1928)

ನರಸಿಂಹ ಶ್ಯಾನುಭಾಗ (ಮ್ಯಾನರ) ಇವನ ಬಗ್ಗೆ ಗಾರ್ಡಿಯನ್ ತಾಯಿ ಅಪ್ಪಿ ಬ್ಯಾ, ಸಿಟ್ಟೆ ಮಂಜುನಾಥ ಶ್ಯಾನುಭಾಗರ ವಿಧವೆ, ಕಾರ್ಕಳ ತಾಲೂಕು ಸಿಟ್ಟೆ ಗ್ರಾಮದಲ್ಲಿರುವವಳು-ಅರ್ಜಿದಾರ.

ಮತ್ತು

ವೆಂಕಟೇಶ ಶ್ಯಾನುಭಾಗ ಸಹಾ ೫ ಜನರು-ರೆಸ್ಪಾಂಡೆಂಟರು

4ನೇ ಎದ್ರಿ ರಾಮ ಶ್ಯಾನುಭಾಗ, ಸಿಟ್ಟೆ ಮಂಜುನಾಥ ಶ್ಯಾನುಭಾಗರ ತಮ್ಮ ಹಾಲಿ ಕಾರ್ಕಳ ತಾಲೂಕು ಸಾಣೂರು ಗ್ರಾಮದಲ್ಲಿರುವವ

ಈ ವ್ಯವಹರಣೆಯ ಮ್ಯಾನರ ಅರ್ಜಿದಾರನ ತಂದೆ ಮೃತ ಸಿಟ್ಟೆ ಮಂಜುನಾಥ ಶ್ಯಾನುಭಾಗರ ಸೊತ್ತುಗಳ ಬಗ್ಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನ ಗಾರ್ಡಿಯಾನಳು ಮಾಡಿದ O P. 76/1928ನೇ ವ್ಯವಹರಣೆಯಲ್ಲಿ ಜ್ಯಾಮೀನು ಕೊಡಬೇಕಾಗಿ ತಾ. 11-12-1928ರಲ್ಲು ಆದ ಹುಕುಂ ಪ್ರಕಾರ ಸದ್ರಿ ಮ್ಯಾನರನ ಗಾರ್ಡಿಯಾನಳು ಜ್ಯಾಮೀನು ಕರಾರಿನ ಪ್ರಕಾರ ಹಾಜರುಪಡಿಸಿ R I A 268/1935ನೇ ಅರ್ಜಿ ಕೊಟ್ಟಿರುತ್ತಾಳೆ. ಸದ್ರಿ ಅರ್ಜಿಯು ತಾ 5-9-'35ಕ್ಕೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ಅರ್ಜಿಯ ಕುರಿತು ವ ಪ್ರಕಾರ ಬೋಂದಿನ ಕುರಿತು ಆಕ್ಷೇಪಗಳಿದ್ದರೆ ನೀವು ಮೇಲ್ಕಾಣಿಸಿದ ತಾರೀಕು 5-9-'35ನೇ ಪೂರ್ವಾಹ್ನ ಗಂಟೆ 10ಕ್ಕೆ ಈ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಏಕಪಕ್ಷ ಮಾಡಿ ಈ ವ್ಯವಹರಣೆಯನ್ನು ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

ಕೆ. ಮಹಾಬಲ ಹೆಗ್ಡೆ,

*Pleader for Petitioner*

## TO LET.

On hire the Building formerly belonging to the Hindustan Cinema Co., Ltd along with furniture and fittings. The building is situated in the heart of the Mangalore Town and is convenient for giving Cinema shows, dramatic and such other performances

Those desirous of taking the same on lease are requested to apply to the Board of Trustees Sri Venkataramana Temple Mangalore on or before 7—9—35 stating their terms

The Temple will not consider any application for lease which does not provide for the deposit of Rs 500 in advance which will be adjusted towards rent due at the end of the lease period The Temple also reserves the right to reject any application without stating any reasons

**Manager,**

*S V Temple.*

## ಪೆಸೆಂಜರ ಟ್ರೈನು ಢಿಕ್ಕಿಹೊಡೆಯಿತು

### ನೂರು ಮಂದಿಗೆ ಗಾಯವಾಗಿದೆ

ಬಾರ್ಸೆಲೋನಿಯಾ ಜುಲೈ ೨೯

ಸೇನ್ ವಿನ್ಸೆಂಟ್ಸ್ ದಿ ಕೆಲ್ಸಿಸ್ ಎಂಬಲ್ಲಿ ಎರಡು ಪೆಸೆಂಜರು ಟ್ರೈನು ಒಂದಕ್ಕೊಂದು ಢಿಕ್ಕಿ ಬಡೆದು ಸಾಧಾರಣ ನೂರು ಮಂದಿಗೆ ಕಠಿಣ ಪೆಟ್ಟಾಗಿದೆ

# ಶ್ರೀಮಾನ್ ವೆಂಕಟರಾಯರು

## ಅಪಮೃತ್ಯುವಿಗೊಳಗಾದರು!

### ಕನ್ನಡ ಭಾಷಾ ಸೇವಕರಲ್ಲೊಬ್ಬರು ಕಣ್ಮರೆಯಾದರು

ಮದ್ರಾಸು ಯುನಿವರ್ಸಿಟಿಯ ಕೆನರೀಸ್ ರಿಸರ್ಚ್ ಡಿಪಾರ್ಟ್‌ಮೆಂಟಿನ ಮುಖ್ಯಾಧಿಕಾರಿಗಳಾದ ಶ್ರೀ। ಅಲೆಮಾನ್ ವೆಂಕಟರಾಯರು ಶುಕ್ರವಾರ ದಿನ ಮದ್ರಾಸಿನಲ್ಲಿ ಮೋಟರ್ ಅಪಘಡಕ್ಕೆ ತುತ್ತಾದರು.

ಶ್ರೀಯುತ ವೆಂಕಟರಾಯರು ಶುಕ್ರವಾರ ದಿನ ಪೂರ್ವಾಹ್ನ ರೋಯಪೇಟಾಕ್ಕೆಂದು ಹೊರಟವರು ತಪ್ಪಿ ಕಸ್ಟಮ್ಸ್ ಹೌಸ್ ಕಾರನ್ನು ಹತ್ತಿದರು ಪಿ- ಓರ್ ಎಂಡ್ ಸನ್ಸ್ ಕಂಪೆನಿ ಯೆದುರು ಅವರ ಕಾರು ನಿಲ್ಲಿಸಲ್ಪಟ್ಟಾಗ ಅವರು ಅದರಿಂದ ಕೆಳಗಿಳಿದು ಟ್ರೇಮ್ ಮಾರ್ಗಕ್ಕೆ ಕಾಲಿಡಲು ಹಿಂದಿನಿಂದೊಂದು ಮೋಟರು ಬಂದು ಅವರಿಗೆ ಢಿಕ್ಕಿಹೊಡೆಯಿತು ಒಡನೆ ಅವರು ಎದುರಿನಲ್ಲಿ ನಿಂತಿದ್ದ ಮತ್ತೊಂದು ಟ್ರೇಮ್‌ಗಾಡಿಗೆ ತಾಗಿ ಕಂಬಿಯ ಮೇಲೆ ಸ್ಮೃತಿ ತಪ್ಪಿ ಬಿದ್ದರು

ಅವರನ್ನು ಅದೇ ಕಾರಿನಲ್ಲಿ ಹಾಕಿ ಜನರಲ್ ಆಸ್ಪತ್ರೆಗೆ ಕೊಂಡೊಯ್ಯಲಾಯಿತು ಅವರಿಗೆ ಬೋಧವು ಬರಲೇ ಇಲ್ಲ ಸಂಕಟವನ್ನು ತಡೆಯಲಾರದೆ ಆದಿತ್ಯವಾರ ಸಂಜೆ ೫ ಗಂಟೆಗೆ ಅವರು ಕಾಲವಾದರು

೬ ಮಂದಿ ಸಾಕ್ಷಿಗಾರರನ್ನು ವಿಚಾರಿಸಲಾಯಿತು ಶ್ರೀ। ವೆಂಕಟರಾಯರ ಸಹೋದರರಾದ ಡಾ। ಎ ಶಂಕರರಾಯರು ತಾನು ತನ್ನ ಅಣ್ಣನ ಕಡೆಯಿಂದ ಬಂದ ತಂತಿಯನ್ನು ಕಂಡು ತ್ರಿಚಿನಾಪಳ್ಳಿಯಿಂದ ಮದ್ರಾಸಿಗೆ ಬಂದೆನೆಂದರು M C P 7800 ನಂಬ್ರಿನ ಕಾರಿನ ಡ್ರೈವರ್ ಜಮಾಲುದ್ದೀನ್ ಸಾಹೇಬನನ್ನು ವಿಚಾರಿಸಲಾಗಿ ಶ್ರೀ। ವೆಂಕಟರಾಯರು ಹಿಂದು ಮುಂದು ನೋಡದೆ ಟ್ರಾಮ್ ಮಾರ್ಗಕ್ಕೆ ಹಾರಿದ/ಧುಮುಕಿದರು ಈ ಅನಾಹುತವಾಯಿತೆಂದು. ತೀರ್ಮಾನಿಸಲಾಯಿತು. ಕಾರಿನವನ ತಪ್ಪಿಲ್ಲವೆಂದು ನಿರ್ಧರಿಸಲಾಯಿತು.

ಶ್ರೀ। ವೆಂಕಟರಾಯರು ವಿಧುರರಾಗಿದ್ದರು ಅವರಿಗೆ ೫ ಜನ ಮಕ್ಕಳಿರುವರು ದುಃಖ ಸೂಚನಾರ್ಥವಾಗಿ ಯುನಿವರ್ಸಿಟಿ ರಿಸರ್ಚ್ ಡಿಪಾರ್ಟ್‌ಮೆಂಟನ್ನು ಸೋಮವಾರ ದಿನ ಮುಚ್ಚಲಾಗಿದ್ದಿತು

### ಶ್ರೀಮಾನ್ ಅಲೆಮಾನ್ ವೆಂಕಟರಾಯರು, ಬಿ ಎ ಎಲ್ ಟಿ

ನಮ್ಮೂರಲ್ಲಿನ ಸುಪ್ರಸಿದ್ಧ ಕನ್ನಡಿಗ ಮನೆತನಗಳೊಂದಕ್ಕೆ ಸೇರಿರುವ ಈ ವಿದ್ವಾಂಸರು ಮದ್ರಾಸಿನ ವಿಶ್ವವಿದ್ಯಾಲಯದ ಕನ್ನಡ ಸಂಶೋಧಕ ಇಲಾಖೆಯ ಮುಖಂಡರಾಗಿದ್ದರು ಈ ಜಿಲ್ಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಕೆಲ ಕಾಲ ಸ್ಯೆಂಟ್ ಎಲೋಶಿಯುಸ್ ಕೋಲೇಜಿನಲ್ಲೂ ಬಳ್ಳಾರಿ ಜಿಲ್ಲೆಯಲ್ಲೂ ವಿದ್ಯಾ ಇಲಾಖೆಯಲ್ಲಿ ಕೆಲಸನೋಡಿ, ಅಲ್ಲಿಂದ ಮದ್ರಾಸು ಯುನಿವರ್ಸಿಟಿಯು ದ್ರಾವಿಡ ಭಾಷೆಗಳಲ್ಲಿ ಸಂಶೋಧನ ಶಾಲೆಗಳನ್ನು ಏರ್ಪಡಿಸಿದೊಡನೆ ಇವರು ಆ ಶಾಖೆಯ ಅಧ್ಯಕ್ಷರಾಗಿ ನೇಮಕ ಹೊಂದಿ, ಭಾಷಾಸಾಹಿತ್ಯ ಪರೀಕ್ಷಾ ಕಮಿಟಿಗಳಲ್ಲಿ ಸದಸ್ಯರಾಗಿಯೂ ಪರೀಕ್ಷಕರಾಗಿಯೂ ಇರುತ್ತಿದ್ದರು ಇವರು ಮೊದಲೇ 'ಚಂದ್ರಗುಪ್ತ ಚಕ್ರವರ್ತಿ' ಎಂಬೊಂದು ಗ್ರಂಥವನ್ನು ಬರೆದಿದ್ದು ಶಾರದ ಛಾಪಖಾನೆಯಲ್ಲಿ ಮುದ್ರಿಸಿದ್ದರು ತೆಲುಗು, ತಮಿಳು ಮಲೆಯಾಳಗಳಲ್ಲಿ ಹೇಗೋ ಹಾಗೆಯೆ ಸಂಸ್ಕೃತದಲ್ಲೂ ಪಾಂಡಿತ್ಯವನ್ನು ಪಡೆದಿದ್ದರು ಶಾಂತಿ ಪುರಾಣ-ಕವಿರಾಜ ಮಾರ್ಗಗಳೇ ಅಲ್ಲದೆ ಇನ್ನೆಷ್ಟೋ ಉದ್ಗ್ರಂಥಗಳ ಮಾತೃಕೆಗಳನ್ನು ತಿದ್ದಿ, ಕೆಲವನ್ನು ವಿಶ್ವವಿದ್ಯಾಲಯದ ಪ್ರಾಚ್ಯ ಕೋಶ ಪುಸ್ತಕಮಾಲೆಯಲ್ಲಿ ಪ್ರಕಟಿಸಿ, ಸಾಹಿತ್ಯಕ್ಕೆ ಸೇವೆಯನ್ನೂ ಉಪಕಾರವನ್ನೂ ಸಲ್ಲಿಸಿದ್ದರು. ಕಳೆದ ಶುಕ್ರವಾರ ಸುಮಾರು ೧೧॥ ಘಂಟೆಗೆ ಇವರು ಮದ್ರಾಸಿನ ಓರ್ ಎಂಡ್ ಸನ್ಸರವರ ಕಟ್ಟಡದ ಇದಿರಲ್ಲಿ ಒಂದು ಟ್ರಾಂ ಗಾಡಿಯನ್ನು ಹತ್ತುವ ಯತ್ನದಲ್ಲಿದ್ದಾಗ, ಒಂದು ಮೋಟಾರು ಇವರನ್ನು ಕೆಡೆಬೀಳಿಸಿ, ತಲೆಯ ಮೇಲಿಂದ ಹಾದುಹೋಯಿತು ಇವರ ಸೋದರರಾದ ಡಾ। ಎ ಶಂಕರರಾಯರು ತ್ರಿಚಿನಾಪಳ್ಳಿಯಿಂದ ಕೂಡಲೆ ಅಲ್ಲಿಗೆ ಬಂದು, ಜನರಲ್ ಆಸ್ಪತ್ರೆಯಲ್ಲಿ ನೋವಿನ ಸ್ಥಿತಿಯಲ್ಲಿದ್ದ ವೆಂಕಟರಾಯರನ್ನು ಕಂಡರು ರವಿವಾರ ಸಾಯಂಕಾಲ ವೆಂಕಟರಾಯರು ಸ್ವರ್ಗಸ್ಥರಾದರು ವೆಂಕಟರಾಯರು ವಿಧುರರು, ಐದು ಮಕ್ಕಳಿವೆ ಕನ್ನಡ ಸಾಹಿತ್ಯಗಳಲ್ಲಿ ಇವರ ಸ್ನೇಹಿತರೂ ಹೆಚ್ಚು ಮಂದಿ ಇರುವರು ನಮ್ಮ ಜಿಲ್ಲೆಯವರಾಗಿ ಸಾಹಿತ್ಯ ಸೇವೆ ಮಾಡಿ ಉತ್ತಮ ಸ್ಥಾನಕ್ಕೇರಿದ ಅಗ್ರಗಣ್ಯರಲ್ಲಿ ಇವರು ಗಣಿಸಲ್ಪಡುವರು ಇವರಿಗೆ ಇಂತಹ ಆಕಸ್ಮಿಕ ಮರಣವುಂಟಾಗಿ, ನಮ್ಮ ಜಿಲ್ಲೆಗೆ ಉಂಟಾಗಿರುವ ನಷ್ಟವು ವಿಶೇಷವಾಗಿದೆ ಕನ್ನಡ ಮಾತೆಯ ಶೋಕವನ್ನು ಇವರ ಪಕ್ಷದಿಗಿಂಟಾದ ಸಂತಾಪಗಳನ್ನು ಪರಮಾತ್ಮನು ಸಮಾಧಾನಗೊಳಿಸಲಿ ಸ್ವದೇಶಾಭಿಮಾನಿಯಲ್ಲಿ ಶ್ರೀ। ವೆಂಕಟರಾಯರು ಹಿಂದೆ ಬರೆಯುತ್ತಿದ್ದು, ಸಂಪೂರ್ಣ ಕಟಾಕ್ಷದಿಂದ ಪತ್ರಿಕೆಯನ್ನು ಪ್ರೋತ್ಸಾಹಿಸುತ್ತ ಇದ್ದುದನ್ನು ಮರೆಯದೆ, ಅವರ ಬಂಧುಬಳಗದವರೊಡನೆ ನಾವೂ ಸಹಸಂತಾಪಿಗಳೆಂಬುದನ್ನು ಇಲ್ಲಿ ನಿವೇದಿಸಿಕೊಳ್ಳುತ್ತೇವೆ

### ವಿದ್ಯಾವಂತರ ಸಭೆ

ಈ ವರ್ಷ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ೩೦,೦೦೦ ವಿದ್ಯಾರ್ಥಿಗಳು ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕೂತಿದ್ದರು ಆ ಜಾಗದಲ್ಲಿ ಈ ಪರೀಕ್ಷೆಗೆ ಕೂತವರು ೨೦,೦೦೦ ಪಾಸು ಪತ್ರ ಪಡೆದು ಪತ್ರಿಕೆ ಪತ್ರಗಳನ್ನು ಇನ್ನು ವಿದ್ಯಾರ್ಥಿಗಳ ... ದ್ದಾರೆ ಒಟ್ಟು ... ಇದರರ್ಥವೇನು? ಬಂಗಾಳದವರು ವಿಶ್ವವಿದ್ಯಾಲಯದ ಕಡೆಗಣ್ಣು ಬಿಟ್ಟು ನೋಡುತ್ತಿರುವರಲ್ಲವೆ?

ಸ್ಥಳೀಯ ಶ್ರೀ ಕೃಷ್ಣಾ ಸಿನೆಮಾದಲ್ಲಿ ಸದ್ಯದಲ್ಲಿ ಪ್ರದರ್ಶಿಸಲ್ಪಡುವ ಚಿತ್ರದೊಳಗಿನದೊಂದು ದೃಶ್ಯ

## ಅನುಕ್ರಮಣಿಕೆ.


| | |
|---|---|
| ಚಿತ್ರ | ೨ |
| ಸಾಹಿತ್ಯ ಸಂಗ್ರಹ | ೩ |
| ಹುಲಿಯೊಡನೆ ಹೋರಾಟ | ೫ |
| ಸಂಘಟಿತಿಗಳೂ ಜನಸತ್ತೆಯ ಕುಂದು ಕೊರತೆಗಳೂ | ೮ |
| ಪತ್ರವ್ಯವಹಾರ | ೭ |
| ಅಗ್ರಲೇಖ | |
| ಸ್ಫುಟವಿಚಾರಗಳು | ೧೦ |
| ಜನಾಂಗಸಂಘದ ಸತ್ವಪರೀಕ್ಷೆ | ೧೦ |
| ವರ್ತಮಾನ ಸಂಗ್ರಹ | |
| ತನ್ನ ಹಾವಿನಿಂದಲೇ ಕಚ್ಚಲ್ಪಟ್ಟ ಅಭಿನಯೋಕ್ತಿ | ೧೪ |
| ಮಂಗಳೂರು, ತಾಲೂಕುಗಳಿಂದ | ೧೧ |
| ವಿವಿಧ ಸಮಾಚಾರಗಳು. | ೧೬ |
| ನಡೆದ ಕತೆಗಳು, ನಗಬಾರದು | ೧೮ |


# ಸ್ವದೇಶಾಭಿಮಾನಿ

ತಾ ೧೬ ನೇ ಶುಕ್ರವಾರ ಅಗೋಸ್ತು '೩೫

## ಜನಾಂಗಸಂಘದ ಸತ್ವಪರೀಕ್ಷೆ.

ಜನಾಂಗಸಂಘದ ಜನ್ಮಮುಹೂರ್ತವನ್ನು ಕಂಡುಹಿಡಿದು, ಗ್ರಹಚಾರ ಫಲವನ್ನು ಗುಣಿಸಿ ನೋಡಿ, ಈಗ ಇದೊಂದು ಸಂಧಿಕಾಲವೆಂದು ಹೇಳಬಲ್ಲ ಜೋಯಿಸರು ಇರಬಹುದು ಜಗತ್ತಿನಲ್ಲಿ ಸಮಾಧಾನವು ಕೆಡದಂತೆಯೂ, ಶಾಂತಿದೇವತೆಯ ಮಂದಿರದ ಮೊಕ್ತೇಸರಿಕೆಯನ್ನು ನಡೆದು ಆಡಳಿತೆ ನೋಡಿಬರುವಂತೆಯೂ ಈ ಸಂಘವು ಸ್ಥಾಪಿತವಾಯಿತು ಈಗ ಬರೇ ಸಮಾಧಾನಕ್ಕಾಗಿಯೆ, ದಿಗಿಲು ಉಂಟಾಗದಂತೆ ಯಾರೂ ಏನೂ ಹೇಳಬಹುದಾದರೂ, ಇನ್ನು ಎರಡು ಮೂರು ತಿಂಗಳುಗಳಲ್ಲಿ ಇಟಲಿ ಅಬಿಸೀನಿಯಗಳೊಳಗೆ ಯುದ್ಧವುಂಟಾಗದೆ ಇರಲಾರದೆಂದೇ ಆ ವಾತಾವರಣವು ಹೊಗೆದು ಬರುವುದರಿಂದ ಸುಲಭವಾಗಿ ಊಹಿಸಬಹುದು

ಈ ರಂಗಸ್ಥಳದಲ್ಲಿ ಮುಖ್ಯ ಪಾತ್ರವನ್ನು ಸೀನ್ಯರ್ ಮುಸೋಲಿನಿಯೇ ವಹಿಸಿರುವಕಾರಣ ಯಾವ ಎಂಥ ರಾಜಕಾರಣಪಟುಗಳು ಹೇಗೆಲ್ಲ ತಂತ್ರಗಳನ್ನು ಹೂಡಿ, ನ್ಯಾಯವನ್ನು ಒಡ್ಡಿದರೂ, ಅವರು ಕೃತಾರ್ಥರಾಗಲಾರರು ಅಬಿಸೀನಿಯದಲ್ಲಿ ಇಟಲಿಯು ತನ್ನ ವಸಾಹತನ್ನು ಸ್ಥಾಪಿಸಿ ಹಿಂದೆ ರೋಮ್ ಸಾಮ್ರಾಜ್ಯವು ತಳೆದಿದ್ದ ಸಾರ್ವಭೌಮತೆಯ ಸೌಭಾಗ್ಯವನ್ನು ಇನ್ನೊಮ್ಮೆ ತಳೆಯುವಂತಾಗಲೇಬೇಕೆಂಬ ಹಟವೂ ಮಹತ್ವಾಕಾಂಕ್ಷೆಯೂ ಅವರಲ್ಲಿ ಉಕ್ಕುತ್ತ, ಸುತ್ತಲಿನ ಫೆಸಿಸ್ಟ್ ಜನಗಳನ್ನೆಲ್ಲ ಯುದ್ಧಾತುರತೆಯ ಮಹಾಪ್ರವಾಹದಲ್ಲಿ ಕೊಚ್ಚಿಕೊಂಡೇ ಹೋಗದಿರದು

ಈ ಸಂದರ್ಭದಲ್ಲಿ ಜನಾಂಗಸಂಘಕ್ಕೆ ಸೇರಿದ ರಾಷ್ಟ್ರಗಳ ಸರಕಾರಗಳು ಸಾಮುದಾಯಿಕವಾದ ಜವಾಬುದಾರಿಯನ್ನು ಮರೆದು, ಇಂತಹ ಸಮಸ್ಯೆಗಳನ್ನು ಬಿಡಿಸುವುದೇ ಸಂಘದ ಮುಖ್ಯ ಕರ್ತವ್ಯವೆಂಬುದನ್ನು ಪರಿಗಣಿಸದೆ ಇರುವುದು, ಸಂಘದ ಇರವನ್ನೇ ಅಲ್ಲಗಳೆಯುವುದಾಗಿದೆ

ಸಂಘಕ್ಕೆ ಒಂದು ಬಗೆಯ ನ್ಯಾಯಾಧಿಕಾರವನ್ನು ವಹಿಸಿ, ವಾದಿ ಪ್ರತಿವಾದಿಗಳೊಳಗೆ ಪಂಚಾಯಿತಿಯ ಮೂಲಕ, ಆಕ್ಷೇಪಗಳನ್ನು ಸಮಾಧಾನಮಾಡಿಕೊಡಲು ಅಧಿಕಾರವಿದೆ, ನಿಜ ಆದರೆ, ಆ ಅಧಿಕಾರವನ್ನು ಒಪ್ಪಿಕೊಂಡ ರಾಷ್ಟ್ರಗಳು ಕೆಲವೇ; ತಮ್ಮ ಜನಾಂಗದ ಗೌರವಕ್ಕೆ ಹಾನಿಯುಂಟಾಗುವುದಾಗಿ ತಾವು ಎಣಿಸುವಲ್ಲಿ ಈ ರಾಷ್ಟ್ರಗಳು ಸಹ, ಸಂಘದ ಈ ಅಧಿಕಾರವನ್ನು ಮನ್ನಿಸಲಾರವು

ಪ್ರಬಲಗಳಾಗಿರುವ ಅಮೇರಿಕ, ರಷ್ಯ, ಜಪಾನು ರಾಷ್ಟ್ರಗಳು ಈ ಸಂಘದೊಳಗಿಲ್ಲ, ಇಟಲಿಯೂ ತನ್ನ ಸದಸ್ಯತೆಯನ್ನು ಬೇಡವೆನ್ನಲು ಇನ್ನೆಷ್ಟು ದಿನಗಳು ಬೇಕಾಗಿವೆ. ಹೀಗಾದರೆ, ಸಂಘದ ಬಲವು ಇನ್ನೂ ಹೆಚ್ಚಾಗಿ ಕುಂದುವುದು

ಜಪಾನು ಮಂಚೂರಿಯವನ್ನು ವಶಪಡಿಸಿಕೊಳ್ಳಲೂ, ಚೀನದೊಳಗೆ ನುಗ್ಗಲೂ ಸಂಘದಿಂದ ದಂಡನೆಯಿಲ್ಲದೆ ಸಾಧ್ಯವಾಗಿರುವಾಗ, ಅಬಿಸೀನಿಯದೊಳಗೆ ನುಗ್ಗಲು ಸಿದ್ಧವಿರುವ ಇಟಲಿಯ ಮೇಲೆ ದಂಡನೆ ಹೊರಿಸುವವರಾರು? ಯಾವ ಯುರೋಪಿಯ ರಾಷ್ಟ್ರವಾದರೂ ಈ ವಿಧಾನದ ವರ್ತನೆಯಿಂದ ಮಡಿಯಾಗಿರುವುದೆ? ಆಸ್ಯಖಂಡದ ಜನರು ಬೇರೆ ದೇಶಗಳಲ್ಲಿ ವಸಾಹತುಗಳನ್ನು ಸ್ಥಾಪಿಸಬಾರದೆಂದು ಆಕ್ಷೇಪವೆತ್ತಿರುವ ಈ ಸಂಘವು ಯುರೋಪೀಯ ರಾಷ್ಟ್ರಗಳಿಗೆ ಮಾತ್ರ ಒಪ್ಪಿಗೆ ಕೊಟ್ಟಿರುವ ಕಾರಣ, ಅಲ್ಲೇ ಆಗಲೇ ತನ್ನ ನೈತಿಕಬಲವನ್ನು ಕುಂದಿಸಿಕೊಂಡಿರುವುದು

ಈ ಸಂಘವು ಬಾಳಬೇಕಾದರೆ, ಯುರೋಪಿನಲ್ಲಿ ಅಗತ್ಯವಾಗಿಯೂ ಸದ್ವರ್ತನೆಯ ಪ್ರಚಾರವಾಗಬೇಕು, ರಾಷ್ಟ್ರಾಧಿಕಾರಿಗಳ ಮನೋಧರ್ಮವು ಬದಲಾಗಬೇಕು ಮಹಾಯುದ್ಧದಿಂದ ಮೃತಜೀವ ನಡೆಸಿದವರು ಮುಂದಾದರೂ ಅಂತಹ ದುರವಸ್ಥೆಯುಂಟಾಗದಂತೆ ಘಟಿಸಿದ್ದರೂ ಸಂಘವು, ಆಗ ತಾನೆ ಚೇತರಿಸಿಕೊಳ್ಳಬಹುದು

ಆದರೂ, ಈ ಸಂಘವು ಎಷ್ಟೋ ಅವೋಘವಾಗಿರುವ ಪರಿಣಾಮಗಳನ್ನು ಉಂಟುಮಾಡಿರುವುದು ಇವುಗಳ ಅರಿವು ಹರಡಬೇಕು ಇವನ್ನು ಮರೆಯಬಾರದು ಈಗ ಸಮಾಧಾನಕ್ಕಾಗಿ ಪೇಚಾಡಿ, ಸೋಲಲೂಬಹುದಾಗಿದೆ ಎಂಬುದೂ ಒಂದು ಭಾಗ್ಯವೇ ಸರಿ, ಸಂಘವೇ ಇಲ್ಲದಿದ್ದಲ್ಲಿ, ಶಾಂತಿಯ ಸಾಧನೆಗಾದರೂ ಒಂದು ಉಪಾಯವಿರುತ್ತಿದ್ದಿತೊ?

---

### ದೊಡ್ಡಣ್ಣನ ದೊಡ್ಡಾಸೆ.

ಮೌಲಾನಾ ಶೌಕತ್ ಅಲಿಯವರು ಸೀಮಾಹಿಂಡ ಪ್ರಾಂತ್ಯದಲ್ಲಿ ಸಂಚರಿಸಿ ಹಿಂದೂ ಮುಸ್ಲಿಮರ ಮುಖಂಡರನ್ನು ಕಂಡು ಮುಂದಣ ಚುನಾವಣೆಗಳ ವಿಷಯವಾಗಿ ಅಭಿಪ್ರಾಯಗಳನ್ನು ಸಂಗ್ರಹಮಾಡಿರುವರು ರಾಷ್ಟ್ರೀಯ ಇಚ್ಛೆಗಳು ನೆರವೇರಲು ಮುಂದಣ ಚುನಾವಣೆಯೇ ಯೋಗ್ಯವೆಂದು ಅವರ ತೀರ್ಮಾನವಾಗಿದೆ ಈಗ ಅಲ್ಲಿರುವ ಪ್ರತಿನಿಧಿಗಳೆಂಬವರು ಅಷ್ಟು ದೇಶಸೇವೆಗೆ ಒಲಿದವರಾಗಿರದೆ ರಾಷ್ಟ್ರೀಯ ಇಚ್ಛೆಗೆ ವಿರುದ್ಧವಾಗಿಯೆ ನಡೆಯುವವರೆಂದು ಅವರ ಅಭಿಮತ ಮುಸ್ಲಿಂ ಐಕ್ಯತಾಸಾಧಕರ ಬೋರ್ಡು, ಹೊಸ ಉಮೇದುವಾರರನ್ನು ಚುನಾವಣೆಗೆ ನಿಲ್ಲಿಸಿ, ಇಸ್ಲಾಂ ಧರ್ಮಕ್ಕೂ ಮುಸ್ಲಿಮರ ಆಶಯಗಳಿಗೂ ಕುಂದುಂಟಾಗುವ ರೀತಿಯಲ್ಲಿ ತಮ್ಮ ಸ್ವಾರ್ಥದಿಂದ ದೇಶಜೀವನವನ್ನೆ ಕೊರೆಯುವ ಕೀಟಗಳೆಂತಿರುವವರನ್ನು ಕೌನ್ಸಿಲುಗಳೊಳಗೆ ನುಗ್ಗದಂತೆ ಮಾಡುವರೆಂದೂ, ರಾಷ್ಟ್ರೀಯ ಪಕ್ಷವು ಸದ್ಯದಲ್ಲಿ ಮೇಲ್ಮೆಯದಾಗಿರುವ ಹಾಗೆ ಮುಂದೆಯೂ ಬಹಳವಾಗಿ ಸಾಧಿಸಿ ಕೌನ್ಸಿಲುಗಳಲಿ ಮಹಾ ಮತವನ್ನು ಲಭಿಸಿಕೊಳ್ಳುವವರಾಗಬೇಕೆಂದೂ, ಅಧಿಕಾರ ಸ್ವೀಕಾರದ ತತ್ವವನ್ನೂ ಒಪ್ಪಿಕೊಂಡು, ಅಧಿಕಾರಿಗಳ ಸ್ವೇಚ್ಛಾಪ್ರವೃತ್ತಿಯನ್ನು ತಡೆದು ದೇಶದ ಆಡಳಿತಕ್ಕೆ ಯೋಗ್ಯರಾದವರೆ ಪದವಿಯನ್ನೇರುವಂತಾಗಬೇಕೆಂದೂ ಆಶಿಸಿ, ದೊಡ್ಡ ಮನಸ್ಸಿನಿಂದ ಸಾರಿರುವರು. ಹೇಗಿದ್ದರೂ, ದೊಡ್ಡಣ್ಣನ ಮಾತಲ್ಲವೆ?

### ಜನ್ಮಭೂಮಿ.

ಸ್ವರ್ಗಕ್ಕಿಂತಲೂ ಹೆಚ್ಚಿನದಾಗಿರುವ ಜನ್ಮಭೂಮಿಯು ಪ್ರತಿಯೊಬ್ಬ ದೇಶವಾಸಿಯ ಭಕ್ತಿಗೆ ಭಾಜನವಾಗಿಯೆ ಇದೆ ಮೊನ್ನೆ, ಸಮ್ರಾಟರ ಜ್ಯೂಬಿಲಿಯ ಉತ್ಸವಕಾಲದಲ್ಲಿ,

ಇಂಗ್ಲೆಂಡಿನ ೧೨ ವರ್ಷ ವಯಸ್ಸಿನ ಬಾಲಿಕೆಯೊಬ್ಬಳು ಶಾಲೆಯಲ್ಲಿ ಜನ್ಮಭೂಮಿಯ ವಿಚಾರವಾಗಿ ಬರೆದ ಚಿಕ್ಕ ಪ್ರಬಂಧದಲ್ಲಿ, 'ಇಂಗ್ಲೆಂಡು ಚಿಕ್ಕ ದೇಶ; ಆದರೆ ಯಾವ ದೇಶಕ್ಕಿಂತಲೂ ಅದೇ ಉತ್ತಮವಾದುದು', ಎಂಬ ವಾಕ್ಯ ಬರೆಯಲು, ಇನ್ಸಪೆಕ್ಟರರು 'ಹೀಗೆಲ್ಲ ಸಾಮ್ರಾಜ್ಯವಾದವನ್ನು ಶಾಲೆಗಳಲ್ಲಿ ಬೋಧಿಸುವುದು ಸರಿಯಲ್ಲ'ವೆಂದರಂತೆ ಈ ಬಾಲಿಕೆಯ ಪ್ರಬಂಧವು ಎಲ್ಲಾ ಪತ್ರಿಕೆಗಳಲ್ಲಿ ಅವಳ ಅಕ್ಷರಗಳಲ್ಲೇ ಮುದ್ರಿತವಾಗಿ, ಇನ್ಸಪೆಕ್ಟರರ ಮೇಲೆ ಬಹಳ ಆಕ್ಷೇಪಗಳುಂಟಾದುವು ಕೊಮನ್ಸ್ ಸಭೆಯಲ್ಲಿ ೭೫ ನಿಮಿಷಗಳ ತನಕ ಈ ವಿಷಯವು ಚರ್ಚೆಗೆ ಬಂದು, ಇನ್ಸ್‌ಪೆಕ್ಟರರು ಸ್ವತಃ ಯುದ್ಧದಲ್ಲಿ ದೇಶಕ್ಕಾಗಿ ಕಾದಾಡಿ ಎರಡು ಸಲ ಗಾಯಗೊಂಡಿದ್ದರೆಂದು ತಿಳಿದುಬಂತು ಹೀಗಾಗಿ ಅವರು ದಂಡನೆ ಹೊಂದಲಿಲ್ಲ ದೇಶವಾತ್ಸಲ್ಯವು ಪ್ರತಿಯೊಬ್ಬನಲ್ಲಿ ಇರಬೇಕಾದುದು ಅದನ್ನು ದೂರಿದರೆ ಜರ್ಮನರೊಡನೆ ಮಹಾಯುದ್ಧವನ್ನು ನಿರ್ಧರಿಸಲು ೪೦ ನಿಮಿಷ ಚರ್ಚಿಸಿದ ಕೊಮನ್ಸ್ ಸಭೆಯು ೭೫ ನಿಮಿಷದಷ್ಟು ದೀರ್ಘವಾಗಿ ಚರ್ಚಿಸುವ ಅಗತ್ಯವು ಇಂಗ್ಲೆಂಡಿನಲ್ಲಿ ಉಂಟಾಯಿತು ನಿರಾಕ್ಷೇಪಕರವಾಗಿರುವ ರೀತಿಯಲ್ಲಿ ದೇಶವಾತ್ಸಲ್ಯವು ಹಿಂದೀ ಮಕ್ಕಳಲ್ಲಿ ಬೆಳೆವ ಹಾಗೆ ಇಂಗ್ಲೆಂಡು ಶಿಕ್ಷಣ ವಿಚಾರಗಳನ್ನು ಇಲ್ಲಿಯೂ ತಿದ್ದಿ ತಾರದೆ ಇರಬಹುದೆ?

### ಪಾಕಿಸ್ಥಾನ.

ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಗಳಿಂದಲೂ ಪತ್ರಿಕೆಗಳಿಗೂ ಎಲ್ಲೆಲ್ಲಿಯೂ ಒಂದು ಪತ್ರಿಕವು ಪ್ರಕಟವಾಗಿದೆ, ಹಿಂದುಸ್ಥಾನದಿಂದ ಪಾಕಿಸ್ಥಾನವನ್ನು ಪ್ರತ್ಯೇಕಿಸಬೇಕೆಂಬುದೇ ಈ ಪತ್ರಿಕದಲ್ಲಿನ ಬೋಧನೆ, ಅರಿಕ, ಬಿಕ್ತಾಯ ಕಾಶ್ಮೀರ ಪಂಜಾಬು, ವಾಯುವ್ಯಪ್ರಾಂತ್ಯ, ಸಿಂಧ, ಬಲೂಚಿಸ್ಥಾನ ಇವಿಷನ್ನು ಒಂದೇ ಪ್ರಾಂತ್ಯವಾಗಿ ರೂಪಿಸಿ ತರಬೇಕೆಂದು ಪಾಕಿಸ್ಥಾನ ರಾಷ್ಟ್ರೀಯ ಚಳವಳಿದ ಅಧ್ಯಕ್ಷ ವಿ. ಅಲಿ ಎಂಬವರ ಹೇಳಿಕೆಯಿದೆ. ಒಂದೂವರೆ ವರ್ಷದಿಂದ ಇದೇ ಪ್ರಸ್ತಾಪವು ಚರ್ಚೆಗೆ ಬರುತ್ತಲೇ ಇದೆ ಹೆಸರು ಹೇಗೆ ಬಂತು? 'ಪಾಕಿಸ್ಥಾನ'ವನ್ನು ಇಂಗ್ಲಿಷಿನಲ್ಲಿ ಬರೆವಾಗ PAK-I-STAN ಎಂದು ಬರೆಯಬೇಕಲ್ಲ, ಸ್ಥಾನ ಎಂದರೆ 'ದೇಶ' ಎಂದೂ, P ಎಂಬುದು ಪಂಜಾಬನ್ನೂ, A ಎಂಬುದು ಅಫ್ಘಾನಿಸ್ಥಾನವನ್ನೂ, K ಎಂಬುದು ಕಾಶ್ಮೀರವನ್ನೂ ಸೂಚಿಸುತ್ತಿದೆಯಂತೆ ಒಂದು ಕಾಲದಲ್ಲಿ ಅಫಘಾನಿಸ್ಥಾನವನ್ನು ಈ ಸ್ಥಾನದೊಳಗೆ ಸೇರಿಸಲೂ ಇಚ್ಛೆಯಿತ್ತು ಬರ್ಮವನ್ನು ಪ್ರತ್ಯೇಕಿಸಿರುವ ರೀತಿಯಲ್ಲಿಯೆ ಪಾಕಿಸ್ಥಾನವನ್ನು ಈಗ ಪ್ರತ್ಯೇಕಿಸಿಕೊಡಬೇಕೆಂದೂ, ಪಾಕಿಸ್ಥಾನದಲ್ಲಿ ವಾಸಿಸುವವರಿಗೂ ಇತರ ಹಿಂದೀಯರಿಗೂ ಯಾವ ಸಂಬಂಧವೂ ಇಲ್ಲವೆಂದೂ, ಆ ಭೂಮಿಯೆ ಭಾರತವರ್ಷವಲ್ಲ, ಅಲ್ಲಿನ ಧರ್ಮವೂ ಹಿಂದೂ ಧರ್ಮವಲ್ಲ, ಐತಿಹಾಸಿಕ ಹಾಗೂ ಸಾಮಾಜಿಕ ರೀತಿಗಳೂ ಸಂಬಂಧಗಳೂ ಬೇರೆಯೆ ಆಗಿರುವ ಕಾರಣವೂ, ಹಿಂದುಗಳು ನೂರರಲ್ಲಿ ೭೫ ಮಂದಿಯಾಗಿ ಭಾರತವರ್ಷದಲ್ಲಿರುವುದರಿಂದ ಅದು ಹಿಂದುಸ್ಥಾನವಾಗಿರುವ ಹಾಗೆಯೇ, ಮುಸ್ಲಿಮರು ನೂರರಲ್ಲಿ ೮೦ ಮಂದಿ ಇರುವ ನಮ್ಮ ಪ್ರಾಂತ್ಯವು ಪಾಕಿಸ್ಥಾನವೆನಿಸಬೇಕು ಎಂದೂ ಮೊದಲಾಗಿ ವಿವರಣೆಯನ್ನೂ ಕಾರಣಗಳನ್ನೂ ಕೊಡಲಾಗಿದೆ ಇವೆರಡು 'ಸ್ಥಾನ'ಗಳಿಗೆ ಯಮುನಾನದಿಯೆ ಗಡಿಯಾಗಿರಬೇಕೆಂದೂ, ಇವೆರಡರ ನಡುವೆ ಸೇತುವಾಗಿ ಪಾನಿಪತದ ಬಯಲು ಇರಬೇಕೆಂದೂ ಸಹ ಗಡಿಗಳನ್ನು ವಿಂಗಡಿಸಿ ಈ ಪತ್ರಕವು ಕೊಟ್ಟಿದೆ. ಹೊಸ ಇಂಡಿಯಾ ಆಕ್ಟಿನಂತೆ, ಫೆಡರೇಶನ್ ರಚನೆ ಹೊಂದುವಾಗ, ಮುಸ್ಲಿಮರು ರೌಂಡ್ ಟೇಬಲ್ ಕೊನ್ಫರೆನ್ಸಿನಲ್ಲಿ ಈ ಪಾಕಿಸ್ಥಾನದ ವಿಚಾರ ವೆತ್ತದ ಹಾಳುಮಾಡಿಕೊಂಡರೆಂದು ಅವರನ್ನು ದೂರಿ, ಪಾಕಿಸ್ಥಾನದ ಫೆಡರೇಶನು ಅತ್ಯಾವಶ್ಯಕವಾಗಿದೆಂದು ಒತ್ತಿ ಹೇಳಿರುವರು.

### ಡಾ। ಅಂಬೇಡ್ಕಾರರು.

ಯಾವುದೊಂದು ರಾಜಕೀಯ ಪಂಗಡದಲ್ಲೂ ಸೇರುವುದಿಲ್ಲವಾಗಿ ಸಾರಿ, ನಿವೃತ್ತರಾದುದು ವಿಶೇಷ ಆಶ್ಚರ್ಯವನ್ನುಂಟುಮಾಡಿಯದೆ ಅವರು ಈ ವಿಷಯವಾಗಿ ಮೌನವ್ರತವನ್ನಾಚರಿಸುವರು ಲೋ ಕೊಲೇಜಿನಲ್ಲಿ ಅವರು ಪ್ರಿನ್ಸಿಪಾಲರಾಗಿ ಹುದ್ದೆ ಪಡೆದಿರುವ ಪ್ರಯುಕ್ತ, ಸರಕಾರಿ ನೌಕರರು ಯಾವ ರಾಜಕೀಯ ಪಂಗಡಕ್ಕೂ ಸೇರಬಾರದೆಂದಿರುವ ಸೂತ್ರದಂತೆ, ಅವರು ಹೀಗೆ ತ್ಯಾಗಶಾಲಿಗಳಾಗಿರಬೇಕಾಗಿ ಬಂದಿದೆ ಎಂದು ಕೆಲವರೆನ್ನುವರು. ರಾಜಕೀಯ ಚಳವಳದಿಂದ ದೂರವಿರದಿದ್ದರೆ, ಲೋ ಕೊಲೇಜಿನಿಂದ ಹೈಕೋರ್ಟಿಗೆ ಜಡ್ಜರಾಗಿ ನೇಮಕಹೊಂದಲು ಆಕ್ಷೇಪ ಬಂದೀತೆಂದು ಹೀಗೆ ಸವಿನಾಚರಣೆಗೆ ಕೈಯಿಕ್ಕಿದರೆಂದೂ ಕೆಲವರೆನ್ನುವರು ಲೋ ಕೊಲೇಜಿನ ಮೆಟ್ಟಿಲನ್ನು ಹತ್ತಿ, ಹೈಕೋರ್ಟಿನ ಬೆಂಚನ್ನು ಏರಿದವರು ಎಷ್ಟೋ ಮಹನೀಯರಿರುವ ಕಾರಣ, ಈ ವಾರ್ತೆಗೆ ಆಧಾರವಿದೆ ಡಾ। ಅಂಬೇಡ್ಕಾರರ ಪಕ್ಷದವರು ತಾವೇ ಪ್ರಯತ್ನಮಾಡಿ, ಅವರನ್ನು ಎಸೆಂಬ್ಲಿಗೆ ಚುನಾಯಿಸಲಿಕ್ಕೂ ಆತಂಕವಿಲ್ಲ ಹಾಗಿದ್ದಲ್ಲಿ ಅವರು ಸುಲಭವಾಗಿ ಮಂತ್ರಿಮಂಡಲದಲ್ಲಿ ಸೇರಲೂ ಅಸ್ಪದವಿದೆ. ಆದರೆ ಎಸೆಂಬ್ಲಿಯಲ್ಲಿ ಬಹುಪಕ್ಷವು ರಾಷ್ಟ್ರೀಯವಾದಲ್ಲಿ, ಈ ಪದವಿಯು ಇವರಿಗೆ ತಪ್ಪುವುದಲ್ಲ?

### ಮುಂದಿನ ಪರ್ಯಾಯ.

ನಮ್ಮ ದೇಶದ ಭಾಗ್ಯದೇವತೆಯಾಗಿ, ವೈಸರಾಯ ಪದವಿಯ ಮುಂದಣ ಪರ್ಯಾಯವು ಶ್ರೀಮಂತ ಲಿನ್ಲಿಥ್ಗೋರವರಿಗೆ ಒಪ್ಪಿಸಲಾಗಿದೆ. ಲಕ್ಷ ಪ್ರಜೆಗಳಲ್ಲಿ ಯಾವನಾದರೊಬ್ಬನು ಈ ಪರ್ಯಾಯಕಾಲದ ಭಾಗ್ಯವಿಧಾತರಾರೆಂದು ಗಣನೆಗೆ ತಂದುಕೊಳ್ಳುವನು ವಿನಾ ಮಿಕ್ಕವರಿಗೆ ಆಗಾಗ ಉದಯವಾಗುವ ಈ ಹೊಸ ಅವತಾರಗಳ ಗೊಡವೆಯೇ ಇರುವುದಿಲ್ಲ. ತನ್ನ ಸದ್ಯಸ್ಥಿತಿಯು ಉತ್ತಮವಾಯಿತೋ ಅಥವಾ ಅದೀತೋ ಎಂಬ ವಿಚಾರವೇ ಮಾತ್ರ ಎಲ್ಲರಿಗೂ ಇದೆ ಹೊರತು ಮೇಲಧಿಕಾರಿಗಳು ಯಾರೆಂಬ ವಿಷಯಕ್ಕೆ ಮನಕೊಡುವುದಿಲ್ಲ. ಬರಲಿರುವ ವೈಸರಾಯರು ಇಂಡಿಯಾಸಂಚಾರ ಮಾಡಿದ್ದು, ಇಲ್ಲಿಯ ಕೃಷಿಜೀವನದ ಹಾಸು ಪೊಕ್ಕುಗಳ ಪರಿಚಯಮಾಡಿಕೊಂಡವರು; ಹೊಸ ರಾಜ್ಯಶಾಸನದಲ್ಲಿ ಹೊಸ ಹುರುಪನ್ನು ಉಂಟುಮಾಡಲು ಇವರೂ ಪೇಚಾಡಿದವರು, ಇವರು ಇತರ ಯೋಗ್ಯ ಕನ್ಸರ್ವೇಟಿವರಿಗಿಂತ ಹೆಚ್ಚಿನ ಉದಾರಿಗಳೆಂದು ತಿಳಿದಿದೆಯಾದರೂ, ಇವರು ಸಾಧಿಸಿದಷ್ಟು ತಿದ್ದುಪಡಿಗಳು ಶಾಸನದಲ್ಲಿ ಉಂಟಾಗಲಿಲ್ಲ. ಈಗ ಶಾಸನವು ಜ್ಯಾರಿಗೆ ಬರುವಂದು ಇವರೇ ಇಲ್ಲಿದ್ದು, ಅದರ ಕಾರ್ಯಕ್ರಮವು ರೂಢಿಗೆ ಬರುವಂತೆ ಮಾಡಲೆಂದು ಇವರನ್ನು ನೇಮಿಸಿರುವರು ಜನಾಂಗವು ಐಕ್ಯತೆಹೊಂದಿ, ಉದ್ಯೋಗವೂ ಸಂಪನ್ನತೆಯೂ ಹೆಚ್ಚಿ, ಸಂತೃಪ್ತಿಯು ನೆಲಸುವಂತೆ ಮಾಡಲು ಇವರಿಗೆ ಜಗದೀಶನ ಪ್ರೇರಣೆಯಾಗಲಿ.

---

# ೪೭ ದಿನಗಳ ವರೆಗೆ ಕೊಂಪೆಯಡಿಯಲ್ಲಿ!

## ಅವನು ಹೊರಗೆ ಬಂದಾಗ ಅವನು ಕಳ್ಳನೆಂದು ಭಾವಿಸಿ ಸೆರೆಹಿಡಿದರು.

### ಅವನು ಕಳ್ಳನಲ್ಲ; ಭೂಕಂಪದ ಆಹುತಿ! ತನ್ನ ಆತ್ಮಕಥೆಯನ್ನು ಹೇಳಿದ ನಂತರ ಬಿಡುಗಡೆ ಮಾಡಿದರು!

ಕ್ವೆಟ್ಟಾದ ಶಿಕಾರಿಪುರ ಎಂಬಲ್ಲಿ ಜೇತಾನಂದನೆಂಬ ಮಿಠಾಯಿ ವ್ಯಾಪಾರಿಗಾರನು ಕ್ವೆಟ್ಟಾದಲ್ಲಾದ ಮೊನ್ನಿನ ಭೂಕಂಪದ ದಿನ ತನ್ನ ಅಂಗಡಿಯ ಕೊಂಪೆಯಡಿಯಲ್ಲಿ ಬಿದ್ದನು. ಆದರೆ ಜಖಂಗೊಳ್ಳಲಿಲ್ಲ. ಕಟ್ಟಡವೆಲ್ಲವೂ ಅವನ ಕೋಣೆಯನ್ನಾವರಿಸಿ ನಿಂತಿದ್ದಾದರೂ ಅವನ ಕೋಣೆಯು ಮುರಿಯಲಿಲ್ಲ. ಆದಕಾರಣ ಗೋರಿಯಂತೆಯೇ ಆಯಿತು. ೪೭ ದಿನಗಳ ಕಾಲ ಪೂರಾ ಅವನು ಈ ಕೊಂಪೆಯಡಿಯಲ್ಲೇ ಇದ್ದ. ಅಷ್ಟು ದಿನಗಳ ವರೆಗೂ ಒಳಗಿದ್ದ ಮಿಠಾಯಿ ಮತ್ತು ನೀರನ್ನು ಕುಡಿದು ಜೀವಿಸಿದ. ಎಷ್ಟು ಬೊಬ್ಬಿಟ್ಟರೂ ಹೊರಗಿನವರಿಗೆ ಅವನ ಕೂಗು ಕೇಳಿಸಲಿಲ್ಲ. ಮೊನ್ನೆ, ಒಳಗಿರುವ ಸಾಧನಗಳನ್ನುಪಯೋಗಿಸಿ ಕೋಣೆಯ ಮಾಡಿನಲ್ಲೊಂದು ಕಿಂಡಿಯನ್ನು ಕೊರೆದು ತಲೆಯನ್ನು ಹೊರಗೆ ಹಾಕಿ ಬೊಬ್ಬಿಟ್ಟನು. ಒಡನೆ ಜನರೂ ಪೋಲೀಸರೂ ಬಂದು, ಅವನನ್ನು ಕಳ್ಳನೆಂದು ಸೆರೆಹಿಡಿದು ಸ್ಟೇಶನಿಗೊಯ್ದರು. ಆದರೆ, ಅವನು ತನ್ನ ಆತ್ಮಕಥೆಯನ್ನು ಹೇಳಲಾರಂಭಿಸಿದ. ಈ ಕಥೆಯನ್ನು ಕೇಳಿದ ನಂತರ ಅವನನ್ನು ಬಿಡುಗಡೆ ಮಾಡಿದರು.

---

## ರೂಸ್‌ವೆಲ್ಟರು ಜಂಬೂರಿಯನ್ನು ರದ್ದು ಮಾಡಿದರು

### ಬಾಲರೋಗವು ಹರಡದಂತೆ ಯೋಜನೆ

ಅಮೇರಿಕಾದ ಸ್ಕೌಟರ ಜಂಬೂರಿಯು ಇದೇ ಆಗೋಸ್ಟು ಅಂತ್ಯದಲ್ಲಿ ಜರಗಲಿತ್ತು. ೩೫,೦೦೦ ಬಾಲಕರು ನೆರೆಯಬೇಕಾಗಿದ್ದರು. ೧೯೦೦ ಜೇರೆಗಳು ಪೊಟೋಮ್ಯಾಕ್ ನದೀ ತೀರದಲ್ಲಿ ಹಾಕಲ್ಪಟ್ಟಿದ್ದುವು. ಆದರೆ ದೇಶದಲ್ಲೆಲ್ಲಾ ಬಾಲರೋಗವು ಹರಡಿರುವುದರಿಂದ ಈ ಜಂಬೂರಿಯನ್ನು ರದ್ದು ಮಾಡಬೇಕೆಂದು ಪ್ರೆಸಿಡೆಂಟ್ ರೂಸ್‌ವೆಲ್ಟರು ಪ್ರಕಟಿಸಿರುವರು. ೧೯ ವರ್ಷಗಳ ಹಿಂದೆ ರೂಸ್‌ವೆಲ್ಟರು ಈ ರೋಗದಿಂದ ನರಳುತ್ತಿದ್ದರು.

---

## ಸ್ತ್ರೀಯರು ಗನಿಗಳೊಳಗೆ ಕೆಲಸ ಮಾಡಲಾಗದು

### ಈ ಕ್ರಮವು ರದ್ದುಗೊಳ್ಳಲಿದೆ.

೧೯೩೬ನೇ ಜುಲಾಯಿಯಿಂದ ಮೊದಲ್ಗೊಂಡು ಸ್ತ್ರೀಯರು ಗನಿಗಳೊಳಗೆ ಕೆಲಸ ಮಾಡುವ ಕ್ರಮವನ್ನು ರದ್ದುಗೊಳಿಸಬೇಕೆಂದು ಇಂಡಿಯಾ ಸರಕಾರವು ನಿರ್ಣಯಿಸಿದೆಯೆಂದು ತಿಳಿದುಬಂದಿದೆ. ಯೂರೋಪಿಯನರು ಈ ಸೂಚನೆಯನ್ನು ಸಮರ್ಥಿಸುತ್ತಿರುವರು. ಆದರೆ ಭಾರತೀಯ ಗನಿ ಮಾಲೀಕರು ಈ ಸಲಹೆಯನ್ನು ಪುಷ್ಟೀಕರಿಸದೆ, ಈ ಕ್ರಮವು ರದ್ದುಗೊಂಡರೆ ಲೇಬರ್ ವಿಷಯಕವಾದ ಆಂದೋಲನವೇ ತಲೆದೋರಬಹುದೆಂದು ಹೇಳುತ್ತಿದ್ದಾರೆ. ಈ ಕ್ರಮವು ಕ್ರಮೇಣ ರದ್ದುಗೊಳಿಸಬೇಕೆಂದು ಕೆಲವರ ಅಭಿಪ್ರಾಯ. ೧೯೨೯ರಲ್ಲಿ ೩೯,೭೫೫ ಮಂದಿ ಸ್ತ್ರೀಯರು ಗನಿಗಳೊಳಗೆ ಕೆಲಸ ಮಾಡುತ್ತಿದ್ದರು. ೧೯೩೩ರಲ್ಲಿ ಲೆಕ್ಕ ತೆಗೆದಾಗ ಅವರ ಸಂಖ್ಯೆಯು ೧೭,೭೫೫ಕ್ಕೆ ಇಳಿದಿದೆಯೆಂದು ತಿಳಿದುಬಂತು. ಇದೇ ರೀತಿ ಈ ಸಂಖ್ಯೆಯನ್ನಿಳಿಸಬೇಕೆಂದು ಸೂಚಿಸಲಾಗಿದೆ.

---

## ಲಾಹೋರು ಮುನಿಸಿಪಾಲಿಟಿಯ ಎಕ್ಸಿಕ್ಯೂಟಿವ್ ಆಫೀಸರರನ್ನು ಕೆಲಸದಿಂದ ತೆಗೆಯಬಹುದೇ?

ಲಾಹೋರು ಮುನಿಸಿಪಾಲಿಟಿಗೂ ಅದರ ಎಕ್ಸಿಕ್ಯೂಟಿವ್ ಆಫೀಸರರಿಗೂ ಜಗ್ಗಾ ಕೈಯಾಗಹೊರಗಿದೆ. ಮುನಿಸಿಪಾಲಿಟಿಯ ಕೌನ್ಸಿಲಿನ ಠರಾವನ್ನು ನಿರಾಕರಿಸಿಯೂ ಈ ಎಕ್ಸಿಕ್ಯೂಟಿವ್ ಆಫೀಸರರು ಎಕೌಂಟೆಂಟ್ ಜನರಲರ ಮೂಲಕ ಸರಕಾರದಿಂದ ಸಂಬಳವನ್ನು ಪಡೆದಿರುವರು. ಇದು ಕಾಯಿದೆ ವಿರೋಧವೆಂದು ಕೌನ್ಸಿಲು ಠರಾವು ಮಾಡಿದೆ. ತನ್ನನ್ನು ತೆಗೆಯಲು ಕೌನ್ಸಿಲಿಗೆ ಅಧಿಕಾರವಿಲ್ಲವೆಂದು ಲಾಲಾ ಶಂಕರ ದಾಸರು ಹೇಳಿರುವರು.

---

## ಮಿ॥ ಫಕೀರ ಚಂದರರವರ ಮರಣ.

ಜಲ್ಲಂಧರ್ ಸೋಸ್-ಮುಹಮ್ಮದ್ ಕೊನ್ಸ್‌ಟಿಟ್ಯುವೆನ್ಸಿಯ ಎಸೆಂಬ್ಲಿಯ ಮೆಂಬರರಾದ ಲಾಲಾ ಫಕೀರ ಚಂದರೆಂಬ ರಾಷ್ಟ್ರೀಯ ಪಕ್ಷೀಯರು ಕಳೆದ ೩ ತಿಂಗಳುಗಳಿಂದಲೂ ಅಸ್ವಸ್ಥರಾಗಿದ್ದು, ಇದೇ ತಾ ೧೦ರಲ್ಲಿ ಕಾಲವಶರಾದರು.

---

## ಇಸ್ಲಾಮ್ ಧರ್ಮದ ಧ್ಯೇಯ.

### ಸರ್ ಮುಹಮ್ಮದ್ ಜಫರುಲ್ಲಾಖಾನರ ಭಾಷಣ.

ಮದ್ರಾಸು ಆಗೋಸ್ಟು ೯

ಇಂಡಿಯಾ ಸರಕಾರದ ಕಾಮರ್ಸ್ ಮೆಂಬರರಾದ ಸನ್ಮಾನ್ಯ ಸರ್ ಮುಹಮ್ಮದ್ ಜಫರುಲ್ಲಾಖಾನರು, ಮೌಲಾನಾ ಮುಹಮ್ಮದ ಅಲಿಗಳ ಅಧ್ಯಕ್ಷತೆಯಲ್ಲಿ ಮುಸ್ಲಿಮ್ ತರುಣರಿಗೆ, ಇಸ್ಲಾಮಿನ ಧರ್ಮದ ಧ್ಯೇಯದ ಕುರಿತಾಗಿ ಒಂದು ಚಿಕ್ಕವೂ ಚೊಕ್ಕವೂ ಆದ ಭಾಷಣ ಮಾಡಿದರು. ಅದರ ಸಾರಾಂಶವೇನೆಂದರೆ:

ದೇಶದ ಪ್ರತಿಯೊಂದೆಡೆಯಲ್ಲಿಯೂ ಮುಸ್ಲಿಮರ ಸಂಘಗಳು ಇವೆ. ಮೊದಲು ಇದ್ದವು; ನವೀನ ಸಂಘಗಳು ಇನ್ನು ಏರ್ಪಡಲೂ ಸಾಕು. ಆದರೆ ಈ ಸಂಘಗಳ ಆವಶ್ಯಕತೆಯು ನಮಗಿದೆಯೋ ಇಲ್ಲವೋ ಎಂಬುದನ್ನು ಮಾತ್ರ ಎಣಿಸಲು ಅಸಾಧ್ಯ. ಅವಶ್ಯಕತೆ ಇಲ್ಲದೆ ಇರುತ್ತಿದ್ದರೆ ಸಾವಿರಕ್ಕೆ ಉತ್ತೇಜನ ಕೊಟ್ಟದ್ದರಿಂದ ದೇಶಕ್ಕೆ ತೊಂದರೆ ಆಗಿದೆ. ಒಂದುವೇಳೆ ಅವಶ್ಯಕತೆಯಿದ್ದು ಇಂಥಾ ಸಂಘವು ಸ್ಥಾಪಿಸಲ್ಪಟ್ಟಿದ್ದಾದರೆ ಅದರ ಸದಸ್ಯರು ಅದರ ಉದ್ದೇಶಗಳನ್ನು ದೃಷ್ಟಿಯಲ್ಲಿಟ್ಟು ಅವುಗಳಿಗನುಗುಣವಾಗಿ ನಡೆಯುವುದು ಶ್ರೇಯಸ್ಕರ. ಒಬ್ಬ ಮುಸ್ಲಿಮನಿಗೆ ತನ್ನ ಜಾತಿಯ ಬಂಧುಬಾಂಧವರ ಉದ್ಧಾರದ ಕೆಲಸಕ್ಕಿಂತಲೂ ಹೆಚ್ಚಿನದು ಪರಿಶೀಲಿಸಲಿಕ್ಕಿದೆ. ಜಗತ್ತಿನಲ್ಲೇ ಏ ಭೇದವಿದ್ದರೂ ಎಲ್ಲರೂ ಒಂದೇಯಲ್ಲವೆ? ನಾವೀಗ ದೊಡ್ಡ ಆಂದೋಲನದ ಮಧ್ಯದಲ್ಲಿದ್ದೇವೆ. ಅಥವಾ ಹಿಂದೂ ಮುಸ್ಲಿಮರ ಜಗಳದಲ್ಲಲ್ಲ, ಅಥವಾ ಹಿಂದೂಗಳಲ್ಲಿಯ ಭಿನ್ನಾಭಿಪ್ರಾಯದ ಮಧ್ಯದಲ್ಲಲ್ಲ. ಆಗಲೇ ಇದೀ ಜಗತ್ತಿಗೆ ವ್ಯಾಪಿಸಿದೆ. ಇದೆಲ್ಲವೂ ನಮಗೆ ತಿಳಿದ ವಿಷಯ. ... ಸರಕಾರದ ಧೋರಣೆಗಳೂ ... ಆಗ ... ಅದೂ ಕಾಲದ ... ಜನಾಂಗಗಳು ... ಹೊಸ ಆದರ್ಶಗಳನ್ನು ... ಬಂದಿವೆ. ಕಡೆಯಾಗಿ ಪರ್ಯಾಯವೋ ... ದದ್ದು ಪೂರ್ವಿಕರಿಂದ ಆಚರಿಸಿ ಬಂದಂಥಾದ್ದು. ಆದ ಧರ್ಮವು ಈಗ ಎಲ್ಲಿಯೂ ಇಲ್ಲವೆಂದು ನನ್ನ ಭಾವನೆ. ಸತ್ಯಸಾಮರ್ಥ್ಯದ ಪರೀಕ್ಷೆಯ ಸಮಯವಿದು; ನಿಜ ಧರ್ಮದ ಮರ್ಮವನ್ನು ಪಸರಿಸುವ ಅಪೂರ್ವ ಸಂದರ್ಭವಿದು. ದೇಶದಲ್ಲಿ ಇಸ್ಲಾಂ ಧರ್ಮದಷ್ಟು ಶ್ರೇಷ್ಠವಾದ ಧರ್ಮವು ಮತ್ತೊಂದಿಲ್ಲ. ಪರರನ್ನು ಬಾಧಿಸದೆ ಕಲುಷಿತವಲ್ಲದ ಜೀವನವನ್ನು ನಡೆಸುವುದೂ ಪರೋಪಕಾರಿಯಾಗಿ ಜೀವಿಸುವುದೂ ದುಂದುಗಾರಿಕೆ ಮಾಡದೆ ಮಿತವ್ಯಯಿಯಾಗಿರುವುದೂ ಇಸ್ಲಾಂ ಧರ್ಮದ ಧ್ಯೇಯವಾಗಿರುತ್ತದೆ. ಪರರನ್ನು ಸಂಕಷ್ಟಕ್ಕೀಡುಮಾಡಿ ಅದರಿಂದ ಧನವನ್ನು ಅಪಹರಿಸಿ ಮಿಲಿಯಾಧಿಪತಿಗಳಾಗುವವರನ್ನು ಇಸ್ಲಾಂ ಮತವು ಬಹಿಷ್ಕರಿಸುತ್ತದೆ. ತಮ್ಮ ಸ್ವಾರ್ಥಕ್ಕಾಗಿ ತಾವು ಲೆಜಿಸ್ಲೇಟಿವ್ ಎಸೆಂಬ್ಲಿಗೆ ಅಥವಾ ಲೋಕಲ್ ಕೌನ್ಸಿಲುಗಳಿಗೆ ಪ್ರತಿನಿಧಿಗಳಾಗಿ ಹೋಗುವುದಾದರೆ, ನೀವು ನಿಮ್ಮ ಇಸ್ಲಾಮಿನ ಧರ್ಮದ ಮರ್ಮವನ್ನು ಅರಿತಿಲ್ಲವೆಂದೂ ನೀವು ನಿರ್ಮಿಸುವ ಸಂಘಗಳು ನಿಷ್ಪ್ರಯೋಜಕವಾದುವುಗಳೆಂದೂ ಖಂಡಿತವಾಗಿ ಹೇಳಬಲ್ಲೆನು. ಅದೆಲ್ಲವೂ ನೀವು ಇಸ್ಲಾಂ ಧರ್ಮವನ್ನು ಅಧ್ಯಂತವಾಗಿ ಓದಿದರೆ ನಿಮಗೆ ಮಂದಟ್ಟಾಗಬಹುದು. ಇದೀಗ ಒಳ್ಳೆ ಸಮಯ. ಈಗಲೇ ಸೇವೆಯನ್ನು ಮಾಡಿದರೆಂದರೆ,—ನಮಗೂ ಇಡೀ ಜಗತ್ತಿಗೂ ಇದರಿಂದ ಸುಖವುಂಟು".

---

## ಸಿ ಎಫ್ ಎಂಡ್ರೂಸರು.

ರೆವೆರೆಂಡ್ ಸಿ ಎಫ್. ಎಂಡ್ರೂಸರವರು ಸರ್ ತೇಜ್ ಬಹದ್ದೂರ್ ಸಪ್ರೂರವರನ್ನು ಕಾಣುವುದಕ್ಕಾಗಿ ಶ್ರೀ ಎಸ್. ಕೆ. ರುದ್ರರವರ ಅತಿಥ್ಯದಲ್ಲಿ ಅಲ್ಲಹಾಬಾದಿಗೆ ಬಂದಿರುವರು.

---

## ಲೇಬರ್ ರಿಸರ್ಚ್ ಸೊಸೈಟಿಯು ಬಹಿಷ್ಕರಿಸಲ್ಪಟ್ಟಿತು.

ಲಾಹೋರಿನ ಲೇಬರ್ ರಿಸರ್ಚ್ ಸೊಸೈಟಿಯು ಅಪರಾಧಿ ಸಂಸ್ಥೆಯೆಂದು ಗವರ್ನರ್ ಜನರಲ್ ಇನ್ ಕೌನ್ಸಿಲ್‌ರವರು ತೀರ್ಮಾನಿಸಿರುವರು. ಈ ಆಜ್ಞೆ ಹೊರಡಿಸಿದೊಡನೆ ಪೋಲೀಸರು ಅದರ ಆಫೀಸನ್ನು ಶೋಧನೆಮಾಡಿ ಹಲವು ಸಾಹಿತ್ಯಗಳನ್ನು ಒಯ್ದಿರುವರು. ಲೇಬರ್ ವಿಷಯಕವಾದ ಚಳವಳವನ್ನು ಪ್ರೋತ್ಸಾಹಿಸುತ್ತಿದ್ದುದೇ ಈ ಸಂಘದ ತಪ್ಪು.

---

## ರಾಷ್ಟ್ರೀಯ ಧ್ವಜವನ್ನು ಏರಿಸಬಾರದಂತೆ

ಮೈಸೂರಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಆರು ತಿಂಗಳುಗಳ ತನಕ ಮೈಸೂರಿನಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸಬಾರದಾಗಿ ಹೇಳಿದ್ದಾರೆ.

---

## ಕೂಲಿಯಾಳುಗಳ ಮುಷ್ಕರ.

ಮೇರಿ ಕುಪ್ಪಮ್ ಎಂಬಲ್ಲಿಯ ಗನಿಗಳಲ್ಲಿ ಕೆಲಸ ಮಾಡುವ ಕೂಲಿಗಾರರು ಅವರಿಗೆ ಕೊಡುತ್ತಿದ್ದ ಬೋನಸನ್ನು ತೆಗೆದು ಹಾಕಿದ್ದಕ್ಕಾಗಿ ತಾವಿನ್ನು ಕೆಲಸ ಮಾಡುವುದಿಲ್ಲವಾಗಿ ಮುಷ್ಕರ ಹಿಡಿದಿದ್ದಾರೆ. ಸಂಬಂಧಪಟ್ಟ ಕೋರ್ಟಿಗೆ ಬೆಂಕಿಯನ್ನು ಕೊಟ್ಟು ಸುಟ್ಟು ಬಿಟ್ಟರು. ಇದರ ವಿಷಯ ಮನವಿಯೊಂದನ್ನು ಮಾಡಿ ... ಕಳುಹಿಸಿರೆಂದು ಎಷ್ಟೆಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ — ಬೇರೆ ಕಡೆಯ ಗನಿಗಳಲ್ಲಿ ಇಂತಹ ಮುಷ್ಕರವು ಆರಂಭವಾಗಿಲ್ಲ.

---

## ಶಿವನ ಗುಡಿಯನ್ನೆ ಲೂಟಿ ಮಾಡಿದರು.

ಗುಂಟೂರಿನ ಚಿಲಕಲೂರಿ ಎಂಬಲ್ಲಿ ಶಿವನ ಗುಡಿಯೊಂದಕ್ಕೆ ಕಳ್ಳರು ಹೊಕ್ಕು ೩೦೦ ರೂಪಾಯಿಗಳ ಆಭರಣಗಳನ್ನು ಕದ್ದೊಯ್ದಿರುವರು. ಈ ಸಂಬಂಧವಾಗಿ ಇಬ್ಬರನ್ನು ಸೆರೆಹಿಡಿಯಲಾಗಿದೆ. ಶಿವ ಮೂರ್ತಿಯ ವಿಗ್ರಹವನ್ನು ಕದ್ದು ಆದ ... ಭಂಗ ಮತ್ತು ಬೆಳ್ಳಿ ... ಇಟ್ಟ ಮುಸ್ಲಿಮರ ... ನಗಗಳು ದೊರಕಿವೆ.

---

## ಕಷ್ಟವನ್ನು ಸಹಿಸಲಾರದ ಸಿಪಾಯಿಗಳಾಗಿ ಹೋಗಿ ಅಧಿಕಾರಿಗಳ ಪಾದಗಳ ಮೇಲೆ ಬಿದ್ದರು

ಕಮ್ಮ ... ಮುಂದೆ ... ೩೦೦ ಜನರು ... ಅಧಿಕಾರಿಗಳ ...

ಹೋಗಿ ತಮಗೆ ಅನ್ನವೀಯಬೇಕೆಂದರು. ಸಬ್ ಡಿವಿಜನಲ್ ಅಧಿಕಾರಿಗಳು ಒಟ್ಟಾಗಿ ಅವರಿಗೆ ಅಕ್ಕಿಯನ್ನು ಹಂಚಿದರು.

---

## 17 ಮಂದಿ ನಾಶವಾದರು.

ಇದೇ ತಾ. ೫ನೇ ದಿನ ಮುಜಿಲ್ಲದ ಕೇಂದ್ರ ಉಜೈನದಲ್ಲಿ ಒಂದು ಪ್ರಚಂಡ ಬಿರುಗಾಳಿ ಬೀಸಿ ೧೭ ಮಂದಿ ನಾಶವಾಗಿರುವರೆಂದು ವರದಿಯಾಗಿದೆ.

---

## ಕ್ವೆಟ್ಟಾದಲ್ಲಿ ಇನ್ನೂ ಭೂಕಂಪ.

ಕ್ವೆಟ್ಟಾದಲ್ಲಿ ಭೂಕಂಪವು ನಿಂತಂತೆ ತೋರುವುದಿಲ್ಲ. ದಿನಂಪ್ರತಿ ಎಂಬಂತೆ ಭೂಮಿಯು ನಡುಗುತ್ತದೆ. ನಡುಕವುಂಟಾಗುವ ಪೂರ್ವದಲ್ಲಿ ಭಯಂಕರ ಶಬ್ದವು ಆಗುತ್ತದೆ. ಈ ಕಂಪನವು ಎಂದು ನಿಲ್ಲುವುದೆಂದು ನಿರ್ಧರಿಸಲು ಅಸಾಧ್ಯ.

---

## ನೂರು ಜನರ ದಸ್ತಗಿರಿ

ರಾಮನಾಡು ... ಮಾರವ ಜಾತಿಯ ನೂರು ಜನ ದರೋಡೆಗಾರರನ್ನು ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಇವರು ಸೆರೆಹಿಡಿದಿರುವರು.

---

## ಫ್ರೀಪ್ರೆಸ್ ರೂ 6000 ಕೊಡಬೇಕು

ಐದು ತಿಂಗಳುಗಳ ಬಾಕಿಗೆ ... ಫ್ರೀ ಪ್ರೆಸ್ ಆಫ್ ಇಂಡಿಯಾ ಲಿಮಿಟೆಡ್ ಇವರ ಮೇಲೆ ದಾವಾ ನಡೆದು ಆರು ಆರು ಸಾವಿರ ರೂಪಾಯಿಗಳನ್ನು ಆ ಬಗ್ಗೆ ಕೊಡಬೇಕೆಂದು ತೀರ್ಮಾನವಾಗಿದೆ.

---

## ಮಹಜೇದಿಯನ್ನು ತೆಗೆಯಲು ಆಜ್ಞೆ

ಗುಂಟೂರಿನ ಕಲೆಕ್ಟರರಾದ ಮಿ ಡಿ ... ಇವರ ಒಂದು ಆಜ್ಞೆ ... ಸರಕಾರದ ಆಜ್ಞೆಯನ್ನು ... ಬೆಳೆಸ ... ಮಹಜೇದಿಯನ್ನು ಕಟ್ಟಿದುದರಿಂದ ಅದನ್ನು ಅಲ್ಲಿಂದ ತೆಗೆಯಬೇಕೆಂದು ... ಮುಸ್ಲಿಮರ ... ಆಫೀಸ ... ಮಹಜೇದಿಯನ್ನು ... ನೋಡಿ ಅದನ್ನು ತೆಗೆಯಬೇಕೆಂದು ... ಒಪ್ಪುವುದಿಲ್ಲ.

---


# ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಮೇಹವು ಯೌವನದಲ್ಲಿ ... ಇದು ... ಶರೀರದೊಳಗೆ ವ್ಯಾಪಿಸಿ ಅನೇಕ ಕಾಯಿಲೆಗಳನ್ನುಂಟುಮಾಡುವುದು.



ಅನೇಕರು ಕಾಯಿಲೆಯ ... ಕೊರಗುತ್ತಿದ್ದಾರೆ ... ತಿರುಗುತ್ತಿರುವವರೆಷ್ಟೋ ಮಂದಿ ... ವ್ಯಾಧಿಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ... ರೋಗ ... ಜನಿಸಿದ ಮಕ್ಕಳ ... ಇಲ್ಲ ... ಕಾಯಿಲೆಯನ್ನು ಹಿಂದಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೈಹುಣ್ಣು, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿ ಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಯಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ.—ದೊಡ್ಡ ಬಾಟ್ಲಿಗೆ ರೂ. 4 ಮಧ್ಯಮ 2-4-0 ಚಿಕ್ಕದು 1-2-0.

ತಯಾರಿಸುವವರು — ಲಸ್ಟರ್ ಡಿಪೋ, ಚಿಕ್ಕಮಗಳೂರು.

ಬ್ರೇಂಚ್ —ಚಿಕ್ಕಪೇಟೆ, ಬೆಂಗಳೂರು.

ಮುಖ್ಯ ಏಜಂಟರು.—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

# ತಾಲೂಕುಗಳಿಂದ.

ಪುತ್ತೂರು:— ಈ ಮೊದಲು ಪ್ರಕಟವಾದಂತೆ ಪುತ್ತೂರು ತಾಲೂಕು ಕೊಂಗ್ರೆಸ್ ಮೆಂಬರರ ಮಹಾ ಸಭೆಯು ತಾ. ೧೧-೮-೩೬ನೇ ದಿನ ಸಂಜೆ ೪-೩೦ಕ್ಕೆ ಸರಿಯಾಗಿ ಸ್ಥಳೀಯ ಸೊಸ್ಯಾಟಿ ಕಟ್ಟೋಣದಲ್ಲಿ ಜರಗಿ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲದ ಸದಸ್ಯರ ಚುನಾವಣೆಯಾಗಿ ಶ್ರೀ ಬಿ. ಶಿವರಾಮ ಹೊಳ್ಳರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಂ. ಸದಾಶಿವ ರಾಯರನ್ನು ಕಾರ್ಯದರ್ಶಿಯರನ್ನಾಗಿಯೂ, ಶ್ರೀ ಬಿ. ನರಸಿಂಹ ಮಲ್ಯರನ್ನು ಕೋಶಾಧಿಕಾರಿಯರನ್ನಾಗಿಯೂ ಆರಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಸಿವಿಕ್ ಬೋರ್ಡಿಗೆ ತಾಲೂಕಿನ ಪರವಾಗಿ ಈ ಮೊದಲೇ ಆರಿಸಲ್ಪಟ್ಟ ಮೆಂಬರುಗಳಾದ ಶ್ರೀಗಳಾದ ಎಂ. ಶಿವರಾವ್ ಮತ್ತು ಪಿ. ವೆಂಕಪ್ಪಯ್ಯಗಳಲ್ಲದೆ ಶ್ರೀ ಎಚ್. ಪುಂಡಲೀಕ ಭಟ್ ಮತ್ತು ಶ್ರೀ ಚೆನ್ನಪ್ಪಗೌಡ ಇವರುಗಳನ್ನು ಕೂಡಾ ಆರಿಸಲಾಯಿತು. ಜಿಲ್ಲಾ ಬೋರ್ಡಿಗೆ ಕೊಂಗ್ರೆಸ್ಸಿನ ಪರವಾಗಿ ಮೆಂಬರಿಕೆಗೆ ನಿಲ್ಲತಕ್ಕ ಉಮೇದ್ವಾರರನ್ನು ಸ್ಥಳೀಕ ಕಮಿಟಿಯು ಶಿಫಾರಸು ಮಾಡುವ ಮೊದಲು ಸ್ಥಳೀಕ ಮಹಾಸಭೆಯ ಅಭಿಪ್ರಾಯವನ್ನು ಪಡೆದೇ ಮಾಡಬೇಕಾಗಿಯೂ, ಆ ಬಗ್ಗೆ ಇದೇ ತಿಂಗಳ ತಾ. ೨೬ಕ್ಕೆ ಪುನಃ ಮಹಾ ಸಭೆ ಸೇರಬೇಕಾಗಿಯೂ ನಿರ್ಣಯಿಸಿ ಸಭೆಯು ಮುಕ್ತಾಯವಾಯಿತು.

ಬಾಬೂ ಭಗವಾನ್‌ದಾಸ್, ಎಂ. ಎಲ್. ಎ., ಇವರು ಬರುವ ಎಸೆಂಬ್ಲಿ ಅಧಿವೇಶನದಲ್ಲಿ ಮಂಜೂರಾತಿ ಬಗ್ಗೆ ತರಲಿರುವ "ಅಂತರ್ಜಾತೀಯ ವಿವಾಹವು ಸಿಂಧುವಾಗತಕ್ಕದ್ದು" ಎಂಬ ಅಭಿಪ್ರಾಯವನ್ನೊಳಗೊಂಡ ಮಸೂದೆಯ ಯುಕ್ತಾಯುಕ್ತತೆ ಮತ್ತು ಆವಶ್ಯಕತೆಯ ಕುರಿತು ಚರ್ಚಿಸುವ ಬಗ್ಗೆ ತಾ. ೧೧-೮-೩೬ರಲ್ಲಿ ಒಂದು ಮಹಾ ಸಭೆ ಜರಗಿತು. ಈ ಸಂದರ್ಭದಲ್ಲಿ ವಕೀಲ ಶ್ರೀಯುತ ಬಿ. ಶಿವರಾಮಹೊಳ್ಳರು ಅಧ್ಯಕ್ಷರಾಗಿದ್ದರು. "ಬಾಬುಗಳವರ ಶಾಸನವು ಪ್ರೇಮವಿವಾಹದ ತತ್ವವನ್ನು ಕಾರ್ಯರೂಪದಲ್ಲಿ ತರುವಲ್ಲಿ ಇಂದಿನ ಸಮಾಜದಲ್ಲಿಯ ನಿರ್ಬಂಧ ಮತ್ತು ದೌರ್ಬಲ್ಯದ ಕೊಂಡಿಗಳ ಕೀಲು ಕಟ್ಟೋಣವನ್ನು ಕಡಿದು ಬಿಡುವುದಲ್ಲದೆ ಕ್ರಮಶಃ ಮೆಚ್ಚುವ ಸತಿಪತಿ ಭಾವದಿಂದ ಇಂದಿನ ತರುಣ ತರುಣಿಯರು ತಂತಮ್ಮ ಸಮಾಜದ ವ್ಯಕ್ತಿಗಳಾಗಿಯೇ ಇದ್ದುಕೊಂಡು ಆರಿಸಿಕೊಳ್ಳುವರೆ ಸುಲಭಸಾಧ್ಯವಾಗುವುದೆಂದೂ, ಹಾಗಾದಲ್ಲಿ ತಂತಮ್ಮ ಪಿತ್ರಾರ್ಜಿತದ ಮೇಲಿರುವ ತಮ್ಮ ಎಲ್ಲಾ ಹಕ್ಕುಗಳು ಹಾಗೆಯೇ ಉಳಿದು ಪ್ರೇಮ ವಿವಾಹದ ಫಲರೂಪವಾದ ಸುಖಮಯ ಸಂಸಾರವನ್ನು ಸುಗಮವಾಗಿ ಸಾಗಿಸಿಕೊಂಡಿರಲು ಸಾಧ್ಯವಾಗುವುದೆಂದೂ ಆದುದರಿಂದ ಬಾಬುಗಳ ಮಸೂದೆಯು ಮಂಜೂರಾಗಿ ಜಾರಿಗೆ ಬರುವುದು ಅತ್ಯಾವಶ್ಯಕವೆಂದೂ ಶ್ರೀ ಯಸ್. ಯನ್. ಹೊಳ್ಳರು ಹೇಳಿದರು. ಶ್ರೀ ಮೊಳಹಳ್ಳಿ ಶಿವರಾಯರು "ಇಂದಿನ ಸಮಾಜದ ಸ್ಥಿತಿಯು ಬೇರಾಗಿ ಸುಖಿ ಕುಟುಂಬಗಳು ಎದ್ದುಬರಬೇಕಾದ ರಾಜಶಾಸನಾಶ್ರಯವೂ ಸಹ ದೊರೆಯುವಂತೆ ಮಾಡುವ ಭಾರತದ ಭಾವೀಕಲ್ಯಾಣಕಾರಕವಾದ ಭಗವಾನ್ ದಾಸ್ ಬಾಬೂಗಳವರ ಮಸೂದೆಯು ಸರ್ವಜನಾದರಣೀಯವೂ ಎಲ್ಲಾ ವರ್ಗದ ವರ್ಣದವರ ಮತ್ತು ಮತದವರ ಸಮ್ಮತಿಗೆ ಪಾತ್ರವೂ ಆಗಿರುವುದರಲ್ಲಿ ಸಂಶಯವಿಲ್ಲ. ಸಂಶಯಾತ್ಮರಿಗೆ ಬರಬಹುದಾದ ಸಂದೇಹಗಳನ್ನು ಹೋಗಗೊಳಿಸಿ ಅವರಿಗೂ ಸಮ್ಮತವೆಂದು ಕಂಡುಬರುವಂತೆ ತಿಳಿಯ ಹೇಳುವುದಕ್ಕಾಗಿ ಸಕಾಲದಲ್ಲಿ ಇನ್ನೊಂದು ಮಹಾಜನ ಸಭೆಯನ್ನು ಜರಗಿಸುವುದು ಸಾಧು ಎಂದು ಸುರಸವಾಗಿ ಮಾತಾಡಿದರು. ಕೊನೆಗೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೀಗೆಂದರು "ಹಿಂದೀಯರು ಬರ್ಮಕ್ಕೆ ಹೋಗಿ ಅಲ್ಲಿ ಸಂಸಾರ ಮಾಡುತ್ತಾರೆ. ಅಲ್ಲಿಯ ಅವರ ಸಂತತಿಗಳು ನಿರಾಶ್ರಿತರೂ ಅನಾಥರೂ ಆಗಿ ಕೊನೆಗೆ ಮತಾಂತರ ಹೊಂದಿ ಹಿಂದೀಯರಿಗಿಲ್ಲವಾಗುತ್ತಾರೆ. ಹೆತ್ತವರ ಸಂಪತ್ತಿನಲ್ಲಿ ಅವರಿಗೆ ಅಧಿಕಾರವಿಲ್ಲ. ತಂದೆ ತಾಯಿಗಳ ಮಕ್ಕಳವರಿಂದ ಹೊರಗವರು, ಶಾಸನ ನಿರ್ಬಂಧವಿರಹಿತ ಪ್ರೇಮ ವಿವಾಹದ ಪರಿಣಾಮವು ಈ ರೀತಿಯಲ್ಲಿ ಕೊನೆಗೊಳ್ಳುವುದು. ಕೇರಳದಲ್ಲಿ ಇದು ತಗಲದಿದ್ದು ಇತ್ತೀಚೆಗೆ ಶಾಸನಬದ್ಧವಾದ "ಸಮ್ಮಂದ ಪದ್ಧತಿಯ ಪರಿಣಾಮವು ನಮಗೆಲ್ಲಾ ತಿಳಿದ ವಿಷಯ. ತಂದೆಯ ಸಂಪತ್ತಿನಲ್ಲಿ ಮಗನಿಗೆ ಅಧಿಕಾರವಿಲ್ಲವಾದರೆ ಆ ತಂದೆ ತಂದೆಯಾಗಿ ಏನು ಬಂದಂತಾಯಿತು. ಮಗನು ಮಗನಾಗಿ ಹೇಗೆ ಉಳಿಯುವುದಕ್ಕೆ ಸಾಧ್ಯ. ಆದರೆ ಅಲ್ಲಿ ಈಗಿರುವ ಶಾಸನದ ಬಲದಿಂದಾಗಿ ಆರಿಥ ಸಂಸಾರದ ಫಲರೂಪವಾದ ಪುತ್ರ ಪುತ್ರಿಯರಿಗೆ ತಂದೆಯು ತನ್ನ ಆದಾಯದ ಪಾಲುಕೊಟ್ಟೇ ತೀರಬೇಕು. ಹಾಗಿನ ಒಂದು ಶಾಸನವು ನಮಗೆ ಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರಲಾರದು ಬಾಬುಗಳ ಮಸೂದೆಯು ಮಂಜೂರಾಗಿ ನಮ್ಮ ಹಿಂದೀಯರ ಏಳಿಗೆಯಾಗಲಿಕ್ಕೇ ಬೇಕು" ಶ್ರೀ ಶಿವರಾಯರು ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ ಸಭಾ ಕಾರ್ಯವು ಮುಗಿದು ಸಭೆ ಕೊನೆಗೊಂಡಿತು.

ವಿಟ್ಲ— ಇಲ್ಲಿಂದ ಕುಡುಪೂರ (ಕನ್ಯಾನದಲ್ಲಿ ಒಂದು ಆಸ್ತಿ ಧಣಿವರಿಯ ಸಂದರ್ಭ ವಾದಿಯ ಕಡೆಯಿಂದ ಸ್ಥಳ ಸ್ವಾಧೀನತೆ ಬಗ್ಗೆ ಹೋದ ಪೋಲೀಸು ಸಬ್ ಇನ್ಸ್‌ಪೆಕ್ಟರರಿಗೂ ವಾದಿಯ ಕಡೆಯ ಇನ್ನೊಬ್ಬನಿಗೂ ಪ್ರತಿವಾದಿಯ ಕಡೆಯವರು ಕತ್ತಿ ದೊಣ್ಣೆಗಳಿಂದ ಘಾಯಗೊಳಿಸಿದರೆಂದೂ, ಆಯುಧಪಾಣಿಗಳಾಗಿ ಬಂದು ವಿಟ್ಲದಿಂದ ಪುತ್ತೂರಿಗೆ ಹೋಗುವ ಪೋಲೀಸು ಫೌಜುಗಳಿರುವ ಮೋಟಾರಿನ ಮೇಲೆ ಬಿದ್ದು ಇನ್ನೂ ಹೆಚ್ಚಿನ ಹೊಂದಿ ನಡೆಸುವ ಪ್ರಯತ್ನ ಮಾಡಿದರೆಂದೂ, ಕೊನೆಗೆ ಒಬ್ಬ ಬಡ ಕಳೆಯಾರಿ ಮತ್ತೊಬ್ಬ ಶಾನುಭೋಗರನ್ನೂ ದೊಣ್ಣೆಗಳಿಂದ ಗುದ್ದಿದರೆಂದೂ, ಈ ಅನಾಹುತದ ಸುದ್ದಿ ಕೇಳಿ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರು ರಿಸರ್ವ ಪೋಲೀಸು ದಳದೊಂದಿಗೆ ಅಲ್ಲಿ ಬತ್ತಿ ಕೊಲೆಗಡುಕರಲ್ಲಿ ಕೆಲವರನ್ನು ಕೈದುಮಾಡಿ ತಂದರೆಂದೂ ಸುದ್ದಿ. ಘಾಯ ಹೊಂದಿ ಆಸ್ಪತ್ರೆಯಲ್ಲಿರುವ ಸಬ್ ಇನ್ಸ್‌ಪೆಕ್ಟರರಿಗೆ ತಗಲಿದ ಕತ್ತಿ ದೊಣ್ಣೆಯ ಕಡಿತ ಪೆಟ್ಟುಗಳು ಪ್ರಬಲ ತರದ್ದಾಗಿದ್ದರೂ ಅವರ ಜೀವನಕ್ಕೇನೂ ಬಾಧಕವಿಲ್ಲವೆಂದು ತಿಳಿಸಲು ಸಂತೋಷ. ಹೀಗೆಲ್ಲಾ ಊರಲ್ಲಿ ಅನಾಹುತಗಳಾಗುವುದನ್ನು ತಿಳಿಯಲು ವಿಷಾದಪಡುತ್ತೇವೆ. ಈ ಸಂದರ್ಭದಲ್ಲಿ ಸ್ಥಳದಲ್ಲಿ ಹಾಜರಿದ್ದ ಪುತ್ತೂರು ಸರ್ಕಲ್ ಇನ್ಸ್‌ಪೆಕ್ಟರರವರ ಧೈರ್ಯ ಸಾಹಸಗಳಿಲ್ಲದಿರುತ್ತಿದ್ದರೆ ಇನ್ನೂ ಹೆಚ್ಚಿನ ಅನಾಹುತವು ಸಂಭವಿಸುವ ಸಂದರ್ಭವಿತ್ತೆಂದು ತಿಳಿಯುತ್ತೇವೆ. ಅಲ್ಲದೆ ಕೊಲೆಗಡುಕರನ್ನು ಹತೋಟಿಗೆ ತರುವ ಉದ್ಯಮದಲ್ಲಿ ಮಾನ್ಯ ಸರ್ಕಲ್ ಇನ್ಸ್‌ಪೆಕ್ಟರರವರ ಕೈಗೇನೂ ಕುಸು ಘಾಯವಾಗಿರುವುದೆಂದು ತಿಳಿಸಲು ವಿಷಾದಪಡುತ್ತೇವೆ.

ಕಾಸರಗೋಡು:— ಕಾಸರಗೋಡು ಪುತ್ತೂರು ಲ್ಯಾನಿನ ಬಸ್ಸು ಒಂದರಲ್ಲಿ ಓರ್ವ ಹೆಂಗಸು ಬದಿಯ ಸೀಟಿನಲ್ಲಿ ಕುಳಿತಿದ್ದು, ಯಾವ ಕಾರಣದಿಂದಲೋ ಕೆಳಗೆ ಬಿದ್ದು, ಅವಳ ಕಾಲಿನ ಮೇಲಿಂದ ಬಸ್ಸು ಹಾದು, ಸ್ಥಳೀಯ ಸರಕಾರೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿದರೂ ಸಫಲವಾಗದೆ ಅವಳು ಮೃತ್ಯುವಶಳಾದಳೆಂದು ತಿಳಿದು ಬರುತ್ತದೆ.

ಉಡುಪಿ:— ಶ್ರೀ ವಿಶ್ವಮಾನ್ಯತೀರ್ಥ ಶ್ರೀಪಾದಂಗಳವರು ಬರುವ ಜನವರಿಯಲ್ಲಿ ಶ್ರೀಕೃಷ್ಣ ಸನ್ನಿಧಾನದ ಪರ್ಯಾಯ ಪಟ್ಟವನ್ನೇರಲಿದ್ದಾರೆ. ಮಾಮೂಲು ಪ್ರಕಾರ ಆಷಾಢ ಶ್ರಾವಣದಲ್ಲಿ ಕಟ್ಟಿಗೆ ಮುಹೂರ್ತಮಾಡುವ ಗೂಡೆಯಂತೆ ಕಾಡು ಕಡಿಯಲು ಆರಂಭವಾಗಿದೆ. ನಿರುದ್ಯೋಗಿ ಬಡಜನರು ಇಷ್ಟಾಗಿ ಹೊಟ್ಟೆ ಉದರಪೋಷಣ ಮಾಡಬೇಕು.

ತಾ. ೮ಕ್ಕೆ ಉಡುಪಿ ತಾಲೂಕು ಶೇಂದಿ ಅಂಗಡಿಗಳ ಹರಾಜು ನಡೆಸಲಾಯಿತು. ಒಟ್ಟು ೭೨ ಅಂಗಡಿಗಳಲ್ಲಿ ೬೫ ಅಂಗಡಿಗಳು ಹರಾಜು ಮಾಡಲಾದುವು. ಒಟ್ಟು ತಿಂಗಳಾದಾಯವು ರೂ. ೭೭೩೪/ ಉತ್ಪನ್ನವಾಗಿದೆ.

ಅಂದೇ ಕ್ವೆಟ್ಟಾ ಸಹಾಯದ ವೈಸರಾಯ ನಿಧಿಯ ಸಹಾಯಾರ್ಥವಾಗಿ ಅಭಿನಯಿಸಲಾದ "ಗೃಹಲಕ್ಷ್ಮಿ" ಎಂಬ ನಾಟಕದಿಂದ ಸುಮಾರು ೩೦೦ ರೂಪಾಯಿ ಉತ್ಪನ್ನವಾಗಿರಬಹುದಾಗಿಯೂ, ಸದ್ರಿ ನಾಟಕ ಸಂಘಕ್ಕೆ ಖರ್ಚಿನ ಬಗ್ಗೆ ರೂ. ೩೦/ ಕಳೆದು ಉಳಿದ ಹಣವು ವೈಸರಾಯ ನಿಧಿಗೆ ಕಳುಹಲ್ಪಡುವುದಾಗಿಯೂ ತಿಳಿದುಬರುತ್ತದೆ.

ತಾ. ೬ನೇಯ ದಿನ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿರುವ ಶ್ರೀ ಎ. ಬಿ. ಶೆಟ್ಟಿ ಮತ್ತು ಶ್ರೀ ಯು. ಸಿ. ಎಸ್. ಭಟ್ ಇವರ ಪ್ರಶ್ನಾವಳಿಗಳಿಂದ ಮಾನ್ಯ ಮುಖ್ಯ ಮಂತ್ರಿಗಳು ಉಡುಪಿ ಮುನಿಸಿಪಾಲಿಟಿಯ ಕುರಿತು ಪಟ್ಟಣಿಗರ ಅಸಂತೋಷವನ್ನು ಸೂಚಿಸುವ ಮನವಿಗಳು ಸರಕಾರಕ್ಕೆ ಬಂದಿವೆಯಾಗಿಯೂ, ಉಡುಪಿಗೆ ಮುನಿಸಿಪಾಲಿಟಿಯನ್ನು ಕೊಡುವ ಯೋಜನೆಯು ನಿಶ್ಚಿತವಾಗಿಲ್ಲವೆಂದೂ, ಮುನಿಸಿಪಾಲಿಟಿಯನ್ನು ಹೊರಿಸುವ ವಿಚಾರದಲ್ಲಿ ಜನಹಿತವೂ ಸರಕಾರದ ಹಿತವೂ ಒಂದೇಯೆಂದೂ, ೩೦,೦೦೦ಕ್ಕೆ ಕಡಿಮೆ ಜನಸಂಖ್ಯೆಯುಳ್ಳ ಮುನಿಸಿಪಾಲಿಟಿಗಳು ಅಧಿಸಂಖ್ಯದಲ್ಲಿ ಹಲವು ಇವೆಯಾಗಿಯೂ ಉತ್ತರ ದಯಪಾಲಿಸಿದರು.

ಅದರ ಮರುದಿನವೇ (ತಾ. ೭ಕ್ಕೆ) ದಕ್ಷಿಣ ಕನ್ನಡ ಜಿಲ್ಲೆಯೊಳಗಣ ಉಡುಪಿ ಪಟ್ಟಣವನ್ನು ಮುನಿಸಿಪಾಲಿಟಿಯಾಗಿ ವ್ಯವಸ್ಥೆಗೊಳಿಸಲ್ಪಡುವುದೆಂಬ ತಮ್ಮ ಇರಾದೆಯನ್ನು ಮದರಾಸು ಸರಕಾರವು ಜಾಹೀರು ಮಾಡಿರುತ್ತದೆ. ಈ ಕುರಿತು ತಾ. ೮ಕ್ಕೆ ಶ್ರೀ ಸುಬ್ರಹ್ಮಣ್ಯ ಭಟ್ಟರು ಕೌನ್ಸಿಲನ್ನು ಎಡ್ಜರ್ನ್‌ಮಾಡಬೇಕೆಂಬುದಾಗಿ ತಂದ ಠರಾವು ಶ್ರೀ ಎ. ಬಿ. ಶೆಟ್ಟರಿಂದ ಅನುಮೋದಿಸಲಾಯಿತು. ಸರಕಾರವು ಉಡುಪಿಗೆ ಮುನಿಸಿಪಾಲಿಟಿಯನ್ನು ಕೊಡುವ ದೃಢನಿಶ್ಚಯ ಮಾಡಿಲ್ಲವಾಗಿಯೂ, ಇದರ ಬಗ್ಗೆ ಮುಂಚಿತವಾಗಿ ದಕ್ಷಿಣ ಕನ್ನಡ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿಯು ಕ್ಲಪ್ತಕಾಲದಲ್ಲಿ ಜಾಹೀರು ಮಾಡಲ್ಪಡಲಿರುವುದಿದೆಯಾಗಿಯೂ, ಅನಂತರ ಆರು ವಾರದ ಅವಧಿಯೊಳಗೆ ಆಕ್ಷೇಪಣೆಗಳನ್ನು ಕೊಡಬಹುದಾಗಿಯೂ, ಸದ್ರಿ ಮೆಂಬರರ ಠರಾವು ಅನಗತ್ಯವಲ್ಲವೆಂದು ಸದ್ರಿ ಠರಾವನ್ನು ಮಾನ್ಯ ಅಧ್ಯಕ್ಷರು ಅಂಗೀಕರಿಸಲಿಲ್ಲ.

ಮಾನ್ಯ ಮುಖ್ಯ ಮಂತ್ರಿಗಳು ಅಂದಂತೆ ಜನಸಂಖ್ಯೆಯು ಮುನಿಸಿಪಾಲಿಟಿಯನ್ನು ವ್ಯವಸ್ಥೆಗೊಳಿಸುವುದರಲ್ಲಿ ಹಲವು ಕಾರಣಗಳೊಡನೆ ಒಂದು ಕಾರಣವಾಗಿರುತ್ತಾ, ಅದು ಮಾತ್ರ ಒಂದೇ ಒಂದು ಕಾರಣವಲ್ಲವಾಗಿ, ಉಡುಪಿ ಮಹಾಜನರು ಮನವಿಯ ಮೂಲಕ ವೇದ್ಯಪಡಿಸಿರುವಂತೆ ಎಷ್ಟೋ ಕಾರಣಗಳಿಂದಾಗಿ ಮುಖ್ಯತಃ ಸದ್ಯದ ವಿಶ್ವವ್ಯಾಪಿಯಾದ ಭಯಂಕರ ರೀತಿಯ ಆರ್ಥಿಕ ದುಃಸ್ಥಿತಿಯಿಂದಾಗಿ ಯಾವುದೇ ಬಗೆಯ ಮತ್ತು ಎಷ್ಟೇ ಕಡಿಮೆಯಾಗಲೀ ಹೆಚ್ಚಿನ ತೆರಿಗೆಯನ್ನು ಹೊರಲಾರದ ಜನತೆಯ ಮೇಲೆ ಮುನಿಸಿಪಾಲಿಟಿಯನ್ನು ಹೊರಿಸುವ ಮುಂಚೆ ಮಾನ್ಯ ಸರಕಾರವು ಚೆನ್ನಾಗಿ ವಿವೇಚಿಸಿ ದಯಾಪೂರ್ಣ ಹೃದಯದಿಂದ ಸದ್ಯ ಉಡುಪಿಗೆ ಮುನಿಸಿಪಾಲಿಟಿಯನ್ನು ತರುವ ಆಲೋಚನೆಯನ್ನು ರದ್ದು ಮಾಡಬೇಕಾಗಿ ವಿನಂತಿಸಿಕೊಳ್ಳಲಾಗುತ್ತದೆ. ಈ ಬಗ್ಗೆ ಸರಕಾರಕ್ಕೆ ತಮ್ಮ ಹಾಲಹವಾಲೆಗಳನ್ನು ನಿವೇದಿಸಿಕೊಳ್ಳಲಿಕ್ಕೆ ಪಟ್ಟಣಿಗರ ಮಹಾಸಭೆ ಸೇರಲಿದೆಯಾಗಿಯೂ ಮಾನ್ಯ ಗವರ್ನರರಲ್ಲಿಗೂ ಮುಖ್ಯ ಮಂತ್ರಿಗಳಲ್ಲಿಯೂ ಡೆಪ್ಯುಟೇಶನು ಕಳುಹುವ ಏರ್ಪಾಡು ಆಗುತ್ತಲಿದೆಯಾಗಿಯೂ ತಿಳಿದು ಬರುತ್ತದೆ.

ತಾ. ೧೦ನೇ ಸೋಮವಾರ, ಸಾಯಂಕಾಲ ೪-೩೦ಕ್ಕೆ ಉಡುಪಿ ತಾಲೂಕು ಬೋರ್ಡಿನ ಮಾಜಿ ಅಧ್ಯಕ್ಷರೂ, ಮದ್ರಾಸು ನ್ಯಾಯವಿಧಾಯಕ ಸಭೆ ಹಾಗೂ ಲೆಜಿಸ್ಲೇಟಿವ್ ಕೌನ್ಸಿಲಿನ ಮಾಜಿ ಪ್ರತಿನಿಧಿಗಳೂ, ಜಿಲ್ಲಾ ಬೋರ್ಡಿನ ಸದಸ್ಯರೂ, ಸ್ಥಳೀಯ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಉಡುಪಿ ಲಿಮಿಟೆಡ್ ಇದರ ಸ್ಥಾಪಕರೂ ಮಾಜಿ ಅಧ್ಯಕ್ಷರೂ ಮೇಲಾಗಿ ನಮ್ಮ ಜಿಲ್ಲೆಯಲ್ಲಿ ಶ್ರೀಮಂತ ಸಾಹುಕಾರರೂ ಜಮೀನ್ದಾರರೂ ಆಗಿದ್ದ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ್ ಬಹದ್ದೂರ್ ಇವರು ತಮ್ಮ ೬೩ನೇ ವರ್ಷ ಪ್ರಾಯದಲ್ಲಿ ವಿಧಿವಶರಾದರು. ಈಚೆಗೆ ಇವರ ಆರೋಗ್ಯಸ್ಥಿತಿ ಚೆನ್ನಾಗಿದ್ದಿಲ್ಲವಾದರೂ ತದ್ ಅನುಷ್ಠಿತದ ಕರ್ಮಗಳನ್ನೂ ಅನುಷ್ಠಾನಗಳನ್ನೂ ಮೊನ್ನೆ ಬುಧವಾರದ ತನಕ ಗೈದು ರಾತ್ರಿ ವಿಶ್ರಮಿಸಿದರು. ಮರುದಿನ ಪ್ರಾತಃಕಾಲ ಇವರು ಸ್ಮೃತಿತಪ್ಪಿ ಹಾಸಿಗೆ ಹಿಡಿದರು. ಡಾಕ್ಟರರು ವೈದ್ಯರು ತಮ್ಮ ಬುದ್ಧಿಬಲಕ್ಕೆ ಕೂಡಿದ ಚಿಕಿತ್ಸೆಗಳನ್ನು ನಡೆಯಿಸಿದಾಗ್ಯೂ ಪ್ರಯೋಜನಕಾರಿಯಾಗದೆ ತಮ್ಮ ನಶ್ವರ ಶರೀರವನ್ನು ತ್ಯಜಿಸಿದರು. ಕೂಡಲೇ ಪಟ್ಟಣದಲ್ಲೆಲ್ಲಾ ಅಂಗಡಿ ಬಾಗಿಲುಗಳು ಮುಚ್ಚಲ್ಪಟ್ಟುವು, ವ್ಯವಹಾರವೆಲ್ಲ ನಿಂತು ಹೋಯಿತು. ಜಾತಿಪರಜಾತಿಯೆನ್ನದೆ ಆಬಾಲವೃದ್ಧರೆಲ್ಲ ಇವರ ಕೊನೆಯ ದರ್ಶನಕ್ಕಾಗಿ ಹಿಂಡುಗಟ್ಟಿ ಎಡೆಬಿಡದೆ ಕಿಕ್ಕಿರಿದು ಸದ್ರಿಯವರ ಮಹಾಲಿನಲ್ಲಿ ಬೀದಿಯಲ್ಲೆಲ್ಲ ಜನರು ಜಮೆಯಾದರು. ಆಗಳಿಂದ ಇಡೀ ರಾತ್ರಿಯಲ್ಲದೆ ಮಂಗಳವಾರ ಪ್ರಾತಃಕಾಲದಿಂದ ಆಜುಬಾಜಿನ ಸ್ಥಳಗಳಿಂದ ಸಾವಿರಗಟ್ಟಲೆ ಜನರು ಬರುತ್ತಾ, ಮಧ್ಯಾಹ್ನ ೧೧ ಘಂಟೆಯ ತನಕ ಬಂಧು ದರ್ಶನಹೊಂದುತ್ತಲಿದ್ದರು. ಮಂಗಳವಾರ ಬೆಳಗ್ಗೆ ಮಸೀದಿಯಲ್ಲಿ ಬಡವರಿಗೆ ಅಕ್ಕಿ ಹಂಚಲಾಯಿತು. ಇವರ ಶವವು ಕೊಂಡೊಯ್ಯಲ್ಪಡುವಾಗ ಹೂಮಾಲೆಗಳು ಅರ್ಪಿಸಲಾದುದಕ್ಕೆ ಮಿತಿಯೇ ಇಲ್ಲ. ಶವವು ಪಾಲುಕೋಟ್ಟೆ, ಸಂತೆಕಟ್ಟೆ, ಸಿರಿಬೀಡು, ಕಲ್ಸಂಕ, ರಥಬೀದಿ, ಬಡಗುಪೇಟೆಯಿಂದಾಗಿ ಸಮಾಧಿ ಸ್ಥಾನಕ್ಕೆ ಒಯ್ಯಲ್ಪಡಲು ೩ ಗಂಟೆಗಳ ಕಾಲವು ತಗಲಿದ್ದಲ್ಲದೆ, ಹಿಂಬಾಲಿಸಿಕೊಂಡು ಸುಮಾರು ೩-೪೦೦೦ ಮಂದಿ ಸರ್ವ ಮತಸ್ಥರೂ ಸರಕಾರಿ ಆಫೀಸರರೂ, ವಕೀಲರೂ, ಸಾಹುಕಾರರೂ ಬಂದಿದ್ದರು. ಹಾದಿಯುದ್ದಕ್ಕೆ ತವಳಗೊಂಡು ನೋಡಲು ನೆರೆದಿದ್ದ ಜನರಿಗೆ ಮಿತಿಯಿದ್ದಿಲ್ಲ. ಯಥಾರ್ಥವಾಗಿಯೂ ಉಡುಪಿಪಟ್ಟಣ ಚಾತಕರಾಗಿದ್ದ ಇವರ ನಿಧನದಿಂದ ಶೋಕಗೊಳ್ಳದ ನರಪ್ರಾಣಿಯೊಂದೇಯಾಗಲೀ ಬಾಕಿಯಿದ್ದಿಲ್ಲವೆನ್ನಬಹುದಾಗಿತ್ತು. ನಮ್ಮ ಜಿಲ್ಲೆಯಲ್ಲೇ ಇದಕ್ಕೆ ಮೊದಲಾಗಲೀ ಇನ್ನು ಮುಂದಕ್ಕೂ ಕೂಡ ಸರಿಸಮಾನರೆಯಿಲ್ಲದಂತಹ ದಾನದಿಂದ ಸ್ವಖ್ಯಾತಿ ಮಾಡಿದವರೆಂದರೆ ಹಾಜಿ ಅಬ್ದುಲ್ಲಾ ಸಾಹೇಬರೇ ಎನ್ನುವುದರಲ್ಲಿ ಸಂದೇಹವಿಲ್ಲ. ಇವರ ಅಪಾರವಾದ ದಯಾಗುಣ, ಶಾಂತಸ್ವಭಾವ, ದಾನಶೀಲತೆ, ಜಾತಿಗಳಲ್ಲಿ ಸಮದೃಷ್ಟಿ, ಸಮ್ಮತಿ, ಜನಸೇವೆಯ ಉತ್ಸುಕತೆಗಳು ಯಾವತ್ತೂ ಜನರನ್ನೂ ಮುಗ್ಧಗೊಳಿಸಿದ್ದುವು. ಇವರ ಆತ್ಮಕ್ಕೆ ಶ್ರೀ ಪರಮಾತ್ಮನು ಚಿರಶಾಂತಿ ಸುಖವನ್ನು ಕೊಡಲೆಂದು ಪ್ರಾರ್ಥಿಸಿ, ಮೃತರ ಕುಟುಂಬದವರೊಡನೆ ಸಹಾನುಭೂತಿಯನ್ನು ಉಡುಪಿಯವರು ಸೂಚಿಸುವವರಿದ್ದಾರೆ.

# ಮಂಗಳೂರು.

ಒಕ್ಟೋಬರ ತಿಂಗಳಲ್ಲಿ ಮಂಗಳೂರಿಗೆ ಬರಲಿರುವ ಮದ್ರಾಸು ಗವರ್ನರರನ್ನು ಜಿಲ್ಲಾ ಕಲೆಕ್ಟರರಾದ ಮಿ। ಗೋಪೆನ್ ದೊರೆಗಳವರ ಮೂಲಕ ಆರಿಕೆಮಾಡಿಕೊಂಡಾಗ, ಮದ್ರಾಸು ಗವರ್ನರರು ಕೆನರಾ ಹೈಸ್ಕೂಲಿನ ಲೈಬ್ರರಿ ಮತ್ತು ಮ್ಯೂಜಿಯಂಗಳನ್ನೂ ಎ. ಸುಬ್ಬರಾವ್ ಮೆಮೋರಿಯಲ್ ಹೋಲನ್ನೂ ತೆರೆಯುವ ಸಮಾರಂಭವನ್ನು ನೆರವೇರಿಸಲು ಒಪ್ಪಿರುವರಾಗಿಯೂ ಬಹುಶಃ ಒಕ್ಟೋಬರ ೧೭ನೇ ತಾರೀಕಿನ ದಿನ ಈ ಸಮಾರಂಭವು ನಡೆಯಲಿರುವುದೆಂದೂ, ಗವರ್ನರರ ನಿಶ್ಚಿತ ಕಾರ್ಯಕ್ರಮವು ಮುಂದಕ್ಕೆ ಪ್ರಕಟವಾಗಲಿರುವುದೆಂದೂ ತಿಳಿದುಬರುತ್ತದೆ.

ಇದೇ ತಿಂಗಳ ಬರುವ ತಾ. ೧೯ನೇ ಬುಧವಾರ ಸಾಯಂಕಾಲ ಘಂಟೆ ೭-೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯಸಮಾಜ ಮಂದಿರದಲ್ಲಿ "ಶ್ರೀ ಕೃಷ್ಣಜಯಂತಿ" ದಿನ ಆಚರಿಸಲ್ಪಡುವುದು. ಶ್ರೀ ಕೃಷ್ಣನ ಜೀವನ, ಬೋಧನೆಗಳ ಕುರಿತು ಭಾಷಣಗಳಾಗುವುವು. ಸಂಗೀತ ಭಜನೆ ಇತ್ಯಾದಿಗಳೂ ಜರಗುವವು. ಸರ್ವರಿಗೂ ಸುಸ್ವಾಗತ

ಮಂಗಳೂರು ಮುನಿಸಿಪಾಲಿಟಿಯೊಳಗೆ ಕಳೆದ ವಾರ ೫೦ ಜನನಗಳೂ ೩೦ ಮರಣಗಳೂ ಆಗಿವೆಯೆಂದು ಆರೋಗ್ಯಖಾತೆಯ ವರದಿಯಿಂದ ತಿಳಿದುಬರುತ್ತದೆ.

ಶ್ರೀ ಕೃಷ್ಣ ಸಿನೇಮದಲ್ಲಿ ಹೊಸ ಟೋಕಿ ಪ್ರೊಜೆಕ್ಟರ್ ಬಂದಿದೆಯೆಂದೂ, ಅದನ್ನು ಫಿಟ್ ಮಾಡುವುದಕ್ಕಾಗಿ ಕಂಪೆನಿಯಿಂದ ಇಂಜಿನಿಯರರೇ ಬಂದಿರುತ್ತಾರೆಂದೂ ಪ್ರಕಟವಾಗಿ ಒಂದೆರಡು ತಿಂಗಳುಗಳು ದಾಟಿದುವು. ಆದರೂ ಹೊಸ ಪ್ರೊಜೆಕ್ಟರನ್ನು ಇಡಲಾದುದು ಕಂಡು ಬರುವುದಿಲ್ಲ. ಯಂತ್ರಕ್ಕೆ ಬೇಕಾದ ಸ್ಪೇರು ಪಾರ್ಟುಗಳಿಗಾಗಿ ಕಂಪೆನಿಗೆ ಬರೆದುಕೊಂಡಿದ್ದೇವೆಂದು ಇಂಜಿನಿಯರರು ಹೇಳುತ್ತಿದ್ದರೆ. ಇಷ್ಟು ಸಮಯದಿಂದಲೂ ಈ ಪ್ರೊಜೆಕ್ಟರನ್ನು ತಯಾರಿಸಿದ ಕಂಪೆನಿಗೆ ಬೇಕಾದ ಸಾಹಿತ್ಯಗಳನ್ನು ಒದಗಿಸಿಕೊಡಲಾಗಲಿಲ್ಲವೇ? ಜನರೆಲ್ಲ ಬೇಸರಗೊಳ್ಳುವಂತಾಗಿದೆ. ಜನರ ನಿಂದೆಗೆ ದಿಕ್ಕಿಲ್ಲ. ಸಿನೆಮ ಕಂಪೆನಿಯ ಪ್ರೊಪ್ರೈಟರರು ಈ ಅವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕಾಗಿ ಶೀಘ್ರದಲ್ಲೇ ವ್ಯವಸ್ಥೆಮಾಡುವರೇ? ಎಂದು ದಾಸ.

## ಚಿಕ್ಕ ಪಂಚಾಯತು ಬೋರ್ಡುಗಳಿಗೆ ರಸ್ತೆ ಕೆಲಸಕ್ಕೆ ಇಂಡಿಯಾ ಸರಕಾರದ ಗ್ರಾಂಟು ಸಿಗುವುದು.

ಇಂಡಿಯಾ ಸರಕಾರದಿಂದ ಗ್ರಾಮೋದ್ಧಾರಕ್ಕೆಂದಿಟ್ಟ ಹಣದಲ್ಲಿ ರಸ್ತೆ ಕೆಲಸಗಳ ಬಗ್ಗೆಯ ಅಂಶವು ಚಿಕ್ಕ ಪಂಚಾಯತ ಬೋರ್ಡುಗಳಿಗೆ ಸಿಕ್ಕಲಾರದೆಂಬ ಸರಕಾರೀ ಹುಕುಮಿನ ವರ್ತಮಾನವನ್ನೂ, ಆ ಹುಕುಮಿನ ವಿಷಯದಲ್ಲಿ ಚಿಕ್ಕ ಬೋರ್ಡುಗಳು ಮಾಡಬೇಕಾಗಿದ್ದ ಕಾರ್ಯಗಳ ವಿವರವನ್ನೂ ನಾನು ತಮಗೆಲ್ಲಾ ಈ ಹಿಂದೆ ತಿಳಿಸಿರುವುದು ಸರಿಯಷ್ಟೆ.

ಆ ವಿಷಯದಲ್ಲಿ ತಾವುಗಳೆಲ್ಲಾ ಜಾಗ್ರತೆಯಿಂದ ಸಹಕರಿಸಿದ ಬಗ್ಗೆ ನಾವೆಲ್ಲರೂ ಸಂತೋಷಪಡತಕ್ಕದ್ದೇ. ತಮ್ಮ ನಿರ್ಣಯಗಳೂ ಪತ್ರಗಳೂ ಮಾನ್ಯ (ಪಂಚಾಯತಗಳ ಪರವಾದ) ಪ್ರೆಸಿಡೆಂಟ ಡೆಲಿಗೇಟರವರಿಗೆ ತಲುಪುತ್ತಾ ಇದ್ದಂತೆಯೇ, ಮುಂದೆ ಬಂದ ಪತ್ರಗಳ ಆಧಾರದಿಂದ ಜೂಲೈ ತಿಂಗಳ ತಮ್ಮ ಸಿ. ೬೦೩/೩೬ರ ಪತ್ರವನ್ನೂ, ಅನಂತರ ಬಂದವುಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಅದೇ ತಿಂಗಳ ಸಿ. ೬೬೦/೩೬ರ ಪತ್ರವನ್ನೂ ಮಾನ್ಯ ಪ್ರೆಸಿಡೆಂಟ್ ಡೆಲಿಗೇಟರವರು ಮದ್ರಾಸು ಸರಕಾರಕ್ಕೆ ಬರೆದಿರುತ್ತಾರೆ.

ಪ್ರೆಸಿಡೆಂಟ್ ಡೆಲಿಗೇಟರವರ ಮೇಲೆ ಹೇಳಿದ ಎರಡು ಪತ್ರಗಳ ಫಲಿತಾಂಶವಾಗಿ ಮದ್ರಾಸು ಸರಕಾರವು ಕಳೆದ ವಾರದಲ್ಲಿ ಒಂದು ಪತ್ರವನ್ನು ಅವರಿಗೆ ಕಳುಹಿಸಿರುತ್ತದೆ. ಆ ಪತ್ರದ ಅಭಿಪ್ರಾಯವು ಈ ಕೆಳಗಿನಂತಿದೆ: ಇಂಡಿಯಾ ಸರಕಾರದ ಗ್ರಾಮೋದ್ಧಾರದ ಬಗ್ಗೆಯ ಗ್ರಾಂಟಿನ ರಸ್ತೆ ಕೆಲಸಗಳ ಅಂಶದಿಂದ ಕೆಲವು ಅಂಶ ಚಿಕ್ಕ ಪಂಚಾಯತಗಳಿಗೂ ಹಂಚುವ ವ್ಯವಸ್ಥೆ ಮಾಡಲಾಗುವುದು.

ಗ್ರಾಂಟಿನ ಮೊಬಲಗು ಎಷ್ಟೇ ಆಗಲಿ, ಯಾವ ರೀತಿಯಲ್ಲೇ ಬರಲಿ, ಹಿಂದೆ ನಿರಾಕರಿಸಲ್ಪಟ್ಟಿದ್ದ ಚಿಕ್ಕ ಬೋರ್ಡುಗಳನ್ನು ಸರಕಾರವು ತನ್ನ ಪುನರಾಲೋಚನೆಯಲ್ಲಿ ಸೇರಿಸಿ ಸಹಾಯದ ಅಭಯವಿತ್ತುದು ಸಂತೋಷಕರ. ಮಾನ್ಯ ಪ್ರೆಸಿಡೆಂಟ್ ಡೆಲಿಗೇಟರವರ ಘನ ಶಿಫಾರಸು ಪ್ರಯತ್ನಗಳ ವಿಷಯದಲ್ಲಿ ನಾವೆಲ್ಲಾ ಕೃತಜ್ಞರಾಗಿರುವುದು ಕೇವಲ ಸ್ವಾಭಾವಿಕವು. ತನ್ನ ಸೂಚನೆಗಳಂತೆ ಸಾರ್ವಜನಿಕ ಹಿತವಾದ ಕಾರ್ಯಗಳನ್ನು ನಿರ್ವಹಿಸುತ್ತಿರುವುದೇ ಅವರಿಗೆ ಸಲ್ಲುವ ವಂದನೆಗಳೆಂದು ಗ್ರಹಿಸುವ ವಿಶಾಲಮನಸ್ಸಿನವರಿಗೆ (ಮಾತುಗಳಿಂದ) ವಂದನೆಗಳನ್ನರ್ಪಿಸಲು ಅಂಜಿಕೆಯಾಗುತ್ತದೆ. ಆದುದರಿಂದ ಆ ವಿಷಯ ಅಷ್ಟೇ ಸಾಕು.

ಎ. ಪಿ. ಸುಬ್ಬಯ್ಯ,
ಪ್ರೆಸಿಡೆಂಟ್, ಅಯಾರ್ಪು ಪಂಚಾಯತ ಬೋರ್ಡು
ಪುತ್ತೂರು

## ಸುಪ್ರಸಿದ್ಧ ಶಿಲ್ಪಕಾರರಾದ ಶ್ರೀ ರಾಮಚಂದ್ರ ಪಾಂಡುರಂಗ ರಾಯ ಕಾಮತರ ಆಗಮನ.

ಶ್ರೀಯುತ ರಾಮಚಂದ್ರ ಪಾಂಡುರಂಗ ಕಾಮತರು ಶಿಲ್ಪಕಲೆಯ ಅಭ್ಯಾಸವನ್ನು ಉತ್ತಮ ರೀತಿಯಿಂದ ಗಳಿಸಬೇಕೆಂಬ ಇಚ್ಛೆಯಿಂದ ಕಲೆಯ ನಿರೀಕ್ಷಣೆ ಮಾಡುತ್ತಾ ಫ್ರಾನ್ಸ್, ಪೋರ್ತುಗಲ್, ಸ್ವಿಜರ್‌ಲೆಂಡ್, ಇಟಲಿ ಮೊದಲಾದ ಯುರೋಪ್ ಖಂಡದೊಳಗಿನ ಎಲ್ಲಾ ದೇಶಗಳಲ್ಲಿ ಪ್ರವಾಸವನ್ನು ಗೈದು ಇದೇ ತಿಂಗಳ ೩ನೇ ಗುರುವಾರ ಪಿ ಮತ್ತು ಒ ಕಂಪೆನಿಯ ಆಡಳಿತೆಗೆ ಒಳಪಟ್ಟ (ಟಪ್ಪಾಲನ್ನು ಒಂದು ಕಡೆಯಿಂದ ಇನ್ನೊಂದು ಪಾಶ್ಚಾತ್ಯ ದೇಶಗಳಿಗೆ ಒಯ್ಯುವಂತಹ) "ಸ್ಟೇಂಡರ್ಡ್" ಎಂಬ ಉಗಿಹಡಗದಲ್ಲಿ ಬೊಂಬಾಯಿಗೆ ಬಂದಿಳಿದಿರುವರು. ಇವರು ಸುಮಾರು ೪॥ ವರುಷಗಳ ವರೆಗೆ ಪಾಶ್ಚಾತ್ಯ ದೇಶಗಳಲ್ಲಿ ಹವಾಗುಣವನ್ನನುಭವಿಸಿ ನಂತರ ತನ್ನ ಮಾತೃಭೂಮಿಯಾದ ಹಿಂದೂದೇಶಕ್ಕೆ ಹಿಂತಿರುಗಿ ಬಂದರೆಂಬ ಸಂತೋಷದ ವಾರ್ತೆಯನ್ನು ಸೂಚಿಸುವರೆ ಬಹಳವಾಗಿ ಸಂತೋಷ ಪಡುತ್ತೇವೆ

ಶ್ರೀಯುತ ಕಾಮತರು ಪೋರ್ತುಗೀಸ್ ರಾಜ್ಯಕ್ಕೆ ಸೇರಿದ ಗೋವಾಂತಕವೆಂಬ ಪ್ರಾಂತ್ಯದೊಳಗಿರುವ "ಮಡಕೈ" ಎಂಬ ಹಳ್ಳಿಯಲ್ಲಿ ಜನ್ಮವೆತ್ತಿದರು. ಅಲ್ಲಿ ತನ್ನ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ೧೬ನೇ ವಯಸ್ಸಿನಲ್ಲಿ ಚಿತ್ರಕಲೆಯ ಶಿಕ್ಷಣವನ್ನು ಪಡೆಯುವುದಕ್ಕಾಗಿ ಮುಂಬಾಯಿಗೆ ಬಂದರು. ವ ನೆಯಾವಿಂದ ಯಾವತ್ತೂ ಸಹಾಯವು ದೊರೆಯದೆ ಇದ್ದುದರಿಂದ ಸ್ವಾವಲಂಬನದಿಂದಲೂ ಮತ್ತು ದೀರ್ಘ ಪರಿಶ್ರಮದಿಂದಲೂ ಅವರು ಪ್ರಥಮದಲ್ಲಿ "ಕೇಕರ್ ಆರ್ಟ್ ಸ್ಟುಡಿಯೋ"ದಲ್ಲಿಯೂ ನಂತರ "ಜೇ ಜೇ ಸ್ಕೂಲ್ ಒಫ್ ಆರ್ಟ್ಸ್" ಎಂಬ ಈ ಸಂಸ್ಥೆಯಲ್ಲಿಯೂ ಯಶಸ್ವೀ ರೀತಿಯಿಂದ ಪೂರ್ಣತೆಯನ್ನು ಹೊಂದಿ "ಆರ್ಟ್ಸ್ ಸ್ಕೂಲ್"ನಲ್ಲಿದ್ದ ಎಲ್ಲಾ ಶಿಷ್ಯವರ್ಗಗಿಂತ ದೊಡ್ಡ ಪದವಿಯನ್ನು ಹೊಂದಿದಂಥವರಾಗಿ 'ಮಹಾಂಬ ಒಪ್ ಕಚ್ಛ್' ಮತ್ತು 'ಮೇಯೋ' ಇವರ ಮೆಡ್ಲುಗಳನ್ನು ಪಡಕೊಂಡರು ೧೯೩೦ನೇ ಫೆಬ್ರವರಿ ತಿಂಗಳಲ್ಲಿ ಬೊಂಬಾಯಿಯಲ್ಲಿ ನಡೆದ "ಬೊಂಬ್ಯಾ ಆರ್ಟ್ಸ್ ಸೊಸೈಟಿ"ಯ ವಾರ್ಷಿಕ ಪ್ರದರ್ಶನಗಳಲ್ಲಿ ಸರಿಯು ಮೂರ್ತಿಯನ್ನು ತಯಾರುಮಾಡಿ "Plaster of Paris" ದ ಪ್ರಥಮ ಇನಾಮನ್ನು ಪಡೆದು ಅವರ ಹೆಸರನ್ನು ಜನತೆಗೆ ಚೆನ್ನಾಗಿ ಪರಿಚಯ ಮಾಡಿಸಿರುವರು. ಪೂನಾ ನಗರದ ರೀ ಮಾರ್ಕೆಟಿನಲ್ಲಿ ನಿಲ್ಲಿಸಲ್ಪಟ್ಟಿರುವ ಶಿವಾಜಿಯ ಪ್ರತಿಮೆಯನ್ನು ತಯಾರಿಸಿರುವ ಸುಪ್ರಸಿದ್ಧ ಶಿಲ್ಪಕಾರ ಶ್ರೀಯುತ ವಿನಾಯಕರಾವ್ ಕರಮರ್‌ಕರ್ K W E Glostan Salaman ಮೊದಲಾದ ತತ್ವಜ್ಞಾನಿಗಳು ಮತ್ತು ಇತರ ಮಿತ್ರರು ಉತ್ತೇಜನವಿತ್ತುದರಿಂದಲೂ (ರಾಜಶ್ರೀ ಬಲಸ್ಟರ್ ಎಸ್ ವಿ ರಾಜಾಧ್ಯಕ್ಷ ಇವರು ಗೌಡಸಾರಸ್ವತ ಬ್ರಾಹ್ಮಣ ಫ್ರೀ ಎಜ್ಯುಕೇಶನ್ ಸೊಸೈಟಿಯಿಂದ ಏರ್ಪಡಿಸಿದ ಆರ್ಥಿಕ ಸಹಾಯವನ್ನು ಕೂಡಿದ ಕಾರಣ) ಅವರು ಶಿಲ್ಪಕಲೆಯ ವಿಶೇಷ ಅಭ್ಯಾಸವನ್ನು ಮಾಡುವುದಕ್ಕೋಸ್ಕರ ೧೯೩೧ನೇ ಇಸವಿಯ ಜನವರಿ ೩೦ನೇ ದಿನ ವಿಲಾಯತಿಗೆ ಪ್ರಯಾಣ ಬೆಳೆಸಿದರು. ಅವರು Royal Academic of Arts London ಎಂಬ ಸಂಸ್ಥೆಗೆ ಸೇರಿ ಪ್ರತಿದಿನ ಅಭ್ಯಾಸಕ್ಕೆ ಪ್ರಾರಂಭಿಸಿದರು. ಹತ್ತು ತಿಂಗಳ ಅವಧಿಯೊಳಗೆ ಸದ್ರಿ ಸಂಸ್ಥೆಯ ವಿದ್ಯಾರ್ಥಿಗಳಿಂದ ಕೂಡಿಸಿದ ವಾರ್ಷಿಕ ಪ್ರದರ್ಶನಗಳಲ್ಲಿ ಒಂದು ರೌಪ್ಯ ಪದಕವನ್ನೂ ಮತ್ತೊಂದು ಬ್ರೊಂಜ್ ಎಂಬ ಪದಕವು ಸಿಕ್ಕಿದುದಲ್ಲದೆ ೩೦ ಪೌಂಡು ಕ್ರಯ ಬಾಳುವ ಮತ್ತು ೧೦ ಪೌಂಡು ಕ್ರಯ ಬಾಳುವ ಎರಡು ಪಾರಿತೋಷಕಗಳನ್ನೂ ಪಡಕೊಂಡರು. ಮುಂದಿನ ವರ್ಷಗಳಲ್ಲಿ ಅಂದರೆ ೧೯೩೨ನೇ ಇಸವಿಯಲ್ಲಿ ಕೂಡಿದ ಪ್ರದರ್ಶನಗಳಲ್ಲಿಯೂ ಸಹ ಅವರು ಇಟ್ಟ ಶಿಲ್ಪಕಲೆಯ ಕೆಲಸವು ಸರ್ವೋತ್ಕೃಷ್ಟವಾಗಿದ್ದುದನ್ನು ಕಂಡು ೫೦ ಪವನು ಕ್ರಯ ಬಾಳುವ "ಎಡ್ವರ್ಡ್ ಸ್ಟೋಲ್" ಎಂಬ ಪದಕವನ್ನೂ ಶಿಷ್ಯವರ್ಗದಿಂದ ಹತ್ತು ಪೌಂಡುಗಳ ಒಂದು ಪಾರಿತೋಷಕವನ್ನೂ ಮತ್ತೊಂದು ಬೆಳ್ಳಿಯ ಪದಕವನ್ನೂ ಮತ್ತು ಬ್ರೊಂಜ್ ಎಂಬ ಮೆಡ್ಲನ್ನೂ ಸಂಪಾದಿಸಿದರು. ಸದ್ರೀ ಪ್ರದರ್ಶನದ ಉದ್ಘಾಟನ ಸಮಾರಂಭದಲ್ಲಿ ಅದರ ಅಧ್ಯಕ್ಷರು ತನ್ನ ಭಾಷಣದಲ್ಲಿ ಶ್ರೀಯುತ ಕಾಮತರು ಮಾಡಿರುವ ವಿಚಿತ್ರತೆಯ ವಿಷಯ ಚೆನ್ನಾಗಿ ವಿವರಿಸಿ ಹೇಳಿರುವರು. ಹಾಗೆಯೇ Gillerton R A ಮತ್ತು Sir W Rotherstane V A-R C A Royal College of Arts ದ ಪ್ರಿನ್ಸಿಪಾಲ್ ಮತ್ತು ಇತರ ಕಲಾಭಿಜ್ಞರು ಸಮಾರಂಭದ ಸಮಯ ಅವರನ್ನು ಅಭಿನಂದಿಸಿದರು. ಕಳೆದ ವರ್ಷದಲ್ಲಿಯೂ ಶ್ರೀ ಕಾಮತರವರಿಗೆ ಸದ್ರಿ ಸಂಸ್ಥೆಯವರು ತಮ್ಮ ಸ್ವರ್ಣಪದಕವನ್ನು ಮತ್ತು ೩೦೦ ಪವನ ಕ್ರಯಬಾಳುವ "ಎಡ್ವರ್ಡ್ ಸ್ಟೋಲ್" ಎಂಬ ಪಾರಿತೋಷಕವನ್ನು ಕೊಟ್ಟು ಅವರ ಅತ್ಯುತ್ಕೃಷ್ಟ ಕಲೆಯನ್ನು ಪ್ರಶಂಸಿಸಿದರು. ಇದು ಹೇಗೆಂದರೆ ಲಂಡನ್ ನಗರದಲ್ಲಿ ೧೭೬೮ನೇ ಇಸವಿಯಲ್ಲಿ Royal Academic of Arts ಎಂಬ ಸಂಸ್ಥೆಯು ಸ್ಥಾಪಿತವಾದಂದಿನಿಂದ ಇಂದಿನವರೆಗೆ ಹಿಂದೀಯರಿಗೆ ಇಂಥಾ ಸ್ವರ್ಣ ಪದಕಗಳು ದೊರಕಲಿಲ್ಲ. ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದು ಅಗತ್ಯ. ಅವರ ಅಸಾಮಾನ್ಯ ಯಶಸ್ಸುಗಳ ವಿಷಯದಲಿ ಯಾರಿಗೂ ಕಲ್ಪನೆ ಮಾಡುವುದಕ್ಕೆ ಸಾಧ್ಯವೇ ಆಗಿಲ್ಲ. ಈ ಹೊಸ ಸನ್ಮಾನಗಳಿಂದಲೂ ಪ್ರಶಸ್ತಿಪತ್ರಗಳಿಂದಲೂ ಮೆರೆದುದಕ್ಕಾಗಿ ದೇಶಗಳೊಳಗಿರುವ ದೇಶಬಾಂಧವರಿಗೆ, ಮತ್ತು ಭಗಿನಿಗಳಿಗೂ ಅವರು ಗೌರವಸ್ಥಾನರೇ. ಬೊಂಬಾಯಿಯಲ್ಲಿರುವ 'Times of India' ಪತ್ರಕರ್ತರೂ ಕೂಡಾ ಶ್ರೀ ಕಾಮತರ ಕುರಿತು ಸಂಪಾದಕೀಯ ಲೇಖನಗಳನ್ನು ಬರೆದು ಅವರನ್ನು ಯೋಗ್ಯ ರೀತಿಯಲ್ಲಿ ಗೌರವಿಸಿರುವರು. ಈ ವಿಷಯದಲ್ಲಿ ಪರಿಣತರಾಗಿರುವವರೂ ಕಲೆಯ ವಿಶೇಷ ಅಭ್ಯಾಸ ಮಾಡುವುದಕ್ಕೋಸ್ಕರ ಫ್ರಾನ್ಸ್, ಪೋರ್ತುಗೀಸ್, ಐರ್ಲಾಂಡು, ಇಟಲಿ, ರಷ್ಯಾ ಮುಂತಾದ ಯುರೋಪ ಖಂಡದೊಳಗಿನ ಅನೇಕ ದೇಶಗಳಲ್ಲಿ ಹೆಚ್ಚಾಗಿ ಶ್ರಮಪಟ್ಟು ತನ್ನ ಜ್ಞಾನಾಭಿವೃದ್ಧಿಯನ್ನು ಸಂಪೂರ್ಣವಾಗಿ ಗಳಿಸಿರುವರು. ಇತ್ತೀಚೆಗೆ ಪ್ರಸಿದ್ಧವಾದಂಥಾ "ಸರ್, ಜೇ ಜೇ ಸ್ಕೂಲ್ ಒಫ್ ಆರ್ಟ್ಸ್" ವಾರ್ಷಿಕ ಮಹೋತ್ಸವವು ಸರಕಾರದವರ ಕಾರಭಾರಿಯವರಿಂದ ನಡೆದು ಶ್ರೀ ಕಾಮತರ ಅಸಾಮಾನ್ಯ ಕೌಶಲದ ಉಲ್ಲೇಖನವನ್ನು ಮಾಡಿರುವರು

ಈ ರೀತಿಯಲ್ಲಿ ಶಿಲ್ಪಕಲೆಯ ನಿಯಮಿತ ಅಭ್ಯಾಸಕ್ರಮವು ಬ್ರಿಟಿಷ್ ಸಾಮ್ರಾಜ್ಯದ ರಾಜಧಾನಿಗಳಲ್ಲಿ ಉತ್ಕೃಷ್ಟ ರೀತ್ಯಾ ಮಾಡಿ ಈಗ ನಾಲ್ಕೂವರೆ ವರುಷಗಳನ್ನು ವಿಲಾಯತಿಯಲ್ಲಿಯೇ ಪೂರೈಸಿ ನಂತರ ಅವರು ಮಾತೃಭೂಮಿಗೆ ಬಂದಿರುವರು. ಅವರ ವಿದ್ಯಾಪ್ರಾವೀಣ್ಯದಿಂದ ಅವರ ಗಳಿಸಿದಂಥ ಕಲೆಯ ವೃತ್ತಿಯ ಕಡೆಗೆ ಲಕ್ಷಿಸಿ ಎಲ್ಲಾ ಗೌಡ ಸಾರಸ್ವತ ಸಮಾಜ ಸ್ತ್ರೀಪುರುಷರೂ ಅಭಿಮಾನ ತಾಳಬೇಕಾಗಿದೆ

ವಿ. ಎಸ್. ಶಿಬ್ರೂರ್‌ಕರ್.


# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

## ಚಿಕ್ಕಮಗಳೂರು.

**ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬ್ಯಾ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.**

ಮುಂಬಾಯಿಯಿಂದ–ಪೂನಾ ಬೆಳಗಾಂವ–ಧಾರವಾಡ–ಹುಬ್ಬಳ್ಳಿ–ಗೋವಾ ಇವೆಲ್ಲ ಕಡೆಗಳಿಂದ

ಮಂಗಳೂರಿಗೆ–ಪುತ್ತೂರು–ಉಡುಪಿ–ಕಾರ್ಕಳ–ಬೆಳ್ತಂಗಡಿ–ವೇಣೂರು–ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

**ಶೀಘ್ರ ಪ್ರಯಾಣ- ಅನುಕೂಲ ಸೌಕರ್ಯ- ಅತ್ಯಲ್ಪ ಖರ್ಚು- ಸುಂದರವಾದ ನೋಟ.**

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ–ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ–ಕೈಗಾರಿಕೆಯ ಕೇಂದ್ರವಾದ ಭದ್ರಾವತಿ–ಶಿಲಾಶಿಲ್ಪದ ಬೇಲೂರು, ಹಳೇಬೀಡು–ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು–

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ

**Chikmagalur Public Conveyance Motor Service,**

**CHIKMAGALUR.**

# ತನ್ನ ಹಾವಿನಿಂದಲೇ ಕಚ್ಚಲ್ಪಟ್ಟ ಅಭಿನಯೇತ್ರಿ!

## ಲೇಬರ್ ಧುರೀಣರ ದಸ್ತಗಿರಿ!

ಮುಂಬಾಯಿಯ ಲೇಬರ್ ಧುರೀಣರಾದ ಶ್ರೀ ಎಸ್. ಡಿ. ಪಟ್ಕಾರರೆಂಬವರನ್ನು ಎಮರ್ಜೆನ್ಸಿ ಪವರ್ಸ್ ಏಕ್ಟ್ ಮೇರೆಗೆ ಸೆರೆ ಹಿಡಿದು ಬೈಕುಲ್ಲಾ ಹೌಸ್ ಓಫ್ ಕರೆಕ್ಷನ್ನಲ್ಲಿಟ್ಟಿರುವರು. ಶ್ರೀ ಪಟ್ಕಾರರನ್ನು ಗಿರಣಿ ಕಾಮ್ಗಾರ್ ಸಂಘದ ಎಕ್ಸಿಕ್ಯೂಟಿವ್ ಕೌನ್ಸಿಲಿಗೆ ಆರಿಸಲಾಗಿತ್ತು

## ಅಕ್ಷರಸ್ಥ ನಿರುದ್ಯೋಗಿಗಳ ಸ್ಥಿತಿ.

### ಬಿಹಾರ್ ಸರಕಾರದ ಆಯೋಜನೆ.

ಬಿಹಾರ್ ಮತ್ತು ಒರಿಸ್ಸಾ ಸರಕಾರವು ಶಿಕ್ಷಿತ ನಿರುದ್ಯೋಗಿಗಳ ಸಹಾಯಾರ್ಥ ಇಂಟೆಲಿಜೆನ್ಸ್ ಆಫೀಸರರೊಬ್ಬರನ್ನು ನೇಮಕ ಮಾಡಿ ಅವರ ಇನ್‌ಫೋರ್ಮೇಶನ್ ಬ್ಯೂರೋದ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಹುಡುಕಿಕೊಡಬೇಕೆಂದು ಯೋಜಿಸಲಾಗಿದೆ ತಮ್ಮ ಪ್ರಾಂತ್ಯದಲ್ಲಿರುವ ಶಿಕ್ಷಿತ ನಿರುದ್ಯೋಗಿಗಳ ಪಟ್ಟಿಯೊಂದನ್ನು ತಯಾರಿಸಿಡುವರು ಅವರ ವಿಷಯ ಕೂಲಂಕಷವಾಗಿ ತಿಳಿದುಕೊಳ್ಳುವರು ಎಲ್ಲಿಯಾದರೂ ಕೆಲಸವು ಖಾಲಿ ಬಿದ್ದರೆ ಯೋಗ್ಯತಾನುಸಾರವಾಗಿ ಶಿಫಾರಸು ಮಾಡುವರು ಮಾತ್ರ ಕೆಲಸವನ್ನು ಕಲ್ಪಿಸಿ ಕೊಡಲು ಜವಾಬ್ದಾರರಲ್ಲ

## ತನ್ನ ಹಾವಿನಿಂದಲೇ ಕಚ್ಚಲ್ಪಟ್ಟ ಅಭಿನಯೇತ್ರಿ!

### ಕಲ್ಕತ್ತದ ನರ್ತಕಿಯು ಮೃತಳಾದಳು

ಲಕ್ನೋವಿನ ನಿಶಾತ್ ಟೋಕಿ ಹೌಸ್‌ನಲ್ಲಿ ಮಿಸ್ ಕನಿಜ್ ಎಂಬ ಕಲ್ಕತ್ತದ ಅಭಿನಯೇತ್ರಿಯೊಬ್ಬಳು ತನ್ನ ಪ್ರದರ್ಶನವನ್ನು ನಡೆಸುತ್ತ ಒಂದು ಹಾವನ್ನಾಡಿಸುತ್ತಿದ್ದಾಗ ಅದು ಅವಳ ಬೆರಳನ್ನು ಕಚ್ಚಿತು ಅವಳು ಒಡನೆ ಆ ಗಾಯಕ್ಕೆ ವಸ್ತ್ರ ಸುತ್ತಿ ಪುನಃ ನಟನೆಗೆ ಮೊದಲುಮಾಡಿದಳು ಹತ್ತು ನಿಮಿಷಗಳಲ್ಲಿ ಅವಳು ಸ್ಮೃತಿ ತಪ್ಪಿ ಬಿದ್ದಳು ಅವಳನ್ನು ಅವಳ ಸಂಗಡಿಗರು ಒಳಗೆ ಕೊಂಡೊಯ್ದರು ಅವಳು ಬೆರಳಿಗೆ ಕಟ್ಟಿದ ವಸ್ತ್ರವನ್ನು ಬಿಚ್ಚಿದರು ಒಡನೆ ವಿಷವು ಏರಿತು— ಅವಳನ್ನು ಆಸ್ಪತ್ರೆಗೊಯ್ದರು ಅಲ್ಲಿಯೂ ಅವಳನ್ನು ಬದುಕಿಸಲಾಗಲಿಲ್ಲ ಅವಳನ್ನು ಪುನಃ ಮನೆಗೆ ತರಲಾಯಿತು ಅಲ್ಲಿ ಅವಳು ಕಾಲವಶಳಾದರು ಬಹು ಬುದ್ಧಿಯ ಅವಳ ಹಾವು ಒಂದೆರಡು ದಿನಗಳ ಮೊದಲು ಸತ್ತು ಹೋಯಿತು ಆದುದರಿಂದ ಅವಳು ಮತ್ತೊಂದು ಹಾವನ್ನು ಪಡಕೊಂಡಳು ಇದೇ ಅವಳಿಗೆ ಮೃತ್ಯುಪ್ರಾಯವಾಯಿತು

## ಅಮೇರಿಕದಲ್ಲಿ ವಿದ್ಯುತ್ತು

ಅಮೇರಿಕದ ಕಾನಡ ಎಂಬ ಬ್ರಿಟಿಷ್ ಸ್ವಾಸ್ಥ್ಯದಲ್ಲಿರುವ ಜಲಪಾತಗಳಿಂದ ೪೩೭ ಲಕ್ಷ ಅಶ್ವಶಕ್ತಿಗಳಷ್ಟು ವಿದ್ಯುತ್ ಶಕ್ತಿಯನ್ನು ಉತ್ಪತ್ತಿಮಾಡಬಹುದೆಂದು ಅಂದಾಜಾಗಿದೆ ಇದರಲ್ಲಿ ಶೇಕಡಾ ೧೭ರಷ್ಟು ಮಾತ್ರ ಈಗ ಉತ್ಪತ್ತಿಯಾಗುತ್ತಿದೆ ಕಾಗದದ ಕಯ್ಯಾರಿ ಕಾರ್ಖಾನೆಗಳು ಮಾತ್ರವೇ ಆರು ಲಕ್ಷಕ್ಕೆ ಮೇಲ್ಪಟ್ಟ ಅಶ್ವಶಕ್ತಿಗಳ ವಿದ್ಯುತ್ತನ್ನು ಉಪಯೋಗಿಸಿಕೊಳ್ಳುವುವು ಗಣಿ ಕೆಲಸಗಳು ಮರಗೆಲಸದ ಕಾರ್ಖಾನೆಗಳು, ಮೆಷಿನ್ ಶಾಪುಗಳು, ಮುನಿಸಿಪಲ್ ಪಂಪುಗಳು, ಇಲೆಕ್ಟ್ರಿಕ್ ದೀಪಗಳು ಇವುಗಳೆಲ್ಲವೂ ಸೇರಿ ಸುಮಾರು ೩॥ ಲಕ್ಷ ಅಶ್ವಶಕ್ತಿಗಳನ್ನು ಮಾತ್ರ ಉಪಯೋಗಮಾಡುತ್ತಿವೆ.

## ಅಮೇರಿಕದ ಈಗಿನ ಸ್ಥಿತಿ

ಒಂದು ಕೋಟಿ ಜನರು ನಿರುದ್ಯೋಗಿಗಳಾಗಿರುವರು. ಎರಡು ಕೋಟಿ ಜನರಿಗೆ ಸರಕಾರದವರು ಜೀವನಾಂಶ ಕೊಡುತ್ತಿದ್ದಾರೆ. ೩೦ ಲಕ್ಷ ಕೋಟಿ ಸರಕಾರಿ ಸಾಲವಿದೆ. ಕಟ್ಟಡ ಕೆಲಸವು ಕಡಿಮೆಯಾಗಿದೆ. ಅನೇಕ ರೈಲ್ವೆ ಕಂಪೆನಿಗಳು ದಿವಾಳಿಯಾಗಿ ರಿಸೀವರುಗಳ ಆಡಳಿತದಲ್ಲಿವೆ ಬ್ಯಾಂಕುಗಳಲ್ಲಿ ಹಣವು ಹೆಚ್ಚಾಗಿ ದಿವಾಜಟು ಆಗುತ್ತಿದ್ದರೂ, ಸಾಲ ಮಾಡುವವರು ಇಲ್ಲ. ರೈತರ ಅತ್ಯಸ್ತಿ ಗೊಣಗಾಟದಲ್ಲಿದೆ. ಕೂಲಿಗಾರರ ಮುಷ್ಕರವು ಪ್ರಾರಂಭವಾಗುವುದರಲ್ಲಿದೆ. ನಾಣ್ಯದ ಧಾರಣೆಯು ಹೆಚ್ಚಬೇಕೆಂಬುದು ಹಲವರ ಮತ. ಜೀವನಾಧಾರ ವಸ್ತುಗಳ ಬೆಲೆ ಏರುತ್ತಿದೆ ದವಸಧಾನ್ಯಗಳ ಬೆಳೆಯಲ್ಲಿ ಮಿತಿಯಾಗಿರುವರು. ಹೆಚ್ಚಿನ ಬೆಳೆಯನ್ನು ನಾಶಪಡಿಸುವರು ಐಶ್ವರ್ಯವು ಎಲ್ಲರಿಗೂ ಸಮಭಾಗವಾಗಬೇಕೆಂದು ಹೇಳುವವರ ಮುಂದಾಳುತ್ವಕ್ಕೆ ಸಾವಿರಾರು ಜನರು ಪ್ರೋತ್ಸಾಹ ಕೊಡುತ್ತಿರುವರು. ಉಕ್ಕಿನ ಕೈಗಾರಿಕೆಯಲ್ಲಿ ಅರ್ಧಕಾಲ ಮಾತ್ರ ಕೆಲಸ ಮಾಡಲಾಗುತ್ತದೆ ಕೆಲವು ಕೈಗಾರಿಕೆಗಳಲ್ಲಿ ಲಾಭವೆಂಬುದೇ ಇಲ್ಲವಾಗಿದೆ ಉಳಿದುವುಗಳಲ್ಲಿ ಲಾಭದ ದರವು ದಿನದಿನಕ್ಕೆ ಇಳಿಯುತ್ತಿದೆ

## ಅವಳ ಪ್ರೇಮ

ಒಬ್ಬ ಧಾಕೂರ್ ಹೆಂಗಸು ತನ್ನ ಆರು ವರ್ಷದ ಮಗಳನ್ನು ಪಂಜಾಬ್ 'ಮೈಲಿ'ನ ಕೆಳಗೆ ಬೀಳದಂತೆ ರಕ್ಷಿಸಲು ಮಗುವಿನ ಮೇಲೆ ಬರುತ್ತಿದ್ದ ಇಂಜಿನಿನ ಚಕ್ರಗಳಿಗೆ ತನ್ನ ಎಡಗೈ ಹಾಕಿದಳು ಆಕೆಯ ಕೈ ಕತ್ತರಿಸಿ ಹೋಯಿತು ಮಗುವಿಗೆ ಅಪಾಯವಾಗಲಿಲ್ಲ

## ಕ್ರೈಸ್ತರು ಹಿಂದೂಗಳಾದುದು

ತಂಗನಾಯ್ಕದಲ್ಲಿರುವ ಕ್ರೈಸ್ತ ಪಾದ್ರಿಗಳಾದ ಫ್ರಾನ್ಸಿಸ್ ಎಂಬವರು ಹಿಂದೂ ಧರ್ಮವನ್ನವಲಂಬಿಸಿ ಸತ್ಯಪಾಲ ಸನ್ಯಾಸಿಯೆಂಬ ನಾಮಧಾರಣವನ್ನು ಮಾಡಿರುವರು ಹಿಂದೂ ಶಾಸ್ತ್ರಗಳನ್ನವರು ಕೂಲಂಕಷವಾಗಿ ಅಧ್ಯಯನ ಮಾಡಿ ಅದರಲ್ಲಿನ ಶ್ರೇಷ್ಠತೆಯನ್ನು ಮನಗಂಡು ಅದನ್ನು ಸ್ವೀಕರಿಸಿದೆನೆಂದು ಅವರ ಹೇಳಿಕೆ

## ಭೋಸರಿಗೆ ಗೌರವ

ಕಲ್ಕತ್ತದ ನಗರಸಭೆಯವರು ಶ್ರೀ ಶರತ್ ಚಂದ್ರ ಭೋಸರಿಗೆ ಒಂದು ಮಾನಪತ್ರವನ್ನು ಸಮರ್ಪಿಸಬೇಕೆಂದು ಬಹುಮತದಿಂದ ನಿರ್ಧರಿಸಿ ಆ ಬಗ್ಗೆ ೧೦೦೦ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೂ ನಿಶ್ಚಯಮಾಡಿದರು ಐರೋಪ್ಯ ಸದಸ್ಯರೂ, ನೇಮಿತ ಸದಸ್ಯರೂ ಮಾತ್ರ ವಿರೋಧವಾಗಿ ವೋಟುಕೊಟ್ಟರು ಚುನಾಯಿಸಲ್ಪಟ್ಟ ಮಹಮ್ಮದೀಯ ಪ್ರತಿನಿಧಿಗಳು ರಾಷ್ಟ್ರಸಭೆಯ ಸದಸ್ಯರೊಡನೆ ಮತಕೊಟ್ಟರು.

## ಹೆಣ್ಣು ಮಕ್ಕಳ ಸಂತೆ.

ಯುನೈಟೆಡ್ಸ್‌ನಲ್ಲಿಯ ಒಂದು ಗ್ರಾಮದಲ್ಲಿ ಯಾರಾದರೂ ಹೆಂಗಸರು ಹೆತ್ತಲ್ಲಿ ಗಂಡು ಮಕ್ಕಳನ್ನೆ ಹೆರುವರು ಅಲ್ಲಿ ಹೆಣ್ಣು ಮಕ್ಕಳು ಹುಟ್ಟುವುದಿಲ್ಲ ಕಾರಣವನ್ನು ಯಾವ ಡಾಕ್ಟರೂ ತಿಳಿಯದಿದ್ದಾನೆ ನರ್ಸುಗಳು ಆಶ್ಚರ್ಯಪಡುತ್ತಾರೆ ಅದೇ ಹೆಂಗಸರು ಬೇರೆ ಊರಿನಲ್ಲಿರುವಾಗ ಹೆಣ್ಣು ಮಕ್ಕಳನ್ನು ಹೆರುತ್ತಾರೆ ಬೇರೆ ಊರಿನವರು ಆ ಊರಿಗೆ ಬಂದು ಹೆತ್ತರೆ ಅವರಿಗೆ ಗಂಡುಮಕ್ಕಳೇ ಹುಟ್ಟುವುವು ಗಂಡುಮಕ್ಕಳು ಬೇಕಾದವರು ಅಲ್ಲಿಗೆ ಹೋಗಿ ಹೆರುವುದು ಒಳ್ಳೆಯದಲ್ಲವೇ?

## ಶ್ರೀಮತಿ ಅಮೃತಕಾರರು

ಆಸ್ಸಾಮ್- ಬಂಗಾಲದ ದುಃಖನಿವಾರಣಾ ಸಂಘದ ಸಂಸ್ಥೆಯೊಂದನ್ನು ಏರ್ಪಾಡು ಮಾಡಲು ಕಲ್ಕತ್ತೆಗೆ ತೆರಳಿದ ಶ್ರೀಮತಿ ಅಮೃತಕಾರರು ಬಲವತ್ತರವಾದ ನೋವಿನಿಂದ ನರಳುತ್ತಲಿದ್ದಾರೆ. ಡಾಕ್ಟರರು ಒಪರೇಶನ್ ಅಲ್ಲದೆ ಮತ್ತಾವುದರಿಂದಲೂ ಗುಣವಾಗಲಿಕ್ಕಿಲ್ಲವೆಂದು ಅಭಿಪ್ರಾಯಪಡುತ್ತಾರಾದುದರಿಂದ, ಇನ್ನೆರಡು ದಿನಗಳಲ್ಲಿಯೇ ಒಪರೇಶನ್ ಮಾಡಲಿರುವರು

## ಗಂಡನಿಗೆ ಮರಣಶಿಕ್ಷೆಯಾಯಿತು!

ಸೇಲಂ, ಆಗೋಸ್ಟು ೮

ತ್ರಿಚಿನಗೋಡ್ ತಾಲೂಕಿನಲ್ಲಿಯ ಪೆರಿಯಾ ಗೌಂಡನಿನ ಮೇಲೆ ಕೊಲೆಯ ಆರೋಪ ಸ್ಥಾಪನೆಯಾಗಿ ಅವನಿಗೆ ಮರಣಶಿಕ್ಷೆ ವಿಧಿಸಿದರು ಈ ಪೆರಿಯಾ ಗೌಂಡನು ತನ್ನ ಹೆಂಡತಿಯ ಸತೀತ್ವದ ಮೇಲೆ ಸಂಶಯವಿಟ್ಟು ಅವಳನ್ನು ಕೊಂದುದಲ್ಲದೆ ಅವಳನ್ನು ರಕ್ಷಿಸಲು ಬಂದ ಅತ್ತೆಯನ್ನೂ ಕೊಲ್ಲಲು ಹವಣಿಸಿದ್ದನು. ಆದರೆ ಅಷ್ಟರಲ್ಲಿ ಪೋಲೀಸರಿಗೆ ಇದು ತಿಳಿದು, ಅವನ ದಸ್ತಗಿರಿಯಾಯಿತು ಕೋರ್ಟಿನಲ್ಲಿ ವಿಚಾರಣೆಯಾಗಿ ಕೊಲೆಪಾತಕಿಗೆ ಫಾಸಿ ಶಿಕ್ಷೆಯಾಯಿತು

## ಹಿಂದೀ ಪ್ರಚಾರಕ್ಕಾಗಿ

ಹೋಲ್ಕರ್ ಮಹಾರಾಜರವರು ಹಿಂದೀ ಪ್ರಚಾರಾರ್ಥ ಎತ್ತಲ್ಪಡುವ 'ಗಾಂಧಿಜೀಲ'ಕ್ಕೆ ರೂ ೫೦೦೦ವನ್ನು ಕೊಟ್ಟಿರುವರು ಬೇರೆ ಕೆಲವರೂ ತಮ್ಮ ವಂತಿಗೆಗಳನ್ನು ಕೊಡುವ ವಾಗ್ದಾನವಿತ್ತಿರುವರು

## ಹಿಂದೂ ಧುರೀಣರ ಮೇಲಿನ ಬಹಿಷ್ಕಾರಾಸ್ತ್ರದ ಖಂಡನೆ

ಕಲ್ಕತ್ತದಲ್ಲಿ ಪಂಡಿತ ಶೀ ಎಸ್ ಮಿತ್ರ ಮಾಜಿ ಎಂ ಎಲ್ ಎ ಇವರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ ಹಿಂದೂ ಮಹಾಸಭೆಯ ಅಧ್ಯಕ್ಷರೆಂದ ರೆವರೆಂಡ ಒಟ್ಟಾಮರ/ರ ಮೇಲೆ ಸ್ಥಳೀಕ ಸರಕಾರಗಳು ಬಹಿಷ್ಕಾರಾಸ್ತ್ರಗಳನ್ನು ಹೂಡಿದುದನ್ನು ಖಂಡಿಸಲ್ಪಿತ

## ಚಲನಚಿತ್ರಗಳ ಸಂಘ

ಇಂಗ್ಲೆಂಡಿನಲ್ಲಿ ಚಲನಚಿತ್ರಗಳನ್ನು ತಯಾರಿಸುವವರೆಲ್ಲರೂ ಸೇರಿ ಒಂದು ನೇಷನಲ್ ಫಿಲ್ಮ್ ಲೈಬ್ರೆರಿ ಮತ್ತು ಮ್ಯೂಸಿಯಮನ್ನು ಪ್ರಾರಂಭಿಸಿರುವರ ದೇಶದಲ್ಲಿ ತಯಾರಾದ ಚಿತ್ರಗಳ ಒಂದೊಂದು ಪ್ರತಿಯು ಮ್ಯೂಸಿಯಮಿಗೆ ಉಚಿತವಾಗಿ ಕಳುಹಿಸಲ್ಪಡುವುದು, ಪಾಠಶಾಲೆಗಳಲ್ಲಿ ಮಕ್ಕಳು ನೋಡಲು ತಕ್ಕುದಾದ ಚಿತ್ರಗಳ ಫಿಲ್ಮುಗಳನ್ನು ಉಚಿತವಾಗಿ ಸ್ಕೂಲುಗಳಿಗೆ ಎರವು ಕೊಡುವರು

## ಗೋಧಿ ಪ್ರವಾದಿನಿ.

ಡಾಕ್ಟರ್ ಕೋರಾಹಿಂಡ್ ಎಂಬ ಅಮೇರಿಕದ ದೇಶೀಯಳು ಗೋಧಿಬೆಳೆಯು ಇಷ್ಟೇ ಆಗುವುದೆಂದು ಮೊದಲು ತಿಳಿಸುವುದರಲ್ಲಿ ಪ್ರಸಿದ್ಧಪಡೆದಿರುವಳು ಈಕೆಯು ಗೋಧಿ ಬೆಳೆದಿರುವ ಜಮೀನಿನಲ್ಲಿ ಹೋಗುತ್ತಾ ಕಣ್ಣು ಮುಚ್ಚಿಕೊಂಡು ಕೈಗೆ ಸಿಕ್ಕಿದ ಒಂದು ಹಿಡಿ ತೆನೆಗಳನ್ನು ಕಿತ್ತುಕೊಳ್ಳುವಳು—ಅವುಗಳ ಉದ್ದ, ಕಾಳಿನ ಗಾತ್ರ, ರೋಗಾದಿಗಳು, ಬೆಳೆದಿರುವ ಸರಣಿ ಇವುಗಳನ್ನೆಲ್ಲಾ ಮನಸ್ಸಿನಲ್ಲಿಯೇ ಗುಣಿಸಿಕೊಂಡು, ಆಯಾ ಜಮೀನಿನಲ್ಲಿ ಇಷ್ಟೇ ಫಸಲಾಗುವುದೆಂದು ಹೇಳಿಬಿಡುವಳು ಇದುವರೆಗೆ ಈಕೆ ಹೇಳಿರುವುದರಲ್ಲಿ ಚಾಚೂ ವ್ಯತ್ಯಾಸವಾಗಿರುವುದಿಲ್ಲ ಈಕೆಯು ಅಮೇರಿಕ, ಕಾನಡ ದೇಶಗಳಲ್ಲಿ 'ಗೋಧಿ ಪ್ರವಾದಿನಿ' ಎಂದು ಪ್ರಸಿದ್ಧಳಾಗಿರುವಳು ಈಕೆಯ ವಯಸ್ಸು ೩೩ ವರ್ಷ. ಈಕೆಯ ಪ್ರವಾದನೆಯಿಂದ ಆ ದೇಶಗಳಲ್ಲಿ ಗೋಧಿ ಧಾರಣೆಯು ಏರುಪೇರಾಗಿ ರೈತರಿಗೆ ತುಂಬಾ ಲಾಭವು ಕಂಡುಬಂದಿರುವುದು

ಘಾಯಗಳು ಮತ್ತು ವ್ರಣಗಳು

ಇಂದ್ರಜಾಲದಂತೆ ಗುಣಹೊಂದುತ್ತವೆ!

ಸಸ್ಯಜನ್ಯ ಲೇಪನವಾದ

ಸಾಂಬಕನ್ನುಪಯೋಗಿಸಿರಿ!

ರಕ್ತವು ವಿಷಮಯವಾದರೆ ಸಣ್ಣ ಕಡಿತವೂ ವ್ರಣವೂ ಸುಟ್ಟ ಘಾಯವೂ ಭಯ ಹುಟ್ಟಿಸುತ್ತವೆ ನಿಮ್ಮ ಘಾಯಗಳೆಲ್ಲ ಸಾಂಬಕನ್ನೇ ಲೇಪಿಸಲು ನಿರ್ಧಾರಮಾಡಿ! ಈ ಅತ್ಯದ್ಭುತಕರ ರೋಗಹಾರಕ ಔಷಧಿಯು ವಿಷವನ್ನು ಕೂಡಲೇ ಹೀರುತ್ತದೆ. ನೋವನ್ನು ಗುಣಮಾಡುತ್ತದೆ ಅದನ್ನು ಬುಡದಿಂದಲೇ ಗುಣಗೊಳಿಸುತ್ತದೆ ಸಾಂಬಕನ್ನು ಹಾಗಿಸಿದರೆ ಕಲೆಗಳುಂಟಾಗುವುದಿಲ್ಲ ಶುದ್ಧವಾದ ಸಸ್ಯ ಔಷಧಗಳ ಸಾರದಿಂದಲೇ ಇದನ್ನು ತಯಾರಿಸಲಾಗಿದೆ

ಕ್ರಯ ರೂ. 1 ಅಥವಾ ರೂ 2 ಆಣೆ 1

ಪ್ರಾಣಿಜನ್ಯ ಕೊಬ್ಬು ಇಲ್ಲವೇ ಇಲ್ಲ

ಸಾಂಬಕ್

Zam-Buk


## ಕಿಡಿ ಕಾಡು ಸುಟ್ಟಿತು

ಫ್ರಾನ್ಸ್‌ದೇಶದ ಒಂದಾನೊಂದು ಡಿಸ್ಟ್ರಿಕ್ಟಿಗೆ ಸೇರಿದ ಕಾಡನ್ನು ಹಾದು ಹೋಗುತ್ತಿದ್ದವರ್‍ಯಾರೋ ತಾವು ಸೇದಿದ ಸಿಗರೇಟ್ ತುಂಡನ್ನು ಅಜಾಗರೂಕತೆಯಿಂದ ಎಸೆದದ್ದರಿಂದ, ಕಾಡಿನಲ್ಲಿ ಒಣಗಿದ್ದ ಹುಲ್ಲು ಹತ್ತಿಕೊಂಡು, ಆರುನೂರು ಎಕರೆಗಳಲ್ಲಿ ಬೆಳೆದಿದ್ದ ಬೆಲೆಬಾಳುವ ಮರಗಿಡಗಳೆಲ್ಲವೂ ಕ್ಷಣಕಾಲದಲ್ಲಿ ನಾಶವಾದುವು ಬೆಂಕಿಯ ಜ್ವಾಲೆಯನ್ನು ತಡೆಯಲಾರದೆ, ಕೆಲವು ಗ್ರಾಮಗಳನ್ನು ಜನರು ಬಿಟ್ಟು ಹೋಗಬೇಕಾಯಿತು.

## ಫೋರ್ಡರ ಖ್ಯಾತಿ

ಫೋರ್ಡ್ ಕಾರುಗಳೆಂದರೆ ಎಲ್ಲರಿಗೂ ಗೊತ್ತು ಅದರ ಕಾರ್ಖಾನೆಯ ಮ್ಯಾಲಿಕರಾದ ಹೆನ್ರಿ ಫೋರ್ಡರವರು ತಮ್ಮ ೭೨ನೇ ಜನ್ಮದಿನೋತ್ಸವವನ್ನು ಕಳೆದ ೩೦ನೇ ತಾರೀಖಿನಲ್ಲಿ ನೆರವೇರಿಸಿದರು

ಇವರ ಮೋಟಾರು ಕಾರ್ಖಾನೆಯಲ್ಲಿ ೧ ಲಕ್ಷ ೨೭ ಸಾವಿರ ನೌಕರರಿದ್ದಾರಂತೆ ಅಂದಾಜು (ಕೊಡಗಿನ ಖಾಯಂ ಜನಸಂಖ್ಯೆಯಷ್ಟು) ೧೯೧೪ರಲ್ಲಿ ದಿನಕೂಲಿಯನ್ನು ರೂ ೭ರಿಂದ ೧೫ಕ್ಕೆ ಏರಿಸಿದರಂತೆ ೧೯೧೯ರಲ್ಲಿ ೧೫ರಿಂದ ೧೮ಕ್ಕೂ ಮತ್ತು ೧೯೨೯ರಲ್ಲಿ ೧೮ರಿಂದ ೨೧ ರೂ ಗಳಿಗೂ ಏರಿಸಿದರಂತೆ. ೧೯೩೧ರಲ್ಲಿ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಕೂಲಿಯನ್ನು ಕ್ರಮೇಣ ರೂ ೧೨ಕ್ಕೆ ಇಳಿಸಲಾಯಿತು. ಈಗ ಪುನಃ ೧೮ ರೂಪಾಯಿಗಳಿಗೆ ಏರಿಸಿರುವರಂತೆ. ನಮ್ಮ ದೇಶದಲ್ಲಿ ತಿಂಗಳಿಗೆ ೧೮ ರೂಪಾಯಿ ಹುಟ್ಟುವುದೇ ದುರ್ಲಭ.

# WANTED

'Energetic, Active and Influential men to work as organisers and Agents on very attractive terms in areas mentioned below—

1 Mysore, Hassan and Kadur districts.
2. Coorg, South Canara, Shimoga and Chitaldrug districts
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purniah Chatrâm Road, Balepet,
BANGALORE CITY



ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ಡ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೫೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಥಾಕುರದ್ವಾರ, ಮುಂಬಾಯಿ ೪
ಸ್ಟೊಕಿಸ್ಟ ಪಾ ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ



ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ
ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ಇವು ಹೊಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ರಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಅತಿ ಬೆಳಕುಳ್ಳ ಹಂಟಿಂಗ್ ಟಾರ್ಚ್ ಲೈಟ್ ... ಮತ್ತು ಬಂಗಾರದ ಪ್ಲೇಟ್ ಮುಳ್ಳು ಹಾಕಿರುವ ಸ್ವರಾಜ್ಯ ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ನಿಮಗೆ ಇಷ್ಟವಿಲ್ಲದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ೩೪೧೨ S A ಕಲ್ಕತ್ತಾ



[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮತ್ತು ಸರ್ಟಿಫಿಕೇಟ ಡಾಕ್ಟರ ಪಿ ಎ ವೈದ್ಯ, ಎಲ್ ಸಿ ಪಿ ಎಸ್ ಕೊಲ್ಹಾಪುರ ... ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪ ೦ ೦ ವಿ ಪಿ ಆಣೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C



# NEW ARRIVALS.

## Medicines.

Dr Schuessler's Twelve Tissue Remedies o gr b t As 4 -
Homoeopathy Medicines o gr b t As 5 —
Sugar of Milk Dr Schwabe's original bot 1 lb R 2
Haarlem Oil—a world renowned remedy As 8 per pl ...
Dr Haele's New Curative Earth-Radium Cure Rs 4 per ...
Dr Schwabe's other special remedies are always in stock
*Please consult us for your requirements*
Kanarese Book a Family Guide to Biochemistry Re 1
" Domestic Homoeopathy Rs 1 4
If you own these two Books you will be able to pick treatment and administer Tissue & Homoeopathy Medicines successfully without consulting others

## German Toilet Soaps Shaving sticks and Washing and Bleaching powders.

Toilet soaps to suit all tastes and prices from A 2 6
Delightful in aroma charming ...

## Kirloskar Pumps

We are the Representatives for Kirloskar Brothers ... Shallow well and Deep well Pumps Spring ... and steel —
Pipes and pipe fittings at cheap prices ... Mats and Mattings

Steadler Pencils and Stationeries

We are the recognised agents for STEADLER'S ... stationeries and shall be glad to serve you

## Olympia Typwriter.

An up to date Machine in Standard and portable sizes
*For Futher particulars please write to —*

**Basel Mission Book & Tract Depository**
Mangalore S K ... M



## Our Dasara Special Number for 1935

will be out in the first week of October,
with attractive illustrations by twenties!
with instructive & interesting articles by dozens!
Double coloured photos a Speciality!

**CONTRIBUTIONS BY REPUTED WRITERS!**
**PRICE AS 2 ONLY**

It would pay you to advertise your goods in this Popular Number
*Apply for advertisement rates to —*
Advertisement Manager,
The Swadeshabhimani Dasara Special 1935,
CAR STREET MANGALORE

## ದಿ ಬಿಲ್ಲವರ ಎಸೋಸಿಯೇಶನ್, ಮುಂಬಾಯಿ.

ಈ ಸಂಸ್ಥೆಯ ತೃತೀಯ ವಾರ್ಷಿಕೋತ್ಸವವು ಜುಲಾಯಿ ತಿಂಗಳ ೨೬ನೇ ರವಿವಾರ ಅಪರಾಹ್ನ ಗಂಟೆ ೩-೩೦ಕ್ಕೆ ಕಾಲಟಿವ್ಯೊಳಗಣ ಸರ್, ಕಾವಸ್ಜಿ ಜಹಂಗೀರ್ ಸಾರ್ವಜನಿಕ ಮಂದಿರದಲ್ಲಿ, ಮಂಗಳೂರಿನ ಸುಪ್ರಖ್ಯಾತರಾದ, ಕಂಟ್ರಾಕ್ಟರ್ ಎಮ್. ದೂಮಪ್ಪನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಪ್ರಾರ್ಥನೆಯಾದ ನಂತರ ಸಂಸ್ಥೆಯ ಜನರಲ್ ಕಾರ್ಯದರ್ಶಿಯವರಾದ ಶ್ರೀ। ಮಂಜುನಾಥ ಬಿ. ಅಮೀನರು ಸಭಿಕರನ್ನು ಸ್ವಾಗತೀಕರಿಸಿ, ಶ್ರೀ। ಕಂಟ್ರಾಕ್ಟರ್ ದೂಮಪ್ಪನವರನ್ನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಕೇಳಿಕೊಂಡದ್ದನ್ನು, ಶ್ರೀ। ಕೆ ಕಾಮಲಾಳರು ಅನುಮೋದಿಸಲಾಗಿ ಶ್ರೀ। ದೂಮಪ್ಪನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು.

ಶ್ರೀ ಬಿ. ಟಿ ಅಂಚನರು ಸಂಸ್ಥೆಯ ವಾರ್ಷಿಕ ವರದಿಯನ್ನು ಓದಿಹೇಳಿದ ನಂತರ, ಸಭಿಕರ ಪೈಕಿ ಶ್ರೀಗಳಾದ [illegible] ಮತ್ತು ಬಿ [illegible] ಸಂಸ್ಥೆಯ ಮುಂದಿನ ಭವಿಷ್ಯದ ವಿಷಯ ಸುಂದರವಾದ ಭಾಷಣವಿತ್ತರು.

ಅಧ್ಯಕ್ಷರ ತಮ್ಮ ಭಾಷಣದಲ್ಲಿ [illegible]

ತದನಂತರ ಶ್ರೀ। ಕೃಷ್ಣರಾಜ್ [illegible] ಸಂಸ್ಥೆಯ ಸದಸ್ಯರೇ [illegible] ಅಭಿನಯಿಸಿದರು.

ಕಡೆಗೆ ಈ ಸಂಸ್ಥೆಯ ಅಧ್ಯಕ್ಷರಾದ [illegible] ಸಭಾಧ್ಯಕ್ಷರೇ ಮೊದಲಾದವರಿಗೆ ಧನ್ಯವಾದ ಸಲ್ಲಿಸಿ ನಂತರ [illegible] ಸಭೆಯು ವಿಸರ್ಜಿಸಲ್ಪಟ್ಟಿತು.

## ವಜ್ರದ ಕಂಠಾಭರಣದ ಅಪಹಾರ.

ಮೊನ್ನೆ ರವಿವಾರ ಬೆಂಗಳೂರಿನಲ್ಲಿ [illegible] ಒಂದು ವಜ್ರದ ಕಂಠಾಭರಣವೊಂದು ಕಳವಾಗಿದೆ. [illegible] ಶ್ರೀ ಸಿ ಆರ್ ಸುಬ್ಬರಾಯರೆಂಬ ಪೋಲೀಸ ಅಧಿಕಾರರು ಕಂಡು ಹಿಡಿದಿರುವರು. [illegible] ಬಯಲಿಗೆ ಬರಬೇಕಿದೆ

## ೬-ಮುಂದಿಗೆ ಫಾಶಿಯಾಯಿತು !

ಅಲಹಾಬಾದ್, ಜುಲೈ ೨೮

ರಾಯಪುರದ ಗಣೇಶನು ತನ್ನ ಪುತ್ರಿ ರಾಧೆಯನ್ನು ಗಿಂಧಿ ಎಂಬವನಿಗೆ ಪಾಣಿಗ್ರಹಣವಾಡಿಕೊಟ್ಟನು. ಸತಿಯಲ್ಲಿ ವ್ಯಭಿಚಾರ ದೋಷವು ಕಂಡು ಬರಲು ಗಂಡ ಅವಳನ್ನು ತ್ಯಜಿಸಿದನು. ಗಣೇಶನು ಇದನ್ನು ತಿಳಿದು ತನ್ನ ಕುವರಿಯನ್ನು ಮೀರಜಗಂಜ್‌ದಲ್ಲಿರುವ ಸುಖ್ಖಿ ಎಂಬವನಿಗೆ ಕೊಟ್ಟು, ಅವಳನ್ನು ರಕ್ಷಿಸಿಕೊಂಡಿರೆಂದು ಹೇಳಿದನು. ಸುಖ್ಖಿ ರಾಧೆಯರು ಸತಿಪತಿಗಳಂತೆ ಬಾಳುತ್ತಿದ್ದರು. ಕೆಲವು ದಿವಸಗಳ ನಂತರ ರಾಧೆಯು ಅಲ್ಲಿಯ ಛೇದಿ ಎಂಬ ಕ್ಷೌರಿಕನನ್ನು ಮೋಹಿಸ ತೊಡಗಿದಳು. ಕಡೆಗೆ ಅಷ್ಟರಲ್ಲಿಯೆ ತೃಪ್ತಳಾಗದೆ ಆ ಧೂರ್ತೆಯು ಅಲ್ಲಿಗೆ ಆಗಾಗ ವಸ್ತ್ರವನ್ನು ಪ್ಲಾವರಲು ತರುತಿದ್ದ ಮುಲ್ಲ ಎಂಬ ವಸ್ತ್ರಮಾರನನ್ನು ಮೋಹಿಸಿದಳು. ಈ ನವೀನ ಸಂಬಂಧದಿಂದಾಗಿ ರಾಧೆಯು ಸುಖ್ಖಿಯನ್ನೂ, ಛೇದಿಯನ್ನೂ ಮರೆತಳು. [illegible] ಅವರು ಈ ಮುಲ್ಲನನ್ನು ಕೊಲ್ಲಲು ಹವಣಿಸಿದರು. ೧೯೩೦ನೇ ಇಸವಿ ಅಕ್ಟೋಬರ ೨೮ನೇ ದಿನ ಮುಲ್ಲನು ತನ್ನ ಸರಕಿನೊಂದಿಗೆ ಅಷ್ಟಾದೂರಿನಿಂದ ರಾಯಪುರಕ್ಕೆ ಬರುತ್ತಿರಲಾಗ ಮಾರ್ಗ ಮಧ್ಯದಲ್ಲಿ ಸುಖ್ಖಿ ಛೇದಿಯರ [illegible] ಮುಲ್ಲನನ್ನು ತಡೆಗಟ್ಟಿ ಕೊಂದೇ ಬಿಟ್ಟರು. [illegible] ಎಂಬ ಆರು ಮಂದಿಗೆ ಫಾಶಿ ಶಿಕ್ಷೆಯು ವಿಧಿಸಲ್ಪಟ್ಟಿತು.

## ಕೊಚ್ಚಿನ್ಯಾಕಿಕೋಹೆತನು ಹುಡುಗಿಯನ್ನು ಕದ್ದೊಯ್ದನು

ಗೋಹಾಟಿ

[illegible]

## ವಿಮಾನದಿಂದ ವಿಚಿತ್ರ ಕರಪತ್ರಗಳು

[illegible]

## WANTED.

A Gowd Saraswat Brahmin as Manager for a tile factory at Nileshwar. Applications from young men having splendid record as to character with knowledge of accounts are invited. Cash Security essential. Salary according to qualifications. Good prospects for a right man.

Box No 11
C/o
Swadeshabhimani.

## ಇನ್ನೊಂದು ಕಟದಿಂದ ಮುಂದುವರಿಸಿದುದು
## ವಿದೇಶದಲ್ಲಿ ಪ್ರಚಾರ.

ಸ್ವದೇಶದಲ್ಲಿ ದಿಕ್ಕಿಲ್ಲದ ಅಲೆಯುತ್ತಿದ್ದ ಪರದೇಶಿಯರು, ಸುಖಸಂತೋಷಗಳ ಮತ್ತು ಸಂಪತ್ತಿನ ತವರುಮನೆಯೆನಿಸಿದ ಹಿಂದೂದೇಶಕ್ಕೆ ಬಂದು ಇಲ್ಲಿಯ ಜನರನ್ನು ಮರುಳುಗೊಳಿಸಿ, ಅವರಿಂದ ಹೇಗೆ ಅಪಾರ ಧನವನ್ನು ಸೆಳೆದೊಯ್ದರೆಂದು ಸರ್ವರಿಗೂ ತಿಳಿದ ವಿಷಯವೆ. ಆದರೆ ಈಗ ಮಾತ್ರ ಅದಕ್ಕೆ ಚಕ್ರಬಿದ್ದಿದೆ. ನಮ್ಮಗಳ ಕುಂದುಕೊರತೆಗಳನ್ನು ಅಕ್ಕರೆಯ ಜನಗಳಿಗೆ ತಿಳಿಸಿ ನಮ್ಮ ದೇಶದಭ್ಯುದಯವನ್ನು ಕೋರಿದ ಮಿಸ್ ಮೇಯೊ ಇವಳಿಗೆ ಸಮರ್ಪಕವಾದ ಉತ್ತರವನ್ನು ಹಿಂದೂದೇಶದವನೊಬ್ಬನು ಕೊಡಲಿಲ್ಲವೆ! [illegible]

[illegible]

ಹಿಂದೂದೇಶದಲ್ಲಿ [illegible]

## ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ, ಸ್ವ.]

### ಮಾಡಾವು ಸಂಕದ ದುರವಸ್ಥೆ.

ನೇಕಮಲೆ ಇಂತಿಕಲ್ಲು ಮಾರ್ಗದ ಮಧ್ಯ ಮಾಡಾವು ಹೊಳೆಗೆ ಸಂಕವಾಗಬೇಕೆಂದು ಮಾಜಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಕಾಲದಿಂದಲೇ ಊರವರ, ಅನೇಕಾನೇಕ ಅರ್ಜಿಗಳು ಹಗುತ್ತಾ ಇದ್ದು, ಹೇಗೂ ಅದು ಖಾಸಾಗಿ ಎಸ್ಟಿಮೇಟು ತಯಾರಾಗಿ ಗವರ್ನಮೆಂಟಿನ ಮಂಜೂರಾತಿ ಬಗ್ಗೆ ಹೋದ ರಿಕಾರ್ಡು ಈಗಣ ಪ್ರೆಸಿಡೆಂಟರ ಕಾಲಕ್ಕೆ ಹೇಗೂ ಎದುರಿಗೆ ಬಂದು ಟೆಂಡರು ನೋಟೀಸುಗಳು ಕೂಡಾ ಸ್ಥಳೀಯ ಪತ್ರಿಕೆಯಲ್ಲಿ ಬಂದಿದ್ದು ಊರವರಿಗೆ ತುಂಬಾ ಸಂತೋಷಕ್ಕೀಡುಮಾಡಿತ್ತು. ಈಗಾಗುವುದೇನು? ಸಂಕದ ದುರವಸ್ಥೆಯು ದೂರವಾಗಿಲ್ಲ. ಸಂಕದ ಕೆಲಸವೂ ಆಗಿಲ್ಲ. ಮಳೆಗಾಲದಲ್ಲಿ ಈ ಮಾರ್ಗವಾಗಿ ಒಂದು ನೆರೆಕರೆಯ ಪ್ರದೇಶವನ್ನು ಸಂಚರಿಸಿ ಆ ಕಷ್ಟಗಳನ್ನು ಕಣ್ಣಾರೆ ಕಂಡ ಒಬ್ಬ ಮೆಂಬರರು ಬೋರ್ಡಿನಲ್ಲಿದ್ದರೆ, ಈ ಮುಂಚೆಯೇ ಕೆಲಸವಾಗುತ್ತಿತ್ತು. [illegible]

ಊರವನೊಬ್ಬ

ನಮ್ಮ ದೇಶದಲ್ಲಿ ಇನ್ನೊಂದು ಪತ್ರಿಕೆಗಳು ಇದ್ದಲ್ಲಿ [illegible]

Amritha Bazar Pathrika


# ವಜ್ರಗಳು! —— ವಜ್ರಗಳು

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ 'ಎಕ್ಸ್‌ಟ್ರಾ ವ್ಹಾಹಿಟ್'' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

*Part Proprietors of —*
Sri Krishna Mills & Co
Oil Manufacturers
Bunder, Mangalore.
Bhagavan Ganesh Pai & Co
Copper Sheet & Twist
Merchants, Camp Bazar,
Cannanore.

*Representatives for the W.C.*
M/s A & F Harvey
Cotton Spinners,
Tuticorin, Madura &c.
Guardian Assurance Co., Ltd.
(Incorporated in England)
Head Office. 68, King
William Street,
London, E. C. 4.

## ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು. ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಮುಂಸಕತ್ವ, ಧಾತುಕ್ಷೀಣತೆ ಅತ್ಯುತ್ತಮ)

ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ– (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕೆ ಸಿದ್ಧವಿರುತ್ತವೆ ಹೆಚ್ಚಿನ ವರ್ತಮಾನಕ್ಕೂ ಪಟ್ಟಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

## ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ






Distributors for South Kanara —

**Raghavendra Ranga Pai. Car Street, Mangalore.**



ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಿರಿ.

ನರ ಮತ್ತು ದೈಹಿಕ ದೌರ್ಬಲ್ಯಕ್ಕೆ ಚಿಕಿತ್ಸೆಯು.

ಆರೋಗ್ಯಕ್ಕೆ ಕವಚವು

32 ... 1

ಕಾಮಶಾಸ್ತ್ರವನ್ನೋದಿರಿ

Atank Nigran Pharmacy
Chickpet Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.



ಅದೀಗ ಒಬ್ಬನಿಗಾದದ್ದು, ಆವನು ನಮಗೆ ಬರೆದಿರುವನು. ಆವನ ಮಾತುಗಳನ್ನೇ ಓದಿ — ನನಗೆ ಗುಣ ವಿತ್ತುದು ಮೆಕ್‌ಲೀನ್ ಬ್ರೇಂಡ ಸ್ಟೋಮಕ್ ಪೌಡರ್ ಒಂದೇ. ಆವಧಿ ಪ್ರಕಾರದ ಅಜೀರ್ಣ ರೋಗದಿಂದ ನಾನು ಬಾಧಿಸಲ್ಪಡುತ್ತಿದ್ದೆ. ಅಜೀರ್ಣ ರೋಗನಿವಾರಕವಾದ ಎಲ್ಲಾ ಔಷಧಿಗಳನ್ನು ಉಪಯೋಗಿಸಿದೆ. ಆದರೆ ಸಂತೃಪ್ತಿಕರ ಪರಿಣಾಮವು ದೊರೆಯಲಿಲ್ಲ. ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಕೆಲವು ವಾರಗಳ ಹಿಂದೆ ಪ್ರಾರಂಭಿಸಿದೆ. ಅದರ ಪರಿಣಾಮವು ಅತ್ಯದ್ಭುತವಾಗಿದೆ. ಈಗ ನಾನು ಧನ್ಯ. ದೀರ್ಘಕಾಲದ ರೋಗ ಸಂಹಾರಕ ಔಷಧಿಯನ್ನು ಕಂಡುಹಿಡಿದಿರುವಿರಿ."

ನೀವು ಅಜೀರ್ಣದಿಂದಾಗಲೀ ಉದರವೇದನೆಯಿಂದಾಗಲೀ ಬಳಲುತ್ತಿರುವಿರಾದರೆ ನಿಮಗೆ ಕೂಡಾ ಈ ರೀತಿಯ ಶೀಘ್ರ ಗುಣವು ದೊರೆಯುವುದನ್ನು ನೋಡುವಿರಿ. ಆದರೆ ನಿಮ್ಮ ಕೆಮಿಸ್ಟರಿಂದ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ಕೇಳಿರಿ. ಅದರಲ್ಲಿ ಎಂದು ಕೆಂಪು ಮುದ್ರೆ ಇದೆ ಮುದ್ರೆಯ ನೋಡಿ



ಎಂಬ ಸಹಿಯು ಆಚ್ಚು ಬಿಳಿ ಮತ್ತು ಶೀಸೆಗಳ ಮೇಲಿದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಕೊಳ್ಳುವರೆ ಕಷ್ಟವಿರುವುದಾದರೆ—

**ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,**

15 ಸಂಕುಂರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು— ಇಲ್ಲಿಗೆ ಬರೆಯಿರಿ,

ಚಿಲ್ಲರೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ,

## "GUPTA MANTRA"

A reward of Rs. 100.

The objects, which cannot be achieved by spending lacs of rupees may be had by repeating this Mantra seven times. There is no necessity of undergoing any hardship to make it effective. It is effective without any preparation. This is a "WASHIKARAN MANTRA." It will make you forunate give you service, and advancement and bring you profit in trade. A reward of Rs. 100, if proved fallible. Price including postage etc., Rs. 2-7-0.

**Siddha Mantra Ashram,**

KATRISARAI...(GAYA.)

M. A. A.

## WHITE LEPROSY AND LEUCODERMA

A few day's application of this medicine cures WHITE LEPROSY and LEUCODERMA radically. Get rid of this horrible disease by application of this medicine inspite of failure by hundreds of Hakims, Doctors, Kavirajas and advertisers Rs. 500 rewarded if proved fallible. Price Rs. 2/-.

VAIDYARAJ AKHIL KISHORE RAM

P. O. KATRISARAI (GAYA.)

M. A. A.

## ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ:

ವಿ-ಮೊ-ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ. ಹೊಟ್ಟೆಯಲ್ಲಿ ಚೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ.

**"Vimola Depot"**

*Manufactured by*

**American Herbal Products Co.,**

Sole representatives for above medicine.

The National Kanara News Agency,

Sir Phirozsha Metha Road,

Fort Bombay.

### ಕಣ್ಣಿನ ಪರೆ.

"ಐ-ಸನ್" ಎಂಬ ನೇತ್ರಭಾಸ್ಕರ-ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣದಾಯಕ. ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Haryyaram, Panchpota, Bengal.

## Shiromani Narayanacharya.

*Choukhamba Benares City*

THIS MAN WISHES HE HAD

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಆಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಥವಾ ಪ್ರಮಾಣದ ಕಂಠಿಸರ 1ಕ್ಕೆ ಬೆಲೆ 10ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಬೆಲೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3-4-5-6-7-8 ಮುಖಗಳ ಕಾಳು 1ಕ್ಕೆ ಬೆಲೆ 4ರಿಂದ ರೂಪಾಯಿ 10. ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾಯಿ 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು:— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ರುಂಬಾ ಕೆಟಲಾಗಿನೊಡನೆ 3 ಇನಾಮುಗಳು).

**ಶಿರೋಮಣಿ ನಾರಾಯಣಾಚಾರ್ಯ**

ಚೌಖಂಬಾ, ಬನಾರಿಸ್ (ಕಾಶೀ)

## ಮುಂಬಾಯಿಲ್ಲಿ—

### — ಸ್ವದೇಶಾಭಿಮಾನಿಯು

ಬಿಡಿಸಂಚಿಕೆಗಳು ಸಿಗುವ ಸ್ಥಳ:

The National Kanara News Agency,

Sir Phirosha Metha Road,

Fort Bombay.

9/8

### ೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು; ಅಲ್ಲದೆ ಶಾಂತಿಯುತವಾದುದು. ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ. ಗಂಡು ಮಕ್ಕಳಾಗುತ್ತವೆ. ಧನ ಸಿಗುತ್ತದೆ. ರೋಗ ನಾಶಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ, ಬೆಲೆ ರೂ. ೩ ಮಾತ್ರ.

C1 .P. S. Bengal Mesmarism House

5-7 Panchpota, Bengal (S.R.)



## New Era Technical School.

Near Market Square, Udipi.

Commercial classes approved by the Madras Government—New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್,

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟ್ಯಾಪ್‌ರ್ಯಾಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and inusre against unemployment. Details may be had on application to the Manager.


## ಮಂಗಳೂರಿನ ಪೇಟೆಧಾರಣೆ.

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ. | ರೂ. ಆ. |
| ನಾಕಿ ಅಕ್ಕಿ ... | 3—13 | 4— 2 |
| ಮುಸ್ಸಿ ... | 4— 2 | 4— 8 |
| ಗುಜ್ಜು ... | 3—14 | 4— 2 |
| ಊರ ಅವ್ವಲ್ ಬೆಳ್ತಿಗೆ ... | 4— 4 | 4— 8 |
| ರಂಗೂನು ಬೆ. ಗೋ. ಒಕ್ಕೆ ... | 6—10 | 7— 4 |
| ಪಟ್ಲಾರು ಬೆ. ಮೂ. ಒಕ್ಕೆ ... | 4— 4 | 4— 8 |
| ಗೋದಿ ಗೋಣಿ ಒಕ್ಕೆ ... | 10— 0 | 12— 8 |
| ತೊಗರಿ ಗೋಣಿ ಒಕ್ಕೆ ... | 10 —8 | 11— 0 |
| ಹುರುಳಿ ಗೋಣಿ ಒಕ್ಕೆ ... | 7— 6 | 7 —12 |
| ಕಡಲೆ ಗೋಣಿ ಒಕ್ಕೆ ... | 7— 8 | 10— 8 |
| ಕೊಗಂಟೇಕೆ ಗೋಣಿ ಒಕ್ಕೆ ... | 10— 0 | 17— 0 |
| ಉದ್ದು ಗೋಣಿ ಒಕ್ಕೆ ... | 8— 0 | 8— 8 |
| ಹೆಸರು ಗೋಣಿ ಒಕ್ಕೆ ... | 9— 4 | 9—12 |
| ಊರುಬೆಲ್ಲ ಖಂಡಿ ಒಕ್ಕೆ ... | 42— 8 | 42— 8 |
| ಉಪ್ಪು ಗೋಣಿ ಒಕ್ಕೆ ... | 4—12 | 5— 2 |
| ಕೊಪ್ರ ಖಂಡಿ ಒಕ್ಕೆ ... | 48— 0 | 55— 0 |
| ಕೊಪ್ರ ಹಿಂಡಿ ಖಂಡಿ ಒಕ್ಕೆ ... | 20— 0 | 20— 6 |
| ಎಳ್ಳಿನ ಖಂಡಿ ಒಕ್ಕೆ ... | 32— 8 | 32— 8 |
| ಕೊಪ್ರ ಎಣ್ಣೆ ಮಣ ಒಕ್ಕೆ ... | 3—14 | 4—14 |
| ಎಳ್ಳೆಣ್ಣೆ ಮಣ ಒಕ್ಕೆ ... | 5— 2 | 6— 0 |
| ಹಿಪ್ಪೆ ಎಣ್ಣೆ ಸಟ್ಟಿಗೆ ಒಕ್ಕೆ ... | 5— 8 | 5—12 |
| ಮೋರಿಸ ಸಕ್ಕರೆ ಮ. ಒಕ್ಕೆ ... | 3—10 | 3—13 |
| ಮೆಣಸು ... | 4— 6 | 5— 0 |
| ಸಾಸಿವೆ ಮುಡಿ ಒಕ್ಕೆ ... | 5 —12 | 6— 0 |
| ಕಾಳುಮೆಣಸು ಖ. ಒಕ್ಕೆ ... | 100— 0 | 110— 0 |
| ದೊಡ್ಡಕ್ಕಿ ಬೀಜ ಮಣ ಒಕ್ಕೆ ... | 30— 0 | 34— 6 |
| ಗೇರುಬೀಜ ಮ. ಒಕ್ಕೆ ... | 4— 6 | 4 — 8 |
| ಕಬ್ಬಿಣ ಖಂಡಿ ಒಕ್ಕೆ ... | 39— 0 | 39— 8 |
| ತಾಂಬ್ರತಗಡು ಮ. ಒಕ್ಕೆ ... | 9— 8 | 9— 8 |
| ತಾಂಬ್ರಪಾತ್ರಗಳು ಮ. ಒಕ್ಕೆ ... | 11— 0 | 12— 0 |
| ಚೀನಬೆಳ್ಳಿ ಸೇರು ಒಕ್ಕೆ ... | 17— 0 | 18— 0 |
| ಹಿತ್ತಾಳೆ ತಗಡು ಮ. ಒಕ್ಕೆ ... | 8— 12 | 9— 0 |
| ಸವಣು ಒಕ್ಕೆ ... | 22— 6 | 22— 8 |
| ಹುಣಿಸೆ ಹುಳಿ ಖಂಡಿ ಒಕ್ಕೆ ... | 20— 0 | 25— 8 |
| ನೇಟಿವ್ ಕಾಫಿ ಖಂಡಿ ಒಕ್ಕೆ ... | 170— 0 | 180— 0 |
| ಫಿಟೇರಿ ಕಾಫಿ ಖಂಡಿ ಒಕ್ಕೆ ... | 215— 0 | 220— 0 |
| ಮಡಿಕೇರಿ ಏಲಕ್ಕಿ ... | 23— 0 | 25— 0 |
| ಸಕಲೇಶಪುರ ಏಲಕ್ಕಿ ... | 28— 0 | 38 — 0 |


LOOK SHARP! LOOK AHEAD

## Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

**Ladies are also admitted.**

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

*For further particulars apply to:—*

D. R. Murdeshwar,

Dip. Econ; F. R. Econ; S. (Lond.)

Principal.

Genapathy High School Street,

Mangalore.

## ಬೇಕಾಗಿದ್ದಾರೆ

ನಮ್ಮ ಕಂಪೆನಿಗೆ ಕನ್ನಡನಾಡಿನಲ್ಲಿ ಏಜಂಟರುಗಳು ಬೇಕಾಗಿರುವರು. ಅವರಿಗೆ ಕನ್ನಡ ಮತ್ತು ಇಂಗ್ಲಿಷ್‌ಗಳ ಪರಿಚಯವಿರಬೇಕು. ವ್ಯಾಪಾರದಲ್ಲಿ ಸರಿಯಾದ ಅನುಭವವೂ ಇರಬೇಕು. ವ್ಯಾಪಾರ ಮೂಡಿಗಳಿಂದ ಜನರ ಮನವೊಲಿಸುವ ವಿಚಕ್ಷಣಶಾಲಿಗಳಾಗಿರಬೇಕು. ತಿಂಗಳಿಗೆ ಕಡಮೆಯಿಲ್ಲದೆ ೧೦೦೦ ರೂಪಾಯಿಗಳ ನಮ್ಮ ಮಾಲನ್ನು ತಪ್ಪದೆ ವಿಕ್ರಯಿಸಬೇಕು. ಯಾವಾಗ ಬೇಕಾದರೂ ಒಂದು ಸಾವಿರ ರೂಪಾಯಿಗಳ ಮಾಲನ್ನು ಕೊಡುತ್ತೇವೆ. ಎಷ್ಟು ಖರ್ಚಾಗುತ್ತದೋ ಅಷ್ಟನ್ನು ವಿಕ್ರಯಿಸಿ, ಉಳಿದವುಗಳನ್ನು ಹಿಂದೆ ಕೊಟ್ಟು ಬೇರೆಯವುಗಳನ್ನು ಪಡೆಯಬಹುದು. ಏಜಂಟರಾಗುವವರು 1025 ರೂ.ಗಳ ನಗದು ಜಾಮೀನ್ ಕೊಡಬೇಕು. ಆ ಹಣಕ್ಕೆ ಸೇಕಡಾ 5ರಂತೆ ಬಡ್ಡಿಯನ್ನು ಕಂಪೆನಿಯು ಕೊಡುವುದು. ಏಜಂಟರಾಗುವವರಿಗೆ ರೂ. 50 ಸಂಬಳ, 20 ರೂಪಾಯಿ ಬತ್ತೆ. ಹೆಚ್ಚು ಮಾಲು ವಿಕ್ರಯಿಸಿದರೆ ತಕ್ಕ ಬೋನಸ್ ಕೊಡಲಾಗುವುದು. ವ್ಯಾಪಾರವು ತಿಂಗಳಿಗೆ ಸಾವಿರ ರೂಪಾಯಿಗಳಿಗೆ ಕಡಮೆಯಾಗಲೇ ಬಾರದು. ಹೆಚ್ಚಿನ ವಿವರಗಳಿಗೆ—

**S. U. Narayanacharya & Co.,**

Embroidery Silk Manufacturers,

Benares City.

9/8


ಶಾಲಿವಾಹನ ಶಕ ೧೮೫೬ನೆಯ ಯುವ ಸಂವತ್ಸರದ ಶ್ರಾವಣ ಬ। ೧೧ ಶನಿವಾರದಿಂದ ಭಾದ್ರಪದ ಶು। ೧ ಶುಕ್ರವಾರದ ವರೆಗಿನ ಪಂಚಾಂಗ. (೧೮೫೬ನೇಯ ಸಿಂಹ ಸೋರ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | [illegible] |
|---|---|---|---|---|---|---|---|
| 24 | ಶನಿ | ೧೧ | ೪೯ | ಆರ್ದ್ರಾ | ೫೧ | ೮ | * ಉಪಾಕರ್ಮ |
| 25 | ರವಿ | ೧೨ | ೫೦ | ಪುನರ್ವಸು | ೫೪ | ೯ | |
| 26 | ಸೋಮ | ೧೩ | ೫೩ | ಪುಷ್ಯ | ೫೮ | ೧೦ | |
| 27 | ಕುಜ | ೧೪ | ೫೭ | ಆಶ್ಲೇಷಾ | ೬೦ | ೧೧ | |
| 28 | ಬುಧ | ೩೦ | ೬೦ | ಆಶ್ಲೇಷಾ | ೪ | ೧೨ | |
| 29 | *ಗುರು | ೩೦ | ೩ | ಮಘಾ | ೧೨ | ೧೩ | |
| 30 | ಶುಕ್ರ | ೧ | ೭ | ಪುಬ್ಬ | ೧೬ | ೧೪ | |

## ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ಪತ್ರಕರ್ತರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

### ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಬಳ.

ಕಾಸರಗೋಡು ತಾಲೂಕಿನ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಬಳವು ಕಳೆದ ಮೇ ತಿಂಗಳಿನಿಂದ ಬಾಕಿಯಾಗಿದೆ. ತಾಲೂಕು ಬೋರ್ಡುಗಳು ತೆಗೆದುಹಾಕಲ್ಪಟ್ಟಮೇಲೆ ಈ ತಾಲೂಕಿನ ಅಧ್ಯಾಪಕರಿಗೆ ಒಂದು ತಿಂಗಳ ಸಂಬಳವನ್ನು ಆನಂತರದ ತಿಂಗಳಿನ ಕಡೆಯ ವಾರದ ಮೊದಲಾಗಿ ಈ ವರೆಗೆ ಕಳುಹಿಸಿಕೊಟ್ಟದ್ದಿಲ್ಲ ಹೆಚ್ಚಾಗಿ ಮರುತಿಂಗಳ ಕಡೆಯ ದಿನ ಮಾತ್ರವೇ ಸಂಬಳ ಸಿಕ್ಕುತ್ತದೆ ...

## ಜಿಲ್ಲಾ ಬೋರ್ಡು ಪ್ರಾಥಮಿಕ ಅಧ್ಯಾಪಕ ವಿಶಿಷ್ಟ ಮಹಾಸಭೆ

## ಡಿ| ಬೋರ್ಡು ಚುನಾವಣೆಯೂ ವೋಟರರ ಕರ್ತವ್ಯವೂ.

ಅಯ್ಯಾ ಸಂಪಾದಕರೇ,

ನಮ್ಮ ಜಿಲ್ಲಾ ಬೋರ್ಡಿನ ಮೆಂಬರರುಗಳ ಹೊಸ ಚುನಾವಣೆಯು ಇದೇ ಅಕ್ಟೋಬರ ತಿಂಗಳಲ್ಲಿ ನಡೆಯಬೇಕಾಗಿ ಇಲೆಕ್ಷನ್ ಆಫೀಸರರ ನೋಟೀಸುಗಳು ಆಗಲೇ ಹೊರಟಿವೆ. ಚುನಾವಣೆಯಲ್ಲಿ ಭಾಗವಹಿಸಬೇಕಾದ ಆಯಾ ಸರ್ಕಲುಗಳ ವೋಟರುಗಳ ಪ್ರಥಮ ಪಟ್ಟಿಗಳೂ ಆಗಲೇ ಪ್ರಕಟವಾಗಿವೆ. ಇವೆಲ್ಲಕ್ಕೂ ಎಷ್ಟೋ ಮೊದಲೇ ಉಮೇದ್ವಾರರ ಓಡಾಟವು ಆಯಾ ಸರ್ಕಲುಗಳಲ್ಲಿ ಎಡೆಬಿಡದೆ ಪ್ರಾರಂಭವಾಗಿಯೇ ಹೋಗಿದೆ. ಈ ಉಮೇದ್ವಾರರುಗಳಲ್ಲಿ ಹಲವರು ಹಳಬರೇ "ಪುನರಾಯ್ಕೆ ಸ್ಥಾನಕಳು" ಎಂಬಂತೆ ಮಾತ್ರ ಮತ್ತೆ ಅವರೇ ಪುನಃ ಮುಂದೆ ಬರುತ್ತಿರುವರು. ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸ ...


**KANNADA**

**Savings Certificates can be cashed even before maturity.**

Full Particulars from—

CANARA BANK LTD

OFFICES AT—

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—City, Mangalore—Bunder, Kasaragod, Puttur, Buntwal, Karkala, Coondapoor, Udipi, & Gangoli

AVAILABLE IN DENOMINATIONS OF Rs. 10/ UPWORDS

**TOTAL YIELD RS 4-6-0 P.A.**

Paid once half yearly at 3½% p a with an additional 1½% p a on maturity If Left To Accumulate

**RS. 100/-** Will Amount to **RS. 122-13-6**

ESTD 1906

**CANARA BANK**

LIMITED

| Subscribed Capital | | Paid up Capital |
|---|---|---|
| 6,00,000 | | 3,31,000 |
| Reserves | Deposits | Working Capital |
| 4,50,000 | 58,62,000 | 78,49,000 |

# ತರುಣಿಯ ದುಃಖಮಯ ಕಥೆ!

## ತಂದೆಯೇ ಮಗಳನ್ನು ದುರ್ಮಾರ್ಗಕ್ಕೆಳೆದ!!

### ಅವಳಿಗೆ ಚಿತ್ರಹಿಂಸೆಯನ್ನು ಕೊಡಲಾಯಿತು!!!

ಆಲಿಪುರ ದಸಟ್ ಡಿವಿಜನಲ್ ಆಫೀಸರರ ಸಮಕ್ಷದು ಧನಬಾಯಿ ಎಂಬ ೨೨ ವರ್ಷ ಪ್ರಾಯದ ತರುಣಿಯೋರ್ವಳು ತನ್ನ ಹೃದಯ ವಿದೀರ್ಣ ಕಥೆಯನ್ನು ಹೇಳಿದಳು: ತಂದೆಗೆ ಹೇರಳ ಸಾಲವಾಯಿತು ಅದನ್ನು ತೀರಿಸಲು ಸಾಧ್ಯವಾಗಲಿಲ್ಲ. ಇದಕ್ಕಾಗಿ ಧನಬಾಯಿಯನ್ನು ಬಲಾತ್ಕರಿಸಿ, ಅವಳು ವೇಶ್ಯಾವೃತ್ತಿಯನ್ನು ಕೈಗೊಂಡು ತನ್ನ ಸಾಲವನ್ನು ತೀರಿಸುವಂತೆ ಮಾಡಬೇಕೆಂದು ಹೇಳಿದ. ಅವಳ ತಾಯಿಯೂ ಹಾಗೆಯೇ ಹೇಳಿದಳು. ಚಿಕ್ಕ ತಾಯಿಯೂ ಅದಕ್ಕೊಪ್ಪಿದಳು. ಆದರೆ ತರುಣಿಯು ಅದಕ್ಕೊಪ್ಪಲಿಲ್ಲ ಏನೇನು ಮಾಡಿದರೂ ಧನಬಾಯಿಯ ಒಪ್ಪಿಗೆಯು ದೊರೆಯದಾಯಿತು ಒಂದು ದಿನ ಮನೆಯವರೆಲ್ಲರೂ ಕೂಡಿ ಅವಳನ್ನು ಹಿಡಿದು ಚೆನ್ನಾಗಿ ಹೊಡೆದು ಶಕ್ತಿ ಪ್ರದರ್ಶನವಮಾಡಿದರು ಈ ಪೆಟ್ಟನ್ನು ಸಹಿಸಲಾರದೆ ಧನಬಾಯಿಯು ರಾತ್ರಾರಾತ್ರಿ ಮನೆಯಿಂದ ಓಡಿ ಬಾರಿಯಾ ಎಂಬಲ್ಲಿನ ಮಿಲ್ಲಿನಲ್ಲಿ ಕೂಲಿಯನ್ನು ಸಂಪಾದಿಸಿ ಸುಖದಿಂದಿದ್ದಳು ತಂದೆತಾಯಿಗಳು ಅವಳನ್ನು ಹುಡುಕಿದರು ಅವಳು ಮಿಲ್ಲಿನಲ್ಲಿರುವುದನ್ನು ತಿಳಿದರು. ಒಂದು ಉಪಾಯವನ್ನು ಹುಡುಕಿದರು. ಸ್ವಲ್ಪ ಹಣ ಕೊಟ್ಟು, ಅವಳ 'ಗಂಡ' ನೆಂದು ಹೇಳಿ ಒಬ್ಬನನ್ನು ಅವಳ ಬಳಿಗೆ ಕಳುಹಿಸಿ ಬರಮಾಡಲೆತ್ನಿಸಿದರು. ತನಗೆ ಮದುವೆಯಾಗದಿರುವಾಗ ಇವನಾರು ಗಂಡ?—ಎಂದು ಅವಳಿಗೆ ಆಶ್ಚರ್ಯವಾಯಿತು, ಅವರು ಪೋಲೀಸರಿಗೆ ತಿಳಿಸಿ ಅವಳನ್ನು ಮನೆಗೆ ಬರಮಾಡಿದರು ಅಷ್ಟರಲ್ಲಿ ಅವಳೂ ಅರ್ಜಿ ಹಾಕಿದಳು. ತನ್ಮಧ್ಯೆ ಮನೆಯವರೆಲ್ಲಾ ಒಂದಾಗಿ ಧನಬಾಯಿಯನ್ನು ಹಿಡಿದು ಅವಳಿಗೆ ಚೆನ್ನಾಗಿ ಹೊಡೆದರು ಅವಳ ಕಣ್ಣಿಗೂ ಮರ್ಮಸ್ಥಾನಗಳಿಗೂ ಮೆಣಸಿನ ಮುದ್ದೆಯನ್ನು ಹಾಕಿದರು ಅವಳು ಸ್ಮೃತಿ ತಪ್ಪಿ ಬಿದ್ದಳು ಎಷ್ಟೆಷ್ಟು ಬಲಾತ್ಕರಿಸಿದರೂ ಅವಳು ಹೆತ್ತವರ ಮಾತಿಗೆ ಒಪ್ಪಲಾರದಾದಳು ತಾವು ಆರಿಸಿರುವವನು ತನ್ನ ಗಂಡನೆಂದು ಕೋರ್ಟಿನಲ್ಲಿ ಒಪ್ಪಬೇಕೆಂದು ಹೇಳಿದರು ಅದಕ್ಕೂ ಅವಳು ಸಮ್ಮತಪಡಲಿಲ್ಲ ಈಗ ಅವಳ ಪ್ರಾರ್ಥನೆಯ ಮೇರೆಗೆ ಅವಳನ್ನು ಆಸ್ಪತ್ರೆಯಲ್ಲಿಟ್ಟಿರುವರು ವಿಚಾರಣೆಯು ನಡೆಯುತ್ತಿದೆ

---

### ಕೊಂಗ್ರೆಸ್ಸಿನ ಸುವರ್ಣೋತ್ಸವ

ಕೊಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಒಕ್ಟೋಬರ ತಾರೀಕು ೧೭ರಿಂದ ೩ ವಾರಗಳ ತನಕ ತಮಿಳುನಾಡಿನಲ್ಲಿ ಸಂಚರಿಸಲಿರುವರು. ಕೊಂಗ್ರೆಸ್ಸಿನ ಸ್ವರ್ಣೋತ್ಸವದ ಸಂಬಂಧವಾದ ಸಲಹೆಗಳೇನೆಂದು ಅಧ್ಯಕ್ಷರು ಅನೇಕ ಪ್ರಾಂತಿಕ ಸಮಿತಿಗಳಿಗೆ ಬರೆದಿರುವರು

---

### ಗೋರಿಯ ನಿರ್ನಾಮ

ಒಹಿಯೋದ ಸಿಂಹಿನಾಗರ ಜೌ ನಗರಿಯ ಸ್ಮಾರಕ ಭಾಗದ ಕಟ್ಟಡ ಪ್ರಾಚೀನ ಗೋರಿಯನ್ನು ಕಿನ್ನರು ಸಿಮೂರ್ಲ ಗೋಳಿಸಿ ಬಿಡ ಮುಕ್ಕಿ ಹೊರ ಗುನವಿಯು ಹೋಗಲು ಇವನ ಸೀಸಿಯರ ಸುಪರಿಂಟೆಂಡೆಂಟ್ ಒಫ್ ಪೋಲೀಸರವರು. ಫೌಜು ಸಮೇತ ಗುಡ್ಡದ್ವಾರಕ್ಕೆ ಹೋಗಿ ಗೋರಿಯನ್ನು ಹುಡುಕಿದರು ಆದರೆ ಅದು ಕಾಣಸಿಗಲಿಲ್ಲ ಎಕ್ಸೆಕ್ಯುಟಿವ್ ಇಂಜಿನಿಯರರನ್ನು ಕರೆತರಿಸಿ ಸ್ಥಳವನ್ನು ಪರೀಕ್ಷೆಮಾಡಲಾಗಿ ಆ ಸ್ಥಳದಲ್ಲಿ ಗೋರಿ ಇದ್ದಿರಬಹುದೆಂದ ಕಂಡುಹಿಡಿದರು ಬಿದು ಎರಡು ಸಿಕ್ಕರನ್ನು ಸೆರೆಹಿಡಿದಿರುವರು ಒಬ್ಬಳು ಸ್ತ್ರೀಯನ್ನು ಸಾವಿರ ರೂಪಾಯಿ ಜಾಮೀನಿನ ಮೇಲೆ ಬಿಟ್ಟಿರುವರು.

---

### ಹೊತ್ತನ್ನರಿಯಲು ಗಡಿಯಾರದ ಅವಶ್ಯಕತೆಯಿಲ್ಲ

#### ಹೂವಿನಿಂದಲೂ ತಿಳಕೊಳ್ಳಬಹುದು.

ಇನ್ನು ಮೇಲೆ ಗಡಿಯಾರಗಳ ಆವಶ್ಯಕತೆ ಇಲ್ಲ ಮಾತ ಹೂಗಳ ತೋಟವೊಂದನ್ನು ನಿರ್ಮಿಸಬೇಕು ಇತ್ತೀಚೆಗೆ ಹೂಗಳು ಅರಳುವ ಸಮಯವನ್ನು ನಿರೀಕ್ಷಿಸಿ ಅವುಗಳು ಯಾವ ಸಮಯದಲ್ಲಿ ಅರಳುತ್ತವೆಂಬುದನ್ನು ನಿರ್ಣಯಿಸಿದ್ದಾರೆ ಗಂಟೆಗೊಂದರಂತೆ ಅರಳುವ ಪುಷ್ಪಗಳು ಅನೇಕವಿವೆ ಗೋಟ್ಸಬಿಯರ್ಡ್ ಎಂಬ ಪುಷ್ಪವು ಬೆಳಿಗ್ಗೆ ಆರು ಗಂಟೆಗೆ ಅರಳುವುದು ಇನ್ನೂ ಕೆಲವು ಪುಷ್ಪಗಳು ಒಂಭತ್ತು ಗಂಟೆಗೂ ಕೆಲ ಹನ್ನೆರಡು ಗಂಟೆಗೂ ಕೆಲವು ನಾಲ್ಕು ಗಂಟೆಗೂ ಅರಳುತ್ತವೆ ಆದರೆ ಇವುಗಳನ್ನೆಲ್ಲಾ ಬೆಳೆಯಿಸುವುದು ಕಷ್ಟ ಆದರೂ ಒಂದು ದಿನ ಪುಷ್ಪವೇ ಗಡಿಯಾರವಾದೀತು!

---

### ಫಿಲಿಪ್ಪಾನ್ ದ್ವೀಪದಲ್ಲಿ ನೆರೆ

#### ೧೮೦ ಮಂದಿ ಮೃತರಾದರು

#### ಸಾವಿರಾರು ಜನರಿಗೆ ಮನೆಯಿಲ್ಲ!

ಉತ್ತರ ಮತ್ತು ಮಧ್ಯಲುಜೋನ್ ಪ್ರಾಂತ್ಯದಲ್ಲಿ ಭಯಂಕರ ನೆರೆ ಬಂದು ೧೮೦ ಮಂದಿ ಮೃತರಾದರು ಬೇಸಾಯಕ್ಕುಂಟಾದ ಹಾನಿ ಅವರ್ಣನೀಯ ಮನೆಮಾರ್ಗಗಳಿಗಾಗಿರುವ ನಷ್ಟಕ್ಕೆ ಲೆಕ್ಕವೇ ಇಲ್ಲ

---

### ಯಾರೂ ಬರಕೂಡದು

#### ೧೮ ವಿಕ್ಕುಗಳಲ್ಲಿ ಕರ್ಫ್ಯೂ ಶಾಸನ

#### ೧೮ ಸ್ಥಳಗಳಿಗೆ ಕಾಲಿಡಬಾರದು!

ಡೆಕ್ಕನಲ್ಲಿ ಪುನ ಒಂದು ವರ್ಷದ ವರೆಗೆ ಕರ್ಫ್ಯೂ ಓರ್ಡರ ಜ್ಯಾರಿ ಮಾಡಲ್ಪಟ್ಟಿದೆ ೧೨ ವ ತ್ತು ೩೦ ವರ್ಷ ಪ್ರಾಯದೊಳಗಣವರು ೧೮ ಸ್ಥಳಗಳಲ್ಲಿ ಕತ್ತಲಾದ ವೇಳೆ ಸಲ್ಲದಾರದೆಂದು ಕಟ್ಟಪ್ಪಣೆಯಾಗಿದೆ ಈ ಶಾಸನವನ್ನು ಉಲ್ಲಂಘಿಸಿದವರಿಗೆ ೧೦೦೦ ರೂಪಾಯಿ ದಂಡವು ಮೂರ ಮತ್ತು ಕಾರಾವಾಸ

---

### ಗಂಡಕ ನದಿಯಲ್ಲಿ ನೆರೆ!

#### ಮಹಾನಷ್ಟವು ಸಂಭವಿಸಿದೆ

#### ಜನನಿಬಿಡ ಪ್ರದೇಶವು ನೀರುಪಾಲಾಗಿದೆ

ಮುಜಾಫರಪುರ ಆಗೋಸ್ಟು ೧೫

ಮುಜಾಫರದ ಹಾಜಿಪುರ ಸಬ್ ಡಿವಿಜನಿನ ಕಡೆಯಿಂದ ಬಂದ ವಾರ್ತೆಯಿಂದ ತಿಳಿದು ಬರುವಂತೆ ಗಂಡಕ ನದಿಯು ಉಗ್ರವಾಗಿದೆಯೆಂದು ತಿಳಿದುಬರುತ್ತದೆ ೩೦ ಮನೆಗಳೂ ಜನನಿಬಿಡ ಸ್ಥಳಗಳೂ ನೀರಿನಿಂದಾವೃತವಾಗಿವೆ ಹಲವು ಬಾವಿಗಳು ಮುಚ್ಚಲ್ಪಟ್ಟಿವೆ. ಅಧಿಕಾರಿಗಳು ಅತ್ತ ತೆರಳಿ ವ್ಯವಸ್ಥೆಮಾಡುತ್ತಿರುವರು.

---

### ಪುನರ್ವಿವಾಹ.

ಭೋಟ್ನಾಮಾರ ಎಕ್ಸ್ ಸ್ಟೇಶನ್ ಮಾಸ್ತರಿನ ಬಾಲವಿಧವೆಯ ಆಶಾಲತೆಯನ್ನು ಚೂನಿಲಾಲ್ ಎಂಬ ಶ್ರೀಮಂತನೋರ್ವನು ಮದುವೆಯಾದನು. ವಿವಾಹಕಾಲದಲ್ಲಿ ಅನೇಕ ಮಂದಿ ಹಾಜರಿದ್ದರು. ಮನಸ್ಸಿದ್ದವರು ಸಮಾರಂಭವನ್ನು ನೋಡಬಹುದಲ್ಲ.

---

### ಕಲ್ಲಿನ ಸಾಮಾನುಗಳು.

ಬರ್ಲಿಂಗ್ಟನ ಡನಲ್ಡ್ಸ್ ಕಂಪೆನಿಯಲ್ಲಿ ಪ್ರಾಚೀನ ಕಾಲದ ಕಲ್ಲಿನ ಸಾಮಾನುಗಳು ಸಿಕ್ಕಿವೆ. ಅದರಲ್ಲಿ ಕಲ್ಲಿನ ಮಣಿಗಳೂ, ಬಾಣದ ಚೂಪಾದ ಮೊನೆಗಳೂ, ಕೊಡಲಿಗಳೂ ಸಿಕ್ಕಿವೆ. ಪೂರ್ವದವರು ಕಲ್ಲಿನಿಂದಲೇ ಎಲ್ಲಾ ಸಾಮಾನುಗಳನ್ನು ತಯಾರಿಸುತ್ತಿದ್ದರೆಂಬದಕ್ಕೆ ಬೇರೆ ನಿದರ್ಶನ ಬೇಕೆ?

---

### ೬½ ಅಡಿ ಉದ್ದದ ಟಿಕೇಟು.

ಕೆನಡಾ ದೇಶದ ರಾಷ್ಟ್ರೀಯ ರೈಲ್ವೆ ಕಂಪೆನಿಗಳಲ್ಲಿ ಟಿಕೇಟುಗಳ ಬಗ್ಗೆ ಹೊಸ ಏರ್ಪಾಡೊಂದು ಆಗಿದೆ. ಒಂದೊಂದು ಟಿಕೇಟಿನ ಉದ್ದ ೬½ ಅಡಿ ಈ ಟಿಕೇಟಿನಿಂದ ಇಡೀ ಕೆನಡಾ ದೇಶವನ್ನು ಸಂಚರಿಸಿ ಬರಬಹುದು ಪ್ರತಿಯೊಂದು ಸ್ಟೇಶನಿನಲ್ಲಿ ಒಂದೊಂದು ತುಂಡನ್ನು ಕೊಟ್ಟರಾಯಿತು ಕೆನಡಾದ ಪ್ರೊಫೆಸರರು ಇದನ್ನು ಪಡಕೊಂಡು ಸಂಚಾರಕ್ಕೆ ತೆರಳಿದ್ದಾರೆ

---

### ಅಪೂರ್ವ ದ್ರಾವಕದ ಸಂಚಯ.

ವಿಜ್ಞಾನ ಶಾಸ್ತ್ರಜ್ಞರು ಪ್ರಪಂಚದಲಿ ಅತ್ಯದ್ಭುತವಾದ ಕೆಲಸಗಳನ್ನು ಮಾಡುತ್ತಾರೆಂಬುವ ಸಟೆಯಲ್ಲ ಇನ್ನು ಕೆಲವೇ ತಿಂಗಳಲ್ಲಿ ನವೀನ ದ್ರಾವಕವೊಂದರ ಉತ್ಪತ್ತಿಯಾಗುತ್ತದೆಂದು ಸಮಾಚಾರ ಅಗೋಚರವಾದ ಅಕ್ಷರಗಳನ್ನೂ ಗೋಚರವಾಗುವಂತೆಯೂ, ಕಾಣುವಂತಹ ಅಕ್ಷರಗಳನ್ನು ಕಾಣದಂತೆಯೂ ಮಾಡುವ ಶಕ್ತಿಯು ಈ ದ್ರಾವಕದಲ್ಲಿದೆಯಂತೆ ಈ ದ್ರಾವಕವನ್ನು ಕಾಗದಗಳ ಮೇಲೆ ಉಜ್ಜುವುದರಿಂದ ಮಸಿಯಿಂದ ಬರೆದು ಉಜ್ಜಿದ ಅಕ್ಷರಗಳೂ ಸಹ ಸರಿಯಾಗಿ ಕಾಣಬಹುದಂತೆ. ಈಗ ಲಿಯೋನ್, ಪೋಲೀಸ ಲೆಬೋರೇಟರಿಯ ಡೈರೆಕ್ಟರರಾದ ಡಾಕ್ಟರ ಲೊಕಾರ್ಡ್ ಎಂಬವರ ಹತ್ತಿರವಿದೆ ಇದರ ಸಹಾಯದಿಂದಲೆ ಫ್ರಾನ್ಸ್ ದೇಶದ ಪೇಂಚಿನ ಲೆಕ್ಕಾಚಾರದಲ್ಲಿ ಹಲವು ಕಡೆಗಳಲ್ಲಿ ವಂಚನೆಯಾದ್ದನ್ನು ತಿಳಿಯಪಡಿಸಿದ್ದಾರೆಂದೂ, ಲಿಪಿಯಲ್ಲಿ ಅಳಿಸಿಹೋದ ನೆಪೋಲಿಯನನ ಕಾಲದ ಪತ್ರವೊಂದನ್ನು ಈ ದ್ರಾವಕದಿಂದಾಗಿ ಓದಲಾಗುವಂತೆ ಮಾಡಿದ್ದಾರೆಂದೂ ತಿಳಿದುಬಂದಿದೆ

---

### ಒಂದೇ ಅರ್ಧ ತಾಸು ರಾತ್ರಿ

ಕಳೆದ ಜೂನ ೨೯ರಲ್ಲಿ ಅಲೆಸ್ಕಾದಲ್ಲಿರುವ ಫೇರ್ ಬೇಂಕ್ಸ್ ನಗರದ ಜನರಿಗೆ ರಾತ್ರಿಯೆ ಇರಲಿಲ್ಲ ಒಂದು ಸಲ ಮೂಡಿದ ಸೂರ್ಯನು ಮತ್ತೆ ಮುಳುಗಲೇ ಇಲ್ಲ ಕಡೆಗೆ ಮಧ್ಯರಾತ್ರಿಯಾಗುವಾಗ ಸೂರ್ಯ ಮುಳುಗಿ ಪುನಃ ಅರ್ಧ ಗಂಟೆಯೊಳಗೆ ಮೂಡಿದನು ಈ ವಿಚಿತ್ರದ ನೋಟವನ್ನು ನೋಡಲು ಅಲ್ಲಿಯ ಜನರೆಲ್ಲ ಎತ್ತರವಾದ ಪರ್ವತವನ್ನೇರಿದ್ದರು ನಗರದ ಜನರೆಲ್ಲ ಆನಂದತುಂದಿಲರಾಗಿದ್ದರು ಅಭಿನಯಗಳೂ ವಿವಿಧ ಆಟಗಳೂ ಇದ್ದುವು ವರ್ಷದಲ್ಲೊಂದು ದಿನವಾದ್ದರಿಂದ ಎಲ್ಲ ಕಂಪನಿಗಳಿಗೂ, ಅಂಗಡಿಗಳಿಗೂ ರಜೆ ಇತ್ತು

---

### ಮಸೀದಿಯನ್ನು ತೆಗೆಯಬೇಕೆಂದು ಆಜ್ಞೆ.

ರಿವಲ್ಲಿ ಎಂಬಲ್ಲಿ ಸರಕಾರದವರ ಅನುಮತಿಯನ್ನು ಪಡೆಯದೆ ತಾಲೂಕು ಆಫೀಸಿನ ಬಳಿ ಮಸೀದಿಯನ್ನು ಕಟ್ಟಿಸುದಕ್ಕಾಗಿ ಜಿಲ್ಲಾ ಕಲೆಕ್ಟರರು ಅದನ್ನಲ್ಲಿಂದ ತೆಗೆಯಲು ಅಲ್ಲಿಯ ಮುಸ್ಲಿಮರಿಗೆ ಆಜ್ಞೆಯನ್ನಿತ್ತಿದ್ದಾರೆ. ಹಿಂದೂ ಗೃಹಸ್ಥರನೇಕರು ಈ ಮಸೀದಿಯ ವಿಷಯ ತಹಶೀಲ್ದಾರರವರಿಗೆ ದೂರು ಕೊಟ್ಟಿದ್ದೆ ಇದಕ್ಕೆ ಕಾರಣವೆಂದು ತಿಳಿದು ಮುಸ್ಲಿಮರು, ಇದಕ್ಕೆ ತಾವೊಪ್ಪುವುದಿಲ್ಲವೆಂದು ಒಂದು ದೊಡ್ಡ ಪೆಟಿಶನ್ ಕಳುಹಿಸಿದ್ದಾರೆಂದು ತಿಳಿದುಬಂದಿದೆ

---


## ನೋಟೀಸು.

### ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ಫ್ ಕೋರ್ಟಿನಲ್ಲಿ.

O. P. 42/1935 R. I. A. 918/1935.

ಅರ್ಜಿದಾರಳು—ಕಾವೇರಿ ಹೆಂಗ್ಸು, ದಾಮೋದರ ಸೇರಿಗಾರನ ಹೆಂಡ್ತಿ, ಹಾಲಿ ಕುಂದಾಪುರ ಕಸಬಾ ಗ್ರಾಮದಲ್ಲಿರುವವಳು.

2 ಎದ್ರಿರು.

1 ಸಂಕು ನರಸಿಂಹ ಕಾರಂತ, ತಿಪ್ಪಯ್ಯ ಕಾರಂತರ ಮಗ ಕುಂದಾಪುರ ತಾಲ್ಕು ವಡೇರ ಹೋಬಳಿ ಗ್ರಾಮ.

2. ನರಸಿಂಹ ಪೈ, ನಾಗಪ್ಪ ಪೈ ಮಗ. ಉಡುಪಿ ತಾಲ್ಕು ಮುದರಡು ಗ್ರಾಮದ ಚೆಂಪಿನ ಪೇಟೆಯಲ್ಲಿರುವವ.

1ನೇ ಎದ್ರಿಗೆ ತಾ. 11-3-1933ರಲ್ಲು ರಿಜಿಸ್ಟ್ರಿ ನಂಬ್ರ 261/1933ನಗೆ ಸುಬ್ರಾಯ ಕಾರಂತ ವಗೈರರು ಬರಕೊಟ್ಟ ಈದು ದಸ್ತಾವೇಜಿನ ಬಾಬ್ತು 1ನೇ ಎದ್ರಿಗೆ ಸಲ್ಲತಕ್ಕ ಹಣಗಳನ್ನು ತೆರುವ ಜವಾಬುದಾರಿ ಒಳಪಡಿಸಿ ಅರ್ಜಿದಾರಳಿಗೆ ಸದ್ರಿ ಸುಬ್ರಾಯ ಕಾರಂತ ವಗೈರರು 2000/-ಕ್ಕೆ ರಿಜಿಸ್ಟ್ರಿ ನಿಶಿಂ ಬರೆಸಿಕೊಟ್ಟ ಈದು ದಸ್ತಾವೇಜಿನಲ್ಲಿ ಒಳಪಡಿಸಿ ಕೊಟ್ಟ ಮೇರೆಗೆ ಅರ್ಜಿದಾರಳು ಸದ್ರಿ ಹಣ ಬಡ್ಡಿ ಕೂಡಾ ರೂ 680-0-0ನ್ನು ಮೇಲ್ಕಂಡ ಅರ್ಜಿಯ ಕ್ರೆಡಿಟಿಗೆ ಡಿಪೋಜಿಟು ಮಾಡಿದ್ದಾಳೆ. ಸದ್ರಿ 1ನೇ ಎದ್ರಿಯು ಆತನ ಬಾಬ್ತು ಸ್ಥಿರ ಆಸ್ತಿಗಳನ್ನು ಮತ್ತು ಮೇಲಿನ ಈದಿನ ಹಣ ವಸೂಲಿ ಹಕ್ಕನ್ನು ಸಹಾ 1ನೇ ಎದ್ರಿಯು 2ನೇ ಎದ್ರಿಗೆ ಈದುಮಾಡಿ ಕೊಟ್ಟದ್ದರಿಂದ ಆತನನ್ನು ಸಹಾ ಈ ಅರ್ಜಿಯಲ್ಲಿ ಸೇರಿಸಿ ಸದ್ರಿ ಹಣವನ್ನು ಎದ್ರಿರಿಗೆ ಕೊಡಿಸಿ ಸದ್ರಿ ಎದ್ರಿರಿಗೆ ಇರುವ ಎಲ್ಲಾ ಜವಾಬ್ದಾರಿಗೆ ವಿರಹಿತವಾಗಿ ಸದ್ರಿ ಈದಿನ ಪೂರ್ಣ ಕುಲಾಸುಪಡಿಸಿ ಕೊಡಿಸಬೇಕಾಗಿಯೂ, ಮತ್ತು ಸದ್ರಿ ಈದು ವ ಅದರ ಒಳದಸ್ತಾವೇಜುಗಳನ್ನು ಪೂರಾ ಅರ್ಜಿದಾರಳಿಗೆ ಕೊಡಿಸಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ತಾ 27-8-35ಕ್ಕೆ ಮುಂದರಿಸಿ ಇಟ್ಟಿರುತ್ತದೆ ಆ ಕುರಿತು ಆಕ್ಷೇಪಮಿದ್ದರೆ ಆ ತಾರೀಕಿಗೆ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು. ಇಲ್ಲದಿದ್ದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಕುಂದಾಪುರ 16-8-35 } K. Raghunath Shenai, ಅರ್ಜಿದಾರಳ ಕಡೆ ವಕೀಲ

---

**The Uplifting Banking Corporation Ltd. Bombay**

**ದಿ ಅಪ್‌ಲಿಫ್ಟಿಂಗ್ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಬೊಂಬಾಯಿ,**

ಒಂದು ಸಲ ಮಾತ್ರ ರೂ 5 ಕೆತ್ತಲ್ಲಿ—

1 ಮೆಂಬರನು ಏರ್ಪಾಡಿಸಲ್ಪಡುವನು.

2 ವರುಷದೊಳಗೆ ಮದುವೆ ಮಾಡಿಕೊಂಡರೆ ಸಹಾಯ ಸಿಗುವುದು

3 ಲಾಭಾಂಶ ಸಿಗುವ ಅನೇಕ ಸಂದರ್ಭಗಳಿವೆ.

4 ವ್ಯಾಧಿ ಆಪ್ತೆಗೆ ಜೋಡಿಸಿದ ಹಣ ಬಡ್ಡಿ ಸಮೇತ ವಾಪಸು ಸಿಗುತ್ತದು.

**ಚೀಫ್ ಏಜಂಟ್ ಉಡುಪಿ ಡಾಕ್ಟರ ಕೆ. ಶಿವರಾಯರಿಂದ ಹಣ ಸಲ್ಲಾಪಿ ಪಡೆಯಬಹುದು.**

**ಸಬ್ ಏಜಂಟರು ಬೇಕಾ.**

## ಜಿಲ್ಲಾ ಬೋರ್ಡು ಚುನಾವಣೆಯ ಓಟರರಲ್ಲಿ ವಿನಂತಿ.

ಬರುವ ಜಿಲ್ಲಾ ಬೋರ್ಡು ಚುನಾವಣೆಯ ಪ್ರಾಥಮಿಕ ಓಟರರ ಪಟ್ಟಿಯು ತಾರೀಕು 15—8—1935ರಲ್ಲು ಪ್ರಕಟಿಸಲ್ಪಟ್ಟಿದೆ. ಈ ಪಟ್ಟಿಯನ್ನು ಜಿಲ್ಲಾ ಇಲೆಕ್ಷನ್ ಆಫೀಸರರ ಆಫೀಸಿನಲ್ಲಿಯೂ ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಆಫೀಸಿನಲ್ಲಿಯೂ ತಾಲೂಕು ಆಫೀಸಿನಲ್ಲಿಯೂ ಗ್ರಾಮ ಪಂಚಾಯತ ಬೋರ್ಡು ಆಫೀಸುಗಳಲ್ಲಿಯೂ, ಗ್ರಾಮ ಚಾವಡಿಗಳಲ್ಲಿಯೂ ಕಾಣಬಹುದು. ಈ ಪಟ್ಟಿಯಲ್ಲಿ ಓಟು ಕೊಡಲಿಕ್ಕೆ ಅರ್ಹತೆವುಳ್ಳವರು ಅನೇಕರ ಹೆಸರುಗಳನ್ನು ಬಿಟ್ಟು ಹೋಗಿರಬಹುದು. ಅಥವಾ ತಪ್ಪಾಗಿ ಹೆಸರುಗಳು ಬಿದ್ದಿರಬಹುದು ಅಂತಹ ತಪ್ಪುಗಳನ್ನು ಸರಿಪಡಿಸಿಕೊಳ್ಳುವುದು ಪ್ರತಿಯೊಬ್ಬ ಓಟರನ ಕರ್ತವ್ಯವಾಗಿರುತ್ತದೆ. ಇದು ವಿನಹಾ ಈ ಸಾರಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯಿಂದ ಸ್ಪರ್ಧಿಸಲ್ಪಡುವುದು ಎಂಬ ಸಂಗತಿಯು ಎಲ್ಲರಿಗೂ ತಿಳಿದ ವಿಷಯವೇ. ಆದುದರಿಂದ ಕಾಂಗ್ರೆಸ್ಸಿನ ಕಡೆಯ ಉಮೇದ್ವಾರರಿಗೆ ಹೆಚ್ಚು ಓಟುಗಳು ಸಿಗುವಂತೆ ಮಾಡುವುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಾಗಿರುತ್ತದೆಂಬ ಸಂಗತಿಯನ್ನು ಒತ್ತಿ ಹೇಳಬೇಕಾಗಿಲ್ಲ. ಸದ್ರಿ ಓಟರರ ಪಟ್ಟಿಯಲ್ಲಿ ಓಟು ಕೊಡಲಿಕ್ಕೆ ಅರ್ಹತೆಯುಳ್ಳ ಹೆಸರು ಇಲ್ಲದೆ ಇರೆ ವವನೂ, ತಪ್ಪಾಗಿ ಹೆಸರು [illegible] ವನೂ ಅವನ ಬಾಧ್ಯತೆಯ ಆಕ್ಷೇಪಣೆಗಳನ್ನು ಜಿಲ್ಲಾ ಇಲೆಕ್ಷನ್ ಆಫೀಸರರಲ್ಲಿ ಯಾ ಗ್ರಾಮ ಪಂಚಾಯತ ಬೋರ್ಡು ಆಫೀಸುಗಳಲ್ಲಿಯೂ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿಯೂ ಸಿಕ್ಕುವ ಅಥವಾ [illegible] ವಿವರಿಸಿರುವವಲ್ಲಿ [illegible] ಫಾರಮ್ಮುಗಳಲ್ಲಿ ಅಥವಾ ಅವುಗಳ ಮಾದರಿ ಪ್ರಕಾರ ಕೈಬರಹದ ಫಾರಮಿನಲ್ಲಿ [illegible] ಗಳೊಳಗಿನಲ್ಲಿರುವ ಡಿಸ್ಟ್ರಿಕ್ಟ್ ಇಲೆಕ್ಷನ್ ಆಫೀಸರಿಗೆ [illegible], ಸ್ವತಃ [illegible], [illegible] ತಾ 30-8-35ರ ಒಳಗೆ [illegible] ಸಬೇಕು ಓಟಿನ ಅರ್ಹತೆ [illegible] ಕೂಡಲೇ ಈ ಕಾರ್ಯದಲ್ಲಿ ಪ್ರಯತ್ನಿಸಿ ತಮ್ಮ ಹೆಸರು ಓಟರರ ಪಟ್ಟಿಯಲ್ಲಿ ಸರಿಯಾಗಿ [illegible] ವಂತೆ ನೋಡಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ ಜಿಲ್ಲೆಯ ಇತರ ಎಲ್ಲಾ ಕಾಂಗ್ರೆಸ್ ಕಮಿಟಿಯವರು ಕೂಡಾ ಇಂತಹ ಫಾರಮ್ಮುಗಳನ್ನು ಛಾಪೆ ಮಾಡಿಸಿ ಓಟರರ ಪಟ್ಟಿಯಲ್ಲಿ ಸೇರದ, ಓಟಿಗೆ ಅರ್ಹತೆಯಿರುವ, ಎಲ್ಲರಿಗೂ ಹಂಚಿ ಅವರು ತಾ 30-8-35ರ ಒಳಗೆ ಆಕ್ಷೇಪಣೆ ಕೊಡುವಂತೆ ಮಾಡಬಹುದು ಓಟು ಕೊಡಲಿಕ್ಕೆ ಅರ್ಹರಾದವರ ಯೋಗ್ಯತೆಗಳನ್ನು ಈ ಕೆಳಗೆ ಸಂಕ್ಷೇಪವಾಗಿ ವಿವರಿಸಿಯದೆ

### ಓಟರನ ಯೋಗ್ಯತೆಗಳು

21 ವರ್ಷಕ್ಕಿಂತ ಮೇಲ್ಪಟ್ಟ ಪ್ರಾಯಸ್ಥನು ಈ ಕೆಳಗಿನ ಪೈಕಿ ಯಾವುದಾದರೊಂದು ಅಥವಾ ಹೆಚ್ಚು ಯೋಗ್ಯತೆವುಳ್ಳವನಿಗೆ ಓಟರನಾಗಲು ಅರ್ಹತೆ ಇದೆ

1 ತಾ. 31-3-1935ಕ್ಕೆ ಅಂತ್ಯವಾಗುವ ವರುಷದಲ್ಲಿ ಇನ್‌ಕಮ್‌ಟೇಕ್ಸ್ ಅಥವಾ ಕಳೆದ ವರುಷದಲ್ಲಿ ಅಥವಾ ಚಾಲ್ತಿ ವರುಷದಲ್ಲಿ ಇತರ ಟೇಕ್ಸ್ ಅಥವಾ ವೃತ್ತಿತೆರಿಗೆ ಕೊಟ್ಟವನಾಗಿರಬೇಕು

2 ಪಟ್ಟಾದಾರ

3. ಪಟ್ಟಾದಾರನ ಅಥವಾ ಅವನ ವಕ್ಕಿನ ಒಳಗೆ ಬರಹಮೂಲಕ ಗೇಣಿಚೀಟು ಅಥವಾ ಬಾಡಿಗೆಚೀಟು ಬರಕೊಟ್ಟವನಾಗಿರಬೇಕು (ಮೂಲಗೇಣಿ ವ ಚಾಲಗೇಣಿ ವಕ್ಕುಗಳು) ಗೇಣಿಚೀಟು ಅಥವಾ ಬಾಡಿಗೆಚೀಟುಗಳನ್ನು ಡಿಸ್ಟ್ರಿಕ್ಟ್ ಇಲೆಕ್ಷನ್ ಆಫೀಸರರ ಮುಂದೆ ಹಾಜರು ಮಾಡಬೇಕಾದೀತು

ಯಂ ಯಸ್ ಅಧಿಕಾರಿ, ಕಾರ್ಯದರ್ಶಿ,
ತಾಲೂಕು ಕಾಂಗ್ರೆಸ್ ಕಮಿಟಿ.

### ಇಸ್ಪೀಟು ಆಟದ ಪ್ರಯೋಜನ

ಇಂಗ್ಲೆಂಡಿನಲ್ಲಿ ವರ್ಷಂಪ್ರತಿ ೧೦ ಮಿಲ್ಯಕ್ಕಿಂತ ಹೆಚ್ಚು ಇಸ್ಪೀಟು ಪ್ಯಾಕುಗಳನ್ನು ಆಟ ಮಾಡಲಿಕ್ಕೆ ಉಪಯೋಗಿಸುವರು. ಸರಕಾರಕ್ಕೆ ಈ ಮೂಲಕ ತೆರಿಗೆಯು ಸುಮಾರು ೨ ಲಕ್ಷ ಪೌಂಡು ಬರುವುದು.

### ಪೋಲೀಸರ ಗೋಳೀಬಾರು.

ಸಂಭಾರ ಜಿಲ್ಲೆಯ ಜಹಗೀರದಾರರ ಠಕ್ಕೋರ್ದಾಸಾದ ಅಮಾಪ ಸಿಂಗನೆಂಬವನಲ್ಲಿ ಕಳ್ಳತನದ ಹೆಂಡವಿದೆಯೆಂದು ಎಕ್ಸೈಜ್ ಇಲಾಖೆಯ ಅಧಿಕಾರಿಗಳು ಶೋಧಕ್ಕಾಗಿ ತೆರಳಿದರು. ಆದರೆ ಅಮಾಪಸಿಂಗನು ತನ್ನ ಮನೆಗೆ ಅವರು ಪ್ರವೇಶಿಸಬಾರದಾಗಿ ತಡೆಯಲು ಗೋವಿಗಳ ಪ್ರಯೋಗವಾಯಿತು ಜಹಗೀರದಾರನು ಮೃತಪಟ್ಟಿರುವನು ಅವನ ತಾಯಿಗೂ ಇನ್ನಿತರ ಸೇವಕ ಸೇವಕಿಯರಿಗೂ ವಿಶೇಷ ಗಾಯವಾಗಿದೆ.

### ಪತ್ರಿಕಾ ಕರ್ತರಿಗೆ ಸತ್ಕಾರ

ಮದ್ರಾಸು ಪಟ್ಟಣದ ಪ್ರಮುಖ ಪತ್ರಿಕಾ ಕರ್ತರಿಗೂ ಸಂಪಾದಕರಿಗೂ [illegible] ಪ್ರಖ್ಯಾತರಾದ ಶ್ರೀಯುತ ಕೆ ಸೀತಾರಾಮರಾಯರು ಮೊನ್ನೆ ತಾ [illegible] ರಲ್ಲಿ ತನ್ನ ದಿವ್ಯ ವಿಶ್ರಾಂತಿ ಗೃಹದಲ್ಲಿ ಟೀಪಾರ್ಟಿಯನ್ನು ಕೊಟ್ಟು ಸತ್ಕರಿಸಿದರು. ಪತ್ರಿಕಾಕರ್ತರ ವರ್ಗಕ್ಕೆ ಸೇರಿದ ಪ್ರಮುಖ ಮಹನೀಯರಾದ ಶ್ರೀಯುತ ಕೆ ಶ್ರೀನಿವಾಸನ್ [illegible], ಡಾ [illegible] ರಾಮರಾವ್, [illegible] ರಾವ್ [illegible] ರಾವ್, ಡಾ [illegible] ನಾಯುಡು, [illegible] ರಾವ್ [illegible] ನೊದಲಾದವರ ಚಿಕ್ಕ [illegible] ವನ್ನು [illegible] ಯಾಗಿ ಮಾಡಿದರು. ಅತಿಥಿ [illegible] ಶ್ರೀಯುತ ಕೆ. [illegible] ರಾವ್ [illegible] ರಾಯರ [illegible] ಚಿಕ್ಕ ಮಾತಿನ ಚಿಕ್ಕ [illegible] ಅತಿಥಿ ಅಭ್ಯಾಗತರು [illegible] ತೆಗೆದು [illegible] ಕಾರ್ಯವು ಮುಕ್ತಾಯ ವಾಯಿತು.

### ಯುದ್ಧವು ಸಂಘಟಿಸುವುದು ಖಚಿತ
### ತ್ರಿರಾಷ್ಟ್ರ ಪರಿಷತ್ತು ಮುರಿಯಿತು

ಫ್ರಾನ್ಸ್ ಇಂಗ್ಲೆಂಡು ಮತ್ತು ಇಟೆಲಿಗಳ ಪ್ರತಿನಿಧಿಗಳ ಒಂದು ಪರಿಷತ್ತು ಮೊನ್ನೆ ಪೆರಿಸ್ ನಗರದಲ್ಲಿ ಜರಗಿ ಇಟಲೀ ಎಬಿಸೀನಿಯಾ ಗಳೊಳಗಣ ಭಿನ್ನಾಭಿಪ್ರಾಯಗಳನ್ನು ಕೊಡೆದು ಹಾಕುವ ಯತ್ನವಾಯಿತು ಸಭೆಯು ಎರಡು ದಿನಗಳ ವರೆಗೆ ನಡೆದು ಮಧ್ಯೆ ಅಕಸ್ಮಾತ್ತಾಗಿ ಕೊನೆಗೊಂಡಿತು ಇಟಲಿಯು ಎಬಿಸೀನಿಯಾದಲ್ಲಿ ತನಗೆ ಬೇಕೆಂದು ಕೇಳುವ ರಾಜಕೀಯ ಅಧಿಕಾರಕ್ಕೆ ಬ್ರಿಟನ್, ಎಬಿಸೀನಿಯಾ ಮತ್ತು ಲೀಗ್ ಓಫ್ ನೇಶನ್ಸ್ ಒಪ್ಪಿದರೆ ಮಾತ್ರ ಆ ಅಧಿಕಾರವನ್ನು ಇಟಲಿಗೆ ಕೊಡಲಾಗುವುದೆಂದು ಪರಿಷತ್ತಿನಲ್ಲಿ ತೀರ್ಮಾನವಾದುದಕ್ಕೆ ಇಟಲಿಯ ಚಕ್ರಾಧಿಪತಿಗಳಾದ ಮುಸೊಲಿನಿಯವರು ಒಪ್ಪಲಿಲ್ಲ. ಇದರಿಂದಾಗಿಯೇ ಸಭೆಯು ಮುಕ್ತಾಯಗೊಂಡಿತು. ಎಬಿಸೀನಿಯಾದಲ್ಲಿ ತನಗೆ ಸ್ವೇಚ್ಛಾನುಸಾರ ಅಧಿಕಾರವಿರಬೇಕೆಂದು ಇಟಲಿಯು ಕೇಳಿಕೊಂಡುದಕ್ಕೆ ಬ್ರಿಟನೂ, ಫ್ರಾನ್ಸೂ ಒಪ್ಪಿರುವುದಿಲ್ಲ ಸಪ್ಟಂಬರದಲ್ಲಿ ಒಂದು ಮಹಾಸಭೆಯು ಜರಗಿದರೂ ಅದರಲ್ಲೂ ಯಾವ ತೀರ್ಮಾನವೂ ಆಗುವಂತೆ ಭರವಸೆಯಿಲ್ಲವೆಂದು ಮಿ। ಏಡನರು ಹೇಳುತ್ತಿರುವರು. ಆದರೆ ಲಾವಲರು ಸಪ್ಟಂಬರದಲ್ಲಿ ನನಾದರೂ ನಿರ್ಧಾರವಾಗಬಹುದು ಎನ್ನುತ್ತಿರುವರು. ಸಪ್ಟಂಬರದಲ್ಲಿ ಯಾವ ರೀತಿಯ ಒಪ್ಪಂದವಾಗದಿದ್ದರೆ ಯುದ್ಧವು ತಲೆಯೆತ್ತುವುದು ಖಚಿತವಾಗಿದೆ.

ದಕ್ಷಿಣ ಅಮೇರಿಕದಿಂದ ನಾಲ್ಕು ಕಣ್ಣುಗಳುಳ್ಳ ಮೀನುಗಳನ್ನು ನ್ಯೂಯೋರ್ಕಿಗೆ ತಂದಿರುವರು. ಅವು ಮೇಲಿನ ಎರಡು ಕಣ್ಣುಗಳಿಂದ ಮೇಲ್ಭಾಗವನ್ನೂ, ಕೆಳಗಿನ ಎರಡು ಕಣ್ಣುಗಳಿಂದ ಕೆಳಭಾಗವನ್ನೂ ನೋಡಬಲ್ಲವು.

ಡಿರ್ಕಿಫೀ ಎಂಬ ಆಸ್ಟ್ರೇಲಿಯಾ ದೇಶಸ್ಥನು ಎಂಟು ಅಡಿ, ಎಂಟು ಅಂಗುಲ ಉದ್ದವಾಗಿದ್ದಾನೆ ಅಂದರೆ ಸಾಧಾರಣ ಒಬ್ಬ ಮನುಷ್ಯನ ಒಂದೂವರೆಯಷ್ಟು ಹೆಚ್ಚು ಉದ್ದವಾಗಿರುವನು

### ಹೆರಿಗೆಯಲ್ಲಿ ಸ್ಪರ್ಧೆ.

ಕೆನಡಾ ದೇಶದ ಟೊರಂಟೋದಲ್ಲಿ ತಾಯಂದಿರಿಗೊಂದು ಸ್ಪರ್ಧೆ [illegible] ಅಕ್ಟೋಬರ ತಿಂಗಳಿಂದ ೧೦ ವರುಷಗಳೊಳಗಾಗಿ ಯಾವ ತಾಯಿಯು ಹೆಚ್ಚು ಮಕ್ಕಳನ್ನು ಹೆರುತ್ತಾಳೋ ಆಕೆಗೆ [illegible] ಲಕ್ಷ ಪೌಂಡು ಅಲ್ಲಿಯ ಒಬ್ಬ ಶ್ರೀಮಂತ ವಕೀಲನ ಮರಣ ಶಾಸನದಲ್ಲಿನ ಹೇಳಿಕೆಯಂತೆ ಕೊಡಲ್ಪಡುವುದು ಅಲ್ಲಿಯ [illegible] ದ್ಯೋಗಿಯಾದ [illegible] ತನ ಹೆಂಡತಿಯು ಸದ್ಯ ಈ ಜನಜನಲ್ಲಿ [illegible] ಸಂಭವವಿದೆ. ಆಕೆಯು ೩ ಸಾರಿ ಅವಳಿ ಜವಳಿ ಮಕ್ಕಳನ್ನು ಹೆತ್ತಿರುವಳು, ಮತ್ತು ತನ್ನ ಹದಿನಾಲ್ಕು ಮಕ್ಕಳ ಪೈಕಿ [illegible] ಜನರು ಬದುಕಿರುವರು. ಸ್ಪರ್ಧಾವಧಿಯ [illegible] ವರುಷ [illegible] ತಿಂಗಳಲ್ಲಿ [illegible] ಬಂದಿದೆ. [illegible] ಅವಳಿ ಜವಳಿ ಮಕ್ಕಳನ್ನು ಹೆರ [illegible] ತ್ತಾರೆ

ಯಾರ [illegible] ಹೆಚ್ಚು [illegible] ಕುಡಿದು [illegible] ನಡಸಿ [illegible] ಮಾಡಿದ್ದಲ್ಲಿ [illegible] ಪಿಸಲ್ಪಡುವುದು. [illegible] ಅಪ್ಪಣೆ ಮಾಡಿರುತ್ತದೆ ಯಾವ ದೇಶದಲ್ಲಿಯೂ ನೋಟಾರ [illegible] ಇತರ [illegible] ವಿಲ್ಲ

[illegible] ಶ್ರೀ [illegible] ಅವರು [illegible] ಅವನನ್ನು [illegible] ಅವರ ಪತ್ನಿಯವರಿಗೆ [illegible] ಗಾಯ [illegible] ವರ

ಪೋಲೆಂಡಿನ [illegible] ಒಂದು ಸ್ಕೂಲಿನ ಉಪಯೋಗಕ್ಕಾಗಿ ಒಂದು ಮರವನ್ನು ಕಡಿಯುತ್ತಿದ್ದಾಗ ಅದರ ಪೊಟರೆಯಲ್ಲಿ ಕೆಲವು ಚಿನ್ನ ಬೆಳ್ಳಿ ನಾಣ್ಯಗಳು ಮತ್ತು ಒಂದು ಗಾಜಿನ ಚಿತ್ರಪಟವು ದೊರೆಯಿತು

### ಮೀನಿನ ದೇಹವುಳ್ಳ ಮನುಷ್ಯ.

ಲಂಡನ್ ಪಟ್ಟಣದಲ್ಲಿ ಅರ್ಧಮತ್ಸ್ಯ ಅರ್ಧ ಮನುಷ್ಯಾಕಾರದ ಬಹಳ ಪುರಾತನ ಕಾಲದ [illegible] ದೇಹವೊಂದು ಸಿಕ್ಕಿರುತ್ತದೆ. ಇದರ ತಲೆ, ಕೈಕಾಲು, ಬೆನ್ನು ಹೊಟ್ಟೆ ಮೊದಲಾದ ಭಾಗಗಳೆಲ್ಲವೂ ಸಾಧಾರಣ ಮನುಷ್ಯನಂತಿವೆ. ಆದರೆ ನಡುವಿನಿಂದ ಕೆಳಕ್ಕೆ ತೊಡೆ ಕಾಲುಗಳಿಗೆ ಬದಲು ಮೀನಿನ ಬಾಲವಿದೆ. ಈ ಮನುಷ್ಯ ಮತ್ಸ್ಯ ದೇಹವು ಪ್ರಪಂಚದ ಆಶ್ಚರ್ಯ ವಸ್ತುಗಳಲ್ಲಿ ಎಂಟನೆಯದೆಂದೂ ಸಿನ್ಮಾ ಫಿಲ್ಮಿನಲ್ಲಿ ಸಿಕ್ಕಿತೆಂದೂ ಯಾರು ಬೇಕಾದರೂ ನೋಡಬಹುದೆಂದೂ ಪ್ರಸಿದ್ಧಪಡಿಸಿದ್ದಾರೆ. ಈಗಾಗಲೇ ಅನೇಕ ಶಾಸ್ತ್ರಜ್ಞರು ಇದನ್ನು ನೋಡಿ ಆಶ್ಚರ್ಯಪಟ್ಟಿದ್ದಾರೆ.


# N.I.P.

ಬ್ರೇಂಡ್

ಅತ್ಯುತ್ಕೃಷ್ಟವಾದ

## ಪೆಟ್ರೋಲ್, ಚಿಮಿಣಿ ಎಣ್ಣೆ ಮತ್ತು ಡೀಸೆಲ್ ಎಣ್ಣೆಗಳು

ಹಿಂದೂದೇಶದಲ್ಲೆಲ್ಲಾ ಜವಾಬ್ದಾರೀ ಏಜಂಟರ ಮೂಲಕ ವಿಕ್ರಯಿಸಲ್ಪಡುವುದು.


### ಸಾಹಸ ತೋರಿದ್ದಕ್ಕಾಗಿ ಹಿಂದೂಗಳಿಗೆ ಪದಕಗಳು ದೊರೆತುವು.

**ಹಿಂದೂವಾದರೇನು ಜರ್ಮನರಾದರೇನು ಹರ್ ಹಿಟ್ಲರರಿಗೆ ಅವರು ಸರಿಸಮಾನರೇ!**

[illegible] ಯಲ್ಲಿ ನಡೆದ ಜರ್ಮನ್ ಸಂಗ್ರಾಮ [illegible] ಯುದ್ಧದಲ್ಲಿ ಸಾಹಸ ತೋರಿದ [illegible] ಮಂದಿ ಹಿಂದೂ ಯೋಧರಿಗೆ ಜರ್ಮನ್ [illegible] ಪದಕಗಳನ್ನು ಬಹುಮಾನವಾಗಿ ಹರ್ ಹಿಟ್ಲರರು [illegible] ರೆಂದು ತಿಳಿದು ಬಂದಿದೆ

### ಹಿಂದೂಗಳ ದೇವಸ್ಥಾನವನ್ನು ಇಗರ್ಜಿಯನ್ನಾಗಿ ಮಾಡಿದರು.
### ದಾವಾ ದಾಖಲಾಗಿದೆ.

ಸೇಲಂ [illegible] ಗಳಲ್ಲಿಯ ಹಿಂದೂಗಳ ದೇವಸ್ಥಾನವೊಂದನ್ನು ಕ್ರೈಸ್ತರ [illegible] ಮಾಡಿದ [illegible] ಹಿಂದೂ [illegible] ಸ್ಥರಾದ ಶ್ರೀ [illegible] ಮತ್ತು [illegible] ಸದರ [illegible] ಗಳಿಗೂ ಪತ್ರ ಬರೆದ [illegible] ಮಾಡಿದುದು ತಪ್ಪೆಂದೂ, [illegible] ಬಿಟ್ಟರೆ, ದೇವಸ್ಥಾನವು ಇನ್ನಿತರ [illegible] ಹೋಗುವುದೆಂದು [illegible] ದಾವಾ ದಾಖಲು ಮಾಡಿರುವರು. ದೇವಸ್ಥಾನವನ್ನು ಪುನಃ ಹಿಂದೂಗಳಿಗೆ [illegible] ಕೇಳಿಕೊಳ್ಳಲಾಗಿದೆ

### ಲಂಡನಿನ ಹೋಟೇಲಿನಲ್ಲಿ ಸುಲಿಗೆ

ಲಂಡನಿನ [illegible] ಹೋಟೇಲಿನಲ್ಲಿ ದಾಳಿ ಇಡಲು [illegible] ರಾಜರ [illegible] ಪೌಂಡುಗಳಿಗೆ ಮೇಲ್ಪಟ್ಟ ಬ್ಯಾಂಕು ನೋಟುಗಳು ಕಳವಾಗಿದೆ

ಬಳ್ಳಾರಿಯ [illegible] ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ತರಲ್ಪಟ್ಟ ಹಸುವಿಗೆ ಒಂದೇ ಬಾರಿ ಎರಡು ಕರುಗಳು ಹುಟ್ಟಿದುವು

### ಸ್ವಭಾಷಾಭಿಮಾನಿಗಳ ದರಾವು.

ತಮ್ಮ ಭಾಷೆಯನ್ನು ಸರಿಯಾಗಿ ಕಲಿಸಬೇಕೆಂಬ ಅಭಿಲಾಷೆಯು ಹಲವು ಹಿಂದುಸ್ತಾನಿ ಯುವಕರಲ್ಲಿ ಕುದಿಯುತ್ತಿರುವಂತಿದೆ. ಅಲ್ಲಹಾಬಾದಿನ ಕೆಲವು ಸ್ವಭಾಷಾಭಿಮಾನಿಗಳು ಒಂದು ನವೀನ ಸಂಘವನ್ನು ಏರ್ಪಡಿಸಿಕೊಂಡು, ಸಂಘದ ಕಟ್ಟಳೆಗಳೊಳಗೆ ಯಾರಾದರೂ ಸಂಘದ ಸದಸ್ಯನು ಸಂಭಾಷಣೆಯ ಕಾಲದಲ್ಲಿ ಮಧ್ಯೆ ಇಂಗ್ಲಿಷ್ ಶಬ್ದಗಳನ್ನು ಉಪಯೋಗಿಸಿಬಿಟ್ಟರೆ ತಪ್ಪಿದವರ ಒಂದು [illegible] [illegible] ದಂಡ [illegible] ಮಾಡಿದ್ದಾರೆ.

## ಅನುಕ್ರಮಣಿಕೆ.


| | |
|---|---|
| ಚಿತ್ರ | ೩ |
| ಸಾಹಿತ್ಯ ಸಂಗ್ರಹ | ೪ |
| ನೆರೆಯ ಜಾವಳಿ | ೫ |
| ಪತ್ರವ್ಯವಹಾರ | ೭ |
| ಕರುಣೆಯ ದುಃಖದ ಕಥೆ | ೮ |
| ಜಿ. ಬೋ. ಚುನಾವಣೆಯ ಓಟರರಲ್ಲಿ ವಿನಂತಿ | ೯ |
| ಅಗ್ರಲೇಖ | |
| ಮುಪ್ಪುಂದಿಯ ಮಾತಿನ ಮುಕ್ತಾಯ | ೧೦ |
| ಸ್ಫುಟವಿಚಾರಗಳು | ೧೧ |
| ವರ್ತಮಾನ ಸಂಗ್ರಹ | |
| ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡ್ ಸಭೆಯು | ೧೨ |
| ಮಂಗಳೂರು, ತಾಲೂಕುಗಳಿಂದ | ೧೩ |
| ವಿವಿಧ ಸಮಾಚಾರಗಳು, | ೧೫ |
| ನಡೆದ ಕತೆಗಳು, ನಗಬಾರದು | ೧೬ |


# ಸ್ವದೇಶಾಭಿಮಾನಿ.

ತಾ. ೨೩ನೇ ಶುಕ್ರವಾರ ಆಗೋಸ್ಟು '೩೫

# ಮುಪ್ಪುಂದಿಯ ಮಾತಿನ ಮುಕ್ತಾಯ!

ಇಟಲಿ ಅಬಿಸೀನಿಯಗಳೊಳಗೆ ಯುದ್ಧ ಸಾಧಿಸಲು ಇಂಗ್ಲೆಂಡು ಫ್ರಾನ್ಸು ಇಟಲಿ ಸರಕಾರಗಳ ಪ್ರತಿನಿಧಿಗಳು ಕಳೆದ ಶುಕ್ರವಾರದಿಂದ, ವಾದಿಸುತ್ತ ಹೇಗೂ ಶಾಂತಿ ಸ್ಥಾಪನೆ ಮಾಡಲು ನಡೆಯುತ್ತಿದ್ದ ಮಾತುಕತೆಗಳೆಲ್ಲವೂ ಮಂಗಳವಾರದೊಳಗೇ ಮುಗಿದುವು ಹಿಂಗಣ ಸಂಚಿಕೆಗಳಲ್ಲಿ,— ಈ ರಾಜೀ ಪ್ರಸ್ತಾಪವು ಸಂಧಾನದ ವಿಧಾನಗಳನ್ನು ಚರ್ಚಿಸುವುದಕ್ಕಾಗಿಯೇ ಇದ್ದು, ಇಂಗ್ಲೆಂಡೂ ಫ್ರಾನ್ಸು ಪ್ರಯತ್ನಿಸಿ, ಯುದ್ಧವಾಗದಂತೆ ತಂಟೆ ಹೂಡುವಂತೆ ಎಷ್ಟು ತೋರಿಸಿಕೊಂಡು, ಯಥಾರ್ಥವಾದ ಉಪಾಯಗಳನ್ನು ಹುಡುಕಿದರೂ, ಇಟಲಿಯ ಮಹತ್ವಾಕಾಂಕ್ಷೆಯ ಅಬ್ಬರದ ಮಾತುಗಳನ್ನು ನೆನೆದರೆ, ಇದೆಲ್ಲವೂ ನಿಷ್ಪ್ರಯೋಜನವಾಗುವ ಚಿಹ್ನಗಳೇ ಕಾಣುತ್ತಿದೆಯಾಗಿ, ವಿದೇಶೀಯ ವಾರ್ತೆಗಳ ಸಂಗ್ರಹದಿಂದ ಸೂಚಿಸಿದೆವು 'ಚರ್ಚೆಗೆ ಯೋಗ್ಯವಾದ ವಿಷಯಗಳು ದೊರೆಯದೆ, ಈ ಮುಪ್ಪುಂದಿಯ ಮಾತಿನ ಕೂಟವು ಮುಕ್ತಾಯ ಹೊಂದಿದೆ'' ಎಂದೀಗ ಪ್ರಕಟವಾಗಿದೆ

ಇದೇನೂ ಅನಿರೀಕ್ಷಿತವಾದುದಲ್ಲ, ಮಾತ್ರವಲ್ಲ, ಯಾರೂ ಇಂತಹ ಪರಿಣಾಮವುಂಟಾದುದಕ್ಕಾಗಿ ದುಃಖಗೊಳ್ಳುವ ಹಾಗೂ ಇಲ್ಲ ಇಟಲಿಯ ಸಂಪದಭಿವೃದ್ಧಿಗೆ ಸಾಧಕವಾದ ರೀತಿಯಲ್ಲಿ ಅದು ಅಬಿಸೀನಿಯದಲ್ಲಿ ರಿಯಾಯತಿಯಿಂದ ಅಧಿಕಾರ ಪಡೆಯಬಹುದೆಂದೂ, ಆದರೆ, ರಾಜಕೀಯ ರಂಗದಲ್ಲಿ ಅಧಿಕಾರ ನಡೆಸಬಾರದಾಗಿಯೂ, ಇಂಗ್ಲೆಂಡು ಫ್ರಾನ್ಸುಗಳು ಸೂಚಿಸಿದುವು ಈ ಸೂಚನೆಗೆ ಮುನ್ನುಡಿಯನ್ನು ಫ್ರಾನ್ಸು ಬರೆಯಿತಾಗಿಯೂ ಒಳಗುಟ್ಟಿದೆ ಎನ್ನುತ್ತಾರೆ ಅಬಿಸೀನಿಯ ರಾಜ್ಯದಲ್ಲಿ ಇಟಲಿಯ ಮಹಾ ಪ್ರವೀಣರ ಮೂಲಕ ಸರಕಾರವು ಉಪದೇಶವನ್ನು ಪಡೆಯುವಂತಾಗಬೇಕೆಂದೂ ಇವೇ ರಾಷ್ಟ್ರಗಳು ಅಬಿಸೀನಿಯಕ್ಕೆ ಸೂಚಿಸಿದುವು ಈ ಸೂಚನೆಗಳನ್ನು ಇಟಲಿಯು ಅಂಗೀಕರಿಸಿದ್ದರೆ, ಮುಖಂಡರ ಮಾತನ್ನು ಅಬಿಸೀನಿಯವು ಉಲ್ಲಂಘಿಸದೆ ನಡೆದುಕೊಳ್ಳಲಿಕ್ಕೆ ಬೇಕಾಗುತಿದ್ದಿತಾದ ಕಾರಣ, ಅಬಿಸೀನಿಯದ ಸ್ವಾತಂತ್ರ್ಯವು ಅಲ್ಲೇ ನಾಮಾವಶೇಷವಾಗುತಿದ್ದಿತು. ರಾಜಕೀಯ ವಿಚಾರಗಳಿಗೆ ಕೈಯಿಕ್ಕದೆ ಇಟಲಿಯು ಅಬಿಸೀನಿಯವನ್ನು ಸುಧಾರಣೆಗೆ ತರುವ ಪ್ರಯತ್ನಮಾಡಿ, ಆ ರಾಜ್ಯದಿಂದ ತನಗೇ ದೊರೆಯಬಹುದಾದ ಲಾಭವನ್ನು ಪ್ರಯೋಜನವನ್ನು ಮಾಡಿಕೊಳ್ಳುತಿದ್ದಿತು? ಇಟಲಿಯು ತಾನು ಈಗ ನ್ಯಾಯವಾಗಿ ಅಪೇಕ್ಷಿಸಬಹುದಾಗಿರುವುದಕ್ಕಿಂತ ಹೆಚ್ಚಿನ ರಿಯಾಯತಿಗಳು ಇಟಲಿಗೆ ದೊರೆಯುತಿದ್ದುವು. ಆದರೆ, ಮುಸೋಲೀನಿಯು ಮಾತ್ರ ಇದೊಂದಕ್ಕೂ ಕಿವಿಗೊಡಲಿಲ್ಲ. ಜಯವಾಗಬೇಕು, ರಾಜ್ಯವನ್ನು ಗೆದ್ದು ಸ್ವಾಧೀನಪಡಿಸಿಕೊಳ್ಳಬೇಕು, ಇಟಲಿ ಸಾಮ್ರಾಜ್ಯವು ವಿಸ್ತರಿಸಬೇಕು ಎಂಬಿವೇ ಆತನ ಧ್ಯೇಯ, ನಿಶ್ಚಿತ, ಖಂಡಿತ ಉತ್ತರ!

ರಾಜ್ಯದಲ್ಲೆಲ್ಲ ಸಂಚರಿಸುತ್ತ ತನ್ನ ಜನರಿಗೆ 'ಸಾಮ್ರಾಜ್ಯ ಸ್ಥಾಪನೆಗೆ ನೆರವಾಗಿರಿ' ಸಿದ್ಧರಾಗಿ ಸನ್ನದ್ಧರಾಗಿರಿ! ಗೆದ್ದು ಬನ್ನಿರಿ!' ಎಂದೇ ಆತನು ಭಾಷಣ ಕೊಡುತ್ತಿರುವನು ಇಟಲಿಯು ಇಂಗ್ಲೆಂಡಿನ ಮೇಲೆ ನಾನಾ ದೂಷಣೆಗಳನ್ನೂ ಆರೋಪಗಳನ್ನೂ ಪ್ರಕಟಿಸಿರುವುದೂ ಸುವಿಚಾರದ ಫಲವಾಗಿಲ್ಲ ಫ್ರಾನ್ಸು ಇಂಗ್ಲೆಂಡುಗಳೊಳಗೆ ಈಗ ಇರುವ ಸ್ನೇಹವು ಕುಂದಿ, ಅವೆರಡೂ ಪ್ರತ್ಯೇಕವಾಗುವಂತೆ ಮಾಡಬೇಕೆಂದೂ ಆವನಲ್ಲಿ ಇಚ್ಛೆ ಇರುವುದೇ ಎಂಬ ಸಂದೇಹವೂ ಈಗ ಉಂಟಾಗಿದೆ

ಇಟಲಿಗೆ ಆರ್ಥಿಕ ಅಡಚಣೆಗಳ ಒತ್ತಾಯವಿದೆ, ರಾಜ್ಯವಿಸ್ತಾರದ ಲಾಲಸೆಯೂ ಇರಬಹುದು, ಇದೆ ಎನ್ನೋಣ. ಅದಕ್ಕಾಗಿ ಈ ಅಭಿಯೋಗದ ನಿಶ್ಚಿತ ಇದರ ಕೊನೆಯು ಹೇಗಾಗವುದೋ ತಿಳಿದಿಲ್ಲ, ಆದರೆ, ಮಾತೂ ಕೈಯೂ ಮುಂದರಿದ ಬಳಿಕ, ಮಾತು ಸತ್ಯವೆಂದೂ, ಕೈಯು ಬಲಿಷ್ಠವೆಂದು ತೋರಿಸಲೇ ಬೇಕಾಗಿ ಬಂದಿದೆ

ಇನ್ನು ಜನಾಂಗ ಸಂಘದಲ್ಲಿ ಈ ಪ್ರಶ್ನೆಯು ಸೆಪ್ಟೆಂಬರು ತಾ 4ರಲ್ಲಿ ಚರ್ಚೆಗೆ ಬರುವುದಾಗಿದ್ದರೂ, ಇಟಲಿಯು ಈ ದಿನವೇ 'ಲೀಗ'ನ್ನು ತ್ಯಜಿಸಿ, ಒಕ್ಟೋಬರದಲ್ಲಿ ಖಂಡಿತವಾಗಿಯೂ ಅಬಿಸೀನಿಯದೊಳಗೆ ನುಗ್ಗುವುದೆಂದೇ ಹೇಳಲು ಯಾವ ಆತಂಕವೂ ಈಗ ತೋರುವುದಿಲ್ಲ

---

### ಮಾನಪತ್ರವ್ಯಾರಿಗೆ?

ಮದ್ರಾಸು ಕಾರ್ಪೊರೇಶನಿನ ಕಳೆದ ಮಂಗಳವಾರದ ಸಭೆಯಲ್ಲಿ ರಾಷ್ಟ್ರ ಸಭಾಧ್ಯಕ್ಷ ಶ್ರೀ ಬಾಬು ರಾಜೇಂದ್ರ ಪ್ರಸಾದರಿಗೆ ಮಾನಪತ್ರವನ್ನು ಒಪ್ಪಿಸುವುದು ನಿರ್ಧರಿಸಲು ತೀರ್ಮಾನವಾಯಿತು, ಇಬ್ಬರು 'ಯುರೋಪಿ'ಯ ಸದಸ್ಯರೂ ಜೀಡವೆನ್ನುವವರೊಳಗೆ ಇದ್ದರು, ಜಸ್ಟಿಸ್ ಪಕ್ಷದ ಸದಸ್ಯರೆಲ್ಲರೂ ರಾಷ್ಟ್ರ ಸಭೆಗೆ ವಿರುದ್ಧವಾಗಿಯೆ ನಿಂತರು ಮೊದಲನೆಯ ವಿಷಯ ವಿಚಿತ್ರ, ಎರಡನೆಯದು ಸ್ವಾಭಾವಿಕ ಎರಡೂ ವಿಷಯಗಳು ಶಿಷ್ಟಾಚಾರಕ್ಕೆ ವಿರುದ್ಧವೆಂದು ಪತ್ರಿಕೆಗಳೆನ್ನುತ್ತಿವೆ ಜನಾಂಗದ ಸೇವೆಗೆ ಅಖಂಡವಾಗಿ ನಿಂತಿರುವ ಕಾಂಗ್ರೆಸ್ ಸಂಸ್ಥೆಯ ಮೇಲೆ ಎಂತಹ ಆಕ್ಷೇಪಗಳಿದ್ದರೂ ಈ ಸೇವೆಯನ್ನು ದೂರುವವರಿಲ್ಲ, ಬಿಹಾರದ ಭೂಕಂಪ ಕಾಲದಲ್ಲಿ ಸರಕಾರಕ್ಕೂ ಸಹಾಯ ಮಾಡಿ, ಅತಿ ಸಂಕಟ ತಾಳಿ, ದುಃಖೋಪಶಮನಕ್ಕೆ ದುಡಿದ ಪ್ರಸಾದರನ್ನು ಈ ಒಂದೇ ಸೇವೆಯನ್ನೆಣಿಸಿದರೆ ಅವರನ್ನು ದೂರುವವರಿಲ್ಲ ಎಲ್ಲೆಲ್ಲಿಂದ ಬಂದವರಿಗೆಲ್ಲ ಮಾನಪತ್ರ ಒಪ್ಪಿಸಲು ಸಿದ್ಧವಾಗಿದ್ದ ಈ ಮುನಿಸಿಪಾಲಿಟಿಗೆ ರಾಷ್ಟ್ರ ಸಭಾಧ್ಯಕ್ಷ ದುಃಖಿತಜನ ಸೇವಾಧುರೀಣರಾದ ಸ್ವದೇಶೀಯರನ್ನು ಗೌರವಿಸಲು ಸಾಕಷ್ಟು ಉತ್ಸಾಹವಿಲ್ಲದಿದ್ದುದು ಒಂದು ಬಗೆಯಾಗಿ ತೋರುವುದಿಲ್ಲವೆ? ಜಸ್ಟಿಸ್ ಪಕ್ಷದವರು ಕ್ಷುದ್ರ ಹೃದಯವುಳ್ಳವರೆಂದು ದೂರುವುದಕ್ಕೆ ಒಂದು ಕಾರಣ ದೊರೆಯಿತಾದರೂ, ಎಸೆಂಬ್ಲಿ ಚುನಾವಣೆಯಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸ ಪಕ್ಷವು ಗೆದ್ದು ಬಂದು, ತಮಗೆ ಅಪಜಯವಾದುದನ್ನು ಇನ್ನೂ ಮರೆತಿಲ್ಲವೆಂದೂ ಅದರ ಪ್ರತೀಕಾರವೇ ಈ ರೀತಿ ಪ್ರಕಟವಾಯಿತೆಂದೂ ಸಕಾರಣವಾಗಿ ಅವರ ಅಂತರಂಗದಲ್ಲಿದೆ ಎನ್ನುವುದಕ್ಕೆ ಆಶಂಕವಿಲ್ಲದಂತೆ, ಮುಂದಿನ ಚುನಾವಣೆಯಲ್ಲೂ ಈ ಪಕ್ಷಗಳೊಳಗೆ ಕಾದಾಟವು ಸ್ಥಿರವಾಗುವ ಹಾಗೆ ಈ ನಿರ್ಣಯದ ಪರಿಣಾಮವುಂಟಾಗದೆ?

### ಪತ್ರಿಕಾಕರ್ತರ ಸಮ್ಮೇಲನವು

ಶ್ರೀ. ಚಿಂತಾಮಣಿಯವರ ಅಧ್ಯಕ್ಷತೆಯಲ್ಲಿ ಕಲ್ಕತ್ತದಲ್ಲಿ ಸೇರಿತು. ಪತ್ರಿಕೆಗಳ ವಿಷಯವಾಗಿ ಸರಕಾರದ ಕಾನೂನು, ಸರಕಾರ ಪಕ್ಷವಾಗಿಯೇ ಇದೆ; ಕ್ರಾಂತಿಕಾರರು ಯಾಕೆ ಹಾಗೆ ಬಾಧೆಕೊಡುತ್ತಿರಬೇಕೆಂಬುದರ ಕಾರಣಗಳ ನಿರ್ಮೂಲನಕ್ಕೆ ಪ್ರಯತ್ನ ಮಾಡದೆ, ದಮನ ತಂತ್ರವೊಂದನ್ನೆ ಸರಕಾರವು ಕೈಗೊಂಡಿದೆ, ಸುಧಾರಣೆಯಿಂದು ಬ್ರಿಟಿಷರ ಅಧಿಕಾರವೇ ಶಾಶ್ವತವಾಗಿರುವ ಹಾಗೆ ಇಂಡಿಯಾ ಆಕ್ಟು ಮಂಜೂರಾಗಿದೆ, ಕ್ರಾಂತಿಕಾರರನ್ನು ಅಣಗಿಸುವುದಕ್ಕೆ ಪ್ರಜೆಗಳಿಗೂ ಸರಕಾರದಷ್ಟೇ ಆತುರವಿದೆಯಾದರೂ, ಪ್ರಜೆಗಳ ಅಭಿಪ್ರಾಯಕ್ಕೆ ಬೆಲೆಬಾರದಂತೆ, ಅಥವಾ ಅಭಿಪ್ರಾಯಗಳೇ ಹೊರಡದಂತೆ ಸರಕಾರವು ಬಾಯಿಗೆ ಬೀಗ ಹಾಕುವ ಕಾನೂನುಗಳನ್ನು ಮಾಡುತ್ತಿದೆ, ಪತ್ರಿಕೆಗಳ ಮೇಲೆ ವಿಮರ್ಶಕರು ಕಠಿನವಾದ ವಕ್ರದೃಷ್ಟಿಯಿಂದ ನೋಡುತ್ತಿದ್ದಾರೆ, ಇಂಡಿಯದ ವಸ್ತುಸ್ಥಿತಿಯನ್ನೆ ಸುಳ್ಳಾಗಿಯೋ ವಿಪರೀತವಾಗಿಯೋ ಚಿತ್ರಿಸುವ ಪ್ರಚಾರ ಕಾರ್ಯವು ಇಂಗ್ಲೆಂಡಿನಲ್ಲಿ ನಡೆಯುತ್ತಿದೆ, ಇದನ್ನು ಇದಿರಾಡಬೇಕು ಎಂಬಿವೇ ವಿಚಾರಗಳು ಅಧ್ಯಕ್ಷ ಭಾಷಣದಲ್ಲಿದ್ದುವು

### ಪೋಲೀಸರ ನಡೆವಳಿತಕ್ಕಾಗಿ

ಕಲ್ಕತ್ತದ ಪೋಲೀಸ್ ಕಮಿಶನರರು ಪ್ರಚಾರಗೊಳಿಸಿರುವ ಸರ್ಕ್ಯುಲಾರು ತುಂಬ ವಿಚಾರಣೀಯವಾಗಿದೆ ಈ ಸರ್ಕ್ಯುಲಾರನ್ನು ಪೋಲೀಸರೂ ಮಾತ್ರವಲ್ಲದೆ ಸರ್ವರೂ ಓದಿ ಮನನಮಾಡಿಕೊಳ್ಳುವುದರಿಂದ ವಿಶೇಷ ಪ್ರಯೋಜನವುಂಟಾಗದಿರದು ಪೋಲೀಸರು ಸಮಾಧಾನ ಪಾಲಕರು, ಪ್ರಜೆಗಳು ಸಮಾಧಾನಕ್ಕಾಗಿ ಆತುರರು ಇವರಿಬ್ಬರೊಳಗೆ ಸಹಕಾರ ಸ್ನೇಹಾಚಾರವೇ ಇರಬೇಕು. ಹೊರತು ಇಲಿ ಬೆಕ್ಕುಗಳ ನ್ಯಾಯವಿರಬಾರದು! ಒಬ್ಬರು ಮತ್ತೊಬ್ಬರನ್ನು ಸಂಶಯದಿಂದಲೂ ಅವಿಶ್ವಾಸದಿಂದಲೂ ಕಾಣುವುದರಿಂದ ಇಬ್ಬರಿಗೂ ಪ್ರಯೋಜನವೇನೂ ಇಲ್ಲ ಸಾಮಾನ್ಯವಾಗಿ ಪೋಲೀಸರನ್ನು ಕಂಡ ಕೂಡಲೆ ಜನಗಳು ಏನೋ ತಂಟೆಗೆ ಹಚ್ಚುವರೆಂದು ಬೆದರಿಯೇ ಆ ಕಡೆ ತೊಲಗುವರು ತಾನು ಒಬ್ಬ ಅಧಿಕಾರಿ, ವರಿಷ್ಠನಾಗಿರುವನೆಂದೂ ಭಾವಿಸಿಯೂ ತೋರಿಸಿಕೊಂಡೂ ಜನರು ದೂರಗೊಳುವ ಹಾಗೆ ಪೋಲೀಸನೂ ವರ್ತಿಸುತ್ತಾನೆ ಇದರಿಂದ ಇತ್ತಂಡಗಳೊಳಗೆ ದೂರವೇ ಹೆಚ್ಚುತ್ತಿದೆ ಹೊರತು, ಪರಸ್ಪರ ಸಹಾಯವಿಲ್ಲ. ಹೀಗಾದರೆ, ಪೋಲೀಸರಿಂದ ಜನತೆಗೆ ದೊರೆವ ಪ್ರಯೋಜನವು ಕಡಿಮೆಯಾಗುತ್ತ ಬರುವುದೂ, ಪೋಲೀಸರಿಗೆ ಜನತೆಯಿಂದ ದೊರೆವ ಪ್ರೋತ್ಸಾಹವು ಕುಂದುತ್ತ ಬರುವುದೂ ಖಂಡಿತ ಇತ್ತಂಡಗಳಿಗೂ ಜೀವನವು ಸುಖದಾಯಕವಾಗದು, ಸಮಾಧಾನ ಪ್ರೇರಕವಾಗದು ಈ ಕಾರಣದಿಂದಲೇ, ಈ ಸರ್ಕ್ಯುಲಾರಿನಲ್ಲಿ, ಪೋಲೀಸರಲ್ಲಿ ಸಾಮಾನ್ಯವಾಗಿ ತೋರುವ ಕುಂದುಗಳನ್ನು ಒಪ್ಪಿಕೊಂಡು, ಜನತೆಯ ವಿಶ್ವಾಸ, ಸಹಕಾರಗಳನ್ನು ಅವರು ನ್ಯಾಯಪಾಲನೆಯಲ್ಲಿ ಹೇಗೆ ಪಡೆಯಬೇಕೆಂಬುದಕ್ಕೆ ಸೂಚನೆಗಳನ್ನು ವಿವರಿಸಲಾಗಿದೆ. ಪೋಲೀಸರು ಜನಸೇವೆಗೆ ಇರುವರೆಂಬುದರಿಂದಲೇ ಅವರೂ 'ಪಬ್ಲಿಕ್ ಸರ್ವೆಂಟ್ಸ್' ಎಂಬ ಜನಸೇವಾಧಿಕಾರಿಗಳ ಪಂಗಡದಲ್ಲಿರುವರಷ್ಟೆ, ಇಷ್ಟು ವಿಚಾರವು ಅವರಲ್ಲಿ ಮೂಡಿ ಬೆಳಗಿದರೆ, ಅವರ ಈ ಸೇವಾಕಾರ್ಯದಲ್ಲಿ ಸಹಕರಿಸಲು ಜನತೆಯು ಏತಕ್ಕೆ ಹಿಂಜರಿಯಬೇಕು? ಇಬ್ಬರೂ ಪರಸ್ಪರ ಸಂದೇಹದಿಂದ ಕಾಣುತ್ತಿರುವ ಬದಲಾಗಿ, ಇಬ್ಬರ ಧ್ಯೇಯವು ಒಂದೇ ಆಗಿ, ದೇಶದಲ್ಲಿ ಯಾವ ಬಗೆಯ ಅಸಮಾಧಾನವೂ ಇರಲಾರದು ಎಂದೇ ಈ ಸರ್ಕ್ಯುಲಾರು ಸೂಚನೆಗಳ ಉದ್ದೇಶವೂ ಸಿದ್ಧಾಂತವೂ ಆಗಿದೆ.

### ದೀಪಾವಳಿಯ ಪಟಾಕಿ

ಹಿಂದುಗಳಿರುವಲ್ಲಿ ಇನ್ನು ದೀಪಾವಳಿ ಕಾಲವು ಸಮೀಪಿಸುತ್ತಿದೆಯಾದುದರಿಂದ, ಎಲ್ಲೆಲ್ಲಿಯೂ ಪಟಾಕಿ ಸುಟ್ಟೇ ಬಡತನದಲ್ಲಿ ಇನ್ನಷ್ಟು ಬಡವರಾಗಿ ಹಣದ ಬದಲಾಗಿ ಹೊಗೆಯನ್ನೆಬ್ಬಿಸಿ ಬೂದಿಯನ್ನು ಒಟ್ಟಿಕ್ಕಿ ಯಾವ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗಿದೆ ಎನ್ನುವರೋ ಎಂದು ವಿಚಾರಿಗಳಿಗೆ ಬಹಳ ಬೆದರಿಕೆಗೆ ಕಾರಣವುಂಟಾಗಿದೆ ಎಷ್ಟೋ ಲಕ್ಷ ರೂಪಾಯಿ ಬೆಲೆ ಬಾಳುವ ವಿದೇಶೀಯರ ಕಾರ್ಖಾನೆಗಳಿಂದ ಇತ್ತ ಬರುತ್ತಿರುವ ಈ ಪಟಾಕಿಗಳನ್ನು ವರ್ಷವರ್ಷವೂ ಸುಡುವುದು ಬಡತನದಲ್ಲೂ ನಾವು ಅವಿವೇಕಿಗಳಾದ ದುಂದುಗಾರರೆಂದೇ ಅದರ ಧ್ವನಿಮೂಲಕ ಪ್ರಕಟಗೊಳಿಸುವಂತಾಗದೆ? ಮುಂಬಾಯಿಯಲ್ಲಿ ಇಷ್ಟರಲ್ಲೆ ಪಟಾಕಿಯ ದಾಸ್ತಾನಿಗೆ ಪ್ರಾರಂಭವಾಗಿದ್ದು, ಹಡಗು ಚಲಾವಣೆಗೆ ಪ್ರಾರಂಭವಾಗುತ್ತಲೆ ಇಲ್ಲಿಯೂ ದಾಸ್ತಾನು ಆಗಲು ತೊಡಗುವ ಮೊದಲೇ ಇದೊಂದು ವಾರ್ಷಿಕ ಶಾಪದಿಂದ ನಾವು ವಿಮೋಚನೆ ಹೊಂದಲು ಎಲ್ಲೆಲ್ಲಿಯೂ ಸಾರಲೇ ಬೇಕಾಗಿದೆ ಪಟಾಕಿಗಳನ್ನು ಆಮದು ಮಾಡದಂತೆ ಸರಕಾರವು ಒಂದು ನಿರ್ಬಂಧವನ್ನು ಮಾಡಿದರಾಗದೆ? ಚಿನ್ನವು ಪರದೇಶಗಳಿಗೆ ಹೋಗದಂತೆ ನಿರ್ಬಂಧಿಸದಿದ್ದರೆ ಎಷ್ಟೋ, ಪಟಾಕಿಗಳನ್ನು ಇಲ್ಲಿಗೆ ತರಿಸದಂತೆ ನಿರ್ಬಂಧಿಸದಿದ್ದರೆ ಅದಕ್ಕಿಂತ ಹೆಚ್ಚಿನ ಹಾನಿಯುಂಟು

### ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ

ಯಾವುದೆಂದು ಇದು ವರೆಗೆ ಪ್ರಕಟವಾಗಿಲ್ಲ ಇವರಿಗೆ ಒಡ್ಡವಿರುದ್ಧ ಪಕ್ಷವೆಂಬಂತೆ ಇದಿರಾಗಿ ಹೋರಾಡುವ (ಭಾಷಣಗಳ ಮೂಲಕ) ಜಸ್ಟಿಸ್ ಪಕ್ಷವು ಬಹಳವಾಗಿ ಪ್ರಕಟಿಸುವ ವಿಚಾರಗಳಲ್ಲಿ ಸುಲಭವಾಗಿ ಅರ್ಥವಾಗಲಾರದ ವಾಗ್ದಾನಗಳೂ ಧ್ಯೇಯಗಳೂ ಧೋರಣೆಗಳೂ ಬಹಳವಿವೆ ಕಾಂಗ್ರೆಸ್ ಇಡೀ ರಾಷ್ಟ್ರಕ್ಕೆ ಅನ್ವಯಿಸುವುದು, ಇಡೀ ಜನಾಂಗವೇ ಕಾಂಗ್ರೆಸಿನ ಸೇವೆಗೆ ಹಕ್ಕುಳ್ಳುದಾಗಿದೆ ಕಾಂಗ್ರೆಸ್ ಪಕ್ಷವು ಅಧಿಕಾರಾರೂಢವಾಗಲು ಒಪ್ಪುವುದೆ? ಎಂಬ ಒಂದು ಪ್ರಶ್ನೆಯನ್ನು ಇದಿರಾಳಿಗಳು ಕೇಳುವರು, ಹೌದೆ ಆದರೆ, ಅಧಿಕಾರ ಲಾಲಸೆಯಿಂದ ಹೀಗೆ ಒದ್ದಾಡುತ್ತಾರೆಂದು ದೂರುವರು ಸರಕಾರ ಪಕ್ಷಕ್ಕೆ ಯೋಗ್ಯ ಇದಿರಾಳಿಗಳಾಗುತ್ತೇವೆಂದು ಕಾಂಗ್ರೆಸಿನವರೆಂದರೆ, 'ನೀವು ಸರಕಾರವನ್ನು ಮುರಿದಿಕ್ಕಲು ಯತ್ನಿಸುವವರು, ಎನ್ನುತ್ತಾರೆ ಮಂತ್ರಿಗಳಾಗಿ ತಮತಮಗೆ ಬೇಕಾದವರಿಗೆಲ್ಲ ಹುದ್ದೆ ಕೊಡುವುದಾದರೆ ಮಾತ್ರ, ಅಧಿಕಾರ ಲಾಲಸೆಯ ವಿಚಾರ ಬಿಡಬೇಕು. ಹಾಗೆಯೆ ಈಗಲೆ ಕಾಂಗ್ರೆಸು ತನ್ನ ಇಂಗಿತವನ್ನು ಹೊರಗೆಡವಿದರೆ, ಅದರಲ್ಲಿ ಹುಳುಕನ್ನು ಹಿಡಿದು ಕಚ್ಚಾಟದ ಆಡಂಬರಕ್ಕಾರಂಭಿಸುವ ಇದಿರಾಳಿಗಳೂ ಇರುವರಲ್ಲ! ಈಗ ತಾನೇ ಅಧಿಕಾರದಲ್ಲಿರುವ ಪಕ್ಷವೇ ತಾನೇ ಏತಕ್ಕೆ ಮುಂದಣ ಕಾರ್ಯಕ್ರಮವನ್ನು ಎಲ್ಲರಿಗೂ ತಿಳಿಯುವಂತೆ ಪ್ರಕಟಿಸಬಾರದು? 1936ನೆ ವರೆಗೆ ಕಾಯಬೇಕೇ?

---

## ನಮ್ಮ ನಗರಸಭೆಯ ಅವಗಾಹನೆಗಾಗಿ—

"ಮಂಗಳೂರು ಮುನಿಸಿಪಾಲಿಟಿಗೆ ಯೋಗ್ಯರಾದ ಹೆಲ್ತ್ ಆಫೀಸರರಿದ್ದೂ ಕೂಡಾ ಕಾರುಹಿತ್ತಿಲಿನ ಹೊಸ ದಾರಿಯ ಪಕ್ಕಗಳೂ, ಕಾರುಹಿತ್ತಲೂ ಸಾರ್ವಜನಿಕ ಶೌಚಾಲಯವಾಗಿ ಪರಿಣಮಿಸಿರುವುದು ಅತ್ಯಂತ ಆಶ್ಚರ್ಯಕರ. ಈ ಹೊಸ ಮಾರ್ಗರಚನೆಯಲ್ಲಿ ನಮ್ಮ ನಗರಸಭೆಯವರು ಹಣವ್ಯಯಮಾಡಿದ್ದೇ ಬಂತು, ಆದರೆ ಆ ಮಾರ್ಗವು ಜನತೆಯ ಪೂರ್ಣ ಉಪಯೋಗಕ್ಕೆ ಬಿದ್ದಂತೆ ಕಾಣುವುದಿಲ್ಲ. ದಾರಿಹೋಕರೂ ನೆರೆಕೆರೆಯವರೂ ಈ ಪರಿಸರವನ್ನು ಸಾರ್ವಜನಿಕ ಶೌಚಾಲಯಕ್ಕಿಂತ ವಿಶೇಷವಲ್ಲವೆಂದೇ ಭಾವಿಸಿರುವಂತೆ ಕಂಡುಬರುತ್ತದೆ. 'Parking of Vehicles is prohibited' ಎಂದು ಹಾಕಿಬಿಟ್ಟೊಡನೆ ತಮ್ಮ ಕರ್ತವ್ಯವು ಮುಗಿಯಿತೆಂದು ಕೌನ್ಸಿಲ್ ಆಗಲೀ ಸಂಬಂಧಪಟ್ಟ ಕೌನ್ಸಿಲರರಾಗಲೀ ತಿಳಿಯುವುದು ಯೋಗ್ಯವಾಗಿಲ್ಲ. ಈ ವಿಷಯಕ್ಕೆ ನಗರಸಭೆಯವರು ಕೂಡಲೇ ಲಕ್ಷ್ಯ ಕೊಡುವರೆಂದು ನಂಬುವೆನು"— ಎಂದು ಬರೆಯುತ್ತಾರೆ.

---

## ವಿಲ್ಲಿಪೋಸ್ಟ್ ಮತ್ತು ವಿಲ್‌ರೋಜರ್ಸ್‌ರ ಮರಣ

ಅಮೇರಿಕಾ ದೇಶದಲ್ಲಿ ಪ್ರಸಿದ್ಧ ವೈಮಾನಿಕರಾದ ವಿಲ್ಲಿಪೋಸ್ಟ್ ಮತ್ತು ವಿಲ್‌ರೋಜರ್ಸ್ ಎಂಬ ವೈಮಾನಿಕರಿಬ್ಬರು ಅಲಾಸ್ಕಾದಲ್ಲಿ ವಿಮಾನಪತನದಿಂದ ಮೃತರಾದರು. ಇವರಿಬ್ಬರ ಮರಣದಿಂದಾಗಿ ಅಮೇರಿಕಾವು ದುಃಖಸಾಗರಕ್ಕೀಡಾಗಿದೆ.

---

## ಸಿಲೋನಿನಿಂದ ತೆಂಗಿನಕಾಯಿಗಳ ಆಮದು.

### ಮಾರ್ಕೆಟ್ ಇಳಿಯಿತು'

### ಸರಕಾರಕ್ಕೆ ಜನರ ಮನವಿಗಳು

ಸಿಲೋನಿನಿಂದ ಮದ್ರಾಸ್ ಬಂದರಕ್ಕೆ ಬಂದ ನವೀನ ಎಂಬ ಮಂಜಿಯಲ್ಲಿ ೬೦ ೦೦೦ ತೆಂಗಿನಕಾಯಿಗಳು ತರಲ್ಪಟ್ಟಿವೆ. ಅಂತಹ ಮಂಜಿಗಳು ಇನ್ನೂ ಕೆಲವು ಅಲ್ಲಿಗೆ ಬೇಗನೇ ಬರಲಿವೆ. ಇಷ್ಟರ ತನಕ ಪಶ್ಚಿಮ ಕರಾವಳಿಯಿಂದ ಮದ್ರಾಸಿಗೆ ತೆಂಗಿನಕಾಯಿಗಳು ಆಮದಾಗುತ್ತಿದ್ದುವು. ಆದರೆ ಈಗ ಸಿಲೋನಿನಿಂದ ಇವುಗಳು ಬರುವುದರಿಂದ ಮಾರ್ಕೆಟಿನಲ್ಲಿ ಧಾರಣೆ ಇಳಿದಿದೆ. ಅನೇಕರು ಒಂದಾಗಿ ಸರಕಾರಕ್ಕೆ ಮನವಿ ಯನ್ನೊಪ್ಪಿಸಿದ್ದರು. ಅದರ ಪರಿಣಾಮವಾಗಿ ಸರಕಾರವು ೧೦೦೦ ತೆಂಗಿನಕಾಯಿಗಳ ಮೇಲೆ ರೂ ೧ರಂತೆ ಸುಂಕ ಹೇರಿಸಿತು. ಈ ಸುಂಕವನ್ನು ಕೊಟ್ಟಮೇಲೂ ಸಿಲೋನು ತೆಂಗಿನಕಾಯಿಗಳನ್ನು ಮಾರುವವರು ಪರಿಣಾಮಕಾರಿಯಾಗಿಯೇ ಸ್ಪರ್ಧಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಕೊಚ್ಚಿಯಲ್ಲಿ ಸಾವಿರಕ್ಕೆ ೩೨ ರೂಪಾಯಿಗಳಂತೆ ತೆಂಗಿನಕಾಯಿಗಳು ವಿಕ್ರಯಿಸಲ್ಪಡುತ್ತವೆ. ಅವುಗಳನ್ನು ಮದ್ರಾಸಿಗೆ ತರುವುದರಲ್ಲಿ ೧೪ ರೂಪಾಯಿಗಳ ವೆಚ್ಚವಾದರೂ ಅವುಗಳನ್ನು ಸಾವಿರಕ್ಕೆ ೩೦ ರೂಪಾಯಿಗಳಂತೆ ಮದ್ರಾಸಿನಲ್ಲಿ ವಿಕ್ರಯಿಸಲನುಕೂಲವಿದೆ. ಆದರೆ ಪಶ್ಚಿಮಕರಾವಳಿಯಿಂದ ಬರುವ ತೆಂಗಿನಕಾಯಿಗಳನ್ನು ಸಾವಿರಕ್ಕೆ ೫೫ ರೂಪಾಯಿಗಳಿಗಿಂತ ಕಡಮೆ ದರದಲ್ಲಿ ವಿಕ್ರಯಿಸಲಸಾಧ್ಯವಾಗಿದೆ. ಸಿಲೋನಿನ ವರ್ತಕರೊಡನೆ ಪಿಬಾರಿಸಿದ್ದಲ್ಲಿ ತಾವು ತಮ್ಮ ತೆಂಗಿನ ಕಾಯಿಗಳನ್ನು ಇನ್ನೂ ಕಡಮೆ ದರಕ್ಕೆ ವಿಕ್ರಯಿಸಬಹುದೆಂದಿರುವರು.

---

## ವಜ್ರದ ಬೆನ್ನು ಹಿಡಿದರು!

### ನಾಲ್ಕು ಕೈಗಳಿಗೆ ಹೋಗಿ ಹಿಂದೆ ಬಂತು.

ಊಟಿ, ಆಗೋಸ್ತು ೧೩

ಮಿಸೆಸ್ ಎಸ್ ಜೆ ಹಾಕಿಂಗ್ಸ್ ಎಂಬವರಲ್ಲಿ ೪೦೦೦ ರೂಪಾಯಿ ಬೆಲೆಬಾಳುವ ಒಂದು ವಜ್ರವಿತ್ತು. ೧೯೩೪ರ ಜುಲಾಯಿ ೨೩ರಲ್ಲಿ ಬೆಂಗಳೂರು, ಮೈಸೂರು ಮಾರ್ಗದಲ್ಲಿ ಇವರು ಈ ವಜ್ರವನ್ನು ಕಳೆದುಕೊಂಡರು. ಆ ವಜ್ರವನ್ನು ತಂದುಕೊಟ್ಟವರಿಗೆ ೫೦೦ ರೂಪಾಯಿ ಬಹುಮಾನ ಕೊಡುವೆನೆಂದು ಆ ಮಹಿಳೆಯು ಪ್ರಕಟಿಸಬೇಕಾಯಿತು. ಇದು ಕಳೆದುಹೋಗಿ ಸಾಧಾರಣ ಒಂದು ವರ್ಷವಾಗುತ್ತಿದ್ದ ಅವಧಿಯಲ್ಲಿ ಬೆಂಗಳೂರಿನಲ್ಲಿ ಅಂತೋನಿಯೆಂಬವನು ಒಂದು ಸ್ಪೆಕಲನ್ನು ಬರೀ ಅಲ್ಪಬೆಲೆಗೆ ಒಬ್ಬನಿಗೆ ವಿಕ್ರಯಿಸಿದನು. ಈ ಸುದ್ದಿಯು ಪೋಲೀಸರಿಗೆ ತಲಪಲು ಅವರು ಅವನನ್ನು ನೆರೆಹಿಡಿದು ವಿಚಾರಿಸಿದರು. ಅವನು ತಪ್ಪನ್ನೊಪ್ಪಿದುದಲ್ಲದೆ ತನಗೆ ಒಮ್ಮೆ ಬೆಳ್ಳಿಯ ಒಂದು ಚೀಲವೂ ೬೫ ಐದು ರೂಪಾಯಿಗಳ ನೋಟೂ ಭಂಗಾರದ ಸಿಂಧು ಉಂಗುರವೂ ಮತ್ತೊಂದು ವಜ್ರವೂ ದೊರಕಿದ್ದುವೆಂದೂ ತಾನು ಬೆಂಗಳೂರಿನ ಒಬ್ಬನಿಗೆ ೧೫೦ ರೂಪಾಯಿಗಳಿಗೆ ಆ ವಜ್ರವನ್ನು ವಿಕ್ರಯಿಸಿದ್ದೆನೆಂದೂ ತಿಳಿಸಿದನು. ಪೋಲೀಸರು ಅವನನ್ನು ಜೈಲಲ್ಲಿ ಹಾಕಿದರು. ಎರಡು ವರ್ಷಗಳ ಕಠಿಣ ಸಜೆಯೂ ವಿಧಿಸಲ್ಪಟ್ಟಿತು. ತನಿಖೆನಡೆಸಿದಾಗ ಬೆಂಗಳೂರಿನ ಒಬ್ಬನ ವಶದಲ್ಲಿ ಬೆಳ್ಳಿಯ ಚೀಲವು ದೊರೆಯಿತು. ಆ ವಜ್ರವು ಮದ್ರಾಸಿನ ಒಬ್ಬ ವ್ಯಾಪಾರಿಗೆ ವಿಕ್ರಯಿಸಲ್ಪಟ್ಟಿದೆಯೆಂದೂ ತಿಳಿದುಬಂತು. ಡಿವಿಜನಲ್ ಇನ್ಸ್‌ಪೆಕ್ಟರರಾದ ದಸ್ತಗಿರಿ ಎಂಬವರು ಮದ್ರಾಸಿಗೆ ಹೋಗಿ ತನಿಖೆಮಾಡಲು, ಆ ವಜ್ರವು ಕಲ್ಕತ್ತದ ಒಬ್ಬ ವ್ಯಕ್ತಿಗೆ ರೂ ೧೬೦೦ಕ್ಕೆ ಮಾರಲ್ಪಟ್ಟಿದೆಯೆಂದೂ ತಿಳಿದುಬಂತು. ದೀರ್ಘ ಶೋಧನೆ ನಡೆದಾದ ಮೇಲೆ ಆ ವಜ್ರವು ಬರಿಸ್ಸಾದ ಒಬ್ಬನಿಂದ ದೊರೆಯಿತು.

---

## ಕ್ರೈಸ್ತ ಪಾದರಿಗಳಿಗೆ ಶಿಕ್ಷೆ.

ಜರ್ಮನಿಯ ಗ್ಲೀಡ್‌ಬೆಕ್ ಕೋರ್ಟಿನಲ್ಲಿ ಒಬ್ಬರು ಕೆಥೊಲಿಕ್ ಪಾದರಿಗಳಿಗೆ ಕಠಿಣ ಶಿಕ್ಷೆಯಾಗಿದೆ. ನಾಜಿ ಎಂದು ಕೆಥೋಲಿಕ್ ಕರಪತ್ರಗಳನ್ನು ಹರಡುವಾಗ ದುರ್ವೇ ಅವರ ತಪ್ಪು. ಕೊಬ್ಲೆನ್ಸ್ ಎಂಬಲ್ಲಿಯ ಪಾದರಿಯು ಜನರಿಗೆ ಉಪದೇಶಿಸಿ ನಾಜಿಗಳ ಕರಪತ್ರಗಳಿಗೆ ತಾಗಿಸಲು ಕಪ್ಪು ಶಾಯಿಯನ್ನೊದಗಿಸಿ ಕೊಟ್ಟದ್ದಕ್ಕಾಗಿ ಕೈದುಮಾಡಿರುವರು.

---

## ಕಲ್ಕತ್ತದಲ್ಲಿ ಸತ್ಯಾಗ್ರಹ

### ಪ್ರಾಣಿಬಲಿ ನಿಷೇಧಾರ್ಥವಾಗಿ ನಿರಶನವ್ರತ.

ಅಲಿಪುರದ ಪೋಲೀಸ್ ಮೆಜಿಸ್ಟ್ರೇಟರು ಒಂದು ನಿಷೇಧಾಜ್ಞೆಯನ್ನು ಪ್ರಕಟಿಸಿ ದಕ್ಷಿಣ ಹಿಂದೂಸ್ಥಾನದಿಂದ ಆಕ್ಷೇಪಿಸಿ ದಕ್ಷಿಣ ಕಲ್ಕತ್ತದಲ್ಲಿನ ಕಾಳಿದೇವಸ್ಥಾನದಲ್ಲಿ ನಡೆಯುವ ಪ್ರಾಣಿವಧೆಯನ್ನು ನಿಲ್ಲಿಸಬೇಕೆಂದು ಸತ್ಯಾಗ್ರಹವನ್ನಾಚರಿಸಲಿದ್ದ ರಾಮಚಂದ್ರ ಶರ್ಮರೆಂಬವರು ಆ ದೇವಸ್ಥಾನದ ವಠಾರಕ್ಕೆ ಪ್ರವೇಶಿಸಬಾರದೆಂದು ಆಜ್ಞಾಪಿಸಿರುವರು. ಶ್ರೀ ಶರ್ಮರು ದಕ್ಷಿಣ ಹಿಂದೂದೇಶದವರು.

---

## ಕ್ವೆಟ್ಟಾದಲ್ಲಿ ಪುನರ್ರಚನೆ

ಕ್ವೆಟ್ಟಾದ ಗ್ರೇಡ್‌ಫೋರ್ಡ್ ರೋಡ್ ಆರ್ಚರ್ ರೋಡ್ ಗಡುದ್‌ರಿಂಗ್ ರೋಡ್ ಮತ್ತು ಜನಾ ಮಸ್ಜೀದ್ ರೋಡುಗಳನ್ನು ಒಡ್ಡನ ವಿಭಾಗದ ಕೆಲಸಗಾರರು ಎತ್ತಿ ಒಯ್ಯುತ್ತಿರುವರು. ಅಲ್ಲಿ ಒಟ್ಟು ೬೦೦ ಜನ ಕೆಲಸಮಾಡುತ್ತಿರುವರು. ಅವರಿಗೆ ಸಹಾಯವನ್ನೊದಗಿಸಲಾಗುತ್ತಿದೆ.

---

## ಇಟೆಲಿಗೆ ನಷ್ಟ

ಇಟೆಲಿಯನ್ ಮಿಲಿಟರಿ ವಿಮಾನವೊಂದರಲ್ಲಿ ನಾಲ್ಕು ಮಂದಿ ಕುಳಿತು ಹಾರಾಡುತ್ತಿದ್ದಾಗ ಹೆಲಿಯೊಪೊಲಿಸ್ ಎಂಬಲ್ಲಿ ಅದು ಬಿದ್ದು ಪ್ರಯಾಣಿಕರು ಮೃತರಾದರು. ಇಟೆಲಿಯ ಮಂತ್ರಿಯವರೂ ಅದರಲ್ಲಿದ್ದು ಮೃತ್ಯುಮುಖರಾದರು.

---

## ವಿಶ್ವಾಸಘಾತಕತನಕ್ಕೆ ಶಿಕ್ಷೆ

ಎಸ್ ಆರ್ ರಾಮ ಅಯ್ಯರ್ ಎಂಬ ಚಿನಿವಾರನ ವಶ ಮದ್ರಾಸಿನ ಚಮನ್‌ಲಾಲ್ ಎಂಬವರು ೨೧೦ ವಜ್ರಗಳನ್ನು ಕೊಟ್ಟು ಅವುಗಳನ್ನು ಪರೀಕ್ಷಿಸಿ ಹಿಂದಿರುಗಿ ಕೊಡಬೇಕೆಂದು ಕೇಳಿಕೊಂಡಿದ್ದರು. ಆದರೆ ರಾಮ ಅಯ್ಯರನು ಅವುಗಳಲ್ಲಿ ೬೫ ವಜ್ರಗಳನ್ನು ಒಬ್ಬ ಮಾರ್ವಾಡಿಯಲ್ಲಿ ಒತ್ತೆಯಿಟ್ಟನು. ಗುಟ್ಟು ರಟ್ಟಾಯಿತು. ರಾಮ ಅಯ್ಯರನ ಮೇಲೆ ಮೊಕದ್ದಮೆ ನಡೆದು ಅವನಿಗೆ ಎರಡು ವರ್ಷಗಳ ಕಠಿಣ ಶಿಕ್ಷೆಯೂ ೧೦೦೦ ರೂಪಾಯಿಗಳ ದಂಡವೂ ವಿಧಿಸಲ್ಪಟ್ಟಿತು. ಯಾವನೇ ಆಗಲಿ ಅವನಿಗೆ ಪ್ರತ್ಯೇಕ ರೀತಿಯ ಶಿಕ್ಷೆಯನ್ನೀಯಬೇಕೆಂದು ನ್ಯಾಯಾಧೀಶರ ಹೇಳಿಕೆ.

---

ಕಲ್ಲಿಕೋಟೆಯ ಶ್ರೀ ಸ್ವಾಮಿ ಸುಂದರದಾಸ್ ಎಂಬ ಸನಿಯಾರವರು ಮುನಿಸಿಪಾಲಿಟಿಗೆ ೫೦೦೦ ರೂಪಾಯಿಗಳನ್ನು ಬಹುಮಾನಿಸಿ, ಅಲ್ಲಿನ ಹೋಟೆಗಳಿಗೆ ಮನೆಗಳನ್ನು ಕಟ್ಟಿಸಿಕೊಡಲು ಸೂಚಿಸಿರುವರು. ಈ ಕೆಲಸಕ್ಕೆ ೩೦ ೦೦೦ ರೂಪಾಯಿಗಳು ಬೇಕಾಗಿವೆಯೆಂದು ತಿಳಿದುಬಂದ ಮೇಲೆ ಮತ್ತೂ ೧೦ ಸಾವಿರ ರೂಪಾಯಿಗಳನ್ನು ತಾನು ಸಂಗ್ರಹಿಸಿಕೊಡುವೆನೆಂದು ಈ ಉದಾರಮನಸ್ಕರು ವಾಗ್ದಾನವಿತ್ತಿರುವರು.

---

ಒನೇ ಪುಟದಿಂದ ಮುಂದರಿಸಿದ್ದು.

ತಮ್ಮ ಜಿಲ್ಲೆಗೆ, ತಮ್ಮ ತಾಲೂಕಿಗೆ, ತಮ್ಮ ನಗರಕ್ಕೆ ಅಥವಾ ಇನ್ನೂ ಚಿಕ್ಕದರಲ್ಲಿ ತಮ್ಮ ಗ್ರಾಮಕ್ಕೆ ಹಿತಕರವಾದ ಕಾರ್ಯಗಳನ್ನು ಮಾಡಿರುವರೆಂದು ಅವರನ್ನು ಮೊದಲಿನ ಚುನಾವಣೆಗಳಲ್ಲಿ ಪದೇ ಪದೇ ಚುನಾಯಿಸಿ ಕಳುಹುತ್ತಿರುವ ನಮ್ಮ ವೋಟರರಿಗೆ ತಿಳಿದಿರುವುದಾದರೂ ಅಥವಾ ನಮ್ಮ ಆ ಪ್ರತಿನಿಧಿಗಳು ನಮಗೆ ಗೊತ್ತುಮಾಡಿಕೊಟ್ಟಿರುವುದಾದರೂ, ಎಷ್ಟುಮಟ್ಟಿಗೆಂದರೆ ಏನೂ ಇಲ್ಲ. ಜಿಲ್ಲಾ ಬೋರ್ಡಿನಲ್ಲಿ ಯಾವುದಕ್ಕೂ ಹಣವು ಇಲ್ಲ. ಹಣವಿದ್ದರೆ ಏನಾದರೂ ಮಾಡಬಹುದಿತ್ತು. ನಿಮಗೆಲ್ಲಾ ಪಡ್ಡೋಪುರಗಳು ಹೂರಿಸಬಹುದಿತ್ತು ಎಂಬ ಈ ಪದವನ್ನು ಈ ಹತ್ತಿಪ್ಪತ್ತು ವರ್ಷಗಳಿಂದಲೂ ಹಾಡುತ್ತಿರುವಂತೆ, ಈಗಲೂ ಅವರು ಹಾಡುತ್ತಲೇ ಹೋಗುವುದಾದರೆ, ಪ್ರತಿ ಚುನಾವಣೆಯಲ್ಲಿಯೂ ತಾನು ಅಂಥವನು, ತಾನು ಇಂಥವನು, ತಾನಿಲ್ಲದೆ ಜಿಲ್ಲಾ ಬೋರ್ಡಿನಲ್ಲಿ ಬೆಳಕೇ ಆಗುವುದಿಲ್ಲವೆಂಬ ಚುನಾವಣೆಯ ಸೊಲ್ಲನ್ನು ಅಂತಹರು ಈಗಲೇ ನಿಲ್ಲಿಸಿಬಿಡುವುದೊಳ್ಳಿತು ಯೆಂದು ನನಗೆ ತೋರುತ್ತದೆ. ಜಿಲ್ಲಾ ಬೋರ್ಡಿನಲ್ಲಿರುವ ಹಣದ ದುರ್ವಿನಿಯೋಗವಾಗದೆ ಸದ್ವಿನಿಯೋಗವಾಗುವಂತೆ, ಇದ್ದ ಹಣದಲ್ಲಿ ನಡೆಯುವ ಕೆಲಸಗಳಲ್ಲಿ ಅನ್ಯಾಯವಾಗದೆ ಪ್ರಜೆಗಳಿಗೆ ಅದರಲ್ಲಿಯೂ ಬಡವರಿಗೆ ಉಪಕಾರವಾಗುವಂತೆ ಅವರು ಪ್ರಯತ್ನಮಾಡಿ ನಿಷ್ಫಲವಾಗಿದ್ದರೆ ಹೋಗಲಿ. ಪ್ರಯತ್ನವಾದರೂ ಅವರು ಮಾಡಿದ್ದಾರೆಂಬುದನ್ನು ಎಲ್ಲಿ ಹೇಗೆ ತೋರಿಸಿಕೊಟ್ಟಿದ್ದಾರೆ, ಅಥವಾ ತೋರಿಸಿಕೊಡಲಿದ್ದಾರೆ? ತಮ್ಮ ಸ್ವಂತ ಗ್ರಾಮದಲ್ಲಿ—ಶಾಲೆಗಳು ಉಂಟೋ ಇಲ್ಲವೋ, ಇದ್ದರೂ ಅವುಗಳು ಸರಿಯಾಗಿ ನಡೆಯುತ್ತಿವೆಯೋ ಎಂಬುದನ್ನು ಕೂಡ ನೋಡದವರೂ ಅಂತವರಲ್ಲಿ ಎಷ್ಟು ಮಂದಿಯಿಲ್ಲ? ಇದೇ ರೀತಿಯಾಗಿ ಜಿಲ್ಲಾ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಗ್ರಾಮ ಪಂಚಾಯತಿ ಚಿಲ್ಲರೆ ವರೆಗೂ ನಡೆಯಬೇಕಾದ ಯಾವ ವಿಷಯಗಳಲ್ಲಿಯೂ ಕಣ್ಣು ಹಾಕದೆ ಬರೇ ಕಲೆಯುವವರೂ ಅವರಲ್ಲಿ ಅನೇಕರೇ ಎನ್ನಬೇಕು.

ಈ ತರದ ಉಮೇದ್ವಾರರನ್ನು ಇನ್ನು ಇನ್ನು ನಮ್ಮ ವೋಟರರು ಬರೇ ಜಾತಿಯ ಸಂಬಂಧದ ಅಥವಾ ಪಕ್ಷದ ಬಲಾಢ್ಯತೆಯ ಘೋಷಣೆಯ ಮೇಲೆ ನಮ್ಮ ಜಿಲ್ಲಾ ಬೋರ್ಡಿನ ಮೆಂಬರಿಕೆಯ ಸ್ಥಾನಗಳಿಗೆ ಚುನಾಯಿಸಿ ಕಳುಹುವುದರಲ್ಲಿ ಏನೂ ಅರ್ಥವಿಲ್ಲ. ಜಿಲ್ಲಾ ಬೋರ್ಡಿನ ಭಂಡಾರವು ಬರಿದಾಗಿ ಬಡ ಶಾಲಾ ಉಪಾಧ್ಯಾಯರ ಹೊಟ್ಟೆಗೆ ಪೆಟ್ಟುಬಿದ್ದಿರುವ ಈ ಸಮಯದಲ್ಲಿ ಇದ್ದ ದುಡ್ಡಿನ ಸದ್ವಿನಿಯೋಗವಾಗಿ ಬಡ ಜನತೆಯ ಸರ್ವತೋಮುಖವಲ್ಲದಿದ್ದರೂ ಸಾಮಾನ್ಯವಾದ ಅಭಿವೃದ್ಧಿಯಾದರೂ ಆಗುವಂತೆ ಪ್ರತಿಜ್ಞಾಪೂರ್ವಕವಾಗಿ ಪ್ರಯತ್ನಿಸುವಂತಹ ಪ್ರತಿನಿಧಿಗಳೇ ಈಗ ನಮಗೆ ಬೇಕು ಎಂಬುದನ್ನು ವೋಟರರಾದ ನಾವು ಈ ಸಂದರ್ಭದಲ್ಲಿ ಮರೆಯಬಾರದು, ಸ್ವಯಂ ನಷ್ಟವೂ ಪರರ ನಾಶವೂ ಆಗುವಂತಹ ರೀತಿಯ ಚುನಾವಣೆಯಲ್ಲಿ ನಾವು ಇನ್ನು ಮೇಲೆ ಯಾವ ರೀತಿಯಲ್ಲಿಯೂ ಕೈಯಿಕ್ಕಬಾರದು. ಸಾರ್ವಜನಿಕ ಸಂಸ್ಥೆಗಳಲ್ಲಿ ಜಾತಿಮತಗಳ ಹೊಡೆದಾಟಕ್ಕೆ ನಾವು ಎಡೆಕೊಡಬಾರದು. ಕುಲಕ್ಕೇ ಮೃತ್ಯುವಾದ ಕೊಡಲಿಯ ಕಾವನ್ನು ನಾವು ಕಡಿಯಲೇ ಬೇಕು. ಹಿಂದೆ ಆದುದನ್ನು ಅನುಭವಿಸಿಯೂ ಕೂಡ, ಆದುದನ್ನು ಅನುಭವಿಸಲೇ ಬೇಕೆಂಬ ಕಾಪುರುಷರ ನಿರಾಶೆಯ ವಚನವನ್ನೇ ನಾವು ಮುಂದೆಯೂ ಕೈಕೊಳ್ಳುವುದಾದರೆ ನಮ್ಮ ಅಧಃಪತನವೇ ಆದೀತೆಂಬುದರಲ್ಲಿ ಏನೂ ಅದ್ಭುತ ಇಲ್ಲ.

ಕಾಂಗ್ರೆಸಿನವರು ಇಂದಿನ ಈ ಚುನಾವಣೆಯಲ್ಲಿ ನಮ್ಮ ಪರವಾಗಿ ಉಮೇದ್ವಾರರನ್ನು ಜಿಲ್ಲೆಯ ಪ್ರತಿ ಚುನಾವಣೆಯ ಸರ್ಕಲಿಗೂ ನಿಯಮಿಸುವವರಲ್ಲದ್ದಾರೆ. ಅವರ ಈ ಪ್ರಯತ್ನದಲ್ಲಿ ಜಾತಿಮತಗಳ ವ್ಯತ್ಯಾಸವಿಲ್ಲದೆ ಸರ್ವಸಮಾನವಾದ, ಕೇವಲ ಪರಾರ್ಥಪರವಾದ ಬರೀ ಜನಹಿತವೇ ಸಾಧಿಸಲ್ಪಡುವುದಾಗಿಯೂ ಅವರ ಪ್ರತಿಜ್ಞೆ ಇದೆ. ದೇಶದಲ್ಲೆಲ್ಲಾ ಇದುವರೆಗೆ ನಡೆದಿರುವ ಅವರ ಕೆಲಸಗಳಲ್ಲಿ ಸಮಾನತ್ವವೂ ಇದೇ ಘೋಷಣೆಯೂ ತೋರಿಬರುತ್ತಿದೆ. ಹೀಗಿರುವಾಗ ಅವರಿಂದ ಜನಹಿತವೇ ಸಾಧಿಸಲ್ಪಡಬಹುದೆಂಬ ಭಾವನೆಯೂ ಜನರಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಹೀಗಿರುವಾಗ ಈಗಿನಂತೆ ನಿಷ್ಫಲವಾಗುವ ಸಂಭವವುಂಟೆ? ಕೆಟ್ಟದಾಗುತ್ತಲೇ ಹೋಗದ ಅಲ್ಪಸ್ವಲ್ಪವಾದರೂ ಒಳ್ಳೆಯದು ಆಗಬಹುದೆಂಬುದರಲ್ಲಿ ಆ ಕಾಂಗ್ರೆಸ್ಸಿನ ಹೊಸ ಉಮೇದ್ವಾರರನ್ನು ವೋಟರರಾದ ನಾವು ನಮ್ಮ ವೋಟು ಕೊಟ್ಟು ಏಕೆ ಮೇಲೆ ತರಬಾರದೆಂಬುದನ್ನು ಎಲ್ಲರೂ ಈಗ ಆಲೋಚಿಸಬೇಕಾಗಿದೆ. ಈ ಸಂದರ್ಭದಲ್ಲಿ ಅತ್ಯಂತ ಆಗತ್ಯವೆಂದು ಪ್ರತ್ಯೇಕವಾದ ಸರ್ಕಲಿನ ವೋಟರರಲ್ಲಿ ಒಬ್ಬನಾದ ನಾನು ನನ್ನ ಮೂಲಕ ನಮ್ಮ ಜಿಲ್ಲೆಯ ವೋಟರರೆಲ್ಲರಲ್ಲಿ ಮನವಿ ಮಾಡಿಕೊಳ್ಳುವುದು ಅಗತ್ಯ ಪಟ್ಟಿದ್ದೇನೆ.

ಯು ಎಸ್ ಉಪಾಧ್ಯಾಯ

೧೮ ೮—೩೪ ಉಪ್ಪೂರು

---

## ಮಾಧರ್ ಕೃಷಿಕರ ಮನವಿ

ಮಾಧರದ ಕೃಷಿಕರು ಒಂದು ಮನವಿಯನ್ನು ಭಾರತ ದೇಶಮುಖರವರ ಮುಂದಾಳುತನದಲ್ಲಿ ಆಲ್ಲಿನ ರೆವಿನ್ಯೂ ಮೆಂಬರರನ್ನು ಕಂಡಿತು. ರೆವಿನ್ಯೂ ಮೆಂಬರರು ಸರಕಾರದ ಆಡಳಿತ ವಿಭಾಗದ ಶ್ರೇಣಿಯವರ ಸರ್ಕಾರಿನ ನಿರ್ಣಯ. ಅವರಿಗೆ ಕೊಡಬೇಕಾದ ಸರಕಾರದ ಮುಂದಕ್ಕೆ ಪಟ್ಟಿಯನ್ನು ಮಾಡಿದರೆ ನಿರ್ಧಾರವನ್ನು ಅದರಲ್ಲಿ ಸೇರಿಸಿ ಭೂಮಿ ಆದಾಯದ ಮೇಲೆ ಸಾಲಕೊಡುವ ಬೇಂಕನ್ನು ಸ್ಥಾಪಿಸುವಂತೆ ಮಾಡಬಹುದೆಂದರು.


# ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ' ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ

ವಜ್ರಗಳು ಯಾವಾಗಲೂ ಸಿಗುತ್ತವೆ

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,

ಸೊನಗಾರ ಮಹಾಲ್, ರಥಬೀದಿ ಮಂಗಳೂರು

(ಸನ್ ೧೮೩೫ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

*Part Proprietors of —*

**Sri Krishna Mills & Co**

Oil Manufacturers

Bunder, Mangalore.

**Bhagavan Ganesh Pai Co**

Copper Sheet & Twist Merchants, Camp Bazar, Cannanore.

*Representatives for the W C.*

**M/s A & F. Harvey**

Cotton Spinners, Tuticorin, Madura &c.

**Guardian Assurance Co. Ltd**

(Incorporated England)

Head Office:

98, King William Street, London, E. C. 4.

# ತಾಲೂಕುಗಳಿಂದ.

**ಕಾರ್ಕಳ—** ಹೆಚ್ಚಿಸಿದ ನೆಲತೆರಿಗೆಗಳಿಂದ ಕೇಶ ಕಷ್ಟಗಳಿಗೆ ಗುರಿಯಾದ ಇಲ್ಲಿಯವರು ತಮ್ಮ ಕಷ್ಟಗಳನ್ನು ರೆವಿನ್ಯೂ ಇಲಾಖೆಯ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುವರು. ಅಧಿಕಾರಿಗಳು ಸಹಾನುಭೂತಿಯಿಂದ ವರ್ತಿಸುವರೆಂದು ಆಸೆ ಇದೆ

ಜಿಲ್ಲಾ ಬೋರ್ಡಿಗೆ ಕಾಂಗ್ರೆಸ ಕಡೆಯಿಂದ ಸದಸ್ಯರಾದವರು ಅಭ್ಯಾಸ ಪೂರ್ವಕ ಖದ್ದರ ಧರಿಸುವವರಾಗಿರಬೇಕೆಂದೂ ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸಿನ ಹೆಸರಿನಲ್ಲಿ ಸ್ಥಾನವನ್ನಾಕ್ರಮಿಸುವ ಆತುರದಲ್ಲಿ ಸತ್ವವನ್ನು ಬಿಟ್ಟುಬಿಡುವದು ಸಮಂಜಸವಾಗಿರುವದಿಲ್ಲವೆಂದೂ ಇಲ್ಲಿಯ ಕಾಂಗ್ರೆಸ ನಾಯಕರ ಅಭಿಪ್ರಾಯವಿರುತ್ತದೆ. ಜಿಲ್ಲಾ ಸಮಿತಿ ಬೋರ್ಡಿನವರು ಈ ಕಡೆಗೆ ಲಕ್ಷ್ಯವೀಯಬೇಕೆಂದು ಅಪೇಕ್ಷಿಸುತ್ತೇವೆ

**ಫರಂಗಿಪೇಟೆ—** ಇಲ್ಲಿಯ ಶ್ರೀ ರಾಮಾಶ್ರಯ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳ ತರ್ಫೆ ಸೇರಿದ ಸಭೆಯು ಜನಾಬ ಶಹಬುದ್ದೀನ್ ಗೌರಿ, ಬಹದ್ದೂರ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ನೆರೆದ ವಿದ್ಯಾರ್ಥಿಗಳಿಗೆ ಪಾರಸೀ ದೇಶದ ಕುರಿತು ತನ್ನ ಅನುಭವವನ್ನು ಇತ್ತರು.—"ಪಾರಸೀ ದೇಶದ ಮುಖ್ಯ ಉತ್ಪತ್ತಿಯು ಚಿಮ್ಣಿಯೆಣ್ಣೆಯಾಗಿರುವುದು. ಈ ಕಾರಖಾನೆಗಳಲ್ಲಿ ಅನೇಕ ಮಂದಿ ಹಿಂದೂ ದೇಶದವರು ಕೆಲಸ ಮಾಡುತ್ತಿರುವರು ಅಲ್ಲಿಯ ಜನರು ವಿಶೇಷವಾಗಿ ಶ್ರೀಮಂತರಲ್ಲಿ ಎಲ್ಲೆಲಿಯೂ ಬಡತನವೇ ಕಂಡುಬರುವುದು ಹತ್ತು ಸಂವತ್ಸರಗಳ ಹಿಂದೆ ಊರವರಿಗೆ ಬದ್ದೂ ಎಂಬ ಒಂದು ಭೀಕರಾಕೃತಿಯ ಜನರಿಂದ ತುಂಬಾ ಉಪದ್ರವವಿತ್ತು. ಇವರು ಕಾಡುಗುಡ್ಡಗಳಲ್ಲಿ ವಾಸಿಸಿ ಕಳ್ಳೆ ಸುಲಿಗೆ ಮುಂತಾದವುಗಳಿಂದ ಜೀವನವನ್ನು ನಡಿಸುವವರಾಗಿದ್ದರು ಆದರೆ ಈಗ ಮಾತ್ರ ಸರಕಾರವು ಅವರ ಪಟ್ಟನ್ನೇ ಅಡಗಿಸಿರುವುದು. ಅರಬಿಯವರು ಪ್ರಸಿದ್ಧ ಪೈಗಂಬರನ ಅನುಯಾಯಿಗಳಾದುದರಿಂದ ಅವರಲ್ಲಿ ನನಗೆ ಮೊದಲು ತುಂಬಾ ಅಭಿಮಾನವಿತ್ತು ಅವರು ಸುಶೀಲರೂ ಪರಿಗಾಗುಣರವರೂ ಮತ್ತು ಉದಾರಿಗಳೂ ಆಗಿರಬೇಕು ಎಂದು ನನ್ನ ಭರವಸೆ ಇತ್ತು. ಅವರ ಅಲ್ಲಿಯ ಸ್ಥಿತಿಯನ್ನು ನೋಡಿದರೆ ವ್ಯಸನವಾಗುವುದು ಕಾರಣ ಈ ಅರಬಿಯನರು ಮುದುಕರಿಂದ-ಮಕ್ಕಳವರೆಗೆ ಸ್ತ್ರೀಯರಾಗಲಿ ಪುರುಷರಾಗಲಿ, ಕೊಲೆ ಸುಲಿಗೆ ನಡಿಸುವುದೇ ತಮ್ಮ ಜೀವನದ ಮುಖ್ಯ ಕರ್ತವ್ಯವೆಂದು ತಿಳಿದುಕೊಂಡ ಹಾಗೆ ಕಂಡು ಬರುತ್ತದೆ ಅವರಿಗೆ ತಮ್ಮ ಜೀವದ ಮೇಲೆ ಆಶೆ ಇರುವುದಿಲ್ಲ ಇತರರು ಬದುಕಿರಬೇಕೆಂದು ಬಯಸುವುದೂ ಇಲ್ಲ ಇವರು ಮಾನವ ರಕ್ತದಿಂದ ತೃಪ್ತಿಯೊಂದುವ ನರಭಕ್ಷಕರ ಹಾಗೆ ಇರುವರು. ಇತರ ಪೀಡನೆಯು ಮೊತ್ತಮೊದಲು ಬಹಳೇ ಇತ್ತು ಈಗ ಮಾತ್ರ ಕಡಿಮೆಯಾಗಿರುವುದು

ಪಾರಸೀ ದೇಶದ ವಾಹಿನಿಯಿಂದಿಗೆ ಶೌಚ ಪದ್ಧತಿ ಇರುವುದಿಲ್ಲ ಅಲ್ಲಿಯ ಅರಸನು ವರ್ಷಂಪ್ರತಿ ನಾಲ್ಕು ನೂರು ತರುಣರನ್ನು ಅನ್ಯ ದೇಶಗಳಿಗೆ ಶಿಕ್ಷಣಕ್ಕೆ ಕಲಿತು ಕೊಳ್ಳುವರೆ ಕಳುಹಿಸುತ್ತಿರುವನು ಈ ವಿದ್ಯಾರ್ಥಿಗಳಿಗೆ ಸರಕಾರದಿಂದ ವೆಚ್ಚಕ್ಕೆ ಹಣವು ಸಿಗುತ್ತಿರುವುದು. ಹಿಂದೂ ದೇಶದವರನ್ನು ಪಾರಸೀಕರು ಉತ್ತಮ ದೃಷ್ಟಿಯಿಂದ ಕಾಣುವುದಿಲ್ಲ. ನೀವು ಬಹಳೇ ಮಂದಿ ಇದ್ದರೂ ಗುಲಾಮರಾಗಲಿಕ್ಕೆ ಯೋಗ್ಯರಲ್ಲದ ಇನ್ನಾವ ಕೆಲಸಕ್ಕೂ ನಿಷ್ಪ್ರಯೋಜನ ಇವೇ ಮೊದಲಾದ ವಿಷಯಗಳನ್ನು ಹೇಳಿದ ಬಳಿಕ ಸಂಘದ ಅಧ್ಯಕ್ಷರಿಂದ ಧನ್ಯವಾದಗಳು ಅರ್ಪಿಸಲ್ಪಟ್ಟವು ಆ ಬಳಿಕ ಸಭೆಯು ರಾಷ್ಟ್ರಗೀತದೊಂದಿಗೆ ಕೊನೆಗೊಂಡಿತು

**ಕಟಿಪಾಡಿ—** ತಾ ೧೩—೮—೩೪ನೇ ಮಂಗಳವಾರ ದಿನ, ದಿವಂಗತ ಕೀರ್ತಿಶೇಷ, ಉಡುಪಿಯ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರರವರ ಸ್ಮಾರಕಾರ್ಥವಾಗಿ ಇಡೀ ಊರಲ್ಲಿ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟು ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಂಜೆ ೪ ಗಂಟೆಗೆ ಇಲ್ಲಿಯ ಶ್ರೀ ವೆಂಕಟ್ರಮಣ ಸ್ವಾಮಿ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಊರ ಪ್ರಮುಖರೆಲ್ಲಾ, ಇಲ್ಲಿಯ ಅಧ್ಯಾಪಕ ಶ್ರೀಯುತ ಮೂಲ್ಕಿ ದಾಮೋದರ ಶೆಣೈಯವರ ಅಧ್ಯಕ್ಷತನದಲ್ಲಿ ದಿವಂಗತರ ದುಃಖ ಸೂಚನೆಗಾಗಿ ಸಭೆ ಸೇರಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರೂ, ಕಾರ್ಕಳ ಗಣಪಯ್ಯ ಶೆಟ್ಟರೂ, ಕೆ ಪಿ. ಕಾಮತರೂ, ಡಾಕ್ಟರ್ ಕೆ. ಜೆ. ಕಿಣಿ ಮತ್ತಿರ ಹಲವು ಸದ್ಗೃಹಸ್ಥರು ಯಥೋಚಿತವಾಗಿ ದಿವಂಗತರ ಗುಣಕಥನವನ್ನು ವಿವರಿಸಿ, ಸೂಕ್ತವಾಗಿ ಶೋಕ ತಮ್ಮ ಸಹಸಂತಾಪವನ್ನು ಪ್ರದರ್ಶಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

**ಹಿರಿಯಡ್ಕ—** ಇದೇ ತಾ. ೧೪—೮—೩೪ನೇ ಬುಧವಾರ ಪೂರ್ವಾಹ್ನ ಘಂಟೆ ೮ಕ್ಕೆ ಸ್ಥಳೀಯ ಆರ್ಯ ಸಮಾಜ ಮಂದಿರದಲ್ಲಿ, ಉಪಕರ್ಮ ಸಮಾರಂಭವು ಎಚ್. ಕೆ. ಅನಂತಯ್ಯನವರ ಪೌರೋಹಿತ್ಯದಲ್ಲಿ ನೆರವೇರಿಸಲ್ಪಟ್ಟಿತು. ಅಂದು 'ಯಜ್ಞೋಪವೀತದ ಮಹತ್ವ' ಎಂಬ ಕುರಿತು ಶ್ರೀಯುತ ಎಚ್. ಕೆ. ಅನಂತಯ್ಯನವರು ಸುರಸವಾಗಿ ವ್ಯಾಖ್ಯಾನ ಮಾಡಿದರು.

**ಉಡುಪಿ—** ತಾ ೧೦ಕ್ಕೆ ಜರುಗಿದಾಡು ಭಾವ ಖಾನೆಯ ವಠಾರದಲ್ಲಿ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯ ಮಹಾಸಭೆಯು ಡಾ ಪಿ. ಜಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು, ಜಿಲ್ಲಾ ಬೋರ್ಡಿಗೆ ಕಾಂಗ್ರೆಸು ಉಮೇದ್ವಾರರು ಸತತ ಖಾದಿಧಾರಿಗಳಿರಬೇಕೋ ಬೇಡವೋ ಎಂದು ದೀರ್ಘ ಚರ್ಚೆ ನಡೆಯಿತು ಕೊನೆಗೆ ಸತತ ಖಾದಿ ಧಾರಣವನ್ನು ಜಿಲ್ಲಾ ಬೋರ್ಡು ಕಾಂಗ್ರೆಸು ಉಮೇದ್ವಾರರು ಕೈಕೊಳ್ಳುವ ಹಾಗೆ ಕರ್ತವ್ಯವಾಗಬೇಕಾಗಿ ಜಿಲ್ಲಾ ಸಿವಿಲ್ ಬೋರ್ಡಿಗೆ ಶಿಫಾರಸು ಮಾಡುವ ಠರಾವು ಬಹುಮತದಿಂದ ಮಂಜೂರಾಯಿತು ಶ್ರೀ ಗಳಾದ ಡಾ ಪಿ ಜಿ ಆಚಾರ್ಯ, ಎಚ್ ವಿಟ್ಠಲ ಕಾಮತ್ ಬಾಳಕಟ್ಟ ಕೃಷ್ಣಯ್ಯ ಹೆಗ್ಡೆಯವರನ್ನು ಜಿಲ್ಲಾ ಸಿವಿಲ್ ಬೋರ್ಡಿನ ಆದೇಶ ಕಮಿಟಿಗೆ ಪ್ರತಿನಿಧಿಗಳಾಗಿ ಆರಿಸಲಾಯಿತು.

ತಾ ೧೫ಕ್ಕೆ ಸ್ಥಳೀಯ ವಿಕ್ಟೋರಿಯಾ ಜುಬಿಲಿಯೂನಿಯನ್ ಕ್ಲಬ್ಬಿನಲ್ಲಿ ಶ್ರೀ ಎಚ್ ವಿಟ್ಠಲ ಕಾಮತ್, ಬಿ. ಎ ಬಿ ಎಲ್ ವಕೀಲ ಇವರ ಅಧ್ಯಕ್ಷತೆಯಲ್ಲಿ ಉಡುಪಿ ಪ್ರಜೆಗಳ ಮಹಾಸಭೆ ಸೇರಿತು. ಸರಕಾರದವರು ಉಡುಪಿ ಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಹೊರಿಸುವ ತಮ್ಮ ಇರಾದೆಯನ್ನು ಪ್ರಕಟಪಡಿಸಿದುದಕ್ಕೆ ನಿಷೇಧ ಸೂಚಿಸುವುದೇ ಸದರಿ ಸಭೆಯ ಉದ್ದೇಶವಾಗಿತ್ತು ತಾ ೧೩ನೆಗೆ ವಿಧಿವಶರಾದ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಸಾಹೇಬರ ನಿಧನದ ಬಗ್ಗೆ ಊರಿನ ಸಹಸಂತಾಪವನ್ನು ಸೂಚಿಸುವರೆ ಇದೇ ತಾ ೧೮ನೇ ಆದಿತ್ಯವಾರ ಅದೇ ಸ್ಥಳದಲ್ಲಿ ಬಾಹೀರ ಸಭೆ ಸೇರಬೇಕಾಗಿ ಅಧ್ಯಕ್ಷರ ಠರಾವೊಂದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಅನಂತರ ಕಾರ್ಯಕ್ರಮವನ್ನು ಪ್ರಾರಂಭಿಸಿ ಈ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದುವು (೧) ಹಿಂದೆ ಮುಖ್ಯ ಮಂತ್ರಿ ಮೊದಲಾದವರಿಗೆ ಜನರ ಮನವಿಯ ಮೂಲಕ ಉಡುಪಿಗೆ ಮುನಿಸಿಪಾಲಿಟಿಯನ್ನು ಸದ್ಯ ಹೊರಿಸಬಾರದೆಂದು ಸರಕಾರಕ್ಕೆ ಪ್ರಾರ್ಥಿಸಲಾಗಿದ್ದಾಗ್ಯೂ ಉಡುಪಿ ಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಹೊರಿಸುವ ತಮ್ಮ ಇರಾದೆಯನ್ನು ಸರಕಾರದವರು ಪ್ರಕಟಿಸಿದ್ದಕ್ಕೂ ಊರಿನ ಮುಖ್ಯ ಜನರು ಪ್ರಬಲವಾಗಿ ನಿಷೇಧಿಸುತ್ತಾರೆ (೨) ಯಾವುದೇ ಆಗಲಿ ಕ್ರಮಬದ್ಧ ರೀತಿಯ ವ್ಯವಸ್ಥೆಯಿಂದ ಊರಿನ ಜನರ ಯೋಗಕ್ಷೇಮವನ್ನು ಪಾಲಿಸುವ ಸಂಸ್ಥೆಯು ಬೇಕೇಕೆಂದು ಸರಕಾರದ ಧೋರಣೆಯಿದ್ದಲ್ಲಿ ಪಂಚಾಯತ ಬೋರ್ಡನ್ನಾದರೂ ದಯಪಾಲಿಸಿದ್ದಲ್ಲಿ ಅದನ್ನು ಯುಕ್ತರೀತಿಯಾಗುವಂತೆ ಪ್ರಯೋಜಿಸುವೆವು (೩) ಉಡುಪಿ ಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಸದ್ಯ ಹೊರಿಸಬಾರದೆಂದು ಸರಕಾರಕ್ಕೆ ಮಾನ್ಯ ಮಾಡಿಸುವರೆ ಆರು ಗೃಹಸ್ಥರುಳ್ಳ ಒಂದು ಡೆಪ್ಯುಟೇಶನನ್ನು ಮಾನ್ಯ ಮದ್ರಾಸು ಗವರ್ನರರ ಭೇಟಿಗೆ ಕಳುಹಿಸಿ ತಮ್ಮ ಅಹವಾಲಿಗಳನ್ನು ತಿಳಿಯಗೊಡಿಸಬೇಕು

ಮುಂಚಿತವಾಗಿ ನಿರ್ಧರಿಸಲಾಗಿದ್ದಂತೆ ತಾ. ೧೮ನೇ ಆದಿತ್ಯವಾರ ಸಾಯಂಕಾಲ ೫—೩೦ಕ್ಕೆ ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಪುರಜನರ ಮಹಾಸಭೆ ಸೇರಿತು. ಆರೂರು ಲಕ್ಷ್ಮೀನಾರಾಯಣ ರಾವ್, ಬಿ ಎ ಬಿ, ಎಲ್ ಎಡ್ವೋಕೇಟರು ಅಧ್ಯಕ್ಷರಾಗಿದ್ದರು ತಾ ೧೩ಕ್ಕೆ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರ್ ಇವರು ಮೃತ್ಯುವಶರಾದ ಬಗ್ಗೆ ಊರವರು ತಮ್ಮ ದುಃಖಸೂಚಿಸಿ ಮೃತರ ಕುಟುಂಬದವರೊಡನೆ ತಮ್ಮ ಸಹಸಂತಾಪವನ್ನು ಅರುಹಿ ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ದೇವರಲ್ಲಿ ಪ್ರಾರ್ಥಿಸುವುದೇ ಮೊದಲನೇ ಠರಾವು ಆಗಿದ್ದಿತು ಮಾನ್ಯ ಅಧ್ಯಕ್ಷರು ದಿವಂಗತರ ಗುಣಕಥನವನ್ನು ಸ್ವಲ್ಪ ಹೊತ್ತು ಮಾಡಿ, ಸದರಿ ನಿರ್ಣಯವನ್ನು ಸಭೆಯ ಮುಂದಿಡಲು ಶ್ರೀ ಕೋಡ್ಯಾಲ್ ಶ್ರೀನಿವಾಸ ರಾಯರನ್ನೂ ಅದನ್ನು ಅನುಮೋದಿಸಲಿಕ್ಕೆ ಶ್ರೀ ಎಚ್ ವಿಟ್ಠಲ ಕಾಮತರನ್ನು ಕೇಳಿಕೊಂಡರು ಇವರೂ ರೆವರೆಂಡ್ ಪಿ ಸೋನ್ಸ್, ಮಿ ಜೆ. ಡಿ ರೇಗೊ, ಶ್ರೀ ಎಸ್ ರಾಜಗೋಪಾಲ ಕೃಷ್ಣರಾವ್, ಶ್ರೀ ಎಸ್ ಅನಂತರಾವ್, ಶ್ರೀ ಪಿ ಪಾಂಡುರಂಗ ನಾಯಕ್, ಜೊತೆಗೆ ಮಾನ್ಯ ಅಧ್ಯಕ್ಷರೂ ಸರಿ ಭಾಷಣವಾಗಿ ದಿವಂಗತರ ಗುಣ ವಿಶೇಷಗಳನ್ನು ಹಲವು ಬಗೆಗಳಲ್ಲಿ ವೇದ್ಯಪಡಿಸಿ, ಉಡು

# ಮಂಗಳೂರು.

ಹವಾಗುಣವು ಅನುಕೂಲಿಸಿದರೆ, ದಿ ಬೋಂಬೇ ಸ್ಟೀಂ ನೇವಿಗೇಶನ್ ಕಂಪೆನಿಯ ಸರಕು ಮತ್ತು ಪ್ರಯಾಣಿಕರ ಸ್ಟೀಮರು ಇದೇ ೧೯೩೪ನೇ ಇಸವಿ ಸಪ್ಟಂಬರ ತಾರೀಕು ೧೦ನೇ ದಿನ ಮೊದಲ್ಗೊಂಡು ಪ್ರತಿ ಮಂಗಳವಾರ ಮುಂಬಾಯಿಯಿಂದ ಹೊರಟು ಆದೇ ಗುರುವಾರ ಬೆಳಿಗ್ಗೆ ೯ ಘಂಟೆಗೆ ಇಲ್ಲಿಗೆ ತಲಪಿ, ಮರುದಿನ ಅಂದರೆ ಶುಕ್ರವಾರ ಬೆಳಿಗ್ಗೆ ೧೦ ಘಂಟೆಗೆ ಹಿಂತಿರಳಿ ಆದಿತ್ಯವಾರ ದಿನ ಬೆಳಿಗ್ಗೆ ೭ ಗಂಟೆಗೆ ಮುಂಬಾಯಿಗೆ ತಲಪುವುದು. ಹೋಗುವಾಗಲೂ ಬರುವಾಗಲೂ ಅದು ನಿತ್ಯದಂತೆ ತದ್ರಿ ಮತ್ತು ಹೊನ್ನಾವರ ಬಂದರುಗಳಲ್ಲಲ್ಲದೆ ಮಿಕ್ಕ ಎಲ್ಲಾ ಬಂದರುಗಳಲ್ಲಿಯೂ ತಂಗುವುದು. ಶುಕ್ರವಾರಗಳಲ್ಲಿ ಮಂಗಳೂರಿನ ಪ್ರಯಾಣಿಕರು ಬೆಳಿಗ್ಗೆ ೮-೪೫ಕ್ಕೆ ಸ್ಟೀಮರು ಹತ್ತಬೇಕಾಗುವುದು. ಇದೇ ರೀತಿ ಈ ಕಂಪೆನಿಯ ಸರಕು ಮತ್ತು ಪ್ರಯಾಣಿಕರ ಒಂದು ಸ್ಟೀಮರು ೧೯೩೪ನೇ ಸಪ್ಟಂಬರ ೧೪ನೇ ಶುಕ್ರವಾರದಿಂದ ಮೊದಲ್ಗೊಂಡು ಪ್ರತಿ ಶುಕ್ರವಾರ ಮುಂಬಾಯಿಯಿಂದ ಹೊರಟು ಆದೇ ಸೋಮವಾರ ಬೆಳಿಗ್ಗೆ ೬ ಘಂಟೆಗೆ ಇಲ್ಲಿ ತಲ್ಪಿ, ಅದೇ ದಿನ ಸಂಜೆ ಹಿಂತಿರುಗಿ ಗುರುವಾರ ಪೂರ್ವಾಹ್ನ ೧೧ ಘಂಟೆಗೆ ಮುಂಬಾಯಿಗೆ ತಲಪುವುದು ಹೋಗುವಾಗಲೂ ಬರುವಾಗಲೂ ಅದು ನಿತ್ಯದಂತೆ ಎಲ್ಲಾ ಬಂದರುಗಳಲ್ಲೂ (ಹೊನ್ನಾವರದಲ್ಲಿ ೧೯೩೪ನೇ ಇಸವಿ ೨೧ನೇ ಸಪ್ಟಂಬರದಿಂದ) ತಂಗುವುದು ಮಂಗಳೂರಿನ ಪ್ರಯಾಣಿಕರು ಸೋಮವಾರ ದಿನಗಳಲ್ಲಿ ಅಪರಾಹ್ನ ೨ ಗಂಟೆಗೆ ಸ್ಟೀಮರು ಹತ್ತಬೇಕಾಗುವುದು

ಇದೇ ತಿಂಗಳ ಬರುವ ತಾ ೨೬ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೫ ೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಬಿ ಲಕ್ಷ್ಮಣದೇವ ವಿದ್ಯಾರ್ಥಿಯವರು "ಕರ್ನಾಟಕ ಪ್ರಾಂತ್ಯದ ಸಾಮಾಜಿಕ ಸ್ಥಿತಿ" ಎಂಬ ಕುರಿತು ಭಾಷಣವೀಯುವರು ಸರ್ವರಿಗೂ ಸ್ವಾಗತವಿದೆ

ಟಿಗೆ ಮಾತ್ರವಲ್ಲ, ನಮ್ಮ ಜಿಲ್ಲೆಗೂ ಅಖಿಲ ಕರ್ನಾಟಕಕ್ಕೂ ರತ್ನಪ್ರಾಯರೆನಿಸಿದ್ದ ಹಿಂದೂ ಮುಸಲ್ಮಾನ ಐಕ್ಯತೆಯ ತವರೆನಿಸಿದ್ದ ಬಡವರ ಬಂಧುವೆನಿಸಿದ್ದ ಜನತೆಯ ಸೇವೆಯೇ ಈಶ ಸೇವೆಯೆಂದು ನಡೆಯುತ್ತಿದ್ದ ಶಾಂತಮೂರ್ತಿಯಾದ ದಯಾಪೂರ್ಣರ ನಿಧನದಿಂದ ಉಂಟಾದ ದುಃಖಾತಿಶಯಕ್ಕೆ ಮೇರೆಯೇ ಇಲ್ಲವೆಂಬುದಕ್ಕೆ ಭಾಗವಾಗುತ್ತಿದ್ದ ಮೃತ ಶರೀರವನ್ನು ಕುರಿತು ಸಲ್ಲಿಸಿದ್ದ ಮತ್ತು ೧೦,೦೦೦ ಜನರ ಸ್ತ್ರೀ ಪುರುಷರು ಆಬಾಲವೃದ್ಧರು ನಾನಾ ಜಾತಿಗಳವರು ಸ್ಮೋತ್ಸವ ಕಾಲ್ನಡಿಗೆ ಮೃತರ ಸ್ಮರಣಾ ಮಹಾತ್ಮೆಯ ಸಂಭ್ರಮ ಉತ್ಕಟತೆಗಳ ಪ್ರದರ್ಶನ (ಹೂಮಾಲೆ ಅರ್ಪಣೆ ನಾನಾ ಜಾತಿಗಳವರೂ ಶವವನ್ನು ಎತ್ತಿ ಹಿಡಿಯುವ ತವಕಗೆಂಡಿದ್ದು) ಸಾಕ್ಷ್ಯವಾಗಿ ವೇದ್ಯಗೊಳಿಸಿದರು. ಮೃತರ ಸ್ಮಾರಕವಾಗಿ ಸಾಧ್ಯವಿದ್ದಲ್ಲಿ ಬಿಳಿಯ ಉತ್ತಮಾಂಗವನ್ನು ನಿರ್ಮಿಸುವಂತೆಯೂ ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್ ವೆಂಕೋಬಾಚಾರ್ಯ, ರಿಚರ್ಡ್ ಫೆರ್ನಾಂಡಿಸ್, ರೆ ಪಿ ಸೋನ್ಸ್, ಡಾ. ಯು ಪಿ ಮಲ್ಯ, ಡಾ. ಸುಂದರ ರಾಮ ಪೈ ಕೆ ಎಮ್. ನೋಮು ಯು. ಸರಿಯ ಪಾರಕಲ ಎಮ್ ಅಣ್ಣಯ್ಯ ಕೆ ಜೆ ಬಲ್ಲಾಳ ಮುಂತಾದ ಪ್ರಮುಖರ ಸಮಿತಿಯೊಂದು ನಿರ್ಣಯಿಸಲಾಯಿತು.

ತಾ ೧೯ನೇ ರಾತ್ರಿ ೧೦ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಭಾರತಮಾತಾ ಹಿಂದೀ ಎಮೆಚೂರ್ಸ್, ಉಡುಪಿ ಇವರಿಂದ "ವೀರ ಅಭಿಮನ್ಯು" ಎಂಬ ಹಿಂದೀ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

**ಮಹಾಜನ ಸಭಾ ಉಡುಪಿ—** ಇವರು ತಾರೀಕು ೨೮—೯—೧೯೩೪ರಿಂದ ೬—೧೦—೧೯೩೪ರ ವರೆಗೆ ಕಳೆದ ವರ್ಷದಲ್ಲಿ ಜರಗಿಸಿದಂತೆಯೆ ಈ ವರ್ಷದಲ್ಲಿಯೂ ನವರಾತ್ರಿ ಮಹೋತ್ಸವವನ್ನು ಜರಗಿಸಬೇಕೆಂದು ನಿರ್ಧರಿಸಿರುವರು ಪ್ರತಿನಿತ್ಯವೂ ರಾತ್ರಿ ೯—೩೦ಕ್ಕೆ ಕಾರ್ಯಕ್ರಮವು ಪ್ರಾರಂಭವಾಗಿ ರಾತ್ರಿ ೧೨ ಗಂಟೆಗೆ ಸರಿಯಾಗಿ ಮುಗಿಯುವುದು

ಈ ಕಾರ್ಯಕ್ರಮದಲ್ಲಿ ಸಂಗೀತ, ನಾಟಕ, ನರ್ತನ, ವ್ಯಾಯಾಮ, ಹರಿಕಥೆ, ವಾಚನ, ಭಾಷಣ ಮುಂತಾದವುಗಳು ಅಡಕವಾಗಿವೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದಿರುವ ಉಮೇದುವಾರರು ತಾ. ೧೦—೯—೩೪ರ ಒಳಗೆ ಅರ್ಜಿ ಹಾಕಿ ತಮಗೆ ಬೇಕಾದ ಸಮಯದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗಿ ವಿನಂತಿ

---

**ಶ್ರೀ ಕೃಷ್ಣ ಜಯಂತ್ಯುತ್ಸವವು—** ಮಂಗಳೂರು ಆರ್ಯಸಮಾಜದವರಿಂದ ಈ ಕೆಳಗಿನ ಕಾರ್ಯಕ್ರಮ ಪ್ರಕಾರ ಆಚರಿಸಲ್ಪಟ್ಟಿತು. ತಾ. ೨೯ನೇ ಬುಧವಾರ ಸಾಯಂಕಾಲ ಐದು ಘಂಟೆಗೆ ಲೈಸು ಮೈದಾನಿನಲ್ಲಿ ಶ್ರೀ ಕೃಷ್ಣ ಚರಿತ್ರೆಯ ವಿಷಯವಾಗಿ ಶ್ರೀಯುತರುಗಳಾದ ನಾರಾಯಣ ಕಿಲ್ಲೆಯವರು, ದೇವಪ್ಪ ಆಳ್ವರು ಮತ್ತು ಬಿ. ಯಂ ತಿರಗಳಾಯರ ಭಾಷಣಗಳು ತಾ. ೩೦ನೇ ಗುರುವಾರ ಸಾಯಂಕಾಲ ಐದು ಘಂಟೆಗೆ ಸನ್ಯಾಸಿಗುಡ್ಡೆ ಆರ್ಯಸಮಾಜ ಮಂದಿರದಲ್ಲಿ ರೆವೆ ಇ. ಸುಬ್ಬುಕೃಷ್ಣಯ್ಯ ಯಂ. ಎ ಬಿ. ಯಸ್, ಸಿ ಬಿ. ಡಿ. ಯವರು ಮತ್ತು ಶ್ರೀ ಮೋಹನಪ್ಪ ತಿಂಗಳಾಯರು, ಶ್ರೀಯುತ ಯಸ್. ರಾಮಚಂದ್ರ ಅಯ್ಯರ್ ಬಿ ಎ ಯವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಚರಿತ್ರೆ ಮತ್ತು ಬೋಧೆಯ ವಿಷಯವಾಗಿ ಭಾಷಣಗಳು. ಶ್ರೀ ಜ್ಞಾನೋದಯ ಸಮಾಜದ ವೈದಿಕ ಭಜನೆ ಮಂಡಳಿಯವರ ಹರಿಕೀರ್ತನೆಗಳು ಎರಡು ದಿನಗಳಲ್ಲಿಯೂ ಇದ್ದುವು

ಇದೇ ತಿಂಗಳ ಸೋಮವಾರ ೧೩—೮—೧೯೩೪ನೇ ದಿನದಲ್ಲಿ ಮಿ. ಪಿ ಬಾಲಕೃಷ್ಣ ಮೆನನ್ ಬಿ. ಎ. ಆನರ್ಸ್ ಎಲ್ ಟಿ ಯವರು ಮಿ ವಿ. ಯಂ ಜೋಸೆಫ್ ಎಂ ಎ ಯವರ ಅಧ್ಯಕ್ಷತೆಯಲ್ಲಿ ಸೈಂಟ್ ಎಲೋಶಿಯಸ್ ಕೊಲೇಜು ರಸಾಯನ ಶಾಸ್ತ್ರ ಭಾಷಣ ಸಭಾ ಸದನದಲ್ಲಿ ರಸಾಯನಶಾಸ್ತ್ರ ಸಂಘದ ಆರಂಭಭಾಷಣವನ್ನು ಮಾಡಿದರು. ವಿಷಯವು "ರಸಾಯನ ಶಾಸ್ತ್ರದ ಇತಿಹಾಸದಲ್ಲಿ ಕಾಲುಹುಗಳು." ಭಾಷಣವು ಸ್ಫೂರ್ತಿದಾಯಕವಾಗಿಯೂ, ಬೋಧಕವಾಗಿಯೂ, ಸರಳವಾಗಿಯೂ ಇತ್ತು.

ಇದೇ ತಿಂಗಳ ೧೩—೮—೩೪ನೇ ಸೋಮವಾರ ಮಿ. ಯಸ್ ಶ್ರೀನಿವಾಸಾಚಾರ್ಯರ್ ಎಮ್. ಎ. ಎಲ್. ಟಿ ಯವರು 'ತತ್ವಜ್ಞಾನ ಮತ್ತು ಆಧುನಿಕ ಜೀವ ತತ್ವಶಾಸ್ತ್ರದ ವಿಷಯವಾಗಿ ತತ್ವಜ್ಞಾನ ಸಂಘದ ಮೊದಲನೇ ಭಾಷಣವನ್ನು ಮಾಡಿದರು. ಅಧ್ಯಕ್ಷರು ರೆವರೆಂಡ್ ಫಾದರ್ ಪ್ರೊಸ್ಪೆರಿಯೊ

ದಕ್ಷಿಣ ಕನ್ನಡ ಜಿಲ್ಲಾ ಪೋಟೆಲು ಪ್ರ್ಯಾಪರ್ಸ್ ಯೂನಿಯನ್ ಇವರ ಮಾಸಿಕ ಮಹಾಸಭೆಯೊಂದು ಇದೇ ತಾ ೧೯—೮—೩೪ರಲ್ಲಿ ಸಾಯಂಕಾಲ ಗಂಟೆ ೫-೩೦ಕ್ಕೆ ಬಿಲ್ಡರ ರಸ್ತೆಯಲ್ಲಿರುವ ಯೂನಿಯನ್ಸಿನ ಆಫೀಸಿನಲ್ಲಿ ಯೂನಿಯನ್ಸಿನ ಪ್ರೆಸಿಡೆಂಟರಾದ ಶ್ರೀ ರಂಗರಾವ್ ಕಲಬೇಡಿಕರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರ ಸಮಯೋಚಿತ ಭಾಷಣಗಳಾಗಿ ಆಫೀಸಿನ ಬದಲಾವಣೆ, ಕಾರ್ಯಕಾರಿ ಮಂಡಲಿಯ ಮೆಂಬರರ ಚುನಾವಣೆ ನಡೆದು ಸಭಾಂತ್ಯವಾಯಿತು

ಡಿ ಬೋರ್ಡ ಮೆಂಬರರಾದ ಶ್ರೀ ಕೆ ನೆರಕಪ್ಪ ಶೆಟ್ಟಿಯವರು ಜಿ ಪೆ ಕೌನ್ಸಿಲಿಗೂ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ

ಮಿ ಎಂ ಎಸ್ ಶ್ರೀನಿವಾಸ ಎಂ ಎಲ್ ಸಿ. ಇವರು ಲೆಜಿಸ್ಲೇಟಿವ್ ಕೌನ್ಸಿಲಿನ ಸ್ವತಂತ್ರ ಪಕ್ಷದ ಡೆಪ್ಯುಟಿ ಲೀಡರಾಗಿ ಚುನಾಯಿಸಲ್ಪಟ್ಟಿರುವರು

ಇಂಗ್ಲೆಂಡಿನಲ್ಲಿ ಬಾರ್-ಎಟ್-ಲಾ ಪರೀಕ್ಷೆಯಲ್ಲಿ ಕೃತಾರ್ಥರಾದ ದಿವಾನ್ ಬಹದೂರ್ ಉ ರಾಮರಾಯರ ಪುತ್ರ ಶ್ರೀ ನಾರಾಯಣರಾಯರು ಮಂಗಳೂರಿಗೆ ಹಿಂದಿರುಗಿರುವರು.

ಮಂಗಳೂರು ನಗರದ ಆರೋಗ್ಯಖಾತೆಯ ವರದಿಯಿಂದ ತಿಳಿದುಬರುವಂತೆ, ತಾ. ೧೮—೮—೩೪ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೫೫ ಜನನಗಳೂ ೩೩ ಮರಣಗಳೂ ಆಗಿರುವುವೆಂದು ತಿಳಿದುಬರುತ್ತದೆ.

ತಾ ೩೧ನೇಯ ಪ್ರಕಟಣೆಯ ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾ ಅಸ್ಪೃಶ್ಯ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯ ದ್ವಿತೀಯಾಧಿವೇಶನವು ಇದೇ ತಾ ೧೧ರಲ್ಲಿ ಅಸ್ಪೃಶ್ಯರಲ್ಲಿರುವ ಸದರಿ ಸಮಿತಿಯ ಕಾರ್ಯಾಲಯದಲ್ಲಿ ಜರಗಿ, ಶ್ರೀ ಎ. ಜಿ. ಶಾಸ್ತ್ರಿಗಳವರು ನಡೆಸಿಕೊಂಡು ಬರುವ ಮಂಗಳೂರು ಸಾಯಂ ಸಂಸ್ಕೃತ ಪಾಠಶಾಲೆಯನ್ನು ಸಮಿತಿಯ ಕಡೆಯಿಂದ ನಡೆಸುವುದಾಗಿ ತೀರ್ಮಾನಿಸಲ್ಪಟ್ಟಿರುತ್ತದೆ

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಗೆ ನಿಲ್ಲಲಾಶಿಸುವ ಪ್ರತಿನಿಧಿಗಳು ಹಲವರ ಕೆಲಸವು ಇಲ್ಲಿ ಆವಂಸದಿಂದ ನಡೆಯುತ್ತದೆ.

ಸ್ಥಳೀಯ ಶ್ರೀ ಕೃಷ್ಣ ಸಿನೇಮಾದಲ್ಲಿ ತಾ. ೩೦ರಿಂದ "ಗೋಪಾಲಕೃಷ್ಣ" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು. ನಪ್ಯದಲ್ಲಿಯೇ "ದಿ ಕೌಂಟೆಸ್ ಆಫ್ ಮೊಂಟಿಕ್ರಿಸ್ಟೊ" ಎಂಬ ಚಿತ್ರವು ಪ್ರದರ್ಶಿಸಲ್ಪಡಲಿದೆ.

## ಶಾರೀರಿಕ ಶಿಕ್ಷಣವನ್ನು ಹೇಗೆ ಕೊಡಬೇಕು?

ಮನುಷ್ಯ ಸಮಾಜದ ಸರ್ವತೋಮುಖವಾದ ಉನ್ನತಿಸಾಧನೆಗೆ ಸಾಮಾಜಿಕ, ಧಾರ್ಮಿಕ ಆರ್ಥಿಕ, ರಾಜಕೀಯ ಮೊದಲಾದ ಕಾರ್ಯಕ್ಷೇತ್ರಗಳಲ್ಲಿ ಕೆಲಸಮಾಡುವ ವಿಶೇಷಜ್ಞರು ಹೊಸ ಭಾವನೆಗಳಿಂದ ಪ್ರಭಾವಿತರಾಗಿ ಹೊಸ ಹೊಸ ಶೋಧಗಳನ್ನು ಮಾಡುತ್ತ ಸಫಲತೆಯನ್ನು ಪಡೆಯುತ್ತಿರುವಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಬಾಲಬಾಲಿಕೆಯರ ತಿದ್ದುವಿಕೆ ಮತ್ತು ಬೋಧನಾಕ್ರಮದಲ್ಲಿಯೂ ಎಷ್ಟೋ ಪರಿವರ್ತನೆಗಳನ್ನೂ ಶೋಧನೆಗಳನ್ನೂ ಮಾಡಿ ಸಫಲರಾಗುತ್ತಿರುವುದು ಕೇಳಿ ತಿಳಕೊಂಡ ಮಾತಾಗಿದೆ. ಶಿಕ್ಷಣದ ಧ್ಯೇಯ ಮತ್ತು ಉದ್ದೇಶಗಳ ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ವಿಚಾರಮಾಡುವ ಮುಖಂಡರೊಳಗೆ ಭಿನ್ನಾಭಿಪ್ರಾಯಗಳಿರುವುವಾದರೂ ಮನುಷ್ಯನ ಮತ್ತು ಅವನ ಸಮಾಜದ ಉತ್ಕರ್ಷಕ್ಕಾಗಿ ಅವನಿಗೆ ಮಾನಸಿಕ ಶಿಕ್ಷಣ ಮಾತ್ರವಲ್ಲ, ಅದರ ಜೊತೆಗೆ ಶಾರೀರಿಕ ಮತ್ತು ನೈತಿಕ ಅಥವಾ ಧಾರ್ಮಿಕ ಶಿಕ್ಷಣಗಳೂ ದೊರೆಯುವುದು ಪರಮಾವಶ್ಯಕವೆಂಬುದನ್ನು ಪ್ರತಿ ಮಾತೆತ್ತದೆ ಎಲ್ಲರೂ ಒಪ್ಪುವರು. ಮೊದಮೊದಲು ಮಾನಸಿಕ ಶಿಕ್ಷಣಕ್ಕಷ್ಟೇ ಪ್ರಾಧಾನ್ಯವಿರುತ್ತಿತ್ತಾದರೂ ಈಗ ಶಾರೀರಿಕ ನೈತಿಕ ಶಿಕ್ಷಣಗಳ ಮಹತ್ವವನ್ನು ಶಿಕ್ಷಣವೇತ್ತರು ಅನುಭವ ಮಾಡಿಕೊಡಗಿದ್ದಾರೆ. ಹೀಗಾಗಿ ಶಾಲೆಗೊಂದು ಆಟದ ಬಯಲು ಮತ್ತು ಪ್ರಾರ್ಥನಾ ಮಂದಿರ, ಅದರ ಜೊತೆಗೆ ಶಾರೀರಿಕ ಮತ್ತು ನೈತಿಕ ಶಿಕ್ಷಣವನ್ನು ಕೊಡುವ ಏರ್ಪಾಡು ಇಲ್ಲದೆ ಹೋದರೆ ಆ ಶಾಲೆಯನ್ನು ದ್ವಿತೀಯ ಅಥವಾ ತೃತೀಯ ಶ್ರೇಣಿಯ ಶಾಲೆ ಎಂದು ನಾಮಕರಣ ಮಾಡುವ ಕಾಲವು ಬಂದೊದಗಿದೆ.

ಶಾರೀರಿಕ, ಮಾನಸಿಕ ನೈತಿಕ ಶಿಕ್ಷಣವನ್ನು ಪಡೆದ ಬಾಲಬಾಲಿಕೆಯರು ಗಟ್ಟಿಮುಟ್ಟಾದ ದೇಹ, ಆರೋಗ್ಯ, ದೃಢವಾದ ಮನಸ್ಸನ್ನು ಸಂಪಾದಿಸುವರು ಮಾತ್ರವಲ್ಲದೆ ಅಂಥ ಆದರ್ಶ ಶಿಕ್ಷಣದ ಮೂಲಕ ಶಿಸ್ತು ವ್ಯವಸ್ಥೆಗೆ ಒಳಪಟ್ಟ ಆಬಾಲ ಬಾಲಿಕೆಯರು ತಮ್ಮ ಜೀವನಕ್ರಮವನ್ನು ಬೇಕಾದಂತೆ ತಿದ್ದಿಕೊಂಡು ಜೀವನದ ಸಮಸ್ತ ಸುಖಗಳನ್ನು ಅನುಭವಿಸಲಿಕ್ಕೆ ಸಮರ್ಥರಾಗುವರು. ಮಕ್ಕಳು ದೇಹಾರೋಗ್ಯವನ್ನು ಸಂಪಾದಿಸಲಿಕ್ಕೂ, ತಮ್ಮ ಮನೋರಂಜನೆ ಮಾಡಿಕೊಳ್ಳಲಿಕ್ಕೂ ಜೀವನವನ್ನು ಕ್ರಮಬದ್ಧವಾಗಿಟ್ಟುಕೊಳ್ಳಲಿಕ್ಕೂ ಶಾರೀರಿಕ ಶಿಕ್ಷಣವು ಅಗತ್ಯವಾಗಿದೆ. ಅದರಂತೆಯೇ ಜಗತ್ತಿನ್ನೋನ್ನತಿ ಸಾಧನೆಗೆ ಧಾರ್ಮಿಕ ಶಿಕ್ಷಣವು ಸಹಕಾರಿಯಾಗಿದೆ. ಈ ಬಗೆಯ ಶಿಕ್ಷಣವು ಸಾಮಾಜಿಕ ರಾಜಕೀಯ ದೃಷ್ಟಿಯಿಂದಲೂ ಮಹತ್ವವುಳ್ಳದ್ದಾಗಿದೆ. ಶರೀರ ಮನಸ್ಸು ಆತ್ಮ ಇವುಗಳ ಕ್ರಮಬದ್ಧವಾದ ಉನ್ನತಿಯನ್ನು ಸಾಧಿಸಿಕೊಂಡ ವ್ಯಕ್ತಿಗಳಿಂದ ಕೂಡಿದ ಸುಸಂಘಟಿತ ಸಮಾಜದಿಂದ ಲೋಕೋಪಕಾರವು ಬಹಳ ಆಗಿ ಅದು ಜಗತ್ತಿನ ಆದರ ಗೌರವಗಳಿಗೆ ಪಾತ್ರವಾಗುತ್ತದೆ. ಅದರ ಮಾನಮರ್ಯಾದೆಗಳು ಹೆಚ್ಚುತ್ತವೆ. ಆ ಸಮಾಜದ ಮೇಲೆ ಇತರ ಸಮಾಜಗಳ ಆಕ್ರಮಣಗಳಾಗುವುದಿಲ್ಲ. ಆದರೆ ಅಂಥ ಆಕ್ರಮಣಗಳನ್ನು ಆ ಸಮಾಜವು [illegible] ದೃಷ್ಟಿಯಿಂದ [illegible] ಸಮಾಜವು [illegible] ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೂ, [illegible] ಯೋಗ್ಯತೆ [illegible] ಆದದರಿಂದ ಮನುಷ್ಯನಿಗೆ ಮಾನಸಿಕ ಶಿಕ್ಷಣವು ಎಷ್ಟು ಆವಶ್ಯಕವೋ ಅಷ್ಟೇ ಕಡಿಮೆಯಾಗದೆ ಶಾರೀರಿಕ ಮತ್ತು ನೈತಿಕ ಶಿಕ್ಷಣವೂ ಅಗತ್ಯವಾಗಿರುತ್ತದೆ.

ಈ ಲೇಖದಲ್ಲಿ ಶಾರೀರಿಕ ಶಿಕ್ಷಣವನ್ನು ಹೇಗೆ ಕೊಡಬೇಕೆಂಬುದನ್ನಷ್ಟೇ ವಿಚಾರಿಸುವೆವು. ಶಾಲೆಗಳಲ್ಲಿ ಶಾರೀರಿಕ ಶಿಕ್ಷಣದ ಬೀಜಾರೋಪಣ ಮಾಡುವವರು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು. ಈ ಭಾಗದಲ್ಲಿ ಅವರು ಮಾಡತಕ್ಕ ಕಾರ್ಯಗಳು ಬಹಳ ಇವೆ. ಇಲಾಖೆಯ ನಿರ್ಬಂಧವಿರುವುದೆಂಬುದರಿಂದ ಮಾತ್ರ ವಾರದಲ್ಲಿ ಒಂದೆರಡು 'ಪೀರಿಯಡ್ಸು'ಗಳಲ್ಲಿ ಡ್ರಿಲು-ಆಟಗಳನ್ನು ಹೇಗೆ ಹಾಗೆ ಕಲಿಸಿ ಉಪೇಕ್ಷೆಯಿಂದಿರುವುದರಿಂದ ಶಾರೀರಿಕ ಶಿಕ್ಷಣವನ್ನು ಕೊಟ್ಟಂತಾಗುವುದಿಲ್ಲ. ಉಪಾಧ್ಯಾಯರ ಈ ತರದ ಮನೋಭಾವವು ಕ್ಷಮ್ಯವಾಗಿರುವುದಿಲ್ಲ. ಅಂದು ಕೊಂಡೇ, ಮದ್ರಾಸು ಸರಕಾರದ ಅಸಿಸ್ಟೆಂಟ್ ಫಿಜಿಕಲ್ ಡೈರೆಕ್ಟರರಾದ ಡಾ| ಎಂಡ್ರ್ಯೂಸರು ಒರಹಾಂಪುರದ ಟ್ರೈನಿಂಗ್ ಶಾಲೆಯಲ್ಲಿ ತರಬೇತಿ ಹೊಂದಲಿಕ್ಕೆ ಬಂದ ಉಪಾಧ್ಯಾಯರನ್ನು ಉದ್ದೇಶಿಸಿ- "ಉಪಾಧ್ಯಾಯ ವೃತ್ತಿಯು ಘನವಾದುದು. ತಮ್ಮ ಹೆಗಲ ಮೇಲಿರುವ ಉತ್ತರದಾಯಿತ್ವದ ಭಾರವನ್ನು ಉಪಾಧ್ಯಾಯರು ಚೆನ್ನಾಗಿ ಅನುಭವ ಮಾಡಬೇಕು. ಉಪಾಧ್ಯಾಯರ ಪರಿಶ್ರಮ ಮತ್ತು ವೃತ್ತಿಯ ಘನತೆಗೆ ತಕ್ಕಷ್ಟು ತಲಬು ದೊರೆಯುತ್ತಿರುವುದಿಲ್ಲ. [illegible] ಆದರೂ ಈ ಒಂದು ಆರ್ಥಿಕ ಕಾರಣವನ್ನು [illegible] ತಮ್ಮ ಕಾರ್ಯವನ್ನು [illegible] ನಿರ್ವಹಿಸುವ [illegible] ವ್ಯಕ್ತಿಗೆ [illegible] ಬುದ್ಧಿ [illegible] ಕರ್ತವ್ಯಗಳನ್ನು [illegible] ಮಕ್ಕಳ ಮಾನಸಿಕ [illegible] ಶಾರೀರಿಕ [illegible] [illegible]

ಡಾ| ಎಂಡ್ರ್ಯೂಸರು ಶಾರೀರಿಕ ಶಿಕ್ಷಣದ ವಿಶೇಷಜ್ಞರು. ಮೇಲೆ ಹೇಳಿದ ಅವರ ಮಾತುಗಳು ಹಲವು ಉಪಾಧ್ಯಾಯರಿಗೆ ರುಚಿಸದಿರಬಹುದು. ಪರಂತು ಮಕ್ಕಳಿಗೆ ಶಾರೀರಿಕ ಶಿಕ್ಷಣವನ್ನು ಹೇಗೆ ಕೊಡಬೇಕೆಂದು ಅವರು ಹೇಳಿದ ಕೆಳಗಿನ ಮಾತುಗಳಂತೆ ವರ್ತಿಸುವುದರಿಂದ ಪ್ರಯೋಜನವಿದೆ. ಡಾ| ಎಂಡ್ರ್ಯೂಸರು ಮುಂದೆ ಅಂದದ್ದೇನೆಂದರೆ,—"ಮಕ್ಕಳಿಗೆ ಶಾರೀರಿಕ ಶಿಕ್ಷಣವನ್ನು ಕೊಡುವಾಗ ಉಪಾಧ್ಯಾಯರು ಮೂರು ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಲಿ. ಮೊದಲನೆಯದಾಗಿ ಅವರು ದೂರದಲ್ಲಿ ನಿಂತು ಮಕ್ಕಳಿಗೆ ಆಜ್ಞಾಪಿಸುತ್ತ ಅಥವಾ ಬೆತ್ತದ ಉಪಯೋಗ ಮಾಡುತ್ತ ಇರಬಾರದು. ಮಕ್ಕಳೊಡನೆ ಕೂಡಿ, ಓಡಿ, ಆಡಿ, ನಲಿದು ತಾನೂ ಅವರೊಳಗೆ ಒಬ್ಬನಾಗಿ ಪ್ರತ್ಯಕ್ಷ ದೃಷ್ಟಾಂತದ ಮೂಲಕ ಆಟಗಳನ್ನು ಕಲಿಸಬೇಕು. ಹೀಗೆ ಮಾಡುತ್ತಿರುವುದರಿಂದ ಮಕ್ಕಳ ಮನೋರಂಜನೆಯಾಗುವುದಲ್ಲದೆ, ಅವರು ಆ ಆಟಗಳಲ್ಲಿ ಹೆಚ್ಚೆಚ್ಚು ಆಸಕ್ತಿಯನ್ನು ತೋರಿಸುವಂಥವರಾಗಿ ಸ್ವೇಚ್ಛೆಯಿಂದ ಅವುಗಳನ್ನು ಕಲಿಯುವರು. ಈ ಉಪಾಯದಿಂದ ಮಕ್ಕಳೊಳಗೆ ಶಿಸ್ತು ವ್ಯವಸ್ಥೆಯ ಸ್ಥಾಪನೆಯೂ ಸುಲಭವಾಗುತ್ತದೆ. ಎರಡನೆಯದಾಗಿ ಮಕ್ಕಳ ಆವಶ್ಯಕತೆ ಮತ್ತು ಅವರ ದೇಹಸ್ಥಿತಿಯನ್ನು ಪರ್ಯಾಲೋಚಿಸಿಯೇ ಉಚಿತ ಆಟಗಳನ್ನು ಅವರಿಗೆ ಕಲಿಸಬೇಕು. ಮೂರನೆಯದಾಗಿ ಹಾಗೆ ಉಪಾಧ್ಯಾಯರು ಆರಿಸಿ ತೆಗೆದ ಆಟಗಳು ಮಕ್ಕಳಿಗೆ ಚಿತ್ತಾಕರ್ಷಕ ಮತ್ತು ಅವರೊಳಗೆ ಕುತೂಹಲವನ್ನುಂಟುಮಾಡುವಂಥವುಗಳಾಗಿದ್ದು ನೂತನವಾಗಿಯೂ ವಿಜಾತೀಯವಾಗಿಯೂ ಇರಬೇಕು."

ಕಟಪಾಡಿ ಶ್ರೀನಿವಾಸ ಶೆಣೈ.


# For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

## ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

**Estimates Submitted without obligation**

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

**Electric fans, Household appliances, Table lamps,**

**Very Attractive chandeliers and other fittings**

**Everything in Electricity**

## Goods supplied on approval and guarantee of Manufacture

***First class Goods First class Work First class Attendance***

**An Enquiry at our Electrical Show Rooms will cost you Nothing**

**And**

**Will gain You excellent Service.**

## The Canara Public Conveyance Company Ltd., Kodialbail Mangalore.

# ತಾಲೂಕುಗಳಿಂದ.

**ಕಾರ್ಕಳ**— ಹೆಚ್ಚಿಸಿದ ನೆಲತೆರಿಗೆಗಳಿಂದ ವಿಶೇಷ ಕಷ್ಟಗಳಿಗೆ ಗುರಿಯಾದ ಇಲ್ಲಿಯವರು ತಮ್ಮ ಕಷ್ಟಗಳನ್ನು ರೆವಿನ್ಯೂ ಇಲಾಖೆಯ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುವರು. ಅಧಿಕಾರಿಗಳು ಸಹಾನುಭೂತಿಯಿಂದ ವರ್ತಿಸುವರೆಂದು ಆಸೆ ಇದೆ.

ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ಸಿನ ಕಡೆಯಿಂದ ಸದಸ್ಯರಾಗುವವರು ಅಭ್ಯಾಸ ಪೂರ್ವಕ ಖದ್ದರ ಧರಿಸುವವರಾಗಿರಬೇಕೆಂದೂ ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ್ಸಿನ ಹೆಸರಿನಲ್ಲಿ ಸ್ಥಾನವನ್ನಾಕ್ರಮಿಸುವ ಆತುರದಲ್ಲಿ ತತ್ವವನ್ನು ಬಿಟ್ಟುಕೊಡುವದು ಸಮಂಜಸವಾಗಿರುವದಿಲ್ಲವೆಂದೂ ಇಲ್ಲಿಯ ಕಾಂಗ್ರೆಸ ಮಂಡಲಿಯ ಅಭಿಪ್ರಾಯವಿರುತ್ತದೆ. ಜಿಲ್ಲಾ ಸಿವಿಲ ಬೋರ್ಡಿನವರು ಈ ಕಡೆಗೆ ಲಕ್ಷ್ಯವೀಯಬೇಕೆಂದು ಅಪೇಕ್ಷಿಸುತ್ತೇವೆ.

**ಫರಂಗಿಪೇಟೆ**— ಇಲ್ಲಿಯ ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳ ತರ್ಕ ಸಂಘದ ಸಭೆಯು ಜನಾಬ ಕಮರುದ್ದೀನ್ ಗೌರಿ, ಬಹದ್ದೂರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ನೆರೆದ ವಿದ್ಯಾರ್ಥಿಗಳಿಗೆ ಪಾರಸೀ ದೇಶದ ಕುರಿತು ತನ್ನ ಅನುಭವವನ್ನು ಇತ್ತರು.—"ಪಾರಸೀ ದೇಶದ ಮುಖ್ಯ ಉತ್ಪತ್ತಿಯು ಮಣ್ಣೆಣ್ಣೆಯಾಗಿರುವುದು. ಈ ಕಾರಖಾನೆಗಳಲ್ಲಿ ಅನೇಕ ಮಂದಿ ಹಿಂದೂ ದೇಶದವರು ಕೆಲಸ ಮಾಡುತ್ತಿರುವರು. ಅಲ್ಲಿಯ ಜನರು ವಿಶೇಷವಾಗಿ ಶ್ರೀಮಂತರಲ್ಲಿ ಎಲ್ಲೆಲಿಯೂ ಬಡತನವೇ ಕಂಡು ಬರುವುದು. ಹತ್ತು ಸಂವತ್ಸರಗಳ ಹಿಂದೆ ಊರಸಂಗಿ ಬದ್ದಾ ಎಂಬ ಒಂದು ಭೀಕರ ರಾಕ್ಷಸೀಯ ಜನರಿಂದ ತಂಡಾ ಉಪದ್ರವವಿತ್ತು. ಇವರು ಕಾಡುಗುಡ್ಡಗಳಲ್ಲಿ ವಾಸಿಸಿ ಕೊಲೆ, ಸುಲಿಗೆ ಮುಂತಾದವುಗಳಿಂದ ಜೀವನವನ್ನು ನಡಿಸುವವರಾಗಿದ್ದರು. ಆದರೆ ಈಗ ಮಾತ್ರ ಸರಕಾರವು ಅವರ ಪಟ್ಟನ್ನೇ ಅಡಗಿಸಿರುವುದು. ಅರಬಿಯವರು ಪ್ರಸಿದ್ಧ ಪೈಗಂಬರ್‌ನ ಅನುಯಾಯಿಗಳಾದುದರಿಂದ ಅದರಲ್ಲಿ ನನಗೆ ಹೊರತು ತುಂಬಾ ಅಭಿಮಾನವಿತ್ತು. ಅವರ ಸುಶೀಲರೂ, ದಯಾಗುಣದವರೂ ಮುತ್ತು ಉಪಕಾರಿಗಳೂ ಆಗಿರಬೇಕು ಎಂದು ನನ್ನ ಭರವಸೆ ಇತ್ತು. ಆದರೆ ಅಲ್ಲಿಯ ಸ್ಥಿತಿಯನ್ನು ನೋಡಿದರೆ ಖೇದವಾಗುವುದು. ಕಾರಣ ಈ ಅರಬಿಯವರು ಪೂರ್ವಕಾಲದಿಂದ ಮಕ್ಕಳವರೆಗೆ ಸ್ತ್ರೀಯರಾದಿ ಪುರುಷರ ಗಲ್ಲ, ಕೊಲೆ ಸುಲಿಗೆ ನಡಿಸುವುದೇ ತಮ್ಮ ಜೀವನದ ಮುಖ್ಯ ಕರ್ತವ್ಯವೆಂದು ತಿಳಿದುಕೊಂಡ ಹಾಗೆ ಕಂಡು ಬರುತ್ತದೆ. ಅವರು ತಮ್ಮ ಜೀವದ ಮೇಲೆ ಆಶೆ ಇರುವುದಿಲ್ಲ. ಇತರರು ಬದುಕಿ ಇರಬೇಕೆಂದು ಬಯಸುವುದೂ ಇಲ್ಲ. ಇವರು ಮಾನವ ರಕ್ತದಿಂದ ತೃಪ್ತಿಗೊಂಡ ನರಭಕ್ಷಕರ ಹಾಗೆ ಇರುವರು. ಇತರ ಪೀಡನೆಯೂ ಮೊತ್ತವಿದಲು ಬಹಳ ಇತ್ತು. ಈಗ ಮಾತ್ರ ಕಡಿಮೆಯಾಗಿರುವುದು.

ಪಾರಸೀ ದೇಶದ ಹುಡುಗರಿಗೆ ಪೋಷಕ ಪದ್ಧತಿ ಇರುವುದಿಲ್ಲ. ಅಲ್ಲಿಯ ಅರಸನು ವರ್ಷಂಪ್ರತಿ ಐದು ನೂರು ತರುಣರನ್ನು ಅನ್ಯ ದೇಶಗಳಿಗೆ ಕೈಗಾರಿಕೆ ಕಲಿತುಕೊಳ್ಳುವರೆ ಕಳುಹಿಸುತ್ತಿರುವನು. ಈ ವಿದ್ಯಾರ್ಥಿಗಳಿಗೆ ಸರಕಾರದಿಂದ ವೆಚ್ಚಕ್ಕೆ ಹಣವು ಸಿಗುತ್ತಿರುವುದು. ಹಿಂದೂ ದೇಶದವರನ್ನು ಪಾರಸೀಕರು ಉತ್ತಮ ದೃಷ್ಟಿಯಿಂದ ಕಾಣುವುದಿಲ್ಲ. ಕೆಲವು ಬಹಳೇ ಮಂದಿ ಇದ್ದರೂ ಗುಲಾಮರಾಗಲಿಕ್ಕೆ ಯೋಗ್ಯರಲ್ಲದೆ ಇನ್ನಾವ ಕೆಲಸಕ್ಕೂ ನಿಷ್ಪ್ರಯೋಜನ ಇವೇ ಮೊದಲಾದ ವಿಷಯಗಳನ್ನು ಹೇಳಿದ ಬಳಿಕ ಸಂಘದ ಅಧ್ಯಕ್ಷರಿಂದ ಧನ್ಯವಾದಗಳು ಅರ್ಪಿಸಲ್ಪಟ್ಟವು. ಆ ಬಳಿಕ ಸಭೆಯು ರಾಷ್ಟ್ರಗೀತದೊಂದಿಗೆ ಕೊನೆಗೊಂಡಿತು.

**ಕಟಪಾಡಿ**—ತಾ. ೧೯–೮–೧೯೩೧ನೇ ಮಂಗಳವಾರ ದಿನ, ದಿವಂಗತ ಕೀರ್ತಿಶೇಷ ಉಸ್ಮಾನ್ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ, ಹಾಜಿ ಕಾಸಿಮ್ ಸಾಹೇಬ ಬಹದ್ದೂರರವರ ಸ್ಮಾರಕಾರ್ಥವಾಗಿ ಇಡೀ ಊರಲ್ಲಿ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟು ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಂಜೆ ೪ ಗಂಟೆಗೆ ಇಲ್ಲಿಯ ಶ್ರೀ ವೆಂಕಟ್ರಮಣ ಸ್ವಾಮಿ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಊರ ಪ್ರಮುಖರೆಲ್ಲಾ ಇಲ್ಲಿಯ ಅಧ್ಯಾಪಕ ಶ್ರೀಯುತ ಮೂಳ್ಕಿ ದಾಮೋದರ ಶೆಣೈಯವರ ಅಧ್ಯಕ್ಷತನದಲ್ಲಿ ದಿವಂಗತರ ದುಃಖ ಸೂಚನೆಗಾಗಿ ಸಭೆ ಸೇರಿಸಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರೂ, ಕುರ್ಕಾಲು ಗಣಪಯ್ಯ ಶೆಟ್ಟರೂ, ಕೆ ಪಿ. ಕಾಮತರೂ ಡಾಕ್ಟರ್ ಜೆ. ಜೆ. ಕಿಣಿ ವಗೈರೆ ಹಲವು ಸದ್ಗೃಹಸ್ಥರು ಯಥೋಚಿತವಾಗಿ ದಿವಂಗತರ ಗುಣಕಥನವನ್ನು ವಿವರಿಸಿ ಸೂರ್ಯವಾಗಿ ಹೇಳಿ ತಮ್ಮ ಸಹಸಂತಾಪವನ್ನು ಪ್ರದರ್ಶಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

**ಹಿರಿಯಡ್ಕ**— ಇದೇ ತಾ. ೧೯–೮–೧೯೩೧ನೇ ಬುಧವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಸ್ಥಳೀಯ ಆರ್ಯ ಸಮಾಜ ಮಂದಿರದಲ್ಲಿ, ಉಪಕರ್ಮ ಸಮಾರಂಭವು ಎಚ್. ಕೆ. ಅನಂತಯ್ಯನವರ ಪೌರೋಹಿತ್ಯದಲ್ಲಿ ನೆರವೇರಿಸಲ್ಪಟ್ಟಿತು. ಅಂದು 'ಯಜ್ಞೋಪವೀತದ ಮಹತ್ವ' ಎಂಬ ಕುರಿತು ಶ್ರೀಯುತ ಎಚ್. ಕೆ. ಅನಂತಯ್ಯನವರು ಸುರಸವಾಗಿ ವ್ಯಾಖ್ಯಾನ ಮಾಡಿದರು.

**ಉಡುಪಿ**—ತಾ ೧೦ಕ್ಕೆ ತುಳುನಾಡು ಛಾಪಖಾನೆಯ ವಠಾರದಲ್ಲಿ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯ ಮಹಾಸಭೆಯು ಡಾ ಪಿ. ಜಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡಿಗೆ ಕಾಂಗ್ರೆಸು ಉಮೇದ್ವಾರರು ಸತತ ಖಾದಿಧಾರಿಗಳಿರಬೇಕೋ ಬೇಡವೋ ಎಂದು ದೀರ್ಘ ಚರ್ಚೆ ನಡೆಯಿತು. ಕೊನೆಗೆ ಸತತ ಖಾದಿ ಧಾರಣವನ್ನು ಜಿಲ್ಲಾ ಬೋರ್ಡು ಕಾಂಗ್ರೆಸು ಉಮೇದ್ವಾರರು ಕೈಕೊಳ್ಳುವ ಹಾಗೆ ಶರ್ತಹಾಕಬೇಕಾಗಿ ಜಿಲ್ಲಾ ಸಿವಿಲ್ ಬೋರ್ಡಿಗೆ ಶಿಫಾರಸು ಮಾಡುವ ಠರಾವು ಬಹುಮತದಿಂದ ಮಂಜೂರಾಯಿತು. ಶ್ರೀ ಗಳಾದ ಡಾ. ಪಿ ಜಿ. ಆಚಾರ್ಯ, ಎಮ್ ವಿಟ್ಠಲ ಕಾಮತ್ ಬಾಳಕಟ್ಟ ಕೃಷ್ಣಯ್ಯ ಹೆಗ್ಡೆಯವರನ್ನು ಜಿಲ್ಲಾ ಸಿವಿಲ್ ಬೋರ್ಡಿನ ಆಡಳಿತ ಕಮಿಟಿಗೆ ಪ್ರತಿನಿಧಿಗಳಾಗಿ ಆರಿಸಲಾಯಿತು.

ತಾ ೧೬ಕ್ಕೆ ಸ್ಥಳೀಯ ವಿಕ್ಟೋರಿಯಾ ಜುಬಿಲಿಯೂನಿಯನ್ ಕ್ಲಬ್ಬಿನಲ್ಲಿ ಶ್ರೀ ಎಮ್ ವಿಟ್ಠಲ ಕಾಮತ್, ಬಿ ಎ ಬಿ ಎಲ್ ವಕೀಲ ಇವರ ಅಧ್ಯಕ್ಷತೆಯಲ್ಲಿ ಉಡುಪಿ ಪುರಜನರ ಮಹಾಸಭೆ ಸೇರಿತು. ಸರಕಾರದವರು ಉಡುಪಿ ಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಜೋಡಿಸುವ ತಮ್ಮ ಇರಾದೆಯನ್ನು ಪ್ರಕಟಿಸಿದುದಕ್ಕೆ ನಿಷೇಧ ಸೂಚಿಸುವುದೇ ಸದರಿ ಸಭೆಯ ಉದ್ದೇಶವಾಗಿತ್ತು. ತಾ ೧೩ನೆಗೆ ನಿಧನರಾದ ಖಾನಾ ಬಹದ್ದೂರ್ ಹಾಜಿ ಅಬ್ದುಲ್ಲಾ ಸಾಹೇಬರ ನಿಧನದ ಬಗ್ಗೆ ಊರಿನ ಸಹಸಂತಾಪವನ್ನು ಸೂಚಿಸುವದೆ ಇದೇ ತಾ ೧೮ನೇ ಆದಿತ್ಯವಾರ ಅದೇ ಸ್ಥಳದಲ್ಲಿ ಜಾಹೀರ ಸಭೆ ಸೇರಿಸಬೇಕಾಗಿ ಅಧ್ಯಕ್ಷರ ಅಂದೋಲನವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಅನಂತರ ಕಾರ್ಯಕ್ರಮವನ್ನು ಪ್ರಾರಂಭಿಸಿ ಈ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದುವು. (೧) ಹಿಂದೆ ಮುಖ್ಯ ಮಂತ್ರಿ ಮೊದಲಾದವರಿಗೆ ಮಹಾನ್ ಸಭೆಯ ಮೂಲಕ ಉಡುಪಿಗೆ ಮುನಿಸಿಪಾಲಿಟಿಯನ್ನು ಸದ್ಯ ಕೂಡಬಾರದೆಂದು ಸರಕಾರಕ್ಕೆ ಪ್ರಾರ್ಥಿಸಿಕೊಂಡಿದ್ದಾಗ್ಯೂ ಉಡುಪಿ ಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಕೂಡಿಸ ತಮ್ಮ ಇರಾದೆಯನ್ನು ಸರಕಾರವು ಪ್ರಕಟಿಸಿದ್ದಕ್ಕೆ ಊರ ಮಹಾಜನ ಸಭೆಯವರಾಗಿ ನಿಷೇಧಿಸುತ್ತಾರೆ. (೨) ಯಾವುದೇ ಕಾಲ ಕ್ರಮೇಣ ಸ್ಥಳಿಕ ವ್ಯವಸ್ಥೆಯಿಂದ ಸಾರ್ವಜನಿಕ ಜನರ ಯೋಗಕ್ಷೇಮವನ್ನು ಕಾಪಾಡಲು ಬೇಕೆಂದು ಸರಕಾರದ ಘೋಷಣವಿದ್ದಲ್ಲಿ ಪಂಚಾಯತ ಬೋರ್ಡನ್ನಾದರೂ ದಯಪಾಲಿಸಿದ್ದಲ್ಲಿ ಅದನ್ನು ಯಶಸ್ವಿಯಾಗುವರೆಗೆ ಪ್ರಯತ್ನಿಸುವೆವು (೪) ಉಡುಪಿ ಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಸದ್ಯ ಮುಂದರಿಸಬೇಕೆಂದು ಸರಕಾರಕ್ಕೆ ಮಾನ್ಯಪಡಿಸುವರೆ ಆರು ಗೃಹಸ್ಥರುಳ್ಳ ಒಂದು ಡೆಪ್ಯುಟೇಶನನ್ನು ಮಾನ್ಯ ಮದ್ರಾಸು ಗವರ್ನರರ ಭೇಟಿಗೆ ಕಳುಹಿಸಿ ತಮ್ಮ ಅಹವಾಲುಗಳನ್ನು ತಿಳಿಯಗೊಡಿಸಬೇಕು.

ಮುಂಚಿತವಾಗಿ ನಿರ್ಧರಿಸಲಾಗಿದ್ದಂತೆ ತಾ ೧೮ನೇ ಆದಿತ್ಯವಾರ ಸಾಯಂಕಾಲ ೫–೩೦ಕ್ಕೆ ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಪುರಜನರ ಮಹಾಸಭೆ ಸೇರಿತು. ಈ ಆರೂರು ಲಕ್ಷ್ಮೀನಾರಾಯಣ ರಾವ್, ಬಿ ಎ ಬಿ ಎಲ್ ಎಡ್ವೋಕೇಟರು ಅಧ್ಯಕ್ಷರಾಗಿದ್ದರು. ತಾ ೧೩ಕ್ಕೆ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರ್ ಇವರ ಮೃತ್ಯುವಶರಾದ ಬಗ್ಗೆ ಊರವರು ತಮ್ಮ ದುಃಖವನ್ನು ಸೂಚಿಸಿ ಮೃತರ ಕುಟುಂಬದವರೊಡನೆ ತಮ್ಮ ಸಹಸಂತಾಪವನ್ನು ಅರುಹಿ ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ದೇವರಲ್ಲಿ ಪ್ರಾರ್ಥಿಸುವುದೇ ಮೊದಲನೇ ಠರಾವು ಆಗಿದ್ದಿತು. ಮಾನ್ಯ ಅಧ್ಯಕ್ಷರು ದಿವಂಗತರ ಗುಣಕಥನವನ್ನು ಸ್ವಲ್ಪ ಹೇಳುತ್ತಾ ಮಾಡಿ ಸದರಿ ನಿರ್ಣಯವನ್ನು ಸಭೆಯ ಮುಂದಿಡಲು ಶ್ರೀ ಕೋರದ್ಕಲ್ ಶ್ರೀನಿವಾಸ ರಾಯರನ್ನೂ ಅದನ್ನು ಅನುಮೋದಿಸಲಿಕ್ಕೆ ಶ್ರೀ ಎಮ್ ವಿಟ್ಠಲ ಕಾಮತರನ್ನು ಕೇಳಿಕೊಂಡರು. ಇವರೂ ರೆವರೆಂಡ್ ಪಿ ಸೋನ್ಸ್, ಮಿ ಜಿ ಪಿ ರೇಗೊ, ಶ್ರೀ ಎಸ್ ರಾಜಗೋಪಾಲ ಕೃಷ್ಣರಾವ್, ಶ್ರೀ ಎಸ್ ಅನಂದರಾವ್, ಶ್ರೀ ಪಿ ಗಾಂಧಿಂ ನಾಯಕ ಕೊನೆಗೆ ಮಾನ್ಯ ಅಧ್ಯಕ್ಷರೂ ಪರಿ ಭಾಷಣವಾಗಿ ದಿವಂಗತರ ಗುಣ ವಿಶೇಷಗಳನ್ನು ಹಲವು ಬಗೆಗಳಲ್ಲಿ ವೇದ್ಯಪಡಿಸಿ, ಉಡು

# ಮಂಗಳೂರು.

ಹವಾಗುಣವು ಅನುಕೂಲಿಸಿದರೆ, ದಿ ಬೋಂಬೇ ಸ್ಟೀಂ ನೇವಿಗೇಶನ್ ಕಂಪೆನಿಯ ಸರಕು ಮತ್ತು ಪ್ರಯಾಣಿಕರ ಸ್ಟೀಮರು ಇದೇ ೧೯೩೧ನೇ ಇಸವಿ ಸಪ್ಟಂಬರ ತಾರೀಕು ೧೦ನೇ ದಿನ ಮೊದಲ್ಗೊಂಡು ಪ್ರತಿ ಮಂಗಳವಾರ ಮುಂಬಾಯಿಯಿಂದ ಹೊರಟು ಅದೇ ಗುರುವಾರ ಬೆಳಿಗ್ಗೆ ೯ ಘಂಟೆಗೆ ಇಲ್ಲಿಗೆ ತಲಪಿ, ಮರುದಿನ ಅಂದರೆ ಶುಕ್ರವಾರ ಬೆಳಿಗ್ಗೆ ೧೦ ಘಂಟೆಗೆ ಹಿಂತಿರುಗಿ ಆದಿತ್ಯವಾರ ದಿನ ಬೆಳಿಗ್ಗೆ ೭ ಗಂಟೆಗೆ ಮುಂಬಾಯಿಗೆ ತಲಪುವುದು, ಹೋಗುವಾಗಲೂ ಬರುವಾಗಲೂ ಅದು ನಿತ್ಯದಂತೆ ತದ್ರಿ ಮತ್ತು ಕೊನ್ನಾವರ ಬಂದರುಗಳಲ್ಲಲ್ಲದೆ ಮಿಕ್ಕ ಎಲ್ಲಾ ಬಂದರುಗಳಲ್ಲಿಯೂ ತಂಗುವುದು. ಶುಕ್ರವಾರಗಳಲ್ಲಿ ಮಂಗಳೂರಿನ ಪ್ರಯಾಣಿಕರು ಬೆಳಿಗ್ಗೆ ೮–೪೫ಕ್ಕೆ ಸ್ಟೀಮರು ಹತ್ತಬೇಕಾಗುವುದು. ಇದೇ ರೀತಿ ಈ ಕಂಪೆನಿಯ ಸರಕು ಮತ್ತು ಪ್ರಯಾಣಿಕರ ಒಂದು ಸ್ಟೀಮರು ೧೯೩೧ನೇ ಸಪ್ಟಂಬರ ೧೧ನೇ ಶುಕ್ರವಾರದಿಂದ ಮೊದಲ್ಗೊಂಡು ಪ್ರತಿ ಶುಕ್ರವಾರ ಮುಂಬಾಯಿಯಿಂದ ಹೊರಟು ಅದೇ ಸೋಮವಾರ ಬೆಳಿಗ್ಗೆ ೬ ಘಂಟೆಗೆ ಇಲ್ಲಿ ತಲ್ಪಿ, ಅದೇ ದಿನ ಸಂಜೆ ಹಿಂತಿರುಗಿ ಗುರುವಾರ ಪೂರ್ವಾಹ್ನ ೧೧ ಘಂಟೆಗೆ ಮುಂಬಾಯಿಗೆ ತಲಪುವುದು. ಹೋಗುವಾಗಲೂ ಬರುವಾಗಲೂ ಅದು ನಿತ್ಯದಂತೆ ಎಲ್ಲಾ ಬಂದರುಗಳಲ್ಲೂ (ಹೊನ್ನಾವರದಲ್ಲಿ ೧೯೩೧ನೇ ಇಸವಿ ೨೦ನೇ ಸಪ್ಟಂಬರದಿಂದ) ತಂಗುವುದು. ಮಂಗಳೂರಿನ ಪ್ರಯಾಣಿಕರು ಸೋಮವಾರ ದಿನಗಳಲ್ಲಿ ಅಪರಾಹ್ನ ೨ ಗಂಟೆಗೆ ಸ್ಟೀಮರು ಹತ್ತಬೇಕಾಗುವುದು.

ಇದೇ ತಿಂಗಳ ಬರುವ ತಾ ೨೩ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೫ ೩೦ಕ್ಕೆ ಮಂಜೇಶ್ವರದಲ್ಲಿರುವ ಒಟಿ ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಬಿ ಲಕ್ಷ್ಮಣದೇವ ವಿದ್ಯಾರ್ಥಿಯವರು "ಕರ್ನಾಟಕ ಪ್ರಾಂತ್ಯದ ಸಾಮಾಜಿಕ ಸ್ಥಿತಿ" ಎಂಬ ಕುರಿತು ಭಾಷಣವೀಯುವರು. ಸರ್ವರಿಗೂ ಸ್ವಾಗತವಿದೆ.

ಹಿಗೆ ಮಾತ್ರವಲ್ಲ, ನಮ್ಮ ಜಿಲ್ಲೆಗೂ ಅಖಿಲ ಕರ್ನಾಟಕಕ್ಕೂ ರಕ್ತ ಪ್ರಿಯರಾಗಿದ್ದ ಹಿಂದೂ ಮುಸಲ್ಮಾನ ಐಕ್ಯತೆಯ ಕರ್ಣಧಾರರಾಗಿದ್ದ ಬಡವರ ಬಂಧುವಾಗಿದ್ದ, ಜನತೆಯ ಸೇವೆಯೇ ಈಶ ಸೇವೆಯೆಂದು ನಡೆಯುತ್ತಿದ್ದ ಶಿಂತನ್ನಷ್ಟು ಬ್ರಿಟಿಷ್ ಲೋಕಮಾನ್ಯ ದಯಾಪೂರ್ಣರು ನಿಧನದಿಂದ ಉಂಟಾದ ದುಃಖಾತಿಶಯಕ್ಕೆ ಮೇಲಿಯೇ ಇಲ್ಲ. ವೆಂಬುರಿ ಭಿಕ್ಷಕನಾಗುತ್ತಿದ್ದ ಮೃತರ ಪಾರ್ಥಿವದೇಹವನ್ನು ಈ ಊರ್ವಸಲು ಬಂದಿದ್ದರು ಮತ್ತು ೨೦,೦೦೦ ಜನರ ಸ್ತ್ರೀಪುರುಷರು ಅಬಾಲವೃದ್ಧರು ನಾನಾ ಜಾತಿಗಳವರು ಸ್ತೋಮವೇ ಸಾಕ್ಷ್ಯವಾಗಿ ಮೃತರ ಸ್ವಭಾವ ಮಾತ್ರೆಯ ಕಂಡ್ರಾ ಉತ್ಕೃಷ್ಟತೆಗಳ ಪ್ರದರ್ಶನ (ಹೂಮಾಲೆಗಳ ಅರ್ಪಣೆ ನಾನಾ ಜಾತಿಯವರೂ ಶವವನ್ನು ಎತ್ತಿ ಹಿಡಿಯಲು ತವಕಗೊಂಡಿ ಎಲ್ಲ) ಎಲ್ಲರ ನೇತ್ರಗಳೂ ಸಿದರು. ಮೃತರ ಸ್ಮಾರಕವಾಗಿ ಸಾಧ್ಯವಿದ್ದಲ್ಲಿ ಆಸ್ಪತ್ರೆಯ ಉತ್ತಮಾಂಗವನ್ನು ನಿರ್ಮಿಸುವಂತೆಯೂ ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್, ವೆಂಕೋಬಾಚಾರ್ಯ, ರೋಕ್ ಫೆರ್ನಾಂಡಿಸ್, ರೆ ಪಿ ಸೋನ್ಸ್, ಡಾ ಯು ಪಿ ಮಲ್ಯ ಡಾ ಸುಂದರ ರಾಮ ಪೈ ಕೆ ಎಮ್ ಸೋಮ ಟಿಯು ನರಿಯ ಮಾದಕಲ ಎಚ್ ಅಣ್ಣಯ್ಯ ಕೆ ಜಿ ಬಲ್ಲಾಳ ಮುಂತಾದ ಪ್ರಮುಖರ ಸಮಿತಿಯೊಂದು ನಿರ್ಣಯಿಸಲಾಯಿತು.

ತಾ ೧೯ನೇ ರಾತ್ರಿ ೧೦ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಭಾರತಮಾತಾ ಹಿಂದೀ ಎಮೆಚೂರ್ಸ್ ಉಡುಪಿ ಇವರಿಂದ 'ವೀರ ಅಭಿಮನ್ಯು' ಎಂಬ ಹಿಂದೀ ನಾಟಕವು ಯಶಸ್ವಿಯಾಗಿ ಅಭಿನಯಿಸಲಾಯಿತು.

**ಮಹಾಜನ ಸಭಾ ಉಡುಪಿ**—ಇವರು ತಾರೀಕು ೨೮–೯–೧೯೩೧ರಿಂದ ೬–೧೦–೧೯೩೧ರ ವರೆಗೆ ಕಳೆದ ವರ್ಷದಲ್ಲಿ ಜರಗಿಸಿದಂತೆಯೇ ಈ ವರ್ಷದಲ್ಲಿಯೂ ನವರಾತ್ರಿ ಮಹೋತ್ಸವವನ್ನು ಜರಗಿಸಬೇಕೆಂದು ನಿರ್ಧರಿಸಿರುವರು. ಪ್ರತಿನಿತ್ಯವೂ ರಾತ್ರಿ ೯–೩೦ಕ್ಕೆ ಕಾರ್ಯಕ್ರಮವು ಪ್ರಾರಂಭವಾಗಿ ರಾತ್ರಿ ೧೨ ಗಂಟೆಗೆ ಸರಿಯಾಗಿ ಮುಗಿಯುವುದು.

ಈ ಕಾರ್ಯಕ್ರಮದಲ್ಲಿ ಸಂಗೀತ, ನಾಟಕ, ನರ್ತನ, ವ್ಯಾಯಾಮ, ಹರಿಕಥೆ, ವಾಚನ, ಭಾಷಣ ಮುಂತಾದವುಗಳು ಅಡಕವಾಗಿವೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದಿರುವ ಉಮೇದುವಾರರು ತಾ. ೧೦–೯–೩೧ರ ಒಳಗೆ ಅರ್ಜಿ ಹಾಕಿ ತಮಗೆ ಬೇಕಾದ ಸಮಯದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗಿ ವಿನಂತಿ.

---

**ಶ್ರೀ ಕೃಷ್ಣ ಜಯಂತ್ಯುತ್ಸವವು**— ಮಂಗಳೂರು ಆರ್ಯಸಮಾಜದವರಿಂದ ಈ ಕೆಳಗಿನ ಕಾರ್ಯಕ್ರಮ ಪ್ರಕಾರ ಆಚರಿಸಲ್ಪಟ್ಟಿತು. ತಾ. ೨೬ನೇ ಬುಧವಾರ ಸಾಯಂಕಾಲ ಐದು ಘಂಟೆಗೆ ಲೈಸು ಮೈದಾನಿನಲ್ಲಿ ಶ್ರೀ ಕೃಷ್ಣ ಚರಿತ್ರೆಯ ವಿಷಯವಾಗಿ ಶ್ರೀಯುತರುಗಳಾದ ನಾರಾಯಣ ಕಿಲ್ಲೆಯವರು, ದೇವಪ್ಪ ಅಳ್ವರು ಮತ್ತು ಬಿ. ಯಂ ತಿಂಗಳಾಯರ ಭಾಷಣಗಳು. ತಾ. ೨೭ನೇ ಗುರುವಾರ ಸಾಯಂಕಾಲ ಐದು ಘಂಟೆಗೆ ಸನ್ಯಾಸಿಗುಡ್ಡೆ ಆರ್ಯಸಮಾಜ ಮಂದಿರದಲ್ಲಿ ರೆವೆ. ಕ. ಸುಬ್ರಹ್ಮಣ್ಯ, ಯಂ. ಎ ಬಿ. ಯಸ್. ಸಿ ಬಿ. ಡಿ. ಯವರು ಮತ್ತು ಶ್ರೀ ಮೋಹನಪ್ಪ ತಿಂಗಳಾಯರು, ಶ್ರೀಯುತ ಯಸ್ ರಾಮಚಂದ್ರ ಅಯ್ಯರ್ ಬಿ ಎ ಯವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಚರಿತ್ರೆ ಮತ್ತು ಬೋಧೆಯ ವಿಷಯವಾಗಿ ಭಾಷಣಗಳು, ಶ್ರೀ ಬ್ರಹ್ಮಸಮಾಜದ ವೈದಿಕ ಭಜನೆ ಮಂಡಳಿಯವರ ಹರಿಕೀರ್ತನೆಗಳು ಎರಡು ದಿವಸಗಳಲ್ಲಿಯೂ ಇದ್ದುವು.

ಇದೇ ತಿಂಗಳ ಸೋಮವಾರ ೧೯–೮–೧೯೩೧ನೇ ದಿನದಲ್ಲಿ ಮಿ. ಪಿ ಬಾಲಕೃಷ್ಣ ಮೆನನ್ ಬಿ. ಎ. ಓನರ್ಸ್ ಎಲ್ ಟಿ ಯವರು ಮಿ ವ್ಹಿ ಯಂ ಜೋಸೆಫ ಎಂ ಎ ಯವರ ಅಧ್ಯಕ್ಷತೆಯಲ್ಲಿ ಸೈಂಟ್ ಎಲೋಶಿಯಸ್ ಕೊಲೇಜು ರಸಾಯನ ಶಾಸ್ತ್ರ ಭಾಷಣ ಸಭಾ ಸದನದಲ್ಲಿ ರಸಾಯನಶಾಸ್ತ್ರ ಸಂಘದ ಆರಂಭಭಾಷಣವನ್ನು ಮಾಡಿದರು. ವಿಷಯವು ರಸಾಯನ ಶಾಸ್ತ್ರದ ಇತಿಹಾಸದಲ್ಲಿ ಕುರುಹುಗಳು" ಭಾಷಣವು ಸ್ಫೂರ್ತಿದಾಯಕವಾಗಿಯೂ ಬೋಧಪ್ರದವಾಗಿಯೂ, ಸರಳವಾಗಿಯೂ ಇತ್ತು.

ಇದೇ ತಿಂಗಳ ೧೯–೮–೧೯೩೧ನೇ ಸೋಮವಾರ ಮಿ. ಯಸ್ ಶ್ರೀನಿವಾಸಾಚಾರ್ಯರ್ ಎಮ್ ಎ ಎಲ್. ಟಿ ಯವರು 'ತತ್ವಜ್ಞಾನ ಮತ್ತು ಆಧುನಿಕ ಜೀವ ತತ್ವಶಾಸ್ತ್ರ'ದ ವಿಷಯವಾಗಿ ತತ್ವಜ್ಞಾನ ಸಂಘದ ಮೊದಲನೇ ಭಾಷಣವನ್ನು ಮಾಡಿದರು. ಅಧ್ಯಕ್ಷರು ರೆವರೆಂಡ್ ಫಾದರ್ ಪ್ರೊಸ್ಪೆರಿಯೊ.

ದಕ್ಷಿಣ ಕನ್ನಡ ಜಿಲ್ಲಾ ಮೋಟರು ಡ್ರೈವರ್ಸ್ ಯೂನಿಯನ್ ಇದರ ಮಾಸಿಕ ಮಹಾಸಭೆಯೊಂದು ಇದೇ ತಾ ೧೫–೮–೩೧ರಲ್ಲು ಸಾಯಂಕಾಲ ೪ಕ್ಕೆ ಬಲ್ಮಠ ರಸ್ತೆಯಲ್ಲಿರುವ ಯೂನಿಯನಿನ ಆಫೀಸಿನಲ್ಲಿ ಯೂನಿಯನಿನ ಪ್ರೆಸಿಡೆಂಟರಾದ ಶ್ರೀ ರಂಗರಾವ್ ಕಲಚೇಕರ್ ಇವರ ಅಧ್ಯಕ್ಷತೆಯಲ್ಲಿ ಜರಗಿತ್ತು. ಹಲವು ಸದುಪಯೋಗಿ ಭಾಷಣಗಳಾಗಿ ಆಫೀಸಿನ ಬದಲಾವಣೆ, ಕಾರ್ಯಕಾರಿ ಮಂಡಳಿಯ ಮೆಂಬರರ ಚುನಾವಣೆ ನಡೆದು ಸಭಾಂತ್ಯವಾಯಿತು.

ದಿ ಬೋರ್ಡ ಮೆಂಬರರಾದ ಶ್ರೀ ಕೆ ವೆಂಕಪ್ಪ ಶೆಟ್ಟಿಯವರು ಜಿ ಎ ಕೌನ್ಸಿಲಿಗೂ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಮಿ ಎಂ ಎಸ್ ಶ್ರೇಷ್ಠ ಎಂ ಎಲ್ ಸಿ ಇವರು ಲೆಜಿಸ್ಲೇಟಿವ್ ಕೌನ್ಸಿಲಿನ ಸ್ವತಂತ್ರ ಪಕ್ಷದ ಡೆಪ್ಯುಟೀ ಲೀಡರಾಗಿ ಚುನಾಯಿಸಲ್ಪಟ್ಟಿರುವರು.

ಇಂಗ್ಲೆಂಡಿನಲ್ಲಿ ಬಾರ್.ಎಟ್ ಲಾ ಪರೀಕ್ಷೆಯಲ್ಲಿ ಕೃತಾರ್ಥರಾದ ದಿವಾನ್ ಬಹದ್ದೂರ್ ಕು. ರಾಮರಾಯರ ಪುತ್ರ ಶ್ರೀ ನಾರಾಯಣರಾಯರು ಮಂಗಳೂರಿಗೆ ಹಿಂದಿರುಗಿರುವರು.

ಮಂಗಳೂರು ನಗರದ ಆರೋಗ್ಯಾಧಿಕಾರಿಯ ವರದಿಯಿಂದ ತಿಳಿದುಬರುವಂತೆ ತಾ. ೧೫–೮–೩೧ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೩೮ ಜನನಗಳೂ ೩೩ ಮರಣಗಳೂ ಆಗಿರುವುದೆಂದು ತಿಳಿದುಬರುತ್ತದೆ.

ತಾ ೨೬ನೇಯ ಪ್ರಕಟನೆಯ ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾ ಆದ್ಯ್ಹಿಕ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯ ದ್ವಿತೀಯಾಧಿವೇಶನವು ಇದೇ ತಾ. ೧೧ರಲ್ಲಿ ಕಿಪ್ರಪೇಟೆಯಲ್ಲಿರುವ ಸದರಿ ಸಮಿತಿಯ ಕಾರ್ಯಾಲಯದಲ್ಲಿ ಜರಗಿ, ಶ್ರೀ ಎ. ಜಿ. ಶಾಸ್ತ್ರಿಗಳವರು ನಡೆಸಿಕೊಂಡು ಬರುವ ಮಂಗಳೂರು ಸಾಯಂ ಸಂಸ್ಕೃತ ಪಾಠಶಾಲೆಯನ್ನು ಸಮಿತಿಯ ಕಡೆಯಿಂದ ನಡೆಸುವುದಾಗಿ ತೀರ್ಮಾನಿಸಲ್ಪಟ್ಟಿರುತ್ತದೆ.

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಗೆ ಕಿಲ್ಲಾಲಯಕ್ಕೆ ಪ್ರತಿನಿಧಿಗಳು ಹಲವರ ಕೆಲಸವು ಇಲ್ಲಿ ಅವಸರದಿಂದ ನಡೆಯುತ್ತದೆ.

ಸ್ಥಳೀಯ ಶ್ರೀ ಕೃಷ್ಣ ಸಿನೇಮಾದಲ್ಲಿ ತಾ. ೨೦ರಿಂದ "ಗೋಪಾಲಕೃಷ್ಣ" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು. ನ್ಯೂಹಾಲ್‌ನಲ್ಲಿಯೇ "ದಿ ಕೌಂಟೆಸ್ ಆಫ್ ಮೊಂಟಿಕ್ರಿಸ್ಟೋ" ಎಂಬ ಚಿತ್ರವು ಪ್ರದರ್ಶಿಸಲ್ಪಡಲಿದೆ.

## ಶಾರೀರಿಕ ಶಿಕ್ಷಣವನ್ನು ಹೇಗೆ ಕೊಡಬೇಕು?

ಮನುಷ್ಯ ಸಮಾಜದ ಸರ್ವತೋಮುಖವಾದ ಉನ್ನತಿಸಾಧನೆಗೆ ಸಾಮಾಜಿಕ, ಧಾರ್ಮಿಕ ಆರ್ಥಿಕ, ರಾಜಕೀಯ ಮೊದಲಾದ ಕಾರ್ಯಕ್ಷೇತ್ರಗಳಲ್ಲಿ ಕೆಲಸಮಾಡುವ ವಿಶೇಷಜ್ಞರು ಹೊಸ ಭಾವನೆಗಳಿಂದ ಪ್ರಭಾವಿತರಾಗಿ ಹೊಸ ಹೊಸ ಶೋಧಗಳನ್ನು ಮಾಡುತ್ತ ಸಫಲತೆಯನ್ನು ಪಡೆಯುತ್ತಿರುವಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಬಾಲಬಾಲಿಕೆಯರ ತಿದ್ದುವಿಕೆ ಮತ್ತು ಬೋಧನಾಕ್ರಮದಲ್ಲಿಯೂ ಎಷ್ಟೋ ಪರಿವರ್ತನೆಗಳನ್ನೂ ಶೋಧನೆಗಳನ್ನೂ ಮಾಡಿ ಸಫಲರಾಗುತ್ತಿರುವುದು ಕೇಳಿ ತಿಳಕೊಂಡ ಮಾತಾಗಿದೆ. ಶಿಕ್ಷಣದ ಧ್ಯೇಯ ಮತ್ತು ಉದ್ದೇಶಗಳ ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ವಿಚಾರಮಾಡುವ ಮುಖಂಡರೊಳಗೆ ಭಿನ್ನಾಭಿಪ್ರಾಯಗಳಿರುವುವಾದರೂ ಮನುಷ್ಯನ ಮತ್ತು ಅವನ ಸಮಾಜದ ಉತ್ಕರ್ಷಕ್ಕಾಗಿ ಅವನಿಗೆ ಮಾನಸಿಕ ಶಿಕ್ಷಣ ಮಾತ್ರವಲ್ಲ, ಅದರ ಜೊತೆಗೆ ಶಾರೀರಿಕ ಮತ್ತು ನೈತಿಕ ಅಥವಾ ಧಾರ್ಮಿಕ ಶಿಕ್ಷಣಗಳೂ ದೊರೆಯುವುದು ಪರಮಾವಶ್ಯಕವೆಂಬುದನ್ನು ಪ್ರತಿ ಮಾತೆತ್ತಿದರೆ ಎಲ್ಲರೂ ಒಪ್ಪುವರು. ಮೊದಮೊದಲು ಮಾನಸಿಕ ಶಿಕ್ಷಣಕ್ಕೆ ಪ್ರಾಧಾನ್ಯವಿರುತ್ತಿತ್ತಾದರೂ ಈಗ ಶಾರೀರಿಕ ನೈತಿಕ ಶಿಕ್ಷಣಗಳ ಮಹತ್ವವನ್ನು ಶಿಕ್ಷಣವೇತ್ತರು ಅನುಭವ ಮಾಡಿಕೊಡಗಿದ್ದಾರೆ. ಹೀಗಾಗಿ ಶಾಲೆಗೊಂದು ಆಟದ ಬಯಲು ಮತ್ತು ಪ್ರಾರ್ಥನಾ ಮಂದಿರ, ಅದರ ಜೊತೆಗೆ ಶಾರೀರಿಕ ಮತ್ತು ನೈತಿಕ ಶಿಕ್ಷಣವನ್ನು ಕೊಡುವ ಏರ್ಪಾಡು ಇಲ್ಲದೆ ಹೋದರೆ ಆ ಶಾಲೆಯನ್ನು ದ್ವಿತೀಯ ಅಥವಾ ತೃತೀಯ ಶ್ರೇಣಿಯ ಶಾಲೆ ಎಂದು ನಾಮಕರಣ ಮಾಡುವ ಕಾಲವು ಬಂದೊದಗಿದೆ.

ಶಾರೀರಿಕ, ಮಾನಸಿಕ ನೈತಿಕ ಶಿಕ್ಷಣವನ್ನು ಪಡೆದ ಬಾಲಬಾಲಿಕೆಯರು ಗಟ್ಟಿಮುಟ್ಟಾದ ದೇಹ, ಆರೋಗ್ಯ, ದೃಢವಾದ ಮನಸ್ಸನ್ನು ಸಂಪಾದಿಸುವರು ಮಾತ್ರವಲ್ಲದೆ ಅಂಥ ಆದರ್ಶ ಶಿಕ್ಷಣದ ಮೂಲಕ ಶಿಸ್ತು ವ್ಯವಸ್ಥೆಗೆ ಒಳಪಟ್ಟ ಆ ಬಾಲ ಬಾಲಿಕೆಯರು ತಮ್ಮ ಜೀವನಕ್ರಮವನ್ನು ಬೇಕಾದಂತೆ ತಿದ್ದಿಕೊಂಡು ಜೀವನದ ಸಮಸ್ತ ಸುಖಗಳನ್ನು ಅನುಭವಿಸಲಿಕ್ಕೂ ಸಮರ್ಥರಾಗುವರು. ಮಕ್ಕಳು ದೇಹಾರೋಗ್ಯವನ್ನು ಸಂಪಾದಿಸಲಿಕ್ಕೂ, ತಮ್ಮ ಮನೋರಂಜನೆ ಮಾಡಿಕೊಳ್ಳಲಿಕ್ಕೂ ಜೀವನವನ್ನು ಕ್ರಮಬದ್ಧವಾಗಿಟ್ಟುಕೊಳ್ಳಲಿಕ್ಕೂ ಶಾರೀರಿಕ ಶಿಕ್ಷಣವು ಆಗತ್ಯವಾಗಿದೆ. ಅದರಂತೆಯೇ ಆತ್ಮೋನ್ನತಿ ಸಾಧನೆಗೆ ಧಾರ್ಮಿಕ ಶಿಕ್ಷಣವು ಸಹಕಾರಿಯಾಗಿದೆ. ಈ ಬಗೆಯ ಶಿಕ್ಷಣವು ಸಾಮಾಜಿಕ ರಾಜಕೀಯ ದೃಷ್ಟಿಯಿಂದಲೂ ಮಹತ್ವವುಳ್ಳದ್ದಾಗಿದೆ. ಶರೀರ ಮನಸ್ಸು ಆತ್ಮ ಇವುಗಳ ಕ್ರಮವಾದ ಉನ್ನತಿಯನ್ನು ಸಾಧಿಸಿಕೊಂಡ ವ್ಯಕ್ತಿಗಳಿಂದ ಕೂಡಿದ ಸುಸಂಘಟಿತ ಸಮಾಜದಿಂದ ಲೋಕೋಪಕಾರವು ಬಹಳ ಆಗಿ ಅದು ಜಗತ್ತಿನ ಆದರ ಗೌರವಗಳಿಗೆ ಪಾತ್ರವಾಗುತ್ತದೆ. ಅದರ ಮಾನಮರ್ಯಾದೆಗಳು ಹೆಚ್ಚುತ್ತವೆ. ಆ ಸಮಾಜದ ಮೇಲೆ ಇತರ ಸಮಾಜಗಳ ಆಕ್ರಮಣಗಳಾಗುವುದಿಲ್ಲ. ಆದರೂ ಅಂದ ಆಕ್ರಮಣಗಳನ್ನು ಆ ಸಮಾಜವು [illegible] ತಡೆಯ ಬಲ್ಲದು. [illegible] ದೃಷ್ಟಿಯಿಂದ [illegible] ಕಳೆದುಕೊಂಡ ರಾಜಕೀಯ ಸ್ವಾತಂತ್ರ್ಯವನ್ನು ಪುನಃ ಸಂಪಾದಿಸಲಿಕ್ಕೆ, ಸಂಪಾದಿಸಿದ್ದನ್ನು ಉಳಿಸಿಕೊಳ್ಳಲಿಕ್ಕೆ ತಕ್ಕ ಯೋಗ್ಯತೆ ಉಳ್ಳದ್ದಾಗುವುದು. ಆದುದರಿಂದ ಮನುಷ್ಯನಿಗೆ ಮಾನಸಿಕ ಶಿಕ್ಷಣದ ಎಷ್ಟು ಆವಶ್ಯಕತೆ ಇದೆಯೋ ಅದಕ್ಕೆ ಕಡಿಮೆಯಾಗದೆ ಶಾರೀರಿಕ ಮತ್ತು ನೈತಿಕ ಶಿಕ್ಷಣವೂ ಆಗತ್ಯವಾಗಿರುತ್ತದೆ.

ಈ ಲೇಖದಲ್ಲಿ ಶಾರೀರಿಕ ಶಿಕ್ಷಣವನ್ನು ಹೇಗೆ ಕೊಡಬೇಕೆಂಬುದನ್ನಷ್ಟೇ ವಿಚಾರಿಸುವೆವು. ಶಾಲೆಗಳಲ್ಲಿ ಶಾರೀರಿಕ ಶಿಕ್ಷಣದ ಬೀಜಾರೋಪಣ ಮಾಡುವವರು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು. ಈ ಭಾಗದಲ್ಲಿ ಅವರು ಮಾಡತಕ್ಕ ಕಾರ್ಯಗಳು ಬಹಳ ಇವೆ. ಇಲಾಖೆಯ ನಿರ್ಬಂಧವಿರುವುದೆಂಬುದರಿಂದ ಮಾತ್ರ ವಾರದಲ್ಲಿ ಒಂದೆರಡು 'ಪೀರಿಯಡ್ಡು'ಗಳಲ್ಲಿ ಡ್ರಿಲ್ಲು—ಆಟಗಳನ್ನು ಹೇಗೆ ಹಾಗೆ ಕಲಿಸಿ ಉಪೇಕ್ಷೆಯಿಂದಿರುವುದರಿಂದ ಶಾರೀರಿಕ ಶಿಕ್ಷಣವನ್ನು ಕೊಟ್ಟಂತಾಗುವುದಿಲ್ಲ. ಉಪಾಧ್ಯಾಯರ ಈ ತರದ ಮನೋಭಾವವು ಕ್ಷಮ್ಯವಾಗಿರುವುದಿಲ್ಲ. ಅಂದು ಕೊಂಡೇ, ಮದ್ರಾಸು ಸರಕಾರದ ಅಸಿಸ್ಟಂಟ್ ಫಿಜಿಕಲ್ ಡೈರೆಕ್ಟರರಾದ ಡಾ। ಎಂಡ್ರ್ಯೂಸರು ಒರಥಾಂಪುರದ ಟ್ರೈನಿಂಗ್ ಶಾಲೆಯಲ್ಲಿ ತರಬೇತಿ ಹೊಂದಲಿಕ್ಕೆ ಬಂದ ಉಪಾಧ್ಯಾಯರನ್ನು ಉದ್ದೇಶಿಸಿ— "ಉಪಾಧ್ಯಾಯ ವೃತ್ತಿಯು ಘನವಾದದು. ತಮ್ಮ ಹೆಗಲ ಮೇಲಿರುವ ಉತ್ತರದಾಯಿತ್ವದ ಭಾರವನ್ನು ಉಪಾಧ್ಯಾಯರು ಚೆನ್ನಾಗಿ ಅನುಭವ ಮಾಡಬೇಕು. ಉಪಾಧ್ಯಾಯರಿಗೆ ಅವರ ಪರಿಶ್ರಮ ಮತ್ತು ವೃತ್ತಿಯ ಘನತೆಗೆ ತಕ್ಕಷ್ಟು [illegible] ದೊರೆಯುತ್ತಿರುವುದಿಲ್ಲವೆಂಬ ನಿಜ ಸಂಗತಿ. ಆದರೂ ಈ ಒಂದು [illegible]

ಡಾ। ಎಂಡ್ರ್ಯೂಸರು ಶಾರೀರಿಕ ಶಿಕ್ಷಣದ ವಿಶೇಷಜ್ಞರು. ಮೇಲೆ ಹೇಳಿದ ಅವರ ಮಾತುಗಳು ಹಲವು ಉಪಾಧ್ಯಾಯರಿಗೆ ರುಚಿಸದಿರಬಹುದು. ಪರಂತು ಮಕ್ಕಳಿಗೆ ಶಾರೀರಿಕ ಶಿಕ್ಷಣವನ್ನು ಹೇಗೆ ಕೊಡಬೇಕೆಂದು ಅವರು ಹೇಳಿದ ಕೆಳಗಿನ ಮಾತುಗಳಂತೆ ವರ್ತಿಸುವುದರಿಂದ ಪ್ರಯೋಜನವಿದೆ. ಡಾ। ಎಂಡ್ರ್ಯೂಸರು ಮುಂದೆ ಅಂದದ್ದೇನೆಂದರೆ—"ಮಕ್ಕಳಿಗೆ ಶಾರೀರಿಕ ಶಿಕ್ಷಣವನ್ನು ಕೊಡುವಾಗ ಉಪಾಧ್ಯಾಯರು ಮೂರು ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಲಿ. ಮೊದಲನೆಯದಾಗಿ ಅವರು ದೂರದಲ್ಲಿ ನಿಂತು ಮಕ್ಕಳಿಗೆ ಆಜ್ಞಾಪಿಸುತ್ತ ಅಥವಾ ಬೆತ್ತದ ಉಪಯೋಗ ಮಾಡುತ್ತ ಇರಬಾರದು. ಮಕ್ಕಳೊಡನೆ ಕೂಡಿ, ಓಡಿ, ಆಡಿ, ನಲಿದು ತಾನೂ ಅವರೊಳಗೆ ಒಬ್ಬನಾಗಿ ಪ್ರತ್ಯಕ್ಷ ದೃಷ್ಟಾಂತದ ಮೂಲಕ ಆಟಗಳನ್ನು ಕಲಿಸಬೇಕು. ಹೀಗೆ ಮಾಡುತ್ತಿರುವುದರಿಂದ ಮಕ್ಕಳ ಮನೋವಿನೋದವಾಗುವುದಲ್ಲದೆ, ಅವರು ಆ ಆಟಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುವಂಥವರಾಗಿ ಸ್ವೇಚ್ಛೆಯಿಂದ ಅವುಗಳನ್ನು ಕಲಿಯುವರು. ಈ ಉಪಾಯದಿಂದ ಮಕ್ಕಳೊಳಗೆ ಶಿಸ್ತು ವ್ಯವಸ್ಥೆಯನ್ನಿಡುವುದೂ ಸುಲಭವಾಗುತ್ತದೆ. ಎರಡನೆಯದಾಗಿ ಮಕ್ಕಳ ಆವಶ್ಯಕತೆ ಮತ್ತು ಅವರ ದೇಹಸ್ಥಿತಿಯನ್ನು ಪರ್ಯಾಲೋಚಿಸಿಯೇ ಉಚಿತ ಆಟಗಳನ್ನು ಅವರಿಗೆ ಕಲಿಸಬೇಕು. ಮೂರನೆಯದಾಗಿ ಹಾಗೆ ಉಪಾಧ್ಯಾಯರು ಆರಿಸಿ ತೆಗೆದ ಆಟಗಳು ಮಕ್ಕಳಿಗೆ ಚಿತ್ತಾಕರ್ಷಕ ಮತ್ತು ಅವರೊಳಗೆ ಉತ್ಸಾಹವನ್ನುಂಟುಮಾಡುವಂಥವುಗಳಾಗಿದ್ದು ನೂತನವಾಗಿಯೂ ವಿಚಾರೀಯವಾಗಿಯೂ ಇರಬೇಕು."

ಕಟಪಾಡಿ ಶ್ರೀನಿವಾಸ ಶೆಣೈ.


# For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

## ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

**Estimates Submitted without obligation**

**ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.**

**Electric fans, Household appliances, Table lamps,**

**Very Attractive chandeliers and other fittings**

**Everything in Electricity**

**Goods supplied on approval and guarantee of Manufacture**

***First class Goods First class Work First class Attendance***

**An Enquiry at our Electrical Show Rooms will cost you Nothing**

**And**

**Will gain You excellent Service.**

**The Canara Public Conveyance Company Ltd., Kodialbail Mangalore.**

## ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು

ಇದೇ ತಾ ೧೯ರಲ್ಲಿ ಬೋರ್ಡಿನ ಪ್ರೆಸಿಡೆಂಟರಾದ ಶ್ರೀ ಎ. ಬಿ. ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಿತು. ಸಭಾರಂಭದಲ್ಲಿ ಅಧ್ಯಕ್ಷರು, ಉಡುಪಿಯ ಸನ್ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿದ್ದ ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಸಾಹೇಬರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಿಸಿ, ದಿವಂಗತರ ಕುಟುಂಬದ ದುಃಖದಲ್ಲಿ ಸಹಾನುಭೂತಿ ತೋರಿಸುವ ಸೂಚನೆಯನ್ನು ತಂದು ಪ್ರೆಸಿಡೆಂಟರು ಸಂದರ್ಭೋಚಿತವೂ ಉದಾತ್ತವೂ ಆದ ಚಿಕ್ಕ ಭಾಷಣ ಮಾಡಿ, ದಿವಂಗತರ ಸರ್ವಾದರಣೀಯತೆ, ವಿಪರೀತವಾದ ಉದಾರತೆ, ಜನ ನಂಬುಗೆ, ಸಾರ್ವಜನಿಕ ಕಾರ್ಯಾಸಕ್ತಿ, ಜನೋಪಕಾರ ಬುದ್ಧಿ, ವಿಶುದ್ಧ ಸರಳ ಸ್ವಭಾವ, ಅತ್ಯಂತ ವಿನಯಪರ ವರ್ತನೆ, ಗೌರವಾಡಂಬರರಹಿತ ಜೀವನಾದಿ ಸದ್ಗುಣಗಳನ್ನೆತ್ತಿ ಹೇಳಿದರು. ಅವರು ಈ ದುಷ್ಟ ಜಗತ್ತಿನಲ್ಲಿ ವಿಶೇಷ ಸಾಧುಸ್ವಭಾವದವರಾದುದರಿಂದ ಮತ್ತು ಜನರ ಮೇಲೆ ಅತಿಯಾಗಿ ವಿಶ್ವಾಸವಿಟ್ಟುದರಿಂದ ಇತ್ತಿತ್ತಲಾಗಿ ಕಷ್ಟಕ್ಕೀಡಾಗಿ ವ್ಯಥಿತರಾಗಿದ್ದರೂ ಇಷ್ಟು ಬೇಗ ಕ್ರೂರ ಮೃತ್ಯುವು ಅವರ ಮೇಲೆ ಕೈಮಾಡುವುದೆಂದು ಯಾರೂ ನೆನಸಲಿಲ್ಲೆಂದರು. ಅವರ ಶವಸಂಸ್ಕಾರದ ಸಂದರ್ಭದ ಜನಸ್ತೋಮದ ಭಕ್ತಿ ವಿಶ್ವಾಸದ ಕುರಿತು ಪ್ರಸ್ತಾಪಿಸುತ್ತಾ, "ವಿಶಾಲ ಹೃದಯಿಗಳಿಗೆ ಈ ಲೋಕವೇ ಸ್ವರ್ಗವು, ಸ್ವರ್ಗವೆಂಬುದು ಬಡ ಹೃದಯಿಗಳಿಗೆ" ಎಂಬ ಫ್ರೆಂಚ್ ಗ್ರಂಥಕರ್ತನ ವಚನವನ್ನುಲ್ಲೇಖಿಸಿ ಹೃತ್ಪೂರ್ವಕ ಸಂತಾಪ ಸೂಚಿಸಿ ಎಲ್ಲರೂ ನಿಂತು ದುಃಖಸೂಚಕ ಠರಾವು ಮಂಜೂರು ಮಾಡಲ್ಪಟ್ಟಿತು. ಆ ಮೇಲೆ ಡಾಕ್ಟರ್ ವಿಠಲ ಶೆಟ್ಟಿ ದಿವಂಗತರ ತೈಲಚಿತ್ರವೊಂದನ್ನಿಡಬೇಕೆಂದು ಸೂಚಿಸಿ ಅದಕ್ಕಾಗಿ ಮೆಂಬರರು ರೂ ೧೫೦ ವಂತಿಗೆ ಕೊಟ್ಟರು. ಡಾಕ್ಟರ್ ಆಚಾರ್ಯರ ಸೂಚನೆಯಂತೆ, ಉಡುಪಿಯ ಬೋರ್ಡು ಹ್ಯಾಸ್ಕೂಲಿನ ಹೊಸ ಕಟ್ಟಡ ಭಾಗಕ್ಕೆ ದಿವಂಗತರ ಹೆಸರಿಡಬೇಕೆಂದಾಯಿತು. ಶ್ರೀ ದಾಸಣ್ಣಾಳ್ವರ ಮೆಂಬರಿಕೆಯು ಪುನರುಜ್ಜೀವಿಸಲ್ಪಟ್ಟ ಮೇಲೆ ತಾಲೂಕುವಾರು ವೃತ್ತಿತೆರಿಗೆ, ಲೈಸೆನ್ಸ್ ಫೀಸು, ಭೂತೆರಿಗೆ, ಮತ್ತು ತಾಲೂಕುವಾರು ಹಳ್ಳಿ, ರಸ್ತೆ, ಸಿಂಪಾಶ್ರಯ, ಮತ್ತು ಲೋಕಲ್ ಫಂಡ್ ಆಸ್ಪತ್ರೆಗಳಿಗಾಗಿ ವೆಚ್ಚದ ಮೊಬಲಗುಗಳ ಕುರಿತಾದ ಡಾಕ್ಟರ್ ಆಚಾರ್ಯರ ಮತ್ತು ಎಲಿಮೆಂಟರಿ ಶಾಲೆಗಳ ಅಧ್ಯಾಪಕರ ಸಂಬಳ ಪಾವತಿ ಸಂಬಂಧವಾದ ಜನಾಬ್ ಕುಂಞಿ ಕಲಂದರ್ ಸಾಹೇಬರ ಪ್ರಶ್ನೋತ್ತರ ನಡೆದುವು. ದಕ್ಷಿಣಕನ್ನಡ ಜಿಲ್ಲೆಯನ್ನು ಬರುವ ಅಕ್ಟೋಬರ ತಿಂಗಳಲ್ಲಿ ಸಂದರ್ಶಿಸಲಿರುವ ಮದ್ರಾಸ ಗವರ್ನರರಿಗೆ ಮಾನಪತ್ರ ನೀಯಬೇಕೆಂದೂ, ಹೊಸದಾಗಿ ಕಟ್ಟಲ್ಪಟ್ಟಿರುವ ಕುಮಾರಧಾರಿ ಸೇತುವೆಯನ್ನು ತೆರೆಯುವರೆ ಅವರನ್ನು ಕೇಳಿಕೊಳ್ಳಬೇಕೆಂದೂ, ಪ್ರೆಸಿಡೆಂಟರು ತಂದ ಸೂಚನೆಯು ಮಂಜೂರಾಗಿ ಮಾನಪತ್ರಾದಿಗಳ ವೆಚ್ಚಕ್ಕಾಗಿ ರೂ ೧೦೦ ಮಂಜೂರು ಮಾಡಲಾಯಿತು. ಇದಕ್ಕೆ ಶ್ರೀ ಕೃಷ್ಣರಾಯ ಕೊಡಗಿಗಳು ತನ್ನ ವಿರೋಧ ಸೂಚಿಸಿದರು. ಮಾಜಿ ತಾಲೂಕು ಬೋರ್ಡು ಕ್ಲಾರ್ಕರಿಗೂ ಇತರರಂತೆ ಮೊದಲು ಪಡೆಯುತ್ತಿದ್ದ ಸಂಬಳವೇ ಸಿಗುವಂತಾಗಬೇಕೆಂದೂ, ಹೊಸ ಸಂಬಳ ದರದ ಮೆಕ್ಸಿಮುಮಿಗಿಂತ ಹೆಚ್ಚಾಗಿರುವುದನ್ನು ಪರ್ಸನಲ್ ಪೇಯಾಗಿ ಕೊಡುವಂತಾಗಬೇಕೆಂದೂ ಶ್ರೀ ಸದಾಶಿವ ಅಡಿಗರು ತಂದ ಸೂಚನೆಯನ್ನು ಡಾಕ್ಟರ್ ಆಚಾರ್ಯರು ಅನುಮೋದಿಸಿ ಆ ಕುರಿತು ಸರಕಾರಕ್ಕೆ ಬರೆಕೊಳ್ಳಬೇಕೆಂದಾಯಿತು. ಇಂಡಿಯಾ ಸರಕಾರವು ಗ್ರಾಮಾಭಿವೃದ್ಧಿಗಾಗಿ ಕೊಡುವ ಗ್ರಾಂಟನ್ನು ಪ್ರತಿ ತಾಲೂಕಿನಲ್ಲಿ ಜನಸಂಖ್ಯಾವಾರು ಹಂಚಬೇಕೆಂಬ ಮಿ| ಮಹಮ್ಮದ್ ಶೆರೂಲು ಸಾಹೇಬರ ಸೂಚನೆಯ ಕುರಿತು ಚರ್ಚೆ ನಡೆದು, ಈ ಕುರಿತು ಡಿಸ್ಟ್ರಿಕ್ಟ್ ಬೋರ್ಡಿನವರ ಸೂಚನೆಗಳು ಮೊದಲೇ ಸರಕಾರಕ್ಕೆ ಹೋಗಿರುವುವೆಂದೂ, ಗ್ರಾಮಾಭಿವೃದ್ಧಿ ಕಾರ್ಯಕ್ಕಾಗಿ ಮೊದಲು ದಕ್ಷಿಣಕನ್ನಡಕ್ಕೆ ರೂ. ೫೫,೦೦೦ ದೊರೆಯುವುದೆಂದಿದ್ದರೂ ಈಗ ರೂ. ೧೧,೦೦೦ ಮಾತ್ರ ದೊರೆಯುವುದೆಂದು ತಿಳಿದುಬಂದಿದೆಯೆಂದೂ, ಈ ಹಣವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಮೊದಲೇ ನಿರ್ಣಯಿಸಿರುವಂತೆ ಪ್ರತಿ ತಾಲೂಕಿನಲ್ಲಿಯೂ ಸರಿಯಾಗಿ ಹಂಚಲಾಗುವುದೆಂದೂ ಪ್ರೆಸಿಡೆಂಟರು ತಿಳಿಸಿದ ಮೇಲೆ ಮಿ| ಶೆರೂಲರು ತನ್ನ ಸೂಚನೆಯನ್ನು ಹಿಂತೆಗೆದರು. ಬಸ್ ಪ್ರಯಾಣಿಕರ ಟಿಕೇಟುಗಳ ಕುರಿತು ಸರಕಾರದ ಹೊಸ ನಿಯಮಗಳ ವಿಚಾರವನ್ನು ಮುಂದು ಮಂಸಲಾಯಿತು. ಪುತ್ತೂರು ತಾಲೂಕಿನ ಎರಡು ಪಂಚಾಯತ ಬೋರ್ಡುಗಳಿಂದ ಹೊಸ ರಸ್ತೆಗಳಿಗಾಗಿ ಎಸ್ಟಿಮೇಟ್ ಬಂದಿದ್ದು ಆ ಬಗ್ಗೆ ಸರಕಾರವು ಕೊಡುವ ರೂ. ೫,೨೦೦ ಮತ್ತು ರೂ ೩,೯೦೦ನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಶ್ರೀ ಪೂಂಜರು, ಡಾಕ್ಟರ್ ಆಚಾರ್ಯರು, ಮಿ| ಗೋನ್ಸಾಲ್ವಿಸ್ ಮೊದಲಾದವರು ಇತರ ತಾಲೂಕುಗಳ ಪ್ರಶ್ನೆಯನ್ನೆತ್ತಿ, ಈ ವರೆಗೆ ಪುತ್ತೂರಿಂದ ಮಾತ್ರವೇ ಎಸ್ಟಿಮೇಟ್ ಬರುತ್ತಿದ್ದು ಇತರ ತಾಲೂಕುಗಳಿಂದ ಯಾವ ಎಸ್ಟಿಮೇಟೂ ಬಾರದೆ ಅವುಗಳ ಹಿತವು ಕಡೆಗಣಿಸಲ್ಪಡುತ್ತಿದೆಯೆಂದು ಬಲವಾದ ಚರ್ಚೆಯನ್ನೆಬ್ಬಿಸಿದರು. ಇತರ ತಾಲೂಕುಗಳಿಂದಲೂ ಕೂಡಲೇ ಎಸ್ಟಿಮೇಟ್ ತಯಾರಿಸುವಂತಾಗಬೇಕೆಂದೂ, ಆ ವರೆಗೆ ಈ ಮಂಜೂರಾತಿಯನ್ನು ಹಾಗೆಯೇ ಇಡಬೇಕೆಂದೂ ಶ್ರೀ ಪೂಂಜರು ಆಗ್ರಹಪೂರ್ವಕವಾಗಿ ಸೂಚಿಸಿದರು. ಶ್ರೀಗಳಾದ ಡಾಕ್ಟರ್ ವಿಠಲ ಶೆಟ್ಟಿ, ಸದಾಶಿವ ಭಟ್ಟರೇ ಮೊದಲಾದವರು, ಇತರ ತಾಲೂಕುಗಳಿಂದ ಎಸ್ಟಿಮೇಟ್ ಬಾರದುದು ಪುತ್ತೂರಿನವರ ತಪ್ಪಲ್ಲೆಂದು ಪ್ರತಿಪಾದಿಸಿದರು. ದೀರ್ಘ ಚರ್ಚೆಯಾದ ಮೇಲೆ ಬಹುಮತದಿಂದ ಗ್ರಾಂಟನ್ನು ಮಂಜೂರು ಮಾಡಲಾಯಿತು.


## ನೋಟೀಸು

### ಕೆನರಾ ಬೇಂಕ್ ಲಿಮಿಟೆಡ್,

### ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಬಾಕಿ ಮಾಡಿದುದರಿಂದಲೂ ಅವರಿಗೆ ಬಿಟ್ಟ ರಜಿಸ್ಟ್ರಿ ನೋಟೀಸು ಅವರು ಮೃತಪಟ್ಟದ್ದಾಗಿ, ಮರಳಿ ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸ್ಲು, ಬಡ್ಡಿ, ರಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ಸಹ ಕೂಡಿಸಿ ತಾರೀಕು 16-9-1935ರ ಒಳಗೆ ಸದ್ರಿ ಮೃತಪಟ್ಟ ಸಾಲಗಾರರ ನ್ಯಾಯವಾದ ವಾರೀಸುದಾರರು ಬೇಂಕಿಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡುಹೋಗದೆ ಬಾಕಿಯುಳಿದಲ್ಲಿ ಈಡಿಟ್ಟ ನಗಗಳನ್ನು ತಾರೀಕು 18-9-1935ನೇ ಬುಧವಾರ ಮಧ್ಯಾಹ್ನ ಘಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ L 511/34, ಸಾಲ ಪಡೆದವರ ವಿಳಾಸ: ಚಕ್ರಕೋಡಿ ಗಂಗಾಧರ ಶಾಸ್ತ್ರಿಗಳ ಮಗ ಗೋವಿಂದ ಶಾಸ್ತ್ರಿ, ಮೊಲಿನ್ ತಡ್ಕ, ಪುನಚ ಗ್ರಾಮ, ವಿಟ್ಲ ಪೋಸ್ಟು. ಸಾಲದ ಅಸ್ಲು ಮೊಬಲಗು ರೂಪಾಯಿ 475/-

ಸಾಲದ ನಂಬ್ರ S. L 150/34, ಸಾಲ ಪಡೆದವರ ವಿಳಾಸ: ಮೊದಿನ್ ಬ್ಯಾರಿಗಳ ಮಗ ವೀರ ಕಂಭ ಪಳ್ಳಿ ಬ್ಯಾರಿ, ಕಾಯಿಪಲ್ಯ ವ್ಯಾಪಾರಿ, ಪುತ್ತೂರು. ಸಾಲದ ಅಸ್ಲು ಮೊಬಲಗು ರೂಪಾಯಿ 20/-

ಕೆನರಾ ಬೇಂಕ್ ಲಿಮಿಟೆಡ್ ಪುತ್ತೂರು, 20-8-'35 } **A. Venkat Rao,** *Agent.*


## ಅಫ್ರಿಕಾದಲ್ಲಿ ಭಾರತೀಯ ವ್ಯಾಯಾಮ ಪ್ರಚಾರ.

ಹಿಂದೂಸ್ಥಾನದ ವ್ಯಾಯಾಮ ಶಾಲೆಗಳಲ್ಲಿ ಅತಿ ಪ್ರಖ್ಯಾತಿಯನ್ನು ಹೊಂದಿರುವ ಶ್ರೀ ಜುಮ್ಮಾದಾದಾ ವ್ಯಾಯಾಮ ಮಂದಿರದಲ್ಲಿ ತಮ್ಮ ವ್ಯಾಯಾಮ ಶಿಕ್ಷಣವನ್ನು ಹೊಂದಿದ ಶ್ರೀ ಭಾಸ್ಕರ ಗಣಪತಿ ಪ್ರಭು, ಇವರು ಅಫ್ರಿಕದ ಮೊಂಬಾಸಾದಲ್ಲಿ ತೆರೆಯಲಿರುವ ಹಿಂದೂ ವ್ಯಾಯಾಮ ಶಾಲೆಯ ಶಿಕ್ಷಕರಾಗಿ ಆರಿಸಲ್ಪಟ್ಟು ತಾ. ೨೧-೮-೩೫ಕ್ಕೆ ಅತ್ತ ಕಡೆ ಹೊರಟಿರುವರು. ಶ್ರೀ ಪ್ರಭುಗಳವರು ಗೌಡಸಾರಸ್ವತ ಜಾತಿಯವರು; ಜನ್ಮಭೂಮಿಯು ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಉಡುಪಿ ತಾಲೂಕಿನಲ್ಲಿರುವ ಬಾರಾಡಿ ಎಂಬೊಂದು ಚಿಕ್ಕ ಗ್ರಾಮದಲ್ಲಿ ಅವರ ಜನನವಾಯಿತು. ಆದರೆ ಕೆಲವೊಂದು ಕಾರಣಗಳ ದೆಸೆಯಿಂದ ಅವರು ತಮ್ಮ ೭ನೆಯ ವಯಸ್ಸಿನಲ್ಲಿಯೇ ಕರ್ನಾಟಕವನ್ನು ಬಿಟ್ಟು ಮುಂಬಾಯಿಯಲ್ಲಿ ತಮ್ಮ ಚಿಕ್ಕತಂದೆಯವರೊಡನಿದ್ದರು. ಅಲ್ಲಿಯೇ ಅವರ ಪ್ರೀವಿಯಸ್ ವರೆಗಿನ ವಿದ್ಯಾಭ್ಯಾಸವೂ ಮುಗಿಯಿತು, ಒಂದು ನೌಕರಿಯನ್ನು ಕೂಡಾ ಅವರು ಅಲ್ಲಿಯೇ ಮಾಡಿಕೊಂಡಿದ್ದರು. ಆದರೆ ಪ್ರಭುಗಳಿಗೆ ಜನ್ಮಭೂಮಿಯ ಮೇಲೆ ಬಹು ಪ್ರೇಮ, ದೇಶಸೇವಾ ಕಾರ್ಯವನ್ನು ಮಾಡಬೇಕೆಂಬ ಆಶೆ ಬಹಳ. ಹೀಗಾಗಿ ಅವರು ತಮ್ಮ ನೌಕರಿಗೆ ತಿಲಾಂಜಲಿಯನ್ನು ಕೊಟ್ಟು ಅಸಹಕಾರ ಚಳವಳಿಯಲ್ಲಿ ಸೇರಿಕೊಂಡು ಕೆಲಸವನ್ನು ಮಾಡುತ್ತಲಿದ್ದರು. ಇದರಿಂದಾಗಿ ಅವರಿಗೂ ಅವರ ಮನೆಯವರಿಗೂ ಸ್ವಲ್ಪ ಕಟಾಪಿಟಿ ವುಂಟಾಯಿತು. ಹೀಗಾಗಿ ಅವರು ಮನೆಮಾರಿಗೆ ಶರಣು ಹೊಡೆದು ಹೊರಹೊರಟುದಲ್ಲದೆ ಬರೋಡಾದಲ್ಲಿರುವ ಕಲಾಮಂದಿರದಲ್ಲಿ ಯಾವುದಾದರೊಂದು ಸ್ವತಂತ್ರ ಜೀವನೋಪಾಯದ ಶಿಕ್ಷಣವನ್ನು ಹೊಂದಬೇಕೆಂಬ ಇಚ್ಛೆಯಿಂದ ಅಲ್ಲಿಗೆ ಹೋದರು. ಅಲ್ಲಿಗೆ ಹೋಗುತ್ತಲೇ ಅವರ ಮನಸ್ಸು ವ್ಯಾಯಾಮದ ಕಡೆಗೆ ಸೆಳೆಯಿತು. ಅದಕ್ಕೆ ಸರಿಯಾಗಿ ಅಲ್ಲಿಯ ಶ್ರೀ ಜುಮ್ಮಾದಾದಾ ವ್ಯಾಯಾಮ ಮಂದಿರದ ಸಂಸ್ಥಾಪಕರೂ ಶಿಕ್ಷಕರೂ ಆದ ಪರಮಪೂಜ್ಯ ಗುರುವರ್ಯ ಶ್ರೀ ರಾಜರತ್ನ ಪ್ರೊ| ಮಾಣಿಕ್ ರಾವ್ ಇವರ ಉದಾರ ಆಶ್ರಯವೂ ದೊರೆಯಿತು. ಇವರಿಂದ ಸುಮಾರು ೫ ವರ್ಷಗಳ ವರೆಗೂ ಪ್ರಭುಗಳು ಸಾಕಷ್ಟು ವ್ಯಾಯಾಮ ಶಿಕ್ಷಣವನ್ನೂ, ಬೋನ್ ಸೆಟ್ಟಿಂಗ್‌ನ ಮಾಹಿತಿಯನ್ನೂ ಹೊಂದಿ ಅವರ ಅತೀ ಪ್ರೇಮಪಾತ್ರರಾದುದಲ್ಲದೆ ತಾನು ಕಲಿತ ವಿದ್ಯೆಯನ್ನು ಅನ್ಯದೇಶಗಳಲ್ಲೂ ಕೂಡ ಪ್ರಚಾರಮಾಡಬೇಕೆಂಬ ಉತ್ಕಟೇಚ್ಛೆಯಿಂದ ಈಗ ಅವರು ಅಫ್ರಿಕಾಕ್ಕೆ ಹೊರಟಿರುವರು. ಶ್ರೀಗುರುಕೃಪೆಯಿಂದ ಪ್ರಭುಗಳ ಮನೋಬಯಕೆಯು ನೆರವೇರಿ ಅವರು ಎಲ್ಲೆಲ್ಲೂ ಕೀರ್ತಿಶಾಲಿಗಳಾಗಲೆಂದು ಈಶಚರಣದಲ್ಲಿ ಪ್ರಾರ್ಥನೆ.

## ಬದ್ವಾನಿನಲ್ಲಿ ನೆರೆ!

### ಜನರ ವರ್ಣನಾತೀತ ಸಂಕಷ್ಟ.

ಬದ್ವಾನಿನಲ್ಲಿ ಭಯಂಕರ ನೆರೆಯು ಬಂದಿದೆ. ೧೯೧೩ರ ನೆರೆಯಕ್ಕಿಂತ ಪ್ರಚಂಡವಾಗಿದೆಯೆಂದು ಜನರಾಡುತ್ತಿರುವರು. ಪಟ್ಟಣದ ಮಾರ್ಗಗಳಲ್ಲೆಲ್ಲಾ ದೋಣಿಗಳು ಓಡಾಡುತ್ತಿವೆ. ಸೈರು ಪಟ್ಟೆಗಳು ಹಾಳಾಗಿವೆ. ದಲ್ಹಿಗಿ ರೋಡ್‌ನಲ್ಲಿ ಒಂದು ಸಂದನ್ನು ಒಡೆದುದರಿಂದ ಕಮಿಶನರರು ಅನೇಕ ಮನೆಗಳನ್ನು ನೆರೆಯ ಬಾಯಿಯಿಂದ ರಕ್ಷಿಸಿದಂತಾಗಿದೆ. ಜನರು ತಂತಮ್ಮ ವಸ್ತು ಒಡವೆಗಳನ್ನು ನೀರಿನ ಬಾಯಿಯಿಂದ ತಪ್ಪಿಸುವಷ್ಟು ಬಿಡುವಿಲ್ಲದ ಅವಸರದಿಂದ ನೆರೆಯು ಮುಂದೊತ್ತಿತು. ಛೇತಿಯಾ ಯೂನಿಯನ್ ಬೋರ್ಡು, ಜಿಲ್ಲಾ ಕಾಂಗ್ರೆಸ್ ಕಮಿಟಿ ಸಂಕಟ ತ್ರಾಣ ಸಮಿತಿಗಳವರು ಜನರಿಗೆ ಅನ್ನಾಹಾರಗಳನ್ನಿತ್ತು ಸಹಾಯವೀಯುತ್ತಿರುವರು.

ನಿಮ್ಮ ಕಂಠನಾಳವು ಬಾಧಿಸುತ್ತಿದೆಯಾದರೆ

ರೋಗನಿವಾರಕ ಶಕ್ತಿಯುಳ್ಳ ಶ್ವಾಸೋಚ್ಛ್ವಾಸಕರ ಪೆಪ್ಸ್ ಬಿಲ್ಲೆಗಳನ್ನು ಸೇವಿಸುವುದನ್ನು ಮರೆಯದಿರಿ.

ಕಂಠನಾಳವು ನೋವಿನಿಂದ ಬಾಧೆಯಾಗುತ್ತಿದೆಯಾದರೆ ಪೆಪ್ಸ್ ಅದನ್ನು ಶೀಘ್ರದಲ್ಲೇ ಗುಣಪಡಿಸುತ್ತದೆ. ಆಗಾಗ್ಗೆ ಪೆಪ್ಸನ್ನು ಚೀಪಿರಿ.

ಎಲ್ಲಾ ಔಷಧಿ ವಿಕ್ರಯಗಾರರಲ್ಲೂ ದೊ 1ಕ್ಕೆ ಸಿಗುತ್ತದೆ

ಪೆಪ್ಸ್

PEPS


ಆಧುನಿಕ ವಿದ್ಯಾರ್ಥಿಗಳಿಗೆ ದುರ್ವ್ಯಯವು ಹೆಚ್ಚು. ಅವರು ವಿದೇಶಿ ವಸ್ತುಗಳನ್ನೆ ಪ್ರೋತ್ಸಾಹಿಸುತ್ತಾರೆ ಎಂದು ಸರ್ ಪಿ. ಸಿ. ರಾಯ್ ರವರು ಅಭಿಪ್ರಾಯಪಟ್ಟಿರುವರು.

ಅಲ್ಯೂಮಿನಿಯಮ್ ತಯ್ಯಾರಿಗೆ ಭಾರತ ದೇಶದಲ್ಲಿ ಬಹಳ ಅನುಕೂಲವಿರುವಂತೆ ಕಾಣಬರುತ್ತದೆ. ಹಾಗಿದ್ದಲ್ಲಿ ಇಡೀ ಪ್ರಪಂಚಕ್ಕೆ ಬೇಕಾದಷ್ಟು ಅಲ್ಯೂಮಿನಿಯಮ್ ಪದಾರ್ಥಗಳನ್ನು ಭಾರತದೇಶವು ಸರಬರಾಯಿ ಮಾಡಬಹುದು.


## TO LET.

On hire the Building formerly belonging to the Hindustan Cinema Co. Ltd., along with furniture and fittings etc. The building is situated in the heart of the Mangalore Town and is convenient for giving Cinema shows, dramatic and such other performances.

Those desirous of taking the same on lease are requested to apply to the Board of Trustees, Sri Venkatramana Temple, Mangalore on or before 7—9—35 stating their terms.

The Temple will not consider any application for lease which does not provide for the deposit of Rs. 500 in advance which will be adjusted towards rent due at the end of the lease period. The Temple also reserves the right to reject any application without stating any reasons.

**MANAGER,**
*S. V. Temple.*

# WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

**C. H. SHAMBULINGAPPA,**
The South Indian General Assurance Co. Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ
ಐಷಿಡಾಯಿಜ್ಡ
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೫೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ

ಡಾ॥ ಗೌತಮ ರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಥಾಕುರದ್ವಾರ, ಮುಂಬಾಯಿ ೨
ಸ್ಟಾಕಿಸ್ಟ್ - ಶಾ ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.

## ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂಧರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೋಟ್ ರಿಸ್ಟ್ ವಾಚುಗಳು ಇವು ಕೊಳಕಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂ ಪೀಸ್ ಸರಿಯಾದ ಸ್ಟಾಂಡರ್ಡ್ ಟೈಂ ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಆಕ ... ಹಂಟಿಂಗ್ ... ಮತ್ತು ಬಂಗಾರದ ಪ್ಲೇಟ್ ... ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ಸಮ್ಮತಿ ಇಲ್ಲದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

**ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,**
ಪೋಸ್ಟ್ ಬಾಕ್ಸ್ ನಂಬ್ರ ... S A ಕಲ್ಕತ್ತಾ

## [ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಚ್ ಕೆ ರಜಪೂತ ಇವರ

### ಸತಂತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯವು ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ಕಡಸಂಕರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಡೂಹಿದು ಕಾಣೇ ... ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪-೦ ೦ ವಿ ಪಿ. ಆಣೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C

# Now For Sale.

**Poholatum (Balm)** (German make) This is home remedy for Rheumatism, Asthma, Sciatica, Lumbago, Insect bites, Herpes, Wounds Cuts Colds Headache It is a complete substitute for the domestic medicine chest Try once this unequalled remedy In tin As 3/- In oz jar As 12/-

**Superior Red Balm** For relieving pains in muscles and on skin Directions for use with the bottle Price As 12 - only

**Wurmteufel** Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms children and adults, try this unique remedy and be freed from your ailment Price As 10 per packet

**Pocket Inhaler** For coughs and hoarseness, headache, catarrh colds etc and you will be relieved immediately Price per inhaler As 6 & As 8

**Po-Ho Fluid** For Asthma colds indigestion toothache, lumbago, a sure remedy in all cases Price As 6 - and Re 1/ per phial

**Cough Cure** An infallible remedy for cough and all kinds bronchitis, hoarseness Particulars in bottle Price As 12 - for 3 oz bottle

Use Mithra Toilet Soaps—Now on Sale with.

**The New Curative Earth** A medium cure ask for Particulars.

## Basel Mission Book Depot

Mangalore, Branches in Codialbail, Hubli, Calicut

## Our Dasara Special Number for 1935

will be out in the first week of October,
with attractive illustrations by twenties!-
with instructive & interesting articles by dozens!
Double coloured photos a Speciality!
**CONTRIBUTIONS BY REPUTED WRITERS!**
**PRICE AS. 2 ONLY**
It would pay you to advertise your goods in this Popular Number
*Apply for advertisement rates to —*
Advertisement Manager,
The Swadeshabhimani Dasara Special 1935,
CAR STREET MANGALORE

## ಸುಖ್ಯಾತ ಆಂಗ್ಲ ಕವಿಯು ಪರಂಧಾಮವನ್ನೈದಿದರು.

### ಸರ್ ವಿಲ್ಲಿಯಮ್ ವಾಟ್ಸನ್.

ಪೊಯೆಟ್ ಲೊರೆಟ ಎಂಬ ಬಿರುದನ್ನು ಪಡೆದ ಲೊರ್ಡ್ ಟೆನ್ನಿಸನ್ ಎಂಬ ಆಂಗ್ಲ ಕವಿಯ್ಯಾಯಿತ್ತುಂಬರು. ಕವಿ ಸಾಮ್ರಾಜ್ಯದಲ್ಲಿ ಅಗ್ರಗಣ್ಯರು. ಇವರಿಗೆ ಲೊರೆಟ್ ಪದವಿಯನ್ನು ಕೊಡಬೇಕೆಂದು ನಿಶ್ಚಯಿಸಿದ್ದರು. ಅದರೆ ಅಷ್ಟರಲ್ಲೇ ತೀರಿಬಿಟ್ಟರು.

## ಜಪಾನೀ ಜನರಲನ ಕೊಲೆ.

### ಕೊಲೆಗಡಕ ಕರ್ನಲ್‌ನಿಗೆ ಫಾಶಿ ಶಿಕ್ಷೆಯಾಯಿತು.

ಟೋಕಿಯೊ ಅಗೋಸ್ತು, ೧೪

ಜನರಲ್ ನಾಗಾಟಾ ಎಂಬವನನ್ನು ಕೊಂದವನು ಲೆಫ್ಟಿನೆಂಟ್ ಕರ್ನಲ್ ಸೆಬುರೊ ಐಜಾವಾ ಎಂಬಾತ ನೆಂದು ತಿಳಿದುಬಂದಿದೆ ಇವನು ಇತ್ತೀಚಿಗೆ ಮಿಲಿಟರಿ ಶಾಲೆಯ ಮಾಸ್ಟರ್ ಆಫ್ ಆರ್ಮ್ಸ್ ಆಗಿದ್ದನು. ಇಲ್ಲಿಂದ ಇವನನ್ನು ಫರ್ಮೋಸಾ ದ್ವೀಪಕ್ಕೆ ವರ್ಗಾಯಿ ಸಲ್ಪಟ್ಟದ್ದರಿಂದ ಈ ಕೊಲೆಯನ್ನು ಮಾಡಲು ಕಾರಣ ಇವನಿಗೆ ಫಾಶಿ ಶಿಕ್ಷೆಯಾಗಿದೆ

## ಸರ್ ಜಗದೀಶ ಪ್ರಸಾದರು ರಜೆಯಲ್ಲಿ ಹೋಗುವವರಿದ್ದಾರೆ.

ಸಿಮ್ಲಾ, ಅಗೋಸ್ತು, ೧೪.

ಶ್ರೀ ಸರ್ ಜಗದೀಶ ಪ್ರಸಾದರ ಧರ್ಮಪತ್ನಿಯವರು ಅಸ್ವಸ್ಥದಲ್ಲಿ ಬಿದ್ದಿರುವ ಕಾರಣ ಡಾಕ್ಟರರ ಹೇಳಿಕೆಯ ಮೇರೆಗೆ ಹವಾ ಬದಲಾವಣೆಗಾಗಿ ತನ್ನ ಪತ್ನಿಯವರನ್ನು ಪರದೇಶಕ್ಕೆ ಕರೆದೊಯ್ಯುವವರಿದ್ದಾರೆ. ಇದಕ್ಕಾಗಿ ಅವರು ಮೂರು ತಿಂಗಳ ರಜೆಯನ್ನು ಪಡೆಕೊಳ್ಳಲಿರುವರು ಅವರು ಮರಳಿ ಬರುವ ವರೆಗೆ ಅವರ ಸ್ಥಾನದಲ್ಲಿ ಶ್ರೀ ಸರ್ ಗಿರಿಜಾಶಂಕರ ಬಜಪಾಯಿಯವರನ್ನು ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರರಾಗಿಯೂ, ಹೋಂ ಸೆಕ್ರೆಟರಿಯ ಕೆಲಸವನ್ನು ಬಿಡಬೇಕೆಂದಿದ್ದ ಶ್ರೀ ರಾಮಚಂದ್ರ ಇವರನ್ನು ಕಾರ್ಯದರ್ಶಿಯರನ್ನಾಗಿಯೂ ನೇಮಿಸಲಾಗಿದೆ

## ಪ್ರತಿಮೆಗಾಗಿ ಜಗಳ!

ಪುದುಕೋಟ್ಟೆ ಅಗೋಸ್ತು ೧೪

ದೇವರನ್ನು ಹೊತ್ತುಕೊಂಡು ಹೋಗುವ ಹಕ್ಕಿಗಾಗಿ ಹಳ್ಳಿಗರೊಳಗೆ ಜಗಳವಾಯಿತು ಅಗೋಸ್ತು ತಾರೀಕು ೧೧ರಲ್ಲಿ ಸೋಮಪುರದ ಗೊಲ್ಲರಿಗೂ ಕಾಪು ಎಂಬ ಜಾತಿಯವರಿಗೂ ಸ್ಥಳೀಯ ದೇವಸ್ಥಾನದ ಉತ್ಸವ ಸಮಯದಲ್ಲಿ ಶ್ರೀರಾಮ ಮೂರುತಿಯನ್ನು ಯಾರು ಹೊತ್ತುಕೊಂಡು ಹೋಗಬೇಕೆಂಬ ಚರ್ಚೆಯಾಗಿ, ಬಾಯಿಮಾತು ಸಾಲದೆ, ಕೈಗಳಿಂದ ಹೊಡೆಕೊಂಡರೆಂದೂ ವಾರ್ತೆಯಿದೆ ೧೩ ಮಂದಿಗೆ ಬಲವಾದ ಪೆಟ್ಟಾದುದರಿಂದ ಅವರನ್ನು ಆಸ್ಪತ್ರೆಗೆ ಕೊಂಡೊಯ್ದಿರುವರು. ಚಿಕಿತ್ಸೆ ಸಾಗುತ್ತಲಿದೆ

## ಯೆಹೂದ್ಯರು ಮತ್ತು ಕ್ರೈಸ್ತರ ಮೇಲೆ ನಾಜಿ ಜನಾಂಗದವರ ದಾಳಿ

ಬರ್ಲಿನ್, ಅಗೋಸ್ತು ೧೪

ಜರ್ಮನಿಯ ಪ್ರತಿಯೊಂದೆಡೆಯಲ್ಲಿಯೂ ನಾಜಿ ಪಂಗಡದವರು ಕ್ರೈಸ್ತ ಮತ್ತು ಯೆಹೂದ್ಯರನ್ನು ಪೀಡಿಸುತ್ತಿದ್ದಾರೆ. ಕೊನ್ನಾರ್ಫ್‌ನ ಚರ್ಚಿನ ಬಳಿ ಇರುವ ಕ್ರೈಸ್ತ ಜನರ ಶವಗಳನ್ನೆಲ್ಲಾ ಅಗೆದು ಚೆಲ್ಲಾಪಿಲ್ಲಿಯಾಗಿ ಬಿಸಾಡಿರುವರು, ಅವರ "ಹೋಲೀ ಕ್ರೋಸ್"ನ್ನು ಮುರಿದು ಹಾಕಿರುವರು ಪಾದ್ರಿಯ ಪ್ರತಿಮೆಯನ್ನು ಸಾಶಿಗೇರಿಸಿ, ಅದನ್ನು ಹಿಡಿದುಕೊಂಡು ಊರ ಮೆರವಣಿಗೆಯನ್ನು ಮಾಡಿದರು

## ಶ್ರೀಮತಿ ಕಮಲಾನೆಹರುರವರು.

ಅಲ್ಲಹಾಬಾದ್, ಅಗೋಸ್ತು ೧೭

ಶ್ರೀಮತಿ ಪಂಡಿತರ ಹೇಳಿಕೆಯ ಮೇರೆಗೆ ಶ್ರೀಮತಿ ಕಮಲಾ ನೆಹರುರವರ ಆರೋಗ್ಯವು ದಿನೇ ದಿನೇ ವೃದ್ಧಿ ಹೊಂದುತ್ತಲಿದೆಯೆಂದೂ, ಪತ್ರಿಕೆಗಳಲ್ಲಿ ಪ್ರಕಟವಾದಂತೆ ಅವರು ಪುನಃ ಅಸ್ವಸ್ಥದಲ್ಲಿ ಬೀಳಲಿಲ್ಲವೆಂದೂ ತಿಳಿದುಬಂದಿದೆ

## ಹೂಣಿಟ್ಟ ಶವವನ್ನು ಅಗೆದು ತೆಗೆದರು.

ಪೊಂಡಿಚೇರಿ, ಅಗೋಸ್ತು, ೧೪

ಪನ್ರಾವುಕ್ಕಮ್ ಎಂಬ ಫ್ರಾನ್ಸ್‌ದೇಶದ ಹಳ್ಳಿಯೊಂದರಲ್ಲಿ ನಡೆದ ಆಶ್ಚರ್ಯಾಸ್ಪದ ಘಟನೆಯಿದು, ಸಂಶಯದ ನಿಮಿತ್ತ ಹೂಣಿಟ್ಟ ಶವವನ್ನು ಪುನಃ ಅಗೆದು ತೆಗೆದರು

ಕೊಂದಿಯ ವಿಚಾರಣೆಮಾಡಹೋದ ಪೋಲೀಸರನ್ನು ರತ್ನಮ್ ಎಂಬವನು ತನ್ನ ಎಂಟು ಮಂದಿ ಸ್ನೇಹಿತರೊಡಗೂಡಿ ಚೆನ್ನಾಗಿ ಹೊಡೆದನು ಈ ಅಪರಾಧದ ನಿಮಿತ್ತ ಅವನನ್ನೂ ಅವನ ಸಂಗಾತಿಗಳನ್ನೂ ಸೆರೆಹಿಡಿದು ಜೈಲಿಗೊಯ್ದರು, ಆಗ ರತ್ನಮನ ಹೆಂಡತಿಯು ಗರ್ಭಿಣಿಯಾಗಿದ್ದಳು, ಗಂಡನು ಸೆರೆಮನೆಗೆ ಹೋದನಂತರ ಹೆಂಡತಿಯು ಒಂದು ಕೂಸನ್ನು ಹೆತ್ತಳು. ಆದರೆ ಹೆಂಗೆಯಾದ ಐದನೇ ದಿನದಲ್ಲಿ ಸತ್ತುಹೋದಳು ಗಂಡನು ಸೆರೆಮನೆಯಲ್ಲಿರುವುದರಿಂದ ಅವಳ ಸಂಬಂಧಿಕರು ಅವಳ ಶವಸಂಸ್ಕಾರವನ್ನು ಮಾಡಿದರು ಆದರೆ ರತ್ನಮನು ತನ್ನ ಹೆಂಡತಿಯ ಮರಣವಾರ್ತೆಯನ್ನು ತಿಳಿದು ಅವಳ ಶವಸಂಸ್ಕಾರಕ್ಕಾಗಿ ಜಾಮೀನಿನ ಮೇಲೆ ರಜೆ ಪಡೆದು ಬರುವಾಗ ಹೆಂಡತಿಯು ಮಣ್ಣಿನಡಿಯಲ್ಲಿದ್ದಳು, ರತ್ನಮನು ತನ್ನ ಹೆಂಡತಿಯ ಅಕಸ್ಮಾತ್ ಮರಣವು ಸಂಶಯಾಸ್ಪದವಾಗಿದೆ ಬಹುಶಃ ಪೋಲೀಸರ ಹಿಂಸೆಯಿಂದಲೇ ಸತ್ತಿರಬೇಕೆಂದು ಮೇಜಿಸ್ಟ್ರೇಟರ ಹತ್ತಿರ ಮನವಿಯನ್ನು ಮಾಡಲು ಅವರು ಸ್ವತಃ ಬಂದು, ಹೂಣಿಟ್ಟ ಶವವನ್ನು ಅಗೆದು ಪರೀಕ್ಷೆಮಾಡುತ್ತಿದ್ದಾರೆ ಅದರ ಫಲಿತಾಂಶವೇನೆಂದು ಇನ್ನೂ ತಿಳಿಯಲಿಲ್ಲ.

## ಮದ್ರಾಸಿನಲ್ಲಿ ಮೋಟರ್ ಕಾರುಗಳೆರಡು ಡಿಕ್ಕಿಬಡೆದುವು.

ಮದ್ರಾಸು, ತಾ ೧೫

ಮದ್ರಾಸಿನ ಪೆರಿಸ್ ಕೋರ್ನರ್ ಎಂಬಲ್ಲಿ ಎರಡು ಮೋಟರ್‌ಕಾರುಗಳು ಒಂದಕ್ಕೊಂದು ಡಿಕ್ಕಿಬಡೆದುವು ಒಂದರಲ್ಲಿ ತುಂಬಾ ಪ್ರಯಾಣಿಕರಿದ್ದರು ಅವರ ಪೈಕಿ ಒಂದು ಮಗುವಿನ ಹೊರತು ಮತ್ತಾರಿಗೂ ಹಾನಿಯಾಗಲಿಲ್ಲ ಗೋವಿಂದರಾಜಲು ಎಂಬ ಡ್ರೈವರನನ್ನು ಅಪರಾಧಿಯನ್ನಾಗಿ ಸೆರೆಹಿಡಿದಿದ್ದಾರೆ ವಿಚಾರಣೆಯು ನಡೆಯುತ್ತಿದೆ

## ಹರಿಜನ ತರುಣಿಗೆ ಅವಳ ಪ್ರಿಯತಮನು ಹೊಡೆದನು!

ನೆಲ್ಲೂರು ಆಗೋಸ್ತು ೧೪

ಹರಿಜನ ತರುಣಿಯೋರ್ವಳನ್ನು ಅವಳ ಜಾತಿಯವನೊಬ್ಬನು ಪ್ರೀತಿಸುತ್ತಿದ್ದನು ಅವನಿಗೆ ಬೇರೊಬ್ಬನೊಡನೆ ವಿವಾಹವಾಗುತ್ತದೆಂಬ ಸಮಾಚಾರ ಕೇಳಿ, ಅವನನ್ನೊಂದು ದಿನ ಗದ್ದೆಗೆ ಎಳೆದುಕೊಂಡು ಹೋಗಿ ಕೈಕಾಲುಗಳನ್ನು ಕಟ್ಟಿ ಬಿಸಿಮಾಡಿದ ಕಬ್ಬಿಣದ ಗುದ್ದಲಿಯಿಂದ ಅವಳ ಮೈಯನ್ನೆಲ್ಲಾ ಸುಟ್ಟಿಟ್ಟನು.

ತರುಣಿಯು ಮೆಜಿಸ್ಟ್ರೇಟರ ಬಳಿಗೆ ಹೋಗಿ ದೂರು ಕೊಡಲು ಆ ಯುವಕನನ್ನು ಸೆರೆಹಿಡಿದಿದ್ದಾರೆ. ಅವನ ವಿಚಾರಣೆಯಾಗುತ್ತಲಿದೆ

## ತಂದೆ ಮಕ್ಕಳಿಬ್ಬರಿಗೂ ಭಯಂಕರ ಗಾಯಗಳಾಗಿವೆ.

ಮನ್ನಾರಗುಡಿ ಅಗೋಸ್ತು ೧೫

ಮನ್ನಾರಗುಡಿಯ ನೆರೆಯಲ್ಲಿರುವ ಕಂದಕ್ರಿಯಾಮ ಎಂಬಲ್ಲಿ ಮೊನ್ನೆ ಮಧ್ಯರಾತ್ರಿ ಕಳ್ಳರು ನುಗ್ಗಿ ಸ್ವಾಮಿನಾಥ ಪಿಳ್ಳೆಯವ್ ಮತ್ತು ಅವನ ಮಗ ಮುರ್ಗೆಯಾಪಿಳ್ಳೆಯವರ್ ಎಂಬವರಿಬ್ಬರನ್ನು ಸದೆಬಡೆದು ಮನೆಯ ಇದ್ದುಬದ್ದುಗಳನ್ನು ದೋಚಿಕೊಂಡು ಹೋಗಿದ್ದಾರೆ ತಂದೆ ಮಕ್ಕಳಿಬ್ಬರೂ ಮೃತ್ಯುಮುಖದಲ್ಲಿದ್ದಾರೆ ಪೋಲೀಸು ವಿಚಾರಣೆ ನಡೆಯುತ್ತಿದೆ

## ಕಳ್ಳರು ದೇವರನ್ನೂ ಬಿಡುವುದಿಲ್ಲ.

ಮದ್ರಾಸು ತಾ, ೧೫

ಧನಪಾಲ ಚೆಟ್ಟಿ ಎಂಬವನು ಇಲ್ಲಿಯ ಗುರುಸ್ವಾಮಿ ಮಠವನ್ನು ನುಗ್ಗಿ ಅಲ್ಲಿಯ ವಿಗ್ರಹದ ಮೇಲಿದ್ದ ಬಹು ಬೆಲೆಬಾಳುವ ವಸ್ತ್ರವೊಂದನ್ನು ಕಳವು ಮಾಡಿದನು. ಅಲ್ಲಿಯ ಕಾವಲುಗಾರನು ಅವನನ್ನು ತಡೆದು, ಆ ವಸ್ತ್ರವು ಹೇಗೆ ದೊರಕಿತೆಂದು ವಿಚಾರಿಸಲು, ಧನಪಾಲನು ಮರುಮಾತಿಲ್ಲದೆ ಕಾಲಿಗೆ ಬುದ್ಧಿ ಹೇಳಿದ. ಒಡನೆ ಕಾವಲುಗಾರನು ಅವನನ್ನು ಬೆನ್ನಟ್ಟಿ ಹಿಡಿದು, —ಪೋಲೀಸರ ವಶಕ್ಕೊಪ್ಪಿಸಿದನು ಈಗ ಚೆಟ್ಟಿಯ ವಿಚಾರಣೆಯಾಗುತ್ತಲಿದೆ

## ಬೆಳ್ಳಿಯ ಬೆಲೆ ತಗ್ಗಿತು!

ಬೊಂಬಾಯಿ, ಅಗೋಸ್ತು ೧೯.

ಅಮೇರಿಕದವರು ಬೆಳ್ಳಿಯ ಖರೀದಿಯಲ್ಲಿ ತಮ್ಮ ಧೋರಣೆಯನ್ನು ಬದಲಾಯಿಸಿದ್ದರಿಂದ ಲಂಡನಿನಲ್ಲಿ ಬೆಳ್ಳಿಯ ಬೆಲೆಯು ಬಹಳವಾಗಿ ತಗ್ಗಿದೆ. ಅದರಿಂದ ಬೊಂಬಾಯಿಯಲ್ಲಿಯೂ ಅದೇ ಸ್ಥಿತಿಯು ಸಂಭವಿಸಿದೆ.

## ಕೊಲೆರಾದ ಉತ್ಪಾತ.

ಆಗೋಸ್ತು ೧೭

ಮದರಾಸಿನಲ್ಲಿ ಕೊಲೇರಾವು ಬಹಳವಾಗಿ ಹಬ್ಬಿಕೊಂಡಿದೆ. ಕಳೆದ ವಾರದಲ್ಲಿ ೧೧ ಮಂದಿಗೆ ಕೊಲೇರಾ ತಗಲಿ ಅವರಲ್ಲಿ ನಾಲ್ಕು ಮಂದಿ ಮೃತಪಟ್ಟರು ಈ ರೋಗವು ತಾಗದಂತೆ ಸಾಧಾರಣ ೭೩,೦೦೦ ಜನರಿಗೆ ದಾಕು ಹಾಕಿದ್ದಾರೆ

## ಸಿಖ್—ಮುಸ್ಲಿಂ ಜಗಳದ ಪ್ರತಿಧ್ವನಿ.

ಆಗೋಸ್ತು ೧೬

ಲಾಹೋರಿನಿಂದ ಸಾಧಾರಣ ೬ ಮೈಲು ದೂರವಿರುವ ಗುರುಮಂಗಟ್ ಎಂಬಲ್ಲಿ ಭೂಮಿಯ ಬಾಧ್ಯತೆಗಾಗಿ ಸಿಕ್ಕರಿಗೂ ಮುಸ್ಲಿಮರಿಗೂ ವಿವಾದವೆದ್ದಿತು. ಅಷ್ಟರಲ್ಲಿ ಸೀನಿಯರ್ ಪೋಲೀಸ್ ಸುಪರಿಂಟೆಂಡೆಂಟ್ ಮಿ। ರಸ್ಸೆಲ್ಸ ಎಂಬವರು ತನ್ನ ಪೋಲೀಸು ದಳದೊಂದಿಗೆ ಅಲ್ಲಿಗೆ ಬಂದು ವಿಚಕ್ಷಣ ರೀತಿಯಿಂದ ಅದನ್ನು ನಿಲ್ಲಿಸಿದರು.

ವಕ್ಕಲಾಗಿ ವಾಸಿಸುತ್ತಿದ್ದ ಮುಸ್ಲಿಮರು ತಮ್ಮ ಸ್ಥಳದಲ್ಲಿ, ದನಗಳು ಹೊರಗೆ ಹೋಗದಂತೆ ದೊಡ್ಡ ಆವರಣವನ್ನು ಕಟ್ಟಿದ್ದರು ಆದರೆ, ಜಮೀನ್ದಾರರಾದ ಸಿಖ್ಖರು ಆಘಾಗದೆಂದು ವಾದಿಸಿದರು, ಬಾಡಿಗೆಗೆ ಸ್ಥಳ ಪಡೆಕೊಂಡವರಾದ ನೀವು ಹೀಗೆ ಮಾಡಕೂಡದೆಂದೇ ಸಿಖ್ಖರ ಹೇಳಿಕೆ ಮುಸ್ಲಿಮರು ತಾವು ಒಪ್ಪಲಾರೆವೆಂದರು. ಇದರಿಂದಾಗಿ, ೨೦೦ ಮಂದಿ ಸಿಖ್ಖರು ಒಟ್ಟಾಗಿ ಮುಸ್ಲಿಮರು ಕಟ್ಟಿದ್ದ ಆವರಣವನ್ನು ನೆಲಸಮ ಮಾಡಿಬಿಟ್ಟರು. ಇದನ್ನು ಕಂಡು ಮುಸ್ಲಿಮರು ಜಗಳಕ್ಕೆ ಟೊಂಕಕಟ್ಟಿದರು ಎರಡು ಪಕ್ಷಗಳೊಳಗೂ ಜಗಳವಾಗುವುದರಲ್ಲಿತ್ತು. ಮಿ ರಸ್ಸೆಲ್ಸರಿಂದಾಗಿ ಶಾಂತಿಯಾದಂತಿದೆ ಪೂರ್ಣವಾಗಿ ಶಮನವಾಗಲಿಲ್ಲ

## ಥಾನಬಾದಿನಲ್ಲಿ ಭೂಕಂಪದ ಕೌತುಕ

ಥಾನಬಾದ್, ಆಗೋಸ್ತು ೧೫

ರಾತ್ರಿ ೭-೨೬ಕ್ಕೆ ಹತ್ತು ನಿಮಿಷಗಳ ತನಕ ಭೂಮಿಯು ಕಂಪಿಸಿತು ಕಂಪನದೊಡನೆ ಗುಡುಗುಡಿಸುವ ಭಯಂಕರ ಶಬ್ದವೊಂದು ಕೇಳಿಬಂತು

## ಉಲ್ಕೆಗಳ ಸ್ಫೋಟನ!

ಒಂದು ನಿಮಿಷದ ಗತ್ಯಂತರದಿಂದ ಇಡೀ ಜಗತ್ತೇ ಬದುಕಿತೆನ್ನಬೇಕು. ಮೆಸ್ಸಾಚೂಸೆಟ್ಸ್ ಎಂಬಲ್ಲಿಯ ಕೇಂಬ್ರಿಜಿನ ವೈಜ್ಞಾನಿಕ ಶಾಸ್ತ್ರಜ್ಞರ ಹೇಳಿಕೆಯಂತೆ, ದೊಡ್ಡದಾದ ಉಲ್ಕೆಯೊಂದು ಕಳೆದ ಮೇ ತಾ. ೨೩ರಲ್ಲಿ ಭೂಮಿಯಿಂದ ೧೫ ಮೈಲುಗಳ ಎತ್ತರದಲ್ಲೇ ಸಿಡಿಯಿತು, ಅದರ ವೇಗವು (ಕೆಳಗಿಳಿಯುವ) ನಿಮಿಷಕ್ಕೆ ೧೧೫ ಮೈಲು ಒಂದು ನಿಮಿಷ ಹೆಚ್ಚಾಗುತ್ತಿದ್ದರೆ ಅದು ಭೂಮಿಗೆ ಬಿದ್ದು ಜಗತ್ತಿನ ಜನರಿಗೆ ಭಯಂಕರ ಹಾನಿಯನ್ನುಂಟುಮಾಡುತ್ತಿತ್ತು. ಅದರ ಸ್ಫೋಟನದ ಶಬ್ದವು ೨೦-೩೦ ಮೈಲುಗಳ ವರೆಗೆ ಕೇಳಿಸಿದೆ

## ರೈಲುಕಂಬಿಯ ಮೇಲೆ ಮರಬಿತ್ತು. ಬಿರುಗಾಳಿಯ ಹಾವಳಿ!

ರಾಮ್ನಾಡು, ೧೬.

ಬಿರುಸಾದ ಬಿರುಗಾಳಿಯಿಂದಾಗಿ ಅಯ್ಯಾಲೂರ್ ರೈಲ್ವೇ ನಿಲ್ದಾಣದಲ್ಲಿ ದೊಡ್ಡ ಮರವೊಂದು ಭೂತಲದಿಂದ ಕೀಳಲ್ಪಟ್ಟು ರೈಲುಕಂಬಿಗಳ ಮೇಲೆ ಬಿತ್ತು, ಮರವನ್ನು ತೆಗೆಯದೆ ಬಂಡಿಗೆ ಮುಂದೆ ಹೋಗಲು ಅಸಾಧ್ಯವಾದುದರಿಂದ ರೈಲು ಹೊರಡುವಾಗ ೧೮ ನಿಮಿಷ ತಡವಾಯಿತು.

## ರಾತ್ರಿಯಲ್ಲಿ ನಿದ್ರಿಸಿದ್ದವನ ಕೊಲೆ!

### ಅಜ್ಞಾತವ್ಯಕ್ತಿಗಳಿಬ್ಬರ ದಸ್ತಗಿರಿ.

ನೆಲ್ಲೂರು, ತಾ. ೧೭.

ಅಗೋಸ್ತು ೩೩. ೧೪ನೇ ದಿನ ಮಡಪಲ್ಲಿಯೆಂಬಲ್ಲಿ ನಡೆದ ವಿಚಿತ್ರ ಸಂಗತಿಯಿದು ರಾತ್ರಿ ಪತ್ನಿಯೊಡನೆ ನಿದ್ರಿಸಿದ್ದ ರಾಮಸ್ವಾಮಿ ಎಂಬವನನ್ನು ಕೊಡಲಿಯಿಂದ ಓರ್ವನು ಹೊಡೆದು ಕೊಂದನು ಶಬ್ದವು ಕೇಳಿ ಹೆಂಡತಿಯು ಎಚ್ಚತ್ತು ಬೊಬ್ಬಿಡಲು, ಕೊಲೆಗಡಕನು ಪರಾರಿಯಾದನು ತಾ ೧೫ರಲ್ಲಿ ಅಸಿಸ್ಟಾಂಟ್ ಪೋಲೀ ಇನ್ಸಪೆಕ್ಟರರಾದ ಮಿ। ಎ ಇ ಡಿ. ಫ್ರೆಡ್ರಿಕ್ ಎಂಬವರು ಅಲ್ಲಿಗೆ ತೆರಳಿ, ಸ್ಥಳೀಯ ಅಪ್ಪನಾಯಿಡು ಮತ್ತು ಅವನ ತಮ್ಮನಾದ ಸುಬ್ಬರಾಮಯ್ಯ ಎಂಬವನನ್ನು ಈ ಕೊಲೆಯಲ್ಲಿ ಭಾಗಿಯಾದವರೆಂದು ಕೈದುಮಾಡಿದ್ದಾರೆ

## ಸಿನೆಮಾ ಥಿಯೇಟರಿನಲ್ಲೇ ಹೆರಿಗೆಯಾಯಿತು.

ಕ್ರೈಟೀರಿಯನ್ ಸಿನೇಮದ ನೌಕರರೊಬ್ಬರು ಕೆಲಸದ ನಿಮಿತ್ತ ಗ್ರೀನ್ ರೂಮಿಗೆ ಹೋದಾಗ ಓರ್ವ ಹೆಂಗಸು ತಾನಾಗಲೆ ಹಡೆದ ಕೂಸಿನ ಆರೈಕೆ ಮಾಡುತ್ತಿದ್ದಳು. ತತ್‌ಕ್ಷಣವೆ ಡಾಕ್ಟರರನ್ನು ಕರೆಸಿ ಅವಳನ್ನು ಆಸ್ಪತ್ರೆಗೆ ಒಯ್ದರು ತಾಯಿ ಮಗುವೂ ಸೌಖ್ಯದಲ್ಲಿದ್ದಾರೆಂದು ತಿಳಿದುಬಂದಿದೆ


# ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.



ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ' ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ವೃಥಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ—ದೊಡ್ಡ ಬಾಟ್ಲಿಗೆ ರೂ. 4 ಮೀಡಿಯಂ 2-4-0 ಚಿಕ್ಕದು 1-2-0.

ತಯಾರಿಸುವವರು — ಲಸ್ಟರ್ ಡಿಪೋ, ಚಿಕ್ಕಮಗಳೂರು.

ಬ್ರೇಂಚ್ :—ಚಿಕ್ಕಪೇಟೆ, ಬೆಂಗಳೂರು.

ಮುಖ್ಯ ಏಜಂಟರು.—ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆ ಅತ್ಯುತ್ತಮ)
ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ –(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಸ್ಟಾಕಿನಲ್ಲಿ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ






Distributors for South Kanara —

**Raghavendra Ranga Pai, Car Street, Mangalore.**



ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿ–

ಜೀವನದ ... ಶೀತಲ ... ದಲ್ಲಿ ... ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ... ವಚನ

32 ಮಾತ್ರೆಗಳ ... 1

ಹೆಚ್ಚಿನ ವಿವರಕ್ಕೆ ... ಕಾಮಶಾಸ್ತ್ರವನ್ನೋದಿರಿ

Ag ... —Shah Company Ma...lore
Pearl & Sons Mangalore

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.



ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

## ಸಾಮಾನ್ಯ ವಿಜ್ಞಾನ

| ಚರಿತ್ರೆ ಮತ್ತು ಕಥೆಗಳು. | ರೂ | ಆ | ಪೈ |
|---|---|---|---|
| ನಾಲ್ಕನೇ ದರ್ಜೆ | 0 | 6 | 0 |
| ಮೂರನೇ ,, | 0 | 4 | 6 |
| ಎರಡನೇ ,, | 0 | 4 | 0 |
| ಸಮಾಜಶಾಸ್ತ್ರ. | | | |
| ಐದನೇ ದರ್ಜೆ | 0 | 8 | 0 |
| ನಾಲ್ಕನೇ ,, | 0 | 8 | 0 |
| ಮೂರನೇ ,, | 0 | 2 | 6 |

| ಸಾಮಾನ್ಯ ವಿಜ್ಞಾನ. | ರೂ | ಆ | ಪೈ |
|---|---|---|---|
| ಎರಡನೇ ದರ್ಜೆ | 0 | 3 | 0 |
| ಮೂರನೇ ,, | 0 | 3 | 0 |
| ನಾಲ್ಕನೇ ,, | 0 | 5 | 0 |
| ಐದನೇ ,, | 0 | 6 | 0 |

## ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕಂದಿಗಳು
ಜೇನು ಸತ್ತು ಕಾಗೆ ಬಡವಾಯಿತು
ಬೆಣಸಿನ ಕಾಳಪ್ಪ
ಆರ್ಗಣೆ ಮುದ್ದೆ
ಇಲಿಗಳ ಥಕ್ಕ ಥೈ.
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0–0–9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.



ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

# ಶಾರದಾ ಛಾಪಖಾನೆ, ಮಂಗಳೂರು.



ಶಿವರಾಮ ಕಾರಂತ ವಿರಚಿತ

# ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ

ಕ್ರೌನ್ ¼ ಆಕಾರದ ೧೪೩ ಪುಟಗಳು

ಉತ್ತಮ ತರದ ಹಾಸ್ಯ.

ಬೆಲೆ: 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು

# ನಡೆದ ಕತೆಗಳು.

## True Stories.

ಓದಿ ಮುಗಿಸುವ ಸಮಯ — ಮೂರೇ ನಿಮಿಷಗಳು.

*All Rights Reserved.*

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೊರಗೆಡಹುವುದೇ 'ನಡೆದ ಕತೆಗಳು'— ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು; ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ

[ಸೂಚನೆ — ಸರ್ವ ಹಕ್ಕನ್ನು ಕಾದಿಟ್ಟ ಮೇಲೂ ಕೆಲವು ಪತ್ರಿಕೆಗಳು ಈ ಕತೆಗಳ ಉಪಯೋಗವನ್ನು ಮಾಡುತ್ತಿರುವುದು ಕಂಡುಬರುತ್ತದೆ. ಅದು ಸರ್ವಥಾ ಕೂಡದು.]

ಪುಸ್ತಕ ೨—೨.

### ಅವಳ ಸೀಮಂತ.

ಉರ್ವದ ಕೋಟೆಕಾರ್ ತುಕ್ರಪ್ಪನವರ ಮಗ ನಾರಾಯಣನ ಹೆಂಡತಿ ಪ್ರಥಮದ್ದಾಗಿ ಗರ್ಭಿಣಿಯಾದಳು ನೋಡನೋಡುವಷ್ಟರಲ್ಲೇ ಆರು ಮಾಸಗಳು ಕಳೆದೇಹೋದುವು.

ಅಷ್ಟರ ತನಕ ನಾರಾಯಣನು ಅವಳ ಸೀಮಂತದ ಕುರಿತಾಗಿ ಹೆಚ್ಚು ಯೋಚಿಸಿಕೊಂಡಿರಲಿಲ್ಲ ಆದರೆ, ಆರು ತಿಂಗಳುಗಳು ದಾಟುತ್ತಲೇ, ಅವನ ತಾಯಿ ಅಂತುವಿನ ಉಪಟಳವು ವಿಶೇಷವಾಗಲಾರಂಭವಾಯಿತು 'ಕಲ್ಯಾಣಿಯು ಇಂದೋ ನಾಳೆಯೋ ಹೆರಳಿದ್ದಾಳೆ, ಅದಷ್ಟು ಬೇಗನೇ ಅವಳ ಬಯಕೆ ತೀರಿಸಬೇಕು. ಕಡಮೆಯೆಂದರೆ ಒಂದು ನೂರು ರೂಪಾಯಿಯಾದರೂ ಬೇಕಾದೀತು, ಎಲ್ಲಿಂದಾದರೂ ತಾ, ನಿನ್ನ ತಂದೆಯವರ ಕೈಯಲ್ಲಿ ಸ್ಪೈ ಒಂದಿಲ್ಲವಂತೆ'—ಎಂದು ನಾರಾಯಣನ ಕಿವಿಯಲ್ಲಿ ತಾಯಿಯ ಉಪದೇಶವು ದಿನಂಪ್ರತಿ ಹಾಡಲ್ಪಡುತ್ತಿತ್ತು

ಕಡಮೆಯೆಂದರೆ ಗರ್ಭಿಣಿಗೆ ಐವತ್ತು ರೂಪಾಯಿ ಬೆಲೆಬಾಳುವ ಸೀರೆರವಕೆಗಳನ್ನಾದರೂ ಸೀಮಂತದ ದಿನ ಕಲ್ಯಾಣಿಗೆ ಬಹುಮಾನಿಸಬೇಕು, ಇನ್ನೂರು ಜನ ಜಾತಿಗೃಹಸ್ಥರಿಗಾದರೂ ಬೂರಿಭೋಜನವು ನಡೆಯಬೇಕು ತನಗೆ ಹೊಸ ಉಡಿಗೆ ತೊಡಿಗೆಗಳಾಗಬೇಕು—ಪಾಪ ನಾರಾಯಣನು ಏನು ಮಾಡಿಯಾನು?

ಹಲವು ಮಿತ್ರರೊಡನೆ ಸಾಲ ಕೇಳಿದ, ಇಲ್ಲ! ಬಹು ದೀರ್ಘವಾಗಿ ಆಲೋಚಿಸಿ, ದುಡ್ಡನ್ನು ಸದ್ಯಕ್ಕೆ ಹುಟ್ಟಿಸುವ ಉಪಾಯವೇನೆಂದು ಚಿಂತಿಸಿದ, ಆದರೆ, ಒಂದು ಸದುಪಾಯವೂ ಚಿತ್ತಕ್ಕೆ ಬರಲಿಲ್ಲ

ರಾತ್ರಿ ಒಂದು ಗಂಟೆ ಕಳೆದಿರಬಹುದು, ಅಷ್ಟರ ತನಕವೂ ಎಚ್ಚರವಿದ್ದ ನಾರಾಯಣನು ಪತ್ನಿಯ ಸೀಮಂತಕ್ಕೆ ಅಗತ್ಯವಿರುವ ಹಣವನ್ನು ಸಾಲವೆತ್ತುವ ವಿಷಯವಾಗಿ ಆಲೋಚನಾಮಗ್ನನಾಗಿರುವನು. ತಲೆಯು ಬಿಸಿಯಾಗಿ ಅವನಿಗೆ ನಿದ್ರೆಯು ಹತ್ತಲೇ ಇಲ್ಲ

ಅವನಿಗೆ ತಟ್ಟನೆ ಒಂದು ಯೋಚನೆಯುಂಟಾಯಿತು ತಾನು ಪಿಯೊನನಾಗಿ ಕೆಲಸಮಾಡುತ್ತಿರುವ ಸಂಯುಕ್ತ ಕರ್ಣಾಟಕ ಬೇಂಕ್ ಲಿಮಿಟೆಡ್, ಇದರ ಸೆಕ್ರೆಟರಿಗಳಿಗೊಂದು ದೊಡ್ಡ ಪತ್ರ ಬರೆದು, ಸ್ಥಿತಿಯನ್ನು ವಿವರಿಸಿ ತನಗೆ ನೂರು ರೂಪಾಯಿ ಸಾಲ ಕೊಡಬೇಕೆಂದು ಕೇಳಲು ಎಂದು ನಿರ್ಧರಿಸಿಕೊಂಡನು ಅವನಿಗೆ ತೋರಿಬಂದ ಉಪಾಯಗಳಲ್ಲಿ ಇದೇ ಕೊನೆದ್ದು

ಬೆಳಿಗ್ಗೆ ಎದ್ದು ಒಂದು ದೊಡ್ಡ ಪತ್ರ ಬರೆದನು 'ಪಾವಂದರೇ' ಹೇಗಾದರೂ ರಕ್ಷಿಸಬೇಕು ಯಾವ ಉಪಾಯವನ್ನೂ ಕಾಣೆ ನೋಟು ಬರೆದು ಕೊಡುತ್ತೇನೆ. ಆರು ತಿಂಗಳುಗಳಲ್ಲಿ ಹಿಂದೆ ಕೊಡುತ್ತೇನೆ. ಸೀಮಂತವನ್ನು ಜರಗಿಸದೆ ನಿರ್ವಾಹವೇ ಇಲ್ಲ! ಇದನ್ನು ನೆರವೇರಿಸದಿದ್ದರೆ ನಮ್ಮ ಸಮಾಜದವರು ನನ್ನನ್ನು ಅಪಹಾಸ್ಯಕ್ಕೀಡುಮಾಡಿಯಾರು ನನ್ನ ಹೆಂಡತಿಯ ಸೀಮಂತದ ಒಂದು ಊಟವನ್ನಾದರೂ ತಮಗೆ ಕೊಡಲು ಶಕ್ತನಾಗದೆ ಬಡವನೆಂದು ನನ್ನನ್ನು ಕರೆದಾರು! ಸಮಾಜದ ಕಟ್ಟಳೆಯನ್ನು ಮುರಿದ ದುರಹಂಕಾರಿ ಎಂದು ನನ್ನನ್ನು ಧಿಕ್ಕರಿಸಿಯಾರು! ಸಮಾಜದ ದೃಷ್ಟಿಯಲ್ಲಿ ನಾನು ದರಿದ್ರನೆಂದು ಆಗುವೆನು!'ಎಂದು ನಿವೇದಿಸಿಕೊಂಡನು.

ಪತ್ರವನ್ನು ಓದಿದ ಶ್ರೀ ಅನಂತಶರ್ಮರಿಗೆ ಬಹು ವ್ಯಸನವಾಯಿತು. ನಾರಾಯಣನನ್ನು ತನ್ನ ಬಳಿಗೆ ಕರೆದರು. ಮುಖವನ್ನು ಬಾಡಿಸಿ ನಿಂತ ಅವನಿಗೆ ಹೀಗೆ ಹೇಳಿದರು: 'ಹೌದೋ ನಾರಾಯಣಾ! ನಿನಗೆ ಸಿಗುವುದು ಹನ್ನೆರಡು ರೂಪಾಯಿ. ಸಂಬಳ. ನಿನ್ನ ಹೆಂಡತಿಯ ಸೀಮಂತಕ್ಕೆ ಒಂದು ನೂರು ರೂಪಾಯಿ ವೆಚ್ಚ ಮಾಡಿ ಕಟ್ಟುಕಟ್ಟಳೆಯನ್ನು ಪರಿಪಾಲಿಸಬೇಕೆಂಬ ಅಗತ್ಯವೇನೋ! ಈ ಒಂದು ನೂರು ರೂಪಾಯಿ ಸಾಲವನ್ನು ಹೇಗೆ ತೀರಿಸುವಿ? ನೋಟು ಬರೆದು ಕೊಡುತ್ತೇನೆ ಎನ್ನುತ್ತಿ, ಸರಿ ಆ ಹಣವನ್ನು ಯಾವ ರೀತಿಯಿಂದ ಮರುಪಾವತಿ ಮಾಡುತ್ತಿ? ಚೆನ್ನಾಗಿ ಆಲೋಚಿಸು. ಇಂತಹ ಹಳೆಯ ಕಟ್ಟುಕಟ್ಟಳೆಯನ್ನು ಪಾಲಿಸಹೋಗಿ ಸಾಲಕ್ಕೆ ತುತ್ತಾಗಬಾರದು. ಬಂದವರು ಊಟ ತೀರಿಸಿ ತೇಗಿಕೊಂಡು ಹಿಂದೆ ನಡೆಯುತ್ತಾರೆ, ನಿನ್ನ ಗತಿಯೇನು? ಐಶ್ವರ್ಯವಂತರು ಮದುವೆ, ಸೀಮಂತಗಳನ್ನು ವಿಜೃಂಭಣೆಯಿಂದ ಮಾಡುತ್ತಾರೆಂದು ಬಡವರೂ ಹಾಗೆ ಮಾಡಬೇಕೆ? ನಿನ್ನ ಹೆಂಡತಿಗೆ ತಿನ್ನಲಾಶೆಯಿದ್ದರೆ, ಅವಳಿಗೆ ಬೇಕುಬೇಕಾದ ತಿಂಡಿ ತಿನಸುಗಳನ್ನು ತಂದುಕೊಡು ನಾಲ್ಕಾರು ರೂಪಾಯಿ ಬೆಲೆಬಾಳುವ ಸೀರೆ ರವಕೆ ಕೊಡು ಅವಳೇನು ನಿನ್ನನ್ನು ಪೀಡಿಸಿ, ನಿನ್ನ ಬಡತನವನ್ನು ಅಲಕ್ಷಿಸಿ, ನಿನ್ನನ್ನು ಪೀಡಿಸುತ್ತಾಳೋ? ಹಾಗೆ ಪೀಡಿಸಿದರೆ ಅವಳಿಗೆ ನಿನ್ನ ಗತಿಯನ್ನು ಹೇಳು' ಎಂದು ಮೊದಲಾಗಿ ಉಪದೇಶಿಸಿದರು. ಆದರೆ ಮಾಡುವುದೇನು? ತನ್ನ ಸಮಾಜದ ಕಟ್ಟಳೆಗೊಳಪಟ್ಟ ನಾರಾಯಣನಿಗೆ ಸೆಕ್ರೆಟರಿಗಳ ಬೋಧನೆಯ ಅರ್ಥವೇ ಆಗಲಿಲ್ಲ

ಪಾಪ, ಸಾಯಲಿ! ಎಂದು ಭಾವಿಸಿ ಶ್ರೀ ಅನಂತಶರ್ಮರು ನಾರಾಯಣನಿಂದ ಒಂದು ನೋಟನ್ನು ಬರೆಸಿ ತೆಗೆದುಕೊಂಡು ನೂರು ರೂಪಾಯಿ ಸಾಲ ಕೊಟ್ಟರು.

ಸೀಮಂತವು ಕೋಲಾಹಲಮಯವಾಗಿ ನಡೆಯಿತು ಅವನ ಕಣ್ಣೀರ ದುಡ್ಡು ಎಲ್ಲರನ್ನೂ ಸಂತೃಪ್ತಿಗೊಳಿಸಿತೆಂದು ಬೇರೆ ಹೇಳುವುದಿಲ್ಲ

ಸೀಮಂತವು ಕಳೆದಾದ ಮೂರು ತಿಂಗಳುಗಳಲ್ಲಿ ಕಲ್ಯಾಣಿಯು ಗಂಡುಮಗುವನ್ನು ಹೆತ್ತಳು ಹೆರಿಗೆಯ ವೆಚ್ಚವನ್ನು ನಾರಾಯಣನು ಹೇಗೂ ಮಾಡಿ ಎದುರಿಸಿದನು ನೆಮ್ಮದಿಯಲ್ಲೇ ಇದ್ದನವನು

ಅಷ್ಟರಲ್ಲಿ ಸಂಯುಕ್ತ ಕರ್ಣಾಟಕ ಬೇಂಕಿನಲ್ಲಿ ಗಲಾಟೆ ಸೆಕ್ರೆಟರಿಯವರು ತನ್ನ ಸ್ವಂತ ಹೊಣೆಯ ಮೇಲೆ ಬೇಂಕಿನ ಹಣದಿಂದ ನೂರು ರೂಪಾಯಿಗಳನ್ನು ನಾರಾಯಣನಿಗೆ ಕೊಟ್ಟದು ನಿಬಂಧನೆಗೆ ವಿರೋಧವೆಂದು ಬೇಂಕಿನ ಕೆಲವು ಡೈರೆಕ್ಟರರು ಗೊಂದಲವೆಬ್ಬಿಸಿದರು. ನಾರಾಯಣನ ಸಂಬಳದಿಂದ ತಿಂಗಳಿಗೆ ಐದು ರೂಪಾಯಿಗಳನ್ನು ಕಳೆಯುತ್ತಾ ಬರಬೇಕೆಂದು ನಿರ್ಧರಿಸಿದರು.

ಎಂತಹ ದುರವಸ್ಥೆ! ಡೈರೆಕ್ಟರರು ತೀರ್ಮಾನಿಸಿದ ಮೇಲೆ ಬೇರೆ ಉಪಾಯವುಂಟೇ? ಅಷ್ಟರಲ್ಲೂ ಸೆಕ್ರೆಟರಿಗಳ ಮೇಲೆ ಆರೋಪವು ನಡೆದ ಮೇಲೆ!

ಈಗ ನಾರಾಯಣನು ತಿಂಗಳಿಗೆ ಏಳು ರೂಪಾಯಿಗಳ ಸಂಬಳ ಪಡೆಯುತ್ತಿರುವನು. ನಾಲ್ಕಾರು ಜನರಿರುವ ಸಂಸಾರದ ರಥವನ್ನು ಕೈಗೊಟ್ಟು ನಡೆಸಬೇಕು. ಹೊಟ್ಟೆಯು ಕೇಳುವುದಿಲ್ಲ,—ವೆಚ್ಚವು ನಿಲ್ಲುವುದಿಲ್ಲ. ತಿಂಗಳಿಗೆ ಹನ್ನೆರಡು ರೂಪಾಯಿಗಳ ವೆಚ್ಚದಿಂದ ನಡೆಯುತ್ತಿದ್ದ ಅವನ ಸಂಸಾರವು ಈಗಿನ ಏಳು ರೂಪಾಯಿ ಸಂಬಳದಿಂದ ನಡೆಯುವುದೆಂತು? ಐದೈದು ರೂಪಾಯಿಗಳಂತೆ ನೂರು ರೂಪಾಯಿಗಳ ಸಾಲ ತೀರುವ ಇಪ್ಪತ್ತು ತಿಂಗಳುಗಳ ವರೆಗೆ ಅವನೂ ಅವನ ಮನೆಯವರೂ ದಿನಹರಣ ಹೇಗೆ ಮಾಡಬೇಕು? ಮೇಲಾಗಿ ನಾರಾಯಣನ ತಂದೆಯ ಪಕ್ಷಪಾತರೋಗಕ್ಕೆ ಮದ್ದು ನಡೆಯುತ್ತದೆ. ಅವನ ತಂಗಿಯೊಬ್ಬಳು ವಿವಾಹ ವಯಸ್ಕಳಾಗಿ ಎಂಟು ವರ್ಷಗಳು ದಾಟಿದುವು. ಅಯ್ಯೋ, ಯಾಕೆಯ್ಯಾ ಬೇಕಿತ್ತು ಅವಳ ಸೀಮಂತ ಎಂದು ನಾರಾಯಣ ಹಲಬುತ್ತಿದ್ದಾನೆ.

ಮ. ಜಾ.

---

# ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ಶಾಲಾ ಇನ್ಸ್‌ಪೆಕ್ಟರರು:--(ಐದನೇ ಕ್ಲಾಸನ್ನು ಲೆಕ್ಕದಲ್ಲಿ ಪರೀಕ್ಷೆಮಾಡುತ್ತಾ) ಎಲೋ ಹುಡುಗ 'ಜಿ. ಸಿ ಎಮ್' ಎಂದರೇನು?

ಹುಡುಗ:–ಗವರ್ನ್‌ಮೆಂಟ್ ಕೋಲೇಜು ಮಿಸಲೇನಿ ಸಾರ್.

\+ + + +

ಉಪಾಧ್ಯಾಯ:–ಮಾಧು, ನೀನು ಶಾಲೆಗೆ ಬರಲು ತಡವೇನು?

ಮಾಧು.–ಅದು ನನ್ನ ತಪ್ಪಲ್ಲ ಸಾರ್

ಉಪಾಧ್ಯಾಯ:— ಮತ್ತಾರ ತಪ್ಪು?

ಮಾಧು:–ಅಲ್ಲಲ್ಲಿ ರಸ್ತೆಗಳ ಬದಿಗಳಲ್ಲಿ ತೂಗಾಡಿಸಿದ ನೋಟೀಸುಗಳ ತಪ್ಪು

ಉಪಾಧ್ಯಾಯ:–ಹೇಗೆ?

ಮಾಧು.–'School Zone, go Slowly' ಎಂದು ನೋಟೀಸಿನಲ್ಲಿ ಇತ್ತು ಆದುದರಿಂದ ನಾನು ನನ್ನಿಂದ ಸಾಧ್ಯವಾದಷ್ಟು ಮೆಲ್ಲಗೆ ಬಂದೆನು

\+ + + +

ಪಟ್ಟಣಿಗ (ಒಂದು ಹಳ್ಳಿಗೆ ಬಂದು ತನ್ನ ಹಳ್ಳಿಯ ಮಿತ್ರನೊಡನೆ)ಸೂರ್ಯಾಸ್ತಮಯವಾದೊಡನೆ, ಪೇಟೆಯಲ್ಲಿದ್ದ ನನಗೆ, ಹಳ್ಳಿಯ ನೋಟವು ರುಚಿಸದು

ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣರ ಪರಿಷತ್ತಿನ [illegible]ನೇ ಅಧಿವೇಶನವು ಸನ್ ೧೯[illegible]ನೇ ಇಸವಿಯಲ್ಲಿ [illegible] ನಡೆಯಿತು. [illegible] ಪರಿಷತ್ತಿನ ಅಧಿವೇಶನ [illegible] ಅವಶ್ಯಕತೆಯು ತೋರಿಬಂದ [illegible] ಎಷ್ಟೋ ದೊಡ್ಡ ದೊಡ್ಡ [illegible] ಪರಿಷತ್ತಿನ ಜನರಲ್ ಸೆಕ್ರೆಟರಿಯವರು ಮುಂಬಯಿಯಲ್ಲಿ ಅಧಿವೇಶನ ಜರಗುವುದಕ್ಕೋಸ್ಕರ ವಿನಂತಿಯು ಮೇರೆಗೆ ಸ್ವೀಕಾರ ಮಾಡಿ ಪರಿಷತ್ತಿಯ ಜನರಲ್ ಸೆಕ್ರೆಟರಿಯು ಸ್ವಜಾತಿ ಬಾಂಧವರಿಗೆ ಕೆಳಗೆ ತಿಳಿಸುವಂತೆ ಜಾಹೀರು ಮಾಡಿಕೊಳ್ಳುವುದೇನೆಂದರೆ

ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣರ ಒಂಭತ್ತನೇ ಅಧಿವೇಶನವು ಮುಂಬಾಯಿಯಲ್ಲಿ ತಾ ೨೬, ೨೭, ೨೮ ಡಿಸೆಂಬರ ತಿಂಗಳು ೧೯೩೫ನೇ ಇಸವಿಯಲ್ಲಿ ಶ್ರೀಯುತ ವಿ. ಟೀ. ಪಳಮೀ ಬಾರ್ ಎಟ್ ಲೋ ಮತ್ತು ಇತರ ಗೃಹಸ್ಥರಿಂದ ಕೂಡಿದ ಕಮಿಟಿಯವರು ಕಳುಹಿಸಿದ ಆಮಂತ್ರಣ ಪತ್ರಿಕಾನುಸಾರ ಮುಂಬಾಯಿಯಲ್ಲಿ ಜರಗುವ ಸದರಿ ಅಧಿವೇಶನವನ್ನು ಮೇಲೆ ತಿಳಿಸಿದ ದಿವಸಗಳಲ್ಲಿ ಜರಗಿಸುವುದೆಂತ ನಿಶ್ಚಯಿಸಿದ್ದಾರೆ. ಪರಿಷತ್ತು ಆಮಂತ್ರಣ ಮಾಡುವವರ ಕಡೆಯಿಂದ ಸ್ವಾಗತಕಮಿಟಿಯ ಯೋಜನೆಯಾಗಿ ಪರಿಷತ್ತನ್ನು ಜರಗುವ ಸಂಬಂಧ ಮುಂದಿನ ಪತ್ರಕಗಳಿಂದ ಸದರಿ ಸ್ವಾಗತಪಕ್ಷದ ಕಡೆಯಿಂದ ಜನರಲ್ ಕಾರ್ಯದರ್ಶಿಯವರ ಮುಖಾಂತರ ಮಾಡುವದಾಗಿದೆ. ಈ ಪರಿಷತ್ತು ೧೮ ವರ್ಷಗಳ ನಂತರ ಜರಗುವುದಾಗಿ ಬರುತ್ತದೆ. ಆದರೂ ಬೇರೆ ಬೇರೆ ಕಡೆಗಳಲ್ಲಿಯ ಗೌಡಸಾರಸ್ವತ ಜಾತಿಬಾಂಧವರೆಲ್ಲರೂ ಪರಿಷತ್ತಿಗೆ ಪ್ರತಿನಿಧಿಗಳಾಗಿ ಕಳುಹಿಸುವ ಎಲ್ಲಾ ಪ್ರಕಾರದ ಸಹಾಯಮಾಡಬೇಕು. ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣರ ಪರಿಷತ್ತಿನ ವಿನಂತಿಯು ಮೇರೆಗೆ ಸ್ವೀಕಾರವಾದ ಸದರಿ ಪರಿಷತ್ತಿನ ಉದ್ದೇಶದ ಸಂಘಟನೆಯನ್ನು ಮಾಡುವುದಕ್ಕಾಗಿ ಗೌಡಸಾರಸ್ವತ ಬ್ರಾಹ್ಮಣರ ಬಂಧುಬಾಂಧವರೆಲ್ಲರೂ ಈ ಪರಿಷತ್ತಿನಲ್ಲಿ ಅವಶ್ಯವಾಗಿ ಭಾಗವಹಿಸಿಕೊಳ್ಳಬೇಕು. ಸ್ವಾಗತಮಂಡಳದ ಸಭಾಧ್ಯಕ್ಷರಿಗೆ ರೂ ೧೦ ಪ್ರತಿನಿಧಿಯವರಿಗೆ ರೂ. ೩, ಈ ತರದ ವರ್ಗಣಿಯಿರುತ್ತದೆ. ಈ ಪರಿಷತ್ತಿನ ಮೊದಲು ಬೆಳಗಾಮಿನಲ್ಲಿ ಜರಗಿದ ಅಧಿವೇಶನಗಳಲ್ಲಿ ಪಾಸಾದ ಸಂಘಟನೆಯ ಮುಖ್ಯ ನಿಯಮವು ಮುಂದೆ ತಿಳಿಸುವಂತಿದೆ.

೧ ಈ ಪರಿಷತ್ತಿನ ಹೆಸರು "ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣರ ಪರಿಷತ್" ಎಂದು ಕರೆಯಲ್ಪಡುವುದು. ೨ ಗೌಡಸಾರಸ್ವತ ಬ್ರಾಹ್ಮಣರ ಜಾತಿಯೊಳಗಿನ ಎಲ್ಲಾ ಉಪಭೇದಗಳ ಏಕೀಕರಣವಾಗಬೇಕು ಮತ್ತು ಅವರಲ್ಲಿರುವ ಪರಸ್ಪರ ಅನ್ನವ್ಯವಹಾರ, ವಿವಾಹ ಸಂಬಂಧವಾಗಿ ಬೇಕು. ಈ ತತ್ವಗಳು ಅವುಗಳಲ್ಲಿ ಪೂರ್ಣ ಸಮ್ಮತವಾಗಿರುತ್ತವೆ. ಹೀಗೆ ಸ್ವಜಾತಿಗೃಹಸ್ಥರು ಈ ಪರಿಷತ್ತಿಯ ಸಭಾಧ್ಯಕ್ಷರಾಗಬಹುದು. ೪ ಸ್ವಜಾತಿ [illegible] ಮತ್ತು ಇತರ ಜಾತಿಯ [illegible] ಜನರಲ್ ಸೆಕ್ರೆಟರಿ [illegible] ಸ್ವಾಗತಮಂಡಳದ [illegible] (ದೇವಸ್ಥಾನದ [illegible]) [illegible] ಸ್ವಾಗತಮಂಡಳದ ಸಭಾಸದಸ್ಯರ ಸಭೆಯನ್ನು ಬೇಗನೇ ಕರೆದು ಪರಿಷತ್ತಿನ ಅಧ್ಯಕ್ಷತೆಯ ನೇಮಕಮಾಡಬೇಕಾಗಿದೆ.

೧೨ನೇ ಪುಟಕ್ಕೆ ಮುಂದರಿಯುವುದು


**KANNADA**

Savings Certificates can be cashed even before maturity.

Full Particulars from—

CANARA BANK LTD

OFFICES AT —

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—City, Mangalore—Bunder, Kasaragod, Puttur, Buntwal, Karkala, Coondapoor, Udipi, & Gangoli

AVAILABLE IN DENOMINATIONS OF Rs. 10 UPWORDS

TOTAL YIELD RS 4-6-0% P.A.

Paid once half yearly at 3½ p. a. with an additional 1¼ p a on maturity

If Left To Accumulate

RS. 100-

Will Amount to

RS. 122-13-6

Estd 1906

**CANARA BANK**

LIMITED

| Subscribed Capital | Paid up Capital |
|---|---|
| 6,00,000 | 3,31,000 |

| Reserves | Deposits | Working Capital |
|---|---|---|
| 1,50,000 | 58,62,000 | 78,49,000 |

# ಶ್ರೀ ಜುಮ್ಮಾದಾದಾ ವ್ಯಾಯಾಮ ಮಂದಿರ, ಬರೋಡಾ.

[ಅಂಗಸಾಧನ ಶಾಸ್ತ್ರವು ಈಗೀಗ ಹಿಂದೀಯರ ಲಕ್ಷ್ಯಕ್ಕೆ ಹೆಚ್ಚು ಹೆಚ್ಚು ಪಾತ್ರವಾಗುತ್ತಿದೆ. ಬರೋಡದ ವ್ಯಾಯಾಮ ಮಂದಿರದ ಕುರಿತಾಗಿ ಶ್ರೀ ಬಿ ರಾಘವೇಂದ್ರ ರಾಯರು ಕಳುಹಿಸಿರುವ ಈ ಲೇಖನವನ್ನು ಇಲ್ಲಿ ಪ್ರಕಟಿಸಿ ನಮ್ಮ ಕನ್ನಡ ನಾಡಿನ ತರುಣರನ್ನು ಎಚ್ಚರಿಸಬಯಸುತ್ತೇವೆ]

ಜಗತ್ತಿನಲ್ಲಿಯ ಪ್ರತಿಯೊಂದು ಭಾಗದಲ್ಲೂ ಭಾರತೀಯ ವ್ಯಾಯಾಮ ಪದ್ಧತಿಗೆ ಒಂದು ಸ್ಥಾನವಿದೆ. ಯಾಕೆಂದರೆ ಇದು ಶಾಸ್ತ್ರ ಸಮ್ಮತವಾದ ಬಹು ಪ್ರಾಚೀನ ಪದ್ಧತಿಯು ಆದರೆ ದುರ್ಭಾಗ್ಯದಿಂದ ನಾವು ಅದರ ಕಡೆಗೆ ಅಲಕ್ಷ್ಯವನ್ನು ಮಾಡಿ ಅನ್ಯ ಸಾಂಪ್ರದಾಯವನ್ನು ಅನುಸರಿಸುತ್ತ ನಡೆದಿರುವುದರಿಂದ ಅದು ತೀರ ಅವನತಿಯನ್ನು ಹೊಂದುತ್ತಲಿರುವುದು ಇದನ್ನು ಹೋಗಲಾಡಿಸಿ ನಮ್ಮವರಿಗೆ ನಮ್ಮ ಪೂರ್ವದ ವಿದ್ಯೆಯನ್ನು ನೆನಪಿಗೆ ತಂದುಕೊಟ್ಟು ಅವರಿಗೆ ಸ್ವವಿದ್ಯೆಯ ಬಗ್ಗೆ ಪ್ರೇಮವೂ, ವಿಶ್ವಾಸವೂ ಹುಟ್ಟಿ ಜನತೆಯಲ್ಲಿ ಅದರ ಪ್ರಚಾರವುಂಟಾಗಬೇಕೆಂಬುದಾಗಿಯೂ, ನಮ್ಮ ಪೂರ್ವದ ಕಲೆಯು ಪುನರ್ಜೀವಿತವಾಗಿ ಜನರಲ್ಲಿ ಅದು ರೂಢಿಗೆ ಬಂದು ಅವರು ತಮ್ಮ ಆಯುರಾರೋಗ್ಯವನ್ನೂ, ಆತ್ಮರಕ್ಷಣೆಯನ್ನೂ ಮಾಡಿಕೊಳ್ಳಲು ಸಮರ್ಥರಾಗಬೇಕೆಂಬ ಉಚ್ಚ ಧ್ಯೇಯದಿಂದಲೂ ಕೆಲವು ಸಂಸ್ಥೆಗಳು ಅಲ್ಲಲ್ಲಿ ಕೆಲಸವನ್ನು ಮಾಡುತ್ತಲಿರುವುವು ಇಂತಹ ಸಂಸ್ಥೆಗಳಲ್ಲಿ ಶ್ರೀ ಜುಮ್ಮಾದಾದಾ ವ್ಯಾಯಾಮ ಮಂದಿರವು ಮೊದಲನೆಯದು ಇದು ಸ್ಥಾಪಿತವಾಗಿ ಸುಮಾರು ೫೪ ೫೫ ವರ್ಷವಾಗುತ್ತ ಬಂದುದಲ್ಲದೆ ಒಂದೇ ಸಮನೆ ತನ್ನ ಕಾರ್ಯವನ್ನು ಯಥಾಯೋಗ್ಯವಾಗಿ ಮಾಡುತ್ತಲಿರುವುದು ಸಧ್ಯ ನಾವು ಭಾರತೀಯ ವ್ಯಾಯಾಮ ಪದ್ಧತಿಯ ಉಚ್ಚಶಿಕ್ಷಣವನ್ನು ಹೊಂದಬೇಕಾದರೆ ಅಥವಾ ನೋಡಬೇಕಾದರೆ ಬರೋಡಾದಲ್ಲಿರುವ ಈ ವ್ಯಾಯಾಮಶಾಲೆಗೆ ಹೋಗಬೇಕು

### ಪೂರ್ವೋತಿಹಾಸ:

ಬರೋಡದ ಈ ಹಿಂದಿನ ಮಹಾರಾಜರಾದ ಶ್ರೀಮಂತ ಕೈ ಖಂಡೇರಾವ್ ಮಹಾರಾಜರವರು ತಾನು ಸ್ವತಃ ಮಲ್ಲವಿದ್ಯಾ ವಿಶಾರದರಾಗಿದ್ದುದಲ್ಲದೆ ಬಹು ವ್ಯಾಯಾಮಪ್ರೇಮಿಗಳಾಗಿದ್ದರು. ಅವರು ಸ್ವರ್ಗಸ್ಥರಾಗುತ್ತಲೇ ಬರೋಡೆಯಲ್ಲಿ ವ್ಯಾಯಾಮವು ನಾಶವಾಗುತ್ತ ಬಂತು ಇದನ್ನು ಕಂಡು ಪೂಜ್ಯ ಗುರುವರ ಶ್ರೀ ಜುಮ್ಮಾದಾದಾರವರು ಪುನ ಜನರಲ್ಲಿ ಇದನ್ನು ರೂಢಿಗೆ ತರುವುದಕ್ಕಾಗಿ ೧೮೮೦ನೇ ಇಸವಿಯಲ್ಲಿ ವ್ಯಾಯಾಮ ಸಂಸ್ಥೆಯೊಂದನ್ನು ಸ್ಥಾಪಿಸಿದರು ಆದರೆ ಆಗ ಇದಕ್ಕೆ ಯಾವುದೊಂದು ಕಟ್ಟಡವಾಗಲೀ ಈಗಿನ ಈ ಹೆಸರಾಗಲೀ ಇರಲಿಲ್ಲ 'ನೇಟಿವ್ ಜಿಮ್ನ್ಯಾಸ್ಟಿಕ್ ಇನ್‌ಸ್ಟಿಟ್ಯೂಟ್' ಎಂಬುದೇ ಇದರ ಪೂರ್ವದ ಹೆಸರು ಕಾಲಕ್ರಮದಿಂದ ಪ್ರಾತಸ್ಮರಣೀಯರಾದ ಶ್ರೀ ಜುಮ್ಮಾದಾದಾರವರು ತನ್ನ ೧೧೦ನೆಯ ವಯಸ್ಸಿನಲ್ಲಿ ಅಂದರೆ ೧೯೦೪ನೇ ಇಸವಿ ದಶಂಬರ ತಾರೀಕು ೮ರಲ್ಲು 'ವ್ಯಾಯಾಮ ಪ್ರಚಾರ ಕಾರ್ಯವನ್ನು ಚೆನ್ನಾಗಿ ನಡೆಯಿಸಿಕೊಂಡು ಹೋಗುವಂತೆ' ತಮ್ಮ ಶಿಷ್ಯ ಮಂಡಳಿಗೆ ಹೇಳಿ ತಾವು ದೈವಾಧೀನರಾದರು

### ಕಾರ್ಯಕಾರೀ ಮಂಡಲ ಸ್ಥಾಪನೆ:

ಮರಣಕಾಲದ ಗುರುವಿನ ಸದಿಚ್ಛೆಯನ್ನು ನೆರವೇರಿಸುವುದಕ್ಕಾಗಿ ಅವರ ಶಿಷ್ಯ ಮಂಡಳಿಯಲ್ಲಿ ಪ್ರಮುಖರೆನ್ನಿಸಿಕೊಂಡ ಶ್ರೀ ಕೆ ಶಂಕರರಾವ್ ದೀಕ್ಷಿ, ಉಸ್ತಾದ್ ಸೈಯದ್ ಇಮಾಂ ಸಾಹೇಬ್ ಮತ್ತು ಶ್ರೀ ಮಾಣಿಕ್‌ರಾವ್ ಇವರೂ ಸೇರಿಕೊಂಡು ತಂತಮ್ಮೊಳಗೆ ಒಂದು ಕಾರ್ಯಕಾರೀ ಮಂಡಲವನ್ನು ಸ್ಥಾಪಿಸಿ ಬಹು ಹುರುಪಿನಿಂದ ವ್ಯಾಯಾಮದ ಪ್ರಚಾರಕಾರ್ಯವನ್ನು ಸಾಗಿಸತೊಡಗಿದುದಲ್ಲದೆ ತಮ್ಮ ಪೂಜ್ಯ ಗುರುವಿನ ಸ್ಮರಣಾರ್ಥವಾಗಿ ಸಂಘಕ್ಕೆ ಮೊದಲಿದ್ದ ಹೆಸರನ್ನು ಬದಲಿಸಿ "ಶ್ರೀ ಜುಮ್ಮಾದಾದಾ ವ್ಯಾಯಾಮ ಮಂದಿರ"ವೆಂಬುದಾಗಿ ಇಟ್ಟರು ದಿನೇ ದಿನೇ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚತೊಡಗಿತು

### ಶ್ರೀ ಮಹಾತ್ಮಾಜೀಯವರ ಉದ್ಗಾರ:

ಈ ಸಂದರ್ಭದಲ್ಲಿ ಒಮ್ಮೆ ಮಹಾತ್ಮಾ ಗಾಂಧಿಯವರು ಈ ಸಂಸ್ಥೆಗೆ ತಮ್ಮ ಭೇಟಿಯನ್ನು ಕೊಟ್ಟು ಸಂಸ್ಥೆಯ ಎಲ್ಲಾ ಕಾರ್ಯವನ್ನೂ ನೋಡಿ ಸಂತುಷ್ಟರಾದುದಲ್ಲದೆ ಅದಕ್ಕಿರುವ ಸ್ಥಳಾಭಾವ ಮತ್ತು ಮಂದಿರದ ಅಭಾವವನ್ನು ಕಂಡು "ಹಿಂದೂಸ್ಥಾನದಲ್ಲಿ ಮಹಾಮಹಾ ಧನಾಢ್ಯರಿದ್ದೂ ಇಂತಹ ಭಾರತೀಯ ಮಲ್ಲವಿದ್ಯೆ ಹಾಗೂ ಶಸ್ತ್ರವಿದ್ಯೆಯನ್ನು ಪುನರುಜ್ಜೀವಿತಗೊಳಿಸಲು ಹೆಣಗಾಡುವ ಈ ಸಂಸ್ಥೆಗೆ ಸ್ಥಳದ ಮತ್ತು ಕಟ್ಟಡದ ಅಭಾವವುಂಟಾಗಿರುವುದು ನಮ್ಮ ನಿಜವಾದ ದುರ್ಭಾಗ್ಯವೇ ಸರಿ" ಎಂಬುದಾಗಿ ಉದ್ಗಾರವನ್ನು ತೆಗೆದಿರುವರು ನಿಜವಾಗಿಯೂ ಇಂತಹ ಕರ್ಮವೀರನ ಮನಶ್ಶಾಂತಿಯನ್ನು ಶಮನಗೊಳಿಸುವುದಕ್ಕಾಗಿಯೋ ಎಂಬಂತೆ ಕೆಲವೇ ದಿವಸಗಳಲ್ಲಿ ಕಾಠ್ಯಾವಾಡದಲ್ಲಿರುವ ವಿಠ್ಠಲಗಡ ಸಂಸ್ಥಾನಾಧಿಪತಿಯಾದ ಶ್ರೀಮಂತ ವಿಜಯಸಿಂಹರವರು ತಮ್ಮ ಸ್ವರ್ಗಸ್ಥ ತಂದೆಯ ಪುಣ್ಯಸ್ಮರಣಾರ್ಥವಾಗಿ ಈಗ ಜುಮ್ಮಾದಾದಾ ವ್ಯಾಯಾಮ ಮಂದಿರದ ಭವ್ಯ ಕಟ್ಟಡಕ್ಕೆ ಕಂಗೊಳಿಸುವ ವಿಸ್ತಾರವಾದ ಪ್ರದೇಶವನ್ನು ಕೊಡಿಸಿದರು ಇದಕ್ಕಾಗಿ ಈ ಕ್ರೀಡಾಂಗಣಕ್ಕೆ "ಶ್ರೀ ವಿಠ್ಠಲ ಕ್ರೀಡಾಭವನ" ವೆಂಬ ಹೆಸರು ದೊರೆಯಿತು ಸತ್ಕಾರ್ಯದಲ್ಲಿ ಆಶೆಯು ಬಲವಾಗಿದ್ದರೆ ದೈವಸಹಾಯವು ತನ್ನಂತೆಯೇ ಉಂಟಾಗುವುದೆಂಬುದು ಸುಳ್ಳಲ್ಲ ಅದರಂತೆಯೇ ಕಲ್ಕತ್ತೆಯ ಸುಪ್ರಸಿದ್ಧ ಸೇಟ್ ಜುಗಲ್ ಕಿಶೋರಜೀ ಬಿರಲಾರವರು ಆರು ಸಾವಿರ ರೂಪಾಯಿಗಳನ್ನೂ ಬೊಂಬಾಯಿಯ ಶ್ರೀಮಾನ್ ದಾನವೀರ ಶೇಟ್ ಸೂರಜೀ ಬಾಯಿಯವರು ಐದು ಸಾವಿರ ರೂಪಾಯಿಗಳನ್ನೂ ಕೊಟ್ಟುದಲ್ಲದೆ ಇನ್ನಿತರ ಅನೇಕ ಶ್ರೀಮಂತರು ಮುಕ್ತಹಸ್ತದಿಂದ ಧನಸಹಾಯವನ್ನು ಮಾಡಿದ ಪರಿಣಾಮವಾಗಿ ಕಟ್ಟಡದ ರೂಪರೇಖೆಯು ಬಹು ಜಾಗ್ರತೆಯಾಗಿಯೇ ಕೊನೆಗೊಂಡಿತು

### ಉದ್ಘಾಟನ ಸಮಾರಂಭ-

ಆ ವ್ಯಾಯಾಮ ಮಂದಿರದ ಉದ್ಘಾಟನೆಯನ್ನು ಶ್ರೀ ಸಯಾಜಿರಾವ್ ಮಹಾರಾಜರಿಂದ ಮಾಡಿಸಬೇಕೆಂಬುದಾಗಿ ಶಿಷ್ಯ ಮಂಡಲಿಗೆ ಬಲವತ್ತರವಾದ ಆಶೆಯಿತ್ತು ಆದರೆ ಅವರು ಅನಿವಾರ್ಯವಾದ ಕಾರಣಗಳ ದೆಸೆಯಿಂದ ವಿಲಾಯತಿಯಲ್ಲಿದ್ದ ಪ್ರಯುಕ್ತ ಆ ಕಾರ್ಯವು ಬೊಂಬಾಯಿಯ ಶ್ರೀ ಸೇಠ್ ಸೂರಜೀಬಾಯಿಯವರಿಂದ ತಾ ೨೦-೮-೧೯೨೨ ರಲ್ಲು ಬಹು ವಿಜೃಂಭಣೆಯಿಂದ ನೆರವೇರಿತು

### ಆಕರ್ಷಕ ವಸ್ತುಸಂಗ್ರಹ-

ಮಂದಿರ ಪ್ರವೇಶವನ್ನು ಮಾಡುತ್ತಲೇ ಮೊದಲು ಜನರನ್ನು ಆಕರ್ಷಿಸುವುದು ಶ್ರೀ ಭಜರಂಗ ಬಲೀಹನುಮಂತನ ಭವ್ಯ ಪ್ರತಿಮೆಯು ಇದು ಸಂಗಮರಮರ ಶಿಲೆಯಿಂದ ಕೆತ್ತಲ್ಪಟ್ಟು ಮೇಲೆ ಸುವರ್ಣ ಸುಗಂಧದ ಕೆಲಸವು ಮಾಡಲ್ಪಟ್ಟಿದೆ ಇದರ ಮೌಲ್ಯವು ಹೆಚ್ಚುಕಡಮೆ ೩೫೦೦ ರೂಪಾಯಿಗಳವರೆಗೂ ಆಗಬಹುದು ಇದನ್ನು ಶ್ರೀ ಇನಾಮ್‌ದಾರ್ ಜಿ ಪಿ ರೋಡೆಯವರು ಧರ್ಮಸೇವೆಯಾಗಿ ಸಂಸ್ಥೆಗೆ ಸಮರ್ಪಿಸುವರು ಪ್ರಪಂಚದಲ್ಲಿಯ ಅನೇಕ ಮಹಾಪುರುಷರ ಮತ್ತು ಮಲ್ಲವಿದ್ಯಾ ವಿಶಾರದರ ಭಾವಚಿತ್ರಗಳು ಧಾರಾಳವಾಗಿ ಮಂದಿರದಲ್ಲಿ ಸಂಗ್ರಹಿಸಲ್ಪಟ್ಟಿವೆ ಉಪಕರಣ ಸಂಗ್ರಹಗಳ ಅಪರಮಿತಿಯನ್ನು ಕಂಡು ಯಾವನಿಗೂ ಆಶ್ಚರ್ಯ ತೋರದಿರದು. ಎಷ್ಟೋ ಹತ್ತೆಂಟು ಸಾವಿರ ರೂಪಾಯಿ ಬೆಲೆಬಾಳುವ ತಲವಾರುಗಳೂ, ಬಾಲಾಗಳೂ ಇಲ್ಲಿಯ ಸಂಗ್ರಹದಲ್ಲಿವೆ. ಎಳೆಂಟು ಶತಮಾನದ ಹಿಂದಿನ ಎಷ್ಟೋ ರಾಜಯೋಗ್ಯವಾದ ಖಡ್ಗಗಳೂ ಬಹು ಪ್ರಯಾಸದಿಂದ ಇಲ್ಲಿ ಸಂಗ್ರಹಿಸಲ್ಪಟ್ಟಿವೆ ಅಕ್ಬರ್, ಮಾನಸಿಂಹ, ಒಟ್ಟಿನ ಮೇಲಿಂದ ಟಿಪ್ಪು ಸುಲ್ತಾನ್, ಶಿವಾಜಿ ವಗೈರೆಯರ ಮುದ್ರೆಯ ತಲವಾರುಗಳು ಇಲ್ಲಿ ಇವೆ ಯಾವನೊಬ್ಬ ಮನುಷ್ಯನಿಗೂ ಮಂದಿರ ಪ್ರವೇಶವನ್ನು ಮಾಡುತ್ತಲೇ ಅಲ್ಲಿಯ ವಾತಾವರಣದಿಂದ ವ್ಯಾಯಾಮದ ಬಗ್ಗೆ ಪ್ರೇಮವೂ ಸ್ಫೂರ್ತಿಯೂ ಉಂಟಾಗದಿರದು

### ವ್ಯಾಯಾಮ ಪ್ರಚಾರ-

ಇಲ್ಲಿ ಈಗ ಹೆಚ್ಚುಕಡಮೆ ೩೦೦,೩೫೦ ವಿದ್ಯಾರ್ಥಿಗಳವರೆಗೂ ಶಿಕ್ಷಣವನ್ನು ಹೊಂದುತ್ತಲಿರುವರು ಇಲ್ಲಿಯ ವಿದ್ಯಾರ್ಥಿಗಳಲ್ಲಿ ಅನೇಕರು ಹಿಂದುಸ್ಥಾನದ ಬೇರೆ ಬೇರೆ ಕಡೆಗಳಲ್ಲೂ ಪರದೇಶಗಳಲ್ಲೂ ಕೂಡ ಸ್ವತಂತ್ರವಾದ ವ್ಯಾಯಾಮ ಶಾಲೆಯನ್ನು ಸ್ಥಾಪಿಸಿ ಅಥವಾ ಬೇರೆ ಸಂಸ್ಥೆಗಳ ಮೂಲಕ ವ್ಯಾಯಾಮದ ಪ್ರಚಾರಮಾಡುತ್ತಿರುವರೆಂಬುದು ಬಹು ಆನಂದದ ವಿಚಾರವು

### ಅಭ್ಯಾಸ ಕ್ರಮ ಮತ್ತು ಅನುಕೂಲತೆ

ಒಟ್ಟಿನ ಮೇಲಿಂದ ಇಲ್ಲಿ ೩ ವರ್ಷಗಳ ಅಭ್ಯಾಸಕ್ರಮವಿದೆ ಅನುಕೂಲವಿಲ್ಲದವರು ೨, ೧½, ೧ ವರ್ಷಗಳ ಅಥವಾ ೬ ತಿಂಗಳ ಅಭ್ಯಾಸವನ್ನೂ ಹೊಂದಬಹುದು ವ್ಯಾಯಾಮ ಶಾಲೆಯಲ್ಲಿ ಭಾರತೀಯ ವ್ಯಾಯಾಮ ಪದ್ಧತಿಯ ದಂಡ್, ಬೈಠಕ್, ನಮಸ್ಕಾರ, ಆಸನ, ಲಾಠೀ, ಲಕಡೀ, ಬಾಲಾ, ಪರಿಗದಗಾ, ಮಲ್ಲಕಂಭ್, ಕುಸ್ತೀ, ದಾಂಡ್‌ಪಟ್ಟಾ, ತಲವಾರ್, ಜಂಬಿಯಾ, ಜೋಡಿ, ಸಮತೋಲನ್ ವಗೈರೆಗಳೂ, ಪಾಶ್ಚಾತ್ಯ ಪದ್ಧತಿಯ ಅನೇಕ ಅಭ್ಯಾಸಕ್ರಮಗಳೂ ಕೂಡ ಕಲಿಸಲ್ಪಡುವುವು ಸಂಘ ವ್ಯಾಯಾಮದಲ್ಲಿ ಉಪಯೋಗವಾಗುವಂತಹ ಭಾರತೀಯ ಹಿಂದೀ ಬೋಲ್‌ಗಳ ಮೂಲಉತ್ಪಾದಕರು ಈ ಸಂಸ್ಥೆಯ ಚಾಲಕರಾದ ರಾಜರತ್ನ ಪ್ರೊಫೆಸರ್ ಮಾಣಿಕ್ ರಾಯರವರೇ ಸಂಸ್ಥೆಯ ಕೆಲಸವು ಇಷ್ಟಕ್ಕೆ ಮುಗಿಯಲಿಲ್ಲ ಪರಊರಿನಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ವಸತಿಗೃಹವು ಏರ್ಪಟ್ಟಿದೆ, ಒಂದು ವಾಚನಾಲಯವೂ ಕೂಡ ಇದೆ ಇದಕ್ಕೂ ಹೆಚ್ಚಿನ ಉಪಯೋಗವೆಂದರೆ ಅಸ್ಥಿಸಂಧಾನಾಲಯವು. (Bone setting Hospital) ಇಲ್ಲಿ ಪ್ರತಿದಿನ ನೂರಾರು ಜನ ರೋಗಿಗಳು ಬಂದು ಸೌಖ್ಯಹೊಂದುತ್ತಲಿರುವರು ಶ್ರೀ ಮಾಣಿಕ್ ರಾಯರವರು ಅಸ್ಥಿಸಂಧನದಲ್ಲಿ ಬಹು ಪ್ರವೀಣರು ಪಾಯಂ ವಿದ್ಯಾರ್ಥಿಗಳಿಗೆ ಈ ವಿದ್ಯೆಯೂ ಕಲಿಸಲ್ಪಡುವುದು ವ್ಯಾಯಾಮ ಶಾಲೆಯ ಎಡಕ್ಕೆ ೭೦೦, ೮೦೦ ಜನರು ಕುಳಿತುಕೊಳ್ಳುವಷ್ಟು ದೊಡ್ಡ 'ಉಮಾಸಭಾಗೃಹ'ವೆಂಬ ವಿಶಾಲವಾದ ಸಭಾಮಂಟಪವಿರುವುದು ಬಲಗಡೆ ಶ್ರೀ ಶಿವಾಜೀ ಮಂದಿರದಲ್ಲಿ ಶಿವಾಜಿಯ ದಿವ್ಯ ಪ್ರತಿಮೆಯು ಸ್ಥಾಪಿತವಾಗಿರುವುದು

### ಉಪಸಂಹಾರ:

ಅಂತೂ ಚಿಕ್ಕದೊಂದು ಗುಡಿಸಲಿನಿಂದ ಪ್ರಾರಂಭವಾದ ಈ ವ್ಯಾಯಾಮ ಶಾಲೆಯು ಉನ್ನತಿಯನ್ನು ಹೊಂದಿ ಈಗ ಹಿಂದುಸ್ಥಾನದಲ್ಲೇ ಪ್ರಥಮಸ್ಥಾನವನ್ನು ಹೊಂದಿದೆ. ಇದಕ್ಕೆ ಕಾರಣರು ಶ್ರೀ ಮಾಣಿಕ್‌ರಾಯರವರೇ. ಇಂತಹ ಬಾಲಬ್ರಹ್ಮಚಾರೀ ಅಸಹಾಯ ಶೂರರ ಪ್ರಬಲೇಚ್ಛೆಯ ಮುಂದೆ ಯಾವುದು ತಾನೇ ಅಸಾಧ್ಯ' ಪರಮೇಶ್ವರನು ಪೂಜ್ಯರಿಗೆ ಆಯುರಾರೋಗ್ಯವನ್ನು ಕರುಣಿಸಿ ಅವರಿಂದ ಈ ವ್ಯಾಯಾಮ ಶಾಲೆಯನ್ನು ಇನ್ನಷ್ಟು ಉಚ್ಚಸ್ಥಿತಿಗೆ ತರಲೆಂದು ಪ್ರಾರ್ಥಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ

---

## ನೋಟೀಸು.

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.**

ಕ್ರಮ ನಂಬ್ರ 281/1935.

ಎ ಶ್ರೀನಿವಾಸ ರಾವ್, ವೆಂಕಟೇಶಯ್ಯನವರ ಮಗ, ಮೈಸೂರು ಸಂಸ್ಥಾನದ ಕೊಪ್ಪ ತಾಲ್ಲೂಕು ನರ್ಸಿಪುರ ಗ್ರಾಮದ ಬೆಟ್ಟಗೆರೆ ಎಂಬಲ್ಲಿರುವವ-ವಾದಿ

ಮತ್ತು

ಜೋಸೆಫ್ ಡಿಸೋಜ, ಇಂತ್ರು ಸೋಜನ ಮಗ ಮೋಟರ ಲೋರಿ ಡ್ರೈವರ್, ಕಾರ್ಕಳ ಕಸಬೆಯಲ್ಲಿರುವವ-ಪ್ರತಿವಾದಿ

ಇವರೊಳಗೆ—

ಸದ್ರಿ ದಾವೆಯ ಪ್ರತಿವಾದಿಗೆ-

ಸದ್ರಿ ಪ್ರತಿವಾದಿಯು ವಾದಿಗೆ ಬರಕೊಟ್ಟ ಪ್ರೊಮಿಸರಿ ನೋಟಿನ ಬಾಬ್ತು ಅಸಲು ಬಡ್ಡಿ ಕೂಡಾ ರೂ 218--15-0 ಬರಮಾಡಿಕೊಳ್ಳುವರೇ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲೆ ಕಾಣಿಸಿರುವ ದಾವೆಯು ಸದ್ರಿ ಕೋರ್ಟಿನಲ್ಲಿ ತಾರೀಕು 17-9-1935ಕ್ಕೆ ಪೂರ್ವಾಹ್ನ 11 ಗಂಟೆಗೆ ಆಖೈರ ತನ್ಖಿಗೆ ಇಟ್ಟಿರುತ್ತದೆ ಪ್ರತಿವಾದಿಯು ಆ ದಿವಸ ಹಾಜರಾಗದಿದ್ದರೆ ಆತನನ್ನು ಶಿವ್ವಾಯ ಮಾಡಿ ಡಿಕ್ರಿ ಮಾಡಲಾಗುವುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ

ಕೋರ್ಟಿನವರ ಹುಕುಂ ಪ್ರಕಾರ

ಕಾರ್ಕಳ, 23 8 35 } ಇಡ್ಯದ ವಾಸುದೇವಯ್ಯ, ಬಿ ಎ ಬಿ ಎಲ್

ವಾದಿ ಕಡೆ ವಕೀಲ

---

## ನೋಟೀಸು

**ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.**

O P No 55/1935

ಎಮ್ಮ ಕೇಶವ ಪ್ರಭು-ಅರ್ಜಿದಾರ

ಮತ್ತು

1 ಎಮ್ಮ ಗೋವರ್ಧನ ಕಮ್ತಿ, ಜನಾರ್ಧನ ಕಮ್ತಿರ ಮಗ 2 ಎಮ್ಮ ವೆಂಕಟರಾಯ ಪ್ರಭು ಎಮ್ಮ ಗೋಪಾಲ್ಲ ಪ್ರಭುರ ಮಗ 3 ಎಮ್ಮ ಗೋಪಾಲ ಪ್ರಭು, ರಾಮ ಪ್ರಭುರ ಮಗ 4 ಎಮ್ಮ ಗೋವಿಂದ ರಾಯ ಪ್ರಭು, ಸದ್ರಿ ಗೋಪಾಲ ಪ್ರಭುರ ಮಗ 1ನೇಯವ ಮಂಗಳೂರ ಶಹರ ಕೋರ್ಟು ಹೊಸರಸ್ತೆ 2, 3, 4ನೇಯವರು ಸದ್ರಿ ಶಹರ ಚಕ್ಕಲಸರ ರಸ್ತೆ ಬಳಿ ಇರುವವರು-ರೆಸ್ಪಾಂಡೆಂಟರು

ಇವರೊಳಗೆ

ಮೇಲ್ಕಂಡ ಕೋರ್ಟು O S No 18/34ನೇ ವ್ಯಾಜ್ಯದಲ್ಲಿ ಡಿಕ್ರಿ ಮುಂಚೆ ಜಪ್ತು ನಡಿಸಿದ ಸೊತ್ತುಗಳನ್ನು ಜಾಮೀನು ಮೇಲೆ ಪಡೆದ 1-2ನೇ ರೆಸ್ಪಾಂಡೆಂಟರು 3-4ನೇ ರೆಸ್ಪಾಂಡೆಂಟರ ಒಳಸಂಚಿನಿಂದ ಕದ್ದೀಲು ಪಡಿಸಿ ಬರೇ ಹೀನ ಮೌಲ್ಯದ ಸೊತ್ತುಗಳನ್ನು ಕೋರ್ಟಿಗೆ ಹಾಜರುಪಡಿಸಿದರಿಂದ ಆ ಬಗ್ಗೆ I. P. ಕೋಡಿನ 207 ಸೆಕ್ಷನ್ ಪ್ರಕಾರ ಕ್ರಿಮಿನಲ್ ಫಿರ್ಯಾದು ನಡಿಸುವರೇ ಕ್ರಿ ಪ್ರೊ ಕೋಡಿನ 195-476ನೇ ಕಲಂಗಳ ಪ್ರಕಾರ ಸೆಂಕ್ಷನ್ ಕೊಡಿಸಬೇಕೆಂತ ವಗೈರೆ ಅಪೇಕ್ಷಿಸಿ ಮೇಲ್ಕಂಡ ಅರ್ಜಿದಾರನು ಸದ್ರಿ ರೆಸ್ಪಾಂಡೆಂಟರ ಮೇಲೆ ಮೇಲ್ಕಂಡ ಅರ್ಜಿ ದಾಖಲು ಮಾಡಿರುತ್ತಾನೆ ಮತ್ತು ಈ ಅರ್ಜಿಯು ಇದೇ 1935ನೇ ಇಸ್ವಿ ಸಪ್ಟಂಬರ ತಾ. 5ನೇ ಗುರುವಾರ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ತನಿಖೆಗೆ ಇಟ್ಟಿದೆ, ಮೇಲ್ಕಂಡ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ 1-2ನೇ ರೆಸ್ಪಾಂಡೆಂಟರು ತಾವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಉದಾಹರಣೆ ದಾಖಲುಮಾಡತಕ್ಕದ್ದು. ತಪ್ಪಿದರೆ ಅವರನ್ನು ಶಿವ್ವಾಯ ಮಾಡಿ ಸದ್ರಿ ಅರ್ಜಿ ತೀರ್ಮಾನಿಸಲಾದೀತು ತಿಳಿದಿರುವುದು

ಮಂಗಳೂರು 22-8-'35 } **K P Gopalkrishna Rao,** *Vakil for Petitioner*

## ಕಲ್ಲಿಕೋಟೆಯ ಮೆಸರ್ಸ್ ಪ್ರಭು ಕಂಪೆನಿಯವರು.

ಅಶಿಕ್ಷಿತ ಕೋಟಿಯೊಡನೆ ಸುಶಿಕ್ಷಿತರೂ ರುದ್ಯೋಗಿಗಳಾಗಿ ಸೇರಬೇಕಾಗಿ ಬಂದಿರುವ ಕಾಲದಲ್ಲಿ ಶ್ರೀ ಕೆ ಬಿ. ಪ್ರಭುಗಳಂತಹ ಯುವಕರು ವಿದ್ಯಾರ್ಜನೆ ಮುಗಿಸಿ, ವಿಜ್ಞಾನವನ್ನು ಪ್ರಯೋಗಿಸುವುದಕ್ಕಾಗಿ ಉತ್ತಮ ಅಭ್ಯಾಸವನ್ನು ಮಾಡಿ, ತಾವೂ ಇತರರೂ ಉದ್ಯೋಗಪರರಾಗುವ ಹಾಗೆ ಪ್ರಯತ್ನಮಾಡುವುದು ಸುತ್ಯಾರ್ಹವಾಗಿದೆ ಸ್ವದೇಶಿಯಿಂದು ಪ್ರೋತ್ಸಾಹ ದೊರೆಯಲೇಬೇಕಾಗಿ ಎಷ್ಟು ಪ್ರಯತ್ನಿಸಿದರೂ, ಅಷ್ಟೊಂದು ಉತ್ತಮವಾಗಿಲ್ಲದ ಒಡವೆಗಳೇ ದೊರೆಯುತ್ತಿದ್ದುದರಿಂದ, ದೇಶೀಯ ಕೈಗಾರಿಕೆಗಳಿಗೆ ಪೋಷಕ ಶಕ್ತಿಯಿಲ್ಲವೆಂದು ತಿಳಿದು ಇವರು, ಬಹಳ ಪ್ರಯತ್ನದಿಂದ ಅತ್ಯುತ್ತಮವಾದ (ಶಾಯಿ, ಪ್ರತಿಯೊಂದೂ ಬಣ್ಣದ್ದು) ಫ್ರೆಂಚ್ ಪೊಲಿಶ್ ಮೊದಲಾದುವನ್ನು ಉತ್ಕೃಷ್ಟ ರೀತಿಯಲ್ಲಿ ಮಾತ್ರ ಸಿದ್ಧಗೊಳಿಸಿ ಸುಲಭದರಕ್ಕೆ ದೊರೆವಂತೆ ಮಾಡುವುದರಿಂದ ನಮ್ಮ ಕೃತಜ್ಞತೆಗೂ ಆದರಕ್ಕೂ ಇವರು ಪಾತ್ರರಾಗಿರುವರು ವ್ಯಾಪಾರಿಗಳು ಇವರಲ್ಲಿ ತಯಾರಾದ ಯಾವ ವಸ್ತುವನ್ನೂ ನಿರಾಕರಿಸದೆ ಇರುವುದಕ್ಕೂ ಇದೇ ಕಾರಣವಾಗಿದೆ ಹಾಗೆ ಸ್ವಲ್ಪವಾದರೂ ಪ್ರೋತ್ಸಾಹ ದೊರೆತೊಡನೆ, ಇನ್ನು ಇನ್ನೂ ಕೈಗಾರಿಕೆಯನ್ನು ಉತ್ತಮಗೊಳಿಸಲೂ, ಬಹುಮುಖವಾಗಿ ವಿಸ್ತರಿಸಲೂ ಇವರು ಪ್ರಯತ್ನಿಸಲಾಸ್ಪದವಾಯಿತು. ಎಲ್ಲಿ ನೋಡಿದರೂ Prabhus' ಎಂಬ ಪ್ರಭುಗಳ ಶಾಯಿಯೇ ಮಾರಾಟವಾಗುತ್ತಿದೆ ಈಗ, ಇವರು ಸಾಬೂನು ಕೈಗಾರಿಕೆಗೂ ತೊಡಗಿರುವರು ನಮ್ಮ ಕರಾವಳಿಯಲ್ಲಿ ಈ ಕೈಗಾರಿಕೆಗೆ ಅಗತ್ಯವಾಗಿರುವ ವನಸ್ಪತಿಗಳೂ ಅವುಗಳಿಂದ ತೈಲಗಳೂ ಬಹಳವಿವೆ. ಇವನ್ನು ಪರದೇಶೀಯರು ಕೊಂಡೊಯ್ದು ನಮಗೆ ಸಾಬೂನು ರೂಪವಾಗ ಮಾರಿ, ಹಣ ಗಳಿಸುತ್ತಿದ್ದರು ಈಗ ಪ್ರಭುಗಳು ಈ ತೈಲಗಳನ್ನೇ ಶಾಸ್ತ್ರೀಯ ರೀತ್ಯಾ ಸೇರಿಸಿ, ರಾಸಾಯನಿಕ ಬಗೆಯಿಂದ ಕೈಗಾರಿಕೆ ಮಾಡಲು, ಶಿಕ್ಷದೊಂದು ಕಾರ್ಖಾನೆಯನ್ನು ಕಲ್ಲಿಕೋಟೆಯ ಚಾಲಾಪುರದಲ್ಲಿ ಸ್ಥಾಪಿಸಿರುವರು. ಈ ಕಾರ್ಖಾನೆಯಿಂದ ನೂರು ಜನರಾದರೂ ಹೊಟ್ಟೆ ತುಂಬುತ್ತಿದೆ ಅನುಭವಸ್ಥ ಶಾಸ್ತ್ರಜ್ಞರ ಮೇಲ್ವಿಚಾರ, ಅತ್ಯಾಧುನಿಕ ಯಂತ್ರ ಸನ್ನಾಹ, ಶುದ್ಧ ವನಸ್ಪತಿಗಳದೇ ಉಪಯೋಗ ದೊರತು ಆಕ್ಷೇಪಕರವೂ ಹಾನಿಕರವೂ ಆಗಿರುವ ಚರ್ಬಿಗಳ ನಿರಾಕರಣೆ, ಮೊದಲಾದುವುಗಳ ದೆಸೆಯಿಂದ Prabhus Soaps ಎಂಬೀ ಪ್ರಭುಗಳ ಸಾಬೂನುಗಳು ಸ್ನಾನಕ್ಕೂ ಬಟ್ಟೆ ಒಗೆಯುವುದಕ್ಕೂ ನಾನಾ ಪರಿಮಳ ಯುಕ್ತವಾಗಿಯೂ ಮಾರಾಟಕ್ಕೆ ಸುಲಭದರಕ್ಕೆ ದೊರೆವಂತಾಗಿವೆ ಸಾಬೂನನ್ನು ದೂಳುಹರಳಂತೆ ಮಾಡಿ, ಅದನ್ನು ಪ್ರಬಲವಾಗಿ ಒತ್ತಿ, ತುಂಡು ಆಕಾರವಾಗಿ ಮಾರುವ ಕಾರಣ, ನೀರಿನ ಸಮ್ಮಿಶ್ರಣವೂ ಅಧಿಕ ವ್ಯರ್ಥಭಾರವೂ ಇರಲಾರದು ಕೈಶನಿಗ್ಗೆ ತಕ್ಕ ಆಕಾರ, ಬಣ್ಣ, ಸುವಾಸನೆ, ಪಾಕೀಟಿಗೆ ತಕ್ಕ ಸುಲಭ ಬೆಲೆ, ಬಹಳ ಬಾಳಿಕೆ ಇಷ್ಟೂ ಇದ್ದು, ಇವೂ ಜನರ ಪ್ರೀತಿಗೆ ಪಾತ್ರವಾಗಿರುವುದು ಆಶ್ಚರ್ಯವಲ್ಲ ಇವರ ಕಾರ್ಖಾನೆಯಲ್ಲಿ ಶಾಯಿ, ಸಾಬೂನುಗಳೇ ಅಲ್ಲದೆ,-ಫಿನ್ಯಾಲ್ ಎಂಬ ಕೊಳೆ ದುರ್ವಾಸನೆ ಮೊದಲಾದುವನ್ನು ನಿರ್ಮೂಲಿಸುವ ದ್ರಾವಕವೂ,ಬ್ರಿಲ್ಲಿಯಂಟಾಯಿನ್ ಎಂಬ ಕೇಶಪ್ರಕಾಶಕ ತೊದಲು ಮುಲಮೂ ಅತ್ಯುತ್ತಮವಾದುದಾಗಿ ಸಿದ್ಧವಾಗುತ್ತಲಿದ್ದು, ಸರ್ವರಿಂದಲೂ ಪ್ರೋತ್ಸಾಹ ಪಡೆಯುತ್ತಲಿದೆ. ನಮ್ಮೂರ ಪ್ರಸಿದ್ಧ ವ್ಯಾಪಾರಿಗಳಾಗಿರುವ ಮೆಸರ್ಸ್ ಮಣೇಲ ಕೃಷ್ಣ ನಾಯಕ್ ಎಂಡ್ ಸನ್ಸ್‌ರವರು ಎಲ್ಲ ವಸ್ತುಗಳನ್ನು ಇಲ್ಲಿ ವಿತರಣಗೊಳಿಸುವರೆ ಅಧಿಕೃತರಾಗಿದ್ದಾರೆ

## ಶಾಲಾ ಪುಸ್ತಕಗಳ ಮಂಜೂರಾತಿ

ಕಸದ ತಿಪ್ಪೆಯ ಮೇಲೆ ಬಿಸುಡಬಹುದಾಗಿರುವ ಪುಸ್ತಕಗಳನ್ನು ಸಹ, ಸರಿಯಾಗಿ ಓದಿರದೆ, ಅವನ್ನು ಎಷ್ಟೋ ಸಲ ಟೆಕ್ಸ್ಟು ಬುಕ್ ಕಮಿಟಿಯವರು ಮಂಜೂರು ಮಾಡಿದ್ದುಂಟು, ಇವನ್ನು ಶಾಲೆಗಳಲ್ಲಿಯೂ ಉಪಯೋಗಿಸುವಂತಾಗಿದೆ ಕೆಲವು ಪುಸ್ತಕ ಪ್ರಕಾಶಕರು ತಾವು ಪ್ರಕಟಿಸಿರುವ ಪುಸ್ತಕಗಳನ್ನೆ ಶಾಲೆಗಳಲ್ಲಿ ಪಾಠಕ್ಕಿಡತಕ್ಕುದೆಂದು ಬಲವತ್ತರವಾಗಿ ಶಾಲಾಧಿಕಾರಿಗಳನ್ನು ಪ್ರೇರೇಪಿಸುವರು ಹೀಗಾಗಿ ಎಲ್ಲರಿಗೂ ಸ್ವಲ್ಪ ಸರಿಹೋಗಲೆಂದು, ಒಂದೇ ಕ್ರಮಿಕ ಪುಸ್ತಕ ಮಾಲೆಯಸ್ನಿಡದೆ, ಈ ದರ್ಜೆಗೊಂದು, ಆ ದರ್ಜೆಗೆ ಬೇರೊಂದು ಎಂಬಂತೆ ಹಲವು ಪ್ರಕಾಶಕರ ಪುಸ್ತಕಗಳನ್ನು ಒಂದೇ ಶಾಲೆಯಲ್ಲಿಡುವರು ಇಂತಹ ವಿಚಿತ್ರ ಅಸಂಗತ ಅನ್ಯಾಯಗಳು ದೂರವಾಗುವಂತೆ, ಉಪಾಧ್ಯಾಯರೆಲ್ಲ ಒಂದುಗೂಡಿ ಸಾಧಿಸಬೇಕಾಗಿದೆ ಶಾಲೆಗಳಲ್ಲಿ ಪುಸ್ತಕಗಳನ್ನು ಪಾಠಕ್ಕಿಡುವ ಕರ್ತವ್ಯವು ಉಪಾಧ್ಯಾಯರಿಗೇ ಸಲ್ಲತಕ್ಕುದು ಇದೀ ಸಂಸ್ಥಾನದಲ್ಲಿನ ಉಪಾಧ್ಯಾಯರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಒಂದು ಕೂಟವನ್ನು ಈ ಬಗೆಗೆ ಮಾಡಿಕೊಂಡರೆ ಪುಸ್ತಕ ನಿಯೋಜನ ಕೆಲಸವು ಸಾಂಗವಾಗಿ ನಡೆವುದು,-ಎಂಬುದು ಉತ್ತರ ಆರ್ಕಾಡು ಜಿಲ್ಲಾ ಉಪಾಧ್ಯಾಯರ ಸಂಘದಲ್ಲಿ ಅಧ್ಯಕ್ಷರಾಗಿದ್ದ ಒಬ್ಬ ಕೌನ್ಸಿಲು ಮೆಂಬರರ ಸೂಚನೆ

## ಆಡಿನಿಂದಾಗಿ ಕಳ್ಳನು ಸಿಕ್ಕಿದ

ರವಿವಾರ ರಾತ್ರೆ ಅದಿನ ದಿಂಗಾಣಿಯನ್ನು ಕೇಳಿ ಟ್ರಿಪ್ಲಿಕೇನಿನ ಜನರನೇಕರು ಜಾಗ್ರತರಾದರು. ಆಡೊಂದನ್ನು ಬಲಾತ್ಕಾರ ಪೂರ್ವಕ ಓರ್ವನು ಎಳೆದೊಯ್ಯುವುದನ್ನು ಕಂಡು ಸಂಶಯಪಟ್ಟು ತಮ ಸ್ವಾಮಿ ಅದನ್ನೂ ಒಡಿದು ಪೋಲೀಸರ ವಶಕೊಟ್ಟ ಆದಿನ ಯಜಮಾನರಾರೆಂದು ಪೋಲೀಸರಿಗೆ ತಿಳಿಯ ದಿರಲು ಅವರು ಆದನ್ನು ಬಿಟ್ಟುಬಿಟ್ಟರು ಆಡು ಅನೇಕ ಗಲ್ಲಿಗಳನ್ನು ತಿರುಗಿ ನೆಟ್ಟಗೆ ತನ್ನ ಯಜಮಾನನಲ್ಲಿಗೆ ತೆರಳಿತು. ಪೋಲೀಸರು ಅದನ್ನು ಹಿಂಬಾಲಿಸಿ ಪೀಠದಿಂದ ಆಗಲೂ ಅದರ ಯಜಮಾನನ ಗುರುತು ಪರಿಚಯವಾಯಿತು ಆಡು ಕಳವಾದದ್ದು ನಿಜವೆಂದಾಯಿತು ಕಳ್ಳನನ್ನು ರಿಮಾಂಡಿನಲ್ಲಿಟ್ಟದ್ದಾರೆ

## ತನ್ನ ೧೦೮ನೇ ಪ್ರಾಯದಲ್ಲಿ ಆಫ್ರಿಕದ ಕೂಲಿಯೊಬ್ಬನು ಸತ್ತನು

ದಕ್ಷಿಣ ಆಫ್ರಿಕದ ಕಬ್ಬಿನ ಗದ್ದೆಗಳಲ್ಲಿ ಕೆಲಸಮಾಡಲು ೧೮೭೪ರಲ್ಲಿ ಒಪ್ಪಂದದ ಮೇಲೆ ಹೋದ ರರಂಡರಾದ ಎಂಬ ಕೂಲಿಯವನಿಗೆ ಆಗ ೪೭ ವರ್ಷ ವಯಸ್ಸಾಗಿತ್ತು ಒಪ್ಪಂದದ ವಾಯಿದೆಯು ತೀರಿದ ಮೇಲೆ ಈತನು ಅಲ್ಲಿಯೇ ತೋಟಗಾರನಾಗಿ ನೆಲೆಗೊಂಡನು ಈಗ ಈತನು ತನ್ನ ೧೦೮ನೇ ವಯಸ್ಸಿನಲ್ಲಿ ಮೃತಪಟ್ಟಿರುತ್ತಾನೆ ಇದುವರೆಗೆ ಆತನು ಯಾವ ದೀರ್ಘ ರೋಗದಿಂದಲೂ ಹಾಸಿಗೆ ಹಿಡಿದು ಮಲಗಿರಲಿಲ್ಲವಂತೆ ಈಗ ಈತನಿಗೆ ೮ ಮಂದಿ ಗಂಡು ಮಕ್ಕಳೂ ೩ ಮಂದಿ ಹೆಣ್ಣು ಮಕ್ಕಳೂ, ೫೦ ಮಂದಿ ಮೊಮ್ಮಕ್ಕಳೂ, ೨೯ ಮಂದಿ ಮರಿಮಕ್ಕಳೂ ಒಟ್ಟಿಳು ಮರಿಮಗಳೂ ಇರುವರು ಈತನ ಹೆಂಡತಿಯು ೧೯೨೨ರಲ್ಲಿ ತನ್ನ ೭೧ನೇ ವಯಸ್ಸಿನಲ್ಲಿ ತೀರಿದಳು ಇಂತಹ ಇಂಡಿಯಾ ದೇಶಿಯರಿಗೆ ನಾನಾ ವಿಧಗಳಲ್ಲಿ ಸ್ವಾತಂತ್ರ್ಯ ತಪ್ಪಿಸುವುದಕ್ಕಾಗಿ ದ ಆಫ್ರಿಕದ ಜನರು ಹೊಡೆದಾಡುವುದು ಏನೂ ಆಶ್ಚರ್ಯವಲ್ಲ


| | |
|---|---|
| 1935ರ ಸಮ್ಮ ದಸರಾ ಸಂಚಿಕೆಯು ಒಕ್ಟೋಬರ ಪ್ರಥಮ ವಾರದಲ್ಲಿ ಸಚಿತ್ರವಾಗಿ ಅತ್ಯಂತ ಸುಂದರವಾಗಿ ಹೊರಡುವುದು | ? |
| | ಬೆಲೆ ಆಣೆ 2. ಜಾಹೀರಾತುಗಳನ್ನು ಕೂಡಲೇ ಕೊಡಿರಿ. |


# Notice.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P No 31/1935

1. ರಾಮಯ್ಯ ಶ್ಯಾನುಭಾಗ, 2 ಮುಕಾಬಲ ಶ್ಯಾನುಭಾಗ, 3 ಪುಟ್ಟಯ್ಯ ಶ್ಯಾನರ, ಮಂಜಯ್ಯ ಶ್ಯಾನುಭಾಗರ ಮಕ್ಕಳು ಕ್ಷೇಮ ಚಿಂತಕ 1ನೇ ಅರ್ಜಿದಾರ ಬೆಳ್ಳಾರಿ ಡಿಸ್ಟ್ರಿಕ್ಟ್ ಹೊಸಪೇಟೆಯಲ್ಲಿರುವವರು-ಅರ್ಜಿದಾರರು

ಮೇಲ್ಕಂಡ ಅರ್ಜಿದಾರರ ಚಿಕ್ಕತಂದೆ ಮೃತ ಶಾಮ ಶಾನುಭಾಗರಿಗೆ ಉಡ್ಪಿ ತಾಲ್ಲೂಕು ಚೇಂತಾರ ಗ್ರಾಮದಲ್ಲಿರುವ ಐರೋಡಿ ತಿಮ್ಮಯ್ಯಹೆಬ್ಬಾರರ ಮಗ ಶಿವರಾಮ ಹೆಬ್ಬಾರರು ತಾ 2-7-'32ರಲ್ಲು ರೂ 300/-ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸಲುಂ ವಬಡ್ಡಿ ಸಹಾ ವಸೂಲು ಮಾಡುವರೆ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಸದರಿ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 12-9 1935ರಲ್ಲು ಇಡೋಣಾಗಿಯದೆ ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ತಸ್ಕಿ ದಿವಸ ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪ ಜ್ಯಾಹೀರುಮಾಡತಕ್ಕದ್ದು

ಉಡ್ಪಿ ದ ೭ } S Ramanath Pai,
27-6-35 } Pleader for Petitioners

**The Canara Banking Corporation Udipi Ltd Coondapoor**

## ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರ ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲಗಳನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವ್ಯಾಜ್ಯಕ್ಕೆ ಕೊಡದೆ ಇರುವುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸಗಳು ಅವರ ಕಾಣ ಕ್ಕೆ ಸಿಗಲ್ ವಾಪಸು ಬಂದಿರುವುದರಿಂದ ಸದ್ರಿ ಸಾಲಗಾರರು ತಪ್ಪಿಂದ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ಪೂರಾ ರಿಜಿಸ್ಟ್ರಿ ನೋಟೀಸ ಖರ್ಚ ಸಹಾ ಇದೇ 1935ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 25ನೇ ಬುಧವಾರದ ಒಳಗೆ ತಂದು ಕೊಟ್ಟು ಅದವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಸದರಿ ನಗಗಳನ್ನು ತಾರೀಕು ಇದೇ 1935ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 28ನೇ ಶನಿವಾರ ಮಧ್ಯಾಹ್ನ ಘಂಟೆ 12ಕ್ಕೆ ಸರಿಯಾಗಿ ಯಾ ತದನಂತರ ಬೇಂಕಿನವರಿಗೆ ಯುಕ್ತ ಕಂಡ ದಿವಸಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂಬ್ರ J L No 75/33 ಸಾಲಗಾರರ ಹೆಸರು ಹಂಗಾರಕಟ್ಟೆ ಕೋಡಿಯಲ್ಲಿರುವ ಕೊರಗ ಮರಕಾಲನ ಅಳಿಯ ಗವರ್ನಮೆಂಟ್ ಪಿಶ್ಕರಿ ಶಾಲಾ ಮಾಸ್ಟರ್ ಯು ವೆಂಕಪ್ಪಯ್ಯ-ಸಾಲದ ಮೊಬಲಗು ರೂಪಾಯಿ 45/-

ತಾರೀಕು 30-1-33

ಸಾಲದ ನಂಬ್ರ J L No 342/34 ಸಾಲಗಾರರ ಹೆಸರು ಬ್ಯಂದೂರಲ್ಲಿರುವ ಅಹಮ್ಮದ ಸಾಹೇಬರ ಮಗ ವ್ಯಾಪಾರಿ ಬಿ ಅಬ್ದುಲ್ ಖಾದರ್ ಸಾಹೇಬ ಸಾಲದ ಮೊಬಲಗು ರೂಪಾಯಿ 30/-

ತಾ 24-3-'34ರಿಂದ ಬಡ್ಡಿ ಬರಬೇಕು

ಈ ನೋಟೀಸು ಖರ್ಚು ಸಹಾ ಬರಬೇಕು

ಬೇಂಕಿನ ಆಫೀಸು, ಕುಂದಾಪುರ 26-8-1935 } K Nagesha Kamath Agent

## ಓವಾಡಾದಲ್ಲಿ ಜಲಪ್ರವಾಹ ೧೦೦೦ ಜನರು ಮೃತರಾದರು!

ಇಟಲಿಗೆ ಸೇರಿದ ಓವಾಡಾ ಎಂಬ ಊರಿಗೆ ಎತ್ತರವಾದ ಸ್ಥಳದಲ್ಲಿ ಕಟ್ಟಲ್ಪಟ್ಟಿದ್ದ ಒಂದು ಜಲಾಶಯವು ಅತಿ ವೃಷ್ಟಿಯಿಂದ ಕಿತ್ತು ಹೋಗಲು ೧೦೦೦ ಜನರು ಪ್ರವಾಹದಲ್ಲಿ ಮೃತರಾಗಿರುವರು ಸುಮಾರು ೪೦೦ ಚದರ ಮೈಲುಗಳಷ್ಟು ಪ್ರದೇಶವೆಲ್ಲಾ ಜಲಮಯವಾಗಿ ಅನೇಕ ಕಾರ್ಖಾನೆಗಳೂ ಸೇತುವೆಗಳೂ ಕೊಚ್ಚಿ ಹೋಗಿರುತ್ತವೆ

## ಕರ್ಣಾಟಕ ಸಾಹಿತ್ಯ ಪರಿಷತ್ತು.

ಶ್ರೀ ಕೃಷ್ಣರಾಜೇಂದ್ರ ಸಾಹಿತ್ಯ ಪರಿಷನ್ಮಂದಿರ, ಚಾಮರಾಜಪೇಟೆ, ಬೆಂಗಳೂರು ಸಿಟಿ

### ದಿವಂಗತ ಶ್ರೀ ಎ. ವೆಂಕಟರಾಯರು.

ಮದರಾಸು ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧನ ಸಂಸ್ಥೆ (Oriental Reseaach Institute)ಯ ಕನ್ನಡ ಶಾಖೆಯ ಮುಖ್ಯಾಧಿಕಾರಿಗಳಾಗಿದ್ದ ಶ್ರೀಮಾನ್ ಎ ವೆಂಕಟರಾಯರವರ ನಿಧನದ ಬಗ್ಗೆ, ತಾ ೧೮-೮-೧೯೩೫ರಲ್ಲಿ ಸೇರಿದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ತನ್ನ ಸಂತಾಪವನ್ನು ವ್ಯಕ್ತಗೊಳಿಸಿ ನಿರ್ಣಯ ಮಾಡಿತು ಆ ನಿರ್ಣಯವು ಈ ರೀತಿ ಇದೆ

ನಿರ್ಣಯ ೧ "ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಲ್ಲೊಬ್ಬರೂ ಕರ್ಣಾಟಕ ಭಾಷಾಭಿಮಾನಿಗಳೂ ವಿದ್ವಾಂಸರೂ ಆದ ಶ್ರೀಮಾನ್ ಎ ವೆಂಕಟರಾವ್, ಬಿ ಎ, ಎಲ್ ಟಿ, ಇವರು ತಾ ೧೧-೬-೧೯೩೫ನೇ ಭಾನುವಾರ ಆಕಸ್ಮಿಕ ಸಂದರ್ಭದಲ್ಲಿ ಕಾಲವಶರಾದುದರಿಂದ ಕೋ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ವಿಷಾದವನ್ನು ಸೂಚಿಸುತ್ತದೆ, ಮತ್ತು ಅವರ ಕುಟುಂಬದವರ ವಿಯೋಗ ದುಃಖಕ್ಕಾಗಿ ಅನುತಾಪವನ್ನು ಸೂಚಿಸುತ್ತದೆ'

**The Canara Banking Corporation Udipi, Ltd, Coondapoor**

## ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲಗಳನ್ನಾಗಲೀ ಅದರ ಬಡ್ಡಿಯನ್ನಾಗಲೀ ವ್ಯಾಜ್ಯಕ್ಕೆ ಕೊಡದ ಇರುವುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರು ಮೃತಪಟ್ಟಿರುವುದಾಗಿ ವಾಪಸು ಬಂದಿರುವ ಕಾರಣ ಸದ್ರಿ ಸಾಲಗಾರರ ವಾರಿಸುದಾರರು ತಮ್ಮ ತಮ್ಮ ಹಕ್ಕುಗಳನ್ನು ಬೇಂಕಿಗೆ ಸ್ಥಾಪಿಸಿ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ಖರ್ಚನ್ನು ರಿಜಿಸ್ಟ್ರಿ ನೋಟೀಸ ಖರ್ಚ ಸಹಾ ಇದೇ 1935ನೇ ಇಸವಿ ಸಪ್ಟಂಬರ ತಿಂಗಳ ತಾ 25ನೇ ಬುಧವಾರದ ಒಳಗೆ ತಂದು ಕೊಟ್ಟು ಅದವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಸದರಿ ನಗಗಳನ್ನು ಇದೇ 1935ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 28ನೇ ಶನಿವಾರ ದಿವಸ ಮಧ್ಯಾಹ್ನ ಘಂಟೆ 12ಕ್ಕೆ ಸರಿಯಾಗಿ ಯಾ ತದನಂತರ ಬೇಂಕಿನವರಿಗೆ ಯುಕ್ತ ತೋರುವ ದಿವಸಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು

ಸಾಲದ ನಂಬ್ರ J L No 496/32 ಸಾಲಗಾರರ ಹೆಸರು ಕುಂದಾಪುರ ತಾಲ್ಲೂಕು ಕೊರ್ಗಿ ಗ್ರಾಮದಲ್ಲಿರುವ ಸೂರಪ್ಪ ಶೆಟ್ಟಿ ಅಳಿಯ ರೈತ ಕೊರ್ಗಿ ಮುತ್ತಯ್ಯ ಶೆಟ್ಟಿ ಸಾಲದ ಮೊಬಲಗು ರೂ 30/- ತಾರೀಕು 19-1-'33ರಿಂದ ಬಡ್ಡಿ ಬರಬೇಕು

ಸಾಲದ ನಂಬ್ರ J L. No 756/34. ಸಾಲಗಾರರ ಹೆಸರು ಕುಂದಾಪುರ ತಾಲ್ಲೂಕು ಕೇದೂರು ಗ್ರಾಮದ ಮಂಜಯ್ಯ ಹೆಗ್ಡೆರ ಮಗ ಕೇದೂರು ಮೆಬ್ಬಾಡಿ ಚಂದಯ್ಯ ಶೆಟ್ರು ಸಾಲದ ಮೊಬಲಗು ರೂ. 20/- ತಾರೀಕು 7-1 '34ರಿಂದ ಬಡ್ಡಿ ಬರಬೇಕು.

ಈ ನೋಟೀಸು ಖರ್ಚು ಸಹ ಬರಬೇಕು.

ಬೇಂಕಿನ ಆಫೀಸು, ಕುಂದಾಪುರ, 26-8-'35. } **K Nagesha Kamath,** *Agent.*

## ಅನುಕ್ರಮಣಿಕೆ.


ಪತ್ರ . . . . . ೩
ಸಾಹಿತ್ಯ ಸಂಗ್ರಹ ೪
ಎಪೆಕ್ಸ್ ಬೇಂಕಿನಲ್ಲಿ ೧೪,೦೦೦ ರೂಪಾಯಿಗಳ ಕಳವು ೫
ಪತ್ರವ್ಯವಹಾರ . . . . ೬
ಶ್ರೀ ಜನಾರ್ದನ ನ್ಯಾಯಮಂದಿರ ಬರೋಡಾ ೮
ಕಲ್ಲಿಕೋಟೆಯ ಮೆಸರ್ಸ್ ಪ್ರಭು ಕಂಪೆನಿಯವರು ೯
ಅಗ್ರಲೇಖ
ನಿರ್ಲಿಪ್ತ ಭಾವ ೧೦
ಸ್ಫುಟವಿಚಾರಗಳು ,,
ವರ್ತಮಾನ ಸಂಗ್ರಹ
ಇಟೆಲಿಯು ಭಾಷಣಮಾಡಲು ಹೊರಟಿದೆ, ೧೪
ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು, . . ೧೬
ನಡೆದ ಕಳೆಗಳು, ತಗಬಾರದು ೧೮



# ಸ್ವದೇಶಾಭಿಮಾನಿ.

ತಾ. ೩೦ನೇ ಶುಕ್ರವಾರ ಆಗೋಸ್ತು '೩೫


## ನಿರ್ಲಿಪ್ತಭಾವ.

ಇಟೆಲಿ ಅಬಿಸೀನಿಯಗಳೊಳಗೆ ಯುದ್ಧವಾಗುವುದಾದರೆ, ಅಮೇರಿಕದ ಯುಕ್ತ ರಾಷ್ಟ್ರಗಳು ಆ ಯುದ್ಧದಲ್ಲಿ ಸೇರಬಾರದೆಂದು ಈಗ ಅಲ್ಲಿ ನಿಶ್ಚಯವಾಗಿರುವಂತೆ ತಿಳಿದುಬಂದಿದೆ. ಹಿಂದೆ ಯುರೋಪಿನಲ್ಲಿ ಮಹಾಯುದ್ಧವಾದಾಗ, ಬಹು ದಿನಗಳ ತನಕವೂ ಈ ರಾಷ್ಟ್ರಗಳು ಈ ಯುದ್ಧದಲ್ಲಿ ಯಾವ ಪಕ್ಷವನ್ನೂ ವಹಿಸದೆ ಇದ್ದು, ಕೊನೆಗೆ ಸೇರಿ ಕಾದಾಡಿ, ಮಿಲ್ಲಿಯಗಟ್ಟಲೆಯಾಗಿ ಸಾಲವನ್ನೂ ಕೊಟ್ಟು, ಸರಕನ್ನೂ ಸರಂಜಾಮುಗಳನ್ನೂ ಮಾರಿ, ಹೇರಳ ಹಣ ಸಂಪಾದಿಸಿದುದೇ ಮಾತ್ರವಲ್ಲದೆ, ಸಾಲವನ್ನು ವಸೂಲುಮಾಡಿಕೊಳ್ಳಲು ಉಪಾಯ ಕಾಣದೆಯೂ ಇರಬೇಕಾಯಿತು. ಆ ಪ್ರಶ್ನೆ ಇನ್ನೂ ಹಾಗೆಯೆ ಉಳಿದಿದೆ. ಐದಾರು ಸಾವಿರ ಮೈಲು ದೂರದಲ್ಲಿ ನಡೆಯಬಹುದಾಗಿರುವ ಯುದ್ಧದಲ್ಲಿ, ಯಾರು ಯಾರೋ ಹೊಡೆದಾಡಿಕೊಳ್ಳುವ ಪರಸ್ಪರ ಗಡಿಬಿಡಿಯಲ್ಲಿ ತಾನೇಕೆ ಸೇರಲಿ ಎಂದು, ತಟಸ್ಥವಾಗುವುದುತ್ತಮ ನಿಜ, ಹಿಂದಣ ಅನುಭವವೂ ಸ್ವಲ್ಪ ಮಟ್ಟಿಗೆ ಈ ಅಭಿಪ್ರಾಯವನ್ನು ಬಲಪಡಿಸಲೂ ಬಹುದು. ಆದರೆ, ಒಂದು ಮಿಲ್ಲಿಯ ಇಟೆಲಿಯನ್ ಜನರು ನ್ಯೂಯೋರ್ಕಿನಲ್ಲೇ ಇರುವಾಗ, ಅಬಿಸೀನಿಯ ಪಕ್ಷ ವಹಿಸಲಿರುವ ನಿಗ್ರೋ ಸಂಭೂತ ವಂಶವು ಮಿಲ್ಲಿಯಗಟ್ಟಲೆಯಾಗಿರುವಾಗ, ಯುದ್ಧವು ನಡೆವಲ್ಲಿಗೆ ಇವೆರಡೂ ಪಕ್ಷಗಳ ಮನಸ್ಸು ತಿರುಗುವಾಗ,–ತಾನು ವಿಚಲಿತವಾಗದಿರುವುದು ಹೇಗೆ ಸಾಧ್ಯವಾದೀತು?

ತನ್ನನ್ನು ಆಕ್ರಮಿಸ ಬಂದವರೊಡನೆ ಮಾತ್ರವಲ್ಲದೆ, ಯುಗಾಂತ್ಯದ ವರೆಗೂ ಯಾವ ಬಗೆಯ ಯುದ್ಧದಲ್ಲೂ ಸೇರಬಾರದಾಗಿ ಮೊದಲು ಮಸೂದೆ ತಯಾರಾಗಿದ್ದಿತು. ಈಗ 'ಯುಗಾಂತ್ಯದ' ವರೆಗೆ ಎಂಬುದರ ಬದಲಾಗಿ, 'ಆರು ತಿಂಗಳ ವರೆಗೆ' ಎಂದು ಕಾನೂನಿನಲ್ಲಿ ತಿದ್ದುಪಡಿ ಮಾಡಿಕೊಳ್ಳಲಾಗಿದೆ. ಆರೇ ತಿಂಗಳಲ್ಲಿ ಯುದ್ಧವು ಮುಗಿಯಬಹುದೆಂಬ ವಿಶ್ವಾಸವಿರಬಹುದೇನೋ! ಆದರೆ, ಆರು ತಿಂಗಳ ಮಾತಿರಲಿ, ಮೂರು ವರ್ಷಗಳಲ್ಲಿ ಅದನ್ನು ಮುಗಿಸುವುದು ಕಷ್ಟವಾಗಿದೆಯೆಂದು, ರಣರಂಗದ ರಕ್ತಲಾಲಸೆಯ ಪರಿಮಿತಿ ಬಲ್ಲವರು ಅಂದಾಜು ಹಾಕಿರುವರು. ಹಾಗಿದ್ದರೆ, ಆರು ತಿಂಗಳ ತರುವಾಯದಲ್ಲಿ ಅಂತಹ ಯುದ್ಧದಲ್ಲಿ ಸೇರಬಹುದೆಂದರ್ಥವೆ?

ಪ್ರಬಲ ರಾಷ್ಟ್ರಗಳು ತಾವು ಯುದ್ಧ ಮಾಡುವುದೇ ಇಲ್ಲವೆಂದು ನಿರ್ಧರಿಸಿದಲ್ಲಿ, ಆತಿ ಬಲಿಷ್ಠ ರಾಷ್ಟ್ರಗಳಿಗೆ ರಣರಂಗದಲ್ಲಿ ಯಥೇಚ್ಛವಾಗಿ ಕುಣಿದಾಡಲು ಅನುಕೂಲ ಮಾಡಿಕೊಡುವಂತಾಗದೆ? ಇತ್ತ, ಜನಾಂಗ ಸಂಘದ ಸೂಕ್ತಗಳಂತೆ, ಯುದ್ಧವಾಗದಂತೆ ತಡೆವ ರಾಷ್ಟ್ರಗಳಿಗೆ ಸೀನ್ಯರ್ ಮುಸೋಲಿನಿಯವರು ಈಗಾಗಲೆ ನಿಷೇಧ ನುಡಿದಿರುವರು. ಈ ಕರಾರೂ ಇಟೆಲಿಯ ಸಹಿಯನ್ನು ಪಡೆದುದೇ ಆಗಿದೆ. ಜರ್ಮನಿಯು ವರ್ಸೇಲ್ಸಿನ ಒಪ್ಪಂದವನ್ನು ತಾನಾಗಿ ರದ್ದು ಮಾಡಿ, ಇಟೆಲಿಯು ತನ್ನ ಸಹಿಯುಳ್ಳ ಈ ಕರಾರನ್ನು ಮುರಿಯಲೆತ್ನಿಸಿ, ಜನಾಂಗಗಳು ಮನಸ್ವಿಯಾಗಿ ನಡೆಯಲು ಆತಂಕವಿಲ್ಲೆಂದು ತೋರಿಸಿಕೊಟ್ಟರೆ, ಕರಾರಿಗೆ ಬರೇ ಕಾಗದದ ಬೆಲೆಯಾದರೂ ಬಂದೀತೆ? ಜರ್ಮನಿಗಾದರೂ, ವರ್ಸೇಲ್ಸಿನಲ್ಲಿ ಸಹಿ ಹಾಕುವಂತೆ ತನಗೆ ಭಾರೀ ಒತ್ತಾಯವಿದ್ದಿತೆಂದೂ ನಿರುಪಾಯವಾಗಿ ಹಾಗೆ ಮಾಡಬೇಕಾಗಿತ್ತೆಂದೂ ನೆವವಾದರೂ ಹೇಳಲಿಕ್ಕಿದೆ, ಇಟೆಲಿಗೆ ಇದೇನೂ ಇಲ್ಲವಲ್ಲ!

"ತನ್ನ ವಸಾಹತುಗಳ ಸಲುವಾಗಿ ತಾನು ಮಾಡುವ ಯುದ್ಧವು ಇಡೀ ಯುರೋಪಿಗೂ ಹರಡುವಂತೆ ಜನಾಂಗ ಸಂಘವು ಮಾಡಿಕೊಟ್ಟು, ಪ್ರತಿಯೊಂದು ಆಕ್ರಮಣಾತ್ಮಕ ಯುದ್ಧಮುಖಾಂತರ ತನ್ನ ಸಾಧನೆ ಮುಂದಿರಿಸುವಂತೆ ಇಡೀ ಭೂಲೋಕವೆಲ್ಲ ಯುದ್ಧಮಯವಾಗುವಂತೆ ಜನಾಂಗಸಂಘವೇ ಮಾಡುವ ಕಾರಣ, ಸುಮಾರು ಒಂದು ಕೋಟಿ ಜನರು ಧ್ವಂಸವಾಗಬಹುದಾದ ಈ ದುಷ್ಟಾ ಯುಕ್ತಿ ಜನಾಂಗಸಂಘವೇ ಕಾರಣವಾಗುವುದು. ಆದುದರಿಂದ, ಅಮೇರಿಕದ ಯುಕ್ತ ರಾಷ್ಟ್ರಗಳಂತೆ ಇತರ ಜನಾಂಗಗಳೂ ಸುಮ್ಮನೆ ನಿರ್ಲಿಪ್ತ ಭಾವದಿಂದಿದ್ದು, ಇಟೆಲಿಗೆ ತನ್ನ ಮಹಾಕಾರ್ಯವನ್ನು ಮುಗಿಸಲು ಅನುಕೂಲತೆ ಮಾಡಿಕೊಡಲಿ! ಇಟೆಲಿಯ ವಿರುದ್ಧವಾಗಿ ಯುದ್ಧಾತಂಕ ಮಾಡುವವರನ್ನು ಸಶಸ್ತ್ರವಾಗಿ ಇಟೆಲಿಯು ಇದಿರಾಡುವುದು!"

ಎಂದು ಮುಸೋಲಿನಿಯು ತಾ ೨೬ರಲ್ಲಿ ಸಾರಿರುವುದನ್ನು ಓದಿದರೆ, ಇಟೆಲಿಯ ಯುದ್ಧ ಸಂಕಲ್ಪವು ಎಷ್ಟು ದೂರ ಮುಟ್ಟಿದೆ ಎಂದು ಸ್ಪಷ್ಟವಾಗುವುದು.

ಜನಾಂಗ ಸಂಘದಲ್ಲಿ ಸದಸ್ಯತೆಯಿಲ್ಲದ ಯುಕ್ತ ರಾಷ್ಟ್ರಗಳು ತಟಸ್ಥವಾಗಿ ಇರುವುದರಲ್ಲಿ ವಿಶೇಷವಿಲ್ಲವೆಂದರೂ, ಇಂಗ್ಲೆಂಡು–ಫ್ರಾನ್ಸುಗಳಷ್ಟು ಬಲವಾಗಿ, ಭೂಲೋಕದಲ್ಲಿ ನ್ಯಾಯಪಾಲನೆಯು ಜನಾಂಗಗಳೊಳಗೆ "ಊರ್ಜಿತವಾಗಿರಬೇಕೆಂಬ ಧ್ಯೇಯವೂ ಯುಕ್ತ ರಾಷ್ಟ್ರಗಳಲ್ಲಿ ಇರಬಾರದೆ? ಈ ರಾಷ್ಟ್ರಗಳು ಹಿಂದೆ ಜನಾಂಗಸಂಘಕ್ಕೆ ಸೇರದೆ, ಹೊರಗಿದ್ದ ಕಾರಣವೇ, ಕಳೆದ ಮಹಾಯುದ್ಧದ ಬಳಿಕ ಯುರೋಪಿನಲ್ಲಿ ಉಂಟಾದ ಎಷ್ಟೋ ಹಿಂಸೆ, ಪಿತೂರಿ ದಂಗೆ ಮೊದಲಾದುವುಗಳಿಗೆ ಬಲವುಂಟಾಗಿಲ್ಲವೆ? ಈ ಯುಕ್ತ ರಾಷ್ಟ್ರಗಳು ತಮ್ಮ ಪ್ರಬಲವಾದ ಮಾತಿನಿಂದ ತಮ್ಮ ಗೌರವವನ್ನು ಜನಾಂಗಸಭೆಗೆ ಕೊಟ್ಟು, ಅದರ ನೈತಿಕ ಬಲವನ್ನು ಹೆಚ್ಚಿಸಿ, ಇದಿರಾಳಿಗಳು ಭಯಪಡುವಂತೆ ಅಥವಾ ದುಡುಕದಂತೆ ಸಾಧಿಸಬಹುದಾಗಿದ್ದಿತು. ಈಗ 'ನಾವು ನಿರ್ಲಿಪ್ತರು' ಎಂದು ಕಾನೂನು ಮೂಲಕ ಸಾರಿದರೂ, ಅಷ್ಟು ಸುಲಭವಾಗಿ ತಮ್ಮ ಜವಾಬುದಾರಿಯನ್ನು ಈ ರಾಷ್ಟ್ರಗಳು ನಿರಾಕರಿಸಲು ಉಪಾಯವಿಲ್ಲ.

## ಗ್ರಾಮಗಳೂ ಶಿಕ್ಷಿತರೂ.

ಶಿಕ್ಷಿತರನ್ನು ಗ್ರಾಮಗಳಿಗೆ ಕಳುಹಿಸಿ ಅವರ ಮೂಲಕವಾಗಿ ಗ್ರಾಮೋದ್ಧಾರವನ್ನು ಮಾಡಿಸಿಕೊಳ್ಳಬೇಕೆಂದು ಕೊಂಗ್ರೆಸ್ ಪಕ್ಷವು ನುಡಿದುದನ್ನು ಖಂಡಿಸಿ, ಶ್ರೀ. ರಾಮಸ್ವಾಮಿ ಮುದಲಿಯಾರರು, ಜಸ್ಟಿಸ್ ಪಕ್ಷದ ಲೀಡರರಾಗಿ "ನಾನು ಮದ್ರಾಸು ಸಿಟಿ ಕೌನ್ಸಿಲು ಅಧ್ಯಕ್ಷನಾಗಿದ್ದಾಗ, ಶಿಕ್ಷಿತರೇ ತುಂಬ ನಿವಾಸ ಮಾಡುತ್ತಿದ್ದ ಪ್ರದೇಶಗಳಲ್ಲೇ ಅನಾರೋಗ್ಯವನ್ನು ಹೆಚ್ಚಿಸುವ ಕಾರಣಗಳು ಹೆಚ್ಚಿದ್ದುದನ್ನು ಕಂಡಿದ್ದೆನೆಂದೂ, ಆದುದರಿಂದ ಕೊಂಗ್ರೆಸ್ ಪಕ್ಷದವರು ಏಳು ಲಕ್ಷ ಶಿಕ್ಷಿತರಿಗೆ ಉದ್ಯೋಗ ಕೊಡುವ ನೆವ ಎತ್ತಿ ತಮ್ಮ ಮುಂದಣ ಕಾರ್ಯಭಾರವನ್ನು ತೋರಿಸಿ, ಚುನಾವಣೆಯಲ್ಲಿ ಗೆಲ್ಲಬೇಕೆಂದೇ ಈ ಬಗೆ ನುಡಿಯುತ್ತಾರೆಂದೂ" ಭಾಷಣಮಾಡಿದರು. ಮತ್ತೊಬ್ಬ ಮಹನೀಯರು, "ಶಿಕ್ಷಿತರನ್ನು ಗ್ರಾಮಗಳಿಗೆ ಕಳಿಸಿದರೆ, ಅವರಿಂದ ಗ್ರಾಮಾಭ್ಯುದಯವು ಬಿಳ್ಳಸಿನ ಪ್ರೋತ್ಸಾಹವನ್ನೂ ಪಡೆಯಲಾರದು. ಗ್ರಾಮಸ್ಥರಿಗೆ ಶಿಕ್ಷಿತರಲ್ಲಿ ವಿಶ್ವಾಸವಿಲ್ಲ, ಶಿಕ್ಷಿತರಿಗೆ ಗ್ರಾಮಗಳ ಪ್ರತ್ಯಕ್ಷ ಅನುಭವವೇ ಇಲ್ಲ. ಆದರೆ, ಇವರಿಗೆ ಸ್ವಲ್ಪ ತರಬೇತನ್ನು ಕೊಟ್ಟು ಅನಂತರ ಯೋಗ್ಯರೀತಿಯಲ್ಲಿ ಗ್ರಾಮಸೇವೆಗೆ ನಿಯೋಜಿಸಬಹುದು" ಎಂದರು. ಗ್ರಿಡ್ಲುವೀಟರನ್ನೆ ಗ್ರಾಮಗಳಿಗೆ ಕಳುಹಿಸಬೇಕೆಂದೂ ಮತ್ತೊಂದು ಸೂಚನೆಯಾಗಿದೆ.

ನಿಜವಾಗಿಯೂ, ಗ್ರಾಮಸೇವೆಗೆ ಹೋಗತಕ್ಕವರಲ್ಲಿ ಶಿಕ್ಷಣವು ಹೆಚ್ಚಾಗಿದ್ದರೆ, ಅಥವಾ ಅವರಿಗೆ ತರಬೇತು ದೊರೆತರೆ, ಅವರಿಂದಾಗ ಬಹುದಾದ ಉಪಕಾರಕ್ಕೂ ಮೊದಲಾಗಿ,–ಅವರಲ್ಲಿ ಈ ಬಗೆಯ ಸೇವಾಕಾರ್ಯ ಕೈಕೊಳ್ಳಲು ಅಂತಃಕರಣಪೂರ್ವಕವಾಗಿರುವ ಇಚ್ಛೆಯಿದೆಯೋ ಎಂದು ಶೋಧಿಸುವುದೇ ಮೇಲು. ಎರಡನೆದಾಗಿ, ಇತರರು ಗ್ರಾಮಗಳಿಗೆ ತೆರಳಿ ಅಲ್ಲಿ ಗ್ರಾಮಸೇವೆಗಾಗಿ ನಮ್ರಭಾವದಿಂದ ಕೆಲಸಮಾಡುವ ಮೊದಲು, ಗ್ರಾಮಸ್ಥರಲ್ಲಿ ಈ ಸೇವೆಯು ಅಗತ್ಯವೆಂದೂ ಅದನ್ನು ಅವರು ಸ್ವಾಗತಮಾಡಿಕೊಳ್ಳಲು ಸಿದ್ಧರೆಂದೂ ಅವರೂ ಅಂತಃಕರಣಪೂರ್ವಕವಾಗಿ ಇಚ್ಛಿಸಬೇಕು.

ಗ್ರಾಮೋನ್ನತಿ, ಗ್ರಾಮಾಭ್ಯುದಯ, ಗ್ರಾಮಗಳ ಪುನರುದ್ಧಾರ ಇತ್ಯಾದಿ ಮಾತುಗಳು ಈಗ ತುಂಬ ಹಾರಾಡುತ್ತಿವೆ. ಕೆಲವು ವಿಚಿತ್ರ ಅಭಿಪ್ರಾಯಗಳ ಕಟ್ಟನ್ನು ಶಹರಿನಿಂದ ಹೊತ್ತುಕೊಂಡು, ಥಕ್ಕನೆ ಗ್ರಾಮಗಳಲ್ಲಿ ಇಳಿದು, ಆ ಕಟ್ಟನ್ನು ಗ್ರಾಮದಲ್ಲಿ ಬಿಚ್ಚಿ ತನ್ನ ಪ್ರವೀಣತೆಯ ಪ್ರಕಾಶವನ್ನು ಗ್ರಾಮದಲ್ಲಿ ಬೆಳಗಿಸಲಿರುವ ಯಾವ ಶಿಕ್ಷಿತನಿಗಾದರೂ, ಹಳ್ಳಿಯಲ್ಲಿ ಆದರವು ದೊರೆವುದು ಸುಲಭವಲ್ಲ. ಇದು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲದೆ, ಪ್ರಪಂಚದ ಯಾವ ಭಾಗದಲ್ಲೂ ಹೀಗೆಯೇ ಇದೆ. ಆದರೆ, ಗ್ರಾಮದಲ್ಲಿ ಕೆಲವು ಮುಂದಾಳುಗಳು ಸ್ವಗ್ರಾಮವನ್ನು ಉದ್ಧರಿಸಲು ಯತ್ನಿಸುವರೆನ್ನೋಣ. ಆಗ ತಾನೆ ಸುಶಿಕ್ಷಿತರು ಅತ್ತ ತೆರಳಿ ಸಾಕಷ್ಟು ಉಪಕಾರವನ್ನೂ ಸೇವೆಯನ್ನೂ ಮಾಡಲು ಅವಕಾಶವುಂಟಾಗುವುದು.

ಸುಶಿಕ್ಷಿತರು ಅದಕ್ಕಾಗಿಯೇ, ತಮ್ಮ ಜನ್ಮ ಗ್ರಾಮಗಳಿಗೇ ಮರಳಿ, ತಮ್ಮ ವಿದ್ಯಾಪ್ರಭಾವವನ್ನು ತಮ್ಮ ಗ್ರಾಮದಲ್ಲೇ ಬೆಳಗಿದರೆ, ಅಲ್ಲಿ ಆತ್ಮಪೂರ್ವವಾದ ಉತ್ಸಾಹ ದೊರೆತು, ಗ್ರಾಮಸಂಘಟನಾ ಕಾರ್ಯವು ಸುಲಭದಲ್ಲೇ ಸಾಧ್ಯವಾಗುವುದು.

### ಮೈಸೂರು ವಿಮಾಕಂಪೆನಿ, ಲಿಮಿಟೆಡ್

ಈ ಸಂಘದ ಬಹುಮಾನ ಪ್ರದಾನದ ಸಭೆಯೊಂದು ಸರ್ ಕೆ. ಪಿ. ಪುಟ್ಟಣ್ಣ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಇದೇ ತಾ ೩೧ಕ್ಕೆ ಬೆಂಗಳೂರಲ್ಲಿ ಜರಗುವುದು. ಈ ಸಂದರ್ಭದಲ್ಲಿ ಕಂಪೆನಿಯ ಪಾಲುಮಾಲಿಕರಿಗೆ ಡೈರೆಕ್ಟರುಗಳು ವರದಿಯೊಂದನ್ನು ಒಪ್ಪಿಸಿರುವರು. ಇದೇ ವರ್ಷದ ಜೂನ್ ತಾ ೩೦ರ ವರೆಗೆ ಜಮಾಖರ್ಚನ್ನು ಅನ್ವಯಿಸಿ, ಈ ವರದಿಯು ಸಿದ್ಧವಾಗಿದೆ. ಅಗಾಧವಾದ ಆರ್ಥಿಕ ದುಃಸ್ಥಿತಿಯ ಕಾಲದಲ್ಲೂ, ಕಂಪೆನಿಯ ಒಂದು ಲಕ್ಷದ ಭಾಂಡವಲವು ಬೆಂದಾ ಮೂಲಕ ಕೂಡಿಬರಲು ಪಾಲುಗಳು ಮಾರಿಹೋದುದೂ, ತಾನು ತಾನೆಂದು ಪಾಲು ಪಡೆಯಲು ಮತ್ತೂ ಮುಂದೆ ಮುಂದೆ ಬಂದವರಿಗೆ ಪಾಲುಗಳು ಸಿಗಲಾರದಂತಾದುದೂ, ಜನರಲ್ಲಿ ಈ ಕಂಪೆನಿಯಲ್ಲಿರುವ ಪ್ರೇಮ ವಿಶ್ವಾಸಗಳನ್ನು ತೋರಿಸುತ್ತಿದೆ. ಪರದಿಯ ವರ್ಷದಲ್ಲಿ ೬೩೬ ವಿಮಾ ಅರ್ಜಿಗಳು ಬಂದು, ಅವುಗಳಲ್ಲಿ ಸುಮಾರು ಐದು ಲಕ್ಷ ರೂಪಾಯಿಯ ವಿಮೆಯನ್ನು ಸ್ವೀಕರಿಸಿ, ಮೂರುವರೆ ಲಕ್ಷದಷ್ಟು ಬೆಲೆಯ ವಿಮಾ ಕರಾರುಗಳನ್ನು ಕೊಟ್ಟಿದ್ದುದೂ, ಕಡಿಮೆಯ ಕೆಲಸವಲ್ಲ. "ಡೈರೆಕ್ಟರರು ಹೆಮ್ಮೆಪಡುವ ವಿಷಯ" ಎಂಬುದು ಸ್ವಾಭಾವಿಕವೂ ನಿಜವೂ ಆಗಿದೆ. ಹಾಗಿದ್ದರೂ, ಸ್ಪರ್ಧೆಯ ಕಾರಣದಿಂದಾದರೂ ಕೈಗೆ ಬಂದಂತೆ ವಿಮಾ ಅರ್ಜಿಗಳನ್ನು ಅಂಗೀಕರಿಸದೆ ಇದ್ದುದರಿಂದ, ಇದುವರೆಗೆ ಯಾವ ವಿಮೆಯ ಮೊಬಲಗನ್ನಾದರೂ ಪಾವತಿ ಮಾಡುವ ಅಗತ್ಯವೂ ಈ ಕಂಪೆನಿಗೆ ಉಂಟಾದುದಿಲ್ಲ ಎಂದೂ ತಿಳಿಯುವಾಗ, ಬಹಳ ಜಾಗರೂಕತೆಯಿಂದ ಕಂಪೆನಿಯು ಸ್ವಕಾರ್ಯಸಾಧನೆ ಮಾಡುತ್ತಲಿದೆ ಎಂದೂ ವ್ಯಕ್ತವಾಗುವುದು. ಇನ್ನು, ಕಂಪೆನಿಯ ಕಾರ್ಯಕ್ಷೇತ್ರವನ್ನು ಸಂಸ್ಥಾನದ ಹೊರಗೂ ವಿಸ್ತರಿಸುವ ಕುತೂಹಲವಿದ್ದು, ಅದನ್ನು ಅಖಿಲ ಭಾರತ ಸಂಸ್ಥೆಯಾಗಿ ಮಾರ್ಪಡಿಸಬೇಕೆಂದೂ ಡೈರೆಕ್ಟರರಲ್ಲಿ ಆಕಾಂಕ್ಷೆಯುಂಟಾಗಿದೆ. ಅಡ್ಡಿಯಿಲ್ಲದೆ ಹಾಗೆ ಮಾಡುವುದಕ್ಕೆ, ಪ್ರಚಾರ ಕಾರ್ಯಕ್ಕೂ ತಗಲಿದ ಖರ್ಚು ಕಡಿಮೆಯೂ ದುದೂ, ವಿಮಾ ನಿಧಿಗೆ ೫೦೦೦ ರೂಪಾಯಿ ಸೇರಿದುದೂ, ಸಂರಕ್ಷಣ ನಿಧಿಗೆ ಸುಮಾರು ಮುಕ್ಕಾಲು ಲಕ್ಷ ರೂಪಾಯಿ ಸೇರಿದುದೂ, ಆಡಳಿತ ನಿರ್ವಾಹಕರು ತಮಗೆ ಸಲ್ಲಬೇಕಾದ ೧೫೦೦ ರೂಪಾಯಿಗಳನ್ನು ಕಂಪೆನಿಗೇ ಬಿಟ್ಟು ಕೊಟ್ಟುದೂ ಯೋಗ್ಯ ಸಲಹೆಗಳಾಗಿರುವುವು. ಚಿರಕಾಲವೂ ಯಶಸ್ವಿಯಾಗಿ ಬಾಳಬೇಕಾಗಿರುವ ಸಂಸ್ಥೆಯಿದು.

# ಸ್ಫುಟವಿಚಾರಗಳು

### ಕಾನೂನು ವಿದ್ಯಾರ್ಥಿಗಳ ಕಟ್ಟೆ.

ಟ್ರಿವೆಂಡ್ರಮಿನ ಲೋ ಕೋಲೇಜಿನಲ್ಲಿ ಹೋದ ವರ್ಷ ೩೦೦ ವಿದ್ಯಾರ್ಥಿಗಳು ಬಿ. ಎಲ್ ಪರೀಕ್ಷೆಗಾಗಿ ಓದುತ್ತಿದ್ದರು. ಈ ವರ್ಷ ಅವರ ಸಂಖ್ಯೆ ೫೦ ಹಿಂದೆ ಆದರೆ, ಎಫ್ ಎಲ್ ಪರೀಕ್ಷೆಯಲ್ಲಿ ಪಾಸಾಗಿದ್ದರೂ ಬಿ ಎಲ್ ಪರೀಕ್ಷೆಗೆ ಓದಲು ಅವಕಾಶ ಕೊಡುತ್ತಿದ್ದರು. ಇವರು ಸನ್ನಂಟರು ಪರೀಕ್ಷೆಯಲ್ಲಿ ಎಫ್ ಎಲ್‌ನಲ್ಲಿ ಪರೀಕ್ಷೆ ಕೊಡಬಹುದಿದ್ದಿತು. ಈ ವರ್ಷದಿಂದ ಅಂತಹ ರಿಯಾಯಿತಿಯು ರದ್ದಾಗಿದೆ. ಇದೂ ಅಲ್ಲದೆ, ೧೯೩೩–೩೪ರಿಂದ ಪ್ಲೀಡರ್ ತರಗತಿಯನ್ನು ಐದು ವರ್ಷ ವರ್ಷಗಳ ತನಕ ತೆರೆಯುವುದಿಲ್ಲವೆಂದು ಸರಕಾರವು ನಿಶ್ಚಯಿಸಿರುವ ಕಾರಣ, ಪ್ಲೀಡರ್ ಕ್ಲಾಸಿನಲ್ಲಿ ವಕಾಲತ್ತ ಪರೀಕ್ಷೆಗಾಗಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ಇಲ್ಲವಾಗಿದೆ. ಕಕ್ಷಿಗಾರರಿಗಿಂತಲೂ ಅಧಿಕಾಧಿಕ ಸಂಖ್ಯೆಯಲ್ಲಿ ವಕೀಲರು ಹೊರಡುತ್ತಿರುವುದನ್ನು ಕಂಡು ಯುನಿವರ್ಸಿಟಿಯು ಇಂತಹ ಪ್ರತಿಬಂಧಕಗಳನ್ನು ಉಂಟುಮಾಡಿರುವುದು. ಇದರಿಂದ, ವಕೀಲರ ಸಂಖ್ಯೆ ಕಡಿಮೆಯಾಗಿ ಸರ್ವರಿಗೂ ಸರಾಸರಿ ಉದ್ಯೋಗ ಸಿಗುವಂತಾಗಾವುದೇ ಮಾತ್ರವಲ್ಲದೆ, ನಿರುದ್ಯೋಗಿಗಳಾಗಿ ನಿರುತ್ಸಾಹರಾಗಿ ಇತರ ಚಳವಳಿಗಳಲ್ಲಿ ಇವರು ಕೈಹಾಕುವುದು ತಪ್ಪುವುದು ಕಡಿಮೆಯಾಗುವುದೆಂದೂ ಎಣಿಸಲಾಗಿದೆ.

### ನಮ್ಮ ಮುನಿಸಿಪಾಲಿಟಿಗೆ ಪ್ರತಿನಿಧಿಗಳು ಯಾರು?

ಮಂಗಳೂರು ಮತ್ತು ಮಲಬಾರಿನ ಐದು, ಅಂತೂ ಆರು ಮುನಿಸಿಪಾಲಿಟಿಗಳನ್ನು ಕೂಡಿಸಿ, ಅವುಗಳ ಪ್ರತಿನಿಧಿಯಾಗಿ ಒಬ್ಬರನ್ನು ಮಾತ್ರ ಮದ್ರಾಸು ಕೌನ್ಸಿಲಿಗೆ ಮುಂದೆ ಚುನಾಯಿಸಬಹುದಾಗಿ ಸರಕಾರವು ನಿಶ್ಚಯಿಸಿರುವುದು ತೀರ ವಿಷಾದಕರವಾಗಿದೆ ಮಾತ್ರವಲ್ಲದೆ, ವಸ್ತುಸ್ಥಿತಿಗೂ ಸಲ್ಲದುದಾಗಿದೆ. ನಮ್ಮ ಜಿಲ್ಲೆಯ ಭಾಷಾ ಬಳಕೆಯೆ ಬೇರೆ. ಮಲಬಾರಿನೊಡನೆ ನಮ್ಮ ಜಿಲ್ಲೆಗೆ ಸಾಂಪತ್ತಿಕ ಅಥವಾ ಸಾಂಸ್ಕೃತಿಕ ಸಂಬಂಧವು ಅಕ್ಕಲ್ಲವೇ ಇದೆ. ಅವರು ಐವರು, ನಾವು ಒಬ್ಬರಾಗಿರುವಾಗ, ಇವರೊಳಗಿಂದೊಬ್ಬರನ್ನು ಚುನಾಯಿಸಿ ಕಳುಹಬೇಕೆಂದರೆ, ಮಲಬಾರಿನವರೇ ಚುನಾವಣೆ ಹೊಂದುವರಲ್ಲದೆ ಈ ಜಿಲ್ಲೆಯವರಿಗೆ ಎಂತಹ ಯುಗದಲ್ಲೂ ಸಂದರ್ಭವು ದೊರೆಯಲಾರದು. ಹೀಗೆ, ಈ ಸದಸ್ಯರನ್ನು ಚುನಾಯಿಸುವುದರಲ್ಲಿ ನಮ್ಮ ಜಿಲ್ಲೆಗೆ ಪ್ರಾತಿನಿಧ್ಯವೇ ಇಲ್ಲವೆಂಬಂತೆ ನಿರ್ಧರಿಸಿದಂತಾಗುವುದು. ಮಂಗಳೂರು ಮುನಿಸಿಪಾಲಿಟಿಯ ಪ್ರತಿನಿಧಿಯಾಗಿ ಒಬ್ಬರನ್ನು ಬೇರೆ ಆರಿಸಲು ವ್ಯವಸ್ಥೆ ಇಲ್ಲದಿರುವಾಗ, ಇದಕ್ಕಾಗಿ ಚಳವಳಿಸುವ ಮತ್ತು ನ್ಯಾಯವನ್ನು ಪಡೆಯಲು ಬೇಕಾದಷ್ಟು ಪ್ರಯತ್ನಿಸುವ ಕರ್ತವ್ಯವು ನಮ್ಮದೇ ಅಲ್ಲವೆ?

ಗಮನಿಸಿರಿ! ನಿರೀಕ್ಷಿಸಿರಿ!

ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಲಿ

ಇವರು
ಇದೇ ಸಪ್ಟಂಬರ ತಿಂಗಳಿನ ಎರಡನೇ ವಾರದಲ್ಲಿ

ಭಗವಾನ್ ಯೇಸುಕ್ರಿಸ್ತ

ಎಂಬ
ಭಕ್ತಿರಸವೂ, ಭಾವಭರಿತವೂ ಆದ ನಾಟಕವನ್ನು ಹಿಂದುಸ್ಥಾನ ಸಿನೆಮಾ
ಥಿಯೇಟರಿನಲ್ಲಿ ಅಭಿನಯಿಸಲಿರುವರು.
ತಾರೀಕನ್ನು ಗಮನಿಸಿರಿ!
ಕರ್ನಾಟಕ ರಂಗಭೂಮಿಯಲ್ಲಿ ಈ ನಾಟಕವು
ಅಭಿನಯಿಸಲಾಗುವುದು ಇದೇ ಪ್ರಥಮ!
ಸರ್ವ ಜನಮನರಂಜನೆಗೊಳಿಸಬೇಕೆಂದು ಧಾರವಾಡದ
ಪ್ರಖ್ಯಾತ ಮಿಸ್ ಮಥುರಾನ್ ಸಾನಿ ಎಂಬವರು
ಈ ನಾಟಕದಲ್ಲಿ ಮುಖ್ಯ ಪಾತ್ರವನ್ನು ವಹಿಸುವಂತೇರ್ಪಾಡು ಮಾಡಲಾಗಿದೆ.
ಕರ್ಣಾನಂದಕರ ಗಾನ! ಮನಾಹ್ಲಾದಕರ ನರ್ತನ!
ಮನಮುಗ್ಧಕರ ಅಭಿನಯ!
ಗರುಡ ಸದಾಶಿವರಾವ್, ಪ್ರೊಪ್ರೈಟರ್


# ಮಂಗಳೂರು

ಇದೇ ಬರುವ ತಿಂಗಳ ತಾ. ೭ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮-೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯಸಮಾಜ ಮಂದಿರದಲ್ಲಿ ಸಮಾಜದ ಅಧ್ಯಕ್ಷರು "ಆರ್ಯಜೀವನ" ಎಂಬ ಕುರಿತು ಕನ್ನಡದಲ್ಲಿ ಭಾಷಣ ನೀಡುವರು. ಸರ್ವರೂ ಸಹಕರಿಸಬೇಕಾಗಿ ವಿನಂತಿ.

ಇದೇ ತಾ ೩ನೇ ಸಪ್ಟಂಬರ ಮಂಗಳವಾರ ೧ ಗಂಟೆಗೆ ಜಿಲ್ಲಾ ಬೋರ್ಡಿನ ಆಫೀಸಿನಲ್ಲಿ ಸದಸ್ಯರ ಸಾಮಾನ್ಯ ಸಭೆಯು ಜರಗಲಿರುವುದು.

ಚುನಾವಣೆಯ ಸರ್ಕಲುಗಳನ್ನು ವಿಭಾಗಿಸುವುದಕ್ಕಾಗಿಯೂ ಆ ರಿಜರ್ವ ಸೀಟುಗಳನ್ನು ಹಂಚಿ ಹಾಕುವುದಕ್ಕೂ ಜಿಲ್ಲಾ ಬೋರ್ಡಿನ ಸದಸ್ಯರ ಒಂದು ಸ್ಪೆಶಲ್ ಮೀಟಿಂಗು ಇದೇ ತಾ ೩ನೇ ಸಪ್ಟಂಬರ ೩ ೩೦ಕ್ಕೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗುವುದು.

ಆಗೋಸ್ಟು ತಾ. ೧೮ಕ್ಕೆ ಕ್ವೆಟ್ಟಾ ಫಂಡಿಗಾಗಿ ಇಲ್ಲಿಯ ಮಹಿಳಾ ಸಭೆಯವರು ಜರಗಿಸಿದ ಟೀಪ್ಟಿಯ ಉತ್ಪತ್ತಿ ರೂ. ೪೮೮-೪-೦ ಆಗಿತ್ತು. ಇದರಲ್ಲಿ ವೈಸರಾಯರ ಕ್ವೆಟ್ಟಾ ರಿಲೀಫ್ ಫಂಡಿಗೆ ರೂ. ೨೪೪-೨-೦ನ್ನು ಕಳುಹಿಸುವರು. ರಾಜೇಂದ್ರ ಪ್ರಸಾದರ ಕಾಂಗ್ರೆಸ್ ಫಂಡಿಗ ರೂ. ೨೪೪-೨-೦ನ್ನು ರವಾನಿಸಲಾಗಿದೆ.

ಶ್ರೀ ಕೃಷ್ಣ ಸಿನೇಮಾದಲ್ಲಿ ಇದೇ ತಾ ೩೦ರ ವರೆಗೆ ಮಿಸ್ ಸ್ಪೈಟ್ ಲೋಮೆನ್ ಎಂಬ ಚಿತ್ರವು ಪ್ರದರ್ಶಿಸಲ್ಪಡಲಿದೆ. ದೀಕ್ಷಿತ್ ರಾಜಾಸಾಹೇಬರೂ ಮಿಸ್ ಇಂದಿರಾ ಗೋರ ಬಾಲಿಕೆಗಳು ಈ ಚಿತ್ರದಲ್ಲಿ ಅಭಿನಯಿಸುವರು. ತಾ ೪ರಿಂದ ಪ್ರಖ್ಯಾತ ಫ್ರೆಡರಿಕ್ ಮಾರ್ಚ್ ಮತ್ತು ಕೊಸ್ಟೀನ್ ಬೆನ್ನೆಟ್ ಎಂಬವರಿಂದ ಅಭಿನಯಿತವಾದ ಎಫೇರ್ಸ್ ಆಫ್ ಸೆಲ್ಲಿನಿ ಎಂಬ ಚಿತ್ರವು ಪ್ರದರ್ಶಿತವಾಗಲಿದೆ.

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯ ಸಂಬಂಧವಾಗಿ ಮಂಗಳೂರು ಶಹರಿನಲ್ಲಿ ಒಟ್ಟು ನಾಲ್ಕು ಪೋಲಿಂಗ್ ಬೂತ್‌ಗಳನ್ನು ಇಡಲಿರುವರು.

ಡಿಸ್ಟ್ರಿಕ್ಟ್ ಬೋರ್ಡು ಸೆಕೆಂಡರಿ ಸ್ಕೂಲಿನ ಉಪಾಧ್ಯಾಯರ ಸಂಬಳದ ಸ್ಕೇಲಿನಲ್ಲಿ ಈ ರೀತಿಯ ಬದಲಾವಣೆಗಳಾಗಿವೆ. ಮಿಡ್ಲ್ ಸ್ಕೂಲ್ ಹೆಡ್ಮಾಸ್ಟರರಿಗೆ ರೂ ೬೫-೫/೨-೧೦೦ ಓರಿಯಂಟಲ್ ಪರೀಕ್ಷೆಗಳ ಬಿರುದುಗಳುಳ್ಳ ಪಂಡಿತರಿಗೆ ರೂ. ೪೫-೨/೨-೬೫; ವಿದ್ವತ್ ಯೋಗ್ಯತೆ ಇರುವ ಪಂಡಿತರಿಗೆ ೩೦-೨/೨-೫೦; ಎಸ್ ಎಸ್ ಎಲ್. ಸಿ ಉತ್ತೀರ್ಣರಾಗಿ ಸೈದಾಪೇಟೆಯ ಅಂಗಸಾಧನಾ ವಿದ್ಯಾಖಾತೆಯ ವೈ ಎಂ ಸಿ ಎ. ಕೋಲೇಜಿನಲ್ಲಿ ತರಬೇತಾದ ಫಿಸಿಕಲ್ ಟ್ರೈನಿಂಗ್ ಉಪಾಧ್ಯಾಯರಿಗೆ ರೂ. ೩೦-೨/೨-೫೦ ಆದಲ್ಲದವರಿಗೆ ೨೫-೨/೨-೪೫; ಕಮರ್ಶಿಯಲ್ ಪಾಸಾದ ಉಪಾಧ್ಯಾಯರಿಗೆ ರೂಪಾಯಿ ೩೦-೨/೨-೫೦.

ಸಾಗರಗೋಡಿನಲ್ಲಿ ಮಂಗ ಕುಣಿಸುವ ಒಬ್ಬನನ್ನು ಕೆಲವರು ಕೊಂದರೆಂದೂ ಅವನ ಶವವನ್ನು ಅಲ್ಲೇ ಹೂಳಿಟ್ಟ ಸ್ಥಳವನ್ನು ಅವನ ಮಂಗವು ಪೊಲೀಸರಿಗೆ ತೋರಿಸಿದುದರಿಂದ ಗುಟ್ಟು ರಟ್ಟಾಗಿ ಪತ್ತೆ ನಡೆದಿದೆಯೆಂದೂ ಜನಜನಿತ ವಾರ್ತೆಯಿದೆ.

ಹೊಗೆ ಬಜಾರದಲ್ಲಿ ೧೩೭೫-೦-೪ರ ಸ್ಥಳವನ್ನು ಕ್ರಯಕ್ಕೆ ಪಡೆದು ಒಂದು ಮಾರ್ಕೆಟನ್ನು ರಚಿಸಲಿರುವರು.

ದಿ ಪೊಪ್ಯುಲರ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಇದರ ಪ್ರಥಮ ಪ್ರೌಢ್ಯಸೇತನ ವರದಿಯು ತಲುಪಿದೆ. ಸವಿವರ ಸ್ವೀಕಾರ ಬರುವ ಸಂಚಿಕೆಯಲ್ಲಿ.

ಸೈಂಟ್ ಎಲೋಸಿಯಸ್ ಕೋಲೇಜಿನಲ್ಲಿ ಕ್ವೆಟ್ಟಾ ರಿಲೀಫ್ ಫಂಡಿಗಾಗಿ ಜರಗಿದ ವಿನೋದಾವಳಿಯಲ್ಲಿ ದೊರೆತ ಹಣದೊಳಗಿನ ನೋಟಿನ ಎಂಟರೆಟೈನ್‌ಮೆಂಟ್ ಟ್ಯಾಕ್ಸನ್ನು ರದ್ದುಮಾಡಬೇಕೆಂದು ಕೋಲೇಜಿನ ಪ್ರಿನ್ಸಿಪಾಲರು ನಗರ ಸಭೆಗೆ ಬರೆದಿರುವರು.

ಹೂವಿನ ಮಾರ್ಕೆಟನ್ನು ಕಾಡ ಕಿತ್ತಿಲಿಗೆ ಒಯ್ಯಬಹುದೆಂದೂ ಬಜಾರ ೪ ನೇ ನಂಬ್ರ ವಾರ್ಡಿನ ಸ್ಥಳವನ್ನು ಪಡೆಯಬೇಕೆಂದೂ ನಗರ ಸಭೆಯವರಿಗೆ ಸರಕಾರವು ತಿಳಿಸಿದೆ.

ಮೊನ್ನೆ ತೀರಿಕೊಂಡ ಸೆನಿಟರಿ ಇನ್ಸ್‌ಪೆಕ್ಟರ್ ಮಿ। ಪಿ ಬಿ. ಪಿಂಟೋರವರ ವಿಧವೆ ಹೆಂಡತಿಗೆ ಇ ಅಂತಿಮವಾಗಿ ೬೭೨-೮-೦ ರೂಪಾಯಿಗಳನ್ನು ನಗರ ಸಭೆಯು ಗ್ರಾಂಟು ರೂಪದಲ್ಲಿ ಕೊಡಲಿದೆ.

ವೆಟರ್ನರಿ ಮಾರ್ಕೆಟಿನ ಸುಪರಿಂಟೆಂಡೆಂಟರಾಗಿದ್ದ ದಿವಂಗತ ಮಿ। ಶ್ರೀ। ನಾರಾಯಣಶೆಟ್ಟಿಯವರ ವಿಧವೆ ಹೆಂಡತಿಯವರಿಗೆ ೧೬೪ ರೂಪಾಯಿಗಳನ್ನು ಗ್ರಾಚುವಿಟಿಯಾಗಿ ನಗರ ಸಭೆಯು ಕೊಡಲಿದೆ.

## ನಮ್ಮ ಎಲ್ಲಾ ಏಜಂಟರು

ತಮಗೆ ಬೇಕಾಗಿರುವ ಪ್ರತಿಗಳ ಸಂಖ್ಯೆಯ ಪ್ರತಿಗಳೆಷ್ಟೆಂದು ಸಪ್ಟಂಬರ ೧೫ರೊಳಗೆ ನಮಗೆ ತಿಳಿಸಬೇಕು. ಕಳೆದ ವರ್ಷ ಅನೇಕರು ತಂತಿ ಬಿಟ್ಟು ನಿರಾಶರಾದಂತೆ ಈ ವರ್ಷವೂ ಆಗಬಾರದೆಂದು ಈ ಸೂಚನೆ.

ಜಪ್ಪಿನ ಮುನಿಸಿಪಲ್ ಡಿಸ್ಪೆನ್ಸರಿಯಲ್ಲಿ ಮದ್ದು ಕೂಡಿ ಮಾಡುವುದಕ್ಕಾಗಿ ದಿನಕ್ಕೆ ಆರಾಣೆ ಮಜೂರಿಯ ಮೇಲೆ ಒಬ್ಬ ಕೂಲಿಯನ್ನು ನೇಮಕ ಮಾಡಬೇಕೆಂದು ಹೆಲ್ತ್ ಆಫೀಸರರು ಶಿಫಾರಸು ಮಾಡಿರುವರು.

ಬಿಜೈಯಲ್ಲಿ ಒಂದು ಮಾರ್ಕೆಟನ್ನು ತೆರೆಯುವುದರ ಸಲುವಾಗಿ ರೂ ೫೭೭-೧೫-೧೧ ಕೊಟ್ಟು ಒಂದು ಸ್ಥಳವನ್ನು ಪಡೆದಿರುವರು. ಈ ಮೊತ್ತವನ್ನು ನಗರ ಸಭೆಯು ಕೊಡಲು ಶಿಫಾರಸು ಮಾಡಬೇಕೆಂದು ಜಿಲ್ಲಾ ಕಲೆಕ್ಟರರು ಸಭೆಗೆ ಬರೆದಿರುವರು.

ಬೋಳೂರಿನ ಟಿ. ಎಸ್ ನಂಬ್ರ ೧೫೫ರಲ್ಲಿ ಒಂದು ಸಾರ್ವಜನಿಕ ಪಾಯಿಖಾನೆಯನ್ನು ತೆರೆಯಬೇಕೆಂದು ಸೂಚನೆ ಇದ್ದರೂ ಶ್ರೀ [illegible] ಆನಂದರಾಯರು ಅದನ್ನು ನಿಷೇಧಿಸಿರುವರು.

ಗವರ್ನಮೆಂಟ್ ಕೋಲೇಜಿನಲ್ಲಿ ಇಂಟರ್‌ಮೀಡಿಯೇಟ್ ತರಗತಿಯ ಕೆಲವು ವಿದ್ಯಾರ್ಥಿಗಳಿಗೆ ಅಧಿಕಾರಿಗಳು ದಂಡ ವಿಧಿಸಿದುದರ ಪರಿಣಾಮವಾಗಿ ಹಲವು ಯುವಕರು ತಾ. ೨೮ರಿಂದ ಮುಷ್ಕರ ಹಿಡಿದು ಚಳವಳಿ ಜಯಶೀಲರಾದರು.

ಮಂಗಳೂರಿನಲ್ಲಿಯ ಕನಿಷ್ಟಪಕ್ಷ ೧೦ ಮೈಲುಗಳಿಗಾದರೂ ಸಿಮೆಂಟ್ ಕೊಂಕ್ರೀಟ್ ಹಾಕುವುದು ಹಿತವೆಂದೂ ಆ ಬಗ್ಗೆ ಸರಕಾರವು ೩ ಲಕ್ಷ ರೂಪಾಯಿಗಳ ಸಾಲವನ್ನು ೨೦ ವರ್ಷಗಳ ವ್ಯಾದೆಗೆ ಅತೀ ಸುಲಭ ಬಡ್ಡಿಯ ಮೇಲೆ ಕೊಡಬೇಕೆಂದೂ ಮುನಿಸಿಪಲ್ ಕಮಿಶನರರು ಸೂಚಿಸಿರುವರು.

ನಮ್ಮ ಮುನಿಸಿಪಾಲಿಟಿಯ ಹೆರಿಗೆ ಮತ್ತು ಶಿಶುಪಾಲನ ಇಲಾಖೆಯ ಮೇಲ್ವಿಚಾರವನ್ನು ನಿರ್ವಹಿಸಲು ಮಿಸ್ ಮೇರಿ ಆದ್ರಾನೆ ಎಲ್ ಎಂ ಪಿ ಇವರು ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

# ತಾಲೂಕುಗಳಿಂದ.

**ಕಾರ್ಕಳ**—೩೧ನೇ ಕಳೆದ ತಾರೀಕು ೯ನೇ ಸ್ವದೇಶಾಭಿಮಾನಿಯ ಪುಟ ೧೧ರಲ್ಲಿ ಪ್ರಕಟವಾದ, ಕಾರ್ಕಳ ದಿ ಕೆನರಾ ಸ್ಟ್ಯಾಂಪ್ ಏಜನ್ಸಿಯ ಆಫೀಸಿನ ರಶೀದಿ ನಂಬ್ರ ೩೦೫ರಿಂದ ೪೦೦ರ ವರೆಗೆ ಎಂದು ತಪ್ಪಿ ಬಿದ್ದಿರುವುದು. ವಾಚಕರು ಅದನ್ನು ೨೨೫ರಿಂದ ೩೦೦ರ ವರೆಗೆ ಎಂದು ತಿದ್ದಿಕೊಂಡು ಓದಬೇಕು." ಎಂದು ಸದ್ರಿ ಏಜನ್ಸಿಯ ಪ್ರೊಪ್ರೈಟರರಾದ ಬಿ ಅಚ್ಯುತ ಪೈಗಳು ತಿಳಿಸುತ್ತಾರೆ.

ಇಲ್ಲಿಯ ಶ್ರೀ ಪದ್ಮಶಾಲಿ ವೈಶ್ಯ ಸಮಾಜ ಸೇವಾ ಯುವಕ ಸಂಘದ ಆಶ್ರಯದಲ್ಲಿ 'ಶ್ರೀ ಕೃಷ್ಣ ಜಯಂತಿ' ಉತ್ಸವವು ಶ್ರೀ। ಕೆ ಆರ್. ಶೆಟ್ಟಿಗಾರರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

**ಹಿರಿಯಡ್ಕ**—ಇದೇ ತಾ ೨೧-೮-೩೫ನೇ ಬುಧವಾರ ಅಪರಾಹ್ನ ಘಂಟೆ ೪ಕ್ಕೆ ಸರಿಯಾಗಿ ಸ್ಥಳೀಯ ಆರ್ಯ ಸಮಾಜದವರಿಂದ ಶ್ರೀಕೃಷ್ಣ ಜಯಂತಿಯ ಉತ್ಸವವು ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ, ಶ್ರೀಯುತ ಕಟಪಾಡಿ ಶ್ರೀನಿವಾಸ ಶೆಟ್ಟಿಯವರ ಅಧ್ಯಕ್ಷತೆಯಿಂದ ಸಾಂಗವಾಗಿ ಜರಗಿಸಲ್ಪಟ್ಟಿತು.

ಅಂದಿನ ಸಭೆಯಲ್ಲಿ ಶ್ರೀಯುತ ಎಚ್ ಸದಾಶಿವರಾಯರು ಶ್ರೀಕೃಷ್ಣ ಜಯಂತಿಯ ಸಂದೇಶವನ್ನು ಕುರಿತು ಪದ್ಯರೂಪವಾಗಿ ಹಾಡಿದ ತರುವಾಯ, ಶ್ರೀಯುತ ಪಿ ಕೆ ಅನಂತಯ್ಯನವರು, ಸಮಾಜದಲ್ಲಿ ಇಂದು ಕಂಡುಬರುವ ಕೊರತೆಗಳನ್ನು ಕುರಿತು ಸುರಸವಾಗಿ ಭಾಷಣವಿತ್ತರು. ಆವಾಗ ಸಭಾಧ್ಯಕ್ಷರು ಶ್ರೀಕೃಷ್ಣನ ಮಹತ್ವಿಕೆಯ ಕುರಿತು ವಿವರವಾಗಿ ಸಭಿಕರಿಗೆ ಮನಮುಟ್ಟುವಂತೆ ಭಾಷಣವಿತ್ತುದಲ್ಲದೆ ಸ್ತ್ರೀ ಸ್ವಾತಂತ್ರ್ಯ ಸ್ತ್ರೀ ವಿದ್ಯಾಭ್ಯಾಸ ವಿಧವಾ ವಿವಾಹ ಪದ್ಧತಿಯೇ ಮುಂತಾದ ಹಲವು ವಿಷಯಗಳ ಸಂಗತಿಗಳೆಡೆಗೆ ನಾವು ಗಮನಕೊಡದೆ ಅವುಗಳಿಗೆ ಬದ್ಧವಿರೋಧಿಗಳಾಗಿದ್ದು ಬಾಲವಿಧವೆಯರು ತಮ್ಮ ದುಃಖದಾಯಕ ಜೀವಮಾನಕ್ಕಾಗಿ ಸುರಿಸುವ ಕಣ್ಣೀರು ಸುರಿಸುತ್ತಿದ್ದರೂ ನಮ್ಮ ದೃಷ್ಟಿಗೆ ಬೀಳುತ್ತಿದ್ದರೂ ಅಂಧಶ್ರದ್ಧೆಯಿಂದ ಅವುಗಳನ್ನು ಸುಧಾರಿಸಲೆತ್ನಿಸದೆ ಸುಮ್ಮಗಿದ್ದು ನಾವು ಕಟುಕ ಸ್ವಭಾವಿಗಳಾಗಿರುವೆವೆಂದೂ ಇದರಿಂದಾಗಿಯೇ ನಮ್ಮ ಸಮಾಜವು ಇಂದು ಅತ್ಯಂತ ದುರವಸ್ಥೆಗೀಡಾಗಿರುವುದೆಂದೂ ಇನ್ನು ಮುಂದಾದರೂ ಸಮಾಜದ ದುಷ್ಟ ಪದ್ಧತಿಗಳನ್ನು ನಿವಾರಿಸಲೆತ್ನಿಸುವಂತೆ ಶ್ರೀ ಪರಮೇಶ್ವರನ ಅನುಗ್ರಹವಿರಲೆಂದು ಬೇಡುವುದರೊಡನೆ ತನ್ನ ಸುರಸ ಭಾಷಣವನ್ನು ಕೊನೆಗೊಳಿಸಿದರು.

ಆ ಬಳಿಕ ಕಾರ್ಯದರ್ಶಿಯವರು ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸುವುದರ ಮೂಲಕ ಸಭೆಯು ಕೊನೆಗೊಂಡಿತು.

**ಮೂಡಬಿದ್ರಿ**—ಸೆಂಟ್ರಲ್ ಉಪಾಧ್ಯಾಯರ ಸಂಘದ ಇದೇ ಸಭೆಯು ಇದೇ ೧೬-೮ ೩೫ರಲ್ಲಿ ತಾಲೋಕ ಹಾ. ಎ. ಶಾಲಾ ಮುಖ್ಯೋಪಾಧ್ಯಾಯರಾದ ಮ. ರಾ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ೨೦ ಶಾಲೆಗಳ ೪೩ ಮಂದಿ ಅಧ್ಯಾಪಕರು ಹಾಜರಿದ್ದರು. ಅಲ್ಲದೆ ಮೂಡಬಿದ್ರಿ ಸಹಕಾರ ಸಂಘದ ಅಧ್ಯಕ್ಷರಾದ ದಂಬ್ಳರ್ ಕೆ ರಾಮರಾಯರು ಸುಪರವೈಜರ ಕೆ. ಎಲ್. ಶೆಟ್ಟರೂ ಹೈಸ್ಕೂಲಿನ ಪಿ. ರಾಮಕೃಷ್ಣ ರಾಯರೂ ಎಂ ಗೋವಿಂದ ರಾಯರೂ ಹಾಜರಿದ್ದರು. ಗೋವಿಂದ ರಾಯರು ಮತ್ತು ರಾಮರಾಯರೂ ಉಪಾಧ್ಯಾಯರಿಗೆ ಸಹಕಾರ ಸಂಘಗಳ ಆವಶ್ಯಕತೆಯ ವಿಷಯ ಮಾತನಾಡಿದ ನಂತರ ಎಲಿಮೆಂಟರಿ ಮತ್ತು ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ಬಗ್ಗೆ ಪ್ರತ್ಯೇಕ ಒಂದು ಸಹಕಾರ ಸಂಘವು ಆಗತಕ್ಕದ್ದೆಂದು ನಿಶ್ಚಯಿಸಿದ ಮೇಲೆ, ೧೫ ಮಂದಿ ಉಪಾಧ್ಯಾಯರು ತಮ್ಮ ದಸ್ಕತ್ತನ್ನು ರಜಿಸ್ತ್ರಿ ಆಗುವ ಬಗ್ಗೆ ಕೊಟ್ಟರು. ರಾಜಗೀತದೊಡನೆ ಸಭೆಯು ಅಂತ್ಯಗೊಳಿಸಲಾಯಿತು. ಬರುವ ಸಭೆಯು ೨೧-೯-೩೫ಕ್ಕೆ ಇಡಲ್ಪಟ್ಟಿದೆಯೆಂದು ಈ ಮೂಲಕ ತಿಳಿಸಲಾಗಿಯದೆ.

**ಕೋಟೇಶ್ವರ**— ನೂತನವಾಗಿ ಸ್ಥಾಪಿಸಲ್ಪಟ್ಟ ಇಲ್ಲಿಯ ಪಂಚಾಯತ ಬೋರ್ಡಿಗೆ ೧೩ ಜನ ಮೆಂಬರರು ಚುನಾಯಿತರಾಗಿ ಆ ಪೈಕಿ ಇಲ್ಲಿಯ ಪಂಚ್ಯಾತ ಕೋರ್ಟು ಪ್ರೆಸಿಡೆಂಟರೂ, ಜನಪ್ರಿಯರೂ ಆದ ಶ್ರೀ ಎಚ್, ಶ್ರೀನಿವಾಸರಾಯರು ಅಧ್ಯಕ್ಷರಾಗಿಯೂ, ಶ್ರೀ। ವಿಶ್ವೇಶ್ವರ ಐತಾಳರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಕೇರಿ ಪರಾಬು ಅಂಗಡಿಗಳು, ಬಡಾಕೆರೆ, ಕುಮ್ರಿ, ಆರಾಲ್, ಹಳೆ ಅಳಿವೆ, ಕೋಡಿ ವಗೈರೆ ಸ್ಥಳಗಳಿಗೆ ಹೋಗುವ ಮಾರ್ಗದಲ್ಲಿದ್ದು ನಿತ್ಯವೂ ಜಗಳ ಗಲಾಟೆ ವಗೈರೆ ನಡೆಯುತ್ತಿರುವುದರಿಂದ ಜನರಿಗೆ ಹೋಗಲು ತುಂಬಾ ತೊಂದರೆಯೂ ಭಯವೂ ಆಗುತ್ತಿರುವುದರಿಂದ ಸದ್ರಿ ಅಂಗಡಿಯನ್ನು ಇದ್ದ ಸ್ಥಳದಿಂದ ಬೇರೊಂದು ಸ್ಥಳಕ್ಕೆ ವರ್ಗಾಯಿಸಿದರಾಗದೇ ಎಂದೊಂದು ಟಾಕ್ಕು.

**ಮಂಜೇಶ್ವರ**—ಇದೇ ಬರುವ ಡಿಸ್ಟ್ರಿಕ್ಟ್ ಬೋರ್ಡು ಮೆಂಬರ ಇಲೆಕ್ಷನ್ ಕುರಿತು ಒಂದು ಸೀಟು ಮಹಮ್ಮದೀಯರಿಗೆ ರಿಜರ್ವ ಮಾಡಿರುವದಾಗಿಯೂ ಆ ಸ್ಥಾನಕ್ಕೆ ಮೊದಲು ಕಾಸರಗೋಡು ಬೆಂಚು ಮೆಜಿಸ್ಟ್ರೇಟ ಕೋರ್ಟಿನ ಆನರರಿ ಮೆಜಿಸ್ಟ್ರೇಟರೂ ಪ್ರಕೃತ ಉಡನಾಡು ಪಂಚ್ಯಾತ ಕೋರ್ಟು ಪ್ರೆಸಿಡೆಂಟರೂ ಆಗಿರುವ ಮ. ರಾ. ರಾ ಮೊಗ್ರಾಲ್ ಎಂ. ಎ. ಇಬ್ರಾಹಿಂ ಕುಂಞಯವರು ಉಮೇದ್ವಾರರಾಗಿ ಕೇಳುತ್ತೇವೆ.

**ಮೂಲ್ಕಿ**—ಸ್ಥಳೀಯ ಸೆಂಟರಿನ ಉಪಾಧ್ಯಾಯ ಸಂಘದ ವರ್ಧಂತಿಯು ತಾ. ೨೪ ೮ ೩೫ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಸೆಂಟರ್ ಸ್ಕೂಲಲ್ಲಿ ಅತೀವ ವಿಜೃಂಭಣೆಯಿಂದ ಜರಗಿತು. ದ. ಕ. ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಾದ ಮ. ರಾ. ರಾ ಎ ಬಿ ಶೆಟ್ಟಿ, ಅವರು ಗೈರುಹಾಜರಾದುದರಿಂದ ಯಂ ಎಲ್. ಸಿ ರವರು ಸಭಾಧ್ಯಕ್ಷರಾಗಿದ್ದರು. ಪ್ರಾರಂಭದಲ್ಲಿ ಸಂಘದ ಮೆಂಬರರನ್ನು ಅತಿಥಿ ಅಭ್ಯಾಗತರನ್ನು ಕಿಂಚಿತ್ ಉಪಹಾರದಿಂದ ಸತ್ಕರಿಸಲಾಯಿತು. ಸಂಘದ ಕಾರ್ಯದರ್ಶಿಯವರು ಸಭಾಧ್ಯಕ್ಷರ ಕೊರಳಿಗೆ ಪುಷ್ಪಹಾರ ಹಾಕಿ ಸನ್ಮಾನಿಸಿದರು. ಚಿಕ್ಕ ಬಾಲಕಿಯರ ಶ್ರೀ ದೇವತಾ ಪ್ರಾರ್ಥನೆ, ವರದಿ ವಾಚನ ಬೋರ್ಡು ಹಾ ಎ ಶಾಲೆಯ ಬಾಲಕಿಯರಿಂದ ಕುಮ್ಮಿ ನರ್ತನ, ಲೇಜಿಮ್ ಹುಡುಗರಿಂದ ಕಸ್ರತ್, ಪೋಲೀಸ್ ಡ್ರಿಲ್ ಸ್ಕೌಟು ಬಾಲಕರಿಂದ ಪಿರಮಿಡ್ಸ್ ಲೇಜಿಮ್, ಲಾಠಿ ಇತ್ಯಾದಿಗಳೂ ಕಾರ್ನಾಡು ಬಿ ಯಂ ಎಲಿಮೆಂಟರಿ ಶಾಲಾ ಮಕ್ಕಳಿಂದ ಕಬ್ ಬೇಲ್ ಪ್ರದರ್ಶನ ಬೋರ್ಡು ಹುಡುಗಿಯರ ಶಾಲಾ ಬಾಲಕಿಯರಿಂದ ಅಭಿನಯ ಗೀತ, ಮಾನಂಪಾಡಿ ಬೋರ್ಡು ಶಾಲಾ ಮಕ್ಕಳಿಂದ ಆರೋಗ್ಯ ಸಂಭಾಷಣೆ ಕೋಲಾಟ ಮತ್ತು ಎಡಪದವು ಶಾಲಾ ಬಾಲಕರಿಂದ ಏಕಪಾತ್ರ ನಾಟಕದ ಒಂದಂಕ ಹೀಗೆ ವಿವಿಧ ವಿನೋದಗಳು ನಡೆದುವು. ಸಭಾಧ್ಯಕ್ಷ ಮಹಾಶಯರು ತಮ್ಮ ಅಮೂಲ್ಯ ಭಾಷಣದಲ್ಲಿ ಉಪಾಧ್ಯಾಯರ ಕಷ್ಟ ಸಂಕಷ್ಟಗಳ ಪರಾಮರ್ಶೆ ಮಾಡಿ ಬೋರ್ಡಿನ ಆರ್ಥಿಕ ದುಃಸ್ಥಿತಿಯನ್ನು ಸವಿಮರ್ಶೆ ತಿಳಿಸಿ, ಹೃದಯಂಗಮವಾದ ಮಾತುಗಳಿಂದ ಉಪಾಧ್ಯಾಯರ ಕರ್ತವ್ಯವನ್ನು ತಿಳಿಸಿ ಅಂದು ನಡೆದ ಕಾರ್ಯಕ್ರಮಗಳ ರೀತಿಗಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಸಂಘಕ್ಕೆ ಉತ್ತರೋತ್ತರವನ್ನು ಬಯಸಿ ಸಭಾಕಾರ್ಯವನ್ನು ವಿಸರ್ಜಿಸಿದರು. ನಂತರ ಉಪಕಾರ ಸ್ಮರಣೆಯ ಕಾರ್ಯಭಾಗವು ನಡೆದು ಸಭಾಧ್ಯಕ್ಷರಿಂದೊಡಗೂಡಿ ಮೆಂಬರರ ಒಂದು ಗ್ರೂಪ್ ಫೋಟೋ ತೆಗೆಯಲಾಯಿತು. ಅದೇ ಸಮಯ ಶ್ರೀ ಎಂ ಆರ್ ಪೂಂಜರವರ ಪ್ರೋತ್ಸಾಹದಿಂದ ಲೇಜಿಮ್ ಹುಡುಗರ ಮತ್ತು ಸ್ಕೌಟು ಬಾಲಕರ ಒಂದು ಛಾಯಾಚಿತ್ರವು ತೆಗೆಯಲಾಯಿತು.

ದ ಕ ಜಿಲ್ಲಾ ಬೋರ್ಡಿನ ಹೊಸ ಚುನಾವಣೆಗೆ ನಮ್ಮ ಸರ್ಕಲಿನಿಂದ ಶ್ರೀಮಾನ್ ಎ ಬಿ ಶೆಟ್ರನ್ನು ನಿಲ್ಲಿಸಬೇಕೆಂದು ಇಲ್ಲಿಯ ಪಟ್ಟಣದ ಮತ್ತು ನೆರೆಗ್ರಾಮದ ಓಟರರ ಒಂದು ಸಭೆಯು ಕಳೆದ ತಾ. ೧೦-೮-೩೫ರಲ್ಲಿ ಜರಗಿ ಅಲ್ಲಿ ಒಮ್ಮತದಿಂದ ಆದ ಈ ತೀರ್ಮಾನವನ್ನು ಶ್ರೀಮಾನ್ ಶೆಟ್ರಿಗೆ ಬರೆದಿದ್ದರು. ಆ ನಿಮಿತ್ತ ಇಂದು (ತಾ ೨೫-೮-೩೫) ಪೂರ್ವಾಹ್ನ ೧೧-೩೦ಕ್ಕೆ ಊರಿನ ಮತ್ತು ನೆರೆಗ್ರಾಮಗಳ ಮತದಾರರು ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಕೂಡಿಬಂದು ಶ್ರೀ। ಶೆಟ್ರನ್ನು ಭೇಟಿ ಮಾಡಿದರು. ಶ್ರೀ। ಶೆಟ್ರು ನಾಗರೀಕ ಪಟ್ಟಣಗಳಾದ ಪಾಶ್ಚಾತ್ಯ ದೇಶಗಳಲ್ಲಿ ಈ ರೀತಿ ಉಮೇದುವಾರರನ್ನು ಆರಿಸುವ ಕ್ರಮವಿದೆ ಎಂದೂ ಆದರೆ ನಮ್ಮ ದೇಶದಲ್ಲಿ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಇದು ಕೇವಲ ನೂತನ ಕ್ರಮವೆಂದೂ, ಅದಕ್ಕಾಗಿ ತಾನು ಬಹಳ ಸಂತೋಷ ಪಡುವೆನೆಂದೂ ಮುಂತಾಗಿ ಸಭಿಕರಿಗೆ ಹೇಳಿ ಆ ಬಗ್ಗೆ ತನ್ನ ಹೃತ್ಪೂರ್ವಕ ವಂದನೆಗಳನ್ನೊಪ್ಪಿಸಿದರು. ಕೂಡಿದ್ದ ಸಭಿಕರಲ್ಲಿ ಹಲಕೆಲವರು ಶ್ರೀ। ಶೆಟ್ರನ್ನು ಪ್ರತಿಸ್ಪರ್ಧಿಯಿಲ್ಲದೆ ಬೋರ್ಡಿಗೆ ಕಳುಹಿಸುವಂತೆ ಸರ್ವರೂ ತನ ಮನ ಧನಗಳನ್ನರ್ಪಿಸಬೇಕೆಂದು ಕೇಳಿಕೊಂಡರು. ಹೀಗೆ ಶ್ರೀ ಶೆಟ್ರು ಉಮೇದುವಾರರಾಗಿ ನಿಂತು ಪ್ರತಿಸ್ಪರ್ಧಿಯಿಲ್ಲದೆ ಚುನಾಯಿಸಲ್ಪಡುವುದು ನಮ್ಮ ಊರ ಭಾಗ್ಯವೆಂದೇ ಹೇಳಬೇಕು.

ಶ್ರೀ ಗೋಕುಲಾಷ್ಟಮಿ ಸಂಬಂಧ ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ಸದ್ರಿ ದಿನದಲ್ಲಿ ರಾತ್ರಿ ೭ರಿಂದ ೯ರ ವರೆಗೆ ಭಾಷಣ, ಭಜನೆ, ಪೂಜೆ ಇತ್ಯಾದಿಗಳು ಯಥಾ ಸಾಂಗವಾಗಿ ಜರಗಿತು.

[ಮುಂದಿನ ಪುಟವನ್ನು ನೋಡುವುದು]

# ಇಟೆಲಿ ಎಬಿಸಿನಿಯಾ ರಾಜಿಪ್ರಸ್ತಾಪವು ಮುರಿಯಿತು.

ಕಳೆದ ವಾರ ಫ್ರಾನ್ಸಿನ ನಾಯಕರು ಒಟ್ಟುಗೂಡಿ ಇಟೆಲಿ ಎಬಿಸಿನಿಯಾದ ಹೋರಾಟವನ್ನು ನಿಲ್ಲಿಸಬೇಕೆಂದು ಯತ್ನಿಸಲಾಯಿತಷ್ಟೆ. ಆದರೆ, ಲೀಗ್ ಮತ್ತು ಬ್ರಿಟನಿನ ಸಲಹೆಗಳನ್ನು ಮುಸೋಲಿನಿಯವರು ಸ್ವೀಕರಿಸಲೊಪ್ಪಲಿಲ್ಲ. ಅನಿರೀಕ್ಷಿತವಾಗಿ ಹೀಗೆ ನಡೆದುದರಿಂದಾಗಿ ಬ್ರಿಟನಿನ ಮಂತ್ರಿಮಂಡಲದ ಎದುರಿನಲ್ಲಿ ಮಿಟಿಂಗು ಒಂದು ಮೊನ್ನೆ ಜರಗಿತು. ಇಪ್ಪತ್ತೆರಡು ಮಂತ್ರಿಗಳೂ ಸಭೆಯಲ್ಲಿ ಹಾಜರಿದ್ದರು. ಇಟೆಲಿ ಎಬಿಸಿನಿಯಾಗಳ ಹೋರಾಟದ ಕುರಿತಾಗಿ ಐದು ತಾಸುಗಳ ತನಕ ತರ್ಕಿಸಿಕೊಂಡರು. ಸಭಾಂತ್ಯದಲ್ಲಿ ಹೊರಗೆ ಬಂದ ಮಂತ್ರಿಮಾಂಡಲಿಕರನ್ನು ಪ್ರಶ್ನಿಸಿದಾಗ ವಿಶೇಷ ವರ್ತಮಾನವೇನೂ ತಿಳಿದುಬರಲಿಲ್ಲವಾದರೂ ಸಭೆಯು ಈ ಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಿಕೊಂಡಿತೆಂದು ತಿಳಿಸಲಾಗಿದೆ. ರಾಮ್ಸೆ ಮೆಕ್ಡೊನಾಲ್ಡರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸುತ್ತ— ಸಭೆಯು ಬಹು ಶಾಂತವರ ವಿವಾದದಿಂದಲೇ ಕೊನೆಗೊಂಡಿತೆಂದೂ ಹೆಚ್ಚಿನ ಕ್ಷೋಭೆಗೆ ಕಾರಣವಿಲ್ಲವೆಂದೂ ತಿಳಿಸಿದರು. ಇಟೆಲಿ—ಎಬಿಸಿನಿಯಾಗಳ ಜಗಳವನ್ನು ತಾವು ಯಾವ ದೃಷ್ಟಿಯಿಂದ ನೋಡುತ್ತಿರಬೇಕೆಂದು ತೀರ್ಮಾನವಾಗಿದೆಯೆಂದು ಅವರು ತಿಳಿಸಿದರು. ಪೂರಾ ವಿವರಗಳನ್ನು ವಿವರಿಸಿಕೊಂಡರು. ಮಂತ್ರಿಗಳೆಲ್ಲ ರಜೆಯ ಮೇಲೆ ವಿಹಾರಾರ್ಥ ಹೊರಟಿರುವುದರಿಂದ ಸದ್ಯಕ್ಕೆ ಯಾವ ಬದಲಾವಣೆಯೂ ನಿರೀಕ್ಷಿಸಲ್ಪಟ್ಟಿಲ್ಲವೆಂದು ತಿಳಿದುಬರುತ್ತದೆ.

ಐರ್ಲೆಂಡಿನ ಅಧ್ಯಕ್ಷರಾದ ಡಿ ವೆಲೆರ ಇವರು ಬರುವ ತಿಂಗಳಲ್ಲಿ ಜಿನೀವಾಕ್ಕೆ ಹೋಗಿ ಲೀಗ್ ಆಫ್ ನೇಶನ್ಸಿನ ಸಭೆಯಲ್ಲಿ ಭಾಗವಹಿಸಲಿರುವರು. ಇಟೆಲಿ ಮತ್ತು ಎಬಿಸಿನಿಯಾಗಳ ಜಗಳ ಪಕ್ಷದ ಕುರಿತಾಗಿ ತನ್ನ ದೇಶದ ಅಭಿಪ್ರಾಯವನ್ನು ತಿಳಿಸಲಿರುವರಾಗಿಯೂ ಲೀಗ್ ಆಫ್ ನೇಶನ್ಸಿನ ಆಶಯಗಳಂತೆ ತಾನು ಆಚರಿಸಲು ಸಿದ್ಧನೆಂದೂ ಅವರು ತಿಳಿಸಲಿರುವರು. ಅಬಿಸೀನಿಯಾದ ಸ್ವಾತಂತ್ರ್ಯವನ್ನು, ಐಕ್ಯತೆಯನ್ನೂ ಕಾಪಾಡುವ ಕೆಲಸದಲ್ಲಿ ತನ್ನ ಬೆಂಬಲವನ್ನೂ ಕೊಡಲಿರುವರು. ಅಂದರೆ ಅವರೂ ಇಟೆಲಿಗೆ ವಿರೋಧರಾಗಿರುವರು.

ಬ್ರಿಟಿಷ ಮಂತ್ರಿಮಂಡಲವು ತೀರ್ಮಾನಿಸಿಕೊಂಡ ಮೂರು ವಿಷಯಗಳವು: ಆಂಗ್ಲೋ ಪ್ರೆಂಚ್ ಒಪ್ಪಂದಗಳನ್ನು ಇಟೆಲಿಯು ತಿರಸ್ಕರಿಸಿದುದು, ಇಟೆಲಿ ವ ಎಬಿಸೀನಿಯಾಗಳ ಯುದ್ಧೋಪಕರಣಗಳನ್ನು ವಿಕ್ರಯಿಸಿದಂತೆ ಪರವಾನಿಗೆಗಳನ್ನು ರದ್ದು ಮಾಡಿ ಪುನಃ ಮುಂದಿನ ಲೀಗ್ ಕೌನ್ಸಿಲಿನಲ್ಲಿ ಈ ವಿಷಯದ ಪ್ರಸ್ತಾಪ ಬಂದಾಗ ಬ್ರಿಟಿಷ ಸರಕಾರದ್ದು ಯಾವ ಅಭಿಪ್ರಾಯವನ್ನು ವ್ಯಕ್ತಗೊಳಿಸಬೇಕು.

ಯೂರೋಪ್ ಖಂಡಕ್ಕೆ ಚಿಂತೆಯು ಮುದ್ರೆಯು ಒತ್ತಲ್ಪಟ್ಟಂತೆ ಕಾಣುತ್ತದೆ. ಸ್ಟೋಕ್ ಎಕ್ಸ್‌ಚೇಂಜ್ ಮೊದಲಾದುವುಗಳಲ್ಲಿ ಉತ್ಸಾಹಪೂರ್ವಕ ವ್ಯಾಪಾರವು ನಡೆಯುವುದಿಲ್ಲ. ನ್ಯೂಸ್ ಕ್ರಾನಿಕಲ್ ಪತ್ರಿಕೆಯು ಹೇಳುವಂತೆ ಇಟೆಲಿಯು ಐದು ಬ್ಯಾಂಕುಗಳಿಂದ ಪಡೆದುಕೊಂಡಿದ್ದ ಸಾಲದ ಮೊಬಲಗನ್ನು ಹಿಂದೆ ಕೊಡಬೇಕೆಂದು ಆ ಬ್ಯಾಂಕುಗಳು ಕೇಳಿವೆಯೆಂದು ತಿಳಿದುಬಂದಿದೆ.

ಇಟೆಲಿಯ ಕೋಶವೆಲ್ಲ ಬರಿದಾಗಿರುವಾಗ ಮುಂದಿನ ಯುದ್ಧಕ್ಕೆ ಇಟೆಲಿಯು ಯಾವ ಉಪಾಯದಿಂದ ದ್ರವ್ಯ ಸಂಚಯವನ್ನು ಮಾಡುವುದೆಂದು ತಿಳಿದುಬರುವುದಿಲ್ಲ. ಪೆರಿಸ್ ಮತ್ತು ನ್ಯೂಯೋರ್ಕಗಳು ಎಡ್ವಾನ್ಸ್ ಕೊಡುವುದಿಲ್ಲ. ಎಲ್ಲಿಯೂ ಸಾಲವು ಸಿಗಧಿರ ವಾಗ ಇಟೆಲಿಯು ಮಾಡುವುದಾದರೂ ಏನು?—ಎಂದು ಯೋಚನೆಗಾರಂಭವಾಗಿದೆ. ಮೊನ್ನೆ ಬ್ರಿಟಿಷ್ ಫೋರಿನ್ ಎಫೇರ್ ಕಮಿಟಿಯು ಜರಗಿತು. ಸಭಾಂತ್ಯದಲ್ಲಿ, ಬ್ರಿಟನು ಲೀಗ್ ಆಫ್ ನೇಶನ್ಸಿನ ಹೇಳಿಕೆಯನುಸಾರವೇ ವರ್ತಿಸಬೇಕೆಂದು ನಿರ್ಣಯಿಸಿಕೊಳ್ಳಲಾಯಿತು. ಕೆಲವು ಸದಸ್ಯರು ಇಟೆಲಿಯ ಮೇಲೆ ಸೆಂಕ್ಷನ್ ಕಾನೂನನ್ನು ಹಾಕಿ ಅದರ ಚಲನೆಯನ್ನು ನಿರ್ಬಂಧಿಸಬಹುದೆಂದು ಸೂಚಿಸಿದರು. ಕೆಲವು ಸದಸ್ಯರು ಅದು ಕೂಡದೆನ್ನುತ್ತಿರುವರು. ಆಫ್ರಿಕಾಕ್ಕೆ ಸಂಬಂಧಪಟ್ಟ ಹೋರಾಟದಲ್ಲಿ ಬ್ರಿಟನು ಪೂರ್ಣ ಧಿಕಾರದಿಂದ ಕಾರ್ಯನಿರ್ವಹಿಸಲು ಎಡೆಯಿಲ್ಲವೆನ್ನುತ್ತಿರುವರು. ಆದರೆ ಇಟೆಲಿಯ ಮೇಲೆ ಸೆಂಕ್ಷನ್ ಎತ್ತುವುದೇ ಸಂಭವನೀಯವೆಂದು ಊಹಿಸಲ್ಪಟ್ಟಿದೆ.

## ಇಟೆಲಿಯ ಸೋಲಿನ ಕೂಗೇ?

ಇಟೆಲಿ ಸರಕಾರದ ಬಾಹ್ಯಮಂತ್ರಾಲಯಸ್ಥ ಸಿನಿಯರ್ ಗೈಡಾ ಎಂಬವರು ಅಲ್ಲಿಯ ಸರಕಾರೀ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು, ತನ್ನ ಹಿಂದಿನ ಧೋರಣೆಯನ್ನು ಪರಿವರ್ತಿಸಲೆಳಸುತ್ತಿರುವರೆಂದು ತಿಳಿದುಬಂದಿದೆ. ಇಷ್ಟರ ತನಕವೂ ರೌದ್ರಾವೇಶದಿಂದ ಸಾಗುತ್ತಿದ್ದ ಇವರೀಗ ಇಟೆಲಿ ಇಂಗ್ಲೆಂಡುಗಳೊಳಗೆ ಯಾವ ವೈಮನಸ್ಯವಿಲ್ಲವೆಂದೂ, ಇಟೆಲಿಯು ಲೋಕಶಾಂತಿಯನ್ನು ಬಯಸುತ್ತದೆಂದೂ, ಆಫ್ರಿಕವೂ ಹಾಗೆಯೇ ಸುಖವಾಗಿರಬೇಕೆಂದೂ ಬಗೆಯುತ್ತಿರುವೆವಾಗಿಯೂ ಪ್ರಕಟಿಸಿರುವರು. ಬ್ರಿಟನೂ ಬ್ರಿಟಿಷ ಪತ್ರಿಕೆಗಳೂ ಅಬಿಸೀನಿಯಾದ ಪಕ್ಷವಾಗಿ ನಿಂತುದನ್ನು ನೋಡಿಯೇ ಇಟೆಲಿಯು ಈ ರೀತಿ ಹಿಂದರಿಯುತ್ತಿದೆಯೆಂದು ತಿಳಿದುಬಂದಿದೆ.

—

ಕನೇ ಪುಟದಿಂದ ಮುಂದರಿಸಿದುದು

ಈ ಸಮ್ಮೇಳನಕ್ಕೆ ಜೋಡಣೆಯಾಗಿ ಸ್ವಜಾತಿಯ ಕಲಾ ಕೌಶಲ್ಯದ ಪ್ರದರ್ಶನ ಮಂಡಳದ ಸಹಘಟನೆಯನ್ನು ಮಾಡಿರುತ್ತಾರೆ. ಪ್ರದರ್ಶನಮಂಡಳದಲ್ಲಿ ನ್ಯಾಯಮೂರ್ತಿ ಸೀತಾರಾಮ ಸುಂದರರಾವ್ ಬಾಟೆಕರ್ ಇವರ ಪತ್ನಿ ಸೌಭಾಗ್ಯವತಿ ಶಾಂತಾಬಾಯಿ ಬಾಟೆಕರ್ ಇವರನ್ನು ನಮೂದಿಸಿ ಸೌಭಾಗ್ಯವತಿ ಡಾಕ್ಟರ್ ಮಾಲಿನಿಬಾಯಿ ಸುಕಥನಕರ್, ಸೌಭಾಗ್ಯವತಿ ನಲಿನೀಬಾಯಿ ಧೊಳದೀ, ಸೌಭಾಗ್ಯವತಿ ಕಮಲಾಬಾಯಿ ಹೊನಗರಕೇರಿ, ಮತ್ತು ಲಕ್ಷ್ಮೀಬಾಯಿ ಪರುಳೇಕರ್, ಸೌಭಾಗ್ಯವತಿ ಮುರಗಾಂಕರ್, ಕುಮಾರಿ ಮಾಲತೀ ರಾಜಾಧ್ಯಕ್ಷ, ಸೌಭಾಗ್ಯವತಿ ಸೀತಾಬಾಯಿ ಪಡುಬಿದ್ರಿ, ರಾ। ವಾಸುದೇವರಾಯ ಶ್ರೀನಿವಾಸರಾವ್ ಶಿಬ್ರೂರುಕರ್, ರಾ। ವಾಮನರಾವ್ ಪುಂಡಲೀಕ ವರ್ದೆ, ರಾ। ವಸಂತರಾವ್, ರಾ। ಕಳವರೇಕರ್ ಮತ್ತು ಎಂ. ವಿ. ಭೋಸಲೆ ಇವರು ಭಗಿನೀಬಾಂಧವ ಪ್ರದರ್ಶನ ಮಂಡಳದ ಸಮ್ಮಾನನೀಯ ಕಾರ್ಯದರ್ಶಿಯರಾಗಿರುತ್ತಾರೆ.

ಪ್ರದರ್ಶನದ ಮಾಹಿತಿಯು ಪತ್ರಿಕೆಯನುಸಾರವಾಗಿ ಆಂಗ್ಲಿಕ ನಲ್ಲಿಯೂ, ಮರಾಠಿಯಲ್ಲಿಯೂ ಪ್ರಸಿದ್ಧವಾಗಿದ್ದು, ಪ್ರದರ್ಶನಗೋಸ್ಕರ ಕೆಲಸಗಳಿಗೆ ಕಳುಹಿಸುವವರು ಭಗಿನಿಯವರು ಮತ್ತು ಬಂಧುಬಾಂಧವರು ಈ ಪತ್ರಿಕೆಗಳನ್ನು ತರಿಸಿಕೊಂಡು ಹೋಗುವಿರಾಗಿ ಪ್ರದರ್ಶನಮಂಡಳದ ವಿನಂತಿಯಾಗಿರುತ್ತದೆ. ಪ್ರದರ್ಶನಗೋಸ್ಕರ ಮಾಹಿತಿಯನ್ನು ಕೊಟ್ಟು ಪ್ರದರ್ಶನಕ್ಕೆ ಬರುವ ಕೆಲಸಕ್ಕೋಸ್ಕರ ಬಕ್ಷೀಸನ್ನು ಬಿಟ್ಟು ಮತ್ತು ಖರ್ಚಿನಿಂದ ಸ್ವಜಾತಿಯವರಿಗೆ ಅತ್ಯಂತ ಉಪಯುಕ್ತವಿದ್ದ ಕೆಲಸಗಳಿಗೆ ಎಲ್ಲಾ ಸ್ವಜಾತಿಯವರು ಪ್ರತಿನಿಧಿಯಾಗಿರಿ ಎಂತ ನಮ್ಮ ಎಲ್ಲಾ ಬಂಧುಬಾಂಧವರಿಗೆ ಆಗ್ರಹದ ವಿನಂತಿಯುಳ್ಳದ್ದು. ಮಹಾರಾಷ್ಟ್ರ, ಕೇರಳ, ಕರ್ನಾಟಕ, ಉತ್ತರಹಿಂದುಸ್ಥಾನ, ತಮಿಳುನಾಡುಗಳಲ್ಲಿರುವ ಸಾರಸ್ವತರು ಜಾತಿಯ ಪರಿಷದಕ್ಕೆ ಆಗಿಂದಾಗ್ಗೆ ಮಾಡಿದ ಶಿಫಾರಸುಗಳ ಫಲದ್ರೂಪವಾಗುವುದನ್ನು ನೋಡಿ ನಮಗೆಲ್ಲರಿಗೂ ಸಮಾಧಾನವಾಗುವುದು. ಈ ಪರಿಷತ್ತು ಯಶಸ್ವಿಯಾಗೀತೆಂದು ಹೀಗೆ ನಮಗೆಲ್ಲರಿಗೂ ವಿಶ್ವಾಸವಿರುತ್ತದೆ.

ಭಾಜೀ ವಿಷ್ಣು ನೇರೂರ್ಕರ್,
ಅನಂತ ವಿಶ್ವಂಭರ ಸಾಖರದಾಂಡೆ,
ಜನರಲ್ ಸೆಕ್ರೆಟರಿ,
ಸಂಯುಕ್ತ ಗೌ. ಸಾ. ಬ್ರಾಹ್ಮಣರ ಪರಿಷತ್ತು ಮುಂಬಯಿ

—

## ಫೋರ್ಜರಿಗಾಗಿ ೩ ವರ್ಷದ ಸಜೆ.

ಮೈಸೂರಿನಲ್ಲಿ, ತಿಪ್ಪೆಸ್ವಾಮಿ ಎಂಬವನ ಮೇಲಿನ ಫೋರ್ಜರಿ ಮೊಕದ್ದಮೆಯಲ್ಲಿ ಅಪಾದಿತನಾದ ಪುಟ್ಟ ರಂಗಶೆಟ್ಟಿಗೆ ಸೆಶ್ಶನ್ಸ್ ಜಡ್ಜರು ೩ ವರ್ಷಗಳ ಕಠಿಣ ಸಜೆ ವಿಧಿಸಿ, ೨, ೩ನೇ ಅಪಾದಿತರನ್ನು ಬಿಡುಗಡೆಮಾಡಿಸಿದರು.

## ಯೋಗ್ಯಕಾರ್ಯ.

ಮುಲ್ಕಿಯ ಬೋರ್ಡು ಹೈಸ್ಕೂಲ್ ಸಂಬಂಧಪಟ್ಟ ವಾಲಂಟೀರರು ಇಲ್ಲಿ ಗೇರುಕಟ್ಟೆಯಲ್ಲಿ (ಪಟ್ಟಣದಿಂದ ಸುಮಾರು ಅರ್ಧ ಮೈಲು ದೂರದಲ್ಲಿ) ಸುಮಾರು ೮ ಎಕ್ರೆ ಸ್ಥಳ ದೇವಸ್ಥಾನಕ್ಕೆ ಪಡೆಕೊಂಡಿದ್ದರು. ಸದರಿ ಸ್ಥಳವು ಬರೇ ಕಲ್ಲುಮಯವಾಗಿದ್ದು, ಬರೇ ಹೊಂಡಗಳೇ ಆಗಿದ್ದುವು. ಅದನ್ನು ಸಮತಟಿಸಿ, ಮಾಡಬೇಕಾದರೆ ಕನಿಷ್ಟಪಕ್ಷ ದಿನ ಎರಡು ಸಾವಿರ ಖರ್ಚು ಮಾಡಬೇಕು. ಅಂಥ ಸ್ಥಳವನ್ನು ಹೈಸ್ಕೂಲು ಪ್ರೇಮಿಗಳ ಪ್ರೋತ್ಸಾಹದಿಂದ ಸಮತಟ್ಟು ಮಾಡುವ ಕೆಲಸವು ಕೇವಲ ದೇಶಸೇವೆಯಂತೆ ನಡೆಯುತ್ತಿದೆ. ಇಲ್ಲಿಯ ಅಂಗಡಿಗಳ್ಳು ಶಾಲೆಗೆ ಸಂಬಂಧಪಟ್ಟವರು ಶಕ್ತಿಗೆ ಒಂದು ದಿನದಂತೆ ಸಹಾಯಕೊಟ್ಟು, ಸುಮಾರು ೩೬೦ ಜನರು ಒಂದು ದಿವಸ ಕೆಲಸ ಮಾಡಿದರು. ನಂತರ ಊರವರು ಅನ್ನ ಕೂಲಿಯಿದ್ದಂತೆ ಮನೆಗೊಂದರಂತೆ ಜನ ಕೊಟ್ಟು, ಸಾಧಾರಣ ೨೦೦ ಜನರು ಒಂದು ದಿನ ಕೆಲಸ ಮಾಡಿದರು. ನಂತರ ಪಳೆಯಂಗಡಿ–ಬೆಳ್ಳಾಯರು ಗ್ರಾಮಗಳ ಶಿಕ್ಷಕರು ಅದಕ್ಕೆ ಸಂಬಂಧಪಟ್ಟವರು ಒಂದು ದಿನ ಸುಮಾರು ೧೫೦ ಜನರೂ, ಇನ್ನೊಮ್ಮೆ ೧೫೦ ಮಂದಿಯೂ ಹೀಗೆ ಎರಡು ದಿನ ಕೆಲಸ ಮಾಡಿದರು. ಇದಲ್ಲವೇ ನಿಜವಾದ ದೇಶ ಸೇವೆ? ಇವರೆಲ್ಲರೂ ಬೆಲ್ಲ ನೀರು, ವೀಳ್ಯದೆಲೆ ಕೆಟ್ಟುದಲ್ಲದೆ, ಮಧ್ಯಾಹ್ನ ಭೋಜನವೂ ಕೊಡಲ್ಪಟ್ಟಿತು. "ಜನಸೇವೆಯೇ ಜನಾರ್ದನನ ಸೇವೆ" ಎಂಬ ತತ್ವವನ್ನರಿತು ಕೆಲಸ ಮಾಡಿದ ಈ ವಿಶ್ವಪ್ರೇಮಿಗಳಿಗೆ ಆ ವಿಶ್ವಂಭರನು ಸುಖಕೊಡಲಿ!—ಎಂದೊಂದು ಟಪಾಲ್.

—

## ಬರೋಡಾ—ಇಂಡಿಯಾ ಸರಕಾರಗಳೊಳಗೆ ನಡೆದ ತಹಾನಮೆ.

ಬರೋಡಾ ಸಂಸ್ಥಾನದ ಕರಾವಳಿ ಪಟ್ಟಣಗಳ ಮೇಲ್ವಿಚಾರಣೆಯನ್ನು ಇಂಡಿಯಾ ಸರಕಾರದವರೇ ವಹಿಸಿಕೊಂಡು ಅದಕ್ಕೆ ಪ್ರತಿಯಾಗಿ ವರ್ಷಂಪ್ರತಿ ಬರೋಡಾ ಸರಕಾರಕ್ಕೆ ೪೦ ಲಕ್ಷ ರೂಪಾಯಿಗೆ ಕಡಿಮೆಯಿಲ್ಲದೆ ಪ್ರತಿಫಲವನ್ನು ಕೊಡುತ್ತಾ ಬರಬೇಕೆಂದು ಎರಡು ಸರಕಾರಗಳಿಗೂ ತಹನಾಮೆ ನಡೆದಿರುವುದೆಂದು ತಿಳಿದುಬರುತ್ತದೆ. ಇದು ಇಷ್ಟರಲ್ಲಿ ಸರಕಾರೀ ಗಜೇಟಿನಲ್ಲಿ ಪ್ರಕಟವಾಗುವುದು. ವ್ಯಾಪಾರವು ಅಭಿವೃದ್ಧಿಗೊಂಡ ಹಾಗೆ ಈ ಪ್ರತಿಫಲವೆ ಮೊಬಲಗು ೫೦ ಲಕ್ಷ ರೂಪಾಯಿಗಳ ವರೆಗೂ ಹೆಚ್ಚಬಹುದೆಂಬ ಕರಾರೂ ಇರುವುದು.

## ಹೊಸಥಿಲ್ಲಿಯಲ್ಲಿ ಭೂಕಂಪ!

ಆಗೋಸ್ತು ತಾ. ೨೪ನೇ ದಿನ ಬೆಳಗ್ಗೆ ೫ ಗಂಟೆಯ ಸಮಯದಲ್ಲಿ ಸಾಧಾರಣ ಭೂಕಂಪವಾಯಿತು. ಜನರು ಗಾಬರಿಗೊಂಡರು. ಅನೇಕರು ದೇವಸ್ಥಾನ ಮಸೀದಿಗಳಲ್ಲಿ ಪ್ರಾರ್ಥನೆ ನಡೆಸಿದರು.

—

## (ತಾಲೂಕುಗಳಿಂದ)

ಶಿನ್ನಿಗೋಳಿ—ತಾ. ೨೫—೮—೩೫ನೇ ಆದಿತ್ಯವಾರ ಮಂಗಳೂರು ಹೆಲ್ತ್ ಇನ್ಸ್‌ಪೆಕ್ಟರರು ಇಲ್ಲಿಗೆ ಒಂದು ಸರಕಾರದಿಂದ ಈ ಊರಿಗೆ ಒಂದು ಪಾಯಿಖಾನೆ ಕಟ್ಟಿಸುವ ಏರ್ಪಾಡು ಮಾಡಿದ್ದಾರಾಗಿ ತಿಳಿಸಿ ಆ ಬಗ್ಗೆ ಎರಡು ಸ್ಥಳಗಳನ್ನು ನೋಡಿ ಹೋಗಿರುತ್ತಾರೆ. ಪಾಯಿಖಾನೆಯು ಸದ್ಯದಲ್ಲೇ ಆಗಬಹುದೆಂಬ ನಿರೀಕ್ಷಣೆಯಿದೆ.

ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಎ. ಬಿ. ಶೆಟ್ಟಿ ಎಂ. ಎಲ್. ಸಿ. ಇವರು ತಾ. ೨೫—೮—೩೫ನೇ ದಿನ ಮೂಲ್ಕಿಯಿಂದ ಈ ಮಾರ್ಗವಾಗಿ ಮಂಗಳೂರಿಗೆ ಹೋದರು. ಇವರು ಇನ್ನು ಸದ್ಯದಲ್ಲೇ ನಡೆಯುವ ಡಿ ಬೋ ಚುನಾವಣೆಗೆ ಮೂಲ್ಕಿ ಸರ್ಕಲಿಗೆ ಉಮೇದ್ವಾರರಾಗಿ ನಿಲ್ಲುತ್ತಾರಾಗಿ ತಿಳಿದು ಬರುತ್ತದೆ. ಇಲ್ಲಿಯ ಕೆಲವು ಪ್ರಮುಖರೊಡನೆ ಮಾತಾಡಿರುತ್ತಾರೆ.

ಹುಲಿಗಳು ಈಗ ಬೇಟೆಗೆ ಬಂದು ಹಾವಳಿ ಮಾಡಲಿಕ್ಕೆ ಪ್ರಾರಂಭಿಸಿವೆ. ಮುರುಕಾವೇರಿ ಎಂಬಲ್ಲಿ ಹಟ್ಟಿಯ ಒಳ ಹೊಕ್ಕು ಒಂದು ದನವನ್ನು ಕೊಂದಿದೆ. ಶಿನ್ನಿಗೋಳಿಯಲ್ಲಿ ರಾ। ದೇಜುಶೆಟ್ಟಿ ಅಂಗಡಿಯ ಜಗಲಿಯಲ್ಲಿ ಮಲಗಿದ್ದ ನಾಯಿಯನ್ನು ಹಿಡಿದುಕೊಂಡು ಹೋಗಿದೆ. ಇಲ್ಲಿ ಕೋವಿ ಲೈಸನ್ಸುದಾರರು ಅನೇಕ ಮಂದಿ ಇದ್ದರೂ ಒಬ್ಬರೂ ಈ ಹುಲಿಯ ಉಪಟಳವನ್ನು ನಿಲ್ಲಿಸಲು ಮನಸ್ಸು ಮಾಡಲಿಲ್ಲ.

ತಾ. ೨೨—೮—೩೫ರಲ್ಲಿ ಹೆಚ್ಚಿನ ಮಳೆ ಬಂದುದರಿಂದ ಕಟೀಲು ಸಂಕಲಕರಿಯ ಹೊಳೆಗಳಲ್ಲಿ ವಿಶೇಷ ನೆರೆ ಬಂದಿತ್ತು. ಅಪಾಯವೇನೂ ಸಂಭವಿಸಲಿಲ್ಲ.

ಕಟೀಲು— ಈ ವರ್ಷ ಪಿಲ್ಲೆಸಿಂದಿ ಮಹೋತ್ಸವವು ಬಹು ವಿಜೃಂಭಣೆಯಿಂದ ನಡೆದಿದೆ. ಕಳೆದ ವರ್ಷಕ್ಕಿಂತ ಹೆಚ್ಚಿನ ವೇಷಗಳೂ ಜನಸಮೂಹವೂ ಇತ್ತು.

ಸದ್ಯವೇ ನಡೆಯಲಿರುವ ದಿ. ಬೋರ್ಡು ಚುನಾವಣೆಗೆ ಮೂಲ್ಕಿ ಸರ್ಕಲಿಗೆ ಇರುವ ಒಂದು ಸ್ಥಾನಕ್ಕೆ ಈ ತನಕ ಸುಮಾರು ೫ ಮಂದಿ ಉಮೇದ್ವಾರರು ಇದ್ದಾರಾಗಿ ತಿಳಿದು ಬರುತ್ತದೆ.

ಕೊಂಗ್ರೆಸ್ ಕಡೆಯಿಂದ ಯಾರು ನಿಲ್ಲುವುದೆಂದು ಈ ವರೆಗೆ ತಿಳಿದುಬಂದಿಲ್ಲ.

—

## ಮಂಜೇಶ್ವರ ಸರ್ಕಲಿಗೆ ಕೊಂಗ್ರೆಸ್ ಉಮೇದ್ವಾರರು.

ಮಂಜೇಶ್ವರ ಸರ್ಕಲಿನಿಂದ ಇದೇ ಬರುವ ಜಿಲ್ಲಾ ಬೋರ್ಡು ಚುನಾವಣೆಗೆ ಊರಗೃಹಸ್ಥರಾದ ಮಂಜೇಶ್ವರ ಅಮೃತಕೃಷ್ಣರಾಯರನ್ನೇ ಕೊಂಗ್ರೆಸ್ ಉಮೇದ್ವಾರರಾಗಿ ಆರಿಸಬೇಕಾಗಿ ಜಿಲ್ಲಾ ಸಿವಿಲ್ ಬೋರ್ಡಿಗೆ ಇಲ್ಲಿನ ಶ್ರೀಗಳಾದ ವೈಕುಂಠ ಭಕ್ತರು, ರಂಗಸ್ವಾಮಿಗಳು, ಕಡಂಬಾರ ನಾರಾಯಣಯ್ಯ, ಬಂಗ್ರ ಮಂಜೇಶ್ವರ ಭಾಸ್ಕರ ಕಮ್ತಿ, ಮಿ। ಪಳ್ಳಿಕುಂಜ್ ಬ್ಯಾರಿ ಇವರೇ ಮೊದಲಾದ ಪ್ರಮುಖ ಗೃಹಸ್ಥರು ಒಂದು ಮನವಿಯನ್ನು ಹೊರಡಿಸಿರುವರು. ಅವರ ಆಶಯವು ಕೈಗೂಡಲೆಂದು ಹಾರೈಕೆ.

—


# ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

| | |
|---|---|
| *Part Proprietors of —* | *Representatives for the W. C.* |
| **Sri Krishna Mills & Co.** | **M/s. A. & F. Harvey** |
| Oil Manufacturers, | Cotton Spinners, |
| Bunder, Mangalore | Tuticorin, Madura &c. |
| **Bhagavan Ganesh Pai Co** | **Guardian Assurance Co, Ltd.** |
| Copper Sheet & Twist | (Incorporated: England) |
| Merchants, Camp Bazar, | Head Office: |
| Cannanore. | 68, King William Street, |
| | London, E. C. 4. |

**The Uplifting Banking Corporation, Ltd. Bombay.**

ದಿ ಅಪ್‌ಲಿಫ್ಟಿಂಗ್ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಬೊಂಬಾಯಿ,

ಒಂದು ಸಲ ಮಾತ್ರ ರೂ. ೧ ತೆತ್ತಲ್ಲಿ-

1. ಮೆಂಬರನು ವಿಮಾಯಿಸಲ್ಪಡುವನು
2. ವರುಷದೊಳಗೆ ಮದುವೆ ಮಾಡಿಕೊಂಡರೆ ಸಹಾಯ ಸಿಗುವುದು.
3. ಲಾಭಾಂಶ ಸಿಗುವ ಅನೇಕ ಸಂದರ್ಭಗಳಿವೆ
4. ವ್ಯಾದೆ ಆಪ್ತರಿಗೆ ಬೋಂದಿನ ಹಣ ಬಡ್ಡಿ ಸಮೇತ ವಾಪಸು ಸಿಗುವುದು

ಚೀಫ್ ಏಜಂಟ್ ಉಡುಪಿ ಡಾಕ್ಟರ ಕೆ. ಶಿವರಾಯರಿಂದ ಹಣ ಸಲ್ಯಾಸಿ ಪಡೆಯಬಹುದು.

ಸಬ್ ಏಜಂಟರು ಬೇಕು.



**ಸಪಟ ಲೋಶನ್**

ಗಜಕರ್ಣ, ಕುರುಗಜ್ಜಿ, ನಾಯಟಿ, ಇಸಬ ಮುಂತಾದ ಚರ್ಮರೋಗಗಳ ಮೇಲೆ ತಕ್ಷಣದಲ್ಲಿ ಗುಣಮಾಡುವ ರಾಮಬಾಣ ಔಷಧಿ ವಸ್ತ್ರಕ್ಕೆ ಕಲೆ ಬೀಳುವುದಿಲ್ಲ ಬಾಟ್ಲಿಗೆ ಕಿಮ್ಮತ್ತು ೦-೬-೦ ಟಪಾಲ್ ಬೇರೆ. ಪತ್ರವ್ಯವಹಾರ ಇಂಗ್ಲಿಷ್ ಯಾ ಮರಾಠಿಯಲ್ಲಿ ಮಾಡಬೇಕು

Sapat & Company, (S M) Kalbadevi Road Bombay



# ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ – ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿ ಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು-ಓದಿರಿ ಇದನ್ನು!—

## ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಖುಶಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಡಿಜೆನಸ್ ಡ್ರಗ್ ಒಫ್ ಇಂಡಿಯಾ" ಇದರ ಪುಟ ೬೫ನ್ನು ನೋಡಿ)

## ವನಸ್ಪತಿ ತೈಲವಲ್ಲ–ಮೀನಿನ ತೈಲ' ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ" ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು. ಆದರೆ,—

## ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'–

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ವಿಷನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿ ಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

## ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

**ಕವಿರವೀಂದ್ರ:**– "ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ ಡಾ| ಅನ್ನಿಬಿಸೆಂಟರು ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

**ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ| ಅನ್ಸಾರಿಯವರು**– ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು — 'ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗಣಿಸಲು ನನಗೆ ಆತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ನಾಲ್ಕು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ.'

**ಗೊಡ್ರೆಜ್** ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ — ಇವುಗಳನ್ನು ಉಪಯೋಗಿಸಿರಿ

ಸೋಲ್ ಏಜಂಟರು:

**ನಾದಿರ ಷಾ ಪ್ರಿಂಟರ್ ಎಂಡ್ ಕೊ, ಲಿ., ಬ್ರೋಡ್ವೆ, ಮದರಾಸ.**

ಹೆಡ್ ಆಫೀಸು. ಬೊಂಬಾಯಿ. ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ:—ಗೊಡ್ರೆಜರವರ ಹೆಸರಲ್ಲಿ ಮಾರಲ್ಪಡುತ್ತಿರುವ ಬಾರ್ ಸೋಪ್ ಮತ್ತು ಇತರ ಬಟ್ಟೆ(ಒಗೆಯುವ) ಸಾಬೂನುಗಳಿಗೆ ಗೊಡ್ರೆಜರವರಿಗೆ ಸಂಬಂಧವಿಲ್ಲ



# ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು.

## Motor Accessories Of Approved Manufacture Always in Stock.

| | | |
|---|---|---|
| **Exide Batteries Uncharged** | .. | **Rs. 20-0-0** |
| **Fully Charged** | . | **Rs. 24-0-0** |
| **Genuine Lockheed Hydraulic Brake fluid Quart tins factory Sealed** | | **Rs. 2-8-0** |
| **Genuine Lockheed** | „ locally filled | **Rs 2-0-0** |

**All Hydraulic Brake parts held in stock and available at Bombay Prices less 5% discount.**

**Chevrolet Springs of approved American Make available at less than Bombay Prices**

Brake liners, Automobile lamp bulbs, Bronze bushings and bars, Bolts and Nuts of S. A. E. threads, Special tools, Drilling Machines, Spanner sets of all types.

**An Enquiry with us will save you money**

**ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,** ಕೊಡಿಯಾಲಬೈಲು, ಮಂಗಳೂರು

**The Canara Public Conveyance Company Ltd., Kodialbail, Mangalore.**

# ಇಟೆಲಿಯು ಪಾಪಮಾಡಲು ಹೊರಟಿದೆ!

[ಇಟಲಿ ಎಬಿಸೀನಿಯಾ ಸಮಸ್ಯೆಯತ್ತ ಕಡೆ ಲಕ್ಷ್ಯ ಕೊಟ್ಟಿರುವ ಹೆಚ್ಚಿನವರು ಮೋಲಿನಂತೆಯೇ ಹೇಳುತ್ತಿರುವರು. ಮೈಸೂರು ಮಹಾರಾಜ ಕೊಲೆಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರರಾಗಿರುವ ಮಿ। ಡಿ. ಎಸ್ ಗಾರ್ಡನ್ ರವರು ಈ ವಿಷಯವಾಗಿ ಉದ್ಬೋಧಕ ಭಾಷಣವಿತ್ತು ಕೆಳಗಿನಂತೆ ಹೇಳಿದರು]

" . ಎಥಿಯೋಪಿಯಾ ದೇಶದಷ್ಟು ಪ್ರಾಚೀನ ದೇಶವು ಸದ್ಯಕ್ಕೆ ಕಾಣುವುದಿಲ್ಲ ಎಥಿಯೋಪಿಯಾ ದೇಶದ ಉಲ್ಲೇಖವು ಬೈಬಲ್ ಗ್ರಂಥದಲ್ಲಿಯೂ ಪೂರ್ವ ಕಥೆಗಳಲ್ಲೂ ಇದೆ. ಉತ್ತರ ಎಬಿಸೀನಿಯ ದೇಶದ ಶೇಬಾ ರಾಣಿಯು ಸಾಲಮನ್ ಎಂಬ ದೊರೆಯ ಬುದ್ಧಿಶಕ್ತಿಯನ್ನು ನೋಡಿಯೇ ಅವನನ್ನು ವಿವಾಹವಾದಳೆಂದು ಕಥೆಯಿದೆ ಎಬಿಸೀನಿಯಾ ದೇಶವು ಒಂದು ಪ್ರಸ್ತ ಭೂಮಿ. ಸಮುದ್ರ ಮಟ್ಟಕ್ಕಿಂತ ೮೦೦೦ ಅಡಿಗಳಷ್ಟು ಎತ್ತರದಲ್ಲಿದೆ. ಭೂಗುಣವು ಅತ್ಯುತ್ತಮವಾಗಿದೆ ಸಮಭಾಜಕ ವೃತ್ತದಿಂದ ೧೦ ಡಿಗ್ರಿಗಳು ದೂರವಿದ್ದರೂ ವಾಯುಗುಣವು ಆಹ್ಲಾದಕರವಿದೆ ಬೇಕಾದಷ್ಟು ಖನಿಜಗಳೂ ಸಸ್ಯಗಳೂ ಇವೆ ಅದಕ್ಕಿರುವ ಸ್ವಾಭಾವಿಕ ಕಷ್ಟಗಳ ದೆಸೆಯಿಂದಾಗಿ ಯೂರೋಪಿಯನ್ ರಾಜ್ಯಗಳಾವುವೂ ಅದನ್ನು ವಶಪಡಿಸಿಕೊಳ್ಳಲಾಗಲಿಲ್ಲ ಪರಕೀಯರಾರಾದರೂ ದಂಡೆತ್ತಿ ಬಂದರೆ ಎಲ್ಲಾ ಸಾಹಿತ್ಯಗಳನ್ನು ತಮಗೆ ಕೊಡಬೇಕೆಂಬ ಶರ್ತದ ಮೇಲೆ ಫ್ರೆಂಚ್ ಸರಕಾರವು ಹಾಕಿದ್ದ ಒಂದೇ ಒಂದು ರೈಲ್ವೆಯು ಅಲ್ಲಿದೆ ಈಜಿಪ್ಟ್ ದೇಶವು ಎಬಿಸೀನಿಯಾದ ಮೇಲೆ ಎರಡೆರಡು ಸಲ ದಂಡೆತ್ತಿ ಬಂದಿತು ಎಬಿಸೀನಿಯಾವು ಅದನ್ನು ಎರಡೆರಡು ಸಲವೂ ಸೋಲಿಸಿತು ಮಳೆಗಾಲದಲ್ಲಿ ರಷ್ಯಾ ದೇಶಕ್ಕೆ ಪ್ರವೇಶಿಸಲು ಸಾಧ್ಯವೇ ಇಲ್ಲ ಪ್ರಕೃತಿಸಿದ್ಧವಾದ ಕಷ್ಟಗಳೇ ಎಬಿಸೀನಿಯಾವನ್ನು ಬದುಕಿಸಿದೆ

ಕಳೆದ ೨೦ ವರ್ಷಗಳಲ್ಲೂ ಎಬಿಸೀನಿಯಾ ಚಕ್ರವರ್ತಿಯು ಅನೇಕಾನೇಕ ಅದ್ಭುತ ಕೆಲಸಗಳನ್ನು ಮಾಡಿರುವನು ಅವನು ಜನಾಂಗ ಸಂಯೋಜನ ಕೂಟಕ್ಕೆ ೧೯೨೩ರಲ್ಲಿ ಸೇರಿದನು ಅವನು ಆಗ ಇದಕ್ಕೆ ಸೇರದಿರುತ್ತಿದ್ದರೆ ಇಂದು ಎಬಿಸೀನಿಯಾ ದೇಶವು ತೀರ ಅಸಹಾಯಕ ಸ್ಥಿತಿಯಲ್ಲಿರುತ್ತಿತ್ತು

ಎಬಿಸೀನಿಯಾದ ಇಂದಿನ ಉಚ್ಛ್ರಾಯ ಸ್ಥಿತಿಗೆ ರಾಸ್‌ಟಫಾರಿಯೇ ಕಾರಣನು ತನ್ನ ದೇಶಕ್ಕೆ ಪರದೇಶಗಳ ಬುದ್ಧಿಕುಶಲರಾದ ಕೆಲಸಗಾರರನ್ನು ಕರೆತಂದನು ತನ್ನ ದೇಶದ ಆಸ್ಪತ್ರೆಗಳಿಗೆ ಸ್ವಾವೆ‍ಡ ದೇಶದ ವೈದ್ಯರುಗಳನ್ನು ಬರಮಾಡಿಕೊಂಡನು ಬೆಲ್ಜಿಯಂ ಮತ್ತು ಸ್ವಿಜರ್ ಲೇಂಡ್ ದೇಶಸ್ಥರನ್ನು ತನ್ನ ಸೈನ್ಯಗಳ ತರಬೇತಿನ ಕೆಲಸಕ್ಕಾಗಿ ನೇಮಿಸಿದನು ಸ್ವಿಸ್ ದೇಶಸ್ಥನಾದ ಒಬ್ಬ ನ್ಯಾಯಶ್ರೇಷ್ಠನನ್ನು ತನ್ನ ರಾಜಕೀಯ ಉಪದೇಶಿಯಾಗಿಟ್ಟುಕೊಂಡನು ಯೂರೋಪಿನ ಹಲವು ದೊಡ್ಡ ದೊಡ್ಡ ರಾಷ್ಟ್ರಗಳನ್ನು ಲೆಕ್ಕಿಸದೆ ತನ್ನ ದೇಶವನ್ನು ಪ್ರಗತಿ ಮಾರ್ಗದಲ್ಲೊಯ್ದನು.

ತನ್ನ ರೈಲ್ವೆಗೆ ಬಾಧಕವು ತಟ್ಟಬಾರದೆಂದು ಫ್ರಾನ್ಸಿನ ಯೋಚನೆ ಅದಕ್ಕಾಗಿ ಎಬಿಸೀನಿಯಾವು ಇಟಲಿಯೊಡನೆ ಸೇರಕೂಡದೆಂದು ಅದು ಯೋಚಿಸುತ್ತಿದ್ದಿತು ಇಟೆಲಿ–ಎಬಿಸೀನಿಯಾ ಜಗಳದಲ್ಲಿ ಬ್ರಿಟಿಷರ ಹಿತವಿಲ್ಲವೆಂದು ಹೇಳುವುದು ಸತ್ಯವಾಗಿಲ್ಲ ನೀಲಿ ನೈಲ್ ಬದಿಯಿಂದ ಸಾನಾ ಸರೋವರಕ್ಕೆ ನೀರನ್ನು ಬಿಡದಿದ್ದಲ್ಲಿ ಬ್ರಿಟಿಷ್ ಸುಡಾನ್ ದೇಶವೆಲ್ಲವೂ ಮರುಭೂಮಿಯಾಗುವುದು ನೀರಿನ ಸರಬರಾಯಿ ಸಮಸ್ಯೆಯ ಪ್ರಾಮುಖ್ಯತೆಯನ್ನು ಅರಿತು ಈ ಸರೋವರದ ನೀರಿನ ಸರಬರಾಯಿಯ ವಿಚಾರವಾಗಿ ಯಾರೂ ಕೈಯಿಕ್ಕಬಾರದೆಂದು ಎಬಿಸೀನಿಯಾದೊಂದಿಗೆ ಕರಾರು ಮಾಡಿಕೊಂಡಿದೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳೆರಡಕ್ಕೂ ಎಬಿಸೀನಿಯಾ ದೇಶದಿಂದ ಪ್ರಯೋಜನವಿರುವುದರಿಂದ ಇಟೆಲಿಯು ಎಬಿಸೀನಿಯಾದ ಮೇಲೆ ಕೈಹಾಕದಂತೆ ಈ ದೇಶಗಳೆರಡೂ ಎಚ್ಚರದಲ್ಲಿವೆ

ಎಬಿಸೀನಿಯನರಿಗೆ ಆಧುನಿಕ ಯುದ್ಧ ಸೂತ್ರವು ತಿಳಿದಿಲ್ಲವೆಂದು ಎಬಿಸೀನಿಯಾದ ಚಕ್ರವರ್ತಿಯು ಹೇಳುವುದು ನಂಬತಕ್ಕದ್ದಲ್ಲ ಇಟೆಲಿಯು ಎಬಿಸೀನಿಯಾವನ್ನು ಸುಲಭವಾಗಿ ಸೋಲಿಸಿಬಿಡುವುದೆಂಬ ಮಾತು ಸುಳ್ಳು ಎಬಿಸೀನಿಯಾವು ಒಳಗೊಳಗೆ ಗಟ್ಟಿಯಾಗಿಯೇ ಇದೆ ಅಲ್ಲದೆ ಅದಕ್ಕೆ ಬಾಹ್ಯಪ್ರಪಂಚದ ನೈತಿಕ ಬೆಂಬಲವಿದೆ

ಹಿಂದಿನ ಕಾಲದಲ್ಲಿ ಸಶಕ್ತ ಜನಾಂಗಗಳು ದುರ್ಬಲ ರಾಷ್ಟ್ರಗಳನ್ನು ಸದೆಬಡಿಯುತ್ತಿದ್ದುವು ಆದರೆ ಇಟೆಲಿಯು ಅಂತರ್ರಾಷ್ಟ್ರೀಯತಾಭಾವವನ್ನೇ ಮರೆತು ಪಾಪಮಾಡ ಹೊರಟಿದೆ ತಮ್ಮ ಭವಿಷ್ಯತ್ತನ್ನು ತಿಳಿಯದ ಗ್ರೀಕ್ ವಿಷಾದಾಂತ ನಾಟಕಗಳ ನಾಯಕರೂ ಅದೇ ರೀತಿ ಹೇಳುತ್ತಿದ್ದರು ಲೀಗ್ ಆಫ್ ನೇಶನ್ಸ್ ಸಂಘಟಿಸುತ್ತಿರುವ ಐಕ್ಯಭಾವನೆಯನ್ನು ಮುಸೊಲಿನಿಯು ಮುರಿಯುತ್ತಿರುವನು" ಎಂದರು

## Notice

Is hereby given that applications are invited for appointments as ag clerks under the District Board from candidates belonging to scheduled classes possessing educational and typewriting qualifications

A list of the scheduled classes is affixed to the Notice Board of the District Board Office

Mangalore } **M. Sunder Rao,**
17-8 35 } *For President Dt Board*

### ಮಲೆರ್ ಕೋಟ್ಲಾದಲ್ಲಿ ಗಲಭೆ!

ಪಂಜಾಬ್ ಸಂಸ್ಥಾನದ ಗವರ್ನರ್ ಜನರಲರಿಗೆ ಮಲೆರ್ ಕೋಟ್ಲಾದ ಹಿಂದೂಸಭೆಯ ಸೆಕ್ರೆಟರಿಯವರು ಈ ರೀತಿ ತಂತಿಬಿಟ್ಟರು

"ಈ ದಿನ ಹರತಾಳದ ೮೧ನೇ ದಿನ ಸಂಸ್ಥಾನಾಧೀಶರನ್ನೂ, ಮಂತ್ರಿಗಳನ್ನೂ, ೪೦ ಹಿಂದೂ ಮತ್ತು ಸಿಖ್ಖ ಪ್ರತಿನಿಧಿಗಳು ಆರು ಸಲ ಸಂದರ್ಶಿಸಿದರು ಹನ್ನೆರಡು ದಿನಗಳ ತನಕ ಅವರು ಕಾದರು. ಆದರೆ ಜನರ ಕೇಳಿಕೆಗಳನ್ನು ಸಲ್ಲಿಸುವ ಖಚಿತ ನಿರ್ಣಯವಾಗಿಲ್ಲ ಈಗಿನ ಆಡಳಿತದಲ್ಲಿ ವಿಶ್ವಾಸವಿಲ್ಲ. ಬ್ರಿಟಿಷ ಎಡ್ಮಿನಿಸ್ಟ್ರೇಟರನ್ನು ನೇಮಕಮಾಡಿರಿ ಇಲ್ಲದಿದ್ದರೆ ದುರಾಡಳಿತವು ಖರೆ"

### ವಿಷವಾಯುವಿನಿಂದ ರಕ್ಷಣೆ.

ಲಂಡನ್, ಆಗೋಸ್ಟ್ ೨೨

ಹಗೆಗಳು ತಮ್ಮ ವಿಮಾನದಿಂದ ವಿಷವಾಯುವನ್ನು ಬಿಟ್ಟು ಜನರನ್ನು ಘಾಸಿಪಡಿಸಲೂ, ಕೊಲ್ಲಲೂ ಪ್ರಯತ್ನಿಸಿದಾಗ ಜನರು ಈ ವಿಷವಾಯುವಿನ ಕೋಟಲೆಯಿಂದ ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬೇಕೆಂಬ ಬಗ್ಗೆ ವಿವರಣೆಗಳನ್ನುಳ್ಳ ಕರಪತ್ರಗಳನ್ನು ಪೋಲೀಸರು ಈ ದಿನ ಪ್ರಾತಃಕಾಲ ಎಲ್ಲೆಲ್ಲೂ ಹಂಚಿದರು

### ಸುಪ್ರಸಿದ್ಧ ವ್ಯಾಪಾರಿಯ ಮರಣ

ಮದ್ರಾಸು, ಆಗೋಸ್ಟು ೨೨

ಮದರಾಸಿನ ಜೋರ್ಜ್ ಟೌನಿನ ಸುಪ್ರಸಿದ್ಧ ವ್ಯಾಪಾರಿಯೊಬ್ಬನು ಆರ್ಥಿಕ ದುಃಸ್ಥಿತಿಯನ್ನು ತಾಳಲಾರದೆ ಸಮುದ್ರ ತೀರಕ್ಕೆ ಹೋಗಿ ನೀರಿಗೆ ಹಾರಿ ಪ್ರಾಣವನ್ನು ಕಳೆದುಕೊಂಡನ ಹೆಣದ ಜೇಬಿನಲ್ಲಿದ್ದ ಕಾಗದವು ಮೃತನ ಇಂಗಿತವನ್ನು ತಿಳಿಸಿತು

### ಭಾಯಿ ಪರಮಾನಂದರಿಗೂ ಅಪ್ಪಣೆಯಿಲ್ಲ

ಹಿಂದೂ ಮಹಾಸಭೆಯ ಕಾರ್ಯಕಾರಿ ಅಧ್ಯಕ್ಷರಾದ ಭಾಯಿ ಪರಮಾನಂದರವರು, ಡಾ ಜಗದೀಶಹರಿ ಮತ್ತು ಶ್ರೀ। ಗಣಪತ್ಯೆಗಳನ್ನು ಕೂಡಿಕೊಂಡು, ಲೋಹಾರು ಎಂಬಲ್ಲಿ ಜಖಂಗೊಂಡು ಆಸ್ಪತ್ರೆಯ ಪಾಲಾಗಿದ್ದವರನ್ನು ನೋಡುವುದಕ್ಕಾಗಿ ಹೋಗಬೇಕೆಂದು ಭಿವಾನಿಯಿಂದೊಂದು ಪತ್ರ ಬರೆದು ನವಾಬರಿಂದ ಅಪ್ಪಣೆ ಬೇಡಿದರು ಅವರಿಗೆ ಉತ್ತರವಾಗಿ 'ನಿಮ್ಮ ತಂತಿಯು ತಲಪಿತು. ಲೋಹಾರು ಪ್ರಾಂತ್ಯವನ್ನು ಪ್ರವೇಶಿಸುವ ಯೋಚನೆಯನ್ನು ಎಂದೂ ಮಾಡಬೇಡಿರಿ ಉದ್ರೇಕವನ್ನು ಅದರ ಪರಿಣಾಮದಿಂದಾಗುವ ಗಲಾಟೆಯನ್ನೂ ತಡೆಯುತ್ತಿದ್ದೇವೆ' ಎಂದು ತಿಳಿಸಲಾಯಿತು ಭಾಯಿ ಪರಮಾನಂದರು ಡಾಲ್ ಹಾಸಿಯ ಏಜಂಟ್ ಜನರಲರಿಗೆ ದೀರ್ಘ ಪತ್ರ ಬರೆದಿರುವರು.

### ಶಾಲೆಗಳಲ್ಲಿ ಸೈನ್ಯ ಶಿಕ್ಷಣ.

ಸಂಸ್ಥಾನದ ಎಲ್ಲಾ ಹೈಸ್ಕೂಲುಗಳಲ್ಲಿಯೂ ಬಲಾತ್ಕಾರ ಸೈನ್ಯ ಶಿಕ್ಷಣವನ್ನು ಕೊಡಬೇಕೆಂಬ ಅರಿಕೆಯನ್ನು ಬೆಂಗಳೂರಿನ ಶ್ರೀ। ಸಿ ಎ ನರಸಿಂಗರಾಯರು ಬರುವ ಅಕ್ಟೋಬರ ತಿಂಗಳಲ್ಲಿ ನಡೆಯಲಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ತರಲಿರುವರು

## TO LET.

On hire the Building formerly belonging to the Hindustan Cinema Co., Ltd along with furniture and fittings etc. The building is situated in the heart of the Mangalore Town and is convenient for giving Cinema shows dramatic and such other performances

Those desirous of taking the same on lease are requested to apply to the Board of Trustees, Sri Venkatramana Temple, Mangalore on or before 7—9—35 stating their terms

The Temple will not consider any application for lease which does not provide for the deposit of Rs 500 in advance which will be adjusted towards rent due at the end of the lease period The Temple also reserves the right to reject any application without stating any reasons

**MANAGER,**
*S V Temple*


## ಮಲಯಾಳ ವನಸ್ಪತಿ ಔಷಧಿಗಳು.

**ಮಲಬಾರಿನ ಕಾಡುಗಳಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಸಿದ್ದು**

# ಕ್ಷಯ ಸಂಹಾರಿ
KSHAYA SAMHARI

**ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.**

**ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—**

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಬಿಳುಪಾದ, ಗುಂಡಿಗೀದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖದಲ್ಲಿ ಕೆಂಪು, ರಕ್ತ ಉಗುಳುವುದು ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ

**ಈ ರೋಗಬಾಧಿತರಿಗೊಂದು ಮಹಾ ವರದಾನ**

**ಕ್ರಯ ಬಾಟ್ಲಿಗೆ ರೂ. 4-8-0. 1/6ರಷ್ಟು ಅಂಚೆಚೀಟು ಹೆಚ್ಚು.**

**ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.**

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

# WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ




ಐಓಡಾಯಿಡ್ಡ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೋಸ್ಪರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨.
ಏಜೆಂಟ್ಸ್ – ಶಾ ಕಂಪೆನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ
ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ಇವು ಹೊಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೇಬಲ್ ಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವದಿಲ್ಲ ಗ್ಯಾರಂಟಿ ೮ ವರ್ಷ ... ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ... ಇಷ್ಟವಿಲ್ಲದ್ದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ೨೪೧೨ S A ಕಲ್ಕತ್ತಾ

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ... ರಜಪೂತ ಇವರ

ಸತಂತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೇಡವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ... ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ಅದನಂತರ ಏನು ಮಾಡಿದರೂ ಶುರುವಾಗುವುದಿಲ್ಲ ನೊವಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಂಮಾಹಿಮ ... ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ४-೦ ೦ ವಿ ಪಿ ಅಣೆ ೮

ವಿಲಾಸ – ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C

# Now For Sale.

**Poholatum (Balm)** (German made) This is home remedy for Rheumatism, Asthma, Sciatica Lumbago, Insect bites, Herpes, Wounds, Cuts, Colds, Headache It is a complete substitute for the domestic medicine chest Try once this unequalled remedy In ¼oz tin As 3/– In oz jar As 12/–

**Superior Red Balm** For relieving pains in muscles and on skin Directions for use with the bottle Price As 12/– only.

**Wurmteufel** Is a sovereign remedy against all sorts of worms in stomach and in the intestines Physicians enjoying authoritativeness describe it a radical remedy and warmly recommend it All those who suffer from worms, children and adults, try this unique remedy and be freed from your ailment Price As 10 per packet.

**Pocket Inhaler** For coughs and hoarseness, headache, catarrh colds, use this inhaler and you will be relieved immediately Price per inhaler As 6 & As 8/

**Po-Ho Fluid** For Asthma colds, indigestion, toothache lumbago, a sure remedy in all cases Price As 6/– and Re 1/ per phial

**Cough Cure** An infallible remedy for coughs of all kinds bronchitis, hoarseness Particulars in bottle. Price As 12/– for 5 oz bottle

Use Mithra Toilet Soaps—Now on Sale with.

**The New Curative Earth** A radium cure ask for Particulars

## Basel Mission Book Depot

Mangalore, Branches in Codialbail, Hubli, Calicut


# Our Dasara Special Number for 1935

will be out in the first week of October,
with attractive illustrations by twenties!—
with instructive & interesting articles by dozens!
Double coloured photos a Speciality!

**CONTRIBUTIONS BY REPUTED WRITERS!**

**PRICE AS 2 ONLY**

It would pay you to advertise your goods in this Popular Numl

*Apply for advertisement rates to —*

Advertisement Manager,
The Swadeshabhimani Dasara Special 1935,
CAR STREET MANGALORE

## ಮುಂಬಾಯಿ 'ತೊದಲ್ನುಡಿ' ಪತ್ರಿಕೆಯ ಸಂಪಾದಕರ ನಿಧನ.

"ಮುರಾಠ ಚಿಲ್ಲಿಯೂದ ಮುಂಬಾಯಿ ನಗರದಲ್ಲಿ ಹಲವು ವರ್ಷಗಳಿಂದ ಕರ್ನಾಟಕ ದೇಶದವರು ಬಂದು ನೆಲಸಿರುವರಾದರೂ, ಒಂದೇ ಒಂದು ಕನ್ನಡ ಪತ್ರಿಕೆಯು ಇಷ್ಟು ದೊಡ್ಡ ಮುಂಬಾಯಿಯಲ್ಲಿ ಇಲ್ಲವೆಂದರೆ ಕರ್ನಾಟಕಾಭಿಮಾನಿಗಳಿಗೆ ಇದೊಂದು ದೊಡ್ಡ ಕೊರತೆಯೇ ಸರಿಯೆಂದು ಮನಗಂಡ ಶ್ರೀಯುತ ಶಾಪು ಸೀನಶೆಟ್ರು ತಮ್ಮ ಸ್ವಂತ ಛಾಪಖಾನೆಯಲ್ಲಿ 'ತೊದಲ್ನುಡಿ'ಯೆಂಬ ನಾಮಧೇಯದಿಂದ ಒಂದು ವಾರಪತ್ರಿಕೆಯನ್ನು ೧೯೩೦ನೇ ಇಸವಿ ಜುಲೈ ತಿಂಗಳಲ್ಲಿ ಹೊರಡಿಸಿ, ತನ್ನ ತನುಮನಧನಗಳನ್ನೆಲ್ಲಾ ಕರ್ನಾಟಕ ಸೇವೆಗರ್ಪಿಸಿ ಜನಾದರಕ್ಕೆ ಹೆಚ್ಚಿನ ಪ್ರೀತರಾಗಿ ಇರುವ ತನುಮಧ್ಯೆ ಕಳೆದ ೧೯೩೪ನೇ ಇಸವಿ ಆಗೋಸ್ತು ತಿಂಗಳಲ್ಲಿ ಕ್ಷಯರೋಗ ಪೀಡಿತರಾಗಿ ಕೆಲವು ಸಮಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾ ಇದ್ದರೂ ಪೂರ್ಣ ಗುಣಹೊಂದದಿರಲು, ಡಾಕ್ಟರರ ಅನುಮತಿ ಮೇರೆಗೆ ತವರೂರಾದ ಉಡುಪಿಗೆ ತೆರಳಬೇಕಾಯಿತು. ಅಲ್ಲಿಯೂ ಕೂಡ ಹಲವು ತಿಂಗಳಿಂದ ಔಷಧಿಯನ್ನು ಪಡೆಯುತ್ತಾ ಇದ್ದರೂ ಇತ್ತೀಚೆಗೆ ಕಾಯಿಲೆಯು ವಿಶೇಷವಾಗುತ್ತಾ ಬಂದು ಇದೇ ಕಳೆದ ತಾ. ೭ನೇ ಬುಧವಾರ ದಿನ ಸ್ವರ್ಗಸ್ಥರಾದರು. ಇವರು ಕಾಲವಶರಾಗುವಾಗ ಬರೇ ೩೬ ವಯಸ್ಸಿನವರಾಗಿದ್ದರು. ಶ್ರೀ ಈಶನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ" ಎಂದು ಶ್ರೀಯುತ ಕೈ. ಟಿ. ಕಳೇರ ಇವರು ಬರೆಯುತ್ತಾರೆ.

## ಟರ್ಕಿಶ್ ಮಂತ್ರಿಮಂಡಲ.

ಇಟೆಲಿ ಎಬಿಸೀನಿಯಾಗಳೊಳಗೆ ನಡೆವ ಕ್ರಾಂತಿಯ ವಿಷಯವಾಗಿ ಚರ್ಚಿಸಲು ಟರ್ಕಿಶ್ ಮಂತ್ರಿಮಂಡಲದವರು ಪ್ರಜಾಪ್ರಭುತ್ವದ ಅಧ್ಯಕ್ಷರಾದ ಮಿ। ಕೆಮೆಲ್ ಅಟಟುರ್ಕ್ ಎಂಬವರ ಅಧ್ಯಕ್ಷತೆಯಲ್ಲಿ ತಮ್ಮ ಸಭೆಯನ್ನು ಜರಗಿಸಿದರು. ಈಗ ಸಂಘಟಿಸಬಹುದಾದ ಯುದ್ಧದಿಂದ ನಮ್ಮ ದೇಶಕ್ಕೇನು ಪರಿಣಾಮವಿಹುದೆಂದು ಮೊದಲು ಚರ್ಚಿಸಲಾಯಿತು. ನಂತರ ಇತರ ಜನಾಂಗದವರ ಹಾಗೆಯೇ ನಾವು ಸಿದ್ಧವಾಗಿರುವುದು ಉಚಿತವೆಂದು ಠರಾವು ಪಾಸುಮಾಡಿದರೆಂದು ತಿಳಿದುಬರುತ್ತದೆ.

## ಪುನರ್ನಿರ್ಧಾರ

ಅಲ್ಲಹಾಬಾದ್ ಜಿಲ್ಲಾ ಕಾಂಗ್ರೆಸ್ ಕಮಿಟಿಯು ೧೫ನೇ ತಾರೀಕಿನ ದಿನ ಅಲ್ಲಹಾಬಾದಿನಲ್ಲಿ ಜರಗಿತು. ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸಕೂಡದೆಂದು ನಿರ್ಧರಿಸಿದ್ದ ಠರಾವನ್ನು ಹಿಂತೆಗೆದುಕೊಳ್ಳಲಾಯಿತು. ಕಾಂಗ್ರೆಸ್ ಜಿಲ್ಲಾ ಬೋರ್ಡಿನಲ್ಲಿ ಭಾಗವಹಿಸಬೇಕೆಂದಾಗಿದೆ.

## ಗನಿಯಲ್ಲಿ ಸ್ಫೋಟನ

### 6 ಮಂದಿ ಸ್ವಯಂಸೇವಕರ ಮರಣ

ಬ್ರಿಟನ್ ದೇಶದಲ್ಲಿ ನಡೆದ ಇನೀ ಸ್ಫೋಟನವಿದು. ಆದೂ ಒಂದು ವರ್ಷದಲ್ಲಿ. ಎಲ್ಸೆಕಲ್ ಎಂಬಲ್ಲಿಯ ಗನಿಯೊಂದರಲ್ಲಿ ಬೆಂಕಿಯ ಕುರುಹುಗಳು ಕಂಡುಬರಲು ಅದನ್ನು ಪರೀಕ್ಷಿಸಲು ಸ್ವಯಂಸೇವಕರ ದಳವೊಂದು ಗನಿಯೊಳಗೆ ಇಳಿಯಿತು. ಮರುಕ್ಷಣವೇ ಸ್ಫೋಟನವಾಗಿ ಆರು ಮಂದಿಗಳು ಮೃತಪಟ್ಟರು. ೯ ಮಂದಿಗೆ ಘಾಯಗಳಾಗಿವೆ. ಅವರನ್ನು ಆಸ್ಪತ್ರೆಗೊಯ್ದು ಚಿಕಿತ್ಸೆ ನಡೆಯುತ್ತಿದೆ.

## ಹಿಂದೂ—ಮುಸ್ಲಿಂ ಗಲಭೆ

### 50 ಮಂದಿಗೆ ಜಖಂ!

ಸಿಕಂದರಾಬಾದಿನಲ್ಲಿ ಶ್ರೀ ಕೃಷ್ಣ ಜಯಂತಿಯ ದಿನ ಹಿಂದೂಗಳನೇಕರು ಕೂಡಿ ಮೆರವಣಿಗೆಯನ್ನು ಕೊಂಡು ಹೋಗುತ್ತಿರುವಾಗ ಮುಸ್ಲಿಂ ತಂಡವೊಂದು ಅವರನ್ನು ಮಾರ್ಗದಲ್ಲಿ ತಡೆಗಟ್ಟಿತು. ಕಾರಣವೇನೂ ಇಲ್ಲದೆ ತಮ್ಮನ್ನು ತಡೆಗಟ್ಟಿದುದಕ್ಕಾಗಿ ಕೋಪಗೊಂಡ ಹಿಂದೂಗಳು ಮುಸ್ಲಿಮರ ಮೇಲೆ ಬೀಳಲು ಆರಂಭಿಸಿದವರಲ್ಲೂ ಜಗಳಕ್ಕಾರಂಭವಾಯಿತು. ಅಷ್ಟರಲ್ಲಿ ಪೋಲೀಸರು ಬಂದು ಜಗಳವನ್ನು ನಿಲ್ಲಿಸಿದರು. ಆ ಜಗಳವು ನಿಂತರೂ ಮನಸ್ಸಿನೊಳಗೆ ಧಗಧಗಿಸುತ್ತಿದ್ದ ರೋಷಾಗ್ನಿಯು ಶಮನವಾಗಲಿಲ್ಲ. ಎರಡು ದಿನಗಳ ನಂತರ ಎರಡು ಪಂಗಡದವರಿಗೂ ಮಾರಾಮಾರಿ ನಡೆದು ೫೦ ಮಂದಿ ಗಾಯಗೊಂಡರು. ೧೫ ಮಂದಿಗೆ ಬಲವಾದ ಪೆಟ್ಟಾದುದರಿಂದ ಆಸ್ಪತ್ರೆಗೊಯ್ಯಲ್ಪಟ್ಟಿರುವರು.

## ಬರ್ನಾರ್ಡ್ ಷಾರವರು ಬರುವರು.

### ಅಖಿಲ ಭಾರತ ವಿದ್ಯಾರ್ಥಿಗಳ ಸಮ್ಮೇಳನ

ಈ ವರ್ಷದಲ್ಲಿ ಪೇಶಾವರಿನಲ್ಲಿ ನಡೆಯಲಿರುವ ೧೧ನೇ ಅಖಿಲ ಭಾ। ವಿದ್ಯಾರ್ಥಿಗಳ ಸಮ್ಮೇಳನಕ್ಕೆ ಜಾರ್ಜ್ ಬರ್ನಾರ್ಡ್ ಷಾ ಇವರು ಅಧ್ಯಕ್ಷರಾಗುವರೆಂದು ತಿಳಿದುಬಂದಿದೆ. ಎರಡು ವರ್ಷಗಳ ಹಿಂದೆ ಹಿಂದೂದೇಶಕ್ಕೆ ಬಂದಿದ್ದ ಇವರನ್ನು ವಿದ್ಯಾರ್ಥಿ ಸಂಘದವರು ಸಂದರ್ಶಿಸಲಾಗಿ ತಾವು ಪುನಃ ಹಿಂದೂದೇಶಕ್ಕೆ ಹಿಂತಿರುಗುವೆನಾಗಿಯೂ ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವುದಾಗಿಯೂ ವಚನವಿತ್ತಿರುವರು. ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀ ಪ್ರಬೋಧ ಚಂದ್ರರವರು ಷಾರವರೊಡನೆ ಪತ್ರವ್ಯವಹಾರ ನಡೆಸುತ್ತಿರುವರು.

## ಭಾರತವು ಜನಾಂಗ ಸಭೆಯನ್ನು ಬಿಡಬೇಕು

### ಶ್ರೀ। ಅಖಿಲಚಂದ್ರ ದತ್ತರ ಸೂಚನೆ

ಶ್ರೀಯುತರು ಬರುವ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗಾಗಿ ಈ ಕೆಳಗಣ ಠರಾವುಗಳನ್ನು ತರಲಿರುವರು. (೧) ಲೀಗ್ ಆಫ್ ನೇಶನ್ಸಿನಿಂದ ಭಾರತದೇಶವು ಪ್ರಾತಿನಿಧ್ಯವನ್ನು ಹಿಂತೆಗೆಯಬೇಕೆಂದು ಈ ಸಭೆಯು ಶಿಫಾರಸು ಮಾಡುತ್ತದೆ. (೨) ಹೊರದೇಶಗಳಲ್ಲಿ ಭಾರತದ ವಿಷಯವಾಗಿ ನಡೆಯುತ್ತಿರುವ ವಿರೋಧಪ್ರಚಾರವನ್ನು ತಡೆಯುವುದಕ್ಕಾಗಿಯೂ ಇಲ್ಲಿನ ನಿಜಸ್ಥಿತಿಯನ್ನು ಅಲ್ಲಿ ಪ್ರಚಾರಮಾಡುವುದಕ್ಕೂ ಇಂಡಿಯಾ ಸರಕಾರವು ಏರ್ಪಾಡು ಮಾಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ. (೩) ಇಂಡಿಯನ್ ಪಿನಲ್ ಕೋಡಿನಲ್ಲಿನ ಮರಣದಂಡನೆಯ ಶಿಕ್ಷೆಯನ್ನು ತೆಗೆದುಹಾಕಲು ಕೂಡಲೇ ಏರ್ಪಾಡು ಮಾಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ. (೪) ದೇಶದಲ್ಲಿನ ನಿರುದ್ಯೋಗಿಗಳನ್ನು ನಿವಾರಿಸುವುದಕ್ಕಾಗಿ ಸರಕಾರವು ಯೋಗ್ಯ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ. (೫) ವಿಚಾರಣೆಯಿಲ್ಲದೆ ಬಂಧಿಸಲ್ಪಟ್ಟಿರುವ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಬೇಕೆಂದು ಈ ಸಭೆಯು ಶಿಫಾರಸು ಮಾಡುತ್ತದೆ.

## ಅಮೇರಿಕಾದಲ್ಲಿ ಮುಂದಿನ ಅಧ್ಯಕ್ಷರು

ಸಿನೇಟರಾದ ಹ್ಯೂ ಲಾಂಗ್ ಇವರು ತಮ್ಮ ಸಿನೇಟ್ ಪಕ್ಷೀಯರಿಗೆ ತಿಳಿಸಿತ್ತಾ ಡೆಮೋಕ್ರ್ಯಾಟಿಕ್ ಉಮೇದ್ವಾರರಾಗಿ ಅಧ್ಯಕ್ಷರ ಚುನಾವಣೆಗೆ ನಿಲ್ಲುವುದಾಗಿ ತಿಳಿಸಿರುವರು. ಮುಂದಿನ ವರ್ಷದ ಅಧ್ಯಕ್ಷರ ಚುನಾವಣೆಯು ಬೇಗನೇ ನಡೆಯಲಿರುವುದು. ರೂಸ್‌ವೆಲ್ಟರು ಪುನಃ ಡೆಮೋಕ್ರ್ಯಾಟಿಕ್ ಪಕ್ಷದಿಂದ ನೋಮಿನೇಟ್ ಮಾಡಲ್ಪಟ್ಟರೆ ಹ್ಯೂಲಾಂಗ್‌ರವರು ಪ್ರತ್ಯೇಕವಾಗಿ ಉಮೇದ್ವಾರರಾಗಿ ನಿಲ್ಲುವರು.

## ಇಟೆಲಿ ಎಬಿಸಿನಿಯಾಗಳ ಹೋರಾಟ

### ನಾರ್ವೆ—ಸ್ವೀಡನ್‌ಗಳು ಹೇಗಿವೆ?

ಇಟೆಲಿ ಎಬಿಸಿನಿಯಾಗಳ ಕಲಹಗಳ ಕುರಿತಾಗಿ ಆಲೋಚಿಸುವುದಕ್ಕಾಗಿ ನೆರೆದಿದ್ದ ಬ್ರಿಟಿಷ ಪ್ರತಿನಿಧಿಗಳು ಅಶಾನಿರಾಶರಾಗಿ ಪೆರಿಸ್‌ಗೆ ಹಿಂತಿರುಗಿದರು. ಈ ಮಾಸಾಂತ್ಯದಲ್ಲಿ ನಾರ್ವೆ ಸ್ವೀಡನ್, ಹೊಲೆಂಡ್ ಮುಂತಾದ ರಾಷ್ಟ್ರಗಳ ವಿದೇಶೀ ಮಂತ್ರಿಗಳ ಸಮ್ಮೇಳನವು ಜರಗಲಿದೆ. ಸಪ್ಟಂಬರದಲ್ಲಿ ನಡೆಯಲಿರುವ ಲೀಗ್ ಕೌನ್ಸಿಲಿನಲ್ಲಿ ಈ ಕುರಿತಾಗಿ ವಿಮರ್ಶೆ ನಡೆಯುವುದು. ಅಲ್ಲಿ ನಿರ್ಧಾರವೇನಾಗುವುದೊ ಊಹಿಸಲಸಾಧ್ಯ. ಎಬಿಸಿನಿಯಾ ಇಟೆಲಿಗಳ ಕಲಹದ ವೇಳೆ ತಾವು ಹೇಗೆ ವರ್ತಿಸಬೇಕು— ಎಂಬ ವಿಷಯವನ್ನು ಬೇಗನೇ ನಿರ್ಣಯಿಸಲಿರುವರು.

## ಲೈಸೆನ್ಸ್ ಪಡೆಯದಿದ್ದುದಕ್ಕಾಗಿ ದಂಡ!

ಸರಕಾರಿ ಲೈಸನ್ಸ್ ಪಡೆಯದೆ ವೈರ್‌ಲೆಸ್ ರಿಸೀವಿಂಗ್ ಸೆಟ್ (ತಂತಿಯಿಲ್ಲದೆ ವರ್ತಮಾನ ಮೊದಲಾದುವನ್ನು ತಿಳಿಸುವ ವಿದ್ಯುತ್ ಯಂತ್ರ) ವನ್ನು ಪಡೆದಿದ್ದ ನಾಸಿಕದ ಶ್ಯಾಮಸುಂದರ ಶಿವಲಾಲ್ ಮಿಶ್ರ ಎಂಬವರಿಗೆ ಒಟ್ಟು ೩೦ ರೂಪಾಯಿಗಳ ದಂಡವು ವಿಧಿಸಲಾಗಿದೆ.

## ಯೆಹೂದ್ಯರಿಗೆ ಪ್ರತ್ಯೇಕ ಶಿಕ್ಷಣ ಕೇಂದ್ರ

ಜರ್ಮನಿಯಲ್ಲಿನ ಯೆಹೂದ್ಯರೆಲ್ಲ ಪ್ರತ್ಯೇಕ ಶಿಕ್ಷಣ ಕೇಂದ್ರವನ್ನು ಸಂಸ್ಥಾಪಿಸಿಕೊಳ್ಳಬೇಕೆಂದೂ ಅವರು ಸರಕಾರದ ಶಾಸನಗಳನ್ನೆಲ್ಲ ಅನುಸರಿಸಬೇಕೆಂದೂ ಪ್ರಕಟವಾಗಿದೆ. ದೇಶದಲ್ಲಿ ಅಲ್ಲಲ್ಲಿ ಹರಡಿರುವ ಯೆಹೂದ್ಯರ ಸಂಘಗಳು ಸಪ್ಟಂಬರ ಮಧ್ಯದೊಳಗೆ ಒಂದಾಗಿ ಕೇಂದ್ರಸಂಸ್ಥೆಯನ್ನು ಸ್ಥಾಪಿಸಿಕೊಳ್ಳಬೇಕೆಂದು ಆಜ್ಞಾಪಿಸಿದೆ. ಯೆಹೂದ್ಯ ಸಂಘಗಳಿಗೆ ಜಾತೀಯ ಯೆಹೂದ್ಯರೇ ಸೇರತಕ್ಕದು. ಬೋರ್ಡ್ ಆಫ್ ಆರ್ಗನೈಜೇಶನ್‌ನನ್ನು ಸೆನೇಟ್ ಸ್ಥಾಪಿಸಿದೆ.

## ಸಾವಿರಾರು ಜನರು ನೀರು ಪಾಲಾದರು

ಒಮಾಡಾದಲ್ಲಿನ ಅಣೆಕಟ್ಟು ಒಡೆದುಹೋದುದರಿಂದ ನೀರು ಪಟ್ಟಣದೊಳಗೆ ಸರಿದು ಸಾವಿರಾರು ಜನರು ಮಡಿದರು. ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳು ಮನೆ ಮಂದಿರಗಳೂ ಭೂಸಮವಾದುವು. ರೊಸಿಗ್ಲಿನ್ ಎಂಬ ಹಳ್ಳಿಯು ನಾಮಾವಶೇಷವಾಗಿದೆ. ಸಾವಿರಗಟ್ಟಲೆ ಸ್ಟರ್ಲಿಂಗುಗಳ ನಷ್ಟವು ಸಂಭವಿಸಿರುತ್ತದೆ.

## ಬಿಹಾರಿನಲ್ಲಿ ನೆರೆ!

ಭೂಕಂಪದ ನಂತರ ಬಿಹಾರ್ ಪ್ರಾಂತ್ಯವು ನೆರೆಗೆ ತುತ್ತಾಗಿ ಪಾಟ್ನಾದಲ್ಲಿ ಬೆಳೆಗಳೆಲ್ಲಾ ನಾಶವಾದುವು. ಕೆಲವು ಹಳ್ಳಿಗಳಲ್ಲಿ ನೀರು ನಿಂತಿದೆ. ಅನೇಕರು ಮನೆಗಳ ಮಾಡುಗಳಲ್ಲಿ ವಾಸಿಸಿದರು. ಜನರೂ ಸರಕಾರವೂ ಸಹಾಯ ಸಮಿತಿಗಳನ್ನೇರ್ಪಡಿಸುತ್ತಿವೆ. ಕಳೆದ ವರ್ಷವೂ ಈ ಪ್ರಾಂತ್ಯದಲ್ಲಿ ಇದೇ ರೀತಿ ನೆರೆ ಬಂದು ಬಹಳ ಅನಾಹುತವು ಉಂಟಾಗಿತ್ತು.

## ಕ್ವೆಟ್ಟಾದಲ್ಲಿ ಸೌಕರ್ಯ.

ಕ್ವೆಟ್ಟಾ ಭೂಕಂಪದಿಂದ ಬಿದ್ದಿರುವ ಕಟ್ಟಡಗಳನ್ನೂ ಗೋಡೆಗೋಪುರಗಳನ್ನೂ ಸರಕಾರವು ಸರಿಪಡಿಸುತ್ತಿದೆ. ಬಾಧ್ಯಸ್ಥರನ್ನು ಕಂಡುಹಿಡಿದು ಬದುಕುಗಳನ್ನು ಅವರವರಿಗೆ ಕೊಡುವ ವ್ಯವಸ್ಥೆಯನ್ನು ಪ್ರೈವೆಟ್ ಕಮಿಶನರರು ಮಾಡುತ್ತಿದ್ದಾರೆ. ತಗಡಿನ ಗುಡಿಸಲುಗಳ ರಚನೆಯೂ ಸಾಗುತ್ತಿದೆ. ಬಲೂಚಿಸ್ಥಾನದ ವ್ಯವಸಾಯ ಭೂಮಿಗಳನ್ನೂ ಸರೋವರಗಳನ್ನೂ ವ್ಯವಸ್ಥಾಪೂರ್ವಕವಾಗಿ ವಿಭಾಗಿಸಿ ಕೃಷಿಯು ನಡೆಯುವಂತೆ ಏರ್ಪಡಿಸಲಿರುವರು.

## ನೆರೆಯ ಹಾವಳಿ

ಪಂಜಾಬ್ ನದಿಗಳಲ್ಲಿ ಪ್ರವಾಹವು ಮಿತಿಮೀರಿ ಹರಿದಿರುತ್ತಿದೆ. ಅನೇಕ ಗ್ರಾಮಗಳೂ ಪಟ್ಟಣಗಳೂ ಪ್ರವಾಹದಿಂದ ನಷ್ಟಹೊಂದಿವೆ. ಮಳೆಯು ವಿಶೇಷವಾಗಿ ಸುರಿಯುತ್ತಿರುವುದರಿಂದ ಪ್ರವಾಹವು ಬಲಗೊಂಡಿದೆ. ರಸ್ತೆಗಳೆಲ್ಲವೂ ಜಲಮಯವಾಗಿವೆ. ಗುಜರಾತಿನಲ್ಲಿಯ ಸ್ಯಾಲ್‌ಕೋಟ್ ಲುಧಿಯಾನಾಗಳಲ್ಲಿ ಅನೇಕ ಮನೆಗಳು ಕುಸಿದುಬಿದ್ದಿವೆ. ಲುಧಿಯಾನಾದಲ್ಲಿ ಅನೇಕ ಬಗೆಯಿಂದ ಜನರಿಗೆ ನಷ್ಟವುಂಟಾಗಿರುವುದು. ಕ್ವೆಟ್ಟಾ ಭೂಕಂಪದ ಅನಾಹುತಕ್ಕೆ ಒಳಗಾಗಿ ತಾನೊಬ್ಬನು ಮಾತ್ರ ಬದುಕಿ ಉಳಿದಿರುವ ಒಬ್ಬ ಮನುಷ್ಯನು ಪ್ರವಾಸವಶನಾಗಿದ್ದಾನೆ. ಅವನು ವಾಸವಾಗಿದ್ದ ಮನೆಯು ಕುಸಿದುಬಿದ್ದಿದೆ.

## ಯೆಹೂದ್ಯರು ಮತ್ತು ಕ್ರೈಸ್ತರ ಮೇಲೆ ನಾಜಿಗಳ ಧಾಳಿ

ಜರ್ಮನಿಯಲ್ಲಿ ನಾಜಿ ಮತ್ತು ಜೂಗಳ ಮೇಲೆ ಧಾಳಿ ನಡೆಯುತ್ತಿದೆ. ಸ್ಟಂಡ್ರ್ಯಾಕ್ ಎಂಬಲ್ಲಿನ ಸ್ಮಶಾನ ಭೂಮಿಯಲ್ಲಿನ ಕೆಥೋಲಿಕರ ಗೋರಿಗಳು ಕೆಲವನ್ನು ನಿರ್ಮೂಲಗೊಳಿಸಲಾಯಿತು. ಯೆಹೂದ್ಯರು ಅಂಗಡಿಗಳಲ್ಲಿರಬಾರದೆಂದು ಡೋರ್ಟ್‌ಮಂಡ್ ಮೇಯರರು ಆಜ್ಞಾಪಿಸಿರುವರು. ಪಶುಗಳ ವಿಕ್ರಯ ವ್ಯಾಪಾರದಲ್ಲಿ ಯೆಹೂದ್ಯರು ಸೇರಬಾರದೆಂದು ಹಿಲ್ಡನ್‌ಬರ್ಗ್‌ನಲ್ಲಿ ಅಪ್ಪಣೆಯಾಗಿದೆ. ಯೆಹೂದ್ಯರ ವಿರೋಧವಾದ ಮಹಾಸಭೆಯೊಂದು ಮೊನ್ನೆ ಬರ್ಲಿನಿನಲ್ಲಿ ಜರಗಿತು. ಯೆಹೂದ್ಯರೂ ಕೆಥೋಲಿಕರೂ ನಿರ್ಮೂಲನಾಗಲೇಬೇಕೆಂಬ ಬಗ್ಗೆ ಠರಾವುಗಳಾದುವು. ಹರ್ ಜುಲಿಯಸ್ ಸ್ಟ್ರೀಜರ್ ಎಂಬ ಕ್ರೈಸ್ತವಿರೋಧಿಯೊಬ್ಬರು ಭಾಷಣ ಮಾಡಿ ಕ್ರೈಸ್ತರ ಮೇಲೆ ರೋಷಾಗ್ನಿಯನ್ನು ಕಾರಿದರು.

## ಸರಕಾರಕ್ಕೆ ಜಡ್ಜರು ರಿಯಾಯಿತಿಯನ್ನು ತೋರಿಸಿದರು

ಲಾಹೋರು ಮುನಿಸಿಪಾಲಿಟಿಯ ಎಕ್ಸಿಕ್ಯೂಟಿವ್ ಆಫೀಸರರಾದ ಲಾಲಾ ಶಂಕರದಾಸರು ಮುನಿಸಿಪಾಲಿಟಿಗೆ ವಿರೋಧವಾಗಿ ವರ್ತಿಸಿ ತನ್ನ ಸಂಬಳವನ್ನು ತೆಗೆದುಕೊಂಡುದುದಕ್ಕೆ ನಾಗರಿಕರು ದಾವೆ ಹೂಡಿ ಸರಕಾರಕ್ಕೆ ಸೋಲಾಯಿತಷ್ಟೆ. ಈಗ ಸರಕಾರವು ಲಾಹೋರು ಹೈಕೋರ್ಟಿನ ಜಸ್ಟಿಸ್ ಕುರ್ಶೀಯವರಿಗೆ ಮನವಿಮಾಡಿ ತನ್ನ ಸ್ವಾಧೀನವಿರುವ ಎಕ್ಸಿಕ್ಯೂಟಿವ್ ಆಫೀಸರರ ಮೇಲಣ ಇಂಜಕ್ಷನನ್ನು ಹಿಂತೆಗೆದುಕೊಳ್ಳಬೇಕೆಂದೂ, ಮೊಕದ್ದಮೆಯು ತನಗೆ ಗೆಲುವಾಗದಿದ್ದರೆ ಆ ಆಫೀಸರರಿಗೆ ಕೊಟ್ಟ ಸಂಬಳವನ್ನು ತಾನು ಹಿಂತಿರುಗಿ ಕೊಡುವೆನಾಗಿಯೂ ತಿಳಿಸಿದೆ. ಜಸ್ಟೀಸರು ಸರಕಾರಕ್ಕೆ ರಿಯಾಯಿತಿ ತೋರಿಸಿ ಇಂಜಕ್ಷನನ್ನು ತಡೆದಿರುವರು.


## ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯೂ ಇದು ಸ್ತ್ರೀಸಂಗದ ದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.




ಅನೇಕರು ಕಾಹಿಲೆಯ ದೆಸೆಯಿಂದ ಕೊರಗುತ್ತಿದ್ದಾರೆ. ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ. ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ. ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ—ದೊಡ್ಡ ಬಾಟ್ಲಿಗೆ ರೂ 4 ಮಧ್ಯಮ 2-4-0. ಚಿಕ್ಕದು 1-2-0.

ತಯಾರಿಸುವವರು — ಲಸ್ಟರ್ ಡಿಪೋ, ಚಿಕ್ಕಮಗಳೂರು.

ಬ್ರೇಂಚ್—ಚಿಕ್ಕಪೇಟೆ, ಬೆಂಗಳೂರು.

ಮುಖ್ಯ ಏಜಂಟರು — ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆ ಅತ್ಯುತ್ತಮ)
ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾಂಟೆಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

## ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.




Distributors for South Kanara —

**Raghavendra Ranga Pai, Car Street, Mangalore.**

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ... 1

ಕಾವ. ಶಾಸ್ತ್ರವನ್ನೋದಿರಿ.

Agent —Shah Company Mangalore
„ Pearl & Sons Mangalore

Atank Nigrah Pharmacy
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯುವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

### ಸಾಮಾನ್ಯ ವಿಜ್ಞಾನ. / ಅಜ್ಜಿ ಕಥೆಗಳು (ಸಚಿತ್ರ.)

| ಚರಿತ್ರೆ ಮತ್ತು ಕಥೆಗಳು. | ರೂ | ಆ | ಪೈ | ಸಾಮಾನ್ಯ ವಿಜ್ಞಾನ. | ರೂ | ಆ | ಪೈ |
|---|---|---|---|---|---|---|---|
| | | | | ಎರಡನೇ ದರ್ಜೆ | 0 | 3 | 0 |
| ನಾಲ್ಕನೇ ದರ್ಜೆ | 0 | 6 | 0 | ಮೂರನೇ ,, | 0 | 3 | 0 |
| ಮೂರನೇ ,, | 0 | 4 | 6 | ನಾಲ್ಕನೇ ,, | 0 | 6 | 0 |
| ಎರಡನೇ ,, | 0 | 4 | 0 | ಐದನೇ ,, | 0 | 5 | 0 |
| ಸಮಾಜಶಾಸ್ತ್ರ. | | | | | | | |
| ಐದನೇ ದರ್ಜೆ | 0 | 3 | 0 | | | | |
| ನಾಲ್ಕನೇ ,, | 0 | 3 | 0 | ಆರನೇ ದರ್ಜೆ | 0 | 4 | 0 |
| ಮೂರನೇ ,, | 0 | 2 | 6 | ಏಳನೇ ,, | 0 | 5 | 0 |
| | | | | ಎಂಟನೇ ,, | 0 | 6 | 0 |

ಅಜ್ಜಿ ಕಥೆಗಳು (ಸಚಿತ್ರ.)
ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು.
ಮೆಣಸಿನ ಕಾಳಪ್ಪ
ಅರ್ಗಣೆ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

## ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

## ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.
ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.
ಬಿಳುಪಿನ ಆಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.
ಕ್ರೌನ್ ½ ಆಕಾರದ ೧೮೩ ಪುಟಗಳು.
ಉತ್ತಮ ತರದ ಹಾಸ್ಯ.
ಬೆಲೆ 1-4-0
ಶಾರದಾ ಛಾಪಖಾನೆ, ಮಂಗಳೂರು.
ಇವರಿಂದ ಪಡೆಯಬಹುದು.

# ನಡೆದ ಕತೆಗಳು

## True Stories.

ಓದಿ ಮುಗಿಸುವ ಸಮಯ—ಮೂರರಿಂದ ನಾಲ್ಕು ನಿಮಿಷಗಳು.

*All Rights Reserved.*

[ಸಮಾಜದಲ್ಲಿನ ಕುಂದುಕೊರತೆಗಳನ್ನು ತೋರಿಸಿಕೊಡುವುದೇ ‹ನಡೆದ ಕತೆಗಳು›—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು. ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಪಕ್ಷಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ]

ಪುಸ್ತಕ ೩—೩

### ಮಕ್ಕಳ ಮದುವೆ.

ಅತ್ತಾವರದ ಸುಬ್ಬ ಮೇಸ್ತ್ರಿಗಳ ಮನೆಯೆಂದರೆ ಸುಖದ ನೆಲೆವೀಡು, ಸೌಭಾಗ್ಯದ ಆಗರ. ಉಣ್ಣು ತಿನ್ನುವುದರಲ್ಲಿ,—ಉಡಿಗೆ ತೊಡಿಗೆಗಳಲ್ಲಿ,—ಮಕ್ಕಳುಮರಿಗಳಲ್ಲಿ,—ಸಂಪಾದನೆಯಲ್ಲಿ—ಯಾವುದರಲ್ಲಿಯೂ ಅವರದ್ದು ಕಡಿಮೆಯ ಮನೆಯಲ್ಲ. ನೆಂಟರಿಷ್ಟರು ಮಧ್ಯೆ ರಾತ್ರಿಯಲ್ಲಿ ಬಂದರೂ ಅವರು ಬರಿಹೊಟ್ಟೆಯಲ್ಲಿ ಮಲಗುವ ಪ್ರಸಂಗವಿಲ್ಲ. ಅಕ್ಕಿ, ಬೇಳೆ, ದವಸಧಾನ್ಯ—ಮುಂತಾದ ಗೃಹ ಸಾಹಿತ್ಯಗಳೆಲ್ಲವೂ ಮೇಸ್ತ್ರಿಗಳ ಮನೆಯಲ್ಲಿ ಸನ್ನಾಹಸಿದ್ಧ.

ವಾಲ್ಯಾರ್ಟು ಆಫೀಸಿನಲ್ಲಿ ಅವರಿಗೆ ಕೆಲಸ. ತಿಂಗಳ ೨ನೇ ತಾರೀಕಿನ ದಿನ ಮೂವತ್ತೆಂಟು ರೂಪಾಯಿಗಳನ್ನು ತಪ್ಪದೆ ಹಿಡಿಯುತ್ತಿದ್ದರು. ದುಶ್ಚಟ್ಟಾಸೆಗಳ ಗೊಡವೆಯಿರದಿದ್ದುದರಿಂದ ಸಿಕ್ಕಿದ ಸಂಬಳ ಪೂರ್ಣವಾಗಿ ಮನೆಯನ್ನು ಸೇರಿ ಮೇಸ್ತ್ರಿಗಳ ಹೆಂಡತಿ ವೆಂಕಮ್ಮಳ ಕೈಯೊಳಗಾಗುತ್ತಿತ್ತು.

ಹಿರಿಯಾಗಿ ಮೇಸ್ತ್ರಿಯವರ ಹಿರಿಯ ಮಗ ಗಂಗಾಧರನು ಸ್ಪೆನ್ಸರ್ ಎಂಡ್ ಕಂಪೆನಿಯಲ್ಲಿ ತಿಂಗಳಿಗೆ ೩೦ ರೂಪಾಯಿ ಸಂಬಳ ಪಡೆಯುತ್ತಿದ್ದ. ಅವರ ಎರಡನೆಯ ಮಗ ರಾಘವೇಂದ್ರನು ಕುದ್ರೋಳಿ ಕಾರ್ಖಾನೆಯಲ್ಲಿ ಇಪ್ಪತ್ತೈದು ರೂಪಾಯಿ ಸಂಬಳ ಪಡೆಯುತ್ತಿದ್ದ. ಇಷ್ಟೇ ಅಲ್ಲ, ಅವರ ಮೂರನೆಯ ಮಗ ಸುರೇಂದ್ರನು ಸುರೇಂದ ಟೈಲರಿಂಗ್ ಹೌಸನ್ನಿಟ್ಟು ಕೆಲವು ದರ್ಜಿಗಳನ್ನು ಸ್ವಾಧೀನದಲ್ಲಿರಿಸಿ, ಸಂಪಾದನೆ ಮಾಡಿ, ತಿಂಗಳಿಗೆ ಹದಿನೈದು ರೂಪಾಯಿಗಳನ್ನು ತಂದೆಗೆ ತಪ್ಪದೆ ಕೊಡುತ್ತಿದ್ದ.

ತಂದೆಯೂ ಮೂವರು ಮಕ್ಕಳೂ ದುಡಿಮೆಯಲ್ಲಿ ವಿಪುಲ ಶ್ರದ್ಧಾವಂತರು. ಕಾಯಕಷ್ಟದಲ್ಲಿ ಗಟ್ಟಿಗರು. ದ್ರವ್ಯಾರ್ಜನೆಯಲ್ಲಿ ಸುಬ್ಬಮೇಸ್ತ್ರಿಗಳಿಗಿದ್ದ ಜತನವೇ ಅವರ ಮನೆಯ ಸುಖ ಮತ್ತು ಮಕ್ಕಳ ಗುಣನಡತೆಗಳಿಗೆ ಹುಟ್ಟಿಗೆ ಕಾರಣವಾಗಿತ್ತು. ಮಕ್ಕಳಲ್ಲಿ ಮೊದಲನೆ, ಎರಡನೆ, ಮತ್ತು ಮೂರನೆಯವನೆಂಬ ಭೇದವೇ ಅವರಲ್ಲಿಲ್ಲ—ಯಾರೇ ಆಗಲಿ, ಮಾಸಾಂತ್ಯದಲ್ಲಿ ತನ್ನ ಕೈಗೊಪ್ಪಿಸುವ ಹಣದಲ್ಲಿ ಒಂದು ಪೈಯನ್ನು ಕಡಮೆಮಾಡಿದರೆ ಬಹಿರಂಗ ವಿಚಾರಣೆಯು ತಪ್ಪಿದ್ದಲ್ಲ. ಮಕ್ಕಳ ಮೇಲಿನ ಸಿಟ್ಟಿನಿಂದ ಅವರು ಪತ್ನಿಯ ಬೆನ್ನನ್ನು ಬೆತ್ತವು ತಿನ್ನಬಿಟ್ಟ ಪ್ರಸಂಗವೂ ಅಪರೂಪವಾಗಿದ್ದಿಲ್ಲ.

ಇಷ್ಟು ಮಾಡಿಯೂ ಅವರು ಏನನ್ನೂ ಉಳಿಸಲಿಲ್ಲ. ಏನೂರು ರೂಪಾಯಿ ಇನ್ಶೂರ್ ಕೂಡಾ ತೆಗೆಯಲಿಲ್ಲ. ತಿಂಗಳಿಗೆ ೮೦–೯೦ ರೂಪಾಯಿಗಳು ಬಂದರೆ ಅಷ್ಟನ್ನೇ ವೆಚ್ಚ ಮಾಡಿಬಿಡುತ್ತಿದ್ದರು. ದಿನಂಪ್ರತಿ ಮೃಷ್ಟಾನ್ನ ಭೋಜನದಲ್ಲೇ ಮಗ್ನರಾದರೆ ಹಣ ಉಳಿಯುವುದಾದರೂ ಹೇಗೆ?

ಅವರು ಈ ರೀತಿ ವೆಚ್ಚಮಾಡಲು ಒಂದು ಕಾರಣವು ಕೂಡಾ ಇತ್ತು. ಮೂವರು ಮಕ್ಕಳ ವಿವಾಹಸಮಾರಂಭವನ್ನು ಒಂದೇ ವರ್ಷ ಮಾಡಿಬಿಡಬೇಕು,—ಮೂವರೂ ಯೋಗ್ಯ ವರದಕ್ಷಿಣೆಯನ್ನು ಸಂಪಾದಿಸುವಂತೆ ಮಾಡಬೇಕು,—ಹಾಗೆ ಬಂದ ವರದಕ್ಷಿಣೆಯನ್ನು ಬೇಂಕಿನಲ್ಲಿಡಬೇಕು—ಇದು ಅವರ ಒಂದು ಆಶೆಯಾಗಿತ್ತು.

ಮಕ್ಕಳ ಮದುವೆಗೆ ದಿನ ನಿಶ್ಚಯವಾಗಿ ಹೆಣ್ಣುಗಳನ್ನು ಹುಡುಕತೊಡಗಿದರು. ಹೆಮ್ಮಕ್ಕಳಿದ್ದ ಎಷ್ಟೋ ತಂದೆಗಳು ಮೇಸ್ತ್ರಿಯವರ ಮಕ್ಕಳಿಗೆ ತಮ್ಮ ಮಕ್ಕಳನ್ನು ಕೊಡಲು ಸಿದ್ಧರಿದ್ದುದರಿಂದ ಹುಡುಗಿಯರ ಹುಡುಕಾಟದಲ್ಲಿ ಮೇಸ್ತ್ರಿಗಳ ಬೆವರು ಹರಿಯಲಿಲ್ಲ.

ಮೊದಲನೆಯ ಮಗನಿಗೆ ೮೦೦, ಎರಡನೆಯವನಿಗೆ ೪೦೦, ಮೂರನೆಯವನಿಗೆ ೨೫೦ ಹೀಗೆ ವರದಕ್ಷಿಣೆಯು ನಿರ್ಣಯವಾಗಿ ವಿವಾಹವು ಮುಂದರಿಯಿತು.

ವರದಕ್ಷಿಣೆಯ ಮೊತ್ತಕ್ಕೆ ೫೦ ರೂಪಾಯಿಗಳನ್ನು ಕೂಡಿಸಿ ಕೆನರಾ ಬೇಂಕಿನಲ್ಲಿಡಬೇಕೆಂದು ಮೇಸ್ತ್ರಿಯವರು ಖಂಡಿತಮಾಡಿದರು.

ಮದುವೆಯ ವೆಚ್ಚಕ್ಕೇನು ಮಾಡಬೇಕು? ಮುಂಗಡವಾಗಿ ವೆಚ್ಚಮಾಡಬೇಡವೆ? ಕುಲಕ್ಕೆ ತಕ್ಕ ವಿಜೃಂಭಣೆಯಿಂದ ವಿವಾಹವು ನಡೆಯಬೇಕಾದರೆ ಒಂದೂವರೆ ಸಾವಿರ ರೂಪಾಯಿಗಳು ಅಗತ್ಯ. ಅವರು ಮಾಡುವರೇನು? ಛಿಕ್ ಚಂದ್ ಖುಬ್ ಚಂದ್ ಎಂಬ ಮುಲ್ತಾನಿಗಳಲ್ಲಿ ಹೋಗಿ ಮಹಮ್ಮದ್ ಹೊಸನಬ್ಬರವರನ್ನು ಜಾಮೀನು ನಿಲ್ಲಿಸಿ ಒಂದೂವರೆ ಸಾವಿರ ರೂಪಾಯಿಗಳ ಸಾಲವೆತ್ತಿದರು.

ಮೇಸ್ತ್ರಿಯವರಿಗೆ ಜಾತಿಬಾಂಧವರ ಮೇಲೆ ಬಹು ಭರವಸೆ. ಪರಜಾತಿಯ ಮಿತ್ರರ ಮೇಲೂ ಹೆಚ್ಚಿನ ವಿಶ್ವಾಸ. ಕರವಸ್ತ್ರದ ರೂಪದಲ್ಲಿ ಮೂರು ಸಾವಿರ ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸಿ ಐವತ್ತೈದು ರೂಪಾಯಿಗಳ ಬಿಲ್ ಕೊಟ್ಟರು. ಇನ್ನೂರ ಹದಿಮೂರು ರೂಪಾಯಿಗಳನ್ನು ಕೊಟ್ಟು ಕ್ವಾರಿಕ ಲೆಂಗಸಿಂದ ಚಪ್ಪರವನ್ನು ಹಾಕಿಸಿದರು. ಇಪ್ಪತ್ತೆರಡು ರೂಪಾಯಿ ಕೊಟ್ಟು ಒಂದು ದೊಡ್ಡ ಮಂಟಪವನ್ನು ಬಾಡಿಗೆಗೆ ತಂದರು. ಇನ್ನೂರ ಹದಿನಾರು ರೂಪಾಯಿಗಳ ಬಿಲ್ ಪಾವತಿ ಮಾಡಿ ಮನೆ ಮಂದಿಗೆ ಉಡಿಗೆತೊಡಿಗೆಗಳನ್ನು ಪಡೆದರು. ಗದ್ದಲವೇ ಗದ್ದಲ!

ಅವರ ಹಿರೇಮಗ ಗಂಗಾಧರನೆಂದವನು, ಹಣವನ್ನು ಸಂಚಯಿಸಲು, ಕಳೆಹಿಸುವುದರಲ್ಲಿ ಅವನು ತಂದೆಗಿಂತಲೂ ಜಾಣ. “ಹೌದಪ್ಪಾ, ಹೀಗೇಕೆ ವೆಚ್ಚಮಾಡುತ್ತಿರುವಿರಿ? ಜಾತಿ ಪರಜಾತಿಗಳಿಂದ ನಮಗೆಷ್ಟು ರೂಪಾಯಿ ಸಿಗಬಹುದೆಂದಾಲೋಚಿಸಿರುವಿರಿ? ಧಾರಾಳವಾಗಿ ಬರಲಿರುವ ಹಣವೆಲ್ಲಾ ನೀರಾಯಿತು! ಏನಿದ ವಿಷ್ಟಿ?” ಎಂದು ಕರೆಕರೆ ಮಾತನಾಡಿದವನು. ಮೇಸ್ತ್ರಿಯವರು ತಂದೆಯ ದರ್ಪಕ್ಕನುಸಾರವಾಗಿ “ಆ ಲೆಕ್ಕ ನಿನಗೇಕೆ? ೩೦೦೦ ಆಮಂತ್ರಣ ಪತ್ರಿಕೆಗಳು ಹೊರಗೆ ಹೋಗಿವೆ. ಅರ್ಧಕ್ಕರ್ಧ ಮಿತ್ರರಾದರೂ ಬರದಿದ್ದಾರೇ? ಬಂದರೆ ಬರಿಗೈಯಲ್ಲಿ ಬರುತ್ತಾರೆಯೇ? ನಾನು ಹಾಗೆಲ್ಲ ಮೂಢನಲ್ಲ” ಎಂದರು.

ಅತಿ ವಿಜೃಂಭಣೆಯಿಂದ ಮದುವೆಯು ಕೊನೆಗಂಡಿತು. ಸಂಗ್ರಹವಾದ ದುಡ್ಡಿನ ಲೆಕ್ಕ ಮಾಡಲು,ನೋಡುವುದೇನು?—ಜಾತಿ ಪರಜಾತಿಗಳಿಂದ ಒಟ್ಟು ಏನ್ನೂರ ಮೂರು ರೂಪಾಯಿಗಳು ಕೂಡಿದ್ದುವು. ದುರ್ದೈವವು ಅಲ್ಲೇ ನಿಲ್ಲಲಿಲ್ಲ. ಮೂವರು ವಧುಗಳ ಕಡೆಗಳಿಂದಲೂ ಒಟ್ಟು ೩೦೦ ರೂಪಾಯಿ ಕಡಮೆ ವರದಕ್ಷಿಣೆ ಬಂತು. ಎಂಟು ನೂರು ಕೊಡುವೆವೆಂದವರು ೭೫೦ ಇಟ್ಟರು. ೪೦೦ ಕೊಡುವೆವೆಂದವರು ೩೦೦ ಇಟ್ಟರು. ೨೫೦ ಕೊಡುವೆವೆಂದವರು ೨೦೦ ಇಟ್ಟರು. ಹೇಳಲೇನು? ಮೇಸ್ತ್ರಿಯವರಿಗೆ ಬರಸಿಡಿಲು ಬಡೆದಂತಾಯಿತು. ಒಟ್ಟು ವೆಚ್ಚದ ಪಟ್ಟಿ ತಯಾರಿಸಿದರು. ಎಷ್ಟು ಉಳಿಯುತ್ತದೆಂದು ತವಕದಿಂದ ಲೆಕ್ಕವಿಟ್ಟರು. ಎಲ್ಲಾ ಖರ್ಚು ಕಳೆದು ೨೦೩ ರೂಪಾಯಿಗಳು ಉಳಿದುವು.

ಅವರ ಆಶಯಗಳೆಲ್ಲಾ ಗಾಳಿಗೋಪುರವಾದುವು. ಮುಲ್ತಾನಿಗಳ ಹುಂಡಿಯನ್ನು ತುಂಬ ಫುದಕ್ಕಾಗಿ ಟೌನ್ ಕೋಪರೇಟಿವ್ ಸೊಸೈಟಿಯಿಂದ ೧೦೦೦ ರೂಪಾಯಿ ಸಾಲ ಪಡೆದರು. ಹೊಸತಾಗಿ ಮನೆಗೆ ಬಂದ ಹುಡುಗಿಯರ ಹಲಕೆಲವು ಆಭರಣಗಳು ಜಯಲಕ್ಷ್ಮೀ ಬೇಂಕಿಗೆ ಹೋದುವು.

ಈಗಿನ ಸ್ಥಿತಿಯ ಚಿತ್ರವು ಹೀಗಿದೆ. ಮೇಸ್ತ್ರಿಯವರ ಮನೆಯಲ್ಲಿ ಆನಂದದ ಚಿಹ್ನೆಯಿಲ್ಲ. ಸಂಬಾರ ಜೀನಸಿನ ಅಂಗಡಿಯ ಕೃಷ್ಣಪ್ರಭುಗಳು ವಾರಕ್ಕೆರಡಾವರ್ತಿ ಮನೆಗೆ ಬಂದು ಕರ್ಚು ಬಿಸಿ ಮಾಡುತ್ತಾರೆ. ಸಂಬಳವಾಗಿ ಬಂದ ಹಣದಲ್ಲಿ ಬಹ್ವಂಶ ಬೇಂಕಿಗೆ ಸಲ್ಲುತ್ತಿದೆ. ಮನೆಯಲ್ಲಿ ಊಟಕ್ಕೂ ಬರಗಾಲವಾಗಿದೆ. ಈ ವಿವಾಹವು ಜರಗಿದ ನಾಲ್ಕಾರು ತಿಂಗಳುಗಳೊಳಗೆ ಮೇಸ್ತ್ರಿಯವರ ಗೃಹಕೃತ್ಯವು ತಾಳಿದರೂಪವನ್ನುವಿವರಿಸಲು ನಮಗೆ ವಿಷಾದವಾಗುತ್ತದೆ. ನೆರೆಹೊರೆಯ ಲಿಗೋರಿ ಸೋಜರ ಮನೆಯ ಅಕ್ಕಿಯನ್ನು ಸಾಲವಾಗಿ ತಂದರೆ ನಡುಕತ್ತ ಎಲ್ಲರಿಗೂ ಊಟ. ರಾತ್ರೆಯಲ್ಲಿ ಎಷ್ಟೋ ಸಲ ಉಪವಾಸ ಮಲಗಿದುದೂ ಉಂಟು.

ಈಗ ಮೇಸ್ತ್ರಿಯವರು ಹುಚ್ಚರಂತಾಗಿ ಒಮ್ಮೊಮ್ಮೆ “ಜಾತಿಯವರು ಸತ್ತರು! ಮಕ್ಕಳ ಮದುವೆ ಸತ್ತಿತು! ಏಕೆ ದೇವರೆ, ಇಂತಹ ಕಷ್ಟ ಕೊಟ್ಟೇ?” ಎನ್ನುತ್ತಿದ್ದಾರೆ.

ಗಂಗಾಧರನು ತಂದೆಯನ್ನು ಟೀಕಿಸುವುದರಲ್ಲೀಗ ಪ್ರವೀಣನಾಗುತ್ತಾ ಬಂದಿರುವನು— “ಹಾಗೆಲ್ಲ ಆಡಂಬರಕ್ಕಾಗಿ ವೆಚ್ಚಮಾಡಬೇಡಿ” ಎಂದು ಹೇಳಿದಾಗ ನನ್ನನ್ನು ಗದರಿಸಿದಿರಿ. ಈಗ ನಿಮ್ಮ ದರ್ಬಾರಿನಿಂದಾಗಿ ನಿಮಗೂ ಊಟವಿಲ್ಲ, ನಮಗೂ ಇಲ್ಲದಂತಾಗಿದೆ. ನೀವು ತಂದೆಯವರಾದರೇನು?—ನಮಗೆ ಹೀಗೂ ಮದುವೆಮಾಡಬೇಕೆಂದು ನಾವು ಹೇಳಿರುವೆವೇ? ಇನ್ನು ಇನ್ನೂ ಹೀಗೆಯೇ ಆದರೆ ನಾವು ಬೇರೆ ಮನೆಯಲ್ಲೇ ಇರುವುದು ಲೇಸೆಂದು ತೋರುತ್ತದೆ”

ಪಾಪ! ಮೇಸ್ತ್ರಿಯವರು ಹೇಗೆ ಉಸಿರೆತ್ತುವರು? ಉಸಿರಿಗೂ ಒಂದು ಶಕ್ತಿ ಬೇಡವೇ

—ಜಾ

# ನಗಬಾರದು.

[ಸ್ವಕಪೋಲಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ಭಿಕ್ಷುಕ.—ಅಯ್ಯಾ ಹೊಟ್ಟೆಗೆ ಅನ್ನವಿಲ್ಲದೆ ನಾಲ್ಕು ದಿನಗಳಾದುವು. ಮನೆಯಲ್ಲಿ ಮಕ್ಕಳು ಮರಿಗಳೂ ಉಪವಾಸದಿಂದ ಬಾಯಿಬಿಡುತ್ತವೆ. ದಯವಿಟ್ಟು ಏನಾದರೂ

ರಾವ್ ಬಹದೂರ್ ಮಹಸೀಯರು—ಏ! ನಡೆ ನಡೆ! ಈಗ ಗಡಬಿಡಿ ಮಾಡಬೇಡ. ನನಗೆ ಕ್ವೆಟ್ಟಾ ಭೂಕಂಪದ ಬಡಬಗ್ಗರಿಗೋಸ್ಕರ ಫಂಡು ಕೂಡಿಸುವ ಸಭೆಗೆ ಅಧ್ಯಕ್ಷನಾಗಿ ಹೋಗಬೇಕಾಗಿದೆ. ನಡುವೆ ನಿನ್ನದೇನು ಪೀಡೆ! ನಡೆ ಮುಂದೆ!

× × × ×

ಗಂಡ—ನನ್ನ ವೈರಿ ಸಿಟ್ಟಿನಿಂದ ನನ್ನ ರುಂಡವನ್ನು ಕಡಿದು ನರಿಗಳಿಗೆ ಹಾಕುವೆನೆಂದು ಶಪಥ ಕಟ್ಟಿದ್ದಾನೆ

ಹೆಂಡತಿ—ಹಾಗಾದರೆ ಬೇಗನೆ ನಿಮ್ಮ ಕಿವಿಯ ವಜ್ರದ ಒಂಟಿಗಳನ್ನು ನನಗೆ ಕೊಡಿ. ನಾನು ಅವುಗಳನ್ನು ಸುರಕ್ಷಿತವಾಗಿ ಇಡುವೆನು

ಕೆ ಪ್ರಭಾಕರ ರಾವ್

ಒಬ್ಬ ವೈದ್ಯನು ಒಂದು ಸಭೆಯಲ್ಲಿ ಭಾಷಣಮಾಡುತ್ತಾ—

ವೈದ್ಯ—ಮಹಸೀಯರೇ ಒಳ್ಳೇ ಶುದ್ಧವಾದ ಬಾವಿಯ ನೀರಿನಿಂದ ಜೀವಕ್ಕೆ ಯಾವ ಅಪಾಯವೂ ಬರಲಾರದು

ಒಬ್ಬ—(ಎದ್ದು ನಿಂತು) ಏನು ಸ್ವಾಮಿ ವೈದ್ಯರೇ ಎಂಥಾ ಮಾತುಗಳನ್ನಾಡುತ್ತೀರಿ? ಆಚೆ ಮನೆ ರಂಗರಾಯರ ಬಾವಿಯಲ್ಲಿ ಒಬ್ಬ ಗೃಹಸ್ಥನು ಬಿದ್ದು ಶುದ್ಧವಾದ ನೀರನ್ನು ಕುಡಿದು ಸತ್ತೇಬಿಟ್ಟನಲ್ಲಾ!

\+ \+ \+ \+

ವಕೀಲ—ಏನಯ್ಯಾ ಈ ಕೇಸನ್ನು ದೃಢೀಕರಿಸಲಿಕ್ಕೆ ಬೇರೆ ಏನಾದರೂ ‘ರಿಕಾರ್ಡು’ ಇದೆಯೇ?

ಕಕ್ಷಿಗಾರ—ಉಂಟು ಸ್ವಾಮಿ, ರಿಕಾರ್ಡು ಮಾತ್ರವಲ್ಲ ಗ್ರಾಮಫೋನ್ ಸಹಾ ಇದೆ ಕಾಣಿ

\+ \+ \+ \+

ಬಾಡಿಗೆ ಮನೆಯನ್ನು ಕೇಳಲು ಬಂದವನನ್ನು ಕುರಿತು—

ರಾಮರಾಯ—ನೀನು ಮುಂಚೆ ಯಾವ ಮನೆಯಲ್ಲಿದ್ದಿ?

ಬಂದವ—ಸೆರೆಮನೆಯಲ್ಲಿದ್ದೆ ಸ್ವಾಮಿ

ಬಿ ರಾಮು ರಾವ್

ತಂದೆಯು ಮಗನಿಗೆ ಬುದ್ಧಿವಾದವನ್ನು ಹೇಳುತ್ತಾ:—ಮಗೂ, ಇತರರಿಗೆ ಹೊಡೆಯಕೂಡದು, ಬಯ್ಯಕೂಡದು, ಇದು ಒಳ್ಳೆಯವರ ಲಕ್ಷಣ.

ಮಗ—ಹಾಗಾದರೆ ಅಪ್ಪಾ, ನೀನೇಕೆ ಅಮ್ಮನಿಗೆ ನಿತ್ಯವೂ ಹೊಡೆಯುವೆ, ಬಯ್ಯುವೆ?

\+ \+ \+ \+

ಉಪಾಧ್ಯಾಯ—(ಭೂಪಟವನ್ನು ತೋರಿಸಿ) ಗೋವಿಂದಾ, ಬಿಹಾರು ಎಲ್ಲಿದೆ?

ಗೋವಿಂದ—ಬಿಹಾರು ಭೂಕಂಪದಿಂದ ನಾಶವಾಗಿದೆಯಲ್ಲವೆ ಸಾರ್?

\+ \+ \+ \+

ಪೋಲೀಸ್—(ಒಬ್ಬನನ್ನು ಹಿಡಿದು) ನಿನ್ನನ್ನು ಕಳ್ಳತನದ ಆರೋಪತನದ ಮೇರೆಗೆ ಕೈದು ಮಾಡಲಾಗಿದೆ

ಅವನು—ನಾನು ಕಳ್ಳನಾಗಿದ್ದರೆ ನಿಮಗೆ ಸಿಕ್ಕುತ್ತಿದ್ದೆನೇನಯ್ಯಾ?

\+ \+ \+ \+

ಉಪಾಧ್ಯಾಯ—ಈ ಪಾಠವನ್ನು ಕಲಿತುಕೊಂಡು ಬರಬೇಕೆಂದು ನಿನ್ನೆ ನಾನು ಹೇಳಲಿಲ್ಲವೆ?

ವಿದ್ಯಾರ್ಥಿ—ನೀವು ಓದಿಕೊಂಡು ಬರುವಂತೆ ಹೇಳಿದ್ದೀರಿ. ನಾನು ಓದಿಕೊಂಡು ಬರುತ್ತೇನೆ ಸಾರ್

ಕೆ ಎಸ್ ಆರ್. ಶೆಟ್ಟಿಗಾರ

ಉಪಾಧ್ಯಾಯ—(ರಾತ್ರೆ ನಕ್ಷತ್ರಗಳನ್ನು ತೋರಿಸುತ್ತ) ಆ ಬಾಲಚಂದ್ರನನ್ನು ನೋಡಿದರೆ ಸಾಕಲ್ಲವೆ? ಎಷ್ಟೊಂದು ಮನೋಹರವಾಗಿರುವನು?

ಶಿಷ್ಯ—ಹೌದು ಸಾರ್, ಆದರೆ ಚಂದ್ರನಿಗೂ ಬಾಲವಿದೆಯೊ? ಸಾರ್

ಕೆ ಗಣಪತಿ ಭಟ್ಟ.

ಸಾಹುಕಾರ—ನಮಗೆ ಮನಿಯಾರ್ಡರುಗಳು ಇವೆಯೋ?

ಟಪ್ಪಾಲು ಪೇದೆ—ರಿಜಿಸ್ಟ್ರಿ ನೋಟೀಸು ಇದೆ. ಕೊಡಲೋ?

ಸಾಹುಕಾರ—ವಿಳಾಸ ತಪ್ಪಿಬಿದ್ದಿರಬಹುದು. ನನ್ನ ಹೆಸರಿನವರು ಇನ್ನೊಬ್ಬರು ಇರುವರು. ಅವರಿಗೆ ಕೊಟ್ಟುಬಿಡು.

ಕೆ ಅಚ್ಯುತ ಕೃ

ಕೃಷ್ಣ—ಗೋಪಾಲ ನಾನು ಇಂದು ಯಾರೂ ಬರೆಯದ ವಿಷಯವನ್ನು ಸ್ವದೇಶಾಭಿಮಾನಿಗೆ ಬರೆಯಬೇಕೆಂದಿರುವೆನು. ಏನು ಬರೆಯಲಿ?

ಗೋಪಾಲ—ಕೃಷ್ಣಾ, ನಿಮ್ಮ ಸ್ವದೇಶಾಭಿಮಾನಿಯನ್ನು ಫ್ರೀ ಕಳುಹಿಸಿರೆಂದು ಬರೆ

[ಅನೇಕರು ಹೀಗೆ ಬರೆಯುತ್ತಾರೆ—ಆದರೆ ನಮ್ಮದು ಬಹು ಅಗ್ಗವಾದ ಪತ್ರಿಕೆಯಾದುದರಿಂದ ಅದನ್ನು ಫ್ರೀಯಾಗಿ ಕಳುಹಿಸಲಾಗುವುದಿಲ್ಲ. ಸಂ. ಸ್ವ.]

"ನವರತ್ನಾ" **ದ್ರಾಕ್ಷಾಸವ** (ಔಷಧಯುಕ್ತವಾದ)

ಅತ್ಯುಚ್ಚ ತರಗತಿಯ ದ್ರಾಕ್ಷೆ ಹಣ್ಣಲ್ಲದೆ ಮತ್ತಿನ್ನಿತರ ಎಷ್ಟೋ ಔಷಧಗಳನ್ನು ಕೂಡಿಸಿರ್ರು ವುದರಿಂದಲೆ ಇದನ್ನು 'ದ್ರಾಕ್ಷಾಸವ' ಔಷಧಯುಕ್ತವೆಂದು ನಾಮಕರಣಮಾಡಲಾಗಿದೆ

ಅಗ್ನಿಮಾಂದ್ಯ, ಹೊಟ್ಟೆಯುರಿ, ಕೆಮ್ಮು, ವಾಂತಿ, ಸಾಮಾನ್ಯ ನರಗಳ ಅಕ್ರಮ, ಸ್ಮೃತಿನಾಶ, ನಿದ್ರಾನಾಶ, ಮಲನಿರೋಧ ಮತ್ತು ಇತರ ರೋಗಗಳಲ್ಲಿ ಇದು ಅಪೇಕ್ಷಿತ ಫಲವನ್ನು ಕೊಡುವುದು

ತೀವ್ರ ಮತ್ತು ದೀರ್ಘಕಾಲದ ಶ್ವಾಸಕೋಶ ಸಂಬಂಧವಾದ ರೋಗಗಳಲ್ಲಿ ಇದು ಬಲವರ್ಧಕ ರಸಾಯನವಾಗಿ ಕೆಲಸಮಾಡುತ್ತದೆ—ಕೆಮ್ಮನ್ನು ಗುಣಪಡಿಸುತ್ತದೆ ನಾಯಿಕೆಮ್ಮು ಇದ್ದಾಗ ಮಕ್ಕಳಿಗೆ ಇದನ್ನು ಉಪಶಮನೋಪಕಾರಿಯಾಗಿ ಭರವಸೆಯಿಂದ ಕೊಡಬಹುದು ಶೀತಕಾಲ ಮತ್ತು ಮಳೆಗಾಲದಲ್ಲಿ ಕೆಮ್ಮು ಸರ್ವಸಾಮಾನ್ಯವಾಗಿ ಇರುವ ಕಾರಣ ಇದನ್ನು ಸಕಾಲದಲ್ಲಿ ಕೊಟ್ಟು ಸುರಕ್ಷಿತವಾಗಬಹುದು

ಕ್ರಯ 24 ಔನ್ಸ್ ರೂ. 2-0-0 16 ಔನ್ಸ್ ರೂ. 1-8-0.
8 ಔನ್ಸ್ ರೂ 0-13-0.

ತಯಾರಿಸುವವರು:— **ನವರತ್ನಾ ಫಾರ್ಮಸಿ, ಕೊಚ್ಚಿ**

ಏಜಂಟರು — **ಪೊಪ್ಯುಲರ್ ಸ್ಟೋರ್ಸ್,** ಮಂಗಳೂರು

ಕೊಚ್ಚಿಯ ನವರತ್ನ ಫಾರ್ಮಸಿಯವರ "ದ್ರಾಕ್ಷಾಸವ" ಔಷಧಿಯು ದೇಹಕ್ಕೆ ಶಕ್ತಿಯನ್ನೂ ಉತ್ತೇಜನವನ್ನೂ ಕೊಡತಕ್ಕದೆಂದು ಸಂತೋಷದಿಂದ ಹೇಳಬಲ್ಲೆ ಮಲೇರಿಯಾಜ್ವರ, ಶ್ವಾಸಜ್ವರ, ಪ್ರಸವ ಪ್ರಸವ, ಸರಿಯಾದ ಆಹಾರವಿಲ್ಲದಿರೋಣ ಮತ್ತು ದೇಹಕೃಶವಾಗುವುದು ಇತ್ಯಾದಿಗಳಿಗೆ ಚಿಕಿತ್ಸೆಯಾದ ಮೇಲೆ ಪುಷ್ಟಿಕಟ್ಟಿ ಬಲಬರುವುದಕ್ಕೆ ಈ ಔಷಧಿಯೂ ಬಹಳ ಪ್ರಯೋಜನಕಾರಿ

ರಾಯಪುರಂ-ಮದರಾಸು 9—9—1933 } (ರುಜು) ಪಿ ವೆಂಕಟಗಿರಿ, ಎಂ ಬಿ
ಲೆಕ್ಚರರ್ ಇನ್ ಮಿಡ್ವೈಫರಿ ರಾಯಪುರಂ ಮೆಡಿಕಲ್ ಸ್ಕೂಲ್
ರೆಸಿಡೆಂಟ್ ಮೆಡಿಕಲ್ ಆಫೀಸರ್ ಇಂಗ್ಲಿಷ್ ಹಾಸ್ಪಿಟಲ್
ರಾಯಪುರಂ



**ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಕೊಲ್ಲುವ ಸಂಧಿಯನ್ನು ಕಳೆದುಕೊಳ್ಳಬೇಡಿ.**

ಎಂತಹ ಹುಳುಕಡ್ಡಿಯನ್ನಾದರೂ ನಮ್ಮ ಹುಳುಕಡ್ಡಿ ಮಲಾಮು 24 ಗಂಟೆಗಳೊಳಗಾಗಿ ವಾಸಿ ಮಾಡುತ್ತದೆ. ಇದನ್ನು ಪ್ರಸಿದ್ಧಿಗೆ ತರುವುದಕ್ಕಾಗಿ ಒಂದೇ ಸಲ 24 ಡಬ್ಬಿಗಳನ್ನು 3 ರೂಪಾಯಿಗೆ ಕೊಂಡುಕೊಳ್ಳುವವರಿಗೆ ಬ್ಯಾಂಡ್ ಸಹಿತ 1 ಹೆಮ್ಮೆ ಕೈಗಡಿಯಾರ, ಚೈನ್ ಸಹಿತ 1 ಇನ್‌ಪೆಂಟ್ ಪಾಕೆಟ್ ಗಡಿಯಾರ 10 ವರ್ಷ ಗ್ಯಾರಂಟಿಯುಳ್ಳ ಅಲಾರಮ್ ಟೈಂಪೀಸ್, ಬ್ಯಾಟರಿ ಸಹಿತ 1 ಟಾರ್ಚ್ ಲೈಟ್, ಗೋಲ್ಡ್ ನಿಬ್ಬಿನ 1 ಫೌಂಟನ್ ಪೆನ್, 1 ಇಮಿಟೇಶನ್ ಪರ್ಲ್ ನೆಕ್ಲೇಸ್, ಸೇಫ್ಟಿ ರೇಜರ್ ಬ್ಲೇಡ್ ಸಹಿತ ಅಥವಾ ವಾಟರ್‌ಪ್ರೂಫ್ ಕೋಟು (ಅರಶಿ ಮತ್ತು ಬಣ್ಣ ತಿಳಿಸಬೇಕು) ಉಚಿತವಾಗಿ ಕೊಡಲ್ಪಡುವುದು ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ ಇಷ್ಟವಿಲ್ಲದಿದ್ದರೆ ಹಣ ವಾಪಾಸ್

International Trading Co, Post Box No 6714 (B IT) CALCUTTA
C P 9/8



**Kanara Watch Works, Mangalore.**

Suppliers of standard Watches, Time pieces, Wrist watches Clocks and various kinds of sporting materials etc, Quality and price unassailable Visit our Show Room and be satisfied



# 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು

**ಧಾತುಪುಷ್ಟಿ ಲೇಹ**

(ಸುವರ್ಣ ... ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತರೀತಿಯಿಂದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ... ಹೋಗುವಿಕೆ ... ಬದ್ಧತೆ ಗೆಳಜ್ವರ ... ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನು ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಸಂಭೋಗಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ... ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

**ಬಾಲಗ್ರಹ ಗುಟಿಕೆ**

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ ಮೂರ್ಛೆ, ಅವಶ್ಯಕ ಮೊಲೆಹಾಲು ಕುಡಿಯದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ 3 ಬಾಟ್ಲಿಗಳಿಗೆ ರೂ 1 12 0




ಅಲ್ಲದೆ ಬಾಲಗ್ರಹ ... ಬಾಲಗ್ರಹ ... ಸಹಾ ದೊರೆಯುತ್ತವೆ ... ಬಾಟ್ಲಿ 1ಕ್ಕೆ 8 ಆಣೆ
ಬಾಲಗ್ರಹ ... ಬಾಟ್ಲಿ 1ಕ್ಕೆ ರೂ 1 0-0

**ಮಲೇರಿಯಾ ನಿವಾರಿಣಿ**

ಮಲೇರಿಯಾ ... ಬರುವ ಜ್ವರ ಚಾತುರ್ಥಿಕ ಜ್ವರ, ಗಡ್ಡೆ ಬಂದ ಜ್ವರ ಪುರಾಣ ಜ್ವರ ... ಜ್ವರ ... ಇವುಗಳನ್ನೆಲ್ಲಾ ಹೋಗಲಾಡಿಸಿ ... ಉಂಟು ಮಾಡುವುದು ... ಜ್ವರ ... ಗಳಲ್ಲಿ ... ಇದಕ್ಕಿಂತ ಉತ್ತಮವಾದ ಔಷಧಿ ... ಇಲ್ಲ

ಬಾಟ್ಲಿ 1ಕ್ಕೆ ರೂ 1 8-0 ... ಬಾಟ್ಲಿ 1ಕ್ಕೆ ಆಣೆ 13

**ಮೇಹಕುಠಾರ**

ಮೂತ್ರ ... ಮೂತ್ರ ಹೋಗುವಾಗ ... ಮೂತ್ರದಲ್ಲಿ ... ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ... ಬಾಟ್ಲಿ 1ಕ್ಕೆ ರೂ 2-0-0 ಮಾತ್ರ

**ಎಮ್ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು**

ನಮ್ಮ ಔಷಧಿ ಸಿಕ್ಕುವ ಸ್ಥಳ— ಶ್ರೀ ರಾಮಾ ಸ್ಟೋರ್ಸ್ ಹೌಸ್ ಶ್ರೀರಾಮ ಪೇಟೆ ಕಾಸರಗೋಡು. ಡಾ॥ ಶ್ರೀನಿವಾಸ ಪೈ, ... ಮೆಸರ್ಸ್ ಮುಲ್ಲರ್ ಪಿಟಿಸ್ ಬ್ರದರ್ಸ್ 91 ... ಮೆಸರ್ಸ್ ಕಾಮತ್ ಎಂಡ್ ಕೊ, ... ಗಿರಿಗಾಂವ್, ... ರೋಡ್ ಮುಂಬಾಯಿ, ನಂ. 4 ದಿ ಪಪ್ಯುಲರ್ ಹೋಟೆಲ್, ... ಫಾರ್ಮಸಿ ...



# The Laxhmi Insurance Company Ltd, Lahore.

# ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

**ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ**

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

**1924. ಪ್ರಗತಿ ಸೂಚನೆ 1934.**

**ವರ್ಷದ ಅಂತ್ಯ ಎಪ್ರಿಲ್ 30ಕ್ಕೆ**

| ಕೆಲಸದ ಫಲಿತಾಂಶ. | | ಲೈಫ್ ಫಂಡ್ |
|---|---|---|
| 1925— | ರೂ 21,24,250 | 500 |
| 1929— | ರೂ 1 66 18,620 | 9,33,900 |
| 1934— | ರೂ 46,77,223. | 49 08,771 |

ಕ್ಲೈಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ-57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

**ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.**

**The Laxhmi Insurance Co, Ltd,**
*Madras Branch,*
No 6, Sankuram Chetty St, G. T. MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕರ ರಾಮ ಚೆಟ್ಟಿ ಬೀದಿ ಜಿ. ಟಿ ಮದ್ರಾಸು

# The Canara Banking Corporation Udipi, Ltd.

**Head office:—UDIPI,** S. K. (Incorporated in British India) TEL. 'BANKING' **ESTD. 1906.**

**Branches:—1 Udipi, 2 Coondapoor, 3. Car Street, Mangalore, 4 Shimoga, 5 Madras** (George Town), **6 Bunder Mangalore, 7 Mercara** (North Coorg), **& 8 Virarajendrapet** (South Coorg)

## SAVINGS BANK ACCOUNTS.

From 1st September 1935 arrangement for withdrawal by cheques can be made

## ಸೇವಿಂಗ್ಸ್ ಬೇಂಕ್ ಲೆಕ್ಕ.

1935ನೇ ಸಪ್ಟಂಬರ 1ನೇ ತಾರೀಕಿನಿಂದ ಚೆಕ್ಕಿನ ಮೂಲಕ ಹಣವನ್ನು ಹಿಂತೆಗೆಯುವಂತೆ ಮಾಡಲಾಗುವುದು

---

Regd.

## ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯು ಮುಲಾಮು ಇಲ್ಲಿಯ ವರೆಗಿನ ... ಎಲ್ಲಿಯೂ ... ಪಸಿಯ ಹುಳು ಕಡ್ಡಿಯ ... "ರೈಸಿಂಗ್ ಎಂಡ್ ಸ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

### ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ವಿಶೇಷವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

### ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮ ಗಳಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು


---

## NOTICE.

Sealed tenders for the erection of a Building for The Bombay Life Assurance Co., Ltd. at Udipi will be received by the undersigned up to 4 P. M. on Monday the 16th day of September 1935.

Plans, Conditions of Contract and Specification of work may be seen at the Office of the undersigned where copies of the form of tender can be obtained on payment of a fee of Rs. 3 per copy.

The owners do not bind themselves to accept the lowest or any tender.

Udipi S. K.,
10th Aug. 1935.

**Kochikar Brothers,**
*[illegible]*
Bombay Life Assurance Co. Ltd.

---

## ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರ ಮಾಡಿದ ಅತ್ಯುತ್ತಮ ಔಷಧ. ಇದು ಗರ್ಭಕೋಶದೊಳಗಣ ಎಲ್ಲಾ ತರದ ನ ಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸಮ್ಯಸ್ಥಾನದಲ್ಲಿ ನಿಲ್ಲಿಸುವುದು. ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು

## ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ

ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧಗಳೂ, ಶಾಸ್ತ್ರೋಕ್ತ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಫೌಂಟನ್ ಪೆನ್ನು ಶಾಯಿಗಳೂ ತಯಾರಾಗುತ್ತವೆ

ಪಟ್ಟಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ —

**ವೆಂಕಟ್ರಾಯ ಅಪ್ಪ ಬಾಳಿಗ—ಮೆನೆಜಿಂಗ್ ಡೈರೆಕ್ಟರ್.**

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ.

ಹೆಡ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋಗಳು.-(1) ರಥಬೀದಿ ಮಂಗಳೂರು. (2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್‌ಟೌನ್ ಮದ್ರಾಸು (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2.

**Karnataka Chemical and Pharmaceutical Works, Ltd., Udipi. (South India)**

ವಾರ್ಷಿಕ ಚಂದಾ: 2 ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M. 498

ಟಪ್ಪಾಲು ಹಾಸಲು ಸಲ್ಲಿ... 9-12-0

?
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:-
RAMA SNUFF
The charm of Snuff Users

# ಸ್ವದೇಶಾಭಿಮಾನಿ

SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in
THE BOMBAY LIFE
Kochikar Brothers,

ESTABLISHED 1906

(ಶ್ರೀ ... ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿಸಲ್ಪಟ್ಟದು.)
ಪ್ರತಿ ... ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible]

ಮಂಗಳೂರು ತಾ. ೬ನೇ ಶುಕ್ರವಾರ ಸಪ್ಟಂಬರ ೧೯೩೫. (6-9-'35)

ಮಿಸ್. ಮಾಧುರಿ

ಮಿಸ್. ಮಾಧುರಿ

# ಚಕ್ರ

(All Rights Reversed)

ದಿವಂಗತ ಮೌ॥ ಮಹಮ್ಮದಾಲಿಗಳವರಿಗೆ—ಚೋಟಾ ಸಾಯ್ಬನು ಮಾಡುವ ಸಲಾಂ

ತಮಗಿಲ್ಲಿ ತಿಳಿಯಬಯಸುವುದೇನೆಂದರೆ, ನಾನು ಕಳೆದ ವಾರ ತಮ್ಮೂರಿನ ವಿ. ಜೆ. ಪಟೇಲರಿಗೊಂದು ಪತ್ರವನ್ನು ಬರೆದಿದ್ದೆ. ಅವರಿಗೆ ಬರೆದಾಗ ತಮಗೊಂದನ್ನು ಬರೆದು ಇಲ್ಲಿಯ ಸ್ಥಿತಿಗತಿಗಳನ್ನು ವಿವರಿಸಬೇಕೆಂದು ತೋಚಿಸಿದೆ. ಆದರಿಂದಾಗಿ ನಾನಿದನ್ನು ಬರೆಯಬೇಕಾಯಿತು.

× × × × × ×

ತಮ್ಮ ಸಹೋದರ ಮೌಲಾನಾ ಶೌಕತಾಲಿಯವರ ಪತ್ರಗಳು ಬರುತಿಲ್ಲವೆಂದು ಗೊತ್ತಿದೆ. ಈಗ ತಮ್ಮನ್ನು ಯಾವ ಮಿತ್ರನೂ ಮೂಸಿ ನೋಡುವುದಿಲ್ಲವೆಂಬ ಸತ್ಯವನ್ನು ಅರಿತು ಬಹು ವ್ಯಥಿತನಾಗಿರುವೆನು.

× × × × × ×

"Where the liberty of India is concerned I am an Indian first, Indian second and Indian third" ಎಂದು ಅಂದು ತಾವು ರೌಂಡ್‌ಟೇಬಲ್‌ನಲ್ಲಿ ಗರ್ಜಿಸಿದ್ದೀ ಬಂತು, ಈಗ ಆ ಸುದ್ದಿಯೇ ಇಲ್ಲ. ತಾವು ಕಲಿಸಿದ ಪಾಠವನ್ನು ಜನರಾಗಿ ಕಲಿಯುವುದಿಲ್ಲ. ಕಲಿಸಿದರೆ ತಿಳಿಯುವುದಿಲ್ಲ.

× × × × × ×

ಇಲ್ಲಿ ಶೌಕತಾಲಿಯವರ ಪ್ರತಾಪವು ಈಗ ಮುಂಚಿನಂತಿರುವುದಿಲ್ಲ. ಅವರು ಗಾಂಧಿಜಿಯವರ ಪಾರ್ಟಿಯನ್ನು ಬಿಟ್ಟುಬಿಟ್ಟದರಿಂದಾಗಿ. ಅವರಿಗೆ ಈ ಅವಸ್ಥೆಯು ಬಂದಿತೆಂದು ಒಂದು ಹಳೆಯ ನ್ಯೂಸ್ ಪೇಪರಿನ ಹಳೆಯ ಕಾಗದದಲ್ಲಿ ಹಳೆಯ ಅಕ್ಷರದಲ್ಲಿ ಈ ಹಳೆಯ ಕನ್ನಡಕವನ್ನುಪಯೋಗಿಸಿ ತಿಳಿದುಕೊಂಡೆ. ಮೊನ್ನೆ ಪತ್ರ ಒಂದು ಸುದ್ದಿ ಎದ್ದಿತು. ಶ್ರೀಯುತ ಮೌಲಾನರು ಪುನಃ ಭಾರತೀಯ ಸ್ವಾತಂತ್ರ್ಯ ಸಾಧನೆಗಾಗಿ ಬಾಬು ರಾಜೇಂದ್ರ ಪ್ರಸಾದರೊಡನೆ ಮಾತುಕತೆ ನಡೆಸಲಿರುವರೆಂದು.

× × × × × ×

ಸ್ವಾತಂತ್ರ್ಯವೆಂದರೇನೆಂದು ತಮಗೆ ಅರಿದು. ಭಾ ಎಂದರೆ ಭಾರವಾಗಿರುವ ಹೊಟ್ಟೆ. ತ್ ಎಂದರೆ 'ತನ್ನದು' ಒಟ್ಟರೆ ಹೇಳುವುದಾದರೆ—"ಭಾರತ್"ವೆಂದರೆ 'ತನ್ನ ಭಾರವಾದ ಹೊಟ್ಟೆ" ಇದರ ಸ್ವಾತಂತ್ರ್ಯಕ್ಕಾಗಿಯೇ ಹೋರಾಡುವವರ ಈ ಲೋಕದಲ್ಲಿ ಸಾವಿರದಲ್ಲಿ ೯೯೯ ಜನರೆಂದು ಮಹಾರಾಜಶ್ರೀ ಸ್ವಾಬನ ಅಭಿಪ್ರಾಯ [ಮಹಾರಾಜಶ್ರೀ ಎಂದು ಆತ್ಮಪ್ರಶಂಸೆಗೆ ತೊಡಗಿದುದಕ್ಕಾಗಿ ಕ್ಷಮೆಯಿರಲಿ] ಸ್ವಾತಂತ್ರ್ಯದ ಕಹಳೆಯನ್ನಾರು ಹೆಚ್ಚು ರಭಸದಿಂದ ಊದುವರೋ ಅವರಿಗೆ ಹೆಚ್ಚು ಹಸಿವೆಯಾಗಿದೆ ಎಂದೂ, ಅವರಿಗೆ ಬಂಗ್ಲೆರಗಳ ಸಾಹುಕಾರರ ಸ್ಟೋಕಿನಲ್ಲಿರುವ ಅಕ್ಕಿಯ ಮುಡಿಗಳನ್ನು ಕೊಟ್ಟರೆ ಅವರು ಸಮಾಧಾನಗೊಂಡಾರೆಂದೂ ಅಭಿಪ್ರಾಯ.

× × × × × ×

ತಾವು ಬಂಧಿಸಿ ನುಡಿಯುತ್ತಿದ್ದ ಆ ನವಸುಧಾರಣೆಗಳು ನವವಿಧಾನಗಳಿಂದ ನವನಾಯಕರ ಮುಕ್ತಹಸ್ತದಿಂದಾಗಿ ಹೊರಗೆ ಬರಲಿವೆ. ಬೇಗನೇ ಬರೆದು ಅವುಗಳನ್ನು ಸ್ವೀಕರಿಸಬೇಕೋ ಬೇಡವೋ ಎಂದು ಆಜ್ಞಾಪಿಸಿ ಬಹಳ ಉಪಕಾರ ಮಾಡಬೇಕು. ಈಗಲೇ 'ಬೇಡ ಬೇಡ'ವೆಂದು ಲಿಬರಲ್ ಜಾತಿಯವರೂ ಹೇಳುತ್ತಿದ್ದಾರೆ.

× × × × × ×

ಸ್ವಲ್ಪ ಅಗ್ಗದಲ್ಲಿ ಸಿಗುವ ವಸ್ತುವನ್ನು ಏಕೆ ಬೇಡವೆನ್ನುತ್ತಾರೋ ನನಗೆ ತಿಳಿಯದು! "ನಿಮಗೆ ಕೊಟ್ಟರೆ ನೀವು ತೆಗೆದುಕೊಂಡು ಮನೆಗೆ ಹೋಗಿ"—ಎಂದು ನನ್ನ ಸೌಭಾಗ್ಯವತಿಯು ಮಾತ್ರ ಹೇಳುತ್ತಿದ್ದಾಳೆ ಸ್ವೀಕರಿಸಲೇ?

× + × × × ×

ಶೌಕತಾಲಿಯವರು ಪುನಃ ಕಾಂಗ್ರೆಸನ್ನು ಸೇರಬಾರದೆಂದು ಈವರೆಗೇ ಬರೆಯಿರಿ. ಹಾಗೆ ಬಿಟ್ಟರೂ ಅದೇನು ಕಾರಣ, ಅವರು ಪುನಃ ಆ ಪಾರ್ಟಿಗೆ ಸೇರಿ ಅಪಹಾಸ್ಯಕ್ಕೀಡಾಗುವುದು ಬೇಡ. ಅವರು ದೂರವೇ ಇದ್ದು ತನ್ನ ಗತಿಯನ್ನು ತಾನು ನೋಡುವುದೇ ಹಿತಕರ.

× + × × × ×

ಅವರು ಈಗಾಗಲೇ ವೃದ್ಧರಾಗಿರುವರು. ಅವರಿಗೆ ಇನ್ನು ಖ್ಯಾತಿ ಯಾಕೆ? ಅವರಿಗೆ ಹಾಗೆಯೇ ತಿಳಿಸಿರಿ! ಅಲ್ಲದೆ, ಅವರ ಕೋಪವನ್ನು ಅವರು ಬಿಟ್ಟುಬಿಡಬೇಕೆಂದು ಹೇಳುವುದಕ್ಕೆ ಮರೆಯಬೇಡಿ.

ಇಂತೀ ತಮ್ಮ

'ಸಾಯ್ಬ'.




## ನೋಟೀಸು.

ಮಂಗಳೂರು ಕಸಬಾಬಜಾರ್ ಪಂಚಾಯತ ಕೋರ್ಟಿನಲ್ಲಿ

ನ್ಯಾಯ ನಂಬ್ರ 615/1935

ಬಡ ನ ಬ್ಯಾರಿ—ಸಾವುಂಞಬ್ಯಾರಿ ಮಗ ಮಂಗಳೂರು ಶಹರು ಬಂದ್ರದಲ್ಲಿರುವವ—ವಾದಿ

ಮತ್ತು

ಹಸೈನಾರ ಬ್ಯಾರಿ— ಉಳ್ಳಾಲ ಗುಲಾಂ ಬ್ಯಾರಿ ಮಗ, ಮಂಗಳೂರು ಶಹರು ಸೈಕಿರೋಳಿಕಟ್ಟೆ ಬಜಾರ್ ಬಂದರದಲ್ಲಿರುವವ—ಪ್ರತಿವಾದಿ

ಈ ದಾವೆಯ ಪ್ರತಿವಾದಿ ಹಸೈನಾರ್ ಬ್ಯಾರಿಯವರಿಗೆ ಕೊಡುವ ನೋಟೀಸು—

ಮೇಲಿನ ವಾದಿಯು ನಿಮ್ಮ ಮೇಲೆ ರೂಪಾಯಿ 28—13—7ಕ್ಕೆ ಮಾಡಿದ ವ್ಯಾಜ್ಯವು ಇದೇ ತಿಂಗಳ ತಾ 24—9—'35ಕ್ಕೆ ತನಿಖೆಗೆ ಇಟ್ಟಿದೆ. ಸದರಿ ತಾರೀಕಿನಲ್ಲಿ ನೀವು ಕೋರ್ಟಿನಮುಂದೆ ಹಾಜರಾಗದಿದ್ದರೆ ವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

ಮಂಗಳೂರು, 30—8—'35

**M. Raghavendra Pai,**
*President*

Ested 1920] **THE** [1920ರಲ್ಲಿ ಸ್ಥಾಪಿತವಾದದ್ದು

# Kanara Enterprise Ltd.

**PUTTUR**

## ದಿ ಕೆನರಾ ಎಂಟರ್‌ಪ್ರೈಸ್ ಲಿಮಿಟೆಡ್,

ಪುತ್ತೂರು.

### ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವ್ಯವಹಾರಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur, Dated 10—4—1935.

**G. N. Lakshman Pai,**
*Secretary.*

# ಸಾಹಿತ್ಯ ಸಂಗ್ರಹ—

## ಚಲಚ್ಚಿತ್ರಗಳಿಂದ ನಾಟಕಪ್ರದರ್ಶನಕ್ಕುಂಟಾಗಿರುವ ಆಘಾತ.

ಜಯಕರ್ಣಾಟಕದಲ್ಲಿ ಶ್ರೀಮಾನ್ ಸಿ ಕೆ ವೆಂಕಟರಾಮಯ್ಯ ಎಂ. ಎ ಎಲ್ ಎಲ್. ಬಿ. ಇವರು ಹೀಗೆ ಬರೆದಿದ್ದಾರೆ — ಚಲಚ್ಚಿತ್ರಗಳ ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಮುಂಚೆ ನಾಟಕಪ್ರದರ್ಶನವು ಜನಗಳ ವಿನೋದರಂಜನಸಾಧನಗಳಲ್ಲೊಂದಾಗಿದ್ದಿತು ಚಲಚ್ಚಿತ್ರಗಳು ಪ್ರಾರಂಭವಾದ ಕರುಣದಲ್ಲಿ ಕೂಡಾ ನಾಟಕಪ್ರದರ್ಶನದ ಮೇಲೆ ಗಣನೀಯವಾದ ಪರಿಣಾಮವೇನೂ ಆಗಲಿಲ್ಲ. ಏಕೆಂದರೆ ಆಗ್ಗೆ ನಮ್ಮ ದೇಶದ ವಾತಾವರಣದಿಂದ ದೂರವಾಗಿದ್ದ ಮೂಕಚಿತ್ರಗಳ ನೆರಳುಗಳನ್ನು ನೋಡಿ, ಜನಗಳಿಗೆ ಅಷ್ಟೇನೂ ಸಂತೋಷವಾಗುತ್ತಿರಲಿಲ್ಲ. ಅಲ್ಲದೆ ಅವುಗಳನ್ನು ನೋಡಲಿಕ್ಕೆ ಹೋಗುತ್ತಿದ್ದವರು ಅವರಲ್ಲಿ ಬಹುಮಂದಿಗೆ ಇಂಗ್ಲಿಷ್ ಭಾಷೆಯ ಪರಿಚಯವೇ ಇಲ್ಲದ ಕಾರಣ ಬಟ್ಟೆನಲ್ಲಿ ಅಭಿನಯ ಕೌಶಲ್ಯವನ್ನು ನೋಡುವ ಕುತೂಹಲಕ್ಕಿಂತಲೂ ಹೆಚ್ಚಾಗಿ, ತಾವು ಕಂಡು ಕೇಳದಿದ್ದ ಅದ್ಭುತವಾದ ಪ್ರಾಕೃತಿಕ ದೃಶ್ಯಗಳನ್ನು ನೋಡುವ ಅಭಿಲಾಷೆಯಿಂದ ಹೋಗುತ್ತಿದ್ದರು. ಅವರ ಶೀಘ್ರದಲ್ಲಿಯೇ ಪರಿಸ್ಥಿತಿಯು ವ್ಯತ್ಯಾಸಹೊಂದಿತು; ಆರಂಭದಲ್ಲಿ ಹೊಸದೊಂದು ವಿಚಿತ್ರವಾಗಿ ತೋರುತ್ತಿದ್ದ ಚಲಚ್ಚಿತ್ರಗಳ ನಿಜಸ್ವಭಾವವು ಜನರಿಗೆ ಹೆಚ್ಚುಹೆಚ್ಚಾಗಿ ಮನದಟ್ಟಾದರತಿಲ್ಲ ಅವರ ಮನಸ್ಸು ಚಲಚ್ಚಿತ್ರಗಳ ಕಡೆಗೆ ಹೆಚ್ಚುಹೆಚ್ಚಾಗಿ ಒಲಿದು ನಾಟಕಾವಲೋಕನದ ಮೇಲಣ ಪ್ರೀತಿಯು ಕಡಿಮೆಯಾಗತೊಡಗಿತು ನಮ್ಮ ದೇಶದ ಪುರಾಣಗಳ ಕಥೆಗಳೂ ಐತಿಹಾಸಿಕ ಮತ್ತು ಸಾಮಾಜಿಕ ಕಥೆಗಳೂ ಚಲಚ್ಚಿತ್ರಗಳ ರೂಪಕ್ಕಿಳಿದ ಹಾಗೆಲ್ಲ ಜನರ ಸಂತಸವು ಹೆಚ್ಚಿತು, ಮಾತನಾಡುವ ಚಲಚ್ಚಿತ್ರ ಪ್ರದರ್ಶನವು ಪ್ರಾರಂಭವಾದ ಮೇಲಂತೂ ಜನರ ಕುತೂಹಲವು ಹೆಚ್ಚುವುದಕ್ಕೆ "ಸಿನೇಮಾ" ಮಂದಿರಗಳ ಸ್ಥಾಪನೆಯಾಯಿತು

ಈ ಪರಿಸ್ಥಿತಿಗೆ ಕಾರಣಗಳು— ಕಾರಣಗಳಿಲ್ಲದೆ ಕಾರ್ಯವು ನಡೆಯದು ಈ ಪರಿಸ್ಥಿತಿಗೆ ಮುಖ್ಯ ಕಾರಣಗಳಾವವು ಎಂಬುದನ್ನು ಪರಿಶೀಲಿಸಿ ನೋಡಲು ಮೊದಲನೆಯದು ಪ್ರವೇಶಧನವು ಬಹಳ ಕಡಿಮೆಯಾಗಿರುವುದು, ನಾಲ್ಕಾಣೆಗಳನ್ನು ಕೊಡದಿದ್ದರೆ ಅನುಕೂಲವಿಲ್ಲದ ಕಡೆ ಎರಡೇ ಆಣೆಗಳನ್ನು ಕೊಟ್ಟು ನೋಟವನ್ನು ನೋಡುವ ಸೌಕರ್ಯ ಎರಡನೆಯದು ಚಲಚ್ಚಿತ್ರಪ್ರದರ್ಶನವು ಕೇವಲ ಎರಡು ಗಂಟೆ ಅಥವಾ ಮೂರು ಗಂಟೆಯ ಕಾಲದಲ್ಲಿ ಮುಗಿದು (ರಾತ್ರಿನ ದಿನ ನಿದ್ರೆಯಿಲ್ಲದ ಕಾರಣದಿಂದ) ಮಾರನೇ ದಿವಸದ ಕೆಲಸಗಳಿಗೆ ಯಾವ ಅಡ್ಡಿಯೂ ಇಲ್ಲದಂತಿರುವುದು ಮೂರನೆಯದು ಅದ್ಭುತ ದೃಶ್ಯಗಳನ್ನು ನೋಡುವ ಅನುಕೂಲ ರಂಗಸ್ಥಳದಲ್ಲಿ ಬಹು ಕಷ್ಟವನ್ನು ಬಹಳ ಹಣವನ್ನು ಸುರಿದರೂ ಕೇವಲ ಕೃತಕವಾಗಿ ಅಲ್ಪ ಸ್ವಲ್ಪ ನಿಜತ್ವದ ಭ್ರಾಂತಿಯುಂಟಾಗುವಂತೆ ತೋರಿಸಬಹುದಾದ ಪ್ರಾಕೃತಿಕ ದೃಶ್ಯಗಳನ್ನು, ಚಲಚ್ಚಿತ್ರಗಳಲ್ಲಿ ಪ್ರಾಕೃತಿಕ ವಸ್ತುಗಳ ಭಾವಚಿತ್ರಗಳನ್ನೇ ನಿಜತ್ವದ ಭ್ರಾಂತಿಯುಂಟಾಗುವಂತೆ ತೋರಿಸುವುದಕ್ಕೂ ಅಜಗಜಾಂತರ ವ್ಯತ್ಯಾಸವುಂಟು ಸ್ವಸ್ಥಗಳು ಕುದುರೆಗಳ ಸವಾರಿ ಸರ್ಕಸ್‌ಗಳ ಜಟಿಲತೆ, ಆಫ್ರಿಕಾ ಖಂಡದ ಘೋರಾರಣ್ಯದಲ್ಲಿರುವ ಮೃಗಗಳು, ಆಲ್ಪ್ಸ್‌ಪರ್ವತ, ಅಮೇರಿಕಾ ಖಂಡದ ಗಗನಚುಂಬಿತಗಳಾದ ಹರ್ಮ್ಯಗಳು, ಯಂತ್ರಶಾಲೆಗಳ ಚಿತ್ತಾಕರ್ಷಕ ದೃಶ್ಯ ಪ್ರಶಾಂತವಾದ ಬೆಳ್ದಿಂಗಳು, ರುದ್ರ ಸೌಂದರ್ಯದಿಂದೊಡಗೂಡಿ ವಿಸ್ಮಯಜನಕವಾದ ಸಮುದ್ರಗಳ ನೋಟ ಮುಂತಾದವುಗಳನ್ನು "ಸಿನೇಮಾ" ಮಂದಿರಗಳಲ್ಲಿ ನೋಡಿದ ಜನರು ರಂಗಸ್ಥಳದ ಬಟ್ಟೆಯ ಮೇಲಣ ಬಣ್ಣಗಳಿಗೂ ತಗಡಿನ ದೃಶ್ಯ ಸಾಧನೆಗಳಿಗೂ ಬೆರಗಾಗುವ ಬಗೆಯೆಂತು? ನಾಲ್ಕನೆಯದು ಅಭಿನಯ ಕೌಶಲ್ಯ ಕಲೋಪಾಸಕರಾದ ನಟರೂ ನಟಿಯರೂ ಅಭಿನಯಿಸಿರುವ ಕಾರಣ ಚಲಚ್ಚಿತ್ರಗಳೂ ಚಿತ್ತಾಕರ್ಷಕವೆನ್ನಲು ಲೇಶವೂ ಸಂಶಯವಿಲ್ಲ ಹಣವನ್ನು ನೀರಿನಂತೆ ಎರಚಿ ಕಲೋಪಾಸನೆಯನ್ನು ಕುಲವ್ರತವಾಗಿ ಮಾಡಿಕೊಂಡಿರುವ ಪಾಶ್ಚಿಮಾತ್ಯರು ಸಿದ್ಧಗೊಳಿಸಿದ ಚಲಚ್ಚಿತ್ರಗಳ ಮುಂದೆ ಕರ್ಣಾಟಕ ರಂಗಭೂಮಿಯ ನಾಟಕ ಪ್ರದರ್ಶನಗಳು ಹಲವು ಸಂದರ್ಭಗಳಲ್ಲಿ ಹೀನ ದೀನಾವಸ್ಥೆಗಿಳಿದಿಲ್ಲವೆಂದು ಹೇಳುವಂತಿಲ್ಲ, ಶ್ರೀಯುತರಾದ ಚಾರ್ಲಿ ಚಾಪ್ಲಿನ್, ಜಾನ್ ಬೇರಿಮೋರ್, ರಾಮನ್ ನವರೋ ಮುಂತಾದ ನಟರೂ, ಶ್ರೀಮತಿಯರಾದ ಪೋಲಾ ನೆಗ್ರಿ, ಗ್ರೇಟಾಗಾರ್ಬೊ ಮುಂತಾದ ನಟಿಯರೂ ಅಭಿನಯಿಸಿರುವ ಚಲಚ್ಚಿತ್ರಗಳನ್ನು ನೋಡಿ ಬಂದ ರಸಿಕರನೇಕರು ಹಲವು ಸಂದರ್ಭಗಳಲ್ಲಿ ನಮ್ಮ ನಟರ ಅಭಿನಯವನ್ನು ಮೆಚ್ಚದಹೋದರೆ, ಅದರಲ್ಲಿ ಆಶ್ಚರ್ಯವಿಲ್ಲ. ಹೀಗೆಂದ ಮಾತ್ರವೇ ನಮ್ಮ ದೇಶದಲ್ಲಿ, ಅಭಿನಯಕೌಶಲ್ಯವಿರುವ ನಟನಟಿಯರು ಇಲ್ಲವೆಂಬುದೇನೂ ನನ್ನ ಆಶಯವಲ್ಲ. ಬಡವರ ಕುಟೀರಗಳಲ್ಲಿಯೂ ಸುಂದರಿಯರಿರುವಂತೆ ನಮ್ಮ ಹೀನದೀನಾವಸ್ಥೆಯಲ್ಲಿಯೂ ಅದ್ಭುತವಾದ ಕುಶಲಿಗಳಾದ ಕೆಲವರಿರುವುದು ನಮ್ಮ ನಾಡಿನ ಪುಣ್ಯ. ಐದನೆಯದು ಪ್ರತಿಭಾಶಾಲಿಗಳಾದ ಅನೇಕ ಮಂದಿ ಕಲಾವಿದರ ಮುಂತ್ರಾಲೋಚನೆಯ ಮತ್ತು ಕ್ರಿಯಾಶಕ್ತಿಯ ಬೆಂಬಲ.

## ಕಲೆ ಮತ್ತು ದೇವೀಪ್ರಸಾದರಾಯ ಚೌಧುರಿ.

ನಮ್ಮ ೧೯೩೫ನೇ ಇಸವಿ ದಸರಾ ಸಂಚಿಕೆಯಲ್ಲಿ ಶ್ರೀ! ಬಿ. ಶಂಕರಭಟ್ ವಿದ್ವಾನ್ ಇವರು ಹೀಗೆ ಬರೆದಿರುತ್ತಾರೆ—ಶ್ರೀ! ಅವನೀಂದ್ರ ಠಾಕೂರರು ಮಾಡಿದ ಭಾರತೀಯ ಚಿತ್ರಕಲೆಯ ಪುನರುತ್ಥಾನದ ಅನುಷ್ಠಾನದಿಂದಾಗಿ ಅನೇಕ ಮಂದಿ ಸ್ವತಂತ್ರ ಪ್ರತಿಭಾಯುಕ್ತರಾದ ಕಲಾಕಾರರು ಉತ್ಪನ್ನರಾದರು, ಅನೇಕರು ತಮ್ಮ ಪ್ರತಿಭಾದೀಪ್ತಿಯಿಂದ ಕಲಾಮಂಟಪವನ್ನು ಬೆಳಗಿದರು. ಇಂತಹ ಕಲಾಪುರೋಹಿತರಲ್ಲಿ ದೇವೀಪ್ರಸಾದರಾಯ ಚೌಧುರಿಯವರಿಗೆ ಉಚ್ಚಸ್ಥಾನವು ದೊರಕಿದೆ. ರಾಯ ಚೌಧುರಿಗಳು ಉತ್ತಮ ಚಿತ್ರಕಾರರೂ ಮೂರ್ತಿಕಾರರೂ ಆಗಿದ್ದಾರೆ ಬ್ರಶ್ಶಿನಿಂದ ಕಾಗದದ ಮೇಲೆ ಎಷ್ಟು ಸುಲಭವಾಗಿ ಕೈದೆರೆಯಾಡುತ್ತದೋ ಅಷ್ಟೇ ಸುಲಭವಾಗಿ ಮಣ್ಣಿನಮುದ್ದೆಯು ಮೂರ್ತಿಯಾಗುವಾಗಲೂ ಹರಿದಾಡುತ್ತದೆ ಆಧುನಿಕ ಮೂರ್ತಿಕಾರರಲ್ಲಿ ಕೂಡಾ ಗಣನೆಗೆ ಬಂದವರಿವರು.

ಚಿತ್ರಕಾರರೂ ಮೂರ್ತಿಕಾರರೂ ಯಾವುದಾದರೊಂದು ವಾಸ್ತವಿಕ ಅಥವಾ ಕಾಲ್ಪನಿಕ ವ್ಯಕ್ತಿಯ ಚಿತ್ರವನ್ನಾಗಲೀ ಮೂರ್ತಿಯನ್ನಾಗಲೀ ಮಾಡಿ ಜೀವಕಳೆ ಯಾ ವ್ಯಕ್ತಿತ್ವವನ್ನು ಬಾಹ್ಯರೂಪದೊಂದಿಗೆ ಸಮಾನವಾದ ಕೃತಿಯನ್ನು ಮಾಡಿ ಸಫಲರಾಗುವುದಿಲ್ಲ ಕಲೆಯು ಉತ್ಕೃಷ್ಟವಾಗಬೇಕಾದರೆ ಆ ವ್ಯಕ್ತಿ ವಿಶೇಷದ ಸ್ವಭಾವ ಮತ್ತು ಆಂತರಿಕ ಭಾವನೆಗಳ ಪ್ರತಿಬಿಂಬವು ಚಿತ್ರದಲ್ಲಾಗಲೀ ಮೂರ್ತಿಯಲ್ಲಾಗಲೀ ಬರಬೇಕು ಹಾಗೆಯೇ ಕಾಲ್ಪನಿಕ ಚಿತ್ರವನ್ನು ಯಾವ ಭಾವನೆಯಿಂದ ಕಲಾಕಾರನು ಬರೆಯುತ್ತಾನೋ ಆ ಭಾವನೆಯೂ ಅದರಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸಬೇಕು ಚೌಧುರಿಗಳ ಕೃತಿಗಳಲ್ಲಿ ಈ ವಿಷಯವು ಸ್ಪಷ್ಟವಾಗಿ ಕಂಡುಬರುತ್ತದೆ ಅದ್ದರಿಂದಲೇ ಅವರು ಉತ್ಕೃಷ್ಟ ಕಲಾಕಾರರಾದರು.

ವಿಭಿನ್ನದೇಶಗಳಲ್ಲಿ ವಾಸಿಸುವ ಜನರ ಸ್ವಭಾವವು ಮತ್ತು ಪ್ರಕೃತಿಯು ವಿಭಿನ್ನವಾಗಿರುತ್ತದೆ ಆಯಾಯ ದೇಶದ ಕಲಾಕಾರರು ತಂತಮ್ಮ ಮನೋಭಾವಗಳನ್ನು ತಮ್ಮ ಕೃತಿಗಳಲ್ಲಿ ತುಂಬಿಸುವುದರಿಂದ ವಿಭಿನ್ನಶೈಲಿಗಳ ವಿಕಾಸವಾಯಿತು ಹೀಗಾಗಿ ರಾಜಪೂತಶೈಲಿ ಮೊಗಲ ಶೈಲಿ, ಪ್ರಾಚೀನ ಅಜಾಂತ ಶೈಲಿ ಯುರೋಪಿಯನ್ ಶೈಲಿ, (ಇದರಲ್ಲಿ ಅನೇಕ ಭೇದಗಳಿವೆ) ಚೀನೀ ಜಪಾನೀ ಶೈಲಿ ಮೊದಲಾದ ವಿಭಿನ್ನಶೈಲಿಗಳು ಕಂಡುಬರುತ್ತವೆ ಈ ವಿಷಯವಾಗಿ ಚೌಧುರಿಯವರ ಹೇಳಿಕೆಯೇನೆಂದರೆ ಕಲಾಕಾರನು ಜನ್ಮದಿಂದಲೆ ಸ್ವತಂತ್ರನು, ಆತನನ್ನು ಯಾವುದಾದರೊಂದು ಶೈಲಿಯ ಸಂಕಲೆಯೊಳಗೆ ಬಂಧಿಸುವುದೆಂದರೆ ಆತನನ್ನು ಹತ್ಯೆಮಾಡಿದಂತೆಯೇ ಸರಿ ಆತನು ತನ್ನ ಜೀವನದ ಸುಖದುಃಖಗಳನ್ನು ಪ್ರಕಟಿಸಲು ತನಗೆ ಬೇಕಾದ ಶೈಲಿಯನ್ನು ನಿರ್ಮಿಸಿಕೊಳ್ಳಲು ನಿರ್ಬಂಧವಿರಬಾರದು, ಕಾಳಿದಾಸನು ಸಂಸ್ಕೃತದಲ್ಲಿಯೂ, ತುಲಸೀದಾಸನು ಹಿಂದಿಯಲ್ಲಿಯೂ, ಶೇಕ್ಸ್‌ಪಿಯರನು ಇಂಗ್ಲಿಷಿನಲ್ಲಿಯೂ ಕವಿತೆಗಳನ್ನು ಬರೆದು ತಂತಮ್ಮ ಪ್ರತಿಭೆಯನ್ನು ಜನತೆಯ ಮುಂದಿಟ್ಟರು ಆದರೆ ತುಲಸಿಯು ಇಂಗ್ಲಿಷಿನಲ್ಲಿ ಬರೆಯಲಿಲ್ಲ, ಶೇಕ್ಸ್‌ಪಿಯರನು ಸಂಸ್ಕೃತದಲ್ಲಿ ಬರೆಯಲಿಲ್ಲವೆಂದು ಅವರನ್ನು ಕವಿಗಳಲ್ಲವೆಂದೇ ಹೇಳಲಾಗದು. ಅವರು ಕವಿಗಳಾದುದು ಭಾಷೆಯಿಂದಲ್ಲ, ಪ್ರತಿಭೆಯಿಂದ ಕವಿತ್ವಮಯ ವಿಚಾರಗಳಿಂದ ಇದೇ ರೀತಿಯಾಗಿ ಕಲಾಕಾರನ ಕೃತಿಯಲ್ಲಿ ವಾಸ್ತವಿಕವಾದ ಕಲೆಯಿದ್ದರೆ ಆ ಕಲಾಕಾರನು ಆ ಶೈಲಿಯನ್ನು ಅನುಸರಿಸುತ್ತಾನೆ ಈ ಶೈಲಿಯನ್ನು ಅನುಸರಿಸುತ್ತಾನೆಂಬ ಮಾತು ನಿಸ್ಸಾರವಾದುದು ಕವಿಯ ಕಲೆಯನ್ನು ತಿಳಿಯಬೇಕಾದರೆ ಆತನ ಭಾಷೆ ಗೊತ್ತಿರಬೇಕು, ಇಲ್ಲವಾದರೆ ಸಾಧ್ಯವಿಲ್ಲ ಆದರೆ ಕಲಾಕಾರನ ಕೃತಿಯನ್ನು ಯಾವ ದೇಶದವನೇ ಆಗಲಿ ಯಾವ ಭಾಷೆಯವನೇ ಆಗಲಿ ನೋಡುವ ಮಾತ್ರದಿಂದಲೇ ಕಲಾಕಾರನ ಭಾವನೆಯನ್ನು ತಿಳಿದುಕೊಳ್ಳಬಹುದು, ಆದುದರಿಂದಲೆ ಕಲೆಯು ವಿಶ್ವವ್ಯಾಪಕತೆಯುಳ್ಳದ್ದು. ಈ ಕಾರಣದಿಂದಲೆ ದೇವೀಬಾಬುಗಳು ಯಾವುದೊಂದು ವಿಶೇಷ ಶೈಲಿಯ ದಾಸರಾಗದೆ ಸ್ವತಂತ್ರಪೂರ್ವಕವಾಗಿ ವಿಭಿನ್ನಪ್ರಕಾರದ ಶೈಲಿಗಳನ್ನು ವ್ಯವಹಾರದೊಳಿರುತ್ತಾರೆ, ಇವರ ಅನೇಕ ಚಿತ್ರಗಳಲ್ಲಿ ಯುರೋಪಿಯನ್ ಶೈಲಿ ಕಂಡುಬರುತ್ತದೆ ಶೈಲಿಯು ವಿದೇಶಿಯಾಗಿದ್ದ ಕೃತಿಯ ಆತ್ಮವು ಶುದ್ಧ ಹಿಂದುಸ್ಥಾನಿಯಾಗಿದೆ ಇವರು ಯುರೋಪಿಯನ್ ಶೈಲಿಯನ್ನು ಭಾರತೀಯ ಜಾತಿಯ ಮತ್ತು ಸ್ವಾಭಾವಿಕತೆಯ ಅಚ್ಚಿನಲ್ಲಿ ಬರೆದಿದ್ದಾರೆಂದರೆ ತಪ್ಪಾಗದು, ಬೇರೆ ಕೆಲವುಮಂದಿ ಕಲಾಕಾರರು ಯುರೋಪಿಯನ್ ಶೈಲಿಯನ್ನು ಅನುಸರಿಸಿದರೂ ಅವರ ಕೃತಿಗಳಲ್ಲಿ ಭಾರತೀಯತೆಯು ಲೋಪವಾಗಿದೆ, ಚೌಧುರಿಯವರ ಕೃತಿಗಳು ಯುರೋಪಿಯನ್ ಶೈಲಿಗಳವಾದರೂ ಅವುಗಳಿಂದ ನಮಗೆ ವಿಜಾತೀಯತೆಯು ಭಾಸವಾಗುವುದಿಲ್ಲ ಇದೇ ಅವರ ಕೃತಿಗಳ ಸಫಲತೆಯಾಗಿದೆ ಠಾಕೂರರ ಶೈಲಿಯು ಚಿತ್ರಕಾರರು ತಮ್ಮ ಮನಸ್ಸನ್ನು ವ್ಯಕ್ತಿಗಳ ಚಿತ್ರ ಬರೆಯುವ ಕಡೆಗೇ ಹರಿಸಿದ್ದರಿಂದ ಅವರಲ್ಲಿ ಪ್ರಾಕೃತಿಕ ಚಿತ್ರಗಳ ಅಭಾವವಿದೆಯೆನ್ನಬಹುದು ಆದರೂ ಗಗನೇಂದ್ರನಾಥ ಠಾಕೂರ್ ಮೊದಲಾದ ಬಹಳಷ್ಟು ಪ್ರಾಕೃತಿಕ ಚಿತ್ರಗಳನ್ನು ಸಫಲತಾಪೂರ್ವಕವಾಗಿ ಬರೆದರೂ ಸಾಮಾನ್ಯತಃ ಪ್ರಾಕೃತಿಕ ಚಿತ್ರಗಳ ಅಭಾವವಿದೆಯೆನ್ನಬಹುದು ಚೌಧುರಿಯವರು ಈ ವಿಷಯದಲ್ಲಿ ಕೂಡಾ ಸಿದ್ಧಹಸ್ತರಾಗಿರುತ್ತಾರೆ

ದೇವೀಪ್ರಸಾದರ ಚಿತ್ರಗಳಲ್ಲಿ ಭಾವಸೌಂದರ್ಯದೊಂದಿಗೆ ಶಾರೀರಿಕ ಸೌಂದರ್ಯವು ಕೂಡಾ ತುಂಬಿತುಳುಕುತ್ತಿದೆ ಅವರು ತಯಾರಿಸಿದ ಮೂರ್ತಿಗಳ ಅಂಗಪ್ರತ್ಯಂಗಗಳ ಘಟನೆಯು ಉತ್ಕೃಷ್ಟವಾಗಿದೆ ರಾಯಚೌಧುರಿಯವರು ಈ ಸಮಯದಲ್ಲಿ ಮದ್ರಾಸಿನ ಆರ್ಟ್ಸ್ ಸ್ಕೂಲಿನ ಪ್ರಿನ್ಸಿಪಾಲರಾಗಿದ್ದಾರೆ ಇವರ ಅಧ್ಯಕ್ಷತೆಯಿಂದ ನಮ್ಮ ಪ್ರಾಂತ್ಯದಲ್ಲಿ ಕಲೆಯು ಉತ್ತಮರೀತಿಯಿಂದ ಪ್ರಚಾರವಾಗುತ್ತಿದೆ

ಲೇಟಿನದ ಹತ್ತಿರ ರಾಯ ಚೌಧುರಿಗಳ "ಮುಮಾತ್ರ ಪಕ್ಷಿಗಳು" ಮಂದಿರದಲ್ಲಿ ಗೋಧೂಳಿ "ಸಮಾಜ" ಕೆಲವು ಚಿತ್ರಗಳ ಪ್ರತಿಕೃತಿಗಳಿವೆ ಅವುಗಳಲ್ಲಿ ಗೋಧೂಳಿಯಲ್ಲಿ ತಿರುವಾಂಕೂರಿನ ಸಮುದ್ರತೀರದ ದೃಶ್ಯವೊಂದು ಬರೆಯಲ್ಪಟ್ಟಿದೆ ಸಂಜೆ ಮುಗಿದಿದೆ ಮೇರೆಯಿಲ್ಲದ ಸಮುದ್ರದ ಕಡೆ ಅಂಧಕಾರವು ಹಬ್ಬುತ್ತಿದೆ, ಸಮುದ್ರತೀರದಲ್ಲಿ ವಾಸಿಸುತ್ತಿರುವ ಬೆಸ್ತ ಮಾಲಬಾರಿ ಸ್ತ್ರೀಯು ಒಂದು ಕಲ್ಲಿನ ಬಳಿ ನಿಂತು ಈ ದೃಶ್ಯವನ್ನು ನೋಡುತ್ತಾಳೆ, ಈ ಚಿತ್ರಗಳ ಬಣ್ಣದ ಸಾಮಂಜಸ್ಯವನ್ನು ನೋಡಿದರೆ ಪ್ರಕೃತಿದೇವಿಯು ಪ್ರತ್ಯಕ್ಷಳಾದಂತಿದೆ

"ಶಾವಜಾ" ಎಂಬ ಚಿತ್ರದಲ್ಲಿ ಸಂಧ್ಯಾಕಾಲದ ಅಸ್ಪಷ್ಟ ಅಂಧಕಾರದಲ್ಲಿ ಧಾರ್ಮಿಕವೃದ್ಧ ಮುಸಲ್ಮಾನನೊಬ್ಬನು ಭಕ್ತಿಯಿಂದ ನಿಮಾಜು ಮಾಡುವುದನ್ನು ತೋರಿಸಿದೆ, ಅದನ್ನು ನೋಡಿದರೆ ನಮ್ಮ ಹೃದಯವು ಕೂಡಾ ಭಕ್ತಿಯಿಂದ ತುಂಬಿತುಳುಕುತ್ತಿದೆ.

ಕಳೆದ ವರುಷ ಮದ್ರಾಸಿನಲ್ಲಿ ನಡೆದ ಕಲಾಪ್ರದರ್ಶನದಲ್ಲಿ ಚೌಧುರಿಯವರ ಚಿತ್ರಗಳನ್ನು ನೋಡಿ "ಹಿಂದು" "ಮದ್ರಾಸ್ ಮೈಲ್" ಮೊದಲಾದ ಪತ್ರಿಕೆಗಳು ಮುಕ್ತಕಂಠದಿಂದ ಹೊಗಳಿರುವುವು.

## ನೋಟೀಸು.

### ಮಂಗಳೂರು ಡಿ। ಮು। ಕೋರ್ಟ್.

S C No 404/1935.

ಜಪ್ಪು ಅನಂತ ಶ್ಯಾನುಭೋಗ ಎಂಡ್ ಸನ್ಸ್ ಇದರ ಮ್ಯಾನೆಜಿಂಗ್ ಪಾರ್ಟನರ್ ಜೆ ನರಸಿಂಹ ಶ್ಯಾನುಭೋಗ—ವಾದಿ

ಮತ್ತು

ಕೆ ರಂಗನಾಯಕ ಅಣ್ಣಪ್ಪನಾಯಕರ ಮಗ, ಕಾರ್ಕಳ ತಾಲೂಕು ಕರಿಂಗಾಣ ಗ್ರಾಮದಲ್ಲಿರುವವರು—ಪ್ರತಿವಾದಿ

ಮೇಲ್ಕಂಡ ಪ್ರತಿವಾದಿಗೆ ಇದರಿಂದ ತಿಳಿಯಪಡಿಸುವುದೇನೆಂದರೆ —

ಮೇಲ್ಕಂಡ ವಾದಿಯು ಮೇಲ್ಕಂಡ ನಂಬರಿನಲ್ಲಿ ನಿಮ್ಮಮೇಲೆ ಮಾಡಿದ ರೂ 139-15 7ರ ದಾವಾವು ತನಿಖೆ ಬಗ್ಗೆ ತಾ 12 9–1935ಕ್ಕೆ ಇಟ್ಟಿರುತ್ತಾರೆ ಆದ್ದರಿಂದ ನೀವು ಆ ತಾರೀಕಿನಲ್ಲಿ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗದೆಯಿದ್ದಲ್ಲಿ ಮೇಲ್ಕಂಡ ದಾವಾವು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ

ಮಂಗಳೂರು, 1-9-1935 } K Uggappa Shetty, Advocate for Plaintiff


## ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಲ

ಇವರು

ಇದೇ ತಾ. 14—9—35ನೇ ದಿನ

ಹಿಂದುಸ್ಥಾನ ಸಿನೇಮಾ ಥಿಯೇಟರಿನಲ್ಲಿ

# ಭಗವಾನ್ ಯೇಸುಕ್ರಿಸ್ತ

ಎಂಬ ಧಾರ್ಮಿಕವೂ ಭಕ್ತಿರಸ ಪ್ರಧಾನವೂ ಆದ ನಾಟಕವನ್ನು ಅಭಿನಯಿಸುವರು.

ಪ್ರಸಿದ್ಧ ಗಾಯಕರು ಎಲ್ಲರೂ



ಪ್ರಖ್ಯಾತ ನಟರು ಎಲ್ಲರೂ

ಜಾತಿಮತ ಭೇದಗಳನ್ನೆಣಿಸದೆ ಬರೆಯಲ್ಪಟ್ಟ ನಾಟಕ!

ಕರ್ಣಾಟಕ ನಾಟ್ಯರಂಗದಲ್ಲಿ ನೂತನ ನಾಟಕ.

ವಿಶೇಷ ವಿವರಗಳಿಗೆ ಆ ದಿನದ ಹಸ್ತಪತ್ರಿಕೆಗಳನ್ನು ನೋಡುವುದು

# ಲೋಧ್ರ

**ಸುಪ್ರಸವಕ್ಕಾಗಿ ದಿವ್ಯ ಟಾನಿಕ್**

**ಸ್ತ್ರೀಯರಿಗೊಂದು ಮಹಾ ವರ**

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

## ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

**ಕೇಸರಿ ಕುಟೀರಂ**

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
**ಪೊಪ್ಯೂಲರ್ ಸ್ಟೋರ್ಸ್**, ಮಂಗಳೂರು

---

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

## ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ; ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
೪೨, ಚಿಕ್ಕಪೇಟೆ, ಬೆಂಗಳೂರು ಸಿಟಿ.

---

ಚಾತುಕುಟ್ಟಿ ವೈದ್ಯರ

**ವಿಶೂಚಿಕಾ ಸಂಹಾರಿ**
**Vishuchika Samhari**
(PILCO)

ಕಾಲೆರಕ್ಕೆ ದಿವ್ಯಾಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಶಿಷ್ಯೆ 1ಕ್ಕೆ ರೂ 1—0—0

**ಗುಹ್ಯರೋಗ ನಿವಾರಿಣೀ ತೈಲ**
**Anti-Venerael Oil**
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ವ ತರದ ರೋಗವು ಗುಣವಾಗುವುದು ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು
8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 2—8—0

**ಕೆ. ವಿ. ಕೃಷ್ಣನ್,**
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

---

# ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲೂ ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು
(ಸನ್ 1855ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

---

**ರೈಲುಬಂಡಿಗಳ ಸಮಯ.**

| ಗಾಡಿಗಳು | ಹೊರಡುವ ಘಂಟೆ | ತಲಪುವ ಘಂಟೆ |
|---|---|---|
| ಮೈಲು | ಬೆಳಗ್ಗೆ 9 50 | ಸಂಜೆ 4 20 |
| ಮಿಕ್ಸಡ್ | ,, 5 55 | ರಾತ್ರಿ 8 50 |
| ಫಾಸ್ಟ್ ಪೆಸೆಂಜರ್ | ಮ. 12 45 | ಮ 2 40 |
| ಶಟಲ್ | ಸಂಜೆ 5 25 | ಬೆಳಗ್ಗೆ 9-25 |
| ಕಾಂಞಂಗಾಡ್ ಪೆಸೆಂಜರು | ಬೆ 8 25 | ಮ. 1 20 |
| ಕಾಸರಗೋಡು ಪೆಸೆಂಜರು | ಸಂಜೆ 3 20 | ಸಂಜೆ 6 15 |

---

**ಕುಷ್ಠ ರೋಗ ಮತ್ತು ಫರಂಗಿ ರೋಗ**

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ, ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಸೋತಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ. ಪೂರ್ಣ ಗುಣ ಗೇರಂಟಿ.

ವಿವರಕ್ಕೆ ಬರೆಯಿರಿ

**Kamala Works,**
Panchpota Bengal S. B.
C. P S

---

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ

---

# ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

---

ಚಿತ್ರಾಕೃತಿ ಸಮೇತ

**ಋಗ್ವೇದೀ ಸಂಧ್ಯಾವಂದನೆ**

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

**ಎಂ. ನರಸಿಂಹರಾವ್, ಬಿ. ಎ., ಎಂ. ಎಲ್.**
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಸಹಿತ,

**ಬೆಲೆ ಆಣೆ 3.**

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

---

**ಸೈಂಟಿಫಿಕ್**
**ಸ್ವರ್ಣಾಭರಣಗಳು**

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು




ಹೊಸ ಕೆಟಲಾಗು ಧರ್ಮಾರ್ಥ.
ವಿಳಾಸ –
TheScientificGold Bangles Co., Ltd.,
Head Office -43, Byragimatam Street,
Post Box No 203, Madras.

---

# ತಯಾರಾಗಿದೆ!

ಗಾ। ಹಾ। ಎ। ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

**ಸಮಾಜಶಾಸ್ತ್ರ**
ಅಥವಾ
**ಸೋಸಿಯೋಲೋಜಿ.**

ಟೆಕ್ಸ್ಟುಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ, ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ಗ್ರಾಮೀಣ ಶಾಲೆಗಳಿಗೋಸ್ಕರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುವು.

ಇಲ್ಲಿಗೆ ಕೂಡಲೇ ಬರೆಯಿರಿ

**ಮೆನೇಜರ್,**
ಶಾರದಾ ಛಾಪಖಾನೆ,
ಮಂಗಳೂರು.

---

**'ಸ್ವದೇಶಾಭಿಮಾನಿ'** ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

# ಹುಣ್ಣಿನ ನೋವು, ಒಡೆದ ಪಾದಗಳು

ಮಂತ್ರಜಾಲದಂತೆ ಗುಣವಾಗುತ್ತವೆ.

ಸಸ್ಯಜನ್ಯ ಲೇಪನವಾದ

**ಝಾಂಬಕನ್ನುಪಯೋಗಿಸಿರಿ.**

ನಿಮ್ಮ ಪಾದವು ಗಾಯಗೊಂಡರೆ ಇಡೀ ದೇಹವೇ ಕಷ್ಟಪಡುತ್ತದೆ ನಿಮ್ಮ ಪಾದಗಳ ನೋವು ನಿಮ್ಮ ನರಗಳನ್ನು ಬಾಧಿಸುತ್ತದೆ ಪರಿಣಾಮವಾಗಿ ನಿಮ್ಮ ಆರೋಗ್ಯವು ಕೆಡುತ್ತದೆ ಸಸ್ಯಜನ್ಯ ಲೇಪನವಾದ ಝಾಂಬಕಿನಿಂದ ನಿಮ್ಮ ಪಾದಗಳನ್ನು ಒರಸಲು ಮರೆಯಬೇಡಿ ನೋವುಗಳನ್ನು ಅದು ಒಡನೆ ನಿಲ್ಲಿಸುತ್ತದೆ ಅದು ಚರ್ಮದೊಳಗೆ ಸೇರುತ್ತದೆ, ಪ್ರಕೃತಿಸಿದ್ಧವಾಗಿರಬೇಕಾಗಿರುವ ಎಣ್ಣೆಯನ್ನೊದಗಿಸುತ್ತದೆ ಚರ್ಮವನ್ನು ಮೃದುಗೊಳಿಸುತ್ತದೆ ಬಾತು ಹೋದ ಮೊಣಕಾಲು ಹುಣ್ಣುಗಳನ್ನು ಅದು ಗುಣಗೊಳಿಸುತ್ತದೆ ಝಾಂಬಕು ಅತಿ ಶುದ್ಧವಾದ ಮೂಲಿಕೆಗಳಿಂದ ತಯಾರಿಸಲ್ಪಟ್ಟಿತು ಎಕ್ಸಿಮಾ, ಅಲ್ಸರ್, ಗಾಯ ಸುಟ್ಟುಹೋಗುವುದು ಇವುಗಳಿಗಾಗಿ ಇದನ್ನುಪಯೋಗಿಸಿರಿ ಪಟ್ಟಿಗೆಗೆ ರೂ 1 ಅಥವಾ ರೂ 2-4-0

ಎಲ್ಲಾ ಔಷಧಿ ವಿಕ್ರಯಗಾರರಲ್ಲಿದೆ ಕೊಬ್ಬು ಇಲ್ಲವೆಂದು ಗೇರಂಟಿ ಕೊಡುತ್ತೇವೆ.

**ಝಾಂಬಕ್**

**Zam-Buk**


ಕುಟ್ಟಿಯವರೆಂದರು ರೊಮೈನ್ ರೋಲೆಂಡ್ ಮತ್ತು ಪ್ರೊ॥ ಎಚ್. ಜಿ ಲಸ್ಕಿಯವರು ಭಾರತದ ಹಿತಚಿಂತಕರಾಗಿರುವರೆಂದರು

'ಭಾರತವು ಸ್ವತಂತ್ರವಾದರೆ' ಅದು ಜಗತ್ತಿನ ಇತಿಹಾಸಕ್ಕೆ ಅದ್ಭುತಕರ ಅಧ್ಯಾಯವನ್ನೇ ನರಬಾನವನ್ನಾಗಿ ಕೊಡುವುದು ನಿಜವೆಂದು ರೊಮೈನ್ ರೋಲೆಂಡರು ಹೇಳಿ, ಕಾಂಗ್ರೆಸ್ಸಿನೊಳಗಿಂದ ಸೋಶಿಯಲಿಸ್ಟ್ ಪಂಗಡವು ಜನನ ಹೊಂದಿದುದುದನ್ನು ಕಂಡು ತಾನು ಆನಂದಿತನಾಗಿರುವೆನೆಂದು ತಿಳಿಸಿರುವರೆಂದು ಕಲ್ಯಾಣಿಯವರು ತಿಳಿಸಿರುವರು

'ಪ್ರೊ॥ಲಸ್ಕಿಯವರಂತೆ ಭಾರತೀಯ ಸಮಸ್ಯೆಯನ್ನು ಮನದಟ್ಟಾಗಿ ತಿಳಿದವರೇ ಕಡಮೆ ಪ್ರತಿಯೊಬ್ಬ ಹಿಂದೀಯನು ತನ್ನ ಜೀವಮಾನಕ್ಕಿಂತಲೂ ತನ್ನ ದೇಶವನ್ನು ಹೆಚ್ಚು ಪ್ರೀತಿಸಬೇಕು ಭಾರತೀಯ ಯುವಕರು ಉಚ್ಚ ಬಿರುದುಗಳನ್ನು ಪಡೆದಾದ ಮೇಲೆ ಉದ್ಯೋಗ ಸಂಪಾದನೆಗಾಗಿ ನೆಲದಲ್ಲಿ ಹೊರಳಾಡುವುದನ್ನು ಕಂಡರೆ ರೋಮಾಂಚವಾಗುತ್ತದೆ' ಎಂದು ಲಸ್ಕಿಯವರು ಹೇಳಿರುವರು 'ಜವಾಹರಲಾಲನನ್ನು ಕಂಡರೆ ನನಗೆ ಅತ್ಯಂತ ಪ್ರೇಮ'ವೆಂದು ಲಸ್ಕಿಯವರು ಪದೇ ಪದೇ ಹೇಳಿದರು ಫ್ರಾನ್ಸಿನ ಕಮ್ಯೂನಿಸ್ಟ್ ಮುನಿಸಿಪಾಲಿಟಿಗಳು ನಡೆಸುವ ಶಾಲೆಗಳು ಎಲ್ಲವುಗಳಿಗಿಂತಲೂ ಸರ್ವೋತ್ಕೃಷ್ಟವೆಂದು ಕಲ್ಯಾಣಿಯವರು ತಿಳಿಸಿದರು ಯೂರೋಪು ಖಂಡದಲ್ಲಿ ಮಿಸ್ ಮೇಯಳ ಗ್ರಂಥವು ಎಲ್ಲಾ ಭಾಷೆಗಳಲ್ಲೂ ಪ್ರಚಾರವಾಗಿದೆ ಭಾರತೀಯರ ಪರಿಚಯವು ಈ ಗ್ರಂಥದ ಮೂಲಕವೇ ಜನರಿಗಾಗಿದೆ

ಪರಾಧೀನರಾಗಬೇಕು ವಿನಹ ಹೀಗೆಯೇ ನಾವು ನಮ್ಮ ದೇಶವನ್ನು ಪಾರತಂತ್ರ್ಯದಲ್ಲಿ ಸಿಲುಕಿಸುವುದಿಲ್ಲ.

"ಸಾರ್ವಜನಿಕ ಕೆಲಸಗಳಲ್ಲಿ ಎಬಿಸೀನಿಯದ ರಮಣಿಯರು ಬೇರೆ ಜನಾಂಗದವರ ಹಾಗೆ ಮುಂದೊತ್ತಿ ಬರುವುದಿಲ್ಲ" ಎಂದೋರ್ವನು ಅವರನ್ನು ಪ್ರಶ್ನಿಸಿದಾಗ

'ಅಷ್ಟೊಂದು ಬಿಗುವಾದ ಕೆಲಸವಿಲ್ಲದಿರುವಾಗ ಅವರು ಮುಂದೊತ್ತಿ ಬರುವುದಿಲ್ಲ. ಅದು ನಿಜ ಆದರೆ ಇಂತಹ ವಿಪತ್ತಿನಲ್ಲಿ ಅವರೂ ಹಿಂಜರಿಯುವುದಿಲ್ಲ ತಮ್ಮ ಗಂಡಂದಿರಿಗೆ ಪ್ರೋತ್ಸಾಹವನ್ನೀಯಲೂ ಅವರು ಸಮರಕ್ಕಿಳಿಯುತ್ತಾರೆ"

"ರಣಭೂಮಿಯು ಅವರ ಮನಸ್ಸನ್ನು ನಡುಗಿಸಲಾರದೆ ಅಷ್ಟು ದೂರದವರೆಗೆ ನಡೆದು ಸಹಿಸಲಸದಳವಾದ ಕಷ್ಟಗಳು ಅವರು ಅನುಭವಿಸಬಲ್ಲರೆ?"

"ತಮ್ಮ ಪತಿದೇವರನ್ನು ಅನುಸರಿಸುವುದು ಅವರ ಕರ್ತವ್ಯ ಅವರು ಹೇಗೆ ಸಾವಧಾನದಿಂದ ನಡೆಯುವರೋ ಹಾಗೆಯೇ ನಾವೂ ನಡೆಯುವೆವು ಅವರು ಶಸ್ತ್ರಗಳನ್ನು ತ್ಯಜಿಸಿದರೆ ನಾವದನ್ನು ಹಿಡಿದು ಹೆಣಗಾಡುವೆವು ಅವರು ಸತ್ತರೆ ನಾವು ಅವರೊಡನೆ ಸಾಯಲು ಸಿದ್ಧರಿದ್ದೇವೆ" ಎಂದು ಎಬಿಸೀನಿಯದ ರಾಣಿಯರ್ ಹೇಳಿರುವಳು

## ಪಶ್ಚಿಮ ದೇಶವೂ ಗಾಂಧಿಜೀಯವರೂ.

### ಅವರ ಸಂದೇಶದಲ್ಲಿ ಸ್ತ್ರೀಯರಿಗೆ ಭಕ್ತಿ.

ತ್ರಿಚೂರಿನ ಕಲ್ಯಾಣಿಕುಟ್ಟಿ ಅಮ್ಮಾಳ್ ಎಂಬವರು ಮಿಸೆಸ್ ದತ್ತ ಎಂಬವರ ಪಂಗಡವನ್ನು ಕೂಡಿಕೊಂಡು ಯೂರೋಪಿನಲ್ಲಿ ಮೂರು ತಿಂಗಳುಗಳ ತನಕ ಪ್ರವಾಸಗೈದು ಇದೇ ವಾರದಲ್ಲಿ ಹಿಂದಿರುಗಿದರು ಪತ್ರಿಕಾ ಪ್ರತಿನಿಧಿಗಳು ಅವರೊಡನೆ ವಿಚಾರಿಸಿದ್ದಲ್ಲಿ ಅವರು ಹೇಳಿದುದೇನೆಂದರೆ --

ಪ್ರತಿಯೊಂದು ದೇಶದಲ್ಲಿ—ಒಸ್ಟ್ರಿಯಾ, ಜರ್ಮನಿ, ಫ್ರಾನ್ಸ್, ಇಟಲಿ ಅಥವಾ ಇಂಗ್ಲಾಂಡಿನಲ್ಲಿ ನಮ್ಮ ಊಹನೆಯನ್ನು ಮೀರಿ ಜನಸಂಖ್ಯೆಯು ಗಾಂಧಿಜೀಯವರ ಪರಿಚಯ ಮಾಡಿಕೊಂಡಿದೆ, ಅವರನ್ನು ಮಹಪ್ಪುರುಷರೆಂದು ಭಾವಿಸಿಕೊಂಡಿದೆ. ಪೂರ್ವದಲ್ಲಾಗಲೀ ಪಶ್ಚಿಮದಲ್ಲಾಗಲೀ ಗಾಂಧಿಜೀಯವರ ಸಂದೇಶವೊಂದೆ ಜಗಚ್ಛಾಂತಿಯನ್ನುಂಟು ಮಾಡುವುದೆಂದು ಪುರುಷರಿಗಿಂತ ಸ್ತ್ರೀಯರು ಹೆಚ್ಚಾಗಿ ತಿಳಿದಿರುವರು

ಇವರ ಪಂಗಡವು ಒಸ್ಟ್ರಿಯಾ, ಜರ್ಮನಿ, ಸ್ವಿಜರ್‌ಲೇಂಡ್, ಇಟಲಿ, ಇಂಗ್ಲಾಂಡು ಮತ್ತು ಸ್ಕೋಟ್‌ಲೇಂಡ್‌ಗಳನ್ನು ಸಂದರ್ಶಿಸಿತ್ತು ಈ ಪ್ರವಾಸವನ್ನು ಜಿನೇವಾದ ಇಂಟರ್‌ನೇಶನಲ್ ಸ್ಟುಡೆಂಟ್ ಸರ್ವಿಸ್‌ನವರು ಕೈಕೊಂಡಿದ್ದರು

ಗಾಂಧಿಜೀಯವರ ಮೂಲಕವಾಗಿಯೇ ಪಶ್ಚಿಮ ದೇಶಗಳಲ್ಲಿ ಹಿಂದೂದೇಶದ ಪರಿಚಯವಾಗಲು ಕಾರಣವಾಗಿದೆ ಅವರನ್ನು ಮಹಾತ್ಮರೆಂದೇ ಅಲ್ಲಿಯ ಜನರು ತಿಳಿಯುತ್ತಿರುವರು ಗಾಂಧಿಜೀಯವರ ಆದರ್ಶಗಳೇ, ಅವರ ಸತ್ಯಾಗ್ರಹ ಸಂದೇಶವೇ ಯೂರೋಪಿನಿಂದ ಯುದ್ಧ ಭೀತಿಯನ್ನು ನಿವಾರಿಸಲು ಶಕ್ತಿಯುತವೆಂದು ಪಶ್ಚಿಮ ದೇಶಗಳ ಸ್ತ್ರೀಯರು ತಿಳಿದಿರುವರು ಅಲ್ಲಿಯ ಸ್ತ್ರೀಯರು ಯುದ್ಧವನ್ನು ದ್ವೇಷಿಸುವರು ಇಟಲಿ ಎಬಿಸೀನಿಯಗಳ ಯುದ್ಧದಿಂದ। ಜನರು ಹೆಚ್ಚಿನ ವ್ಯಥಿತರಾಗಿರುವರು ಪಿಲಿಟರಿಯು ಪ್ರಬಲವಾಗಿರುವ ಇಟಲಿಯ ಜನರು ಯುದ್ಧವನ್ನು ವಿರೋಧಿಸುತ್ತಿರುವರು ಆದರೆ ಬಹಿರಂಗವಾಗಿ ಮಾತ್ರ ಹೇಳಲಾರರು ಎಂದರವರು

"ಜರ್ಮನಿಯಲ್ಲಿ ಹಿಟ್ಲರನು ಚಲಚ್ಚಿತ್ರಗಳ ನಟನಂತೆ ಪ್ರಖ್ಯಾತನು ಡ್ರೆಸ್ಡೆನ್‌ನಲ್ಲಿ ನಾವು ಆರೋಗ್ಯ ಪ್ರದರ್ಶನವೊಂದನ್ನು ಕಂಡೆವು ಆ ಪ್ರದರ್ಶನವು ತೀರ ಅದ್ಭುತವಾಗಿತ್ತು ನಾಜಿ ಜರ್ಮನಿಯಲ್ಲಾಗಲೀ, ಇಟಲಿಯಲ್ಲಾಗಲೀ ಒಸ್ಟ್ರಿಯಾದಲ್ಲಾಗಲೀ ವಾಗ್ಸ್ವಾತಂತ್ರ್ಯವಿರುವುದಿಲ್ಲ ಸರಕಾರವನ್ನು ಒಂದಿಷ್ಟು ನಿಂದಿಸಲು ಕೂಡಾ ಜನರು ಭಯಗೊಳ್ಳುತ್ತಿರುವರು ಆದರೆ ಜನರೊಳಗೆ ತೃಪ್ತಿಯಿಲ್ಲವೆಂದು ಅವರ ಮೌನಧಾರಣೆಯಿಂದಲೇ ವ್ಯಕ್ತ

ನಾಜಿಗಳು ಬಲಿಷ್ಠರಾಗುತ್ತ ಬಂದುದರಿಂದಾಗಿ ಜರ್ಮನಿಯಲ್ಲಿ ಅಧಿಕಾರಿಗಳು ಭಾರತೀಯರನ್ನು ವಕ್ರದೃಷ್ಟಿಯಿಂದಲೇ ನೋಡುವಂತಾಗಿದೆ ಭಾರತೀಯರನ್ನು ಸಮಾನ ದೃಷ್ಟಿಯಿಂದವಲೋಕಿಸಲು ಸಿದ್ಧವಿರುವ ಒಂದು ದೇಶವೆಂದರೆ ಜೆಕೊಸ್ಲೋವೇಕಿಯಾ ಈ ದೇಶದ ಅಧ್ಯಕ್ಷನಾದ ಮಸರೀಕರವರು ತತ್ವ ಮನೋರಥ ನರಪಾಲರಾಗಿದ್ದು ಪ್ಲೇಟೋವಿನ ಖ್ಯಾತಿಯನ್ನು ಹೊಂದುತ್ತಿರುವರು ಅವರು ವಿಶಾಲ ಹೃದಯಿಗಳು—ಸರಳರು ಜೆಕೊಸ್ಲೋವೇಕಿಯಾವು ಪೆಸಿಫಿಸ್ಟ್ ಧೋರಣವನ್ನೇ ಮುಂದಿಟ್ಟುಕೊಂಡಿದೆ ಪೌರ್ವಾತ್ಯ ಪರಿಜ್ಞಾನವನ್ನು ಹೊಂದಿದ ಪ್ರೊ॥ಫ್ ಲೆಸ್ನಿ ಎಂಬವರು ಪ್ರೇಗ್‌ನಲ್ಲಿ ಇಂಡೋ ಜೆಕ್ ಸಂಘವನ್ನು ಸ್ಥಾಪಿಸಿ ಎರಡು ದೇಶಗಳೊಳಗಣ ಪರಸ್ಪರ ಸೌಹಾರ್ದವನ್ನು ಸ್ಥಾಪಿಸಲು ಯತ್ನಿಸುತ್ತಿರುವರು ಇವರು ಮುಂಚೆ ಠಾಕೂರರ 'ವಿಶ್ವಭಾರತಿ'ಯಲ್ಲಿದ್ದರು ಎಂದು ಶ್ರೀಮತಿಯವರು ತಿಳಿಸಿದರು

ತನ್ನ ಪ್ರವಾಸಕಾಲದಲ್ಲಿ ಭಾರತೀಯ ಮಿತ್ರರಿಬ್ಬರನ್ನು ತಾನು ಕಂಡೆನೆಂದು ಕಲ್ಯಾಣಿ

## ರಾಮಕೃಷ್ಣ ಛಾಪಖಾನೆಯವರೊಡನೆ 1000 ರೂಪಾಯಿ ಭದ್ರತೆ ಕೇಳಿದ್ದಾರೆ.

ಗುಂಟೂರು, ಆಗೋಸ್ತು 21

ತೆನ್ನಾಲಿಯ ರಾಮಕೃಷ್ಣ ಛಾಪಖಾನೆಯ ಮ್ಯಾನೇಜರಾದ ಶ್ರೀ॥ ವೀರಬಾಹು ರಾವ್, ಇವರಿಗೆ ಲಾಹೋರಿನ ಪಿತೂರಿಯಲ್ಲಿ ಸೆರೆಸಿಕ್ಕಿ ಮಡಿದ ಜತಿನ್‌ದಾಸ್ ಎಂಬವರ ಜೀವನ ಚರಿತ್ರೆಯನ್ನು ಛಾಪಿಸಿ ಪ್ರಕಾಶಗೊಳಿಸಿದಕ್ಕಾಗಿ ಇಂಡಿಯನ್ ಪ್ರೆಸ್ ಆಕ್ಟಿನ ೩ನೇ ಕಲಂ ಪ್ರಕಾರ ೧೦೦೦ ರೂಪಾಯಿ ಬದ್ರತೆಯನ್ನು ಕೇಳಿದ್ದಾರೆ ಹಣವನ್ನು ಆಗೋಸ್ತು ೩೧ರೊಳಗೆ ಕೊಡಬೇಕೆಂದೂ ತಿಳಿಸಿದೆ

## ಎಬಿಸೀನಿಯಾದ ಹೆಂಗಳೆಯರು ಯುದ್ಧಕ್ಕಾಗಿ ಟೊಂಕಕಟ್ಟಿರುವರು

### ರಾಣಿಯ ಯುದ್ಧಘೋಷ

ಅಡಿಸ್ ಅಬಾಬಾ

"ನಮ್ಮ ದೇಶದ ಹೆಂಗಳೆಯರು, ಪೂರ್ವದಲ್ಲಿ ರಣರಂಗಕ್ಕೆ ತೆರಳಿ ತಮ್ಮ ಸಾಮರ್ಥ್ಯದಿಂದ ಜಯಭೇರಿಯ ಘೋಷಣೆಯನ್ನು ಮಾಡಿದ್ದಾರೆ ಇಂದು ನಾವೂ ಹಾಗೇ ಈ ಘೋರ ಸಂಗ್ರಾಮದಲ್ಲಿ ತಮ್ಮ ಗಂಡಂದಿರ ಸಹಭಾಗಿಗಳಾಗಿ ವೈರಿಗಳನ್ನು ನಮ್ಮ ದೇಶದಿಂದ ಹೊಡೆದೋಡಿಸಲು ಸಿದ್ಧರಾಗುವಾ ಪೂರ್ವಜರ ರಕ್ತವು ನಮ್ಮ ಧಮನಿಗಳಲ್ಲಿ ಹರಿಯುತ್ತದೆ, ಅವರಂತೆಯೇ ನಾವೂ ವೀರಮಾತೆಯರಾಗಬೇಕು ಕದನಕ್ಕೆ ತೆರಳುವವರಿಗೆ ಊಟ ಉಪಚಾರಗಳನ್ನೂ, ಪೆಟ್ಟಾದವರಿಗೆ ಚಿಕಿತ್ಸೆಯನ್ನೂ, ಅಗತ್ಯ ಬಿದ್ದಾಗ ಯುದ್ಧ ಮಾಡಲು ನಾವು ಹಿಂಜರಿಯುವವರಲ್ಲ. ನಲ್ವತ್ತು ವರುಷಗಳ ಹಿಂದೆ, ಟೆಯಿಟ್ಯೂ ಚಕ್ರವರ್ತಿನಿಯು (ನಾಲ್ಕನೆ ಮೆನೆಲಿಕನ ಹೆಂಡತಿ) ಇದೇ ಇಟಲಿ ಜನಾಂಗವನ್ನು ಹೊಡೆದೋಡಿಸಿದಳು ಇಂದೂ ಹಾಗೆ ನಾವೂ ಮಾಡಬಾರದೇಕೆ?—ನಮ್ಮ ದೇಶವನ್ನೂ ಅದರೊಡನೆ ಸ್ವಾತಂತ್ರ್ಯವನ್ನೂ ರಣಹೇಡಿಗಳಂತೆ ನಾವು ಹೀಗೆ ಬಿಟ್ಟುಕೊಡುವವರಲ್ಲ ದೇಹದಲ್ಲಿ ಪ್ರಾಣವಿರುವ ತನಕವೂ ಅದನ್ನು ಹೋಗಗೊಡಲಾರೆವು. ಇಲ್ಲವೆ ಶಾಂತಿಸ್ಥಾಪನೆಯಾಗಬೇಕು, ಯುದ್ಧದಲ್ಲಿ ಸೋತು


## ಉದರ ಬಾಧೆಯಿರುವವರಿಗೆ ಅದ್ಭುತಕರ ವಾರ್ತೆ!

ನಿಮ್ಮ ಹೊಟ್ಟೆಯ ಯಾವ ರೀತಿಯ ಬಾಧೆಯನ್ನೇ ಕೊಡಲಿ ... ನೀವು ... ಗುಣಹೊಂದಬಹುದು.

ಅದು ಅಜೀರ್ಣವಾಗಲಿ, ಕಟಿವಾತವಿರಲಿ, ಅದವಾ ಉದರಶೂಲೆಯಾಗಲಿ, ನೀವು ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ತೆಗೆದುಕೊಂಡರಾಯಿತು ಹೊಟ್ಟೆಯ ರೋಗಕ್ಕೆ ಇದು ಮಹಾ ಮಹಾ ಡಾಕ್ಟರರಿಂದ ಶಿಫಾರಸು ಮಾಡಲ್ಪಟ್ಟಿದೆ ಆಸ್ಪತ್ರೆಗಳಲ್ಲಿ ಉಪಯೋಗಿಸಲ್ಪಡುತ್ತದೆ

ಉದರವಾಯು, ಅಥವಾ ಉದರಶೂಲೆಗಳಿಗಷ್ಟು ಶೀಘ್ರ ಪರಿಣಾಮಕಾರಿಯೋ ಹಾಗೆ ಅಜೀರ್ಣಕ್ಕೂ ಇದ ಅಷ್ಟೇ ಪರಿಣಾಮಕಾರಿ

ನಿಮಗೆ ಯಾವ ರೀತಿಯ ಹೊಟ್ಟೆಯ ರೋಗಗಳಿಗಿದ್ದರೆ ಸಾವಿರಾರು ಜನರು ಪರೀಕ್ಷಿಸಿ ಅದ್ಭುತವೆಂದ ಈ ಔಷಧಿಯನ್ನೇ ಸ್ವೀಕರಿಸಿರಿ. ಆದರ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಎಚ್ಚರಿ. ಅದಕ್ಕೆ ಕೆಂಪು ಸೀಲ್ ಇದೆ

ಎಂಬ ಸಹಿಯು ಅಚ್ಚು ಬಿಲ್ಲೆ ಮತ್ತು ಚೀಟಿಗಳ ಮೇಲಿದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

**ಮೊರ್ಟನ್ ಎಂಡ್ ಹೆರಿಸ್ ಲಿಮಿಟೆಡ್,**

15 ಸಂಕುರಾಮ ಚೆಟ್ಟಿಸ್ಟ್ರೀಟ್, ಮದ್ರಾಸು—

ಇಲ್ಲಿಗೆ ಬರೆಯಿರಿ.



## "GUPTA MANTRA"

**A reward of Rs 100.**

The objects, which cannot be achieved by spending lacs of rupees may be had by repeating this Mantra seven times. There is no necessity of undergoing any hardship to make it effective. It is effective without any preparation. This is a "WASHIKARAN MANTRA." It will make you forunate give you service and advancement and bring you profit in trade. A reward of Rs. 100, if proved fallible. Price including postage etc, Rs. 2-7-0.

**Siddha Mantra Ashram,**

KATRISARAI...(GAYA.)

M A A.

## WHITE LEPROSY AND LEUCODERMA

A few day's application of this medicine cures WHITE LEPROSY and LEUCODERMA radically. Get rid of this horrible disease by application of this medicine inspite of failure by hundreds of Hakims, Doctors, Kavirajas and advertisers Rs. 500 rewarded if proved fallible, Price Rs. 2/-

VAIDYARAJ AKHIL KISHORE RAM

P O KATRISARAI (ಗಯಾ)

M A A

## ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ.

ವಿ-ಮೊ-ಲ

VIM-O-LA

**ಅಮೆರಿಕಾದ ಜೀವಸಾರ ಔಷಧಿ**

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂದಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

*Manufactured by*

**American Herbal Products Co.,**

Sole representatives for above medicine.

The National Kanara News Agency,

Sir Phirozsha Metha Road,

Fort Bombay.

## ಕಣ್ಣಿನ ಹನಿ.

"ಐ-ಸನ್" ಎಂಬ ನೇತ್ರಭಾಸ್ಕರ-ಈ ಔಷಧವು ಕಣ್ಣುಬೇನೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Haryya sram, Panchpota, Bengal.

## Shiromani Narayanacharya

*Choukhamba Benares City*

THIS MAN
OUR CUSTOMER

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ಘನವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಆಕರ್ಷಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅರ್ಧ ಪ್ರಮಾಣದ ಕಂಠಿಸರ 1ಕ್ಕೆ ಆಠೆ 100ದ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಠೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ಜೊ 3ರಿಂದ ರೂ 50ರ ವರೆಗೆ. ಮತ್ತು 1-4-5-6-7-8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10. ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾಯಿ 40ರಿಂದ 100ರ ವರೆಗೆ, ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಿಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು 1 ಚಿತ್ರೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿಕ್ಚರಬುಕ ಕಳುಹಿಸಲಾಗುತ್ತದೆ 3 ಇನಾಮುಗಳು)

**ಶಿರೋಮಣಿ ನಾರಾಯಣಾಚಾರ್ಯ**

ಚೌಖಂಬಾ, ಬೆನಾರಸ್ (ಕಾಶೀ)

## ಮುಂಬಾಯಿಯಲ್ಲಿ

– ಸ್ವದೇಶಾಭಿಮಾನಿಯ ಬಿಡಿಸಂಚಿಕೆಗಳು ಸಿಗುವ ಸ್ಥಳ:

The National Kanara News Agency,

Sir Phirosha Metha Road,

Fort Bombay.

9/8

## ೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟದೆಯೋ, ಅವರು ಸುಲಭವಾಗಿ ವಶ ಆಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ. ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ. ರೋಗ ನಾಶಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ಯೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ. ಬೆಲೆ ರೂ. ೨ ಮಾತ್ರ.

CI P. 8    Bengal Mesmurism House

5-7    Panchpota, Bengal (S.R.)

## New Era Technical School.

Near Market Square, Udipi.

Commercial classes-approved by the Madras Government-New session opens in June.

**ನ್ಯೂ ಈರಾ ಟೆಕ್ನಿಕಲ್ ಸ್ಕೂಲ್**

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.


## ಮಂಗಳೂರಿನ ಪೇಟೆಧಾರಣೆ.

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ರಾಶಿ ಅಕ್ಕಿ | 3— 8 | 4— 0 |
| ಮುಸ್ಕಿ | 4— 0 | 4— 8 |
| ಗುಡ್ಡು | 3—12 | 4— 0 |
| ಊರ ಅವಲ್ ಬೆಳ್ತಿಗೆ | 4— 4 | 4— 8 |
| ರಂಗೂನು ಬೆ. ಗೋ. ಗಳ್ಳೆ | 6— 4 | 6— 12 |
| ಎಲ್ಲೂರು ಬೆ. ಮು. ಗಳ್ಳೆ | 4— 4 | 4— 8 |
| ಗೋಧಿ ಗೋಣಿ ಗಳ್ಳೆ | 10— 0 | 12— 8 |
| ತೊಗರಿ ಗೋಣಿ ಗಳ್ಳೆ | 10 —8 | 11— 0 |
| ಹುರುಳಿ ಗೋಣಿ ಗಳ್ಳೆ | 7— 6 | 7 —12 |
| ಕಡಲೆ ಗೋಣಿ ಗಳ್ಳೆ | 7 — 8 | 10— 8 |
| ತೊಗರಿಬೇಳೆ ಗೋಣಿಗಳ್ಳೆ | 10— 0 | 17— 0 |
| ಉದ್ದು ಗೋಣಿ ಗಳ್ಳೆ | 8— 0 | 8— 8 |
| ಹೆಸರು ಗೋಣಿ ಗಳ್ಳೆ | 9— 4 | 9—12 |
| ಊರುಬೆಲ್ಲ ಖಂಡಿ ಗಳ್ಳೆ | 40— 8 | 41— 8 |
| ಉಪ್ಪು ಗೋಣಿ ಗಳ್ಳೆ | 4—12 | 5— 2 |
| ಕೊಬ್ಬರಿ ಖಂಡಿ ಗಳ್ಳೆ | 48— 0 | 55— 0 |
| ಕೊಬ್ಬರಿ ಹಿಂಡಿ ಖಂಡಿ ಗಳ್ಳೆ.. | 20— 0 | 20— 8 |
| ಎಳ್ಳಿಂಡಿ ಖಂಡಿ ಗಳ್ಳೆ | 31 — 4 | 32— 6 |
| ಕೊಬ್ಬರಿ ಎಣ್ಣೆ ಮುಡಿ ಗಳ್ಳೆ | 3 —13 | 4— 14 |
| ಎಳ್ಳೆಣ್ಣೆ ಮುಡಿ ಗಳ್ಳೆ | 5— 2 | 6— 0 |
| ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳೆ. | 5— 8 | 5—12 |
| ಮಲ್ಲಿಗೆ ಸಕ್ಕರೆ ಮ. ಗಳ್ಳೆ . | 3—10 | 3—13 |
| ಮೆಣಸು | 4— 4 | 5— 0 |
| ಸಾಸಿವೆ ಮುಡಿ ಗಳ್ಳೆ .. | 5 —12 | 6— 0 |
| ಕಾಳುಮೆಣಸು ಖ. ಗಳ್ಳೆ | 100— 0 | 110— 0 |
| ಮೆಂತ್ಯಬೀಜ ಮುಡಿಗಳ್ಳೆ | 30— 0 | 34 — 0 |
| ಗೇರುಬೀಜ ಮು. ಗಳ್ಳೆ | 4— 6 | 4 — 8 |
| ಕಬ್ಬಿಣ ಖಂಡಿ ಗಳ್ಳೆ | 30— 0 | 39— 8 |
| ತಾಂಬ್ರತಗಡು ಮು. ಗಳ್ಳೆ | 9— 8 | 9— 8 |
| ತಾಂಬ್ರಪಾತ್ರಗಳು ಮು. ಗಳ್ಳೆ | 11— 0 | 12— 0 |
| ಚೀನಾಬೆಳ್ಳಿ ಸೇರು ಗಳ್ಳೆ ... | 17— 0 | 18— 0 |
| ಹಿತ್ತಾಳೆ ತಗಡು ಮು. ಗಳ್ಳೆ | 8— 12 | 9—0 |
| ಪವನು ಗಳ್ಳೆ .. | 22— 6 | 22— 8 |
| ಹುಣಸೆ ಹುಳಿ ಖಂಡಿ ಗಳ್ಳೆ | 20— 0 | 25— 8 |
| ನೇಟಿವ್ ಕಾಫಿ ಖಂಡಿ ಗಳ್ಳೆ | 170— 0 | 180— 0 |
| ಪ್ಲಾಂಟೇಶನ ಕಾಫಿ ಖಂಡಿ ಗಳ್ಳೆ | 210— 0 | 215— 0 |
| ಮಂಗಳೂರು ಪಿಲಿಕ್ಕೆ .. | 24— 0 | 25— 8 |
| ಸಕಲೇಶಪುರ ಪಿಲಿಕ್ಕೆ . | 28— 0 | 38 — 0 |


LOOK SHARP! LOOK AHEAD

## Murdeshwar's Banking Institute,

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

**Ladies are also admitted.**

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

*For further particulars apply to.—*

**D R Murdeshwar,**

Dip. Econ, F. R. Econ; S. (Lond.)

Principal.

Ganapathy High School Street,

Mangalore

## ಬೇಕಾಗಿದ್ದಾರೆ

ನಮ್ಮ ಕಂಪೆನಿಗೆ ಕನ್ನಡನಾಡಿನಲ್ಲಿ ಏಜಂಟರುಗಳು ಬೇಕಾಗಿರುವರು ಅವರಿಗೆ ಕನ್ನಡ ಮತ್ತು ಇಂಗ್ಲಿಷ್ ಗಳ ಪರಿಚಯವಿರಬೇಕು. ವ್ಯಾಪಾರದಲ್ಲಿ ಸರಿಯಾದ ಅನುಭವವೂ ಇರಬೇಕು ವ್ಯವಹಾರ ನುಡಿಗಳಿಂದ ಜನರ ಮನವೊಲಿಸುವ ವಿಚಕ್ಷಣಶಾಲಿಗಳಾಗಿರಬೇಕು. ತಿಂಗಳಿಗೆ ಕಡಮೆಯಿಲ್ಲದೆ ೧೦೦೦ ರೂಪಾಯಿಗಳ ನಮ್ಮ ಮಾಲನ್ನು ಕಡ್ಡಾಯ ವಿಕ್ರಯಿಸಬೇಕು. ಯಾವಾಗ ಬೇಕಾದರೂ ಒಂದು ಸಾವಿರ ರೂಪಾಯಿಗಳ ಮಾಲನ್ನು ಕೊಡುತ್ತೇವೆ ಎಷ್ಟು ಬೇಕಾಗುತ್ತದೋ ಅಷ್ಟನ್ನು ವಿಕ್ರಯಿಸಿ, ಉಳಿದುವುಗಳನ್ನು ಹಿಂದೆ ಕೊಟ್ಟು ಬೇರೆಯವುಗಳನ್ನು ಪಡೆಯಬಹುದು ಏಜಂಟರಾಗುವವರು 1025 ರೂಪಾಯಿಗಳ ನಗದು ಜಾಮೀನ್ ಕೊಡಬೇಕು ಆ ಹಣಕ್ಕೆ ಸೇಕಡಾ ೨ರಂತೆ ಬಡ್ಡಿಯನ್ನು ಕಂಪೆನಿಯು ಕೊಡುವುದು ಏಜಂಟರಾಗುವವರಿಗೆ ರೂ. 50 ಸಂಬಳ, 20 ರೂಪಾಯಿ ಭತ್ತೆ ಹೆಚ್ಚು ಮಾಲು ವಿಕ್ರಯಿಸಿದರೆ ತಕ್ಕ ಬೋನಸ್ ಕೊಡಲಾಗುವುದು ವ್ಯಾಪಾರವು ತಿಂಗಳಿಗೆ ಸಾವಿರ ರೂಪಾಯಿಗಳ ಕಡಮೆಯಾಗಲೇ ಬಾರದು. ಹೆಚ್ಚಿನ ವಿವರಗಳಿಗೆ.

**S U. Narayanacharya & Co.**

Embroidery Silk Manufacturers,

Benares City

9/8


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಭಾದ್ರಪದ ಶು ೯ ಶನಿವಾರದಿಂದ ಭಾದ್ರಪದ ಬ ೧ ಶುಕ್ರವಾರದ ವರೇಗಿನ ಪಂಚಾಂಗ. (ರವಿ ಸಿಂಹ ಸೋಣ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ವಿಶೇಷ |
|---|---|---|---|---|---|---|---|
| 7 | ಶನಿ | ೯ | ೩೦ | ಮೂಲಾ | ೪೩ | ೩೩ | * ಶ್ರವಣ ದ್ವಾದಶಿ |
| 8 | ರವಿ | ೧೦ | ೧೮ | ಪೂ. ಷಾಢ | ೩೯ | ೩೩ | |
| 9 | ಸೋಮ | ೧೧ | ೧೪ | ಉ. ಷಾಢ | ೩೪ | ೩೪ | |
| 10 | ಮಂಗಳ | ೧೨ | ೯ | ಶ್ರವಣಾ | ೩೪ | ೩೫ | |
| 11 | ಬುಧ | ೧೩ | ೪ | ಧನಿಷ್ಠಾ | ೨೮ | ೩೬ | |
| 12 | *ಗುರು | ೧೪ | ೫೦ | ಶತಭಿಷಾ | ೨೬ | ೩೭ | |
| 13 | ಶುಕ್ರ | ೧೫ | ೪೫ | ಪೂ. ಭಾದ್ರ | ೨೨ | ೩೮ | |

# ಸಂಪಾದಕರ ಟಪ್ಪಾಲು ಪೆಟ್ಟಿಗೆ

[ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

## ಹೈಯರ್ ಎಲಿಮೆಂಟರಿ ಗ್ರೇಡ್ ತರಬೇತಿ ಪರೀಕ್ಷೆ ಪಾಸಾದ ಉಪಾಧ್ಯಾಯರುಗಳ ಅವಗಾಹನೆ ಬಗ್ಗೆ.

ಮಾನ್ಯ ಡಿ ಬೋ ಎ ಆಫೀಸರರಾದ ಅರ್ ವೆಂಕಟಯ್ಯ ಬಿ. ಎ. ಎಲ್. ಟಿ ಇವರಿಂದ ಕಳೆದ ೩೦-೫-೧೯೩೬ರಲ್ಲಿ R. O. C. No. 5871/ E. 1/1936ನೇ ಸರ್ಕ್ಯುಲರು ಸಾದರಾಗಿ ದಕ್ಷಿಣ ಕನ್ನಡ ಜಿಲ್ಲೆಯೊಳಗಿರುವ ಎಲ್ಲಾ ಪ್ರಾಥಮಿಕ ಶಾಲಾ ಮುಖ್ಯ ಉಪಾಧ್ಯಾಯರುಗಳಿಗೆ ಕಳೆದ ಮೇ ತಿಂಗಳಾಂತ್ಯ ದೊಳಗೆನೇ ತಲಪಿರಬಹುದು

ಸದ್ರಿ ಸರ್ಕ್ಯುಲರಿನಲ್ಲಿ ಮೇ ತಿಂಗಳ ಸಂಬಳದ ಬಿಲ್ಲು ತಯಾರಿಸುವ ಕ್ರಮ ಅಂದರೆ ಎಂದಿನಿಂದ ಸರ್ವೀಸು ಹಿಡಿದು ಬಡ್ತಿ ಲೆಕ್ಕ ಮಾಡಿ ಬಿಲ್ಲು ಬರೆಯಬೇಕು ಉಪಾಧ್ಯಾಯರುಗಳ ಜಾತಕ (ಯೋಗ್ಯತಾ ಪತ್ರಿಕೆ) ಇನ್ನೊಂದು ಜಾತಕದ ಪಟ್ಟಿ ಇವೇ ಮೊದಲಾದವುಗಳನ್ನು ಅದರಲ್ಲಿ ಪ್ರತ್ಯೇಕವಾಗಿ ಬರೆದು ಮೇ ತಿಂಗಳ ಅಂತ್ಯದೊಳಗೆ ರವಾನಿಸಬೇಕೆಂದು ಆಜ್ಞಾಪಿಸಲ್ಪಟ್ಟಿರುತ್ತದೆ ಅಲ್ಲದೆ ಸದ್ರಿ ಸರ್ಕ್ಯುಲರಿನ ಎರಡನೇ ಮತ್ತು ಮೂರನೇ ಭಾಗಗಳಲ್ಲಿ "ತರಬೇತಿ ಪರೀಕ್ಷೆ ಪಾಸಾದ ನಂತರ ಬೋರ್ಡ್ ಸರ್ವೀಸಿಗೆ ಸೇರಿದ ಲಾಗಾಯ್ತು ಉಪಾಧ್ಯಾಯರುಗಳು ಬಡ್ತಿ ಹೊಂದಲಿಕ್ಕೆ ಅರ್ಹರಾಗಿರುತ್ತಾರೆಂತಲೂ ಹಾಗಿದ್ದವರ ಹಿಂದಿನ ಸರ್ವೀಸನ್ನು ಹಿಡಿದು ಲೆಕ್ಕಮಾಡಿ ಕೇಳ ಈ ದರದಲ್ಲಿ ಪಗಾರಮಾಡಿ ಬಿಲ್ಲು ಬರೆಯಬೇಕೆಂದೂ ಸ್ಪಷ್ಟವಾಗಿರುತ್ತದೆ"

ಎಲ್ಲವರಿಗೂ ಕಳೆದ ಎಪ್ರಿಲ್ ತಿಂಗಳ ಲಾಗಾಯ್ತು ಸಂಬಳವನ್ನು ಕೇಳ ದರದಲ್ಲಿ ಕಡಮೆಮಾಡಿ ರಿಟ್ರೆಂಚಮೆಂಟ ಸಂಗತಿ ಸರ್ವ ವಿದಿತ ನಂತರ ಸದ್ರಿ ಸರ್ಕ್ಯುಲರಿನ ಆಧಾರದ ಮೇಲೆ ಬಿಲ್ಲು ತಯಾರಿಸಿ ಕಳುಹಿಸಿದವರ ಪೈಕಿ ಕೆಲವರು ಅನ್ಯಾಯಹೊಂದುವುದು ಅಂದರೆ ಬಹಳ ಕಷ್ಟ ಇದು ಯಾವ ಕಾರಣದಿಂದ ಹೀಗಾಯಿತೆಂಬುದು ಈ ವರೆಗೆ ತಿಳಿಯಲಿಲ್ಲ ಮೇ ಹೋಗಿ ಸಪ್ಟೆಂಬರ ಬಂತು

ಗವರ್ನಮೆಂಟಿನ ನಿಬಂಧನೆ ಪ್ರಕಾರ "ತರಬೇತಿ ಪರೀಕ್ಷೆ ಪಾಸಾದ ನಂತರ ಎರಡನೆ ಸರ್ವಿಸಿದ್ದ ಉಪಾಧ್ಯಾಯನು ಬಡ್ತಿ ಹೊಂದಲಿಕ್ಕೆ ಅರ್ಹನಾಗುತ್ತಾನೆ ಆದರೆ ಪಾಸಾದ ಮೂರು ವರ್ಷದೊಳಗೆ ಪ್ರೆಕ್ಟಿಕಲ್ ಪರೀಕ್ಷೆ ಪಾಸಾಗಲೇಬೇಕು (ಸರ್ಟಿಫಿಕೇಟು ಪೂರ್ಣಗೊಳಿಸಬೇಕು.) ಸಂಬಳ ಶಿಕ್ಷಾ ರಚನೆಯಲ್ಲಿದ್ದಾಗಲೂ ಹೀಗೆ ಖಂಡಿತವಾಗಿ ನಿಬಂಧನೆ ಇದೆಯೆಂದು ಬಹು ಮಹನೀಯರು ಹೇಳಿದರು

ನಾನು ಕಳೆದ ೧೯೩೩ನೇ ಇಸವಿಯಲ್ಲಿ ತರಬೇತಿ ಪರೀಕ್ಷೆ ಪಾಸಾಗಿರುತ್ತೇನೆ ಅಲ್ಲದೆ ಸದ್ರಿ ಇಸವಿಯ ೧-೪-೩೩ರ ಲಾಗಾಯ್ತು ಎಡಬಿಡದೆ ಬೋರ್ಡ್ ಸರ್ವೀಸಿನಲ್ಲಿರುತ್ತೇನೆ ಕಳೆದ ೩೧-೩-೩೬ರ ಒಳಗೆ ನನ್ನ ಸರ್ಟಿಫಿಕೇಟು ಸಂಬಂಧಪಟ್ಟ ಅಧಿಕಾರಿಗಳಿಂದ ಪೂರ್ಣಗೊಳಿಸಲ್ಪಟ್ಟಿದೆ ಹೀಗಿದ್ದರೂ ನನಗೆ ಮುಂಚೆ ಇದ್ದ ಸಂಬಳದಲೇ ಕೇಳ ಈ ದರದಲ್ಲಿ ಕಡಿಮೆ ಮಾಡಿರುತ್ತಾರೆ ನನ್ನ ಹಾಗೆ ಇನ್ನೊಂದಿಗೆ ತರಬೇತಿ ಪರೀಕ್ಷೆ ಪಾಸಾಗಿರುವ ಕೆಲವರು ಅನ್ಯಾಯಹೊಂದಿರು ತ್ತಾರೆಂದು ಕೇಳುತ್ತೇನೆ ಹೀಗಾದರೆ ಬಹು ಕಷ್ಟ

ಆದುದರಿಂದ ನನ್ನ ಹಾಗಾದವರು ಇನ್ನಾದರೂ ಎಚ್ಚರವಾಗಿ ಸದ್ರಿ ವಿಷಯದಲ್ಲಿ ಸಂಬಂಧಪಟ್ಟ ಉದ್ಯೋಗಸ್ಥರನ್ನು ಸದ್ರಿ ಸರ್ಕ್ಯುಲರಿನ ಪ್ರಕಾರವೂ ಗವರ್ನಮೆಂಟಿನ ನಿಬಂಧನೆ ಪ್ರಕಾರವೂ ಕಳೆದ ಎಪ್ರಿಲ್ ಲಾಗಾಯ್ತು ಕಡಮೆ ಮಾಡಿದ ಸಂಬಳವನ್ನು ಕೂಡಿಸಿಕೊಡಬೇಕೆಂದು ಕೇಳಿಕೊಳ್ಳಬೇಕಾಗಿ ಈ ಮೂಲಕ ನನ್ನ ಸಹೋದ್ಯೋಗಿ ಉಪಾಧ್ಯಾಯ ಬಂಧುಗಳಲ್ಲಿ ಪ್ರಾರ್ಥಿಸುತ್ತೇನೆ

ಒಬ್ಬಿಬ್ಬರು ಹೇಗೆ ಕೈಕಾಲು ಬಡಕೊಂಡರೂ ಫಲ ಕಾರಿಯಾಗುವುದಿಲ್ಲ. ಎಲ್ಲವರೂ ಒಮ್ಮನಸ್ಸಿನಿಂದ ಕೆಲಸಮಾಡಿದರೆ ಜಯಸಿಕ್ಕದೆ ಉಳಿಯಲಿಕ್ಕಿಲ್ಲವೆಂದು ನನ್ನ ಭಾವನೆ

ಮೊನ್ನೆ ಇತ್ತಲಾಗೆ ಮದ್ರಾಸಿನಲ್ಲಿ ಕನ್ನಡ ಪಂಡಿತರೆಲ್ಲರೂ ಒಟ್ಟಾಗಿ ಸಭೆಗೂಡಿಸಿ ಮಾಡಿದ ನಿರ್ಣಯ ಪ್ರಕಾರ ಅವರಿಗೆ ತಿಂಗಳೊಂದರ ರೂಪಾಯಿ ೪೫ರಿಂದ ೬೫ರ ವರೆಗೆ ಸಂಬಳ ಕೊಡಬೇಕೆಂದು ಕೇಳಿದ ಪ್ರಕಾರ ನಿಶ್ಚಯಿಸಲ್ಪಟ್ಟಿರುತ್ತದೆಂದು ನನ್ನ ಸಹೋದರ ಉಪಾಧ್ಯಾಯರುಗಳ ಪೈಕಿ ಅನೇಕರು ತಿಳಿದಿರಬಹುದು ಹಾಗಾದರೆ, ನಾವು ಅವರನ್ನು ಯಾಕೆ ಅನುಸರಿಸಬಾರದು?

"ಬಡ ಉಪಾಧ್ಯಾಯ"

# ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಿವಿಕ್ ಬೋರ್ಡು.

## ಜಿಲ್ಲಾ ಬೋರ್ಡ್ ಮತದಾರರಲ್ಲಿ ವಿನಂತಿ

ಬಂಧು ಭಗಿನಿಯರೇ,

ಜನತಾಸೇವೆಗಾಗಿಯೇ ಇರುವ ರಾಷ್ಟ್ರೀಯ ಸಭೆಯು ಸರದಾಗಿ ಅದರ ಧ್ಯೇಯವನ್ನು ವಿಧಾಯಕ ಕಾರ್ಯಕ್ರಮವನ್ನೂ ಸಾಧ್ಯವಿದ್ದಷ್ಟು ಸಾಧಿಸುವ ಸಲುವಾಗಿ ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಪ್ರತಿನಿಧಿಗಳು ಭಾಗವಹಿಸಲಿರುವ ವಿಷಯ ಎಲ್ಲರಿಗೂ ತಿಳಿದಿರಬಹುದು, ಹಾಗೂ ಕಾಂಗ್ರೆಸ್ ಸದಸ್ಯರು ಜಿಲ್ಲಾ ಬೋರ್ಡಿನಲ್ಲಿ ಪ್ರವೇಶಿಸಿ ಕೈಕೊಳ್ಳಲಿರುವ ಕಾರ್ಯಕ್ರಮವು ಕೂಡ ಈ ಮುಂಚೆಯೇ ಪ್ರಕಟಿಸಲ್ಪಟ್ಟಿದೆ.

ಜಿಲ್ಲಾ ಬೋರ್ಡು ಯಾವನೊಬ್ಬ ವ್ಯಕ್ತಿಯ ಹೆಸರು ಇಲ್ಲವೆ ಅಧಿಕಾರದ ಬೆಳವಣಿಗೆಗಾಗಿ ಇರುವುದಲ್ಲ. ಅದು ಜಿಲ್ಲೆಯ ಎಲ್ಲಾ ಜನರಿಗೆ ಅಗತ್ಯವಿರುವ ನಾಗರಿಕ ಜೀವನದ ಸೌಕರ್ಯಗಳನ್ನು ಸುಲಭವಾಗಿಯೂ ನ್ಯಾಯವಾಗಿಯೂ ಕಲ್ಪಿಸಿಕೊಡುವ ಸಲುವಾಗಿ ಮಾತ್ರವೇ ಇರುತ್ತದೆ ಆದುದರಿಂದ ಯಾರು ಜನತಾಸೇವೆಯನ್ನೇ ತಮ್ಮ ಧ್ಯೇಯವನ್ನಾಗಿ ಇಟ್ಟುಕೊಂಡು ಕೆಲಸಮಾಡಬಲ್ಲರೋ ಅಂತಹರು ಮಾತ್ರ ಈ ಬೋರ್ಡಿನ ಸದಸ್ಯರಾಗುವುದರಲ್ಲಿ ನ್ಯಾಯವಿದೆ ಕೇವಲ ತಮ್ಮ ತಮ್ಮ ಜಾತಿಯ ಹಿತದ ಇಲ್ಲವೇ ಸ್ವಾರ್ಥದ ಸಲುವಾಗಿ ಮಾತ್ರವೇ ಈ ಬೋರ್ಡಿನ ಸದಸ್ಯರಾಗಬಯಸುವುದರಲ್ಲಿ ಅರ್ಥವಿಲ್ಲ ನಮ್ಮ ಜಿಲ್ಲೆಯಲ್ಲೂ ಕೂಡಾ ಕಾಂಗ್ರೆಸ್ ಪಕ್ಷದವರು ತಮ್ಮ ಸೇವೆ ದತ್ತ ಸಾಹಸದಿಂದ ತಮಗೆ ಸಾರ್ವಜನಿಕ ಸೇವೆಯಲ್ಲಿರುವ ದೃಢ ವಿಶ್ವಾಸವನ್ನು ಸ್ಪಷ್ಟಪಡಿಸಿರುತ್ತಾರೆ — ಎಂದಮೇಲೆ ಕೇವಲ ನ್ಯಾಯದ ಹಾಗೂ ಸಾರ್ವಜನಿಕ ಹಿತದ ದೃಷ್ಟಿಯಿಂದಲೇ ಕೆಲಸ ಮಾಡಲಿರುವ ಕಾಂಗ್ರೆಸ್ ಪ್ರತಿನಿಧಿಗಳು ಈ ಬಾರಿ ಜಿಲ್ಲಾ ಬೋರ್ಡನ್ನು ಪ್ರವೇಶಿಸುವಾಗ ಬಹುಮತದಿಂದ ಆರಿಸುವ ಕರ್ತವ್ಯವು ನಿಮ್ಮದಾಗಿದೆ

ಇದು ತನಕ ಹಲವು ಮಹನೀಯರು ಸುಮಾರು ಕಾಲ ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರಷ್ಟೆ ಈ ಬಾರಿ ಕಾಂಗ್ರೆಸ್ ಪಕ್ಷವು ಒಂದು ನಿಶ್ಚಿತ ಕಾರ್ಯಕ್ರಮದಂತೆ ಬೋರ್ಡಿನಲ್ಲಿ ಕೆಲಸಮಾಡಲಿರುವುದು. ಅದ್ದರಿಂದ ಇತರರೆಲ್ಲರೂ ಈ ಬಾರಿ ಬೋರ್ಡನ್ನು ಕಾಂಗ್ರೆಸಿಗೆ ಬಿಟ್ಟುಬಿಟ್ಟು ನಮ್ಮ ಕಾರ್ಯಕಲಾಪಗಳನ್ನು ನೋಡಬಾರದೇಕೆ? ಹೀಗೆ ಬಿಡಲು ಕೆಲವು ಮಹನೀಯರು ಸ್ವಾರ್ಥತ್ಯಾಗ ಮಾಡಬೇಕಾಗಬಹುದು ಆದರೆ ಕಾಂಗ್ರೆಸ್ಸಿನ ಉದ್ದೇಶ ಮತ್ತು ಧ್ಯೇಯಗಳಲ್ಲಿ ನಿಮಗೆ ಮತದಾರರಿಗೆ ನಂಬಿಗೆ ಇರುವುದು ನಿಜವಾದರೆ ಎಲ್ಲಾ ಕಡೆಗಳಲ್ಲಿ ಕಾಂಗ್ರೆಸ್ ಪ್ರತಿನಿಧಿಗಳಿಗೆ ಸಹಾಯಮಾಡಿ ಅವರೇ ಜಯಶೀಲರಾಗುವಂತೆ ಮಾಡುವ ಅಧಿಕಾರವು ನಿಮ್ಮಲ್ಲಿದೆ ಮತ್ತು ಹಾಗೆ ಮಾಡಬೇಕಾಗಿಯೂ ನಾನು ಕೇಳಿಕೊಳ್ಳುತ್ತೇನೆ

ಈಗ ಜಿಲ್ಲಾ ಬೋರ್ಡಿನಲ್ಲಿರುವ ಹಲವು ಸದಸ್ಯರನ್ನೇ ಕಾಂಗ್ರೆಸ್ ಸದಸ್ಯರನ್ನಾಗಿ ಸಿವಿಕ್ ಬೋರ್ಡು ಆರಿಸಲೂಬಹುದು, ಇದುತನಕ ಅವರು ಕಾಂಗ್ರೆಸ್ಸನ್ನು ಸೇರಿದವರಲ್ಲವೆಂದು ಯಾರೂ ಆಕ್ಷೇಪಿಸಬೇಕಾದ ಅಗತ್ಯವಿಲ್ಲ. ಉದಾಹರಣೆಗಾಗಿ ಸತ್ಯಾಗ್ರಹ ಸಮರದಲ್ಲಿ ಕೆಲವು ಸರಕಾರಿ ನವುಕರರು ತಮ್ಮ ಚಾಕರಿಗೆ ರಾಜಿನಾಮೆ ಕೊಟ್ಟು ಚಳವಳಿಯಲ್ಲಿ ಸೇರಿದುದುಂಟು ಹಿಂದಿನ ದಿನ ಅವರು ಸರಕಾರಿ ನೌಕರರಾಗಿದ್ದರೆಂಬುದರ ಮೇಲೆ ಅವರನ್ನು ಚಳವಳಿಯಲ್ಲಿ ಸೇರಿಸಕೂಡದೆನ್ನಬಹುದೇ? ಕಾಂಗ್ರೆಸ್ಸಿನ ಧ್ಯೇಯವನ್ನು ಅಂಗೀಕರಿಸುವ ಯಾವ ಸದ್ಗೃಹಸ್ಥನನ್ನು ಕಾಂಗ್ರೆಸ್ಸಿಗೆ ಸೇರಿಸಿಕೊಳ್ಳಬಹುದು, ಹಾಗೆಯೇ ನಾವು ಕೂಡಾ ಕಾಂಗ್ರೆಸ್ಸಿನ ಧ್ಯೇಯಕ್ಕೆ ಒಪ್ಪಿ ಖಾದಿ ಉಡುವ ಧರಿಸುವುದೇ ಮೊದಲಾದ ಸಿವಿಕ್ ಬೋರ್ಡಿನ ಶಿಸ್ತು ಮತ್ತು ನಿಯಮ, ನಿಬಂಧನೆಗಳಿಗೆ ಒಪ್ಪುವ ಯಾವ ಯೋಗ್ಯ ಗೃಹಸ್ಥರನ್ನೂ ನಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಸಿದ್ಧರಿರಬೇಕಾಗಿದೆ.

ಜಿಲ್ಲೆಯ ಬೇರೆ ಬೇರೆ ನಿರ್ವಾಚಕ ಸ್ಥಾನಗಳಿಗೆ ಕಾಂಗ್ರೆಸ್ಸಿನ ಕಡೆಯಿಂದ ಯಾರನ್ನು ಉಮೇದ್ವಾರರನ್ನಾಗಿ ಆರಿಸುವೆವೆಂದು ಇದೇ ತಿಂಗಳ ೧೦ನೇ ತಾರೀಕಿಗೆ ತಪ್ಪದೆ ಪ್ರಕಟಿಸುತ್ತೇವೆ. ಜಿಲ್ಲಾ ಬೋರ್ಡು ನಿಜವಾಗಿಯೂ ಜಿಲ್ಲೆಯ ಎಲ್ಲಾ ಜನರಿಗೂ ಜಾತಿಮತ ಭೇದವಿಲ್ಲದೆ ಅತಿ ಹೆಚ್ಚಿನ ಉಪಯೋಗಕರವಾದ ಸಂಸ್ಥೆಯಾಗಬೇಕೆಂದು ಬಯಸುವ ಪ್ರತಿಯೊಬ್ಬ ದೇಶಾಭಿಮಾನಿಯೂ ತಪ್ಪದೆ ಕಾಂಗ್ರೆಸ್ ಉಮೇದ್ವಾರರಿಗೆ ಸಹಾಯ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ ರಾಷ್ಟ್ರಸಭೆಯ ಸಭೆಯ ಗೌರವಕ್ಕೆ ಎಲ್ಲೂ ಕುಂದು ಬಾರದಂತೆ ಮತದಾರರೆಲ್ಲರೂ ಕಾದುಕೊಳ್ಳುವರೆಂದು ನಂಬುತ್ತೇನೆ

ಸೂರಪ್ಪಯ್ಯ ಹಲ್ಸನಾಡು.
ಕಾರ್ಯದರ್ಶಿ, ದ ಕ ಜಿ ಸಿವಿಕ್ ಬೋರ್ಡು

ಕೊಡಿಯಾಲಬೈಲಿನಲ್ಲಿರುವ ಸಿ. ಪಿ. ಸಿ. ಕಂಪೌಂಡಿನ ಹೊಸ ಕಟ್ಟಡದಲ್ಲಿ ಸಿವಿಕ್ ಬೋರ್ಡಿನ ಆಫೀಸು ತೆರೆಯಲ್ಪಟ್ಟಿದೆ. ಆಫೀಸು ಸಮಯ:- ಬೆಳಗ್ಗೆ ಘಂಟೆ ೯ರಿಂದ ೧೧ರ ವರೆಗೆ ಮಧ್ಯಾಹ್ನ ೩ರಿಂದ ೬ರ ವರೆಗೆ

# ಸಂಯುಕ್ತ ಗೌ॥ ಸಾ॥ ಬ್ರಾಹ್ಮಣ ಪರಿಷತ್ತು.

ಸಾರಸ್ವತ ಬ್ರಾಹ್ಮಣ ಸಮಾಜ್ಯದ ೨೬ನೇ ಅಧಿವೇಶನ

ಗಿರಗಾಂವ ಮುಂಬಾಯಿ.

ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣ ಪರಿಷದದ ೯ನೇ ಅಧಿವೇಶನವು ಮುಂಬಾಯಿಯಲ್ಲಿ ಬರುವ ಒಕ್ಟೋಬರ ತಿಂಗಳ ೨೫ ೨೬ ೨೭ ೨೮ನೇ ಈ ದಿವಸಗಳಲ್ಲಿ ಸೇರಲು ನಿಶ್ಚಯಿಸಿದೆ ಈ ಅಧಿವೇಶನಕ್ಕೆ ತಮ್ಮ ಸಹಾಯವನ್ನು ಅಪೇಕ್ಷಿಸುತ್ತಿದ್ದೇವೆ ಈ ಪರಿಷತ್ತಿನ ಕಾರ್ಯಕ್ರಮಗಳು ಅಗ್ರಿಯಾದ ಜನರಲ್ ಸೆಕ್ರೆಟರಿಯವರ ಪತ್ರದಿಂದ ವಿದಿತವಾಗುವುದು ತಾವು ಮತ್ತು ತಮ್ಮ ಕಡೆಯ ಜಾತಿಬಾಂಧವರು ಪರಿಷದಕ್ಕೆ ಪ್ರತಿನಿಧಿಗಳಾಗಿ ಬಂದು ಮತ್ತು ಬೇರೆ ವಿಧದಿಂದಲೂ ಶಕ್ತಿ ಇರುವ ಸಹಾಯಮಾಡಿ ಪರಿಷದ್ ಕೆಲಸವನ್ನು ಕೀರ್ತಿ ಬರುವಂತೆ ಮಾಡಿಸಬೇಕಾಗಿ ನಮ್ಮ ಪ್ರಾರ್ಥನೆ ಅದರೊಡನೆ ಸ್ವಜಾತಿಯವರಿಂದ ತಯಾರಿಸಲ್ಪಟ್ಟ ಕಲಾ ಕೌಶಲ್ಯಗಳ ಪ್ರದರ್ಶನ ಸಹ ಮಾಡಲು ಯೋಚಿಸಿದೆ ಈ ಪ್ರದರ್ಶನಕ್ಕಾಗಿ ತಮ್ಮ ಕಡೆಯಿಂದ ಯೋಗ್ಯ ಪದಾರ್ಥಗಳು (ವಸ್ತು) ಕಳಿಸೋಣಾದೀತಾಗಿ ನಂಬುತ್ತೇವೆ,

ಪರಿಷದದ ಮತ್ತು ಪ್ರದರ್ಶನದ ಸಂಬಂಧ ಮಾಹಿತಿ ಪತ್ರಗಳನ್ನು ಅಗಾಗ್ಗೆ ತಮ್ಮ ಕಡೆಗೆ ಕಳುಹಿಸುವೆವು ಈ ವಿಚಾರವಾಗಿ ತಮ್ಮ ಕಡೆಯಿಂದ ಯಾವ ವಿಧವಾದ ಸಹಾಯ ದೊರೆಯುವುದೆಂಬುದನ್ನು ಜಾಗ್ರತೆ ತಿಳಿಸೋಣಾಗಬೇಕು ತಮಗೆ ಈ ವಿಷಯದಲ್ಲಿ ಯಾವುದಾದರೂ ಮಾಹಿತಿ ಬೇಕಾಗಿದ್ದರೆ ಆ ಕುರಿತು ಮೇಲಿನ ವಿಳಾಸಕ್ಕೆ ಬರೆಸಬೇಕು ಕೂಡಲೇ ಕಳುಹಿಸೋಣಾಗುವುದು,

ವಿಶ್ವನಾಥ ಗಣಪತಿ ಧಳವಿ, ಅಧ್ಯಕ್ಷ
ಶಂಕರ ಪುಂಡಲೀಕ ವರ್ಧೆ,
ಸದಾನಂದ ಲಕ್ಷ್ಮಣ ಕಾಮತಿ,
ಶಾಂತಾರಾಮ ವಿನಾಯಕ ಕಿಂಕರೆ,
ಸೆಕ್ರೆಟರಿಗಳು ಸಂ ಗೌ ಸಾ ಬ್ರಾ ಪ ಸ್ವಾಗತ ಕಮಿಟಿ,

## ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತಿನ ೯ನೇ ಅಧಿವೇಶನ,

ಮುಂಬಾಯಿ

ಸಂಯುಕ್ತ ಗೌಡ ಸಾರಸ್ವತ ಪರಿಷದದ ೮ನೇ ಅಧಿವೇಶನ ೧೯೧೭ರಲ್ಲಿ ಅಲಹಾಬಾದದಲ್ಲಿ ಆಯಿತು, ಅನಂತರ ಈ ವರೆಗೆ ಅಧಿವೇಶನಗಳಾಗಲಿಲ್ಲ ಆದರೆ ಹಾಗೆ ಅಧಿವೇಶನಗಳಾಗಬೇಕಾದ ಅಗತ್ಯ ತೋರಿದ್ದರಿಂದ ಕೆಲವು ಜನರ ಸಭೆ ಸೇರಿಸಿ ಪರಿಷದದ ಜನರಲ್ ಸೆಕ್ರೆಟರಿಯವರಿಗೆ ಈ ವರುಷ ಮುಂಬಾಯಿಯಲ್ಲಿ ಪರಿಷದವನ್ನು ಕರೆಯಬೇಕೆಂದು ಕೇಳಿಕೊಂಡರು ಅದರಂತೆ ಪರಿಷದದ ಜನರಲ್ ಸೆಕ್ರೆಟರಿಯವರು ಸ್ವಜಾತಿ ಬಾಂಧವರಲ್ಲಿ ಈ ಕೆಳಗಿನಂತೆ ವಿಜ್ಞಾಪಿಸಿಕೊಳ್ಳುವುದೇನೆಂದರೆ —

ಸಂಯುಕ್ತ ಗೌಡ ಸಾರಸ್ವತ ಪರಿಷದದ ೯ನೇ ಅಧಿವೇಶನವು ಮುಂಬಾಯಿಯಲ್ಲಿ ೧೯೩೬ನೇ ಅಕ್ಟೋಬರ ತಿಂಗಳು ೨೬ ೨೭ ೨೮ರಲ್ಲಿ ಸೇರುವ ಉದ್ದೇಶ ಶ್ರೀ ಬ್ಯಾರಿಸ್ಟರ ವಿ ಜಿ ದಳವೀ ಇತರ ಗೃಹಸ್ಥರಿಂದ ಕೂಡಿದ ಕಮಿಟಿಯವರು ಕಳುಹಿಸಿದ ಆಮಂತ್ರಣ ಪತ್ರಕ್ಕೆ ಅನುಸರಿಸಿ ಪರಿಷದದ ಅಧಿವೇಶನವು ಮೇಲಿನ ದಿವಸಗಳಲ್ಲಿ ಯಾ ಅಧಿವಾರದಲ್ಲಿ ಮುಂಬಾಯಿಯಲ್ಲಿ ಸೇರಿಸಲಾಗುವುದು. ಪರಿಷದಕ್ಕೆ ಆಮಂತ್ರಣ ಮಾಡುವವರು ಕಡೆಯಿಂದ ಸ್ವಾಗತ ಕಮಿಟಿ ನೇಮಿಸಲಾಗಿದೆ ಮುಂದೆ ಸೇರಿಸುವದಕ್ಕೋಸ್ಕರ ಮುಂದೆ ತೋರುವ ನಿಯಮಗಳ ಪ್ರಸಿದ್ಧಪಡಿಸುತ್ತೇ ಈ ಪರಿಷದದ ಅಧಿವೇಶನದ ವ್ಯವಸ್ಥೆ ಸ್ವಾಗತ ಕಮಿಟಿಯವರಿಗೋಸ್ಕರ ಜನರಲ್ ಸೆಕ್ರೆಟರಿಯವರು ಮಾಡಲಿರುವುದು ಈ ಪರಿಷದವು ೧೮ ವರುಷದ ನಂತರ ಸೇರುವುದಾಗಿದೆ ಅದಾಗ್ಯೂ ಅಲ್ಲಲ್ಲಿ ಇರುವ ಗೌಡ ಸಾರಸ್ವತ ಜಾತಿ ಬಾಂಧವರು ಪರಿಷದಕ್ಕೆ ಪ್ರತಿನಿಧಿಗಳನ್ನು ಕಳುಹಿಸಬೇಕು ಮತ್ತು ಎಲ್ಲಾ ವಿಧದ ಸಹಾಯ ಮಾಡಬೇಕಾಗಿ ಪ್ರಾರ್ಥನೆ

೧೬ನೇ ಪುಟವನ್ನು ನೋಡುವುದು


**KANNADA**

Savings Certificates
can be cashed
even before maturity.

Full Particulars from

CANARA BANK LTD

OFFICES AT —

| | |
|---|---|
| Bombay—Fort, | Mangalore—City, |
| Bombay—Mandvi, | Mangalore—Bunder, |
| Hubli | Kasaragod, |
| Calicut, | Puttur, |
| Cochin, | Buntwal, |
| Ernakulam | Karkala, |
| Alleppey, | Coondapoor, |
| Bangalore, | Udipi, |
| Davangere, | & |
| Chickmagalur, | Gangoli. |

AVAILABLE IN DENOMINATIONS OF
Rs. 10/ UPWORDS

TOTAL YIELD RS 4-6-0% P. A.

Paid once half yearly at 3½% p. a.
with an additional 1½% p. a. on maturity
If Left To Accumulate

RS. 100/-
Will Amount to
RS. 122-13-6

ESTD 1906

**CANARA BANK**
LIMITED

| Subscribed Capital | | Paid up Capital |
|---|---|---|
| 6,00,000 | | 3,31,000 |
| Reserves | Deposits | Working Capital |
| 4,50,000 | 58,62,000 | 73,49,000 |

# ನಮ್ಮ ಜೈಲುಗಳನ್ನು ಹೇಗೆ ಸುಧಾರಿಸಬೇಕು?

## ಅಲ್ಪಾವಧಿ ಶಿಕ್ಷೆಯು ನಿರರ್ಥಕ ಮತ್ತು ಹಾನಿಕರ.

### ಪಳಗಿದ ತಕ್ಸೀರುಗಾರರಿಂದಾಗುವ ಹಾನಿ.

### ಹೆಚ್ಚಿನ ತಕ್ಸೀರುಗಾರರು ಜೈಲು ಮನೋವೃತ್ತಿಯನ್ನೇ ಪಡೆದು ಹೊರಬರುವರು.

### ಜೈಲುಗಳಿಂದ ಹೊರಬರುವವರ ಕುರಿತು ತೆಗೆದುಕೊಳ್ಳಬೇಕಾದ ಜಾಗ್ರತೆ.

ಶ್ರೀ ಎ. ಬಿ. ಶೆಟ್ಟಿ ಮದ್ರಾಸ್ ಕೌನ್ಸಿಲಿನಲ್ಲಿ ಮಾಡಿದ ಭಾಷಣ

ಕಾರಾಗೃಹವಾಸವು ಅಯುಕ್ತವೂ ಅನಾವಶ್ಯಕವೂ ಆಗಿರುವ ಜನರನ್ನು ಸೆರೆಮನೆಗಳಿಂದ ಹೊರಗಿರಿಸುವಂತೆ ಇಂಗ್ಲೆಂಡಿನಲ್ಲಿ ಹಲವು ಕಾನೂನುಗಳನ್ನು ಮಾಡಲಾಗಿದೆ. ಉದಾಹರಣೆಗಾಗಿ ೧೯೦೭ರ ಪ್ರೊಬೇಶನ್ ಆಕ್ಟು, ೧೯೦೮ರ ಪ್ರಿವೆನ್ಶನ್ ಆಫ್ ಕ್ರೈಮ್ಸ್ ಆಕ್ಟು, ೧೯೧೩ರ ಚಿಲ್ಡ್ರನ್ ಆಕ್ಟು, ಮೆಂಟಲ್ ಡಿಫಿಸಿಯನ್ಸಿ ಆಕ್ಟು ಮೊದಲಾದುವನ್ನು ಎತ್ತಿ ಹೇಳಬಹುದು. ಇವುಗಳ ಪರಿಣಾಮವಾಗಿ ಕಳೆದ ಕೆಲವೇ ವರ್ಷಗಳಲ್ಲಿ ಇಂಗ್ಲೆಂಡಿನ ಜೈಲುಗಳ ಮತ್ತು ಜೈಲು ವಾಸಿಗಳ ಸಂಖ್ಯೆಯು ಬಹಳವಾಗಿ ಕಡಮೆಯಾಗಿರುವುದು ಪ್ರಥಮ ತಕ್ಸೀರುಗಾರರನ್ನು ಮತ್ತು ಚಿಕ್ಕ ಪುಟ್ಟ ಅಪರಾಧಿಗಳನ್ನು ಸರಿದಾರಿಗೆ ತರುವಂತೆ ಪ್ರಯತ್ನಿಸಿ ಪರೀಕ್ಷಿಸುವರೆ ನಮ್ಮಲ್ಲಿ ಪ್ರೊಬೇಶನ್ ಆಕ್ಟಿಲ್ಲ ಇಂತಹ ತಕ್ಸೀರುಗಾರರಿಗೆ ಅಲ್ಪಾವಧಿ ಶಿಕ್ಷೆ ಕೊಡಲ್ಪಡುತ್ತದೆ ಒಂದು ತಿಂಗಳಿಗಿಂತಲೂ ಕಡಮೆ ಅವಧಿಯ ಶಿಕ್ಷೆ ಹೊಂದಿದವರ ಸಂಖ್ಯೆಯು ೧೯೩೨ರಲ್ಲಿ ೮೬೦೦ ಇದ್ದುದು ೧೯೩೩ರಲ್ಲಿ ೯೪೪೪ಕ್ಕೇರಿರುವುದೆಂದು ತಿಳಿದು ಬರುತ್ತದೆ ಇದೇ ರೀತಿ ೧ ತಿಂಗಳಿಗಿಂತ ಹೆಚ್ಚು ಮತ್ತು ೩ ತಿಂಗಳೊಳಗೆ ಶಿಕ್ಷೆ ಹೊಂದಿದವರ ಸಂಖ್ಯೆಯೂ ೬೫೦೦ರಿಂದ ೬೫೧೦ಕ್ಕೇರಿರುವುದು ಅಲ್ಪಾವಧಿ ಶಿಕ್ಷೆಯು ಸಂಪೂರ್ಣ ನಿರರ್ಥಕ ಮಾತ್ರವಲ್ಲದೆ ಹಾನಿಕರವೆಂದು ಇಂಗ್ಲೆಂಡಿನ ಕಾರಾಗೃಹ ಕಮಿಟಿಯವರು ಪುನಃ ಪುನಃ ಸೂಚಿಸಿರುವರು. ಅಲ್ಪಾವಧಿ ಶಿಕ್ಷೆಯು ತಕ್ಸೀರನ್ನು ತಡೆಗಟ್ಟುವ ಪರಿಣಾಮವನ್ನುಂಟುಮಾಡಲಾರದು ಇದಕ್ಕೆ ಪ್ರತಿಯಾಗಿ ಅದರಿಂದ, ಒಂದೊಮ್ಮೆ ಹೇಗೂ ಸೆರೆಮನೆಗೆ ಹೋದಂತಾಯಿತು, ಇನ್ನೇನೆಂಬ ಮನೋವೃತ್ತಿಯು ಪ್ರಬಲಿಸುವಂತಾಗುತ್ತದೆ ಹಲವು ವೇಳೆ ಒಮ್ಮೆ ಸೆರೆಮನೆಗೆ ಹೋದವರಿಗೆ ಅನಂತರ ಅದರ ಭೀತಿಯೇ ಇರುವುದಿಲ್ಲ ತಕ್ಸೀರೇ ಅವರ ಅಭ್ಯಾಸವಾಗಿ ಹೋಗುವುದು ಆದುದರಿಂದ ಸಾಧ್ಯವಾದಲ್ಲೆಲ್ಲಾ ಅಲ್ಪಾವಧಿ ಶಿಕ್ಷೆಯನ್ನೀಯುವುದನ್ನೇ ತೆಗೆದುಹಾಕಿಬಿಡಬೇಕೆಂದೇ ಜೈಲುಗಳ ಇನ್ಸ್‌ಪೆಕ್ಟರ್ ಜನರಲರೇ ಮೊದಲಾದ ಆಡಳಿತ ವಿಚಕ್ಷಣರ ಆಗ್ರಹವಾಗಿದೆ. ಇಂಡಿಯಾ ಸರಕಾರವು ಆಲ್ ಇಂಡಿಯಾ ಪ್ರೊಬೇಶನ್ ಆಕ್ಟನ್ನು ಮಾಡುವುದೆಂದು ನಾವು ಇಷ್ಟರವರೆಗೆ ಆಶಿಸಿಕೊಂಡಿದ್ದೆವು. ಆದರೆ ಅದನ್ನೀಗ ಅದು ಬಿಟ್ಟುಬಿಟ್ಟಿರುವುದೆಂದು ತಿಳಿದು ಬರುತ್ತದೆ ಮದ್ರಾಸ್ ಪ್ರಾಂತಕ್ಕಾಗಿ ಸದ್ರಿ ಆಕ್ಟನ್ನು ಸರಕಾರವು ಬೇಗನೆ ತರುವುದೆಂದು ನನ್ನ ಆಶೆ. ಈ ವಿಷಯವು ಮಾನ್ಯ ಗವರ್ನರರ ವಿಚಾರಕ್ಕೆ ಬಂದಿರುವುದು ಸಂತೋಷಕರವಿದೆ. ಚಿಲ್ಡ್ರನ್ಸ್ ಆಕ್ಟಿನ ವಿಷಯದಲ್ಲಿಯೂ ಮದ್ರಾಸು ಸಾಕಷ್ಟು ಮುಂದುವರಿದಿಲ್ಲ. ಮದ್ರಾಸಿನ ಅನಂತರ ಈ ಆಕ್ಟನ್ನು ಮಾಡಿರುವ ಬೊಂಬಾಯಿ ಮತ್ತು ಕಲ್ಕತ್ತೆಗಳು ಮದ್ರಾಸಿಗಿಂತ ಮುಂದುವರಿದಿವೆ ಪ್ರಕೃತದ ಚಿಲ್ಡ್ರನ್ಸ್ ಆಕ್ಟಿನ ದೋಷಗಳನ್ನು ನಿವಾರಿಸಿ ಅದರ ಉಪಯುಕ್ತತೆಯ ಮೇರೆಯು ಹೆಚ್ಚು ವ್ಯಾಪಕವಾಗುವಂತೆ ಮಾನ್ಯ ಲೋ ಮೆಂಬರರು ಪ್ರಯತ್ನಿಸುವರಾಗಿ ನಿರೀಕ್ಷಿಸುತ್ತೇನೆ.

### ಅಭ್ಯಾಸಿ ತಕ್ಸೀರುಗಾರರು

ನಮ್ಮ ಜೈಲುಗಳಲ್ಲಿ ಬಹು ಮಂದಿ ತಕ್ಸೀರು ಮಾಡುವ ಅಭ್ಯಾಸದವರಿರುತ್ತಾರೆ. ಪುನಃ ಪುನಃ ಜೈಲುಗಳಿಗೆ ಹೋಗಿ ಬರುವವರಿವರು. ನನಗೆ ದೊರೆತಿರುವ ಇತ್ತಲಾಗಿನ ಅಂದರೆ ೧೯೩೩ರ ಜೈಲುಖಾತೆಯ ವರದಿಯಿಂದ, ಕಾರಾಗೃಹವಾಸಿಗಳಲ್ಲಿ, ಅಭ್ಯಾಸಿ ತಕ್ಸೀರುಗಾರರ ಸಂಖ್ಯೆಯು ಇತರರಿಗಿಂತ ನೇಕಡಾ ೧೫ರಿಂದ ೧೭ರಷ್ಟು ಹೆಚ್ಚಿರುವುದೆಂದು ತಿಳಿದುಬರುತ್ತದೆ. ಇಂತಹ ಪಳಗಿದ ತಕ್ಸೀರುಗಾರರಿಗೆಂದೇ ಇರುವ ಸೇಲಮ್ ಮತ್ತು ವಿಶಾಖಪಟ್ಟಣ ಜೈಲುಗಳು ವಿಪರೀತವಾಗಿ ತುಂಬಿ ಹೋಗಿ ಈ ಅಭ್ಯಾಸಿ ತಕ್ಸೀರುಗಾರರನ್ನು ಸರ್ವಸಾಮಾನ್ಯ ಜೈಲುಗಳಲ್ಲಿರಿಸುವ ಆವಶ್ಯಕತೆ ಬಂದಿದೆ. ನಮ್ಮ ಪ್ರಕೃತದ ಸೆರೆಮನೆಯ ಆಡಳಿತ ರೀತಿಯು, ತಕ್ಸೀರುಗಾರರಲ್ಲಿ ಆ ಪ್ರವೃತ್ತಿಯನ್ನಳಿಸುವ ಬದಲಿಗೆ ಹೆಚ್ಚಿಸಿರುವಂತೆ ತೋರುತ್ತದೆ ಎಷ್ಟಕ್ಕೂ ಸುಧಾರಣೆಯಾಗಲಾರದ ಜನರನ್ನು ಜೈಲಲ್ಲಿರಿಸುವುದರಲ್ಲಿ ಅರ್ಥವಿಲ್ಲ ಮತ್ತು ಅವರ ಅವಧಿಯು ಮುಗಿಯಿತೆಂಬುದರಿಂದಲೇ ಅವರನ್ನು ಬಿಟ್ಟು ಬಿಡುವುದೂ ಅಪಾಯಕರ ಇಂಗ್ಲೆಂಡಿನಲ್ಲಿ ಸಮಾಜವನ್ನು ಈ ಅಭ್ಯಾಸಿ ತಕ್ಸೀರುಗಾರರ ಕಾಟದಿಂದ ರಕ್ಷಿಸಲು ಅಂತಹ ತಕ್ಸೀರುಗಾರರನ್ನು ದೀರ್ಘ ಬಂಧನದಲ್ಲಿರಿಸುವ ಪದ್ಧತಿಯಿದೆ ಒಬ್ಬನು ೩ ಸಲ ಶಿಕ್ಷೆಗೊಳಗಾಗಿ ಅವನು ಅಭ್ಯಾಸಿ ತಕ್ಸೀರುಗಾರನೆಂದು ಪಂಚರಿಗೆ ತಿಳಿದರೆ, ಅಂಥವನನ್ನು ಆತನ ಅವಧಿಯ ಶಿಕ್ಷೆ ಮುಗಿದ ಮೇಲೆ, ಪುನಃ ೫ರಿಂದ ೧೦ ವರ್ಷಗಳ ವರೆಗೆ ಬಂಧನದಲ್ಲಿರಿಸುವ ಏರ್ಪಾಡು ಇಂಗ್ಲೆಂಡಿನಲ್ಲಿದೆ ಅಲ್ಲಿಯೂ ಈ ಏರ್ಪಾಡಿನ ಉಪಯೋಗವು ಸಾಕಷ್ಟು ಮಾಡಲ್ಪಡುವುದಿಲ್ಲ ವೆಂದು ತಿಳಿದು ಬಂದು ಪಿಡದೆ ಆಗಾಗ ತಕ್ಸೀರು ಮಾಡುವವರ ಪ್ರಶ್ನೆಯ ಕುರಿತು ವಿಚಾರಿಸಲು ೧೯೩೨ರಲ್ಲಿ ನಿಯುಕ್ತವಾದ ಕಮಿಟಿಯವರು, ಈ ಅಭ್ಯಾಸಿ ಕೈದಿಗಳ ಸಂಬಂಧವಾಗಿ ಇನ್ನೂ ಹೆಚ್ಚಿನ ಕಾನೂನು ಮಾಡಬೇಕೆಂದು ಶಿಫಾರಸು ಮಾಡಿರುವರು. ತಕ್ಸೀರುಗಾರರ ಪೀಡೆಯಿಂದ ಸಮಾಜಕ್ಕೆ ರಕ್ಷಣೆಯಿತ್ತು ತಕ್ಸೀರನ್ನು ಕಡಮೆಮಾಡುವರೆ, ಇಂತಹ ತಕ್ಸೀರು ಜೀವಿಗಳ ಸಮಸ್ಯೆಯನ್ನು ಬಿಡಿಸಲು ಸರಕಾರವು ಶೀಘ್ರ ಹಾಗೂ ಫಲಕಾರಿ ಕಾರ್ಯ ಕೈಕೊಳ್ಳುವ ಆವಶ್ಯಕತೆಯ ಕಡೆಗೆ ಜೈಲುಗಳ ಇನ್ಸ್‌ಪೆಕ್ಟರ್ ಜನರಲರು ಸರಕಾರದ ಲಕ್ಷ್ಯವನ್ನೆಳೆದಿರುವರು ಈ ಸಂಬಂಧವಾಗಿ ಮಾನ್ಯ ಲೋ ಮೆಂಬರರು ಏನು ಮಾಡಬೇಕೆಂದಿರುವರೆಂದು ತಿಳಿಯಲಿಚ್ಛಿಸುತ್ತೇನೆ

ಇಂದಿನ ಜೈಲುಗಳಲ್ಲಿ ಕೈದಿಗಳನ್ನು ಕಾಣುವ ರೀತಿಯು, ಅವರಲ್ಲಿ ಬಹು ಮಂದಿಯನ್ನು ಯಾವ ತರದಲ್ಲಿಯೂ ಸುಧಾರಿಸುವಂತಹದಿಲ್ಲೆಂದು ಜೈಲು ಕಮಿಶನಿನವರು ಪುನಃ ಪುನಃ ಸೂಚಿಸಿರುವರು ಜೈಲುಗಳಲ್ಲಿ ಕಟ್ಟುಕಟ್ಟಳೆ, ಬಲೋಬ್ಬಂಧ, ನಿರ್ಬಂಧಗಳು, ಕೈದಿಯ ವ್ಯಕ್ತಿತ್ವವನ್ನೇ ಹತ್ತಿಕ್ಕಿ ಅವನಲ್ಲಿ ಸುಸ್ತಾ ಮನೋವೃತ್ತಿಯನ್ನೇ ಉಂಟುಮಾಡಿ, ಹೊರಗಣ ಸ್ವತಂತ್ರ ಜೀವನಕ್ಕೆ ಅನರ್ಹನನ್ನಾಗಿ ಮಾಡುವುವು ಕೆಲ ಸಮಯ ಜೈಲಿನ ಶಿಸ್ತಿಗೊಳಗಾಗಿರುವ ಕೈದಿಗೆ ಹೆಚ್ಚೆಚ್ಚಾಗಿ ಅದೇ ಕ್ರಮವು ಹಿಡಿದು ಹೋಗುವುದು. ಮತ್ತು ಶಿಕ್ಷೆಯ ಅವಧಿಯು ದೀರ್ಘವಾದಂತೆ ಅವನು ಮತ್ತಷ್ಟು ಕೆಡುತ್ತಾ ಹೋಗುವನು. ಸಂಜೆಯಿಂದ ಹಿಡಿದು ಮರುದಿನ ಬೆಳಗ್ಗಿನ ವರೆಗೆ ಕೈದಿಗಳನ್ನು ಏಕಾಂತ ಕೋಣೆಯಲ್ಲಿ ಬೀಗ ಹಾಕಿ ಇರಿಸಲಾಗುವುದು. ಅವರಿಗೆ ಮಾತಾಡಲು ಸಂಗಾತಿಗಳಾರೂ ಇರುವುದಿಲ್ಲ ತಮ್ಮ ನಿಜವಾದ ಅಥವಾ ಕಲ್ಪನೆಯ ಸಂಕಷ್ಟಗಳ ಕುರಿತಾದ ಚಿಂತೆಯ ಹೊರತು ಬೇರಾವ ಕೆಲಸವೂ ಅವರಿಗಿರುವುದಿಲ್ಲ ಇಂತಹ ಪರಿಸ್ಥಿತಿಯಲ್ಲಿ ಅವರ ಮನೋವೃತ್ತಿಯು ಕೆಟ್ಟು ಕಠಿಣವಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇಂಗ್ಲೆಂಡಿನ ಕೈದಿಗಳು ಓದುಬರಹವುಳ್ಳವರು ಅವರಿಗೆ ಪುಸ್ತಕಗಳನ್ನೋದಲು ಹಲವು ಅನುಕೂಲತೆಗಳನ್ನೀಯಲಾಗುವುದು ಆದರೆ ನಮ್ಮಲ್ಲಿ ಹೆಚ್ಚಿನ ಕೈದಿಗಳು ನಿರಕ್ಷರಿಗಳಿರುವರು; ಪುಸ್ತಕಗಳು ಕೊಡಲ್ಪಟ್ಟರೂ ಅವರಲ್ಲಿ ಬಹುಮಂದಿಗೆ ಓದುವುದು ಹೇಗೆಂದು ತಿಳಿದಿರುವುದಿಲ್ಲ ಏಕಾಂತ ಕೋಣೆಗಳಲ್ಲಿರುವ ಬೆಳಕು ಕೂಡಾ ಓದಲು ಸಾಲದು ಇಂಗ್ಲೆಂಡಿನಲ್ಲಿ ಕೈದಿಗಳಿಗೆ ವಿದ್ಯಾಭ್ಯಾಸವನ್ನೀಯುವ ವಿಷಯದಲ್ಲಿ ಜೈಲು ನೌಕರರೊಡನೆ ತಾವಾಗಿ ಸಹಕರಿಸಿ ಕೆಲಸಮಾಡುವ ಕೆಲಸಗಾರರು ಬಹಳ ಮಂದಿ ಇರುತ್ತಾರೆ, ಆದರೆ ಇಲ್ಲಿ, ಕೈದಿಗಳಿಗೆ ನೈತಿಕ ಮತ್ತು ಧಾರ್ಮಿಕ ಬೋಧನೆಯನ್ನೀಯಲು ಹೊರಗಣಿಂದ ಬರುವ ಗೌರವ ಉಪನ್ಯಾಸಕರಿಗೆ ಕೊಡಲ್ಪಡುತ್ತಿದ್ದ ಅಲ್ಪವಾದ ವಾಹನ ಭತ್ತೆಯೂ ನಿಲ್ಲಿಸಲ್ಪಟ್ಟಿರುವುದೊಂದು ಶೋಚನೀಯವಿದೆ ಇದರ ಪರಿಣಾಮವಾಗಿ ಸಾಕಷ್ಟು ಮಂದಿ ಯೋಗ್ಯರಾದ ಉಪನ್ಯಾಸಕರು ಸಿಕ್ಕುವುದು ಕಷ್ಟವಾಗಿದೆ ಈ ಬೋಧನೆಯ ಕೆಲಸವನ್ನು ಜೈಲು ನೌಕರರ ಪಾಲಿಗೊಪ್ಪಿಸಲಾಗಿದೆ ಇವರ ಬೋಧನೆಗಳಿಗೆ ಕೈದಿಗಳು ಹೆಚ್ಚೇನೂ ಲಕ್ಷ್ಯಕೊಡುವಂತಿಲ್ಲ ಇಂಗ್ಲೆಂಡಿನ ಸಂದರ್ಶಕರು ಜೈಲುಗಳಿಗೆ ಹೋಗಿ ಪ್ರತಿಯೋರ್ವ ಕೈದಿಯೊಡನೆ ವಾರಕ್ಕೊಂದು ಸಲವಾದರೂ ಏಕಾಂತ ಕೋಣೆಯಲ್ಲಿ ಮಾತಾಡುತ್ತಾರೆ ಅಲ್ಲಿ ಜೈಲುಗಳನ್ನು ಸಂದರ್ಶಿಸುವ ಕಮಿಟಿಗಳೂ ಬೋರ್ಡುಗಳೂ ಇರುತ್ತವೆ ಈ ಜನರು ಜೈಲುಗಳನ್ನು ಕ್ರಮವಾಗಿ ಸಂದರ್ಶಿಸಿ ಪರೀಕ್ಷಿಸುತ್ತಾರೆ ಅವರು ಜೈಲುಗಳ ಯಾವ ಭಾಗಕ್ಕಾದರೂ ಹೋಗಬಹುದು ಜೈಲು ನೌಕರರು ಕೆಟ್ಟ ರೀತಿಯಲ್ಲಿ ಕಂಡರೆ ಅದನ್ನು ಪ್ರತಿಯೊಬ್ಬ ಕೈದಿಯೂ ಇವರಿಗೆ ಹೇಳಬಹುದು ಈ ಜೈಲು ಸಂದರ್ಶಕರು ಜೈಲು ಅಧಿಕಾರಿಗಳ ದುರ್ವರ್ತನೆಯ ಕುರಿತು ಸ್ಟೇಟ್ ಸೆಕ್ರೆಟರಿಗಳಿಗೆ ರಿಪೋರ್ಟು ಮಾಡಬಹುದು. ಮತ್ತು ಅವರು ವರ್ಷಕ್ಕೊಮ್ಮೆ ವರದಿಯನ್ನು ಕೂಡ ಒಪ್ಪಿಸುವರು ಜೈಲು ಗವರ್ನರರಿಂದ ತೀರ್ಮಾನಿಸಲಾಗದ ಜೈಲು ಶಿಸ್ತು ಉಲ್ಲಂಘನೆಯ ಸಂಗತಿಗಳನ್ನು ಈ ಸಂದರ್ಶಕ ಕಮಿಟಿಗಳ ಕಡೆಗೆ ಇತ್ಯರ್ಥಕ್ಕೆ ಕಳುಹಿಸಲಾಗುವುದು ನಮ್ಮ ಜೈಲುಗಳ ಸಂದರ್ಶಕರಿಗೆ ಯಾವ ಕಾರ್ಯ ಮತ್ತು ಅಧಿಕಾರವೀಯಲಾಗಿದೆಯೆಂದು ತಿಳಿಯಲೆಳಸುತ್ತೇನೆ.

ಕೈದಿಯನ್ನು ಸುಧಾರಿಸಿ ಸರ್ವಸಾಮಾನ್ಯ ನಾಗರೀಕನನ್ನಾಗಿ ಮಾಡುವುದರಲ್ಲಿ ಜೈಲು ಆಡಳಿತವು ತನ್ನ ಪಾಲಿನ ಕರ್ತವ್ಯವನ್ನು ಮಾಡಬೇಕಾದರೆ ಒಳ್ಳೇ ಯೋಗ್ಯತೆ ಮತ್ತು ತರಬೇತಿಯುಳ್ಳ ಜೈಲು ಶಿಬ್ಬಂದಿಯಿರುವುದು ಅತ್ಯಾವಶ್ಯಕವು. ಜೈಲು ಆಡಳಿತದ ಆದರ್ಶವು ಅದೆಷ್ಟು ಉಚ್ಚವಿದ್ದರೂ, ಅದರ ನಿಯಮಗಳು ಎಷ್ಟೊಂದು ಉತ್ಕೃಷ್ಟವಿದ್ದರೂ ಅವುಗಳ ಕಾರ್ಯಶೀಲತೆಯು, ಪ್ರತಿನಿತ್ಯ ಕೈದಿಗಳ ಸಂಪರ್ಕದಿಂದಿರುವ ಜನರ ಮೇಲೆ ಹೊಂದಿಕೊಂಡಿರುತ್ತದೆ. ಇಂಗ್ಲೆಂಡಿನಲ್ಲಿ ಮೇಲು ಕೀಳ್ತರಗತಿಯ ಜೈಲು ಶಿಬ್ಬಂದಿ ನೇಮಕ ಮತ್ತು ತರಬೇತಿಯ ಕುರಿತು ಹೆಚ್ಚಿನ ಜಾಗ್ರತೆ ತೆಗೆದುಕೊಳ್ಳಲಾಗುವುದು. ನಮ್ಮ ಜೈಲರರು ಡಿಪ್ಯೂಟಿ ಜೈಲರರು ಮತ್ತು ವಾರ್ಡರರು, ಇಂಗ್ಲೆಂಡಿನ ಶಿಬ್ಬಂದಿಯನ್ನು ಹೋಲುವರೆಂದು ಹೇಳುವ ಸ್ಥಿತಿಯು ನಮ್ಮಲ್ಲಿರುವುದೇ? ನಮ್ಮ ಬೋರ್ಸ್ಟಾಲ್ ಶಾಲೆಗಳ ಶಿಬ್ಬಂದಿ ಕೂಡ ಸಾಕಷ್ಟು ತೃಪ್ತಿಕರವಿರುವುದಿಲ್ಲ. ಸಂಯುಕ್ತ ಪ್ರಾಂತ, ಪಂಜಾಬು ಮತ್ತು ಬರ್ಮಾ ಪ್ರಾಂತಗಳಲ್ಲಿ, ಜೈಲು ಶಿಬ್ಬಂದಿಯ ತರಬೇತಿಗಾಗಿ ಶಾಲೆಗಳಿರುವವೆಂದು ತಿಳಿದುಬರುತ್ತದೆ. ನಾವು ನಮ್ಮ ಜೈಲುಗಳಲ್ಲಿ ಕೆಲಸ ಮಾಡಲು ನೇಮಿಸುವ ಶಿಬ್ಬಂದಿಯ ಯೋಗ್ಯ ಮತ್ತು ಸಮರ್ಪಕ ತರಬೇತಿಗಾಗಿ, ನಮ್ಮಲ್ಲಿಯ ಸೆಂಟ್ರಲ್ ಜೈಲೊಂದಕ್ಕೆ ತರಬೇತಿ ಶಾಲೆಯನ್ನು ಜೋಡಿಸಬಾರದೇಕೆ?

ಕೈದಿಗಳು ಜೈಲುಗಳಿಂದ ಬಿಡುಗಡೆ ಹೊಂದಿದ ಮೇಲೆ ಅವರ ವಿಷಯದಲ್ಲಿ ತೆಗೆದುಕೊಳ್ಳಬೇಕಾದ ಜಾಗ್ರತೆಯ ಕುರಿತು ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ತಕ್ಸೀರುಗಾರನನ್ನು ಜೈಲಲ್ಲಿ ಯೋಗ್ಯ ರೀತಿಯಲ್ಲಿ ನೋಡುವುದು ಅತಿ ಪ್ರಾಮುಖ್ಯವಾದರೂ, ಅವನ ಸುಧಾರಣೆಯು, ಜೈಲಲ್ಲಿ ಅವನನ್ನು ಕಾಣುವ ವಿಧಾನಕ್ಕಿಂತಲೂ ಹೆಚ್ಚಾಗಿ ಬಿಡುಗಡೆಯ ನಂತರ ಅವನ ಕುರಿತು ತೆಗೆದುಕೊಳ್ಳುವ ಜಾಗ್ರತೆಯ ಮೇಲೆ ಹೊಂದಿರುತ್ತದೆ. ಜೈಲಲ್ಲಿ ಬಿಡುಗಡೆ ಹೊಂದಿ ಬಂದವನನ್ನು ಘಾನವಂತ ಸಮಾಜವು ದೂರೀಕರಿಸುವಂತಾದರೆ, ಕೈಗಾರಿಕೆ ಕಾಮಗಾರಿಗಳಲ್ಲಿ ಅವನಿಗೆ ಕೆಲಸ ದೊರೆಯದಂತಾದರೆ, ಧನ, ಜನಾಶ್ರಯವಿಲ್ಲದೆ ಸಮಾಜದ ತಿರಸ್ಕಾರಕ್ಕೊಳಗಾಗುವ ಅವನು ಪ್ರಾಮಾಣಿಕ ಜೀವನ ನಡೆಸುವುದು ಬಹಳ ಕಷ್ಟ ಇಂತಹ ಸಂದರ್ಭದಲ್ಲಿಯೇ ಅವನ ಕುರಿತು ಸರಿಯಾದ ವಿಚಾರ ತೆಗೆದುಕೊಂಡು ಅವನಿಗೆ ತಕ್ಕ ಸಹಾಯ ಮಾಡತಕ್ಕದ್ದು. ಜೈಲಿನಿಂದ ಬಿಡುಗಡೆ ಹೊಂದಿದ ಕೈದಿಗಳಿಗೆ ಸಹಾಯಮಾಡುವ 'ಸೆಂಟ್ರಲ್ ಡಿಸ್‌ಚಾರ್ಜ್ಡ್ ಪ್ರಿಸ್‌ನರ್ಸ್ ಎಯ್ಡ್ ಸೊಸೈಟಿ' ಎಂಬ ಸಂಘವು ಉತ್ಕೃಷ್ಟ ಹಾಗೂ ಯಶಸ್ವಿ ಕೆಲಸ ಮಾಡುತ್ತಿರುವದೆಂದು ಜೈಲು ಆಡಳಿತ ವರದಿಯಿಂದ ತಿಳಿದುಬರುತ್ತದೆ ಇವರು ಮಾಡುವ ಕೆಲಸವು ಬಹಳ ಸ್ವಲ್ಪ ಮತ್ತು ನೀಡುವ ಸಹಾಯ ತೀರಾ ಅತೃಪ್ತಿಕರವೆಂದು ನಾನು ಹೇಳಬೇಕಾಗಿದೆ. ಸರಕಾರದವರು ಜೈಲುಗಳಿಗಾಗಿ ರೂ ೨೨ ಲಕ್ಷ ಖರ್ಚು ಮಾಡುವಾಗ ಮೇಲಿನ ಸಂಘದವರಿಗೆ ಕೊಡುವುದು ರೂ ೬,೫೦೦ ಮಾತ್ರ ಅತ್ಯಂತ ಪ್ರಾಮುಖ್ಯವಾದಂಥ ಈ ಕೆಲಸಕ್ಕೆ ಇಷ್ಟೊಂದು ಅಲ್ಪ ಹಣ ಮಾತ್ರ ನ್ಯಯಿಸಲ್ಪಡುತ್ತದೆ ಜೈಲಿನಿಂದ ಹೊರಬಂದ ಮೇಲೆ ತೆಗೆದುಕೊಳ್ಳಬೇಕಾದ ಜಾಗ್ರತೆಯ ಕೆಲಸಕ್ಕಾಗಿ ಸಾಕಷ್ಟು ಹಣ ವಿನಿಯೋಗಿಸದಿರುವುದು ತಪ್ಪು ಮಿತವ್ಯಯವಾಗಿರುವುದು. ಬಿಡುಗಡೆಯ ಅನಂತರದ ಜಾಗ್ರತೆಯೆಂಬುದು ಜೈಲುದ್ವಾರದಲ್ಲೇ ಮುಗಿಯಬಾರದೆಂದು ನನ್ನ ಸೂಚನೆ ಕೈದಿಗಳು ಜೈಲುಗಳಿಂದ ಹೊರಬಂದ ಮೇಲೆ ಕೆಲಸಮಯದ ವರೆಗೆ ಅವರನ್ನು ಪರೀಕ್ಷಿಸಿಕೊಂಡಿರಲು ಒಂದು ಸಂಸ್ಥೆಯಿರತಕ್ಕದ್ದು ಇಂಗ್ಲೆಂಡಿನಲ್ಲಿ ಒಬ್ಬ ಕೈದಿಯು ಬಿಡುಗಡೆ ಹೊಂದುವ ಮೊದಲು ಏನಾದರೂ ಸಹಾಯಬೇಕಾಗಿದ್ದರೆ ಮಾಡಲು ಸಂಘವೊಂದಿರುವುದೆಂದು ಅವನಿಗೆ ತಿಳಿಸಲಾಗುವುದು. ಅವನ ಬಿಡುಗಡೆಗೆ ಸ್ವಲ್ಪ ಸಮಯವಿರುವಾಗ ಈ ಸಂಘದ ಏಜಂಟನೊಬ್ಬನು ಬಂದು ಅವನನ್ನು ಕಾಣುವನು. ಈ ಸಂಘದ ಉಪಕಮಿಟಿಗಳು ಜೈಲಲ್ಲೇ ಕ್ರಮವಾಗಿ ಸಭೆ ಸೇರಿ, ಬಿಡುಗಡೆಯಾಗುವ ಪ್ರತಿಯೊಬ್ಬ ಕೈದಿಗೂ ಯಾವ್ಯಾವ ಸಹಾಯ ಕೊಡಬೇಕೆಂಬುದನ್ನು ನಿಶ್ಚಯಿಸುವವು. ಮಾನ್ಯ ಲೋ ಮೆಂಬರರು ಈ ವಿಷಯಗಳನ್ನೆಲ್ಲಾ ಪರಿಶೀಲಿಸಿ ನಮ್ಮ ಜೈಲುಗಳಲ್ಲಿ ಯೋಗ್ಯ ಸುಧಾರಣೆಗಳನ್ನು ಜ್ಯಾರಿಗೆ ತರುವಂತೆ ಮತ್ತು ನಮ್ಮ ತಕ್ಸೀರುಗಾರರನ್ನು ಜೈಲುಗಳ ಒಳಗೂ ಹೊರಗೂ ಉತ್ತಮ ರೀತಿಯಲ್ಲಿ ಕಾಣುವಂತೆ ಪ್ರಯತ್ನಿಸುವರೆಂದು ನಿರೀಕ್ಷಿಸುತ್ತೇನೆ.

(ನವಯುಗದ ಸಂಪಾದಕರಿಂದ ಬಂದುದು)

# ನೋಟೀಸು.

## Attur Vaikunta Peabhu Bank, Mangalore.

### ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನ, ಬೆಳ್ಳಿ, ನಗಗಳ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವ್ಯಾದೆಗೆ ಅಸಲು ಬಡ್ಡಿ ಕೊಡದೆ ಈ ವರೆಗೆ ಬಾಕಿ ಮಾಡಿಕೊಂಡಿರುವುದರಿಂದಲೂ ಸದರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗಿಯೂ, ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ, ಸದರಿಯವರು ಈಡಿಟ್ಟ ನಗಗಳನ್ನು ಇದೇ 1935ನೇ ಸಪ್ಟಂಬರ ತಾ. 18ನೇ ಶುಕ್ರವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಸಲಾಯಿಸಿ, ಬಿಡಿಸಿಕೊಂಡು ಹೋಗದೆ ಇದ್ದರೆ, ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1935ನೇ ಸಪ್ಟಂಬರ ತಾ. 14ನೇ ಶನಿವಾರ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಬಹಿರಂಗವಾಗಿ ಏಲಂ ಮಾಡುವೆವು.

| | ಸಾಲದ ನಂಬ್ರ ಮತ್ತು ಅಡವಿಟ್ಟ ತಾ. | ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ | ಬಾಕಿ ಬಡ್ಡಿ |
|---|---|---|---|
| 1 | 1015<br>30-6-'34 | ಅಂಗರ, S/o ಕಾದ್ರ, ಬೋಳಾರ ಹೊಯ್ಗೆ ಬಜಾರ್, ಮಂಗಳೂರು | 20/- |
| 2 | 926<br>14-6-'34 | ಕುಂಞ ಪೊಕ್ರ ಬ್ಯಾರಿ, S/o ಇಸ್ಮಾಲಿ ಬ್ಯಾರಿ, ಉದ್ಯಾವರ ಗ್ರಾಮ | 20/ |
| 3 | A 705<br>12-6-'34 | ಜಿ. ಮೈಂದಪ್ಪ, N/o ಮುಂಡಪ್ಪ ಪೂಜಾರಿ, ಜೆಪ್ಪು, ಕಂಕನಾಡಿ ಪೋಸ್ಟು | 10/- |
| 4 | A 1425<br>25-9-'34 | ಜಿ. ಮೈಂದಪ್ಪ, N/o ಮುಂಡಪ್ಪ ಪೂಜಾರಿ, ಜೆಪ್ಪು, ಕಂಕನಾಡಿ ಪೋಸ್ಟು | 10/- |
| 5 | 91<br>14-1-'33 | ಪಾಂಡುರಂಗ ಪ್ರಭು, S/o ರಘಳಪ್ಪ ಪ್ರಭು, ಸುರತ್ಕಲ್ ಪೋಸ್ಟು. | 11/- |
| 6 | 234<br>5-2-'33 | ಬಿ ಶೇಕ್ ಇಸ್ಮಾಯಿಲ್ ಪ್ರೊಸೆಸ್ ಸರ್ವರ್, ಡಿಸ್ಟ್ರಿಕ್ಟ್ ಕೋರ್ಟು, ಮಂಗಳೂರು. | 5/- |
| 7 | 262<br>10-2-'33 | ಪಾಂಡುರಂಗ ಪ್ರಭು, S/o ರಘಳಪ್ಪ ಪ್ರಭು ಸುರತ್ಕಲ್ ಪೋಸ್ಟು. | 20/ |
| 8 | 404<br>6-3-'33 | ಗುರುವ, S/o ಶಂಠ ಜಾನುವಾರು ಮೇಯಿಸುವವ ಕೋಡಿಗುಡ್ಡೆ ಮಂಗಳೂರು | 12 |
| 9 | 465<br>1[illegible]-3-'33 | ಬಿ. ಶೇಕ್ ಇಸ್ಮಾಯಿಲ್, ಪ್ರೊಸೆಸ್ ಸರ್ವರ್ ಡಿಸ್ಟ್ರಿಕ್ಟ್ ಕೋರ್ಟು ಮಂಗಳೂರು. | 10 |
| 10 | 831<br>6-5-'33 | ಕೆ. ಸುಂದರ, S/o ಏತ ಸುಬ್ಬಾ ಶೇಟ್, ಕಂಕನಾಡಿ ಪೋಸ್ಟು | 10/- |
| 11 | 1131<br>5-6-'33 | ಸರಕಿಂಡ ದಾಸಪ್ಪ ಶೇಟ್ [illegible], ಸಂತೋಷ ಶೇಟ್, ಡೊಂಗರಕೇರಿ ಮಂಗಳೂರು. | 15 |
| 12 | 1243<br>20-6-'33 | ಎಂ ನಾರಾಯಣ, ಇಂಪೀರಿಯಲ್ ಬೇಂಕ್ ದಫೇದಾರ್ ಮಂಗಳೂರು. | 4/- |
| 13 | 1374<br>5-7-'33 | ವೇದ್ಯಾಮಿನೇಜ, S/o ಇಂತ್ಯ [illegible] ಉರ್ವ ಮಂಗಳೂರು. | 10/- |
| 14 | 1529<br>24-7-'33 | ರಾಮಚಂದ್ರ ನ್ಯಾಕ ಬುದ್ದೆಗಲ್ಲಿ ಮಂಗಳೂರು. | 4/- |
| 15 | 1531<br>24-7-'33 | ಕೃಷ್ಣ ಆಚಾರಿ, S/o ರಾಮಯ್ಯಾಚಾರಿ ಡೊಂಗರಕೇರಿ, ಮಂಗಳೂರು. | 6/- |
| 16 | 1643<br>7-8-'33 | ಅಬ್ದುಲ್ ಲತೀಫ್, ಟೇಲರ್, ಕಸ್ಬಾಗಲ್ಲಿ, ಮಂಗಳೂರು. | 16/- |
| 17 | 1795<br>23-8-'33 | ಎಂ. ನಾರಾಯಣ ಇಂಪೀರಿಯಲ್ ಬೇಂಕ್ ದಫೇದಾರ್, ಮಂಗಳೂರು. | 5/- |
| 18 | 2321<br>2-11-'33 | ಬಿ ಇಬ್ರಾಹಿಂಖಾನ್, S/o ಕಾಸಿಂಖಾನ್, ಅಮೀನ್, ಡಿ. ಕೋರ್ಟು, ಮಂಗಳೂರು. | 4/- |
| 19 | 2355<br>6-11-'33 | ಪಿ. ಕಾದರ್ ಸಾಹೇಬ್, S/o ಮೊಯಿದಿನ್ ಸಾಹೇಬ್, ಪಣಂಬೂರ | 10/- |
| 20 | 2388<br>10-11-'33 | ಸುಂದರ ಪಾಲ್, S/o ರಾಮ ಪಾಲ್, ರಥಬೀದಿ, ಮಂಗಳೂರು. | 10/- |
| 21 | A 59<br>20-1-'34 | ಇಬ್ರಾಹಿಂಖಾನ್, S/o ಕಾಸಿಂಖಾನ್, ಬೋಳಾರ, ಮಂಗಳೂರು | 11/- |
| 22 | A 75<br>24-1-'34 | ಲಕ್ಷ್ಮಿ ನಾರ್ಣಪ್ಪಯ್ಯ, S/o ಪುಟ್ಟಣ್ಣಯ್ಯ, ಕದ್ರಿ ದೇವಸ್ಥಾನದ ಬಳಿ, | 16/- |
| 23 | A 379<br>1[illegible]-4-'34 | ಸುಂದರ್ ಶೇಟ್, S/o ಯು. ಸುಬ್ರಾಯ ಶೇಟ್, ಮಾರ್ಕೆಟ್ ರೋಡ್, ಮಂಗಳೂರು | 14/- |
| 24 | A 515<br>15-5-'34 | ಸುಂದರ್ ಶೇಟ್, S/o ಯು. ಸುಬ್ರಾಯ ಶೇಟ್, ಮಾರ್ಕೆಟ್ ರೋಡ್, ಮಂಗಳೂರು | 18/- |
| 25 | A 550<br>23-5-'34 | ಸುಬ್ರಾಯ ಶೇಟ್, S/o ಯು. ರಂಗನಾಥ ಶೇಟ್, ಭೂವಂತಕೇರಿ, ಮಂಗಳೂರು. | 14/- |
| 26 | A 936<br>18-7-'34 | ಸುಂದರ್ ಪಾಲ್, S/o ರಾಮಪಾಲ್, ರಥಬೀದಿ, ಮಂಗಳೂರು. | 7/- |
| 27 | A 152<br>16-2-'34 | ಮಹಾಬಲ ಭಟ್ಟ, S/o ಕೃಷ್ಣ ಭಟ್ಟ ಅಮ್ಮಾಡಿ ಗ್ರಾಮ, ಬಂಟ್ವಾಳ. | 8/- |
| 28 | A 267<br>20-3-'34 | ಮುಹಮ್ಮದ್ ಖಾನ್, S/o ಹಯಾತ್‌ಖಾನ್, ಡಿಸ್ಟ್ರಿಕ್ಟ್ ಕೋರ್ಟ್ ಪ್ರೊಸೆಸ್ ಸರ್ವರ್, ಮಂಗಳೂರು | 10/- |
| 29 | A 389<br>16-4-'34 | ಮೊಯಿದಿನ ಬ್ಯಾರಿ, S/o ಅತ್ತು ಬ್ಯಾರಿ, ಅದ್ಯಪಾಡಿ ಗ್ರಾಮ, ಗುರುಪುರ. | 8/- |
| 30 | A 415<br>21-4-'34 | ತುಕ್ರ, S/o ಸೂರ್ಯ, ಮೋಟರ್ಸ್ ಶೆಡ್, ಕಂಕನಾಡಿ. | 10/- |
| 31 | A 462<br>1-5-'34 | ರಾಜು ಪೂಜಾರಿ, S/o ಬೊಗ್ಗು ಪೂಜಾರಿ, ಕೊಳಂಬೆ ಗ್ರಾಮ, ಮಂಗಳೂರು ತಾಲೂಕು. | 12/- |
| 32 | A 499<br>10-5-'34 | ಎಸ್. ರಾಮಣ್ಣ ಶೆಟ್ಟಿ, N/o ಮಂಜಯ್ಯ ಬಂಡಾರಿ, ಬಾಳೆಪುಣಿ ಗ್ರಾಮ, ಮಂಗಳೂರು ತಾಲೂಕು. | 5/- |
| 33 | A 536<br>20-5-'34 | ಬಾಜಿಲ್ ಕಣ್ಣದೋಜ್, S/o ತೆರೆಜ್ಯಾ ಬ್ಯಾ ಶ್ಯಾ ಸೇಕರ್, ಜಪ್ಪು, ಮಂಗಳೂರು | 4/- |
| 34 | A 541<br>21-5-'34 | ಕುಂಞ ಭಂಡಾರಿ N/o ಮಂಜು ಭಂಡಾರಿ, ವೆಬ್‌ಸ್ಟರ್ ಮಾರ್ಕೇಟು, ಮಂಗಳೂರು | 6/- |
| 35 | A 544<br>22-5-'34 | ತಿಮ್ಮಯ್ಯ ಶೆಟ್ಟಿ, N/o ಚಿನ್ನ ಶೆಟ್ಟಿ, ಬಸವನಗುಡಿ, ಮಂಗಳೂರು. | 7/- |
| 36 | A 575<br>25-5-'34 | ತ್ಯಾಂಪು ಶೆಟ್ಟಿ N/o ತ್ಯಾಂಪು ಶೆಟ್ಟಿ, ಅಷ್ಪಲು ಗ್ರಾಮ, ಮಂಗಳೂರು. | 17/- |
| 37 | A 824<br>28-6-'34 | ಹಾಮದ್ ಬ್ಯಾರಿ, S/o ಇದಿನ ಬ್ಯಾರಿ, ಬಜಾಲ್ ಗ್ರಾಮ, ಮಂಗಳೂರು | 7/- |

ತಾ. 3—9—1935
ಎ. ವಿ. ಪಿ. ಬೇಂಕ್,
ಮಂಗಳೂರು,

**A. V. Prabhu,**
ಪ್ರೊಪ್ರೈಟರ್.


Ford

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA——AND——MANGALORE.


### ಪಾಟ್ನಾ ನಿಲ್ದಾಣದಲ್ಲಿ ನಡೆದ ಆಶ್ಚರ್ಯಕರ ದೃಶ್ಯ.

#### ಇಬ್ಬರು ಪ್ರಯಾಣಿಕರೊಳಗೆ ಜಗಳ!

ಪಾಟ್ನಾ ನಿಲ್ದಾಣದಲ್ಲಿ ಓರ್ವ ಹಿಂದೂ ವಕೀಲನಿಗೂ ಆಂಗ್ಲ ಇಂಜಿನಿಯರನಿಗೂ ಆದ ಹಾಸ್ಯಾಸ್ಪದ ಜಗಳವಿದು. ಇಬ್ಬರೂ ಕಲ್ಕತ್ತೆಗೆ ಹೋಗಲು ಸೆಕೆಂಡ್ ಕ್ಲಾಸ್ ಟಿಕೇಟನ್ನು ಪಡಕೊಂಡು ತಮ್ಮ ಸೀಟನ್ನು ರಿಜರ್ವ ಮಾಡಿಸಿದ್ದರು. ಆದರೆ ಮೊದಲು ಬಂದ ಆಂಗ್ಲೇಯನು ವಕೀಲನ ಸೀಟಿನಲ್ಲಿ ಕೂತುಕೊಂಡನು. ವಕೀಲನು ಬಂದು ಇದನ್ನು ನೋಡಿ ನ್ಯಾಯಪ್ರಕಾರ ತನ್ನ ಸೀಟನ್ನು ಬಿಟ್ಟು ಕೊಡಬೇಕಾಗಿ ಹೇಳಿದನು. ಆದರೆ ಆಂಗ್ಲೇಯನು ಒಪ್ಪಲಿಲ್ಲ. ಅದರಿಂದಾಗಿ ಇಬ್ಬರೊಳಗೂ ಜಗಳವಾಯಿತು. ಬಾಯಿಯಿಂದಲ್ಲ ಕೈಗಳಿಂದ. ಅದನ್ನು ನೋಡಿ ಅವರವರ ಸೇವಕರೂ ತಮ್ಮ ಯಜಮಾನನ ಸಹಾಯಕ್ಕಾಗಿ ಬಂದರು. ಇಷ್ಟರಲ್ಲಿ ಪೋಲೀಸರು ಬಂದು ಜಗಳವನ್ನು ತಡೆಗಟ್ಟಿ ಶಾಂತಿಯನ್ನು ಸ್ಥಾಪಿಸಿದರು. ಅದುದರಿಂದ ಪಂಜಾಬಿನ ಬಂಡಿಯು ಹೊರಡುವಾಗ ಹದಿನೆಂಟು ನಿಮಿಷ ತಡವಾಯಿತು. ನಿಲ್ದಾಣದಲ್ಲಿ ಜಗಳವು ನಿಂತರೂ ಇನ್ನದು ಕೋರ್ಟಿನಲ್ಲಿ ನಡೆಯುವುದೆಂಬುದಾಗಿ ಊಹಿಸಿದೆ.

### ಕಾಳಿಕಾಲಯಕ್ಕೆ ಕಳ್ಳರು ನುಗ್ಗಿದರು.

ನ್ಯೂಡಿಲ್ಲಿ, ಆಗೋಸ್ಟು ೨೪.

ಆಗೋಸ್ಟು ತಾ. ೨೩ನೇ ರಾತ್ರಿ ಇಲ್ಲಿಯ ಕಾಳಿಕಾಲಯವನ್ನು ನುಗ್ಗಿ, ಕಾಳಿಕಾಂಬೆಯ ಆಭರಣವನ್ನೆಲ್ಲಾ ಅಜ್ಞಾತ ಸಾಹಸಿಗಳಾದ ಕಳ್ಳರು ಕದ್ದೊಯ್ದಿರುತ್ತಾರೆ. ಪೋಲೀಸರು ಈ ಕಳ್ಳರ ಪತ್ತೆಹಚ್ಚಲು ವಿಶ್ವಪ್ರಯತ್ನ ಮಾಡುತ್ತಲಿದ್ದಾರೆ.

ಅನುಕ್ರಮಣಿಕೆ.


ಚಿತ್ರ ೩
ಸಾಹಿತ್ಯ ಸಂಗ್ರಹ ೪
ಪಶ್ಚಿಮ ದೇಶವೂ ಗಾಂಧೀಜಿಯವರೂ ೫
ಪತ್ರವ್ಯವಹಾರ ೭
ನಮ್ಮ ರೈಲುಗಳನ್ನು ಹೇಗೆ ಸುಧಾರಿಸಬೇಕು ೮
ಸ್ಕಾಟ್ಲ್ಯಾಂಡಿನಲ್ಲಿ ನಡೆದ ಆಶ್ಚರ್ಯಕರ ದೃಶ್ಯ ೯
ಇಟೆಲಿಯ ಕೀಟಲೆ ೧೦
ಅಗ್ರಲೇಖ
ನಿರೀಕ್ಷಿತ ಘಾತ ೧೦
ಸ್ಫುಟವಿಚಾರಗಳು "
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೩
ಅಡಿಕೆ ತೋಟಗಳಲ್ಲಿ ಕೊಳೆ ರೋಗ ೧೪
ವಿವಿಧ ಸಮಾಚಾರಗಳು, ೧೬
ನಡೆದ ಕತೆಗಳು, ನಗಬಾರದು ೧೮



# ಸ್ವದೇಶಾಭಿಮಾನಿ.

ತಾ. ೬ನೇ ಶುಕ್ರವಾರ ಸಪ್ಟೆಂಬರ ೧೯೩೫


## ಇಟೆಲಿಯ ಕೀಟಲೆ.

ಬುಧವಾರ ತಾನೆ ಇಟೆಲಿಯು ಅಬಿಸೀನಿಯದ ವಿಚಾರವಾಗಿ ಮುಂದೆ ಕೈಕೊಳ್ಳಬಹುದಾಗಿರುವ ಕಾರ್ಯಕ್ರಮವನ್ನು ಕುರಿತಾಗಿ ಜನಾಂಗಸಭೆಯಲ್ಲಿ ಚರ್ಚೆ ನಡೆದು, ಇನ್ನು ಶಾಂತಿಸಾಧನೆಗಾಗಿ ಮಾಡುವುದೇನೆಂದೂ ನಿಷ್ಕರ್ಷೆಯಾಗಿರಬೇಕು

ಇಟೆಲಿಯು ಕೊಟ್ಟಿರುವ ದೂರಿನ ಇತ್ಯರ್ಥವಾಗುವಲ್ಲಿ, ಅದಕ್ಕುಂಟಾಗಬಹುದಾಗಿ ನಿರ್ಧಾರವಾದ ನಷ್ಟವನ್ನು ತಾನು ತೆರುವುದಾಗಿ ಅಬಿಸೀನಿಯವು ಮೊದಲೇ ಹೇಳಿದ್ದುಂಟು ಅದು ಇಟೆಲಿಗೆ ಒಪ್ಪಲಿಲ್ಲ ಅಬಿಸೀನಿಯವೇ ಮೊದಲು ತಪ್ಪುಮಾಡಿದ ಬಾಗಿಯೂ ತತ್ಸಂಬಂಧವಾಗಿ ವಿಚಾರಿಸಿದ ಕಮಿಟಿಯು ನಿರ್ಧಾರಮಾಗಿದ್ದಿತು ಇಟೆಲಿಗೆ ಬೇಕಾದುದು ನಷ್ಟಭರ್ತಿ ಮಾತ್ರವೇ ಅಲ್ಲ, ಸರ್ವಾಧಿಕಾರ ಎಂದು ತಿಳಿದು ಬರುವಂತಾಗಿದೆ

ನೂರು ವರ್ಷಗಳಿಂದೀಚೆಗೆ, ಅದರಲ್ಲೂ ಕೊನೆಯ ಅವಜಯದಿಂದ ಇದುವರೆಗೆ ಯಾವ್ಯಾವ ರೀತಿಯಲ್ಲಿ ಅಬಿಸೀನಿಯವು ತನಗೆ ಅನ್ಯಾಯಮಾಡಿರುವುದೆಂದು ತೋರಿಸಿ ರಿಕಾರ್ಡು ಸಮೇತವಾಗಿ ಇಟೆಲಿಯು ಒಂದು ಪತ್ರಕವನ್ನು ಮುಂದಿಟ್ಟಿದೆ ಇತ್ತ, ಸೈನ್ಯಸನ್ನಾಹಗಳೆಲ್ಲವೂ ಮುಂದರಿಯುತ್ತ, ನಾಯಕರ ಕೈಯು ಸಿದಿಮದ್ದಿಟ್ಟ ಉಗ್ರಾಣಗಳ ಮೇಲೆ ಬೆಂಕಿಪೆಟ್ಟಿಗೆ ತೆರೆದು ನಿಂತಿದೆ ಸಂಜ್ಞೆಯಾಗುತ್ತಲೆ, ರಣಭೇರಿಗಳು ಮೊಳಗುವಂತೆಯೆ ಯುದ್ಧದ ಸಿಡಿಲಿಗೂ ಪ್ರಾರಂಭವಾಗುವುದು

ಇಟೆಲಿಯ ಸೈನಿಕರಲ್ಲಿ ಹೋಗದೆ ತಪ್ಪಿಸಿಕೊಂಡವರೂ, ಹೋಗಿ ಆರೋಗ್ಯ ಕೆಡಿಸಿಕೊಂಡವರೂ ಅಬಿಸೀನಿಯದಿಂದ ಹಿಂತಿರುಗಿರುವವರೂ ಬಹಳ ಮಂದಿ, ಆದರೂ ಈ ವಾರದ ಅಂತ್ಯದೊಳಗೆ ಒಂದು ಮಿಲ್ಯ ಸೈನಿಕರು ಅಬಿಸೀನಿಯದ ಗಡಿಯಬಳಿ ಸನ್ನದ್ಧರಾಗುವರು

ಅಬಿಸೀನಿಯದ ರಾಜರಾಣಿಯರೂ, ಸ್ತ್ರೀಪುರುಷರೂ ಅತ್ತ ಸಿದ್ಧರು ಹತ್ತು ಮಿಲ್ಯ ಜನರು ಅವಶ್ಯವಾದಲ್ಲಿ ಯುದ್ಧರಂಗದಲ್ಲಿ ಸಾಯಲು ನಿಶ್ಚಿತರು ಸ್ತ್ರೀಯರು ಪುರುಷರಂತೆ ಅವರ ಸ್ಥಾನದಲ್ಲಿ ಯುದ್ಧಮಾಡಲು ಸನ್ನದ್ಧರಾಗಿದ್ದಾರೆಂದು ರಾಣಿಯವರೆ ಸಾರಿರುವರು. ಇತರ ಕಡೆಗಳಿಂದ ಕಪ್ಪು ಜನಗಳೆಲ್ಲ ಈ ಯುದ್ಧ ಸಂದರ್ಭವನ್ನು ಕಾಯುತ್ತಿದ್ದಂತೆಯೂ ವರ್ತಮಾನವಿದೆ

ಈ ಮಧ್ಯೆ, ಅಬಿಸೀನಿಯದ ಅರಸನ ಪ್ರವೀಣತೆಯ ಉದಾಹರಣೆಯೊಂದು ಪ್ರಕಟವಾಗಿ ಜಗತ್ತೆಲ್ಲ ವಿಸ್ಮಯಗೊಂಡಿದೆ. ಇಟೆಲಿಯ ಸರಹದ್ದಿಗೆ ಸಮೀಪವಾಗಿ, ಸುಮಾರು ತನ್ನ ಅರ್ಧ ರಾಜ್ಯದಷ್ಟು ವಿಸ್ತೀರ್ಣದಲ್ಲಿ, ಯಾವ ಗನಿಗಳನ್ನಾದರೂ ತೋಡಲು, ೭೫ ವರ್ಷಗಳ ಅವಧಿಗೆ, ಹತ್ತು ಮಿಲ್ಲಿಯ ಪವನು ಈಗಲೆ ಪಡೆದು, ಖನಿಜಗಳನ್ನೆತ್ತಲೂ ಶೋಧಿಸಲೂ ಹಕ್ಕನ್ನು ಬ್ರಿಟಿಷ ಮತ್ತು ಅಮೇರಿಕನ್ ವ್ಯಾಪಾರ ಸಂಘಕ್ಕೆ ಅವರೇ ಕರಾರುಮಾಡಿ ಕೊಟ್ಟಿರುವರು ಇಟೆಲಿಗೆ ಈ ಹಕ್ಕು ಬೇಕೇ ಎಂದು ಮೂರು ವರ್ಷಗಳಿಂದಲೇ ಕೇಳುತ್ತಿದ್ದರೂ ಅದು ನಿರಾಕರಿಸಿತ್ತಂತೆ, ಆಯಾ ಸರಕಾರಗಳಿಗೆ ಮಾತ್ರ ಇದು ಗೊತ್ತಿಲ್ಲವಂತೆ; ಅಂತೂ, ತಟಸ್ಥವಾಗಿರಬೇಕೆಂದು ನಿರ್ಣಯಮಾಡಿದ ಅಮೇರಿಕಾ ಸರಕಾರಕ್ಕೂ ಇದೊಂದು ಉಪಾಯದಿಂದ ಯುದ್ಧದಲ್ಲಿ ಸೆಳೆವಂತಾಗಿದೆ ಎಂದೂ, ತನಗೆ ಬೇಕಾಗಿರುವ ಯುದ್ಧಸನ್ನಾಹಕ್ಕೆ ಈಗಲೆ ಹಣವೆಲ್ಲ ದೊರೆವಂತಾಗಿದೆ ಎಂದೂ ಅಬಿಸೀನಿಯವು ನಗುತ್ತಿದೆ

ಜನಾಂಗಸಂಘದ ಮಾತನ್ನು ಮೀರಿಯೆ ಆದರೂ ತನ್ನ ಉದ್ದೇಶವನ್ನು ನೆರವೇರಿಸಲು ಇಟೆಲಿಯು ಮುಂಕೊಂಡಿದೆ ಇತರ ರಾಷ್ಟ್ರಗಳು,-ಇಂಗ್ಲೆಂಡು, ಫ್ರಾನ್ಸು ಮೊದಲಾದುವು ಇಟೆಲಿಯ ವಿರುದ್ಧ ಅಸ್ತ್ರಧಾರಣೆ ಮಾಡುವುದಿಲ್ಲವಾದರೂ, ಆಹಾರವೇ ಮೊದಲಾದ ಪದಾರ್ಥಗಳನ್ನೂ ಸರಕುಗಳನ್ನೂ ಇಟೆಲಿಗೆ ಕೊಡದಂತೆಯೂ, ಸುಯೆಜ್ ಕಾಲುವೆಯನ್ನು ಇಟೆಲಿಯ ವ್ಯವಹಾರಕ್ಕೆ ಬಿಟ್ಟುಕೊಡದಂತೆಯೂ ಪ್ರಯತ್ನಮಾಡುವುದು ಅಗತ್ಯವೊ, ಸಾಧ್ಯವೋ ಎಂದು ಈಗ ತರ್ಕವೆದ್ದಿದೆ

ಇಂಗ್ಲೆಂಡಿನಲ್ಲಿ ಮಜೂರರು, "ಇಟೆಲಿಯು ಮಹದನ್ಯಾಯಮಾಡಿರುವ ಪ್ರಯುಕ್ತ ಅದನ್ನು ಎಲ್ಲ ಪ್ರಕಾರಗಳಿಂದಲೂ ಶಿಕ್ಷಿಸಬೇಕಾಗಿ" ನಿರ್ಧರಿಸಿರುವಾಗ, ಲೋರ್ಡ ಹಾರ್ಡಿಂಗರಂತಹ ಮುತ್ಸದ್ದಿಗಳು 'ಹಾಗೆ ಮಾಡಿದ್ದಲ್ಲಿ ಯುರೋಪಿಗೆ ಬೆಂಕಿ ಹತ್ತೀತೆಂದೂ, ಇಟೆಲಿಯ ಜನಗಳನ್ನು ಕಪ್ಪು ಜನರ ಕರುಣೆಗೊಪ್ಪಿಸಬೇಕಾದೀತೆಂದೂ' ಎಚ್ಚರಿಸುತ್ತಾರೆ ಎಲ್ಲಿಯ ರೋಪಿಯ ಸರಕಾರಗಳ ಒಮ್ಮತವಾಗಿ ಇಟೆಲಿಯ ಈ ಧೂರ್ತತನವನ್ನು ಎದುರಿಸಲು ತಟಸ್ಥರಾಗಿ ಧಾನ ಸಹಾಯವನ್ನೂ ಮಾಡಕೂಡದೆಂದು ಉತವಾದ ತಂತ್ರವೂ ಪತ್ರಿಕೆಗಳಲ್ಲಿ ಬಹಳವಾಗಿ ಪ್ರಚಾರಕ್ಕೆ ಬಂದಿದೆ

ಹೀಗೆ ಮಾಡಿದರೂ ಯುದ್ಧಕ್ಕಿಳಿದಂತೆಯೆ ಅರ್ಥವಾಗುವುದು ಸಮಾಧಾನ ಕಾಲದಲ್ಲಿ ಮಾಡುತ್ತಿದ್ದ ಯಾವ ವ್ಯವಹಾರವನ್ನು ಈಗ ನಿಲ್ಲಿಸಿದರೂ, ಅದು ಯುದ್ಧಕ್ರಿಯೆ ಎನ್ನಿಸುವುದು ಹೀಗೆಂದೇ ಅರ್ಥಮಾಡಿಕೊಳ್ಳುವುದಾಗಿ ಇಟೆಲಿಯು ತಿಳಿಸಿಯೇ ಇರುವುದು.

ಜನಾಂಗಸಂಘವು ಯುದ್ಧವನ್ನು ತಡೆಯಲು ಸಮರ್ಥವಾದ ಇಂದ್ರಜಾಲವನ್ನೇನೂ ತಿಳಿದಿಲ್ಲ ನಡುವೆ ಒಂದು ಕೌತುಕವೆಂಬಂತೆ,-ಇಟೆಲಿಯೂ, ಫ್ರಾನ್ಸೂ, ಜರ್ಮನಿಯೂ ತಮ್ಮ ವಾರ್ಷಿಕ ರಣೋತ್ಸವಗಳನ್ನು ಈಗಲೇ ಆಚರಿಸಲು ಸನ್ನಾಹಮಾಡಿವೆ ಇವು ಎಂದಿನಂತೆ ವಿನೋದಕ್ಕೊ, ಅಗತ್ಯವಿದ್ದರೆ ವಿರೋಧಕ್ಕೊ ಅನುಕೂಲವಾಗಬಹುದೇನೋ

ಚತುರಂಗದ ಆಟದಲ್ಲಿ ರಾಜನು ಅತಿ ಕಡಮೆಯಾಗಿ ರಂಗಕ್ಕಿಳಿವನು ಆದರೂ, ಆಟವು ಗೆಲ್ಲಬೇಕಾದಲ್ಲಿ, ನಿರುಪಾಯವಾಗಿ ಈ ರಾಜನೂ ಯುದ್ಧಕ್ಕಿಳಿಯಬೇಕಾಗುವುದುಂಟು ಜನಾಂಗಸಂಘದ ಮೇಲೆ, ಇಂತಹದೊಂದು ಸಂದಿಗ್ಧಸಮಯದ ಒತ್ತಾಯವು ಈಗ ಉಂಟಾಗಿದೆ.

ಆಟವು ಉಳಿಯಬೇಕೋ ರಂಗಕ್ಕಿಳಿಯಬೇಕು, ಹೊರತು ಇತರ ಚತುರೋಪಾಯಗಳಿಂದ ಸಾಗದು ಅಂತೂ 'ದೇವರೇ ಗತಿ,' ಎಂದು ಬ್ರಿಟಿಷ ಸಾಮ್ರಾಜ್ಯವೂ ಸತ್ಯ ಧರ್ಮ ನಿಷ್ಠೆಯಿಂದ ವರ್ತಿಸಬೇಕಾಗಿದೆ.

## ಸ್ಫುಟವಿಚಾರಗಳು

### ಚಾಪಾನದ ಮಹಾ ವಿಷ!

ಸರ್ ಪಿ ಸಿ. ರೇಯವರು ಚಾಸೊಪ್ಪಿನ ಕಷಾಯವನ್ನು ಕುರಿತಾಗಿ ಧೈರ್ಯದಿಂದ ನಾಲ್ಕು ಮಾತುಗಳನ್ನಾಡಿರುವರು - ಚಾವನ್ನು ಎಲ್ಲರೂ ಕುಡಿಯುವಂತಾಗಬೇಕೆಂದು, ವರುಷಕ್ಕೆ ಎರಡು ಲಕ್ಷ ಪವನುಗಳನ್ನು ಪ್ರಕಟನೆಗಳಿಗಾಗಿಯೆ ವ್ಯಯಿಸಬೇಕಾಗಿ ಚಾ ವರ್ತಕರು ನಿಶ್ಚಯಿಸಿರುವರು. ಹೀಗಾಗಿ ಹಣದ ಪ್ರಭಾವದಿಂದ, ಎಲ್ಲೆಲ್ಲಿಯೂ ಚಾ ಮಹಾತ್ಮೆಯನ್ನೆ ಕೇಳಬರುವ ಹಾಗೆ ಮಹಾಪ್ರಯತ್ನಗಳು ನಡೆಯುತ್ತಲಿವೆ ಮನಸ್ಸಿಗೆ ಉತ್ಸಾಹವನ್ನೂ ಆಹ್ಲಾದವನ್ನೂ ತಕ್ಷಣವೆ ಉಂಟುಮಾಡಿ, ಗ್ಲಾನಿಯನ್ನು ನಿವಾರಿಸಿ, ಸ್ವರ್ಗೀಯವಾದ ತೃಪ್ತಿಯನ್ನು ಉಂಟುಮಾಡಿಕೊಳ್ಳಲು ಈ ಪಾನಕ್ಕಿಂತ ಶ್ರೇಷ್ಠವಾದುದು ಅನ್ಯವುದೂ ಇಲ್ಲವೆಂದು ಈ ಪ್ರಕಟನೆಗಳ ಡಂಗುರವಾಗಿದೆ ಈ ಚಾ ಗಾನವು ಆಲಾಪನೆ ಹೊಂದಿ ಹಳ್ಳಿಗಳಲ್ಲೆಲ್ಲ ಮೊಳಗುತ್ತಿರುವಾಗಲೇ, ವಿಜ್ಞಾನ ಪಾರಂಗತರಾಗಿರುವ ರೇಯರು ಇಂತಹ ವಿಷವು ಬೇರೊಂದಿಲ್ಲವೆಂದೂ, ಇದು ಮದ್ಯದಷ್ಟೇ ಮಾದಕವೆಂದೂ, ದೇಶಹಿತೈಷಿಗಳು ಇದು ನಮ್ಮ ಗ್ರಾಮಗಳಲ್ಲಿ ಮಹಾಮಾರಿಯಂತೆ ಹೊಕ್ಕು, ಹಳ್ಳಿಗರ ಹಣವನ್ನೂ ಪ್ರಾಣಗಳನ್ನೂ ಅಪಹರಿಸದಂತೆ ಸಾಧಿಸಬೇಕೆಂದೂ ಸಾರಿರುವರು ಹಣ ಮತ್ತು ಪ್ರಾಣ ಇವೆರಡರ ಅಪಹರಣಕ್ಕಿಂತಲೂ ಹಾನಿಕರವಾದುದೆಂದರೆ, ಇದರ ಅಭ್ಯಾಸದ ಬೆಳವಣಿಗೆ ಚಾ-ಸಿಗರೇಟುಗಳು ಎರಡೂ ಮಿತಿಮೀರಿ ಆಕ್ರಮಿಸಬಲ್ಲುವು ಊಟಕ್ಕಾದರೂ ನಿಯಮವಿದೆ, ಮಿತಿಯಿದೆ,-ಇವುಗಳಿಗಿಲ್ಲ ಇದೇ ಇವೆರಡು ಅಭ್ಯಾಸಗಳ ಶೋಚನೀಯ ಪರಿಣಾಮ ವರ್ತಕ ಮಂಡಲಿಯು ಹಣಸುರಿದು ಇವನ್ನು ದಿಗಂತವ್ಯಾಪಿಗಳನ್ನಾಗಿ ಮಾಡಲು ಪ್ರಯತ್ನಿಸುವಾಗಲೇ, ಇವುದರ ಪರಿಣಾಮ ಫಲಗಳು ಯಾರಿಗೆ ಲಭಿಸಬಹುದೆಂದು ಹೇಳುವುದು ಕಷ್ಟವೆ? ಇದೇ ರೀತಿ, ಹಣ ಸುರಿದು ಹಳ್ಳಿಗಳೆಲ್ಲ ಉತ್ತಮ ಶಾಲೆಗಳನ್ನೂ ವಾಚನಾಲಯಗಳನ್ನೂ ಸ್ಥಾಪಿಸಲು ಈ ಚಾ ವರ್ತಕರು ಹಣ ಸಬಾರದೆ? ಅಥವಾ ಹಳ್ಳಿಗರು ಚಾ-ಸಿಗರೇಟುಗಳಿಗಾಗಿ ವ್ಯಯಿಸಬಹುದಾಗಿರುವ ಹಣವನ್ನು ಕೂಡಿಸಿ, ತಮಗೆ ವಿನೋದದೊಡನೆ ಲೋಕಾನುಭವವೂ ದೊರೆವಂತೆ ಮೂಲಧನವನ್ನಾದರೂ ಸಂಗ್ರಹಿಸಬಹುದಲ್ಲ!

### ಚರಿತ್ರೆಯನ್ನು ತಿದ್ದಿ ಬರೆಯಿಸುವುದು

ಜಗತ್ತಿನ ಶಾಂತಿಸಾಧನೆಗಾಗಿ ಜನಾಂಗಸಂಘವು ಮಾಡುತ್ತಿರುವ ಪ್ರಯತ್ನಗಳೆಲ್ಲವೂ ವ್ಯರ್ಥವಾದುವೆಂದು, ಈ ಸಭೆಯ ಮಾತುಗಳನ್ನು ಮೀರಿ ನಡೆಯಬಲ್ಲ ಬಲಿಷ್ಠರ ಮಾತಾಗಿದೆಯಾದರೂ, ಶಾಂತಿಯು ನೆಲೆಗೊಳ್ಳಲು ಅನುಕೂಲವಾದ ಮನೋವೃತ್ತಿಯು ಯುವಕ ವಿದ್ಯಾರ್ಥಿಯರಲ್ಲಾದರೂ ಬೆಳೆವಂತೆ, ಈ ಸಂಘದ ಸೂಚನೆಗಳನ್ನು ಅನುಸರಿಸಿ, ದೇಶಗಳ ಅಥವಾ ಜನಾಂಗಗಳ ಚರಿತ್ರೆಗಳನ್ನು ಪುನಃ ದೋಷರಹಿತವಾಗಿ ಬರೆವ ಏರ್ಪಾಡುಗಳು ನಡೆಯುತ್ತಿರುವುದು ಸಂತೃಪ್ತಿಕರವಾಗಿದೆ. ಜನಾಂಗಗಳಲ್ಲಿ ಸೋದರಭಾವವು ಉಂಟಾಗಬೇಕಾದರೆ ಒಂದು ಜನಾಂಗವು ಮೇಲು ಇನ್ನೊಂದು ಕೀಳು ಎಂಬುದನ್ನು ಸೂಚಿಸುವ ರೀತಿಯಲ್ಲಿ ಬರೆಯಲಾಗಿರುವ ಚರಿತ್ರೆ ಪುಸ್ತಕಗಳು ನಾಶವಾಗಬೇಕೆಂದೇ ಸಂಘದ ನಿರ್ಧಾರವಾಗಿದೆ ಇನ್ನು ಜನಾಂಗಗಳೊಳಗೆ ದ್ವೇಷವು ಹೆಚ್ಚದಂತೆಯೂ, ಐಕ್ಯಮತ್ಯವು ಹೆಚ್ಚುವಂತೆಯೂ, ಉತ್ತಮ ವಿಚಾರಗಳನ್ನು ಒತ್ತಿ ಹೇಳಿಯೂ, ದುಷ್ಟ ವಿಚಾರಗಳನ್ನು ಲೋಪಿಸಿಯೂ, ಸತ್ಯಸಂಗತಿಗಳನ್ನು ಮರೆಮಾಚದೆಯೂ ಮನಸ್ಸಿಗೆ ನಾಟುವ ರೀತಿಯಲ್ಲಿ ಗ್ರಂಥಗಳಾಗಬೇಕಾಗಿದೆ. ಫ್ರಾನ್ಸು-ಜರ್ಮನಿಗಳೆರಡೂ ತಮ್ಮೊಳಗೆ ಪರಂಪರಾಗತವಾಗಿ ಬಂದಿರುವ ಹಗೆತನವನ್ನು ನಾಶಪಡಿಸಲು ಈಗ ಸ್ವದೇಶಗಳ ಚರಿತ್ರೆಗಳನ್ನು ತಿದ್ದಿ ಬರೆಯಲು ತೊಡಗಿವೆ ಸತ್ಯವು ಅಳಿವಿಲ್ಲದೆ ಕೊನೆಗೆ ವಿಜಯ ಹೊಂದುವುದೆಂಬುದು ನಿಜವಾಗಿದೆಯಷ್ಟೆ ಹಾಗಿರುವಾಗ ಅದನ್ನೇಕೆ ತನಗೆ ಬೇಕಾಗುವಂತೆ ತಿದ್ದಿ ಬರೆಯಬೇಕು? ಇತರರ ಹುಳುಕನ್ನೆ ಪ್ರಕಟಿಸುತ್ತ, ತಮ್ಮ ಮಹಾನುಭವತೆಯನ್ನೆ ಬೆಳಗಿಸುತ್ತ ಬರುವ/ಜನಾಂಗಗಳು ಸಹಾನುಭೂತಿ,ಪ್ರೇಮ, ಔದಾರ್ಯಗಳನ್ನು ಪ್ರಕಟಿಸತೊಡಗಿ ಸತ್ಯವಂತರಾದರೆ, ಲೋಕದಲ್ಲಿ ಮುಂದಣ ತಲಾಂತರದೊಳಗೆ ಶಾಂತಿಯು ನೆಲೆಸಲ್ಲದೆ?

ಶೀತದಿಂದ ದೂರವಾಗಿರಿ.

ಸಾಂಬಕ್ ಸಸ್ಯಜನ್ಯ ಲೇಪನವನ್ನುಪಯೋಗಿಸಿರಿ.

ರಾತ್ರೆ ಮಲಗುವ ಮೊದಲು ಸಾಂಬಕನ್ನು ಎದೆಗೆ ತಿಕ್ಕಿ ಕಟ್ಟಿ ಶೀತವನ್ನೂ ಚಳಿಯನ್ನೂ ಓಡಿಸಿರಿ. ನಿಮ್ಮ ದೇಹದ ಶಾಕವು ಸಾಂಬಕನ್ನು ನೀರುಮಾಡಿ, ನೀವು ಅದನ್ನು ಉಚ್ಛ್ವಾಸಿಸುತ್ತಿರುವಾಗ ನಿಮ್ಮ ಕಟ್ಟಿದ ಶ್ವಾಸವು ಸರಿಯಾಗುವುದು ಘಾಯ, ಎಕ್ಸಿಮಾ, ಕಜ್ಜಿ ಮೊದಲಾದುವುಗಳಿಗೆ ಸಾಂಬಕನ್ನುಪಯೋಗಿಸಿರಿ.

1 ರೂಪಾಯಿ ಅಥವಾ ರೂ 2-4-0ಕ್ಕೆ ಎಲ್ಲಾ ಔಷಧಿಗಾರರಲ್ಲೂ ಸಿಗುತ್ತದೆ.

ಸಾಂಬಕ್

Zam-Buk


## ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 142/1929

ಕ್ರಮ ಅಪ್ಲಿಕ್ಯಾಶನ್ ನಂಬ್ರ 596/1935

ವಾದಿರು—ಜಾಂಬವತಿ ಯಾನೆ ಕಮಲಾವತಿ ಬಾಯಿ ಕೂಡಾ

ಪ್ರತಿವಾದಿರು—ಸುಬ್ರಾಯ ಶೆಟ್ಟಿ (ಪ್ರಾತಿ) ಕೂಡಾ

ಸದ್ರಿ ಕ್ರಮನಂಬ್ರ 442/1929ನೇ ಡಿಕ್ರಿಯ ಮೇಲೆ ವಾದಿರು ನಡಿಸಿದ ಮೇಲೆ ಹೇಳಿದ 596/1935ನೇ ಕ್ರಮ ಅಪ್ಲಿಕ್ಯಾಶನ್ ತನ್ನಿಯನ್ನು ತಾ 13–9–1935ನೇ ದಿವಸ 10 ಘಂಟೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವಿದ್ದರೆ ಎದ್ರಿರು ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವ ಸಂಗ್ತಿ ಈ ಮೂಲಕ ತಿಳಿಸಲಾಗಿದೆ

4–9–1935 } ಕುಂದಾಪುರ } K Vittaldas Shenai, ವಾದಿರ ಕಡೆ ವಕೀಲ್ಸ್.

## ತಾಲೂಕುಗಳಿಂದ.

**ಪುತ್ತೂರು**—ದಸರಾ ಮಹೋತ್ಸವದ ಸಮಯ ಕೃಷಿ ಮತ್ತು ಕೋಳಿಗಳ ಪ್ರದರ್ಶನವು ತಾ. ೨೯ನೇ ಸೆಪ್ಟಂಬರ ಆದಿತ್ಯವಾರ ಬೆಳಿಗ್ಗೆ ಶ್ರೀ ನವರತ್ನಂ ರಾಮರಾವ್, (ಮೈಸೂರು ಸರಕಾರದ ನಿವೃತ್ತ ಕೌನ್ಸಿಲರು) ಇವರಿಂದ ತೆರೆಯಲ್ಪಡುವುದು. ಉತ್ತಮ ಕೃಷಿಕ ಉತ್ಪನ್ನಗಳನ್ನೂ ಕೋಳಿಗಳನ್ನೂ ತರುವವರಿಗೆ ಬಹುಮಾನ, ಪ್ರಶಸ್ತಿ ಪತ್ರಗಳನ್ನು ಕೊಡಿಸಲಾಗುವುದು. ಕೋಳಿಗಳ ಸ್ಪರ್ಧೆಯಲ್ಲಿ—ಜಾತಿ, ಚೆಲುವು, ಬೆಳವಣಿಗೆ, ತೂಕ, ಮೊಟ್ಟೆಯಿಡುವ ಯೋಗ್ಯತೆ—ಇಂಥ ವಿಷಯಗಳು ಯೋಚಿಸಲ್ಪಡುವುವು

ಮಕ್ಕಳ ಮತ್ತು ಶಿಕ್ಷಣ ಸಂಬಂಧ ಪತ್ರಿಕಾ ಪ್ರದರ್ಶನವು ತಾ. ೩೦ನೇ ಸಪ್ಟಂಬರ ಸೋಮವಾರ ಘಂಟೆ ೪ಕ್ಕೆ ಶ್ರೀ ಬಿ ಎಸ್ ಕುಪ್ಪಾಜಪ್ಪ (ಕೊಡಗಿನ ವಿದ್ಯಾಧಿಕಾರಿಗಳು) ಇವರಿಂದ ತೆರೆಯಲ್ಪಡುವುದು. ಈ ಪತ್ರಿಕೆಗಳಲ್ಲಿ—ಮಕ್ಕಳ ಕೈಬರಹದ ಪತ್ರಿಕೆಗಳು, ಉಪಾಧ್ಯಾಯರ ಕೈಬರಹದ ಪತ್ರಿಕೆಗಳು, ಮಕ್ಕಳ ಸಲುವಾಗಿ ದೇಶವಿದೇಶಗಳಲ್ಲಿ ಪ್ರಕಟವಾಗುವ ಪತ್ರಿಕೆಗಳು, ಶಿಕ್ಷಣ ಸಂಬಂಧವಾದ ಪತ್ರಿಕೆಗಳು—ಪ್ರದರ್ಶಿಸಲ್ಪಡುವುವು

**ಉಡುಪಿ** — ಸಂಸ್ಕೃತ ಪಾಠಶಾಲೆಗಳ ಸುಪರಿಂಟೆಂಡೆಂಟರಾದ ಶ್ರೀ ಎಲ್ ವೆಂಕಟರತ್ನಂ ನಾಯುಡು ಎಂ. ಎ ಎಲ್ ಟಿ ಯವರು ಕಳೆದ ವಾರ ಚಿತ್ಪಾಡಿ ಸ್ಥಳೀಯ ಶ್ರೀಮಾನ್ ಮಧ್ವಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಕಾಲೇಜಿನ ವರ್ಷಾವಧಿ ಇನ್ಸ್ಪೆಕ್ಷನ್ ನಡೆಸಿದರು. ಇವರ ಆಗಮನದ ಗೌರವಾರ್ಥಕ್ಕಾಗಿ ಸದ್ರಿ ಕಾಲೇಜಿನ ವಿದ್ಯಾರ್ಥಿಗಳು ಕಾಳಿದಾಸ ಕೃತ ಶಕುಂತಲಾ ಎಂಬ ಸಂಸ್ಕೃತ ನಾಟಕವನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ ೨೬—೮—೩೫ಕ್ಕೆ ರಾತ್ರಿ ಅಭಿನಯಿಸಿ ತೋರಿಸಿದರು. ಕಾಲೇಜಿನ ಆಡಳಿತ ಸಂಘದ ಬಗ್ಗೆ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಸಂದರ್ಭೋಚಿತ ಭಾಷಣಗೈದು ಸದ್ಯದಲ್ಲಿಯೇ ಪ್ರಚಲಿತವಾಗಿರುವ ಗ್ರಾಂಟಿನ ಕಡಿತವು ಸದ್ರಿ ಕಾಲೇಜಿಗೆ ತಗಲದಂತೆ ಮಾನ್ಯ ವಿದ್ಯಾಇಲಾಖೆಯವರು ಮೇಲಾಗಿ ಇನ್ಸ್ಪೆಕ್ಟರು ಗಮನಿಸಬೇಕಾಗಿ ಒತ್ತಿ ಹೇಳಿದರು. ನಾಟಕಾಭಿನಯದ ಕಡೆಗೂ ಪ್ರಶಸ್ತಿ ಪತ್ರಿಕೆಯನ್ನು ಮಾನ್ಯ ವಿದ್ಯಾಧಿಕಾರಿಗಳು ವಹಿಸಿದ ಬರೆದು ಕಳುಹಿದರು

ಉಡುಪಿ ತಾಲೂಕಿನ ೮ನೇ ಸರ್ಕಲಿಗೆ ನಿಯೋಜಿಸಿದ ಮಹಮ್ಮದೀ ಸೀಟನ್ನು ರದ್ದುಪಡಿಸಿ ಕಾಸರಗೋಡು ತಾಲೂಕಿನ ಮಂಜೇಶ್ವರ ಸರ್ಕಲಿಗೆ ವರ್ಗಾಯಿಸಿರುವುದರ ನಿಷೇಧ ಸೂಚಕಕ್ಕೆ ಇಲ್ಲಿನ ಅಂಜುಮಾನ್ ಸಂಘದ ಕಟ್ಟಡದಲ್ಲಿ [illegible] ಶ್ರೀ ಮೊ. ಮುಹಮ್ಮದ್ ಉಲ್ಲಾ ಸಾಹೇಬ, ಬಿ ಎ ಎಲ್ ಎಲ್, ಬಿ ವಕೀಲ ಇವರ ಅಧ್ಯಕ್ಷತೆಯಲ್ಲಿ ಉಡುಪಿ, ಮಲ್ಪೆ, ಹಿರಿಯಡ್ಕ ಕಡೆಗಳ ಮುಸಲ್ಮಾನ ಬಂಧುಗಳು ಸಭೆ ಸೇರಿದರು. ನಿಷೇಧ ಸೂಚಕ ಠರಾವುಗಳು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟವು

ತಾ ೩೧—೮—೩೫ನೇ ರಾತ್ರಿ ಸುಮಾರು ಹತ್ತು ಗಂಟೆಯ ಕಾಲಕ್ಕೆ ಸ್ಥಳೀಯ ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ ಲಿಮಿಟೆಡಿನ [illegible] ಹಂಚು ಕಾರ್ಖಾನೆಗೆ ಸಂಬಂಧಿಸಿದ ಹಂಚುಗಳನ್ನು ಒಣಗಲಿಕ್ಕೆ ಮಳೆಗಾಲದ ಮಟ್ಟಿಗೆ ಹಂಗಾಮಿಯಾಗಿ ಕಟ್ಟಿಸಲಾದ ಚಪ್ಪರಕ್ಕೆ ಆಕಸ್ಮಾತ್ತಾಗಿ ಬೆಂಕಿ ತಗಲಿ ಸುಮಾರು ೬,೦೦೦ ಹಂಚು ಗಳಿಡುವ ಫ್ರೇಮುಗಳೂ, ರೂ ೧೦೦ ಬೆಲೆ ಬಾಳುವ ಕಟ್ಟಿಗೆಯೂ ಒಟ್ಟು ಅಂದಾಜು ರೂ. ೫೦೦ ವರೆಗಿನ ನಷ್ಟವಾಗಿದೆ.

## ಮಂಗಳೂರು.

ಇದೇ ತಿಂಗಳ ತಾ. ೮ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮—೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜ ಮಂದಿರದಲ್ಲಿ "ರಾಜ ಮತ್ತು ಕೃಷ್ಣ" ಎಂಬ ಕುರಿತು ಭಾಷಣಗಳಾಗುವವು ಸರ್ವರಿಗೂ ಸ್ವಾಗತವಿದೆ.

ಬೊಕ್ಕಪಟ್ಣ ಮುನಿಸಿಪಲ್ ಹಿ. ಪ್ರಿ ಶಾಲಾ ವಿವೇಕಾನಂದ ಸ್ಕೌಟು ದಳದ ೨ನೇ ವಿಜ್ಞಾನ ಸಭೆಯು ಕಳೆದ ತಾ ೩೦ನೇ ಶುಕ್ರವಾರ ಸಾಯಂಕಾಲ ೪—೩೦ಕ್ಕೆ ಶ್ರೀಯುತ ಕೋ. ಶಿವರಾಮ ಕಾರಂತ ಇವರ ನೇತೃತ್ವದಲ್ಲಿ ಜರಗಿತು ೬, ೭, ೮ನೇ ತರಗತಿಯ ಸುಮಾರು ೧೨೦ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಸದ್ರಿ ಶಾಲಾ ಉಪಾಧ್ಯಾಯರೂ ನೆರೆದಿದ್ದರು. ಮುಖ್ಯ ಉಪಾಧ್ಯಾಯರಾದ ಮಿ॥ ಕೆ ಮುಹಮ್ಮದ್ ಇವರು ಸಭೆಗೆ ಕನ್ನಡ ಸಾಹಿತ್ಯಕ್ಕೆ ಭೂಷಣಪ್ರಾಯರಾದ ಶ್ರೀ ಕಾರಂತರ ಪರಿಚಯವನ್ನು ಮಾಡಿಕೊಟ್ಟ ಮೇಲೆ ಶ್ರೀಯುತರು ಕಬ್ಬಿಣದ ಕಾರ್ಖಾನೆಯ ವಿಷಯ ಒಂದು ಉತ್ತಮ ಭಾಷಣವನ್ನಿತ್ತರು. ಕಬ್ಬಿಣದ ಆವಶ್ಯಕತೆ, ಪಡೆಯುವ ರೀತಿ ಕಬ್ಬಿಣ ಮತ್ತು ಉಕ್ಕಿನಿಂದ ಕಾರ್ಖಾನೆಗಳಲ್ಲಿ ಸಾಮಾನುಗಳನ್ನು ತಯಾರಿಸುವ ವಿಧಾನಗಳನ್ನೂ ಮೈಸೂರಿನ ಭದ್ರಾವತಿ ಕಾರ್ಖಾನೆ, ಬಿಹಾರಿನಲ್ಲಿ ಜಮ್ಷೆಡ್ಪುರದ ಟಾಟಾ ಕಬ್ಬಿಣದ ಕಾರ್ಖಾನೆಗಳು ಸಭೆಯವರ ಕಣ್ಣ ಮುಂದೆ ಒಂದು ನಿಲ್ಲುವಂತೆ ವರ್ಣಿಸಿ ವಿವರಿಸಿದರು. ಮುಖ್ಯ ಉಪಾಧ್ಯಾಯರು ಭಾಷಣಕರ್ತರಿಗೆ ಕೃತಜ್ಞತೆಯನ್ನು ತೋರ್ಪಡಿಸಿದ ಮೇಲೆ ೫—೩೦ಕ್ಕೆ ಸಭೆಯು ಮುಕ್ತಾಯವಾಯಿತು.

ಶ್ರೀ ಕೃಷ್ಣ ಸಿನೇಮಾದಲ್ಲಿ ಇದೇ ತಾ ೬ರಿಂದ "ಕೆಥರಿನ್ ದಿ ಗ್ರೇಟ್" ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಇದರಲ್ಲಿ ಡೊಗ್ಲಾಸ್ ಫೇರ್‌ಬೇಂಕ್ಸನೂ (ಜೂನಿಯರ್) ಎಲಿಜಬೆತ್ ಬರ್ಗನರ್‌ರೂ ಅಭಿನಯಿಸಿರುವರು. ತಾ ೧೫ರಿಂದ ರಂಜಿತ್ ಕಂಪೆನಿಯವರ 'ಬರಿಸ್ಟರ್ಸ್ ವೈಫ್' ಎಂಬ ಚಿತ್ರವು ಪ್ರದರ್ಶಿಸಲ್ಪಡಲಿದೆ ಇದರಲ್ಲಿ ಮಿಸ್ ಗೋಹರ್ ಇ ಬಿಲ್ಲಿಮೋರಿಯಾ ದಿಕ್ಷಿತ್ ಗೋಪಿ ಚಾರ್ಲಿ ಇವರೆಲ್ಲರೂ ಅಭಿನಯಿಸಿರುವರು. ತಾ ೧೯ರಿಂದ ಆರ್ ಕೆ ಒ ಕಂಪೆನಿಯವರ 'ಲೋರ್ ಆಫ್ ದಿ ಟೈಗರ್' ಎಂಬ ಚಿತ್ರವು ಪ್ರದರ್ಶಿಸಲ್ಪಡಲಿರುವುದು

ತಾ ೩೧ನೇ ಆಗೋಸ್ತಿಗೆ ಅಂತ್ಯವಾಗುವ ಒಂದು ವಾರದಲ್ಲಿ ನಮ್ಮ ಮುನಿಸಿಪಾಲಿಟಿಯೊಳಗೆ ೩೩ ಮರಣಗಳೂ ೪೮ ಜನನಗಳೂ ಆಗಿವೆ. ೨ ಮರಣಗಳು ಸನ್ನಿಪಾತದಿಂದ ೮ ನಿಮೋನಿಯಾದಿಂದ ೩ ಕ್ಷಯರೋಗದಿಂದ ೨ ವಾಂತಿಭೇದಿಯಿಂದ.

### ಸ್ವೀಕಾರ.

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್ ಮಂಗಳೂರು, ಇದರ ೧೯೩೪ನೇ ದಶಂಬರ ತಾ. ೩೧ಕ್ಕೆ ಅಂತ್ಯವಾಗುವ ಪ್ರಥಮ ಮೌಲ್ಯಪರೀಕ್ಷಣ ವರದಿ (First Valuation Report)ಯನ್ನು ಆದರದಿಂದ ಸ್ವೀಕರಿಸುತ್ತೇವೆ. ಆನಂದಕರ ವಾರ್ತೆಯೆಂದರೆ—ಕಂಪೆನಿಯು ೫ ವರ್ಷಗಳ ಇಷ್ಟು ಅಲ್ಪಾವಧಿಯಲ್ಲಿಯೇ ಅದು ಸಾವಿರ ರೂಪಾಯಿ ಜೀವ ವಿಮೆಯ ಮೇಲೆ ರೂ. ೧೧/೮ ವಾರ್ಷಿಕ ಬೋನಸನ್ನು ಕೊಡಲು ಸಮರ್ಥವಾದುದು. ಪ್ರಥಮ ವಲ್ಯುವೇಶನಿನಲ್ಲಿ ತನ್ನ ವಿಮಾದಾರರಿಗೆ ಬೋನಸನ್ನು ಕೊಡಲು ಶಕ್ತವಾದ ವಿಮಾ ಕಂಪೆನಿಗಳು ನಿಜವಾಗಿಯೂ ವಿರಳ. ಈ ವಿಷಯವು ಪಶ್ಚಿಮ ಕರಾವಳಿಯ ಏಕಮಾತ್ರ ವಿಮಾಕಂಪೆನಿಯಾದ ಇದಕ್ಕೆ ಈ ಪ್ರಾಂತಕರಿಗೂ ಭೂಷಣಪ್ರಾಯವೇ ಸರಿ. ಈ ಕಂಪೆನಿಯು ಇನ್ನೂ ಉನ್ನತಿಹೊಂದಬೇಕಾದರೆ ನಮ್ಮ ನಾಡಿನವರು ತಮ್ಮ ಸಹಕಾರವನ್ನು ಇನ್ನಷ್ಟು ವಿಪುಲವಾಗಿ ನೀಡಬೇಕಾಗಿದೆ ಸುಭದ್ರ ವಿಮಾ ಕಂಪೆನಿಗಳಿರುವುದು ನಾಡಿಗೊಂದು ಮಹಾ ಸಂಪತ್ತು ಇದ್ದಂತೆ ಇದನ್ನರಿತು ನಮ್ಮ ಯುವಕರು ಈ ಕಂಪೆನಿಯ ಏಜನ್ಸಿಯನ್ನು ಪಡೆದೂ, ಸಾರ್ವಜನಿಕರು ವಿಮೆಯೆತ್ತಿಯೋ ತಮ್ಮ ಪ್ರೋತ್ಸಾಹವನ್ನೀಯಬೇಕಾಗಿ ಹಾರೈಸುವೆವು—ಸಂ. ಸ್ವ.]

೧೯೩೫ನೇ ಆಗೋಸ್ತು ತಾ ೧೯ರಲ್ಲಿ ಜರಗಿದ ಡಿಸ್ಟ್ರಿಕ್ಟ್ ಬೋರ್ಡ್ ಸಭೆಯು ಕಾರ್ಯಕಲಾಪಗಳ ವರದಿಯನ್ನು ಸ್ವೀಕರಿಸಿ ಸವಿವರಗಳನ್ನು ಸಂಕ್ಷೇಪಿಸಿ ಕೊಟ್ಟಿರುವೆವು ಡಾ॥ ಪಿ. ಬಿ ಆಚಾರ್ಯರು ಕಳೆದ ಮೂರು ವರ್ಷಗಳಲ್ಲಿ ಡಿ॥ ಬೋರ್ಡಿಗೆ ಉದ್ಯೋಗ ತೆರಿಗೆ, ಲೈಸೆನ್ಸ್ ಫೀಸ್ ಮೊದಲಾದುವುಗಳಿಂದ ದೊರೆತ ಮೌಲ್ಯವನ್ನು ಕೇಳಿದರು. ಅಧ್ಯಕ್ಷರು ಸವಿವರ ಪಟ್ಟಿಯನ್ನು ಮುಂದಿರಿಸಿದರು

ಕಳೆದ ಏಪ್ರಿಲ್ ತಿಂಗಳಿನಿಂದ ಎಲ್ಲಾ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಸಂಬಳವು ಬಾಕಿಯಾಗಲು ಕಾರಣವೇನೆಂದು ಜನಾಬ್ ಪಿ ಎಚ್ ಕಂಬ್ಳಾಕಲಂದರ್ ಸಾಹೇಬ್ ಬಹದೂರ್ ಇವರು ಕೇಳಿದರು. ಅಧ್ಯಕ್ಷರು ಇಲ್ಲವೆಂದರು. ಎರಡನೆಯದಾಗಿ ಸಾಹೇಬ್ ಬಹದ್ದೂರರು ಹೈಸ್ಕೂಲುಗಳ ಉಪಾಧ್ಯಾಯರ ಸಂಬಳವನ್ನು ಕ್ರಮಪ್ರಕಾರವಾಗಿ ಕೊಡುವುದು ನಿಜವೋ? ಹಾಗಾದರೆ ಈ ಎರಡು ಬಗೆಯ ಶಾಲೆಗಳ ಮಟ್ಟಿಗೆ ಭೇದವೇಕೆ? ಎಂದು ಪ್ರಶ್ನಿಸಿದರು. ಉತ್ತರವಾಗಿ ಅಧ್ಯಕ್ಷರು ಹೀಗೆ ಎಂದರು. ಸೆಕೆಂಡರಿ ಶಾಲೆಗಳ ಸಂಖ್ಯೆ ಬರೇ ೮ ಜಿಲ್ಲೆಯ ಎಲಿಮೆಂಟರಿ ಶಾಲೆಗಳ ಸಂಖ್ಯೆ ೩೩೬. ಹೈಸ್ಕೂಲುಗಳ ಮುಖ್ಯೋಪಾಧ್ಯಾಯರು ತಯಾರಿಸುವ ಬಿಲ್‌ಗಳು ಸರಿಯಾಗಿದ್ದು ಅವು ಗುಮಾಸ್ತರಿಗೆ ತೊಂದರೆಯನ್ನೀಯುವುದಿಲ್ಲ. ಆದರೆ ಎಲಿಮೆಂಟರಿ ಶಾಲೆಗಳಿಂದ ಬಂದ ಬಿಲ್‌ಗಳಲ್ಲಿ ತುಂಬಾ ತಪ್ಪುಗಳಿರುತ್ತವೆ ಇವುಗಳನ್ನು ಜಾಗ್ರತೆಯಿಂದ ಪರಿಶೀಲಿಸಬೇಕಾಗುತ್ತದೆ. ಅಲ್ಲದೆ ಇಂಥ ಉಪಾಧ್ಯಾಯರ ಹಿಂದಿನ ಸರ್ವೀಸುಗಳನ್ನು ಪರಿಗಣಿಸಿ ಅವರಿಗೆ ಸಂಬಳವನ್ನು ನಿರ್ಣಯಿಸುವ ಕೆಲಸವಿದೆ ಇದಕ್ಕಾಗಿ ಅವರ ಸರ್ಟಿಫಿಕೇಟುಗಳನ್ನೋ ರಿಜಿಸ್ಟರುಗಳನ್ನೋ ನೋಡಬೇಕಾಗುತ್ತದೆ. ಇದರಿಂದಾಗಿ ಆಫೀಸಿನ ಗುಮಾಸ್ತರಿಗೆ ಭಾರವಾದ ಕೆಲಸವಿರುತ್ತದೆ. ಇಷ್ಟಲ್ಲದೆ ನಾವು ಭೇದಾಭೇದಗಳನ್ನು ಮಾಡುವುದಿಲ್ಲ. ಪ್ರಶ್ನೆ ಕಾಸರಗೋಡು ತಾಲೂಕ ಒಂದಲ್ಲದೆ ಇನ್ನಿತರ ಎಲ್ಲಾ ತಾಲೂಕುಗಳ ಉಪಾಧ್ಯಾಯರಿಗೆ ಇತ್ತೀಚೆಗೆ ಎರಡು ತಿಂಗಳುಗಳ ಸಂಬಳವನ್ನು ಕೊಟ್ಟಿರುವುದು ನಿಜವೇ? ಕಾಸರಗೋಡಿನವರಿಗೆ ಈ ವ್ಯತ್ಯಾಸವೇಕೆ? ಉತ್ತರ ಉಡುಪಿ ಕುಂದಾಪುರ, ಮಂಗಳೂರು ಕಾರ್ಕಳ ಪುತ್ತೂರು ತಾಲೂಕುಗಳ ಉಪಾಧ್ಯಾಯರುಗಳಿಗೆ ೧೯೩೫ರ ಜೂನ್ ತಿಂಗಳ ವರೆಗಿನ ಸಂಬಳವನ್ನು ಕೊಡಲಾಗಿದೆ ಕಾಸರಗೋಡು ತಾಲೂಕಿನ ಉಪಾಧ್ಯಾಯರಿಗೆ ೧೯೩೫ರ ಜುಲಾಯಿ ತಿಂಗಳ ವರೆಗೆ ಸಂಬಳ ಕೊಡಲಾಗಿದೆ. ಕಾಸರಗೋಡಿನ ಉಪಾಧ್ಯಾಯರ ಸಂಬಳ ನಿರ್ಣಯ ಮಾಡುವಾಗ—ಕಳೆದ ೩ ವರ್ಷಗಳಿಂದ ಅವರ ಸರ್ವೀಸ ರಿಜಿಸ್ಟರುಗಳನ್ನು ಸಮರ್ಪಕವಾಗಿಡಲಾಗದಿದ್ದುದರಿಂದ—ಹಲವು ತೊಂದರೆಗಳನ್ನು ಎದುರಿಸಬೇಕಾಯಿತು ಅವರ ಹಿಂದಿನ ಸರ್ವೀಸಿನ ಕುರಿತಾದ ವಿವರವೂ ಅಪೂರ್ಣವಾಗಿತ್ತು. ಎಲ್ಲಾ ತಾಲೂಕುಗಳ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಸಂಬಳವನ್ನು ನಿರ್ಣಯಿಸುವುದಕ್ಕಾಗಿಯೂ, ಬಿಲ್‌ಗಳನ್ನು ಮಂಜೂರು ಮಾಡುವುದಕ್ಕಾಗಿಯೂ ಜನರಲ್ ಸೆಕ್ಷನಿನ ಮೂರು ಗುಮಾಸ್ತರು ಆಫೀಸು ಸಮಯವನ್ನು ವಿನಾ ಕೆಲಸ ಮಾಡಬೇಕಾಯಿತು ೩೩೬ ಶಾಲೆಗಳ ೧೫೩೦ ಬಿಲ್‌ಗಳನ್ನು ೬—೭—೩೫ರಿಂದ ೧೬—೮—೩೫ರೊಳಗೆ ಮಂಜೂರು ಮಾಡಬೇಕಾಯಿತು"

[ಮುಂದರಿಯುವುದು]

ಇಲ್ಲಿಯ ಸ್ತ್ರೀಯರ ಟ್ರೈನಿಂಗ್ ಶಾಲೆಯಲ್ಲಿ ಡಿಸ್ಟ್ರಿಕ್ಟ್ ಜಡ್ಜರ ಪತ್ನಿ ಬೇಗಮ್ ಸುಲ್ತಾನಾ ಅಮೀರುದ್ದೀನ್ ಎಮ್ ಎ ಇವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಘಂಟೆ ೫ ರಕ್ಕೆ ನಡೆದು, ಹೊಸ ಸುಧಾರಣೆಯ ಪ್ರಕಾರ ರಚಿತವಾಗುವ ಮದ್ರಾಸ್ ಕೌನ್ಸಿಲಿನಲ್ಲಿ ದಕ್ಷಿಣ ಕನ್ನಡದ ಸ್ತ್ರೀಯರಿಗೊಂದು ಸ್ಥಾನವನ್ನೀಯಬೇಕೆಂಬ ಕುರಿತು ಚರ್ಚೆ ನಡೆದು ಆ ಕುರಿತು ಸರಕಾರವನ್ನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುವ ಸೂಚನೆಯು ಮಂಜೂರಾಯಿತು. ಈ ಸಂದರ್ಭದಲ್ಲಿ ಶ್ರೀಮತಿಗಳಾದ ಮಿಸೆಸ್, ಆನಂದಿ ಬಾಯಿ, ಶಾರದಾ ಅಲ್ ಫೋಂಜ ಸುಭದ್ರ ಚಟ್ವಾರ್ ಮಿಸೆಸ್ ಎಸ್ ವೆಂಕಟರಾವ್, ಸುಬ್ರಮಣ್ಯಮ್, ರಮಾನಂದರಾವ್ ಶಾರದ ಕಲ್ವಾರ್ ಎಂ. ವಾಸುದೇವರಾವ್, ರಾಮಚಂದ್ರ ಆಚಾರ್ ಮತ್ತು ಮಿಸ್ ಪಿರೋಜ್ ಸೌರೋಜಿಯವರು ಮಾತಾಡಿದರು

---


### Mangalore Subscribers of the Hindu

will please note that Edwin Miranda has been discharged from his services with effect from 7-9-35 The subscription towards the Hindu in future shall be paid to Denis Rego from the above date

V Keshava Kamath,
Agent, The Hindu Mangalore

### ಮಂಗಳೂರೊಳಗಣ "ಹಿಂದೂ" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ

ಇಷ್ಟರ ವರೆಗೆ ಹಿಂದೂ ಪತ್ರಿಕೆಯ ಬಿಲ್ ಕಲೆಕ್ಟರನಾಗಿದ್ದ ಎಡ್ವಿನ್ ಮಿರಾಂಡನೆಂಬವನನ್ನು ಇದೇ ತಾ ೭—೯—೩೫ರಿಂದ ಕೆಲಸದಿಂದ ತೆಗೆಯಲಾಗಿದೆ ಮುಂದಕ್ಕೆ ಸದ್ರಿ ಚಂದಾ ಹಣವನ್ನು ಡೆನಿಸ್ ರೇಗೋ ಎಂಬ ಹೊಸ ಬಿಲ್ ಕಲೆಕ್ಟರನ ವಶ ಕೊಡತಕ್ಕದ್ದು.

ವಿ. ಕೇಶವ ಕಾಮತ್,
ಏಜಂಟ, ಹಿಂದೂ ಮಂಗಳೂರು.

## ಸಂಗೀತಪ್ರಿಯರಿಗೆ ಅತ್ಯಪೂರ್ವವಾದ ಹೃದಯಾಹ್ಲಾದಕರ ಗಾಯನೋತ್ಸವ!

ಗಾನಪ್ರಪಂಚದಲ್ಲಿ, ಮಂಗಳೂರಿನ ಸಂಗೀತ ಇತಿಹಾಸದಲ್ಲಿ ಮಹತ್ವದ ಒಂದು ವಿಶೇಷ ಸಂದರ್ಭವಿದು!

ಹಿಂದೂಸ್ಥಾನದಲ್ಲಿ ತನ್ನ ಸ್ವರ್ಗೀಯ ಗಾನಲಹರಿಯಿಂದ ಪ್ರಖ್ಯಾತಿ ಪಡೆದು, ಸರ್ವ ಜನಮಾನಿತರಾಗಿ, ಸಕಲರಿಗೆ ಗಾನಮಧುವನ್ನು ಪಾನಮಾಡಿಸಿ, ಈ ಕಾಲದಲ್ಲಿ ದ್ವಿತೀಯ ತಾನಸೇನನೊಬ್ಬನೂ ಇರಬಲ್ಲನೆಂದು ರುಜುಗೊಳಿಸಿ, 'ಆಧುನಿಕ ತಾನಸೇನ' 'ಶಾನ್ ಎ ಕಪ್ತಾನ್' ಇತ್ಯಾದಿ ಮಹಾ ಗೌರವದ ಬಿರುದುಗಳನ್ನು ಪಡೆದು ಆರ್ಯ ಸಂಗೀತಕಲೆಯ ಶ್ರೇಷ್ಠ ವಿಕಾಸಕರೆಂದೆನಿಸಿದ

# ಪ್ರೊಫೆಸರ್ ನಾರಾಯಣರಾವ್ ವ್ಯಾಸ್

'ಗಾಯನಾಚಾರ್ಯ' ಇವರು

(ಹೀಸ್ ಮಾಸ್ಟರ್ಸ್ ವ್ಯಾಸ್ ಗ್ರಾಮಫೋನ್ ಮತ್ತು ರೇಡಿಯೋ ಸಂಗೀತಗಾರರು)

ಇದೇ ತಾ. 7—9—35ನೇ ಶನಿವಾರ ಸಾಯಂಕಾಲ ಘಂಟೆ 6ಕ್ಕೆ

## ಮಂಗಳೂರಿನ ಶ್ರೀ ಕೃಷ್ಣಾ ಸಿನೇಮ ಥಿಯೇಟರಿನಲ್ಲಿ

ಮಂಗಳೂರಿನಲ್ಲಿ ಇದೀಗ ಪ್ರಥಮ ಬಾರಿಯಾಗಿ ತಮ್ಮ ಸಂಗೀತ ಕಛೇರಿಯನ್ನು ನಡೆಸುವರು.

ಟಿಕೇಟಿನ ದರಗಳು:—ರೂ. 3, 2, 1—8—0 ಮತ್ತು 1. ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ.

ಟಿಕೇಟುಗಳು ಸಿಗುವ ಸ್ಥಳ—Hon Sec: Cosmopolitan Club, Messrs M. M. Shanbhogue & Son. Messrs H. Rama Rao & Sons, Taj Mahal Hotels

## ಮೋಸಗಾತಿಯಾದ ಪಾರ್ಶೀ ಸ್ತ್ರೀ

ಫಿರೋಜ್ ಬಾಯಿ ಎಂಬ ಪಾರ್ಶಿ ಸ್ತ್ರೀಯು ಮುಂಬಾಯಿಯ ಕೆಲವು ಜವಾಹಿರಿ ಅಂಗಡಿಯವರಲ್ಲಿ ಪರಿಚಯ ಮಾಡಿಕೊಂಡು, ಅವರಲ್ಲಿ ಆಭರಣಗಳ ವ್ಯಾಪಾರವನ್ನು ಕೆಲವು ಕಾಲದಿಂದ ಮಾಡುತ್ತಿದ್ದು ಆಚೆಗೆ ಸುಮಾರು ೨೦೦೦ ರೂಪಾಯಿಗಳ ಒಡವೆಗಳನ್ನು ತೆಗೆದು ಕೊಂಡು ಗರ್ಾಯಿಯಾಗಿದ್ದಳು. ತುಳಸಿದಾಸ್ ಜಂದಾಸ್ ಎಂಬವನು ಈ ಮೋಸಕೃತ್ಯದಲ್ಲಿ ಈಕೆಗೆ ಸಹಾಯಕನಾಗಿದ್ದನು. ಫಿರೋಜ್ ಬಾಯಿಯು ಕಡೆಗೆ ದಸ್ತಗಿರಿಯಾಗಿ ಜಗಾ್ಂ ಪೋಲೀಸ್ ಕೋರ್ಟಿನಲ್ಲಿ ಒಂದು ದಿನದ ಸಜ ಮತ್ತು ೪೦೦ ರೂಪಾಯಿಗಳ ಜುಲ್ಮಾನೆ, ತಪ್ಪಿದರೆ ಇನ್ನು ನಾಲ್ಕು ತಿಂಗಳ ಸಜ ಶಿಕ್ಷೆಗೆ ಗುರಿಯಾಗಿರುವಳು. ಈಕೆಯ ಸಹಾಯಕನನ್ನು [illegible]

## ಉಪ್ಪಿನಲ್ಲಿ ಹಾನಿಕರ ವಸ್ತು.

ಕರಾಚಿ ನಗರದ ಬಳಿ ಮೌರಿಪುರದ ಉಪ್ಪಿನ ಕೋಠಿಯಲ್ಲಿ ಒಂದಾನೊಂದು ಕಾಲವಾಗಿದ್ದ ಉಪ್ಪಿನಲ್ಲಿ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳಿರುವವೆಂದು ವೈದ್ಯರು ನಿರ್ಧರಿಸಿರುವುದರಿಂದ ಅನೇಕ ಸಾವಿರ ಟನ್ ಉಪ್ಪನ್ನು ವ್ಯಾಪಾರಕ್ಕೆ ಕೊಡಕೂಡದೆಂದು ಅಧಿಕಾರಿಗಳು ತಡೆದಿರುವರು. ಆದರೆ ಕಲ್ಕತ್ತೆಗೆ ರವಾನೆಯಾಗಿದ್ದ ಇಲ್ಲಿಯ ಬಾಬತು ಉಪ್ಪನ್ನು ಅಲ್ಲಿಯೇ ವೈದ್ಯರು ಪರೀಕ್ಷಿಸಿ, ನಿರಪೇಕ್ಷಣೀಯವಾಗಿರುವುದೆಂದು ತಿಳಿಸಿರುವರಂತೆ.

## ಆತ್ಮಹತ್ಯ ಮಾಡಹೋಗಿ ದಂಡ ತೆರಬೇಕಾಯಿತು

ರಾಯಪುರವೆಂಬ ಗ್ರಾಮದ [illegible] ಬಹಳ ದಿವಸಗಳಿಂದಲೂ ಬಡತನದಿಂದಲೂ ಕಷ್ಟಪಡುತ್ತಾ ಜಿಗುಪ್ಸೆಯಿಂದ ಕಂಗೆಡುತ್ತಿದ್ದ ತನ್ನ ಕುತ್ತಿಗೆಯನ್ನು ಕೊಯಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದನು. ವಿಚಾರಣೆಯಲ್ಲಿ ಮ್ಯಾಜಿಸ್ಟ್ರೇಟರು ಇನ್ನುಮುಂದೆ ಅಂಥಾ ಪ್ರಯತ್ನಗಳನ್ನು ನಡೆಸದಂತೆ ಕಟ್ಟು ೧೦೦ ರೂಪಾಯಿಗಳ ಜಾಮೀನನ್ನೂ, ಸ್ವಂತವಾಗಿ ೨೦೦ ರೂಪಾಯಿಗಳ ಮುಚ್ಚಳಿಕೆಯನ್ನೂ ಕೊಡಬೇಕೆಂದು ಆಪಾದಿತನಿಗೆ ಆಜ್ಞೆಯನ್ನಿತ್ತಿರುವರು.

### ಶಿಕಾರಪುರದ ಸಿಕ್ಕರ ಗಲಭೆ

ಆಗೋಸ್ಟು ೩೦ನೇ ತಾ॥ ಶಿಕಾರಪುರದಲ್ಲಿ ಭಯಸ್ಥಾನಿಗಳಿಗೂ ಸಿಕ್ಕರಿಗೂ ಗಲಭೆ ನಡೆದು ಸುಮಾರು ೩೦ ಗುಂಪು ಸಿಕ್ಕರನ್ನು ಸೆರೆಹಿಡಿದಿದ್ದಾರೆ.

## ಓಡುತ್ತಿರುವ ಟ್ರೈನಿನಿಂದ ಕೆಳಗೆ ಹಾರಿದನು— ಸಾಯಲಿಲ್ಲ

೩೦ ವರ್ಷ ಪ್ರಾಯದ ಗೋವಿಂದ ಶೆಟ್ಟಿ ಎಂಬವನು ಬೆಂಗಳೂರು ಟ್ರೈನಿನಲ್ಲಿ ಪ್ರಯಾಣ ಮಾಡುತ್ತಿದ್ದನು. ವಿಲ್ಲಿವಾಕಮ್ ಸ್ಟೇಶನು ಬಂದ ಕೂಡಲೇ ಆತನು ಟ್ರೈನಿನಿಂದ ಹೊರಕ್ಕೆ ಹಾರಿದನು. ಕಾರಣ ಟ್ರೈನು ಅಲ್ಲಿ ನಿಲ್ಲುವುದಿಲ್ಲವಾದ್ದರಿಂದ. ಆತನಿಗೆ ಭಯಂಕರ ಗಾಯಗಳಾಗಿರುವುದರಿಂದ ಆಸ್ಪತ್ರೆಗೊಯ್ಯಲ್ಪಟ್ಟಿರುವನು. ಇವನು ಟ್ರೈನು ಅಲ್ಲಿ ನಿಲ್ಲುವುದಿಲ್ಲವೆಂದು ತಿಳಿದಿದ್ದು ಹಾಗೆ ಮಾಡಿದನೇಕೆಂದು ಇನ್ನೂ ತಿಳಿದು ಬಂದಿರುವುದಿಲ್ಲ.

## ಎಬಿಸೀನಿಯಾ ದಿನಾಚರಣೆ

### ಆಂಧ್ರಾ ಸೋಶಿಯಲಿಸ್ಟ್ ಪಾರ್ಟಿಯ ಮನವಿ.

ಎಲ್ಲೂರು, ಆಗೋಸ್ಟು, ೩೦

ಆಂಧ್ರಾ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಕಾರ್ಯದರ್ಶಿಯವರಾದ ಶ್ರೀ॥ ಬಿ ಎಸ್ ರಂಗನಾಮಯವರು ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಮೆಂಬರರಿಗೆ ಸಪ್ಟಂಬರ ೩ ರಂದು ಎಬಿಸೀನಿಯಾ ದಿನಾಚರಣೆಯನ್ನು ಮಾಡಬೇಕಾಗಿ ಕೇಳಿಕೊಂಡಿದ್ದಾರೆ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸಿದ್ಧರಾದ ಎಬಿಸೀನಿಯದ ಜನರ ಕಷ್ಟಗಳಲ್ಲಿ ತಾವೂ ಸಹಭಾಗಿಗಳು ಎಂಬುದನ್ನು ಸೂಚಿಸಲು ಸಭೆಸೇರಿಸಿ ಆದರಲ್ಲಿ ಅದನ್ನು ವ್ಯಕ್ತಪಡಿಸಬೇಕೆಂದು ಅವರ ಮನವಿಯು.

## ಮುಸೊಲಿನಿಯವರ ಎಚ್ಚರಿಕೆಯ ನುಡಿ.

ಜಿನೀವಾದ ಸಭೆಯಲ್ಲಿ ಇಟಲಿಯ ಮೇಲೆ ಸೆಂಕ್ಷನ್ ಶಾಸನವನ್ನು ಯಾರು ಜಾರಿಸುವರೋ ಅವರನ್ನು ಇಟಲಿಯು ಸಶಸ್ತ್ರವಾಗಿ ಎದುರಾಳುವುದು ನಿಶ್ಚಯ. ಜನಾಂಗ ಸಭೆಯು ತನ್ನ ವಸಾಹತುಗಳನ್ನು ವಿಸ್ತರಿಸುವುದರಲ್ಲಿ ಮನಸಿಕ್ಕಿದರೆ ಅದೇ ತಪ್ಪು ತಪ್ಪಾಗುವುದು. ಯುರೋಪಿನಾದ್ಯಂತ ಜನ ಮತ್ತು ಧನ ನಾಶಕ್ಕೆ ಅದೇ ಕಾರಣವಾಗುವುದು. ಸಪ್ಟಂಬರ ೪ನೇ ತಾರೀಕಿನಲ್ಲಿ ಜರಗಲಿರುವ ಜನಾಂಗ ಸಭೆಗೆ ಇಟಲಿಯು ಪ್ರತಿನಿಧಿಗಳನ್ನು ಕಳುಹಿಸಿ ಇಟಲಿಯ ವರ್ತನೆಯ ಸ್ಪಷ್ಟೀಕರಣದ ಬಗ್ಗೆ ಯುಕ್ತ ಭಾವಚಿತ್ರಗಳನ್ನೂ ದಾಖಲೆಗಳನ್ನೂ ಸಭೆಯ ಎದುರಿಡಲು ವ್ಯವಸ್ಥೆ ಮಾಡುವುದು. ಸಂಯುಕ್ತ ಅಮೇರಿಕಾದಂತೆ ಯೂರೋಪಿಯನ್ ರಾಷ್ಟ್ರಗಳು ಇಟಲಿಯನ್ನು ಅದರಷ್ಟಕ್ಕೆ ಬಿಟ್ಟುಬಿಡಬೇಕೆಂದು ಸೀನಿಯರ್ ಮುಸೊಲಿನಿಯವರು ಡೈಲಿ ಮೈಲ್ ಪತ್ರಿಕೆಯಲ್ಲಿ ಪ್ರಕಟಿಸಿರುವರು.

## ಜವಾಹರಲಾಲರ ಬಿಡುಗಡೆ.

ಪ್ರೇಗ್ ಪಟ್ಟಣದ ಬೆಡನ್ ವೀಲರ್ ಎಂಬಲ್ಲಿ ಚಿಕಿತ್ಸೆ ಹೊಂದುತ್ತಿರುವ ಶ್ರೀಮತಿ ಕಮಲಾ ನೆಹರುರವರ ದೇಹಸ್ಥಿತಿಯು ಚಿಂತಾಜನಕವಾಗಿದೆಯೆಂದು ಅವರ ಪರ್ಶ್ವದಲ್ಲಿದ್ದ ಅವರ ವೈದ್ಯರು ವೈಸರಾಯರಿಗೊಂದು ತಂತಿ ಬಿಟ್ಟು ತಿಳಿಸಿದುದರ ಪರಿಣಾಮವಾಗಿಯೂ, ಮಹಾತ್ಮಾಜೀಯವರು ವೈಸರಾಯರಿ

ಗೊಂದು ಪತ್ರ ಬರೆದು ಈ ಸಂದಿಗ್ಧತೆಯಲ್ಲಿ ಪಂಡಿತ ಜವಾಹರಲಾಲರನ್ನು ಬಿಡುಗಡೆ ಮಾಡಿದರೆ ಹಿತವಿದೆಯೆಂದು ಅರಿಕೆ ಮಾಡಿಕೊಂಡ ಕಾರಣವಾಗಿಯೂ ತಾ ೩ನೇ ದಿನ ಬೆಳಿಗ್ಗೆ ಆಲ್ಮೋರ ಸೆರೆಮನೆಯಿಂದ ಪಂಡಿತ ಜವಾಹರಲಾಲರನ್ನು ಬಿಡುಗಡೆ ಮಾಡಲಾಗಿದೆ. ಅವರು ಇದೇ ಶನಿವಾರದೊಳಗೆ ವಿಮಾನದ ಮೂಲಕ ಪತ್ನಿಯ ಬಳಿ ಸೇರಲಿರುವರು.

## ಬ್ರಿಟಿಷ ಮಂತ್ರಿಮಂಡಲದ ನಿರ್ಧಾರ.

ಬ್ರಿಟಿಷ ಮತ್ತು ಫ್ರೆಂಚ್ ಸರಕಾರಗಳ ವರ್ತನೆಯನ್ನು ಬ್ರಿಟಿಷ ಮಂತ್ರಿಮಂಡಲವು ಪೂರ್ಣವಾಗಿ ಅನು ಮೋದಿಸಿ ಜನಾಂಗ ಸಭೆಯ ೩ ನೇ ದಿನ ಸಭಾಂತ್ಯಗೊಳ್ಳುವ ತನಕ ಪರಸ್ಪರ ವಿಚಾರ ವಿನಿಮಯ ಮಾಡುತ್ತಿರಬೇಕೆಂದು ತೀರ್ಮಾನಿಸಿರುವರು. ಯೋಗ್ಯವಾಗಿದೆಯೆಂದಿರುವರು. ಅಲ್ಲದೆ ಜನಾಂಗ ಸಭೆಯ ನಿಷ್ಕರ್ಷೆಯಂತೆ ಇಟಲಿಗಾಗಲೀ ಎಬಿಸೀನಿಯಕ್ಕಾಗಲೀ ಶಸ್ತ್ರಗಳನ್ನು ರಫ್ತುಮಾಡದಂತೆ ಕಂಪೆನಿಗಳಿಗೆ ಲೈಸನ್ಸ್ ಕೊಡಬಾರದೆಂದೂ ತೀರ್ಮಾನಿಸಿದೆ. ಬ್ರಿಟಿಷ ಸರಕಾರವು ಜನಾಂಗ ಸಭೆಯ ನಿರ್ಣಯಗಳನ್ನು ಅಥವಾ ನಿಲ್ಲುವುದೆಂದು ಸರ್ ಸ್ಯಾಮುವೆಲ್ ಹೋರ್‌ರು ಹೇಳಿರುವರು.

## ಅಮೇರಿಕಾದ ತಾಟಸ್ಥ್ಯ.

ಆಗೋಸ್ಟು ೩ನೇ ತಾರೀಕಿನ ವರೆಗೆ ಸಂಯುಕ್ತ ಅಮೆರಿಕವು ಯಾವ ಯುದ್ಧದಲ್ಲಿ ಭಾಗವಹಿಸಬಾರದೆಂದು ಅಲ್ಲಿಯ ಮಂತ್ರಿ ಸಭೆಯಲ್ಲಿ ತೀರ್ಮಾನವಾಗಿದೆ. ಯುದ್ಧೋಪಕರಣಗಳನ್ನು ಸಿದ್ಧಮಾಡುವ ಕಂಪೆನಿಗಳೆಲ್ಲ ಮಂತ್ರಿಮಂಡಲದ ಪ್ರತಿನಿಧಿಗಳ ಮೇಲ್ವಿಚಾರಣೆಗೆ ಒಳಗಾಗಬೇಕೆಂಬ ಕರಾರು ಮಂಜೂರು.

## ಸಂಘಟನೆಗಳನ್ನು ಎದುರಿಸಲು ಸಿದ್ಧತೆ.

ಎಬಿಸೀನಿಯ ಸೈನ್ಯಗಳು ಎಲ್ಲಾ ಸಂದರ್ಭಗಳಲ್ಲೂ ಎಲ್ಲಾ ಸಂಘಟನೆಗಳನ್ನು ಎದುರಿಸಲು ಸದಾ ಸಿದ್ಧವಿರಬೇಕೆಂದು ಆಜ್ಞಾಪಿಸಲಾಗಿದೆ. ೧೬ರಿಂದ ೬೦ ವರ್ಷ ಪ್ರಾಯದೊಳಗಣ ಹುಡುಗರೂ ಪ್ರೌಢವಯಸ್ಕರೂ ನಗಾರಿಯನ್ನು ಹಿಂಬಾಲಿಸಬೇಕೆಂದು ಅಪ್ಪಣೆಯಿದೆ. ಆದರೆ ಸರ್ವ ಜನಾಂಗವನ್ನು ಕೂಡಿದೆಬ್ಬಿಸುವ ಘೋರ ಹೆಮ್ಮ ಸ್ವೀಕರಿಸಲ್ಪಟ್ಟಿರುವುದಿಲ್ಲ. ಆಕ್ರಮಣ ಸ್ವಪನು ನಾಡೊಡನೆ ಜನಾಂಗವು ಸೈನ್ಯವನ್ನು ಹಿಂಬಾಲಿಸಬೇಕೆಂದು ತೀರ್ಮಾನವಾಗಬಹುದು. ಪ್ರಧಾನ ನಗರಕ್ಕೆ ಬೋಂಬೆಸೆಯಲ್ಪಟ್ಟರೆ ಅದರಿಂದ ರಕ್ಷಿಸಿಕೊಳ್ಳಲು ತಕ್ಕ ಏರ್ಪಾಟುಗಳನ್ನು ಮಾಡಬೇಕೆಂದು ಸರಕಾರವು ಪ್ರಕಟಿಸಿರುತ್ತದೆ. ವೈರಿಗಳ ವಿಮಾನ ಪಡೆಗಳು ದೇಶವನ್ನು ಹೊಕ್ಕೊಡನೆ ಮೂರು ಗುಂಡುಗಳನ್ನು ಬಿಡಲಾಗುವವು. ಇಗರ್ಜಿಯ ಘಂಟೆಗಳು ಬಾರಿಸಲ್ಪಡುವವು, ಬ್ಯೂಗಲ್‌ಗಳನ್ನು ಊದಲಾಗುವುದು. ಒಡನೆ ಜನರೆಲ್ಲರೂ ಮನೆ ಮಾಡುಗಳನ್ನು ಬಿಟ್ಟು ಬಹಿರಂಗ ಭೂಮಿಗಳಲ್ಲೋ ಪೊದರುಗಳಲ್ಲೋ ಅಡಗಿಕೊಳ್ಳಬೇಕು. ಇದು ಶುಭಾಶಿಗಳನ್ನು ಹಾರಿಸಿ ಮುಕ್ತಿಗೆಯ ಅಂಶವನ್ನು ಸೂಚಿಸಲಾಗುವುದು. ಶಾಂತಿಯ ದಿನಗಳಲ್ಲೂ ಈ ವಿಚಾರಗಳನ್ನು ಜನರು ಅಭ್ಯಸಿಸುತ್ತಿರಬೇಕೆಂದು ಸರಕಾರವು ಪ್ರಕಟಿಸಿರುತ್ತದೆ.

## ನೋಟೀಸು

### ಕಾಸರಗೋಡು ಡಿ ಮು ಕೋರ್ಟು

O S No 509 1935

ಶ್ರೀಧರ ಶ್ಯಾನುಭಾಗ ಶ್ರೀನಿವಾಸ ಶ್ಯಾನುಭಾಗರ ಮಗ ಕಾಸರಗೋಡು ತಾಲೂಕು ಬಳ್ಳಾಗ್ರಾಮದಲ್ಲಿರುವವನ - ವಾದಿ

ಮತ್ತು

ಪೆರ್ಲತ್ತಾ ಪಟ್ಟಂಚೆಟ್ಟಿ ನಾರಾಯ ಣನ್ ನ್ಯಾರ್ ಪೆರ್ಲತ್ತಾ ಪ ಪ ಚತ್ತು ಕ ರಾಮು ನ್ಯಾರರ ಅಳಿಯ ಕಾಸರಗೋಡು ತಾಲೂಕು ಪುಲ್ಲೂರ ಗ್ರಾಮದಲ್ಲಿರುವ ಪ್ರತಿವಾದಿ

ಇವರೊಳಗೆ

ಪ್ರತಿವಾದಿಯ ಮೇಲೆ ಒಂದು ಪ್ರೋನೋಟು ಬಾಬ್ತು ಬಡ್ಡಿ ಸಮೇತ 331-8-10ಕ್ಕೆ ಹಾಕಿದ ದಾವೆಯು ನೋಟೀಸಿನ ಮೇಲೆ ತೀರ್ಮಾನವಾಗದ್ದರಿಂದ ವ್ಯಾಜ್ಯವು ತಾರೀಕು 11 9-35ಕ್ಕೆ ವಿಚಾರಣೆಗೆ ಇಟ್ಟಿದ್ದು ಪ್ರತಿವಾದಿ ಸದರಿ ದಿವಸ ಹಾಜರಾಗದಿದ್ದರೆ ಎಕ್ಸ್‌ಪಾರ್ಟಿ ತೀರ್ಪು ಮಾಡಲಾಗುವುದೆಂದು ತಿಳಿಸಲಾಗಿದೆ

Kasaragod, 31 8—35 | K P. Madhava Rao | [illegible]

## Notice.

IN THE COURT OF THE DISTRICT JUDGE OF S K.

*O P No 71/1935.*

In the matter of minor Padmanabha Shenoy.

1 Padmavathi Bai
2 B Rama Shenoy } Petitioners

Is hereby given that the above-named Petitioners have filed the above application praying that the 1st Petitioner may be appointed guardian of the person and property of the said minor and that the said application stands posted to 24 9 35 at 11 A M for hearing before the abovementioned court. Relations of the said minor may appear in person or by Pleader on or before the said date and oppose the application failing which the same will be heard and decided in their absence

Mangalore 3 9 1935 } **B. Vaikunta Baliga,** *Vakil for Petitioners*

## ಅಟ್ಲಾಂಟಿಕ್ ಸಾಗರದಲ್ಲಿ ರಹಸ್ಯವಾಗಿ ತಂಗಿರುವ ನೌಕೆಗಳು.

ನೋರ್ಥ್ ಅಟ್ಲಾಂಟಿಕ್ ಸಾಗರದಲ್ಲಿ ಹಡಗುಗಳಲ್ಲಿ ದಿವಸದ ಕೆಲವು ನೌಕೆಗಳು ತಂಗಿದೆಯೆಂದೂ, ಡುಬ್ಲಿನ್-ಇಟ್ಲಿ ನೋಡಿದ್ದಲ್ಲಿ ಇಸ್ಕತ್ತು ಮುಖರು ನೌಕೆಗಳಿವೆಯೆಂದೂ, ಅವುಗಳು ಎಲ್ಲಿಂದ ಬಂದುವು, ಯಾರ ಸ್ವಾಧೀನದವುಗಳು ಎಂದು ತಿಳಿದು ಬರುವುದಿಲ್ಲವೆಂದೂ ಗೊತ್ತಾಗಿದೆ. ಪೋರ್ಚುಗೀಸರದಾಗಿರಬಹುದೋ ಎಂಬ ಸಂದೇಹವಿರುವುದಾದರೂ ಈ ಸಂಖ್ಯೆಯಷ್ಟನ್ನು ಆ ರಾಷ್ಟ್ರವು ಇಟ್ಟುಕೊಳ್ಳಬಾರದೆಂಬ ಶಾಸನವಿರುವಾಗ ಈ ಸಂದೇಹಕ್ಕೆ ಬುಡವಿರುವುದಿಲ್ಲ.

## ಎರಿಟ್ರೆಯಲ್ಲಿ ಭಾರತೀಯರ ದಸ್ತಗಿರಿ.

ಮಸಾವಾದ ಎರಿಟ್ರೆಯಾ ಎಂಬಲ್ಲಿಂದ ಬಂದ ವಾರ್ತೆಯಿಂದ ಗೊತ್ತಾಗುವಂತೆ ಮುಂದಕ್ಕೆ ಮಸಾವಾಕ್ಕೆ ಸರಕುಗಳನ್ನು ರಫ್ತುಮಾಡಬಾರದೆಂದು ಹೇಳಿದ್ದರಿಂದ ಆಪಾದನೆಯ ಮೇಲೆ ಅಲ್ಲಿ ಹದಿನೈದು ಮಂದಿ ಹಿಂದೀಯರನ್ನು ಬ್ರಿಟಿಷ ಪ್ರಜೆಗಳನ್ನು ಇಟಲಿಯವರು ದಸ್ತಗಿರಿ ಮಾಡಿರುವರೆಂದು ತಿಳಿದು ಬಂದಿದೆ.


# ಮೇಹದ್ವಂಸಿನಿ. (ರಿಜಿಸ್ಟರ್ಡ)

ಪ್ರಮೇಹವು ಯೌವನವಂತರ ಶತ್ರುವು. ಇದು ಸ್ತ್ರೀಸಂಗದ ದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ರೋಗಗಳನ್ನುಂಟುಮಾಡುವುದು.

ಅನೇಕರು ರೋಗಿಯ ದೆಸೆಯಿಂದ ಕೆಟ್ಟುಹೋಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹದ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿ ಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ನಿರಾಯಾಸವಾಗುವುವು. ರೋಗಿಯ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊಟ್ಟೆನ ಔಷಧದಲ್ಲಿಯೂ ಅದ್ಭುತ ಗುಣವುಂಟು ಸೇವಿಸುವುದಕ್ಕೆ ಹಿತಕರ

ಕ್ರಯ:—ದೊಡ್ಡ ಬಾಟ್ಲಿಗೆ ರೂ. ೩ ಚಿಕ್ಕದಕ್ಕೆ 2-4-0 ಟಪ್ಪಾಲು 1-2-0.

ತಯಾರಿಸುವವರು — ಲಸ್ಕರ್ ಡಿಪೋ, ಚಿಕ್ಕಮಗಳೂರು.

ಬ್ರೇಂಚ್—ಚಿಕ್ಕಪೇಟೆ, ಬೆಂಗಳೂರು

ಮುಖ್ಯ ಏಜಂಟರು:— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು

**The Uplifting Banking Corporation, Ltd., Bombay.**

ದಿ ಅಪ್‌ಲಿಫ್ಟಿಂಗ್ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಬೊಂಬಾಯಿ,

ಒಂದು ಸಲ ಮಾತ್ರ ರೂ. 5 ಕೆತ್ತಲ್ಲಿ-
. ಮೆಂಬರನು ವಿಮಾಯಿಸಲ್ಪಡುವನು.
. ವರುಷದೊಳಗೆ ಮದುವೆ ಮಾಡಿಕೊಂಡರೆ ಸಹಾಯ ಸಿಗುವುದು
. ಲಾಭಾಂಶ ಸಿಗುವ ಅನೇಕ ಸಂದರ್ಭಗಳಿವೆ
. ವ್ಯಾದೆ ಆಖೈರಿಗೆ ಬೋಂಡಿನ ಹಣ ಬಡ್ಡಿ ಸಮೇತ ವಾಪಸು ಸಿಗುವುದು.

ಚೀಫ್ ಏಜಂಟ್ ಉಡುಪಿ ಡಾಕ್ಟರ ಕೆ. ಶಿವರಾಯರಿಂದ ಹಣ ಸಲ್ಯಾಸಿ ಪಡೆಯಬಹುದು.

**ಸಬ್ ಏಜಂಟರು ಬೇಕು.**

**ಸಪಟ ಲೋಶನ್**

ಗಜಕರ್ಣ, ಹುರುಗಟ್ಟಿ, ನಾಯಟಿ, ಇಸಬ ಮುಂತಾದ ಚರ್ಮ ರೋಗಗಳ ಮೇಲೆ ೨೪ ತಾಸಿನಲ್ಲಿ ಗುಣಮಾಡುವ ರಾಮಬಾಣ ಔಷಧಿ ವಸ್ತ್ರಕ್ಕೆ ಕಲೆ ಬೀಳುವುದಿಲ್ಲ ಬಾಟ್ಲಿ ಒಕ್ಕೆ ಕಿಮ್ಮತ್ತು ೦-೬-೦ ಟ, ಖರ್ಚ ಬೇರೆ ಪತ್ರವ್ಯವಹಾರ ಇಂಗ್ಲಿಷ್ ಯಾ ಮರಾಠಿಯಲ್ಲಿ ಮಾಡಬೇಕು

Sapat & Company, (S. M.)
Kalbadevi Road Bombay

## ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ - ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು- ಓದಿರಿ ಇದನ್ನು!—

### ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ; ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜಿನಸ್ ಡ್ರಗ್ ಒಫ್ ಇಂಡಿಯಾ" ಇದರ ಪುಟ ೭೪ನ್ನು ನೋಡಿ)

### ವನಸ್ಪತಿ ತೈಲವಲ್ಲ - ಮೀನಿನ ತೈಲ' ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

### ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು, ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು!—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ.)

### ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧ ಪುರುಷರೇನು ಹೇಳುವರೋ ಓದಿರಿ:—

**ಕವಿರವೀಂದ್ರ:**—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ **ಡಾ। ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

**ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು**— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾವು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

**ಗೊಡ್ರೆಜ್** ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

**ನಾದಿರ ಷಾ ಪ್ರಿಂಟರ್ ಎಂಡ್ ಕೊ, 165 C, ಬ್ರೋಡ್ವೇ, ಮದರಾಸು.**

ಹೆಡ್ ಆಫೀಸು: ಬೊಂಬಾಯಿ ಇತರ ಶಾಖೆಗಳು — ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ: ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೊಡ್ರೆಜ ರವರಿಗೆ ಸಂಬಂಧವಿಲ್ಲ

## ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪॥ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ.

ಅಲ್ಲದೆ,

**ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ.**

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ.

**The Canara Public Conveyance Co., Ltd., Kodialbail Mangalore.**

**The Sakaleshwara Motor Service Ltd., Saklaspur.**

## ಅಡಿಕೆ ತೋಟಗಳಲ್ಲಿ ಕೊಳೆರೋಗ

ಪುತ್ತೂರು ತಾಲೂಕಿನ ವಿಟ್ಲ ಫಿರ್ಕಾದ ಅಳಿಕೆ, ಪೆರುವಾಯು ಕನ್ಯಾನ ಕರ್ವಾಡಿ, ಕೇಪು, ಬಲ್ನಾಡು ಮತ್ತು ಕೊಡಿಪಾಡಿ ಇವೇ ಮೊದಲಾದ ಗ್ರಾಮಗಳಲ್ಲಿ ಅಡಿಕೆ ಪೈರಿಗೆ ಕೊಳೆರೋಗ ಎಂಬ ಒಂದು ಭಯಂಕರ ರೋಗವು ತಗಲಿ ತೋಟದ ಮಾಲಿಕರು ಹೆಚ್ಚಿನ ನಷ್ಟಕ್ಕೆ ಗುರಿಯಾಗುತ್ತಾರೆಂದು ತಿಳಿದು ಬಹಳ ವ್ಯಸನಪಡುತ್ತೇನೆ ಇದೇ ಕೊಳೆರೋಗವು ನಮ್ಮ ಪ್ರಾಂತ್ಯದ ಬೆಳ್ತಂಗಡಿ ಮತ್ತು ಮುಂಡಾಜೆ ಗ್ರಾಮಗಳಲ್ಲಿ ಕಳೆದ ೬ ಯಾ ೭ ವರ್ಷಗಳಿಂದ ಅಡಿಕೆ ತೋಟದ ಮಾಲಿಕರಿಗೆ ಹೆಚ್ಚಿನ ನಷ್ಟಕ್ಕೆ ಗುರಿಮಾಡಿ ವರುಷ ವರುಷವೂ ವ್ಯವಸಾಯ ಇಲಾಖೆಯವರ ಬೋಧನೆಯ ಮೇರೆಗೆ ನಿವಾರಣೋಪಾಯಗಳನ್ನು ಕೈಕೊಂಡು ಈ ವರುಷ ನಮ್ಮಲ್ಲಿ ಆ ರೋಗದ ಕಿಂಚಿತ್ತೂ ಇಷ್ಟರವರೆಗೆ ಕಾಣಿಸಿಕೊಂಡಿರಲಿಲ್ಲ.

ಈ ರೋಗದ ಹಾನಿಯನ್ನು ನಿವಾರಿಸುವರೆ ಇಲಾಖೆಯವರು ಹೇಳಿದ ಕ್ರಮವನ್ನು ಬಿಟ್ಟರೆ ಬೇರೆ ಯಾವ ಉಪಾಯವೂ ಇಷ್ಟರ ವರೆಗೆ ಎಲ್ಲಿಯೂ ಕಂಡುಹಿಡಿದದ್ದಿಲ್ಲ ಇವೇ ನಿವಾರಣೋಪಾಯಗಳಿಂದ ಮೈಸೂರು ಪ್ರಾಂತ್ಯದ ಮಲೆನಾಡು ಪ್ರದೇಶಗಳಲ್ಲಿ ಸಾವಿರಾರು ಎಕ್ರೆ ತೋಟಗಳ ಫಸಲನ್ನು ಉಳಿಸಿಕೊಳ್ಳುತ್ತಾರೆ ನಮ್ಮ ಗ್ರಾಮಗಳಲ್ಲಿಯೂ ಇವೇ ಉಪಾಯಗಳಿಂದಲೇ ನಮಗೆ ಉಂಟಾದ ನಷ್ಟವನ್ನು ಕಡಿಮೆಮಾಡಿಕೊಂಡಿದ್ದೇವೆ ಆದುದರಿಂದ ವಿಟ್ಲ ಪ್ರಾಂತ್ಯದ ನಮ್ಮ ಬಾಂಧವರು ಈ ನಿವಾರಣೋಪಾಯಗಳನ್ನು ತಕ್ಕ ಸಮಯದಲ್ಲಿ ಕೈಕೊಂಡು ಅವರಿಗೆ ಈ ರೋಗದಿಂದ ಆಗಬಹುದಾದ ನಷ್ಟವನ್ನು ಉಳಿಸಿಕೊಳ್ಳುವುದು ಮಾತ್ರವಲ್ಲದೆ ಈ ಮಹಾರೋಗವನ್ನು ನಮ್ಮ ಜಿಲ್ಲೆಯಿಂದ ಹೊರಗಟ್ಟಿಬಿಡಲು ಪ್ರಯತ್ನಮಾಡುವರೆಂದು ಹಾರೈಸುತ್ತೇನೆ

ನಿವಾರಣೋಪಾಯಗಳು ಕೈತರಿಂದ ಕೈಕೊಳ್ಳಲು ಅಸಾಧ್ಯವಾದವುಗಳಲ್ಲ ಮೊಟ್ಟಮೊದಲು ರೋಗದಿಂದ ಕೊಳೆತಕಾಯಿ, ಗೊನೆ, ದಂಟು, ಮೊದಲಾದುವುಗಳನ್ನು ಜಾಗರೂಕತೆಯಿಂದ ಒಟ್ಟು ಕೂಡಿಸಿ ಸುಟ್ಟುಬಿಡುವುದರಿಂದಾಗಲೀ ಆಳಕ್ಕೆ ಹೂಳಿಬಿಡುವುದರಿಂದಾಗಲೀ ರೋಗಾಣುಗಳನ್ನು ನಾಶಪಡಿಸಿ ರೋಗವು ಹೆಚ್ಚಾಗಿ ಹಬ್ಬಲಿಕ್ಕೆ ಆಸ್ಪದ ಕೊಡದಿರುವುದು ಎರಡನೇದಾಗಿ ಈ ರೋಗದ ಅಣುಗಳನ್ನು ನಾಶಮಾಡುವ ಮಿಶ್ರಣವನ್ನು ಎಳೇ ಅಡಿಕೆಗಳಿಗೆ ಚಿಮುಕಿಸುವುದು ಈ ಮಿಶ್ರಣವು ಮೈಲ್ ತುತ್ತು, ಸಣ್ಣ, ರಾಳ ಮತ್ತು ಸೋಡ, ಎಂಬ ಪದಾರ್ಥಗಳನ್ನು ತಕ್ಕ ಪರಿಮಾಣದಲ್ಲಿ ಮಿಶ್ರಮಾಡಿ ಪಾಕ ಮಾಡುವುದು ನೂರು ಮರಗಳ ಗೊನೆಗಳಿಗೆ ಹಾಕಬೇಕಾದ ಮಿಶ್ರಣವನ್ನು ತಯಾರಿಸುವರೆ 2 ರಾತ್ತಲ ಮೈಲ್‌ತುತ್ತು, 2 ರಾತ್ತಲ ಚಿಪ್ಪುಸುಣ್ಣ 32 ತೊಲೆ ರಾಳ, 16 ತೊಲೆ ಸೋಡ ಮತ್ತು 10 ಗೆಲನ್ (60ಬಾಟ್ಲಿ) ನೀರು ಇಷ್ಟು ಬೇಕಾಗುವುದು ಮಿಶ್ರಣವನ್ನು ತಯಾರಿಸುವ ಕ್ರಮವನ್ನು ಗ್ರಾಮಸ್ಥರ ಪಂಚಾಂಗದಿಂದ ಇಲ್ಲವೇ ಈ ವಿಷಯದಲ್ಲಿ ವ್ಯವಸಾಯ ಇಲಾಖೆಯವರು ಮುದ್ರಿಸಿದ ಕರಪತ್ರಗಳಿಂದ ತಿಳಿದುಕೊಳ್ಳಬಹುದು ತಯಾರಿಸಿದ ಮಿಶ್ರಣವನ್ನು ಪಂಪುಗಳ (Sprayers) ಮೂಲಕ ಅಡಿಕೆ ಗೊನೆಗಳಿಗೆ ಚಿಮುಕಿಸುವುದರಿಂದ ಅಡಿಕೆಗಳು ಕೊಳೆತು ಬೀಳುವುದಿಲ್ಲ ಪಂಪುಗಳನ್ನು 'ಫರ್ನಿಚರ್ ಕಂಪನಿ, ಕಲ್ಲಾಯಿ' ಅಥವಾ 'ಇಂಡೋಪರ್ಶಿಯನ್ ಟ್ರೇಡಿಂಗ್ ಕಂಪನಿ ಕರಾಚಿ' ಇಲ್ಲಿಂದ ತರಿಸಿಕೊಳ್ಳಬಹುದು.

ಪುತ್ತೂರಲ್ಲಿರುವ ವ್ಯವಸಾಯ ಡೆಮೋನ್ಸ್ಟ್ರೇಟರ್ ಕೆ ವಾಸುದೇವ ಶೆಣೈಯವರು ಈ ರೋಗ ನಿವಾರಣೋಪಾಯದ ಯಾವತ್ತೂ ಅನುಭವವನ್ನು ಕೊಡಲಿಕ್ಕೂ ಅಗತ್ಯವಿರುವ ಪಂಪು ಮತ್ತು ಮದ್ದು ಮೊದಲಾದುವುಗಳನ್ನು ಒದಗಿಸಿ ಕೊಡುವುದರಲ್ಲಿಯೂ ಅವುಗಳ ಉಪಯೋಗ ಕ್ರಮವನ್ನು ಸ್ವತಃ ಮಾಡಿ ತೋರಿಸುವುದಕ್ಕೂ ಯಾವ ರೈತರಿಗೂ ಸಹಾಯ ಮಾಡಲಿಕ್ಕೆ ಉತ್ಸಾಹಿಗಳಾಗಿರುತ್ತಾರೆ ತೋಟದ ಮಾಲಿಕರು ಈ ಉದ್ಯೋಗಸ್ಥರ ಸಹಾಯವನ್ನು ಪಡೆದು ರೋಗನಿವಾರಣೆಯನ್ನು ಮಾಡಿ ತಮಗೆ ಕೊಳೆ ರೋಗದಿಂದ ಉಂಟಾಗುವ ನಷ್ಟವನ್ನು ಹೋಗಲಾಡಿಸಿಕೊಳ್ಳುವರಾಗಿ ನಂಬುತ್ತೇನೆ

ಎನ್. ಕೆ ಭಟ

---


1935ರ ನಮ್ಮ ದಸರಾ ಸಂಚಿಕೆಯು ಒಕ್ಟೋಬರ ಪ್ರಥಮ ವಾರದಲ್ಲಿ ಸಚಿತ್ರವಾಗಿ ಅತ್ಯಂತ ಸುಂದರವಾಗಿ ಹೊರಡುವುದು ? ಬೆಲೆ ಆಣೆ 2. ಜಾಹೀರಾತುಗಳನ್ನು ಕೂಡಲೇ ಕೊಡಿರಿ.


## ನೋಟೀಸು.

ಕಾರ್ಕಳ ಡಿ ಮು ಕೋರ್ಟಿನಲ್ಲಿ,
R I A No 384/35
(O S 256/1930 I A 583/31)

ನಾಗಯ್ಯ ಸೆಟ್ಟಿ — ವಾದಿ, ಅರ್ಜಿದಾರ
ಶೀನಪ್ಪ ಸೆಟ್ಟಿ ಸಹಾ 6 ಜನರು—ಎದ್ರಿರು
ಇವರೊಳಗೆ

6ನೇ ಎದ್ರಿ ಕೃಷ್ಣಯ್ಯ ಸೆಟ್ಟಿ ಸುಬ್ಬಕ್ಕ ಸೆಟ್ಟಿ ಮಗ ಉಡ್ಪಿ ತಾಲೂಕು ಹನೆಹಳ್ಳಿ ಗ್ರಾಮದ ಕುದ್ದಾಲ್ ಗುಡ್ಡೆಯೆಂಬಲ್ಲಿರುವವ—

ಸದ್ರಿ ಮೇಲಿನ O S 256/1930ನೇ ದಾವೆಯ ಪ್ರಿಲಿಮಿನರಿ ಡಿಕ್ರಿ ವ ಫ್ಯಾನಲ್ ಡಿಕ್ರಿಗಳನ್ನು ದುರುಸ್ತಿಮಾಡಬೇಕಾಗಿ ಅರ್ಜಿದಾರನು ಮೇಲ್ಕಾಣಿಸಿದ ಅರ್ಜಿ ಕೊಟ್ಟಿರುತ್ತಾನೆ ಸದ್ರಿ ಅರ್ಜಿಯು ತಾ 19–9–'35ಕ್ಕೆ ಇಟ್ಟಿರುತ್ತದೆ ಆದ್ದರಿಂದ ಸದ್ರಿ ಅರ್ಜಿ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಅದನ್ನು ತಾ 19 9–'35ನೇ ಪೂರ್ವಾಹ್ನ ಗಂಟೆ 10ಕ್ಕೆ ಕೋರ್ಟು ಮುಂದೆ ನೀವು ಸ್ವತಹ ಯಾ ವಕೀಲರ ಮೂಲಕ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು ನೀವು ಆ ದಿವಸಕ್ಕೆ ಹಾಜರಾಗುವರೆ ತಪ್ಪಿದರೆ ನಿಮ್ಮ ಗೈರು ಹಾಜರಿಯಿಂದ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

ಕೆ. ಮಹಾಬಲ ಹೆಗ್ಡೆ,
ಅರ್ಜಿದಾರನ ಕಡೆ ವಕೀಲ್

---


# ಆರು ವಾರಗಳ ತನಕ ಅವನಿಗೆ ಕಟಿವಾತವಿತ್ತು.

## -ಉಣ್ಣಲು ಕೂಡಾ ಕುಳಿತುಕೊಳ್ಳಲಾಗುತ್ತಿದ್ದಿಲ್ಲ

ಈಗ ಕ್ರುಶೆನನ್ನು ಶಿಫಾರಸು ಮಾಡುತ್ತಾನೆ.

ನಡುನೋವು ಅಥವಾ ಕಟಿವಾತದಿಂದ ಬಹು ತ್ರಾಸಕ್ಕೊಳಗಾಗಿದ್ದವನೊಬ್ಬನ ಬಲವಾದ ಶಿಫಾರಸಿನ ವಿಶಿಷ್ಟ ರೀತಿಯ ಪತ್ರ ಇಲ್ಲಿದೆ ನೀವೂ ಕಟಿವಾತದಿಂದ ಬಾಧಿಸಲ್ಪಡುತ್ತಿರುವಿರಾದರೆ ನೀವಿದನ್ನು ಓದಲೇ ಬೇಕು ನಿಮ್ಮ ಗೊತ್ತಿನಲ್ಲಿ ಈ ರೋಗಗ್ರಸ್ತರಿದ್ದರೆ ನೀವು ಈ ವಿಷಯವನ್ನು ಅವರಿಗೆ ಹೇಳಬೇಕು ಮಿ T P R ಎಂಬವನಿಂದ ಈ ಶಿಫಾರಸು ಬಂದಿದೆ—

ಸುಮಾರು ಆರು ವಾರಗಳ ತನಕ ನಾನು ಕಟಿವಾತದ ಬಾಧೆಯಲ್ಲಿದ್ದೆ ನಾನು ನಡೆದೇ ಇರಬೇಕಿತ್ತು ಉಣ್ಣ ತಿನ್ನುವುದಕ್ಕಾಗಿ ಕುಳಿತುಕೊಳ್ಳಲೂ ಕೂಡಾ ಸಾಧ್ಯವಾಗುತ್ತಿದ್ದಿಲ್ಲ ನನ್ನ ನೆರೆಹೊರೆಯವರೊಬ್ಬರು ಕ್ರುಶೆನ್ ಸೋಲ್ಟನ್ನುಪಯೋಗಿಸ ಹೇಳಿದರು. ಅದೇ ಮೇರೆಗೆ ಬಿಸಿ ನೀರಿನಲ್ಲಿ ಹಾಕಿ ಒಂದು ಚಾ ಚಮಚೆ ಲವಣವನ್ನು ಬೆಳಿಗ್ಗೆ ತೆಗೆದುಕೊಳ್ಳುತ್ತಿದ್ದೆ. ಒಂದೂವರೆ ಬಾಟ್ಲಿಯ ಸೇವನೆಯೊಳಗೆ ಈ ರೋಗವು ವಾಸಿಯಾಯಿತು ಇಷ್ಟರ ವರೆಗೆ ಅದರ ಸುದ್ದಿಯಿಲ್ಲ ಅಜೀರ್ಣದ ಉಪದ್ರವ ವಿದೆಯಾದುದರಿಂದ ನಾನು ಕ್ರುಶೆನ್ ಲವಣವನ್ನು ಸೇವಿಸುತ್ತಿರುವೆನು ಪಕ್ಷವಾತ ಮತ್ತು ಕಟಿವಾತಗಳಿಗೆ ಇದು ಸರ್ವೋತ್ಕೃಷ್ಟವು

T. P. R.

ಕ್ರುಶೆನ್ ಲವಣವು ಪ್ರಕೃತಿಸಿದ್ಧವಾದ ಆರು ಲವಣಗಳ ಮಿಶ್ರಣ ಇದರಿಂದ ದೇಹಾಂತ ಶುದ್ಧಿಯಾಗುತ್ತದೆ ರಕ್ತನಾಳವು ಶುದ್ಧವಾಗುತ್ತದೆ ದೇಹವು ಪೂರ್ಣ ಕಾಂತಿಯುತವಾಗುತ್ತದೆ ಕಟಿವಾತ ಮೊದಲಾದ ರೋಗಗಳು ನಾಶವಾಗುತ್ತವೆ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ
ಕ್ರುಶೆನ್ ಸೋಲ್ಟ್ ದೊರೆಯುತ್ತದೆ



# ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

## ಕ್ಷಯ ಸಂಹಾರಿ
## KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ದಿಳುವಾದ, ಗುಂಡಿಗೆಯ ನೀರು ತುಂಬಿದ ಕಣ್ಣು, ಇಳಿದ ಸಪ್ಪು, ಬಾಯಿಯಲ್ಲಿ ಕಂಫ, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ಕಲೆಸಡಿಕೆ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ಶಕ್ತಿ, ಭಾರವು ಕಡಿಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ ದೇಹವರ್ಧನೆಗೆ ಔಷಧಿಗಳೂ ಪಾಕಕ್ಕೆ ಸ್ತ್ರೀಯರುವೂ, ಮುಟ್ಟುಗುವಾಗ ತೊಂದರೆಯಾಗುವುದಕ್ಕೆ ಗುಹ್ಯ ರೋಗಗಳಿಗೆ, ಇಳಿದುಹೋದ ಪಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

# WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts
2. Coorg, South Canara, Shimoga and Chitaldrug districts
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

**C. H SHAMBULINGAPPA,**
The South Indian General Assurance Co Ltd.
1, Purniah Chatram Road, Balepet,
BANGALORE CITY



ಡಾಕ್ಟರ ವಾಮನ ಗೋಪಾಳರವರ

ಐಹಿಡಾಯಿಡ್ಸ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
[illegible] ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫ್ರೊಸ್ಪರಸ್ ಗುಳಿಗೆಗಳು.
ಅಶಕ್ತತೆ [illegible]

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ
ಸ್ಟಾಕಿಸ್ಟ್—ಶಾ ಕಂಪನಿ ಮಂಗಳೂರು
[ಸತ್ಯಸ್ಯದಜಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ



## ಐದ ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ



ಮೂರು [illegible] ಗಳು [illegible] ಒಂದು [illegible] ಗ್ಯಾರಂಟಿ ಒಂದು ಉತ್ತಮವಾದ [illegible] ಗಂಟೆಯನ್ನು ತೋರಿಸುತ್ತ [illegible] ವರ್ಷ ಗ್ಯಾರಂಟಿ ಒಂದು [illegible] ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ [illegible] ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ [illegible] ದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

**ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,**
ಪೋಸ್ಟ್ ಬಾಕ್ಸ್ [illegible]



## ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ [illegible] ಇವರ

### ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ [illegible] ವಿಶೇಷ ಮಕ್ಕಳಾಗುವುದರಿಂದ ದುಃಖ [illegible] ಈ ಕಾರಣದಿಂದಲೂ [illegible] ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ [illegible] ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ [illegible] ಸರ್ಟಿಫಿಕೇಟ ಡಾಕ್ಟರ [illegible] ಎಲ್ ಸಿ ಪಿ ಎಸ್ [illegible] ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ [illegible] ಕಿಮ್ಮತ್ತು ರೂ [illegible]

ವಿಳಾಸ—ಸಂಜೀವಿನೀ ಔಷಧಾಲಯ ಪೋ ವಿರಜೆ, S M C



# Now For Sale.

**Poholatum (Balm)** (German make) This is h[illegible] remedy for Rheumatism Asthma [illegible] Lumbago Insect bites, Herpes, Wounds Cuts Colds Headache It [illegible] complete substitute [illegible] Try [illegible] this unequalled remedy In [illegible] As 9 [illegible] jar As 12

**Superior Red Balm** For relieving pains in muscles and on skin Directions for use with the bottle Price As 12 only

**Wurmteufel** Is a [illegible] remedy against all sorts of worms [illegible] and in the [illegible] enjoying [illegible] describe it as [illegible] remedy and warmly recommend it All those who suffer from worms children and adults try this unique remedy and be freed from your ailment Price As 10 per packet

**Pocket Inhaler** For [illegible] and hoarseness headache catarrh colds use this inhaler and you will be relieved immediately Price per inhaler As 6 [illegible] As

**Po Ho Fluid** For Asthma [illegible] indigestion [illegible] lumbago a sure remedy in all cases Price As 6 and Re 1 per phial

**Cough Cure** An infallible remedy for cough [illegible] all kinds bronchitis hoarseness [illegible] Price As 12/ for 8 oz bottle

**Use Withra Toilet Soaps—Now on Sale with**

**The New Curative Earth** A radium cure ask for Particulars

## Basel Mission Book Depot

Mangalore, Branches in Codialbail Hubli Calicut



## Our Dasara Special Number for 1935

will be out in the first week of October,
with attractive illustrations by twenties!—
with instructive & interesting articles by dozens!
Double coloured photos a Speciality!

**CONTRIBUTIONS BY REPUTED WRITERS!**

**PRICE AS 2 ONLY**

It would pay you to advertise your goods in this Popular Number
*Apply for advertisement rates to —*
Advertisement Manager,
The Swadeshabhimani Dasara Special 1935,
CAR STREET MANGALORE

# ಮುಲ್ಕಿಯ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆ.

( ಉಮೇದ್ವಾರರ ಪರಿಚಯ )

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಯು ಸಮೀಪಿಸಿದಂತೆ ಚುನಾವಣೆಯ ರಂಗಸ್ಥಳದಲ್ಲಿ ವಿಜಯ ಪತಾಕೆಗಾಗಿ ಹೋರಾಡುವ ಉಮೇದ್ವಾರರ ಪಾತ್ರವೂ ಮತದಾರರ ಉತ್ಸಾಹವೂ, ಇನ್ನು ಮಿಕ್ಕುಳಿದವರ ವಿಮರ್ಶಾತ್ಮಕ ಟೀಕೆಯೂ ಹೆಚ್ಚುವುದು ಸ್ವಾಭಾವಿಕವೇ ಸರಿ. ಆದರೆ ಮೂಲ್ಕಿಯ ಈ ಸಲದ ಡಿಸ್ಟ್ರಿಕ್ಟ್ ಬೋರ್ಡಿನ ಸದಸ್ಯತನದ ಸ್ಪರ್ಧೆ ಗೊಂದಲ ವಿಶಿಷ್ಟತೆಯಿರುವಂತಿದೆ, ಚುನಾವಣೆಯ ಸ್ಪರ್ಧೆಗಿಳಿಯಬೇಕೆನ್ನುವ ಉಮೇದ್ವಾರರ ಸಂಖ್ಯೆಯೇನೋ ಹನ್ನೆರಡನ್ನು ಮಿಕ್ಕಿರಬಹುದು ಶ್ರೀ ಎ ಬಿ. ಶೆಟ್ಟರೊಬ್ಬರು ಹೊರತು ಮಿಕ್ಕ ಉಮೇದ್ವಾರರುಗಳಾದರೆಂದು ನೋಮಿನೇಶನ್ ಪತ್ರ ಒಪ್ಪಿಸಿದ ನಂತರವೇ ಹೇಳಬೇಕಲ್ಲದೆ ಸದ್ಯಕ್ಕೆ ಹೇಳಲು ಸಾಧ್ಯವಿಲ್ಲವೆನ್ನಬಹುದು, ಪ್ರಕೃತದ ಸಂದರ್ಭದಲ್ಲಿ ಹಿಂದಿನ ಬೋರ್ಡು ಚುನಾವಣೆಗಳಲ್ಲಿ ಜಯಶೀಲರಾಗಿ ಬೋರ್ಡಿನ ಆಡಳಿತೆಯಲ್ಲಿ ಭಾಗವಹಿಸಿದ ಹಲವು ಮಹನೀಯರ ಕಾರ್ಯಕಲಾಪಗಳನ್ನು ಸಂಕ್ಷೇಪ ರೀತಿಯಿಂದ ವಿಮರ್ಶಿಸುವುದು ಸಮಯೋಚಿತವಲ್ಲವೆ?

ಶ್ರೀ। ಎ. ಬಿ. ಶೆಟ್ರು. ಕಳೆದ ೮–೧೦ ವರ್ಷಗಳಿಂದ ಮದ್ರಾಸಿನ ನ್ಯಾಯವಿಧಾಯಕ ಸಭೆಯ ಸದಸ್ಯರಲ್ಲೊಬ್ಬರಾಗಿದ್ದು, ದಕ್ಷಿಣ ಕನ್ನಡದ ರಾಜಕೀಯ ಕ್ಷೇತ್ರದಲ್ಲಿ ಪರಿಶ್ರಮಿಸುತ್ತಿರುವ ಅಗ್ರಗಣ್ಯ ಧುರೀಣರಲ್ಲೊಬ್ಬರು, 'ನವಯುಗ ಪತ್ರಿಕೆಯ' ಮಾಜಿ ಸಂಪಾದಕರೂ ಸ್ಥಾಪಕರೂ ಚಾಲಕರು ಕರ್ನಾಟಕ ಭಾಷಾಪ್ರೇಮಿ, ಕೌನ್ಸಿಲ್ ಅಧಿವೇಶನಗಳ ಸಂದರ್ಭಗಳಲ್ಲಿ ಅರಣ್ಯ ಸಂಕಷ್ಟಗಳು ರಿಸೆಟ್ಲ್‌ಮೆಂಟ್ ಧೋರಣೆ, ಬಜೆಟಿನ ಟೀಕೆ ಇವೇ ಮೊದಲಾದವುಗಳ ಕುರಿತು ಶ್ರೀಯುತರು ಮಾಡುವ ಅರ್ಥಗರ್ಭಿತ ಭಾಷಣಗಳು ಪ್ರಜಾ ಬಂಟರೆಂಬ ಖ್ಯಾತಿಯನ್ನೂ ಕೂಡಾ ಆಲೋಚನಾತರಂಗದಲ್ಲಿ ಕಾಸಿ ಕಲೆಮಾಗಿಸಿರುವುದು ಶ್ರೀ ಎ ಬಿ ಶೆಟ್ರು ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಸದಸ್ಯರಾಗಿರುವರಲ್ಲದೆ ಕಳೆದ ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾಗಿ ತಾಲೂಕು ಬೋರ್ಡುಗಳು ನಿರ್ನಾಮ ಹೊಂದಿದಾಗ ಅವುಗಳ ಸರ್ವಭಾರವನ್ನು ಹೊರುತ್ತ ಡಿಸ್ಟ್ರಿಕ್ಟ್ ಬೋರ್ಡು ಆಡಳಿತವನ್ನು ಸುಗಮವಾಗಿಯೂ, ಪ್ರಗತಿಪರವಾಗಿಯೂ ಮುನ್ನಡೆಸಿದವರು ಬೋರ್ಡು ಶಾಲೆಗಳ ಪುನರ್ವ್ಯವಸ್ಥೆ ಜಿಲ್ಲೆಯ ಮುಖ್ಯ ಮಾರ್ಗ ಮತ್ತು ಸಂಕಗಳ ದುರುಸ್ತಿ, ಪ್ರಯಾಣಿಕರ ಸೌಕರ್ಯಕ್ಕಾಗಿ ಬಸ್ ಸರ್ವಿಸುಗಳಲ್ಲಿ ಬೇಕಾದ ಏರ್ಪಾಡು ಇವೇ ಮೊದಲಾದ ಪ್ರಗತಿಸೂಚಕ ಕಾರ್ಯಗಳು ಶ್ರೀ। ಶೆಟ್ರು ಕಾರ್ಯದಕ್ಷತೆಗೆ ಮುಖ್ಯ ನಿದರ್ಶನಗಳು ಶ್ರೀ ಎ ಬಿ ಶೆಟ್ರು ಅನೇಕ ವರ್ಷಗಳಿಂದ ಹೈಸ್ಕೂಲು ಶಿಕ್ಷಣಕ್ಕಾಗಿ ಹಾತೊರೆಯುತ್ತಿದ್ದ ಮೂಲ್ಕಿಯ ಜನತೆಗೆ ಅವಶ್ಯವಿರುವ ಮೂಲ್ಕಿ ಹೈಸ್ಕೂಲಿನ ಸ್ಥಾಪನೆಗಾಗಿ ಹೆಚ್ಚಿನ ಶ್ರಮಪಟ್ಟವರಲ್ಲೊಬ್ಬರಾಗಿರುವರಲ್ಲದೆ, ಸ್ವಾಭಿಮಾನ ಸ್ವಜನಾಭಿಮಾನ ಸ್ವದೇಶಾಭಿಮಾನಗಳೆಂಬ ಉಚ್ಚ ಉಚ್ಚತರ ಉಚ್ಚತಮ ಗುಣಗಳಿಂದ ರಾಜಿಸುತ್ತಿರುವರು ನಮ್ಮ ಜಿಲ್ಲಾ ಸ್ಕೌಟ್ ಕಮಿಷನರಾಗಿ ಸಾಮಾಜಿಕ ಕ್ಷೇತ್ರದಲ್ಲೂ ತನ್ನ ಚಟುವಟಿಕೆಯನ್ನು ತೋರಿಸಿರುವರು, ಹೆಚ್ಚೇಕೆ? ಇದೀ ಜಿಲ್ಲೆಯ ನಿಸ್ವಾರ್ಥ ಸೇವೆಯಲ್ಲಿ ನಿರತರಾಗಿ ಜಿಲ್ಲೆಗೊಬ್ಬ ಭೂಷಣಪ್ರಾಯ ವ್ಯಕ್ತಿಗಳಾಗಿರುವ ಶ್ರೀ। ಎ. ಬಿ ಶೆಟ್ರು ಮೂಲ್ಕಿ ಸರ್ಕಲಿನಿಂದ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರೆ ಆ ಗೌರವವು ಮೂಲ್ಕಿಗೂ ಡಿಸ್ಟ್ರಿಕ್ಟ್ ಬೋರ್ಡಿಗೂ ಸಲ್ಲುವುದಲ್ಲದೆ ಶ್ರೀಯುತರಿಗಲ್ಲ ಅಂತೂ ಶ್ರೀ ಎ. ಬಿ. ಶೆಟ್ರು ವಿಜಯಶಾಲಿಗಳಾಗಲೆಂದೇ ಜಿಲ್ಲೆಯ ವಿಚಾರಶಾಲಿಗಳೆಲ್ಲರ ಹಾರೈಕೆ

ಶ್ರೀ। ಎಂ ಆರ್. ಪೂಂಜರು–ಇವರನ್ನು ಈಗಿನ ಯುವ ದಕ್ಷಿಣ ಕನ್ನಡಿಗರು ಮರೆತಿರಬಹುದು ಇವರು ಹಲವು ವರ್ಷಗಳಿಂದ ಮಂಗಳೂರು ತಾಲೂಕು ಬೋರ್ಡಿನ ಸದಸ್ಯರಾಗಿದ್ದು, ಸದರಿ ತಾಲೂಕು ಬೋರ್ಡಿನ ಅಧ್ಯಕ್ಷ ಸ್ಥಾನವನ್ನೂ ಅಲಂಕರಿಸಿ, ಅಧ್ಯಕ್ಷ ಸ್ಥಾನದ ಗೌರವ ಪ್ರತಿಷ್ಠೆಗಾಗಿ ಪ್ರೆಸಿಡೆಂಟ್ ಪಟೇಲರಂತೆ ಹೋರಾಡಿದ ಕರ್ತವ್ಯತತ್ಪರರು, ಜನಹಿತಕಾರ್ಯವೆಂದು ಶ್ರೀ ಪೂಂಜರಿಗೆ ತೋರಿದರೆ ಸಾಕು, ಅಸಾಪವಾದವನ್ನೂ, ಜನತೆಯ ವಿರೋಧಾಭಿಪ್ರಾಯಗಳನ್ನೂ ಲಕ್ಷಿಸದೆ ಮನಸ್ಸಾಕ್ಷಿಗೆ ತೋರಿದಂತೆ ಕಾರ್ಯವನ್ನು ಮುಂದುವರಿಸುವ ಹಟವಾದಿ ಶ್ರೀ। ಪೂಂಜರು ಖಾದಿ ಪ್ರೇಮಿಗಳಾಗಿದ್ದು, ಜಿಲ್ಲಾ ಪ್ರಚಾರ ಕಮಿಟಿಯ ಅಧ್ಯಕ್ಷರಾಗಿ ಮುಖ್ಯವಾದ ನಿಷೇಧಕ್ಕಾಗಿ ಪ್ರಯತ್ನಿಸಿದ ಕೊಂಗ್ರೆಸಿನ ವಿಧಾಯಕ ಕಾರ್ಯಪ್ರೇಮಿ, ಇವರು ಜಿಲ್ಲಾ ಹರಿಜನ ಸೇವಾ ಸಂಘದ ಅಧ್ಯಕ್ಷರು. ಸಮ್ಮುರಿನ ಪ್ರಸಿದ್ಧ ಪುರಾಯತರು, ಇಷ್ಟೊಂದು ಸುರಿತ ಸಾರ್ವಜನಿಕ ಕೆಲಸಗಾರರು ಡಿ. ಬೋರ್ಡಿನಲ್ಲಿರುವುದು ಅಗತ್ಯ. ಆದರೆ ಶ್ರೀ। ಎ. ಬಿ. ಶೆಟ್ರು ಮೂಲ್ಕಿ ಸರ್ಕಲಿನಿಂದ ಉಮೇದ್ವಾರರಾಗಿದ್ದರೆ ಶ್ರೀ। ಪೂಂಜರು ಸ್ಪರ್ಧಿಸುವ ಸಂಭವವೇ ಇಲ್ಲವಾದುದರಿಂದ ಪೂಂಜರ ಕಾರ್ಯಕಲಾಪಗಳನ್ನು ಇಲ್ಲಿ ವಿಶೇಷವಾಗಿ ವಿಮರ್ಶಿಸುವ ಅವಶ್ಯವಿಲ್ಲ.

ಶ್ರೀ। ಪಿ. ಜೋಗಪ್ಪ ಕಾಮತರವರು—ಮೂಲ್ಕಿಯ ಪ್ರಮುಖ ವರ್ತಕ ಯುವಕರಲ್ಲೊಬ್ಬರು ಸ್ಥಳೀಕ ಆಸ್ಪತ್ರೆಯ ಬಡರೋಗಿಗಳ ಸಹಾಯಕ್ಕಾಗಿ ಹೆಚ್ಚಿನ ಕೆಲಸ ಮಾಡಿದ ಮಹನೀಯರು ಇವರೊಮ್ಮೆ ಮಂಗಳೂರು ತಾಲೂಕು ಬೋರ್ಡಿನ ಉಪ ಚುನಾವಣೆಯಲ್ಲಿ ಪ್ರತಿ ಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು, ಶ್ರೀ। ಕಾಮತರವರು ಈ ಸಲದ ಡಿಸ್ಟ್ರಿಕ್ಟ್ ಬೋರ್ಡಿಗೆ ಉಮೇದ್ವಾರರಾಗಿ ನಿಲ್ಲುವವರಲ್ಲವೆಂದು ತೋರುತ್ತದೆ

ಶ್ರೀ ಕೆ. ಪಿ ಕಾಮತರವರು ಕಲ್ಲಾಪಿ ಗ್ರಾಮದ ಪಟೇಲರು ಮತ್ತು ಕೊಲಕಾಡಿ ವಿದ್ಯಾಪ್ರಚಾರಿಣಿ ಶಾಲೆಯ ಮನೇಜರರಾಗಿರುವ ವಿದ್ಯಾಭಿಮಾನಿ ಇವರು ಕಳೆದ ಮಂಗಳೂರು ತಾಲೂಕು ಬೋರ್ಡು ಚುನಾವಣೆಯಲ್ಲಿ ಶ್ರೀ ಎಂ ಆರ್ ಪೂಂಜರ ಪ್ರತಿಸ್ಪರ್ಧಿಗಳಾಗಿ ಜಯಶಾಲಿಯಾದ ತರುಣೋತ್ಸಾಹಿ ಶ್ರೀಮಂತರಲ್ಲವಾದರೂ ಜನಪ್ರೇಮಿ ಇವರೂ ಈ ಸಲದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗಿಳಿಯುವ ಉಮೇದ್ವಾರರಲ್ಲವೆಂದು ತೋರುತ್ತದೆ

ಶ್ರೀ। ಕೊಡೆತ್ತೂರು ಗುತ್ತು ಕೋಟಿಶೆಟ್ರು ಕಟೀಲು ದೇವಸ್ಥಾನದ ಆಡಳಿತೆ ಮೊಕ್ತೇಸರರೂ ಪಂಚಾಯತ ಪ್ರೆಸಿಡೆಂಟರಲ್ಲೊಬ್ಬರಾಗಿದ್ದು ಸಾಕಷ್ಟು ಯಶೋಕೀರ್ತಿಯನ್ನು ಸಂಪಾದಿಸಿರುವರು ಹಲವು ವರ್ಷಗಳ ಮೊದಲು ತಾಲೂಕು ಬೋರ್ಡು ಚುನಾವಣೆಯಲ್ಲಿ ದಿವಂಗತ ಬಾಬಿದ ಕಿ ಮಂಜಯಶೆಟ್ರನ್ನು ಪ್ರತಿಸ್ಪರ್ಧಿಸಿ ವಿಜಯಿಗಳಾದರು. ಕಳೆದ ಸಲ ಡಿಸ್ಟ್ರಿಕ್ಟ್ ಬೋರ್ಡಿಗೆ ಸುರತ್ಕಲ್ ಸರ್ಕಲಿನಿಂದ ಶ್ರೀ। ವಕೀಲ ರಾಮಭಟ್ರು ಪ್ರತಿಸ್ಪರ್ಧಿಯಾಗಿ ನಿಂತು ಜಯಶಾಲಿಗಳಾದರು ಬೋರ್ಡಿನಲ್ಲಿ ಕೆಲಸ ಮಾಡುವಷ್ಟು ಶಕ್ತಿವಂತರು ಶ್ರೀಮಂತರು ಈ ಸಲದ ಡಿಸ್ಟ್ರಿಕ್ಟ್ ಬೋರ್ಡಿನಲ್ಲೊಂದು ಸ್ಥಾನ ಪಡೆಯಲು ಉತ್ಸಾಹಗೊಳ್ಳುವರೆಂದು ಎಣಿಸಲಾಗುವುದಿಲ್ಲ

ಶ್ರೀ ಕೆ. ರಾಜು ಹೆಗ್ಗಡೆಯವರು ಜನಪ್ರೇಮಿಗಳಾಗಿ ದೇಶಾಭಿಮಾನಿ ಸಾಕಷ್ಟು ವಿದ್ಯಾವಂತರು ಕಳೆದ ಮಂಗಳೂರು ತಾಲೂಕು ಬೋರ್ಡು ಚುನಾವಣೆಯಲ್ಲಿ ಮುಂದಿನ್ನೊಬ್ಬರಿಲ್ಲದೆ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು. ಇಂತಹ ತರುಣೋತ್ಸಾಹಿಯು ಡಿಸ್ಟ್ರಿಕ್ಟ್ ಬೋರ್ಡಿಗೆ ಪ್ರವೇಶಿಸುವುದು ಹಳ್ಳಿಗರಿಗೊಂದು ಭೂಷಣವೆಂದೇ ಹೇಳಬಹುದು ಇವರಾದರೂ ಶ್ರೀ ಎ ಬಿ ಶೆಟ್ರಂತಹ ಸನ್ಮಾನ್ಯ ಮುಂದಾಳುವಿನ ವಿರೋಧವಾಗಿ ನಿಲ್ಲುವಷ್ಟು ಮುಂದುವರಿಯುವರೇ ಎಂಬುದು ಸಂದೇಹಕರ.

ಓಟರರಲ್ಲೊಬ್ಬ

## ಭಿಕ್ಷುಕರ ಹಾವಳಿಯು ತಗ್ಗಿತು

ಸಿಕಂದರಾಬಾದಿನಲ್ಲಿ ಭಿಕ್ಷುಕರ ಹಾವಳಿಯನ್ನು ಬಹುಮಟ್ಟಿಗೆ ತಗ್ಗಿಸುತ್ತಿರುವರು ಸಶಕ್ತರಾದವರನ್ನೆಲ್ಲಾ ದಸ್ತಗಿರಿ ಮಾಡಿ ಶಿಕ್ಷೆಗೆ ಗುರಿಪಡಿಸುತ್ತಿದ್ದಾರೆ ಕೇವಲ ದುರ್ಬಲರೂ ಕೂಲಿಕೆಲಸ ಮಾಡಲಾರದವರೂ ಆದವರನ್ನು ಒಂದು ಆಶ್ರಮದಲ್ಲಿ ಸೇರಿಸಿ, ಅವರವರಿಗೆ ಉಚಿತವಾದ ಸುಲಭ ಕೈಗಾರಿಕೆಗಳನ್ನು ಕಲಿಸುತ್ತಿದ್ದಾರೆ ಸೇಠ್ಜಿರೂ ನಿರುದ್ಯೋಗಿಗಳೂ ಆದ ಭಿಕ್ಷುಕರಿಗೆ ಕೈಗಾರಿಕ ಕಾರ್ಖಾನೆಗಳನ್ನು ಏರ್ಪಡಿಸುತ್ತಿರುವರು

## ವಾಡೀ ಬಂದರಿನಲ್ಲಿ ಮುಷ್ಕರ

ಮುಂಬಾಯಿಯ ವಾಡೀ ಬಂದರದಲ್ಲಿಯ ಗೂಡ್ಸ್ ಸ್ಟೇಶನಿನ ಕೆಲಸಗಾರರು ಮುಷ್ಕರವನ್ನು ಹಿಡಿದಿದ್ದಾರೆ ಅಲ್ಲದೆ ಯಾರಾದರೂ ಕೆಲಸಕ್ಕೆ ಹೋಗುವವರಿದ್ದರೆ ಅವರನ್ನು ಗದರಿಸಿ ಹೊಡೆದು ತಡೆಯುತ್ತಾರೆಂದು ವರ್ತಮಾನವಿದೆ

(೬ನೇ ಪುಟದಿಂದ ಮುಂದರಿಸಿರುವುದು)

ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣ ಪರಿಷದದ ಉದ್ದೇಶ ವ ಸಂಘಟನೆ, ಸಾಧ್ಯವಾಷ್ಟು ಇರುವ ಗೌಡ ಸಾರಸ್ವತ ಬ್ರಾಹ್ಮಣ ಬಾಂಧವರು ಈ ಪರಿಷದದಲ್ಲಿ ಆಗತ್ಯ ಭಾಗ ವಹಿಸಬೇಕು. ಸ್ವಾಗತಮಂಡಲದ ಸಭಾಸದರಿಗೆ ಫೀ ರೂ. ೧೦ ಪ್ರತಿನಿಧಿಗಳಿಗೆ ಫೀ ರೂ ೩ ಇಟ್ಟಿರುತ್ತೆ.

ಈ ಪರಿಷದದ ಬೆಲ್ಗಾಂವಿನಲ್ಲಿ ನಡೆದ ೧ನೇ ಅಧಿವೇಶದಲ್ಲಿ ಪಾಸಾದ ಸಂಘಟನೆಗಳು ಮುಖ್ಯವಾಗಿ ಈ ಕೆಳಗಿನಂತಿರುತ್ತವೆ

೧ ಈ ಪರಿಷದದ ಹೆಸರು ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣ ಪರಿಷದ ಎಂತ ಇರತಕ್ಕದು

೨ ಗೌಡ ಸಾರಸ್ವತ ಬ್ರಾಹ್ಮಣ ಜ್ಞಾತಿಯ ಎಲ್ಲಾ ಒಳಭೇದಗಳು ಒಂದಾಗಬೇಕು, ವ ಅವರೊಳಗೆ ಅನ್ನ ವ್ಯವಹಾರ ಶರೀರ ಸಂಬಂಧ ಕೂಡ ಆಗಬೇಕು ಈ ತತ್ವಕ್ಕೆ ಯಾರ ಪೂರ್ಣ ಸಮ್ಮತಿ ಇದೆಯೋ ಅಂತಹ ಸ್ವಜಾತಿ ಗೃಹಸ್ಥರು ಈ ಪರಿಷದದ ಸಭಾಸದರಾಗಲು ಬರುವುದು.

೩ ಸ್ವಜಾತಿಯಲ್ಲಿ ಐಕ್ಯ ವೃದ್ಧಿಯಾಗಬೇಕು ವ ಇತರ ಜಾತಿಯವರೊಡನೆ ಸಖ್ಯವು ವೃದ್ಧಿಯಾಗಬೇಕು ಈ ಎರಡು ತತ್ವಗಳಿಗೆ ಅನುಸರಿಸಿ ನಮ್ಮ ಜಾತಿಯ ಸಾಮಾಜಿಕ, ಬೌದ್ಧಿಕ ನೈತಿಕ, ಸಾಂಪತ್ತಿಕ ಉನ್ನತಿ ಮಾಡುವುದೇ ಈ ಪರಿಷದದ ಉದ್ದೇಶವಾಗಿರುತ್ತೆ

ಬಾಜಿ ವಿಷ್ಣು ನೆರೂಕರ.
ಅನಂತ ವಿಶ್ವಂಭರ ಸಾಖರದಾಂಡೆ.
ಜನರಲ್ ಸೆಕ್ರೆಟರಿಗಳು
ಗೌಡ ಸಾರಸ್ವತ ಬ್ರಾಹ್ಮಣ ಪರಿಷದ

## ಯಾತ್ರೆಗೆ ತೆರಳಿದವರಲ್ಲಿ ಕೆಲವರು ಸಂಸಾರ ಯಾತ್ರೆಯನ್ನೆ ಮಾಡಿದರು

### ಮೋಟರ್ ಬಸ್ಸಿನ ಅನಾಹುತ

ಸುಲ್ತಾನಪುರ ಆಗೋಸ್ತು ೩೧

ಸುಲ್ತಾನ ಪುರದಿಂದ ೧೧ ಮೈಲು ದೂರ ಯಾತ್ರಿಕರ ಮೋಟಾರೊಂದು ದುರ್ದೈವದಿಂದ ಜನರಿಗೆ ಬಹಳ ಅಪಾಯ ಆಗಿದೆಯೆಂದು ಸಮಾಚಾರ ಅವರಲ್ಲಿ ಇಬ್ಬರು ಸತ್ತು ಹೋದರು ಬಾಕಿಯವರಿಗೆ ಗಾಯವಾಗಿದೆ, ಡ್ರೈವರನಿಗೆ ಏನೊಂದೂ ಅಪಾಯವೂ ಸಂಭವಿಸಲಿಲ್ಲ ಅವನು ಪರಾರಿಯಾಗಿದ್ದಾನೆ ಆತ್ರಿಯಾದ್ದರಿಂದ ಡ್ರೈವರನಿಗೆ ನಿದ್ರೆ ಬಂತು ಬಸ್ಸಿನ ಕ್ಲೀನರನೇ ಬಸ್ಸನ್ನು ಡ್ರೈವ್ ಮಾಡುತ್ತಿದ್ದನು ಅದ್ದರಿಂದ ಇಂತಹ ಅನಾಹುತಕ್ಕೆ ಕಾರಣವಾಯಿತು ಸತ್ತವರಿಬ್ಬರೂ ಹೆಂಗಸರು ಯಾತ್ರಿಕರಲ್ಲಿ ಇದ್ದ ನೋಟುಗಳೂ ರೂಪಾಯಿಗಳೂ ಕದ್ದು ಹೋಗಿವೆ

## ದಿ ಕೆನರಾ ಬ್ಯಾಂಕ್ ಲಿಮಿಟೆಡ್,

ಕಾಸರಗೋಡು.

### ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಬೊಬಲಗುಗಳನ್ನಾಗಲೀ, ಅವುಗಳ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ವಸೂಲು ಬಗ್ಗೆ ಸದರಿಯವರು ಅಡವಿಟ್ಟ ನಗಗಳು ಇದೇ 1935ನೇ ಇಸವಿ ಸಪ್ಟಂಬರ ತಾ. 26ನೇ ಗುರುವಾರ ದಿವಸ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುವು

ಜ ನಂಬ್ರ 1 ಲೋನ್ ನಂಬ್ರ 459/32. ಹೆಸರು Ramachandra, S/o Devappya, Merchant, Shiribagil, Kasaragod. ಅಸ್ಲು ರೂ 25

ಜ ನಂಬ್ರ 2 ಲೋನ್ ನಂಬ್ರ 1021/32. ಹೆಸರು H Narayana Rao, Compounder Local Fund Hospital, Belthangady. ಅಸ್ಲು ರೂ 25

ಜ ನಂಬ್ರ 3 ಲೋನ್ ನಂಬ್ರ 1796/32. ಹೆಸರು Moidin Kutty, N/o Mahamad Kilaikote grama Mozakoth. Nileshwar ಅಸ್ಲು ರೂ 45

ಜ ನಂಬ್ರ 4 ಲೋನ್ ನಂಬ್ರ 1850/32. ಹೆಸರು K P Vittalaya, Biranthabail, Kasaragod ಅಸ್ಲು ರೂ 70.

ಜ ನಂಬ್ರ 5 ಲೋನ್ ನಂಬ್ರ 526/34 ಹೆಸರು Parameshwara Chervathur Adkathayar, S/o Vasudeva Adkathayar Landholder Chervathur Nileshwar ಅಸ್ಲು ರೂ 660

Office of the Bank Kasaragod 31–8–35 — K. M. Nayak, *Agent.*

## ಬಂಗಾಳಿ ಪತ್ರಿಕಾಕರ್ತರ ಮರಣ.

ಕಲ್ಕತ್ತಾ ಆಗೋಸ್ತು ೩೧

ಇಂದು ಬೆಳಗ್ಗೆ 'Advance' ಪತ್ರಿಕೆಯ ಸಹಾಯಕರಾದ ಶ್ರೀ। ವಸಂತಕುಮಾರದಾಸ ಗುಪ್ತರು ತನ್ನ ೩೩ನೇ ವಯಸ್ಸಿನಲ್ಲಿ ದೈವಾಧೀನರಾದರು ತನ್ನ ಆಫೀಸಿನಲ್ಲಿರುವಾಗ ಅಕಸ್ಮಾತ್ ಇವರ ದೇಹವನ್ನು ಅಪಘಾತಿಸಿತು ಬಂಗಾಳದಲ್ಲಿಯ ಪ್ರಸಿದ್ಧ ಪತ್ರಿಕಾಕರ್ತರಾದ ಇವರು ೨೫ ವರ್ಷಗಳ ಹಿಂದೆ ದಿವಂಗತ ಶ್ರೀ ಸುರೇಂದ್ರನಾಥ ಬೆನರ್ಜಿಯವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ ಬೆಂಗಾಲಿ ಪತ್ರಿಕೆಯ ಆಫೀಸಿನಲ್ಲಿ ಕೆಲಸಕ್ಕಿದ್ದರು


# ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ,

## ಲಿಮಿಟೆಡ್.

ಮುಖ್ಯ ಕಚೇರಿ — ಮದ್ರಾಸು.

ಪೋಸ್ಟು ಬಾಕ್ಸ್ ನಂಬ್ರ 182

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ

'ರಿಜಿಸ್ಟ್ರಾರ್ ಓಫ್ ಕೊ ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ

ಪ್ರೀಮಿಯಂ ದರಗಳು ಬಲು ಕಡಿಮೆ — ಪಾಲಿಸಿಯ ಶರತಗಳು ಆಕ್ಷಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ

ಕಡಿಮೆ ಖರ್ಚಿನಿಂದ ಹೆಚ್ಚು ಲಾಭ

### ಬೇಕಾಗಿದ್ದಾರೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ ಲೋಕಲ್‌ಬೋರ್ಡು ಓಫ್ ದಿ ಸೌತ್ ಇಂಡಿಯಾ ಕೊ ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ C/o ಕೂರ್ಗ ಕೊ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು,

(3) ವೈ ಶ್ರೀನಿವಾಸಯ್ಯ ಕನ್ವೀನರ್ ವ ತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು.

# ನಾಯಕ್ ಬ್ರದರ್ಸರ
# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.

Distributors for South Kanara —

**Raghavendra Ranga Pai, Car Street, Mangalore.**

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಖಚಿತ ಪರಿಹಾರ. ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಡಬ್ಬಿ ದರ ರೂ. 1

ಕಾಮಶಾಸ್ತ್ರವನ್ನೋದಿರಿ.

Shah Company MANGALORE
Pearl & Sons MANGALORE

Atank Nigrah Pharmacy
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು



ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸು ಮಾಡಲ್ಪಟ್ಟ ಪುಸ್ತಕಗಳು.

## ಸಾಮಾನ್ಯ ವಿಜ್ಞಾನ

| ಚರಿತ್ರೆ ಮತ್ತು ಕಥೆಗಳು. | ರೂ. ಆ. ಪೈ. | ಸಾಮಾನ್ಯ ವಿಜ್ಞಾನ. | ರೂ. ಆ. ಪೈ. |
|---|---|---|---|
| | | ಎರಡನೇ ದರ್ಜೆ | 0 3 0 |
| ನಾಲ್ಕನೇ ದರ್ಜೆ | 0 6 0 | ಮೂರನೇ ,, | 0 3 0 |
| ಮೂರನೇ ,, | 0 4 0 | ನಾಲ್ಕನೇ ,, | 0 6 0 |
| ಎರಡನೇ ,, | 0 4 0 | ಐದನೇ ,, | 0 5 0 |
| ಸಮಾಜಶಾಸ್ತ್ರ. | | | |
| ಐದನೇ ದರ್ಜೆ | 0 3 0 | | |
| ನಾಲ್ಕನೇ ,, | 0 3 0 | ಆರನೇ ದರ್ಜೆ | 0 4 0 |
| ಮೂರನೇ ,, | 0 2 6 | ಏಳನೇ ,, | 0 5 0 |
| | | ಎಂಟನೇ ,, | 0 6 0 |

## ಚಿತ್ರ ಕಥೆಗಳು (ಸಚಿತ್ರ.)

ಗ ತ ಗ ತು ... ಮ್ಮಟ ದೇವರು
ಒತ್ತನ ಟಿಪ್ಪಿ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ' ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು ಇತರ ಪುಸ್ತಕಗಳು ಒಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ —

# ಶಾರದಾ ಛಾಪಖಾನೆ, ಮಂಗಳೂರು.



ಶಿವರಾಮ ಕಾರಂತ ವಿರಚಿತ

# ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ

ಸಿದ್ಧವಾಗಿದೆ

ದಪ್ಪಗಿನ ಅಂಟಿಕ್ ಕಾಗದದಲ್ಲಿ

ಅಂದವಾಗಿ ಮುದ್ರಿಸಲ್ಪಟ್ಟಿದೆ

ಕ್ರೌನ್ 1 ಆಕಾರದ ೧೮೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು

# ನಡೆದ ಕತೆಗಳು.

## True Stories.

ಓದಿ ಮುಗಿಸುವ ಸಮಯ — ಮೂರೇ ನಿಮಿಷಗಳು.

*All Rights Reserved.*

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೊರಗೆಡಹುವುದೇ 'ನಡೆದ ಕತೆಗಳು'—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು. ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಪದ್ಧತಿಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.]

ಪುಸ್ತಕ ೨—೪.

### ದೇಶಪ್ರೇಮ.

ಮೂಲ್ಕಿಯ ದೊಡ್ಡಕಟ್ಟೆ ರಂಗನಾಥರಾಯನು ಮನೆಯ ಅದೊಂದು ಸಣ್ಣ ಸಂಸಾರದಲ್ಲಿ ಒಬ್ಬನೇ ಗಂಡಸು. ಅವನ ಪ್ರಾಯ ಸುಮಾರು ೩೦ ವರ್ಷಗಳು. ಅವನ ತಂದೆ ದೊಡ್ಡಕಟ್ಟೆ ಶ್ರೀನಿವಾಸರಾಯರು ತೀರಿಕೊಂಡಂದಿನಿಂದ ಸಂಸಾರ ನಿರ್ವಹಣದ ಸರ್ವಭಾರವು ಅವನ ಮೇಲೆ ಬಿದ್ದಿತು.

ಮೂಲ್ಕಿ ಬೇಂಕಿನಲ್ಲಿ ಕೆಲಸಮಾಡಿ ಹುಟ್ಟಿ ಬಂದ ಮಾಸಿಕ ಸಂಬಳ ರೂಪಾಯಿ ೨೭-೮-೦ ರಿಂದ ತಾಯಿ, ಮತ್ತು ಒಬ್ಬಳು ತಂಗಿಯನ್ನು ಸುಖವಾಗಿ ಸಾಕಿ ಸಲಹುತ್ತಿದ್ದನು.

ರಂಗನಾಥನು ಹೆಚ್ಚಿನ ರಾಷ್ಟ್ರಭಕ್ತ. ಯಾವ ರಾಜಕೀಯ ಚಳವಳದಲ್ಲಿ ಅವನು ಬಹಿರಂಗವಾಗಿ ಭಾಗವಹಿಸಲಿಲ್ಲವಾದರೂ, ಭಾಗವಹಿಸಿದವರ ಗತಿಯನ್ನು ನೋಡಿ ಅವನು ಮರಮರುಗುತ್ತಿದ್ದನು. 'ಗಾಂಧೀಜಿಯವರನ್ನು ಸೆರೆಹಿಡಿದರು' ಎಂದು ಪತ್ರಿಕೆಗಳಲ್ಲಿ ಓದಿದೊಡನೆ ಅವನಿಗಾಗುತ್ತಿದ್ದ ದುಃಖವು ಅಷ್ಟಿಷ್ಟಲ್ಲ. ಎಷ್ಟೋ ಸಲ ಸರಕಾರವನ್ನು ಮುಖತಾ ದೂಷಿಸಿ ಅವನು ತನ್ನ ದೇಶಪ್ರೇಮವನ್ನು ಪ್ರದರ್ಶಿಸಿದ್ದನು. ಖಾದಿಧಾರಣೆಯಲ್ಲಿ ಅವನಷ್ಟು ಭಕ್ತರು ಮೂಲ್ಕಿಯಲ್ಲಿರುವರೋ ಎಂದು ನಮಗೂ ಸಂದೇಹವಾಗಿದೆ.

'ತಾ ೨೭ನೇ ಶನಿವಾರ ವಾರ್ಧಾದಲ್ಲಿ ಲಾಠಿಚಾರ್ಜ್ ನಡೆದು ೬೦೩ ಕಾಂಗ್ರೆಸ್ ಪಕ್ಷೀಯರನ್ನು ಲಾರಿಗಳಲ್ಲಿ ಸೆರೆಗೊಯ್ದರು. ಮುಂಬಾಯಿಯ ಎಸ್ಪ್ಲನೇಡ್ ಮೈದಾನಿನಲ್ಲಿ ಪ್ರಚಂಡ ಸಭೆ. ವಲ್ಲಭಭಾಯಿಯವರ ಉಜ್ವಲ ಭಾಷಣ. ದೇಶದ ಯುವಕರೊಡನೆ ಮೊರೆ!' ಎಂದು ಮುಂತಾಗಿ ಪತ್ರಿಕೆಗಳಲ್ಲಿ ದಿನೇ ದಿನೇ ಬಂದ ವಾರ್ತೆಯು ಅವನ ನೆತ್ತರನ್ನು ಬಿಸಿಯಾಗಿಸಿತು. ಒಮ್ಮೊಮ್ಮೆ ಅವನಿಗೆ ಆವೇಶವುಂಟಾಗಿ, ಕೈಯಲ್ಲಿರುವ ಪೆನ್ನಾವನ್ನು ಕೆಳಗಿಟ್ಟು, ಖಾದಿ ಟೋಪಿಯನ್ನು ತಲೆಗೆ ಹಾಕಿಕೊಂಡು ಕೆಲಸಕ್ಕೆ ತಿಲಾಂಜಲಿಯನ್ನಿತ್ತು ನಡೆದುಬಿಡೋಣವೆಂದೆನಿಸುತ್ತಿದ್ದಿತು.

ಒಂದು ಆದಿತ್ಯವಾರ ಫ್ರೀಪ್ರೆಸ್ ಜರ್ನಲಿನ ಒಂದು ಪ್ರತಿಯನ್ನು ಪಡೆದ ರಂಗನಾಥನಿಗೆ ಅದರ ಪ್ರಥಮ ಪುಟದಲ್ಲಿ ದೊಡ್ಡ ದೊಡ್ಡ ಅಕ್ಷರಗಳಿಂದ ಮುದ್ರಿತವಾದ ಶೀರ್ಷಿಕೆಯು ಕಣ್ಣಿಗೆ ಬಿತ್ತು. 'ಮುಂಬಾಯಿಯಲ್ಲಿ ೩೦೦ ಸ್ತ್ರೀಯರ ದಸ್ತಗಿರಿ' ಶ್ರೀಮತಿ ಹಂಸ ಮೇಥಾರವರು ಪೋಲೀಸರಿಗೆ ಉಪದೇಶಿಸಿದರು' ಎಂದಿದ್ದುದನ್ನು ನೋಡಿದ್ದೆ ತಡ—ಅವನ ಮನದಲ್ಲಿ ಭಯಾನಕ ಸ್ಫೂರ್ತಿಯುಂಟಾಯಿತು. ತಾನೂ ಉಪ್ಪು ಮಾಡಿ ಜೈಲನ್ನು ಸೇರುವುದೆಂದೇ ನಿಷ್ಕರ್ಷಿಸಿಬಿಟ್ಟನು.

ಮರುದಿನ ಬೆಳಿಗ್ಗೆ ಎದ್ದವನೇ ಅವನು ಪೂರ್ಣ ಖಾದಿಧಾರಣೆಮಾಡಿ ಸೆಟ್ಟಿಗೆ ಹೊಳೆಯ ಕಿನಾರೆಗೆ ಹೋದನು. ಆ ದಿನ ಜನರು ಬಹಿರಂಗವಾಗಿ ಉಪ್ಪುಮಾಡಿ ಕಾನೂನುಲ್ಲಂಘಿಸುವರೆಂದು ಪ್ರಕಟವಾಗಿತ್ತು.

ಸಾವಿರಾರು ಜನರು ನೆರೆದಿದ್ದರು. ಅವರಲ್ಲಿ ಉಪ್ಪುಮಾಡಲು ಟೊಂಕಕಟ್ಟಿದ್ದವರು ೧೭ ಮಂದಿ. ಉಪ್ಪುನೀರು ಮಡಿಕೆಗಳಲ್ಲಿತ್ತು. ಮಡಿಕೆಗಳು ಒಲೆಗಳ ಮೇಲಿದ್ದುವು. ಕೆಲವು ಉತ್ಸಾಹಿ ಯುವಕರು ಬೆಂಕಿಯೂದುತ್ತಲಿದ್ದರು.


# N.I.P.

ಬ್ರೇಂಡ್ ಎಂಬ ಟ್ರೈಗ್ರೇಡ್

## ಪೆಟ್ರೋಲ್, ಚಿಮಿಣಿ ಎಣ್ಣೆ ಮತ್ತು ಡೀಸೆಲ್ ಎಣ್ಣೆ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲೂ ಜವಾಬ್ದಾರೀ ಏಜಂಟರಿಂದ ವಿಕ್ರಯಿಸಲ್ಪಡುತ್ತದೆ.

ಏಜನ್ಸಿ ಶರ್ತಗಳಿಗಾಗಿ ಕೆಳಗಿನವರಿಗೆ ಬರೆಯಿರಿ.

INTERNATIONAL OIL Co., Ltd.

"JIJI HOUSE," RAVELIN ST., FORT,

BOMBAY.


ಗಂಟೆ ಎಂಟಾಗುತ್ತಲೇ ೫೬ ಮಂದಿ ಪೋಲೀಸರು ಸಿ. ಪಿ. ಸಿ. ಯ ಬಸ್ಸಿನಿಂದ ಕೆಳಗಿಳಿದರು. ಸೆಟ್ಟಿಗೆ ಹೊಳೆಯ ಕಿನಾರೆಗೆ ಹೋಗಿ ಸಿಕ್ಕಸಿಕ್ಕವರನ್ನು ಕೈದುಮಾಡಿದರು. ಪೋಲೀಸರು ಬಂದೊಡನೆ ಕಾಲಿಗೆ ಬುದ್ಧಿ ಹೇಳಿದವರು ನೂರರಲ್ಲಿ ೯೯ ಮಂದಿ.

ರಂಗನಾಥನಿಗೇನು ಮಾಡಬೇಕೆಂದು ತಿಳಿಯದಾಯಿತು. ಪೋಲೀಸರನ್ನು ಕಂಡೊಡನೆ ಅವನ ಹೃದಯದಲ್ಲಿ ಸ್ವಾಭಾವಿಕವಾಗಿ ನಡುಕವುಂಟಾಯಿತು. ಆದರೂ ಅಧೀರನಾಗದೆ ನಿಂತಲ್ಲೇ ನಿಂತನು, ಉಸಿರೆತ್ತಲಿಲ್ಲ.

ಪೋಲೀಸರೇನು ಮಾಡಿದರೆಂದು ಬೇರೆ ಹೇಳುವುದಿಲ್ಲ. ರಂಗನಾಥನನ್ನು ಇತರರೊಡನೆ ಸ್ಟೇಶನಿಗೊಯ್ದರು. ಈ ಸುದ್ದಿಯು ಅವನ ತಾಯಿಗೆ ತಲುಪಿದೊಡನೆ ಏನಾಗಬೇಕೆಂದು ನಾವೇ ಊಹಿಸೋಣ. ಆ ಬಡ ಸ್ತ್ರೀಯು ಪೋಲೀಸರೊಡನೆ ಕಾಂಗ್ಲಾಚಿ ಬೇಡಿಕೊಂಡಳು. ಅವನಿಲ್ಲದೆ ತನ್ನ ಸಂಸಾರವು ನಡೆಯಲಾರದೆಂದು ಮೊರೆಯಿಟ್ಟಳು. ಆದರೆ ಪೋಲೀಸರ ಈ ಬೇಡಿಕೆಯನ್ನು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. 'ನಾಳೆ ಕೋರ್ಟಿನಲ್ಲಿ ನೋಡಿಕೊಳ್ಳಿ' ಎಂದರು.

ಕೋರ್ಟಿನಲ್ಲಾದುದೇನು?—ರಂಗನಾಥನು ಉಪ್ಪು ಮಾಡಿದನೆಂಬ ತಪ್ಪು ಸ್ಥಾಪನೆಯಾಗಿ ಅವನಿಗೆ ಎಲ್ಲರೊಡನೆ ೯ ತಿಂಗಳ ಸಾದಾ ಸಜೆಯನ್ನು ವಿಧಿಸಲಾಯಿತು. ಆ ಸಜೆಯನ್ನು ರಂಗನಾಥನು ಪ್ರಸನ್ನವದನನಾಗಿಯೇ ಸ್ವೀಕರಿಸಿದನು.

ಪಾಪ ಮಗನ ದುಡಿತವನ್ನೇ ಆಧರಿಸಿಕೊಂಡಿದ್ದ ಆ ಬಡ ತಾಯಿಯ ಕಷ್ಟವನ್ನು ಏನೆಂದು ಹೇಳುವುದು? ನೆಂಟರಿಷ್ಟರೊಡನೆ ಸಾಲ ಬೇಡಿ ಬೇಡಿ ಆ ಸ್ತ್ರೀಗೆ ನಾಚಿಕೆಯೇ ಮರೆತು ಹೋಗುವಂತಾಯಿತು. ರಂಗನಾಥನ ತಂಗಿ ಶ್ರೀಮಂತಿಯ ಸ್ಥಿತಿಯೇ ಬೇರೆ. ಒಮ್ಮೆ ಅಣ್ಣನ ಮೌಢ್ಯವನ್ನು ನಿಂದಿಸಿ ಕಣ್ಣೀರ ಕೋಡಿಯನ್ನೇ ಹರಿಸುವಳು, ಮತ್ತೊಮ್ಮೆ ಮನೆಯಲ್ಲಿ ಮೂರ್ತಿಮತ್ತಾಗಿ ನಿಂತಿರುವ ದಾರಿದ್ರ್ಯವನ್ನು ಕಂಡು ಹುಚ್ಚರಂತೆ ಚೀರುವಳು.

ರಂಗನಾಥನ ಬೇಂಕಿನ ಮೆನೇಜರರಿಗೆ ಅವನ ನೆನಪಾಗುತ್ತಲೇ ಆಗಾಗ 'ಆ ಹುಡುಗನಿಗೆ ಹುಚ್ಚು ಹಿಡಿದಿದೆ; ಇಲ್ಲದಿದ್ದರೆ ಮನೆಮುಂದಿಗೆ ಭಿಕ್ಷಾಪಾತ್ರೆಯನ್ನು ಕೊಟ್ಟು, ಇಷ್ಟು ಸುಖಕರ ಕೆಲಸವನ್ನು ಬಿಟ್ಟು, ಜೈಲಿಗೆ ಸೇರಿ ದೇಶಪ್ರೇಮವನ್ನು ತೋರಿಸುವುದೆಂದರೇನು? ಕೇವಲ ಭ್ರಾಂತಿ! ಅಲ್ಲಲ್ಲ, ದೇಶಸೇವೆ ಮಾಡಬೇಕೆಂದು ನಾನೆನ್ನುವುದಿಲ್ಲ. ಆದರೆ ದೇಶಸೇವಕರಾಗುವವರು ಮೊದಲು ಹಿಂದು ಮುಂದು ವಿಚಾರಿಸಿ ಆಚರಿಸಬೇಕು' ಎನ್ನುತ್ತಿರುವರು.

ಮ. ಪಾ.

# ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು]

ಉಪಾಧ್ಯಾಯರು ವಿದ್ಯಾರ್ಥಿಗಳಿಗೆ, "೧೯೧೪ನೇ ಇಸವಿಯಲ್ಲಿ ನಡೆದ ಘೋರ ಯುದ್ಧದ ಕುರಿತು ಬರೆಯಿರಿ" ಎಂದು ಹೇಳಿದ್ದರು. ಅದಕ್ಕೆ ಓರ್ವ ವಿದ್ಯಾರ್ಥಿಯು ಬರೆದದ್ದನ್ನು ಓದಿರಿ—

ವಿದ್ಯಾರ್ಥಿಯ ಉತ್ತರ—೧೯೧೪ನೇ ಇಸವಿಯಲ್ಲಿ, ಎರಡು ಸೈನ್ಯಗಳು ರಣರಂಗಕ್ಕೆ ಬಂದು ನಿಂತವು. ಅದರಲ್ಲಿ ಅವರು ಇವರಿಗೆ ಹೊಡೆದರು, ಇವರು ಅವರಿಗೆ ಹೊಡೆದರು; ಎರಡು ಕಡೆಯವರಲ್ಲಿಯೂ ಕೆಲವರು ಸತ್ತು ಹೋದರು, ಉಳಿದವರು ತಮ್ಮ ತಮ್ಮ ಸ್ಥಳಗಳಿಗೆ ಹೋದರು. ಯುದ್ಧ ಮಾಡುವ ಸಮಯದಲ್ಲಿ ಎದ್ದ ಧೂಳು ಆಕಾಶದವರೆಗೆ ಹೋಗಿ ಮುಟ್ಟಿತು. ಹೀಗಾಗಿ ಯುದ್ಧವು ಕೊನೆಗಂಡಿತು.

\+ + + +

ಬ್ರಾಹ್ಮಣ—ನಿನಗೆ, ಜನಿವಾರ ಉಂಟೋ, ಇಲ್ಲವೋ?

ಶೂದ್ರ—ಉಂಟು ಸ್ವಾಮೀ! ಮಾತ್ರ ಸೊಂಟಕ್ಕೆ ಅಡ್ಡಹಾಕಿಕೊಂಡಿರುತ್ತೇನೆ ಬುದ್ಧಿ!

\+ + + +

ರಾಮು—ಕೃಷ್ಣ, ನಿನಗೆ ನಿದ್ದೆ ಬಿದ್ದಿರುತ್ತದೋ?

ಕೃಷ್ಣ—ಅಹುದಹುದು, ನನಗೆ ನಿಜವಾಗಿಯೂ ನಿದ್ದೆ ಬಿದ್ದಿರುತ್ತದೆ, ದಯವಿಟ್ಟು ಎಚ್ಚರಿಸಬೇಡ.

\+ + + +

ಉಪಾಧ್ಯಾಯ—ಹೌದೊ, ನಿನ್ನ ಕಣ್ಣು ಎಲ್ಲಿದೆ?

ವಿದ್ಯಾರ್ಥಿ—ಕೃಷ್ಣನ ಪ್ರಬಂಧ ಪುಸ್ತಕದ ಮೇಲೆ ಸಾರ್.

\+ + + +

ಉಪಾಧ್ಯಾಯ—ಪಂಚಭೂತಗಳು ಯಾವವು?

ವಿದ್ಯಾರ್ಥಿ—ಕಲ್ಲುಕುಟ್ಟಿ, ಪಂಜುರ್ಲಿ, ಕೊಡಮಂತಯ್ಯಾ, ಕುಕ್ಕಿನಂದಯ್ಯಾ, ಮತ್ತು ಜುಮಾದಿಗಳೆಂದು ಐದು ತೆರ.

\+ + + +

ಮಾಸ್ತರ್—ಓ! ನೀನು ಯಾವಾಗಲೂ ತಡಮಾಡಿ ಬರುವುದು ಯಾಕೊ? ಕೇಳುವವರಿಲ್ಲವೆ ನಿನಗೆ?

ಕಿಟ್ಟು—ನೀವೇ ಈಗ ಕೇಳಿ, ಕೇಳುವವರಿಲ್ಲ ಎಂದು ಹೇಳಿದರೆ, ಹೇಗಾದೀತು ಸಾರ್?

\+ + + +

ಗುರು—ಕತ್ತಲೆ ಯಾವಾಗ ಎಲ್ಲಿ ಬರುತ್ತದೆ?

ಶಿಷ್ಯ—ಹನ್ನೆರಡು ಗಂಟೆ ಹೊತ್ತಿಗೆ ಊಟ ಮಾಡದೆ ಇದ್ದಾಗ, ಕಣ್ಣಿನಲ್ಲಿ ಬರುತ್ತದೆ ಸಾರ್!

\+ + + +

ಈತ—ನಾನು ಪ್ರತೀ ದಿವಸ ತಪ್ಪದೆ, ಸಿನೆಮಕ್ಕೆ ಹೋಗುತ್ತೇನೆ.

ಆತ—ಮೊನ್ನೆ ಸೋಮವಾರ ಹೋಗಿದ್ದೆಯೋ?

ಈತ—ಸೋಮವಾರ ಹೋಗಿಲ್ಲ, ಬುಧವಾರ ಹೋಗಿದ್ದೆ.

\+ + + +

ಡಾಕ್ಟರ್—ಎಲಾ, ಈ ರೋಗವು ನಿನ್ನ ವಂಶಜರಿಂದ ನಿನಗೆ ಬಂದದು, ಇದನ್ನು ಗುಣಪಡಿಸುವರೇ ಸಾಧ್ಯವಾಗುವುದಿಲ್ಲ, ಆದುದರಿಂದ ದಯವಿಟ್ಟು ಇಷ್ಟರ ತನಕ ಕೊಟ್ಟ ಮದ್ದಿನ ಹಣ ಕೊಟ್ಟುಬಿಡು.

ರೋಗಿ—ಬಿಲ್ಲನ್ನು ನನ್ನ ವಂಶಜರಿಗೇ ಕಳುಹಿಸಿ ಕೊಡಿರಿ.

\+ + + +

ಹಳ್ಳಿಯವ—ಸ್ವಾಮೀ, ಇಂಜಿನಿಯರರೆ, ಇಲ್ಲಿ ಬಾವಿ ತೋಡಿದರೆ ನೀರು ಸಿಕ್ಕಬಹುದೇ?

ಇಂಜಿನಿಯರ್—ತೋಡಿದ ನಂತರ ಧೈರ್ಯವಾಗಿ, ಖಂಡಿತ ಹೇಳಬಲ್ಲೆನು.

ಕೆ. ಅಚ್ಯುತ ಭಟ್ಟ.

ನ್ಯಾಯಾಧೀಶ—ಎಲೋ ನೀನೇ ಕಳವುಮಾಡಿದ್ದೀಯೆಂತ ಈ ಮೂರು ಜನ ಸಾಕ್ಷಿಗಾರರಿಂದ ರುಜುವಾಗುತ್ತದೆ. ಏನಾದರೂ ಹೇಳಲಿಕ್ಕಿದೆಯೋ?

ಕೈದಿ—ಹೌದು ಸ್ವಾಮಿ, ನಾನು ಕಳವು ಮಾಡುವಾಗ ಈ ಮೂರು ಜನ ಸಾಕ್ಷಿಗಾರರು ಖಂಡಿತ ಇರಲಿಲ್ಲ ಬುದ್ಧಿ.

\+ + + +

ಒಬ್ಬ—ಸಾಹುಕಾರರೇ ಎಷ್ಟು ಸರ್ತಿ ಹೇಳುವುದು ಸ್ವಾಮಿ ಒಂದು ಪೆನ್ಸಿಲು ಕೊಡಿ ಮೂರು ಮೈಲು ಹೋಗಬೇಕು ರಾತ್ರಿ.

ಸಾಹುಕಾರ—ಮೂರು ಮೈಲು ಹೋಗುವ ಪೆನ್ಸಿಲು ಇಲ್ಲವೆಂತ ಎಷ್ಟು ಸರ್ತಿ ಹೇಳುವುದಯ್ಯಾ?

\+ + + +

ಮೇಸ್ಟ್ರು—ಕನ್ನಡಿಗರೆಂದು ಹೇಳುವುದು ಯಾರಿಗೆ?

ಹುಡುಗ—(ಥಟ್ಟನೆ ಎದ್ದು) ಕನ್ನಡಿ ಇಟ್ಟವರಿಗೆ ಸರ್.

ಮೇಸ್ಟ್ರು—(ಕಿವಿಯನ್ನು ಹಿಂಡುತ್ತಾ) ನಿನ್ನ ತಲೆ.

ಹುಡುಗ—ತಲೆ ಅಲ್ಲ ಸರ್ ಕಿವಿ, ಕಿವಿ.

\+ + + +

ಬಿಸ್ಕುಟು ಮಾರುವವ—ಸ್ವಾಮಿ ರಾಯರೇ, ಒಳ್ಳೇ ಬೆಣ್ಣೆಯ (ಬಟ್ಟರ್) ಬಿಸ್ಕುಟು ಕೊಡಲೇ?

ಯಜಮಾನ—ನಮಗೆ ಬೇಡವಯ್ಯಾ.

ಬಿಸ್ಕುಟು ಮಾರುವವ—ಯಾತಕ್ಕೆ ಬೇಡ ಅನ್ನುತ್ತೀರಿ? ಮಕ್ಕಳಿಗಾದರೂ ತಿನ್ನಬಹುದು ಸ್ವಾಮೀ!

ಯಜಮಾನ—ಮಕ್ಕಳಿಗೆ ತಿನ್ನುವ ಅಭ್ಯಾಸ ನಮಗಿಲ್ಲವಯ್ಯಾ!

\+ + + +

ರಾಘವೇಂದ್ರ—ಮಿತ್ರಾ, ಕಾಲು ಗಂಟೆಯೊಳಗೆ 99 ರಸಬಾಳೆ ಹಣ್ಣನ್ನು ತಿಂದು ಮುಗಿಸಿಬಿಟ್ಟೆನಲ್ಲಾ.

ಮಿತ್ರ—ಅಯ್ಯಾ ಒಂದನ್ನು ಏತಕ್ಕೆ ಬಿಟ್ಟು ಹೇಳಿದ್ದಿ? ಭರ್ತಿ ನೂರನ್ನೆ ಹೇಳಬಹುದಿತ್ತಲ್ಲಾ.

ರಾಘವೇಂದ್ರ—ಒಂದಕ್ಕೋಸ್ಕರ ಏತಕ್ಕೆ ಸುಳ್ಳಾಡಬೇಕು ಮಿತ್ರ?

\+ + + +

ತಾಯಿ—ಮಗ ಈ ನಮೂನೆಯಲ್ಲಿ ಏತಕ್ಕೋ ಅಳುತ್ತಿ?

ಮಗು—ಅಳುವ ಬೇರೆ ನಮೂನೆ ಗೊತ್ತಾಗದ್ದರಿಂದಮ್ಮ.

× × × ×

ಜಡ್ಜಿ—ಎಲೋ ನಿನ್ನ ಪ್ರಾಯವೆಷ್ಟು?

ಕೈದಿ—ಮೂವತ್ತು ವರುಷ ಬುದ್ಧಿ.

ಜಡ್ಜಿ—ಎರಡು ವರ್ಷ ಮುಂಚೆ ಸಹಾ ಇದೇ ಪ್ರಾಯ ಹೇಳಿದ್ದಿ. ಈಗ ಸಹ ಅದನ್ನೇ ಹೇಳುತ್ತೀಯೋ?

ಕೈದಿ—ಹೌದು ಸ್ವಾಮಿ. ಅಂದು ಒಂದು ಇಂದು ಒಂದು ಮಾತಾಡುವ ಅಭ್ಯಾಸ ನನಗಿಲ್ಲ. ನಾನು ಒಂದೇ ಮಾತಿನವನು.

× × × × × ×

ಇನ್ಶೂರೆನ್ಸ್ ಏಜಂಟ್—ಮನೆಯಲ್ಲಿ ಯಜಮಾನರು ಇಲ್ಲವೇ?

ಮನೆ ಆಳು—ಇಲ್ಲ ಸ್ವಾಮಿ ಯಾತಕ್ಕೆ?

ಇನ್ಶೂರೆನ್ಸ್ ಏಜಂಟ್—ಪೋಲೀಸಿದಾರರಿಗೆ ಹೊಸ ಸೂಚನೆ ಕೊಡಲಿಕ್ಕೆ.

ಮನೆ ಆಳು—ಪೋಲೀಸರ ಮನೆ ಅಲ್ಲ ಸ್ವಾಮಿ, ಇದು ಇನ್ಸ್ಪೆಕ್ಟರ್ ಸಾಹೇಬರ ಮನೆ.

\+ + + +

ಪುಸ್ತಕವನ್ನು ಕೈಯಲ್ಲಿ ಹಿಡಿದು ಕುರ್ಚಿಯ ಮೇಲೆ ತೂಗಡಿಸುವ ಮಗನನ್ನು ನೋಡಿ

ತಂದೆ—ಎಲೋ ರಂಗಾ ಕುರ್ಚಿಯಲ್ಲಿ ಕುಳಿತು ಏನು ಮಾಡುತ್ತಿದ್ದಿ?

ಮಗ—ತೂಕಡಿಸುತ್ತಿದ್ದೆ ಅಪ್ಪಾ.

ತಂದೆ—ಇದೇನೋ ಶಾಲೆಯಲ್ಲಿ ಕಲಿಸಿದ್ದು?

ಮಗ—ಹೌದಪ್ಪಾ ನಮ್ಮ ಕ್ಲಾಸಿನಲ್ಲಿ ಮೇಸ್ಟ್ರು ಸಹಾ ಇದೇ ಪ್ರಕಾರ ತೂಕಡಿಸುತ್ತಾರೆ.

P. Rama Rao.

"ನವರತ್ನಾ" **ದ್ರಾಕ್ಷಾಸವ** (ಔಷಧಯುಕ್ತವಾದ)

ಅತ್ಯುತ್ಕೃಷ್ಟ ತರಗತಿಯ ದ್ರಾಕ್ಷೆ ಹಣ್ಣಲ್ಲದೆ ಮತ್ತಿನ್ನಿತರ ಎಷ್ಟೋ ಔಷಧಗಳನ್ನು ಕೂಡಿಸಿರುವುದರಿಂದಲೇ ಇದನ್ನು 'ದ್ರಾಕ್ಷಾಸವ' ಔಷಧಯುಕ್ತವೆಂದು ನಾಮಕರಣಮಾಡಲಾಗಿದೆ

ಅಗ್ನಿಮಾಂದ್ಯ, ಹೊಟ್ಟೆಯುರಿ, ಕೆಮ್ಮು, ವಾಂತಿ, ಸಾಮಾನ್ಯ ನರಗಳ ಅಕ್ರಮ, ಸ್ಮೃತಿನಾಶ, ನಿದ್ರಾನಾಶ, ಮಲನಿರೋಧ ಮತ್ತು ಇತರ ರೋಗಗಳಲ್ಲಿ ಇದು ಅಪೇಕ್ಷಿತ ಫಲವನ್ನು ಕೊಡುವುದು

ತೀವ್ರ ಮತ್ತು ದೀರ್ಘಕಾಲದ ಶ್ವಾಸಕ್ಲೇಶ ಸಂಬಂಧವಾದ ರೋಗಗಳಲ್ಲಿ ಇದು ಬಲವರ್ಧಕ ರಸಾಯನವಾಗಿ ಕೆಲಸಮಾಡುತ್ತದೆ,—ಕೆಮ್ಮನ್ನು ಗುಣಪಡಿಸುತ್ತದೆ ನಾಯಿಕೆಮ್ಮು ಇದ್ದಾಗ ಮಕ್ಕಳಿಗೆ ಇದನ್ನು ಉಪಶಮನೋಪಕಾರಿಯಾಗಿ ಭರವಸೆಯಿಂದ ಕೊಡಬಹುದು ಶೀತಕಾಲ ಮತ್ತು ಮಳೆಗಾಲದಲ್ಲಿ ಕೆಮ್ಮು ಸರ್ವಸಾಮಾನ್ಯವಾಗಿ ಇರುವ ಕಾರಣ ಇದನ್ನು ಸಕಾಲದಲ್ಲಿ ಕೊಟ್ಟು ಸುರಕ್ಷಿತವಾಗಬಹುದು

ಕ್ರಯ 24 ಔನ್ಸ್ ರೂ 2-0-0 16 ಔನ್ಸ್ ರೂ. 1-8-0.
8 ಔನ್ಸ್ ರೂ 0-13-0.

ತಯಾರಿಸುವವರು.— ನವರತ್ನಾ ಫಾರ್ಮಸಿ, ಕೊಚ್ಚಿ

ಏಜಂಟರು — ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಕೊಚ್ಚಿಯ ನವರತ್ನ ಫಾರ್ಮಸಿಯವರ "ದ್ರಾಕ್ಷಾಸವ" ಔಷಧಿಯು ದೇಹಕ್ಕೆ ಶಕ್ತಿಯನ್ನೂ ಉತ್ತೇಜನವನ್ನೂ ಕೊಡತಕ್ಕದೆಂದು ಸಂತೋಷದಿಂದ ಹೇಳಬಲ್ಲೆ ಮಲೇರಿಯಾಜ್ವರ, ಕಾಸಜ್ವರ, ಪ್ರಯಾಸ ಪ್ರಸವ, ಸರಿಯಾದ ಆಹಾರವಿಲ್ಲದಿರೋಣ ಮತ್ತು ದೇಹಕೃಶವಾಗುವುದು ಇತ್ಯಾದಿಗಳಿಗೆ ಚಿಕಿತ್ಸೆಯಾದ ಮೇಲೆ ಪುಷ್ಟಿಕಟ್ಟಿ ಬಲಬರುವುದಕ್ಕೆ ಈ ಔಷಧಿಯು ಬಹಳ ಪ್ರಯೋಜನಕಾರಿ

ರಾಯಪುರಂ-ಮದರಾಸು 9—9—1933 } (ರುಜು) ಪಿ. ವೆಂಕಟಗಿರಿ, ಎಂ ಬಿ
ಲೆಕ್ಚರರ್ ಇನ್ ಮಿಡ್ವೈಫರಿ ರಾಯಪುರಂ ಮೆಡಿಕಲ್ ಸ್ಕೂಲ್
ರೆಸಿಡೆಂಟ್ ಮೆಡಿಕಲ್ ಆಫೀಸರ್ ಇಂಗಿಲನ್ ಹಾಸ್ಪಿಟಲ್
ರಾಯಪುರಂ

**ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಕೊಲ್ಲುವ ಸಂಧಿಯನ್ನು ಕಳೆದುಕೊಳ್ಳಬೇಡಿ.**

ಎಂತಹ ಹುಳುಕಡ್ಡಿಯುಳ್ಳವರೂ ನಮ್ಮ ಹುಳುಕಡ್ಡಿ ಮಲಾಮು 24 ಗಂಟೆಗಳೊಳಗಾಗಿ ವಾಸಿ ಮಾಡುತ್ತದೆ. ಇದನ್ನು ಪ್ರಸಿದ್ಧಿಗೆ ತರುವುದಕ್ಕಾಗಿ ಒಂದೇ ಸಲ 24 ಡಬ್ಬಿಗಳನ್ನು 3 ರೂಪಾಯಿಗೆ ಕೊಂಡುಕೊಳ್ಳುವವರಿಗೆ ಬ್ಯಾಂಡ್ ಸಹಿತ 1 ಡಬ್ಬಿ ಕೈಗಡಿಯಾರ, ಚೈನ್ ಸಹಿತ 1 ಇನ್ ಪೆಂಟ್ ಪಾಕೆಟ ಗಡಿಯಾರ 10 ವರ್ಷ ಗ್ಯಾರೆಂಟಿಯಾದ ಕರಾರುವಾಕ್ ಕಾಲತೋರಿಸುವ 'ಬಿ ಟೈಂಪೀಸ ಬ್ಯಾಟರಿ ಸಹಿತ 1 ಟಾರ್ಚ ದೀಪ ಗೋಲ್ಡ ನಿಬ್ಬಿನ 1 ಫೌಂಟನ್ ಪೆನ್ 1 ಇಮಿಟೇಷನ್ ಪರ್ಲ್ ನೆಕ್ ಲೇಸ್ ಸೇಪ್ಟಿ ರೇಸರ ಬ್ಲೇಡ್ ಸಹಿತ ಅಥವಾ ವಾಟರ ಪ್ರೂಫ್ ಕೋಟು (ಅಳತೆ ಮತ್ತು ಬಣ್ಣ ತಿಳಿಸಬೇಕು) ಉಚಿತವಾಗಿ ಕೊಡಲ್ಪಡುವುದು ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ ಇಷ್ಟವಿಲ್ಲದಿದ್ದರೆ ಹಣ ವಾಪಾಸ್

International Trading Co, Post Box No 6714 (B I T) CALCUTTA
C P S 9/8

**Kanara Watch Works, Mangalore.**

Suppliers of standard Watches, Time pieces Wrist watches Clocks and various kinds of sporting materials etc Quality and price unassailable Visit our Show Room and be satisfied

# 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು

**ಧಾತುಪುಷ್ಟಿ ಲೇಹ**

(ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನು ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

**ಬಾಲಗ್ರಹ ಗುಟಿಕೆ**

ಮಕ್ಕಳ ಚೇಷ್ಟೆ, ಕಫ, ಕೆಮ್ಮು ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ 3 ಬಾಟ್ಲಿಗಳಿಗೆ ರೂ 1-12 0




ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹ ದೊರೆಯುತ್ತವೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0-0

**ಮಲೇರಿಯಾ ನಿವಾರಿಣೀ**

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ ಗೆಡ್ಡೆ ಬಂದ ಜ್ವರ ಪುರಾಣ ಜ್ವರ ಇತರ ಜ್ವರ ಜ್ವರಗಡ್ಡೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟು ಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ಪ್ರಾಶನಕ್ಕೆ ಇದು ಕೇವಲ ಉತ್ತಮವಾದ ಔಷಧಿಯು ಕೋರಿರಿ

ಬಾಟ್ಲಿ 1ಕ್ಕೆ ರೂ 1 8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13

**ಮೇಹಕುಠಾರ**

ಪ್ರಮೇಹ, ಮೂತ್ರ ಕೃಚ್ಛ್ರ ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸಂಧಿ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2-8-0 ಮಾತ್ರ

**ಎಮ್ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು**

ನಮ್ಮ ಔಷಧಿ ಸಿಕ್ಕುವ ಸ್ಥಳ.— ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು ಡಾ। ಶ್ರೀನಿವಾಸ ಪೈ ಪುತ್ತೂರು ಮೆಸರ್ಸ ಮುಲ್ಲರ ಗಟಿನ್ ಬ್ರದರ್ಸ 91, ತಿಕ್ಕಪೇಟೆ ಬೆಂಗಳೂರು ಸಿಟಿ ಮೆಸರ್ಸ ಕಾಮತ್ ಎಂಡ್ ಕೋ ಕಾರಾಹೌಸ್ ಗಿರಗಾಂವ್, ಬೇಕ್‌ರೋಡ್ ಮುಂಬಾಯಿ ನಂ 4 ದಿ ಪೆಂಟ್ರಲ್ ಹೋಟೆಲ್, ಮಡಿಕೇರಿ ಕೂರ್ಗ್ ರಾವ್ ಫಾರ್ಮಸಿ, ಸಾಗರ

# The Laxhmi Insurance Company Ltd, Lahore.

## ದಿ ಲಕ್ಷ್ಮಿ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

**1924. ಪ್ರಗತಿ ಸೂಚನೆ 1934.**

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

| | ಕೆಲಸದ ಫಲಿತಾಂಶ. | ಲೈಫ್ ಫಂಡ್ |
|---|---|---|
| 1925— | ರೂ 21,24,250 | 500 |
| 1929— | ರೂ 1,66,18,620 | 9,32,900 |
| 1934— | ರೂ ,46 77,228 | 49 08 771 |

ಕ್ಲೈಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

**ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.**

The Laxhmi Insurance Co, Ltd,
*Madras Branch,*
No 6, Sankuram Chetty St, G. T. MADRAS

ದಿ ಲಕ್ಷ್ಮಿ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6 ಸಂಕುರಾಮು ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು.

# The Canara Banking Corporation Udipi, Ltd.

**Head office:—UDIPI,** S. K. (Incorporated in British India) Tel.-BANKING' **ESTD. 1906.**

**Branches:—1 Udipi, 2 Coondapoor, 3 Car Street, Mangalore, 4 Shimoga, 5 Madras** (George Town), **6 Bunder Mangalore, 7 Mercara** (North Coorg), **& 8 Virarajendrapet** (South Coorg)

## SAVINGS BANK ACCOUNTS.

From 1st September 1935 arrangement for withdrawal by cheques can be made

## ಸೇವಿಂಗ್ಸ್ ಬೇಂಕ್ ಲೆಕ್ಕ.

1935ನೇ ಸಪ್ಟಂಬರ 1ನೇ ತಾರೀಕಿನಿಂದ ಚೆಕ್ಕಿನ ಮೂಲಕ ಹಣವನ್ನು ಹಿಂತೆಗೆಯುವಂತೆ ಮಾಡಲಾಗುವುದು

# ಅಮೃತಾಂಜನ

ಎಲ್ಲಾ ನೋವುಗಳಿ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ವೀನ' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

## ಅಮೃತಾಂಜನ ಡಿಪ್ರೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಬಹು ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಭರವಸೆ ಕೊಡುತ್ತೇವೆ

## ಅಮೃತಾಂಜನ ಡಿಪ್ರೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಎಲ್ಲಾ ಗಳಿಗೆಗಳಲ್ಲಿ ಕಂಪೆನಿಯಲ್ಲಿ ದೊರೆಯುವುದು


## NOTICE.

Sealed tenders for the erection of a Building for The Bombay Life Assurance Co. Ltd at Udipi will be received by the undersigned upto 4 P M on Monday, the 16th day of September 1935

Plans Conditions of Contract and Specification of work may be seen at the Office of the undersigned, where copies of the form of tender can be obtained on payment of a fee of Rs 1- per copy

The owners do not bind themselves to accept the lowest or any tender

Udipi S K 10th Aug 1935

**Kochikar Brothers,**
*Madras Branch Secretaries,*
Bombay Life Assurance Co, Ltd,

# ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರುಮಾಡಿದ ಅಮೋಘ ಔಷಧ ಇದು ಗರ್ಭಕೋಶದೊಳಗಣ ಎಲ್ಲಾ ತರದ ನ ಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಸ್ಥಾನದಲ್ಲಿ ಎಳೆಸುವುದು ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು

# ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ

ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ

ನಮ್ಮಲ್ಲಿ ಓ ಕ್ಟ ಗಗ್ಳೆರೆ ಎಲಾ ಎಲ್ಲೊಪತಿಕ್ ಔಷಧಗಳೂ, ಶಾಸ್ತ್ರರೀತ್ಯಾ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (To le s) ಸ್ನಾನದ ಗಳೂ, ಪೇಟೆಂಟ್ ಮೇನು ಶಾಯಿಗಳೂ ತಯಾರಾಗುತ್ತವೆ.

ಪಟ್ಟಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ —

**ವೆಂಕಟ್ರಾಯ ಅಣ್ಣಪ್ಪ ಬಾಳಿಗ—ಮೆನೆಜಿಂಗ್ ಡೈರೆಕ್ಟರ್,**

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ

ಹೆಡ್ ಆಫೀಸು ಮತ್ತು ಕಾರಖಾನೆ—**ಉಡುಪಿ, ದಕ್ಷಿಣ ಹಿಂದೂಸ್ಥಾನ.**

**ವ್ಯಾಪಾರದ ಡಿಪೋಗಳು—(1) ರಥಬೀದಿ ಮಂಗಳೂರು. (2) 1/70 ನ್ಯಾಪಿಯರ್ ಬೀದಿ, ಪಾರ್ಕ್‌ಟೌನ್ ಮದ್ರಾಸು (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2**

**Karnataka Chemical and Pharmaceutical Works, Ltd, Udipi (South India)**

ವಾರ್ಷಿಕ ಚಂದಾ: 2 ರೂಪಾಯಿ.

ಬಿಡಿ ಸಂಚಿಕೆ 1 ಆಣೆ.

Registered No. M. 498

ಟಪ್ಪಾಲು ಹಾಸಲು ಸೇರಿ ರೂ. 2-13-0.

for Quality Snuff
H. Rama Rao
and Sons.
High Class Snuff Manufacturers
Mangalore
ASK FOR
RAMA SNUFF

# ಸ್ವದೇಶಾಭಿಮಾನಿ

# SWADESHABHIMANI

LIFE ASSURANCE
IS
NO EXPENSE
BUT
AN INVESTMENT
Safeguard yourself & your family TODAY
Buy a policy in
THE BOMBAY LIFE

ESTABLISHED 1906

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ದೊರೆಯ ಲನುಪಮರತ್ನಗಳ ಸಾಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ ವಿಷವಿಕ್ಷುವ ಸುದತ ಒದರಿದ ।

ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರದ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದ ಧೀರರು ನಿಶ್ಚಿತಾರ್ಥವ ॥

ಪುಸ್ತಕ ೨೯. ಮಂಗಳೂರು ತಾ. ೧೩ನೇ ಶುಕ್ರವಾರ ಸಪ್ಟಂಬರ ೧೯೩೫ (13-9-'35) ಸಂಚಿಕೆ ೩೭

ಆಂಗ್ಲೇಯರು ನಮ್ಮಂತೆ ಗುಡಾಣಗಳಲ್ಲಿ ಬಿಸಿನೀರು ಕಾಯಿಸಿ ತಪ್ಪಲೆಯಿಂದ ತಲೆಗೆ ಹೊಯ್ದು ಸ್ನಾನಮಾಡುವುದಿಲ್ಲ. ಅವರಿಗೆ ಸಮುದ್ರ ಸ್ನಾನವೆಂದರೆ ಪ್ರಾಣ. ಹಾಗೆ ಸ್ನಾನಮಾಡುವಾಗ ಪ್ರತ್ಯೇಕ ಇಜಾರುಗಳನ್ನು ಧರಿಸುವರು. ಇಲ್ಲಿ ಕೆಲವು ತರುಣಿಯರು ಸ್ನಾನಾನಂತರ ಒಂದು ವಿಚಿತ್ರ ಕೊಡೆಯನ್ನು ಹಿಡಿದುಕೊಂಡು ನಡೆಯುತ್ತಿರುವುದು ಕಂಡುಬರುತ್ತದೆ.

# ಚಕ್ರ

(All Rights Reversed)

ಶ್ರೀಯುತ ನೆಹರೂರವರಿಗೆ –

ಹೆಡ್ ಆಫ್ ಪೊಲಿಟಿಕ್ಸ್
ಆಲ್ಮೋರಾ ಜೈಲ್ ಆಫ್ ಜವಾಹರ್‌ಲಾಲ್,
ಆಲ್ಮೋರಾ

ಬಾಲಕ ಸಾಯ್ಬನು ಮಾಡುವ ಅಷ್ಟಾಂಗ ನಮಸ್ಕಾರಗಳು, ಕ್ಷೇಮ, ಕರುಣಾಯ ತಮ್ಮೆಲ್ಲರ ಕ್ಷೇಮ ಸಮಾಚಾರವನ್ನು ಬರೆದು ತಿಳಿಸುತ್ತಿರಬೇಕಾಗಿ ಆಶಿಸುತ್ತೇನೆ.

× × × × × ×

ತಮ್ಮ ತಾಟಿಯಲ್ಲಿದ್ದು ಮೊನ್ನೆ ೩೦ ನೇ ದಿನ ಅಕಸ್ಮಾತ್ತಾಗಿ ಹೊರಗೆ ಹೋದ ಪಂಡಿತ ಜವಾಹರಲಾಲರನ್ನು ಕಳೆದುಕೊಂಡ ತಾವು ಬಹು ದುಃಖತಪ್ತರಾಗಿರುವಿರೆಂದು ಕೇಳಿ ಬಹು ವಿಷಾದಪಡುತ್ತಿರುವೆನು. ತಾವು ಜವಾಹರಲಾಲರ ಮೇಲಿಟ್ಟ ಮಮತೆ,– ಜೈಲಿನವರು ಅವರನ್ನು ಶಿಕ್ಷೆಯಿಂದ ಕಾದು, ಅವರನ್ನು ಜೈಲಿನ ಹೊರಗೆ ಹೋಗದಂತೆ ನಿರ್ಬಂಧಿಸಿದ್ದರೂ–ತಾವು ತಮ್ಮ ಸಿಕ್ಕದ ಗಾಯನದಿಂದ ಜವಾಹರಲಾಲರನ್ನು ತಣಿಸಿ, ಅವರು ತನ್ನ ಪತ್ನಿಯ ಅಸ್ವಸ್ಥದಿಂದ ದುಃಖವನ್ನು ಅನುಭವಿಸದಂತೆ ನೋಡಿಕೊಂಡಿದ್ದುದಕ್ಕಾಗಿ ಅನಂತ ವಂದನೆಗಳು ತಮ್ಮ ಗಾಯಕ ಶಿಷ್ಯ ವೃಂದಕ್ಕೂ ತಬಲೆ ಮಾಸ್ತರುಗಳಿಗೂ ನಮಸ್ಕಾರಗಳಿವೆ. ಜವಾಹರಲಾಲರು ತಮ್ಮಲ್ಲಿ ಆವಾಸಮಾಡಿಕೊಂಡಂದಿನಿಂದ ತಮ್ಮ ವ್ಯಾಪಾರವು ೧೦ ಪೌಂಡುಗಳಷ್ಟು ಕಡಿಮೆಯಾಗಿರಬೇಕೆಂದು ಊಹಿಸಿರುವೆನು. ಆದರೆ ಅವರಂತಹ ಆಸಾಮಿಯೊಂದು ತಮ್ಮ ಮನೆಯ ನೆರಳಲ್ಲಿರುವ ಸೌಭಾಗ್ಯವು ದೊರೆತುದಕ್ಕಾಗಿ ತಾವು ಸಾಯ್ಬನಿಗೊಂದು ಕಟ್ಟು ಕಬ್ಬನ್ನಾದರೂ,—ಚೌತಿಯ ದಿನ–ರವಾನಿಸಲು ಮರೆತುದನ್ನು ನೋಡಿ ಅತ್ಯಂತ ದುಃಖವಾಗುತ್ತದೆ. ಮಧ್ಯಪ್ರಾಂತ್ಯದಿಂದ ಮಂಗಳೂರಿಗೆ ತಲಪುವಾಗ ಆ ಕಬ್ಬಿನ ಕಟ್ಟಿನಿಂದ ಇದ್ದಕ್ಕಿದ್ದ ಹಾಗೆ ಸಿಹಿ ನೀರೆಲ್ಲ ಹೊರಗೆ ಬಂದು ರೈಲುಗಳ ಇಂಜಿನುಗಳ ಬಾಯಲ್ಲೋ ಗಾರ್ಡ್ಸ್ ಕೋಣೆಯ ಜನರ ಮೂತಿ ಹೊಟ್ಟೆಗಳ ಮೇಲೋ ಹಾರಿ ಬೀಳುವುದೆಂಬ ಭಯದಿಂದ ತಾವು ಅವುಗಳನ್ನು ರವಾನಿಸಲು ಮನಮಾಡಲಿಲ್ಲವೆಂದು ತಿಳಿದುಬಂದಿದೆ. ಈ ಸಲ ತಮ್ಮನ್ನು ಕ್ಷಮಿಸುವೆವು. ಕ್ರಿಸ್‌ಮಸ್ ಸಮಯದಲ್ಲಾದರೂ ಒಂದು ತುಂಡು ರೊಟ್ಟಿಯನ್ನಾಗಲೀ ಒಂದಿಷ್ಟು ದ್ರಾಕ್ಷಾರಸವನ್ನಾಗಲೀ ಬುಕ್‌ಪೋಸ್ಟ್ ಮಾಡಲು ನೆನಪಿರಲಿ!

× × × × × ×

ಪಂಡಿತ ಜವಾಹರಲಾಲರು ವಿಮಾನದ ಮೂಲಕ ಸ್ವಿಜರ್‌ಲೇಂಡಿನತ್ತ ಹಾರಿಹೋದರು. ತನ್ನಿಮಿತ್ತ ತಾವು ಒಂದು ಭಜನೆ ಕೂಟವನ್ನು ನೆರವೇರಿಸಿ ಈ ಕೆಳಗಣ ಪದವನ್ನು ರಾತ್ರಿಂದಿವ ಹಾಡಿರಿ –

ಗಿಳಿಯು ಪಂಜರದೊಳಿಲ್ಲ–ಹೇ ರಾಮ ರಾಮ,
ಗಿಳಿಯು ಪಂಜರದೊಳಿಲ್ಲ ॥
ರೋಮ ರೋಮ ಕೋಮಲ ಗಿಳಿ,
ರಾಮನನ್ನು ಹೋಲುವ ಗಿಳಿ
ದೂಮನಿಂಗೂ ಹೇಳದೇನೆ ಹಾರಿ ಓಡಿ
ಹೋಯಿತಲ್ಲಾ,
ಗಿಳಿಯು ಪಂಜರದೊಳಿಲ್ಲಾ–ಹೇ ರಾಮರಾಮ,
ಗಿಳಿಯು ಪಂಜರದೊಳಿಲ್ಲ ॥
ಭಾರೀ ಬುದ್ಧಿಯ ಗಿಳಿ
ಮಾರಿ ಧೈರ್ಯದ ಗಿಳಿ
ಜಾರಿ ಜೈಲಿನ ಕಾಂತಿ ಹಾರಿ ಹೋಯಿತಲ್ಲಾ,
ಗಿಳಿಯು ಪಂಜರದೊಳಿಲ್ಲಾ ಹೇ ರಾಮ ರಾಮ
ಗಿಳಿಯು ಪಂಜರದೊಳಿಲ್ಲ ॥

× × × × × ×

ತಮ್ಮ ಸಹವಾಸಬಲದಿಂದಾಗಿ ಜವಾಹರಲಾಲರು ಸಹಜವಾಗಿ ಪುನಃ ಹಿಂದೂದೇಶಕ್ಕೆ ಬರಬಹುದು ಆದುದರಿಂದ ಭಜನೆಯನ್ನು ನಿಲ್ಲಿಸಬೇಡಿ. ಅದಕ್ಕೆ ಎಣ್ಣೆಯಿಲ್ಲದಿದ್ದರೆ ಕೆಲವು ಕೈದಿಗಳ ಕೋಣೆಗಳಲ್ಲಿರುವ ಮಿಣಿ ಮಿಣಿ ದೀಪಗಳಿಂದಾದರೂ ತೆಗೆಯಿರಿ!

× × × × × ×

ತಾವು ದೊಡ್ಡವರು ಧನಿಕರು, ದಯವಿಟ್ಟು ಒಂದು ಪತ್ರವನ್ನು ನಾಳೆಯೇ ಬರೆಯಿರಿ, ಅದನ್ನು ನೀವು ಮುಚ್ಚುವ ಅವಶ್ಯವಿರುವುದಿಲ್ಲ. ಕಾರಣ, ಅದನ್ನು ಪೋಲೀಸ್ ಇನ್ಸ್‌ಪೆಕ್ಟರ್ ಜನರಲರು ತೆರೆದು ಅದರ ಸ್ಟೇಂಪು ಹರಿದುಕೊಳ್ಳಲೂ ಬಹುದು!

ಮರೆಯಬಾರದು, ಜೋಕೆ!

'ಸಾಯ್ಬ'.

ರಾತ್ರಿ ಮಲಗಲು ಹೋಗುವ ಮೊದಲು ಒಂದು ಕಪ್ 'ಓವಲ್ಟಿನ್' ಸೇವಿಸಿದಿರೆಂದರೆ, ನಿಮಗೆ ಸುಖವಾದ ಸ್ವಸ್ಥವಾದ ನಿದ್ರೆಯು ಲಭಿಸುವುದು. ಈ ನಿದ್ರೆಯು ನಿಮ್ಮ ಸ್ನಾಯುಗಳನ್ನು ಶಾಂತಗೊಳಿಸಿ, ಅದಕ್ಕೆ ಹೊಸ ಚೇತನದ ಬಲವನ್ನೀಯುವುದು. 'ಓವಲ್ಟಿನ್' ಬಳಲಿದ ದೇಹವನ್ನೂ ಮನಸ್ಸನ್ನೂ ಪುನರ್ರಚಿಸುತ್ತದೆ. ಬೆಳಗ್ಗೆ ಏಳುವಾಗ ನೀವು ನೂತನ ಚೇತನವುಳ್ಳವರಾಗುವಿರಿ.

ಓವಲ್ಟಿನ್ ಪೂರ್ಣವಾಗಿ ಶುದ್ಧವಾದ ಪೋಷಣೆಯ ವಸ್ತು. ಪ್ರಕೃತಿಸಿದ್ಧವಾದ ಬೆಳೆದ ಬಾರ್ಲಿ, ದನದ ಕೆನೆಹಾಲು, ವಿಶಿಷ್ಟವಾದ ಕೋಳಿಮೊಟ್ಟೆಗಳಿಂದ ತಯಾರಾಗಿದೆ. ಟಾನಿಕ್ ಆಹಾರವೂ, ಪಾನಕವೂ ಆದ ಇದನ್ನು ಬಿಡದೆ ಸೇವಿಸುತ್ತಾ ಬಂದಲ್ಲಿ ದೇಹಕ್ಕೆ ಶಕ್ತಿ ಬಲಗಳನ್ನು ಕೊಡುತ್ತದೆ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ–ಅದು ಆರೋಗ್ಯಕರ, ಬಲವರ್ಧಕ, ಮತ್ತು ಶಕ್ತಿದಾಯಕ

## ಓವಲ್ಟಿನ್

ಟಾನಿಕ್ ಆಹಾರ ಪಾನಕ. ಶಾಂತಮಯ ಸುಖನಿದ್ರೆಯನ್ನುಂಟುಮಾಡುತ್ತದೆ.

# OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ
ಏಜಂಟ್ ಜೇಮ್ಸ್ ರೈಟ್ ೬೫ ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಮತ್ತು ಬೊಂಬಾಯಿ ಮತ್ತು ಮದ್ರಾಸು

OV/333

# ತಯಾರಾಗಿದೆ!

ಗ್ರಾ. ಶಾ. ಎ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

**ಸಮಾಜಶಾಸ್ತ್ರ**

ಅಥವಾ

**ಸೋಶಿಯೊಲೊಜಿ.**

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ಗ್ರಾಹಕರ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುವು

ಇಲ್ಲಿಗೆ ಕೂಡಲೇ ಬರೆಯಿರಿ

**ಮೆನೇಜರ್,**
ಶಾರದಾ ಛಾಪಖಾನೆ,
**ಮಂಗಳೂರು.**

BUY
**ADVERTISED GOODS.**

Ested 1920]   THE   [1920ರಲ್ಲಿ ಸ್ಥಾಪಿತವಾದದ್ದು

# Kanara Enterprise Ltd.,

PUTTUR

## ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

## ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು

Puttur,
Dated 10—4—1935.

**G. N. Lakshman Pai,**
*Secretary.*

# ಸಾಹಿತ್ಯ ಸಂಗ್ರಹ—

## ಕಾಳಿದಾಸನ ಸಂದೇಶ.

ಶ್ರೀಮಾನ್ ದೇವುಡು ನರಸಿಂಹ ಶಾಸ್ತ್ರಿಗಳು ಎಂ. ಎ. ಇವರು ಮೇಲಿನ ಶೀರ್ಷಿಕೆಯಲ್ಲಿ ಸುಬೋಧ ಮಾಸಪತ್ರಿಕೆಯಲ್ಲಿ ಹೀಗೆ ಬರೆದಿರುತ್ತಾರೆ. ಕಾಳಿದಾಸನು ಜೀವನದ ಆದಿ ಅಂತ್ಯಗಳು, ಏಳು ಬೀಳುಗಳು, ಋತುಗಳನ್ನು ಕುರಿತು ಏನು ಹೇಳುವನು? "ಕಾಳಿದಾಸನ ಸಂದೇಶವೇನು?" ಎಂಬುದನ್ನು ಕುರಿತು ವಿಚಾರ ಮಾಡುವುದು ಈ ಲೇಖನಮಾಲೆಯ ಉದ್ದೇಶ. ಈ ವಿಚಾರವು ಸುಗಮವಾಗಿ ನಡೆಯಲು ಅನುಕೂಲವಾಗಲೆಂದು, ಅವನ ಗ್ರಂಥಗಳ ಪೌರ್ವಾಪರ್ಯವನ್ನು ಕುರಿತು ಮೊದಲು ಚಿಂತಿಸುವೆವು.

ಈ ಅಂಶವನ್ನು ಕೆಲವರು ವಿದ್ವಾಂಸರು ಗಮನಿಸಿ ವಿಚಾರಪೂರ್ವಕವಾಗಿ ಒಂದು ಸಿದ್ಧಾಂತಕ್ಕೆ ಬಂದಿದ್ದಾರೆ. ಆದರೆ ಈ ಸಿದ್ಧಾಂತವು ನಮ್ಮ ದೃಷ್ಟಿಯಿಂದ ಸಾಧುವಾಗಿಲ್ಲ. ಆದರಿಂದ ಈಗ ಹೊಸದಾಗಿ ಆ ವಿಚಾರವನ್ನು ಮತ್ತೆ ಆರಂಭಿಸುವೆವು. ಈ ಸಂಬಂಧದಲ್ಲಿ ರಘುವಂಶ ಕುಮಾರಸಂಭವ ಮೇಘಸಂದೇಶ ಎಂಬ ಮೂರು ಕಾವ್ಯಗಳನ್ನೂ ಮಾಲವಿಕಾಗ್ನಿಮಿತ್ರ, ಶಾಕುಂತಲ ವಿಕ್ರಮೋರ್ವಶೀಯ ಎಂಬ ಮೂರು ನಾಟಕಗಳನ್ನೂ ಮಾತ್ರ ತೆಗೆದುಕೊಳ್ಳುವೆವು. ಉಳಿದವುಗಳನ್ನು ನಾವು ಈ ಸಂಬಂಧದಲ್ಲಿ ಗಮನಿಸುವುದಿಲ್ಲ.

ಕಾವ್ಯ ನಾಟಕಗಳ ಆದಿಯಲ್ಲಿ ಕವಿಯು ಹೇಳಿರುವುದೇನು? ಕಾವ್ಯನಾಟಕಗಳಲ್ಲಿ ಅಲ್ಲಲ್ಲಿ ಬಂದಿರುವ ಚಿತ್ರಗಳಲ್ಲಿ ಮೊದಲು ಯಾವುದು, ಅನಂತರ ಯಾವುದು ಎಂಬ ಸರಣಿಯನ್ನು ಹಿಡಿದು ಹೋದರೆ ಈ ದೃಷ್ಟಿಯಿಂದ ರಘುವಂಶವು ಎಲ್ಲದಕ್ಕೂ ಮೊದಲು ಆರಂಭಿಸಿದ ಕಾವ್ಯವೆಂಬುದು ಸ್ಪಷ್ಟವಾಗಿ ಗೊತ್ತಾಗುವುದು. ಈ ಕವಿಯು ತನ್ನ ಶಾಸ್ತ್ರಾದಿಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಕಾವ್ಯಸೃಷ್ಟಿಗೆ ಕೈಯಿಕ್ಕಿದನೆಂಬುದು ಕಾವ್ಯನಾಟಕಗಳನ್ನು ನೋಡಿದವರಿಗೆ ಸ್ವತಃ ಸಿದ್ಧವಾಗಿ ತಿಳಿಯುವ ವಿಷಯ. ಇಲ್ಲಿ ಈ ರಘುವಂಶದಲ್ಲಿ ಆ ಶಾಸ್ತ್ರಾಂಶಗಳನ್ನು ಹೇಗೆ ಹಾಗೆಯೇ ಇಟ್ಟಿರುವನೆಂಬುದಕ್ಕೆ ಮೊದಲನೆಯ ಮಂಗಳಶ್ಲೋಕವೇ ಸಾಕ್ಷಿ. ಕವಿಯ ಹೃದಯವು ಭಾವನಾಪ್ರೇರಿತವಾಗಿ ವಿಜೃಂಭಿಸಿದ ವಾಣಿಯು ಹೊರಡುತ್ತದೆ. ಅದನ್ನು ಸಂಸ್ಕಾರಾನುಗುಣವಾಗಿ ಅದು ಶಾಸ್ತ್ರದ ಮಾತುಗಳಲ್ಲಿಯೇ ಹೊರಬಿದ್ದು ಆದಿಕವಿಯ ವಿಷಯದಲ್ಲಿ ಶೋಕವೇ ಶ್ಲೋಕವಾಯಿತಂತೆ. ಇಲ್ಲಿಯೂ ಅನುಷ್ಟುಪ್ ರೂಪದಲ್ಲಿ ಹೊರಬಿದ್ದಿದೆ. ತನ್ನ ಕಾವ್ಯವೆಲ್ಲವೂ ವ್ಯಾಕರಣ ಪ್ರಕರಣವಾದ [illegible] ರಿಂದ ವಾಕ್ಯದಿಂದ ಆರಂಭಿಸಿದ್ದಾನೆ. ಆದರೆ ವಾಗ್ದೇವಿಯಾದ ವಾಣಿಯನ್ನಾಗಲಿ ವಾಗೀಶ್ವರನಾದ ಬೃಹಸ್ಪತಿಯನ್ನಾಗಲಿ ಚಿಂತಿಸದೆ ಸಂಸ್ಕಾರಾನುಗುಣವಾಗಿ ಮನವು ವಾಕ್ಯವನ್ನೂ ಅದರಿಂದ ಸೂಚಿತವಾಗುವ ಅರ್ಥವನ್ನೂ ಚಿಂತಿಸುತ್ತದೆ. ಬುದ್ಧಿಯು ಅಲ್ಲಿಯೇ ವಾಕ್ಕಿನ ಸ್ತ್ರೀಲಿಂಗವನ್ನೂ ಅರ್ಥದ ಪುಲ್ಲಿಂಗವನ್ನೂ ಎರಡರ ಸಂಪೃಕ್ತತೆಯನ್ನೂ ಕಂಡು "ವಾಗರ್ಥಾವಿವ ಸಂಪೃಕ್ತೌ ಪಾರ್ವತೀ ಪರಮೇಶ್ವರೌ" ಎಂದು ತಂದಿಡುತ್ತದೆ. ಆರಂಭಯುಕ್ತವಾದ್ದರಿಂದ ಆ ಇಬ್ಬರನ್ನೂ ಜಗತಃ ಪಿತರೌ ಆಗಿ ನೋಡುತ್ತ ವಾಗರ್ಥ ಪ್ರತಿಪತ್ತಿಯು ಒಂದೇ ಎಂದು ಒಂದು ಶ್ಲೋಕವನ್ನು ಮಾಡುತ್ತದೆ. ಈ ಶ್ಲೋಕದಲ್ಲಿ ಬುದ್ಧಿಪೂರ್ವಕ ವ್ಯಾಪಾರವು ಭೂಯಿಷ್ಠವಾಗಿರುವುದರಿಂದ ಇದೇ ಆರಂಭದ ಶ್ಲೋಕವಿರಬೇಕು.

ಜೊತೆಗೆ ಕವಿಯು ಸ್ವವಾಕ್ಯದಿಂದಲೇ ಈ ಅರ್ಥವನ್ನೂ ಸಮರ್ಥನೆ ಮಾಡುತ್ತಾನೆ. ಕವಿತೆಗೆ ಆರಂಭಿಸಿದ್ದಾನೆ. ಆದರೆ ಇನ್ನೂ ನಂಬುಗೆ ಇಲ್ಲ. ಆದಕ್ಕಾಗಿ "ಮಂದಃ ಕವಿಯಶಃ ಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ। ಪ್ರಾಂಶುಲಭ್ಯೇ ಫಲೇ ಲೋಭಾದುದ್ಬಾಹುರಿವ ವಾಮನಃ" ಎಂದೂ, "ಕ್ವ ಸೂರ್ಯಪ್ರಭವೋ ವಂಶಃ। ಕ್ವ ಚಾಲ್ಪವಿಷಯಾ ಮತಿಃ। ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ ಸಾಗರಂ" ಎಂದೂ ಹೇಳಿಕೊಳ್ಳುತ್ತಾನೆ. ಆದರೆ ಅವನು ಗುರುಕುಲವಾಸ ಮಾಡಿ ಅಧ್ಯಯನ ಮಾಡಿದವನು, ಆದ್ದರಿಂದ ತಾನೂ ಹಾಗೆ ಸಂಪೂರ್ಣವಾಗಿ ಅಸಮರ್ಥನಲ್ಲವೆಂಬುದನ್ನು "ಅಥವಾ ಕೃತವಾಗ್ದ್ವಾರೇ ವಂಶೇಽಸ್ಮಿನ್ ಪೂರ್ವಸೂರಿಭಿಃ। ಮಣೌ ವಜ್ರಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿ ಮೇ ಗತಿಃ" ಎಂದು ಹೇಳುತ್ತಾನೆ.

ಮತ್ತೆ ಈ ನೈಜ್ಯಾನುಸಂಧಾನವು ಮಾಲವಿಕಾಗ್ನಿಮಿತ್ರದಲ್ಲಿಯೂ ಶಾಕುಂತಲದಲ್ಲಿಯೂ ಕಲೆದೋರಿದೆ. ಒಂದರಲ್ಲಿ "ಪ್ರಥಿತಯಶಸಾಂ ಭಾಸಸೌಮಿಲ್ಲಕವಿಪುತ್ರಾದೀನಾಂ ಪ್ರಬಂಧಾನತಿಕ್ರಮ್ಯ ವರ್ತಮಾನಕವೇಃ ಕಾಲಿದಾಸಸ್ಯ ಕ್ರಿಯಾಯಾಂ ಕಥಂ ಬಹುಮಾನಃ ?"

"ಆಯಿ ವಿವೇಕ ವಿಶ್ರಾಂತಮಭಿಹಿತಮ್ ಪಶ್ಯ ॥
ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಂ ।
ಸಂತಃ ಪರೀಕ್ಷ್ಯಾನ್ಯತರದ್ಭಜಂತೇ
ಮೂಢಃ ಪರಪ್ರತ್ಯಯನೇಯ ಬುದ್ಧಿಃ ॥"

ಎಂದು ಆಕ್ಷೇಪಣೆ ಸಮಾಧಾನಗಳನ್ನು ಹೇಳುತ್ತಾನೆ. ಮತ್ತೊಂದರಲ್ಲಿ ಅಷ್ಟು ನಂಬಿಕೆ ಬಂದಿದೆ. ಆದರೂ "ಆಪರಿತೋಷಾದ್ವಿದುಷಾಂ ನ ಸಾಧು ಮನ್ಯೇ ಪ್ರಯೋಗವಿಜ್ಞಾನಂ" ಎಂದು ಹೇಳುತ್ತಾನೆ. "ನನಗೇನೋ ನಂಬಿಕೆಯುಂಟು. ಆದರೆ ನೀವೂ ನೋಡಿ ಹೌದೆಂದರೆ" ಎನ್ನುವ ಆಶ್ರಯಬುದ್ಧಿಯು ಇನ್ನೂ ಇದೆ.

ಇಲ್ಲಿಯೇ ಮಾಲವಿಕಾಗ್ನಿಮಿತ್ರದ ಶಾಕುಂತಲದ ನಾಂದಿ ಶ್ಲೋಕಗಳನ್ನೂ ಗಮನಿಸಿ. ಒಂದರಲ್ಲಿ ಕವಿಯು ಅಲಂಕಾರಪ್ರಿಯನಾಗಿ ಈಶನನ್ನು "ತಾಮಸೀವೃತ್ತಿಯ ವ್ಯಪನಯನ"ಕ್ಕಾಗಿ ಪ್ರಾರ್ಥಿಸುತ್ತಾನೆ. ಈ ಶ್ಲೋಕದಲ್ಲಿ "ಅಷ್ಟಾಭಿಃ ಕೃತ್ಸ್ನಂ ಜಗದಪಿ ತನುಭಿರ್ಬಿಭ್ರತ್" ಎಂದು ಹೇಳುವ ಅರ್ಥವನ್ನೇ ಮುಂದೆ ಶಾಕುಂತಲದಲ್ಲಿ ವಿಸ್ತರಿಸಿ "ಯಾ ಸೃಷ್ಟಿಸ್ಸ್ರಷ್ಟುರಾದ್ಯಾ ವಹತಿ ವಿಧಿಹುತಂ" ಎಂದು ಮುಂತಾಗಿ ಹೇಳಿದ್ದಾನೆ. ಇಲ್ಲಿ ಸಂಕ್ಷೇಪವಾಗಿ ಹೇಳಿರುವುದು, ವಿಸ್ತಾರವಾಗಿ ಹೇಳಿರುವುದು ಆವೇಳೆ ಎಂದು ನಮ್ಮ ಅಭಿಪ್ರಾಯ.

ಅಲ್ಲಿಂದ ಮುಂದೆ ಕಾಳಿದಾಸನು ವಿಕ್ರಮೋರ್ವಶೀಯವನ್ನು ಬರೆದನೇ ಕುಮಾರ ಸಂಭವವನ್ನು ಬರೆದನೇ ಎಂಬುದು ಕೊಂಚ ಸಂದೇಹಗ್ರಸ್ತವಾಗಿದೆ. ಆ ವರ್ಣನೆಗಳ ಸೊಬಗು, ಕತೆಯನ್ನು ಹೇಳುವ ಶೈಲಿ ಮೊದಲಾದುವುಗಳಲ್ಲಿ ದೃಷ್ಟಿಯಿಟ್ಟು ನೋಡಿದಾಗ ರಘುವಂಶಕ್ಕೂ ಕುಮಾರಸಂಭವಕ್ಕೂ ಬಹಳ ದೂರ ಎಂಬುದು ವ್ಯಕ್ತವಾಗುವುದು. ಹಾಗೆಯೇ ಶಾಕುಂತಲಕ್ಕೂ ವಿಕ್ರಮೋರ್ವಶೀಯಕ್ಕೂ ಎಷ್ಟೋ ಅಂತರವಿದೆಯೆಂಬುದೂ ಆಯಾ ಗ್ರಂಥಗಳ ಸಂದರ್ಭ ನಿರ್ವಹಣ ಚಾತುರ್ಯ ವಸ್ತುಗ್ರಥನಾದಿಗಳಿಂದ ವ್ಯಕ್ತವಾಗುವುದು. ಹೀಗೆ ಇರುವುದರಿಂದ ರಘುವಂಶವನ್ನು ಬರೆದ ಮೇಲೆ ಮಾಲವಿಕಾಗ್ನಿಮಿತ್ರವನ್ನೂ [illegible] ಬರೆದನೆಂದೂ ಶಾಕುಂತಲವನ್ನು ಬರೆದ ಮೇಲೆ ವಿಕ್ರಮೋರ್ವಶೀಯವನ್ನು ಬರೆದನೆಂದೂ ಧೈರ್ಯವಾಗಿ ಹೇಳಬಹುದು. ಆದರೆ ಕುಮಾರಸಂಭವ ವಿಕ್ರಮೋರ್ವಶೀಯಗಳಲ್ಲಿ ಯಾವುದು ಪೂರ್ವವೆಂದರೆ ದೀರ್ಘವಾಗಿ ಆಲೋಚಿಸಿ ವಿಕ್ರಮೋರ್ವಶೀಯವೇ ಪೂರ್ವವಿದ್ದೀತು ಎಂದು ನಾವು ಹೇಳುತ್ತೇವೆ. ಕಾರಣಗಳಿವು:

ಶಾಕುಂತಲದ ನಾಂದಿಯಲ್ಲಿ ಅಷ್ಟಮೂರ್ತಿಯಾದ ಈಶನನ್ನು ಸ್ತುತಿಸಿರುವ ಕವಿಯು ಮುಂದೆ ವಿಕ್ರಮೋರ್ವಶೀಯದ ನಾಂದಿಯಲ್ಲಿ ಆ ಈಶನ ಸ್ವರೂಪವನ್ನು ಎಲ್ಲಿ ಹೇಳಿದೆ? ಹೇಗೆ ಕಾಣುವುದು? ಅವನು ಲಭ್ಯನೇ ಅಲಭ್ಯನೇ ಎಂಬ ವಿಚಾರಗಳನ್ನು ಕುರಿತು ಹೇಳುತ್ತಾನೆ.

ವೇದಾಂತೇಷು (ಬಹುವಚನವು ಗೌರವಾರ್ಥಕವೋ ಅಥವಾ ವೇದಾಂತವೆಂದರೆ ಉಪನಿಷತ್ತು ಎಂದೋ?) ಯಮಾಹುರೇಕಪುರುಷಂ ವ್ಯಾಪ್ಯಸ್ಥಿತಂ ರೋದಸೀ" ಎಂದು ಆ ಈಶನನ್ನು ಇಂಥಹ ಕಡೆ ಹೇಳಿದೆಯೆಂದೂ "ಅಂತರ್ಯಶ್ಚ ಮುಮುಕ್ಷುಭಿಃ ಮೃಗ್ಯತೇ" ಎಂದು ಅವನನ್ನು ಕಾಣುವ ಮಾರ್ಗವನ್ನೂ, ಅವನು 'ಸ್ಥಿರಭಕ್ತಿಯೋಗ ಸುಲಭಃ' ಎಂದೂ ಹೇಳುತ್ತಾನೆ. ಮಾಲವಿಕಾಗ್ನಿಮಿತ್ರದ ನಾಂದೀ ಶ್ಲೋಕದಲ್ಲಿ ಕಾಣುವ ಪರಸ್ಪರ ವಿರೋಧಿಗಳಾದ ಗುಣಗಳ ಕೀರ್ತನವು ಇಲ್ಲಿಯೂ ಉಂಟು. (ವೇದಾಂತೇಷು ಯಮಾಹುರೇಕಪುರುಷಂ ವ್ಯಾಪ್ಯಸ್ಥಿತಂ ರೋದಸೀ ... ಅಂತರ್ಯಶ್ಚ ಮುಮುಕ್ಷುಭಿರ್ಮೃಗ್ಯತೇ) ಅಲ್ಲಿ "ವ್ಯಪನಯತು ಸ ವಸ್ತಾಮಸೀಂ ವೃತ್ತಿಮೀಶಃ" ಎಂಬ ಪ್ರಾರ್ಥನೆಯಲ್ಲಿ? "ಸ್ಥಾಣುರ್ನಿಶ್ರೇಯಸಾಯಾಸ್ತು ವಃ" ಎಂಬ ಈ ಪ್ರಾರ್ಥನೆ ಎಲ್ಲಿ? ಅರ್ಥವು ಒಂದೇ, ಆದರೆ ಅದನ್ನು ಸೂಚಿಸುವ ರೀತಿಯು ಬೇರೆ. ಇವುಗಳೆರಡನ್ನು ರಘುವಂಶದ 'ವಾಗರ್ಥ ಪ್ರತಿಪತ್ತಯೇ' ಎಂಬುದರೊಡನೆ ಹೋಲಿಸಿ.

ಜೊತೆಗೆ ವಿಕ್ರಮೋರ್ವಶೀಯದ ನಾಂದಿಯ ವಾಕ್ಯವೂ ಇದೆ. ಅಲ್ಲಿ ಸಭೆಯನ್ನು ಪ್ರಾರ್ಥನೆಮಾಡುವ ರೀತಿಯು ವಿಚಿತ್ರವಾದುದು. ಈ ಗ್ರಂಥಗಳನ್ನು ಬರೆಯುವ ವೇಳೆಗೆ ಕಾಳಿದಾಸನು ಕೀರ್ತಿವಂತನಾಗಿದ್ದನು. ಆದರಿಂದ "ಪ್ರಣಯಿಷು (ಅಸ್ಮಾಸು) ದಾಕ್ಷಿಣ್ಯಾದ್ವಾ ಸದ್ವಸ್ತು (ಕಥಾವಸ್ತುನಿ ಚ) ಪುರುಷ (ನಾಯಕಶ್ಚ ಮುಖ್ಯಂ) ಬಹುಮಾನಾತ್ ॥ ಶೃಣುತ ಜನಾ ಅವಧಾನಾತ್ ಕ್ರಿಯಾಮಿಮಾಂ ಕಾಲಿದಾಸಸ್ಯ" ಎಂದು ಮಾತ್ರ ಹೇಳುತ್ತಾನೆ. ರಘುವಂಶದ ಕವಿಯು ಪ್ರಾರ್ಥಿಸುವುದೆಂತು? ಶಾಕುಂತಲದ ಕವಿಯು ಪ್ರಸ್ತಾಪಿಸುವುದೆಂತ? ವಿಕ್ರಮೋರ್ವಶೀಯದ ಕವಿಯು ವಿಜ್ಞಾಪಿಸುವುದೆಂತು ನೋಡಿ!

## ಬಂಗಾಳ ಪ್ರಾಂತ್ಯದ ವಿದ್ಯಾ ಇಲಾಖೆ

ಬಂಗಾಳ ಪ್ರಾಂತ್ಯದ ವಿದ್ಯಾ ಇಲಾಖೆಯ ಪರಿಸ್ಥಿತಿಯು ಇತ್ತೀಚೆಗೆ ಬಹಳವಾಗಿ ಮಾರ್ಪಟ್ಟಂತೆ ಭಾಸವಾಗುತ್ತಿದೆ. ಏತರಿಂದಲೂ ಅನ್ಯಾಯವಾದ ಕೆಲಸಗಾರರನ್ನು ಕೆಲಸದಿಂದ ನಿವೃತ್ತಿಗೊಳಿಸಿದಾರೆ. ಇದರ ಕಾರಣವೇನೆಂದು ಇಷ್ಟರವರೆಗೆ ತಿಳಿದುಬಂದಿಲ್ಲ. ಹೊಸಬರಿಗೆ ಕೆಲಸಕೊಡುವುದೇನೋ ನಿಜ. ಆದರೆ ಒಳ್ಳೇ ಸ್ಥಾನದಲ್ಲಿ ಇದ್ದವರನ್ನು ಅವರು ನಿವೃತ್ತರಾಗುವ ಮುಂಚೆಯೇ ಅವರಿಗೆ ಅರ್ಧಚಂದ್ರಾಕಾರ ಪ್ರಯೋಗಮಾಡಿದರೆ ನ್ಯಾಯಸಂಬದ್ಧವೆ ಇದು? ಮೊನ್ನೆ ತಾನೆ ಢಾಕಾ ಇಂಟರ್ ಮಿಡಿಯಟ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ. ಸೇನರನ್ನು ಕೆಲಸದಿಂದ ನಿವೃತ್ತಿಗೊಳಿಸಿದ ವರ್ತಮಾನವು ಬಂಗಾಳ ಸಂಸ್ಥಾನದಲ್ಲಿ ಗಲಭೆಯನ್ನು ಹುಟ್ಟಿಸಿದೆ. ಶ್ರೀ ಸೇನರು ತನ್ನ ಜೀವಮಾನದಲ್ಲಿ ಎಡೆಬಿಡದೆ ಮಕ್ಕಳ ಅಭಿವೃದ್ಧಿಗಾಗಿ ಹೆಣಗಾಡಿದವರು. ಇವರಿಗೆ [illegible] ವರ್ಷದ ಸರ್ವೀಸು ಇದೆ. ಒಂದು ವರ್ಷದ ವರೆಗೆ ಇವರು ಕಲ್ಕತ್ತಾ ಯೂನಿವರ್ಸಿಟಿಯ ಮೆಂಬರರಾಗಿದ್ದರು. ಇತ್ತೀಚೆಗೆ ಇವರಿಗೆ ಪ್ರಿನ್ಸಿಪಾಲ್ ಪದವಿಯು ಲಭಿಸಿತ್ತು. ಇಂಥಹ ಮಹನೀಯರನ್ನು ಕೆಲಸದಿಂದ ತೆಗೆದುಹಾಕಿ ಅವರ ಬದಲಿಗೆ ಬಲು ಕಡಿಮೆ ಸರ್ವೀಸಿನ ಒಬ್ಬ ಮಹಮ್ಮದೀಯ ಪ್ರೊಫೆಸರರನ್ನು ನೇಮಿಸಿದ ಸರಕಾರದ ಧೋರಣೆಗೆ ಏನೆಂದು ಹೇಳಬೇಕು? ನಿವೃತ್ತರಾಗುವ ಮೊದಲೇ ಅವರನ್ನು ನಿವೃತ್ತಿಗೊಳಿಸಿದ ವಿದ್ಯಾ ಇಲಾಖೆಯ ಧ್ಯೇಯವಾದರೂ ಅದಾವುದಿರಬಹುದು? ಎಷ್ಟು ಪ್ರಯತ್ನಪಟ್ಟರೂ ಜನತೆಗೆ ಅದು ತಿಳಿದಿಲ್ಲ. ವಿದ್ಯಾ ಇಲಾಖೆಯ ಸನ್ಮಾನ್ಯ ಮಂತ್ರಿಗಳು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಇದರ ವಿಷಯ ಒಂದು ಚಿಕ್ಕ ಭಾಷಣವನ್ನು ಕೊಟ್ಟರು. ಜನರನ್ನು ತೃಪ್ತಿಗೊಳಿಸಲು ಕೊಟ್ಟ ಈ ಭಾಷಣವು ಜನರ ಚಿತ್ತವನ್ನು ಇನ್ನೂ ಕೆದರಿತು. ಸಾರ್ವಜನಿಕರ ಹಿತಕ್ಕಾಗಿ ಅವರನ್ನು ತೆಗೆದರೆಂದೂ, ಅವರೇಕೆ ನಿವೃತ್ತಿಗೊಳಿಸಲ್ಪಟ್ಟರೆಂಬುದರ ವಿಷಯ ಅವರಿಗೆ (ಶ್ರೀ ಸೇನರಿಗೆ) ಗುಟ್ಟಾಗಿ ತಿಳಿಸಿದೆ ಎಂದೂ, ಸನ್ಮಾನ್ಯ ಮಂತ್ರಿಗಳ ಭಾಷಣದ ಸಾರಾಂಶ. ಆದರೆ ಶ್ರೀ ಸೇನರು ಜನತೆಗೆ ಮಾಡಿದ ತೊಂದರೆಗಳಾವುವು? ಎಂದು ಪ್ರಶ್ನಿಸಲು ಅದಕ್ಕೆ ಮಂತ್ರಿಗಳ ಉತ್ತರವೇ ಇಲ್ಲ. ಸರಕಾರವು ಇದನ್ನು ಇಷ್ಟಕ್ಕೆ ಬಿಡದೆ, ಬೇಗನೇ ಇದರ ವಿಚಾರ ವಿಮರ್ಶೆಯನ್ನು ಮಾಡಿ ತಮ್ಮ ಕರ್ತವ್ಯವನ್ನು ಪಾಲಿಸುವುದಾಗಿ ಭಾವನೆ. ಕಾರಣ, ಶ್ರೀ ಸೇನರಿಗೆ ಸಿಕ್ಕಿದ ಮರ್ಯಾದೆಯಿಂದಾಗಿ ಈ ಸಂಸ್ಥಾನದ ವಿದ್ಯಾ ಇಲಾಖೆಯ ಅಧಿಕಾರಿಗಳ ಮೈಯಲ್ಲಿ ನಡುಕಹುಟ್ಟಿದೆ.

Amrita Bazaar Pathrika

## ಮಕ್ಕಳೂ ಹೆತ್ತವರೂ

ಬಾಲ್ಯಪ್ರಾಯದಲ್ಲಿ ಮಕ್ಕಳ ಆರೈಕೆಯು ಸರಿಯಾಗಿ ಸಾಗುವುದಿಲ್ಲವೆಂದು ಬಾಯಿಬಿಟ್ಟು ಹೇಳಿದರೆ ಹೆತ್ತವರಿಗೆ ತುಂಬಾ ಅಸಂತೋಷ. ಮಕ್ಕಳ ಆರೈಕೆಯನ್ನು ಮಾಡಲು ನಮಗೆ ಗೊತ್ತಿಲ್ಲವೇ? ನಮ್ಮ ಮಕ್ಕಳು ಹಾಳಾದರೆ ನಮಗಲ್ಲವೇ ಅದರ ತಾಗುಬಾಗುಗಳು? ಎಂದು ಬಿರುಸಾಗಿ ನುಡಿಯುತ್ತಾರೆ. ಡಾಕ್ಟರ್ ಅರ್ನಾಲ್ಡ್ ಎಂಬವರು ಮಕ್ಕಳ ವಿಷಯ ಈ ಅಭಿಪ್ರಾಯಪಡುತ್ತಾರೆ: "ಹೆತ್ತವರ ಮತ್ತು ಮಕ್ಕಳೊಳಗಿನ ಸಂಬಂಧವು ಗಹನವಾದದ್ದಾಗಿರುತ್ತದೆ. ಮಕ್ಕಳ ಮನಸ್ಸನ್ನು ಸ್ಪಷ್ಟವಾಗಿ ತಿಳಿಯುವವರು ಹೆತ್ತವರೆ. ಅವರಿಂದಲೇ ಮಕ್ಕಳ ಗುಣನಡತೆಗಳು ನಿರ್ಧಾರಿತವಾಗತಕ್ಕದ್ದಿವೆ. ಹೆತ್ತವರ ಗುಣನಡತೆಗಳು ಒಳ್ಳೇದಿಲ್ಲವಾದ ಪಕ್ಷದಲ್ಲಿ ಮಕ್ಕಳು ತಾವು ಅವುಗಳನ್ನೇ ಅನುಸರಿಸಿ ತಮ್ಮ ಬಾಳ್ವೆಯನ್ನು ಹಾಳುಗೈಯುತ್ತವೆ. ಎಳೆ ಮಕ್ಕಳಿಗೆ ಪೂರ್ವಾಪರ ವಿಚಾರವಿಲ್ಲ. ಒಳ್ಳೇದಾವುದು ಕೆಟ್ಟದಾವುದು ಎಂಬುದರ ಪರಿವಿಲ್ಲ. ದೊಡ್ಡವರು ಹೆಚ್ಚಾಗಿ ಹೆತ್ತವರು ಮಾಡುವ ಕೃತ್ಯಗಳನ್ನೆ ಅಭ್ಯಾಸಿಸುತ್ತಾರೆ. ಹೆತ್ತವರು ಕೆಲವು ಸಮಯ ಸಲಿಗೆಯೂ ಕೆಲವೊಂದು ವೇಳೆ ಕೋಪಬಂದಾಗಲೂ ಕೆಟ್ಟ ಮಾತುಗಳನ್ನು ಆಡುವುದೂ ಬೈಯ್ಯುವುದೂ ಗದರಿಸುವುದೂ ಅಥವಾ ಪೆಟ್ಟುಕೊಡುವುದೂ ಉಂಟು. ಇದು [illegible] ಮಕ್ಕಳಲ್ಲಿದ್ದನ್ನು [illegible] ಸರಸ [illegible] ಗುಣಗಳು [illegible] ಇಲ್ಲ. ಅವರೂ ಇವೇ ದುರಭ್ಯಾಸಗಳನ್ನು ರೂಢಿಮಾಡಿಕೊಳ್ಳುತ್ತಾರೆ. ಕೆಲವೊಂದು ವೇಳೆ ತಂದೆತಾಯಿಗಳೊಳಗೆ ಜಗಳವಾಗುವುದರ ಪರಿಣಾಮವಾಗಿ ಮಕ್ಕಳಲ್ಲಿ ತಂದೆಯ ಮೇಲೆ ಕೋಪವೂ ತಾಯಿಯ ಮೇಲೆ ಮಮತೆಯೂ ಉಂಟಾಗಿ ಪರಸ್ಪರ ವೈಮನಸ್ಸಿಗೆ ಕಾರಣವಾಗುತ್ತದೆ. ಭವಿಷ್ಯದಲ್ಲಿ ಇದರ ಪರಿಣಾಮವು ಬಹಳ ಭಯಂಕರವಾಗಿ ನಿಲ್ಲುವುದೂ ಉಂಟು.

ಇದಕ್ಕಾಗಿಯೇ ಮಕ್ಕಳೊಡನೆ ಹೆತ್ತವರ ವರ್ತನೆಯು ನಿಯಂತ್ರಣಗೊಳ್ಳಬೇಕೆಂದು ಹೇಳುವುದು. ಹೆತ್ತವರು ಮಕ್ಕಳನ್ನು ಬಹಳ ಅಕ್ಕರೆಯಿಂದ ಸಾಕಬೇಕು. ಮನಸ್ಸಿಗೆ ಇಂಬುಕೊಡುವಂತಹ ವರ್ತನೆ [illegible] ಅದನ್ನು ಮಟ್ಟಿಗೆ ಅವರೊಡನೆ ವರ್ತಿಸಬೇಕು. ಆದರಿಂದಾಗಿ ಅವರ ಒಳ್ಳೆಯ [illegible] ಹಾಳಾಗುವುದಲ್ಲದೆ ಮುಂದಿನ ಅವರ ಬೆಳವಣಿಗೆಗೆ ತೊಡಕಾಗುವುದು. ಚಿಕ್ಕವರೆಂದು ತಾಯಿಂದಿರು ಮಕ್ಕಳ ಕೆಲಸವನ್ನು ತಾವು ಮಾಡದಿರಲಿ. ಮಕ್ಕಳು ತಮ್ಮ ಕೆಲಸವನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ತಾವೇ ಮಾಡಿಕೊಳ್ಳಲು ಸ್ವತಂತ್ರಪ್ರಿಯರಾಗುವುದಕ್ಕೆ ಇದೇ ಪ್ರಥಮ ಸೋಪಾನವಾಗಿದೆ.

Hindu


**KANNADA**

Savings Certificates
can be cashed
even before maturity.

Full Particulars from—

CANARA BANK LTD

OFFICES AT —

| | |
|---|---|
| Bombay—Fort, | Mangalore—City, |
| Bombay—Mandvi, | Mangalore—Bunder, |
| Hubli | Kasaragod, |
| Calicut, | Puttur, |
| Cochin, | Buntwal, |
| Ernakulam, | Karkala, |
| Alleppey, | Coondapoor, |
| Bangalore, | Udipi, |
| Davangere, | & |
| Chickmagalur, | Gangoli |

AVAILABLE IN DENOMINATIONS OF
Rs 10 UPWORDS

TOTAL YIELD RS 4-6-0% P.A.

Paid once half yearly at 3⅛% p. a.
with an additional 1¼% p. a. on maturity
If Left To Accumulate

RS. 100/-
Will Amount to
RS. 122-13-6

Estd 1906

**CANARA BANK**
LIMITED

| Subscribed Capital | | Paid up Capital |
|---|---|---|
| 6,00,000 | | 3,31,000 |
| Reserves | Deposits | Working Capital |
| 4,50,000 | 58,62,000 | 73,49,000 |

# ಲೋಧ್ರ

‘ಸುಪ್ರಸವಕ್ಕಾಗಿ ದಿವ್ಯ ಟಾನಿಕ್’

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

## ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ 8 ಮತ್ತು 1–10–0

**ಕೇಸರಿ ಕುಟೀರಂ**

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

---

# ಜಾಹೀರಾತು

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮುಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

---

ಚಿತ್ರಾಕೃತಿ ಸಮೇತ

**ಋಗ್ವೇದೀ ಸಂಧ್ಯಾವಂದನೆ**

(ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ–ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ತರಿಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

---

ಆವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

# ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
94, ಚಿಕ್ಕಪೇಟೆ, ಬೆಂಗಳೂರು ಸಿಟಿ.

---

ಚಾತುಕುಟ್ಟಿ ವೈದ್ಯರ

**ವಿಶೂಚಿಕಾ ಸಂಹಾರಿ**
**Vishuchika Samhari**
(PILCO)

ಕೋಲೆರಕ್ಕೆ ದಿವ್ಯಾಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ 1–0–0

**ಗುಹ್ಯರೋಗ ನಿವಾರಿಣೀ ತೈಲ**
**Anti-Venerael Oil**
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ವ ಹಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಪುಷ್ಟಿಯ ವೃದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು
8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 2—8—0

ಕೆ ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

---

**ಸೈಂಟಿಫಿಕ್**
**ಸ್ವರ್ಣಾಭರಣಗಳು**

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ



[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ
The Scientific Gold Bangles Co., Ltd.
Head Office 48, Byragimatam Street,
Post Box No. 203, Madras.

---

# ವಜ್ರಗಳು —— ವಜ್ರಗಳು!

ನಮ್ಮಲ್ಲಿ ‘ಆಂಟವರ್ಪ’ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ.




ಏನೊಂದು ಕಲೆಗಳಿಲ್ಲದ ಉತ್ತಮವರ್ಗದ “ಬ್ಲು ಜಾಗ್ಗರ” ವಜ್ರಗಳೂ “ಎಕ್ಸ್‌ಟ್ರಾ ವ್ಹಾಯಿಟ್” ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

---

**‘ಸ್ವದೇಶಾಭಿಮಾನಿ’** ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

---

# ಮೇಹಧ್ವಂಸಿನಿ. (ರಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು ಇದು ಸ್ತ್ರೀಸಂಗವಿಂದ ಮನುಷ್ಯಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ' ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ ‘ಮೇಹಧ್ವಂಸಿನಿ’ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ –ದೊಡ್ಡ ಬಾಟ್ಲಿಗೆ ರೂ 4 ಮಧ್ಯಮ 2–4–0 ಚಿಕ್ಕದು 1–2–0.

ತಯಾರಿಸುವವರು — **ಲಸ್ಕರ್ ಡಿಪೋ, ಚಿಕ್ಕಮಗಳೂರು.**
ಬ್ರಾಂಚ್ — **ಚಿಕ್ಕಪೇಟೆ, ಬೆಂಗಳೂರು.**
ಮುಖ್ಯ ಏಜಂಟರು — **ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು**

# ಪೋಲೀಸ್ ಖಾತೆಯ ಸುಧಾರಣೆ.

**ಒಳ್ಳೇ ವಿದ್ಯಾಯೋಗ್ಯತೆಯುಳ್ಳವರನ್ನೇ ಆಫೀಸರರಾಗಿ ಆರಿಸಬೇಕು—ಪೋಲೀಸರ ತರಬೇತಿ ಅವಧಿ ಹೆಚ್ಚಿಸಬೇಕು—ಪ್ರತಿ ಜಿಲ್ಲೆಗೆ ಪ್ರತ್ಯೇಕ ಪತ್ತೇದಾರಿ ಶಿಬ್ಬಂದಿಯನ್ನೇರ್ಪಡಿಸಬೇಕು—ಪೋಲೀಸರು ಜನತೆಯ ಕುರಿತು ಸದ್ವರ್ತನೆಯಿಂದ ನಡೆದು ಅವರ ಸಹಕಾರ ಪಡೆದು ಕೆಲಸ ಮಾಡುವಂತಾಗಬೇಕು.**

## ಆಧುನಿಕ ಸ್ಥಿತಿಗತಿಗಳ ದೃಷ್ಟಿಯಿಂದ ಪೋಲೀಸ್ ಖಾತೆಯ ಪುನರ್ಘಟನೆಯಾಗಬೇಕು ಪೋಲೀಸರಲ್ಲಿ ಪ್ರಬಲವಾಗಿ ಹಬ್ಬಿರುವ ಲಂಚಖೋರತನವನ್ನು ನಿರ್ಮೂಲಿಸಲು ಕಾರ್ಯ ಕೈಕೊಳ್ಳಬೇಕು.

(ಶ್ರೀ ಎ. ಬಿ. ಶೆಟ್ಟಿ ಕಳೆದ ಮಾರ್ಚ ತಾ ೧೯ರ ಕೌನ್ಸಿಲಿನ ಅಧಿವೇಶನದಲ್ಲಿ ಬಜೆಟ್ ಚರ್ಚೆಯ ಸಂದರ್ಭದಲ್ಲಿ ಪ್ರಾಂತದ ಪೋಲೀಸ್ ಖಾತೆಯ ಆಡಳಿತದ ಕುರಿತು ಮಾಡಿದ ಭಾಷಣ)

ನಾವು ಯಾವ ಸಂಸ್ಥೆಗಳ ಮೇಲಿಂದ ನನ್ನ ಸೂಚನೆಗಳನ್ನು ಮಾಡಬೇಕಾಗಿದೆಯೋ ಅವು ೧೫ ತಿಂಗಳ ಹಿಂದಿನವಾಗಿರುವುವು ಆ ಕುರಿತಾದ ಚರ್ಚೆಗೊಂದು ಆತಂಕ ಈ ವಿಷಯವು, ಕಳೆದ ವರ್ಷದ ಸಂಯುಕ್ತ ಪ್ರಾಂತ ಕೌನ್ಸಿಲಿನ ಬಜೆಟ್ ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಿಸಲ್ಪಟ್ಟಾಗ, ಆಗ ಹಾಜರಿದ್ದ ಪೋಲೀಸ್ ಖಾತೆಯ ಇನ್‌ಸ್ಪೆಕ್ಟರ್ ಜನರಲರು, ಈ ವರ್ಷದ ಬಜೆಟ್ ಚರ್ಚೆಯ ಕಾಲದಲ್ಲಿ ೧೯೩೩ರ ತಕ್ಸೀರುಗಳ ವರದಿಯನ್ನು ಕೌನ್ಸಿಲ್ ಮೆಂಬರರು ಪಡೆವಂತೆ ಮಾಡುವೆನೆಂದು ಆಶ್ವಾಸನೆಯಿತ್ತಿದ್ದರು ಅದೇ ರೀತಿ ನಮ್ಮ ಪ್ರಾಂತದ ಪೋಲೀಸ್ ಖಾತೆಯ ಇನ್‌ಸ್ಪೆಕ್ಟರ್ ಜನರಲರಿಗೂ ಕಳೆದ ವರ್ಷದ ತಕ್ಸೀರುಗಳ ವರದಿಯನ್ನು ಕೊಡಲು ಸಾಧ್ಯವಿಲ್ಲವೋ ಎಂದು ಹೋಮ್ ಮೆಂಬರರು ತಿಳಿಸಬೇಕು ನಮ್ಮ ಮುಂದಿರುವ ಇತ್ತಲಾಗಿನ ವರದಿಯೆಂದರೆ ೧೯೩೨ನೇ ಇಸ್ವಿಯದ್ದು ಅದರಿಂದ ತಕ್ಸೀರುಗಳ ಸಂಖ್ಯೆಯು ಅತ್ಯಂತ ಕಡಿಮೆಯಿರುವುದೆಂದೂ, ಪತ್ತೆಯ ಸಂಖ್ಯೆಯು ಹೆಚ್ಚಿರುವುದೆಂದೂ ತಿಳಿದುಬರುತ್ತದೆ ತಕ್ಸೀರುಗಳು ನಡೆಯದಂತೆ ನೋಡುವುದೇ ಪೋಲೀಸರ ಪ್ರಾಮುಖ್ಯ ಕೆಲಸ ಮತ್ತು ತಕ್ಸೀರುಗಳನ್ನು ತಡೆಗಟ್ಟುವುದರಲ್ಲಿ ದಂಡನೆಯು ಕರಿಣತೆಗಿಂತಲೂ, ಪತ್ತೆಯ ನಿಶ್ಚಿತತೆಯು ಫಲಕಾರಿಯಾಗುತ್ತದೆ ತಕ್ಸೀರುಗಳನ್ನು ಜಯಶೀಲವಾಗಿ ಪತ್ತೆಹಚ್ಚಿ, ತಡೆಗಟ್ಟಬೇಕಾದರೆ, ವಿದ್ಯಾಯೋಗ್ಯತೆಯುಳ್ಳ ಯೋಗ್ಯ ತರಗತಿಯ ಜನರನ್ನು ಪೋಲೀಸ್ ಖಾತೆಗೆ ಸೇರಿಸಿ ಅವರಿಗೆ ತಕ್ಕ ತರಬೇತಿಯನ್ನೀಯಬೇಕು. ಪೋಲೀಸ್ ದಳದ ಕಾರ್ಯಜಾಣ್ಮೆ ಮತ್ತು ಜಯ[illegible] ಉತ್ತಮಗೊಳಿಸಬೇಕಾದರೆ ಅವರನ್ನು ಸೇರಿಸಿಕೊಳ್ಳುವ ಯೋಗ್ಯತೆಯ ಪ್ರಮಾಣವನ್ನು ಹೆಚ್ಚಿಸಬೇಕು ಕನ್‌ಸ್ಟೇಬಲ್ಸ್ ಮತ್ತು ಇನ್‌ಸ್ಪೆಕ್ಟರರಾಗಿ ನೇಮಿಸಲ್ಪಟ್ಟವರ ಯೋಗ್ಯತೆಯು ಕೀಳ್ಮಟ್ಟದಾಗಿದ್ದಿತೆಂದೂ, ಕಾನ್‌ಸ್ಟೆಬ್ಲರಲ್ಲಿಯ ಅಕ್ಷರತೆಯ ಪ್ರಮಾಣವು ಕಡಿಮೆಯಾಗಿರುವುದೆಂದೂ ಆಡಳಿತ ವರದಿಯು ಹೇಳುತ್ತದೆ ವಿದ್ಯಾಯೋಗ್ಯತೆಯ ಪ್ರಮಾಣವನ್ನು ಮತ್ತು ಹೆಚ್ಚಿಸುವ ಆವಶ್ಯಕತೆಯ ಕುರಿತು ಮಾನ್ಯ ಹೋಮ್ ಮೆಂಬರರು ಹೆಚ್ಚಿನ ಲಕ್ಷ್ಯವಿಡಬೇಕು ವಿಶೇಷ ಜಾಗರೂಕತೆಯಿಂದ ಸಬ್ ಇನ್‌ಸ್ಪೆಕ್ಟರರು ಆರಿಸಲ್ಪಡಬೇಕು. ಜನತೆಯ ಜೀವ, ಸ್ವಾತಂತ್ರ್ಯ ಮತ್ತು ಕೆಲವು ಸಂದರ್ಭಗಳಲ್ಲಿ ಪ್ರಾಣ ಕೂಡಾ ರಕ್ಷಿಸುವಂತಹ ಪ್ರಾಮುಖ್ಯ ಕೆಲಸ ಮಾಡುವವರು ಅವರು ಈಗ ಸಬ್ ಇನ್‌ಸ್ಪೆಕ್ಟರರ ನೇಮಕಕ್ಕೆ ಅತ್ಯಂತ ಕಡಿಮೆಯ ವಿದ್ಯಾಯೋಗ್ಯತೆಯು ಕೇವಲ ಎಸ್ ಎಸ್ ಎಲ್ ಸಿ ಆಗಿದೆ ಆ ಕಾಲದಲ್ಲಿ ಉಚ್ಚ ವಿದ್ಯಾಯೋಗ್ಯತೆಯಿರುವವರೇನೂ ಕಡಿಮೆಯಿಲ್ಲ ಆದುದರಿಂದ ಸಾಧ್ಯವಾದ ಮಟ್ಟಿಗೆ ವಿಶ್ವವಿದ್ಯಾಲಯದ ಪದವೀಧರರೇ ಸಬ್ ಇನ್‌ಸ್ಪೆಕ್ಟರರಾಗಿ ನೇಮಿಸಲ್ಪಡುವಂತೆ ಮಾನ್ಯ ಹೋಮ್ ಮೆಂಬರರು ನೋಡಬೇಕೆಂದು ನಾನು ಅಪೇಕ್ಷಿಸುತ್ತೇನೆ ವಕೀಲಿಕೆ ಕಲಿತವರನ್ನು ಕೂಡಾ ಆರಿಸಬೇಕೆಂದೆನ್ನುವೆ ಯಾಕೆಂದರೆ ಕಾನೂನಿಗೂ ಪೋಲೀಸರಿಗೂ ಇರುವ ಸಂಪರ್ಕ ವಿಷಯಗಳು ದಿನೇ ದಿನೇ ಅಧಿಕವಾಗುತ್ತಾ ಬರುತ್ತಿವೆ ಯೋಗ್ಯರಾದವರು ಆರಿಸಲ್ಪಟ್ಟರೆ ಬಹಳ ಪ್ರಾಮುಖ್ಯ ತರಗತಿಯವರಾದ ಈ ನೌಕರರ ಜಾಣ್ಮೆಯು ನಿಜವಾಗಿಯೂ ಅಧಿಕವಾಗದಿರದು

ಕೇವಲ್ಲ ಆರೇ ತಿಂಗಳ ತರಬೇತಿಯನ್ನು ಪೋಲೀಸ್ ಕಾನ್‌ಸ್ಟೇಬ್ಲರಿಗೀಯಲಾಗುತ್ತದೆಂದು ನಾನು ತಿಳಿಯುತ್ತೇನೆ ಪೋಲೀಸ್ ಅಧಿಕಾರಿಗಳ ಪರಿಷತ್ತೊಂದರಲ್ಲಿ, ಪ್ರಾಯಶಃ ೧೯೩೦ರ ಪರಿಷತ್ತಿನಲ್ಲಿ, ಈ ತರಬೇತಿಯು ಸಾಲದೆಂದೂ, ಕಡಿಮೆ ಪಕ್ಷ ೯ ತಿಂಗಳ ತರಬೇತಿಯನ್ನಾದರೂ ಕೊಡಬೇಕೆಂದೂ ಅಭಿಪ್ರಾಯ ಮಾಡಲಾಗಿತ್ತು ಬೊಂಬಾಯಿ ಪ್ರಾಂತದಲ್ಲಿ ಪೋಲೀಸ್ ಕನ್‌ಸ್ಟೇಬ್ಲರ ತರಬೇತಿಗಾಗಿ ನಾಸಿಕದಲ್ಲೊಂದು ಶಾಲೆಯಿರುವುದು ಮತ್ತು ಹೆಡ್‌ಕಾನ್‌ಸ್ಟೇಬ್ಲರ ತರಬೇತಿಗಾಗಿ ಪ್ರತ್ಯೇಕ ಶಾಖೆಯೊಂದು ತೆರೆಯಲ್ಪಟ್ಟಿರುವುದೆಂದು ನಾನು ತಿಳಿಯುತ್ತೇನೆ ಪತ್ತೆ ಕೆಲಸದ ಕುರಿತು ಪೋಲೀಸರಿಗೆ ತರಬೇತಿ ಕೊಡುವುದಕ್ಕೂ ಪ್ರತ್ಯೇಕ ಶಾಲೆಯೊಂದನ್ನು ನಾಸಿಕದಲ್ಲಿ ತೆರೆಯುವ ಆಲೋಚನೆಯು ಅವರಿಗಿರುವುದೆಂದು ಕೂಡಾ ತಿಳಿದುಬಂದಿದೆ ಆಧುನಿಕ ಸ್ಥಿತಿಗತಿಗನುಗುಣವಾಗಿ ಪೋಲೀಸ್ ದಳದ ಪುನರ್ವ್ಯವಸ್ಥೆ ಮಾಡುವ ವಿಚಾರವನ್ನು ಬೊಂಬಾಯಿ ಸರಕಾರವು ಮಾಡುತ್ತಿದೆ ಈಗೇನಾದರೂ ಅಂತಹ ವಿಶೇಷ ತೊಂದರೆ ಕೊಡತಕ್ಕ ಪರಿಸ್ಥಿತಿಯುಲ್ಲದಿರುವುದರಿಂದ ಮಾನ್ಯ ಹೋಮ್ ಮೆಂಬರರು, ಪೋಲೀಸ್ ದಳದ ಪುನರ್ಘಟನೆಯೇ ಮೊದಲಾದ ವಿಧಾಯಕ ಕಾರ್ಯವನ್ನೇನಾದರೂ ಮಾಡಬಹುದು ಪತ್ತೆ ಕೆಲಸದಲ್ಲಿ ಪೋಲೀಸರಿಗೆ ತರಬೇತಿಯನ್ನೀಯಲು ಈ ಪ್ರಾಂತದಲ್ಲೇನಾದರೂ [illegible]ದೆಯೋ ಎಂದು ನಾನು ತಿಳಿಯಬಯಸುತ್ತೇನೆ ತಕ್ಸೀರನ್ನು ಪತ್ತೆಹಚ್ಚುವುದೀಗ ಪ್ರತ್ಯೇಕ ತರಬೇತಿಯು ಮತ್ತು ಅತ್ಯಂತ ದಕ್ಷತೆ [illegible] ಪೋಲೀಸ್ ಕೆಲಸವೆಂದು [illegible]ವಾಗಿದೆ ಗುಪ್ತ ಪೋಲೀಸ್ ಖಾತೆಯು ಬಹಳ ಉಪಯುಕ್ತ ಕೆಲಸಮಾಡಿದೆ, ಮತ್ತು ತಕ್ಸೀರುಗಾರರ ಕೈಬೆರಳುಗಳ ಮುದ್ರೆ ಪಡೆಯುವ ವಿಭಾಗವು ಬಹಳ ಚಟುವಟಿಕೆ ತೋರಿಸಿದೆಯೆಂದು ಆಡಳಿತ ವರದಿಯಲ್ಲಿ ಸೂಚಿಸಲಾಗಿದೆ ಈ ಶಾಖೆಯ ಕೆಲಸವನ್ನು ಮುಂದುವರಿಸಬೇಕು ಅತಿ ನಿಗೂಢ ಹಾಗೂ ಪ್ರಬಲ ತಕ್ಸೀರುಗಳ ಸಂದರ್ಭಗಳಲ್ಲಿ ಪೋಲೀಸರಿಗೆ, ಪತ್ತೇದಾರಿ ಕೆಲಸದಲ್ಲಿ ಪ್ರತ್ಯೇಕ ತರಬೇತಿ ಪಡೆದ ಶಿಬ್ಬಂದಿಯ ಸಹಾಯವು ಬೇಕೆಂಬುದೀಗ ಅಂಗೀಕರಿಸಲ್ಪಟ್ಟಿದೆ ಸಂಯುಕ್ತ ಪ್ರಾಂತ ಮತ್ತು ಬರ್ಮಾದಲ್ಲಿ, ಪ್ರತಿ ಜಿಲ್ಲೆಗೆ ಪತ್ತೇದಾರಿ ಶಿಬ್ಬಂದಿಯೊಂದಿರುವಂತಿದೆ ನಮ್ಮಲ್ಲಿ ತಕ್ಸೀರುಗಳ ಸಮಾಚಾರವನ್ನರಿತು ತಿಳಿಸುವ ಡಿಸ್ಟ್ರಿಕ್ಟ್ ಇಂಟೆಲಿಜೆನ್ಸ್ ಬ್ಯೂರೋ ಎಂಬುದು ಹಲವು ಜಿಲ್ಲೆಗಳಲ್ಲಿರುವುದಾದರೂ, ಮದ್ರಾಸ್, ಮಧುರಾ ಮತ್ತು ತಿನ್ನವೆಲ್ಲಿಯ ಹೊರತು ಮತ್ತೆಲ್ಲಿಯಾದರೂ ಪತ್ತೇದಾರಿ ಖಾತೆಯಿರುವುದಿಲ್ಲ ಪ್ರಬಲ ತಕ್ಸೀರುಗಳನ್ನು ಪತ್ತೆ ಹಚ್ಚುವುದರಲ್ಲಿ ಪೋಲೀಸರಿಗೆ ನೆರವಾಗಲು ಸಾಕಷ್ಟು ಮಂದಿ ಪತ್ತೇದಾರಿಗಳುಳ್ಳ ಶಿಬ್ಬಂದಿಯೊಂದು ನಮಗೆ ಬೇಕು ಬರ್ಮಾದಲ್ಲಿ ಪ್ರತಿ ಜಿಲ್ಲೆಯಲ್ಲಿ ಪತ್ತೇದಾರಿ ಶಿಬ್ಬಂದಿಯಿರುವುದು ಮಾತ್ರವಲ್ಲದೆ, ಪೋಲೀಸ್ ಖಾತೆಯ ಪ್ರತಿ ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲರ ಕೈಕೆಳಗೆ, 'ಫ್ಲ್ಯಾಯಿಂಗ್ ಸ್ಕ್ವೇಡ್' ಎಂಬ ಪ್ರತ್ಯೇಕ ಒಂದು ದಳವಿರುತ್ತದೆ ಆಗತ್ಯಬಿದ್ದರೆ ಜಿಲ್ಲಾ ಪತ್ತೇದಾರಿ ಶಿಬ್ಬಂದಿಗೆ ಕೆಲಸ ಮಾಡುವರೆ ಈ ದಳದವರು ಕಳುಹಿಸಲ್ಪಡುತ್ತಾರೆ ಮೋಟರ್ ಕಾರುಗಳ ಬರೋಣವು ಪ್ರಬಲ ತಕ್ಸೀರುಗಳ ಸಂಖ್ಯೆಯನ್ನು ಬಹಳವಾಗಿ ಹೆಚ್ಚಿಸಿದೆ ಇಂಗ್ಲೆಂಡಿನಲ್ಲಿ ವ್ಯಾರ್‌ಲೆಸ್ ಉಪಕರಣಗಳ ಸಂಯೋಜನೆಯಿದ್ದು, ತಕ್ಸೀರುಗಾರರ ಕುರಿತು ವಿಶಿಷ್ಟ ಅನುಭವವಿರುವ ಬಲು ದಕ್ಷ ಅಧಿಕಾರಿಗಳಿಂದ ನಡೆಸಲ್ಪಡುವ ಅತ್ಯಂತ ವೇಗದ ಮೋಟರ್‌ಕಾರುಗಳ ದಳವಿದೆ ಈ ಪ್ರಾಂತದಲ್ಲಿ ಕೆಲವು ಕೇಂದ್ರಗಳಲ್ಲಾದರೂ ಇಂತಹ ದಳಗಳ ಏರ್ಪಾಡು ಮಾಡುವುದು ಅಗತ್ಯವಲ್ಲವೇ?

ತಕ್ಸೀರುಗಳ ನಿವಾರಣೆ ಮತ್ತು ಪತ್ತೆಯ ಕೆಲಸದಲ್ಲಿ ಪೋಲೀಸರ ಜಯಶೀಲತೆಯು, ವಿಶಿಷ್ಟತರದ ತರಬೇತಿಯ ಅಥವಾ ವೈಜ್ಞಾನಿಕೋಪಕರಣಗಳ ಸಲಕರಣೆಯ ಮೇಲೆಯೇ ಹೊಂದಿರುವುದಿಲ್ಲ ಅಗತ್ಯವಿರುವ ಸಮಾಚಾರ ಮತ್ತು ಸಹಾಯವನ್ನು ಜನರು ಕೊಡದಿದ್ದ ಪಕ್ಷದಲ್ಲಿ ಪೋಲೀಸರು ತಮ್ಮ ಕೆಲಸಮಾಡುವುದು ಬಹಳ ಪ್ರಯಾಸ ಪ್ರಥಮವಾಗಿ ತಕ್ಸೀರಿನ ಸಮಾಚಾರ, ಆ ವೇಳೆ ಆ ಕುರಿತಾದ ವಿವೇಚನೆ, ಅನಂತರ ವಿಜ್ಞಾನ ಸಲಕರಣೆ, ಅಂದರೆ ಪತ್ತೆ ಕೆಲಸವೆಂದು ಲಂಡನಿನ ಸ್ಕಾಟ್‌ಲೆಂಡ್ ಯಾರ್ಡಿನ [illegible] ರಿಂಟೆಂಡೆಂಟರೂ ಪತ್ತೆದಾರಿ ಕಾರ್ಯ ತಜ್ಞರೂ ಆಗಿರುವ ಒಬ್ಬರು ಹೇಳಿದ ಮಾತು ಯುಕ್ತವಾದದ್ದು ಪೋಲೀಸರು ವರದಿಯ ವರ್ಷದಲ್ಲಿ ಹಿಂದಿನ ವರ್ಷಗಳಿಗಿಂತ ಒಳ್ಳೆಯ ಸಹಕಾರವನ್ನು ಜನತೆಯಿಂದ ಪಡೆದಿರುವರೆಂದು ಆಡಳಿತ ವರದಿಯಲ್ಲಿ ಹೇಳಿದೆ ಪೋಲೀಸರೀಗ ಅಸಹಕಾರದ ದಿನಗಳಷ್ಟು ಜನವಿರೋಧವುಳ್ಳವರಾಗಿರುವುದಿಲ್ಲೆಂಬುದು [illegible] ಅವರು ಜನರ ಹೆಚ್ಚಿನ ಆದರ ವಿಶ್ವಾಸಗಳಿಗೆ ಪಾತ್ರರಾಗಿ ತಮ್ಮ ಕೆಲಸವನ್ನು ಸುಗಮವಾಗಿ ನಡೆಸಬೇಕಾದರೆ ಜನತೆಯನ್ನು ಉದಾರಭಾವದಿಂದ ವಿನಯಪರವಾಗಿ ಕಾಣಬೇಕು ಪೋಲೀಸರು ಮುಖ್ಯವಾಗಿ ಕೆಳತರಗತಿಯವರ ದರ್ಪಯುಕ್ತ ಧೋರಣೆಯ ದಬ್ಬಾಳಿಕೆಗಳಾಗಿ ನಡೆಯುವರೆಂದು ಆಗಾಗ್ಗೆ ದೂರಲಾಗಿದೆ ಅವರ ಮರ್ಯಾದೆಗಿಂತ ಅಕ್ಷಮ್ಯವಾದ ಪೋಲೀಸರ ದೋಷವು ಇನ್ನಾವುದೂ ಇಲ್ಲ ಈ ವಿಷಯವನ್ನು ಸಾಕಷ್ಟು ಪೋಲೀಸರ ಮನಗಾಣಿಸಿ ಕೊಡದೇಯಾದರೆ, ಜನತೆಯು ಅವರಿಗೆ ಹೆಚ್ಚಿನ ಸಹಕಾರಕೊಡುವಂತಾಗಿ ಅವರ ಉಪಯುಕ್ತತೆಯೂ, ಕಾರ್ಯದಕ್ಷತೆಯೂ ಅಧಿಕವಾಗದಿರದೆಂಬ ದೃಢವು ನನಗಿರುವುದು

ಮಾನ್ಯ ರೆವಿನ್ಯೂ ಮೆಂಬರರು ಮಾತಾಡುವಾಗ, ತನ್ನ ಖಾತೆಯಲ್ಲಿ ಲಂಚವಂಚನೆಯಿರುವುದಿಲ್ಲವೆಂದು ನಿಶ್ಚಯವಾಗಿ ಹೇಳಿ, ಇತರ ಖಾತೆಗಳ ಕುರಿತು ತಾನಷ್ಟು ದೃಢವುಳ್ಳವನಾಗಿರುವುದಿಲ್ಲೆಂದರು ಪೋಲೀಸ್ ಖಾತೆಯಲ್ಲಿ ಲಂಚವಂಚನೆಯು ಬಹಳವಾಗಿರುವುದೆಂಬುದು ಸರ್ವಸಾಮಾನ್ಯವಾದ ದೂರು ಅಷ್ಟೊಂದು ಉತ್ತಮ ಪೋಲೀಸ್ ಕ್ರಮವಿರುವ ಇಂಗ್ಲೆಂಡಿನಲ್ಲಿ ಕೂಡ, ಪೋಲೀಸ್ ಖಾತೆಯ ಕುರಿತು ವಿಚಾರಿಸಲು ನಿಯುಕ್ತವಾದ ರೋಯಲ್ ಕಮಿಶನಿನವರು, ಪೋಲೀಸರಲ್ಲಿ ಲಂಚಖೋರತನವು ಜನರು ಹೇಳುವಷ್ಟು ಪ್ರಬಲವಾಗಿಲ್ಲದಿದ್ದರೂ, ಕೆಲಮಟ್ಟಿಗಿರುವುದೆಂಬುದನ್ನು ಒಪ್ಪಿರುವರು ಈ ಕುರಿತು ಜನರಾರೂ ಪೋಲೀಸರ ಮೇಲೆ ದೂರು ಹೊರಿಸಲು ಮುಂದೆ ಬರುವುದಿಲ್ಲ, ಯಾಕೆಂದರೆ ಹಾಗೆ ಮಾಡಿದರೆ ಪೋಲೀಸರು ತಮ್ಮ ಮೇಲೆ ಮುನಿಸುಬಿದ್ದು ಅಲ್ಲಸಲ್ಲದ ವ್ಯವಹರಣೆಗಳಲ್ಲಿ ತಮ್ಮನ್ನು ಸೇರಿಸಿ, ಅಥವಾ ಒಂದಲ್ಲೊಂದು ವಿಧದಲಿ ಪೀಡಿಸದಿರರೆಂಬ ಭೀತಿಯು ಅವರಲ್ಲಿ ತುಂಬಾ ಇರುವುದು ಎಲ್ಲಿಯಾದರೂ ಪೋಲೀಸರ ಮೇಲೆ ಫಿರ್ಯಾದಿ ಮಾಡಲ್ಪಟ್ಟರೂ, ಜನರಾರೂ ರುಜುವಾತು ಕೊಡಲು ಮುಂದೆ ಬರಲಾರರು ಅದರಿಂದ ಅವರು ತೊಂದರೆಯನ್ನು ತಮ್ಮ ಮೇಲೆ ಬೇಕೆಂದು ತಂದುಕೊಂಡಂತಾಗುವುದು ಲಂಚಖೋರತನದ ಸಂಗತಿಯೇನಾದರೂ ಪೋಲೀಸ್ ಖಾತೆಯ ಜಿಲ್ಲಾಧಿಕಾರಿಯ ಗಮನಕ್ಕೆ ತರಲ್ಪಟ್ಟರೆ, ಅವರು ಕೂಡಲೆ ಆ ಕುರಿತು ವಿಚಾರಿಸಿ, ಸದ್ರಿ ಆರೋಪಣೆಯಲ್ಲೇನಾದರೂ ನಿಜಾಂಶವಿರುವುದೆಂದು ಕಂಡುಬಂದಲ್ಲಿ, ಅಪರಾಧಿಗಳನ್ನು ಒಡನೆಯೇ ದಂಡಿಸಬೇಕು ಲಂಚಖೋರತನವೇ ಅಭ್ಯಾಸವಾಗಿರುವವರಿಗೆ ಮಾದರಿ ಶಿಕ್ಷೆಯನ್ನೀಯಬೇಕು ಹೀಗೆ ಮಾಡುವುದರಿಂದ ಪೋಲೀಸರ ಮೇಲೆ ಸತ್ಪರಿಣಾಮವಾಗಿ ಲಂಚವಂಚನೆಗಳು ಕಡಿಮೆಯಾಗದಿರಲಾರವು ಹೊಸದಾಗಿ ಅಧಿಕಾರಕ್ಕೆ ಬಂದಿರುವ ಮಾನ್ಯ ಹೋಮ್ ಮೆಂಬರರು, ಹೊಸ ಹುರುಪುಳ್ಳವರಾಗಿ, ಪೋಲೀಸ್ ಖಾತೆಯಲ್ಲಿ ನೆಲೆಗೊಂಡಿರುವ ಲಂಚಖೋರತನವನ್ನು ನಿವಾರಿಸಿ, ಅವರಲ್ಲಿ ಕಾರ್ಯಜಾಣ್ಮೆ ಮತ್ತು ಸದ್ವರ್ತನೆಯನ್ನು ಹೆಚ್ಚುವಂತೆ ಪ್ರಯತ್ನಿಸುವರೆಂದು ನಂಬುತ್ತೇನೆ

---


## ೨೦ ವರ್ಷಗಳ ಅಜೀರ್ಣವು ತತ್‌ಕ್ಷಣ ಗುಣವಾಯಿತು

೨೦ ವರ್ಷಗಳ ನೋವು ಸಹಿತವಾದ ಅಜೀರ್ಣವನ್ನು ಸ್ಥಗಿತಗೊಳಿಸಿ ೨೦ ವರ್ಷಗಳ ವರೆಗೆ ನಿದ್ರಾವಿಹೀನತೆ, ಆಗಾಗ್ಗಿನ ಅಸ್ವಸ್ಥ ಅಳಿಹೊಟ್ಟ.

ಇವುಗಳಿಂದ ಕಷ್ಟಪಟ್ಟೆಂದು ಬಂತಿಸಿರಿ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನಿಂದ ದೊರೆತ ತತ್‌ಕ್ಷಣ ಗುಣಲಾಭವನ್ನು ಬಂತಿಸಿರಿ ಮಿಸೆಸ್ ಎ. [illegible] ಅನುಭವ. ಅವರ ಪತ್ರವು ಇಲ್ಲಿದೆ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ನುಪಯೋಗಿಸಿ ನನಗೆ ದೊರೆತ ಗುಣಲಾಭವೇನೆಂದು ತಿಳಿಸಲಾಶಿಸುತ್ತೇನೆ ಇಪ್ಪತ್ತು ವರ್ಷಗಳ ವರೆಗೆ ನನಗೆ ಅಜೀರ್ಣರೋಗ ಬಾಧೆಯೂ [illegible] ನೋವು ಇದ್ದಿತು ರಾತ್ರಿ [illegible] ನನಗೆ ಗೊತ್ತಿದ್ದಿಲ್ಲ ಬೆಳಗ್ಗಿನ ಕೆಲವು ತಾಸುಗಳಲ್ಲಿ [illegible] ಅಸ್ವಸ್ಥ [illegible] ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿಗೆ ಧನ್ಯವಾದಗಳು ೨೦ ವರ್ಷಗಳಲ್ಲಿ ಮೊದಲು [illegible] ತಿನ್ನದನ್ನು ಆಹಾ ತಿನ್ನಲು ಈಗ ಶಕ್ತಳಿರುವೆನು ಈ ನಾನು [illegible] ನಿಮ್ಮ [illegible]ದಿಂದ ದೊರೆತ ಲಾಭಕ್ಕೆ ಎಷ್ಟು ಋಣಿಯಾದರೂ ಸ್ವಲ್ಪವೇ

ಈ ಸ್ತ್ರೀಯ ಉದಾಹರಣೆಯನ್ನು ಅನುಸರಿಸಿರಿ ಆದರೆ ನಿಮ್ಮ ಕೆಮಿಸ್ಟರಿಂದ ಶುದ್ಧ ಮೆಕ್‌ಲೀನ್ ಬ್ರೇಂಡ್ ಚೂರ್ಣ ಸಿಗುವಂತೆ ಎಚ್ಚರಪಡಿರಿ ಅದರ ಮೇಲೆ ಒಂದು ಕೆಂಪು ಚಿತ್ತೆಯಿದೆ.



ಎಂಬ ಸಹಿಯು ಅಚ್ಚು ಬಿಲ್ಲೆ ಮತ್ತು ಚೀಟಿಗಳ ಮೇಲಿದೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿದ್ದರೆ—

**ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,**

15 ಸಂಕ ರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—

ಇಲ್ಲಿಗೆ ಬರೆಯಿರಿ

**The Uplifting Banking Corporation, Ltd. Bombay.**

ದಿ ಅಪ್‌ಲಿಫ್ಟಿಂಗ್ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಬೊಂಬಾಯಿ,

ಒಂದು ಸಲ ಮಾತ್ರ ರೂ. ೭ ತೆತ್ತಲ್ಲಿ-

1. ಮೆಂಬರನು ಮಿಮಾಯಿಸಲ್ಪಡುವನು.
2. ವರುಷದೊಳಗೆ ಮದುವೆ ಮಾಡಿಕೊಂಡರೆ ಸಹಾಯ ಸಿಗುವುದು.
3. ಲಾಭಾಂಶ ಸಿಗುವ ಅನೇಕ ಸಂದರ್ಭಗಳಿವೆ
4. ವ್ಯಾದೆ ಆಪ್ತರಿಗೆ ಬೋಣಿಸಿದ ಹಣ ಬಡ್ಡಿ ಸಮೇತ ವಾಪಸು ಸಿಗುವುದು.

ಚೀಫ್ ಏಜಂಟ್ ಉಡುಪಿ ಡಾಕ್ಟರ ಕೆ. ಶಿವರಾಯರಿಂದ ಹಣ ಸಲ್ಲಾಸಿ ಪಡೆಯಬಹುದು.

ಸಬ್ ಏಜಂಟರು ಬೇಕು.



**ಸಪಟ ಲೋಶನ್**

ಗಜಕರ್ಣ, ಕುರುಗಜ್ಜಿ, ನಾಯಟ್ಟು, ಇಸಬು ಮುಂತಾದ ಚರ್ಮ ರೋಗಗಳ ಮೇಲೆ ೩೪ ತಾಸಿನಲ್ಲಿ ಗುಣಮಾಡುವ ರಾಮಬಾಣ ಔಷಧಿ. ವಸ್ತ್ರಕ್ಕೆ ಕಲೆ ಬೀಳುವುದಿಲ್ಲ ಬಾಟ್ಲಿ ೧ಕ್ಕೆ ಕಿಮ್ಮತ್ತು ೦-೬-೦ ಟ ಖರ್ಚು ಬೇರೆ, ಪತ್ರವ್ಯವಹಾರ ಇಂಗ್ಲಿಷ ಯಾ ಮರಾಠಿಯಲ್ಲಿ ಮಾಡಬೇಕು

Sapat & Company, (S.M.)
Kalbadevi Road Bombay 2



# ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ

**VIM-O-LA**

**ಅಮೆರಿಕಾದ ಜೀವಸಾರ ವಸ್ತು.**

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಚೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

**"Vimola Depot"**

*Manufactured by*
**American Herbal Products Co.,**
Sole representatives for above medicine.

The National Kanara News Agency,
Sir Phirozsha Metha Road,
Fort Bombay.



**Shiromani Narayanacharya**

*Choukhamba Benares City*

THIS MAN WISHES HE HAD

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವಾ ರೋಗಿನವರೇ, ದಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು ಅದರಿಂದ ಏನು ಫಲ? ಅದನ್ನು ಧರಿಸಿದರೆ ಆಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಷ್ಟೆ ಪ್ರಮಾಣದ ಕಂಠಿಸರ 1ಕ್ಕೆ ಆರೆ 1೦೦ದ ರೂ 25ರ ವರೆಗೆ 1೦8 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆರೆ 3೦೦ದ ರೂ. 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3೦೦ದ ರೂ. 5೦ರ ವರೆಗೆ. ಮತ್ತು 1-4-5-6-7-8 ಮುಖಗಳ ಕಾಳು 1ಕ್ಕೆ ಆರೆ 4೦೦ದ ರೂಪಾಯಿ 10 ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 1೦೦ದ 3೦ರ ವರೆಗೆ 12 13-14 ಮುಖದ ಕಾಳು 1ಕ್ಕೆ ರೂಪಾಯಿ 4೦೦ದ 1೦೦ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷೀ ಅತ್ತಿಕಾಯಿಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕಿಟಿಬಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ ಆಡೆರ್ ಸ್ಪಂದ್ರ ಕಳ್ಳಿಸಿದರೆ 3 ಇನಾಮುಗಳು 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶಿ ಪಿಕ್ಚರ್ ಕಳುಹಿಸಲಾಗುವದು 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ, ಬೆನಾರಸ್ (ಕಾಶೀ)



# ಮುಂಬೈಯುಲ್ಲಿ-

**– ಸ್ವದೇಶಾಭಿಮಾನಿಯು**

ಬಿಡಿಸಂಚಿಕೆಗಳು ಸಿಗುವ ಸ್ಥಳ:

The National Kanara News Agency,
Sir Phirosha Metha Road,
Fort Bombay.

9/8



**೧೦೦ ರೂಪಾಯಿ ಬಹುಮಾನ**

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಕಾಂತಿಯುತವಾದುದು ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ ವ್ಯಾಪಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ ಇನ್ನೊಬ್ಬರಿಗೆ ವಾಪಸರಾಗಿ ಬೇಕಾದ ಆವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ. ಬೆಲೆ ರೂ ೨ ಮಾತ್ರ.

01 F 8 Bengal Mesmarism House
5-7 Panchpota, Bengal (E.B.)



**New Era Technical School.**

Near Market Square, Udipi.

Commercial classes—approved by the Madras Government—New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment Details may be had on application to the Manager.


## ಮಂಗಳೂರಿನ ಪೇಟೆಧಾರಣೆ.

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ರಾಶಿ ಅಕ್ಕಿ | 3— 8 | 4— 0 |
| ಮುಸ್ಕತಿ | 4— 0 | 4— 8 |
| ಗುಡ್ಡು | 3—12 | 4— 2 |
| ಊರ ಅವಲ್ ಚೆಟ್ಟಿಗೆ | 4— 4 | 4— 8 |
| ರಂಗೂನು ಬೆ. ಗೋ. ೧ಕ್ಕೆ | 6— 4 | 6—14 |
| ಎಲ್ಲೂರು ಬೆ ಮು ೧ಕ್ಕೆ | 4— 4 | 4— 8 |
| ಗೋದಿ ಗೋಣಿ ೧ಕ್ಕೆ | 10— 0 | 12— 8 |
| ತೊಗರಿ ಗೋಣಿ ೧ಕ್ಕೆ | 10 —8 | 11— 0 |
| ಹುರುಳಿ ಗೋಣಿ ೧ಕ್ಕೆ | 7— 8 | 7 —10 |
| ಅಲಸಂದೆ ಗೋಣಿ ೧ಕ್ಕೆ | 7 — 8 | 10— 8 |
| ತೊಗರಿಬೇಳೆ ಗೋಣಿ ೧ಕ್ಕೆ | 10— 0 | 17— 0 |
| ಉದ್ದು ಗೋಣಿ ೧ಕ್ಕೆ | 8— 0 | 8— 8 |
| ಹೆಸರು ಗೋಣಿ ೧ಕ್ಕೆ | 9— 4 | 9—12 |
| ಉದ್ದಿನಬೇಳೆ ಖಂಡಿ ೧ಕ್ಕೆ | 40— 8 | 41— 8 |
| ಉಪ್ಪು ಗೋಣಿ ೧ಕ್ಕೆ | 4—12 | 5— 2 |
| ಮೆಣಸು ಖಂಡಿ ೧ಕ್ಕೆ | 48— 0 | 55— 0 |
| ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ | 23— 0 | 23— 8 |
| ಎಳ್ಳಿಂಡಿ ಖಂಡಿ ೧ಕ್ಕೆ | 30 — 0 | 31— 4 |
| ಕೊಬ್ರಿ ಎಣ್ಣೆ ಮುಡಿ ೧ಕ್ಕೆ | 3—15 | 4— 15 |
| ಎಳ್ಳೆಣ್ಣೆ ಮುಡಿ ೧ಕ್ಕೆ | 5— 2 | 6— 0 |
| ಹರಳೆಣ್ಣೆ ಪಟ್ಟಿಗೆ ೧ಕ್ಕೆ | 5— 8 | 5— 12 |
| ದೇಶದ ಸಕ್ಕರೆ ಮು. ೧ಕ್ಕೆ | 3—11 | 3—13 |
| ಮೆಣಸು | 4— 4 | 5— 0 |
| ಸಾಸಿವೆ ಮುಡಿ ೧ಕ್ಕೆ | 5 —12 | 6— 0 |
| ಕಾಳುಮೆಣಸು ಖ. ೧ಕ್ಕೆ | 100— 0 | 110— 0 |
| ಮೆಂತ್ಯೆಬೀಜ ಮುಡಿ೧ಕ್ಕೆ | 30— 0 | 34— 0 |
| ಗೇರುಬೀಜ ಮು. ೧ಕ್ಕೆ | 4— 6 | 4 — 8 |
| ಕಟ್ಟಿಗ ಖಂಡಿ ೧ಕ್ಕೆ | 30— 0 | 39— 8 |
| ಕಾಂಪ್ರುತಗಡು ಮು. ೧ಕ್ಕೆ | 0— 8 | 9— 8 |
| ಕಾಂಪ್ರುಪಾತ್ರೆಗಳು ಮು. ೧ಕ್ಕೆ | 11— 0 | 12— 0 |
| ಚೀನಬೆಳ್ಳಿ ಸೇರು ೧ಕ್ಕೆ | 17— 0 | 18— 0 |
| ಹಿತ್ತಾಳೆ ತಗಡು ಮು. ೧ಕ್ಕೆ | 8— 12 | 9— 0 |
| ಶನಸು ೧ಕ್ಕೆ | 22— 6 | 22— 8 |
| ಹುಣಸೆ ಹುಳಿ ಖಂಡಿ ೧ಕ್ಕೆ | 20— 0 | 25— 8 |
| ನೇಟಿವ್ ಕಾಫಿ ಖಂಡಿ ೧ಕ್ಕೆ | 170— 0 | 180— 0 |
| ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ | 210— 0 | 215— 0 |
| ಮಂಗಳೂರು ಹಂಚು | 24— 0 | 26— 8 |
| ಸಕಲೇಶಪುರ ಹಂಚು | 28— 0 | 38 — 0 |


LOOK SHARP! LOOK AHEAD

# Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B) and also for Accountancy, Secretarial, and Insurance Courses (L A A, A C. R. A, F. C. R. A., F I S A, A. C. I I, etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

**Ladies are also admitted.**

Enrol yourself *NOW* Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

*For further particulars apply to —*

D R Murdeshwar,
Dip Econ, F. R Econ; S (Lond.)
Principal
Ganapathy High School Street,
Mangalore.



# ಬೇಕಾಗಿದ್ದಾರೆ

ನಮ್ಮ ಕಂಪೆನಿಗೆ ಕನ್ನಡನಾಡಿನಲ್ಲಿ ಏಜಂಟರುಗಳು ಬೇಕಾಗಿರುವರು ಅವರಿಗೆ ಕನ್ನಡ ಮತ್ತು ಇಂಗ್ಲಿಷ್‌ಗಳ ಪರಿಚಯವಿರಬೇಕು. ವ್ಯಾಪಾರದಲ್ಲಿ ಸರಿಯಾದ ಅನುಭವವೂ ಇರಬೇಕು. ಮೃದು ನುಡಿಗಳಿಂದ ಜನರ ಮನವೊಲಿಸುವ ವಿಚಕ್ಷಣಶಾಲಿಗಳಾಗಿರಬೇಕು. ತಿಂಗಳಿಗೆ ಕಡಮೆಯಿಲ್ಲದೆ ೧೦೦೦ ರೂಪಾಯಿಗಳ ನಮ್ಮ ಮಾಲನ್ನು ತಪ್ಪದೆ ವಿಕ್ರಯಿಸಬೇಕು ಯಾವಾಗ ಬೇಕಾದರೂ ಒಂದು ಸಾವಿರ ರೂಪಾಯಿಗಳ ಮಾಲನ್ನು ಕೊಡುತ್ತೇವೆ. ಎಷ್ಟು ಖರ್ಚಾಗುತ್ತದೋ ಅಷ್ಟನ್ನು ವಿಕ್ರಯಿಸಿ ಉಳಿದುವುಗಳನ್ನು ಹಿಂದೆ ಕೊಟ್ಟು ದೇಡೆಂಷ್‌ಗಳನ್ನು ಪಡೆಯಬಹುದು. ಏಜಂಟರಾಗುವವರು 1025 ರೂ.ಗಳ ನಗದು ಜಾಮೀನ್ ಕೊಡಬೇಕು. ಆ ಹಣಕ್ಕೆ ನೇಕಡಾ ೯ರಂತೆ ಬಡ್ಡಿಯನ್ನು ಕಂಪೆನಿಯು ಕೊಡುವುದು ಏಜಂಟರಾಗುವವರಿಗೆ ರೂ. 50 ಸಂಬಳ, 20 ರೂಪಾಯಿ ಬತ್ತೆ, ಹೆಚ್ಚು ಮಾಲು ವಿಕ್ರಯಿಸಿದರೆ ತಕ್ಕ ಬೋನಸ್ ಕೊಡಲಾದೀತು. ವ್ಯಾಪಾರವು ತಿಂಗಳಿಗೆ ಸಾವಿರ ರೂಪಾಯಿಗಳಿಗೆ ಕಡಮೆಯಾಗಲೇ ಬಾರದು. ಹೆಚ್ಚಿನ ವಿವರಗಳಿಗೆ

S U. Narayanacharya & Co.,
Embroidery Silk Manufacturers
Benares City

9/8


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಭಾದ್ರಪದ ಬ॥ ೯ ಶನಿವಾರದಿಂದ ಭಾದ್ರಪದ ಬ॥ ೮ ಶುಕ್ರವಾರದ ವರೆಗಿನ ಪಂಚಾಂಗ (೧೮ಘಳಿಗೆಯು ಸಿಂಹ ಸೋಣ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ವಿಶೇಷ |
|---|---|---|---|---|---|---|---|
| 14 | ಶನಿ | ೨ | ೪೦ | ಉ ಭಾದ್ರ | ೧೮ | ೫೯ | * ಪ್ರೋಷ್ಠಪದೀ |
| 15 | ರವಿ | ೩ | ೩೪ | ರೇವತೀ | ೧೫ | ೪೦ | |
| 16 | ಸೋಮ | ೪ | ೨೯ | ಅಶ್ವಿನೀ | ೧೧ | ೪೧ | |
| 17 | *ಕುಜ | ೫ | ೨೫ | ಭರಣೀ | ೯ | ೪೨ | |
| 18 | ಬುಧ | ೬ | ೨೨ | ಕೃತ್ತಿಕಾ | ೬ | ೧ | |
| 19 | ಗುರು | ೭ | ೨೦ | ರೋಹಿಣೀ | ೨ | ೩ | |
| 20 | ಶುಕ್ರ | ೮ | ೨೦ | ಮೃಗಶಿರಾ | ೮ | ೪ | |

# ಸಂಪಾದಕರ ಟಪ್ಪಾಲು ಪೆಟ್ಟಿಗೆ.

## ಪುತ್ತೂಪ್ರಭುಗಳ ರಸ್ತೆ.

ಈ ರಸ್ತೆಯು ಮಂಗಳೂರಿನ ಮಧ್ಯ ಸ್ಥಳದಲ್ಲಿದ್ದು ರಥಬೀದಿಯಲ್ಲಿರುವ ತಾಜಮಹಾಲ್‌ನ ಎದುರಿನಿಂದ ಹಾದುಹೋಗುತ್ತದೆ. ಪುರಜನರು ಈ ರಸ್ತೆಯಿಂದ ಮಹತ್ವಾದ ಪ್ರಯೋಜನವನ್ನು ಪಡುವರು. ಈ ದಾರಿಯಿಂದ ಹಾದುಹೋಗುವವರೆಲ್ಲರೂ ಪ್ರಾಯಶಃ ಇದರ ಪ್ರಯೋಜನವನ್ನು ಹೊಂದದಿರುವುದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಮಲಮೂತ್ರ ವಿಸರ್ಜಿಸಲಿಕ್ಕೆ ಇದು ಬಹಿರಂಗವಾದ ಮ್ಯುನಿಸಿಪಾಲ್ ಶೌಚಾಲಯವೆಂದು ಭಾವಿಸಿರುವ ಜನರು, ತಾವೇನುಮಾಡಿದರೂ ಕೇಳುವವರಿಲ್ಲವೆಂದು ಖಂಡಿತ ತಿಳಿದಿರುತ್ತಾರೆ. ಈ ಮಾರ್ಗದಲ್ಲಿ ವಾಸಿಸಿರುವ ಜನರು ಪಡುವ ಬಾಧೆಯನ್ನು ಮಾತ್ರ ಯಾರೂ ಗಣಿಸರು. ಈ ಕೇರಿಗೆ ಸೊಳ್ಳೆಕೇರಿಯೆಂದೂ ನಾಮವಿಟ್ಟರೆ ಸರಿಯಾಗಿ ತೋರಬಹುದು. ಹಗಲು ಇರುಳು ಎಂಬ ಭೇದವಿಲ್ಲದೆ ಮಲಮೂತ್ರ ವಿಸರ್ಜಿಸುವ ಜನರ ಸಂಖ್ಯೆಯು ದಿನಹೋದಂತೆ ಅಭಿವೃದ್ಧಿಯಾಗುತ್ತದೆ. ಈ ಮಾರ್ಗದ ಚರಂಡಿಗಳು ಸದಾ ದುರ್ವಾಸನೆಯಿಂದ ತುಂಬಿಕೊಂಡಿವೆ. ಮಾತ್ರವಲ್ಲ, ಇತ್ತೀಚೆಗೆ ಇಲ್ಲಿ ವಾಸಮಾಡಲು ಸಹ ತೀರಾ ಕಷ್ಟವಾಗಿರುತ್ತದೆ. ಹೀಗೆ ಬಹಿರಂಗವಾದ ಮಾರ್ಗಗಳಲ್ಲಿ ಮಲಮೂತ್ರ ವಿಸರ್ಜಿಸುವವರನ್ನು ಶಾಸನಾನುಸಾರ ಶಿಕ್ಷಿಸುವುದು ಎಷ್ಟೋ ಕಡೆಗಳಲ್ಲಿ ಜಾರಿಯಲ್ಲಿರುತ್ತದೆ. ಇಂತಹ ಶಾಸನವು ಇಲ್ಲಿ ಜಾರಿಯಲ್ಲಿಲ್ಲದಿರುವುದರಿಂದ ಇಂಥ ಹೇಯವಾದ ಸಂಗತಿಗಳಿಗೆ ಆಸ್ಪದವಾಗುತ್ತದೆ. ಇದರಿಂದಾಗುವ ಅನರ್ಥ ರೋಗ ಬಾಧೆಗಳನ್ನು ಪ್ರತ್ಯೇಕ ಬರೆಯಬೇಕಾಗಿಲ್ಲ. ಸಂಬಂಧಪಟ್ಟ ಇಲಾಖೆಯವರೇ, ಈ ವಿಷಯ ಸ್ವಲ್ಪ ನಿಗಾಕೊಡುವಿರಾ?

K. B. Pai.

## ನಗರ ಸಭೆಯು ಏಕೆ ವಿಚಾರಿಸಲಾರದು?

ಕುದ್ರೋಳಿ ಜೋಯಿಸಳ್ಳಿಯ ಸಮೀಪ ಮಾರ್ಗದಿಂದ ಸುಲ್ತಾನ್‌ಬತ್ತೇರಿಯ ವರೆಗಿನ ರಸ್ತೆಯು ಎರಡು ಪಾರ್ಶ್ವಗಳ ನೆರೆಹೊರೆಯವರು ಅಷ್ಟು ಪಚಾರವನ್ನು ಸಾರ್ವಜನಿಕ ಶೌಚಾಲಯಕ್ಕಾಗಿ ನಿಶ್ಚಯಿಸಲ್ಲವೆಂದು ತಿಳಿಯಬೇಕಾಗಿದೆ. ಬೊಕ್ಕಪಟ್ಣ ಮ್ಯುನಿಸಿಪಲ್ ಆಯ್ ಎಲಿಮೆಂಟರಿ ಸ್ಕೂಲ್ ದಿಸ್ಪೆನ್ಸರಿಯ ಬಳಿಯ ಮಾರ್ಗ ಮತ್ತು ಮ್ಯುನಿಸಿಪಲ್ ಪೇಟೆಯ ... ಹೋಗುವ ಮಾರ್ಗವು ಕೊಳಕಾಗಿದೆ. ... ಬಳಿಯ ಮನೆಗಳವರು ಎಸೆಯುವ ಕಸ, ಹಂದಿಗಳು ತೋಡುಗಳಲ್ಲಿ ಹೊರಳಾಡಿ ಮಾರ್ಗಗಳಲ್ಲಿ ವಿಷ್ಟ ಎಬ್ಬಿಸುವ ದುರ್ವಾಸನೆ ಇವುಗಳನ್ನೆಲ್ಲ ನೋಡಲು ಅಸಹ್ಯವಾಗುತ್ತದೆ. ಬೊಕ್ಕಪಟ್ಣ ಮಿಶನ್ ದೇವಾಲಯದ ಬಳಿಯಿಂದ ದಿಸ್ಪೆನ್ಸರಿ ವರೆಗಿನ ಇಕ್ಕೆಡೆಯ ಮಾರ್ಗವನ್ನು ಸಂಬಂಧಪಟ್ಟ ಕೌನ್ಸಿಲರರಾಗಲೀ ಹೆಲ್ತ್ ಆಫೀಸರರಾಗಲೀ ಸರಿಯಾಗಿ ಪರೀಕ್ಷಿಸಿ ನೋಡಿದರೆ ಎಲ್ಲವೂ ತಿಳಿದುಬರುವುದು. ಮೇಲಾಗಿ, ಅಲ್ಲೇ ಮೀನು ಮಾರಾಟ, ಮೀನಿನ ನೀರನ್ನು ಚೆಲ್ಲುವುದು, ಪೇಟೆಯ ಸೌಂದರ್ಯವನ್ನೇ ಕೆಡಿಸುವ ವಿಷಯದಲ್ಲಿ ಟೊಂಕಕಟ್ಟಿರುವ ನಗರಸಭೆಯವರು ಇಂತಹ ವಿಷಯಗಳಿಗೆಲ್ಲ ಗಮನಕೊಡದಿದ್ದರೆ ಅವರು ಏನುಮಾಡಿದಂತಾಯಿತು? ಕಲ್ಲ ಸುಂದರರಾಯರ ಮನೆಯ ಬಳಿ ಇರುವ ದೊಡ್ಡ ದೊಡ್ಡ ಕಂದರಗಳನ್ನು ಪೇಟೆಯ ಕೊಳಕಿನಿಂದ ತುಂಬಿಸುವ ಏರ್ಪಾಡು ನಡೆದಿರುತ್ತದೆ. ದಿನಂಪ್ರತಿ ಪೇಟೆಯ ಹೊಲಸನ್ನು ಲೋರಿಗಳಲ್ಲಿ ತಂದು ಈ ಕಂದರಗಳನ್ನು ಮುಚ್ಚುತ್ತಿರುವರು. ಅದರ ದುರ್ವಾಸನೆಯು ರಾತ್ರಿಂದಿವ ಎಲ್ಲಿಗೆಲ್ಲ ಹರಡುತ್ತದೆಂದು ನಗರಸಭೆಯ ಒಬ್ಬರಿಗಾದರೂ ವಿದಿತವಿದೆಯೇ? ಇದೇ ಬೋಳೂರೇ ನಾಲ್ಕೆಂಟಾಗಿದೆ. ಮೂಗಿಗೆ ಕೈಹಿಡಿಯದೆ ದಾರಿನಡೆಯುವುದೇ ಕಷ್ಟವಾಗಿದೆ. ಹಾಗೆಮಾಡಲು ನಮ್ಮ ಕೌನ್ಸಿಲು ತಪ್ಪದೇ ಅದ ಕೆಲವು ಕಾರಣಗಳನ್ನು ಕೊಡಬಹುದು. ಆ ಕಾರಣಗಳಿಗುತ್ತರವಾಗಿ ಜನರೂ ತಮ್ಮದೇ ಆದ ಕೆಲವು ಕಾರಣಗಳನ್ನೂ ಕೊಡಬಹುದು. ಬೋಳೂರಿನ ನಿವಾಸಿಕರಿಗೇನು ಗತಿಯಿಲ್ಲವೇ? ಅವರ ಆರೋಗ್ಯದ ಮಟ್ಟಿಗೆ ಯಾರೂ ಗಮನಕೊಡಬಾರದೆಂದಿದೆಯೇ? ಮೊದಲೇ ಅಲ್ಲಿ ವಾಸಿಸುತ್ತಿರುವವರೆಲ್ಲ ಬಡವರು. ನಗರಸಭೆಯು ಎಚ್ಚರವಾಗುವುದೇ?

'ನಿವಾಸಿಕ'.

## ಕೆನಡಾವೂ ಯುದ್ಧವೂ.

ಪ್ರಪಂಚದಲ್ಲಿ ಯುದ್ಧ ಸಂಭವಿಸಿದರೆ ಅದು ಇತರರ ತಪ್ಪು. ಕೆನಡಾ ದೇಶವು ಯಾವ ಬಾಧೆಗೂ ಒಳಗಾಗದಂತೆ ನ್ಯಾಯಪರವಾಗಿಯೂ ಗೌರವಪೂರ್ವಕವಾಗಿಯೂ ನಿರ್ವಹಿಸುವುದು ಸರಕಾರದ ಏಕಮಾತ್ರ ಕರ್ತವ್ಯವಾಗಿದೆ" ಎಂದು ಕೆನಡಾದ ಮಂತ್ರಿವರ್ಯ ಬೆನ್ನೆಟ್‌ರವರು ಒಂದು ಸಭೆಯಲ್ಲಿ ಹೇಳಿದರು. ಅಂತರ್ರಾಷ್ಟ್ರೀಯವಾಗಿರುವ ಭಯಾನಕ ಪರಿಸ್ಥಿತಿಯು ಬೇಗನೆ ಕೆನಡಾಕ್ಕೆ ತಿಳಿದಿದೆ. ಜಗತ್ತಿನ ರಾಜಕೀಯರಂಗದಲ್ಲಿ ಕೆನಡಾವು ಶಾಂತಿಯಿಂದಿರಬೇಕೆಂದೇ ನಮ್ಮ ಹಂಬಲ. ಶಾಂತಿಯು ಯಾವುದನ್ನು ಕೊಡಲಾರದೋ ಅದನ್ನು ಹೊಂದುವ ಆಶೆಯು ಕೆನಡಾಕ್ಕಿಲ್ಲ, ಎಂದು ಅವರ ಹೇಳಿಕೆ. "ಕೆನಡಾವು ಶಾಂತಿಸ್ಥಾಪನೆಗಾಗಿ ಪ್ರಯತ್ನಮಾಡಿದೆ, ಅದನ್ನು ಪಡೆದಿದೆ. ಅದನ್ನು ಅನುಭವಿಸುವುದೇ ಅದರ ಈಗಿನ ಆಶೆ" ಎಂದರು. ನಮಗೆ ಅಧಿಕಾರವಿಲ್ಲದ, ಬಾಹ್ಯಪ್ರಪಂಚದ ಯಾವ ಜಗಳದಲ್ಲೂ ನಾವು ಸಿಲುಕಲಾರೆವು ಎಂದು ಹೇಳಿದರು.

## ಸರ್. ಜೆ. ಬೋವನ್ಜಿ ಜೆಹಾಂಗೀರ್ ರವರು

ಯೆರವಾಡದ ಮೆಂಟಲ್ ಹೋಸ್ಪಿಟಲ್‌ನ ಸಮೀಪದಲ್ಲಿ ಪಾರ್ಸಿ ಸ್ತ್ರೀರೋಗಿಗಳ ಬಗ್ಗೆ ಒಂದು ಪ್ರತ್ಯೇಕ ಆಸ್ಪತ್ರೆಯನ್ನು ಕಟ್ಟಿಸುವುದಕ್ಕಾಗಿ ೫೦,೦೦೦ ರೂಪಾಯಿಗಳನ್ನು ದಾನಮಾಡಿರುವರು.

## ಪಾರ್ಸಿಸ್ತ್ರೀಯರು ಚಲಚ್ಚಿತ್ರಗಳಲ್ಲಿ ಭಾಗವಹಿಸಬಾರದು

ಮುಂಬಯಿಯ ಇಬ್ಬರು ಪಾರ್ಸಿ ಮಹಿಳೆಯರು ಒಂದು ಚಲಚ್ಚಿತ್ರದಲ್ಲಿ ಭಾಗವಹಿಸುವುದರಿಂದಾಗಿ ಅಲ್ಲಿಯ ಪಾರ್ಸಿಗಳು ಮುನಿದುಬಿದ್ದಿರುವರು. ಚಲಚ್ಚಿತ್ರಗಳಲ್ಲಿ ಪಾರ್ಸಿಮಹಿಳೆಯರು ಪಾತ್ರಗಳನ್ನು ವಹಿಸುವುದರಿಂದ ತಮ್ಮ ಸ್ತ್ರೀಯರ ನೀತಿಯೇ ಕೆಡುತ್ತದೆಂದೂ ತಮ್ಮ ಸ್ತ್ರೀಯರು ಭಾಗವಹಿಸಿರುವ ಚಲಚ್ಚಿತ್ರಗಳನ್ನು ಬಹಿಷ್ಕರಿಸಬೇಕೆಂದೂ ಠರಾವುಗಳಾದುವು. ಪಾರ್ಸಿ ಸ್ತ್ರೀಯರು ಇರುವ ಚಲಚ್ಚಿತ್ರಗಳನ್ನು ಪ್ರದರ್ಶಿಸಬಾರದೆಂದೂ ಅದನ್ನುಲ್ಲಂಘಿಸಿದರೆ ಅನರ್ಥಗಳುಂಟಾಗುವುವೆಂದೂ ಠರಾವುಗಳಾದುವು. ಈ ಚಿತ್ರತಯಾರಿಸುವ ಕಂಪೆನಿಯ ಡೈರೆಕ್ಟರರಲ್ಲೊಬ್ಬರಾದ ಶ್ರೀ ಎಫ್. ಇ. ದಿನ್ಶಾರೆಂಬವರು ತನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸಿ ಸ್ತ್ರೀಯರು ಚಿತ್ರಗಳಲ್ಲಿ ಭಾಗವಹಿಸುವುದರಿಂದಾಗಲೀ, ಅಂತಹ ಚಿತ್ರಗಳನ್ನು ನೋಡುವುದರಿಂದಾಗಲೀ ಯಾವ ಕೆಡುಕೂ ಇಲ್ಲವೆಂದು ಹೇಳಿದರು.

## ಮಂತ್ರಗಾರನು ಕಸಗುಡಿಸುವವಳ ಮೇಲೆ ತನ್ನ ಪ್ರತಾಪವನ್ನು ಬೀರಿದನು.

ಬೆನಯಾಪುಕರಿನಲ್ಲಿ ನಡೆದ ಕಥನವಿದು. ಅಲ್ಲಿಯ ಕಸಗುಡಿಸುವವಳೊಬ್ಬಳಿಗೆ ಹಲವು ದಿನಗಳಿಂದ ಅಸೌಖ್ಯವಿತ್ತು. ಅವಳ ಮನೆಯವರು, ಬಹುಶಃ ಅವಳಿಗೆ ಭೂತದ ಉಪದ್ರವವಾಗಿರಬೇಕೆಂದು ಅವಳ ಗಂಡನಿಗೆ ಹೇಳಲು, ಅವನು ಕಿದ್ದರ್‌ಪುರ ಎಂಬಲ್ಲಿಯ ಪ್ರಸಿದ್ಧ ಮಂತ್ರಗಾರನಾದ ಓಝಾ ಎಂಬವನನ್ನು ಕರೆಯಕಳುಹಿಸಿದನು. ಓಝನು ಬಂದು ಅವಳ ಕೋಣೆಗೆ ಹೋಗಿ ಮಂತ್ರೋಚ್ಚಾರಣೆಗೆ ಪ್ರಾರಂಭಿಸಿದನು. ಕೆಲವು ನಿಮಿಷಗಳ ತರುವಾಯ ಭೂತಕ್ಕೆ ಕಳ್ಳು ಬೇಕಾಗಿರುವುದೆಂದು ಹೇಳಿ ಅವಳ ಗಂಡನಿಂದ ಕಳ್ಳನ್ನು ತರಿಸಿ, ಸ್ವಲ್ಪ ಕಳ್ಳನ್ನು ಅವಳಿಗೆ ಕುಡಿಸಿ ಉಳಿದುದನ್ನು ತಾನೂ ಕುಡಿದನು. ಇದಾದ ನಂತರ ಮಂತ್ರಗಾರನು ಅವಳ ಗಂಡನಿಗೆ ಸ್ವಲ್ಪ ಕಾಫಿಯನ್ನು ಮಾಡಿತರಲು ಹೇಳಿದನು. ಗಂಡನು ಕೋಣೆಯಿಂದ ಹೊರಗೆ ಹೋದ ಕೂಡಲೇ ಕುಡಿತದಿಂದ ಮತ್ತನಾದ ಮಂತ್ರಗಾರನು ಅವಳನ್ನು ಬಲಾತ್ಕಾರಪೂರ್ವಕವಾಗಿ ಆಲಿಂಗಿಸಿ ಅವಳ ಸತೀತ್ವವನ್ನು ನಷ್ಟಗೊಳಿಸಿದನು. ಗಂಡನು ಬಂದಕೂಡಲೇ ಅವಳು ನಡೆದುದನ್ನು ಅವನಿಗೆ ತಿಳಿಸಿದಳು. ಗಂಡನು ಕೋಪಗೊಂಡು ಮಂತ್ರಗಾರನಿಗೆ ಹೊಡೆದನು. ಇಬ್ಬರಿಗೂ ಮುಷ್ಟಾಮುಷ್ಟಿ ಜಗಳವಾಯಿತು. ನಡುವಿನಲ್ಲಿ ಮಂತ್ರಗಾರನು ತಪ್ಪಿಸಿಕೊಂಡು ಓಡಿದನು. ಅದಕ್ಕೆ ಮಾರ್ಗಮಧ್ಯದಲ್ಲಿ ಪೋಲೀಸರು ಅವನ ಹಾವಭಾವಗಳನ್ನು ಕಂಡು, ಮಿತಿಮೀರಿ ಮದ್ಯಪಾನಮಾಡಿರುವನೆಂದು ಅವನನ್ನು ಹಿಡಿದು ಸೆರೆಮನೆಗೊಯ್ದರು.

ಮರುದಿನ ಬೆಳಗ್ಗೆ ಕಸಗುಡಿಸುವವನು ಓಝನ ಮೇಲೆ ಫಿರ್ಯಾದಿಯನ್ನು ಕೊಡಲು ಪೋಲೀಸ್ ಸ್ಟೇಷನಿಗೆ ಹೋದಾಗ, ಅವನನ್ನು ಅಲ್ಲಿ ಕಂಡು, ಪೋಲೀಸರಿಗೆ, ಅವನು ಮಾಡಿದ ಕೆಲಸದ ವಿಷಯವಾಗಿ ಹೇಳಿದನು. ಓಝನ ಮೇಲೆ ಈಗ ವ್ಯಾಜ್ಯ ನಡೆಯುತ್ತದೆ.

## ಮಾಯವಾದ ಯೂನಿಯನ್ ಪ್ರೆಸಿಡೆಂಟರು ಸಿಕ್ಕಿದರು
### ದೇಹದಲ್ಲಿ ಜೀವಮಾತ್ರವಿರಲಿಲ್ಲ

ಕಾಂಡಿ ತಾ. ೨೮

ಅಲುಗ್ರಾಮದ ಯೂನಿಯನ್ ಬೋರ್ಡ್ ಪ್ರೆಸಿಡೆಂಟರಾದ ವಿ. ರಾಧಾಕೃಷ್ಣಮೂರ್ತಿ ರೆಂಬವರು ಹಲವು ದಿನಗಳಿಂದ ಕಾಣೆಯಾಗಿದ್ದರು. ಕಡೆಗೆ ನಿನ್ನೆ ಅವರ ಶವವು ಕೃಷ್ಣಾ ನದಿಯಲ್ಲಿ ಸಿಕ್ಕಿತು. ಅವರನ್ನು ದೋಣಿಯೊಂದರಲ್ಲಿ ಹಾಕಿ ನೀರಲ್ಲಿ ತೇಲಬಿಟ್ಟಿದ್ದರು. ಅವರ ಬಟ್ಟೆ ವಸ್ತ್ರಗಳು ಹಾಗೆಯೇ ಇವೆ. ಮುದ್ರೆಯು ಸಹ ಇದ್ದಕ್ಕಿದ್ದ ಹಾಗೆಯೇ ಇದೆ. ಕಿಸೆಯಲ್ಲಿರುವ ಬೀಗದ ಕೈಗಳು ಕಿಸೆಯೊಳಗೇ ಬಿದ್ದುಕೊಂಡಿವೆ. ವಿಚಿತ್ರವ್ಯವಹಾರವಿದು. ಪೋಲೀಸರು ಶವವನ್ನು ಪರೀಕ್ಷಿಸಲು ಬೆಜವಾಡದ ಆಸ್ಪತ್ರೆಗೆ ಕೊಂಡೊಯ್ದರು. ಸಾಯಂಕಾಲವಾದ್ದರಿಂದ ಪರೀಕ್ಷೆಯನ್ನು ಮಾಡಲಾಗಲಿಲ್ಲ. ಅಂತಯೇ ಅದನ್ನು ಅಲ್ಲಿಟ್ಟರು. ಪೋಲೀಸ ಕಾವಲುಗಾರರು ರಾತ್ರಿ ಪಹರೆಯನ್ನು ನಡೆಸುತ್ತಿದ್ದರು. ಹಲವರು ಅವರಿಗೆ ಇಲ್ಲಿ ಪ್ರೇತಗಳ ಸಂಚಾರವಿದೆ ಎಂದು ಹೆದರಿಸಿದರು. ಆದರೂ ಕಾರ್ಯದಕ್ಷರಾದ ಪೋಲೀಸರು ಅಲ್ಲಿಂದ ಅಲುಗಾಡಲಿಲ್ಲ. ಕಡೆಗೆ ರಾತ್ರಿ ಕಳ್ಳರ ಗುಂಪೊಂದು ಬಿತ್ತು. ಆದರೂ ಪೋಲೀಸರು ಅಲ್ಲಿಂದ ಕದಲಲಿಲ್ಲ. ಇದೆಲ್ಲವೂ ಶವವನ್ನು ಕದ್ದೊಯ್ಯಲು ಮಾಡಿದ ಕುತಂತ್ರವೆಂದು ಮತ್ತೆ ತಿಳಿದುಬಂತು. ಆದರೆ ಪೋಲೀಸರು ತೋರಿಸಿದ ಸಾಹಸದಿಂದಾಗಿ ಅದು ಸಾಧ್ಯವಾಗಲಿಲ್ಲ.

## ಸಾಧುವೆಂದು, ರಕ್ಷಿಸಿದ ಮಾರವಾಡಿ.

ಮಿರ್ಜಾಪುರ, ಸಪ್ಟೆಂಬರ ೩.

ಸಾಧುವಿನ ವೇಷವನ್ನು ಧರಿಸಿದ್ದ ಮಾರವಾಡಿಯೊಬ್ಬನು, ಬಾಂಧ್ವಾರ್ ದೇಶದ ರಾಜನ ಬಳಿಗೆ ಹೋಗಿ ತನಗೆ ವೈದ್ಯಕಲೆಯಲ್ಲಿ ಒಳ್ಳೇ ನಿಪುಣತೆಯುದೆಯೆಂದೂ ತನ್ನ ಕಣ್ಣಿನಲ್ಲಿ ಒಂದು ನಮೂನೆಯ ಆಕರ್ಷಕ ಶಕ್ತಿ ಇರುವುದೆಂದೂ, ಔಷಧಗಳಿಂದ ತಾನು ಯಾರ ರೋಗಗಳನ್ನೂ ಗುಣಪಡಿಸಬಲ್ಲೆನೆಂದೂ ಹೇಳಿದನು. ಸಾಧುಗಳಲ್ಲಿ ಭಕ್ತಿವಿಶ್ವಾಸವಿದ್ದ ರಾಜನು ತನ್ನ ದೇಹಪ್ರಕೃತಿಯು ಒಳ್ಳೇದಿಲ್ಲವಾದ್ದರಿಂದ ತನಗೆ ಔಷಧವನ್ನು ಕೊಡುವಂತೆ ಹೇಳಿದನು. ಅಂತೆಯೇ ಆ ಮಾರವಾಡಿಯು ಸ್ವಲ್ಪ ಮದ್ದನ್ನು ಕೊಡಲು, ಅದರ ಸೇವನೆಯಿಂದಾಗಿ ರಾಜನಿಗೆ ಸ್ವಲ್ಪ ಗುಣಮುಖವಾಗಲು ಅವನಲ್ಲಿ ರಾಜನಿಗೆ ತುಂಬಾ ವಿಶ್ವಾಸವಾಯಿತು. ಇದನ್ನು ತಿಳಿದ ಮಾರವಾಡಿಯು, ತಾನು ಹೇಳಿದಂತೆ ವರ್ತಿಸಿದರೆ ನಿಮ್ಮ ದೇಹಸ್ಥಿತಿಯು ಸಂಪೂರ್ಣವಾಗಿ ನೆಟ್ಟಗಾಗುವುದರಲ್ಲಿ ಸಂಶಯವಿಲ್ಲವೆಂದೂ, ಒಂದು ಆನೆಯನ್ನು ಕ್ರಯಕ್ಕೆ ಪಡೆಕೊಂಡರೆ ತನ್ನ ರೋಗನಿವಾರಣೆಯನ್ನು ಸಂಪೂರ್ಣವಾಗಿ ಮಾಡುವೆನೆಂದೂ ಭರವಸೆಯಿತ್ತನು. ಅಷ್ಟೇಯಲ್ಲದೆ, ಆನೆಯನ್ನು ಕೊಂಡುಕೊಳ್ಳಲು, ರಾಜನಿಂದ ೩೦೦೦ ರೂಪಾಯಿಗಳನ್ನು ಪಡೆಕೊಂಡು ಮಾರ್ಕೆಟಿಗೆ ಹೋದನು. ಆನೆಯನ್ನು ತರುವನೆಂದು ರಾಜನು ಕಾದುಕೊಂಡಿರಲು ಸಾಧುವಿನ ಸುಳಿವೇ ಇಲ್ಲ. ರಾಜನು ಸಂಶಯಪಟ್ಟು ತನ್ನ ದೂತರನ್ನು ಕಳುಹಿಸಿದನು. ಆದರೆ ಸಾಧುವಿನ ಪತ್ತೆಯೇ ಇಲ್ಲ. ಕೊನೆಗೆ ಒಂದು ತಿಂಗಳ ನಂತರ ರಾಜನ ದೂತನೊಬ್ಬನು ಅವನ ಪತ್ತೆಯನ್ನು ಹಚ್ಚಿದನು. ಈ ಮಾರ್ವಾಡಿಯು ಹಳ್ಳಿಯೊಂದರಲ್ಲಿ ತನ್ನ ಕುಟುಂಬದೊಡನೆ ಸುಖವಾಗಿ ಜೀವಿಸುತ್ತಿದ್ದನು. ಆನೆಯೊಂದು ಮನೆಯ ಬಳಿಯ ಛಾಯೆಯಲ್ಲಿ ಕಟ್ಟಿಹಾಕಲ್ಪಟ್ಟಿತ್ತು. ತನ್ನ ಗುಟ್ಟು ರಟ್ಟಾಯಿತೆಂದು ತಿಳಿದೊಡನೆ ಮಾರ್ವಾಡಿಯು ಕ್ಷಮಾಪಣೆಯನ್ನು ಬೇಡಿದನು. ಮತ್ತೆ ೧೬೦೦ ರೂಪಾಯಿಗಳಿಗೆ ಪಡೆಕೊಂಡ ಆನೆಯನ್ನು ರಾಜನಿಗೆ ಒಪ್ಪಿಸುವೆನೆಂದನು. ಆದರೆ, ಸರಕಾರದವರು ಇದಕ್ಕೆ ಒಪ್ಪದೆ ರಾಜನನ್ನು ಮೋಸಗೊಳಿಸಿದುದರ ಪ್ರತಿಫಲವಾಗಿ ೧೬ ತಿಂಗಳ ಕಠಿಣ ಶಿಕ್ಷೆಯನ್ನೂ ೧೦೦೦ ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಿದರು.


ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಲ ಇವರು

ತಾ. 14—9 - 35ನೇ ದಿನ ರಾತ್ರೆ 9-30ಕ್ಕೆ ಸರಿಯಾಗಿ

ಹಿಂದುಸ್ಥಾನ ಸಿನೆಮಾಥಿಯೇಟರಿನಲ್ಲಿ

# ಭಗವಾನ್ ಯೇಸುಕ್ರಿಸ್ತ

ಎಂಬ ಧಾರ್ಮಿಕವೂ ಭಕ್ತಿರಸ ಪ್ರಧಾನವೂ ಆದ ನಾಟಕವನ್ನು ಅಭಿನಯಿಸುವರು.



ಸೀನರಿ ಡ್ರೆಸ್ ಇತ್ಯಾದಿಗಳನ್ನು ಹೊಸತಾಗಿ ತಯಾರಿಸುವುದಕ್ಕಾಗಿ ವಿಶೇಷ ಖರ್ಚು ತಗಲಿರುವ ಪ್ರಯುಕ್ತ ಈ ನಾಟಕಕ್ಕೆ ಈ ಕೆಳಗಿನ ದರಗಳನ್ನು ಇಡಲಾಗಿದೆ.

ರೂ. 3/, 2/, 1/8, 1/, ಆಣೆ 12, 8, ಮತ್ತು 4

# ೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ.

## ಬೊಂಬಾಯಿ ಪಟ್ಟಣದಲ್ಲಿ.

### ೩ನೆಯ ಸಮಾಚಾರ ಪತ್ರಿಕೆ.

೧ನೆಯ ಸಮಾಚಾರ ಪತ್ರಿಕೆಯಲ್ಲಿ ತಿಳಿಸಿದಂತೆ ಬೊಂಬಾಯಿ ಪಟ್ಟಣದಲ್ಲಿ ನಡೆಯಲು ನಿಶ್ಚಯವಾಗಿರುವ ೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬೇಕಾದ ಸನ್ನಾಹಗಳು ತ್ವರಿತತರವಾಗಿ ಜರಗುತ್ತಿವೆಯೆಂದು ಆ ಪಟ್ಟಣದಿಂದ ವಾರ ವಾರವೂ ವರ್ತಮಾನ ಬರುತ್ತಿದೆ.

### ಸ್ವಾಗತ ಮಂಡಲಿ.

ಈ ಬಗ್ಗೆ ಅಲ್ಲಿ ಏರ್ಪಟ್ಟಿರುವ ಸ್ವಾಗತ ಮಂಡಲಿ ಅನೇಕ ಮಂದಿ ಪ್ರಮುಖ ಕನ್ನಡಿಗರಿಂದ ಕೂಡಿರುತ್ತದೆ. ಬೊಂಬಾಯಿ ಸರಕಾರದ ವಿದ್ಯಾ ಶಾಖೆಯ ಸಚಿವರಾದ ಘನತೆವೆತ್ತ ದಿವಾನ್ ಬಹದ್ದೂರ್ ಎಸ್ ಟಿ. ಕಂಬಳಿ, ಬಿ. ಎ, ಎಲ್‌ಎಲ್ ಬಿ. ಅವರು ಸ್ವಾಗತ ಮಂಡಲಿಯ ಅಧ್ಯಕ್ಷರಾಗಿರುತ್ತಾರೆ ಸಮ್ಮೇಳನದ ಏರ್ಪಾಟುಗಳಿಗಾಗಿ ಅನೇಕ ಮಂದಿ ಉತ್ಸಾಹಿಗಳು ಬಹು ವಿಚಕ್ಷಣೆಯಿಂದ ಶ್ರಮಪಡುತ್ತಿದ್ದಾರೆ

### ತಾರೀಕುಗಳು

೧೯೩೫ನೆಯ ಡಿಸೆಂಬರ್ ೨೬, ೨೭, ೨೮ನೆಯ ತಾರೀಕುಗಳು ಎಂದರೆ ಬರುವ ಪುಷ್ಯ ಶುದ್ಧ ಪಾಡ್ಯಮಿ ಗುರುವಾರದಿಂದ ತದಿಗೆ ಶನಿವಾರ ವರೆಗೆ ಮೂರು ದಿವಸಗಳು--ಸಮ್ಮೇಳನ ನಡೆಯತಕ್ಕದ್ದೆಂದು ಗೊತ್ತಾಗಿದೆ

### ಬಿಡಾರ-ಸಂಚಾರ

ಸಮ್ಮೇಳನಕ್ಕಾಗಿ ಬೊಂಬಾಯಿಗೆ ದಯಮಾಡಿಸುವ ನಾನಾ ಪ್ರಾಂತಗಳ ಪ್ರತಿನಿಧಿಗಳು ಎಲ್ಲರೂ ಇಳಿದುಕೊಳ್ಳಲು ಒಂದೇ ಕಟ್ಟಡವನ್ನು, ಅದು ಸಾಧ್ಯವಾಗದೆ ಹೋದರೆ ಒಂದೇ ಪ್ರದೇಶದಲ್ಲಿ ಹತ್ತಿರ ಹತ್ತಿರವಿರುವ ಎರಡು ಮೂರು ಕಟ್ಟಡಗಳನ್ನು ಗೊತ್ತುಮಾಡುವುದಾಗಿ ಸ್ವಾಗತ ಮಂಡಲಿಯವರು ಭರವಸೆಕೊಟ್ಟಿದ್ದಾರೆ

ಬೊಂಬಾಯಿ ಪಟ್ಟಣದಲ್ಲಿ ರೈಲ್ವೆ ಸ್ಟೇಶನಿನಿಂದ ಬಿಡಾರಕ್ಕೂ ಬಿಡಾರದಿಂದ ಸಮ್ಮೇಳನ ಮಂಟಪಕ್ಕೂ ಹೋಗಿಬರಲು ವಾಹನಾನುಕೂಲವನ್ನೂ ಏರ್ಪಡಿಸುವಂತೆ ಸ್ವಾಗತ ಮಂಡಲಿಯವರು ಭರವಸೆಕೊಟ್ಟಿದ್ದಾರೆ

ಸಮ್ಮೇಳನಕ್ಕೆ ಬೇಕಾದ ಇತರ ಎಲ್ಲ ಅನುಕೂಲಗಳನ್ನೂ ಒದಗಿಸಲು ಸ್ವಾಗತ ಮಂಡಲಿಯವರು ಧಾರಾಳವಾಗಿ ಹಣವನ್ನು ವೆಚ್ಚಮಾಡಲು ಅನುಕೂಲಪಡಿಸಿಕೊಳ್ಳುತ್ತಾರೆ

### ಪ್ರತಿನಿಧಿತ್ವ (Delegateship)

ಸಮ್ಮೇಳನದ ಬಗ್ಗೆ ಯಾರು ಪ್ರತಿನಿಧಿಗಳಾಗಬಹುದೆಂಬುದನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯೂ ಬೊಂಬಾಯಿ ಸ್ವಾಗತ ಮಂಡಲಿಯೂ ಒಪ್ಪಿಕೆಯಿಂದ ಈ ಕೆಳಗೆ ಕಾಣಿಸಿರುವಂತೆ ತೀರ್ಮಾನಿಸಿರುತ್ತವೆ:-

'ಕರ್ಣಾಟಕ ಸಾಹಿತ್ಯ ಸಮ್ಮೇಳನದ ಉದ್ದೇಶಗಳನ್ನು ಅಂಗೀಕರಿಸಿ, ನಿಯಮಾನುಸಾರವಾಗಿ ಸಮ್ಮೇಳನದ ಕಾರ್ಯಗಳಲ್ಲಿ ಭಾಗವಹಿಸಲು ಇಷ್ಟಪಡುವವರನ್ನು ಸ್ವಾಗತ ಮಂಡಲಿಯು ಸಮ್ಮೇಳನದ ಬಗ್ಗೆ ಪ್ರತಿನಿಧಿಗಳೆಂದು ಅಂಗೀಕರಿಸಬಹುದು. ಇಂಥ ಪ್ರತಿನಿಧಿಗಳು ಸ್ವಾಗತ ಮಂಡಲಿ ವಿಧಿಸಿರುವ ರುಸುಮನ್ನು ಕೊಟ್ಟು ಅದರ ಕಟ್ಟುಪಾಡಿಗೆ ಒಳಪಟ್ಟಿರತಕ್ಕದ್ದು ಇಂಥ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಷಣಮಾಡುವುದು, ಪ್ರಬಂಧಗಳನ್ನೋದುವುದು, ನಿರ್ಣಯಗಳನ್ನು ಸೂಚಿಸುವುದು, ಮೊದಲಾದ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಲು ಅರ್ಹರಾಗಿರುವರು

ಆದರೆ ಹೀಗೆ ಸಮ್ಮೇಳನದ ಪ್ರತಿನಿಧಿಯಾದ ಮಾತ್ರದಿಂದಲೇ ಯಾರೂ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರಂತೆ ಭಾವಿಸಲ್ಪಡಲಾರರು

ಈ ಮೇಲಿನ ನಿಯಮವು ಪರಿಷತ್ತಿನ ಅಂಗಸಂಸ್ಥೆಗಳ ಪ್ರತಿನಿಧಿಗಳಾಗಿ ಬರುವವರಿಗೂ ಕೂಡ ಅನ್ವಯಿಸುವುದು '

### ಪ್ರಬಂಧಗಳು.

ಸಮ್ಮೇಳನಕ್ಕೆ ಶ್ರುತಪಡಿಸಲು ಪದ್ಯ, ಕಥೆ, ಉಪನ್ಯಾಸ ವಿಮರ್ಶೆ ಮೊದಲಾದ ಪ್ರಬಂಧಗಳನ್ನು ಕಳುಹಿಸಬೇಕೆಂದಿರುವವರು ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಸೇರಿರಬೇಕೆಂಬುದು ಮೇಲಿನ ತೀರ್ಮಾನದಿಂದ ಸ್ಪಷ್ಟವಾಗಿದೆ

೧ನೆಯ ಸಮಾಚಾರ ಪತ್ರಿಕೆಯಲ್ಲಿ ತಿಳಿಸಿರುವ ಮೇರೆಗೆ, ಬೇರೆ ಬೇರೆ ವಿಷಯಗಳನ್ನು ಕುರಿತ ಪ್ರಬಂಧಗಳಿಗಾಗಿ ಅವುಗಳ ಸ್ವಭಾವವನ್ನನುಸರಿಸಿ ಬೇರೆ ಬೇರೆ ಗೋಷ್ಠಿಗಳನ್ನು ಏರ್ಪಡಿಸಬೇಕಾಗುತ್ತದೆ ಆ ಬಗ್ಗೆ ತಕ್ಕ ಸಿದ್ಧತೆಗಳನ್ನುಮಾಡಿಕೊಳ್ಳುವುದಕ್ಕಾಗಿ ಪ್ರಬಂಧಗಳು ಎಷ್ಟೆಷ್ಟು ಬರಬಹುದು, ಮತ್ತು ಯಾವ ಯಾವ ಜಾತಿಯವಿರಬಹುದು—ಎಂಬ ವಿವರವನ್ನು ಕಾರ್ಯನಿರ್ವಾಹಕ ಮಂಡಲಿ ಸ್ವಾಗತ ಮಂಡಲಿಗಳು ಆದಷ್ಟು ಬೇಗ ಮುಂದರಿತುಕೊಳ್ಳುವುದು ಅವಶ್ಯವಾಗಿದೆ ಆದಕಾರಣ ಪ್ರಬಂಧಗಳನ್ನು ಕಳುಹಿಸಬೇಕೆಂದಿರುವವರು ಈ ಸಮಾಚಾರ ಪತ್ರಿಕೆಯನ್ನು ಕಂಡಕೂಡಲೆ ತಮ್ಮ ಉದ್ದೇಶವನ್ನು ಸ್ಥೂಲವಾಗಿಯಾದರೂ ಪರಿಷತ್ತಿಗೆ ತಿಳಿಯಪಡಿಸಿದಲ್ಲಿ ದೊಡ್ಡ ಉಪಕಾರವಾಗುವುದು ಪ್ರಬಂಧಗಳ ಸಂಗ್ರಹಗಳನ್ನು ಕಳುಹಿಸಲು ಅಕ್ಟೋಬರು ಕಡೆಯವರೆಗೂ ಅವಕಾಶವಿರುವುದಾದರೂ, ತಮ್ಮ ಉದ್ದೇಶವನ್ನು ಮಾತ್ರ ಸೂಕ್ಷ್ಮವಾಗಿ ಈಗಲೇ ಪರಿಷತ್ತಿಗೆ ತಿಳಿಯಪಡಿಸಬೇಕೆಂದು ಬೇಡುತ್ತೇನೆ

ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಸೇರಲಿಚ್ಛಿಸುವ ಅಭಿಮಾನಿಗಳೂ ಸಮ್ಮೇಳನದ ಏರ್ಪಾಟುಗಳನ್ನಾಗಲಿ ಇತರ ಹೆಚ್ಚು ವಿವರಗಳನ್ನಾಗಲಿ ತಿಳಿಯಲಪೇಕ್ಷಿಸುವವರೂ ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯತಕ್ಕದ್ದು.—

ಶ್ರೀಮಾನ್ ಜಿ. ಕೆ. ಚಿಟಗೇರಿ,
ಬಿ. ಎ, ಎಲ್ ಎಲ್. ಬಿ,
ಗೌ। ಕಾರ್ಯದರ್ಶಿ, ಸ್ವಾಗತ ಮಂಡಲಿ,
೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ,
ನಂ ೮, ದ್ವಾರಕದಾಸ್ ಮ್ಯಾನ್‌ಶನ್ಸ್,
ಜಿನ್‌ಜ್ಯಾಮ್ ಹಾಲ್ ಲೇನ್, ಗಿರಗಾಂ,
ಬೊಂಬಾಯಿ.

### ಪರಿಷತ್ತಿನ ವಾರ್ಷಿಕ ಸಭೆ

ಪರಿಷತ್ತಿನ ನಿಬಂಧನೆಗಳ ಪ್ರಕಾರ ಕರ್ಣಾಟಕ ಸಾಹಿತ್ಯ ಪರಿಷತ್ತಿನ ೨೦ನೆಯ ವಾರ್ಷಿಕಾಧಿವೇಶವು ಬಹುಶಃ ದಶಂಬರ ತಾ ೨೭ನೇ ಶುಕ್ರವಾರ ನಡೆದೀತು ಆ ಬಗ್ಗೆ ಕ್ರಮವಾದ ಆಹ್ವಾನ ಪತ್ರಿಕೆಯನ್ನು ವಿಹಿತ ಕಾಲದಲ್ಲಿ ಕಳುಹಿಸಲಾಗುವುದು ಆ ವಾರ್ಷಿಕಾಧಿವೇಶನದ ತೀರ್ಮಾನಗಳಲ್ಲಿಯೂ ಚುನಾವಣೆಗಳಲ್ಲಿಯೂ ಅಭಿಮತಕೊಡಬೇಕೆಂದೂ ಅಭ್ಯರ್ಥಿಯಾಗಬೇಕೆಂದೂ ಬಯಸುವವರು ಆ ಅಧಿವೇಶನದ ಆಹ್ವಾನ ಪತ್ರಿಕೆಯ ತಾರೀಕಿಗೆ ಎರಡು ತಿಂಗಳ ಹಿಂದಿನಿಂದಲಾದರೂ ಸದಸ್ಯರಾಗಿರಬೇಕೆಂದು ನಿಬಂಧನೆ (೨೭ ಕ ಹೊಸದು) ಇರುತ್ತದೆ ಮುಂದಿನ ವಾರ್ಷಿಕಾಧಿವೇಶನದ ಆಹ್ವಾನಪತ್ರಿಕೆಯು ನಿಬಂಧನೆಯ ಪ್ರಕಾರ ನವಂಬರ ತಾ ೧೫ಕ್ಕೆ ಹೊರಡಬೇಕಾಗುವುದು ಆದಕಾರಣ, ಇನ್ನು ಮುಂದೆ ಪರಿಷತ್ತಿನ ರಚನೆ ತೀರ್ಮಾನಗಳಲ್ಲಿ ಭಾಗವಹಿಸಬೇಕೆಂದು ಇಷ್ಟಪಡುವ (ಇದುವರೆಗೆ ಸದಸ್ಯರಾಗದೆ ಇರುವ) ಅಭಿಮಾನಿಗಳು ಇದೇ ತಿಂಗಳ ತಾ ೧೮ರೊಳಗಾಗಿ ಪರಿಷತ್ತಿನ ಸದಸ್ಯರಾಗಿ ಸೇರಿರಬೇಕು ಎಲ್ಲ ಕನ್ನಡದ ಅಭಿಮಾನಿಗಳೂ ಇದನ್ನು ಕೃಪೆಯಿಂದ ಗಮನಿಸಿ, ಬೇಗನೆ ತಮ್ಮ ಸದಸ್ಯತ್ವದ ಅಪೇಕ್ಷಾಪತ್ರಗಳನ್ನು ಚಂದಾ ಹಣದೊಡನೆ ಪರಿಷತ್ಕಾರ್ಯಾಲಯಕ್ಕೆ ಕಳುಹಿಸಬೇಕೆಂದು ಬೇಡುತ್ತೇನೆ

### ಚಂದಾ ಬಾಕಿ

ಆಜೀವ ಸದಸ್ಯರು/ ಪರಿಷದಧಿವೇಶನದ ತೀರ್ಮಾನ ಚುನಾವಣೆಗಳಲ್ಲಿ ಭಾಗವಹಿಸಲಿಚ್ಛಿಸುವ ಸದಸ್ಯರು ತಮ್ಮಿಂದ ಪರಿಷತ್ತಿಗೆ ಸಲ್ಲಬೇಕಾದ ಎಲ್ಲ ಹಣವನ್ನೂ ಅಧಿವೇಶನದ ವೇಳೆಗೆ ಪೂರ್ತಿಯಾಗಿ ಸಲ್ಲಿಸಿರಬೇಕೆಂದು ಪರಿಷತ್ತಿನ ೨೭ ಕ) ನಿಬಂಧನೆ (ಹೊಸದ) ವಿಧಿಸಿರುತ್ತದೆ ಈ ವಿಚಾರದಲ್ಲಿ ಆಜೀವ ಸದಸ್ಯರಿಗೆ ಸಂಬಂಧಪಟ್ಟ ಏರ್ಪಾಟು ಈ ಕೆಳಗಿನಂತೆ ಇರತಕ್ಕದ್ದೆಂದು ಕಾರ್ಯನಿರ್ವಾಹಕ ಮಂಡಲಿ (ತಾ ೧೮-೮-೧೯೩೫ರಲ್ಲಿ) ತೀರ್ಮಾನಿಸಿರುತ್ತದೆ —

"ಪರಿಷತ್ತಿನ ಆಜೀವ ಸದಸ್ಯರುಗಳು ಕೊಡಬೇಕಾದ ೫೦ ರೂಪಾಯಿನ ಚಂದಾವನ್ನು ಒಂದೇ ಮೊಬಲಗಿನಲ್ಲಿ ಸಲ್ಲಿಸಲು ಅನುಕೂಲವಿಲ್ಲದಿರುವ ಸಂದರ್ಭದಲ್ಲಿ, ಆ ಮೊಬಲಗನ್ನು ತಿಂಗಳಿಗೆ ೫ ರೂಪಾಯಿಯಂತೆ ೧೦ ಕಂತುಗಳಲ್ಲಿ, ಒಟ್ಟು ೧೨ ತಿಂಗಳುಗಳಿಗೆ ಮೀರದಷ್ಟು ಕಾಲಾವಧಿಯೊಳಗಾಗಿ, ಸಲ್ಲಿಸತಕ್ಕದ್ದು ಅನುಗೂಡಿ ಬರತಕ್ಕ ಮೂರು ತಿಂಗಳುಗಳ ಕಂತುಗಳನ್ನು ಸಲ್ಲಿಸದೆ ಹೋದರೆ, ಅಥವಾ ಒಂದು ವರ್ಷದ ತರುವಾಯ ಹಣವನ್ನು ಸಲ್ಲಿಸದೆ ಉಳಿಸಿಕೊಂಡಿದ್ದರೆ, ಅದನ್ನು ೨೭(ಕ) ನಿಬಂಧನೆಗೆ ಅರ್ಥಮಾಡುವ ಸಂದರ್ಭದಲ್ಲಿ 'ಬಾಕಿ' ಎಂದು ಪರಿಗಣಿಸತಕ್ಕದ್ದು."

ಇದುವರೆಗೆ ಆಜೀವ ಸದಸ್ಯರಾದವರಲ್ಲಿ ಕೆಲವರು ತಮ್ಮ ಚಂದಾ ಹಣವನ್ನು ಕಂತುಗಳಲ್ಲಿ ಕೊಡುವ ರಿಯಾಯತಿಯನ್ನು ಪಡೆದುಕೊಂಡವರಾಗಿರುತ್ತಾರೆ. ಅಂಥವರು ವಿಶೇಷಾಧಿವೇಶನಗಳಲ್ಲಿ ಅಭಿಮತ ಕೊಡುವ ಮತ್ತು ಅಭ್ಯರ್ಥಿಯಾಗುವ ಅಧಿಕಾರವನ್ನು ಉಪಯೋಗಿಸಿಕೊಳ್ಳಬೇಕಾದರೆ, ಮೇಲಿನ ನಿಬಂಧನೆಯ ಪ್ರಕಾರ "ಸಲ್ಲಬೇಕಾದ"-ಎಂದರೆ ಗೊತ್ತಾಗಿರುವ-ಕಂತುಗಳನ್ನು ಸಲ್ಲಿಸುವುದು ಅವಶ್ಯವಾಗುತ್ತದೆ

ಮೇಲಿನ ಕಂತು ಪದ್ಧತಿಯ ತೀರ್ಮಾನವು ಲಿಖಿತ ರೂಪದಲ್ಲಿ ಬಂದಿರುವುದು ಈಗ ತಾನೇ ಆಗಿದ್ದರೂ, ಅದು ಬಹು ದಿನಗಳಿಂದ ಕಾರ್ಯನಿರ್ವಾಹಕ ಮಂಡಲಿಯ ನಡವಳಿಯಲ್ಲಿ ವಾಡಿಕೆಯಾಗಿ ಬಂದದ್ದಾಗಿದೆ ಕಂತಿನ ನಿಷ್ಕರ್ಷೆ ಇಲ್ಲದ ಸಂದರ್ಭಗಳೂ, ಮೇಲೆ ಸೂಚಿಸಿರುವ ತೆರದಲ್ಲಲ್ಲದೆ ಇತರ ತೆರದ ಕಂತಿನ ಒಪ್ಪಿಕೆ ಇರುವ ಸಂದರ್ಭಗಳೂ ಒಂದೆರಡು ಇರುತ್ತವೆ ಕಾರ್ಯನಿರ್ವಾಹಕ ಮಂಡಲಿಯ ಮೇಲಿನ ತೀರ್ಮಾನವು ಇಂಥ ಸಂದರ್ಭಗಳಿಗೂ ಕೂಡ ಅನ್ವಯಿಸತಕ್ಕದ್ದಾಗಿದೆ ಹಿಂದಿನ ಏರ್ಪಾಟು ಒಪ್ಪಿಕೆಗಳು ಏನೇ ಇರಲಿ, ಎಲ್ಲ ಬಾಕಿಯ ಸಂದರ್ಭಗಳಿಗೂ ಮೇಲಿನ ತೀರ್ಮಾನವನ್ನು ಅನ್ವಯಿಸುವುದು ಲೆಕ್ಕಗಳ ದೃಷ್ಟಿಯಿಂದಲೂ ಕಾರ್ಯದೃಷ್ಟಿಯಿಂದಲೂ ಅನುಕೂಲವಾಗುವುದು ತಮ್ಮ ಚಂದಾ ಹಣವನ್ನು ಇನ್ನೂ ಪೂರ್ತಿಯಾಗಿ ಸಲ್ಲಿಸದಿರುವ ಎಲ್ಲ ಆಜೀವ ಸದಸ್ಯರುಗಳೂ ಇದನ್ನು ಕೃಪೆಯಿಂದ ಗಮನಕ್ಕೆ ತಂದುಕೊಳ್ಳುವರೆಂದು ನಂಬಿದ್ದೇನೆ

ವಾರ್ಷಿಕ ಸದಸ್ಯರು.—"ವರ್ಷ ಚಂದಾ ಕೊಡತಕ್ಕ ಸದಸ್ಯರಲ್ಲಿ ಯಾರು ತಮ್ಮ ಸದಸ್ಯತ್ವ ಪ್ರಾರಂಭದ ತಾರೀಕಿನಿಂದ ಹನ್ನೆರಡು ತಿಂಗಳೊಳಗಾಗಿ ತಮ್ಮ ಚಂದಾ ಹಣವನ್ನು ಪೂರ್ತಿಯಾಗಿ ಸಲ್ಲಿಸಿರುವುದಿಲ್ಲವೋ ಅಂಥವರಿಂದ ಬರಬೇಕಾಗಿರುವ ಹಣವನ್ನು ಮೇಲಿನ ೨೭ ಕ (ಹೊಸದು) ನಿಬಂಧನೆಗೆ ಸಂಬಂಧಪಟ್ಟಂತೆ ಬಾಕಿ ಎಂದು ಪರಿಗಣಿಸತಕ್ಕದ್ದು."

ಸಾಮಾನ್ಯ ಸದಸ್ಯರೆಲ್ಲರೂ ಈ ತೀರ್ಮಾನವನ್ನು ಮಾತ್ರವಲ್ಲದೆ ಪರಿಷತ್ತಿಗಿರುವ ದ್ರವ್ಯಕಷ್ಟವನ್ನೂ ತಮ್ಮ ಕೃಪಾಪೂರ್ವಕವಾದ ಗಮನಕ್ಕೆ ತಂದುಕೊಂಡು ಪರಿಷತ್ತಿಗೆ ನೆರವಾಗಬೇಕೆಂದು ಬೇಡುತ್ತೇನೆ

ಸಿ ಕೆ ವೆಂಕಟರಾಮಯ್ಯ,
ಎಂ ಎ, ಎಲ್ ಎಲ್ ಬಿ,
ಗೌರವ ಕಾರ್ಯದರ್ಶಿ, ಕರ್ಣಾಟಕ ಸಾಹಿತ್ಯ ಪರಿಷತ್ತು
ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರ,
ಚಾಮರಾಜಪೇಟೆ, ಬೆಂಗಳೂರು ಸಿಟಿ

---


## ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

# ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ – ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇಕ್ಷನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

**ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.**

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ– ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

# ಇಟೆಲಿ ಎಬಿಸೀನಿಯಾಗಳು ಶಾಂತವಾಗುವುವೆ?

## ಜಿನೆವಾದಲ್ಲಿ ರಾಜಪಟುಗಳ ಸಾಹಸ!

### ಇಟೆಲಿಯ ಗರ್ವವು ಮುರಿದಿಲ್ಲ! ಎಬಿಸೀನಿಯದ ಹಟವು ಇಳಿದಿಲ್ಲ!

ಇಟೆಲಿ ಎಬಿಸೀನಿಯ ಗಳೊಳಗಣ ವಿವಾದ ವಿಷಯ ವಿಮರ್ಶೆಗಾಗಿ ಇದೇ ತಾ ೪, ೫, ೬, ೭ರಲ್ಲಿ ಜಿನೆವಾದಲ್ಲಿ ಜನಾಂಗ ಸಭೆಯ ಪರಿಷತ್ತು ನೆರವೇರಿತು ಫ್ರಾನ್ಸಿನ ಮಂತ್ರಿಗಳಾದ ಲಾವಲರು ಅಧ್ಯಕ್ಷರಾಗಿದ್ದರು ಬ್ರಿಟನಿನ ಪರವಾಗಿ ಮಿ। ಎಡನರು ಮಾತನಾಡಿ ಜನಾಂಗಸಭೆಯ ಉದ್ದೇಶ, ಬ್ರಿಟನಿನ ಆಶೆ ಮೊದಲಾದ ವಿಷಯಗಳ ಕುರಿತು ವಿವರಿಸಿ ಈ ಸಂದಿಗ್ಧತೆಯಿಂದ ಜಗತ್ತು ಹೇಗಾದರೂ ಪಾರಾಗಬೇಕು ಎಂದು ಹೇಳಿದರು

ಇಟೆಲಿಯ ಪ್ರತಿನಿಧಿಗಳಾದ ಬೆರನ್ ಅಲೋೈಸಿ ಎಂಬವರು ಒಂದು ದೊಡ್ಡ ಲೇಖನವನ್ನು ಸಭೆಯ ಮುಂದಿರಿಸಿ ಇಟೆಲಿ ಎಬಿಸೀನಿಯಾಗಳೊಳಗಿದ್ದ ಪೂರ್ವ ಸಂಬಂಧ, ಅವುಗಳೊಳಗಿರುವ ಕರಾರುಗಳು ಇವೇ ಮೊದಲಾದುವುಗಳನ್ನು ನಿರೂಪಿಸಿ ಎಬಿಸೀನಿಯವನ್ನು ಈ ನಾಲ್ಕು ವಿಷಯಗಳಿಗಾಗಿ ಇಟೆಲಿಯು ದೂಷಿಸುತ್ತದೆಂದರು ೧ ಎಬಿಸೀನಿಯದ ಗಡಿನಾಡಿನಲ್ಲಿ ಇಟೆಲಿಯ ಅಧಿಕಾರದ ಹಕ್ಕನ್ನು ಎಬಿಸೀನಿಯಾವು ತನಗೆ ಕೊಡಲು ಒಪ್ಪಲಿಲ್ಲ. ೨ ಎಬಿಸೀನಿಯಾದಲ್ಲಿರುವ ಇಟೆಲಿಯನ್ ವಸಾಹತುಗಳನ್ನು ಎಬಿಸೀನಿಯಾವು ಅನ್ಯಾಯವಾಗಿ ಸ್ವವಶ ಮಾಡಿಕೊಂಡಿತು ೩ ಇಟೆಲಿಯ ರಾಜಧುರೀಣರ ಮೇಲೆ ಎಬಿಸೀನಿಯದವರು ದಿನಂಪ್ರತಿ ಹಲ್ಲೆಮಾಡಿದರು ೪ ಎಬಿಸೀನಿಯದಲ್ಲಿರುವ ಇಟೆಲಿಯಾನರ ಆಸ್ತಿಗಳನ್ನೂ ಬದುಕು ಭಾಗ್ಯಗಳನ್ನೂ ಕಸಕೊಳ್ಳಲಾಯಿತು ಇಟೆಲಿಯಾನರ ಮೇಲೆ ಎಬಿಸೀನಿಯದವರು ಹಗೆ ಕಟ್ಟಿಕೊಂಡರು ಇಟೆಲಿಯನ್ ಸೊಮಾಲಿಲೇಂಡಿನಲ್ಲೂ ಎಬಿಸೀನಿಯಾದವರ ಹಾವಳಿ-ಇವಿಷ್ಟು ಆರೋಪಿತ ವಿಷಯಗಳು ಅಲೋೈಸಿಯವರು ವಿವರಿಸುತ್ತ ಇಟೆಲಿಯು ಎಬಿಸೀನಿಯಕ್ಕೆ ೪೦೦೦ ರೈಫಲ್‌ಗಳನ್ನು ವಿಕ್ರಯಿಸಿದೆ ಪ್ರಥಮದಲ್ಲಾಗಿ ಕಳುಹಿಸಿದ ಸರಕುಗಳು ೧,೯೦೦,೦೦೦ ಲೈರ್‌ಗಳಿಗೆ ವಿಕ್ರಯಿಸಲ್ಪಟ್ಟವು ಈ ಸರಕುಗಳ ಕ್ರಯದ ಬಗ್ಗೆ ಎಬಿಸೀನಿಯವು ಇಟೆಲಿಗೆ ೮೪೬,೦೦೦ ಲೈರ್‌ಗಳನ್ನು ಕೊಡಲಿದೆ ಎಂದರು ಅಲೋೈಸಿಯವರು ಉಗ್ರವಾಗಿ ಭಾಷಣ ಮಾಡುತ್ತ "ಹೀಗೆಲ್ಲ ಮಾಡುತ್ತಿರುವ ಎಬಿಸೀನಿಯದ ಮೈತ್ರಿಯು ಇಟೆಲಿಗೆ ಬೇಡವೇ ಬೇಡವೆಂದು ನಿರ್ಧಾರ ಮಾಡಿರುವೆವು ನಮಗೆ ಅದರ ಮೇಲೆ ಭರವಸೆಯೇ ಇಲ್ಲ ಅದರ ಸಂಸ್ಕೃತಿಯು ಅದನ್ನು ಇನ್ನಿತರ ಸಾಂಸ್ಕೃತಿಕ ಜನಾಂಗಗಳೊಡನೆ ಕೂಡಿ ನಡೆಯಲೂ ಅಧಿಕಾರವೀಯುವುದಿಲ್ಲ ತನ್ನ ಮಾನಮರ್ಯಾದೆಗಳನ್ನು ಕಾಯ್ದುಕೊಳ್ಳುವುದಕ್ಕಾಗಿ ಇಟೆಲಿಯು ತಾನು ಯತ್ನಮಾಡುವ ಅಧಿಕಾರವು ಅದಕ್ಕೆ ಪೂರ್ಣವಾಗಿದೆ ಜನಾಂಗಸಭೆಯ ಕಟ್ಟಪ್ಪಣೆಗಳನ್ನುಲ್ಲಂಘಿಸಿ ವರ್ತಿಸಿರುವ ಜನಾಂಗಕ್ಕೆ ನ್ಯಾಯನೀತಿಗಳನ್ನು ಹೇಳಿ ಅದನ್ನು ಒಡಂಬಡಿಸುವ ಕೆಲಸವು ಜನಾಂಗಸಭೆಗೆ ಬೇಡವಾದುದು" ಎಂದರು

ಎಬಿಸೀನಿಯದ ಪರವಾಗಿ ಪ್ರಖ್ಯಾತ ಫ್ರೆಂಚ್ ವಕೀಲರಾದ ಪ್ರೊಫ್ ಜೆಸ್ ಎಂಬವರು ವಾದಿಸಿದರು ಅವರು ಎಬಿಸೀನಿಯಾ ಪ್ರತಿನಿಧಿಯ ಹೇಳಿಕೆಯನ್ನು ಪೂರ್ಣವಾಗಿ ಅಲ್ಲಗಳೆದರು. ಅವರ ದೀರ್ಘ ಭಾಷಣವನ್ನು ಮರುದಿನಕ್ಕೆ ಬಾಕಿಯಿಟ್ಟ ಮೇಲೆ ಸಭೆಯು ಅಂತ್ಯವಾಯಿತು

ಮರುದಿನ ಸಂಜೆ ಲೀಗ್ ಕೌನ್ಸಿಲಿನ ಸಭೆ ಸೇರಿತು ಎಬಿಸೀನಿಯಾದ ಪರವಾಗಿ ಜೆಸ್‌ರವರು ಭಾಷಣ ಮಾಡಿದರು. ಅವರು ಸಭೆಯಲ್ಲಿ ಏಳುತ್ತಲೇ ಇಟೆಲಿಯ ಪ್ರತಿನಿಧಿಗಳಾದ ಅಲೋೈಸಿಯವರು ಸಭೆಯಿಂದೆದ್ದು ಹೊರಗೆ ಹೋದರು. ಈ ಸಂಘಟನೆಯಿಂದ ಹೆಚ್ಚಿನವರು ಅವಾಕ್ಕಾದರು ಕೊನೆಗೆ ವಿಚಾರಿಸಲಾಗಿ ತನ್ನ ವಿರೋಧಿಯು ಉಪಸ್ಥಿತನಾಗಿರುವ ಸಭೆಯಲ್ಲಿ ತಾನು ಕುಳಿತು ಅವರ ಭಾಷಣವನ್ನಾಲಿಸಲಾರೆನೆಂದು ಇಟೆಲಿಯು ನಿರ್ಧರಿಸಿದೆಯಾಗಿಯೂ ಎಬಿಸೀನಿಯಾ ಪ್ರತಿನಿಧಿಯು ಸಭೆಯಿಂದ ಹೊರಗೆ ಬಂದೊಡನೆ ತಾನು ಸಭೆಗೆ ಹೋಗುವೆನಾಗಿಯೂ ತಿಳಿಸಿದರು

ಪ್ರೊಫ್ ಜೆಸ್‌ರವರು ಕಟುಗ್ರವಾಗಿ ನುಡಿದರು ಅವರ ನುಡಿಗಳು ರಕ್ತವನ್ನೇ ಕಾರುವಂತಿದ್ದುವು ಈ ಭಾಷಣವು ಮುಂದರಿಯುತ್ತಿರುವಾಗ ಸಭೆಯಲ್ಲೆಲ್ಲ ನಿರಾಶೆಯ ಕಾರ್ಮುಗಿಲೆದ್ದು ಇನ್ನೊಂದು ಯುದ್ಧವನ್ನು ನಿವಾರಿಸುವುದೇ ಕಷ್ಟವೆಂದು ಭಾವಿಸಿಕೊಳ್ಳಲಾಯಿತು ತನ್ಮಧ್ಯೆ ಇಟೆಲಿಯ ಮತ್ತೊಬ್ಬ ಪ್ರತಿನಿಧಿಗಳಾದ ಸೀನಿಯರ್ ರೋಕ್ಕಾ ಎಂಬವರೂ ಸಭೆಯನ್ನು ಬಿಟ್ಟಿದ್ದರು ಜೆಸ್‌ರವರು ಭಾಷಣಮಾಡಿ ಇಟೆಲಿಯ ಗರ್ವಭಂಗ ಮಾಡದೆ ಎಬಿಸೀನಿಯವು ಇರಲಾರದು ಎಬಿಸೀನಿಯವು ಸಾಕಷ್ಟು ಬಗ್ಗಿದೆ, ಆದರೆ ಮತ್ತೂ ಮತ್ತೂ ಬಗ್ಗಬೇಕಾದರೆ ಅದು ಸ್ವತಂತ್ರ ರಾಷ್ಟ್ರವಲ್ಲದೆ ಹೋಗಬೇಕು ಇಟೆಲಿಯು ಜನಾಂಗಸಭೆಯ ನಿರ್ಣಯಗಳಿಗೆ ಪ್ರತಿಬಂಧಕವಾಗಿ ವರ್ತಿಸಿದೆ ಅದನ್ನು ಆದಷ್ಟು ಶೀಘ್ರವಾಗಿ ತಡೆದು ಅದು ಯುದ್ಧದಲ್ಲಿ ಮುಂದರಿಯದಂತೆ ಯೋಜಿಸಬೇಕು' ಎಂದರು

ಅವರ ಭಾಷಣವು ಮುಗಿದ ಮೇಲೆ ಆ ದಿನದ ಚೆಯರ್‌ಮೆನರಾದ ಲಿಟ್‌ವಿನೋಫರು ಭಾಷಣ ಮಾಡಿ ಇಟೆಲಿಯು ಎಬಿಸೀನಿಯಾದಲ್ಲಿ ಕೇಳುವ ವಿಶೇಷಾಧಿಕಾರಗಳನ್ನು ಕಂಡು ಯಾರೂ ಸಹಾನುಭೂತಿ ತೋರಿಸಲಾರರೆಂದೂ ಅದಕ್ಕೆ ನ್ಯಾಯವಾಗಿ ಅಲ್ಲಿರುವ ಹಕ್ಕುಗಳನ್ನು ಯಾರೂ ಅಲ್ಲಗಳೆಯಲಾರರೆಂದೂ ಹೇಳಿದರು

ಈ ಸಭಾಂತ್ಯವಾದ ಮೇಲೆ ಇಟೆಲಿಯ ಪ್ರತಿನಿಧಿಗಳು ಜೆಸ್‌ರವರ ಕಟೂಕ್ತಿಗಳನ್ನು ಟೀಕಿಸಿ ಅವರ ಫ್ರೆಂಚ್ ರಾಜನೀತಿಜ್ಞರಿದ್ದು ಹೀಗೆ ಇಟೆಲಿಯ ಮನನೋಯಿಸುವಂತೆ ನುಡಿದುದು ಮರ್ಯಾದೆಗೆ ವಿರೂರಿರುತ್ತದೆಂದೂ, ಅವರು ಎಬಿಸೀನಿಯಾ ಜನಾಂಗಿಕರಾಗಿದ್ದರೆ ಅವರ ಟೀಕೆಯ ಕ್ರೌರ್ಯವು ಇಟೆಲಿಯಿಂದ ಅಂಗೀಕಾರ ಹೊಂದುವುದು ಸ್ವಾಭಾವಿಕವಿತ್ತೆಂದೂ ಹೇಳಿದರು

ಲೀಗ್ ಒಫ್ ನೇಶನ್ಸ್‌ನ ಕ್ರಮ ನಿಬಂಧನೆಗಳನುಸಾರವಾಗಿ ಈ ವಿವಾದದ ಪರಿಹಾರಾರ್ಥ ಐದು ಜನರ ಒಂದು ಸಮಿತಿಯನ್ನು ಜರಗಿಸಬೇಕೆಂದು ನಿರ್ಣಯವಾಯಿತು

"ಹೋರಾಡುವ ಎರಡು ಪಕ್ಷಗಳೂ ಶಾಂತವಾಗಲೊಪ್ಪಿದ್ದರೆ ಅವರ ವಿಚಾರ ವಿಮರ್ಶೆಯನ್ನು ಐದು ಮಂದಿಯ ಸಮಿತಿಯಲ್ಲಿ ಮಾಡಬೇಕು" ಎಂಬ ನಿರ್ಣಯವೇ ಈ ಸಮಿತಿಗೆ ಆಧಾರ

ಜನಾಂಗಸಭೆಯ ಪ್ರತಿನಿಧಿಗಳಲ್ಲಿ ಐದು ಮಂದಿಯನ್ನು ಈ ಸಮಿತಿಗೆ ಆರಿಸುವ ಕೆಲಸವು ನಡೆಯುತ್ತಿದ್ದಾಗ ಇಟೆಲಿಯ ಪ್ರತಿನಿಧಿಗಳು ಮುಂದೆ ಬಂದು ಈ ಸಭೆಯಲ್ಲಿ ಕುಳಿತುಕೊಳ್ಳಲು ತಮಗೂ ಅಧಿಕಾರವಿದೆಯೆಂದು ವಾದಿಸಿದರು. ಆದರೆ ಬ್ರಿಟನ್ ಫ್ರಾನ್ಸ್‌ಗಳ ಬಲವಂತದ ಪರಿಣಾಮವಾಗಿ ಅವರು ತಮ್ಮ ಹಟವನ್ನು ಬಿಟ್ಟರು ಕೊನೆಗೆ ಬ್ರಿಟನ್, ಫ್ರಾನ್ಸ್, ಪೋಲೆಂಡ್ ಸ್ಪೈನ್ ಮತ್ತು ಟರ್ಕಿ ದೇಶಗಳ ರಾಜಪಟುಗಳ ಸಮಿತಿಯನ್ನೇರ್ಪಡಿಸಲಾಯಿತು ಇಲ್ಲಿಯೂ ಇಟೆಲಿಯು ಅಷ್ಟು ಒಲಿದಿರಲಿಲ್ಲ ಬ್ರಿಟನ್ ಮತ್ತು ಫ್ರಾನ್ಸ್‌ಗಳಿಗೆ ಇಟೆಲಿ ಎಬಿಸೀನಿಯಾದ ಜಗಳದಲ್ಲಿ ಸಂಬಂಧವಿರುವುದರಿಂದ ಆ ಎರಡು ರಾಷ್ಟ್ರಗಳವರು ಸಮಿತಿಯಲ್ಲಿರಕೂಡದೆಂದು ಹೇಳಿದರು

ಮಿ। ಎಡನ್ ಲಾವಲ್ ಕರ್ನಲ್ ಬೆಕ ಮತ್ತು ಕೆಪ್ಟನ್ ಆರಾಸ್ ಎಂಬವರು ಸಮಿತಿಗೆ ಸೀನಿಯರ್ ಮಡಾರಿಯ ಗರ್ಗ್‌ರನ್ನು ಚೆಯರ್‌ಮೆನರನ್ನಾಗಿ ಆರಿಸಲಾಗಿದೆ

ಯುದ್ಧವಾಗುವುದು ಅಥವಾ ಆಗದಿರುವುದು ಈ ಸಮಿತಿಯ ಮೇಲೆ ಹೊಂದಿಕೊಂಡಿದೆ

ತನ್ಮಧ್ಯೆ ಇಟೆಲಿಯಲ್ಲಿ ರಣಸಿದ್ಧತೆಯು ನಡೆಯುತ್ತಿದೆ ಸೀನಿಯರ್ ಮುಸಲೋನಿಯವರ ಅಳಿಯನು ಸೈನ್ಯ ಸಂಗ್ರಹ ಕಾರ್ಯ ಪ್ರವೃತ್ತನಾಗಿರುವನು ೧೦೦೦೦, ಕಾಲಾಳುಗಳನ್ನು ಮಸೋಲಿನಿಯವರು ತಯಾರಿಸಿರುವರು ಬೇಕಾದ ಮದ್ದುಗುಂಡುಗಳನ್ನು ಎಬಿಸೀನಿಯಾದಲ್ಲಿರುವ ತನ್ನ ಭೂಮಿಗೆ ಸಾರಿಸುತ್ತಿರುವರು. ಅತ್ತಲಾಗಿಂದ ರಾಸ್‌ಟಫಾರಿಯೂ ಸುಮ್ಮನಿಲ್ಲ ಮದ್ದುಗುಂಡುಗಳನ್ನು ಸಂಗ್ರಹವಾಗಿಟ್ಟಿರುವ ಕಾರ್ಖಾನೆಗಳನ್ನು ನಿರ್ಮೂಲ ಮಾಡಿ ಅವುಗಳಿಗಿದ್ದ ಸರಕುಗಳನ್ನು ಗುಟ್ಟಾಗಿ ಎಲ್ಲಿಗೋ ಒಯ್ದಿರುವರು ದೇಶದ ಆಡಳಿತೆಗೆ ಸಂಬಂಧಪಟ್ಟಿರುವ ರಿಕಾರ್ಡು, ದ್ರವ್ಯ ಮೊದಲಾದುವುಗಳನ್ನೂ ರಹಸ್ಯವಾಗಿ ಎಲ್ಲಿಯೋ ಇಡಲಾಗಿದೆ ಜನರ ದ್ರವ್ಯ ಸಂಗ್ರಹಕ್ಕೂ ವ್ಯವಸ್ಥೆಯಾಗಿದೆ ಇಟೆಲಿಯಾನರ ವಿಮಾನಗಳು ಹಾರಿ ಬಂದು ಬೊಂಬೆಸೆದರೆ ಎಬಿಸೀನಿಯಾದ ಇಗರ್ಜಿಗಳು, ದೊಡ್ಡ ದೊಡ್ಡ ಕಟ್ಟಡಗಳು ಮಾತ್ರ ಧ್ವಂಸವಾಗುವುವು ಇಟೆಲಿಯ ಕಾಲಾಳುಗಳ ನಾಶವನ್ನುದ್ದೇಶಿಸಿ ಕಾಡುಗುಡ್ಡಗಳಲ್ಲಿ ಸಿಡಿಮದ್ದುಗಳನ್ನೂ ಬೊಂಬುಗಳನ್ನೂ ಇಡಲಾಗುತ್ತಿದೆ

---


## ಹೃದಯ ವೇದನೆ.

ಶೀತ, ಕೆಮ್ಮು, ನೀವಸಗಳು ಪೆಪ್ಸನಿಂದ ಶೀಘ್ರವಾಗಿ ಗುಣಹೊಂದುತ್ತನೆ.




ನಿಮಗೆ ಶೀತವು ಥಕ್ಕನೆ ಆಗುತ್ತದೆಯೋ? ಹೃದಯ ದುರ್ಬಲಗೊಳಿಸುವ ಚಳಿಯಿಂದಾಗಲೀ ವಿಪರೀತ ಕೆಮ್ಮಿನಿಂದಾಗಲೀ ಆಗಾಗ ಬಾಧಿಸಲ್ಪಡುವಿರಾ? ಹಾಗಾದರೆ, ಮೂಸಿಯೇ ಸೇವಿಸುವ ಈ ಅದ್ಭುತಕರ ಪೆಪ್ಸ್‌ಗಳ ಬಿಲ್ಲೆಗಳನ್ನುಪಯೋಗಿಸಿರಿ

ಪೆಪ್‌ನ ಒಂದು ಬಿಲ್ಲೆಯನ್ನು ಬಾಯಿಯಲ್ಲಿ ಹಾಕಿಕೊಂಡರೆ ಔಷಧ ರೂಪದಲ್ಲಿನ ಪರಿಮಳವು ಉಂಟಾಗ ತ್ತದೆ ಇದನ್ನು ಎದೆಯೊಳಗೆ ಉಚ್ಛ್ವಾಸಿಸಿಕೊಳ್ಳಬಹುದು ಪೆಪ್ಸ್ ಬಹು ಸೌಮ್ಯವಾದುದು ರುಚಿಕರವಾದುದು ಆದರೆ ರೋಗ ನಿವಾರಣೆಯ ಪೂರ್ಣ ಶಕ್ತಿಯುಳ್ಳದು ಅಂಟುರೋಗವು ಕ್ರಿಮಿಗಳನ್ನು ಕೊಲ್ಲುತ್ತದೆ ದೇಹದೊಳಗಿನ ಗಾಳಿಯ ನಳಿಗಳಲ್ಲಿರುವ ಕೆಟ್ಟ ವಸ್ತುಗಳನ್ನು ಹೊರಗೆ ದೂಡಿ ನಿಮ್ಮ ಶೀತಗಳನ್ನು ಮಾಯಗೊಳಿಸುತ್ತದೆ

ಬಾಟ್ಲಿಗೆ ಒಂದು ರೂಪಾಯಿಯಂತೆ ಎಲ್ಲಾ ವಿಕ್ರಯಗಾರರು ಪೆಪ್ಸನ್ನು ಮಾರುತ್ತಾರೆ

ಏಜಂಟರು ದಾಥಾ ಎಂಡ್ ಕೊ, ಮದ್ರಾಸು

ರೋಗ ನಿವಾರಕ ಉಚ್ಛ್ವಾಸಕರ ಬಿಲ್ಲೆಗಳು

ಪೆಪ್ಸ್ PEPS


## ನೋಟೀಸು

ಪುದುಂ .. ಗ್ರಾಮದ ... ಬೆಳ್ಳಿರ ... ಕೊಳಕೆ ... ಈ ... ತಾರೀಕ 5–5–35 ... ರ್ತಿ ... ಸಾವಿರದ ... 1 ಕ ... 2 ಇವರ ಗಾರ್ಡಿಯನಾಗಿ ವ ಎಕ್ಸಿಕ್ಯೂಟರನಾಗಿ ನನ್ನನ್ನು ... ಮಾಡಿರುತ್ತಾಳೆ ಇವಳು ... ಯಲ್ಲಿ ಇವಳ ತಾಯಿಯ ಮನೆಯಲ್ಲಿರುವ ಸಮಯ ಯಾರೋ ದ್ವೇಷಿಕರ ಮೋಸ ಕೃತ್ಯದಿಂದ ನಾಲ್ಕಾರು ಹೆಚ್ಚಿಟ್ಟು ತೆಗದು ಹಿಂದಿನ ತಾರೀಕು ಹಾಕಿ ಮೋಸಕರ ಸುಳ್ಳು ... ದಸ್ತಾವೇಜು ಸಗ್ಗೆ ಮಾಡಿರುತ್ತಾರಾಗಿ ತಿಳಿದು ಬರುತ್ತದೆ ಆದುದರಿಂದ ಅಂಥ ಮೋಸ ಕೃತ್ಯದ ಯಾವ ರಿಕಾರ್ಡ್ ಮಂಜೂರಾಗತಕ್ಕದ್ದಲ್ಲ ಮ್ಯಾನರರ್ ... ಸತಕ್ಕದ್ದಲ್ಲ ಎಕ್ಸಿಕ್ಯೂಟರ್

ಕೆ. ಶಂಕರ ಭಟ್ಟ
11–9–'35


1936ರ ನಮ್ಮ ವಸರಾ ಸಂಚಿಕೆಯು ... ಸುಂದರವಾಗಿ ಹೊರಡುವುದು.

? 

ಬೆಲೆ ಆಣೆ 2. ಚಾಹೀರಾತುಗಳನ್ನು ಕೂಡಲೇ ಕೊಡಿರಿ

## ಅನುಕ್ರಮಣಿಕೆ.


ಚಿತ್ರ ... ೩
ಸಾಹಿತ್ಯ ಸಂಗ್ರಹ ... ೪
ಪೋಲೀಸ್ ಖಾತೆಯ ಸುಧಾರಣೆ ... ೫
ಪತ್ರವ್ಯವಹಾರ ... ೬
೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ... ೮
ಇಟಲಿ ಎಬಿಸೀನಿಯಾಗಳೊಳಗೆ ಶಾಂತವಾಗುವುದೇ? ೯
ಮುಂದಿನ ಹೆಜ್ಜೆ ... ೧೦
ಅಗ್ರಲೇಖ
ಸ್ಫುಟವಿಚಾರಗಳು ... ,,
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ... ೧೩
ಡಿಸ್ಟ್ರಿಕ್ಟ್ ಬೋರ್ಡು ಸಭೆ ... ೧೪
ಪ್ರಾಣಿ ಹಿಂಸೆಯ ಹೊರಟ ಪ್ರಾಣವನ್ನೇ ಬಲಿಕೊಡಲು ಸಿದ್ಧ! ೧೪
ವಿವಿಧ ಸಮಾಚಾರಗಳು ... ೧೬
ನಡೆದ ಕತೆಗಳು, ನಗಬಾರದು ... ೧೮


**ಸ್ವದೇಶಾಭಿಮಾನಿ**

ತಾ ೧೩ನೇ ಶುಕ್ರವಾರ ಸಪ್ಟಂಬರ '೩೫

# ಮುಂದಿನ ಹೆಜ್ಜೆ.

ಕಾಂಗ್ರೆಸ್ ಪಕ್ಷವು ಇನ್ನೆಷ್ಟು ಕಾಲ ತನ್ನ ಕಾರ್ಯಕ್ರಮವನ್ನು ಹೊರಗೆಡವದೆ ಇರುವುದೋ, ಇರಬೇಕೋ, ತಿಳಿದಿಲ್ಲ ಆದರೆ, ಜನರೆಯ ಕುತೂಹಲ, ಪ್ರಶ್ನೆ ಆಕ್ಷೇಪಗಳನ್ನು ತಿಳಿದಾದರೂ ಇನ್ನೂ ಕೌನ್ಸಿಲು ಪ್ರವೇಶದೊಡನೆ ಅಧಿಕಾರ ಸ್ವೀಕಾರವನ್ನೂ ಮಾಡಬಹುದೋ, ಬೇಡವೋ ಕೂಡದೋ ಎಂಬ ವಿಚಾರದಲ್ಲಿ ಸ್ಪಷ್ಟ ಉತ್ತರಕೊಡುವುದೇ ಆಗತ್ಯವಾಗಿದೆ

ಕಾಲವು ಸನ್ನಿಹಿತವಾಗಿದೆ ಇತರ ಪಕ್ಷಗಳು ಪ್ರಚಾರಮಾಡುತ್ತಲಿವೆ ಚುನಾವಣೆಗಳು ಮುಗಿದನಂತರ ಅಧಿಕಾರ ಸ್ವೀಕಾರದ ಸಮಸ್ಯೆಯೆಂದು ಇನ್ನು ಸಮಯ ಕಳೆವುದು ಸರಿಯಲ್ಲ ಕೌನ್ಸಿಲು ಪ್ರವೇಶವು ಸಲ್ಲುವುದಾದರೆ, ಅಧಿಕಾರಸ್ವೀಕಾರವೂ ಸಲ್ಲದೆನ್ನುವುದು ಶುದ್ಧ ತಪ್ಪೆಂದು ಎಲ್ಲೆಲ್ಲಿಂದಲೂ ಆಕ್ಷೇಪಗಳಿದ್ದಿವೆ. ಶಾಸನಶೀಲವಾಗಿ ನಡೆಯತಕ್ಕದೆಂಬ ನಿರ್ಧಾರವೆಂತೂ ಇರುವಾಗ, ಅಧಿಕಾರಿಗಳಿಗೆ ವಿರೋಧವಾದೊಂದು ಪಕ್ಷವನ್ನು ಕಟ್ಟಿಕೊಂಡು ಅಲಂಕಾರವಾಗಿ ಆಸನದಲ್ಲಿ ಮಂಡಿಸಿದರೆ ಯಾವ ಪ್ರಯೋಜನವೂ ಆಗಲಾರದು. ತಡೆಹಾಕುವ ತಂತ್ರವು ಹಿಂದೆ ಗೆಲ್ಲಲಿಲ್ಲ, ಇನ್ನು ಗೆಲ್ಲುವುದು ಕಷ್ಟ, ಸಭೆಯಲ್ಲಿ ಮಂಜೂರಾಗದೆ ಬಿದ್ದುಹೋದುದನ್ನು ಪುನರುಜ್ಜೀವನಗೊಳಿಸಲು ಆಗತ್ಯವಾದ ಸಂಜೀವನಾಧಿಕಾರವನ್ನು ಗವರ್ನರುಗಳಿಗೆ ಕೊಟ್ಟೇ ಇರುವಾಗ, ಬರೀ ವಿರೋಧಭಾವದಿಂದ ಉಪಯೋಗವೇನೂ ಇಲ್ಲ

ತನ್ನ ಸರ್ವಸ್ವವನ್ನೂ, ಸರ್ವಶಕ್ತಿಗಳನ್ನೂ ಸ್ವರಾಜ್ಯ ಸಂಪಾದನೆಗಾಗಿ ರಾಷ್ಟ್ರಪಕ್ಷವು ವಿನಿಯೋಗಿಸಬಲ್ಲುದೆಂಬ ವಿಶ್ವಾಸವು ಜನರಲ್ಲಿದೆ. ಹೀಗಿರುತ್ತ ಶ್ರದ್ಧಾಳುಗಳಾಗಿರುವ ಈ ಪಕ್ಷದವರು ಅಧಿಕಾರವನ್ನು ಸ್ವೀಕರಿಸಿ, ಜನತೆಯ ಹಿತವನ್ನೆ ಸಾಧಿಸುವರೆಂದೂ, ಅದು ಕೈಲಾಗದಿದ್ದಲ್ಲಿ ಪುನಃ ಚುನಾವಣೆಗಳು ನಡೆಯುವಂತಾಗುವುವೆಂದೂ ಜನತೆಯು ತಿಳಿದಿದೆ ಆದರೆ ರಾಷ್ಟ್ರಸಭೆಯು ಈ ವಿಷಯವನ್ನು ನಿಶ್ಚಿತವಾಗಿ ತಿಳಿಸಿಲ್ಲ ಹಾಗಿದ್ದರೂ, ಇವರು ಸುಧಾರಣೆಗಳನ್ನು ಒಡೆದುಹಾಳತಕ್ಕವರೆಂದೇ ಭಾವಿಸಿ, ಉಳಿದ ಎಲ್ಲ ಪಕ್ಷಗಳನ್ನು ಒಂದುಗೂಡಿಸುವ (ಕಪ್ಪೆಗಳನ್ನು ಬಳ್ಳದಲ್ಲಿ ಕೂಡಿಸ ಹೊರಟಂತೆ) ಒಂದು ಉದ್ಯಮವು ನಡೆಯುತ್ತಲಿದೆ.

ರಾಷ್ಟ್ರಸಭೆಯು, ಇವರಂತೆ ಸುಧಾರಣೆಗಳನ್ನು ಅವುಗಳ ಯೋಗ್ಯತೆಗೆ ತಕ್ಕಂತೆ ಅಂಗೀಕರಿಸುವುದಿಲ್ಲ, ರಾಷ್ಟ್ರ ಸಭೆಯ ಯೋಗ್ಯತೆಗೆ ತಕ್ಕಂತೆ ಸುಧಾರಣೆಗಳನ್ನು ತಿದ್ದಿ ತರಬೇಕಾಗಿಯೆ ಸಭೆಗಳಿಗೆ ಚುನಾವಣೆ ಹೊಂದಲು ಪ್ರಯತ್ನಿಸಬೇಕು. ಹಾಗೆ ಪ್ರಯತ್ನಮಾಡುವಾಗ, ಸುಧಾರಣೆಗಳು ವ್ಯರ್ಥವಾಗಿ ತೋರುವುವಾದರೆ, ಸರಕಾರವೇ, ಪಾರ್ಲಿಮೆಂಟೇ ಅವನ್ನು ಪುನಃ ತಿದ್ದಿಕೊಡಬೇಕಾಗುವುದು. ಹಿಂದೀಯರೂ ಬ್ರಿಟಿಷರೂ ಪುನಃ ಒಂದುಕೂಡಿ ವಿಚಾರ ಮಾಡಬೇಕಾಗುವುದು, ಇಲ್ಲವೆ, ಜವಾಬುದಾರಿಯುಳ್ಳ ಸರಕಾರವೆಂಬುದು ಸುಮ್ಮನೆ ಆಡಂಬರವೆಂದು ಬ್ರಿಟಿಷರೂ ತಿಳಿಯುವರು

ದೇಶಕ್ಕೆ ಹಿತವಾಗುವ ಹಾಗೆ ಸಾಧಿಸುವ ಯಾವ ಪಕ್ಷವನ್ನೂ ಬ್ರಿಟಿಷ ಸರಕಾರವು ಕಡೆಗಣ್ಣಿಂದ ನೋಡಲಾರದು, ಹಾಗಿರುವುದರಿಂದ, ಪದೇ ಪದೇ ಕಾದಿಟ್ಟ ಅಸ್ತ್ರಗಳನ್ನು ಬತ್ತಳಿಕೆಯಿಂದ ತೆಗೆದು ಎಸೆಯಲು ಯಾವ ಸರಕಾರವೂ ಒಪ್ಪದು ಸುಧಾರಣೆಗಳು ತಾವಾಗಿಯೆ ದೇಶಹಿತಕ್ಕಾಗಿ ತಿದ್ದಿಕೊಂಡು ಬಾಳುವಂತಾಗುವುದು. ಈಗಣ ಅಕ್ಟು ಮೇರೆಗೆ, ಸಂಪೂರ್ಣ ಸ್ವರಾಜ್ಯ ಸಿಗುವ ಹಾಗೆ ರಾಜಕಾರಣದಲ್ಲಿ ಮುಂದರಿಯಲು ಬೇಕಾಗುವ ಮೂಲತತ್ವಗಳು ಈ ಆಕ್ಟಿನಲ್ಲಿವೆ ಎಂದೆನ್ನುವ ಪಾರ್ಲಿಮೆಂಟಿಗೂ ಇದರಿಂದ ಖ್ಯಾತಿಯುಂಟು

ದೇಶದಲ್ಲಿ ಅತಿಬಲವಾಗಿರುವ ಜನಾಭಿಪ್ರಾಯದ ಬೆಂಬಲವಿರುವ ಪಕ್ಷವೇ, ಸಭೆಗಳಲ್ಲಿ ಬಹುಮತವನ್ನು ಸಂಪಾದಿಸಿಕೊಂಡು ಕಾರ್ಯನಿರ್ವಹಿಸಿದರೆ ಮಾತ್ರ ಆಡಳಿತವು ಸುಗಮವಾಗುವುದು, ಶ್ರೇಯಸ್ಕರವಾಗುವುದು ಜನಾಭಿಪ್ರಾಯದ ಬೆಂಬಲವನ್ನು ರಾಷ್ಟ್ರಪಕ್ಷವು ಪಡೆದಿದೆ, ಅದನ್ನು ಕಾಪಾಡಿಕೊಳ್ಳಲಿ, ಅದಕ್ಕಾಗಿಯೆ, ಮಂತ್ರಿಮಂಡಲದಲ್ಲಿ ಪ್ರತಿನಿಧಿಗಳು ಸೇರುವಂತೆ ಅವರಿಗೆ ಅನುಕೂಲವಾದ ನಿರ್ಣಯವನ್ನು ಇನ್ನೂ ಕಾಲಹರಣ ಮಾಡದೆ ಅಂಗೀಕರಿಸಲಿ

---

## ಒಂದು ಕೋಟಿ ರೂಪಾಯಿ

ಇಂಡಿಯಾ ಸರಕಾರವು ಗ್ರಾಮಸಂಘಟನೆಗಾಗಿ ಒಂದು ಕೋಟಿ ರೂಪಾಯಿಗಳನ್ನು ಪ್ರಾಂತಿಕ ಸರಕಾರಗಳಿಗೆ ಹಂಚಿಕೊಟ್ಟಿರುವುದಷ್ಟೆ ಪ್ರಾಂತಿಕ ಸರಕಾರಗಳು ತಮಗೆ ದೊರೆವ ಮೊಬಲಗನ್ನು ಹೇಗೆ ವಿನಿಯೋಗ ಮಾಡುವುವು ಎಂಬುದನ್ನು ಮೊದಲಾಗಿ ತಿಳಿಸಿ, ಆ ಕಾರ್ಯಕ್ರಮವು ಮಂಜೂರಾತಿ ಹೊಂದಿದ ಬಳಿಕವೇ ಈ ಹಣವು ದೊರೆವುದಾಗಿ ಸರಕಾರವು ತಿಳಿಸಿದ್ದಿತು ಹೀಗೆ ನಾನಾ ಪ್ರಾಂತಿಕ ಸರಕಾರಗಳು ತಮತಮಗೆ ಆಗತ್ಯವಾಗಿರುವ ಬೇರೆ ಬೇರೆ ಕಾರ್ಯಕ್ರಮವನ್ನು ಸೂಚಿಸಿಕೊಂಡಿವೆ ಕೆಲವೇ ವಿಷಯಗಳಿಗಾಗಿ ಹಣವನ್ನು ಹಂಚಿ ಹಾಕಿದುದು ಮದ್ರಾಸು ಸರಕಾರ ಮಾತ್ರ, ಹೀಗೆ ಮಾಡಿದುದರಿಂದ ಇವರ ಸೂಚನೆಗಳು ಕಷ್ಟವಿಲ್ಲದೆ ಮಂಜೂರಾದುವು

ಬೊಂಬಾಯಿಯ ಮಾಜಿ ಗವರ್ನರರು ನಿವೃತ್ತರಾಗುವ ವೇಳೆ ಅಲ್ಲಿನ ಸರಕಾರವು ಗ್ರಾಮಸಂಘಟನೆಯ ಹೊಸ ಉದ್ಯಮವನ್ನು ಕೈಕೊಂಡಿತು ಅದಕ್ಕಾಗಿಯೆ ಇನ್ನಷ್ಟು ಮೊಬಲಗನ್ನು ಕೇಳಿಕೊಂಡಿದೆ ಮದ್ರಾಸು ಸಂಸ್ಥಾನದ ಕೆಲವು ಸ್ಥಳಗಳಿಂದ ಮೀನನ್ನು ಒಯ್ದು, ಬೊಂಬಾಯಿ ಸಂಸ್ಥಾನದ ಕೆಲವು ಕೆರೆಗಳಲ್ಲಿ ಸಾಕುವುದಕ್ಕೆ ಮೊದಲಾಗಿ ಹಲವು ಇಂತಹ ವಿಷಯಗಳಿಗಾಗಿ ಹಣವನ್ನು ಬೊಂಬಾಯಿ ಸಂಸ್ಥಾನವು ಕೇಳಿಕೊಂಡಿದೆ ಇಂತಹ ಚಿಕ್ಕ ಚಿಕ್ಕ "ಬಾಬು"ಗಳಿಗಾಗಿಯೇ ವಾರ್ಷಿಕ ಬಜೇಟಿನಲ್ಲಿ ಬೊಂಬಾಯಿಗೆ ಹಣವುಳಿಯುವುದಿಲ್ಲ.

ಬಂಗಾಳ ಸರಕಾರವು ನೂರಾರು ವಿಷಯಗಳಿಗಾಗಿ ಹಣ ಕೇಳಿ, ಪಡೆದಿದೆ ಇದರಿಂದ ಆ ಸರಕಾರಕ್ಕೆ ಅಡಚಣೆಗಳು ಬಹಳವಿವೆಯೆಂದೂ, ಹಣವು ಸಾಕಷ್ಟು ಉಳಿಯುತ್ತಿಲ್ಲವೆಂದೂ ಅರ್ಥವಾಗುತ್ತದೆ. ಮಿಡ್ನಾಪುರ ಜಿಲ್ಲೆಯಲ್ಲಿ ರೇಡಿಯೋ ಮತ್ತು ಗ್ರಾಮೋಫೋನ್ ಮೂಲಕ ಪ್ರಚಾರ ಕಾರ್ಯವನ್ನೂ ಮಾಡುವುದಕ್ಕೆ ಹೆಚ್ಚಿನ ಹಣ ಕೇಳಲಾಗಿದೆ ನಮ್ಮ ಸರಕಾರವೂ (ಮುಖ್ಯ ಮಂತ್ರಿಗಳು) ಇದೇ ಪ್ರಚಾರಕ್ರಮಕ್ಕಾಗಿ ಹಣ ಪಡೆಯಬಹುದಾಗಿದ್ದಿತು. ಆದರೆ, ನಮ್ಮಲ್ಲಿ ಕಾರ್ಯಗಳೇ ಸಾಕಷ್ಟು ಪ್ರಚಾರ ಮಾಡುವಾಗ, ಮಂತ್ರಿಗಳೂ ಪಕ್ಷೀಯರೂ ಅಲ್ಲಲ್ಲಿ ಭಾಷಣಕೊಡುತ್ತ ಸಂಚರಿಸುವಾಗ, ಪುನಃ ಯಂತ್ರಗಳ ಮಾತೇಕೆ?

ನಮ್ಮ ಮುಖ್ಯ ಮಂತ್ರಿಗಳ ಪ್ರಾಣದ ಆಸೆಯೆಂದರೆ,–ಗ್ರಾಮಗಳಿಗೆ ಸುರಕ್ಷಿತವಾದ ನೀರನ್ನೊದಗಿಸಿಕೊಡುವುದು. ಇದಕ್ಕಾಗಿ ಐದೂವರೆ ಲಕ್ಷ ರೂಪಾಯಿ ಪಡೆಯಲಾಗಿದೆ ಇದರಿಂದ, ಕಾರ್ಯಾರಂಭ ಮಾಡಬಹುದಾಗಿದೆಯೇ ವಿನಾ, ಹೆಚ್ಚಿನದೇನೂ ಸಾಧ್ಯವಾಗಲಾರದು ಗ್ರಾಮಗಳ ಆರೋಗ್ಯರಕ್ಷಣೆಯ ಏರ್ಪಾಡೂ ಹೀಗೆಯೇ ಪ್ರಾರಂಭಿಸಬಹುದು, ಮುಂದೆ? ಬೊಂಬಾಯಿಯಲ್ಲಾದರೆ, ಗ್ರಾಮಸ್ಥರೇ ತಮ್ಮ ಹಳ್ಳಿಯ ಉದ್ಧಾರಕ್ಕಾಗಿ ಪೇಚಾಡುವಾಗ, ಸರಕಾರವು ಆಗತ್ಯ ಸಹಾಯ ಮಾಡುವಂತಹ ಕಾರ್ಯಕ್ರಮವಿದೆ ಹೀಗೆ, ಸ್ವಸಹಾಯಗಳಿಗೆ ಮಾತ್ರ ಸರಕಾರವು (ದೈವಿಕರೀತಿಯಲ್ಲಿ) ಸಹಾಯ ಮಾಡುತ್ತ ಬರುವುದರಲ್ಲಿ ಒಂದು ಅರ್ಥವಿದೆ, ಹೊರತು, ಎಲ್ಲವನ್ನೂ ತಾವೇ ಮಾಡಿದಂತಹ ಮಹಾ ಪ್ರಬಲರು ಎಂದು ತಮ್ಮ ಪಕ್ಷೀಯರೂ ಹೊಗಳಿಕೊಳ್ಳಲು ಮಾತ್ರ ನಮ್ಮ ಮುಖ್ಯಮಂತ್ರಿಗಳು ಸಾಧಿಸಿರುವಂತಾಗಿದೆ

ನೀರಿನ ಸರಬರಾಯಿಯ ತರುವಾಯದಲ್ಲಿ,–ಗ್ರಾಮಸಂಚಾರಕ್ಕೆ ಅನುಕೂಲತೆಗಳನ್ನು ಮಾಡುವುದಕ್ಕಾಗಿ ಬಹಳ ಹಣವು ವಿನಿಯೋಗಹೊಂದುವುದು ಇದೇಕೊ, ಇತರ ಪ್ರಾಂತ್ಯಗಳಲ್ಲಿ ಇಷ್ಟು ಹೆಚ್ಚು ಹಣವು ಇದರ ಸಲುವಾಗಿ ಬೇಕೆಂದು ಕೋರಲಿಲ್ಲ ಬಿಹಾರದಲ್ಲಿ ಮಾತ್ರ, ಭೂಕಂಪದ ಹಾವಳಿಯಿಂದಾಗಿ ತಾನೆ, ಅರೆವಾಸಿ ಹಣವನ್ನೆಲ್ಲ ಹೆದ್ದಾರಿಗಳಿಗಾಗಿ ವ್ಯಯಿಸುವರು ಆದರೆ, ನಿಜವಾಗಿಯೂ ನಮ್ಮ ಪ್ರಾಂತ್ಯದಲ್ಲಿ ಗ್ರಾಮಗಳಲ್ಲಿ ಮಾರ್ಗಗಳು ಇನ್ನಷ್ಟು ಬೇಕಾಗಿವೆ ಏಕೆಂದರೆ, ಗ್ರಾಮದ ಉತ್ಪನ್ನಗಳನ್ನು ಬೇಗನೆ ಸುಲಭವಾಗಿ ಪೇಟೆಗೆ ಕರಲೂ ಸಂತೆಗೆ ಒಯ್ಯಲೂ ಮಾರ್ಗಗಳೇ ಆಗತ್ಯವಾಗಿವೆ. ಆದರೂ, ಬರೀ ೪॥ ಲಕ್ಷ ರೂಪಾಯಿಗಳಿಂದ, ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯೆನ್ನುವಂತೆ ಈ ಹಣವೊದಗುವುದಲ್ಲವೆ? ವಾಹನಗಳ ಮೇಲೆ ತೆರಿಗೆಯನ್ನು ಹಿಂದೆ ವಿಧಿಸಿದಂತೆ ವಿಧಿಸುತ್ತ ಬಂದಿದ್ದರೆ, ಎಷ್ಟೋ ಲಕ್ಷ ರೂಪಾಯಿಗಳು ಈ ಬಗೆಯ ಖರ್ಚಿಗೆ ದೊರೆಯುತ್ತಿದ್ದುವು. ಸುಲಭತೆರಿಗೆ ಹಾಕಿದ್ದರೂ ಸಾಕಾಗುತ್ತಿದ್ದಿತು ಈಗಣ ಸ್ಥಿತಿಯಲ್ಲಿ ಗ್ರಾಮರಸ್ತೆಗಳನ್ನು ಪ್ರಾರಂಭಿಸಿದರೆ, ಅವುಗಳ ವಿಸ್ತೀರ್ಣವು ಕಣ್ಣಿಗೆ ಕಾಣದಷ್ಟು ಆಗುವುದು, ಹಾಗೆಂದು ಪ್ರತಿವರ್ಷವೂ ಹೀಗೆ ಹಣವ್ಯಯಿಸುವುದಕ್ಕೆ ಹೇಗೆ ಸಾಧ್ಯವಾಗಬಹುದೋ ಯಾರೂ ತಿಳಿದಿಲ್ಲ.

---

# ಸ್ಫುಟವಿಚಾರಗಳು

**ಚಾ, ಪಾನದ ವಿಚಾರವಾಗಿ–**

ಮಹಾತ್ಮಾಜೀಯವರು, ಈಗ ತಾನೆ ಪ್ರತಿ ಪ್ರಾಂತಿಕ ಪತ್ರಿಕೆಗಳಲ್ಲೂ ವಿಶೇಷವಾಗಿ ಚಾ ಪ್ರಚಾರದ ನೋಟೀಸುಗಳನ್ನು ಓದುತ್ತ 'ಹರಿಜನ' ಪತ್ರಿಕೆಯಲ್ಲಿ ತಮ್ಮ ಟೀಕೆ ಬರೆದಿರುವರು ವಿಜ್ಞಾನ ಶಾಸ್ತ್ರದಲ್ಲಿ ಪಾರಂಗತರಾಗಿರುವ ಸರ್ ರೇಯವರ ಸೂಚನೆಗಳನ್ನು ಹಿಂದಣ ಸಂಚಿಕೆಯಲ್ಲಿ ಬರೆದೆವು. ಈಗ,–ಶ್ರೀ ನೇಪಾಲಚಂದ್ರ ಭಟ್ಟಾಚಾರ್ಯರೆಂಬವರೊಬ್ಬರ ಹೇಳಿಕೆಯನ್ನು ಬಂಗಾಳದಲ್ಲಿ ಪ್ರಕಟಿಸಿದ್ದಾರೆ. ಇವರು ೪೮ನೇ ವಯಸ್ಸಿನಲ್ಲಿದ್ದರೂ ೩೫ರವರಂತೆ ಕಾಣುತ್ತಿರುವುದಕ್ಕೆ, ೧೪ನೇ ವಯಸ್ಸಿನಿಂದ ಪ್ರಾರಂಭಿಸಿ, ಈಗ ದಿನಕ್ಕೆ ೩೦ ಲೋಟಾ ಚಾ ಪಾನ ಮಾಡುತ್ತಿರುವುದೇ ಕಾರಣವಂತೆ. ಅದೂ, ಚಾ ತಯಾರಿಸಿದ ಕೂಡಲೆ ಕುಡಿಯದೆ, ತಣ್ಣಗಾದ ಬಳಿಕ ಕುಡಿಯುವರಂತೆ. ಒಂದೊಂದು ಸಲ, ೬–೧೦ ಲೋಟಾ ಕುಡಿದು ಬಿಡುವರಂತೆ ಈ ವೃತ್ತಾಂತವನ್ನು ಪತ್ರಿಕಾ ಬಾತ್ಮಿಯಂತೆ ಪ್ರಕಟಿಸುತ್ತಾರೆ ಹೊರತು ಅದೊಂದು ನೋಟಿಸು, ಅಥವಾ ಜಾಹೀರಾತಿನಂತೇನೂ ಕಾಣುತ್ತಿಲ್ಲ' ಹೀಗೆಂದು ಮಹಾತ್ಮಾಜೀಯವರು ಹೇಳುತ್ತಾ, "ಜಗತ್ತಿನಲ್ಲಿ ಇನ್ನೆಲ್ಲೂ ಇಂತಹ ಅಭಿಪ್ರಾಯವಾಗಿಲ್ಲ ಚಾ ಪಾನವು ಇಲ್ಲದಿದ್ದಲ್ಲಿ ಮನುಷ್ಯ ಸಮಾಜಕ್ಕೆ ಯಾವ ಬಗೆಯ ಹಾನಿಯೂ ಉಂಟಾಗುತಿರಲಿಲ್ಲ ಜಾಹೀರಾತುಗಳಲ್ಲಿ ಆಗುವಷ್ಟು ಸತ್ಯವಿರಬೇಕು ಭಾವಿಸಿದ ಮಾತಿಗೆ ಬಹಳ ಬೆಲೆಯನ್ನು ನಮ್ಮಲ್ಲಿ ಕೊಡುತ್ತಾರೆ ಹಾಗಿರುವಾಗ, ಸುಳ್ಳು ಭಾವಿಸಿದಲ್ಲಿ ಮಹದನ್ಯಾಯವಾಗುವುದು ಒಂದೆರಡು ಲೋಟಾ ಚಾ ಕುಡಿದರೆ, ಅದೇ ಸಾಕು, ಮೂವತ್ತು ಕುಡಿದಲ್ಲಿ ನರಗಳೆಲ್ಲ ಕುಂದುವುವು, ಅಜೀರ್ಣಕ್ಕಾರಂಭವಾದೀತು ಚಾ ಕುದಿಸಿದಾಗ ಹುಟ್ಟುವ 'ಟೆನ್ನಿನ್' ಎಂತಹ ಅನ್ನಕೋಶಕ್ಕಾದರೂ ಕೆಟ್ಟುದೇ ಆಗಿದೆ ಎಂದು ಯಾವ ಡಾಕ್ಟರರೂ ಹೇಳುವರು ಇದು ಚೀನೀಯರಿಗೆ ತಿಳಿದೇ, ಗಾಳಿಸುವ ಪಾತ್ರದಲ್ಲಿ ಎಲೆಗಳನ್ನಿಟ್ಟು, ಅದರ ಮೇಲೆ ನೀರು ಹೊಯ್ದು, ಆ ಚಾವನ್ನು ಅವರು ಕುಡಿಯುವರು, ಹೊರತು ರಕ್ತದಂತೆ ಕೆಂಪಾದ ಚಾವನ್ನಲ್ಲ ಹಾಗಿರುವ ಚಾ ವಿಷವೇ ಸರಿ" ಎಂದು ವಿವರಿಸಿರುವರು

**ರಾಜಕೀಯ ಪಂಗಡಗಳು**

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಸೇರಿರುವ ನಾನಾ ಪಕ್ಷಗಳಲ್ಲಿ ಕಳೆದ ನಲ್ವತ್ತು ವರ್ಷಗಳಿಂದೀಚೆಗೆ ಬೇಕಾದಷ್ಟು ಬದಲಾವಣೆಗಳಾಗುತ್ತ ಬಂದಿವೆ. ಆಯಾ ಕಾಲದ ವಿದ್ಯಮಾನಗಳಿಗೆ ಅನುಸಾರವಾಗಿ ಪಂಗಡಗಳು ತಮ್ಮ ಕಾರ್ಯಕ್ರಮಗಳನ್ನು ಬದಲಾಯಿಸಿಕೊಂಡೇ ಬಾಳಿಬಂದಿವೆ. ಇದರಿಂದಾಗಿ ಪಂಗಡಗಳೆಲ್ಲವೂ ಕ್ಷೇಮವಾಗಿವೆ ಪಂಗಡಗಳಿಗೆ ಒಂದು ಉತ್ತಮ ಧ್ಯೇಯವಿರಬೇಕು. ಆ ಧ್ಯೇಯವೇ ಇಲ್ಲದಿರುವಲ್ಲಿ, ನಾನಾ ನಂಬಿಗೆಗಳನ್ನು ಕೊಡುವುದೂ, ಕನಸಿನ ರಾಜ್ಯವನ್ನು ಕಣ್ಣ ಮುಂದಿಡುವುದೂ ವ್ಯವಹಾರಕ್ಕೆ ಸಂಬಂಧವಿಲ್ಲದುದೂ ಅಸಾಧ್ಯವಾದುದೂ ಯಾವುದೋ ಅದನ್ನು ಈಗ ಚುನಾವಣೆಗೆ ಮೊದಲೇ ಸಾರುವುದೂ ಎಂತಹ ಪ್ರಯೋಜನದ್ದು? ವಿದ್ಯಾಭ್ಯಾಸ, ತೀರ್ವೆ ಮೊದಲಾದ ಸಮಸ್ತರಿಗೂ ತಿಳಿಯಲು ಸುಲಭವಾಗಿರುವ–ವಿಷಯಗಳಲ್ಲಿ ಪ್ರತಿಯೊಂದೂ–ಪಂಗಡದವರು ಏನುಮಾಡಲಿರುವರೆಂಬುದನ್ನು ಸೂಚಿಸಿ, ಸೂಚಿಸಿದುದನ್ನು ಪ್ರತ್ಯಕ್ಷವಾಗಿ ಮಾಡಲೂ ಸಿದ್ಧರಾಗಿ, ಸಾಧ್ಯವಾಗಿರುವಲ್ಲಿ ತಾನೆ ಜನರಿಗೆ ಈ ಪಂಗಡಗಳ ಉಪಯೋಗ? ಇಲ್ಲದಿರುವಲ್ಲಿ, ಪ್ರಾಂತಿಕ ಆಡಳಿತದಲ್ಲಿ ಯಾವ ಪಕ್ಷವನ್ನು ತಾನು ಸಮರ್ಥಿಸಬೇಕೆಂಬುದು ಯಾವ ವೋಟರನಿಗೂ ತಿಳಿಯದೆ, ಹತ್ತರ ಜತೆಗೆ ಅವನೂ ಸೇರುವಂತಾಗುವುದಲ್ಲವೆ? ಹೀಗಿದ್ದಲ್ಲಿ–ಚುನಾವಣೆಯ ತತ್ವವೆಲ್ಲಿ ಉಳಿಯುವುದು?

---

## ಮಂಗಳೂರು.

ಇದೇ ತಿಂಗಳ ತಾ. ೮ನೇ ಆದಿತ್ಯವಾರ ಅಪರಾಹ್ನ ಘಂಟೆ ೧೧ಕ್ಕೆ ಇಲ್ಲಿಯ ಕೆನರಾ ಹೈಸ್ಕೂಲಿನಲ್ಲಿ ಹಿಂದೀ ಪರೀಕ್ಷೆಯು ಜರಗಿತು. ಈ ಸಲ ಒಟ್ಟು ೪೯ ಮಂದಿ ಉಮೇದ್ವಾರರಿದ್ದರು. ಪ್ರಾಥಮಿಕದಲ್ಲಿ ೩೩ ಮಧ್ಯಮಾದಲ್ಲಿ ೧೨, ರಾಷ್ಟ್ರಭಾಷಾ ೧೪ ಇವರಲ್ಲಿ ಮಹಿಳೆಯರು ಕೇವಲ ೭ ಮಂದಿ ಮಾತ್ರ. ಮಂಗಳೂರಲ್ಲಿ ಹಿಂದೀ ಪರೀಕ್ಷೆಗಳು ಇದುವರೆಗೆ ನಡೆದುದರಲ್ಲಿ ಈ ಸಲದ ಪರೀಕ್ಷಾರ್ಥಿಗಳ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತದೆ. ಅದರಲ್ಲೂ ಮಹಿಳೆಯರ ಸಂಖ್ಯೆ ತೀರಾ ಕಡಿಮೆಯಾಗಿದೆ. ಪ್ರಸ್ತುತದ ಪರಿಸ್ಥಿತಿಯಲ್ಲಿ ಮಂಗಳೂರ ಹಿಂದೀ ಕಾರ್ಯಕ್ಷೇತ್ರದಲ್ಲಿ ಸ್ವಲ್ಪ ಶಿಥಿಲತೆಯು ಒದೆದು ಕಾಣುತ್ತದೆ.

ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಯವರ ಸಂಪಾದಕತ್ವದಿಂದ "ಸದ್ಧರ್ಮ ಪ್ರಚಾರಕ" ಎಂಬ ಮಾಸಿಕ ಪತ್ರಿಕೆಯು ಹೊರಡಲಿದೆಯೆಂದೂ, ಅದರಲ್ಲಿ ಕಥೆ, ಕವನ, ಕಾದಂಬರಿಗಳು ಪ್ರಕಟಿಸಲಾಗುವವೆಂದೂ ತಿಳಿದುಬರುತ್ತದೆ.

ಮಂಗಳೂರು ಸಿಟಿ ಆರ್ಯಸಮಾಜದವರಲ್ಲಿ ಈ ಮೊದಲು ಪ್ರತಿಯೊಬ್ಬ ಮೆಂಬರನ ಮನೆಯಲ್ಲಿ ಒಂದೊಂದು ವಾರ ಕೌಟುಂಬಿಕ ಆರಾಧನೆಯ ಅವಶ್ಯಕತೆಯ ಕುರಿತು ಶ್ರೀ ಪಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ಸೂಚಿಸಿದ್ದರು. ಅದನ್ನು ಅನುಮೋದಿಸಿ ಕೆಲವು ವಾರದಿಂದ ಆಚರಿಸುತ್ತಾ ಬರುತ್ತಿದ್ದು, ಮೊನ್ನೆ ತಾರೀಕು ೮-೯-೬೩ನೇ ಆದಿತ್ಯವಾರ ಸಾಯಂಕಾಲ ೫ ಘಂಟೆಗೆ ಜಪ್ಪು ಮಾರ್ಕೆಟಿನ ಬಳಿ ಅರ್ಜುನ್ ಟೈಲರ್ ಕೆ. ತನಿಯಪ್ಪ ಇವರ ಮನೆಯಲ್ಲಿ ಕೌಟುಂಬಿಕ ಆರಾಧನೆಯು ಶ್ರೀ ವಿದ್ಯಾರ್ಥಿಯವರ ಪೌರೋಹಿತ್ಯದಲ್ಲಿ ನೆರವೇರಿತು. ಹೋಮ, ಭಜನೆ, ಪ್ರಾರ್ಥನೆ ಮತ್ತು ಹೋಮದ ಅವಶ್ಯಕತೆ, ಮಾನವನ ಜೀವನದ ಉದ್ದೇಶಪೂರ್ವಕವಾಗಿ ಇರುತ್ತದೆ ಎಂಬ ಕುರಿತು ತತ್ವಯುಕ್ತವಾದ ಭಾಷಣವಿತ್ತರು. ಫಲಹಾರದೊಂದಿಗೆ ಸಭೆಯು ಕೊನೆಗೊಂಡಿತು.

ಕಾಂಗ್ರೆಸ್ ಸಿವಿಲ್ ಬೋರ್ಡಿನ ಕಾರ್ಯಕಾರಿ ಸಮಿತಿಯು ಇದೇ ತಾ. ೮-೯-೬೩ನೇ ದಿನ ೪ ಘಂಟೆಗೆ ಬಿಸೆಂಟ್ಸ್ ಗರ್ಲ್ಸ್ ಸ್ಕೂಲಿನಲ್ಲಿ ಶ್ರೀ ಕೆ. ಆರ್. ಕಾರಂತರವರ ಅಧ್ಯಕ್ಷತೆಯಲ್ಲಿ ಜರಗಿತು. ೨೭ ಮಂದಿ ಸದಸ್ಯರಲ್ಲಿ ೨೧ ಮಂದಿ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಸೆಕ್ರೆಟರಿಗಳಾದ ಶ್ರೀ ಎಚ್. ಸುಬ್ಬಯ್ಯನವರ ಸ್ವಾಗತ ಭಾಷಣವಾದ ನಂತರ, ಅಧ್ಯಕ್ಷರ ಭಾಷಣವಾಯಿತು. ಠರಾವುಗಳಾದುದೇನೆಂದರೆ ಡಿ. ಬೋರ್ಡಿನ ಕಾಂಗ್ರೆಸ್ ಉಮೇದ್ವಾರರೆಲ್ಲ ಕೈನೂಲಿನ ವಸ್ತ್ರ ಕೈಯಿಂದಲೇ ನೇಯಲ್ಪಟ್ಟ ಉಡಿಗೆತೊಡಿಗೆಗಳನ್ನು ಸಭೆಗೆ ಹೋಗುವಾಗ ಧರಿಸಬೇಕು. ಈ ಕೆಳಗಣ ಕಾಂಗ್ರೆಸ್ ಉಮೇದ್ವಾರರನ್ನು ಆಯಾಯ ಕ್ಷೇತ್ರಗಳಿಗೆ ಚುನಾಯಿಸಲಾಯಿತು. ಕುಂದಾಪುರ ತಾಲೂಕು—ಬೈಂದೂರು ಸರ್ಕಲ್ ಶ್ರೀ ಕೆ. ವೆಂಕಪ್ಪಶೆಟ್ಟಿ, ವಂಡ್ಸೆ ಸರ್ಕಲ್ ಎಚ್. ಸುಬ್ಬಯ್ಯ, ಬಸ್ರೂರು ಸರ್ಕಲ್ ಬಿ. ಶಿವರಾಮ ಶೆಟ್ಟಿ, ಸ್ತ್ರೀಯರ ಸೀಟಿಗೆ ಮಿಸೆಸ್ ಸುಶೀಲಾಬಾಯಿ ಉಡುಪ. ಉಡುಪಿ ತಾಲೂಕು ಕಸಬಾ ಕೋಟಾ ಸರ್ಕಲ್ ಕೆ. ಮಂಜುನಾಥ ಬ್ಯಾಸು ಭಾಗ; ಉಡುಪಿ ಸರ್ಕಲ್ ಡಾ. ಪಿ. ಜಿ. ಆಚಾರ್; ಹಿರಿಯಡ್ಕ ಸರ್ಕಲ್ ಬಾಲಕಟ್ಟೆ ದೇಜು ಕೃಷ್ಣಯ್ಯ ಹೆಗ್ಡೆ, ಮಂಗಳೂರು ತಾಲೂಕು. ಸುರತ್ಕಲ್ ಕೋಚಶೆಟ್ಟಿ, ಮೂಲ್ಕಿ ಎ. ಬಿ. ಶೆಟ್ಟಿ, ಬಂಟ್ವಾಳ ಬಿ. ವೈಕುಂಠ ಬಾಳಿಗಾ, ಪಾಂಡೇಶ್ವರ ಅಪ್ಪಾಜಿ ಕೃಷ್ಣರಾಯರು, ಹೊಸ ಮಾರ್ಗ ಕೋಡೊಳೆ ಶಂಕರಾಯ ಸಾಯಾರ್, ಪುತ್ತೂರು ತಾಲೂಕು—ಎಚ್. ಪುಂಡಲೀಕ ಭಟ್, ಕೊಕ್ಕಡ ಎಂ. ಶಿವರಾವ್, ಸುಳ್ಯ ಎಸ್. ಚೆನ್ನಪ್ಪ ಗೌಡ. ಜಿಲ್ಲೆಯ ಇತರ ಸರ್ಕಲುಗಳಿಗೆ ಉಮೇದ್ವಾರರನ್ನು ಚುನಾಯಿಸುವುದಕ್ಕಾಗಿ ಒಂದು ಸಬ್ ಕಮಿಟಿಯನ್ನು ರಚಿಸಲಾಯಿತು. ಬೋರ್ಡಿನ ಹಣವನ್ನು ಕೆನರಾ ಬ್ಯಾಂಕಿಂಗ್ ಕೋಆಪರೇಷನಿನಲ್ಲಿಡಬೇಕೆಂದು ಠರಾವು ಆಯಿತು.

ಶ್ರೀ ಕೃಷ್ಣ ಸಿನೇಮದಲ್ಲಿ ಇದೇ ತಾ. ೧೪ರಿಂದ ಆರ್. ಕೆ. ಓ. ಕಂಪೆನಿಯವರ "ರೋಡ್ ಆಫ ದಿ ಡ್ರೆಗನ್" ಎಂಬ ಆಕ್ಷುಜ್ವಲ ಚಿತ್ರವು ಪ್ರದರ್ಶಿಸಲ್ಪಡುವುದು. ಈ ಚಿತ್ರದಲ್ಲಿ ರಿಚಾರ್ಡ್ ಡಿಕ್ಸ್ ಮತ್ತು ಗ್ವಿಲಿ ಆಂಡ್ರೆ ಎಂಬ ಪ್ರಖ್ಯಾತ ಆಂಗ್ಲ ನಟನಟಿಯರು ಅಭಿನಯಿಸಿರುವರು. ನಂತರ ಈಸ್ಟ್ ಇಂಡಿಯಾ ಕಂಪೆನಿಯವರ "ಸೆಲಿಮಾ" ಎಂಬ ಹಿಂದೀ ಚಿತ್ರವು ಬರಲಿದೆ. ಇದರಲ್ಲಿ ಮಾಧ್ವಿ, ಅಕರ್ ಅಲಿ, ಗುಲ್ ಹಮೀದ್ ಮೊದಲಾದವರು ಪಾತ್ರವಹಿಸಿರುವರು.

## ತಾಲೂಕುಗಳಿಂದ.

**ಫರಂಗಿಪೇಟೆ.**—ಇಲ್ಲಿಯ ಶ್ರೀ ರಾಮಾ ಹಾ. ಎ. ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ಮತ್ತು ಅದು ಹೊರಡಿಸುವ ಮಾಸ ಪತ್ರಿಕೆಯ ಐದನೇ ವರ್ಷೋತ್ಸವವೂ ಇದೇ ತಾ. ೭-೯-೬೩ರಲ್ಲಿ ಸಂಜೆ ೫-೩೦ ಘಂಟೆಗೆ ಶಾಲೆಯಲ್ಲಿ ಶ್ರೀ ಕೆ. ರಾಮರಾವ್, ಹೆಡ್ ಮಾಸ್ಟರ್, ಕಲ್ಲಡ್ಕ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ವಿದ್ಯಾರ್ಥಿಗಳು ನೆರೆದ ಸಭಿಕರನ್ನು ಸಂಗೀತ, ಯಕ್ಷಗಾನ ಇವೇ ಮೊದಲಾದುವುಗಳಿಂದ ಸಂತೋಷಗೊಳಿಸಿದರು. ನಂತರ ಶ್ರೀಯುತ ಐ. ನರಸಿಂಹ ಪೈ, ಅಧ್ಯಾಪಕ, ಬಂಟ್ವಾಳ ಹೈಸ್ಕೂಲು ಇವರು ಮಕ್ಕಳಿಗೆ ಅವರ ಕರ್ತವ್ಯದ ಕುರಿತು ಒಂದು ಭಾಷಣವನ್ನು ಮಾಡಿದರು. ಕಟ್ಟಳೆಯಂತೆ ಉತ್ತಮ ಲೇಖನದ ಬಹುಮಾನವನ್ನು ಶ್ರೀಮತಿ ವಿಶಾಲಾಕ್ಷಿ ಸಾಮಂತರು ಅವರಿಗೆ ಕೊಡಲಾಯಿತು. ಉಪಹಾರದ ನಂತರ, ಅಧ್ಯಕ್ಷರ ಹಿತಸೂಚನೆಗಳಿಂದ ಕೂಡಿದ ಸುರಸವಾದ ಭಾಷಣವು ಮುಗಿದ ಬಳಿಕ ಧನ್ಯವಾದಗಳು ಅರ್ಪಿಸಲ್ಪಟ್ಟವು. ಕೊನೆಗೆ ರಾಷ್ಟ್ರೀಯ ಗೀತದೊಂದಿಗೆ ಉತ್ಸವವು ಕೊನೆಗೊಂಡಿತು.

**ಬ್ರಹ್ಮಾವರ:**—ಸ್ಥಳೀಯ ಹಿಂದೀ ಪರೀಕ್ಷಾರ್ಥಿಗಳ ಚಿಕ್ಕ ಸಭೆಯೊಂದು ತಾ. ೬ರಲ್ಲು ನೆರೆದು, ಹಿಂದೀ ಪ್ರಚಾರದ ಕುರಿತು ಶ್ರೀ ಬಿ. ಎಲ್. ಅಡಿಗ, ಶ್ರೀ ರಾಮರಾಯ ಪೈಗಳವರ ಭಾಷಣಗಳಾದ ಮೇಲೆ ಪ್ರಚಾರಕ ಶ್ರೀ ಕಟೀಲ್ ಗಣಪತಿ ಶರ್ಮರು ಪರೀಕ್ಷಾರ್ಥಿಗಳೆಲ್ಲರನ್ನೂ ಅಭಿನಂದಿಸಿ ಒಂದು ಚಿಕ್ಕ ಭಾಷಣವನ್ನಿತ್ತರು. ಮತ್ತು ತಾ. ೮ರಲ್ಲಿ ಸ್ಥಳೀಯ ಓವರ್ಸಿಯರ್ ಶ್ರೀ ಟಿ. ವೆಂಕಟರಾಯರ ನೇತೃತ್ವದಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ೨೭ ಮಂದಿ ದಕ್ಷಿಣ ಕನ್ನಡ ಹಿಂದೀ ಪ್ರಚಾರ ಸಭೆಯವರ ಪ್ರಾಥಮಿಕ ಪರೀಕ್ಷೆಯಲ್ಲಿ ಭಾಗಿಗಳಾಗಿರುವರು.

**ಬಾರಕೂರು.**—ಇದೇ ತಾ. ೮ರಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಭಾಗಿಗಳಾದ ೧೬ ಮಂದಿ ಪರೀಕ್ಷಾರ್ಥಿಗಳು ತಮ್ಮ ಪ್ರಚಾರಕರಾದ ಶ್ರೀ ಕಟೀಲ್ ಗಣಪತಿಶರ್ಮ ಮತ್ತು ವ್ಯವಸ್ಥಾಪಕರಾದ ಶ್ರೀ ರಾಮಣ್ಣ ಶೆಟ್ಟಿಯವರಿಗೆ ಒಂದು ಟೀಪಾರ್ಟಿಯನ್ನಿತ್ತು ಸತ್ಕರಿಸಿದರು. ಮತ್ತು ಶ್ರೀ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಹಿಂದೀ ಪ್ರಚಾರದ ಕುರಿತು ಶ್ರೀಗಳಾದ ವೆಂಕಟೇಶ ಕಾಮತ್ ಎ. ಬಿ. ಕಾಮತ್ ಶೀನಪ್ಪ ಶೆಟ್ಟರ ಭಾಷಣಗಳಾದ ಬಳಿಕ ಶ್ರೀ ಶರ್ಮರ ಹಾಗೂ ಅಧ್ಯಕ್ಷರ ಭಾಷಣಗಳಾದುವು.

ಆ ೬ ೯ ೬೩ಕ್ಕೆ ಮುಕ್ತಾಯಗೊಂಡ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ... ಮಂದಿ ಮೃತರಾದರು ... ಮಂದಿ ಜನನಗಳೂ ... ಮರಣಗಳ ಪೈಕಿ ... ವಾಂತಿಭೇದಿಯಿಂದ ೩, ನ್ಯುಮೋನಿಯಾದಿಂದ ೩, ಕ್ಷಯರೋಗದಿಂದ ೪.

ಕಳೆದ ತಾ. ೧೦ನೇ ದಿನ ಮಂಗಳೂರು ಅಳಿವೆ ಬಾಗಿಲಲ್ಲಿ ... ದಿಂದ ಬಂದ ಒಂದು ಮಂಜಿಯು ಮುಳುಗಿದೆ. ಇದರಲ್ಲಿ ಒಟ್ಟು ಸಾವಿರ ಮುಡಿಯ ಕಲ್ಲುಗಳಿದ್ದುವು. ನೀರಿನಡಿಯಲ್ಲಿದ್ದ ಹೊಯಿಗೆಯ ಇದು ಮುಳುಗಲು ಕಾರಣವೆಂದು ತಿಳಿದುಬರುತ್ತದೆ.

ಟೆಲಿಗ್ರಾಫ್ ಮಾಸ್ಟರರಾಗಿ ಇತ್ತೀಚೆಗೆ ಕಲ್ಲಿಕೋಟೆಗೆ ವರ್ಗಾಯಿಸಲ್ಪಟ್ಟ ಶ್ರೀ ಜಿ. ಎನ್. ಅನಂತರವರು ಇಲ್ಲಿ ಒಂದು ವರ್ಷದ ವರೆಗೆ ಇದ್ದಾರೆ. ಅವರನ್ನು ಸತ್ಕರಿಸುವುದಕ್ಕಾಗಿ ಇಲ್ಲಿಯ ಟೆಲಿಗ್ರಾಫ್ ಆಫೀಸ್ ಕ್ಲಬ್ಬಿನಲ್ಲಿ ಒಂದು ಸತ್ಕಾರಕೂಟವನ್ನು ನಡೆಸಲಾಯಿತು. ಬಹುಮಂದಿ ಅತಿಥಿಗಳು ನೆರೆದಿದ್ದರು. ಶ್ರೀಯುತರ ಸತ್ಕೀರ್ತಿ ಅವರ ಗುಣಗಾನ ಅವರು ಮಾಡಿರುವ ಹಲವು ಉಪಯುಕ್ತ ಕೆಲಸಗಳು—ಇವೇ ಮೊದಲಾದುವನ್ನು ಪ್ರಶಂಸಿಸಿ ಭಾಷಣಗಳಾದುವು. ಭಾವಚಿತ್ರ ಫಲಾಹಾರಗಳು ನಡೆದುವು. ಶ್ರೀಯುತರ ಪುತ್ರಿಯ ಹಸ್ತ ಕ್ಲಬ್ಬಿನ ಪ್ರೇಮಸ್ಮರಣಾರ್ಥ ಒಂದು ಕಪ್ ಮತ್ತು ಸೋಸರನ್ನು ಬಹುಮಾನಿಸಲಾಯಿತು. ಶ್ರೀಯುತರು ನಮ್ಮ ಜಿಲ್ಲೆಯವರು.

ಮೂಡಬಿದ್ರೆ ಗುರುಪಯ್ಯನಕೆರೆ ಫಿರ್ಕಾದ ನಂಬ್ರ ೧೦-A ಮಾರ್ಗದ ಕಲ್ವರ್ಟ್ ರಿಪೇರಿಯಾಗಿ ಮೋಟರು ಬಸ್ಸು ಗಾಡಿ ಚಲಾವಣೆಗೆ ಸಿದ್ಧವಾಗಿದೆ ಎಂದು ಜಿಲ್ಲಾ ಬೋರ್ಡು ತಿಳಿಸುತ್ತದೆ.

ಬೊಕ್ಕಪಟ್ಣದಲ್ಲಿರುವ ಶ್ರೀ ಎಂ. ಎಸ್. ಪೈಗಳವರ ಧರ್ಮಾರ್ಥ ಚಿಕಿತ್ಸಾಲಯದಲ್ಲಿ ಜೂನ್, ಜುಲಾಯಿ ಮತ್ತು ಆಗೋಸ್ತು ತಿಂಗಳುಗಳಲ್ಲಿ ಒಟ್ಟು ೪೫೯೯ ಮಂದಿ ರೋಗಿಗಳಿಗೆ ಚಿಕಿತ್ಸೆಯು ನಡೆಯಿತೆಂದು ತಿಳಿಸಲು ಸಂತೋಷವಾಗುತ್ತದೆ.

**ಮಂದರ್ತಿ.**—ತಾರೀಕು ೮ರಲ್ಲಿ ಡಾ. ರಾಜು ಬೋಂಟ್ರರ ನೇತೃತ್ವದಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ೧೪ ಮಂದಿ ಭಾಗಿಗಳಾಗಿರುವರು. ಮತ್ತು ಇವರುಗಳ ಸಭೆಯೊಂದು ಸೇರಿ, ಹಿಂದೀಪ್ರಚಾರದ ಕುರಿತು ಶ್ರೀಗಳಾದ ಗಣಪಯ್ಯ ಶೆಟ್ಟಿ, ರಾಮಚಂದ್ರ ಚಡ್ಗ, ರಾಮಚಂದ್ರಯ್ಯನವರ ಮಾತುಗಳಾದ ಮೇಲೆ ಹಿಂದೀ ಪ್ರಚಾರಕರಾದ ಶ್ರೀ ಕಟೀಲ್ ಗಣಪತಿ ಶರ್ಮರು ಭಾಷಣವಿತ್ತರು.

**ಸುರತ್ಕಲ್:**—ಶೀಘ್ರದಲ್ಲಿಯೇ ನಡೆಯಲಿರುವ ಡಿ. ಬೋರ್ಡ್ ಚುನಾವಣೆಯಲ್ಲಿ ಈ ಸರ್ಕಲಿನಿಂದ ಮೆಂಬರರಾಗಿ ನಿಲ್ಲಬೇಕೆಂದು ಇಲ್ಲಿಯ ಇದ್ಯ ವಿದ್ಯಾದಾಯಿನೀ ಶಾಲಾ ಮುಖ್ಯೋಪಾಧ್ಯಾಯರೂ ಗತ ಮಂಗಳೂರು ತಾಲೂಕು ಬೋರ್ಡಿನ ಉಪಾಧ್ಯಕ್ಷರೂ ಆದ ಮಾ. ರಾ. ಎಚ್. ದಾಮೋದರರಾಯರನ್ನು ನೆರೆಕರೆಯ ಮುಖಂಡರು ಕೇಳಿಕೊಂಡಿರುವರಾಗಿಯೂ ಊರವರ ಈ ಅಭಿಪ್ರಾಯವನ್ನು ಪುರಸ್ಕರಿಸಿ ಸದರಿ ಮಹಾಶಯರು ಈ ಸರ್ಕಲಿನ ಮೆಂಬರರಾಗಿ ನಿಲ್ಲುವ ಸಂಭವವಿರುವುದಾಗಿಯೂ ತಿಳಿದುಬರುತ್ತದೆ. ಹಿಂದೆಯೂ ತಾಲೂಕು ಬೋರ್ಡುಗಳಲ್ಲಿ ಈ ಸರ್ಕಲಿನ ಪ್ರತಿನಿಧಿಗಳಾಗಿದ್ದು, ಜನಪ್ರಿಯರಾಗಿರುವ ಶ್ರೀಯುತ ದಾಮೋದರರಾಯರು ಈ ಸಲವೂ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಡುವರೆಂದು ಹಾರೈಸಲಾಗಿದೆ.

**ಕಿನ್ನಿಗೋಳಿ.**—ಈ ಮೊದಲು ತಿಳಿಸಿದಂತೆ ಈ ಸರ್ಕಲಿಗೆ ಬರುವ ಡಿ. ಬೋ. ಚುನಾವಣೆಗೆ ಆರಿಸಲ್ಪಟ್ಟ ಒಂದು ಸ್ಥಾನಕ್ಕೆ ಹಲವು ಮಂದಿ ಉಮೇದ್ವಾರರಿದ್ದರೂ ಎಲ್ಲರೂ ತಮ್ಮ ಉಮೇದ್ವಾರಿಕೆಯನ್ನು ರಾಜೀಯಿಂದ ಹಿಂತೆಗೆದು ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಸಿ. ಇವರನ್ನು ಸರ್ವಾನುಮತದಿಂದ ಪ್ರತಿಸ್ಪರ್ಧಿ ಇಲ್ಲದೇ ಆರಿಸಿ ಕಳುಹಿಸುವುದಾಗಿ ನಿಶ್ಚೈಸಿರುತ್ತದೆ. ಆ ಕುರಿತು ಸದ್ರಿಯವರು ತಾ. ೩-೯-೬೩ರಲ್ಲಿ ಇಲ್ಲಿಗೆ ಒಂದು ಎಲ್ಲಾ ಉಮೇದ್ವಾರರ ಕೂಡೆ ಮಾತನಾಡಿ ಅವರ ಒಪ್ಪಿಗೆಯನ್ನು ಪಡೆದ ಹೋಗಿರುತ್ತಾರೆ.

ಕಿನ್ನಿಗೋಳಿ ಪೇಟೆಯ ೧೨ನೇ ಮೈಲುಕಲ್ಲಿನ ಹತ್ತಿರ ಒಂದು ಮೋರಿಯು ಹಲವು ಸಮಯದಿಂದ ನಾದುರುಸ್ತಿಯಲ್ಲಿದೆ. ಮಳೆ ಬಂದ ಕೂಡಲೇ ಮಳೆಯ ನೀರೆಲ್ಲವು ಮೋರಿಯ ತೂತುಗಳಿಂದ ಹೋಗಲು ಅವಕಾಶವಿಲ್ಲದೆ ಎಲ್ಲವೂ ಉಕ್ಕೇರಿ ಮಾರ್ಗದ ಮೇಲೆ ಒಂದು ಹಳ್ಳದಂತೆಯೇ ಆಗುವುದಲ್ಲದೆ ಸಮೀಪದ ಮನೆಗಳ ಅಂಗಡಿಗಳ ಒಳಗೆ ನೀರು ಬಂದು ಜೆಲ್ಲಿ ಕೊಂಪೆಗಳು ಉಂಟಾಗುತ್ತವೆ. ಪೇಟೆಯ ನಡುಮಧ್ಯದಲ್ಲಿ ಈ ರೀತಿ ಮಾರ್ಗವು ಹೀನಾವಸ್ಥೆಯಲ್ಲಿರುವುದೆಂದರೆ ಬಹಳ ಶೋಚನೀಯ. ಅದುದರಿಂದ ಸಂಬಂಧಪಟ್ಟವರು ಈ ಕುರಿತು ಹೆಚ್ಚಿನ ಗಮನ ಕೊಡುವರೆಂದು ನಂಬಲಾಗಿದೆ.

ಮೂಡುಕಾವೇರಿಯಿಂದ ಕಟೀಲು ಹೋಗುವ ಮಾರ್ಗವು ಬಹಳ ಹೀನಾವಸ್ಥೆಯಲ್ಲಿದೆ. ಅಗತ್ಯವಿಲ್ಲದ ಕಡೆಗಳಲ್ಲಿ ಮಾರ್ಗವನ್ನು ಅಗಲಮಾಡಿದವರು ಅಗತ್ಯವಿದ್ದ ಕಡೆಗಳಲ್ಲಿ ಹಾಗೆಯೇ ಉಳಿಸಿ ಬಿಟ್ಟಿದ್ದಾರೆ. ಎಂಬಲ್ಲಿ ಒಂದು ಭಯಂಕರ ಟರ್ನಿಂಗ್ ಇದೆ. ಈ ಟರ್ನಿಂಗ್‌ನಲ್ಲಿ ಪ್ರತಿನಿತ್ಯವೂ ಮೋಟರ್ ಬಸ್ಸುಗಳು ಒಂದಕ್ಕೊಂದು ಡಿಕ್ಕಿ ಹೊಡೆದುಕೊಳ್ಳುವ ಸಂಭವ ಹೆಚ್ಚು. ಆದುದರಿಂದ ದಯಾಳು ಡಿ. ಬೋರ್ಡಿನವರು ಈ ಮಾರ್ಗದ ಮೇಲೆ ತಮ್ಮ ದೃಷ್ಟಿಯನ್ನು ಬೀರುವರಾಗಿ ನಂಬಿಕೆಯಿದೆ.

**ಫಲಿಮಾರು.**—ಸ್ಥಳೀಯ ಬೋ. ಹಾ. ಎ. ಶಾಲೆಯಲ್ಲಿ ಅನೇಕ ಹರಿಜನ ಬಾಲಕರು ವಿದ್ಯಾರ್ಜನೆಯನ್ನು ಹೊಂದುತ್ತಾರೆ. ಈ ಪೈಕಿ ೧೧ ಮಕ್ಕಳಿಗೆ ಆಗೋಸ್ತು ತಾ. ೮ರಿಂದ ಜಿಲ್ಲಾ ಹರಿಜನ ಸಂಘದಿಂದ ಮಧ್ಯಾಹ್ನದ ಊಟಕ್ಕೆ ವ್ಯವಸ್ಥೆ ಮಾಡಲ್ಪಟ್ಟಿದೆ. ೩೦ಕ್ಕೆ ಮಿಕ್ಕಿರುವ ಮಕ್ಕಳ ಸಂಖ್ಯೆಯಿಂದ ಈ ಶಾಲಾ ಕಟ್ಟೋಣವನ್ನು ವೃದ್ಧಿಮಾಡುವ ಉದ್ದಿಷ್ಟ ಇದೇ ತಿಂಗಳ ತಾ. ೨ನೇ ಸೋಮವಾರ ರಾತ್ರಿ ಶಾಲಾ ಕಟ್ಟಡದಲ್ಲಿ "ಗೃಹಲಕ್ಷ್ಮಿ" ಎಂಬ ಸಾಮಾಜಿಕ ನಾಟಕವು ಶಾಲಾ ಬಾಲಕರಿಂದಲೇ ಅಭಿನಯಿಸಲ್ಪಟ್ಟು ೨೦೦ಕ್ಕೆ ಮೇಲ್ಪಟ್ಟ ಐವೇಜು ಜಮೆಯಾಗಿದೆ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟರೂ ಇನ್ನಿತರ ಅನೇಕ ಮಹನೀಯರೂ ಅಂದು ಪ್ರೇಕ್ಷಕರಾಗಿ ಬಿತ್ತೈಸಿದ್ದರು. ಇಲ್ಲಿಯ ಶಾಲಾ ಕಟ್ಟಡದ ಸಹಾಯಾರ್ಥವಾಗಿ ವಿದ್ಯಾರ್ಥಿ ಮಂಡಲಿಯವರು ಸ್ವಲ್ಪದಲ್ಲೇ ಮೂಲ್ಕಿ ಉಡುಪಿ ಅತ್ತಕಡೆ ಕೆಲವು ಬೆನಿಫಿಟ್ ನಾಟಕಗಳನ್ನು ಅಭಿನಯಿಸಲಿಕ್ಕಿರುವರು.

ಮಾಮೂಲಿನಂತೆ ಜರಗುವ ವಿಟ್ಲಪಿಂಡಿ ಮಹೋತ್ಸವವು ಇಲ್ಲಿ ಹೆಚ್ಚಿನ ವೈಭವದಿಂದ ಜರಗಿತು. ಎಂಟು ಹತ್ತು ಸಹಸ್ರ ಜನರು ಕೂಡಿದ್ದರು. ವೇಷಭೂಷಣ, ಕೆರ್ಕನ ಇತ್ಯಾದಿಗಳನ್ನು ನೋಡುವ ಬಗ್ಗೆ ಜನರು ಮರಗಳನ್ನೇರಿ ಕುಳಿತುಕೊಳ್ಳುವ ಪದ್ಧತಿಯಿತ್ತು. ಈ ಸಂದರ್ಭದಲ್ಲಿ ಒಂದು ಹಳೇ ಅರಮರದ ಗೆಲ್ಲು ಮುರಿದುಬಿದ್ದು ಮೇಲಿರುವ ಮೂವರು ಹುಡುಗರು ಜಖಂಗೊಂಡು ಕೂಡಲೇ ಪ್ರಥಮ ಚಿಕಿತ್ಸೆ ನಡೆಸಲ್ಪಟ್ಟು, ಮೂಲ್ಕಿ ಆಸ್ಪತ್ರೆಗೆ ಒಯ್ಯಲ್ಪಟ್ಟು ಗುಣಮುಖಹೊಂದಿರುತ್ತಾರೆ. ಆಗಾಗ್ಗೆ ವಿಶೇಷ ಸಮಾರಂಭಗಳಿಗೆ ಸಹಸ್ರಗಟ್ಲೆ ಜನಸಂದಣಿ ಒಟ್ಟುಗೂಡುವಂಥಾ ಈ ಫಲಿಮಾರು ಕೇಂದ್ರಕ್ಕೆ ಒಂದು ಚಿಕಿತ್ಸಾಲಯವು ಅತೀ ಅವಶ್ಯಕವಾದ ವಿಷಯವಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟವರು ಗಮನ ಕೊಡಬೇಕಾಗಿ ವಿನಂತಿ.

**ಹೊಸೂರು:**—(ಉಡುಪಿ ತಾಲೂಕು) ಕಾಡು ಪ್ರಾಣಿಗಳ ಉಪಟಳವನ್ನಡಗಿಸುವುದಕ್ಕಾಗಿ ಈ ಗ್ರಾಮದ ಪಟೇಲರು ತಾ. ೩೦ರಲ್ಲಿ ಒಂದು ಬೇಟೆಯನ್ನು ಮಾಡಿಸಿದರು. ಬೇಟೆಗೆ ಜನರು ತುಂಬಾ ನೆರೆದಿದ್ದರು. ಲೈಸನ್ಸು ದಾರರಿಗೇನೂ ಕಡಿಮೆಯಿರಲಿಲ್ಲ. ಇಲ್ಲಿಗೆ ಸಮೀಪದಲ್ಲಿ ತಡಂಬು ಎಂಬ ಹಳ್ಳಿಯ ಲೈಸನ್ಸುದಾರನಾದ ಕೋಟಿ ಪೂಜಾರಿ ಎಂಬವನು ಬೇಟೆ ಹೊಡೆದುಕೊಂಡು ಬರುವಾಗ ಕಾಡಿನ ಮಧ್ಯದಿಂದ ಭಯಂಕರ ಹುಲಿಯೊಂದು ಎದ್ದಿತು. ಜನರು ಭಯಗ್ರಸ್ತರಾದರು. ಪೂಜಾರಿಯು ಒಮ್ಮೆ ಭಯಗೊಂಡರೂ ಮತ್ತೆ ಧೈರ್ಯತಂದು ಇದಿರು ನಿಂದಲೇ ನಿಂತು ತನ್ನ ಗುಂಡಿನಿಂದ ಹುಲಿಯನ್ನು ಹೊಡೆದನು. ಪ್ರಾಣಬಿಡಲಿಕ್ಕಿರುವ ಹುಲಿಯು ಒಮ್ಮೆ ಇವನ ಕಡೆಗೆ ಹಾರಿದ್ದರೂ ಇವನು ತಪ್ಪಿಸಿಕೊಂಡನು. ಹುಲಿಯು ಬಂದೇ ಏಟಿಗೆ ಸತ್ತುಬಿದ್ದಿತು. ಈ ಹುಲಿಯು ಸಾಧಾರಣ ೩ ಕೋಲು ಉದ್ದ ೧½ ಕೋಲು ಎತ್ತರವಿತ್ತು. ಮರುದಿನ ಸಾಯಂಕಾಲದ ವರೆಗೂ ನೋಡಬರುವ ಜನರಿಗೆ ಗತಿಮಿತಿಯಿಲ್ಲ. ಇದನ್ನು ಕೊಂದುದರಿಂದ ಎಷ್ಟೋ ಗೋವುಗಳು ಸಂರಕ್ಷಿತವಾದುವು. ಪೂಜಾರಿಯು ಈ ಮೊದಲು ೨-೩ ಹುಲಿಗಳನ್ನು ಕೊಂದು ಬಹುಮಾನವನ್ನು ಪಡೆದಿದ್ದನಾದರೂ ಇಂತಹ ಭಯಂಕರ ಹುಲಿಯನ್ನು ಇವನಾಗಲೀ ಇತರರಾಗಲೀ ಕಂಡಿದ್ದರೆಂದು ತೋರುವದಿಲ್ಲ. ಇಂತಹ ಹುಲಿಯನ್ನು ಅತಿ ಕಷ್ಟದಿಂದ ಹೊಡೆದು ಕೊಂದು ಅನೇಕ ಗೋವುಗಳನ್ನು ರಕ್ಷಿಸಿದ ಇವನನ್ನು ಉತ್ತಮ ಬಹುಮಾನದಿಂದ ಸರಕಾರವು ಪ್ರೋತ್ಸಾಹಿಸದಿರಲಾರರೆಂದೇ ಭಾವನೆ.

**ಕಾರ್ಕಳ:**—ವರ್ಷವರ್ಷವೂ ನಡೆಯುವ ಪ್ರಕಾರ ಶ್ರೀ ಗಣಪತಿ ಉತ್ಸವವು ಹಿಂದಿನ ವರ್ಷಗಳಿಗಿಂತಲೂ ವಿಶೇಷ ವಿಜೃಂಭಣೆಯಿಂದ ಜರಗಿತು.

ಜಿಲ್ಲಾ ಪಂಚಾಯತ ಆಫೀಸರರ ಅಧ್ಯಕ್ಷತೆಯಲ್ಲಿ ಇಲ್ಲಿಯ ಹೊಸ ಪಂಚಾಯತಿನ ಚುನಾವಣೆಯು ಆಗಿ ನೆರೆದವರಿಗೆ ಪಂಚಾಯತಿನ ಅವಶ್ಯಕತೆ ಮತ್ತು ಪ್ರಯೋಜನಗಳ ಕುರಿತು ಬೋಧಪ್ರದ ಭಾಷಣಗಳಾದುವು.

ಇಲ್ಲೊಂದು ಪಶುವೈದ್ಯಾಲಯವನ್ನು ಸ್ಥಾಪಿಸುವ ಅವಶ್ಯಕತೆಯನ್ನು ನಿವೇದಿಸಿ ಸಾರ್ವಜನಿಕರ ಒಂದು ಮನವಿಯು ಅಧಿಕಾರಿಗಳಿಗೆ ಹೋಗಿದೆ. ಅವರು ಈ ಅವಶ್ಯಕತೆಯನ್ನು ಅಗತ್ಯವಾಗಿಯೂ ಪೂರೈಸಿಕೊಡುವರಾಗಿ ನಂಬಲಾಗಿದೆ.

ಸ್ಥಳೀಯ ಶ್ರೀ ಪದ್ಮಸಾಲಿ ವೈಶ್ಯ ಸಮಾಜ ಸೇವಾಯುವಕ ಸಂಘದ ಆಶ್ರಯದಲ್ಲಿ ಶ್ರೀ ಗಣೇಶಜಯಂತಿ ಉತ್ಸವವು ಸಂಘದ ಹಿರಿಯ ಪೋಷಕರಲ್ಲೊಬ್ಬರಾದ ಶ್ರೀ ಕೆ. ರಾಮಶೆಟ್ಟಿಗಾರರವರ ಔದಾರ್ಯದಿಂದ ಅಚರಿಸಲಾಗಿ ಸಭಿಕರ ಅಪೇಕ್ಷೆ ಮೇರೆಗೆ ಶ್ರೀ ಕೆ. ಎಂ. ಶೆಟ್ಟಿಗಾರರವರು ಗಣೇಶ ಚರಿತ್ರೆಯನ್ನು ವಿವರಿಸಿ ಜೀವಕಳಾಗಿ, ಶ್ರೀ ಬ್ರಹ್ಮಾನಂದರು ಪುರಾಣೇತಿಹಾಸಾದಿಗಳಲ್ಲಿಯೇ ವಿವಿಧ ಭಿನ್ನರೂಪವಾಗಿ ನಿರೂಪಿಸಲಾದ ಗಣೇಶ ಚರಿತ್ರೆಯ ಪೂರ್ವಾಪರ ವಿರೋಧಗಳನ್ನು ತೋರಿಸಿಕೊಟ್ಟು, ಜಯಂತಿಯ ಹೆಸರಿನಲ್ಲಿ ನಡೆಯುವ ದಂಭಾಚಾರ, ಮೂಢನಂಬಿಕೆಗಳನ್ನು ಖಂಡಿಸಿ ಪಿ(ಪ)ರಮಾತ್ಮನನ್ನು ಮಾನಸಿಕ ಆರಾಧನಾ ಪದ್ಧತಿಯ ಪೂಜಿಸುವುದೇ ಶ್ರೇಯಸ್ಕರವಾದುದೆಂಬುದಾಗಿ ವಿಶದೀಕರಿಸಲು, ಶ್ರೀ ಕೆ. ಆರ್. ಶೆಟ್ಟಿಗಾರರವರು ಪ್ರಾಸ್ತಾವಿಕ ಭಾಷಣದ್ವಯಗಳ ವಿಮರ್ಶನಾರೂಪವಾದ ಒಂದು ಸುರಸಭಾಷಣದೀಯಲಾಗಿ, ಧನ್ಯವಾದ ಸಮರ್ಪಣ, ಕಾಲೋಚಿತ ಉಪಾಹಾರಾದಿಗಳಿಂದ ಸಭಾಂತ್ಯವಾಯಿತು.

**ಪುತ್ತೂರು.**—ಈ ವರ್ಷದ ದಸರಾ ಮಹೋತ್ಸವದ ಸಮಯ ಸಾಹಿತ್ಯ ಉತ್ಸವವನ್ನು ತಾ. ೫-೧೦-೩೩ನೇ ಶನಿವಾರ ಮಧ್ಯಾಹ್ನ ೨ ಘಂಟೆಗೆ ಪುತ್ತೂರಲ್ಲಿ ಜರಗಿಸುವದೆಂತ ನಿಶ್ಚಯಿಸಿರುತ್ತದೆ. ಧಾರವಾಡದ ಶ್ರೀ ದ. ರಾ. ಬೇಂದ್ರೆ, ಇವರು ಅಧ್ಯಕ್ಷಾಸನವನ್ನು ವಹಿಸುವರು.

ಮುಂದಿನ ಘಟನೆಗಳನ್ನು ಕೇಳುವೆವು.

ಈ ಉತ್ಸವವು ಅಧಿಕ್ಯವಾದ ಬೆಳಗ್ಗೆ, ... ಮುಂದರಿಸಲ್ಪಡುವುದು. ಆ ದಿನದಲ್ಲಿ ಉತ್ತಮ ಕಾವ್ಯ, ಲೇಖನಗಳನ್ನು ಓದುವ ಉತ್ಸಾಹಿಗಳು, ಮುಂದಾಗಿ ಅವುಗಳ ವಿವರ ಪ್ರತಿಗಳನ್ನು ಸಮಿತಿಗೆ ತಿಳಿಸಬೇಕಾಗಿ ಸಾಹಿತ್ಯ ಶಾಖೆಯ ಸ್ವಾಗತಾಧ್ಯಕ್ಷರು ಕೋರುತ್ತಾರೆ.

**ಉಡುಪಿ**—ಮಹಾಜನರ ಅಪೇಕ್ಷೆಯಂತೆ ಇದೇ ತಾ ೧೧ನೇ ರಾತ್ರಿ ೯ಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ನಾರಾಯಣ ಶಿಲ್ಪಿಯವರಿಂದ "ಅಂಗದ ಸಂಧಾನ" ನಾಟಕವು ಜರಗಿತು. ಇದರ ಉತ್ಪತ್ತಿಯನ್ನು ಉಡುಪಿಯಲ್ಲಿ ಶಾಲೆಗೆ ಹೋಗುವ ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ಸೌಕರ್ಯಕ್ಕಾಗಿ ವಿನಿಯೋಗಿಸಲ್ಪಡುವುದಾಗಿದೆ. ಎಲ್ಲಾ ಸಲದಿಂದಾಗಿ ಒಟ್ಟು ರೂ. ೯೭ ಜಮೆಯಾಗಿದೆ.

ಕಳೆದ ತಾ ೧೫ಕ್ಕೆ ಉಡುಪಿಯ ಮಹಾಜನರು ಸಭೆ ಸೇರಿ ಸರಕಾರದಿಂದ ಉಡುಪಿಗೆ ಕೂಡಬೇಕೆಂದಿರುವ ಮ್ಯುನಿಸಿಪಾಲಿಟಿಯ ನಿಷೇಧ ಠರಾವುಗಳು ಮಾನ್ಯ ಮುಖ್ಯಮಂತ್ರಿಗಳಿಗೂ ಲೋಕಲ್ ಸೆಲ್ಫ್ ಗವರ್ನಮೆಂಟ್ ಸೆಕ್ರೆಟರಿಯವರಿಗೂ ಕಳುಹಲಾಗಿದೆಯಲ್ಲದೆ ಸದರಿ ಠರಾವಿನನ್ವಯ ಈ ಕುರಿತು ಊರ ಪುರಜನರ ಅಹವಾಲುಗಳನ್ನು ಬಂಯ್ಸರಿ ವೇದ್ಯಪಡಿಸುವರೆ, ಮಾನ್ಯ ಗವರ್ನರರು ಪಟ್ಟಣಗಳ ಪರವಾಗಿ ಹೋಗಲಿರುವ ಡೆಪ್ಯುಟೇಶನಿಗೆ ಭೇಟಿಯನ್ನು ದಯಪಾಲಿಸಬೇಕೆಂದೂ ಅವರ ಪ್ರೈವೇಟ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಲಾಗಿದೆ. ಸದ್ಯದ ವಿದ್ಯಮಾನಗಳ ದೃಷ್ಟಿಯಿಂದಲೂ ಈಚೆಗೆ ಜರಗಿದ ಜಿಲ್ಲಾ ಬೋರ್ಡಿನ ಸಭೆಯಲ್ಲೂ ಉಡುಪಿಗೆ ಪ್ರಕೃತ ಜನರ ಇಚ್ಛೆಗೆ ವಿರುದ್ಧವಾಗಿ ಮ್ಯುನಿಸಿಪಾಲಿಟಿಯನ್ನು ಹೇರುವುದು ಬೇಡವೆಂದೂ ಠರಾವು ಮಂಜೂರು ಮಾಡಲ್ಪಟ್ಟಿದೆ. ಅಂತೆಯೇ ಮಾನ್ಯ ಸರಕಾರದವರು ಈ ಯೋಜನೆಯನ್ನು ಸದ್ಯ ರದ್ದುಗೊಳಿಸುವರಾಗಿಯೂ ಪುರಜನರ ಕೃತಜ್ಞತೆಯನ್ನು ಹೊಂದುವರಾಗಿಯೂ ಆಶಿಸಲಾಗುತ್ತದೆ.

ಉಡುಪಿ ತಾಲೂಕಿನಿಂದ ಬರುವ ಜಿಲ್ಲಾ ಬೋರ್ಡು ಚುನಾವಣೆಗೆ ಕಾಂಗ್ರೆಸ್ ಪರವಾಗಿ ಹಾಕಲ್ಪಟ್ಟ ಅರ್ಜಿಗಳು ಸಿಫಾರಸಿಗೆ ಇಲ್ಲಿನ ಕಾಂಗ್ರೆಸ್ ಸಮಿತಿಗೆ ಕಳುಹಲ್ಪಡದ್ದಲ್ಲಿ ಮಾಡಲಾದ ಅಲಕ್ಷ್ಯತೆಯಿಂದ ಅಸಮಾಧಾನ ಉಂಟಾಗಿರುತ್ತದೆ. ಮೇಲಾಗಿ ಹಿಂದುಳಿದ ಜಾತಿಬಾಂಧವರೊಳಗಿಂದ (ಪ್ರಸ್ತುತ ಮೊಗವೀರರೊಳಗಿಂದ) ಕಾಂಗ್ರೆಸ್ ಅಭಿಮಾನ ಹಾಗೂ ಸಹಾನುಭೂತಿ ಸಹಾಯಗಳನ್ನು ಪಡೆ ಪಡೆ ಸಂದರ್ಭವೊದಗಿದಾಗಲೆಲ್ಲ ತೋರಿಸಿದ್ದ ಯೋಗ್ಯ ಉಮೇದ್ವಾರರೊಬ್ಬರಿಗೆ, ಪ್ರಾಯಶಃ ಇದೇ ಜಿಲ್ಲೆಯೊಳಗೆ ಒಬ್ಬರೇ ಒಬ್ಬರಿಗೆ ಕಾಂಗ್ರೆಸ್ ಧ್ವಜವನ್ನು ಹಸ್ತಿಸಿ ಉಮೇದ್ವಾರಿಕೆಯನ್ನು ಮುಂದೊತ್ತಿದ್ದ ಬಂಧುವಿಗೆ ಸ್ಥಾನಸಿಗದಿದ್ದುದು ತುಂಬಾ ವ್ಯಸನೀಯವಾಗಿದೆ. ಇನ್ನಾದರೂ ಜಿಲ್ಲಾ ಸಿವಿಲ್ ಬೋರ್ಡಿನವರು ತಮ್ಮ ಆಖೈರಿಯ ತೀರ್ಮಾನವನ್ನು ಮಾಡುವಾಗಲಾದರೂ ಇಂತಹ ಉಮೇದ್ವಾರಿಕೆಗಳ ಯೋಗ್ಯಾಯೋಗ್ಯತೆಗಳನ್ನು ವಿವೇಚಿಸಿ ನಮ್ಮ ಮೊಗವೀರ ಬಂಧುಗಳನ್ನು ಪ್ರೋತ್ಸಾಹಿಸುವರೇ ಎಂದು ತವಕಗೊಳ್ಳುತ್ತೇವೆ.

ಉಡುಪಿ (ಶಿವಳ್ಳಿ) ಪಂಚಾಯತ ಕೋರ್ಟಿನ ಮೆಂಬರ ಹಾಗೂ ಡಿಸ್ಟ್ರಿಕ್ಟ್ ಏಜೆಂಟರಾದ ಶ್ರೀ ಎಂ. ವಾಮನ ಭಟ್ಟರೂ ಉಡುಪಿ ಸರ್ಕಲಿಗೆ ಬೋರ್ಡು ಚುನಾವಣೆಯಲ್ಲಿ ಉಮೇದ್ವಾರರಿರುವರೆಂದು ತಿಳಿದುಬರುತ್ತದೆ. ಇವರು ಹಲವು ವರ್ಷಗಳಿಂದಲೂ ಸತತ ಖಾದಿಧಾರಿಗಳಾಗಿರುವವರಲ್ಲದೆ ಕಾಂಗ್ರೆಸ್ ಕೆಲಸಗಾರರೂ ಇರುತ್ತಾರೆ. ಇವರು ಸ್ವತಂತ್ರ ನೇಶನಲಿಸ್ಟ್ ಧೋರಣೆಯ ರೀತ್ಯಾ ಬೋರ್ಡಿನಲ್ಲಿ ಕೆಲಸಗೈಯುವವರೆಂದು ತಿಳಿದುಬರುತ್ತದೆ. ಅಲ್ಲದೆ, ಸ್ಥಳೀಯ ಕಾಂಗ್ರೆಸ್ ಸಂಘಟನೆಯಲ್ಲಿ ಪೂರ್ಣ ವಿಶ್ವಾಸವಿಲ್ಲದಿರುವಿಕೆಯೇ ಇವರು ಕಾಂಗ್ರೆಸ್ ಉಮೇದ್ವಾರಿಕೆಯನ್ನು ಕೋರಿಲ್ಲವೆಂದು ತಿಳಿಯುತ್ತೇವೆ.

ಸ್ಥಳೀಯ ದಿ ಕೆನರಾ ಇಂಡಸ್ಟ್ರಿಯಲ್ ಮತ್ತು ಬೇಂಕಿಂಗ್ ಸಿಂಡಿಕೇಟಿನ ಅಧ್ಯಕ್ಷರಾಗಿರುವ ಶ್ರೀ ಡಾ. ಟಿ. ಮಾಧವ ಪೈ, ಎಂ. ಬಿ. ಬಿ. ಎಸ್ ಇವರ ಮುಂದಾಳುತ್ವದಿಂದ "ದಿ ಕೆನರಾ ಮ್ಯುಚುವಲ್ ಎಶ್ಶೂರೆನ್ಸ್ ಕಂಪೆನಿಯೊಂದು ಈಚೆಗೆ ಆ ರಿ ಆಫ್ ಜೊಯಿಂಟ್ ಸ್ಟೋಕ್ ಕಂಪೆನೀಸ್, ಮಂಗಳೂರು ಇವರಲ್ಲಿ ರಜಿಸ್ಟರ್ ಮಾಡಲು ದಾಖಲಾಗಿದೆ.

ದಿವಂಗತ ಖಾನ್ ಬಹದ್ದೂರರ ಸ್ಮಾರಕ ಸಮಿತಿಯವರಿಂದ ಸದ್ರಿ ಸ್ಮಾರಕ ನಿಧಿಗೆ ದ್ರವ್ಯಸಹಾಯವನ್ನಪೇಕ್ಷಿಸಿ ವಿನಂತಿ ಪತ್ರಗಳು ಪ್ರಕಟಿಸಲಾಗಿವೆ. ಸದ್ರಿ ಸ್ಮಾರಕ ನಿಧಿಗೆ ಸಹಾಯ ನೀಡುವವರು ಅದನ್ನು 'ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ ಲಿಮಿಟೆಡ್'ನ ಎಲ್ಲಾ ಶಾಖೆಗಳಲ್ಲಿ ತೆರೆದಿರುವ ಲೆಕ್ಕಕ್ಕಾಗಲೀ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಎಂ. ವಿಠಲ ಕಾಮತ್, ಬಿ ಎ ಬಿ ಎಲ್ ಇವರಿಗಾಗಲೀ ರವಾನಿಸಿಕೊಡಬಹುದು.

## ನಮ್ಮ ಮುಂದಿನ ವೈಸರಾಯರು

ಲೋರ್ಡ್ ವಿಲ್ಲಿಂಗ್ಡನರವರ ನಂತರ ಭಾರತಕ್ಕೆ ಗವರ್ನರ್ ಜನರಲ್ ಮತ್ತು ವೈಸರಾಯರಾಗಿ ನೇಮಿಸಲ್ಪಟ್ಟಿರುವ ಲೋರ್ಡ್ ಲಿನ್‌ಲಿತ್‌ಗೋರವರು ಬಹು ಶ್ರೀಮಂತರು ತುಂಬಾ ಆಸ್ತಿವಂತರು.

ಇವರು ದೊಡ್ಡ ದೊಡ್ಡ ಏಳು ಸಂಸ್ಥೆಗಳಲ್ಲಿ ಡೈರೆಕ್ಟರು. ಅವುಗಳಲ್ಲಿ ಸ್ಕಾಟ್‌ಲೇಂಡ್ ಬೇಂಕ್, ಲಿಮಿಟೆಡ್, ಸ್ಕಾಟಿಷ್ ವಿಧವೆಯರ ವಿಮಾ ಕಂಪೆನಿ ಇವೇ ಮುಖ್ಯವಾದವುಗಳು. ಇವರ ತಂದೆಯವರು ಆಸ್ಟ್ರೇಲಿಯದ ಗವರ್ನರ್ ಜನರಲರಾಗಿದ್ದರು. ಆಗ ೧೦,೦೦೦ ಪವನುಗಳನ್ನು ವರ್ಷಾಶನವಾಗಿ ಪಡೆಯುತ್ತಿದ್ದರು. ಆದರೆ ಇವು ನಾಲ್ಕಿದೆ ಎರಡು ವರ್ಷಗಳಲ್ಲಿ ತನ್ನ ಸ್ವಂತ ದೇಶದಿಂದ ೨೫,೦೦೦ ಪವನುಗಳನ್ನು ದಿನಗಳಿಗಾಗಿ ವೆಚ್ಚಮಾಡಿದರಂತೆ.

ಲೋರ್ಡ್ ಲಿನ್‌ಲಿತ್‌ಗೋರವರಿಗೆ ಇದೀಗ ೪೮ ವರ್ಷ ಪ್ರಾಯ

## ಹಾವಾಡಿಗನಿಗೆ ತನ್ನ ಹಾವೇ ಕಚ್ಚಿತು.

ಬಂಗಳೂರು ಸಪ್ಟೆಂಬರ ೪

ಕುಂಜಾಕೃಷ್ಣನ್ ಎಂಬವನು ಬಂಗಳೂರಿನಲ್ಲಿಯ ಬೀಸಾಯಗಾರರಲ್ಲಿ ಒಬ್ಬನು. ಇವನಿಗೆ ನಾಗರಹಾವುಗಳನ್ನು ವಶೀಕರಿಸಲು ಗೊತ್ತಿತ್ತು. ಆಗಾಗ ನಾಗರ ಹಾವುಗಳನ್ನು ಹಿಡಿದು ಜನರ ಮುಂದೆ ಕುಣಿಸುತ್ತಿದ್ದನು. ಕೆಲವು ದಿನಗಳ ಹಿಂದೆ ಹಿಂದೂ ಹಬ್ಬದ ದಿನ ತುಂಬಾ ಹಣಸಂಪಾದನೆಯನ್ನು ಮಾಡುವ ಆಲೋಚನೆಯಿಂದ ಒಂದು ದೊಡ್ಡ ನಾಗರಹಾವನ್ನು ಹಿಡಿದು ಅದನ್ನು ಸ್ಥಳೀಯ ಗವರ್ನಮೆಂಟ್ ಟ್ರೈನಿಂಗ್ ಶಾಲಾ ಅಧ್ಯಾಪಕ ಮತ್ತು ಬಾಲಕರೆಡುರಿಗೆ ಕುಣಿಸುತ್ತಿದ್ದಾಗ ಅದು ಕೋಪವು ಬಂತು. ಅದನ್ನು ಕಚ್ಚಿಯೇ ಬಿಟ್ಟಿತು. ಕುಂಜನನ್ನು ತಕ್ಷಣವೇ ಆಸ್ಪತ್ರೆಗೆ ಕೊಂಡುಹೋಗಿ ಚಿಕಿತ್ಸೆಯನ್ನು ಮಾಡಿದರೂ ಏನೂ ಫಲಕಾರಿಯಾಗಲಿಲ್ಲ. ಕುಂಜನು ಕೆಲವೇ ಗಂಟೆಗಳಲ್ಲಿ ತೀರಿಹೋದನು.

## ಹಿಂದೂಗಳ ಮೇಲೆ ಮುಸ್ಲಿಮರ ಬಲಾತ್ಕಾರ

### ೪೦ ಮುಸ್ಲಿಮರಿಗೆ ಶಿಕ್ಷೆಯಾಯಿತು

ರಾವಲಪಿಂಡಿ, ಸಪ್ಟೆಂಬರ ೮

ಕೋರ್ಟ್ ಗೋವಿಂದಪುರದ ೬೩ ಮಂದಿ ಮುಸ್ಲಿಮರಲ್ಲಿ ೪೦ ಮಂದಿಗೆ ಹಿಂದೂಗಳಿಗೆ ಬಲವತ್ತರವಾದ ಬಾಧೆಕೊಟ್ಟುದಕ್ಕಾಗಿ ಶಿಕ್ಷೆಯಾಯಿತು. ಇಪ್ಪತ್ತನ್ನು ನಿರಪರಾಧಿಗಳೆಂದು ಬಿಟ್ಟರು. ಈ ಕೇಸಿನ ತೀರ್ಪನ್ನು ಅಧಿಕ್ಯವಾಗಿ ಕೊಟ್ಟದ್ದಾದರೂ ಕೋರ್ಟಿನಲ್ಲಿ ತುಂಬಾ ಜನರು ನೆರೆದಿದ್ದರು. ಕೂಡಿದವರಲ್ಲಿ ಮುಸ್ಲಿಮರೇ ಹೆಚ್ಚಾಗಿದ್ದರು. ಅಪರಾಧಿಗಳಾದ ಮುಸ್ಲಿಮರು ಹಿಂದೂಗಳ ಮನೆಗಳನ್ನು ಬಲಾತ್ಕಾರಪೂರ್ವಕ ನುಗ್ಗಿ ಅವರನ್ನು ಹೊಡೆದು ಮನೆಯಲ್ಲಿದ್ದುದನ್ನು ದೋಚಿಕೊಂಡು ಹೋಗುತ್ತಿದ್ದರು. ಮೊನ್ನೆ ತಾನೇ ರಾಧಾಬಲ್ಲಾಭ ಎಂಬವನೊಬ್ಬನ ಮನೆಯನ್ನು ನುಗ್ಗಿ ಅವನನ್ನೂ ಅವನ ಹೆಂಡತಿಯನ್ನೂ ಮನೆಯೊಳಗಿಂದ ಧರಧರನೆ ಹೊರಗೆ ಎಳೆದು ಚೆನ್ನಾಗಿ ಗುದ್ದಿದರು. ಸಪ್ಟೆಂಬರ ೧೯ರ ವರೆಗೆ ಈ ಕೈದಿಗಳನ್ನು ರಿಮಾಂಡಿನಲ್ಲಿಡಲು ನ್ಯಾಯಾಧೀಶರ ಆಜ್ಞೆಯಾಗಿದೆ.

ಸಪ್ಟೆಂಬರ ತಾ ೧೦ನೇ ದಿನ ರೋಮ್ ನಗರದ ಹತ್ತಿರ ಎಂಬಲ್ಲಿ ಎದುರೆದುರಾಗಿ ಬರುತ್ತಿದ್ದ ಇಬ್ಬರು ಟ್ರೈಲಾರಿಗಳು ಡಿಕ್ಕಿ ಹೊಡೆದುಕೊಂಡುವು. ೫ ಜನರು ಸತ್ತರು, ೫೦ ಜನರಿಗೆ ಜಖಂಗೊಂಡರು.

## ಪೋಲೀಸು ಜವಾನನು ಅಕಾಲ ಮೃತ್ಯುವಿಗೆ ತುತ್ತಾದನು.

### ತನ್ನ ಕೋವಿಯಿಂದ್ಲ ತಾನೇ ಸತ್ತ.

ದಿನಾಜ್‌ಪುರ, ಸಪ್ಟೆಂಬರ ೩

ಧನರಾಜಸಿಂಗನೆಂಬ ೨೭ ವರ್ಷ ಪ್ರಾಯದ ಪೋಲೀಸ ಜವಾನನು ನಿನ್ನೆ ೧೦ ಗಂಟೆಗೆ ತನ್ನ ಕೋವಿಯಿಂದ ತಾನೆ ಮಡಿದನು. ಅಜಾಗ್ರತೆಯ ಫಲಿತಾಂಶವಿದು. ನಿನ್ನೆ ಬೆಳಗ್ಗೆ ೫ ಗಂಟೆಗೆ ಟ್ರೆಜರಿಕೋಣೆಯ ಬಳಿ ಪಹರೆಗಾಗಿ ಅವನನ್ನು ನಿಲ್ಲಿಸಿದ್ದರು. ತನ್ನ ಕೋವಿಯನ್ನು ಸಜ್ಜುಗೊಳಿಸುತ್ತಿದ್ದಾಗ ಅಕಸ್ಮಾತ್ತಾಗಿ ಮದ್ದು ಸಿಡಿದು ಅವನ ಕಪಾಲವನ್ನೇ ಹಾರಿಸಿತು. ಇದಕ್ಕಿಂತಲೂ ಮುಂಚೆ ಇಂತಹ ಅವಘಡಗಳು ಇಲ್ಲಿ ಒದಗಿದ್ದರೂ ಅದರಿಂದಾಗಿ ಪ್ರಾಣಕ್ಕೆ ಹಾನಿಯು ಬಂದಿರಲಿಲ್ಲ. ಮೃತನ ಶವವನ್ನು ಗೌರವಪೂರ್ವಕ ಸ್ಮಶಾನಕ್ಕೆ ಒಯ್ದು ಶವಸಂಸ್ಕಾರವನ್ನು ಮಾಡಿದರು.

ಲೇಡಿ ಲಿನ್‌ಲಿತ್‌ಗೋರವರು.

## ಪಂಡಿತ ಜವಾಹರಲಾಲರ ಸಂಚಾರ.

ಅಲ್ಲಹಾಬಾದ್, ಸಪ್ಟೆಂಬರ ೪

ಪಂಡಿತ ಜವಾಹರಲಾಲರಿಗೆ ಡಚ್ ಏರ್ ಪ್ಲೈನಿನಲ್ಲಿ ಸ್ಥಳವು ಸಿಗುವುದಿಲ್ಲವೆಂದು ತಿಳಿದ ಮೇಲೆ ಇಂಪೀರಿಯಲ್ ಏರ್‌ವೇಸಿನ ವಿಮಾನದ ಮೇಲೆ ಈ ಸಾಯಂಕಾಲ ೪ ಗಂಟೆಗೆ ಬಂದರು. ಲಂಡನ ವಿಮಾನದಲ್ಲಿ ಹೋಗಲು ನಿರ್ಧರಿಸಿದರು. ಇವರು ಬ್ರಿಂಡಿಸಿಯದಲ್ಲಿ ಇಳಿದು ನಂತರ ಬಡೆನ್‌ವೀಲರ್‌ಗೆ ಹೋಗುವರು.

ತಾ ೪ನೇ ಬೆಳಗ್ಗೆ ೯ ಆಕಸ್ಮಿ ಶ್ರೀಯುತರು ಟ್ರೈನ್ನಲ್ಲಿ ಕುಳಿತು ಅಲ್ಲಹಾಬಾದಿಗೆ ಬಂದಿಳಿದರು. ಅವರಿಗೆ ನೂರಾರು ವಿದ್ಯಾರ್ಥಿಗಳು ಬಂದು ಜಯಜಯಕಾರಗಳೊಡನೆ ಸ್ವಾಗತವನ್ನಿತ್ತರು. ನಂತರ ಅವರು ಅಲ್ಲಿಂದ ಮೋಟಾರ್ ಕಾರಿನಲ್ಲಿ ಆನಂದಭವನಕ್ಕೆ ಹೋದರು. ಜವಾಹರಲಾಲರು ಸರ್ ತೇಜಬಹದ್ದೂರ್ ಸಪ್ರೂರವರನ್ನು ಕಂಡು ಮಾತನಾಡಿದರು.

ಶ್ರೀಮತಿ ಕಮಲಾ ನೆಹರೂರವರ ದೇಹಸ್ಥಿತಿಯ ಕುರಿತು ಡಾ। ಅತಲ್ ಇವರು ನಿನ್ನೆ ರಾತ್ರಿ ಕಳುಹಿಸಿದ ತಂತಿಯನ್ನು ಕಂಡೊಡನೆ ನೆಹರೂರವರು ಪೈಟಿಗೆ ಲೀಪ್ಜಿಗ್ ವರೆಗೆ ವಿಮಾನದ ಮೂಲಕವೇ ಹೋಗಬೇಕೆಂದು ನಿರ್ಧರಿಸಲಾಯಿತು. ಮೊದಲು ಜೂರಿಚ್ ವರೆಗೆ ಮಾತ್ರ ಹೋಗಬೇಕೆಂದು ವಿಚಾರವಾಗಿತ್ತು.

ಜವಾಹರಲಾಲರು ಅಲ್ಲಹಾಬಾದಿನಲ್ಲಿ ಈ ಪ್ರಕಟನೆಯನ್ನು ಕೊಟ್ಟರು. "ಸಪ್ಟೆಂಬರ ತಾ. ೨ನೇ ಬೆಳಗ್ಗೆ ನನಗೆ ಬ್ಯಾಡನ್‌ವೀಲರ್ ಸ್ಯಾನಿಟೋರಿಯಮ್ಮಿನ ಡಾ। ಸ್ಟೆಫೆನ್‌ರವರು ಒಂದು ತಂತಿ ಕಳುಹಿಸಿ, ನನ್ನ ಪತ್ನಿಯ ಪರಿಸ್ಥಿತಿಯು ವಿಷಮತೆಗೇರಿದೆಯೆಂದೂ ಅದೇ ವಿಷಯವನ್ನು ವೈಸರಾಯರಿಗೆ ತಿಳಿಸಿದೆಯೆಂದೂ ತಿಳಿಸಿದರು. ಅದೇ ರಾತ್ರಿ ನನಗೆ ಒಂದು ಸೂಚನೆ ಬಂತು. ಮಿಸೆಸ್. ನೆಹರೂ ಇವರ ದೇಹಸ್ಥಿತಿಯು ವಿಷಮತೆಗೆ ಮುಟ್ಟಿರುವದರಿಂದಾಗಿ ನನ್ನ ಶಿಕ್ಷೆಯನ್ನು ರದ್ದುಮಾಡಿ, ನನ್ನನ್ನು ಜರ್ಮನಿಗೆ ಹೋಗಲು ಅವಕಾಶಕೊಡಲಾಗಿದೆಯೆಂದು ತಿಳಿದುಬಂತು. ಅದರಲ್ಲಿ ತಿಳಿಸಿದ ಶರ್ತವಿನ ನೆನಪು ನನಗಿಲ್ಲ. ಆದರೆ, ಸದ್ಯಕ್ಕಾದರೂ ನನ್ನ ಶಿಕ್ಷೆಯು ನಿಲ್ಲಿಸಲ್ಪಟ್ಟಿದೆಯೆಂದು ನಿರ್ಧಾರವಾಗಿ ಹೇಳಬಲ್ಲೆನು. ಒಂದು ವೇಳೆ ನನ್ನ ಶಿಕ್ಷೆಯ ಅವಧಿಯು ಮುಗಿಯುವುದರೊಳಗೆ ಅಂದರೆ ಮುಂದಿನ ಫೆಬ್ರವರಿಯೊಳಗೆ ನಾನು ಹಿಂದೂದೇಶಕ್ಕೆ ಹಿಂದಿರುಗಿ ಬಂದರೆ ಆಗ ನನಗೆ ಪುನಃ ಜೈಲೇ ಗತಿಯೆಂದು ಹೇಳಲಾಗಿದೆ. ಸರಕಾರದ ಈ ಕಾರ್ಯಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನರ್ಪಿಸಿದೆ. ಆದರೆ ಎಲ್ಲಾ ವಿಷಯಗಳನ್ನೂ ವಿವರವಾಗಿ ತಿಳಿಯಬೇಕೆಂದು ಅನೇಕ ವಿಷಯಗಳನ್ನು ವಿಚಾರಿಸಿದೆ. ಸಪ್ಟೆಂಬರ ೩ನೇ ತಾರೀಕಿನ ದಿನ ಈ ವಿವರಗಳು ತಿಳಿದು ಬಂದುವು.

(೧) ನಾನು ಮುಂದಿನ ಫೆಬ್ರವರಿಯೊಳಗೆ ಹಿಂದಿರುಗಿದರೆ ಪುನಃ ಜೈಲಿಗೆ ಹೋಗಬೇಕಾದರೂ ಅದು ಫೆಬ್ರವರಿ ವರೆಗೆ ಮಾತ್ರ, (೨) ಯೂರೋಪಿನಲ್ಲಿ ಯಾವ ರೀತಿಯ ಅಭ್ಯಂತರವೂ ಇಲ್ಲ. ನಾನು ಹಿಂದೂದೇಶದ ಹೊರಗೆ ಹೋಗುವ ವರೆಗೂ ಕೂಡಾ ಯಾವ ಅಡ್ಡಿಯೂ ಇಲ್ಲ. ಪೂರ್ಣ ಸ್ವಾತಂತ್ರ್ಯವಿದೆ. ಆದರೆ, ನಾನು ಯಾವ ರಾಜಕೀಯ ಭಾಷಣಗಳನ್ನೂ ಮಾಡುವುದಿಲ್ಲವೆಂದು ತಿಳಿದು, ವೈಸರಾಯರು ನನ್ನನ್ನು ಪೂರ್ಣವಾಗಿ ನಂಬಿರುತ್ತಾರೆ. ಈ ವಿಷಯವನ್ನು ತಿಳಿದ ಕೂಡಲೇ ನಾನು ಅಲ್ಮೋರಾದಿಂದ ಅಲಹಾಬಾದಿಗೆ ಬಂದೆನು. ನಾನು ೧೮ ತಿಂಗಳ ಕಾರಾಗೃಹವಾಸವನ್ನು ಮುಗಿಸಿಕೊಂಡು ಈಗ ಹೊರಗೆ ಬಂದಿರುವಲ್ಲಿ ಸದ್ಯದ ರಾಜಕೀಯ ರಂಗಕ್ಕೆ ತಕ್ಷಣವೇ ಇಳಿದು ನನ್ನ ಅಭಿಪ್ರಾಯವನ್ನೀಯುವುದು ಸಾಧ್ಯವಿಲ್ಲ. ನನ್ನ ಶಿಕ್ಷೆಯ ಅವಧಿಯು ಮುಗಿದ ಮೇಲೆಯೇ ನನ್ನನ್ನು ಬಿಡುಗಡೆ ಮಾಡಿದ್ದರು ಕೂಡಾ ನಾನು ರಾಜಕೀಯ ವಿಷಯವಾಗಿ ಪ್ರಕಟನೆ ಕೊಡಲು ಸ್ವಲ್ಪ ಅವಕಾಶವು ಬೇಕೇ ಬೇಕಿತ್ತು. ಆದ್ದರಿಂದ ಈಗ ನಾನು ಇಂತಹ ಮಹತ್ವದ ಪ್ರಶ್ನೆಗಳನ್ನು ಸಾವಧಾನವಾಗಿ ವಿಚಾರಿಸದೆ ಒಮ್ಮೆಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅಸಾಧ್ಯ. ಹಾಗೆ ಅದು ಸರಿಯೂ ಅಲ್ಲ. ನಾನು ಆದಷ್ಟು ಬೇಗನೇ ಯೂರೋಪಿಗೆ ಹೋಗಿ ನನ್ನ ಪತ್ನಿಯನ್ನು ನೋಡಬೇಕೆಂಬ ಉತ್ಕಟೇಚ್ಛೆ ನನಗಿದೆ"

ಇಂದೋ ನಾಳೆಯೋ ಜವಾಹರಲಾಲರು ಅವರ ಪತ್ನಿಯ ಬಳಿ ಸೇರಲಿರುವರು. ಶ್ರೀಮತಿ ಕಮಲಾ ನೆಹರೂರವರು ಸ್ವಲ್ಪ ಗುಣಮುಖರಾಗಿರುವರೆಂದು ತಿಳಿದುಬಂದಿದೆ.


## ಬೆಂಗಳೂರು ನಗರಕ್ಕೆ ದಸರದ ವೇಳೆ ಬರುವ ಅಭ್ಯಾಗತರ ಅನುಕೂಲತೆಗಾಗಿ

ಪ್ರಸಿದ್ಧಿ ಹೊಂದಿದ

# ಶಾಸ್ತ್ರಿಗಳ ಹೊಟೇಲು ಮತ್ತು ರೆಸ್ಟೋರೆಂಟ್

ಎಲ್ಲಾ ಸೌಕರ್ಯಗಳನ್ನು ಕೊಡುತ್ತದೆ.

ಅವರ ಪ್ರತಿನಿಧಿಗಳು ರೈಲ್ವೇ ಸ್ಟೇಶನ್‌ಗಳಲ್ಲಿ ಕಾಯುವರು.

ಇಚ್ಛಿಸುವ ಅತಿಥಿಗಳನ್ನು ಸ್ವಾಗತೀಕರಿಸುವರು

ತಮ್ಮ ಭಾರೀ ಗಿರಾಕಿಗಳಿಂದ ಬರಲಿರುವ ಬೇಡಿಕೆಗಳ ದೃಷ್ಟ್ಯಾ ಅತ್ತ ಹೋಗುವವರು ಹೊಟೇಲಿಗೆ ತಂತಿಬಿಡಬೇಕೆಂದು ಅಪೇಕ್ಷೆ.

ಇತರ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

***The General Manager,***
SASTRY'S HOTEL & RESTAURANT,
Chickpet, Bangalore City.

## ಡಿಸ್ಟ್ರಿಕ್ಟ್ ಬೋರ್ಡು ಸಭೆ.

ಡಬ್ಲ್ ಸೀಟುಗಳುಳ್ಳ ಡಿಸ್ಟ್ರಿಕ್ಟ್ ಬೋರ್ಡಿನ ಸರ್ಕ್ಲ್‌ಗಳನ್ನು ವಿಭಾಗಿಸಿ ಸಿಂಗ್ಲ್ ಸೀಟಿನ ಸರ್ಕ್ಲ್‌ಗಳಾಗಿ ವಿಂಗಡಿಸುವ ಸರಕಾರದ ಸೂಚನೆಯ ಕುರಿತು ಆಲೋಚಿಸಿಕೊಳ್ಳುವುದಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡಿನ ವಿಶೇಷ ಸಭೆಯೊಂದು ತಾ. 8ನೇ ದಿನ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಡಾ| ಕೆ ವಿಟ್ಠಲ ಶೆಟ್ಟರು ಚುನಾವಣೆಯು ಸಮೀಪಿಸಿರುವ ಈ ಸಂದರ್ಭದಲ್ಲಿ, ಇಷ್ಟೊಂದು ಅವಸರದಿಂದ ಸರಕಾರವು ಡಬ್ಲ್ ಸೀಟುಗಳ ಸರ್ಕ್ಲ್‌ಗಳನ್ನು ವಿಂಗಡಿಸಬೇಕೆಂದು ಮಾಡಿರುವ ಸೂಚನೆಯು ಅಯುಕ್ತವಾದುದೆಂದೂ ಆ ಕುರಿತು ಬೋರ್ಡಿನ ನಿಷೇಧ ಸೂಚಿಸುವ ಠರಾವು ತಂದು ಆ ಕುರಿತು ಚರ್ಚೆ ನಡೆದು ಅದು ಸರ್ವಸಮ್ಮತಿಯಿಂದ ಮಂಜೂರಾಯಿತು. ಅನಂತರ ಸರ್ಕ್ಲ್‌ಗಳ ವಿಭಾಗ ಮತ್ತು ರಿಸರ್ವ್ ಸೀಟುಗಳ ಕುರಿತು ವಿಚಾರಿಸಲಾಯಿತು. ಕುಂದಾಪುರ ಸರ್ಕಲಿನ ವಿಭಾಗದಲ್ಲಿ ಶ್ರೀ| ಬಿ ವೆಂಕಪ್ಪ ಶೆಟ್ಟರು ಕೆಲವು ತಿದ್ದುಪಡಿ ಮಾಡಿದರು ಮಂಗಳೂರು ಸರ್ಕ್ಲಿನ ವಿಭಾಗವು ಸರಿಯಲ್ಲೆಂದು ಡಾ| ವಿಟ್ಠಲ ಶೆಟ್ಟರು ಸೂಚಿಸಿದರು ಉಡುಪಿ ಸರ್ಕ್ಲಿನ ವಿಷಯದಲ್ಲಿ ಸರಕಾರದ ವಿಭಾಗವನ್ನೇ ಸ್ವೀಕರಿಸಲಾಯಿತು ಕಾಪು ಸರ್ಕ್ಲಿನ ವಿಭಾಗದ ಕುರಿತು ಹೆಚ್ಚಿನ ಚರ್ಚೆಯು ನಡೆಯಿತು ಶ್ರೀ| ಸದಾಶಿವ ಭಟ್ಟರು ಸರಕಾರದ ಯೋಜನೆಯು ಅಯುಕ್ತವೆಂದು ಹೇಳಿ ಕಾರ್ಕಳ ಮುನ್ಸಿಫ್ ಕೋರ್ಟಿನ ಚರ್ಬಂದಿಗೆ ಸೇರಿದ 10 ಗ್ರಾಮಗಳಿಗೆ ಅವುಗಳ ಸಮೀಪವಿರುವ ಇನ್ನೂ 8 ಗ್ರಾಮಗಳನ್ನು ಸೇರಿಸಿ ಪಡುಬಿದ್ರಿ ಹೆಸರಿನಿಂದ ಹೊಸ ಸರ್ಕ್ಲಾಗಿ ಮಾಡಬೇಕೆಂದು ಸೂಚಿಸಿದರು ಶ್ರೀ| ಗಳಾದ ವಾಆಚಾರ್, ಬೇಳಿಂಜೆ ಕೃಷ್ಣಯ್ಯ ಹೆಗ್ಡೆ, ಪಿ.| ಅಂದ್ರಾದೆ ನೊದಲಾದವರು ಇದನ್ನು ವಿರೋಧಿಸಿದುದರಿಂದ ಅದು ಬಿದ್ದುಹೋಯಿತು. ಕಾಸರಗೋಡು ಸರ್ಕ್ಲನ್ನು ಶವಾನ್ನಾಡ್ ಮತ್ತು ಕಾಸರಗೋಡುಗಳಾಗಿ ವಿಭಾಗಿಸಬೇಕೆಂದಾಯಿತು. ಮಂಗಳೂರಿಗಿದ್ದ ಸ್ತ್ರೀಯರ ಸೀಟನ್ನು ಉಡುಪಿಗೆ ವರ್ಗಾಯಿಸಕೂಡದೆಂದೂ ಅದನ್ನು ಮಂಗಳೂರಲ್ಲೇ ಇರಿಸಬೇಕೆಂದೂ ಠರಾವಾಯಿತು.

ಉಡುಪಿಯ ಮುಸಲ್ಮಾನ ಸೀಟನ್ನು ಮಂಜೇಶ್ವರಕ್ಕೊಯ್ದುದು ತಪ್ಪೆಂದೂ ಉಡುಪಿ, ಕಾರ್ಕಳ, ಕುಂದಾಪುರಗಳ ಅಲ್ಪ ಸಂಖ್ಯಾಕರಾದ ಮುಸಲ್ಮಾನರಿಗೆ ಅಲ್ಲೊಂದು ಸೀಟು ಅತ್ಯಾವಶ್ಯಕವೆಂದು ಕಾಸರಗೋಡಿಗೆ ಒಂದು ರಿಸರ್ವ್ ಸೀಟ್ ಇರುವುದು ಮಾತ್ರವಲ್ಲದೆ, ಜನರಲ್ ಸೀಟುಗಳನ್ನೂ ಅವರು ಪಡೆಯುತ್ತಾ ಬಂದಿರುವುದರಿಂದ ಇನ್ನೊಂದು ರಿಜರ್ವ್ ಸೀಟನ್ನು ಅಲ್ಲಿರಿಸುವುದು ತಪ್ಪೆಂದೂ ಡಾ| ಆಚಾರ್ ಮತ್ತು ಶ್ರೀ| ಶಿವಭಟ್ಟರು ಸೂಚಿಸಿದರು. ಕೊನೆಗೆ ಉಡುಪಿಯ ಮುಸಲ್ಮಾನ ಸೀಟನ್ನು ಉಡುಪಿಯಲ್ಲೇ ಇರಿಸಬೇಕೆಂದಾಯಿತು ಹೊಸ ಸರ್ಕ್ಲ್‌ಗಳನ್ನು ಈ ಗ್ರಾಮಗಳನ್ನೊಳಗೊಂಡು ರಚಿಸಬೇಕೆಂದು ಸರಕಾರಕ್ಕೆ ಸೂಚಿಸಲಾಯಿತು ನಂಬ್ರ 8 ಕುಂದಾಪುರ ೧ ಕುಂದಾಪುರ, ೨ ವಡೇರ್ ಹೋಬಳಿ, ಹಂಗಳ್ಳೂರ್, ಕೋಟೇಶ್ವರ್ ಪೋಲಿಂಗ್ ಸ್ಟೇಶನ್ ಕುಂದಾಪುರ ೧ ಆಲ್ಬೂರ್, ೨ ಖುಂಬಾಶಿ, ೩ ಗೋಪಾಡಿ, ೪ ಬೀಜಾಡಿ, ೫ ಬೇಲೂರ್, ೬ ತೆಕ್ಕಟ್ಟೆ, ೭ ವಕ್ವಾಡಿ, ೮ ಅಸೋಡು, ೯ ಕೆಡೂರ್ ಪೋಲಿಂಗ್ ಸ್ಟೇಶನ್ ಖುಂಭಾಶಿ ನಂಬ್ರ ೩ ಎ ಬಸ್ರೂರ ೧ ಅನಗಳ್ಳಿ ೨ ಕೋಣಿ, ೩ ಕಂದಾವರ, ೪ ಜಪ್ತಿ, ೫ ಬಳ್ಕೂರು, ೬ ಬಸ್ರೂರು ಪೋಲಿಂಗ್ ಸ್ಟೇಶನ್ ಬಸ್ರೂರು .

೧ ಎಡಾಡಿ ಮತ್ಯಾಡಿ, ೨ ಮೊಳಹಳ್ಳಿ, ೩ ಹಲ್ಲಾಡಿ–ಹರ್ಕಾಡಿ, ೪ ಹರ್ದಹಳ್ಳಿ ಮಂಡಳ್ಳಿ–ಪೋಲೀಸ್ ಸ್ಟೇಶನ್ ಎಡಾಡಿ ಮತ್ಯಾಡಿ

೧ ಕಲಾವರ, ೨ ಕೊರ್ಗಿ, ೩. ಹೆಸ್ಕೂತ್ತೂರು, ೪ ಹೊಂಬಾಡಿ—ಮುಂಡಾಡಿ, ಪೋಲಿಂಗ್ ಸ್ಟೇಶನ್ ಕಲಾವರ ೧ ಹಾಲಾಡಿ, ೨. ಕುಳುಂಜೆ, ೩ ರಟ್ಟಾಡಿ, ೪, ಅಮಾಸೆಬೈಲು, ಪೋಲಿಂಗ್ ಸ್ಟೇಶನ್ ಹಾಲಾಡಿ

೧ ಅಲ್ಪಾಡಿ, ೨ ಮುಂಡಕ್ಕಿ, ೩. ಬೆಳ್ವೆ, ೪. ಶೇಡಿಮನೆ, ೫ ಹೆಂಗವಳ್ಳಿ, ಪೋಲಿಂಗ್ ಸ್ಟೇಶನ್ ಅಲ್ಪಾಡಿ.

೨೬ ಕಾಸರಗೋಡು ೧ ಕಾಸರಗೋಡು ೨ ಅಡ್ಕತಬೈಲ್, ೩. ತಳಂಗರೆ, ಪೋಲಿಂಗ್ ಸ್ಟೇಶನ್ ಕಾಸರಗೋಡು

೧ ಕುಡ್ಲು, ೨. ಪುತ್ತೂರು, ೩. ಸಿರಿಬಾಗಿಲು, ಪೋಲಿಂಗ್ ಸ್ಟೇಶನ್ ಕಾವುಗೋಳಿ ಬೋರ್ಡು ಶಾಲೆ

೧ ಚೆಂಗಲ, ೨ ಮುಟ್ಟತೋಡಿ, ೩ ಪಾಡಿ, ೪ ನೆಕ್ರಾಜೆ, ಪೋಲಿಂಗ್ ಸ್ಟೇಶನ್ ಚೆರ್ಕಲ ಶಾಲೆ

೨೬–ಎ ಚಮ್ನಾಡ್ ೧ ಚಮ್ನಾಡ್, ೨ ಕಲ್ನಾಡ್, ೩ ಪೆರುಂಬಳ, ೪ ತೆಕ್ಕಿಲ್, ಪೋಲಿಂಗ್ ಸ್ಟೇಶನ್ ಚಮ್ನಾಡ್ ೧ ಮುಳಿಯಾರ, ೨ ಕಾರಡ್ಕ, ೩ ಕೊಳತೂರ್, ೪ ಬೇಡಡ್ಕ, ಪೋಲಿಂಗ್ ಸ್ಟೇಶನ್ ಮುಳಿಯಾರ್

೧ ಅಧೂರ್, ೨ ಅಡೂರು, ೩ ಬಂಡಡ್ಕ, ೪ ದೇಲಂಪಾಡಿ, ೫ ಕುಟ್ಟಿಕೋಲ್ ಪೋಲಿಂಗ್ ಸ್ಟೇಶನ್ ಅಧೂರ್

---

### ಸೋಲ್ಜರನಿಗೆ ಗುಂಡು ಹೊಡೆದನು

ಮದ್ರಾಸಿನ ಫೋರ್ಟ್ ಸೈಂಟ್ ಜೋರ್ಜ್ ಬರ್‍ರಾಕ್‌ನಲ್ಲಿ ತಾ 7ನೇ ದಿನ ಪ್ರೈವೇಟ್ ರೊಸಿಟರ್ ಎಂಬ ಸೈನಿಕನಿಗೆ ಪ್ರೈವೇಟ್ ಚಂದ್ಲರ್ ಎಂಬವನು ಗುಂಡಿಕ್ಕಿದನು ಗಲಭೆಯೆದ್ದು ಅವನನ್ನು ಸೆರೆಹಿಡಿದರು. ಪರು ವಿಚಾರಣೆಯು ನಡೆಯುತ್ತಲಿದೆ

---

### ಫ್ಲೋರಿಡಾದಲ್ಲಿ ಬಿರುಗಾಳಿ

#### 500 ಜನರು ಮೃತ್ಯುವಶರಾದರು

ಫ್ಲೋರಿಡಾದ ಚರಿತ್ರೆಯಲ್ಲಿ ಹೇಳಿ ಕೇಳಿದಷ್ಟು ಭಯಂಕರ ಬಿರುಗಾಳಿಯು 8ನೇ ದಿನ ಅಲ್ಲಿ ಬೀಸಿ ಮನೆಮರಗಳನ್ನು ಬೆಂಕಿಪೆಟ್ಟಿಗೆಗಳಂತೆ ಒಡೆಯಿತೆಂದೂ, ಜನರ ಉಡಿಗೆ ತೊಡಿಗೆಗಳು ಚೂರು ಚೂರಾಗಿ ಹರಿದು ಹೋದುವೆಂದೂ ಕಡಮೆಯೆಂದರೆ 500 ಜನರು ಮೃತರಾದುದು ಸುಲಭದಿಂದ ಕಂಡುಬಂದಿದೆಯೆಂದೂ ವಾರ್ತಾ ವಿಧಾನಗಳು ಮುರಿದುಬಿದ್ದಿವೆಯಾದುದರಿಂದ ಪೂರ್ಣ ವಾರ್ತೆಯು ಸಿಗಲಿಲ್ಲವೆಂದೂ ತಿಳಿದುಬಂದಿದೆ

---

## ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S 430/31 R E P 632/'35

ಅರ್ಜಿದಾರ—ಪಟೇಲ್ ಅನಂತಯ್ಯ ಆಚಾರ್ಯ

ಎದ್ರಿರು—ಲಕ್ಷ್ಮಿ ಶೆಟ್ತಿ ಕೂಡಾ

ಸದ್ರಿ ಅರ್ಜಿಯ ಎದ್ರಿರು 17ನೇ ನಾಗಯ್ಯ ಶೆಟ್ಟಿ, 18ನೇ ಲಿಂಗಮ್ಮ ಶೆಟ್ತಿ, 19ನೇ ಸುಬ್ಬಕ್ಕ ಶೆಟ್ತಿ 20ನೇ ನಾರಾಯಣ ಶೆಟ್ಟಿ ಕಾವ್ರಾಡಿ ಗ್ರಾಮ ಇವರಿಗೆ ಅರ್ಜಿದಾರನು ಅಸ್ತಿಪಾಲಿನ ಬಗ್ಗೆ ಮಾಡಿದ ಸದ್ರಿ ಅಮಲ್‌ಜ್ಯಾರಿಯಲ್ಲಿ ವಿಳಂಬ ಶರ್ತ ನಿರ್ಣಯಿಸುವದಕ್ಕೆ ತಾ 19-9-35ಕ್ಕೆ ಇಟ್ಟಿರುತ್ತದೆಂತ ಈ ಮೂಲಕ ತಿಳಿಸಿರುತ್ತದೆ

( ondapoor } K.NarasimhaKamath
8 9 35 } Pl ad r for D H

---


# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟಾರ ಸರ್ವೀಸು,

ಚಿಕ್ಕಮಗಳೂರು.

**ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟಾರ ಸರ್ವೀಸುಗಳು.**

ಮುಂಬಾಯಿಯಿಂದ–ಪೂನಾ ಬೆಳಗಾಂವ–ಧಾರವಾಡ–ಹುಬ್ಬಳ್ಳಿ–ಗೋವಾ ಇವೆಲ್ಲ ಕಡೆಗಳಿಂದ,

ಮಂಗಳೂರಿಗೆ–ಪುತ್ತೂರು–ಉಡುಪಿ–ಕಾರ್ಕಳ–ಬೆಳ್ತಂಗಡಿ–ವೇಣೂರು–ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

**ಶೀಘ್ರ ಪ್ರಯಾಣ- ಅನುಕೂಲ ಸೌಕರ್ಯ- ಅತ್ಯಲ್ಪ ಖರ್ಚು- ಸುಂದರವಾದ ನೋಟ.**

ಅಲ್ಲದೆ

ಮೈಸೂರಿನ ಅರಸರ ಶಿಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ–ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ–ಕೈಗಾರಿಕೆಯ ಕೇಂದ್ರವಾದ ಭದ್ರಾವತಿ–ಶಿಲಾಶಿಲ್ಪದ ಬೇಲೂರು, ಹಳೆಬೀಡು–ಮಲೆನಾಡಿನ ಸಂಪತ್ತಾಗಿರುವ

ಪ್ರಚಂಡ ಪಶ್ಚಿಮ ಘಟ್ಟಗಳು–

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ.

**Chikmagalur Public Conveyance Motor Service,**

**CHIKMAGALUR.**

# ಪ್ರಾಣಿ ನಿಷೇಧಕ್ಕಾಗಿ ಪ್ರಾಣವನ್ನೇ ಬಲಿಕೊಡಲು ಸಿದ್ಧ!

## ಪಂಡಿತ ರಾಮಚಂದ್ರ ಶರ್ಮರವರ ನಿರ್ಧಾರ!

ಕಲ್ಕತ್ತದ ಕಾಳೀಘಾಟ್‌ನ ಶ್ರೀ ಕಾಳಿ ಕಾಂಬ ದೇವಸ್ಥಾನವೆಂದರೆ ದಿನಂಪ್ರತಿ ಪ್ರಾಣಿ ಬಲಿಯು ನಡೆಯುವ ಸ್ಥಾನ. ಇದೇ ನವರಾತ್ರಿಯ ಉತ್ಸವದ ವೇಳೆ ಅಲ್ಲಿ ಅಸಂಖ್ಯ ಪ್ರಾಣಿಗಳನ್ನು ಬಲಿಕೊಡಲಿರುವರೆಂದು ಕೇಳಿ ಪಂಡಿತ ರಾಮಚಂದ್ರ ಶರ್ಮರೆಂಬವರು ಅಲ್ಲಿಗೆ ಹೋಗಿ ದೇವಸ್ಥಾನದ ಬಳಿ ಆಮರಣಾಂತ ಉಪವಾಸ ವ್ರತವನ್ನು ಹಿಡಿದಿರುವರು. ಬಂಗಾಳದ ಅನೇಕ ಸಾನೇಕ ಮುಖಂಡರು ಇವರಿಗೆ ವಿಜಯವನ್ನು ಕೋರಿರುವರು. ಶ್ರೀ ರಾಮಕೃಷ್ಣ ಪರಮಹಂಸರ ತತ್ವಕ್ಕೆ ವಿರೋಧವಾಗಿ ಈ ಪ್ರಾಣಿವಧೆಯು ನಡೆಯುವುದನ್ನು ತಡೆಯುವುದಕ್ಕಾಗಿ ತಾವು ಆ ದೇವಸ್ಥಾನದೊಳಗೊಂದು ಮಹಾಸಭೆಯನ್ನೇರ್ಪಡಿಸಬೇಕೆಂದು ಶರ್ಮರ ಪರವಾಗಿ ಹಲವರು ಅಲಿಪ್ಪುರ ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿದರು. ಆದರೆ ವಿಷಯದ ಫಲಿತಾಂಶವನ್ನು ಊಹಿಸಿಕೊಂಡ ಮೆಜಿಸ್ಟ್ರೇಟರು ಅಪ್ಪಣೆಯನ್ನು ಕೊಡಲಿಲ್ಲ. ಅರ್ಜಿದಾರರು ತಮ್ಮ ಸಭೆಗಳನ್ನು ಅಲ್ಲಿ ಅಲ್ಲದೆ ಬೇರೆ ಬೇಕಾದಲ್ಲಿ ನಡೆಸಬಹುದೆಂದು ಸಮ್ಮತಿಯಿತ್ತರು. ಸನಾತನಿಗಳ ಪಂಗಡವೊಂದು ಕರಪತ್ರಗಳನ್ನು ಹೊರಡಿಸಿ ತಮ್ಮ ಪ್ರಾಣಿವಧೆಯ ಆಚರಣೆಯು ಶಾಸ್ತ್ರಸಮ್ಮತವಾದುದೆಂದೂ ಅದಕ್ಕೆ ಕಾಂಚಿಕಾಮಕೋಟಿ ಪೀಠದ ಶ್ರೀ| ಶಂಕರಾಚಾರ್ಯರ ಬೆಂಬಲವು ಇದೆಯೆಂದೂ ಪ್ರಕಟಿಸಿದರು. ಇದನ್ನು ಕಂಡು ಹಿಂದೂ ಪತ್ರಿಕಾ ಪ್ರತಿನಿಧಿಗಳು ಶ್ರೀ ಸ್ವಾಮಿಗಳನ್ನು ಸಂದರ್ಶಿಸಿ ಅವರ ಬೆಂಬಲವು ಈ ಸನಾತನಿಗಳಿಗೆ ಇರುವುದು ವಾಸ್ತವವೋ ಎಂದು ವಿಚಾರಿಸಿದರು. ಅದಕ್ಕುತ್ತರವಾಗಿ ಶ್ರೀ ಸ್ವಾಮಿಗಳು 'ನಾನು ಆದಿತ್ಯವಾರ ದಿನ ಭಾಷಣ ಮಾಡಿ ಪ್ರಾಣಿವಧೆ, ಅಹಿಂಸೆಗಳನ್ನು ಖಂಡಿಸಿರುವೆನು. ಆದರೆ ಅನೇಕರು ಮಾಂಸಾಹಾರವನ್ನು ಬಿಡಲೊಪ್ಪದಿರುವುದರಿಂದ ಅವರು ಕೊನೆಯ ಪಕ್ಷ ದೇವರಿಗರ್ಪಿಸಲ್ಪಟ್ಟ ವಿಷಯಗಳನ್ನು ತಿನ್ನಬಹುದೆಂದೂ ಯಾರೂ ಮಾಂಸಾಹಾರವನ್ನು ಸ್ವೀಕರಿಸಬಾರದೆಂದೂ ನಾನು ಹೇಳಿರುವೆ'ನಾಗ್ನತಿಳಿಸಿದರು. ಜನರು ತನ್ನ ಅಭಿಪ್ರಾಯದ ಅನರ್ಥ ಮಾಡಿಕೊಳುತ್ತಿರುವುದಕ್ಕಾಗಿ ವಿಷಾದಿಸಿದರು.

### ತರುಣನನ್ನು ಬೆಂಕಿಗೆಸೆದರು
### ಸಿಖ್ಖರ ಮೇಲೆ ಆರೋಪ

ಲಾಹೋರಿನ ಬಳಿ ದ್ಯಾಲ್‌ಪುರ ಎಂಬ ಹಳ್ಳಿಯಲ್ಲಿ ಸಿಖ್ಖ ಹುಡುಗಿಗೆ ಹೊಡೆದುದಕ್ಕಾಗಿ ಮುಸ್ಲಿಮ ತರುಣನೊಬ್ಬನನ್ನು ಕೆಲವು ಸಿಖ್ಖರು ಹಿಡಿದು ಬೆಂಕಿಯಲ್ಲಿ ಹಾಕಿದರೆಂದೂ ಕೆಲವರು ಕೂಡಿ ಆ ಹುಡುಗನನ್ನು ರಕ್ಷಿಸಿದರೆಂದೂ ಈ ಘಟನೆಯ ಫಲಿತಾಂಶವಾಗಿ ಹಿಂದೂ ಮುಸ್ಲಿಮರ ಮಹಾ ದಂಗೆಯಾಗಲಿರುವುದನ್ನು ಪೋಲೀಸರು ತಡೆದರೆಂದೂ ತಿಳಿದುಬಂದಿದೆ. ಕೆಲವು ಸಿಖ್ಖರನ್ನು ಸೆರೆಹಿಡಿಯಲಾಗಿದೆ.

### ಸಿಖ್ಖರ ಭೀಷ್ಮ ಪ್ರತಿಜ್ಞೆ.

ಲಾಹೋರಿನ ಷಾಹಿದ್‌ಗಂಜ್ ಗುರುದ್ವಾರದಲ್ಲಿ ಮೊನ್ನೆ ಒಂದು ಪ್ರಚಂಡ ಸಭೆಯು ಜರಗಿ "ಷಾಹಿದ್‌ಗಂಜ್ ಗುರುದ್ವಾರವು ತಮ್ಮ ಮಸೀದಿಯೆಂದು ಹೇಳಿ ಕೆಲವು ಮುಸ್ಲಿಮರು ವಶಪಡಿಸಿಕೊಳ್ಳಲಿಚ್ಛಿಸುತ್ತಿರುವರು. ಇದು ತಪ್ಪು. ಈ ಗುರುದ್ವಾರವು ಸಿಖ್ಖರ ವೀರ ಸ್ಮಾರಕವಾಗಿದೆ. ಎಷ್ಟರ ತನಕ ಒಬ್ಬನೇ ಒಬ್ಬ ಸಿಖ್ಖನು ಬದುಕಿ ಉಳಿಯುವನೋ ಅಷ್ಟರ ತನಕ ಸಿಖ್ಖರು ಗುರುದ್ವಾರವನ್ನು ಅನ್ಯರಿಗೆ ಬಿಟ್ಟುಕೊಡಲಾರರು" ಎಂದು ಠರಾವು ಮಾಡಿದರು.

### ಉಜ್ವಲ ಪ್ರೇಮ.
### ತರುಣನೊಬ್ಬನು ತನ್ನವಳನ್ನು ಹುಡುಕಿ ಹುಡುಕಿ ಸ್ವರ್ಗಸ್ಥನಾದನು.

ಸುರೇಶ ರೋಯ್ ಎಂಬ ೨೩ ವರುಷದ ಯುವಕನು ೫ ವರುಷಗಳ ಹಿಂದೆ ಪ್ರಿಂಟಿಂಗ್ ಕಲಿಯಲೋಸುಗ ಲಂಡನಿಗೆ ತೆರಳಿದನು. ತನ್ನ ವಿದ್ಯಾಭ್ಯಾಸದ ಅವಧಿಯು ಮುಗಿದ ಕೂಡಲೆ ತನ್ನ ದೇಶಕ್ಕೆ ಪಯಣ ಬೆಳೆಸಿದನು. ದುರದೃಷ್ಟವಶಾತ್ ಅವನು ಹೊರಡುವ ದಿನವೇ ಅವನಿಗೆ ಸೂರೂಪಿ ಕನ್ಯೆಯೋರ್ವಳ ಭೇಟಿಯಾಯಿತು. ಅವಳ ಹೆಸರು 'ಇಂಗ್ರಿಡ್' ಎಂದು. ಸುರೇಶನಿಗೆ ಅವಳ ಮೇಲೆ ಪ್ರೇಮವುಂಟಾಯಿತು. ಆದರೆ, ಸ್ವದೇಶಕ್ಕೆ ತೆರಳದೆ ನಿರ್ವಾಹವಿಲ್ಲದ ಕಾರಣ ಹೊರಟುಬಿಟ್ಟನು. ಸ್ವದೇಶಕ್ಕೆ ಬಂದರೂ; ಇಂಗ್ರಿಡಳನ್ನು ಮರೆಯಲು ಸುರೇಶನಿಂದ ಸಾಧ್ಯವಾಗಲಿಲ್ಲ. ಅವನಿಗಲ್ಲಿ ಜೀವನವೇ ನಿಸ್ಸಾರವಾಗಿ ಕಂಡುಬಂದುದರಿಂದ ಆ ಆಂಗ್ಲ ತರುಣಿಯನ್ನು ಪುನಃ ಕಂಡು ಅವಳನ್ನು ಲಗ್ನವಾಗುವ ಸಲುವಾಗಿ ತಿರುಗಿ ಇಂಗ್ಲೆಂಡಿಗೆ ತೆರಳಿದನು. ಗುರುತು ಪರಿಚಯವಿಲ್ಲ. ಇಂಗ್ರಿಡಳು ಇವನಿಗೆ ಸಿಗುವ ಬಗೆ ಹೇಗೆ? ಲಂಡನಿನಲ್ಲಿದ್ದ ತನ್ನ ತಮ್ಮನ ಮನೆಯಲ್ಲಿ ವಾಸಮಾಡಿ ಇಡೀ ಇಂಗ್ಲೆಂಡಿನಲ್ಲಿ ಹುಡುಕಿದರೂ ಅವಳ ಪತ್ತೆ ಸಿಗಲಿಲ್ಲ. ಅನ್ನಾಹಾರಗಳು ಸರಿಯಾಗಿಲ್ಲದೆ ಎರಡು ವರ್ಷಗಳ ತನಕ ಹೀಗೆ ಅಲೆದ ಕಾರಣ, ಕ್ಷಯ ರೋಗಕ್ಕೆ ತುತ್ತಾದನು. ತಮ್ಮನು ಎಷ್ಟು ಪ್ರಯತ್ನಪಟ್ಟರೂ, ಎಷ್ಟು ಹೇಳಿದರೂ ಕೇಳದೆ, ಔಷಧಿಯನ್ನು ಕೊಡಿಸಿದರೂ ಸಹ ತೆಗೆದುಕೊಳ್ಳದೆ ಮೃತನಾದನು.

### ಕಾಶೀ ಪಟ್ಟಣದ ಲೋ ಕೋಲೇಜಿನ ವಿದ್ಯಾರ್ಥಿಯೊಬ್ಬನು ನೀರುಪಾಲಾದನು.

ಸಪ್ಟಂಬರ ತಾ. 1ರಲ್ಲಿ ಗಂಗಾಸ್ನಾನಕ್ಕೆ ತೆರಳಿದ ಕಾಶೀ ಪಟ್ಟಣದ ಲೋ ಕೋಲೇಜಿನ ವಿದ್ಯಾರ್ಥಿಯಾದ ಮಿ| ವೆಂಕಟೇಶ್ವರ ಎಂಬವನು ಅಲೆಗಳ ಸೆಳೆತಕ್ಕೆ ಸಿಕ್ಕಿ ನೀರು ಪಾಲಾದನು. ಶವವು ಇನ್ನೂ ಸಿಕ್ಕಲಿಲ್ಲ.


N.I.P.

ಬ್ರೇಂಡ್ ಎಂಬ ಹೈಗ್ರೇಡ್

ಪೆಟ್ರೋಲ್,

ಚಿಮಿಣಿ ಎಣ್ಣೆ ಮತ್ತು

ಡೀಸೆಲ್ ಎಣ್ಣೆ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲೂ ಜವಾಬ್ದಾರೀ ಏಜಂಟರಿಂದ ವಿಕ್ರಯಿಸಲ್ಪಡುತ್ತದೆ.

ಏಜನ್ಸಿ ಶರ್ತುಗಳಿಗಾಗಿ ಕೆಳಗಿನವರಿಗೆ ಬರೆಯಿರಿ:-

INTERNATIONAL OIL Co., Ltd.

"JIJI HOUSE," RAVELIN ST., FORT,

BOMBAY.


### ನೋಟೀಸು.
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. No. 238/1935.

ದೂಮಕ್ಕ ಹೆಂಗ್ಸು, ಮದನ ಶೆಟ್ಟರ ಸೊಸೆ, ಕಾಸರಗೋಡು ತಾಲ್ಲೂಕು ಕಿದೂರು ಗ್ರಾಮದಲ್ಲಿರುವವಳು—ವಾದಿಳು.

ಮತ್ತು

ರಾಮಣ್ಣ ರೈ, ಅಮ್ಮಣ್ಣ ಬಂಟರ ಅಳಿಯ ವ ಸಾಂತಮ್ಮ ಹೆಂಗ್ಸಿನ ಮಗ, ಸದ್ರಿ ಕಿದೂರು ಗ್ರಾಮ ಶೇಂಜಾಳದಲ್ಲಿರುವವ—ಪ್ರತಿವಾದಿ.

ಪ್ರತಿವಾದಿಯು ವಾದಿಳಿಗೆ ತಾರೀಕು 19-7-1932ರಲ್ಲಿ ರೂ. 50-0-0ಕ್ಕೆ ಬರೆಕೊಟ್ಟ ದಿಮಾಂಡು ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಐವೇಜಿಗೆ ವಾದಿಳು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 19-9-1935ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಅಖೈರ ತನ್ಖಿಗೆ ಇಟ್ಟಿರುವುದರಿಂದ ಆ ದಿವಸ ಪ್ರತಿವಾದಿಯು ಹಾಜರಾಗದಿದ್ದರೆ ಏಕ್ಸ್‌ಪಾರ್ಟಿ ಡಿಕ್ರಿ ಮಾಡಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸೋಣವಾಗಿಯದೆ.

Kasaragod, 10-9-1935. } M. G. Ganesh Narayana Rai, *Advocate for Plaintiff*

### ಒಂದೇ ರಾತ್ರೆಯಲ್ಲಿ ನಾಲ್ಕು ಕೊಲೆಗಳು.
ಕರಾಚಿ, ಸಪ್ಟಂಬರ ೫.

ನವಾಬ್ ಶಹರ ವರ್ತಮಾನದ ಪ್ರಕಾರ ಅಲ್ಲಿ ರಾತ್ರಿಯೊಂದರಲ್ಲಿ ನಾಲ್ಕು ಕೊಲೆಗಳು ನಡೆದವಂತೆ. ತಾನು ಮೋಹಿಸುತ್ತಿದ್ದ ತರುಣಿಯನ್ನು ತನಗೆ ಮದುವೆಮಾಡಿಕೊಡಲು ಸಮ್ಮತಿಸದ ತರುಣಿಯ ತಂದೆಯನ್ನೂ, ತರುಣಿಯನ್ನೂ ಯುವಕನೋರ್ವನು ಚೂರಿಯಿಂದ ತಿವಿದು ಕೊಂದನು. ಇನ್ನೊಂದು ಕಡೆ ಸಿಖ್ಖನೋರ್ವನು ಮದಿವಾಳರಿಬ್ಬರನ್ನು ಕೊಂದಿದ್ದನು.

### ಕಾರಾಗಾರದಿಂದ ತಪ್ಪಿಸಿಕೊಂಡುದಕ್ಕಾಗಿ ಪುನಃ ಶಿಕ್ಷೆ.
ಪೂನಾ, ಸಪ್ಟಂಬರ ೫.

ನಾಲ್ಕು ದಿನಗಳ ಮೊದಲು ಜೈಲಿನಿಂದ ತಪ್ಪಿಸಿಹೋದ ವಿಠ್ಠಲಶಗ್ ಎಂಬ ಪಠಾಣನನ್ನು ಪುನಃ ಹಿಡಿದು ೧೫ ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿದ್ದಾರೆ.

### ನೋಟೀಸು.
ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 57/35.

ರಾದಮ್ಮ, ವಿಷ್ಣು ಮೂರ್ತಿಯ್ಯನವರ ವಿಧವೆ, ಉಡ್ಪಿ ತಾಲ್ಲೂಕು ಮಟ್ಟು ಗ್ರಾಮದಲ್ಲಿರುವವಳು—ಅರ್ಜಿದಾರಳು.

ಮೇಲ್ಕಂಡ ಅರ್ಜಿದಾರಳ ಗಂಡ ಮೃತ ವಿಷ್ಣುಮೂರ್ತಿಯ್ಯನವರಿಗೆ ಅಗಳಿ ರಾಮರಾಯರು ರೂ.500-0-0ಕ್ಕೆ ತಾ.10-7-'26ರಲ್ಲಿ ಬರಕೊಟ್ಟ ಡಿಮೊಂಡ್ ನೋಟಿನ ಬಾಬ್ತು ಬರತಕ್ಕ ಬಾಕಿ ಐವೇಜನ್ನು ವಸೂಲು ಪಡಿಯುವರೆ ಸದ್ರಿ ನೋಟು ಬರೆಸಿಕೊಂಡ ಮೃತ ವಿಷ್ಣು ಮೂರ್ತಿಯ್ಯನವರ ವಿಧವೆಯಾದ ಅರ್ಜಿದಾರಳೇ ಹಕ್ಕುದಾರಳೆಂತಲೂ, ಸದ್ರಿ ಐವೇಜಿನಲ್ಲಿ ಬೇರೆ ಯಾರಿಗೂ ಹಕ್ಕಿಲ್ಲವೆಂತಲೂ ಸದ್ರಿ ಐವೇಜನ್ನು ವಸೂಲತಿ ಪಡೆಯುವರೆ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿಯೂ ವಗ್ಯೆರೆ ಸಂಗ್ತಿಗಳನ್ನು ಕಾಣಿಸಿ ಅರ್ಜಿದಾರಳು ಅರ್ಜಿ ಕೊಟ್ಟಿರುವುದರಿಂದ, ಆಕ್ಷೇಪ ಹೇಳಲುಳ್ಳವರು ಸದ್ರಿ ಅರ್ಜಿ ಯಿಟ್ಟ ತಾ. 28-9-'35ಕ್ಕೆ ಸದ್ರಿ ಕೋರ್ಟಿನ ಮುಂದೆ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ಜ್ವಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣವಾಗುತ್ತದೆ.

ಪೊಳ್ಯಾಂ, ಉಡ್ಪಿ, 9-9-'35. } P. V. Acharya, *Pleader for Petitioner.*


## ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ| ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಜ್ವರ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಕಳುಪಾದ, ಗುಂಡಿಗ್ರೀಜ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು.

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0. 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ಬಾಣಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳತ್ತೆ ಉರುಟಾಗಿರುವಂತೆ ಮದ್ದುಗಳೂ ಇವೆ.

# WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY.

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ
ಸಾರ್ಸಪರಿಲ್ಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು.
ಅಶಕ್ತತೆ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಯಿ ೪.
ಏಜಂಟ್ಸ್— ಶಾ ಕಂಪೆನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಗುಜರಾತಿಯಲ್ಲಿ.

Ford

THE 1935 MODEL

## HEAVY DUTY TRUCK



# For Your Haulage

U. SUBRAYA NAYAK,
FORD DEALER
SHIMOGA——AND——MANGALORE.

## Now For Sale.

**Poholatum (Balm)** (German make) This is a home remedy for Rheumatism, Asthma, Sciatica, Lumbago Insect bites, Herpes, Wounds, Cuts, Colds, Headache It is a complete substitute for the domestic medicine chest Try once this unequalled remedy In ¼oz tin As 3/- In oz jar As. 12/-

**Superior Red Balm** For relieving pains in muscles and on skin. Directions for use with the bottle Price As 12/- only

**Wurmteufel** Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommed it All those who suffer from worms, children and adults, try this unique remedy and be freed from your ailment Price As 10 per packet

**Pocket-Inhaler** For coughs and hoarseness, headache, catarrch colds, use this inhaler and you will be relieved immediately Price per inhaler As 6 - & As 8/-

**"Po-Ho Fluid"** For Asthma, colds, indigestion toothache lumbago, a sure remedy in all cases Price As 6 - and Re. 1/- per phial.

**Cough Cure** An infallible remedy for coughs of all kinds bronchitis, hoarseness Particulars in bottle. Price As. 12/- for 8 oz bottle

**The New Curative Earth** A Radium cure for incurable diseases

**Mithra Toilet Soaps**— Scientifically prepared German soaps, excellent for health Price As 1/3, 2/6, 3/-, 4,

**Basel Mission Book Depot**
Mangalore, Branches in Codialbail, Hubli, Calicut.

## Our Dasara Special Number for 1935

will be out in the first week of October,
with attractive illustrations by twenties!-
with instructive & interesting articles by dozens!
Double coloured photos a Speciality!
CONTRIBUTIONS BY REPUTED WRITERS!
PRICE AS. 2 ONLY
It would pay you to advertise your goods in this Popular Number
*Apply for advertisement rates to —*
Advertisement Manager,
The Swadeshabhimani Dasara Special 1935,
CAR STREET MANGALORE

## ಲಾಹೋರ್ ಗೋಳೀಬಾರಿನ ಕುರಿತು ವಿಚಾರಣಾಸಮಿತಿಯ ಅಭಿಪ್ರಾಯ.

### ಸರಕಾರದ ಹೇಳಿಕೆ

ಲಾಹೋರಿನ ಷಾಹಿದ್‌ಗಂಜ್ ಗಲಭೆಯ ವೇಳೆ ನಡೆದ ಲಾಠಿ ಛಾರ್ಜು, ಗೋಳೀಬಾರು ಕುರಿತಾಗಿ ವಿಚಾರಿಸಲು ಸರಕಾರವು ನೇಮಕ ಮಾಡಿದ ವಿಚಾರಣಾ ಮಂಡಲವು ತನ್ನ ಅಭಿಪ್ರಾಯವನ್ನು ಪ್ರಕಟಿಸಿರುತ್ತದೆ. ಗೋಳೀಬಾರಿನಿಂದಾಗಿ ೧೫ ಮರಣಗಳೂ ಬುಲೆಟ್ ಹೊಡೆತದಿಂದ ೩೦ ಜಖಂಗಳೂ ಆಗಿವೆಯೆಂದು ಕಮಿಟಿಯು ಅಂದಾಜ ಮಾಡಿರುತ್ತದೆ. ಕಮಿಟಿಯಲ್ಲಿ ಲೆಫ್ಟಿನೆಂಟ್ ಕರ್ನಲ್ ಕಾಂಪ್ಟ್ (ಲಾಹೋರಿನ ಸಿವಿಲ್ ಸರ್ಜನರು) ಚೆಯರ್‌ಮನ್, ಶ್ರೀ ಕೆ ವಿ. ಎಸ್ ಮೋಟ್ಟರ್ ಐ. ಸಿ ಎಸ್ (ಸೆಕ್ರೆಟರಿ) ಮತ್ತು ಮಿ ಎಸ್. ಅಬ್ದುಲ್ ಅಜೀಜ್, ಖಾನ್ ಸಾಹೇಬ್ ಮಿ ಎಸ್. ಅಮೀರುದ್ದೀನ್ ಮತ್ತು ಡಾ| ಖಲೀಫ ಶ ಜಾವುದೀನ್‌ರವರನ್ನು ನೇಮಿಸಲಾಗಿತ್ತು. ಸರಕಾರವು ಜುಲಾಯಿ ೨೩ರಲ್ಲಿ ಪ್ರಕಟಿಸಿ ಬರೇ ೯ ಮರಣಗಳಾದುವೆಂದು ತಿಳಿಸಿತ್ತು. ಆದರೆ ಕಮಿಟಿಯ ಅವಗಾಹನೆಗೆ ೧೫ ಮರಣಗಳಾದ ವಿಷಯವು ಬಂದಿದೆ. ಸರಕಾರದ ಪ್ರಕಟಣೆಯಾದ ನಂತರ ಈ ಹೆಚ್ಚಿನ ಆರು ಮರಣಗಳಾದುದೇ ಇದಕ್ಕೆ ಕಾರಣವೆಂದು ಸರಕಾರದ ಹೇಳಿಕೆ. ಲಾಠಿ ಛಾರ್ಜು ನಡೆದ ಘಟ್ಟಿಗೆ ಕಮಿಟಿಯು ಅಭಿಪ್ರಾಯಪಡುವಂತೆ ಸಂಖ್ಯೆಯು ಗಮನಾರ್ಹವಾಗಿರುವುದಾದರೂ ತಮ್ಮ ಅವಗಾಹನೆಗೆ ಬಂದಿರುವ ಸಂಖ್ಯೆಯು ಸರಾಸರಿ ಸಂಖ್ಯೆಗಿಂತ ಬಹು ಕಡಮೆ. ಸರಕಾರದ ಮತದಂತೆ ಲಾಠಿಛಾರ್ಜಿಗೊಳಗಾದ ಸಂಖ್ಯೆಯು ಜನ ತಂಡಗಳ ಪ್ರಚಂಡ ಸಂಖ್ಯೆಯ ವೃದ್ಧಿಯಿಂದ ಬಹು ಕಡಮೆಯಾದ ... ಎಷ್ಟೋ ಜನರು ಪೋಲೀಸರಿಗೆ ಹೆದರಿ ಸಮಿತಿಯ ಮುಂದೆ ಸಾಕ್ಷೀಯಾಗಿ ಹೆದರಿರುವರೆಂದು ಕಮಿಟಿಯು ಅಭಿಪ್ರಾಯಪಟ್ಟರೂ, ಸರಕಾರವು ಈ ಹೇಳಿಕೆಯನ್ನು ಸ್ವೀಕರಿಸಲು ಸಿದ್ಧವಿಲ್ಲ. ಕಾರಣ, ಹಾಗೆ ಸಾಕ್ಷೀಯಾಗಿ ಬರುವ ಯಾರಿಗೂ ಪೋಲೀಸರ ಬಾಧೆಯಿಲ್ಲವಂತೆ ಸರಕಾರವು ಏರ್ಪಾಡು ಮಾಡುವುದೆಂದು ಮೊದಲೇ ಪ್ರಕಟಿಸಲಾಗಿದೆ

## ಬಾಲಕಿಯು ಢಕಾಯಿತರನ್ನು ತಡೆಗಟ್ಟಿದಳು.

### ಕಲಿಯುಗದ ವೀರರಮಣಿ!

ಚಾಲಿಸ್‌ಪುರ ಜಿಲ್ಲೆಯಲ್ಲಿ ನಡೆದ ಆಶ್ಚರ್ಯಕರವಾದ ಘಟನೆಯಿದು. ಢಕಾಯಿತರ ತಂಡವೊಂದು ಮುನ್ಸಿ ಶೋಭಾರಾಮನ ಮನೆಯನ್ನು ನುಗ್ಗಿತು. ಶೋಭಾರಾಮನು ತನ್ನ ಮಗನೊಂದಿಗೆ ಢಕಾಯಿತರನ್ನು ತಡೆಗಟ್ಟಲು ಪ್ರಯತ್ನಪಟ್ಟನು. ಆದರೆ ತುಸು ಹೊತ್ತಿನಲ್ಲೇ ಢಕಾಯಿತರು ಅವನನ್ನು ನೆಲಕ್ಕುರುಳಿಸಿದರು. ಅಷ್ಟರಲ್ಲಿ ಹಿಂದೂ ಬಾಲೆಯೊಬ್ಬಳು ಬಂದು ತನ್ನ ಖಾತಿಪ್ರಹಾರದಿಂದ ಅವರನ್ನು ತಡೆಗಟ್ಟಿದಳು. ಈ ಕಲ್ಲಹವನ್ನು ಕೇಳಿ ನೆರೆಹೊರೆಯವರನೇಕರು ಬಂದು ಢಕಾಯಿತರನ್ನು ಓಡಿಸಿದರು. ಬಾಲೆಯ ಧೈರ್ಯವನ್ನು ಎಷ್ಟು ಹೊಗಳಿದರೂ ಸಾಲದು!

## ಕ್ವೆಟ್ಟಾ ಭೂಕಂಪಕ್ಕೆ ಆಹುತಿಯಾದ ಅಧಿಕಾರ ವರ್ಗದವರ ಸಂಖ್ಯೆ.

ಮಿಲಿಟರಿ ೧೧೭ ಮರಣ, ೧೨೭ ಜಖಂ. ರೋಯಲ್ ಏರ್ ಫೋರ್ಸ್ ೧೩೦ ಮರಣ, ೧೨೩ ಜಖಂ. ಸಿವಿಲ್ ಡಿಪಾರ್ಟ್‌ಮೆಂಟ್ ೯೦೦ ಮರಣ ... ಜಖಂ; ರೈಲ್ವೇ ನೌಕರರು ೧೩೫ ಮರಣ, ೩೧೬ ಜಖಂ. ಕ್ವೆಟ್ಟಾ ಭೂಕಂಪದಲ್ಲಿ ನಾಶವಾದ ಸರಕಾರಿ ಕಟ್ಟಡಗಳ ಬೆಲೆಯ ಮೊತ್ತ ... ರೈಲ್ವೇ ... ೩೧ ಕೋಟಿಗಳು, ರೈಲ್ವೇಗಳದ್ದು ೬೫ ಲಕ್ಷ, ಪೋಸ್ಟ್ ಮತ್ತು ಟೆಲಿಗ್ರಾಫ್ ೩ ಲಕ್ಷ, ಇತರ ಸಿವಿಲ್ ಖಾತೆಗಳು ೬೦ ಲಕ್ಷ. ಇವುಗಳ ಪುನರ್ನಿರ್ಮಾಣಕ್ಕೆ ಸಧ್ಯದ ಅಂದಾಜು ... ಕೋಟಿ

## ಗ್ವಾಲಿಯರದ ರಾಜಮಾತೆ ಲಕ್ಷ್ಮೀಬಾಯಿ ರಾಜವಾಡೆಯವರು

ಶ್ರೀಯುತ ಎಚ್ ಆರ್ ... ಯವರು ಮುಂಬಾಯಿ ನ್ಯಾಯವಿಧಾಯಕ ಸಭೆಗೆ ತಂದ ಹಿಂದೂ ವಿಧವೆಯರ್ ಬಿಲ್ಲನ್ನು ವಿರೋಧಿ ಸ್ತ್ರೀಯರ ಒಂದು ಸಂಗಡವನ್ನು ... ಅವರು ಕೌನ್ಸಿಲ್ ಮಂದಿರಕ್ಕೂಗಲು ಬಿನ್ನವತ್ತಳೆಯನ್ನೊಪ್ಪಿಸಿರು.

## ಫ್ರಾನ್ಸಿನಲ್ಲಿ ವಿಮಾನಗಳು ಬಿದ್ದುವು!

### 10 ಮಂದಿ ಮೃತರಾದರು'

ಪೇರಿಸ್‌ನಿಂದ ಬಂದ ವಾರ್ತೆಯಿಂದ ಹೀಗೆ ತಿಳಿದು ಬರುತ್ತದೆ ... ರಾತ್ರಿ ಎರಡು ವಿಮಾನಗಳು ಸೈಂಟ್ ಜೀನ್ ಡಿ ... ಎಂಬ ಹಳ್ಳಿಯಲ್ಲಿ ಹಾರಾಡುತ್ತಿದ್ದಾಗ ಡಿಕ್ಕಿ ಬಡೆದುಕೊಂಡು ಕೆಳಗುರುಳಿದುವು. ಅವುಗಳೊಳಗಿದ್ದ ಹತ್ತು ಮಂದಿ ಭಸ್ಮವಾದರು. ಒಂದು ವಿಮಾನವು ದೊಡ್ಡ ಮನೆಯ ಮೇಲೆ ಬಿದ್ದು ಬಹಳ ಅನಾಹುತಕ್ಕೆ ಕಾರಣವಾಯಿತು. ಮೃತರೊಬ್ಬನು ಪರಿಚ್ಛುಟ್‌ನ್ನು ಹಾಕಿಕೊಂಡಿದ್ದನು. ಪೆಟ್ರೋಲ್ ಟಾಂಕಿಯು ಒಡೆದುಹೋದಾಗ ಇವನು ಜಿಗಿಯಲ್ಪಟ್ಟಿರುವನು

## 7000 ಮರಣಗಳು'

### ಮಧ್ಯಪ್ರಾಂತ್ಯದಲ್ಲಿ ಭಯಂಕರ ಕೊಲೆರಾ'

ಮಧ್ಯಪ್ರಾಂತ್ಯದಲ್ಲಿ ಕೊಲೇರಾ ಜಾಡ್ಯವು ಅಸಂಖ್ಯಾತ ಪ್ರಾಣಗಳನ್ನು ನುಂಗಿಬಿಡುತ್ತಿರುವುದೆಂದು ತಿಳಿದುಬರುತ್ತದೆ. ಬುಲ್ದಾನಾ, ಆಕೋಲಾ, ಬೀರಾರ್ ಮೊದಲಾದ ಕಡೆಗಳಲ್ಲಿ ಜುಲಾಯಿ ತಿಂಗಳಿನಲ್ಲಿ ೨೦೦೦ ಜನರು ಮೃತರಾದರು. ಕಳೆದ ವಾರ ೩೫೦೦ ಜನರಿಗೆ ಕೊಲೇರಾ ತಗಲಿತು. ... ಜನರು ಕಾಲವಶರಾದರು. ಜುಲಾಯಿಯಿಂದ ಇಂದಿನ ತನಕ ಅಲ್ಲಿ ೭೦೦೦ ಜನರು ಕೊಲೆರಾಕ್ಕೆ ತುತ್ತಾದರು

## ಬೋರಿಂಬು ಸಿಡಿಯಿತು!

### 4 ಜನರ ಮರಣ, 3 ಮಂದಿಗೆ ಜಖಂ

### 2 ವಿಮಾನಗಳು ಪೂರ್ಣ ಸುಟ್ಟುವು

ಸಿಮ್ಲಾ ಸೆಪ್ಟಂಬರ ೩

ಅಬೋಟಾಬಾದಿನ ವಿಮಾನ ನಿಲ್ದಾಣದಲ್ಲಿ ವಿಮಾನವೊಂದರಿಂದ ಬೋಂಬುಗಳನ್ನು ಕಳಗಿಳಿಸುವಾಗ ಒಂದು ಬೋಂಬು ಸಿಡಿದುಹೋಯಿತು. ಸರ್ಜೆಂಟ್ ಜೆ ಫ್ರೆಡರಿಕ್, ಆರ್ ಎ ಏಯರ್ಸ್ ಮತ್ತು ಪೀಟರ್ ಬ್ರೌನ್ ಎಂಬ ಬ್ರಿಟಿಷ ಸೈನಿಕರು ಮರಣಹೊಂದಿದರು. ಲಸ್ಕರ್ ಎಫ್ ಅಕಿರ್ ಖಾನ್ ಮತ್ತು ಲಸ್ಕರ್ ಮಹಮ್ಮದಿನ್ ಎಂಬವರು, ಹಿಂದೀಯರು ಮೃತರಾದರು. ಬ್ರಿಟಿಷರಲ್ಲಿ ಜೋನ್ಸನ್, ಕೊರ್ಪೊರಲ್ ಆರ್ ಫ್ಲೆಚರ್, ಕೊರ್ಪೊರಲ್ ಎಸ್. ಎಫ್ ಫ್ರೇಸರ್, ಎಫ್ ಬಟ್ಲರ್ ಅಕಿಲಾರ್ ಜೆ ಲಿವರ್ ಎಂಬವರು ಜಖಂಗೊಂಡಿರುವರು. ಹಿಂದೀಯ ನೌಕರರಲ್ಲಿ ಮಹೀದ್‌ಖಾನ್ ಎಂಬವರು ಜಖಂಗೊಂಡರು. ಸೈನ್ಯ ಖಾತೆಯ ೨೩ ಮಂದಿ (ಮೇಲಿನವರ ಹೊರತು) ಜಖಂಗೊಂಡಿರುವರು. ಸಿಡಿತದ ಪರಿಣಾಮವಾಗಿ ಎದ್ದ ಬೆಂಕಿಯು ಎರಡು ವಿಮಾನಗಳನ್ನು ಪೂರ್ಣವಾಗಿ ಭಸ್ಮೀಕರಿಸಿತು. ವಿಚಾರಣೆಯು ನಡೆಯುತ್ತಲಿದೆ

## ಚಿತ್ತಗಾಂಗಿನಲ್ಲಿ ಕ್ರಾಂತಿಕಾರರು

ಚಿತ್ತಗಾಂಗಿನ ಟೌನ್ ಕಮಿಟಿಗಳ ಸೆಕ್ರೆಟರಿಗಳ ಪರಿಷತ್ತು ಒಂದರಲ್ಲಿ ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಭಾಷಣವಿತ್ತು ಚಿತ್ತಗಾಂಗಿನಲ್ಲಿ ಕ್ರಾಂತಿಕಾರರು ಕರಪತ್ರಗಳನ್ನು ಹಂಚಿ ಈಗಲೂ ತಮ್ಮ ಚಳವಳಿಯ ಚಟ್ಟೆಯನ್ನು ತೋರಿಸುತ್ತಿರುವರು. ಕ್ರಾಂತಿಯು ಇನ್ನೂ ಹೋಗಲಿಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ. ಈ ದುಷ್ಟರಿಗೆ ಎಲ್ಲರೂ ಎಚ್ಚರದಿಂದಿರಬೇಕು ಎಂದು ಹೇಳಿದರು.

## ನೆರೆಯ ಹಾವಳಿ

ರಂಗೂನಿನಲ್ಲಿ ಇರಾವತಿ ನದಿಯು ಉಕ್ಕಿಬಂದುದರಿಂದ ದೀಗುಹಬ್ಬಿದ ನೆರೆಯಿಂದಾಗಿ ನೀರುಪಾಲಾಗಿದೆ. ಪೇಗು ಮತ್ತು ತರಾವಾಡಿ ಜಿಲ್ಲೆಗಳು ಅದೇ ಅವಸ್ಥೆಯಲ್ಲಿವೆ.

## ಪೋಲೀಸರು ದುರ್ವರ್ತನಕ್ಕೆ ಪ್ರಾರಂಭಿಸಿದರೇ?

ಸಿಲ್ಹಟ್ಟಿನ ಕಾರ್ಯಾಲಯದಲ್ಲಿ ನಡೆದ ಮಾದಲಿಯ ಪ್ರಕರಣದಲ್ಲಿ ಪೋಲೀಸರು ಹೋಗಿ ಬಹಳವಾಗಿ ಉಪಟಳವನ್ನು ಕೊಟ್ಟಿದ್ದರಿಂದ ಅಲ್ಲಿಯ ಹಳ್ಳಿಗರನೇಕರು ಊರನ್ನು ಬಿಟ್ಟು ಹೊರಟಿರುವರೆಂದು ವರ್ತಮಾನವಿದೆ. ಇದನ್ನು ವಿಚಾರಿಸಲು ಸ್ಪೆಷಲ್ ಪೋಲೀಸ್ ಅಧಿಕಾರಿಯನ್ನು ನೇಮಿಸಿದ್ದಾರೆಂದು ತಿಳಿದುಬಂದಿದೆ

## ಮುದಿಪ್ರಾಯದಲ್ಲಿ ಜೈಲು ಲಭಿಸಿತು.

### ಬಾಲೆಯೋರ್ವಳನ್ನು ಬಲಾತ್ಕಾರದಿಂದ ಕದ್ದೊಯ್ದನು!

ಸಿಲ್ಹಟ್ಟಿನ ಎಂಬಲ್ಲಿ ಸೈಯ್ಯದ್ ಮಹಮ್ಮದನ್ ಎಂಬವನಿರುವನು. ಅವನ ೬೫ ವಯಸ್ಸಿನ ಮುದುಕ. ಅವನು ೧೫ ವರ್ಷ ಪ್ರಾಯದ ದಿಲಸಾಮತ್ ಆಕ್ತಿಲನ ಎಂಬ ಬಾಲಕಿಯನ್ನು ಕದ್ದೊಯ್ದುದಕ್ಕಾಗಿ ಪೋಲೀಸರು ಅವನನ್ನು ದಸ್ತಗಿರಿ ಮಾಡಿದ್ದರು. ಅವನಿಗೆ ಸಹಾಯಕನೆಂದು ಸಂಶಯಿಸಿದ್ದ ಅಬ್ದುಲ್ ಲತೀಫ ಎಂಬವನನ್ನು ಸಹ ಸೆರೆಹಿಡಿದರು. ಕೋರ್ಟಿನಲ್ಲಿ ಅವನ ವಿಚಾರಣೆಯಾಗಿ ಅವನು ಅಪರಾಧಿಯಲ್ಲವೆಂದು ಬಿಟ್ಟಿದ್ದರು. ಮುದುಕನಿಗೆ ಮಾತ್ರ ನಾಲ್ಕು ವರ್ಷದ ಕಠಿಣ ಸಜೆಯನ್ನು ವಿಧಿಸಿರುವರು

## ಬಂಗಾಳದಲ್ಲಿ ಭೂಕಂಪ!

### ಅನಾಹುತವಾಗಿಲ್ಲ

ಉತ್ತರ ಬಂಗಾಳದ ಅನೇಕ ಜಿಲ್ಲೆಗಳಲ್ಲಿ ಇದೇ ೨೩ ನೇ ದಿನ ಭೂಮಿಯು ನಡುಗಿತು. ಕೂಚ್ ಬಿಹಾರ್ ಮೊದಲಾದ ಕಡೆಗಳಲ್ಲಿ ಕಂಪನವು ಪ್ರಬಲವಾಗಿತ್ತು. ಎಲ್ಲೆಲ್ಲೂ ಭಯಂಕರ ಶಬ್ದವು ಕೇಳಬಂತು. ಜನರೆಲ್ಲರೂ ಮನೆಗಳೊಳಗಿಂದ ಹೊರಗೆ ಓಡಿಹೋದರು. ಇದುವರೆಗೆ ಬಂದ ವಾರ್ತೆಯಿಂದ ಎಲ್ಲಿಯೂ ಅನಾಹುತಗಳು ನಡೆದುದು ತಿಳಿದು ಬಂದಿಲ್ಲ.

## ಮುಸ್ಲಿಮ ತರುಣಿಯ ಕೊಲೆ.

### ಮೂವರಿಗೆ ಫಾಶಿ, ಒಬ್ಬನಿಗೆ ಗಡಿಪಾರು!

ಕಳೆದ ೩ ಸೆ ೨೬ನೇ ದಿನ, ಪಾಟ್ನಾ ಹೈಕೋರ್ಟಿನಲ್ಲಿ ಮಿ ಜಸ್ಟಿಸ್ ವರ್ಮಾ ಮತ್ತು ಮಿ ಜಸ್ಟಿಸ್ ರೊಲೆಂಡ್ ಇವರು ಐವರು ಮುಸ್ಲಿಮರಿಗೆ ಘೋರ ಶಿಕ್ಷೆಯನ್ನು ವಿಧಿಸಿದರು. ಆರೋಪಿತ ಮುಸ್ಲಿಮರು ತರುಣಿಯೋರ್ವಳನ್ನು ಕೊಲೆಗೈದುದು ಪೂರ್ಣಿಯಾ ಡಿಸ್ಟ್ರಿಕ್ಟಿನಲ್ಲಿ ಓರ್ವ ಮುಸ್ಲಿಮನೋರ್ವನ ಪತ್ನಿಯು ತನ್ನ ನೆರೆಹೊರೆಯವರೊಡನೆ ರಮಿಸುತ್ತಿದ್ದಳಂತೆ. ಈ ನೆರೆಯವರು ಆರು ತಿಂಗಳು ಗಂಡನಿಲ್ಲದ ಅವಳ ಮನೆಯಲ್ಲಿಯೇ ಕಳೆಯುತ್ತಿದ್ದರು. ಗಂಡನಿಗೆ ಸಂಶಯವುಂಟಾಗಿ, ಅವನು ನೆರೆಯವರನ್ನು ಬಿಟ್ಟುಬಿಟ್ಟ. ಆದರೂ ಅವನ ಪತ್ನಿಯು ನೆರೆಯವನೊಡನೆ ರಮಿಸುತ್ತಿದ್ದಳು. ಒಂದು ದಿನ ರಾತ್ರಿ ಗಂಡನು ಮನೆಯಲ್ಲಿಲ್ಲದಿರುವಾಗ ಅವಳು ಆ ನೆರೆಯವನನ್ನು ಮನೆಗೆ ಕರೆ ... ಕರೆದಳು. ಈ ಸಂಗತಿಯು ಗಂಡನಿಗೆ ತಿಳಿದುಬರಲು, ಅವನು ನಾಲ್ಕು ಮಂದಿ ತನ್ನ ಆಪ್ತರೊಡನೆ ಬಂದು ಸತಿಯನ್ನು ಕೊಂದೇ ಬಿಟ್ಟನು. ನೆರೆಯವನಿಗೆ ಮಟ್ಟುಪೂಜೆಯನ್ನು ಅರ್ಪಿಸಿದನು. ಕೊಲೆಗಾರರ ದಸ್ತಗಿರಿಯಾಗಿ, ಅವರ ವಿಚಾರಣೆ ನಡೆದು, ಮೂವರನ್ನು ಫಾಶಿಗೂ, ಒಬ್ಬನನ್ನು ಗಡೀಪಾರು ಶಿಕ್ಷೆಗೂ ಗುರಿಪಡಿಸಿದರು. ಒಬ್ಬನನ್ನು ನಿರಪರಾಧಿ ಎಂದು ಬಿಟ್ಟುಬಿಟ್ಟಿರುವರು

## ರೈಲು ಬಂಡಿಗಳ ಸಮಯ.

| ಗಾಡಿಗಳು | ಹೊರಡುವ ಘಂಟೆ | ತಲಪುವ ಘಂಟೆ |
|---|---|---|
| ಮೈಲು | ಬೆಳಗ್ಗೆ 9 50 | ಸಂಜೆ 4 20 |
| ಮಿಕ್ಸೆಡ್ | „ 5 55 | ರಾತ್ರಿ 8 50 |
| ಫಾಸ್ಟ್ ಪೆಸೆಂಜರ್ | ಮ. 12-45 | ಮ 2 40 |
| ಶಟಲ್ | ಸಂಜೆ 5 25 | ಬೆಳಗ್ಗೆ 9-25 |
| ಕಾಂಞಂಗಾಡ್ ಪೆಸೆಂಜರು | ಬೆ 8 25 | ಮ 1 20 |
| ಕಾಸರಗೋಡು ಪೆಸೆಂಜರು | ಸಂಜೆ 3 20 | ಸಂಜೆ 6-15 |


# ಯೋಗ್ಯರಾದವರಿಗೆ ಸುಸಂದರ್ಭ

## ದಿ ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಇದು ಮದ್ರಾಸು ಪ್ರಾಂತ್ಯದಲ್ಲಿ ಬಹುಮುಖವಾದ ಸಂಘಟನೆಯನ್ನೂ ಪ್ರಚಾರ ಕಾರ್ಯವನ್ನೂ ಕೈಕೊಂಡಿದೆ ಮತ್ತು

## ಪ್ರಕಟಿಸುವುದೇನೆಂದರೆ,—

ಪ್ರಮುಖ ಕೇಂದ್ರಗಳಲ್ಲಿ ಕೆಲಸಮಾಡಲು ಉತ್ಸಾಹಿಗಳಾದ ಹೊಸ ಜನರಲ್ ಒರ್ಗನೈಜರರ ಕಂಟ್ರಾಕ್ಟನ್ನು ಮಾಡುವುದರಲ್ಲಿದೆ

ವಿವನ್ಸಿ ಪ್ರಸಾರಣೆಯ ಧೋರಣೆಯ ಮೇಲೆಯೇ ಈ ಹೊಸ ಕಂಟ್ರಾಕ್ಟು ಕ್ರಮವನ್ನಿಡಲಾಗಿದೆ. ಇದರಂತೆ ಯೋಗ್ಯ ಸಂಬಳ, ವ್ಯಕ್ತಿಪರವಾದ ವ್ಯಾಪಾರದಲ್ಲಿ ಸಂಚಾರ ಭತ್ತೆ, ಉದಾರ ಕಮಿಶನ್, ಪ್ರೊವಿಡೆಂಟ್ ಫಂಡ್ ಮತ್ತು ಜಾಹೀರಾತುಗಳ ಸೌಕರ್ಯಗಳಿವೆ. ಇಂಡಿಯಾದಲ್ಲಿರುವ ಯಾವ ವಿಮಾ ಕಂಪೆನಿಗಿಂತಲೂ ಅತ್ಯುತ್ಕೃಷ್ಟ ಕಂಟ್ರಾಕ್ಟು ಇದೆಂದು ನಿಸ್ಸಂದೇಹವಾಗಿ ಹೇಳಬಹುದು

ಇಂಡಿಯನ್ ಜೀವವಿಮೆಯ ರಂಗದಲ್ಲಿ 'ದಿ ನಾರ್ದರ್ನ್ ಲೈಫ್ ಪೋಲಿಸಿ' ಎಂಬುದು ಧೈರ್ಯಪೂರ್ಣ ಸಾಹಸ. ನಿರುದ್ಯೋಗದಲ್ಲಿ, ದೌರ್ಬಲ್ಯದಲ್ಲಿ, ಅಪಘಾತದಲ್ಲಿ, ವೈದ್ಯಕೀಯ ಸಹಾಯಕ್ಕೆ, ಆರ್ಥಿಕ ಬೆಂಬಲಕ್ಕೆ, ಮನೆಗೆ ಬೇಕಾದ ಸಾಮಾನುಗಳನ್ನು ಪಡೆಯುವುದಕ್ಕೆ ರಕ್ಷಣೆಗಳನ್ನಿತ್ತು, ಜೀವವಿಮೆಯ ಸರ್ವಿಸಿನಲ್ಲಿ ಅತ್ಯುತ್ತಮ ಸೌಲಭ್ಯಗಳನ್ನೊದಗಿಸಿಕೊಡುತ್ತದೆ

ಸರ್ ಚಿನೂಭಾಯಿ ಮಾಧವಲಾಲ ಬೆರೊನೆಟ್, ಮಿಲ್ ಮಾಲಕರು ಮತ್ತು ವ್ಯಾಪಾರಿಗಳು, ಶ್ರೀ| ಬಿ ವಿ ಜಾಧವ್, ಎಂ ಎ., ಎಲ್ ಎಲ್ ಬಿ, ಮಾಜಿ ಎಂ. ಎಲ್ ಎ ಮತ್ತು ಮುಂಬಾಯಿ ಸರಕಾರದ ಮಂತ್ರಿಗಳು, ಕೊಲ್ಹಾಪುರದ ಮಾಜಿ ದಿವಾನರು—ಇವರಂತಹ ಪ್ರಖ್ಯಾತ ಮತ್ತು ಯಶಸ್ವೀ ವಾಣಿಜ್ಯಪಟುಗಳಿಂದಲೇ ಕಂಪೆನಿಯನ್ನು ಸಮರ್ಪಕವಾಗಿಯೂ ಆರ್ಥಿಕವಾಗಿಯೂ ನಡೆಸಲಾಗುತ್ತದೆ. 1934ರ ಇದರ ವಹಿವಾಟವು ಅಭೂತಪೂರ್ವ ವಿಜಯವನ್ನು ಹೊಂದಿದೆ. ಕಳೆದ ವರ್ಷ 85,00,000 (85 ಲಕ್ಷ) ರೂಪಾಯಿಗಳ ವಹಿವಾಟವನ್ನು ನಡೆಸಿದೆ, ಕಂಪೆನಿಯ ದಿಗಂತವ್ಯಾಪ್ತವಾದ ಖ್ಯಾತಿಗೂ ಅದರ ಜಯಸಂಕೇತಕ್ಕೂ ಇದೇ ನಿದರ್ಶನವಾಗಿದೆ

ಶಕ್ತರೂ, ಸಂಘಟನೆ ಮಾಡಲು ಸಮರ್ಥರೂ ಆದ ಗೃಹಸ್ಥರೂ ಬೇಗಿರುವವರು ಕೆಳಗೆ ಸಹಿಯಿಟ್ಟವರನ್ನು ರವಿವಾರವೊಂದಲ್ಲದೆ ಬೇಕಾದ ದಿನಗಳಲ್ಲಿ 12ರಿಂದ 6 ಗಂಟೆ ಸಂಜೆಯೊಳಗೆ ಮುಖತಃ ಕಂಡು ಮಾತನಾಡಿದರೆ ಪ್ರಯೋಜನವಾದೀತು.

C/o ಸ ದ್ರಾಸು ಬ್ರೇಂಚ್ ಆಫೀಸು,
12 ತಂಬುಚೆಟ್ಟಿ ಸ್ಟ್ರೀಟ್, ಮದ್ರಾಸು.

ಎಸ್. ಎಚ್. ಥಾಕರ್,
ಜನರಲ್ ಮೆನೇಜರ್, (ಪ್ರವಾಸದಲ್ಲಿರುವವರು)

## ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ್ಯ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

## ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ






Distributors for South Kanara —

**Raghavendra Ranga Pai, Car Street, Mangalore.**



ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**ಗಳನ್ನು ಉಪಯೋಗಿಸಲಿಕ್ಕೆ

ಜೀವನದ ಜಯಶೀಲತೆಯ ಪರಿಯನ್ನೀರಿ ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಡಬ್ಬಿಯೊಂದಕ್ಕೆ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ಉಚಿತ ಕಳುಹಿಸಲ್ಪಡುವ ನಮ್ಮ

**ಕಾಮಶಾಸ್ತ್ರವನ್ನೋದಿರಿ.**

Agents —Shah Company MANGALORE
Pearl & Sons M...

Atank Nigrah Pharmacy
Chickpet Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.



ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

## ಸಾಮಾನ್ಯ ವಿಜ್ಞಾನ.

| ಚರಿತ್ರೆ ಮತ್ತು ಕಥೆಗಳು. | ರೂ | ಆ | ಪೈ | ಸಾಮಾನ್ಯ ವಿಜ್ಞಾನ. | | | |
|---|---|---|---|---|---|---|---|
| | | | | ಎರಡನೇ ದರ್ಜೆ | 0 | 8 | 0 |
| ನಾಲ್ಕನೇ ದರ್ಜೆ | 0 | 6 | 0 | ಮೂರನೇ ,, | 0 | 8 | 0 |
| ಮೂರನೇ ,, | 0 | 4 | 6 | ನಾಲ್ಕನೇ ,, | 0 | 6 | 0 |
| ಎರಡನೇ ,, | 0 | 4 | 0 | ಐದನೇ ,, | 0 | 5 | 0 |
| ಸಮಾಜಶಾಸ್ತ್ರ. | | | | | | | |
| ಐದನೇ ದರ್ಜೆ | 0 | 8 | 0 | | | | |
| ನಾಲ್ಕನೇ ,, | 0 | 3 | 0 | ಆರನೇ ದರ್ಜೆ | 0 | 4 | 0 |
| ಮೂರನೇ ,, | 0 | 2 | 6 | ಏಳನೇ | 0 | 5 | 0 |
| | | | | ಎಂಟನೇ , | 0 | 6 | 0 |

## ಅಜ್ಜ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಬೇನು ಸತ್ತು ಕಾಗೆ ಬಡವಾಯಿತು
ಮೊಣಸಿನ ಕಾಳಪ್ಪ.
ಅಗಸನ ಮುದ್ದ
ಇಲಿಗಳ ಪಕ್ಕ ಪೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಆಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

## ಶಾರದಾ ಛಾಪಖಾನೆ, ಮಂಗಳೂರು.



ಶಿವರಾಮ ಕಾರಂತ ವಿರಚಿತ

# ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ ಆಂದವಾಗಿ ಮುದ್ರಿಸಲ್ಪಟ್ಟಿದೆ

ಕ್ರೌನ್ ⅛ ಆಕಾರದ ೧೮೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ. 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು

# ನಡೆದ ಕತೆಗಳು.

## True Stories.

ಓದಿ ಮುಗಿಸುವ ಸಮಯ.—ಮೂರೇ ನಿಮಿಷಗಳು.

All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದೇ (ನಡೆದ ಕತೆಗಳು)—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು. ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.]

ಪುಸ್ತಕ ೨—೫.

### ಭಕ್ತಿಯ ಫಲ.

ಉಡುಪಿಯ ಸಂತೆಪೇಟೆ ನಾರಾಯಣ ಮೂರ್ತಿಗಳೆಂದರೆ ಶ್ರೀ ಕೃಷ್ಣನ ಭಕ್ತಕೋಟಿಗಳಲ್ಲಿ ಗಣ್ಯರು. ಅವರು ತನ್ನ ಭಕ್ತಿ ಮಹಿಮೆಯನ್ನು ಊರ ಜನರಿಗೆ ಬೇರಾವ ವಿಧಾನದಿಂದಾದರೂ ಪ್ರದರ್ಶಿಸುತ್ತಿದ್ದಿಲ್ಲವಾದರೂ ಪ್ರತಿ ಶನಿವಾರವೂ ಶ್ರೀ ಕೃಷ್ಣನ ಭಜನೆಯನ್ನು ಭಕ್ತಿಪುರಸ್ಸರವಾಗಿ ಮಾಡುತ್ತಿದ್ದು ತಾನು ಶ್ರೀಕೃಷ್ಣನ ಭಕ್ತರಲ್ಲೊಬ್ಬರೆಂದು ತಿಳಿಸುತಿದ್ದರೆಂದು ಹೇಳಲು ಸಂತೋಷವೆನಿಸುತ್ತದೆ.

ಶನಿವಾರ ದಿನವೆಂದರೆ ಅವರ ಮನೆಯಲ್ಲಿ ಸಣ್ಣ ಹಬ್ಬದ ದಿನವೆಂದೇ ಹೇಳಬೇಕು. ಆ ದಿನದ ಮುಂಜಾನೆಯಿಂದ ಸಂಜೆಯ ವರೆಗೆ ಅವರ ಪತ್ನಿ ಭಾಗ್ಯಮ್ಮನವರಿಗೂ ಅವರ ಇಬ್ಬರು ಮಕ್ಕಳಿಗೂ ಕೂಗು ದೀಪ, ಆರತಿ ದೀಪ, ಹರಿವಾಣ, ಗಂಧದ ಪಾತ್ರೆ ಮೊದಲಾದ ಸಾಹಿತ್ಯಗಳನ್ನು ಶುದ್ಧಗೊಳಿಸುವ ಕೆಲಸ. ಅವರ ಮಗ ಕೋದಂಡನಿಗೆ ಗಂಧವನ್ನರೆಯುವ ಕೆಲಸ. ಮೂರ್ತಿಗಳಿಗೆ ಹೂವು, ಹಣ್ಣು ಹಂಪಲು ಊದುಬತ್ತಿ, ಕರ್ಪೂರ, ಲೋಭಾನ ಮೊದಲಾದುವುಗಳನ್ನು ಪೇಟೆಯಿಂದ ತರುವ ಕೆಲಸ.

ಪ್ರತಿ ಶನಿವಾರ ದಿನ ಶ್ರೀ ಕೃಷ್ಣನ ಭಜನೆಯನ್ನು ಮನೆಯಲಿ ನೆರವೇರಿಸುವ ಕಟ್ಟಳೆಯು ಮೂರ್ತಿಗಳ ಹಿರಿಯರಿಂದ ಕೆಳಗಿಳಿದು ಬಂದುದು. ಮೂರ್ತಿಗಳಿಗೆ ಇದೀಗ ಐವತ್ತೆಂಟನೇ ವರ್ಷವೆಂದರೆ ಈ ಭಜನೆಯು ಅವರ ತಂದೆ ಅನಂತ ಮೂರ್ತಿಗಳ ಕಾಲದಿಂದಲೂ ಆಚರಿಸಲ್ಪಡುತ್ತ ಬಂದುದೆಂದರೆ—ಭಜನೆಯ ಆರಂಭವಾಗಿ ಎಷ್ಟು ವರ್ಷಗಳಾದುವೆಂದು ನಾವೇ ಲೆಕ್ಕವಿಡಬಹುದು.

ಶನಿವಾರ ದಿನ ಬೆಳಿಗ್ಗೆ ಮೂರ್ತಿಗಳು ಸ್ನಾನ ಮಾಡಿ ಮಡಿಯುಡುವರು. ಮನೆ ಮಂದಿಗೂ ಅದೇ ಅಪ್ಪಣೆ. ಆ ದಿನ ಮನೆಯ ಪರಿಸರವೆಲ್ಲ ಸ್ವಚ್ಛವಾಗಿರಬೇಕು, ಮನೆಯವರೆಲ್ಲರೂ ಉಪವಾಸವನ್ನಾಚರಿಸಬೇಕು, ಸುಳ್ಳಾಡುವುದು, ಜಗಳಾಡುವುದು,—ಇವಕ್ಕೆಲ್ಲ ಅಂದು ಎಲ್ಲರೂ ಮನೆಯಲ್ಲಿ ತಿಲಾಂಜಲಿಯನ್ನೀಯಬೇಕು. ಮಧ್ಯರಾತ್ರಿಯ ಒಂದು ಗಂಟೆಯ ವರೆಗೆ ನಿದ್ದೆಗೆಟ್ಟು ಎಲ್ಲರೂ ಶ್ರೀಕೃಷ್ಣನ ಭಜನೆಯಲ್ಲಿ ಕಾಲಯಾಪನೆ ಮಾಡಬೇಕು, ಎಂಬುದು ಮೂರ್ತಿಗಳ ಹಲವು ಕಟ್ಟಾಜ್ಞೆಗಳು. ಈ ನಿರ್ಧಾರಗಳಿಗೆ ವ್ಯತಿರಿಕ್ತವಾಗಿ ಮನೆಯಲ್ಲಿ ಯಾರಾದರೂ ನಡೆದರೆ ಮೂರ್ತಿಗಳಿಗೆ ಕೃಷ್ಣನ ಪೂಜೆಯು ಮರೆತೇ ಹೋಗಿಬಿಡುವುದು. ಆಗ ಅವರು ಬೆತ್ತವನ್ನು ಆರಾಧಿಸುವುದೇ ಸರಿ!

ಶನಿವಾರ ರಾತ್ರೆ ಒಂಭತ್ತರಿಂದ ಹನ್ನೆರಡು—ಅಥವಾ ಒಂದು—ತಾಸಿನ ವರೆಗೆ ಭಜನೆಯು ನಡೆಯುವುದು. ನೆರೆಹೊರೆಯಿಂದಲೋ, ಬೈಲೂರು, ಹಿರಿಯಡ್ಕ, ಕೆಸ್ರಗದ್ದೆಯಿಂದಲೋ ಜಾತಿ ಪರಜಾತಿ ಗೃಹಸ್ಥರು ಬಂದು ಭಜನೆಯಲ್ಲಿ ಭಾಗವಹಿಸುವರು. ಗಂಧಪುಷ್ಪಗಳನ್ನು ಸ್ವೀಕರಿಸಿ ಹಿಂತೆರಳುವರು. ಪೂಜೆಯನ್ನು ನೆರವೇರಿಸಿದ ಮೂರ್ತಿಗಳು ಧನ್ಯನಾದೆನೆಂದೆಣಿಸುವರು.

ಇಷ್ಟೊಂದು ದೊಡ್ಡ ಭಕ್ತನು ಶ್ರೀಕೃಷ್ಣನಿಗೆ ಉಡುಪಿಯಲ್ಲಿರುವುದು ಅವನ ಭಾಗ್ಯವೆಂದೇ ಹೇಳಬಹುದಿತ್ತು. ಆದರೆ ಮಾಡಲೇನು?—ಮೂರ್ತಿಗಳು ಸಿಟ್ಟನ್ನು ಬಿಟ್ಟವರಲ್ಲ. ಶ್ರೀಮತಿ ಭಾಗ್ಯಮ್ಮ ಅವರ ಮೂರನೇ ಹೆಂಡತಿ. ಮೊದಲಿನ ಇಬ್ಬರು ಪತ್ನಿಯರ ಪಾಡೇನು?—ಎಂದು ನೀವು ಪ್ರಶ್ನಿಸಬಹುದು. ಅವರ ಪಾಡು ನಾಯಿ ಪಾಡು. ಮೂರ್ತಿಗಳ ಪ್ರಥಮ ಪತ್ನಿ ರುಕ್ಮಾಬಾಯಿಯು ಗಂಡನ ಸಿಟ್ಟಿಗೆ ಪಾತ್ರಳಾಗಿ ಮನೆಯ ಹೊರಗೆ ನಡೆದು ಕುಟುಂಬಿಕರ ಆಶ್ರಯವನ್ನು ಪಡೆಯಬೇಕಾಯಿತು. ಅವರ ಎರಡನೆಯ ಹೆಂಡತಿ ಸುನಂದೆಯು ಒಂದು ಗಂಡುಮಗುವನ್ನು ಹೆತ್ತು ಅದನ್ನು ಹಿಡಿದುಕೊಂಡು ತಂದೆಯ ಮನೆಗೆ ಹೋದವಳು ಹಿಂದಿರುಗಲೇ ಇಲ್ಲ. ಮೂರನೆಯ ಹೆಂಡತಿ ಭಾಗ್ಯಮ್ಮಳಿಗೂ ಸುಖವಿಲ್ಲ. ಶನಿವಾರ ದಿನವೊಂದಲ್ಲದೆ ಬೇರೆ ದಿನಗಳಲ್ಲಿ ಮೂರ್ತಿಯವರು ಮನೆಯನ್ನು ಹೊಕ್ಕೊಡನೆ ಭಾಗ್ಯಮ್ಮಳ ರೋದನವು ಕೇಳಬರುವುದು. ಏತಕ್ಕೆಂದು ಯಾರೂ ಹೇಳಲಾರರು.

ಆದರೆ ಅವರ ಮಗ ಕೋದಂಡನಿಗೊಂದು ಚಕ್ಕುಲಿ ಕೊಟ್ಟರೆ ಮನೆಯ ಗುಟ್ಟು ಹೊರಗೆ ಬೀಳುತ್ತದೆ. ತಂದೆಯು ದಿನಂಪ್ರತಿ ರಾತ್ರೆ ಸರಾಯಿ ಕುಡಿದುಕೊಂಡು ಬಂದು ಮನೆಯಲ್ಲಿ ಅಮ್ಮನಿಗೂ, ತನಗೂ, ಇತರರಿಗೂ ಅನಾವಶ್ಯವಾಗಿ ಹೊಡೆಯುವರೆಂದು ಆ ಬಾಲಕನು ತನ್ನ ತೊದಲ್ನುಡಿಯಿಂದ ಹೇಳುವನು. ಅವನ ಮಾತಿನ ಸತ್ಯತೆಯನ್ನರಿಯಬೇಕೆಂದು ನೀವು ಸಂತೆಕಟ್ಟೆಯ ಕೊಗ್ಗ ಬೆಲ್ಚಾಡನ ಸರಾಯಿಯ ಅಂಗಡಿಯ ಬಳಿ ಸಂಜೆ ೭ ಗಂಟೆಗೆ ನಿಂತ ಪರೀಕ್ಷಿಸಿದರೆ ತಿಳಿದುಬರುವುದು. ಮೂರ್ತಿಗಳು ಹೊರಗೆ ಹೋದ್ದೊಡನೆ ನೀವು ಬೆಲ್ಚಾಡನನ್ನು ಸಮೀಪಿಸಿ 'ಶನಿವಾರ ಭಜನೆಯ ಮೂರ್ತಿಗಳು ಇವರೆಯೋ?' ಎಂದು ವಿಚಾರಿಸಿದ್ದಲ್ಲಿ "ಹೌದು, ಶ್ರೀಕೃಷ್ಣನ ಭಕ್ತಾಗ್ರೇಸರಾದ ಮೂರ್ತಿಗಳಿವರೇ! ಅವರ ಭಕ್ತಿಯ ಫಲವಾಗಿ ಅವರಿಗೆ ದೊರಕಿದ ಅಭ್ಯಾಸವೆಂದರೆ ನನ್ನ ಅಂಗಡಿಯ ಆರಾಧನೆ. ಶ್ರೀಕೃಷ್ಣನು ಇಂತಹ ಭಕ್ತರನ್ನು ಕಂಡು ಮೆಚ್ಚುವನೋ ಇಲ್ಲವೋ ನನಗೆ ತಿಳಿಯದು. ಸೋದೇಮಠದ ರಾಮ ಭಟ್ಟರನ್ನೇ ವಿಚಾರಿಸಿರಿ!" ಎಂದು ತನ್ನ ಕೆಲಸದಲ್ಲಿ ನಿಮಗ್ನನಾಗುವನು.

ಮು ಪಾ.

# ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ಉಪಾಧ್ಯಾಯ:—ಪದ್ಯ ಬಾಯಿಪಾಠ ಹೇಳು ರಾಮು.

ರಾಮು—ಯಾವ ಪದ್ಯ ಸಾರ್!

ಉಪಾಧ್ಯಾಯ:—ಸ್ವಾಮಿ ದೇವನೆ ಲೋಕ ಪಾಲನೆ ಅದನ್ನು—

ರಾಮು.—ಶಾಫಿ ದೇವನೆ, ಕೋಕ್ಲಾರಾಯನೆ ನಿನ್ನ ಭಜಿಪೆವು ಭಜಿಪೆವು. ಕುಪ್ಪದೋಸೆಗಳನ್ನು ಕೊಟ್ಟ ನಿನ್ನ ಭಜಿಪೆವು ಭಜಿಪೆವು. ಎದ್ದ ಕೂಡಲೆ ನಿನ್ನ ಕುಡಿಯದೆ ಇದ್ದರೆಮ್ಮಯ ಕೆಲಸ ಕೆಡುವುದು. ಇದ್ದ ಕೆಲಸಗಳೆಲ್ಲ ಮತ್ತೆ ಮುದ್ದು ನಿನ್ನನೆ ಕುಡಿವೆವು!

ಉಪಾಧ್ಯಾಯ—ಭೇಷ್!

\+ + + +

ಭೂಮು—ತಿಮ್ಮಾ! ನಿನಗೆ ಇಂಗ್ಲೀಷು ಚೆನ್ನಾಗಿ ಬರುತ್ತದೆಯೋ?

ತಿಮ್ಮ—Oh yes' me English well coming

\+ + + +

ಉಪಾಧ್ಯಾಯ—ಈ ಲೆಕ್ಕದಲ್ಲಿ ಅಸಲು ರೂಪಾಯಿ ಮಾತ್ರ ಕೊಡಿಸಿರುತ್ತೆ, ಬಡ್ಡಿ ರೂಪಾಯಿಗಳನ್ನು ಎಲ್ಲಿ ಹಾಕಿರುವೆ?

ಹುಡುಗ—ನನ್ನ ಕಿಸೆಯೊಳಗೆ ಸಾರ್!

\+ + + +

ತಂದೆ—ಹುಡುಗರು ತಂದೆಗೂ, ಗುರುಗಳಿಗೂ ಏಕೆ ವಿಧೇಯರಾಗಿ ನಡೆದುಕೊಳ್ಳಬೇಕು?

ಮಗ—ಅವಿಧೇಯರಾಗಿ ನಡೆದುಕೊಂಡರೆ ಪೆಟ್ಟು ಕೊಡುತ್ತಾರೆ.

\+ + + +

ಉಪಾಧ್ಯಾಯ—ಅನ್ವರ್ಥನಾಮಕ್ಕೆ ಎರಡು ಉದಾಹರಣೆಗಳನ್ನು ಕೊಡು.

ಶಿಷ್ಯ—ಉಪಾಧ್ಯಾಯ ಕುಂಬಾರ ಇತ್ಯಾದಿ

\+ + + +

ರಾಮಯ್ಯ—(ಅಂಗಡಿಯವನೊಡನೆ) ಏನು ಸ್ವಾಮಿ! ನೀವು ಕೊಟ್ಟ ಹತ್ತು ತೆಂಗಿನಕಾಯಿಗಳಲ್ಲಿ ಎಂಟೂ ಕೊಳೆತವುಗಳು

ಅಂಗಡಿಯವ—ಕೊಳೆತವುಗಳನ್ನು ಒಡೆಯದೆ ಹಿಂದೆ ಕಳುಹಿಸಿದರೆ ಬೇರೆ ಕೊಡುವೆನೆಂದು ನಾನು ಮೊದಲೇ ಹೇಳಲಿಲ್ಲವೇ?

\+ + + +

ಗುರು—ಒಂದು ಡಜನ್ ಪುಸ್ತಕಗಳಿಗೆ ಒಂದೂವರೆ ರೂಪಾಯಿ ಕ್ರಯವಾದರೆ ೧೨ ಪುಸ್ತಕಗಳಿಗೆ ಎಷ್ಟು ಕ್ರಯ?

ಚುರುಕು ಹುಡುಗ—ಒಂದು ರೂಪಾಯಿ ಎಂಟಾಣೆ ಸಾರ್

N. Narayana Rao

ಗುರು.—ಪಾಠಮಾಡುವಾಗ ಯಾರೂ ಮಾತನಾಡಬಾರದು

ಶಿಷ್ಯ:—ಹಾಗಾದರೆ ಪಾಠಮಾಡುವಾಗ ನೀವೂ ಮಾತಾಡಬಾರದು ಸರ್.

\+ + + +

ಒಬ್ಬ—(ಅರೆಕುರುಡನನ್ನು ಕುರಿತು) ನಿನಗೆ ಎಷ್ಟು ಕಣ್ಣುಗಳು ಕಾಣುತ್ತವೆ?

ಕುರುಡ.—ಆರು ಕಣ್ಣುಗಳೂ ಆರು ಕಿವಿಗಳೂ ಗಳೂ ಕಾಣುತ್ತವೆ.

ಒಬ್ಬ—ಆರು ಕಿವಿಗಳು ಮತ್ತು ಅಷ್ಟು ಕಣ್ಣುಗಳು ಕಾಣಿಸುವುದು ಹೇಗೆ?

ಕುರುಡ.—ನನ್ನಿದಿರಿನಲ್ಲಿ ಮೂರು ಜನರ ಕಣ್ಣುಗಳು ಮತ್ತು ಕಿವಿಗಳು ಕಾಣುತ್ತವೆ.

\+ + + +

ಮಾಸ್ತ್ಯ.—ರಂಗಾ, ಬೂದಿಯಿಂದ ಪ್ರಯೋಜನವೇನು?

ರಂಗ—ಗಿಡಬಳ್ಳಿಗಳಿಗೆ ಆಗುತ್ತದೆ

ಮಾಷ್ಟ್ರು—ಇನ್ನೇನು ಪ್ರಯೋಜನವೋ?

ರಂಗ—ನಾಯಿಗಳಿಗೆ ಕೂತುಕೊಳ್ಳಲಿಕ್ಕೆ ಆಗುತ್ತದೆ

\+ + + +

ಮೇಷ್ಟ್ರು—ಏನೋ? ಲ್ಯಾಬ್ರೆರಿ ಪುಸ್ತಕ ಒಳ್ಳೇದುಂಟೋ?

ಹುಡುಗ—ಒಳ್ಳೇದುಂಟು ಸರ್ ಹೊಸ ಪುಸ್ತಕ, ಚಂದ ಉಂಟು

ಮೇಸ್ಟ್ರು—ಹಾಗಲ್ಲವೊ, ಅದರ ಕಥೆ ಭಾಷೆಗಳು ಒಳ್ಳೆವಿವೆಯೋ?

ಹುಡುಗ—ಕಥೆಭಾಷೆಗಳು ಒಳ್ಳೆವಿವೆ ಸರ್ ಆದರೆ ನನಗೆ ಅದರಲ್ಲಿ ಒಂದೂ ಅರ್ಥವಾಗಲಿಲ್ಲ ಸರ್

H Sitharama Bhat

ರಾಮಭಟ್ಟ—ಸ್ವಾಮಿ ವಕೀಲರೇ, ನೆರೆಮನೆಯ ಶಂಕರರಾಯರು ನಮ್ಮ ಮನೆಯ ಕಿಟಕಿಗೆ ಸರಿ ಅಡ್ಡವಾಗಿ ಗೋಡೆ ತಂದು ಪೂರ್ಣ ಕತ್ತಲೆ ಮಾಡಿಬಿಟ್ಟಿದ್ದಾರೆ. ಇದಕ್ಕೆ ಏನಾದರೂ ಉಪಾಯ ಹೇಳುವಿರಾ?

ವಕೀಲ—ಇದಕ್ಕೂ ಅಷ್ಟು ದೊಡ್ಡ ವಿಚಾರವೇಕೆ ಭಟ್ಟರೆ? ಬೆಳಕಿಗೋಸ್ಕರ ಹಗಲು ಹೊತ್ತಿನಲ್ಲಿಯೂ ದೀಪ ಉರಿಸಿದರಾಯ್ತು. ನಮ್ಮ ಫೀಸನ್ನು ಈಗಲೇ ಕೊಡುವಿರಾ? ಅಥವಾ ಗುಮಾಸ್ತರನ್ನು ಕಳುಹಿಸಿಕೊಡಲೆ?

\+ + + +

ಉಪಾಧ್ಯಾಯ—ಅಲ್ಲಾವುದ್ದೀನನು ಸಿಂಹಾಸನವನ್ನು ಹತ್ತಿ ಏನುಮಾಡಿದನು?

ಹುಡುಗ—(ತಟ್ಟನೆಯೆದ್ದು) ಕುಳಿತುಬಿಟ್ಟ ಸರ್

\+ + + +

ಯಜಮಾನ—ಲೋ ಅಂಗಡಿಗೆ ಹೋಗಿ ಹಿಟ್ಟನ್ನು ಗಾಳಿಸುವ ಗಾಳಿ ತರಲಿಕ್ಕೆ ಹೇಳಿದ್ದೆ, ಏತಕ್ಕೆ ತರಲಿಲ್ಲ?

ಆಳು:—ಯಾವ ಅಂಗಡಿಗಳಲ್ಲಿ ನೋಡಿದರೂ ತೂತುಗಳು ಇಲ್ಲದ ಗಾಳಿಯೇ ಸಿಕ್ಕಲಿಲ್ಲ ಬುದ್ಧಿ!

\+ + + +

ಜಡ್ಜಿ:—(ಕೈದಿಗೆ) ಲೋ ಮೋಸಾಪಾಶ್ಯಗಳನ್ನು ಏತಕ್ಕೋ ಮಾಡಿದೆ?

ಕೈದಿ—ಸಾಂಚಾ ನಾಣ್ಯಗಳನ್ನು ಮಾಡಲಿಕ್ಕೆ ಗೊತ್ತಾಗದರಿಂದ ಬುದ್ಧಿ!

\+ + + +

ತಂದೆ—ರಂಗಾ, ಈ ಸಲ ಪರೀಕ್ಷೆಯ ಪ್ರಶ್ನೆಗಳು ಕಷ್ಟವಾಗಿ ಕೇಳಿದ್ದವೋ?

ಮಗ.—ಕಷ್ಟವಾಗಿ ಕೇಳಿದ್ದು ಪ್ರಶ್ನೆಯಲ್ಲ ಪಪ್ಪ—ಉತ್ತರ ಮಾತ್ರ

P. Rama Rao.

ಒಬ್ಬ ಆಫೀಸರ್:—(ಬಹಳ ಸಿಟ್ಟಿನಿಂದ) ಬೇರೆಯವರಿಗೆ ಅರ್ಥವಾಗದ ಹಾಗೆ ಮಾತಾಡುವ ಮನುಷ್ಯನು ಶುದ್ಧ ಅಯೋಗ್ಯನಲ್ಲವೇ? ಹೀಗೆ ನಾನು ಹೇಳಿದ್ದು ಗೊತ್ತಾಯಿತೇ?

ಗುಮಾಸ್ತ:—ಇಲ್ಲ ಸಾರ್

\+ + + +

ಮೆಜಿಸ್ಟ್ರೇಟ್—(ಕೈದಿಯನ್ನು ಕುರಿತು) ಏನೋ ನೀನು ಯಾವಾಗಲೂ ಕೋರ್ಟಿಗೆ ಬರುತ್ತಾ ಇದ್ದೀಯಲ್ಲವೇ, ನಿನಗೆ ನಾಚಿಕೆ ಆಗುವುದಿಲ್ಲವೇ?

ಕೈದಿ—ಪ್ರಭೂ ನಾನು ಆಗಿಂದಾಗ್ಗೆ ತಾನೆ ಬರುತ್ತೇನೆ ತಾವು ಪ್ರತಿನಿತ್ಯವೂ ಬರುತ್ತೀರಲ್ಲಾ?

\+ + + +

೧ನೇ ಮನುಷ್ಯ—ಈ ಕಾಲದ ಹುಡುಗರು ಬಹಳ ಕೆಟ್ಟವರು ನೋಡಿ.

೨ನೇ ಮನುಷ್ಯ—ಏನು ಸಾವಿರ, ಹೀಗೆ ಹೇಳಿಬಿಡಿಸಿರಲ್ಲಾ.

೧ನೇ ಮನುಷ್ಯ:—ನೋಡಿ ಆ ದಿವಸ ನನ್ನ ಮಗೆ ದುಡ್ಡು ಕೊಡಿ ಎಂತ ಬಹಳ ರಗಳೆ ಮಾಡಿದ. ದುಡ್ಡು ಕೇಳುತ್ತಾ ನನ್ನ ಮೋರೆ ನೋಡಬೇಡ ಎಂದ ಕೂಡಲೇ ದೀಪ ಆರಿಸಿ ದುಡ್ಡು ಕೇಳಲಿಕ್ಕೆ ಶುರುಮಾಡಿದ

× × × ×

ಮಗ—ಅಮ್ಮಾ ನಾನು ಹುಟ್ಟುವಾಗ ನೀನು ಯಾವ ಊರಿನಲ್ಲಿದ್ದೆ ಅಮ್ಮಾ.

ತಾಯಿ.—ಕುಂಭಕೋಣದಲ್ಲಿದ್ದೆ. ಯಾಕೆ ಹೀಗೆ ಕೇಳಿದಿ ಮಗೂ?

ಮಗ,—ನಾನು ಹುಟ್ಟಿದ ವರ್ತಮಾನ ಕೇಳಿ ನಿನಗೆ ಬಹಳ ಸಂತೋಷವಾಗಿರಬಹುದಲ್ಲವೇ?

\+ + + +

ತಾಯಿ—ಪದ್ಮಾ ನಿನ್ನೆ ರಾತ್ರಿ ಕಪಾಟಿನಲ್ಲಿ ಆರೆಂಜ್ ಇಟ್ಟಿದ್ದೆ ಅದರಲ್ಲಿ ಒಂದು ನೀನೇ ಅಲ್ಲವೆ ತೆಗೆದದ್ದು?

ಪದ್ಮ—ಅಹುದು ಕತ್ತಲೆಯಲ್ಲಿ ಎರಡೂ ಕಾಣಿಸಲಿಲ್ಲ

\+ + + +

೧ನೇ ಗುಮಾಸ್ತ—ನಮ್ಮ ಆಫೀಸಿನಲ್ಲಿ ೫ ಗಂಟೆ ಹೊಡೆಯಿತೆಂದರೆ ಸರಿ, ನಾವು ಪೆನ್ನಾವನ್ನು ಇಟ್ಟುಬಿಡುತ್ತೇವೆ

೨ನೇ ಗುಮಾಸ್ತ—ನಮ್ಮ ಆಫೀಸಿನಲ್ಲಿ ಹಾಗಲ್ಲ. ಇನ್ನೆ ೫ ನಿಮಿಷ ಇದೆಯೆಂದರೆ ಸರಿ ಪೆನ್ನಾ ಮುಟ್ಟುವುದೇ ಇಲ್ಲ

\+ + + +

ಉಪಾಧ್ಯಾಯ—(ಒಂದು ಬೇಟೆ ನಾಯಿಯನ್ನು ಕುರಿತು, ಚೆನ್ನಾಗಿ ಹೇಳಿಕೊಟ್ಟು) ಹೊರಗೆ ಹುಲಿಯಂತೆಯೂ ಮನೆಯಲ್ಲಿ ಹಸುವಿನಂತೆಯೂ ಇರುವ ಪ್ರಾಣಿ ಯಾವುದು?

ಒಬ್ಬ ಹುಡುಗ—ನಮ್ಮ ತಂದೆ ಸಾರ್

\+ + + +

ತಾಯಿ.—ಮಗೂ ಕಿಟ್ಟು, ಏನೋ ನೀನು ಹೀಗೆ ಕೆಟ್ಟಮಾತುಗಳನ್ನೆಲ್ಲಾ ಆಡುತ್ತಿದ್ದೀಯಲ್ಲಾ. ನನಗೆ ಇದನ್ನೆಲ್ಲಾ ಕೇಳಿ ಬಹಳ ಆಶ್ಚರ್ಯವಾಗುತ್ತಿದೆ ಇದೆಲ್ಲಾ ನಿಮ್ಮ ಶಾಲೆಯಲ್ಲಿ ಹೇಳಿಕೊಟ್ಟರೇನೋ.

ಹುಡುಗ—(ಗಂಭೀರದಿಂದ) ಛೆ, ಹೋಗಮ್ಮಾ ಶಾಲೆಯಲ್ಲಿ ಒಂದನ್ನೂ ಹೇಳಿಕೊಡಲಿಲ್ಲ, ಅಲ್ಲಿಯ ಹುಡುಗರಿಗೂ ನಾನೇ ಹೇಳಿಕೊಡುತ್ತಾ ಇದ್ದೇನೆ.

B. B. Das.




**ನವರತ್ನ ದ್ರಾಕ್ಷಾಸವ,** ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ, ವಾಯುಗಳನ್ನು ಬಂಧಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2   16 ಔನ್ಸ್ ರೂ 1-6-0   6 ಔನ್ಸ್ ರೂ. 0 14-0

**ನವರತ್ನ ಅಶೋಕಾರಿಷ್ಟ:** ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

**ಆಯೊಡೈಸ್ಡ್ ಸರ್ಸಪರಿಲ್ಲಾ** ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

1 ಔನ್ಸ್ ರೂ 1—0—0   8 ಔನ್ಸ್ ರೂ 1—8—0

ದಕ್ಷಿಣ ಕನ್ನಡದ ಏಜಂಟರು – ಪ್ರೊಪೈಟರ ಸ್ಟೋರ್ಸ್, ಮಂಗಳೂರು.



[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ ರಜಪೂತ ಇವರ

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)**

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ ವೈದ್ಯ, ಎಲ್ ಸಿ ಪಿ ಎಸ್. ಕೊಲ್ಹಾಪೂರದು ಕಾಣೇ - ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪—೦—೦. ವಿ ಪಿ ಅಣೆ ೮

ವಿಳಾಸ — ಸಂಜೀವಿನೀ ಔಷಧಾಲಯ ಮು ಪೋ. ಮಿರಜ, S. M. C.



ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ ಗೋಡೆಯ ಗಡಿಯಾರ, ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕು ಸಗಳೆ ಜನರಿಂದ ದೊರೆತಿರುವ ಪ್ರಶಂಸೆ ನೀವೂ ನಮ್ಮಲ್ಲಿಗೆ ಬರ ಬಹುದು ತೃಪ್ತಿ ಹೊಂದಬಹುದು-ಮೆಚ್ಚಿದರೆ ಪಡೆಯಬಹುದು



# 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು

**ಧಾತುಪುಷ್ಟಿ ಲೇಹ**

(ಸುವರ್ಣ ಸಾಂದ್ರ ಕಸ್ತೂರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗುವಿಕೆ, ಸೊಂಟ ನೋವು, ಕೈಕಾಲು ಒಡೆಯುವುದು, ಮಲಬದ್ಧತೆ, ವಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನು, ಕಾಂತಿಯನ್ನು ಉಂಟುಮಾಡುವದು

ಬಾಟ್ಲಿ 1ಕ್ಕೆ ರೂ 2 8-0

**ಬಾಲಗ್ರಹ ಗುಟಿಕೆ**

ಮಕ್ಕಳ ಜೊಷ್ಟ, ಕಫ, ಕೆಮ್ಮು, ಉಬ್ಬಸ ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗ್ರುರು ಶಬ್ದ, ಜ್ವರ, ದುರ್ಭರ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ   3 ಬಾಟ್ಲಿಗಳಿಗೆ ರೂ 1-12-0




ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ   ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1—0—0

**ಮಲೇರಿಯಾ ನಿವಾರಿಣೀ**

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ಜ್ವರಗಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1-8-0   ಸಣ್ಣ ಬಾಟ್ಲಿ 1ಕ್ಕೆ ಆಣೆ 13.

**ಮೇಹಕುಠಾರ**

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು   ಕ್ರಯ ಡಬ್ಬಿ 1ಕ್ಕೆ ರೂ 2—8—0 ಮಾತ್ರ

**ಎಮ್ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು**

ನಮ್ಮ ಔಷಧಿ ಸಿಕ್ಕುವ ಸ್ಥಳ.- ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ ಕಾಸರಗೋಡು ಡಾ। ಶ್ರೀನಿವಾಸ ಪೈ, ಪುತ್ತೂರು ಮೆಸರ್ಸ್ ಮುಲ್ಲರ ಪಟೇಲ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ, ತಾಂಬಹೌಸ್ ಗಿರಿಗಾಂವ್, ಬೇಕ್‌ರೋಡ್ ಮುಂಬಾಯಿ, ನಂ. 4 ದಿ ವೆರ್ರೈಟಿ ಸ್ಟೋರ್ಸ್, ಮಡಿಕೇರಿ ಕೂರ್ಗ್, ರಾವ್ ಫಾರ್ಮಸಿ, ಸಾಗರ



# The Laxhmi Insurance Company Ltd, Lahore.

## ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

**1924. ಪ್ರಗತಿ ಸೂಚನೆ 1934.**

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

| ಕೆಲಸದ ಫಲಿತಾಂಶ. | | ಲೈಫ್ ಫಂಡ್ |
| --- | --- | --- |
| 1925- | ರೂ 21,24 250 | 500 |
| 1929- | ರೂ 1,66,18,620 | 9,32,900 |
| 1934- | ರೂ ,46,77,223 | 49 08,771 |

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ   ಕಂಪೆನಿಯ ಆಸ್ತಿ-57,00,000ಕ್ಕೆ ಮೀರಿದೆ.   1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ   ಲಾಭಹೊಂದಬೇಕಾಗಿದೆ   ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ

**ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.**

**The Laxhmi Insurance Co. Ltd,**
*Madras Branch,*
No 6, Sankuram Chetty St, G. T MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು.

# The Canara Banking Corporation Udipi, Ltd.

**Head office:—UDIPI,** S. K. (Incorporated in British India) TEL.-'BANKING' **ESTD. 1906.**

**Branches:—1. Udipi, 2. Coondapoor, 3. Car Street, Mangalore, 4. Shimoga, 5. Madras** (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg).

## SAVINGS BANK ACCOUNTS.

From 1st September 1935 arrangement for withdrawal by—cheques can be made.

## ಸೇವಿಂಗ್ಸ್ ಬೇಂಕ್ ಲೆಕ್ಕ.

1935ನೇ ಸಪ್ಟಂಬರ 1ನೇ ತಾರೀಕಿನಿಂದ ಚೆಕ್ಕಿನ ಮೂಲಕ ಹಣವನ್ನು ಹಿಂತೆಗೆಯುವಂತೆ ಮಾಡಲಾಗುವುದು.

Regd)

# ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹಳೆ ಕಡ್ಡಿಯ ಮುಲಾಮು. ಇಲ್ಲಿಯ ವರೆಗಿನ ನಮ್ಮ ಬಿಳಿಯ ವರ್ ಮತ್ತು ಕಂಪನಿಯ ಹಳೆ ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

## ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷಿಸುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

## ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.


## NOTICE.

Sealed tenders for the erection of a Building for The Bombay Life Assurance Co., Ltd., at Udipi will be received by the undersigned upto 4 P. M. on Monday, the 16th day of September 1935.

Plans, Conditions of Contract and Specification of work may be seen at the Office of the undersigned, where copies of the form of tender can be obtained on payment of a fee of Rs. 3/- per copy.

The owners do not bind themselves to accept the lowest or any tender.

Udipi, S. K.
15th Aug. 1935.

**Kochikar Brothers,**
*Madras Branch Secretaries,*
Bombay Life Assurance Co., Ltd.,

# ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರುಮಾಡಿದ ಅಮೋಘ ಔಷಧ. ಇದು ಗರ್ಭಕೋಶದೊಳಗಣ ಎಲ್ಲಾ ತರದ ನಂಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಪ್ರಮಾಣದಲ್ಲಿ ನಿಲ್ಲಿಸುವುದು. ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು.

# ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ.

**ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ**

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲೋಪತಿಕ್ ಔಷಧಗಳೂ, ಶಾಸ್ತ್ರೋಕ್ತ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಪೇಟೆಂಟ್ ಪೇನು ಶಾಯಿಗಳೂ ತಯಾರಾಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ:—

**ವೆಂಕಟ್ರಾಯ ಅಣ್ಣಪ್ಪ ಬಾಳಿಗ—ಮೆನೆಜಿಂಗ್ ಡ್ಯರೆಕ್ಟರ್.**

**ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ**

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋಗಳು:—(1) ರಥಬೀದಿ ಮಂಗಳೂರು. (2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್‌ಟೌನ್ ಮದ್ರಾಸು. (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

**Karnataka Chemical and Pharmaceutical Works, Ltd., Udipi. (South India)**



Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ: 2 ರೂಪಾಯಿ. Registered No. M. 498 ಟಪ್ಪಾಲು ಖರ್ಚು ಸೇರಿ ರೂ. 2-13-0.
ಬಿಡಿ ಸಂಚಿಕೆ 1 ಆಣೆ.

for Quality Snuff
H. Rama Rao and Sons.
High Class Snuff Manufacturers
Mangalore S. I.
ASK FOR
RAMA SNUFF
The charm of Snuff Users!

# ಸ್ವದೇಶಾಭಿಮಾನಿ
# SWADESHABHIMANI

LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in the
THE BOMBAY LIFE
Madras Branch Secretaries
Kochikar Brothers,
Mangalore, Bangalore, Madras, Bombay

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥
ಬೆಲೆಯುಳ್ಳ ನವರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವು ಸುಡುತ ಬರುತಿರುವ ॥
ಗರಲಕವರ ಚಿದರಿ ಸುಧೆಯನು ಗುರಿತು ಕೃಸ್ನದ್ರರ ತೆರದ ಕುಳಿತರೆ ತೆರಳ ಬಲ್ಲರೆ! ತೊರೆದ ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೨೯. ಮಂಗಳೂರು ತಾ. ೨೦ನೇ ಶುಕ್ರವಾರ ಸಪ್ಟಂಬರ ೧೯೩೫ (20-9-'35) ಸಂಚಿಕೆ ೩೮



ಸಾರ್ವಭೌಮರ ಪರಿಶೀಲನೆಗಾಗಿ ಬ್ರಿಟನ್ನಿನ ವಿಮಾನಪಡೆಯನ್ನು ಸಿದ್ಧಗೊಳಿಸಿಡಲಾದುದನ್ನು ಈ ಚಿತ್ರದಲ್ಲಿ ಕಾಣಬಹುದು ಈ ವಿಮಾನಗಳಲ್ಲಿ ಆಧುನಿಕ ಯುದ್ಧೋಪಕರಣಗಳೆಲ್ಲ ಸದಾ ಸಿದ್ಧವಿವೆ ಒಂದೆಡೆಯಿಂದ ಶಸ್ತ್ರಸನ್ಯಾಸವನ್ನು ವಹಿಸೋಣವೆಂದು ಹೇಳುತ್ತಿರುವ ರಾಷ್ಟ್ರಗಳು ಇನ್ನೊಂದೆಡೆಯಿಂದ ಶಸ್ತ್ರಗಳನ್ನಿಟ್ಟುಕೊಳ್ಳುವುದು ಚರ್ಚಾಸ್ಪದ ವಿಷಯವೇ ಸರಿ

ತಾ ೨೬-೮-೩೫ನೇ ದಿವಸ ನೆಲ್ಲೂರಿನ ಚೌಟಾಪಲ್ಲಿ ಎಂಬಲ್ಲಿ ಒಂದು ವಿಮಾನವು ಬಿದ್ದು ಮೂವರು ಮೃತರಾದರ ಕ್ಯಾಪ್ಟನ್ ಎವೆರೆಟ್ಸ್ ಎಂಬವರು ಯುರೋಪಿಯನರೂ ರಾಜಾ ಕೃಷ್ಣರಾವ್ ಎಂಬವರು. ವಿಮಾನ ದೇಹದ ಒದ್ದು ನುಚ್ಚುನೂರಾದರ ಗುರುತೇ ಹಚ್ಚಲಾಗದಂತೆ ದೇಹಗಳು ವಿಕೃತಿಗೊಂಡವು V T Am ಎಂಬ ಈ ವಿಮಾನವು ಕೆಲವು ದಿನಗಳ ಹಿಂದೆ ಕೊಲ್ಲಾಪುರ ಮೊದಲಾದ ಪ್ರಾಂತ್ಯಗಳಲ್ಲಿ ಹಾರಿ ಬಂದಿದ್ದಿತು ಅದು ಬೆಳಗಿನ ಸಂಚಾರವೆಸಗಿದ ಬಳಿಕ ಒಂದಿರ ವೃದ್ಧಿಲ್ಲ ವಿಮಾನದ ಒಂದು ಭಾಗವಲ್ಲಿ ಸೇವರಿಗ್ಗದೆ ಭಾಗ. ಭಸ್ಮವಾದಂತೆ ಬಂದ ಬಳಿಕ ಬೆಂಕಿ ಹತ್ತಿ ಹಲಗೆ ಪಟ್ಟಿ ಅದರ ವಿಶ್ವ ಎಲ್ಲಾ ಭಾಗಗಳ ಪರಿಪರಿ ಯಾಗಿದ್ದುವು ಅವಘಡನಾದ ಸ್ಥಳ ನೋಡಲು ಸಾವಿರಾರು ಜನರು ಅತ್ತ ಧಾವಿಸಿದರು

ನೆಲ್ಲೂರಿನಲ್ಲಿ ನಡೆದ ವಿಮಾನ ಅವಘಡದ ದೃಶ್ಯ.

# ಚಕ್ರ

(All Rights Reversed)

ದಿ ಹಿಂದೂಸ್ಥಾನ ಸಿನೇಮ ಲಿಮಿಟೆಡ್,
ಕೊಂಗರಕೇರಿ ಸ್ಟ್ರೀಟ್, ಮಂಗಳೂರು,
ಇದರ ದೊಡ್ಡ ಕಂಭಕ್ಕೆ—ಮಹಾರಾಜೇಶ್ರೀ ಸಾಯ್ಬನವರ ಸಲಾಂ! ಶೋಟ್ ಅಟ್ಟಾ ಹೈಂ, ಎಲ್ಲರೂ ಸೌಖ್ಯ!

ಸಾಂಪ್ರತ ಬರೆದು ತಿಳಿಸುವುದೇನೆಂದರೆ, ಕಳೆದ ಶನಿವಾರ ತಮ್ಮ ಕೊಟ್ಟಿಯೊಳಗೆ ಗದಗ ನಾಟಕ ಕಂಪೆನಿಯವರು "ಭಗವಾನ್ ಯೇಸುಕ್ರಿಸ್ತ" ಎಂಬ ನಾಟಕವನ್ನು ಆಡಲಿದ್ದರೆಂದೂ, ನಾಟಕವು ಪ್ರಾರಂಭವಾಗಲಿಕ್ಕೆ ಅರ್ಧ ತಾಸು ಇರುವಾಗ ಸ್ಥಳೀಯರು ಕೆಲವರಿಂದ ಆಹ್ವಾನಿತರಾದ ಪೋಲೀಸ್ ಅಧಿಕಾರಿಗಳು ಬಂದು ಒಂದು ನೋಟೀಸನ್ನು ಕಂಪೆನಿಗೆ ಜ್ಯಾರಿಮಾಡಿ, ಆ ನಾಟಕವನ್ನು ಆಡಬಾರದೆಂದು ತಿಳಿಸಿದರಾಗಿಯೂ, ಪರಿಣಾಮವಾಗಿ ಸಾವಿರಾರು ಜನರು ತಲೆಗೆ ಕೈಯಿಟ್ಟು, ಮಳೆಯಿಂದ ಒದ್ದೆಯಾಗಿ ಹಿಂದೆ ಹೋದರೆಂದೂ ತಿಳಿದುಬರುತ್ತದೆ. (ನಾಟಕ ಕಂಪೆನಿಯವರು ಪಾಸು ಕೊಡದಿದ್ದರೂ ನನಗೂ ಅದೇ ಗತಿ ಬಂತೆಂದು ತಿಳಿಸುವಾಗ ಕಣ್ಣಿನಲ್ಲಿ ನೀರು ಬರುತ್ತದೆ)

× × × × × ×

ಹೇ, ಗೋಡೆರಾಯರೇ, ನಿಮ್ಮ ಪ್ರತಾಪವೆಷ್ಟು? ಗದ್ದೆ ಹಂತೆ ನೇತಾಡುವ ತಮ್ಮ ಮೈಯ ಬಲ, ಕಸಗಳ ಪ್ರಭಾವ ಎಷ್ಟು? ಇಲ್ಲದಿದ್ದರೆ, ಮಹಾತ್ಮನೊಬ್ಬನ ಚರಿತ್ರೆಯ ನಾಟಕವನ್ನು ಗದಗದವರು ತಮ್ಮ ಉದರದಲ್ಲಿ ಅಭಿನಯಿಸದಂತಾಗಬೇಕೇ? ಹಿಂದೂಸ್ಥಾನ ಸಿನೇಮಾ ಕಂಪೆನಿಯು ದಿವಾಳಿ ಆಗಿ ಹೋದುದೂ ಸಾಕಾಗದೆ ಹೋಯಿತೇ? ಇಷ್ಟು ಅತಿಯೆ? ಹೇ ಕಂಭರಾಯರೇ! ತಾವೂ ಈ ಗೋಡೆರಾಯರಿಗೆ ಸಹಾಯ ಮಾಡಿದಿರಾ! ಯೇಸುಕ್ರಿಸ್ತನನ್ನು ಸೈತಾನನು ಹಿಡಿದುಕೊಂಡಿದ್ದಂತೆ ತಮಗೆ ಹಿಡಿದ ಉನ್ಮಾದವು ಎಂದು ಹೋಗುವುದೋ! ತಮ್ಮನ್ನಾಶ್ರಯಿಸಿದವರು ಎಂದು ಉದ್ಧಾರವಾಗುವರೋ!!

× × × × × ×

ಐದು ಆರ್ನೂರು ರೂಪಾಯಿ ಪೆಟ್ಟ ಮಾಡಿ ತಮ್ಮಂತಹ ನೂರಿನ್ನೂರು ಕಂಭರಾಯರುಗಳನ್ನು ಕರೆದು ತಮ್ಮನ್ನು ಸೆಂಟರ್‌ನಲ್ಲಿ ಕುಳ್ಳಿರಿಸಿ, ಬೀರ್ ವಿಸ್ಕಿ, ಬ್ರಾಂಡಿಗಳನ್ನು ಹಾಕಿ ಒಂದು "ಪೆಟಿಟಬಲ್ ಎಂಡ್ ಸಮಾಜಬಂಧ್ ದಿನ್ನರ್" ಕೊಟ್ಟಿದ್ದರೆ ತಾವು ಆನಂದಿತರಾಗಬಹುದಿತ್ತು. ಆದರೆ, ಪಾಪಿಗಳೇನು? ಗದಗ ಕಂಪೆನಿಯವರು ಒಂದು ಕೊಂಪ್ಲಿಮೆಂಟರಿ ಪಾಸನ್ನು ಕೂಡಾ ಕೊಡುವಷ್ಟು ಕರುಣೆತೋರಲಿಲ್ಲ! (ನಿಮಗೆ ಬಿಡಿ, ನನಗೂ ಕೊಡಲಿಲ್ಲ!)

× × × × × ×

ಎಷ್ಟೋ ಕ್ರೈಸ್ತ ಬಂಧುಗಳು ಸದಾಶಿವರಾಯರ "ಯೇಸು ಕ್ರಿಸ್ತ"ನನ್ನು ನೋಡಬೇಕೆಂದು ಟಿಕೆಟುಗಳನ್ನು ಖರೀದಿಸಿದ್ದರು ಎಷ್ಟೋ ಕ್ರೈಸ್ತ ಮಿತ್ರರನ್ನು ಸ್ವಾಗತಿಸುವುದಕ್ಕಾಗಿ ಸದಾಶಿವರಾಯರು ಹಲವು ನಾಟಕಕಾರರೊಡನೆ ಬೆವರು ಸುರಿಸಿ, ನೂರಾರು ರೂಪಾಯಿಗಳನ್ನು ಬೇರೆಯಿಂದ ತೆಗೆದರು ಆದರೆ ತಾವು ಮಾಡಿದುದೇನು? ಯಾರ್ಯಾರ ಮನಸ್ಸಿನೊಳಗೆ ಪ್ರವೇಶಿಸಿ, ಅವರು ನೋಟೀಸು ಕೊಡಿಸುವಂತೆ ಮಾಡಿದಿರಿ! ಪಾಪ, ಅವರೇನು ಮಾಡಿಯಾರು? ಎಲ್ಲಾ ತಮ್ಮದೇ ತಪ್ಪು!

× × × × × ×

ಅಯ್ಯೋ, ಗದಗ ನಾಟಕ ಕಂಪೆನಿಯ ಮೆನೇಜರರೇ ನೀವು ವ್ಯಥೆಪಡಬೇಡಿ! ಮೊದಲು ಹಂಪನಕಟ್ಟೆಯ ಹುಸೇನಬ್ಯಾರಿಯ ಬಳಿಗೆ ಹೋಗಿ ನಾಲ್ಕು ಸೇರು ಸುಣ್ಣ ತಂದು, ಬೇಯಿಸಿ, ನೀರು ಮಾಡಿ ಆ ಕಂಪೆನಿಯ ಕಂಭರಾಯರು ಗೋಡೆಗಳಿಗೊಂದು ವೈಟ್‌ವಾಶ್ ತೆಗೆದುಬಿಡಿ! ಮತ್ತು ಕೂಡಲೇ ಕೆಲವು ಕೊಂಪ್ಲಿಮೆಂಟರಿ ಪಾಸುಗಳನ್ನು ಪ್ರಿಂಟ್ ಮಾಡಿಸಿ ಎಲ್ಲರಿಗೂ ಹಂಚಿಬಿಡಿ! (ನನ್ನನ್ನು ಮಾತ್ರ ಮರೆಯಬಾರದು—ಕಂಭದ ಆಣೆ!)

× × × × + ×

ಈ ನಾಟಕವು ಜರಗದಿದ್ದುದರಿಂದ ಒಂದು ಹಿತವಾಯಿತು! ಯಾವುದೆಂದರೆ—"ಭಗವಾನ್ ಯೇಸು ಕ್ರಿಸ್ತ"ನ ಜೀವನ ಚರಿತ್ರೆಯನ್ನು ತಿಳಿದು, ಜ್ಞಾನವನ್ನು ಹೊಂದಿ ಮರುದಿನವೇ" ಹಲವು ಹಿಂದೂಗಳು ಕ್ರೈಸ್ತಮತಕ್ಕೆ ಸೇರದಂತಾಯಿತು! ಇದೊಂದು ಆನಂದಕರ ಸುದ್ದಿ!

× × × × + ×

ಅಲ್ಲದೆ, ಮಂಗಳೂರಿನಲ್ಲಿ ಗದಗ ಕಂಪೆನಿ ಎಂಬ ನಾಟಕ ಮಂಡಳಿಯು ಇದೆಯೆಂದು ಸ್ಥಳೀಯ ಇಗರ್ಜಿಗಳಲ್ಲಿ ನೆರೆದಿದ್ದ ಜನಸ್ತೋಮಕ್ಕೆ ಗುರುಗಳ ಮೂಲಕ ತಿಳಿಯಿತು! ದಿ ಬೋರ್ಡ್ ಆಫ್ ಅಡ್ವರ್ಟೈಸ್ಮೆಂಟ್ ಹ್ಯಾ! ಪೋಲೀಸು ಸಿನೇಮಾಕ ಬಹಳ ಕಂಭಕೀ ಜೈ!

'ಧಾಂಯ್ತು'.




ಅನ್ಯರಲ್ಲಿನ ಶಕ್ತಿಬಲಗಳನ್ನು ಕಂಡು ಬೆರಗಾಗುವಿರೇಕೆ? ಅದನ್ನು ನೀವೂ ಹೊಂದಲಾಗುವುದಿಲ್ಲವೇ? ಶಕ್ತಿಯುತ ಸ್ನಾಯು, ಗಟ್ಟಿಯಾದ ಮೆದುಳು, ಚೇತನಯುತ ದೇಹಗಳು ಪೂರ್ಣವೂ ಯುಕ್ತವೂ ಆದ ರಕ್ಷಣೆಯಲ್ಲಿದೆ

'ಓವಲ್ಟಿನ್'ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಆಹಾರಸಾರವಿದೆ ಬೆಳೆದ ಬಾರ್ಲಿ, ದನದ ಕೆನೆಹಾಲುಗಳು ಅತ್ಯಮೂಲ್ಯ ರಾಸಿಯುಗಳು, ದೇಹವೃದ್ಧಿಗೆ ಸಾಧಕವಾದವುಗಳು ಬಲವನ್ನೂ ಶಕ್ತಿಯನ್ನೂ ಆರೋಗ್ಯವನ್ನೂ ಕೊಟ್ಟು ಕಾಪಾಡುತ್ತದೆ ಅದರ ಚೇತನದಾಯಕ ಗುಣವನ್ನು ನೀವು ಕೂಡಲೇ ಕಂಡುಹಿಡಿಯುವಿರಿ ಆರೋಗ್ಯವನ್ನು ಹೊಂದುವಿರಿ

ನಿಮ್ಮ ಚಿಯಾಕ್ಕೆ 'ಓವಲ್ಟಿನ್' ಸೇರಿಸಿರಿ,—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

## ಓವಲ್‌ಟಿನ್

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ

# OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ — ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಸಿಗುತ್ತದೆ

ಏಜಂಟ್ —ಜೇಮ್ಸ್ ರೈಟ್ 8೧ ಎ ರಿಸನ್ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/341



## ತಯಾರಾಗಿದೆ!

ಗೌ ಹ ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

### ಸಮಾಜಶಾಸ್ತ್ರ

ಅಥವಾ

### ಸೋಸಿಯೋಲೋಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ. 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಅದನ್ನು ಸರ್ಕಾರದ ಪಾಠ ಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುವು

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.



BUY

ADVERTISED GOODS.



E. td 1920] THE [1920ರಲ್ಲಿ ಸ್ಥಾಪಿತವಾದದ್ದು

# Kanara Enterprise Ltd.

PUTTUR

## ದಿ ಕೆನರಾ ಎಂಟರ್‌ಪ್ರಾಜ್ ಲಿಮಿಟೆಡ್,

ಪುತ್ತೂರು.

### ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು

Puttur,
Dated 10—4—1935.

G. N. Lakshman Pai,
*Secretary.*

# ಸಾಹಿತ್ಯ ಸಂಗ್ರಹ—

## ಪಂಪಭಾರತ.

(ಕರ್ಣನ ಪಾತ್ರ)

ಶ್ರೀ ಡಿ. ವಿ. ಎಸ್ಸ್‌ರವರು ಮೇಲಿನ ಶೀರ್ಷಿಕೆ ಯುಳ್ಳ ಜಯಕರ್ನಾಟಕದಲ್ಲಿ ಹೀಗೆ ಬರೆದಿದ್ದಾರೆ.— ಪಂಪಭಾರತದಲ್ಲಿ ಕವಿಯು ಅರಿಯುತ್ತ ಅರ್ಜುನನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ಅವನನ್ನು ತನ್ನ ಪೋಷಕನಾದ ಅರಿಕೇಸರಿಯಲ್ಲಿ ಅನ್ವಯಮಾಡಿ ಸಿಂಹಾವಲೋಕನ ಕ್ರಮದಿಂದ ಮಹಾಭಾರತ ಕಥೆಯನ್ನು ವಿವರಿಸುವುದು, ಮತ್ತು ಹೀಗೆ ವಿವರಿಸುವ ಕಾವ್ಯದಲ್ಲಿ ಭಾರತದ ವ್ಯಕ್ತಿಗಳನ್ನು ಆದರ್ಶವಾಗಿಟ್ಟುಕೊಂಡು ಜನತೆಗೆ ಲೌಕಿಕವನ್ನು ಅಂದರೆ, ವ್ಯವಹಾರ ಧರ್ಮವನ್ನು ತಿಳಿಸುವುದು ಪಂಪನ ದೃಷ್ಟಿಯಿಂದ ಮಹಾಭಾರತವು ಪೂರ್ಣವಾಗಿ ಎವುದು ಅದರಲ್ಲಿ ಬರುವ ಹಲವು ವ್ಯಕ್ತಿಗಳಿಂದ, ಆ ಮಹಾರ್ಣವದಲ್ಲಿ ವ್ಯಕ್ತಿಗಳ ಸಂಖ್ಯೆಗೆ ಮಿತಿಯಿಲ್ಲ ಆದರೆ ಆ ವ್ಯಕ್ತಿಗಳೆಲ್ಲ ಪಂಪನು ಪರಿಗಣಿಸುವುದಿಲ್ಲ. ಭಾರತದ ಪೂರ್ಣತೆಗೆ ಕಾರಣವು ಅವನ ದೃಷ್ಟಿಯಿಂದ ಹೀಗಿದೆ

ಛಲದೊಳ್ ದುರ್ಯೋಧನಂ ನನ್ನಿಯೊಳಿನ ತನಯಂ
ಗಂಡಿನೊಳ್ ಭೀಮಸೇನಂ ।
ಬಲದೊಳ್ ಮದ್ರೇಶನಸ್ತ್ರಾನ್ವಿತಿಯೊಳ ಗುರುಸಿಂದೂ
ದ್ಭವಂ ಚಾಪವಿದ್ಯಾ ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆ
ಯೊಳ್ ಫಲ್ಗುಣಂ ಧರ್ಮದೊಳ್ ।
ನಿರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲೆನಗಳಿಸಿ
ಭಾರತಂ ಲೋಕಪೂಜ್ಯಂ ॥

ಇಲ್ಲಿ ಹೇಳಿರತಕ್ಕ ವ್ಯಕ್ತಿಗಳು ಶ್ರೇಷ್ಠತಮರಾದರೂ ಪಂಪನು ಅನುಸರಿಸುವ ಪದವಿಯು ಸಾಮಾನ್ಯ ವಿರುದ್ಧ ವಾದುದು ದುರ್ಯೋಧನನಿಗೆ ಅಗ್ರಸ್ಥಾನವನ್ನೂ ಕರ್ಣನಿಗೆ ದ್ವಿತೀಯ ಸ್ಥಾನವನ್ನೂ ಧರ್ಮಪುತ್ರನನ್ನು ಪತ್ತರ ಲ್ಲೊಂದರ ಹಾಗೆ ಕೊನೆಯಲ್ಲಿ ಹೇಳಿರುವುದು ಯಾರಿಗೂ ವಿಚಾರವನ್ನುಂಟುಮಾಡತಕ್ಕದ್ದು. ಸಮಗುಂಟಾಗುವ ಮುಖ್ಯಾಂದಾಶ್ಚರ್ಯವೇನೆಂದರೆ ಭಾರತದ ವ್ಯಕ್ತಿಗಳನ್ನು ಹೇಳುವ ಮಹಾಕವಿ, ತ್ರಿಲೋಕವಂದಿತನೂ ಮಹಾಭಾರತಕ್ಕೆ ಸೂತ್ರಧಾರನೂ ಆಗಿರುವ ಶ್ರೀ ಕೃಷ್ಣನನ್ನು ಸ್ಮರಿಸದೆ ಇರುವುದು. ಇವುಗಳಿಂದಲೇ ಭಾರತ ಕಥಾ ನಿರೂಪಣದಲ್ಲಿ ಪಂಪನ ದೃಷ್ಟಿಯೇ ಬೇರೆಯಾಗಿದೆ ಎಂದು ಸ್ಪಷ್ಟವಾಗುವುದು.

ಪಂಪನು ಕರ್ಣನನ್ನು ಗೌರವಿಸಿರುವುದು ಆತನ ಸತ್ಯತೆಗೆ ಲೋಕವ್ಯವಹಾರದಲ್ಲಿ ಸತ್ಯವು ಅತ್ಯಾವಶ್ಯಕವಾಗಿರಬೇಕಾದ ದೊಡ್ಡ ಗುಣ. ಜೀವನದಲ್ಲಿ ಅನಿರೀಕ್ಷಿತವಾಗಿ ಒದಗುವ ಸನ್ನಿವೇಶಗಳಿಗೆ ತಕ್ಕಂತೆ ಸತ್ಯವನ್ನು ಸಮರ್ಪಕವಾಗಿ ಕಾಪಾಡಿಕೊಳ್ಳುವುದು ಸುಲಭವಲ್ಲ. ಆದುದರಿಂದಲೇ ಪಂಪನು ಕರ್ಣನ ಪಾತ್ರಕ್ಕೆ ಭಾರತದಲ್ಲಿ ಉತ್ತಮ ಸ್ಥಾನವನ್ನು ಕಲ್ಪಿಸಿ ಆತನನ್ನು ಲೋಕಕ್ಕೆ ಆದರ್ಶನನ್ನಾಗಿ ಮಾಡಿರುವುದು

ಕರ್ಣನು ವಿಧಿಯ ಕ್ರೌರ್ಯಕ್ಕೆ ಸಿಕ್ಕಿದವನು. ವಿಧಿಯು ಆವನನ್ನು ಹುಟ್ಟಿದಾರಭ್ಯ ತನ್ನ ಪಕ್ರಮುಷ್ಟಿಗೆ ಸಿಕ್ಕಿಸಿಕೊಂಡಿದೆ. ಕರ್ಣಾರ್ಜುನರ ಕಾಳಗಕ್ಕೆ ಮೊದಲು ನಡೆಯುವ ಸಂಭಾಷಣೆಯಲ್ಲಿ ಕರ್ಣನು ವಿಧಿಯ ವಿಲಾಸವನ್ನು ಕುರಿತು ಪ್ರಸ್ತಾಪಿಸುವನು. ತಾನು ಆ ವಿಲಾಸಕ್ಕೆ ಅಧೀನನಾಗಿರುವನೆಂಬುದು ಆತನಿಗೆ ತಿಳಿದಿತ್ತು ಆತನ ಮಾತುಗಳಿವು

ಬಿದಿವಶದಿಂದೆ ಪುಟ್ಟುವುದು ಪುಟ್ಟುಗುಂ ಬಿದಿ
ಪುಟ್ಟದಂದಿವಂ ।
ಗಿದು ಬಿಯಪೋಲ್ವವಂಗಿದು ವಿನೋದವಿದಂಗಿದು
ಸಾವವಾಂದಂ ॥
ಗಿದು ಪಡೆಮಾತದಂಗಿದ ಪರಾಕ್ರಮವೆಂಬುದನೆಲ್ಲ
ಮಾರ್ಕೆಯಿಂ ।
ಬಿದಿ ಸಮಕಟ್ಟಿ ಕೊಟ್ಟಿದೆಯೊಳ್ ಕಿಡಿಸಲ್
ಕುಡಿಸಲ್ ಸಮರ್ಥರಾರ್ ॥

ಲೋಕರೀತಿಯನ್ನು ತಿಳಿಸುವುದರಲ್ಲಿ ಕರ್ಣನ ಈ ಮಾತುಗಳು ಶಾಂತವಾಗಿದ್ದರೂ ಇದು ಕರ್ಣನಿಗೆ ಅನ್ವಯಿಸುವಷ್ಟು ಉತ್ತಮವಾಗಿ ಮತ್ತಾರಿಗೂ ಅನ್ವಯಿಸದು. ಆತನಿಗೆ ಇರುವ ಆ ಮಹಾಶಕ್ತಿಗೆ ತಾನು ಅಧೀನನಾಗಿದ್ದರೂ ದುರ್ಯೋಧನನಂತೆ ಅದನ್ನು ಕೈವಶಮಾಡಿಕೊಳ್ಳಬೇಕೆಂಬ ಆಶೆಯಾಗಲಿ ಅಥವಾ ಮಾಡಿಕೊಳ್ಳುವುದು ತನಗೆ ಸಾಧ್ಯವೆಂಬ ಹುರುಪಾಗಲಿ ಕರ್ಣನಿಗಿಲ್ಲ. ಇತರರು ತಿಳಿದೋ ತಿಳಿಯದೆಯೋ ಅವಶ್ಯಕವಾಗಿಯೋ ಅನಾವಶ್ಯಕವಾಗಿಯೋ ಮಾಡಿದ ತಪ್ಪುಗಳಿಗೆ ಹೊಣೆಗಾರನಾಗಬೇಕಾದುದು ಕರ್ಣನ ಜೀವನದಲ್ಲಿ ಒಂದು ಮುಖ್ಯ ಅಂಶ. ದೂರ್ವಾಸರು ಕುಂತಿಯು ಮಾಡಿದ ಸತ್ಕಾರಕ್ಕಾಗಿ ಒಲಿದು ಪುತ್ರರನ್ನು ಪಡೆಯುವುದಕ್ಕೆ ಐದು ಮಂತ್ರಗಳನ್ನು ಉಪದೇಶಿಸಿದರು. ಆ ಮಂತ್ರಗಳಲ್ಲಿನ ಮಹಿಮೆಯನ್ನು ಪರೀಕ್ಷೆಮಾಡುವ ಉದ್ದೇಶಗಳಿಂದ ಆಕೆಯು ಸೂರ್ಯನನ್ನು ಪ್ರಾರ್ಥನೆ ಮಾಡಿದಳು. ಸೂರ್ಯನು ಭೂಮಿಗಿಳಿದು ಬಂದು ತನ್ನನ್ನು ಬರಿಸಿದ ಕಾರಣವಾವುದೆಂದು ಕೇಳಲು ಕುಂತಿಯು ಭಯವಿಹ್ವಲೆಯಾಗಿ 'ತಿಳಿಯದೆ ಮಾಡಿದ್ದೆ, ತಪ್ಪು ದಯಮಾಡಿಸಬಹುದು' ಎಂದು ಹೇಳಿದಳು. ಆದರೆ ಸೂರ್ಯನು ಅದಕ್ಕೆ ಒಪ್ಪಲಿಲ್ಲ. ಮೊದಲು ಬೇಡಿದ ವರವನ್ನು ಕೊಡದೆ ತಾನು ಹೋಗತಕ್ಕವನಲ್ಲವೆಂದನು. ನನ್ನಂಥ ಮಗನು ನಿನಗೆ ಆಗಲಿಯೆಂದು ಹರಸಿದನು. ಆವನೆಂದಂತೆ ಮಗನು ಹುಟ್ಟಿದನು. ಹುಟ್ಟಿದ ಮಗುವಿನ ಸೊಬಗಾದರೋ,

ಒಡಹುಟ್ಟಿದ ಮಣಿ ಕುಂಡಲ ।
ಮೊಡವುಟ್ಟಿದ ವಜ್ರಕವಚ ಮಮುರ್ದುಂ ತನ್ನೊಳ್ ॥
ತೊಡರ್ದಿರೆಯುಂ ಬಂದಾತಂ ।
ನಡುತಮನೊಡರಿಸುದನಂಗಳಾ ಬಾಲಕೆಯಾ ॥

ಕುಂತಿಗೆ ಆ ಸುಂದರ ಬಾಲಕನಲ್ಲಿ ಮೋಹವಿಲ್ಲ. ತಾನು ಅಕಾರ್ಯ ಮಾಡಿಬಿಟ್ಟೆನಲ್ಲ, ಲೋಕವು ಏನನ್ನುವುದೋ ಎಂಬ ಭೀತಿಯೇ ದೊಡ್ಡದಾಯಿತು. ಹುಟ್ಟಿದ ಮಗುವನ್ನು ಲೋಕಾಪವಾದವನ್ನು ನೀಗಿಸುವುದಕ್ಕೋಸ್ಕರ ಗಂಗಾನದಿಯಲ್ಲಿ "ಸಿಧ ಜ ಮನೀಡಾಯುವಂತೆ" ಎಸೆದಳು. ಗಂಗೆಯು ಪಾವನಳೆಂದೂ ಪಾಪನಾಶಿನಿಯೆಂದೂ ಹೇಳಲ್ಪಟ್ಟಿದೆ. ಕುಂತಿಯ ವಿಷಯದಲ್ಲಿ ಗಂಗೆಗೂ ಸಹಾನುಭೂತಿ ಬೇಡವೆ? ಎಸೆದ ಮಗುವು ಪಾತಾಳಲೋಕವನ್ನು ಸೇರಬಾರದಾಗಿತ್ತೆ? ಗಂಗೆಯಲ್ಲಿ ಬಿದ್ದುದೆಲ್ಲ ತೇಲುವುವೆ? "ಗಂಗಾದೇವಿಯು ಮಕರೂಸಲ ಮಕರುಗಳೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳನೊಯ್ಯನೊಯ್ಯನೆ ತಕ್ಕೈಸಿತರೆ", ಗಂಗಾತೀರದಲ್ಲಿ ವಿಹರಿಸುತ್ತಿದ್ದ ಸೂತನು ಆ ಮಗುವನ್ನು ನೋಡಿ ಪ್ರೀತಿ ನಿಧಿಸಿಕ್ಕಿದವನಂತೆ ಎತ್ತಿಕೊಂಡು ಮನೆಗೆ ಬಂದು ಹೆಂಡತಿಯಾದ ರಾಧೆಗೆ ಅದನ್ನು ಒಪ್ಪಿಸಲು ಮಕ್ಕಳಿಲ್ಲದುಳಿದಿದ್ದಳು ಮಗನೆಂದುಕೊಂಡು ಪೋಗರ್ ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಲ್ ರಾಧೆಯು ಮಗುವನ್ನು ತನ್ನ ಮಗನೆಂದೇ ಭಾವಿಸಿ ಬೆಳಸಿದಳು. ಹೀಗೆ ಬೆಳೆದ ಬೆಳವಣಿಗೆಯು "ಜನಂಗಳ ಕಣ್ಗೋರ್ಪಾಂತದೊಳಗೆಸೆಯೆ ಕರ್ಣನೆಂಬನಾದಂ" ಕರ್ಣನು ಹೀಗೆ ಸದ್ಯೋಜಾತದಲ್ಲಿ ಕುಂತಿಯಿಂದಲೂ ಪ್ರಟ್ಟಿದವನಾದರೂ ವಿಧಿಯ ಕೈವಾಡದಿಂದ ಸೂತನ ಕೈಸೇರಿದನು. ಕರ್ಣನು ಇದರಿಂದ ಜನ್ಮತಃ ಕಳಂಕಕ್ಕೆ ಈಡಾದನು. ಎಲ್ಲರಿಗೂ ಒದಗಲ್ಲ ತಿರಸ್ಕಾರ

ಕರ್ಣನು ಶಸ್ತ್ರಶಾಸ್ತ್ರವಿದ್ಯೆಯಲ್ಲಿ ಪಂಡಿತನಾದನು "ಮೊರೆವ ವೈರಿನರೇಂದ್ರರಂ ಸಿಡಿಲೆಚ್ಚೆದವೊಲಟ್ಟಿ ಮುಟ್ಟೆ ಕಡಿದಿಕ್ಕು"ವುದೂ "ಬುದ್ಧ ಮಾಗಧ ವಂದಿ ಜನಕ್ಕೆ" ಬೇಡಿದುದನ್ನು ದಾನಮಾಡುವುದೂ ಲಕ್ಷಣವಾಯಿತು. ಹೀಗೆ ಇವನ ಹೇರದ ಜಾಗದ ಲಕ್ಷಣವು "ಭುವನಭವನಕ್ಕೆಲ್ಲ" ವಿದಿತವಾಯಿತು. ಅಷ್ಟೇ ಅಲ್ಲದೆ ದೇವಲೋಕವನ್ನು ಮುಟ್ಟಿತು. ಇಂದ್ರನಿಗೆ ಇದನ್ನು ಕೇಳಿ ಮತ್ಸರ ಉಂಟಾಯಿತು. 'ಮುಂದೆ ತನ್ನಂಶದೊಳ್ ಪುಟ್ಟಿದರ್ಜುನಂಗವಾತಂಗಂ ದ್ವಂದ್ವಯುದ್ಧಮುಂಟಪ್ಪುದಂ ತನ್ನ ದಿವ್ಯ ಜ್ಞಾನದಿಂದ ಅರಿದು' ಅರ್ಜುನನನ್ನು ಕರ್ಣನು ಗೆಲ್ಲಬಾರದೆಂದು

ಬೇಡಿದೊಡೆ ಬಲದ ಬರಿಯುದು ।
ನೀಡಾಡುಗುಮಿದು ಕರ್ಣನೆಂದಾಗಳೆ ಕೈ ॥
ಗೂಡಿದ ಪಟುವಾಕ್ಯದೊಳೆ ।
ಬೇಡಿದನಾ ಸಹಜ ಕವಚಮಂ ಕುಂಡಳಮುಂ ॥

ಯಾರಿಗೇ ಯಾವುದನ್ನಾಗಲಿ ಬೇಡಿದ ಮೇಲೆ ಕೊಡಲಾರೆನೆನ್ನುವುದು ಕರ್ಣನ ಗುಣವಲ್ಲ. ಮರುಮಾತಿಲ್ಲದೆ ಪುನರ್ಯೋಚನೆ ಇಲ್ಲದೆ 'ಸಾಟಿಗಟ್ಟಿ' ಬಂದು ಕೇಳಿದ ಇಂದ್ರನಿಗೆ ಕವಚಕುಂಡಲಗಳನ್ನು ಬಿಟ್ಟುಕೊಟ್ಟನು

ಎಂದುಂ ಪೊಗೆಂದಡೆ ಪಾ ।
ಡೆಂದಡೆ ಪಿರಿತೊಂದಬೇಡವನೆಂದನೆ ನೊಂದು ॥
ಎಂದಡೆ ಸೆರಗಿಲ್ಲದೆ ಪಿಡಿ ।
ಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ ॥

ಈ ಬಗೆಯ ಕಲಿತನವೂ ತ್ಯಾಗವೂ ಇಂದ್ರನನು ವಿಸ್ಮಯಗೊಳಿಸಿದುವು. ದೇವೇಂದ್ರನನ್ನೇ ತಿರಸ್ಕರಿಸಿದ ಕರ್ಣನ ಔದಾರ್ಯವನ್ನು ಮೆಚ್ಚಿದನು. ಯುದ್ಧದಲ್ಲಿ ಶತ್ರುವನ್ನು ಜಯಿಸತಕ್ಕ ಅದ್ಭುತಶಕ್ತಿಯೊಂದನ್ನು ಇಂದ್ರನು ಕರ್ಣನಿಗೆ ತಾನಾಗಿಯೇ ದಯಪಾಲಿಸಿದನು. ಇಂದ್ರನಿಗೆ ಅರ್ಜುನನಲ್ಲಿಯೇ ಹೆಚ್ಚು ಅಭಿಮಾನ. ಆದರೆ ಆ ಅಭಿಮಾನಕ್ಕಾಗಿ ನಿಷ್ಕಾರಣವಾಗಿ ಕರ್ಣನಿಗೆ ಸಹಜವಾಗಿ ಒದಗಿದ್ದ ಬಲಸಂಪತ್ತಿಯನ್ನು ಕೆಡಿಸಬಹುದೆ? ಕರ್ಣನ ಬಲಿಯುತನಾಗಿರುವುದು ವಿಧಿಗೆ ಪ್ರಿಯವಾದುದಲ್ಲ. ಅರ್ಜುನನಿಗಿಂತ ಕರ್ಣನು ಮೇಲ್ಮೆಯನ್ನು ಪಡೆಯುವುದನ್ನು ವಿಧಿಯು ಸಹಿಸದು. ಈ ವಿಧಿಯ ಆಟಕ್ಕೆ ಕರ್ಣನು ಎಷ್ಟುಮಾತ್ರವೂ ಅಧೀನನಲ್ಲದಿದ್ದರೂ ಈ ವಿಧಿಯ ಶಿಕ್ಷೆಯನ್ನು ವಿಧಿಸಿತು. ಅಲ್ಲದೆ ವಿಧಿಗೆ ಅಷ್ಟರಲ್ಲೇ ತೃಪ್ತಿಯಿಲ್ಲ. ಕರ್ಣನು ಪರಶುರಾಮರಲ್ಲಿಗೆ ಹೋಗಿ ಧನುರ್ವಿದ್ಯೆಯನ್ನು ಅಭ್ಯಾಸಮಾಡಿ ಪಾರಂಗತನಾದನು. ವಿಧಿಗೆ ಅಲ್ಲಿಯೂ ಸಹನೆ. ಕರ್ಣನ ತೊಡೆಯ ಮೇಲೆ ಪರಶುರಾಮನ "ಮರೆದು ನಿದ್ರಾ" ಆತನನ್ನು ಕೆರಳಿಸಿ ಆತನಿಂದ ಕರ್ಣನಿಗೆ ಶಾಪಕೊಡಿಸಬೇಕೆಂಬುದು ವಿಧಿಯ ವಿಧಾನ. ವಜ್ರಕೀಟನು ಕರ್ಣನ ಎರಡು ತೊಡೆಗಳನ್ನು "ಉಳಿಯುಸಾರದಿಕೊರೆದಂತಿರೆ ಬೆಟ್ಟದಂತೆ" ಕೊರೆದು ರಕ್ತ ಎಲ್ಲ ನಿದ್ರಾಭಂಗವಾಗುವುದೋ ಎಂದು ನೋವನ್ನು ಸಹಿಸಿಕೊಂಡಿರಲು ರಕ್ತವು ಕರ್ಣನ "ಉರು ಊರುಕ್ಷತದಿಂದೊರೆದು ನಿಡಿಯಂ ನಾಂದಿ ಪುನ್ಯ ಕ್ಷತದೊಡನೆ" ಮುನಿಯನ್ನು ಎಚ್ಚರಗೊಳಿಸಿತು. ರೇಣುಕಾನಂದನನು ರಕ್ತದ ಪ್ರವಾಹದಲ್ಲಿ ನೆನೆದ ಧೈರ್ಯವನ್ನೂ ಜಡಿಯನ್ನು ನೋಡಿ ಈ ಬಗೆಯ ಧೈರ್ಯ ಕ್ಷತ್ರಿಯರಿಗಲ್ಲದಾಗದು" ಎಂದೂಹಿಸಿ ಧನುರ್ವಿದ್ಯೆಯನ್ನು ಕಲಿಯಲು ತಾನು ಬ್ರಾಹ್ಮಣನೆಂದು ಹೇಳಿದ್ದಕ್ಕಾಗಿ ಕರ್ಣನಿಗೆ ಶಿಕ್ಷೆಯನ್ನು ವಿಧಿಸಿದನು. ಈ ಶಿಕ್ಷೆಯು ಪರಶುರಾಮರು ಕೊಟ್ಟಿದ್ದ "ಬ್ರಹ್ಮಾಸ್ತ್ರವೆಂಬ ದಿವ್ಯಾಸ್ತ್ರ ಮರಣಕಾಲದೊಳ್ ನೆನೆಯದಿರಬೇಕೆಂ"ಬುದು. ಕರ್ಣನು ಧನುರ್ವಿದ್ಯಾಪಾರಂಗತನಾಗಿ ತನಗೊದಗಿದ ಅನಿರೀಕ್ಷಿತ ದುಷ್ಫಲವಾ... ಸೂತನ ಮನೆಗೆ ಹಿಂದಿರುಗಿದ.

---

## ದೃಷ್ಟಿಚಕ್ರಗಳೂ ಧ್ವನಿವಾಹಕಗಳೂ.

ಭಾರತೀಯರ ಬುದ್ಧಿಯು ವಿಕಾಸಗೊಂಡಂತೆ ಅವರ ದೃಷ್ಟಿಯು ಮಂದವಾಗುತ್ತಲಿದೆ ಎಂಬುದನ್ನು ಇತ್ತೀಚೆಗೆ ಹೆಚ್ಚಿದ ದೃಷ್ಟಿಚಕ್ರಗಳೇ ರುಜುಪಡಿಸುತ್ತಲಿವೆ. ಪ್ರಾಚೀನ ಕಾಲದಲ್ಲಿ, ಕೇವಲ ವೃದ್ಧರು ಅದೂ, ಓದುತಿರೆಯುತ್ತಿರುವಾಗ ಮಾತ್ರ ಈ ದೃಷ್ಟಿಚಕ್ರಗಳ ಬಲವನ್ನು ಹಾರೈಸುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಯೇ ಬೇರೆ, ಈ ದೃಷ್ಟಿಚಕ್ರಗಳು ಪ್ರತಿಯೊಬ್ಬ ತರುಣನ ಹಾಗೂ ತರುಣಿಯ ವದನವನ್ನು ಅಲಂಕರಿಸಿವೆ. ವೃದ್ಧರಿಗೇನೊ ದೃಷ್ಟಿಮಾಂದ್ಯವೆಂದಾಯಿತು. ಯೌವನಸ್ಥರ ಪಾಡು ಹೀಗಾಗಬೇಕೆ? ಶಾಲಾಶಾಲೆಯಿಂದ ಹೋಗುವ ಬಾಲಕಬಾಲಿಕೆಯರಂತೂ ಇದನ್ನು ಧರಿಸದೆ ಶಾಲೆಗೆ ನಡೆಯುವುದೇ ಇಲ್ಲ. ವಿದ್ಯಾ ಪದ್ಧತಿಯ ಕುರುಹುನ ಇದು? ಅಥವಾ ನಯನಗಳ ದುರ್ಬಲತೆ? ಓದು ಬರೆಯುವಾಗ ಮಾತ್ರವಲ್ಲದೆ, ಇಡೀ ದಿವಸದಲ್ಲೂ ದೃಷ್ಟಿಚಕ್ರಗಳನ್ನು ಧರಿಸುವ ಜನತೆಗೆ ಇನ್ನು ಕಾಲಕ್ರಮೇಣ ರಾತ್ರಿ ಮಲಗುವಾಗಲೂ ಅವುಗಳು ಬೇಕಾಗುವುವೋ ಎಂಬ ಯೋಚನೆಯು ಶಂಕೆಯು ಉತ್ಪನ್ನವಾಗಿದೆ

ಇತ್ತೀಚೆಗೆ ಧ್ವನಿವಾಹಕ ಯಂತ್ರಗಳ ಪ್ರಯೋಗವು ಬಹಳವಾಗಿದೆ. ಕಿವಿಯ ಆಲಿಸುವ ಶಕ್ತಿಯೂ ಉಚ್ಚಾರಗಳ ಸ್ವರಶಕ್ತಿಯೂ ದಿನೇ ದಿನೇ ಕುಂದುತ್ತಾ ಹೋಗಿದೆಯೆಂದು ಇದು ವಿಶದಪಡಿಸುತ್ತಿದೆ. ಇಲ್ಲವಾದರೆ ಇದರ ಹಂಬಲವನ್ನು ಜನರೇಕೆ ಬಯಸುತ್ತಿದ್ದರು. ಯಾವ ಸಭೆಗಳಲ್ಲಾಗಲೀ ಯಾವ ವಿನೋದಕೂಟಗಳಲ್ಲಾಗಲೀ ಈ ಯಂತ್ರಗಳ ಪ್ರದರ್ಶನವು ಬಹಳ ಆಡಂಬರದಿಂದ ಸಾಗುತ್ತಲಿದೆ. ಹೆಚ್ಚೇಕೆ ಮೊನ್ನೆ ಕಲ್ಕತ್ತಾ ಹೈಕೋರ್ಟಿನಲ್ಲಿ ಇದನ್ನಿಟ್ಟಿರಂತೆ. ಬರೀ ಎರಡು ತಿಂಗಳ ತನಕ ನ್ಯಾಯಾಧೀಶರು ಅದರ ಆರ್ಭಟದಿಂದಾಗಿ ಕೋರ್ಟು ಕಚೇರಿಗಳಲ್ಲಿ ಇಂತಹ ಯಂತ್ರಗಳ ಸನ್ನಿವೇಶವು ಇರಬಾರದೆಂದು ಸೂಚಿಸಿದರು. ಆದರೆ ಅದರ ಹಾವಳಿಯು ಇಷ್ಟರಲ್ಲೆ ಮುಗಿಯಲಿಲ್ಲ. ಒಂದು ಕೋರ್ಟಿನಲ್ಲಿ ವ್ಯಾಜ್ಯವು ಸಾಮಾನ್ಯ ಆಗಿದ್ದರೆ ಮಗದೊಂದು ಕೋರ್ಟಿನಲ್ಲಿ ಅದರ ಅಪೀಲಾಗುವುದಿಲ್ಲವೆ? ಅಂತೂ ಪೋಲೀಸ್ ಕೋರ್ಟಿನಲ್ಲಿ ಅದರ ಪುನರ್ವಿಚಾರಣೆಯಾಯಿತು 'Bar'ನ ಬಳಿಯೊಂದು ಮೆಜಿಸ್ಟ್ರೇಟರ ಬಳಿಯೊಂದು, ಆದರೆ ಜನರ ಪಿಸುಮಾತು ಅತ್ಯಂತ ಸಪ್ಪಳವಾಗಿ ಉಂಟಾದ ಕಾಲಪಕ್ಷ ಪಕ್ಷಗಳ ಹಾರಾಟವಿಳಿದಿ ಎದ್ದು ವಿಸಿದ ಶಬ್ದ ಇವುಗಳೆಲ್ಲಾ ಈ ಯಂತ್ರಗಳಿಂದ ಹೊರಟು ಕೋರ್ಟನ್ನೆಲ್ಲಾ ಕಿವುಡುಗಟ್ಟುವಂತೆ ಮಾಡಿತು

ಇವನ್ನೆಲ್ಲಾ ತಿಳಿದೂ ಅದರ ಸದ್ದನ್ನು ಅಡಗಿಸಬೇಕಿತ್ತು ಜನತೆ. ಆದರೆ ಅವರ ಪ್ರಚಾರವು ಇನ್ನೂ ಸ್ಫೂರ್ತಿಯಿಂದ ಸಾಗಿತು. ಕಲ್ಕತ್ತದ ಕಾರ್ಪೊರೇಷನ್ ಸಭೆಯಲ್ಲಿ ಅಧ್ಯಕ್ಷರ ಮೇಜಿನ ಮೇಲೆ ಈ ಯಂತ್ರವನ್ನಿಟ್ಟರು. ತುಸು ಹೊತ್ತಿನಲ್ಲೆ ಅಧ್ಯಕ್ಷರು ಅದನ್ನು ತೆಗೆಯಲು ಆಜ್ಞೆಯಿತ್ತರು. ಇಂಥಾದ ತನ್ನ ಸ್ವರವನ್ನು ಜನತೆಯು ಕೇಳುವುದು ಬಿಟ್ಟು ಈ ಕರ್ಕಶಸ್ವರವನ್ನಾಲಿಸಿ ಅವರು ಜಿಗುಪ್ಸೆ ಪಡಬೇಕೆ? ಎಂದವರ ಭಾವನೆ. ಕೋರ್ಟಿನಲ್ಲಿ ನ್ಯಾಯಾಧೀಶರ ತೀರ್ಪನ್ನು ಕೇಳಿಯೂ ಕಾರ್ಪೊರೇಷನಿನಲ್ಲಿ ಅದನ್ನು ಊದಿಸಿದ ಜನತೆಯ ಪಾಡು ಹೇಗಾಗಿದೆಯೆಂಬುದನ್ನು ಚೆನ್ನಾಗಿ ಪರಿಶೀಲಿಸಬಹುದಲ್ಲ

Amrita Bazar Patrika.


# KANNADA

**Savings Certificates can be cashed even before maturity.**

Full Particulars from—

CANARA BANK LTD

OFFICES AT—

| | |
|---|---|
| Bombay—Fort, | Mangalore—City, |
| Bombay—Mandvi, | Mangalore—Bunder, |
| Hubli, | Kasaragod, |
| Calicut, | Puttur, |
| Cochin, | Buntwal, |
| Ernakulam, | Karkala, |
| Alleppey, | Coondapoor, |
| Bangalore, | Udipi, |
| Davangere, | & |
| Chickmagalur, | Gangoli. |

AVAILABLE IN DENOMINATIONS OF Rs. 10/ UPWORDS.

**TOTAL YIELD RS 4-6-0% P. A.**

Paid once half yearly at 3½% p. a. with an additional 1¼% p. a. on maturity If Left To Accumulate

RS. 100/-

Will Amount to

RS. 122-13-6

Estd 1906

# CANARA BANK

LIMITED

| Subscribed Capital | | Paid up Capital |
|---|---|---|
| 6,00,000 | | 3,31,000 |
| Reserves | Deposits | Working Capital |
| 4,50,000 | 58,62,000 | 73,49,000 |

# ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

## ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

---

# ಜಾಹೀರಾತು.

**ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—**

ನಮ್ಮ ಫಾರ್ಮೆಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರುಗಳಿಂದ ರಚಿಸಲ್ಪಟ್ಟ ಸಿಥಂಟುಗಳ ಉದಾರದಿಂದ ನಾವು ನಿಶ್ಚಯಿಸಿ ಸ್ವಾನುಭವದೊಂದಿದ ಎಲ್ಲಾ ಔಷಧಿ ಮೂಲಿಕೆಗಳು ಬಿಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯು ಈ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದಿಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

---

ಚಿತ್ರಾದುಹಿ ಸಮೇತ

## ಋಗ್ವೇದೀ ಸಂಧ್ಯಾವಂದನೆ

(ಕೃಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ) ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ.ಎ., ಎಂ. ಎಲ್
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

---

ಆವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಬಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

## ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ— ಅದು ಪೂರ್ಣವಾದ ಟೋನಿಕ್ ಆಹಾರ. ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ
ರೂ 3 4-0 ಮತ್ತು ರೂ 1 12 0

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು – ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
32. ಚಿಕ್ಕಪೇಟೆ, ಬೆಂಗಳೂರು ಸಿಟಿ.

---

ಚಾತುಕುಟ್ಟಿ ವೈದ್ಯರ

## ವಿಶೂಚಿಕಾ ಸಂಹಾರಿ
**Vishuchika Samhari**
(PILCO)

ಕೋಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ. 1-0-0

## ಗುಹ್ಯರೋಗ ನಿವಾರಿಣೀ ತೈಲ
**Anti-Veneraei Oil**
(A V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ಆರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು
8 ಔನ್ಸಿನ ಬಾಟ್ಲಿ 1ಕ್ಕೆ ರೂ 2-8-0

ಕೆ ವಿ. ಕೃಷ್ಣನ್,
ಕಲ್ಪಾತಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

---

## ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ




[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ -
The Scientific Gold Bangles Co., L
Head Office -48, Byragimatt Street,
Post Box No. 203, Madras.

---

# ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ.




ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

---

# 'ಸ್ವದೇಶಾಭಿಮಾನಿ'

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

---

# ಮೇಹಧ್ವಂಸಿನಿ. (ರಿಜಿಸ್ಟರ್ಡ)

ಪ್ರಮೇಹವು ಯೌವನಮದದ ಪ್ರಾಪ್ತಿಯು. ಇದು ಸ್ತ್ರೀಸಂಗದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.

ಅನೇಕರು ಕಾಹಿಲೆಯ ದೆಸೆಯಿಂದ ಕೊರಗುತ್ತಿದ್ದಾರೆ. ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಹಿಂಗಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ಕೃತಾರ್ಥರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುವು, ಮೂತ್ರಕೃಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ:-ದೊಡ್ಡ ಬಾಟ್ಲಿಗೆ ರೂ 4. ಮೀಡಿಯಂ 2-4-0 ಚಿಕ್ಕದು 1-2-0.

ತಯಾರಿಸುವವರು— ಲಸ್ಕರ್ ಡಿಪೋ, ಚಿಕ್ಕಮಗಳೂರು.
ಬ್ರಾಂಚ್—ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು.—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

# ಜಿನೇವಾದಲ್ಲಿ ಇಟೆಲಿ ಎಬಿಸೀನಿಯಾಗಳ ಸಮಸ್ಯೆ!

## ಬ್ರಿಟನು ಇಟೆಲಿಗೆ ಎದುರುನಿಂತಿತು! ——— ಫ್ರಾನ್ಸು ಇಟೆಲಿಯ ಬೆಂಬಲಕ್ಕಿಲ್ಲ!

## ಮುಸೋಲಿನಿಯವರ ಯುದ್ಧಸಿದ್ಧತೆ!

ಜಿನೀವಾ ಪರಿಷತ್ತಿನಲ್ಲಿ ಇಟೆಲಿ ಮತ್ತು ಎಬಿಸೀನಿಯಾಗಳ ಪ್ರತಿನಿಧಿಗಳ ಭಾಷಣಗಳಾದ ನಂತರ ಇದೇ ತಾ ೧೧ನೇ ಬೆಳಿಗ್ಗೆ ಬ್ರಿಟಿಷ ವಿದೇಶ ಸಚಿವರಾದ ಸರ್ ಸಾಮ್ಯುವೇಲ್ ಹೋರರ ಮಹತ್ವಪೂರ್ಣ ಭಾಷಣವು ನಡೆಯಿತು. ಇಂತಹ ಸ್ಪಷ್ಟವೂ, ಉದ್ದಾಮವೂ ಆದ ಭಾಷಣವು ಯುರೋಪು ಖಂಡದಲ್ಲಿ ಕಳೆದ ಹದಿನೈದು ವರ್ಷಗಳಲ್ಲಿ ಕೊಡಲ್ಪಟ್ಟಿರುವುದಿಲ್ಲವೆಂದು ತಿಳಿದುಬಂದಿದೆ

ತಾನು ಜನಾಂಗಸಭೆಗೆ ವಿಧೇಯವಾಗಿದ್ದು ಜನಾಂಗಸಭೆಯನ್ನು ಸರ್ವ ವಿಧದಿಂದಲೂ ಅನುಸರಿಸಲು ಸಿದ್ಧನಿರುವೆನೆಂದು ಬ್ರಿಟನು ಹೇಳಿ ಜಗತ್ತನ್ನು ವಂಚಿಸುತ್ತಿದೆಯೆಂದು ಅನೇಕರು ಹೇಳುವುದು ಅಸಮಂಜಸವೆಂದು ಸರ್ ಸಾಮ್ಯುವೆಲ್ ಹೋರರು ಹೇಳಿ ಬ್ರಿಟನು ಜನಾಂಗ ಸಭೆಗೆ ಸೇರಿ ಸರ್ವಪಕ್ಷಗಳೊಳಗೆ ಶಾಂತಿಯನ್ನೇ ಬಯಸುತ್ತಿದೆಯೆಂದು ತಿಳಿಸಿದರು.

ಒಂದು ಸಭೆಗೆ ಸೇರಿದರೆ ಆ ಸಭೆಯ ಉದ್ದಿಷ್ಟವಾದ ಸಾಮೂಹಿಕ ರಕ್ಷಣೆಯ ನಿಯಮಾವಳಿಗಳನ್ನು ಪರಿಪಾಲಿಸುವುದು ಮಾನವ ಧರ್ಮವೆಂದೂ, ಬ್ರಿಟನಿನ ವಿದೇಶನೀತಿಯು ಇದೇ ಆಗಿದೆಯೆಂದೂ ಸಭೆಗೆ ತಿಳಿಸಿದರು

“ಎಷ್ಟೇ ಬಲಿಷ್ಠರಾಗಿರಲಿ, ಒಬ್ಬೊಬ್ಬರು ಸಾಮೂಹಿಕ ರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸಿಕೊಳ್ಳಲಾಗುವುದಿಲ್ಲ ಈ ಹೊಣೆಗಾರಿಕೆಯನ್ನು ಶಿರಸಾವಹಿಸುವವರು ಸಾರ್ವದೇಶಿಕ ಬೆಂಬಲವನ್ನು ಹೊಂದಿಕೊಂಡಿರಬೇಕು ಜನಾಂಗ ಸಭೆಯ ಕರ್ತವ್ಯ [illegible] ಬ್ರಿಟನಿನ ಜವಾಬ್ದಾರಿಗಳನ್ನು ಅದು ಪೂರ್ಣವಾಗಿ, ದಕ್ಷತೆಯಿಂದ ನೆರವೇರಿಸುವುದು. [illegible] ಹಿಂದೂದೇಶಕ್ಕೆ ಮಹತ್ವಪೂರ್ಣವೂ ವಿಶಾಲವೂ ಆದ ರಾಜ್ಯಸೂತ್ರಗಳ ದಾನಕ್ಕೆ ನಾನು ಕಾರಣನಾದೆ ಅದೇ ರೀತಿ ಸಣ್ಣ ಸಣ್ಣ ರಾಷ್ಟ್ರಗಳೂ ತಂತಮ್ಮ ರಾಷ್ಟ್ರೀಯತ್ವವನ್ನೂ ಸಾಮೂಹಿಕ ಶಾಂತಿಯನ್ನೂ ರಕ್ಷಿಸಿಕೊಳ್ಳುವ ಅಧಿಕಾರವಿದೆ ಅಸಂಸ್ಕೃತ ರಾಷ್ಟ್ರಗಳು ತಂತಮ್ಮ ಭದ್ರತೆಗಾಗಿ ಸುಸಂಸ್ಕೃತ ರಾಷ್ಟ್ರಗಳ ಆಶ್ರಯವನ್ನು ಕೋರುವುದೂ ಸ್ವಾಭಾವಿಕವಾಗಿದೆ” ಎಂದು ಹೋರರು ಹೇಳಿದರು. ಯುದ್ಧ ನಿವಾರಣೆಗಾಗಿ ಏನಾದರೂ ಸಾಹಸವನ್ನು ನಾವು ಮಾಡಲೇಬೇಕೆಂದು ಅವರು ಸೂಚಿಸುತ್ತಾ “ನಾವು ನಮ್ಮ ರಾಷ್ಟ್ರಧೋರಣೆಗಳನ್ನು ಬದಲಾಯಿಸುವುದು ನ್ಯಾಯವಾದುದು ಆದರೆ ಸಮಯವು ಪರಿಪಕ್ವವಾಗಿದೆಯೋ ಎಂದು ಮೊದಲು ನೋಡಿ ಸಾಮಯಿಕ ಸಾಹಸವನ್ನು ಹೂಡಬೇಕಲ್ಲದೆ, ಯುದ್ಧ ಭಯವನ್ನು ಹುಟ್ಟಿಸಿ, ಗದರಿಸಿ ಈ ಕೆಲಸವನ್ನು ಮಾಡಲಾಗದು. ಅಂತರ್ರಾಷ್ಟ್ರೀಯ ಶಾಂತಿಸ್ಥಾಪನೆಗೆ ಮೂಲಾಧಾರವಾಗಿರುವ ಈ ಸೂತ್ರಗಳನ್ನು ಮನ್ನಿಸಿ ಜನಾಂಗಸಭೆಯು ನಿರ್ಣಯಿಸಬೇಕು. ಇಂಗ್ಲೆಂಡು ತನ್ನ ಹಿತದೃಷ್ಟಿಯಿಂದ ಹೀಗೆ ಹೇಳುತ್ತದೆಂದು ವಾದಿಸುವವರಿರಬಹುದು, ನಾವು ಅಲ್ಲವೆನ್ನಲಾರೆವು ಎಲ್ಲರೊಡನೆ ನಮ್ಮ ಆರ್ಥಿಕ ಸ್ಥಿತಿಯೂ ಸರಿದಾರಿಯಲ್ಲಿರಲೆಂದು ನಾವು ತಿಳಿದವರಿರುತ್ತೇವೆ ಈ ಸಂದಿಗ್ಧತೆಯಲ್ಲಿ ಭಾಷಣ ಮಾಡುವುದು ಬಹು ಕಷ್ಟಕರ. ಎಬಿಸೀನಿಯಾ ಸಮಸ್ಯೆಯ ಬೆಂಕಿಯು ಕುದಿಯುತ್ತಿರುವಾಗ ಉಗ್ರ ಭಾಷಣ ಮಾಡಿ ಎಣ್ಣೆ ಹೊಯ್ದು ಒಟ್ಟು ಜನಾಂಗಸಭೆಯ ಕಾರ್ಯಪರಂಪರೆಗಳಿಗೆ ತೊಡಕನ್ನು ತಂದೊಡ್ಡುವುದು ದೊಡ್ಡ ಕೆಲಸವಲ್ಲ. ಇಂತಹ ವೇಳೆಯಲ್ಲಿ ಇಂಗ್ಲೆಂಡು ಹಿಂದಿನಂತೆ ಮುಂದೆಯೂ ಸ್ಪಷ್ಟವಾಗಿಯೂ, ನೀತಿಪರವಾಗಿಯೂ ವಿವೇಕಪೂರ್ಣವಾಗಿಯೂ ನುಡಿಯುವುದು ಜನಾಂಗ ಸಭೆಯಲ್ಲಿ ಮೊದಲೇ ಬರಿದಾಗಿರುವ ಕುರ್ಚಿಗಳು ಹೆಚ್ಚು ಅನೇಕ ಬಲಿಷ್ಠ ರಾಷ್ಟ್ರಗಳು ಅದರಲ್ಲಿಲ್ಲ ಹಾಗಿರುವಾಗ ನಾವು ಇನ್ನೂ ಕೆಲವು ಕುರ್ಚಿಗಳನ್ನು ಬರಿದಾಗಿಸುವ ಹವ್ಯಾಸಕ್ಕೆ ಕೈಯಿಕ್ಕಬಾರದು” ಎಂದು ಹೇಳಿದರು ಜನಾಂಗ ಸಭೆಯ ಸೋಲೇ ಜನರ ಸೋಲು ಹಾಗೆ ಸೋಲುವುದಾದರೆ ಮಹಾ ಅನರ್ಥವೇ ಉಂಟಾದೀತು ಇಂಗ್ಲೆಂಡು ಜನಾಂಗಸಂಘದ ಕರ್ತವ್ಯಗಳನ್ನು ಚಾಚೂ ತಪ್ಪದೆ ಪರಿಪಾಲಿಸುವುದೆಂದರು

ಹೋರರ ಭಾಷಣವನ್ನು ಕೇಳಿ ಇಡೀ ಜಗತ್ತೇ ವಿಸ್ಮೃತವಾಯಿತು ಈ ಸಂದಿಗ್ಧತೆಯಲ್ಲಿ ಬ್ರಿಟನು ಇಟೆಲಿಯನ್ನು ಸರ್ವಥಾ ಬಿಟ್ಟುಹಾಕಲಾರದೆಂದು ತಿಳುವಳಿಕೆಯಿತ್ತು ಇಂಗ್ಲಾಂಡು ಇಟೆಲಿಯ ಮೈತ್ರಿ ಸಂಪಾದನೆಯಲ್ಲಿತ್ತಾದುದರಿಂದ ಅಂತಹ ತಿಳುವಳಿಕೆಯು ಪುಷ್ಟಿ ಹೊಂದುವುದು ವಾಸ್ತವವೂ ಇತ್ತು. ತಾನು ಜನಾಂಗಸಭೆಯನ್ನು ಉಲ್ಲಂಘಿಸಿ ವರ್ತಿಸಲಾರೆನೆಂದು ಬ್ರಿಟನು ಹೇಳುವುದೂ, ತಾನು ಇಟೆಲಿಯ ಧೋರಣೆಯನ್ನು ಅನುಮೋದಿಸುವುದಿಲ್ಲವೆನ್ನುವುದೂ ಒಂದೇ ಆದುದರಿಂದ ಹೋರರ ಹೇಳಿಕೆಗೆ ಅಷ್ಟು ಮಹತ್ವವು ಬಂತು. ಬ್ರಿಟನಿನ ನೀತಿಯು ಇಟೆಲಿಯ ಬೆರಗಿಗೆ ಕಾರಣವಾಯಿತು ಇನ್ನು ಫ್ರಾನ್ಸು ಎಲ್ಲಿ ನಿಂತಿತೆಂದು ತಿಳಿಯೋಣ

ತಾ ೧೩ನೇ ದಿನ ಫ್ರಾನ್ಸಿನ ಪ್ರಧಾನ ಮಂತ್ರಿವರ್ಯರಾದ ಲಾವಲರ ಭಾಷಣವು ನಡೆಯಿತು ಸಭೆಯಲ್ಲಿ ಸಾಸಿವೆ ಹಾಕಲು ಸ್ಥಳವಿದ್ದಿಲ್ಲ ಲಾವಲರು ಹೇಳಿದರು “ಇಂತಹ ಭಯಾನಕ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ಸಾಕಷ್ಟು ಹೊಣೆಯನ್ನು ವಹಿಸಬೇಕಾಗಿದೆ ಫ್ರಾನ್ಸಿನ ಕಡೆಯಿಂದ ನಾನೂ ಹಾಗೆ ಮಾಡಬೇಕಾಗಿದೆ ಜನಾಂಗಸಭೆಯ ನಿರ್ಣಯಗಳಿಗೆ ಫ್ರಾನ್ಸು [illegible] ಎಂದು ನಾನು [illegible] ಹೇಳಬೇಕಾಗಿದೆ. [illegible] ಶಸ್ತ್ರಸಂನ್ಯಾಸ ಪರಿಷತ್ತಿನ [illegible] ಫ್ರಾನ್ಸು ಸಾಮುದಾಯಿಕ ಶಾಂತಿರಕ್ಷಣೆಗಾಗಿ ಹಾತೊರೆದಿದೆ”

ಸಪ್ಟಂಬರ ತಾ ೧೩

ಸರ್ ಸಾಮ್ಯುವೇಲ್ ಹೋರರ ಭಾಷಣವು ಜನಾಂಗಸಭೆಯ ನಿರ್ಮಾಣವಾದಂದಿನಿಂದ ಜರಗಿದ ಭಾಷಣಗಳಲ್ಲಿ ಅತ್ಯಮೋಘವೆಂದು ಜಗತ್ತಿನ ಅಭಿಪ್ರಾಯವಿದೆ ಅವರ ಭಾಷಣವು ನಡೆದ ವೇಳೆ ಸರ್ ಸಾಮುವೇಲ್ ಹೋರರನ್ನು ಕೆಲವರು ಭೇಟಿಯಾದಾಗ ಹೋರರು ಹೀಗೆಂದರು “ಕಟ್ಟ ಕಡೆಗೆ ಏನು ಬೇಕಾದರೂ ಆಗಲಿ, ಆದರೆ ಮಹದನರ್ಥವು ಸಂಘಟಿಸಬರದಂತೆ ಬ್ರಿಟಿಷ ಸರಕಾರದ ಪ್ರತಿನಿಧಿಗಳು ತಮ್ಮಿಂದ ಕೂಡಿದಷ್ಟು ಯತ್ನವನ್ನು ಮಾಡಲಿಲ್ಲವೆಂದಾಗಬಾರದು, ಅದಕ್ಕಾಗಿ ನಾವು ಸಾಹಸಪಡಬೇಕಾಗಿದೆ ಬ್ರಿಟಿಷ ಸಾಮ್ರಾಜ್ಯವು ಜಗತ್ತಿನ ದೃಷ್ಟಿಯಲ್ಲಿ ಎಷ್ಟು ಮಾನನೀಯವಾಗಿದೆಯೆಂದು ನನಗೆ ಈಗ ತಿಳಿದಿದೆ ಅದರ ಆಜ್ಞೆಯನ್ನು ನಿರೀಕ್ಷಿಸಿ ಎಷ್ಟು ರಾಷ್ಟ್ರಗಳು ಇವೆಯೆಂದೂ ಈಗ ತಿಳಿದುಬಂತು ನಾನು ನನ್ನ ಭಾಷಣದಲ್ಲಿ ಬ್ರಿಟನಿನ ಅಭಿಮತವನ್ನು ವ್ಯಕ್ತಗೊಳಿಸಿರುವೆನು ಬ್ರಿಟನು ಎಲ್ಲರಂತೆ ತಾನೂ ಶಾಂತವಾಗಿ ಬದುಕಬೇಕೆಂದು ಆಶಿಸುತ್ತಿದೆಯೆಂದೂ, ಅದು ಜನಾಂಗಸಭೆಯ ಒಪ್ಪಂದವನ್ನು ಗೌರವಿಸಿಯೇ ನಡೆಯುವುದೆಂದೂ ನಾನು ಹೇಳಿರುವೆನು ಈ ಎರಡು ಉದ್ದೇಶಗಳನ್ನಿಟ್ಟುಕೊಂಡ ಬ್ರಿಟನು ಇನ್ನೂ ಇಟೆಲಿಯ ಮೈತ್ರಿಯನ್ನು ಪಡೆದುಕೊಂಡೇ ಇರುವುದು ಬ್ರಿಟನು ತನ್ನ ಮಹಾ ಜವಾಬ್ದಾರಿಯನ್ನು [illegible] ವರ್ತಿಸಬೇಕಲ್ಲದೆ ಹುಡುಗಾಟಿಕೆಯಿಂದಾಗಲೀ ಮತಿಗೆಟ್ಟಾಗಲಿ, ಕೆಲಸ ಮಾಡಬಾರದು” ಎಂದು ಹೇಳಿದರು

ಯುನೈಟೆಡ್ ಸ್ಟೇಟ್ಸಿನ ಸೆಕ್ರೆಟರಿ ಒಫ್ ಸ್ಟೇಟ್‌ರಾದ ಮಿ। ಕೋರ್ಡೆಲ್ ಹಲ್ ಎಂಬವರು ಇಟೆಲಿಗೊಂದು ಮನವಿಮಾಡುತ್ತಾ “[illegible] ರಾಷ್ಟ್ರಗಳು ಒಂದಾಗಿ ಅಂದು ಪೆರಿಸ್‌ನ ಕೆಲ್ಲೊಗ್‌ನಲ್ಲಿ ಮಾಡಿದ ಕರಾರನ್ನು ಪರಿಗಣಿಸಿ ಯಾವ ರಾಷ್ಟ್ರವೂ ಯುದ್ಧವನ್ನು ಕೈಕೊಳ್ಳಲಾಗದು ಯುದ್ಧದ ಅನರ್ಥ ಪರಂಪರೆಗಳನ್ನು ತಡೆಯಬೇಕೆಂಬ ಮಹೋದ್ದೇಶದಿಂದ ಆ ಸಂಧಾನವನ್ನು ಮಾಡಿಕೊಂಡೆವು ಹಾಗಿರುವಾಗ ಇಂತಹ ಕಲಹಗಳನ್ನು ಶಾಂತ ರೀತಿಯಿಂದಲೇ ಪರಿಷ್ಕರಿಸುವುದು ಸಾಧ್ಯವಾಗಿದೆ ಅಮೆರಿಕಾವು ಶಾಂತಿಗಾಗಿಯೇ ಸಾಧಿಸುತ್ತಿದೆ” ಎಂದರು ಸೀನಿಯರ್ ಮುಸೋಲಿನಿಯವರೊಡನೆ ಅಮೆರಿಕಾವೂ ಹೀಗೆ ಕೇಳಿಕೊಂಡಿರುವುದರಿಂದ, ಅಮೆರಿಕಾವು ಕೂಡಾ ಇಟೆಲಿಗೆ ವಿರೋಧವಾಗಿಯೇ ಇದೆಯೆಂದು ಊಹಿಸಲು ಸಾಧ್ಯವಾಗಿದೆ

ಎಲ್ಲಾ ಜನಾಂಗಗಳೂ ತಮ್ಮ ಮೇಲೆ ಮುನಿದುಬಿದ್ದಿರುವುದನ್ನು ನೋಡಿ ಇಟೆಲಿಯವರಿಗೆ ಸಿಟ್ಟೇರಿದೆ “ಪೋಪ್ಯುಲೋ ಡಿ ರೋಮಾ” ಎಂಬ ಪತ್ರಿಕೆಯು ಸರ್ ಸಾಮುವೇಲರ ಭಾಷಣವನ್ನು ಕಠಿಣೋಕ್ತಿಗಳಿಂದ ಟೀಕಿಸಿ “ಈ ಕುತಂತ್ರಗಳೆಲ್ಲ ನಮಗೆ ಪೂರ್ಣ ತಿಳಿದಿದೆ ಬ್ರಿಟನು ತನ್ನ ಸ್ವಂತ ಉಪಾಯವನ್ನು ತಾನು ಮಾಡುತ್ತಿದೆ ಅವರ ಮನೆತನಗಳೇ ಉದ್ಧಾರವಾಗಬೇಕು ಎಂದು ಅವರ ಕಾನೂನು ಭೂಮಿ, ಬಡ್ಡಿ, [illegible], ವ್ಯಾಪಾರ, ಅಹಂಕಾರ ಹೊಟ್ಟೆಕಿಚ್ಚುಗಳೆಲ್ಲ ಅವರಿಗೇ ಇರಲೆಂದು ಅವರ ಆಶೆ” ಎಂದಿದೆ

---

### ೨೧ನೇ ಕನ್ನಡ ಸಾಹಿತ್ಯ ಸಮ್ಮೇಳನ

ಅಧ್ಯಕ್ಷರು – ಶ್ರೀಮಾನ್ ಎನ್. ಎಸ್. ಸುಬ್ಬರಾಯರವರು.

ಬರುವ ಡಿಸೆಂಬರ್ ತಿಂಗಳಲ್ಲಿ ಬೊಂಬಾಯಿ ಪಟ್ಟಣದಲ್ಲಿ ನಡೆಯಲಿರುವ ೨೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಬೇಕೆಂದು ಅಲ್ಲಿಯ ಸ್ವಾಗತ ಮಂಡಲಿಯೂ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯೂ ಬೇಡಿಕೊಂಡ ಮೇರೆಗೆ, ಮೈಸೂರು ಸಂಸ್ಥಾನದ ವಿದ್ಯಾ ಪ್ರಚಾರದ ಇಲಾಖೆಯ ಡೈರೆಕ್ಟರವರಾದ ಶ್ರೀಮಾನ್ ಎನ್ ಎಸ್ ಸುಬ್ಬರಾವ್, ಎಂ ಎ. (ಕ್ಯಾಂಟಬ್), ಬಾರ್-ಅಟ್-ಲಾ, ಅವರು ಅನುಗ್ರಹ ಮಾಡಿ ಒಪ್ಪಿರುತ್ತಾರೆ ಘನ ವಿದ್ವಾಂಸರೂ ವಿದ್ಯಾಸೇವಾದಕ್ಷರೂ ಆಗಿ, ಸಕಲ ಭಾರತದ ವಿದ್ವನ್ಮಂಡಲಿಯಲ್ಲಿ ಮನ್ನಣೆ ಪಡೆದಿರುವ ಈ ಮಹನೀಯರು ಮುಂದಿನ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವುದು ಎಲ್ಲ ಕರ್ನಾಟಕಕ್ಕೂ ಸಂತೋಷಪ್ರದವಾಗಿರುವುದು.

ಸಾಹಿತ್ಯ ಸಮ್ಮೇಳನದ ಜೊತೆಗೆ ಕಲಾಪ್ರದರ್ಶನ ಮೊದಲಾದ ಅನೇಕ ಆಕರ್ಷಕವಾದ ಉತ್ಸವಗಳನ್ನು ಏರ್ಪಡಿಸಬೇಕೆಂದು ಬೊಂಬಾಯಿ ಸ್ವಾಗತ ಮಂಡಲಿಯವರು ಪ್ರಯತ್ನಪಡುತ್ತಿದ್ದಾರೆ. ಎಲ್ಲ ಕನ್ನಡಿಗರೂ ಅಲ್ಲಿಗೆ ದಯಮಾಡಿ ಉತ್ಸವವನ್ನು ಯಶಸ್ವಿಯನ್ನಾಗಿಸಬೇಕೆಂದು ಪರಿಷತ್ತು ಬೇಡುತ್ತದೆ.

ಸಿ ಕೆ ವೆಂಕಟರಾಮಯ್ಯ,
ಗೌರವ ಕಾರ್ಯದರ್ಶಿ.

---


**Canara Bank Ltd , Kasaragod**
ಕೆನರಾ ಬ್ಯಾಂಕು ಲಿಮಿಟೆಡ್,
ಕಾಸರಗೋಡು.

### ನೋಟೀಸು

ತಾರೀಕು 6-9-1935ರಲ್ಲು ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಾದ ಹುಕುಂ ಪ್ರಕಾರ ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ಅಡವಿಟ್ಟ ಚಿನ್ನಾಭರಣಗಳನ್ನು ಇದೇ ಬರುವ ಅಕ್ಟೋಬರ ತಿಂಗಳ ತಾರೀಕು 4ನೇ ಶುಕ್ರವಾರ ದಿವಸ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಬ್ಯಾಂಕಿಗೆ ಬಹ ಐವೇಜು ಪಟಾ ಮಾಡಿ ಉಳಿಕೆ ಐವೇಜು ಸದ್ರಿ ಕೋರ್ಟಿಗೆ ರವಾನಿಸಲಾಗುವುದು

ಜಂಜ್ರಾ ನಂಬ್ರ 1 ಲೋನ್ ನಂಬ್ರ 160/33 ಹೆಸರು Vishnu Tantri S/o Vishnu Tantri Residing at Kikangodu Madkai Kanhangad Post ಐವೇಜು 1200

ಜಂಜ್ರಾ ನಂಬ್ರ 2 ಲೋನ್ ನಂಬ್ರ 2411/33 ಹೆಸರು Vishnu Tantri S/o Vishnu Tantri Residing at Kikangodu Madkai Kanhangad Post. ಐವೇಜು 300

Office of the Bank Kasaragod 11—9—1935 } **K. M Nayak,**


---


### ನೋಟೀಸು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ –

ಲೋಕಲ್ ಬೋರ್ಡುಗಳ ಪ್ರಾಥಮಿಕ ವೋಟರ ರಿಜಿಸ್ಟ್ರಿಯನ್ನು ಪ್ರಕಟಿಸಿದ ನಂತರ ದಾವೆಗಳನ್ನು ಮತ್ತು ಆಕ್ಷೇಪಗಳನ್ನು ತಾ 15-8 ೧೯೩೫ರ ತಾರೀಕು 30-8-೧೯೩೫ರ ವರೆಗೆ ಕೊಡಲು ಫೋರ್ಮ ನಂಬ್ರ 3 ಮತ್ತು 4ರ ಬದಲಿಗೆ ವೋಟರರ ಹೆಸರುಗಳ ಪಟ್ಟಿ ತಯಾರಿಸಿ ಪಟೇಲರ [illegible] ಕಳುಹಿಸಿರುತ್ತಾರೆ ಈ ಕ್ರಮವು ನಿಯಮಗಳಿಗೆ ವಿರುದ್ಧವಾದುದರಿಂದ ಸದ್ರಿ ಪಟ್ಟಿಗಳನ್ನು ಸಂಬಂಧಪಟ್ಟವರು ದಕ್ಷಿಣ ಕನ್ನಡ ಜಿಲ್ಲಾ ಇಲೆಕ್ಷನ್ ಆಫೀಸಿಗೆ ಬಂದು ವಾಪಾಸುಪಡಕೊಳ್ಳಬೇಕಾಗಿ ಈ ಮೂಲಕ ಅಪೇಕ್ಷಿಸಲಾಗಿಯದೆ ಅಂಥಾ ದಾವೆಗಳನ್ನು ಯಾ ಆಕ್ಷೇಪಗಳನ್ನು ನಮೂನೆ ಫೋರ್ಮ ನಂಬ್ರ 3 ಮತ್ತು 4ರಲ್ಲಿಯೇ ಕಳುಹಿಸತಕ್ಕದು ಈ ದಾವೆಗಳನ್ನು ಮತ್ತು ಆಕ್ಷೇಪಣೆಗಳನ್ನು ಯಾವ ತಾರೀಕಿನಿಂದ ಯಾವ ತಾರೀಕಿನೊಳಗೆ ಈ ಆಫೀಸಿಗೆ ತಲ್ಪಿಸಬೇಕೆಂದು ಹಿಂದಿನಿಂದ ಪ್ರಕಟಿಸಲಾಗಿತ್ತು, ಈ ಮೊದಲು ಪ್ರಕಟಿಸಲ್ಪಟ್ಟ ವೋಟರ ರಿಜಿಸ್ಟ್ರಿಗೆ ಸಂಬಂಧಪಟ್ಟ ವಿವಿಧ ತಾರೀಕುಗಳು ಈ ಮೂಲಕ ರದ್ದುಮಾಡಲ್ಪಟ್ಟಿವೆ ಡಿಸ್ಟ್ರಿಕ್ಟ್ ಬೋರ್ಡು ಸರ್ಕಲುಗಳನ್ನು ವಿಭಾಗಿಸುವ ವಿಷಯವಾಗಿ ಸರಕಾರದ ಅಪ್ಪಣೆಯು ಬಂದನಂತರ ಹೊಸ ತಾರೀಕುಗಳನ್ನು ಪ್ರಕಟಿಸಲಾದೀತು

ಈ ಮುಂಚೆ ತಾ 15—8—1935ರಿಂದ ತಾ 30-8-1935ರ ವರೆಗೆ ಫೋರ್ಮ 3 ಮತ್ತು 4ರಲ್ಲಿ ಕಳುಹಿಸಿದ ದಾವೆಗಳು ಮತ್ತು ಆಕ್ಷೇಪಣೆಗಳು ಕ್ರಮಪ್ರಕಾರ [illegible] ತೀರಿಸಲ್ಪಡುವವು

3. ಪ್ರತಿ ದಾವೆಯನ್ನು ಯಾ ಆಕ್ಷೇಪವನ್ನು [illegible]ಸತಕ್ಕದ್ದು

ಜಿಲ್ಲಾ ಇಲೆಕ್ಷನ್ ಆಫೀಸು, ಮಂಗಳೂರು, ತಾ 9-9-1935 | **B. Ganesh,** *District Election Office.*

## The Uplifting Banking Corporation, Ltd.
### Bombay
## ದಿ ಅಪ್‌ಲಿಫ್ಟಿಂಗ್ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,
### ಬೊಂಬಾಯಿ,

ಒಂದು ಸಲ ಮಾತ್ರ ರೂ. ೫ ತೆತ್ತಲ್ಲಿ—

1. ಮೆಂಬರನು ಏನಾಯಿತಲ್ಲದವನು
2. ವರುಷದೊಳಗೆ ಮದುವೆ ಮಾಡಿಕೊಂಡರೆ ಸಹಾಯ ಸಿಗುವುದು.
3. ಲಾಭಾಂಶ ಸಿಗುವ ಅನೇಕ ಸಂದರ್ಭಗಳಿವೆ.
4. ವ್ಯಾಪಾರ ಆಫೀಸಿಗೆ ಬೇಂದಿನ ಹಣ ಬಡ್ಡಿ ಸಮೇತ ವಾಪಸು ಸಿಗುವುದು

ಚೀಫ್ ಏಜಂಟ್ ಉಡುಪಿ ಡಾಕ್ಟರ ಕೆ. ಶಿವರಾಯರಿಂದ ಹಣ ಸಲ್ಯಾಪಿ ಪಡೆಯಬಹುದು.

ಸಬ್ ಏಜಂಟರು ಬೇಕು.

---

## ಸಪಟ ಲೋಶನ್

ಗಜಕರ್ಣ, ಹುಳುಕಡ್ಡಿ ನಾಯಟ್ಟಿ, ಇಸಬು ಮುಂತಾದ ಚರ್ಮ ರೋಗಗಳ ಮೇಲೆ ೨೪ ತಾಸಿನಲ್ಲಿ ಗುಣಮಾಡುವ ರಾಮಬಾಣ ಔಷಧಿ. ವಸ್ತ್ರಕ್ಕೆ ಕಲೆ ಬೀಳುವುದಿಲ್ಲ. ಬಾಟ್ಲಿ ಒಕ್ಕೆ ಕಿಮ್ಮತ್ತು ೦-೬-೦ ಟಪಾಲ್ ವೆಚ್ಚ ಪ್ರತ್ಯೇಕ. ಇಂಗ್ಲಿಷ್ ಯಾ ಮರಾಠಿಯಲ್ಲಿ ಬರೆಯಬೇಕು

Sapat & Company,(S M)
Kalbade 1 Road Bombay 2

---

# ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ.

## ವಿ-ಮೊ-ಲ
## VIM-O-LA
## ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂದಿ ನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಿಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೊಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

## "Vimola Depot"

*Manufactured by*

**American Herbal Products Co.,**
Sole representatives for above medicine.

## The National Kanara News Agency,
Sir Phirozsha Matha Road,
Fort Bombay.

---

## Shiromani Narayanacharya & Co.,
Silk Lace & Cloth Manufacturers
*Choukhamba Benares City*

THIS MAN
OUR CUSTOMER

ಕೃಷ್ಣರಾಯರು—ಸ್ವಾಮಿ ಆನಂದರಾಯರೆ, ನೀವು ನಿಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತಂದಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಸಂತೋಷಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ತೀರ್ಮಾನಿಸಿರುವೆನು

ಆನಂದರಾಯರು—ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು— ಅದರ ಕ್ರಯವೆಷ್ಟು?"

ಆನಂದರಾಯರು—ಎಲ್ಲಾ ಕಡೆಗಳಿಗಿಂತ ಕೇವಲಾ 25 ಕಡಿಮೆ ದರದಲ್ಲಿ ಸಿಕ್ಕಿತು ಅವರು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಮುಳ್ಳ ತಕ್ಕ ಮಾಲು ಹಿಂದಿನ ಬಣ್ಣ ರಂಗು ಮಾಸಲಾರದ ಸೀರೆಗಳು ಸಿಗುತ್ತವೆ 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಪಡಲು ಬುಟ್ಟಿ ಇರುವುದು 18 ಮೊಳ ಸೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪಡಲು ಸದ ಸೀರೆ 1ಕ್ಕೆ ರೂ 10ರಿಂದ 65ರ ವರೆಗೆ ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿದಾರಿನ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಸಲಮಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಜರಿ ಮಡಿ 1ಕ್ಕೆ ರೂ 10ರಿಂದ 35ರ ವರೆಗೆ 5 ಮೊಳದ ಪಟಾರ 1ಕ್ಕೆ ರೂ 4ರಿಂದ 16ರ ವರೆಗೆ 6 ಮೊಳದ ಪಟಾರ 1ಕ್ಕೆ ರೂ 6ರಿಂದ 35ರ ವರೆಗೆ ಬೇರೆಯೆಲ್ಲಾ ತರದ ಸ್ಯಾಂಪಲುಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ 1 ಕಾಶೀ ವಿಶ್ವೇಶ್ವರ ಪಟ ಶೀಟುಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಗಳಿಗೆ ಬರೆದು ತಿಳಿಯಿರಿ.

**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬನಾರಸ್**

---

## ಮುಂಬಯಿಯಲ್ಲಿ—
### —ಸ್ವದೇಶಾಭಿಮಾನಿಯ
ಬಿಡಿಸಂಚಿಕೆಗಳು ಸಿಗುವ ಸ್ಥಳ:

**The National Kanara News Agency,**
Sir Phirosha Metha Road,
Fort Bombay

9/8

---

## ೧೦೦ ರೂಪಾಯಿ ಬಹುಮಾನ
### (ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತದೆ ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ, ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ ಬೆಲೆ ರೂ. ೨ ಮಾತ್ರ,

01 P 8 Bengal Mesmarism House
5-7 Panchpota, Bengal (S B)

---

## New Era Technical School.
Near Market Square, Udipi

Commercial classes—approved by the Madras Government—New session opens in June

## ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲಾಗಿದೆ)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager


## ಮಂಗಳೂರಿನ ಪೇಟೆಧಾರಣೆ.

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ರಾಶಿ ಅಕ್ಕಿ | 3— 8 | 3— 14 |
| ಮುಷ್ಟಿ | 4— 0 | 4— 8 |
| ಗುಡ್ಡು | 3—12 | 4— 2 |
| ಊರ ಅಪ್ಸಲ್ ಬೆಳ್ತಿಗೆ | 4— 8 | 4—14 |
| ರಂಗೂನು ಬಿ. ಗೋ. ೧ಕ್ಕೆ | 6— 4 | 6— 14 |
| ಎಲ್ಲೂರು ಬಿ. ಮಣ ೧ಕ್ಕೆ | 4— 4 | 4— 8 |
| ಗೋಧಿ ಗೋಣಿ ೧ಕ್ಕೆ | 10— 0 | 12— 8 |
| ತೊಗರಿ ಗೋಣಿ ೧ಕ್ಕೆ | 10 —8 | 11— 0 |
| ಹುರುಳಿ ಗೋಣಿ ೧ಕ್ಕೆ | 7— 8 | 7 —10 |
| ಕಡಲೆ ಗೋಣಿ ೧ಕ್ಕೆ | 7 — 8 | 10— 8 |
| ತೊಗರಿಬೇಳೆ ಗೋಣಿ ೧ಕ್ಕೆ | 10— 0 | 17— 0 |
| ಉದ್ದು ಗೋಣಿ ೧ಕ್ಕೆ | 8— 0 | 8— 8 |
| ಹೆಸರು ಗೋಣಿ ೧ಕ್ಕೆ | 9— 4 | 9—12 |
| ಊರುಬೆಲ್ಲ ಖಂಡಿ ೧ಕ್ಕೆ | 40— 8 | 41— 8 |
| ಉಪ್ಪು ಗೋಣಿ ೧ಕ್ಕೆ | 4—12 | 5— 0 |
| ಕೊಬ್ರಿ ಖಂಡಿ ೧ಕ್ಕೆ | 48— 0 | 55— 0 |
| ಕೊಬ್ರಿ ಹುಡಿ ಖಂಡಿ ೧ಕ್ಕೆ | 23 — 8 | 24 — 0 |
| ಎಳ್ಳಿಂಡಿ ಖಂಡಿ ೧ಕ್ಕೆ | 30 — | 31 4 |
| ಕೊಬ್ರಿ ಎಣ್ಣೆ ಮಣ ೧ಕ್ಕೆ | 4—11 | 4— 15 |
| ಎಳ್ಳೆಣ್ಣೆ ಮಣ ೧ಕ್ಕೆ | 5— 2 | 6 — 6 |
| ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ | 5— 8 | 5—12 |
| ದೋಣಿನ ಸಕ್ಕರೆ ಮು. ೧ಕ್ಕೆ | 3—11 | 3—12 |
| ಮೆಣಸು | 8— 8 | 5— |
| ಸಾಸಿವೆ ಮುಡಿ ೧ಕ್ಕೆ | 5 —12 | 6— 0 |
| ಕಾಳುಮೆಣಸು ಖಂ. ೧ಕ್ಕೆ | 100— 0 | 110 0 |
| ಯೇಲಕ್ಕಿ ಬೀಜ ಮಣ೧ಕ್ಕೆ | 30— 0 | 32— 6 |
| ಗೇರುಬೀಜ ಮು. ೧ಕ್ಕೆ | 4—10 | 4 — 2 |
| ಕಬ್ಬಿಣ ಖಂಡಿ ೧ಕ್ಕೆ | 39— 0 | 39— 8 |
| ತಾಂಬ್ರತಗಡು ಮು ೧ಕ್ಕೆ | 9— 8 | 9— 8 |
| ತಾಂಬ್ರಪಾತ್ರೆಗಳು ಮು. ೧ಕ್ಕೆ | 11— 0 | 12— 0 |
| ಬೇಸಬೆಳ್ಳಿ ಸೇರು ೧ಕ್ಕೆ | 17— 0 | 18— 0 |
| ಹಿತ್ತಾಳೆ ತಗಡು ಮು. ೧ಕ್ಕೆ | 8— 12 | 9— 0 |
| ಪವನು ೧ಕ್ಕೆ | 22— 6 | 22— 8 |
| ಹುಣಸೆ ಹುಳಿ ಖಂಡಿ ೧ಕ್ಕೆ | 20— 0 | 25— 8 |
| ಸೇಲಮ್ ಕಾಫಿ ಖಂಡಿ ೧ಕ್ಕೆ | 100— 0 | 170— 0 |
| ಪ್ಲಾಂಟೇ ಕಾಫಿ ಖಂಡಿ ೧ಕ್ಕೆ | 210— 0 | 215— 0 |
| ಮಡಿಕೇರಿ ಏಲಕ್ಕಿ | 24— 0 | 25— 8 |
| ಸಕಲೇಶಪುರ ಏಲಕ್ಕಿ | 28— 0 | 30 — 0 |


LOOK SHARP! LOOK AHEAD
## Murdeshwar's Banking Institute.
Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

**Ladies are also admitted.**

Enrol yourself NOW. Classes are in full swing. Expert tuition (Oral or Postal) by well qualified and experienced Lecturers

FEES VERY MODERATE

*For further particulars apply to:—*

**D. R. Murdeshwar,**
Dip Econ; F. R. Econ; S. (Lond.)
Principal
Ganapathy High School Street,
Mangalore.

---

## ಬೇಕಾಗಿದ್ದಾರೆ

ನಮ್ಮ ಕಂಪೆನಿಗೆ ಕನ್ನಡನಾಡಿನಲ್ಲಿ ಏಜಂಟರುಗಳು ಬೇಕಾಗಿರುವರು. ಅವರಿಗೆ ಕನ್ನಡ ಮತ್ತು ಇಂಗ್ಲಿಷ್‌ಗಳ ಪರಿಚಯವಿರಬೇಕು. ವ್ಯಾಪಾರದಲ್ಲಿ ಸರಿಯಾದ ಅನುಭವವೂ ಇರಬೇಕು. ಪ್ರಾಯ ಇಪ್ಪತ್ತು ವರ್ಷಗಳಿಂದ ಕಡಿಮೆ ಇರಕೂಡದು. ಅಂಥವರಿಗೆ ಕಡಿಮೆಯಲ್ಲಿ ೧೦೦೦ ರೂಪಾಯಿಗಳ ನಮ್ಮ ಮಾಲನ್ನು ತಪ್ಪದೆ ವಿಕ್ರಯಿಸಬೇಕು ಯಾವಾಗ ಬೇಕಾದರೂ ಒಂದು ಸಾವಿರ ರೂಪಾಯಿಗಳ ಮಾಲನ್ನು ಕೊಡುತ್ತೇವೆ ಎಷ್ಟು ಬೇಕಾಗುತ್ತದೋ ಅಷ್ಟನ್ನು ವಿಕ್ರಯಿಸಿ ಉಳಿದವುಗಳನ್ನು ಹಿಂದೆ ಕೊಟ್ಟು ಬೇರೆಯವುಗಳನ್ನು ಪಡೆಯಬಹುದು ಏಜಂಟರಾಗುವವರು 1025 ರೂಗಳ ನಗದು ಡಿಪೋಸಿಟ್ ಕೊಡಬೇಕು ಆ ರಕಮಿಗೆ ನೇಕಡಾ ೬ರಂತೆ ಬಡ್ಡಿಯನ್ನು ಕಂಪೆನಿಯು ಕೊಡುವುದು ಏಜಂಟರಾಗುವವರಿಗೆ ರೂ. 50 ಸಂಬಳ 20 ರೂಪಾಯಿ ಖರ್ಚು ಹೆಚ್ಚು ಮಾಲು ವಿಕ್ರಯಿಸಿದರೆ ತಕ್ಕ ಬೋನಸ್ ಕೊಡಲಾಗುವುದು ವ್ಯಾಪಾರವು ತಂಗಳಿಗೆ ಸಾವಿರ ರೂಪಾಯಿಗಳಿಗೆ ಕಡಿಮೆಯಾಗಲೀ ಬಾರದು. ಹೆಚ್ಚಿನ ವಿವರಗಳಿಗೆ—

**S. U. Narayanacharya & Co.,**
Embroidery Silk Manufacturers
Benares City

9/8


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಭಾದ್ರಪದ ಬ॥ ೯ ಶನಿವಾರದಿಂದ ಭಾದ್ರಪದ ಬ॥ ೧೦ ಶುಕ್ರವಾರದ ವರೇಗಿನ ಪಂಚಾಂಗ (ಗ್ರಹಣೀಯ ಕನ್ಯಾ ಸಿರ್ವಾಲ್)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೌರಮಾನ | ವಿಶೇಷ |
|---|---|---|---|---|---|---|---|
| 21 | ಶನಿ | ೯ | ೨೦ | ಆರ್ದ್ರಾ | ೯ | ೪ | ಶ್ರೀಕೃಷ್ಣ ಜನ್ಮಾಷ್ಟಮಿ |
| 22 | ರವಿ | ೧೦ | ೨೨ | ಪುನರ್ವಸೂ | ೧೪ | ೫ | |
| 23 | ಸೋಮ | ೧೧ | ೨೫ | ಪುಷ್ಯಾ | ೧೭ | ೬ | |
| 24 | ಭೌಮ | ೧೨ | ೨೯ | ಆಶ್ಲೇಷಾ | ೨೨ | ೭ | |
| 25 | ಬುಧ | ೧೩ | ೩೩ | ಮಘಾ | ೨೮ | ೮ | |
| 26 | ಗುರು | ೧೪ | ೩೮ | ಪುಬ್ಬಾ | ೩೫ | ೯ | |
| 27 | ಶುಕ್ರ | ೧೫ | ೪೩ | ಉತ್ತರಾ | ೪೨ | ೧೦ | |

## ಇಟೆಲಿಯು ಮುಂದರಿಯುತ್ತಿದೆ.

ಇಟಲಿ ಎಬಿಸೀನಿಯಾಗಳ ತಗಾದದ ತೀರ್ಮಾನಕ್ಕಾಗಿ ನೇಮಿಸಲ್ಪಟ್ಟ ಪಂಚಧುರೀಣ ಸಭೆಯು ಜಿನೀವಾದಲ್ಲಿ ಇದೇ ತಾ. ೧೫ರಲ್ಲಿ ಜರಗಿ, ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುವರು. ಅವರ ವರದಿಯು ಇದೇ ವಾರದಲ್ಲಿ ಪ್ರಕಟವಾಗಲಿರುವುದು. ಈ ವರದಿಯ ಸಲಹೆಗಳನ್ನು ತಿದ್ದುಪಡಿ ಹಾಕಿಕೊಳ್ಳಲು ಎಬಿಸೀನಿಯಾ ವಾಗಲೀ ಇಟಲಿಯಾಗಲೀ ಸಮ್ಮತಿಸದಿದ್ದರೆ ಪ್ರಮುಖರು ೧೫ರಂತೆ ದ್ವಿಪಕ್ಷಗಳೂ ಇನ್ನೂ ಮೂರು ತಿಂಗಳುಗಳ ವರೆಗೆ ಯುದ್ಧ ಮಾಡಬಾರದೆಂದು ತಡೆಯುವ ಅಧಿಕಾರವು ಜನಾಂಗಸಭೆಗಿರುತ್ತದೆ. ಎಬಿಸೀನಿಯವು ವರದಿಯನ್ನು ಸ್ವೀಕರಿಸಿ ಇಟೆಲಿಯು ಮಾತ್ರ ಯುದ್ಧಾತುರತೆಯನ್ನು ತೋರಿಸಿದರೆ ಪ್ರಮುಖರು ೧೬ ನ್ನು ಉಪಯೋಗಿಸಬೇಕಾಗುವುದು. ಎಬಿಸೀನಿಯಾವನ್ನು ಸಮಾಧಾನಗೊಳಿಸಿ ಅದಕ್ಕೆ ಕೆಲವು ರಿಯಾಯಿತಿಗಳನ್ನು ಇಟೆಲಿಗೆ ಬಿಟ್ಟುಕೊಟ್ಟು ಅದಕ್ಕೆ ಕೆಲವು ಸೌಕರ್ಯಗಳನ್ನು ಕೊಡುವ ಏರ್ಪಾಡು ಮಾಡಿದರೂ ಆಗಬಹುದೆಂದು ಯೋಚಿಸಲಾಗಿದೆ. ಹಾಗೂ ಎಬಿಸೀನಿಯಾಕ್ಕೆ ಸಾಮುದಾಯಿಕ ರಕ್ಷಣೆಯನ್ನು ಕೊಡುವುದು ಧರ್ಮವೆಂದು ಜನಾಂಗಸಭೆಯ ಸದಸ್ಯರ ಅಭಿಪ್ರಾಯವಾಗಿರುತ್ತದೆ.

ರಷ್ಯದ ವಿದೇಶೀಯ ಸಚಿವರಾದ ಲಿಟ್‌ವಿನೋಫರು ತಾ. ೧೪ರಲ್ಲಿ ಮಾತನಾಡುತ್ತಾ ಬ್ರಿಟನನ್ನು ಪ್ರಶಂಸಿಸಿ, ಹೋರರ ಭಾಷಣವನ್ನು ಕೊಂಡಾಡಿ ಇಟಲಿ ಎಬಿಸೀನಿಯಾ ಗಲಾಟೆಯು ಸಮಾಧಾನ ರೀತಿಯಿಂದ ಕೊನೆಗಾಣದಿದ್ದರೆ ಸೋವಿಯಟ್ ಸರಕಾರವು ಸರ್ವವಿಧದಿಂದಲೂ ಪ್ರಚಾರಮಾಡಿ ಸಾಮ್ರಾಜ್ಯವಾದಿಗಳ ಹಟವನ್ನು ಮುರಿಯುವಂತೆ ಪ್ರಯತ್ನ ಮಾಡುವುದೆಂದರು.

"ಸಾಮ್ರಾಜ್ಯನಿರ್ಮಾಣವನ್ನು ಯಾವ ದೃಷ್ಟಿಯಿಂದ ನೋಡಬೇಕೆಂದು ಸೋವಿಯಟ್ ಸರಕಾರವು ಮೊದಲೇ ನಿರ್ಧರಿಸಿರುತ್ತದೆ. ವಸಾಹತುಗಳನ್ನು ಕಟ್ಟುವುದನ್ನು ಸೋವಿಯಟ್ ಸದ್ಭಾವದಿಂದ ನೋಡುವುದಿಲ್ಲ. ನಮ್ಮ ಅಂತಿಮ ಒಪ್ಪಂದವು ಹಲವು ಸಲ ಮುರಿಯಲ್ಪಟ್ಟಿದೆ. ಇನ್ನು ಹೊಸತಾಗಿ ಅಂತಹ ಯತ್ನವು ನಡೆಯುವುದನ್ನು ಕಂಡು ಸುಮ್ಮಗಿರಬಾರದು. ಸೋವಿಯಟ್ ರಾಷ್ಟ್ರವು ಒಪ್ಪಂದವನ್ನು ಏಕಾಂತತೆಯಿಂದ ಎತ್ತಿಹಿಡಿಯುವುದು. ಇದೇ ವಿಷಯವನ್ನು ನಾವೆಲ್ಲರೂ ಒಂದೇ ಮಾತಿನಿಂದ ತೀರ್ಮಾನಿಸಿ, ಸಮ್ಮನ್ನುಲ್ಲಂಘಿಸಲು ಸಿದ್ಧರಿರುವವರನ್ನು ಪ್ರತಿಬಂಧಿಸಲು ನಿರ್ಣಯಿಸಿದರೆ ನಮ್ಮ ಸಭೆಯು ಅದ್ಭುತ ಕೆಲಸವನ್ನು ಮಾಡಿದಂತೆಯೇ ಆಗುವುದು.

ಪೋರ್ಚುಗಲ್ ದೇಶದ ಪರವಾಗಿ ಸೀನಿಯರ್ ಮೊಂಟೀರೋರವರು ಭಾಷಣಮಾಡುತ್ತಾ, ತನ್ನ ದೇಶವು ಕೊನೆಯವರೆಗೆ ಒಪ್ಪಂದಕ್ಕೆ ನಿಷ್ಠವಾಗಿಯೇ ಇದೆಯೆಂದೂ ಯಾವ ಸಂದರ್ಭದಲ್ಲೂ ಅದು ಅದರ ಶರ್ತಗಳಿಗೆ ವಿರೋಧವಾಗಿ ನಡೆಯದೆಂದೂ ತಿಳಿಸಿದರು.

ಯುಗೋಸ್ಲೇವಿಯಾದ ಪೌರಿಟಿಚರವರು ಲಿಟ್ಲ್ ಎಂಟೇಂಟ್ ರಾಷ್ಟ್ರದ ಪರವಾಗಿ ಮಾತನಾಡಿ ಶಾಂತಿ ಕೊನೆವರೆಗೆ ತಲೆಬಗ್ಗಿಸುವುದು ಉಚಿತವೆಂದರು.

ಕೆನಡಾ ನ್ಯೂಜಿಲೆಂಡ್‌ಗಳ ಪ್ರತಿನಿಧಿಗಳೂ ಜನಾಂಗಸಭೆಯ ತೀರ್ಮಾನಗಳಿಗೆ ಒಪ್ಪುವೆವೆಂದರು. ಈ ವಿಷಯವು ಶಾಂತರೀತಿಯಿಂದ ಅಂತ್ಯಗೊಳ್ಳುವುದಿಲ್ಲವಾದರೆ ಕೆನಡಾವು ಜನಾಂಗಸಭೆಯೊಡನೆ ಸೇರಿ ಸಾಮುದಾಯಿಕ ಶಾಂತಿರಕ್ಷಣೆಯ ಏರ್ಪಾಡು ಮಾಡಲಿರುವುದು ಎಂದು ತಿಳಿಸಿದರು.

ಅಫಘಾನ್ ಪ್ರತಿನಿಧಿಗಳಾದ ಮಿ. ಓಮರ್ ಖಾನ್‌ರವರು ಅಫಘಾನಿಸ್ಥಾನದ ಪುನರ್ರಚನಾ ವಿಷಯವನ್ನು ಸಭೆಯ ಮುಂದಿಟ್ಟು ತಮಗೆ ಲೀಗ್ ಒಫ್ ನೇಶನ್ಸ್ ಸಭೆಯಲ್ಲಿ ಪೂರ್ಣ ಭರವಸೆಯಿದೆಯೆಂದು ತಿಳಿಸಿ, ಇಟಲಿ ಎಬಿಸೀನಿಯಾಗಳೊಳಗಿರುವ ಈ ಕಲ್ಲೋಲವನ್ನು ನ್ಯಾಯನೀತಿಯಿಂದ ತೀರ್ಮಾನಿಸಬೇಕೆಂದು ಕೇಳಿಕೊಂಡರು.

ಈ ರಾಷ್ಟ್ರಗಳೆಲ್ಲ ತಮ್ಮ ಸಹಕಾರವನ್ನು ಜನಾಂಗಸಭೆಗೆ ಕೊಟ್ಟಿರುವುದರಿಂದ, ಇನ್ನು ಯಾವ ಭಯವೂ ಇಲ್ಲದಂತಾಗಿದೆ. ರಷ್ಯಾವು ಜನಾಂಗಸಭೆಯ ಬೆಂಬಲವಾಗಿ ನಿಂತಿರುವುದರಿಂದ ಜನಾಂಗಸಭೆಗೆ ಒಂದು ಜೀವದಾನವನ್ನೇ ಕೊಟ್ಟಂತಾಗಿದೆ.

ಹಿಟ್ಲರರು ಮೊನ್ನೆ ಜರ್ಮನಿಯಲ್ಲಿ ಭಾಷಣ ಮಾಡಿ "ಜರ್ಮನಿಯು ಈ ಅಂತಃಕಲಹಗಳಲ್ಲಿ ಎಂದೂ ಸೇರದು. ಅದಕ್ಕೆ ಅದರ ಅಂತರಿಕ್ಷ ಶಿಸ್ತಾಪನೆಯ ಕೆಲಸವಿದೆ. ಯೂರೋಪಿನ ಪರಿಸ್ಥಿತಿಯ ಸುಧಾರಣೆಯನ್ನು ಮಾಡುವಷ್ಟು ಸಾಮರ್ಥ್ಯವು ಜರ್ಮನಿಗಿಲ್ಲ. ಅದಕ್ಕೆ ಅಷ್ಟು ಪ್ರತಿಭೆಯೂ ಇಲ್ಲ"ವೆಂದರು.

ರೋಮ್, ಸಪ್ಟೆಂಬರ, ೩೩. ೧೪.

೩೩. ೧೪ನೇ ದಿನ ರೋಮಿನಲ್ಲಿ ಮಂತ್ರಿಮಂಡಲವು ಸಭೆಸೇರಿತು. ಸೀನಿಯರ್ ಮುಸ್ಸೋಲಿನಿಯವರು ಅಧ್ಯಕ್ಷರಾಗಿದ್ದರು. ಜನಾಂಗ ಸಭೆಯಲ್ಲಾದ ನಿರ್ಣಯಗಳ ಮೇಲೆ ಟೀಕಾಟಿಪ್ಪಣಿಗಳು ನಡೆದುವು. ಕೊನೆಗೆ "ಇಟಲಿಯು ತನ್ನ ನಿರ್ಧಾರದಿಂದ ಎಂದೂ ಹಿಂದೆ ಸರಿಲಾರದು. ಎಬಿಸೀನಿಯಾದಲ್ಲೂ ಯುದ್ಧ ಸಿದ್ಧತೆಯಾಗುತ್ತಿದೆ. ನಾವೂ ಮುಂದೆ ಹೆಜ್ಜೆಯಿಡುವೆವು" ಎಂದು ತೀರ್ಮಾನಿಸಿದರು.

## ವಿ ನ ಂ ತಿ.

ದಿವಂಗತ ಖಾನ್ ಬಹದ್ದೂರ್ ಹಾಜೀ ಅಬ್ದುಲ್ಲಾ ಹಾಜೀ ಕಾಸಿಂ ಸಾಹೇಬ್ ಬಹದ್ದೂರ್, ಉಡುಪಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಲವು ಸಾರ್ವಜನಿಕ ಸಂಸ್ಥೆಗಳಲ್ಲಿ ನಮ್ಮ ಪ್ರತಿನಿಧಿಗಳಾಗಿದ್ದು ತನ್ನ ತನುಮನಧನಗಳಿಂದ ಮಾಡಿರುವ ಉತ್ಕೃಷ್ಟ ಜನತಾಸೇವೆಯು ಜನಜನಿತವಾಗಿರುವುದು. ಅಲ್ಲದೆ ಇತ್ತೀಚೆಗೆ ನಮ್ಮ ಜಿಲ್ಲೆಯ ಪತ್ರಿಕೆಗಳೆಲ್ಲ ಅವುಗಳನ್ನೆತ್ತಿ ಅಗ್ರಲೇಖನಾದಿ ಪ್ರಶಂಸಾತ್ಮಕವಾದ ಬರಹಗಳಿಂದ ವಾಚಕರ ದೃಷ್ಟಿಯನ್ನು ಆ ಕಡೆಗೆ ಸೆಳೆದಿರುವುದರಿಂದ ಸಾವಿರಲ್ಲಿ ಅವನ್ನೇ ಕುರಿತು ವಿಶದವಾಗಿ ಹೇಳಬೇಕಾಗಿಲ್ಲ. "ಸಾಹೇಬರು" ನಮ್ಮ ಪ್ರತಿನಿಧಿಗಳಾಗಿ ಜನತೆಗೆಷ್ಟು ಉಪಕಾರವನ್ನು ಮಾಡಿರುವರೋ, ಅದಕ್ಕಿಂತಲೂ ಮಿಗಿಲಾಗಿ ತನ್ನ ವೈಯಕ್ತಿಕ ದಾನ–ಧರ್ಮಗಳಿಂದಲೂ ಪ್ರೋತ್ಸಾಹ–ಪೋಷಕಭಾವದಿಂದಲೂ, ತನುಮನ ಸೇವೆಯಿಂದಲೂ ತ್ಯಾಗಶೂರರೆನ್ನಿಸಿಕೊಂಡು ತನ್ನ ಸರ್ವಸ್ವವನ್ನೂ ಜನತಾಸೇವೆಗರ್ಪಿಸಿರುವರು. ನಮ್ಮ ಜಿಲ್ಲೆಯಲ್ಲಿ 'ಸಾಹೇಬ'ರಂತೆ ಬಡವರ ಬಂಧುವಾಗಿ, ಸತ್ಪಾತ್ರದಾನಿಯಾಗಿ, ಸರ್ವಮತ ಸಹಿಷ್ಣುವಾಗಿ, ದಯಾರ್ದ್ರ ಹೃದಯಿಯಾಗಿ, ಸಗರ್ವಿಯಾಗಿ ವಿದ್ಯಾಕಲಾಭಿಮಾನಿಯಾಗಿ, ದೇಶಹಿತೈಷಿಯಾಗಿ, ಸಕಲ ಜನ ಸುಪ್ರೀತರಾಗಿ, ಸನ್ಮಾನಿತರಾಗಿ ಸದ್ದಿಲ್ಲದೆ ಅವುಗಳ ಬಗ್ಗೆನೆಲ್ಲ ಕಾರ್ಯತಃ ತೋರಿದವರು ಒಕ್ಕಲೆದೆಳು ಮಂಡಿಯುವಷ್ಟು ದೊರೆಯರೆಂದರೆ ಅತಿಶಯೋಕ್ತಿಯಾಗದು. ಅಂತಹ ಮಹನೀಯರ ನೆನಪು ಶಾಶ್ವತವಾಗಿ ಉಳಿದು ನಮಗೂ ಭಾವೀಜನತೆಗೂ ಸತ್ಕಾರ್ಯಸ್ಫೂರ್ತಿದಾಯಕವಾಗುವಂತೆ ಯೋಗ್ಯ ಸ್ಮಾರಕವೊಂದನ್ನು ಶಿಲಾನಿರ್ಮಿತವಾದ ಅವರ ಉತ್ತಮಾಂಗದ (Marble Bust) ಸ್ಥಾಪನೆಯ–ಅವರ ಜನ್ಮಕ್ಷೇತ್ರವಾದ ಉಡುಪಿಯಲ್ಲಿ ಸಂಸ್ಥಾಪಿಸಬೇಕೆಂದು ಉಡುಪಿಯ ಪುರನಿವಾಸಿಗಳು ಒಮ್ಮತದಿಂದ ನಿರ್ಣಯಿಸಿ ಈ ಕಾರ್ಯವನ್ನು ನೆರವೇರಿಸುವರೆ ಪ್ರಬಲವಾದ ಸಮಿತಿಯೊಂದನ್ನು ಏರ್ಪಡಿಸಿರುತ್ತಾರೆ. ಸಾಹೇಬರ ಹೆಸರನ್ನು ಮಾಸಿಸದ ವ್ಯಕ್ತಿಯ... ಅವರ ಮಿತ್ರರು, ಅಭಿಮಾನಿಗಳು, ಅವರ ಸದ್ಗುಣಸತ್ಕಾರ್ಯಗಳಿಗೆ ಮನಸೋತವರು. ಅವರಿಂದ ಉಪಕೃತರಾದವರು ಹೀಗೆ ಯಾವುದಾದರೊಂದು ವಿಧದಿಂದಾಗಿ ಅವರನ್ನು ಗೌರವಿಸುವವರು ನಮ್ಮ ಜಿಲ್ಲೆಯಲ್ಲಿಯೂ, ಹೊರಗೂ ಎಷ್ಟೋ ಇದ್ದಾರೆ. 'ಸಾಹೇಬರ' ಹೆಸರಿಗೆ ಸಲ್ಲಬೇಕಾದ ಗೌರವದ ಕಾಣಿಕೆಯನ್ನು ಕೊಡದ ಗೃಹಿಣಿ ಮುಸ್ಲಿಮರೂ ತವರಗೊಳ್ಳುವ ಹೃದಯಗಳು ಅಸಂಖ್ಯಾತವಿವೆ. ಅಂತಹರೆಲ್ಲರಲ್ಲಿ ನಮ್ಮ ಅಗ್ರಹಪೂರ್ವಕ ವಿನಂತಿಯೇನೆಂದರೆ:– 'ಸಾಹೇಬರು' ಬಡವರೆನ್ನದೆ ಶ್ರೀಮಂತರೆನ್ನದೆ ಸ್ವಜಾತಿಯೆನ್ನದೆ, ಪರಜಾತಿಯೆನ್ನದೆ, ಸರ್ವರ ಸೇವೆಗೂ ಸದಾ ಸರ್ವರ ಪ್ರೀತಿ ಮನ್ನಣೆಗಳಿಗೆ ಪಾತ್ರರಾಗಿದ್ದುದರಿಂದ ಅವರ ಸ್ಮಾರಕವು ಸರ್ವರ ಸಹಾಯದಿಂದ ನೆರವೇರಬೇಕು. ಆ ಹೆಸರಿಗೆ ಮನ್ನಣೆಯನ್ನು ಕೊಡುತ್ತಿದ್ದವರೆಲ್ಲರಿಂದಲೂ ಗೌರವಸೂಚಕವಾದ ಕಾಣಿಕೆಯು ಅದಷ್ಟೇ ಇರಲಿ– ಆ ಸ್ಮಾರಕಕ್ಕೆ ದೊರೆಯಬೇಕು. ಅದು ಸಾಹೇಬರ ಹೆಸರಿನಿಂದ ಅಸಂಖ್ಯಾತ ಜನರ ಸ್ವಯಂಪ್ರೇರಿತವಾದ ಕಾಣಿಕೆಯ ಕಪ್ಪದಿಂದ ನಿರ್ಮಾಣವಾದ ಸ್ಮಾರಕವೆಂದಾಗಬೇಕು. ಹಾಗಾದರೆ ಮಾತ್ರ ನಾವು ಅವರ ಹೆಸರಿಗೆ ಸಲ್ಲತಕ್ಕ ಸನ್ಮಾನವನ್ನು ಯೋಗ್ಯ ರೀತಿಯಿಂದ ಒಪ್ಪಿಸಿದಂತಾಗುವುದು. ಆದುದರಿಂದ ತಾವೆಲ್ಲರೂ ಈ ಕಾರ್ಯದಲ್ಲಿ ಭಾಗಿಗಳಾಗುವಂತೆ ತಮ್ಮ ಶಕ್ತ್ಯನುಸಾರ ದ್ರವ್ಯ ಸಹಾಯವನ್ನು ಸ್ಮಾರಕ ಸಂಘದ ಕಾರ್ಯದರ್ಶಿಯಾದ ನನ್ನ ವಿಳಾಸಕ್ಕಾಗಲೀ, ದಿ ಕೆನರಾ ಬ್ಯಾಂಕಿಂಗ್ ಕೋಅಪರೇಶನ್ ಲಿಮಿಟೆಡ್, ಉಡುಪಿ ಇದರ ಎಲ್ಲಾ ಶಾಖೆಗಳಲ್ಲಿಯೂ ಈ ಬಗ್ಗೆ ತೆರೆದಿರುವ ಲೆಕ್ಕಗಳಿಗೇ ಕಳುಹಿಸಿಕೊಟ್ಟು ನಿಶ್ಚೈಸಿದ ಕಾರ್ಯವು 'ಸಾಹೇಬರ' ಹೆಸರಿಗೆ ತಕ್ಕಂತೆ ಯಶಸ್ವಿಯಾಗಿ ಪೂರೈಸುವ ಹಾಗೆ ನೆರವಾಗಬೇಕಾಗಿ ಸಮಿತಿಯ ಪರವಾಗಿ ನನ್ನ ಸವಿನಯ ಹಾಗೂ ಅಗ್ರಹಪೂರ್ವಕವಾದ ವಿನಂತಿ.

**ಎಂ. ವಿಠಲ್ ಕಾಮತ್,**
ಬಿ.ಎ.ಬಿ.ಎಲ್. ವಕೀಲ್, ಉಡುಪಿ.

ಈ ಮನವಿಗೆ ಯೋಗ್ಯ ಪುರಸ್ಕಾರವು ದೊರೆಯಲೆಂದು ಹಾರೈಸುವೆವು–ಸಂ. ಸ್ವ.

## ಸಕಲೇಶಪುರ.

### ಪ್ರಥಮ ಸಚಿವರ ಆಗಮನ

ಇದೇ ತಿಂಗಳ ೩೭ ೧ ನೇ ಬುಧವಾರ ದಿವಸ ಮೈಸೂರು ಪ್ರಥಮ ದಿವಾನ್ ಬಹದ್ದೂರ್ ಕೆ ಮ್ಯಾಥನ್ ಬಿ. ಎ. ಅವರು ೯-೩೦ ಘಂಟೆಗೆ ಸಕಲೇಶಪುರಕ್ಕೆ ದಯಮಾಡಿಸಿದ್ದರು. ಮುನಿಸಿಪಲ್ ಕೌನ್ಸಿಲರುಗಳು ಬಿ. ಬಿ ಯಲ್ಲಿ ಅವರನ್ನು ಎದುರುಗೊಂಡು ಕೊಸ್ಮೊಪಾಲಿಟನ್ ಕ್ಲಬ್ಬಿನಲ್ಲಿ ಮುನಿಸಿಪಾಲ್ ಕೌನ್ಸಿಲರು ಏರ್ಪಡಿಸಿದ ಟೀ ಪಾರ್ಟಿಗೆ ಬಿಜಯಂಗೈದರು. ಅಲ್ಲಿಂದ ೧೦ ಘಂಟೆಗೆ ಕಾಡುಮನೆಗೆ ಹೋಗಿ, ಅಲ್ಲಿಯ ಟೀ ಕಾರ್ಖಾನೆ ವಗೈರೆ ಸಂದರ್ಶಿಸಿ, ೧೨ ೩೦ಕ್ಕೆ ಆಂಗ್ಲೇಯರು ಮಂಜರಬಾದು ಕ್ಲಬ್ಬಿನಲ್ಲಿ ಏರ್ಪಡಿಸಿದ ಊಟಕ್ಕೆ ದಯಮಾಡಿಸಿದರು. ಊರೆಲ್ಲಾ ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಇಲ್ಲಿಯ ಪ್ರಸಿದ್ಧ ವರ್ತಕರೂ ಮತ್ತು ಕಾಫಿ ಪ್ಲಾಂಟರ್‌ಗಳೂ ಆದ ಷಾಪ್ ಸಿದ್ದೇಗೌಡರವರು ಸುಮಾರು ೧೫ ಸಾವಿರ ರೂಪಾಯಿ ಖರ್ಚುಮಾಡಿ ಅವರ ತಂದೆಯವರ ಸ್ಮಾರಕಾರ್ಥವಾಗಿ ಪ್ರಾಥಮಿಕ ಪಾಠಶಾಲೆಯನ್ನು ಕಟ್ಟಿಸಿರುವರು. ಘಂಟೆ ೨-೩೦ಕ್ಕೆ ಪ್ರಥಮ ಸಚಿವರು ಬಂದು ಅದನ್ನು ತೆರೆದರು. ಮತ್ತು ಷಾಪ್ ಸಿದ್ದೇಗೌಡರ ಉದಾರ ಮನಸ್ಸನ್ನು ಕೊಂಡಾಡಿದರು. ಆ ಮೇಲೆ ಗ್ರೂಪ್ ಫೋಟೋ ತೆಗೆಯಲಾಯಿತು. ಸುಮಾರು ಘಂಟೆ ೩ ೩೦ಕ್ಕೆ ಸಚಿವರು ಹಾಸನಕ್ಕೆ ದಯಮಾಡಿಸಿದರು.

ಹಿಂದು ವಾರದಿಂದೀಚೆಗೆ ಇಲ್ಲಿ ಸೋನೆ ಮಳೆಯು ಎಡೆಬಿಡದೆ ಬರುತ್ತಿದೆ.

## ಮೋಟಾರ್ ಬಸ್ಸೊಂದು ಎತ್ತಿನ ಗಾಡಿಗೆ ಡಿಕ್ಕಿಬಡೆಯಿತು!

ಟಿಂಡೋಜಾವನ್ ಎಂಬಲ್ಲಿ ಬಸ್ಸೊಂದು ಎತ್ತಿನ ಗಾಡಿಗೆ ಡಿಕ್ಕಿ ಹೊಡೆದುದರಿಂದಾಗಿ ಎತ್ತಿನ ಗಾಡಿಯು ನೆಲಕ್ಕುರುಳಿ ಗಾಡಿಯ ಒಳಗಿದ್ದ ಜನರೂ ಮಂದಿಗೆ ಗಾಯಗಳಾಗಿವೆ. ಅವರಲ್ಲಿ ನಾಲ್ಕು ಜನ ಹೆಂಗಸರೂ ಐದು ಮಕ್ಕಳೂ ಆಗಿದ್ದರು. ಎಲ್ಲರನ್ನೂ ಆಸ್ಪತ್ರೆಗೆ ಒಯ್ಯಲಾಯಿತು. ಬಸ್ಸಿನಲ್ಲಿದ್ದವರಾರಿಗೇನೂ ಅಪಾಯ ಸಂಭವಿಸಲಿಲ್ಲ.

## ಪೋಲೀಸ್ ಆಫೀಸರರ ಮೇಲೆ ಲಾಠಿಪ್ರಹಾರ!

ಟಿನಪ್ಪಿಂರಾಡಲ್ಲಿ ಮುಷ್ಕರ ಮಾಡಿದ ಆಕ್ರಮಣದವರೆಗೆ ೧೬ ಜನ ನ್ಯಾಯಸ್ಥಾನಕ್ಕೆ ಹೋಗಿದ್ದಾರೆ. ಆದರೆ ಅವರ ಪತ್ತೆಯಾಗಲಿಲ್ಲ. ದಸ್ತಗಿರಿ ಮಾಡಿದವರನ್ನು ಠಾಣಿನ ಮೇಲೆ ಬಿಟ್ಟಿದ್ದರೆಂದು ತಿಳಿದುಬಂದಿದೆ. ಪೋಲೀಸ ಆಫೀಸರರಾದ ವಿ ಡಬಿಂಗ್ಸ್ ಮತ್ತು ಗೇಲ್ ಎಂಬವರು ಪೋಲೀಸ್ ಜವಾನರೊಡನೆ ಅವರಿಂದ ಟಿನಪ್ಪರಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ೩೦ ಮಂದಿ ಜನರು ಕೈಗಳಲ್ಲಿ ಲಾಠಿಯನ್ನು ಹಿಡಿದುಕೊಂಡು ಪೋಲೀಸ್ ಆಫೀಸರರ ಮೇಲೆ ಬೀಳಲು ಪ್ರಯತ್ನಪಟ್ಟುದರಿಂದ ಲಾಠಿಯಿಂದ ಪೆಟ್ಟನ್ನು ತಿನ್ನಬೇಕಾಯಿತು. ಮಿ. ಗೇಲ್ ಎಂಬವರ ಮೈಯೆಲ್ಲ ರಕ್ತಪೂರಿತವಾಗಿದೆ. ಮಿ. ಡಬಿಂಗ್ಸರ ತಲೆಗೆ, ಇತರ ಪೋಲೀಸು ಜವಾನರಿಗೂ ತುಂಬಾ ಗಾಯಗಳಾಗಿವೆ. ಇವರನ್ನೆಲ್ಲಾ ಆಸ್ಪತ್ರೆಗೆ ಕೊಂಡುಹೋಗಿದ್ದಾರೆ.

## ಮುಸ್ಲಿಮರು ತಮ್ಮ ಬಂಧುಗಳನ್ನೆ ಕಾಡಿದರು!

### ಇಬ್ಬರ ಮರಣ! 8 ಮಂದಿಗೆ ಜಖಂ!

ಕಲ್ಲಿಕೋಟೆ, ಸಪ್ಟಂಬರ, ೧೩

ಅನಾರಡು ತಾಲೂಕಿನ ಕುಂದೊಟ್ಟು ಗ್ರಾಮದಲ್ಲಿ ಎರಡು ಮುಸ್ಲಿಂ ಪಂಗಡಗಳೊಳಗೆ ಕೋಲಾಹಲದ ಯುದ್ಧವಾಗಿ ಇಬ್ಬರು ಸತ್ತರೆಂದೂ, ಎಂಟು ಜನರನ್ನು ಆಸ್ಪತ್ರೆಗೆ ಒಯ್ದುದರಿಂದೂ ಸಮಾಚಾರವು ಬಂದಿದೆ.

ಜಮೀನಿಗಾಗಿ ನಡೆದ ಜಗಳವಿದು. ಗದ್ದೆಯಲ್ಲಿ ಬೆಳೆದ ಪೈರಿನ ಅಧೀನತೆಗಾಗಿ ಇತ್ತಂಡದವರಿಗೂ ವಾದಿಸಿ ಮಾತಿದ್ದು, ಜಗಳಕ್ಕಾರಂಭವಾಯಿತು. ಕೈಗೆ ಸಿಕ್ಕಿದ ಆಯುಧಗಳಿಂದ ಹೊಡೆದಾಡಿಕೊಂಡರು. ಪರಿಹಾರ ಮಾತ್ರ ಮೇಲೆ ಹೇಳಿದಂತಾಯಿತು. ಈ ವಾರ್ತೆಯನ್ನು ಪೋಲೀಸರು ಕೇಳಿ ಅಲ್ಲಿಗೆ ಧಾವಿಸಿಹೋಗಿರುವರು.

## ಡಾಕ್ಟರರನ್ನು ವಂಚಿಸಿದ ದಿಟ್ಟನು!

ಕಲ್ಕತ್ತಾ ಪೋಲೀಸರು ವಂಚಕನೋರ್ವನನ್ನು ದಸ್ತಗಿರಿ ಮಾಡಲು ಪ್ರಯತ್ನಿಸುತ್ತಿರುವರು. ಇಷ್ಟರ ವರೆಗೂ ಅವನ ಪತ್ತೆಯಾಗಲಿಲ್ಲ. ಕರುಣಾನಾದರೂ ಡಾಕ್ಟರನನ್ನು ಚಲೋ ರೀತಿಯಿಂದ ವಂಚಿಸಿ, ಅವನ ಬಹು ಅಮೂಲ್ಯವಾದ ಪುಸ್ತಕಗಳನ್ನು ಕದ್ದೊಯ್ದನು. ಡಾಕ್ಟರನು ಪೋಲೀಸರಿಗೆ ಕೊಟ್ಟ ಫಿರ್ಯಾದು ಈ ರೀತಿಯಲ್ಲಿತ್ತು:–

"ಕೆಲವು ದಿನಗಳ ಹಿಂದೆ ದವಾಖಾನೆಯಲ್ಲಿರುವ ನನ್ನ ಆಫೀಸಿಗೆ ಈ ತರುಣನು ಬಂದು ನನ್ನ ಪರಿಚಯದವನೆಂದೂ, ತನ್ನ ಹೆಂಡತಿಗೆ ಸೌಖ್ಯವಿಲ್ಲವಾದುದರಿಂದ ಡಾಕ್ಟರನನ್ನು ಕರೆದುಕೊಂಡುಹೋಗಲು ಬಂದಿರುವೆನೆಂದನು. ನಾನು ಅವನೊಡನೆ ಹೋಗಲೊಪ್ಪಲು ಒಂದು ಗಾಡಿಯನ್ನು ಬಾಡಿಗೆಗೆ ಪಡೆದು ನಾವಿಬ್ಬರೂ ಅತನ ಗೃಹಾಭಿಮುಖವಾಗಿ ತೆರಳಿದೆವು. ಅದರ ಮಾರ್ಗಮಧ್ಯದಲ್ಲಿ ಅತನು ಒಂದು ಅಂಗಡಿಯ ಬಳಿ ಗಾಡಿಯನ್ನು ನಿಲ್ಲಿಸಿ ತನ್ನ ಸೇವಕನಿಗೆ ಅಂಗಡಿಯ ಬೀಗದ ಕೈ ಕೊಟ್ಟುಬರುವೆ ನಾನು ಬೇಗ ಗಾಡಿಯಿಂದಿಳಿದನು. ಅದರೆ ಅಂಗಡಿಗೆ ಹೋಗುವ ಬದಲು ಅವನು ನನ್ನ ಆಫೀಸಿಗೆ ಹೋಗಿ, ನಾನು ಹೇಳಿದನೆಂದು ಕೆಲವು ಪುಸ್ತಕಗಳನ್ನು ಪಡೆಕೊಂಡು ಅವುಗಳೊಡನೆ ಪಲಾಯನಮಾಡಿದನು. ನಾನು ಬಹಳ ಹೊತ್ತು ಕಾದಿದ್ದರೂ ಅ ಅವನು ಬಾರದಿರಲು ನಾನು ಪುನಃ ನನ್ನ ಆಫೀಸಿಗೆ ಬಂದೆನು. ಆಗ ನನಗೆ ತಿಳಿಯಿತು – ಇದೆಲ್ಲವೂ ನನ್ನ ಪುಸ್ತಕಗಳನ್ನು ಕದ್ದೊಯ್ಯಲು ಮಾಡಿದ ಉಪಾಯ"ವೆಂದು.

## ದುಷ್ಟನು ಪ್ರಾಣತ್ಯಾಗ ಮಾಡಿಕೊಂಡನು.

ಫಿಲಡೆಲ್ಫಿಯಾ ಸಪ್ಟಂಬರ, ೯

ಟೋನಿಕಮ್ಯಾರಿನೋ ಎಂಬವನು ಅಮೇರಿಕದ ಪ್ರಖ್ಯಾತ ಕೊಲೆಗಡುಕನು. ಫಿಲಡೆಲ್ಫಿಯಾದ ಕೇಡಿಗಳಲ್ಲಿ ಪ್ರಥಮಸ್ಥಾನವನ್ನು ಹೊಂದಿದವನು. ಅವನು ಮೊನ್ನೆ ಜೈಲಿನಲ್ಲಿ ಕೊರಳಿಗೆ ನೇಣುಹಾಕಿ ಪ್ರಾಣತ್ಯಾಗಮಾಡಿದನು. ಇವನು ಇಬ್ಬರು ಕರುಣೆಯವರನ್ನು ಕೊಂದಿದ್ದನು. ಸರಕಾರದವರು ಎಷ್ಟು ಹುಡುಕಿದರೂ ಸಿಕ್ಕದೆ ಕಡೆಗೆ ಒಂದು ಸಿನೆಮಾ ಕಂಪೆನಿಯ ಒಳ ಸೇರಿದ ಜನಸಮೂಹದಲ್ಲಿ ಸಿಕ್ಕಿಬಿದ್ದನು. ದಸ್ತಗಿರಿ ಮಾಡಿ ಜೈಲಿಗೆ ಕೊಂಡುಹೋದರು. ರಾತ್ರಿಯಲ್ಲಿ ಕೊರಳಿಗೆ ನೇಣುಹಾಕಿ ಪ್ರಾಣವನ್ನು ತೆಗೆದುಕೊಂಡನು.

ಬೆಂಗಳೂರು ನಗರಕ್ಕೆ ದಸರದ ವೇಳೆ ಬರುವ ಅಭ್ಯಾಗತರ
ಅನುಕೂಲತೆಗಾಗಿ
ಪ್ರಸಿದ್ಧಿ ಹೊಂದಿದ
**ಶಾಸ್ತ್ರಿಗಳ ಹೋಟೇಲು ಮತ್ತು ರೆಸ್ಟೋರೆಂಟ್**
ಎಲ್ಲಾ ಸೌಕರ್ಯಗಳನ್ನು ಕೊಡುತ್ತದೆ
ಅವರ ಪ್ರತಿನಿಧಿಗಳು ರೈಲ್ವೇ ಸ್ಟೇಶನ್‌ಗಳಲ್ಲಿ ಕಾಯುವರು
ಇಚ್ಛಿಸುವ ಅತಿಥಿಗಳನ್ನು ಸ್ವಾಗತೀಕರಿಸುವರು.
ತಮ್ಮ ಭಾರೀ ಗಿರಾಕಿಗಳಿಂದ ಬರಲಿರುವ ಬೇಡಿಕೆಗಳ ದೃಷ್ಟ್ಯಾ ಅತ್ತ
ಹೋಗುವವರು ಹೊಟೇಲಿಗೆ ತಂತಿಬಡಬೇಕೆಂದು ಅಪೇಕ್ಷೆ.
ಇತರ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —
*The General Manager,*
SASTRY'S HOTEL & RESTAURANT,
Chickpet, Bangalore City.

# ಮೈಸೂರು ಜೀವವಿಮಾ ಕಂಪೆನಿ

## ಏಜಂಟರುಗಳ ಬಹುಮಾನ ವಿನಿಯೋಗ ಸಮಾರಂಭ.

ಬೆಂಗಳೂರು, ೩೧-೮-೩೫.

ಅಗೋಸ್ತು ತಾರೀಖು ೩೧ನೇ ಶನಿವಾರ ಸಂಧ್ಯಾಕಾಲ ಮೈಸೂರು ಜೀವವಿಮಾ ಕಂಪೆನಿಯವರು ನರಸಿಂಹರಾಜ ರಸ್ತೆಯಲ್ಲಿರುವ ಕಂಪೆನಿಯ ಭವನದಲ್ಲಿ ತಮ್ಮ ಏಜಂಟರುಗಳ ಬಹುಮಾನ ವಿನಿಯೋಗ ಸಮಾರಂಭವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ರಾಜಸಭಾಭೂಷಣ ದಿವಾನ್ ಬಹದೂರ್ ಸರ್. ಕೆ ಪಿ. ಪುಟ್ಟಣ್ಣ ಶೆಟ್ಟರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಯುತರುಗಳಾದ ಕೆ. ಆರ್ ಶ್ರೀನಿವಾಸ ಅಯ್ಯಂಗಾರ್, ಸಿ. ಹಯವದನ ರಾವ್, ವಿ. ವೆಂಕಟಪ್ಪ, ಎಂ ಸಿ. ಸೋಮಶೇಖರ ರಾವ್, ಹಾಂಪೂರ್ ಪಾಪಣ್ಣ, ಸಜ್ಜನ ರಾವ್, ವಿ ಎಂ ಬಸಪ್ಪ, ಸಿ ಸುಬ್ಬರಾಮ ಶೆಟ್ಟರು, ಬಿ ಕೆ ಗರುಡಾಚಾರ್ ಮೊದಲಾಗಿ ಅನೇಕ ಪುರ ಪ್ರಮುಖರು ಸಮಾರಂಭದಲ್ಲಿ ಭಾಗಿಗಳಾಗಿದ್ದರು

ಫೋಟೋ ಮತ್ತು ಫಲಹಾರದ ನಂತರ ಸಭೆಯು ಸೇರಿತು ಸರ್ ಕೆ ಪಿ ಪುಟ್ಟಣ್ಣ ಶೆಟ್ಟಿಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು ಶ್ರೀಮತಿ ಚನ್ನಮ್ಮನವರ ಮಧುರ ಗಾನವು ಸಭಾಸದರಿಗೆ ಹರ್ಷ ಉಂಟುಮಾಡಿತು ನಂತರ ಕಂಪೆನಿಯ ಪ್ರೋಮೈನ್ ರವರಾದ ಶ್ರೀಯುತ ವಿ ವೆಂಕಟಪ್ಪನವರು ದೇಶದ ನಾನಾ ಭಾಗಗಳಿಂದ ಕಂಪೆನಿಯ ಶ್ರೇಯಸ್ಸನ್ನು ಬಯಸಿ ಅನೇಕ ಮಹನೀಯರು ಕಳುಹಿಸಿದ ಸಂದೇಶಗಳನ್ನು ಓದಿದರು

ನಂತರ ಕಂಪೆನಿಯ ಜನರಲ್ ಮೆನೇಜರ್ ರಾದ ಶ್ರೀಯುತ ಜಿ ವಿ ದೊಡ್ಡವೀರಪ್ಪನವರು ತಮ್ಮ ಮುದ್ದಾದ ಶೈಲಿಯಲ್ಲಿ ಭಾಷಣ ಮಾಡಿದರು

ನಂತರ ಬಿ ಕೆ ಗರುಡಾಚಾರ್ಯರವರು ಕನ್ನಡದಲ್ಲಿ ಭಾಷಣ ಮಾಡುತ್ತಾ, ಕರ್ಣಾಟಕದಲ್ಲಿ ಹುಟ್ಟಿ ಬೆಳೆದ ಜೀವ ವಿಮಾ ಕಂಪೆನಿಗಳ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿದರು ಮೈಸೂರು ಜೀವ ವಿಮಾ ಕಂಪೆನಿಯವರು ಇಷ್ಟು ಅಲ್ಪ ಕಾಲದಲ್ಲಿ ೫ ಲಕ್ಷ ರೂಪಾಯಿಗಳಷ್ಟು ಕಾರ್ಯ ಮಾಡಿರುವುದನ್ನು ಕುರಿತು ಕಂಪೆನಿಯ ಆಡಳಿತ ನಿರ್ವಾಹಕರ ದಕ್ಷತೆಯನ್ನು ಕೊಂಡಾಡಿದರು. ಕಂಪೆನಿಯು ಅಭಿವೃದ್ಧಿ ಹೊಂದಿ ಮೈಸೂರಿಗೆ ಒಳ್ಳೆಯ ಹೆಸರನ್ನು ತರಲೆಂಬುದು ತಮ್ಮೆಲ್ಲರ ಆಶಯವೆಂದು ನುಡಿದರು

ನಂತರ ಸಿ ಹಯವದನರಾಯರು ಇಂಗ್ಲಿಷಿನಲ್ಲಿ ಭಾಷಣಮಾಡಿದರು

ನಂತರ ಅಧ್ಯಕ್ಷರು ಏಜಂಟರುಗಳಿಗೆ ಬಹುಮಾನಗಳನ್ನು ಕೊಟ್ಟರು ಬಹುಮಾನ ವಿನಿಯೋಗವಾದನಂತರ ಅಧ್ಯಕ್ಷರು ಭಾಷಣಮಾಡಿದರು

ನಂತರ ಶ್ರೀಯುತ ವಿ ವೆಂಕಟಪ್ಪನವರು ಅಧ್ಯಕ್ಷರಿಗೂ ಸಮಾರಂಭದಲ್ಲಿ ಭಾಗಿಗಳಾದ ಇತರ ಮಹನೀಯರಿಗೂ ವಂದನೆಗಳನ್ನರ್ಪಿಸಿದರು ಅನೇಕ ಭಾಷಣಗಾರರು ಆಶಿಸಿದಂತೆ ಆ ದಿನ ನಡೆದ ಜನರಲ್ ಮೀಟಿಂಗಿನಲ್ಲಿ ಕಂಪೆನಿಯ ಮೂಲಧನವನ್ನು ೩ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿರುವ ಅಂಶವನ್ನು ಸಭಿಕರಿಗೆ ತಿಳಿಯಪಡಿಸಿದರು ಹಾರತುರಾಯಿಗಳ ವಿನಿಯೋಗದಿಂದ ಸಭೆಯು ಮುಕ್ತಾಯವಾಯಿತು.

### ಶ್ರೀ! ದೊಡ್ಡ ವೀರಪ್ಪನವರ ಭಾಷಣ

ಪೂಜ್ಯ ಅಧ್ಯಕ್ಷರೇ, ಮಹಿಳೆಯರೇ ಮತ್ತು ಮಹನೀಯರೇ,

ಭರತಖಂಡದ ನಾನಾ ಮೂಲೆಗಳಲ್ಲೂ ನಾಡಿಗೆ ಆರ್ಥಿಕ ಸ್ವರಾಜ್ಯವನ್ನು ದೊರಕಿಸಬೇಕೆಂಬ ಸದುದ್ದೇಶದಿಂದ ಪ್ರಯತ್ನಗಳು ನಡೆಯುತ್ತಿರುವಾಗ ಅಂತಹ ಪ್ರಯತ್ನದಲ್ಲಿ ಮೈಸೂರೂ ಪಾಲುಗೊಳ್ಳಬೇಕೆಂಬ ಪವಿತ್ರ ಧ್ಯೇಯದಿಂದ "ಮೈಸೂರು ಇನ್ಶೂರೆನ್ಸ್ ಕಂಪೆನಿ"ಯು ಸ್ಥಾಪನೆಯಾಗಿದೆಯೆಂದು ಕಂಪೆನಿಯ ಆರಂಭ ಮಹೋತ್ಸವದಲ್ಲಿ ಹೇಳಿದುದನ್ನು ನಾವೆಲ್ಲರೂ ಈಗ ಜ್ಞಾಪಿಸಿಕೊಳ್ಳಬೇಕಾಗಿದೆ. ದೇಶದ ನಾನಾ ಮೂಲೆಗಳಿಂದ ಅನೇಕ ಪ್ರಸಿದ್ಧ ಪುರುಷರ ಶುಭಾಶೀರ್ವಾದಗಳಿಂದ ಮಂಗಳ ಮುಹೂರ್ತದಲ್ಲಿ ಕಂಪೆನಿಯು ಸುಮಾರು ಒಂದು ವರ್ಷದ ಕೆಳಗೆ ಆರಂಭವಾಯಿತು "ಮೈಸೂರಿನ ವಿಮಾ ಉದ್ಯಮದಲ್ಲಿ ಮೈಸೂರು ಇನ್ಶೂರೆನ್ಸ್ ಕಂಪೆನಿಯೇ "ಮೊಟ್ಟ ಮೊದಲನೆಯದೆಂದು" ಅತ್ಯಾದರದಿಂದ ಸ್ವಾಗತಿಸಿದವರು ಇಂದಿನ ನಮ್ಮ ಅಧ್ಯಕ್ಷರು ಮೈಸೂರಿನ ಮೊದಲ ನಾಗರಿಕರ ಪ್ರಥಮ ಪೌರರ ಸ್ಥಾನಕ್ಕೆ ಅರ್ಹರಾದ, ಇಂದಿನ ಮಾದರಿಯ ಮೈಸೂರಿನ ಸ್ಥಾಪನಾಚಾರ್ಯರಲ್ಲಿ ಒಬ್ಬರಾದ ನಾಳೆಯ ಮಹಾ ಮೈಸೂರಿನ ಅಭ್ಯುದಯಕ್ಕೆ ಅಡಿಗಲ್ಲಿಟ್ಟವರೂ, ಸಂಸ್ಥಾನದ ಇಂದಿನ ವೃದ್ಧಪಿತಾಮಹರೂ, ಮೈಸೂರಿಗಾಗಿ ದುಡಿದು, ಮೈಸೂರಿಗಾಗಿಯೇ ತಮ್ಮ ಎಲ್ಲವನ್ನೂ ಅರ್ಪಿಸಿದ ಪೂಜ್ಯರು ತಾವು ಅಂದು ಹಾಗೆ ಸ್ವಾಗತಿಸಿದ ಶಿಶುವು ಅಂಬೆಗಾಲಿಟ್ಟಾಗ ಅದನ್ನು ಹರಸಲು ಇಂದು ಬಂದಿರುವರು

ಪವಿತ್ರವಾದ ಮೈಸೂರಿನ ಹಣವು ಹೊರಗೆ ಹರಿದು ಹೋಗುತ್ತಿರುವುದನ್ನು ನಿಲ್ಲಿಸಿ ದೇಶದ ಆರ್ಥಿಕ ಶಕ್ತಿಯನ್ನು ಸಾಧಿಸಬಲ್ಲ ಮಹಾ ಸಂಸ್ಥೆಯೊಂದರ ಬಾಹ್ಯ ರೇಖೆಗಳ ಮಟ್ಟಿಗೆ ಕಂಪೆನಿಯು ಆರಂಭವಾದುದು ನಾವು ನೋಡಿದ್ದೇವು ಇಂದು ಆ ರೇಖೆಯ ಮೇಲೆ ಮಸಕಿನ ಚಿತ್ರವೊಂದು ಸ್ಪಷ್ಟವಾಗಿ ಕಾಣುತ್ತಿದೆ ಮೈಸೂರು ಇನ್ಶೂರೆನ್ಸ್ ಕಂಪೆನಿಯೆಂಬ ಮೈಸೂರಿನ [illegible] ಇನ್ನಂತಹ ಮ ಚಂಡ [illegible] ಜ್ಯೋತಿಯಾಗಿದೆ

ಇಂದು ಇಡೀ ಜಗತ್ತೇ ವಿಮಾ ಉದ್ಯೋಗದಲ್ಲಿ [illegible] ಎಲ್ಲಾ ಪ್ರಗತಿಪರ ರಾಷ್ಟ್ರಗಳೂ ವಿಮಾ ಉದ್ಯೋಗವನ್ನು ಬೆಳೆಸಿಕೊಳ್ಳದಿದ್ದರೆ ತಮ್ಮ ಉದ್ಧಾರವಾಗದೆಂದೂ ತಮಗೆ [illegible] ತಿಳಿದುಕೊಳ್ಳುತ್ತಿವೆ ವ್ಯಕ್ತಿಯ, ಕುಟುಂಬದ, ಸಮಾಜದ, ರಾಷ್ಟ್ರದ ಉನ್ನತಿಗೆ [illegible] ಅತ್ಯುಚ್ಚ ತರಗತಿಯ ಸಂಸ್ಥೆಯೆಂದರೆ ವಿಮಾಸಂಸ್ಥೆ ಈಶ್ವರನು ಜಗತ್ತನ್ನು ಸೃಷ್ಟಿಸಿದಾಗ ಹಸಿವು, ಬಾಯಾರಿಕೆಗಳನ್ನು ಸ್ವಾಭಾವಿಕ ಗುಣಗಳನ್ನಾಗಿ ಮಾಡಿಟ್ಟಂತೆ ಪ್ರತಿಯೊಬ್ಬನ [illegible] ದಲ್ಲಿಯೂ ಜೀವದ [illegible] ದರೂ ಕಡ್ಡಾಯವಾಗಿ [illegible] ಇರಲು ಒಂದು ಏರ್ಪಾಡನ್ನು ಮಾಡಿದ್ದರೆ ಅದರಿಂದ ಪ್ರತಿಯೊಬ್ಬನ, ಪ್ರತಿಯೊಂದು ಕುಟುಂಬದ [illegible], ಪ್ರತಿಯೊಂದು ರಾಷ್ಟ್ರದ ಸಮಗ್ರ ಮಾನವವರ್ಗದ ಸ್ಥಿತಿಗಳೇ ಬೇರೆಯಾಗುತ್ತಿದ್ದುವು ಎಲ್ಲರೂ ಎಲ್ಲ ರಾಷ್ಟ್ರಗಳೂ ಸರಿಸಮಾನದ ಆರ್ಥಿಕ ಬಲವನ್ನು ಹೊಂದಿರುತ್ತಿದ್ದುವೆಂದು ಹೇಳಬಹುದು ಆ ಬಗೆಯ ಸೃಷ್ಟಿಯನ್ನು [illegible] ಮಾಡಿದ್ದರೆ ಇಂದು ಎದ್ದು ಕಾಣುತ್ತಿರುವ ಅನೇಕ ಬಗೆಯ ದಾರಿದ್ರ್ಯ, ಆರ್ಥಿಕ ದುಸ್ಥಿ ಮೊದಲಾದ ಸಮಸ್ಯೆಗಳೇ ಇರುತ್ತಿರಲಿಲ್ಲ ಅಂತಹ ಸಮಸ್ಯೆಗಳನ್ನು ಬಿಡಿಸಲು ಸಮಾಜ ಪರಿಷ್ಕಾರಗಳು ಅದಕ್ಕಾಗಿ ಸಂಸ್ಥೆಗಳು ಆಗಬೇಕಾದ ಅವಕಾಶವೇ ಇರುತ್ತಿರಲಿಲ್ಲ. ಅಂತಹ ಸೃಷ್ಟಿಯು ಕೇವಲ ಕವಿಸಾಮ್ರಾಜ್ಯದ ಮಾತು. ಇದನ್ನು ಏತಕ್ಕಾಗಿ ಹೇಳಬೇಕಾಗಿ ಬಂದಿತೆಂದರೆ ಇಂದು ವಿಮಾ ಉದ್ಯೋಗವು ರಾಷ್ಟ್ರದ ಮಂಗಳಕ್ಕಾಗಿಯೂ, ದಾರಿದ್ರ್ಯವನ್ನು ಹೊರದೂಡಲೂ, ಆರ್ಥಿಕ ದುಃಖವನ್ನು ತೊಲಗಿಸಲೂ ಮುಖ್ಯ ಸಾಧನವಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ಇಂದು ವಿಮಾ ಸಂಸ್ಥೆಗಳಿಗೂ, ಬ್ಯಾಂಕುಗಳಿಗೂ ಈ ದೃಷ್ಟಿಯಿಂದ ಬಹಳ ವ್ಯತ್ಯಾಸಗಳಿವೆ ವಿಮಾ ಸಂಸ್ಥೆಗಳು ಬ್ಯಾಂಕ ಗಳಿಗಿಂತ ಭದ್ರವಾದುವು ಇದುವರೆಗೆ ನಿರ್ನಾಮವಾದ ಹಲವು ಬ್ಯಾಂಕುಗಳ ಹೆಸರುಗಳನ್ನು ನಾವು ಕೇಳಿಯೇ ಇದ್ದೇವೆ ವಿಮಾ ಕಂಪೆನಿಗಳು ಮುಚ್ಚಿಹೋಗಲು ಅವಕಾಶಗಳು ಕಡಿಮೆ. ಜೀವವಿಮಾ ಕಂಪೆನಿಗಳು ಭರತಖಂಡದಲ್ಲಿ ಮುಳುಗಿಯೇ ಹೋಗಿಲ್ಲವೆಂದು ಹೇಳಿದರೂ ಹೇಳಬಹುದು. ಅದು ಕಾರಣ ವಿಮಾಕಂಪೆನಿಗಳು ಬ್ಯಾಂಕುಗಳಿಗಿಂತ ಶ್ರೇಷ್ಠವಾದುವು. ಹಾಗೆಯೇ ಬ್ಯಾಂಕುಗಳಿಗಿಂತ ವಿಮಾ ಕಂಪೆನಿಗಳಿಂದ ಆಗುವ ಉಪಕಾರವು, ಪರಸ್ಪರ ಲಾಭವು ಬಹಳ ಹೆಚ್ಚಾದುದು. ಇನ್ನು ಹೆಚ್ಚಿಗೆ ವಿಮಾ ವಿಷಯವನ್ನು ಕುರಿತು ಹೇಳುವುದಿಲ್ಲ ಇಂದಿನ ಸಮಾರಂಭವು ಮುಖ್ಯವಾಗಿ ಏಜಂಟರುಗಳಿಗೆ ಸಂಬಂಧಿಸಿದುದು ಆದುದರಿಂದ ವಿಮಾ ಏಜಂಟರು ಮತ್ತು ಅವರ ಉದ್ಯೋಗ, ಈ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಹುದು

ವಿಮಾ ಉದ್ಯೋಗವು ಒಂದು ಆದರ್ಶವಾದ ಉದ್ಯೋಗ ಯಾವುದೇ ಆದರ್ಶ ಉದ್ಯೋಗವಾಗಲಿ, ಅದಕ್ಕೆ ಮುಖ್ಯವಾಗಿ ಎರಡು ವಿಶೇಷ ಗುಣಗಳಿರಬೇಕು, ಏನೆಂದರೆ, ಅದು ಉದಾತ್ತವೂ ಲಾಭದಾಯಕವೂ ಆಗಿರಬೇಕು ಈ ಎರಡು ಗುಣಗಳೂ ವಿಮಾ ಉದ್ಯೋಗದಲ್ಲಿ ಬಹಳ ಪ್ರಶಸ್ತವಾಗಿ ಎದ್ದು ಕಾಣುತ್ತವೆ ವಿಮಾ ಏಜಂಟರು ತಮ್ಮ ಉದ್ಯೋಗವನ್ನು ಸಾಂಗವಾಗಿ ಸಾಗಿಸುವುದರಿಂದ ಮಾನವವರ್ಗಕ್ಕೆ ಒಂದು ಸೇವೆಯನ್ನು ಸಲ್ಲಿಸಿದಂತಾಗುತ್ತವೆ, ಮಾತ್ರವಲ್ಲದೆ, ತಮಗೂ ತಮ್ಮ ಆಶ್ರಿತರಿಗೂ ಒಂದು ಬಗೆಯ ವರಮಾನವನ್ನು ಕಲ್ಪಿಸಿಕೊಂಡಂತೆಯೂ ಆಗುತ್ತದೆ ಭಾರತ ದೇಶವಂತೂ ಈಗ ದರಿದ್ರರ ದೇಶವಾಗಿದೆ ಆದುದರಿಂದ ಭಾರತೀಯನು ತನ್ನ ದೇಶಮಾತೆಗೆ ಮಾಡಬೇಕಾದ ಪ್ರಥಮ ಸೇವೆ, ಪರಮ ಕರ್ತವ್ಯ [illegible] ಈ ಬಡತನವನ್ನು ತಕ್ಕ [illegible] ಹೋಗಲಾಡಿಸುವುದೇ ಆಗಿದೆ ಈ ತರ ಉದ್ದೇಶ ಸಾಧನೆಗೆ ವಿಮಾ ಪ್ರಚಾರಕ್ಕಿಂತ ಬೇರೆ [illegible] ಉದ್ಯೋಗವೂ ಪ್ರಶಸ್ತವಾದದಲ್ಲ ಆದುದರಿಂದ ವಿಮಾ ಏಜಂಟರೆಲ್ಲರೂ ತಾವು ಕೈಗೊಂಡಿರುವ ಉದ್ಯೋಗವು ಅತ್ಯಂತ ಉದಾತ್ತವಾದುದೂ ವಿಶೇಷ ದೇಶ ಭಕ್ತಿಯ ಕೆಲಸವೂ ಎಂಬುದನ್ನು ಚೆನ್ನಾಗಿ [illegible] ತಿಳಿದುಕೊಳ್ಳಬೇಕು

ಅನಾಥಶಿಶು [illegible] ಕರ್ಮಿಗಳಿಗೆ ವಿದ್ಯಾದಾನ ಅನ್ನದಾನ ಮಾಡಿ [illegible] ಗಳಿಸಿ ಒಳ್ಳೆ ಪುಣ್ಯಶಾಲಿಯೇ ವಿಮಾಮಾಡಿಸುವ ಏಜಂಟನು ಅವನು ಉಚ್ಚ ತರಗತಿಯ ಸಮಾಜಸೇವಕನಾಗಿದ್ದಾನೆ ಅವನು ನಾಡಿನ ಸಂಪತ್ತನ್ನು ಬೆಳೆಸಬಲ್ಲ ದೇಶಸೇವಕನೂ ಅಹುದು ಆದುದರಿಂದಲೇ ವಿಮಾ ಉದ್ಯೋಗವು ಅತಿ ಪ್ರಶಸ್ತವಾದ, ಅತ್ಯಂತ ಶ್ಲಾಘನೀಯವಾದ ಸಮಾಜಸೇವೆಯಾಗಿದೆ

ಸಾಧಾರಣವಾಗಿ ನಮ್ಮ ದೇಶದ ತರುಣರು ಆರಿಸಬಯಸುವ ಸ್ವತಂತ್ರ ಉದ್ಯೋಗಗಳೆಂದರೆ ಇಂಜಿನಿಯರಿಂಗ್, ವೈದ್ಯವೃತ್ತಿ ಮತ್ತು ನ್ಯಾಯವೃತ್ತಿ ಆದರೆ ಈ ಮೂರು ಉದ್ಯೋಗಗಳಿಗೂ ದೀರ್ಘಕಾಲದ ವಿಶಿಷ್ಟ (technical) ಶಿಕ್ಷಣವು ಬೇಕಾಗುತ್ತದೆ ಆ ಶಿಕ್ಷಣಕ್ಕಾಗಿ ತರುಣರು ತಮಗೆ ಅತ್ಯಮೂಲ್ಯವಾದ ಕಾಲವನ್ನೂ ಶಕ್ತಿಯನ್ನೂ, ಹಣವನ್ನೂ ಧಾರಾಳವಾಗಿ ವೆಚ್ಚಮಾಡಬೇಕಾಗುತ್ತದೆ ಆದರೆ ವಿಮಾ ಉದ್ಯೋಗಕ್ಕೆ ಆ ಬಗೆಯ ಶಿಕ್ಷಣವು ಬೇಕಾಗಿಲ್ಲ ಈ ಉದ್ಯೋಗದ ಮಹತ್ವವನ್ನೂ, ರಹಸ್ಯವನ್ನೂ ಅರಿತುಕೊಂಡು, ಅದಕ್ಕಾಗಿಯೇ ಶ್ರದ್ಧೆಯಿಂದಲೂ, ಆಸಕ್ತಿಯಿಂದಲೂ ಕೆಲಸಮಾಡಲು ಸಿದ್ಧನಾಗಿರುವ ಸಾಧಾರಣ ವಿದ್ಯಾವಂತನಾರಿಗೇ ಆಗಲಿ, ವಿಮಾ ಉದ್ಯೋಗದಲ್ಲಿ ಬಹಳಮಟ್ಟಿಗೆ, ಬಹಳ ಬೇಗ, ವಿಜಯಶಾಲಿಯಾಗಲು ಅವಕಾಶವುಂಟು

ತಮ್ಮ ಆರ್ಜನೆಯಿಂದ ತಮಗೆ ಮಾತ್ರ ಲಾಭವನ್ನು ಗಳಿಸುವುದು ಮಾತ್ರವಲ್ಲದೆ, ತಾವು ಸಂಪಾದಿಸಿದ ಪ್ರತಿಯೊಂದು ರೂಪಾಯಿಗೂ ತಾವು ತಮ್ಮ ಜನಾಂಗದಲ್ಲಿ ಶಾಂತಿ ತೃಪ್ತಿ-ಸಮಾಧಾನಗಳ ಬೀಜಗಳನ್ನು ಬಿತ್ತಂತೆ ಆಗುತ್ತದೆ ಈ ಉದ್ಯೋಗದಲ್ಲಿ ಕೆಲಸಮಾಡಲು ಮೊದಲು ಮಾಡಿದ ಮೇಲೆ, ತಮಗೆ ಎಷ್ಟು

## ಗಾಯಗಳು ಮತ್ತು ವ್ರಣಗಳು

ಇಂದ್ರಜಾಲದಂತೆ ಗುಣಹೊಂದುತ್ತವೆ:

ಸಸ್ಯಜನ್ಯ ಲೇಪನವಾದ

ಸಾಂಬಕನ್ನುಪಯೋಗಿಸಿರಿ.

ರಕ್ತವು ವಿಷಮಯವಾದರೆ ಸಣ್ಣ ಅಡಿಕವೂ ವ್ರಣವೂ ಹುಟ್ಟಿ ಗಾಯವೂ ಭಯ ಹುಟ್ಟಿಸುತ್ತವೆ ನಿಮ್ಮ ಗಾಯಗಳೆಲ್ಲ ಸಾಂಬಕನ್ನೇ ಲೇಪಿಸಲು ನಿರ್ಧರಿಸಿರಿ! ಈ ಅತ್ಯದ್ಭುತ ರೋಗನಾಶಕ ಔಷಧಿಯು [illegible] ನೋವನ್ನು ಗುಣದಿಂದಲೇ ಗುಣಗೊಳಿಸುವುದರಿಂದ ಕಳೆಗಳುಂಟು: ಔಷಧಗಳ ಅಂಗಡಿ

ಕ್ರಯ ರೂ. 1

ಪ್ರಾಣಿಜನ್ಯ

ಫಾ Z

[illegible] ಸಾಗಿ [illegible] ಉದ್ಯೋಗಿಗಳ [illegible] ತನ್ನ ಉದ್ಯೋಗ [illegible] ಕಾರ್ಯಗಳನ್ನು [illegible] ಪಟ್ಟ ಕೆಲಸವು [illegible] ಉದ್ಯೋಗದಲ್ಲಿ [illegible] ಆದರ್ಶ [illegible] ಮಾಡ [illegible] ಕ್ಕಾಗಿ [illegible] ಉದ್ಯೋಗದಲ್ಲಿ ಸ್ವಾರವು ಬೇಕಾ [illegible] ಗೆ ಹಲವು [illegible] ಅವರಿಗೆ ಬಹಳ [illegible] ಗಳೆಂದರೆ, ಬೇ [illegible] ಅಲ್ಲ, ಅಥವಾ [illegible] ದಂತಹ [illegible] ನೋವುಗಳನ್ನಾ [illegible] ಗಳನ್ನಾಗಲೀ [illegible] ತನಗೆ ತಾವೇ [illegible] ಸ್ವರ್ಗಗಳು [illegible] ದು ಅವಧಿಯ [illegible] ಈ ವರ ಪ ತಾವ [illegible] ವ್ಯಾಪಾರವನ್ನು ಇದರ ರಹಸ್ಯವ [illegible] ವರುಷದ ವ್ಯಾಪಾರವು ಕಡಮೆಯಾ [illegible] ತನ್ನನ್ನು [illegible] ಬಹುದು [illegible] ಸಲ್ಲಿಸಿದರೆ ಅದ [illegible] ಏಜಂಟರು ತಾವ [illegible] ಕ್ಕಿಂತಲೂ ಇಂದ [illegible] ಬೇಕೆಂಬ ಒಂ [illegible] ಸಂತತವೂ ತವ [illegible] ಒಂದು ಧ್ಯೇಯ [illegible] ಅವರು ಅತ್ಯಂತ [illegible] ಸರಿ" ಎಂದು ನ [illegible]

# ಶ್ರೀ ಸುಭಾಸ್ ಬೋಸರು ಹಿಂತಿರುಗಬಹುದು.

## ಏಸೆಂಬ್ಲಿಯಲ್ಲಿ ಹೋಮ್ ಮೆಂಬರರ ಹೇಳಿಕೆ.

### ಶ್ರೀ ಸುಭಾಸ್ ಬೋಸರು ಹಿಂತಿರುಗಬಹುದೆ?

**ಅಸೆಂಬ್ಲಿಯಲ್ಲಿ ಹೋಮ್ ಮೆಂಬರರ ಹೇಳಿಕೆ.**

ಸಿಮ್ಲಾ ಸ, ೧೯

ಇಂಡಿಯಾ ದೇಶಕ್ಕೆ ಪ್ರವೇಶಿಸಲು ಕೆಲವು ಇಂಡಿಯನರಿಗೆ ಅವಕಾಶವೀಯದಿರುವ ವಿಷಯವಾಗಿ ವಿ. ಪಾಲಿವಾಲ್‌ರವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹೋಂ ಮೆಂಬರರಾದ ಸರ್ ಹೆನ್ರಿ ಕ್ರೈಕರು ಹೇಳಿದ್ದೇನೆಂದರೆ ಕಳೆದ ೧೦ ವರ್ಷಗಳಿಂದ ಇಂಡಿಯಾಕ್ಕೆ ಬರಬೇಕೆಂದು ಅಪ್ಪಣೆ ಕೇಳಿ ನಿರಾಕರಿಸಲ್ಪಟ್ಟ ಭಾರತೀಯರೆಂದರೆ ಇಬ್ಬರು ಮಾತ್ರ. ಒಬ್ಬರು ಸೈರೇಂದ್ರನಾಥ ಘೋಷ್ ಇವರ ಸಂಬಂಧವಾಗಿ ಕಳೆದ ಮಾರ್ಚಿಯಲ್ಲಿಯೇ ಸಂಪೂರ್ಣ ವಿವರವಾದ ಹೇಳಿಕೆಯನ್ನೀಯಲಾಗಿದೆ. ಇನ್ನೊಬ್ಬರೆಂದರೆ ವಿನಯರಾಯ ಚೌಧುರಿ ಇವರನ್ನು ೧೮೧೮ನೇ ರೆಗ್ಯುಲೇಶನಿನ ಪ್ರಕಾರ ಬಂಧನದಿಂದ ಬಿಡುಗಡೆಮಾಡಿ ಯುರೋಪಿಗೆ ಹೋಗಲು ಇವರಿಗೆ ಅವಕಾಶ ಕೊಟ್ಟಿತ್ತು. ಇವರ ದೇಹಸ್ಥಿತಿಯ ಸಂಬಂಧವಾಗಿ ಇವರಿಗೆ ಯುರೋಪಿಗೆ ಹೋಗಲು ಅವಕಾಶ ಕೊಟ್ಟಿದ್ದು. ಪುನಃ ಇವರು ಹಿಂದಕ್ಕೆ ಬಂದರೆ ಅದೇ ರೆಗ್ಯುಲೇಷನಿನ ಪ್ರಕಾರ ಬಂಧನದಲ್ಲಿಡಲಾಗುವುದೆಂಬ ನಿಬಂಧನೆಯಾಗಿತ್ತು. ನನಗೆ ತಿಳಿದಮಟ್ಟಿಗೆ ಶ್ರೀ ಸುಭಾಸ್ ಚಂದ್ರಬೋಸ್‌ರವರು ಇಂಡಿಯಾ ದೇಶಕ್ಕೆ ಹಿಂತಿರುಗಲು ಸ್ವತಂತ್ರರಾಗಿದ್ದಾರೆ. ನರೇಂದ್ರನಾಥ ಚಟ್ಟೋಪಾಧ್ಯಾಯ ಮತ್ತು ಹರೀಂದ್ರನಾಥ ಚಟ್ಟೋಪಾಧ್ಯಾಯರವರೂ ಕೂಡ ಇಂಡಿಯಾಕ್ಕೆ ಹಿಂತಿರುಗಲು ಸ್ವತಂತ್ರರಾಗಿದ್ದಾರೆ. ಆದರೂ ಕೂಡ ಈ ವಿಷಯವಾಗಿ ಸರಿಯಾಗಿ ತಿಳಿದು ಹೇಳಬೇಕಾಗಿದೆ.

ರಾಜಮಹೇಂದ್ರ ಪ್ರತಾಪರವರ ವಿಷಯವೇನೆಂದು ಕೇಳಲಾಗಿ ಹೋಂ ಮೆಂಬರರು ನನಗೆ ತಿಳಿದಿರುವ ಮಟ್ಟಿಗೆ ಅವರು ಬ್ರಿಟಿಷ್ ಪ್ರಜೆಯಲ್ಲ ಎಂದರು.

---

### ರಜತೋತ್ಸವ ನಿಧಿಗೆ ೧೩೩ ಲಕ್ಷ ಸೇರಿದೆ.

**ಕೌಂಟೆಸ್ ಆಫ್ ವಿಲ್ಲಿಂಗ್ಡನ್ನರ ಧನ್ಯವಾದಗಳು.**

ಸಿಮ್ಲಾ, ಸಪ್ಟಂಬರ ೧೩

ಕೌಂಟೆಸ್ ಆಫ್ ವಿಲ್ಲಿಂಗ್ಡನ್‌ರವರು ಈ ಕೆಳಗಿನ ಪ್ರಕಟಣೆಯನ್ನು ಹೊರಡಿಸಿದ್ದಾರೆ.

'ಚಕ್ರವರ್ತಿಯವರ ರಜತೋತ್ಸವ ನಿಧಿಗೆ ಎಲ್ಲಾ ಪ್ರಾಂತ್ಯಗಳಿಂದಲೂ ಬಂದ ಚಂದಾಗಳ ಕೊನೆಯ ವರದಿಗಳು ಬಂದಿವೆ. ಒಟ್ಟು ಸುಮಾರು ೧೩೩ ಲಕ್ಷ ರೂಪಾಯಿಗಳು ಅಥವಾ ೧೦ ಲಕ್ಷ ಪೌಂಡುಗಳು ಸೇರಿವೆಯೆಂದು ಸ್ಪಷ್ಟವಾಗಿದೆ. ಈ ಸಂಬಂಧವಾಗಿ ನಾನು ಇಂಡಿಯಾ ದೇಶದ ರಾಜರುಗಳಿಗೂ, ಪ್ರಜೆಗಳಿಗೂ ವಂದನೆಗಳನ್ನರ್ಪಿಸಲು ನಿಧಾನಿಸಲಾರೆ. ಈ ನಿಧಿಯನ್ನು ಶೇಖರಿಸುವುದರಲ್ಲಿ ಅವರು ಮಾಡಿರುವ ಸಹಾಯವು ಅಮೋಘವಾದುದು. ನನ್ನ ನಿರೀಕ್ಷಣೆಗಿಂತಲೂ ಬಹಳ ಹೆಚ್ಚಾಗಿ ನಿಧಿಯು ಬಂದು ಸೇರಿರುವುದು ಬಹಳ ಸಂತೋಷದ ಸಂಗತಿ. ಈ ಆಶ್ಚರ್ಯಕರವಾದ ಫಲವನ್ನು ನೋಡಿದರೆ ನಾನು ಈ ಸ್ಮಾರಕ ನಿಧಿಯ ಅಧ್ಯಕ್ಷಳಾಗಿ ಪ್ರತಿ ಪ್ರಾಂತಿಕ ಮತ್ತು ಸಂಸ್ಥಾನದ ರಾಜರಿಗೂ ಪ್ರಜೆಗಳಿಗೂ ಅವರು ತೋರಿಸಿರುವ ರಾಜಭಕ್ತಿ ಮತ್ತು ಔದಾರ್ಯವನ್ನು ಪ್ರಶಂಸಿಸಬೇಕಾಗಿದೆ. ಹಾಗೂ ಈ ನಿಧಿಯನ್ನು ಶೇಖರಿಸಲು ತಮ್ಮ ಅಮೋಘವಾದ ಸಹಾಯಮಾಡಿದ ಸ್ವಯಂ ಸೇವಕದಳಕ್ಕೂ ನನ್ನ ಹೃತ್ಪೂರ್ವಕ ವಂದನೆ. ಈ ನಿಧಿಯ ಫಲಿತಾಂಶವನ್ನು ವೈಸರಾಯರು ಚಕ್ರವರ್ತಿ ಮತ್ತು ಚಕ್ರವರ್ತಿನಿಯರಿಗೆ ತಿಳಿಸುವರು. ಈ ನಿಧಿಯ ಆಡಿಟ್ ಲೆಕ್ಕಾಚಾರವಾದ ಮೇಲೆ ಪ್ರತಿಪ್ರಾಂತ್ಯ ಮತ್ತು ಸಂಸ್ಥಾನದಿಂದ ಬಂದ ನಿಧಿಯ ವಿವರವೆಲ್ಲಾ ಪ್ರಕಟವಾಗುವುದು. ಮತ್ತೆ ಈ ನಿಧಿಯನ್ನು ಯಾವ ರೀತಿ ವಿನಿಯೋಗಿಸಬೇಕೆಂಬ ವಿಷಯವನ್ನು ಆಗ ತಿಳಿಸಲಾಗುವುದು.

ಈ ಮಧ್ಯೆ ನಾನು ಪ್ರತಿಯೊಬ್ಬರಿಗೂ ಈ ಉದಾರತೆಗಾಗಿ ನನ್ನ ಧನ್ಯವಾದಗಳನ್ನು (ಹೃತ್ಪೂರ್ವಕವಾದವು) ಅರ್ಪಿಸಬೇಕಾಗಿದೆ. ನನ್ನ ವಿಶೇಷ ವಂದನೆಗಳು ಈ ಕೆಳಗಿನವರಿಗೆ. ಗೌರವ ಕಾರ್ಯದರ್ಶಿಯವರಾದ ಸರ್ ಪ್ರೆಸ್ಟನ್ ಗೌರವ ಖಜಾಂಚಿಯಾಗಿದ್ದ ಮಿ. ಜಿ ಕೌಲಾ, ಸರ್ ಕೌಲ್ಡಿನ್ಸ್‌ರವರು ಇಂಡಿಯಾವನ್ನು ಬಿಟ್ಟುಹೋದ ಮೇಲೆ ಗೌರವ ಕಾರ್ಯದರ್ಶಿಯಾಗಿ ಕೆಲಸ ನೋಡಿದ ಲೆ. ಕೆ ಎ ಎಫ್ ಆರ್ ಕಂಬಿ ಮುಂತಾದವರಿಗೆ. ಇಂಪೀರಿಯಲ್ ಬ್ಯಾಂಕಿಗೂ, ಪತ್ರಿಕೆಗಳಿಗೂ ಮತ್ತು ವಾರ್ತಾ ವಿನಿಯೋಗ ಸಂಸ್ಥೆಗಳಿಗೂ ನಾನು ಚಿರಋಣಿಯಾಗಿದ್ದೇನೆ.

---

### ಕಾಂಗ್ರೆಸ್ಸಿನ ಅಧ್ಯಕ್ಷರಾರು?

ಲಕ್ನೋವಿನಲ್ಲಿ ಜರಗಲಿರುವ ಈ ಸಲದ ಕಾಂಗ್ರೆಸ್ ಅಧಿವೇಶನಕ್ಕೆ ಡಾ। ಪಟ್ಟಾಭಿಸೀತಾರಾಮಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಬೇಕೆಂಬ ಸಲಹೆಯು ಇದೆ. ಬೆಜವಾಡದಲ್ಲಿ ಈ ಬಗ್ಗೆ ಸಭೆ ಜರಗಿ ಠರಾವುಗಳಾದುವು.

---

### 'ಅಡ್ವಾನ್ಸ್' ಪತ್ರಿಕೆಯ ಆಡಳಿತವು ಬದಲಾಯಿತು

ದಿವಂಗತ ಜೆ. ಎಂ. ಸೇನಗುಪ್ತರಿಂದ ಸ್ಥಾಪಿತವಾದ 'ಅಡ್ವಾನ್ಸ್' ಪತ್ರಿಕೆಯ ಆಡಳಿತವು ಬದಲಾಗಿದೆ. ಪ್ರಸಿದ್ಧ ವರ್ತಕರಲ್ಲೊಬ್ಬರಾದ ಶ್ರೀ। ಮೂಲ್‌ಚಂದ್ ಅಗರ್‌ವಾಲಾ ಎಂಬವರು ಇದರ ಈಗಿನ ಮೆನೇಜಿಂಗ್ ಡೈರೆಕ್ಟರರಾಗಿರುವರು ಶ್ರೀ। ಜಿ ಸಿ ಗುಪ್ತರಿಗೆ ರೂ ೫೦,೦೦೦ವನ್ನು ಕೊಟ್ಟು ಈ ಪತ್ರಿಕೆಯನ್ನು ಮೂಲ್‌ಚಂದ್‌ರವರು ಪಡೆದುಕೊಂಡರು. ಕಳೆದ ಕೆಲವು ತಿಂಗಳುಗಳಿಂದ ಈ ಪತ್ರಿಕೆಯ ಕೆಲಸಗಾರರಿಗೆ ಕ್ಲಪ್ತಕಾಲಕ್ಕೆ ಸಂಬಳವನ್ನು ಕೊಡುತ್ತಿದ್ದಿಲ್ಲ. ಈ ವಿಷಯವಾಗಿ ನಗರದಲ್ಲೆಲ್ಲಾ ಮಾತುಗಾಟವು ನಡೆಯುತ್ತಿತ್ತು. ಹೊಸ ಆಡಳಿತದಲ್ಲೂ ಬಾಕಿಯಿರುವ ಸಂಬಳವನ್ನು ಕೊಟ್ಟಿರುವುದಿಲ್ಲ. ಈ ಪತ್ರಿಕೆಯು ಜಗತ್ತಿನ ದೊಡ್ಡ ದೊಡ್ಡ ಪತ್ರಿಕೆಗಳಲ್ಲೊಂದೆಂದು ಹೆಸರಿತ್ತು.

---

### ಪೋಲೀಸ್ ಅಧಿಕಾರಿಗಳಿಗೆ ಹೊಡೆದುದಕ್ಕಾಗಿ ೧೬ ದಸ್ತಗಿರಿಗಳು!

ಚಿನ್ಸುರಾದಲ್ಲಿ ಡೋವಿನ್‌ಟನ್ ಮತ್ತು ಗೇಲ್ ಎಂಬಿಬ್ಬರು ಐರೋಪ್ಯ ಪೋಲೀಸ್ ಅಧಿಕಾರಿಗಳನ್ನು ಮುತ್ತಿ ಅವರನ್ನು ಸದೆಬಡೆದುದಕ್ಕಾಗಿ ಸುಮಾರು ೬೦ ಮಂದಿಯನ್ನು ಸೆರೆ ಹಿಡಿಯುವ ಸಾಹಸವು ನಡೆಯುತ್ತಿದೆ. ೧೪ ಮಂದಿ ಈ ಮಧ್ಯೆ ಸೆರೆಗೆ ಸಿಕ್ಕಿರುವರು.

---

ಬರ್ಲಿನ್, ೧೫

ಶ್ರೀಮತಿ ಕಮಲಾ ನೆಹರುರವರ ದೇಹಪ್ರಕೃತಿಯು ಸ್ವಲ್ಪ ನೆಟ್ಟಗಾಗಿದೆಯೆಂದೂ, ವಾಂತಿಯು ಪೂರ್ಣವಾಗಿ ನಿಂತು ಅವರು ಈಗೀಗ ಆಹಾರವನ್ನು ಸ್ವಲ್ಪ ಸುಲಭವಾಗಿ ಸೇವಿಸುತ್ತಿರುವರಾಗಿಯೂ ತಿಳಿದು ಬಂದಿದೆ. ದೇಹಶಕ್ತಿಯೂ ಸರಿಯಾಗಿದೆಯೆಂದು ಗೊತ್ತಾಗಿದೆ.

---

### ಕ್ರಿಮಿನಲ್ ಲೋ ಬಿಲ್ಲನ್ನು ಎಸೆಂಬ್ಲಿಯಲ್ಲಿ ತಿರಸ್ಕರಿಸಲಾಯಿತು.

ಸಿಮ್ಲಾ ಸಪ್ಟಂಬರ ೧೬

ಹೋಮ್ ಮೆಂಬರರಾದ ಸರ್ ಹೆನ್ರಿ ಕ್ರೈಕರು ಈ ದಿನ ಗವರ್ನರ್ ಜನರಲರು ಶಿಫಾರಸು ಮಾಡಿದಂತೆ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಬಿಲ್ಲನ್ನು ಶಾಸನ ಸಭೆಯಲ್ಲಿಟ್ಟರು. ಅವರು ಭಾಷಣ ಮಾಡಲಿಲ್ಲ. ಶ್ರೀ। ಭುಲಾಭಾಯಿ ದೇಸಾಯಿಯವರು ೨೫ ನಿಮಿಷಗಳ ತನಕ ಭಾಷಣ ಮಾಡಿ ಆ ಬಿಲ್ಲನ್ನು ವಿರೋಧಿಸಿದರು. ಪ್ರಬಲ ಚರ್ಚೆಯು ನಡೆದು ಆ ಬಿಲ್ಲನ್ನು ೬೯ ಮಂದಿ ವಿರೋಧಿಸಿ ೫೮ ಮಂದಿ ಸ್ವೀಕರಿಸಿ ಅದು ಬಿದ್ದುಹೋಯಿತು. ಸರ್ ಕಾವಾಸ್ಜಿ ಜಹಾಂಗೀರ್ ಮತ್ತು ಸರ್ ಮಹಮ್ಮದ್ ಯಾಕೂಬರವರು ತಟಸ್ಥರಾಗಿ ಕುಳಿತರು.

ನ್ಯಾಯವಿಧಾಯಕ ಸಭೆಯ ... ರಾಯರು ಭಾಷಣಮಾಡಿದರು. ... ಪಾರ್ಟಿಯವರ ಸಂಖ್ಯೆ ... ಸಭೆಯಲ್ಲಿ ಹೆಚ್ಚಿಗಿರಲಿಲ್ಲ.

ನ್ಯಾಯವಿಧಾಯಕ ಸಭೆಯಲ್ಲಿ ಕ್ರಿಮಿನಲ್ ಲೋ ಬಿಲ್ ಬಂದಾಗ ತಟಸ್ಥರಾಗಿ ಕುಳಿತ

**ಸರ್ ಕಾವಾಸ್ಜಿ ಜಹಾಂಗೀರರು.**

---

### ೯೬ ತಾಸುಗಳ ಈಜು

ಅಲೆಕ್ಸಾಂಡ್ರಿಯದ ... ರೋಜೆಸ್ ... ಎಂಬವರ ೨ ... ಗಳ ಈಜಾಡಿ ಅದ್ಭುತ ದಾಖಲೆ ... ೯೬ ತಾಸುಗಳ ತನಕ ಈಜಾಡಿದರು. ಅವರು ... ಡಾಕ್ಟರರು ಅವರ ಆರೈಕೆ ನೋಡುತ್ತಿದ್ದರು. ಇವರ ಈಜಾಟವನ್ನು ನೋಡುವುದಕ್ಕಾಗಿ ಸಾವಿರಗಟ್ಟಲೆ ಜನರು ನೆರೆದಿದ್ದರು.

---

### ಪ್ರಾಣತ್ಯಾಗದ ಯತ್ನಕ್ಕಾಗಿ ರೂಪಾಯಿ ೩೦ ದಂಡ'

ಪೊನ್ನಾನಿನಲ್ಲಿ ಒಬ್ಬಳು ಸ್ತ್ರೀಯು ಗಂಡನು ಹೊಡೆದುದಕ್ಕಾಗಿ ಬಾವಿಗೆ ಹಾರಿ ಪ್ರಾಣಬಿಡಲೆತ್ನಿಸಿದಾಗ ಮೇಲೆತ್ತಿ ಪೋಲೀಸರ ವಶವಾದಳು. ಅವಳನ್ನು ವಿಚಾರಿಸಿ ಸಬ್‌ಮೆಜಿಸ್ಟ್ರೇಟರು ಅವಳಿಗೆ ೩೦ ರೂಪಾಯಿ ಜುಲ್ಮಾನೆ ವಿಧಿಸಿದರು.

---

### ಅವನ ದೈವ.

ಸಂಯುಕ್ತ ಅಮೇರಿಕಾದ ಗಾಲ್ಫ್ ಎಂಬ ಮೈದಾನಿನಲ್ಲಿ ಹೋಗುತ್ತಿದ್ದ ಒಂದು ಮೋಟಾರ್ ಗಾಡಿಗೆ ಒಂದು ಚೆಂಡು ತಗಲಿ ಗಾಜಿನ ಚೂರು ಒಡೆದು ಡ್ರೈವರನ ಕಣ್ಣುಹೋಯಿತು. ಡ್ರೈವರನು ಕ್ಲಬ್ಬಿನ ಮೇಲೆ ದಾವೆಹೂಡಿದನು. ೩೦ ಲಕ್ಷ ರೂಪಾಯಿಗಳ ಬದಲು ಕ್ಲಬ್ಬಿನವರು ೧೫೦೦೦ ರೂಪಾಯಿಗಳನ್ನು ಡ್ರೈವರನಿಗೆ ಕೊಟ್ಟು ಸಮಾಧಾನಪಡಿಸಿದರು. ಇಂತಹ ಅನರ್ಥಗಳಾಗದಂತೆ ಕ್ಲಬ್ಬಿನವರು ೩ ಲಕ್ಷ ರೂಪಾಯಿಗಳಿಗೆ ವಿಮೆಮಾಡಿರುವರು.

---

N.I.P.

ಫ್ರೇಂಚ್ ಎಂಬ ಹೈಗ್ರೇಡ್

ಪೆಟ್ರೋಲ್,

ಚಿಮಿಣಿ ಎಣ್ಣೆ ಮತ್ತು

ಡೀಸೆಲ್ ಎಣ್ಣೆ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿ ಜವಾಬ್ದಾರೀ ಏಜಂಟರಿಂದ ವಿಕ್ರಯಿಸಲ್ಪಡುತ್ತದೆ.

ಏಜನ್ಸಿ ಶರ್ತಗಳಿಗಾಗಿ ಕೆಳಗಣವರಿಗೆ ಬರೆಯಿರಿ-

INTERNATIONAL OIL Co. Ltd.

"JIJI HOUSE," RAVELIN ST., FORT,

BOMBAY.

---

### ಗಾಂಧಿಜೀಯವರಿಗಪಮಾನಗೊಳಿಸುವ ಚಲಚ್ಚಿತ್ರ

ಗಾಂಧಿಯವರು ಇಂಗ್ಲಿ ಸ್ತ್ರೀಯರೊಡನೆ ನರ್ತಿಸುತ್ತಿದ್ದರೆಂದು ತೋರಿಸುವ ಚಲಚ್ಚಿತ್ರವನ್ನು ರದ್ದುಗೊಳಿಸುವುದಕ್ಕೆ ಸರಕಾರವು ವ್ಯವಸ್ಥೆ ಮಾಡುವುದೇ ಎಂದು ಎಸೆಂಬ್ಲಿಯಲ್ಲಿ ಪ್ರಶ್ನೆಯೆದ್ದು ಸರಕಾರವು ವಿವರವನ್ನು ಕೇಳಿದೆ.

---

(೧ನೇ ಪುಟದಿಂದ ಮುಂದುವರಿದುದು)

ಅಧ್ಯಾಪಶಾಲೆಗಳ ... ಮೇಲಾಗಿ ಹತ್ತಿದರು. ಅವರ ಪಾಲಿಗೆ ಬಿದ್ದ ಅಧಿಕಾರ ಸ್ಥಾನಗಳ ವೈವಿಧ್ಯವೇ ಅವರ ಯೋಗ್ಯತಾ ಸಿದ್ಧಿಯನ್ನು ಸಾರುತ್ತಿವೆ. ಅಲಿಸಿರಿ

(೧) ೧೮೮೯ರಲ್ಲಿ ಮೈಸೂರು ಸ್ಟೇಟ್ ರೈಲ್ವೆಗಳ ಟ್ರಾಫಿಕ್ ಸುಪರಿಂಟೆಂಡೆಂಟರಾದರು

(೨) ೧೮೯೦ರಲ್ಲಿ ಅಸಿಸ್ಟೆಂಟ್ ಕಮಿಶನರಾದರು

(೩) ೧೮೯೧ರಲ್ಲಿ ಪೋಲೀಸ್ ಸುಪರಿಂಟೆಂಡೆಂಟರಾದರು

(೪) ೧೮೯೬ರಲ್ಲಿ ರೆವಿನ್ಯೂ ಸಬ್ ಡಿವಿಜನ್ ಅಧಿಕಾರಿಗಳಾದರು

(೫) ೧೮೯೮ರಲ್ಲಿ ಜಿಲ್ಲಾ ಮೆಜಿಸ್ಟ್ರೇಟರು

(೬) ೧೯೦೬ರಲ್ಲಿ ದ್ವಿತೀಯ ಸಚಿವಸ್ಥಾನಕ್ಕೆ ಬಂದರು. ೧೯೦೬ರಲ್ಲಿ ಪ್ರಥಮ ಸಚಿವರಾದರು.

(೭) ೧೯೦೭ರಲ್ಲಿ ನಿವೃತ್ತರಾದರು

ನಿವೃತ್ತರಾದ ಮೇಲೆ ಏನಾದರೂ ತೆಪ್ಪಗೆ ಮನೆಯಲ್ಲಿ ಕೂತಿದ್ದರೆ, ಇಲ್ಲ

(೧) ೧೯೧೧ರಿಂದ ಮೈಸೂರು ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ

(೨) ಬೆಂಗಳೂರು ಪೌರಸಭಾಧ್ಯಕ್ಷರಾಗಿ ೧೯೨೨ರಿಂದ ೧೯೩೩ರ ವರೆಗೂ ಕೆಲಸಮಾಡಿದರು

(೩) ಮೈಸೂರು ರೈಲ್ವೆಸಮಿತಿಯಲ್ಲಿ ೧೯೧೭ರಿಂದ ೧೯೨೦ರ ವರೆಗೆ ಕೆಲಸ

(೪) ಬೆಂಗಳೂರು ನಗರದ ಇಂಪ್ರೂವ್‌ಮೆಂಟ್ ಕಮಿಟಿ ಅಧ್ಯಕ್ಷಪದವಿ ೧೯೧೫ರಿಂದ ೧೯೨೨ರ ವರೆಗೆ.

(೫) ೧೯೩೩ರಿಂದ ೩೩ರ ವರೆಗೆ ಭದ್ರಾವತಿ ಬೋರ್ಡಿನ ಡೈರೆಕ್ಟರು

(೬) ೧೯೨೨ರ ರಿಟ್ರೆಂಚ್‌ಮೆಂಟ್ ಕಮಿಟಿ ಅಧ್ಯಕ್ಷರು

(೭) ಮೈಸೂರು ವಿಶ್ವವಿದ್ಯಾನಿಲಯದ 'ಕೌನ್ಸಿಲ್' ಸದಸ್ಯರಾಗಿದ್ದರು.

(೮) ೨೦ ವರ್ಷಗಳಿಂದ ನ್ಯಾಯವಿಧಾಯಕ ಸಭೆಗೆ ನಾಮಕರಣ ಸದಸ್ಯರು. ೧೯೩೦ರಲ್ಲಿ ಚುನಾಯಿಸಿದರು.

(೯) ೧೯೨೭ರಲ್ಲಿ ಮಹಾರಾಜರ ರಜತೋತ್ಸವ ಸಮಿತಿಯ ಅಧ್ಯಕ್ಷರು.

'ವಿಶ್ವಕರ್ನಾಟಕ'

### ಅನುಕ್ರಮಣಿಕೆ.


| | |
|---|---|
| ವಾರ್ತಾ ಸಂಗ್ರಹ | ೩ |
| ಹಿನ್ದುಸ್ಥಾನದಲ್ಲಿ ಇಟಲಿ ಏಬಿಸೀನಿಯಾಗಳ ಸಮಸ್ಯೆ | ೫ |
| ಪತ್ರವ್ಯವಹಾರ | ೬ |
| ಮೈಸೂರು ಜೀವವಿಮಾ ಕಂಪೆನಿ | ೮ |
| ಶ್ರೀ ಸುಭಾಸ್‍ಬೋಸರು ಹಿಂತಿರುಗಬಹುದು | ೯ |
| ಸಮಾಜ ಸೇವೆ | ೧೦ |
| ಪ್ರಲೇಖ | |
| ಸ್ಫುಟವಿಚಾರಗಳು | ,, |
| ವರ್ತಮಾನ ಸಂಗ್ರಹ | |
| ಮಂಗಳೂರು, ತಾಲೂಕುಗಳಿಂದ | ೧೩ |
| ಡಿಸ್ಟ್ರಿಕ್ಟ್ ಬೋರ್ಡು ಸಭೆ | ೧೪ |
| ಟೌನ್ ಹಾಲ್ | ೧೭ |
| ವಿವಿಧ ಸಮಾಚಾರಗಳು | ೧೬ |
| ನಡೆದ ಕತೆಗಳು, ನಗಬಾರದು | ೧೮ |


# ಸ್ವದೇಶಾಭಿಮಾನಿ.

**ತಾ. ೨೦ನೇ ಶುಕ್ರವಾರ ಸಪ್ಟೆಂಬರ '೩೫**

## ಸಮಾಜ ಸೇವೆ.

ನಿವಾಸಿಗಳ ಸೌಕರ್ಯ ಸಾಧನೆಯು ಯಾವುದೊಂದು ನಗರದ ಪ್ರಥಮ ಕರ್ತವ್ಯವಾಗಿರಬೇಕು ಸೌಕರ್ಯಗಳಾವುವು ಎಂಬುದನ್ನೂ ಎಷ್ಟು ಮಟ್ಟಿಗೆ ಅಗತ್ಯ ಎಂಬುದನ್ನ ಅಲ್ಲಲ್ಲಿನ ಪರಿಸ್ಥಿತಿಯೇ ನಿರ್ಧರಿಸುವುದು ಸರಕಾರವು ಈ ವಿಷಯದಲ್ಲಿ ಮಾಡಬಹುದಾಗಿರುವ ಸಹಾಯವೂ ಅಲ್ಲಲ್ಲಿಗೆ ತಕ್ಕಂತೆಯೆ ಇರುವುದು. ಒಂದೆರಡು ಶತಮಾನಗಳ ಹಿಂದೆ, ದೈನ್ಯದಾರಿದ್ರ್ಯಗಳೆಲ್ಲವು ಅವರವರ ಪ್ರಾಪ್ತಿಯೆಂದೇ ಭಾವನೆಯಾಗಿದ್ದಿತ್ತಾದರೂ, ಈಗ, ಸಾಮುದಾಯಿಕವಾದ ದೋಷಗಳ ಪರಿಣಾಮವಾಗಿದೆ ಎಂದೇ ವಿಚಾರಿಗಳು ನಂಬುತ್ತಾರೆ

ಶಿಕ್ಷಣಪ್ರಚಾರವನ್ನು ಉದಾಹರಣೆಗೆ ತೆಗೆದುಕೊಂಡರೆ, ಸರಕಾರವು ಶಾಲಾದಿಗಳನ್ನು ಸಂಸ್ಥಾಪಿಸಿ ನಡೆಸಿಕೊಂಡು ಇರಬೇಕೆಂಬುದು ನಿಜವಾದರೂ ಊರವರ ಸಹಕಾರ ಪರಿಶ್ರಮಗಳೂ ಈ ಭಾಗದಲ್ಲಿ ಅಗತ್ಯವಾಗಿವೆ ಎಂದೇ ಹೇಳಬೇಕಾಗಿದೆಯಲ್ಲವೆ? ಇಂತಹ ಸಹಕಾರವಿಲ್ಲದಿರುವಲ್ಲಿ ಶಿಕ್ಷಣಕೊಡುವವರಿಗೂ ಪಡೆಯುವವರಿಗೂ ಸಂಬಂಧವೇ ಇಲ್ಲದಂತಾಗಿ, ಪ್ರಚಾರವು ತಕ್ಕಷ್ಟು ಫಲಕೊಡಲಾರದು ಎಷ್ಟೋ ಮ್ಯುನಿಸಿಪಾಲಿಟಿಗಳು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಮೂಲ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಕೊಡುತ್ತಿವೆಯಾದರೂ, ಊರವರು ಈ ಪ್ರಚಾರದಲ್ಲಿ ಎಷ್ಟು ಮಟ್ಟಿಗೆ ಆಸಕ್ತಿಯನ್ನೂ ಸಹಕಾರವನ್ನೂ ತೋರಿಸುವರೋ ಅಷ್ಟು ತನಕ ಮಾತ್ರವೇ ಈ ಶಿಕ್ಷಣಪ್ರಯತ್ನವು ಫಲಕೊಡಬಲ್ಲುದು ಕಾಸಿಗೆ ತಕ್ಕ ಕಜ್ಜಾಯವು ಈ ಪ್ರಯತ್ನಗಳಿಂದ ಸಿಗುವಂತಿಲ್ಲವೆಂದೇ ಹೇಳಬೇಕಾಗಿದೆ ಎಷ್ಟೋ ಕಡೆ ಅದಕ್ಕಾಗಿ ಹೆತ್ತವರ ಸಂಘಗಳು ಏರ್ಪಟ್ಟಿವೆ, ಇವುಗಳ ಫಲವಾಗಿ, ಆಗುವಷ್ಟು ಏಕಪ್ರಕಾರವಾಗಿರುವ ಶಿಕ್ಷಣವನ್ನ ಹರಡಿಸುವ ಹಾಗೆ ಶಿಕ್ಷಣ ವಿಮರ್ಶಕರನ್ನೂ ಮ್ಯುನಿಸಿಪಾಲಿಟಿಗಳು ನೇಮಿಸಬೇಕಾಗಿ ಬಂದಿದೆ ಇಲ್ಲದಿರುವಲ್ಲಿ, ಒಂದೊಂದು ಶಾಲೆಯ ಕ್ರಮ, ಮಟ್ಟ ಒಂದೊಂದಾಗಿ, ಊರೊಳಗೇ ನಾನಾ ಪ್ರಕಾರದ ಶಿಕ್ಷಣ ವಿಚಾರಗಳು ಉಂಟಾಗುವುವೆಂದು ಅಂಜಿಕೆಯಿದೆ

ದರಿದ್ರರ ಗುಡಿಕಟ್ಟುಗಳು, ವಯಸ್ಕರಿಗೆ ವಿದ್ಯಾಭ್ಯಾಸ, ಮಾದಕವದಾರ್ಥಗಳ ವರ್ಜನೆ ಮೊದಲಾದುವನ್ನು ಕುರಿತಾಗಿ ನಾನಾ ಉದ್ಯಮಗಳನ್ನು ಜನತೆಯೇ ಮಾಡಿಕೊಂಡು ಬರುತ್ತಿರುವಲ್ಲಿ ಇವುಗಳೊಡನೆ ಸರಕಾರದ ಸಹಕಾರವೂ ಇಲ್ಲದಿದ್ದರೆ, ಇವೂ ಕೃತಾರ್ಥವಾಗಲಾರವು

ಜನತೆಯಲ್ಲಿ ಸಮಾಜಸೇವಾಧರ್ಮವು ಜಾಗೃತಗೊಳ್ಳುವ ಹಾಗೆ ಮೊದಲಾಗಿ ಪ್ರಚಾರ ಕಾರ್ಯಗಳು ನಡೆಯಬೇಕು. ಎಷ್ಟೋ ವೇಳೆ ಈ ಜಾಗೃತಿಯು ಜನರಲ್ಲಿ ಉಂಟಾಗಿದ್ದರೂ, ಹಣದ ಅಡಚಣೆಯಿಂದಾಗಿ ಯಾವ ಕಾರ್ಯಗಳೂ ಸುಸೂತ್ರವಾಗಿ ನೆರವೇರಲಾರದಾದುವು ಜನರಲ್ಲಿ ಜಾಗೃತಿಯುಂಟಾದಾಗಲೂ ಸರಕಾರವು ಸಹಕರಿಸದೆ, ಹಿಂದುಳಿದರೆ, ಅದು ಸರಕಾರದ ಕಾರ್ಯಕ್ರಮದಲ್ಲಿ ದೋಷಗಳನ್ನೆ ಹೆಕ್ಕಿ ತೋರಿಸುವುದು ಊರವರು ಸಮಾಜಕ್ಕೆ ಹಿತಕರಗಳಾದ ಉದ್ಯಮಗಳು ಯಾವುವೆಂದು ಗೊತ್ತುಹಚ್ಚಿ, ಜಾಗೃತರಾದಲ್ಲಿ, ಸರಕಾರದ ಸಹಾಯವನ್ನು ಕಡದಲೆ ಕೇಳಿ ಪಡೆಯುವಂತಾಗುವುದು ಅಧಿಕಾರಿಗಳೂ ಆಗ ತಾನೆ ನೆರವಾಗುವರು

ಶ್ರಮಜೀವಿಗಳ ಕಷ್ಟ ತಾಪತ್ರಯಗಳನ್ನು ಸೂಕ್ಷ್ಮವಾಗಿ ಪರಿಶೋಧಿಸಿ, ಸತ್ಯವಾದ ಸ್ಥಿತಿಯನ್ನು ಸರಕಾರದ ಮುಂದಿಡುವುದು ಸಮಾಜ ಹಿತಚಿಂತಕರ ಕರ್ತವ್ಯವಾಗಿದೆ ಆಗ ತಾನೆ, ನ್ಯಾಯವಿಧಾಯಕ ಸಭಾದಿಗಳ ಮೂಲಕವಾಗಿ ಯೋಗ್ಯ ಉಪಯುಕ್ತ ಶಾಸನಗಳನ್ನು ವಿಧಾಯಿಸಿಕೊಂಡು, ಸಮಿತಿಗಳನ್ನು ಸ್ಥಾಪಿಸಿ, ಯಾರ ಆಕ್ಷೇಪಗಳೂ ಬಾರದಂತೆ ಇವರ ಹಿತವನ್ನು ಸಾಧಿಸುವುದು ಸುಲಭವಾಗುತ್ತಿದೆ

ವಯಸ್ಕರಿಗೆ ಶಿಕ್ಷಣವನ್ನು ಕೊಡುವುದೆಂದರೆ, ಓದುಬರೆಹ ಲೆಕ್ಕಗಳೇ ಅಲ್ಲ, ಜೀವನ ಪ್ರಪಂಚದ ವಿಚಾರಗಳನ್ನು ಇವರಿಗೆ ತಿಳಿದು ಬರುವಂತೆ ಮಾಡುವುದಾಗಿದೆ ಮೂಲ ವಿದ್ಯಾಭ್ಯಾಸದ ಅಸ್ತಿಭಾರದ ಮೇಲೆ ವಯಸ್ಕರ ವಿದ್ಯಾಭ್ಯಾಸದ ಮಂದಿರವನ್ನು ರಚಿಸಬೇಕಾಗಿದೆ ಸಮಾಜ ಧರ್ಮವನ್ನೂ ಇತಿಹಾಸ ಭೂಗೋಲ ವಿಜ್ಞಾನಗಳನ್ನೂ ಅವರಿಗೆ ಜೀವ ಸಂಬಂಧವನ್ನೂ ತಿಳಿಯುವ ಹಾಗೆ ಬೋಧಿಸಬೇಕಾಗಿದೆ

ಮಕ್ಕಳು ಶಾಲೆಗಳಿಗೆ ಕ್ರಮ/ಕಷ್ಟದ ಹೋಗುವಂತೆಯೂ, ಅವರಿಗೆ ವಿಹಾರ/ವಿನೋದಗಳಿಗೆ ಅವಕಾಶವು ಸಿಗುವಂತೆಯೂ ಶಾಲೆ ಬಿಟ್ಟನಂತರ ಅವರು ದಾರಿ ತಪ್ಪದಂತೆಯೂ ಸಂರಕ್ಷಣೆ ಮಾಡುವ ಸಮಿತಿಗಳು ಉಂಟಾಗಬೇಕಾಗಿದೆ

ಭಿಕ್ಷುಕರ ಪೀಡೆ, ದ ೯ಮ, ರೋಗಗಳನ್ನು ನಿವಾರಿಸಲೂ ನಿರ್ಗತಿಕರಿಗೆ ವಸತಿ ಆಹಾರಗಳು ಒದಗುವ ಹಾಗೆಯೂ, ಏರ್ಪಾಡುಗಳೂ ಸಮಾಜಸೇವೆಗೇ ಸಂಬಂಧಪಟ್ಟಿವೆ ಬೇಗಾರಿಗಳಂತ ಬೇಸರಕೊಡುವವರು ಬೇರೆ ಇಲ್ಲ, ಬೇಡುವವರಿಗೆ ಬೀಡುಗಳೂ ಅಗತ್ಯವಾಗಿವೆ, ಈ ಕಾರ್ಯವು ಮ್ಯುನಿಸಿಪಾಲಿಟಿಗಳ ಕರ್ತವ್ಯವಾಗಿದ್ದ್ರೆ, ಹಾಗೆಂದು ಜನರು ತಾವಾಗಿಯೆ ಇಂತಹರಿಗೆ ಉಪಕಾರವಾಗುವ ಸಂಸ್ಥೆಗಳನ್ನು ಏರ್ಪಡಿಸಿಕೊಳ್ಳಬಾರದೆಂದೇನೂ ಇಲ್ಲ ಹೀಗೆ ಖಾಸಗಿ ಸಂಸ್ಥೆಗಳು ಉಂಟಾಗಲಾರವಾದರೆ, ಅಥವಾ ಸಾಕಷ್ಟಿಲ್ಲವಾದರೆ, ಮ್ಯುನಿಸಿಪಾಲಿಟಿಯೇ ಅವನ್ನು ರಚಿಸುವಂತೆ ಒತ್ತಾಯಪಡಿಸುವುದೂ ಜನತೆಯು ಕರ್ತವ್ಯವಾಗಿದೆ

ಆದರೆ, ಸಮಾಜ ಸೇವಾಸಂಘವೆಂದು ಬರೇ ಆಕಾಶ ಕುಸುಮಗಳನ್ನು ಧ್ಯಾನಮಾಡತೊಡಗಿ ಫಲವಿಲ್ಲ ಪ್ರತ್ಯಕ್ಷ ಫಲಪ್ರದಾಯಕಗಳಾಗಿರುವ ಸಂಘಗಳನ್ನೆ ಏರ್ಪಡಿಸಿಕೊಳ್ಳತಕ್ಕುದಾಗಿದೆ ಇಂತಹ ಸಂಘಗಳೆಲ್ಲವು ಏಕೋದ್ದೇಶದಿಂದ ಕೆಲಸಮಾಡುತ್ತಿದ್ದರೆ ಉತ್ತಮ ಪರಿಣಾಮಗಳುಂಟು

ಇಂತಹ ಸಂಸ್ಥೆಗಳನ್ನು ನಡೆಯಿಸಲು ಕೆಲಸಗಾರರೂ ಬೇಕು ಇವರಿಗೆ ಇವರ ಕಾರ್ಯಕ್ಕೆ ಸಂಬಂಧಪಡುವ ವಿಚಾರಗಳನ್ನು ಬೋಧಿಸಿ ತರಬೇತುಮಾಡುವ ಶಾಲೆಗಳೂ ಬೇಕು ಸರಕಾರವು ಈ ಭಾಗದಲ್ಲಿ ಎಷ್ಟು ಪ್ರಯತ್ನಿಸಿದರೂ, ಜನತೆಯೇ ಪ್ರಯತ್ನಿಸಿ ಸಹಕರಿಸದಿರುವಲ್ಲಿ ಪರಿಣಾಮಗಳು ಚೆನ್ನಾಗಿರವು.

---

## ಸಾಮಯಿಕ ವಿಚಾರಗಳು

### ಹುಟ್ಟು ದಾರಿದ್ರ್ಯ

ಮಳೆಯ ಮೋಸ, ಕಾಡು ಮೃಗಗಳ ಹಾವಳಿ, ಜೀವನದಲ್ಲಿ ವ್ಯಾಪಾರಗಳ ಸಾಲಗಾರರ ಬಡ್ಡಿ ಮತ್ತು ಒತ್ತಾಯ, ಹಿಡುವಳಿಗಳ ಅಂಶೀಕರಣ, ಜನಸಂಖ್ಯೆಯ ಹೆಚ್ಚಳ, ಜಾನುವಾರುಗಳ ಮರಣಗಳು, ತೀರ್ವೆಯ ಅಧಿಕರಣ ಮೊದಲಾದುವೇ ನಮ್ಮ ಸಂಸ್ಥಾನದ ಹಳ್ಳಿ ಜನರ ನಿತ್ಯ ದಾರಿದ್ರ್ಯವು ಅಧಿಕಾಧಿಕವಾಗಿ ಬೆಳೆಯುತ್ತಿರುವುದಕ್ಕೆ ಕಾರಣಗಳೆಂದು ಸರಕಾರವೇ ನೇಮಿಸಿದ ವಿಮರ್ಶಕ ಆಫೀಸರರ ವರದಿಯಾಗಿದೆ ಹೊಲಗದ್ದೆಗಳು ಹೆಚ್ಚೆಂದರೆ ಅವುಗಳ ಬೆಲೆಯ ಸೇಕಡಾ ೨-೪ರಷ್ಟು ಬೆಳೆ ಬೆಳೆಸಬಹುದು ಆದರೂ, ಸಾಲವನ್ನು ಸೇಕಡಾ ೬ಕ್ಕಿಂತ ಕಡಿಮೆ ಬಡ್ಡಿಯಲ್ಲಿ ಪಡೆಯಲು ರೈತನಿಗೆ ಸಾಧ್ಯವಿಲ್ಲ ಆದರೆ, ಇಂತಹ ದುರವಸ್ಥೆಯಲ್ಲಿರುವ ರೈತನಿಗೆ ಸಾಲವೇ ಮೂಲವಾಗಿ ಹೋಗಿದೆ ಈಗ ಸೇಕಡಾ ೯ರಿಂದ ೨೪ರ ವರೆಗೆ ಬಡ್ಡಿಯಲ್ಲಿ ಸುಮಾರು ೨೦೦ ಕೋಟಿ ರೂಪಾಯಿಯಷ್ಟು ಸಾಲವು ನಮ್ಮ ರೈತರ ಮೇಲೆ ನಿಂತಿದೆ, ಕೆಲವೇಳೆ ಬಡ್ಡಿಯು ೩೬ರ ಸಲೆಯಲ್ಲಿದ್ದುದೂ ಉಂಟು ರೈತರಿಗೆ ಸುಲಭ ಬಡ್ಡಿಯಲ್ಲಿ ಹಲವು ವಾರ್ಷಿಕ ಕಂತುಗಳಲ್ಲಿ ಹಿಂತೆರಲಾಗುವ ಹಾಗೆ ಸಾಲವು ಸಿಗುವಂತಾಗಬೇಕು ಇತ್ತ, ಆರ್ಥಿಕ ಮುಗ್ಗಟ್ಟಿನಿಂದ ಆಸ್ತಿಗಳ ಮೌಲ್ಯವು ತೀರ ಕಡಿಮೆಯಾಗಿ, ನೂರಕ್ಕೆ ನಲ್ವತ್ತರಂತೆ ಇಳಿದಿದೆ ಮೊದಲು ಆಸ್ತಿಯ ಮೌಲ್ಯದ ಸೇಕಡಾ ೯ರಷ್ಟು ಮಾತ್ರವಿದ್ದ ಸಾಲವು ಈಗ ೨೦ಕ್ಕೇರಿದೆ ಉತ್ಪನ್ನಗಳ ಧಾರಣೆಯೂ ತೀರ ಕಡಿಮೆಯಾಗಿದೆ

### ಕಾನೂನು ಪ್ರಕಾರ

ಸಾಲ ತೀರ್ಮಾನ ಮಾಡುವಿಕೆ, ಬಡ್ಡೀದರ ಇಳಿಸುವಿಕೆ, ಸಾಲ ಕೊಡುವವರಿಗೆ ಪ್ರತಿಬಂಧಕಗಳು, ಡಿಕ್ರೀಪ್ರಕಾರ ಏಲಾಮಾಗುವ ಆಸ್ತಿಗಳಿಗೆ ಯೋಗ್ಯ ಬೆಲೆ ಬರುವಂತಹ ಏರ್ಪಾಡು, ಸಾಲಕ್ಕಾಗಿ ಜೈಲು ವಿಧಿಸದಿರುವಿಕೆ, ಇವು ಕೆಲವು ಸೂಚನೆಗಳನ್ನು ಸರಕಾರವು ಅಂಗೀಕರಿಸುವಂತೆ ಅವರೇ ಆಫೀಸರರು ಸೂಚಿಸಿದ್ದಾರೆ ಕೃಷಿಕ್ರಮಗಳು ಉತ್ತಮವಾಗುವ ಹಾಗೂ, ತಕ್ಕ ಗೊಬ್ಬರ ಸಿಗುವ ಹಾಗೂ, ನೀರಾವರಿ ಕೆಲಸಗಳು ಹರಡುವ ಹಾಗೂ, ಇತರ ಉಪವೃತ್ತಿಗಳು ಜನರಲ್ಲಿ ಬಳಕೆಗೆ ಬರುವ ಹಾಗೂ ಅವರು ಶಿಫಾರಸುಗಳನ್ನು ಮಾಡಿರುವರು ರೇಡಿಯೋ ಗ್ರಾಮೋಫೋನು ದಾರಿ ಬಾವಿಗಳನ್ನೂ ಶಿಕ್ಷಣಪ್ರಚಾರ ವೈದ್ಯಸಹಾಯ ಮೊದಲಾದುವನ್ನೂ ಅಗತ್ಯ ಸೌಕರ್ಯಗಳಲ್ಲವೆಂದು ಹೇಳಬರುವಂತಿಲ್ಲ ಆದರೆ, ಸಾಲವೇ ಗ್ರಾಮಸ್ಥರ ಜೀವನಕ್ಕೆ ಮೂಲವಾದರೆ, ಗ್ರಾಮಗಳೆಲ್ಲಿ ಉಳಿಯಬಹುದು? ಸಾಲ ಕಡಿಮೆಯಾಗದೆ, ಎಂತಹ ನವೀನ ಶಿಫಾರಸು ಮಾಡಿದರೂ ಸಾಲದು

### ತುಂಡರಿಸಿದ ಬಿಲ್ಲು

ಎಸೆಂಬ್ಲಿಯಲ್ಲಿ, ಕ್ರಿಮಿನಲ್ ಕಾನೂನು ತಿದ್ದುಪಡಿಯ ಹೊಸ ಬಿಲ್ಲನ್ನು ಬಹುಮತವು ತುಂಡರಿಸಿತು ಚುನಾಯಿತ ಸದಸ್ಯರಲ್ಲಿ ೧೫ ಮಂದಿ ಮಾತ್ರ ಈ ಬಿಲ್ಲನ್ನು ಎತ್ತಿಹಿಡಿದಿದ್ದರು ರಾಷ್ಟ್ರೀಯ ಪಕ್ಷವನ್ನಲ್ಲ, ರಾಷ್ಟ್ರೀಯ ಭಾವವನ್ನೆ ಈ ಬಿಲ್ಲು ಎದುರಾಡಲೆಳಸುವುದೆಂಬ ಅಭಿಪ್ರಾಯವೇ ಬಹುಮಂದಿಯಲ್ಲಿ ಖಚಿತವಾದ ಪ್ರಯುಕ್ತ, ೧೧ ಮಂದಿ ಬಿಲ್ಲನ್ನು ಕಡಿದಿಕ್ಕಲು ಸಿದ್ಧರಾದರೆನ್ನಬೇಕು. 'ಮೂಕ ಮಿಲ್ಲಿಯಗಳನ್ನು ರಕ್ಷಿಸುವುದಕ್ಕಿದು' ಎಂದ ಮೆಂಬರರೂ 'ಮುಂದಣ ಎಸೆಂಬ್ಲಿಗೆ ಇದು ಬಲ' ಎಂದೂ ಹೇಳಿದ ಬಿಲ್ಲಿನ ಪ್ರೋತ್ಸಾಹಕರು, ಇಂತಹದೊಂದು ಕಾನೂನನ್ನು, ಕೆಲ ಕಾಲಕ್ಕೆಂದೇ ಹಿಂದೆ ಮಂಜೂರು ಮಾಡಿದುದನ್ನು ಮುಂದೆ ಶಾಶ್ವತವಾಗಿರಿಸಬೇಕೆಂದು ಬಹಳವಾಗಿ ಪ್ರಯತ್ನಪಟ್ಟರಾದರೂ, ವ್ಯಕ್ತಿಸ್ವಾತಂತ್ರ್ಯವನ್ನು ತುಂಬ ಅಲ್ಲಗಳೆಯಬಹುದಾದ ಈ ಕಾನೂನು ಬೇಡವೇ ಬೇಡವೆಂದು ಎಸೆಂಬ್ಲಿಯು ತಿರಸ್ಕರಿಸುವಂತೆ ಮಾಡಿಕೊಂಡರು ಕೆಲವೇ ಪತ್ರಿಕೆಗಳು ಸ್ವಲ್ಪ ಹೆಚ್ಚಿಗೆ ಟೀಕಿಸಿವೆ ಎಂದು ಎಲ್ಲ ಮುದ್ರಾಲಯಗಳನ್ನೂ ಪತ್ರಿಕಾಪ್ರಪಂಚವನ್ನೂ ಅಣಗಿಸಲು ಇದೊಂದು ಕಾನೂನು ಅಗತ್ಯವೆ? ಟೀಕೆಗಳೇ ಇಲ್ಲದಂತೆ ಮಾಡಿದರೆ, ಅಭಿಪ್ರಾಯಗಳು ಎಂತಹವಾದರೂ ಸಾಧುವಾಗುವುವೆ? ಅಂತೂ ಈ ಬಿಲ್ಲನ್ನು ಪುನಃ ಎಸೆಂಬ್ಲಿಯ ಮುಂದೆ ತಂದು ಮಂಜೂರು ಮಾಡಿಕೊಳ್ಳಬೇಕಾದೇ ಪ್ರಯತ್ನಗಳಾದ ವ್ಯರ್ಥವಾದುವು

### ಮದ್ರಾಸಿನ ಬಿಷಪ ಸ್ವಾಮಿಗಳು–

ಕುಂಭಕೋಣದಲ್ಲಿ ಭಾಷಣಮಾಡುತ್ತ– "ಜನಾಂಗಗಳು ಈಗ ವ್ಯಾಪಾರದ ಮೇಲೆ ಆಧರಿಸಿಕೊಂಡಿವೆ ಭಾರತೀಯರು ತಮ್ಮ ವ್ಯಾಪಾರ ಸಂಬಂಧಗಳನ್ನು ಬೆಳಸದೆ ಮಹತ್ವ ಪಡೆಯಲಾರರು ವ್ಯಾಪಾರವೇ ಈಗ ಜನಾಂಗಗಳ ಹಾಗೂ ಸರಕಾರಗಳ ಜೀವಾಳವಾಗಿದೆ ಯಾವುದೊಂದು ಯುದ್ಧವಾದರೂ ವ್ಯಾಪಾರ ಸಂಪತ್ತಿನ ಅಡಚಣೆಯಿಂದಾಗಿಯೇ ಆಗುತ್ತಿದೆ ಅಬಿಸೀನಿಯವು ಸೃಷ್ಟಿಸಂಪತ್ತುಳ್ಳ ರಾಜ್ಯ, ಆದುದರಿಂದಲೇ ಅದರಲ್ಲಿ ಪಾಲು ಪಡೆಯಲು ಇಚ್ಛಿಸುವವರಿಗೆಲ್ಲ ಅದರ ಮೇಲೆ ಮೋಹವೂ ಲೋಭವೂ ಉಂಟಾಗಿವೆ ಜಾಪಾನು ಮಂಚೂರಿಯದ ವಿಚಾರದಲ್ಲಿ ಇದೇ ಕಾರಣ ವರ್ತಿಸಿತು ಇಟೆಲಿಯೇ ಎಂದಲ್ಲ, ಹಲವರು ಅಬಿಸೀನಿಯದ ಮೇಲೆ ಇದಕ್ಕಾಗಿ ಕಣ್ಣಿಟ್ಟಿರುವರು" ಎಂದರು ಧರ್ಮ ಗುರುಗಳ ಈ ಮಾತಿನಲ್ಲಿ ವಾಸ್ತವಿಕತೆ ಬಹಳವಿದೆ

### ವಿಲಾಯತಿಗೆ ಹೋಗುವ ವಿದ್ಯಾರ್ಥಿಗಳು

ಪ್ರತಿ ವರ್ಷ ಎಷ್ಟೋ ಹಿಂದೀ ವಿದ್ಯಾರ್ಥಿಗಳು ಇಂಗ್ಲೆಂಡಿಗೋ ಇತರ ದೇಶಗಳಿಗೋ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಿದ್ದರಲ್ಲಿ, ಇವರ ಸಂಖ್ಯೆ ೨೦೦೦ವಾಗಿದೆ ಅಲ್ಲಿಗೆ ಹೋಗಿ ಕಲಿತುಕೊಂಡು ಬರಲು, ಅಷ್ಟು ಅಗತ್ಯವೇನು? ಇಲ್ಲಿಗೆ ಬಂದನಂತರ ಅವರಿಗೆ ಉದ್ಯೋಗವೆಲ್ಲಿದೆ? ಎಂಬ ವಿಷಯವಾಗಿ ಎಲ್ಲ ಯೂನಿವರ್ಸಿಟಿ ಅಧಿಕಾರಿಗಳನ್ನು ಕೇಳಲಾಗಿದೆ ಯಾವ ಅಧಿಕಾರಿಗಳಾದರೂ ಸಂಬಂಧದ ಸಲಹೆಗಳನ್ನು ಕೊಟ್ಟಂತೆ ತೋರುತ್ತಿಲ್ಲವಂತೆ ವಿಲಾಯತಿಯಿಂದ ಪಡೆದ ಡಿಗ್ರಿಗಳಿಗೆ ಬೆಲೆ ಹೆಚ್ಚಿದೆಯಾದರೂ, ಇಲ್ಲಿ ಅವೇ ಡಿಗ್ರಿಗಳನ್ನೂ ಪಡೆದವರಿಗೆ ಏಕೆ ಬೆಲೆ ಕಡಿಮೆಯಾಗಬೇಕು? ಅಲ್ಲಿನ ವಿದ್ಯಾಭ್ಯಾಸಕ್ರಮವನ್ನೇ ಇಲ್ಲಿಯೂ ವಿಧಿಸಿ, ಪರೀಕ್ಷೆಗಳನ್ನು ಅಷ್ಟು ಕಠಿನಮಾಡಿ, ಇಲ್ಲಿ ಪಾಸಾದವರಿಗೆ ಕೆಲಸವಿಲ್ಲವೆಂತಾದರೆ ನಾವು ಯುನಿವರ್ಸಿಟಿಗಳನ್ನು ಮುಚ್ಚಿ ಹಳ್ಳಿ ಶಾಲೆಗಳನ್ನು ಹೆಚ್ಚಿಸಬಾರದೇಕೆ? ವಿಲಾಯತಿಯಿಂದ ಕಲಿತು ಬಂದಿರುವವರು ದೇಶಕ್ಕಾಗಿ ಏನು ಮಹಾ ಸಾಧನೆಗಳನ್ನು ಮಾಡಿರುವರು? ಇಲ್ಲಿ ಸಿಗುವಷ್ಟು ವಿದ್ಯಾಭ್ಯಾಸವು ಇಲ್ಲೇ ದೊರೆವಾಗ ಅದಕ್ಕಾಗಿ ಅಲ್ಲಿಗೆ ಹೋಗಿ ಬಂದು ಇಲ್ಲಿನವರಿಗಿಂತ ತಾವೇ ಯೋಗ್ಯರೆಂದು ಹೇಳಿಸಿಕೊಳ್ಳುವುದರಲ್ಲಿ ಏನರ್ಥವಿದೆ? ಮಹತ್ವವಿದೆ? ಸರಕಾರದಲ್ಲಿ ಕೆಲವೇ ಜನರಿಗೆ ಉದ್ಯೋಗ ಸಿಗಬಹುದು. ಇಲ್ಲೇ ಪಾಸಾಗಿರುವವರೊಡನೆ ಇವರೂ ಸಮಾನಸ್ಕಂಧರಾಗಿ ಸ್ಪರ್ಧೆಗೆ ನಿಲ್ಲಬೇಕಾಗುವುದು, ಹೊರತು ಬೇರೆ ವಾಯುಮಂಡಲದ ಹವೆಯಿಂದ ಕೆಲವರ್ಷ ಅಧ್ಯಯನದಿಂದ ಬೆಳೆದೆನೆಂದೇ ಮಾತ್ರ ಅನ್ಯಾಯವಾಗಿ ಇಲ್ಲಿನ ಉದ್ಯೋಗಿಕ ವಾತಾವರಣವನ್ನು ಅವರು ಕೆಡಿಸಬಾರದಾಗಿ ಪ್ರಾಮುಖ್ಯರೆಲ್ಲ ಅಭಿಪ್ರಾಯವಾಗಿದೆ.

# ಮಂಗಳೂರು.

ಮದ್ರಾಸು ಸಂಸ್ಥಾನದ ಜೈಲುಗಳಲ್ಲಿ ಕಾಶಿ ಶಿಕ್ಷೆಗೆ ಗುರಿಯಾಗಿ, ಶಾಶಿಯ ದಿನವನ್ನು ನಿರೀಕ್ಷಿಸುವ ಕೈದಿಗಳು ಪ್ರಿವಿ ಕೌನ್ಸಿಲಿನ ಜುಡಿಶಿಯಲ್ ಕಮಿಟಿಗೆ ಅಪೀಲಿಗಾಗಿ ಬರೆಯುವಾಗ ಅಂತಹ ಅರ್ಜಿಯನ್ನು ದಿ ಸೆಕ್ರಿಟರಿ ಟು ದಿ ಗವರ್ನಮೆಂಟ್ ಒಫ್ ಮೆಡ್ರಾಸ್ ಇನ್ ದಿ ಹೋಂ ಡಿಪಾರ್ಟ್‌ಮೆಂಟ್ ಇವರಿಗೆ ಮಾಡಬೇಕೆಂದೂ, ಕೈದಿಗಳೇ ಅರ್ಜಿ ಮಾಡುವುದಾದರೆ, ಅವರಿರುವ ಜೈಲ್ ಸುಪರಿಂಟೆಂಡೆಂಟರಿಗೆ ಮಾಡಬೇಕೆಂದೂ ತಿಳಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಅಧ್ಯಾಪಕ ಪಂಡಿತರ ಸಭೆಯೊಂದು ಶ್ರೀ ಎಂ. ನರಸಿಂಗರಾವ್, ಬಿ. ಎ. ಎಂ. ಎಲ್. (ನಿವೃತ್ತ ಸೆಶನ್ಸ್ ಜಡ್ಜ) ಇವರ ಅಧ್ಯಕ್ಷತೆಯಲ್ಲಿ ಇದೇ ತಾ. ೧೫ರಲ್ಲಿ, ಮಂಗಳೂರು ಶ್ರೀಶಾರದಾನಿಕೇತನಾಲಯದಲ್ಲಿ ಸೇರಿತು. ಜಿಲ್ಲೆಯ ಪಂಡಿತರ ಸಂಘಸ್ಥಾಪನೆಯ ಅವಶ್ಯಕತೆ ಮತ್ತು ಉಪಯುಕ್ತತೆಯ ಕುರಿತು ಚರ್ಚೆ ನಡೆದು ಅಂತಹ ಒಂದು ಸಂಘವನ್ನು ಸ್ಥಾಪಿಸುವುದು ಅಗತ್ಯವೆಂದು ನಿರ್ಧಾರವಾಯಿತು. ನಿಯಮಾವಳಿಯು ಅಂಗೀಕೃತವಾದ ಬಳಿಕ ಅಧಿಕಾರಿಗಳ ಚುನಾವಣೆಯಾಗಿ ದಿವಂಗತ ಆಲಿಮಾನ್ ವೆಂಕಟರಾವ್ ಬಿ. ಎ. ಎಲ್. ಟಿ. ಮದರಾಸು ಪ್ರಾಚ್ಯವಿದ್ಯಾ ಸಂಶೋಧನ ಶಾಖೆ ಇವರ ಅಕಾಲ ನಿಧನದ ಕುರಿತು ಸಂತಾಪಸೂಚನೆಯಾದ ಮೇಲೆ ಅಭಿನಂದನೆ ಉಪಚಾರಾದಿಗಳೊಡನೆ ಸಭೆಯು ಕೊನೆಗೊಂಡಿತು. ಜಿಲ್ಲೆಯ ಪಂಡಿತರೊಳಗೆ ಮೈತ್ರಿಯನ್ನು ಬೆಳೆಯಿಸಿ ಐಕ್ಯವನ್ನುಂಟುಮಾಡುವುದು, ಪಂಡಿತರ ವೃತ್ತಿ ಗೌರವವನ್ನೂ ಉಪಯುಕ್ತತೆಯನ್ನೂ ಹೆಚ್ಚಿಸುವುದು ಮತ್ತು ಪ್ರಾಚ್ಯ ಭಾಷಾ ಸಂಸ್ಕೃತಿಗಳ ಉನ್ನತಿಯನ್ನು ಸಾಧಿಸುವುದು ಮೊದಲಾದ ಉದ್ದೇಶಗಳು ಅಂಗೀಕೃತವಾಗಿವೆ.

"ಇದು ವರೆಗೆ ಪಾಂಡೇಶ್ವರ ಮ್ಯುನಿಸಿಪಲ್ ಶಾಲೆ ಬಳಿಯ ಮನೆಯಲ್ಲಿದ್ದ 'ಮಂಗಳೂರು ಹಿಂದೂ ಆರ್ಯ ಸಮಾಜದ ಮಂದಿರವನ್ನು ಬದಲಾಯಿಸಿರುತ್ತದೆ. ಇದೇ ತಾ. ೧೬ರಿಂದ ಸಮಾಜ ಮಂದಿರದ ಎಲ್ಲಾ ಕಾರ್ಯಕ್ರಮಗಳು ಹಿಂದೂಸ್ಥಾನ ಸಿನೇಮಾ ಕಂಪೆನಿಯ ಎದುರಿನ ರಸ್ತೆ (ಅಳಕೆಶೆಟ್ಟಿ ಹೊಸ ರಸ್ತೆ) ಬದಿಯಲ್ಲಿರುವ ಮನೆಯಲ್ಲಿ ಪ್ರತಿ ಆದಿತ್ಯವಾರ ಸಾಯಂಕಾಲ ಘಂಟೆ ೪ ರಿಂದ ೬ರ ವರೆಗೆ ನಡೆಯುವುದು. ಆದೇ ಮೇರೆಗೆ ಇದೇ ತಾ. ೨೨ನೇ ಆದಿತ್ಯವಾರ ಸಂಜೆ ೪ ರಿಂದ ಶ್ರೀ ರಂಗರಾವ್ ತಲಚೇರಿಕರರು ಕನ್ನಡದಲ್ಲಿ ಭಾಷಣಮಾಡುವರು. ಗಾಯನ ಭಜನೆ ಇತ್ಯಾದಿಗಳು ಜರಗುವುದರಿಂದ ಸರ್ವರೂ ಸಹಾಯಿಸಬೇಕಾಗಿ ವಿನಂತಿ"ಯೆಂದು ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿಯವರು ತಿಳಿಸುತ್ತಾರೆ.

ತಾ. ೧೪–೮–೩೯ಕ್ಕೆ ಕೊನೆಗೊಂಡ ವಾರದ ಮಂಗಳೂರು ನಗರಸಭೆಯ ಆರೋಗ್ಯ ಶಾಖೆಯ ವರದಿಯಿಂದ ತಿಳಿದುಬರುವಂತೆ ಮಂಗಳೂರು ಮ್ಯುನಿಸಿಪಾಲಿಟಿಯೊಳಗೆ ಒಟ್ಟು ೩೧ ಮರಣಗಳೂ ೪೧ ಜನನಗಳೂ ಆಗಿವೆ.

ಇಲ್ಲಿಯ ಸಾಹುಕಾರ ಪಂಚ್ಯಾಲ ಕೃಷ್ಣರಾಯ ಶೆಣೈಯವರ ಕಿರಿಯ ಪುತ್ರರು ಇದೇ ಮಂಗಳವಾರ ರಾತ್ರಿ ಬಂದರದಲ್ಲಿ ನದಿಗೆ ಹಾರಿ ಪ್ರಾಣತ್ಯಾಗಮಾಡಿಕೊಂಡಿರುವರೆಂದೂ, ಶವವು ಮರುದಿನ ನೀರಿನಲ್ಲಿ ಕಾಣಸಿಕ್ಕಿತೆಂದೂ ತಿಳಿದುಬಂದಿದೆ. ಶ್ರೀಯುತರು ಇತ್ತೀಚೆಗೆ ವಿವಾಹವಾಗಿದ್ದರು.

ಸ್ಥಳೀಯ ಶ್ರೀ ಕೃಷ್ಣಾ ಸಿನೇಮಾದಲ್ಲಿ ೩-೨ರಿಂದ "ಅಗೋಚರ ಶಕ್ತಿ" ಎಂಬ ಚಲಚಿತ್ರವು ಪ್ರದರ್ಶಿಸಲ್ಪಡುತಿದೆ. ಇದು ಎಚ್ ಜಿ ವೆಲ್ಸರೆಂಬ ಮಹಾಕಾದಂಬರಿಕಾರರ ಕಥೆಯನ್ನಾಧರಿಸಿ ಬರೆಯಲ್ಪಟ್ಟುದು. ಇದೇ ತಾ. ೨೫ರಿಂದ "ದಿ ಮಿಲ್" ಎಂಬ ಚಿತ್ರವು ಪ್ರದರ್ಶಿಸಲ್ಪಡಲಿದೆ. ಇದರಲ್ಲಿ ಮಿಸ್ ಬಿಬ್ಬೋ, ಮಿ। ನಯಂಪಳ್ಳಿ ಮತ್ತು ಪೃಥ್ವಿರಾಜ್ ಮೊದಲಾದವರು ಅಭಿನಯಿಸಿರುವರು. "ಕಿಂಗ್ ಕೋಂಗ್" ಮತ್ತು ಕೈಟ್ಸಾ ಭೂಕಂಪಗಳ ಚಿತ್ರಗಳನ್ನು ತೋರಿಸಿ, ಕೈಟ್ಸಾ ಭೂಕಂಪ ಫಂಡಿನ ಪರವಾಗಿ ಇದೇ ತಾ. ೨೮ರಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಭೂಕಂಪದ ಅನಾಹುತ, ಬೀಳುವ ಕಟ್ಟಡ, ಶ್ರೀ ರಾಜೇಂದ್ರಪ್ರಸಾದರ ಸೇವಾಕಾರ್ಯಗಳೆಲ್ಲ ಈ ಚಿತ್ರದಲ್ಲಿ ಕಾಣಬಹುದು.

ಸ್ವೀಕಾರ —"ಸಚ್ಚರಿತ ಸುಬೋಧಕಥೆಗಳು" ಲೇಖಕರು ಶ್ರೀ ಬಿ. ಕೃಷ್ಣ ಪ್ರಭು, ಕ್ರಯ ೦-೩-೬ ಮುದ್ರಕರು ವಿಕ್ಟೋರಿಯಾ ಮುದ್ರಣಶಾಲೆ, ಬಂಟ್ವಾಳ. ಮಕ್ಕಳ ಪಠನೆಗೆ ಯೋಗ್ಯವಾದ ಪದ್ಧತಿ. ಸರಳವೂ ಉದ್ಬೋಧಕವೂ ಆದ ಭಾಷೆ, ಮಕ್ಕಳ ಸಾಹಿತ್ಯದಲ್ಲಿ ಇದಕ್ಕೆ ಯೋಗ್ಯ ಸ್ಥಾನವು ಸಲ್ಲತಕ್ಕದ್ದಿದೆ.

# ತಾಲೂಕುಗಳಿಂದ

ಹಿರಿಯಡ್ಕ —ಈ ಕೇಂದ್ರದ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಭೆಯು ತಾ ೧೪ರಲ್ಲಿ ಜರುಗಿ, ಅಧ್ಯಕ್ಷರಾಗಿ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ಭಾಷಣಮಾಡುತ್ತಾ, ಉಪಾಧ್ಯಾಯರು ರಾಷ್ಟ್ರಭಾಷೆಯಾದ ಹಿಂದೀಯನ್ನು ಕಲಿತು, ಅದರಪ್ರಚಾರ ಮಾಡುವ ಅವಶ್ಯಕತೆಯನ್ನು ಮನಗಾಣಿಸಿದರು. ಇದರಿಂದಾಗಿ ಕೆಲವು ಉಪಾಧ್ಯಾಯರು ಹಿಂದೀ ಭಾಷಾಭ್ಯಾಸಮಾಡಬೇಕೆಂದೂ ನಿಶ್ಚೈಸಿರುವರು.

ಇಲ್ಲಿಯ ಆರ್ಯಸಮಾಜದ ಆಶ್ರಯದಲ್ಲಿ, ಮಂಗಳೂರಿನಿಂದ ಬಂದಿದ್ದ ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿಯವರು ಇದೇ ತಾ. ೧೭ನೇ ದಿನ ಪೆರ್ಡೂರು ಅನಂತಪದ್ಮನಾಭ ದೇವಸ್ಥಾನದ ಮಾಳಿಗೆಯಲ್ಲಿ "ರಾಮರಾಜ್ಯ ವಿಯೋಗ—ರಾಮನ ಪಟ್ಟಾಭಿಷೇಕ" ಎಂಬ ಕುರಿತು ಹರಿಕಥೆ ನಡೆಸಿದರು.

ಮರುದಿನ (ತಾ ೧೮) ರಾತ್ರಿ ಹಿರಿಯಡ್ಕ ಹಾ। ಎ। ಶಾಲೆಯಲ್ಲಿ ಸೀತಾಸ್ವಯಂವರವೆಂಬ ಕಥೆಯನ್ನು ವಿವರಿಸಿದರು. ಈ ಸಂದರ್ಭಗಳಲ್ಲಿ ಆಧುನಿಕ ಕಾಲದ ಜಾತಿಭೇದ, ಇತರ ರೂಢಿಯ ಆಚರಣೆ, ಬಾಲ್ಯ ವಿವಾಹ ಇತ್ಯಾದಿಗಳ ಹಾನಿಯನ್ನು ವಿವರಿಸಿ ಹಿಂದೂಸಮಾಜದಲ್ಲಿ ಎಲ್ಲೆಲ್ಲಿಯೂ ಧಾರ್ಮಿಕ ಪ್ರಚಾರಕಾರ್ಯವು ತೀವ್ರರೀತಿಯಲ್ಲಿ ಜರಗಬೇಕೆಂದೂ ಈ ಬಗ್ಗೆ ಹಿಂದೂಗಳೆಲ್ಲರೂ ಮುಂದೆಬರಬೇಕೆಂದೂ ಸ್ಫೂರ್ತಿದಾಯಕವಾಗಿ ಭಾಷಣವಿತ್ತರು. ಊರ ಮಹನೀಯರೂ ಮಹಿಳೆಯರೂ ಪೂರ್ಣರೀತಿಯಿಂದ ಸಹಕರಿಸಿದ್ದರು.

ಉದ್ಯಾವರ:—ತಾ ೬–೯–೩೯ನೇ ಶುಕ್ರವಾರ ಇಲ್ಲಿಯ ಮತ್ತು ಕಟಪಾಡಿ ಹಿಂದೀ ಶಿಕ್ಷಣದ ಕೇಂದ್ರಗಳ ಹಿಂದೀಪ್ರೇಮೀ ವಿದ್ಯಾರ್ಥಿಗಳು ಇಲ್ಲಿಯ ಕೆಥೋಲಿಕ್ ಹಾ। ಎ। ಶಾಲೆಯಲ್ಲಿ ಶ್ರೀ ಕೊರಂಗಲ್ಪಾಡಿ ನಾರಾಯಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಸಭೆಸೇರಿ "ಹಿಂದೀಯ ಮಹತ್ವ ಮತ್ತು ಅದರ ಪ್ರಚಾರ"ದ ಕುರಿತು ರಸವತ್ತಾದ ಭಾಷಣವನ್ನು ಹಿಂದೀ ಅಧ್ಯಾಪಕರಾದ ಶ್ರೀ ರಾಮಕೃಷ್ಣಾಚಾರ್ ಬಿ. ಎ. ರಾಷ್ಟ್ರಭಾಷಾ ವಿಶಾರದ ಶ್ರೀ ಜೆ. ಜನಾರ್ಧನ ಶೆಣೈ ಶ್ರೀಗಳೂ ಡಾ। ಟಿ ವೈ ಸೋಮಯಾಜಿ ಮಾಸ್ಟರ್, ಶ್ರೀ ಕೆ ಪಿ ಶಾಮಂತ ಮಾಸ್ಟರ್ ಲಕ್ಷ್ಮೀ ನಾರಾಯಣ ನಾಯಕ್ ಟೈಲರ್ ಇವರೇ ಮೊದಲಾದ ಮಹನೀಯರೂ ಮಾಡಿದ ಮೇಲೆ ಹಿಂದೀ ಅಧ್ಯಾಪಕ ರಾಮಕೃಷ್ಣಾಚಾರ್ಯರಿಗೆ ಮಾನಪತ್ರ ತಥಾ ಸಿಲ್ಕ್ ಅರ್ಪಿಸೋಣ ಗ್ರೂಪ ಫೋಟೋ ಟೀಪಾರ್ಟಿ ವಗೈರೆ ಸತ್ಕಾರಗಳಾದ ಮೇಲೆ ಸಭೆಯು ಮುಕ್ತಾಯವಾಯಿತು.

ಕಟಪಾಡಿ — ತಾ ೩ ೪ ಬನೇ ದಿನಗಳಲ್ಲಿ ಇಲ್ಲಿ ಸುಪ್ರಸಿದ್ಧ ವಾಚನಕಾರರಾದ ಶ್ರೀ ನಾರಾಯಣ ಕಿಲ್ಲೆ ಇವರಿಂದ 'ಅಂಗದ ಸಂಧಾನ, ಮಯೂರಧ್ವಜ ಕಾಳಗ'ದ ಅಧ್ಯಾಯಗಳ ವಾಚನವು ಯಶಸ್ವಿಯಾಗಿ ಜರಗಿತು. ವಾಚನಕ್ಕೆ ಎಲ್ಲಾ ಕಡೆಗಳಿಂದಲೂ ತುಂಬಾ ಜನಸಮುದಾಯವು ನೆರೆದಿತ್ತು. ಇದರ ಉತ್ಪತ್ತಿಯನ್ನು ಜಿಲ್ಲಾ ಹರಿಜನ ಸೇವಾಸಂಘಕ್ಕೆ ಅರ್ಪಿಸೋಣ ಯಿತು.

ತಾ ೮ನೇ ದಿನ ಇಲ್ಲಿಯ ಕಟಪಾಡಿ ಕೇಂದ್ರದಿಂದ ಪ್ರಾಥಮಿಕ ಮಾಧ್ಯಮಿಕ, ರಾಷ್ಟ್ರಭಾಷಾ ತರಗತಿಗಳ ಹಿಂದೀ ಪರೀಕ್ಷೆಗೆ ಒಟ್ಟು ೧೨ ಜನ ವಿದ್ಯಾರ್ಥಿಗಳು ಆಯಾಯ ತರಗತಿಗಳಿಂದ ಪರೀಕ್ಷೆಯಲ್ಲಿ ಭಾಗವಹಿಸಿದರು.

ಕೆನ್ನಿಗೋಳಿ —ಇದೇ ತಾ ೧೪ರಲ್ಲಿ ಮಂಗಳೂರಿನ ಹೆಲ್ತ್ ಇನ್ಸಪೆಕ್ಟರರು ಇಲ್ಲಿನ ಪಂಚಾಯತ ಕೋರ್ಟಿನ ಕಟ್ಟೋಣದಲ್ಲಿ "ಕೊಳಕು ಹಾಲುವಿನಿಂದ ಆಗುವ ಅನಾಹುತಗಳು" ಎಂಬ ಕುರಿತು ಮಾಯಾಲಾಂತ್ರ ಮುಖೇನ ತೋರಿಸಿ ಅದರ ನಿವಾರಣೋಪಾಯ ಮೊದಲಾದುವುಗಳ ವಿಷಯ ಭಾಷಣಮಾಡಿದರು.

ಈ ವರ್ಷ ಸರಕಾರದವರು ಹೆಚ್ಚಿನ ಹಣವನ್ನು ಗ್ರಾಮಾಭಿವೃದ್ಧಿಗೋಸ್ಕರ ಮಂಗಡಿಸಿಟ್ಟದ್ದಾರಾಗಿಯೂ ಅದರ ವಿನಿಯೋಗವು ಆಯಾಯ ಜಿಲ್ಲಾ ಬೋರ್ಡುಗಳ ಮೂಲಕವೆಂದೂ ತಿಳಿದುಬರುತ್ತದೆ. ಈ ಪೇಟೆಯ ನಿವಾಸಿಕರು ಹಲವು ವರ್ಷಗಳಿಂದ ಅಪೇಕ್ಷಿಸುತ್ತಿರುವ ಈ ಪೇಟೆಗೆ ಅಗತ್ಯವಿರುವ ಓವರ್ ಟ್ರೆನ್ಚ್ ಮಡ್ಡಿ ವ್ಯಾಳನ್ನು ಜಿಲ್ಲಾ ಬೋರ್ಡಿನವರು ಈ ಸಲ ನೆರವೇರಿಸುವರೆಂದು ನಿರೀಕ್ಷಿಸಲಾಗಿದೆ.

ಕುಂದಾಪುರ—ಇಲ್ಲಿನ ಕರ್ನಾಟಕ ಭಾಷಾಭಿಮಾನಿಗಳ ಪ್ರೋತ್ಸಾಹದಿಂದ ಇದೇ ತಾ. ೮ರಲ್ಲಿ, ಸ್ಥಳೀಯ ಥಿಯಾಸೊಫಿಕಲ್ ಲೋಜಿನಲ್ಲಿ ಶ್ರೀ ಬಿ ರಘುನಾಥ ರಾವ್, ಬಿ. ಎ. (ಮಾಜಿ ಹ್ಯಾಕ್ಸೂಲ್ ಹೆಡ್ಮಾಸ್ತರರು) ಇವರ ಅಧ್ಯಕ್ಷತೆಯಲ್ಲಿ ಕನ್ನಡ ಸಭೆಯು ಜರಗಿತು. ಪ್ರಾರ್ಥನೆಯಾಗಿ, ಕಾರ್ಯಕ್ರಮದಂತೆ, ಕುಂದಾಪುರದಲ್ಲಿ ಕನ್ನಡ ಸಂಘವನ್ನು ಸ್ಥಾಪಿಸುವ ಅವಶ್ಯಕತೆಯ ಕುರಿತು ಇಲ್ಲಿಯ ಡಿಪ್ಟಿ ಇನ್ಸ್‌ಪೆಕ್ಟರರಾದ ಶ್ರೀ ಎಚ್ ಸಂಜೀವರಾವ್, ಬಿ ಎ ಎಲ್ ಟಿ ಇವರು ಬೋಧಕರ ಭಾಷಣವನ್ನು ಮಾಡಿದರು. ಸ್ಥಳೀಯ ಹೈಸ್ಕೂಲಿನ ಕನ್ನಡ ಪಂಡಿತರಾದ ವಿದ್ವಾನ್ ಶ್ರೀ ಕುಪ್ಪಸ್ವಾಮಾಚಾರ್ಯರವರು ಕನ್ನಡ ಸಾಹಿತ್ಯದ ವಿಪುಲತೆಯನ್ನೂ ಪೂರ್ವಕಾಲದ ರಾಜರ ಪ್ರೋತ್ಸಾಹವನ್ನೂ ವರ್ಣಿಸಿ ಸಂಘಸ್ಥಾಪನೆಯನ್ನು ಸಮರ್ಥಿಸಿದರು. ಶ್ರೀಗಳಾದ ಎಚ್ ಕೋಟಿಯಪ್ಪ ಶೆಟ್ಟಿ, ಕಳವಾರ ಶಾಲೆಯ ಮುಖ್ಯೋಪಾಧ್ಯಾಯರಾದ ಚಕ್ರಪಾಣಿ ನರಸಿಂಹಯ್ಯನವರು, ಕೋಣಿ ಅಣ್ಣಪ್ಪ ಕಾರಂತರು, ಎನ್ ವಾಸುದೇವ ಹೆಬ್ಬಾರರು ಕೆ ಪಿ. ಅಪ್ಪಾಜಿರಾವ್ ಇವರೇ ಮೊದಲಾದವರು ಪ್ರಕೃತ ವಿಷಯದಲ್ಲಿ ಭಾಷಣಗಳನ್ನು ಮಾಡಿದ ಮೇಲೆ ನೆರೆದ ಸಭಿಕರಲ್ಲಿ ಇಲ್ಲಿಯ ಪ್ರಸಿದ್ಧ ವಕೀಲರ ಕೂಡ ರಾ। ಎಂ. ನರಸಿಂಹ ಕಾಮತರೂ, ರಾ। ಕೆ ಎಲ್ ಭಂಡಾರಿಯೂ ಸಂಘದ ಅವಶ್ಯಕತೆಯನ್ನು ವಿವರಿಸಿ ಮುಂದಿನ ಅಭ್ಯುದಯವನ್ನು ಹಾರೈಸಿ ಭಾಷಣಗಳನ್ನು ಮಾಡಿದರು. ತದನಂತರ ಈ ಸಂಘಕ್ಕೆ "ಕರ್ನಾಟಕ ಸಾಹಿತ್ಯ ಸಂಘ"ವೆಂದು ಹೆಸರಿಡಬೇಕೆಂದೂ, ಕನ್ನಡದಲ್ಲಿ ವಾಚನ, ಭಾಷಣ, ಲೇಖನ, ತರ್ಕ ಮೊದಲಾದ ತರಬೇತಿಯನ್ನುಂಟುಮಾಡಬೇಕೆಂದೂ ಆ ಬಗ್ಗೆ ಪ್ರಕೃತ ತಿಂಗಳಲ್ಲಿ ಎರಡಾವರ್ತಿ ಸಭೆಗಳನ್ನು ಜರಗಿಸಬೇಕೆಂದೂ ಸರ್ವಾನುಮತದಿಂದ ನಿರ್ಣಯವಾಯಿತು. ಮುಂದಿನ ಕಾರ್ಯನಿರ್ವಹಣೆಗೆ ೧೦ ಜನರಿಂದ ಕೂಡಿದ ಕಾರ್ಯನಿರ್ವಾಹಕ ಕಮಿಟಿಯೊಂದು ಸ್ಥಾಪಿತವಾಗಿ, ಅವರಲ್ಲಿ ವಕೀಲ್ ನರಸಿಂಹ ಕಾಮತರು ಅಧ್ಯಕ್ಷರಾಗಬೇಕೆಂದೂ ಎಚ್ ಕೋಟಿಯಪ್ಪ ಶೆಟ್ಟಿ ಮತ್ತು ಪಿ. ಕುಪ್ಪಸ್ವಾಮಾಚಾರ್ಯರು ಜತೆಕಾರ್ಯದರ್ಶಿಗಳಾಗಬೇಕೆಂದೂ ಸರ್ವಾನುಮತದಿಂದ ನಿರ್ಣಯವಾಯಿತು. ಅಧ್ಯಕ್ಷ ಮಹಾಶಯರು ಸಂಘದ ಅಭಿವೃದ್ಧಿಯನ್ನು ಹಾರೈಸಿ ಪ್ರೋತ್ಸಾಹಪರವಾದ ಭಾಷಣವನ್ನು ಮಾಡಿದ ಮೇಲೆ ಸಭೆಯು ಕೊನೆಗೊಂಡಿತು. ಮುಂದಿನ ಸಭೆಯು ಇದೇ ತಾ ೨೨ನೇ ಆದಿತ್ಯವಾರ ಜರಗುವುದು. ರಾ। ಕೋಣಿ ಅಣ್ಣಪ್ಪ ಕಾರಂತರು "ಯಕ್ಷಗಾನ ಸಾಹಿತ್ಯವೂ ಕರ್ನಾಟಕ ವಾಙ್ಮಯವೂ" ಎಂಬ ವಿಷಯದಲ್ಲಿ ಉಪನ್ಯಾಸವನ್ನು ಮಾಡುವರು. ಕರ್ನಾಟಕ ಸಾಹಿತ್ಯದಲ್ಲಿ ಅಭಿಮಾನವುಳ್ಳ ಮಹಾಶಯರೆಲ್ಲರೂ ದಯವಿಟ್ಟು ಬರಬೇಕಾಗಿ ಆಗ್ರಹಪೂರ್ವಕ ವಿನಂತಿ.

ಉಡುಪಿ:—ಇದೇ ತಾ. ೧೫ಕ್ಕೆ ಉಡುಪಿ (ಶಿವಳ್ಳಿ) ಪಂಚಾಯತ ಕೋರ್ಟಿನ ಅಧ್ಯಕ್ಷ ಚುನಾವಣೆಯಾಯಿತು. ಹಿಂದೆ ಅಧ್ಯಕ್ಷರಾಗಿದ್ದ ಶ್ರೀ ಪಿ ನಾರಾಯಣ ಪ್ರಭು, ಪ್ರಕಾಶಕ ಉಪಾಸನೆಯ ಪ್ರಾಲಿಕರು ಬಹುಮತದಿಂದ ಆರಿಸಲ್ಪಟ್ಟಿದ್ದಾರೆ.

ಇದೇ ತಾ ೨೫ರಿಂದ ಅಕ್ಟೋಬರ ತಾ. ೩೦ ವರೆಗೆ ಅಖಿಲ ಭಾರತದಲ್ಲಿ ಸಾರ್ವಜನಿಕವಾಗಿ ಆಚರಿಸತಕ್ಕದೆಂದು ರಾಷ್ಟ್ರಸಭಾಧ್ಯಕ್ಷರಾಗಿ ಶ್ರೀ ಬಾಬುರಾಜೇಂದ್ರಪ್ರಸಾದರು ಜಾಹೀರುಮಾಡಿರುವಂತೆ, ಮಹಾತ್ಮಾಗಾಂಧಿಯವರ ಜನ್ಮೋತ್ಸವವು ಜರಗಲಿಕ್ಕಿದ್ದೆ. ಅಂತೆಯೆ ಮುಖ್ಯ ಕಾರ್ಯಕ್ರಮವಾಗಿ ಮಹಾತ್ಮರಿಗೆ ಅತ್ಯಂತ ಪ್ರಿಯಕರವೂ ಲೋಕಹಿತದೃಷ್ಟಿಯಿಂದ ವಿಧಾಯಕ ಕಾರ್ಯವೂ ಆಗಿರತಕ್ಕ ಖಾದಿಪ್ರಸಾರ ಮತ್ತು ಅಸ್ಪೃಶ್ಯತಾ ನಿವಾರಣೆಗಳನ್ನು ಕೈಕೊಳ್ಳತಕ್ಕದ್ದಿದೆ. ಕನ್ನಡಿಗರೂ, ಮೇಲಾಗಿ ನಮ್ಮ ಜಿಲ್ಲೆಯ ಬಾಂಧವರು ಈ ಕಾರ್ಯಕ್ರಮದಲ್ಲಿ ಸಂಪೂರ್ಣಮನಸ್ಸಿನಿಂದ ನೆರವಾಗುವರೆಂದು ಹಾರೈಸಲಾಗುತ್ತದೆ. ಲೋಕವಿಖ್ಯಾತ ಮಹಾತ್ಮಾ ಗಾಂಧಿಯವರು ದೇಶದ ಏಳಿಗೆಯ ಇರುತ್ತಾ, ಇವರ ಜನ್ಮೋತ್ಸವ ಕಾಲದಲ್ಲಿ ಇದನ್ನು ಖದ್ದರಾದಿಯನ್ನು ದರೂ ಕೊಂಡುಕೊಂಡು ಈ ಸಂತೋಷಸಮಯದಲ್ಲಿ ನೆರವಾಗಬಾರದೇ?

ಕೋರ್ಟಿನ ಬ್ರಾಹ್ಮಣರ ವಿಚಾರವಾಗಿ ಚಿತ್ರದುರ್ಗದ ಮಾ। ಕೋರ್ಟಿನಲ್ಲಿ ಇಲ್ಲಿಯ ಶ್ರೀ ಪೇಜಾವರ ಸ್ವಾಮಿಯವರ ಮೇಲೆ ತಪ್ಪುಹೊರಿಸಲಾಗಿ ಜರುಮಾನೆಯು ವಿಧಿಸಲಾಗಿತ್ತು, ಈ ಬಗ್ಗೆ ಶಿವಮೊಗ್ಗ ಕೋರ್ಟಿನಲ್ಲಿ ಅಪೀಲು ಮಾಡಿದ್ದಲ್ಲಿ ಸದ್ರಿ ತಪ್ಪೀರು ತೆಗೆದು ಹಾಕಲ್ಪಟ್ಟಿತಲ್ಲದೆ, ಜುರುಮಾನೆಯನ್ನು ಹಿಂದೆಗೆದುಕೊಳ್ಳಬೇಕೆಂದೂ ತೀರ್ಮಾನವಾಗಿದೆ.

## ದ. ಕನ್ನಡ ಜಿಲ್ಲೆಯಲ್ಲಿ ಮಾನ್ಯ ಗವರ್ನರರಾದ

# ಲೋರ್ಡ್ ಎರ್ಸ್ಕಿನ್

## ಪ್ರವಾಸದ ಕಾರ್ಯಕ್ರಮ

ಇದೇ ಅಕ್ಟೋಬರ ತಾ ೧೯ನೇ ದಿನ ಮೋಟಾರ ಉದಕಮಂಡಲದಿಂದ ಹೊರಡುವರು. ಮೆಟ್ಟುಪಾಳೆಯದಲ್ಲಿ ಸಂಜೆ ಅವರು ಸ್ಪೆಶಲ್ ರೈಲು ಹತ್ತಿ ಮರುದಿನ ಬೆಳಿಗ್ಗೆ ಮಂಗಳೂರಿಗೆ ತಲಪುವರು. ಮಂಗಳೂರಿನಲ್ಲಿ ೪ ದಿನ ತಡೆಯುವರು. ಆ ನಾಲ್ಕು ದಿನಗಳಲ್ಲಿ ಅವರು ಉಪ್ಪಿನಂಗಡಿ, ಮೂಡಬಿದ್ರೆ ಮತ್ತು ಕಾರ್ಕಳಗಳನ್ನು ಸಂದರ್ಶಿಸುವರು. ತಾ ೨೫ನೇ ದಿನ ಸಂಜೆ ೬-೩೦ಕ್ಕೆ ಮಂಗಳೂರಿನಿಂದ ಹೊರಟು ಅವರ ಪರಿವಾರವು ಎರ್ನಾಕುಲಮಿಗೆ ಹೋಗುವುದು. ತಾ. ೨೯, ೩೦ ಮತ್ತು ೩೧ನೇ ದಿನಗಳಲ್ಲಿ ಅಲ್ಲಿ ತಡೆಯುವರು. ಅಲ್ಲಿ, ಅವರು ಬೋಲ್‌ಗಟ್ಟಿ ರೆಸಿಡೆನ್ಸಿಯಲ್ಲಿ ವಾಸಿಸುವರು. ಗವರ್ನರರೊಡನೆ ಲೇಡಿ ಮೆಜೋರಿ ಎರ್ಸ್ಕಿನರೂ ಬರುವರು. ಇವರಲ್ಲದೆ ಗವರ್ನರರ ಪರಿವಾರದಲ್ಲಿ ಮಿಸ್ ಜೆಮಿಲ್ಸನ್, ಮಿ। ಡಿ ಎಚ್ ಎಲ್ವಿನ್, ಪ್ರೈವೇಟ್ ಸೆಕ್ರಿಟರಿ, ಮೇಜರ್ ಡಿ ಪಿ ಜೋನ್ಸ್‌ಸ್ಟನ್ ಸರ್ಜನ್ ಮತ್ತು ಕೇಪ್ಟನ್ ಆರ್ ಡಬ್ಲ್ಯು. ಎ ಡಿ. ಸಿ ಇವರೂ ಬರುವರು.

ಕಾರ್ಕಳ —ಇದೇ ತಾ. ೨೧ನೇ ಶನಿವಾರ ದಿನ ಬೋರ್ಡು ಮೈನ್ ಎ। ಶಾಲೆಯಲ್ಲಿ ಕಾರ್ಕಳ ತಾಲೂಕು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ವರ್ಷಾವಧಿ ಮಹಾಸಭೆಯು ಜರಗುವುದು. ಆ ದಿನ ಬೆಳಿಗ್ಗೆ ಘಂಟೆ ೧೧ಕ್ಕೆ ಸರಿಯಾಗಿ ವಿಷಯನಿಯಾಮಕ ಸಭೆಯೂ ಅಪರಾಹ್ನ ೩ ಘಂಟೆಗೆ ಸರಿಯಾಗಿ ಜಾಹೀರು ಸಭೆಯೂ ನಡೆಯುವುದು. ಠರಾವುಗಳನ್ನು ಕಳುಹಿಸುವವರು ಕಾರ್ಯದರ್ಶಿಗಳಿಗೆ ಮುಂಚಿತವಾಗಿ ಕಳುಹಿಸತಕ್ಕದೆಂದೂ, ಸಂಬಂಧಪಟ್ಟ ಎಲ್ಲಾ ಉಪಾಧ್ಯಾಯರ ಉಪಸ್ಥಿತಿಯು ಅಪೇಕ್ಷಿಸಲ್ಪಟ್ಟಿದೆಯೆಂದೂ ಕಾರ್ಯದರ್ಶಿಯವರು ತಿಳಿಸುತ್ತಾರೆ.

## ಗವರ್ನರರಿಗೆ ಮಾನಪತ್ರ

ನಗರಸಭೆಯಿಂದ ನೇಮಕಗೊಂಡಿದ ಉಪಸಮಿತಿಯು ಗವರ್ನರ್ ಪ್ರಭುಗಳಿಗೆ ಕೊಡತಕ್ಕ ಮಾನಪತ್ರವನ್ನು ಬರೆದು ತಾ ೧೯ನೇ ದಿನ ಡಾ। ಪಿ ಕೆ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆಗೆ ಹಾಜರುಪಡಿಸಿತು. ಅದು ಅತಿ ಉತ್ಕೃಷ್ಟ ಭಾಷೆಯಲ್ಲಿ ಬರೆಯಲ್ಪಟ್ಟಿತಲ್ಲದೆ ಮಂಗಳೂರಿನ ಸ್ಥಿತಿ, ಅಧಿಪತ್ಯದಲ್ಲಿ ಅದರ ಸ್ಥಾನ ಅದರ ಭಾಷೆ ಸಂಸ್ಕೃತಿ, ವ್ಯಾಪಾರ ಪ್ರಪಂಚದಲ್ಲಿ ಅದರ ಪ್ರಾಮುಖ್ಯತೆ ಇವನ್ನೆಲ್ಲಾ ಒಳಕೊಂಡಿದೆ ಮಾತ್ರ ಅದರಲ್ಲಿ ಮಂಗಳೂರಿಗೆ ಪ್ರಕೃತ ಅವಶ್ಯವಾದ ಪಿಸೆಗಳನ್ನು ನಿರೂಪಿಸಲ್ಪಟ್ಟಿದೆ. ನಗರಸಭಾ ಮಂದಿರ ಅದಕ್ಕೆ ಟೌನ್ ಸ್ಕ್ವೇರಿನಲ್ಲಿ ಒಂದು ಜಾಗ ಕೊಡಬೇಕೆಂದೂ ೧೦೦ನೆ ಸರಬರಾಜು ಸ್ಕೀಮನ್ನು ಜಾರಿಗೆ ತರುವಂತೆ ಮುಂದಿನ ಪ್ರಭುಗಳು ಸಹಾಯಮಾಡಬೇಕೆಂದೂ, ಚರಂಡಿಗಳ ದುರುಸ್ತಿನ ಬಗ್ಗೆ ಒಂದು ಸ್ಕೀಮನ್ನು ಕೊಡಿಸಬೇಕೆಂದೂ ಮದ್ರಾಸ್ ಎಸೆಂಬ್ಲಿಯಲ್ಲಿ ದಕ್ಷಿಣ ಕನ್ನಡದ ಪಟ್ಟಣಗಳ ಪ್ರತಿನಿಧಿಯೊಬ್ಬನಿಗೆ ಸ್ಥಳ ದೊರೆಯಬೇಕೆಂದೂ ಅದು ಸಾಧ್ಯವಾಗದಿದ್ದರೆ ಜನರಲ್ ಸೀಟಿನಿಂದ ಒಂದನ್ನು ಇಲ್ಲಿಗೆ ಕೊಡಿಸಬೇಕೆಂದೂ ಆ ಮಾನಪತ್ರದಲ್ಲಿ ಬೇಡಲ್ಪಟ್ಟಿದೆ. ಕೆಲವು ಬಿಲ್ಲುಗಳನ್ನು ವ್ಯಾಖ್ಯಾನ ಮಾಡಿ ಅದನ್ನು ಮತ್ತಸ್ಟು ಒಳ್ಳೇದಾಗಿ ಬರೆದಿದ್ದ ವೈದ್ಯಶಾಲೆಯ ಭಾಗವನ್ನು ಕೇಳುವ ವಿಷಯದಲ್ಲಿ ತಮ ಆಕ್ಷೇಪವಿದೆಯೆಂದು ಉಪಾಧ್ಯಕ್ಷರು ಹೇಳಿದರು. ಮಂದಿ ಜನರಿಗೆ ವ್ಯಾಯಾಮಶಾಲೆಗಾಗಿ ಇರುವುದು ಒಂದೇ ಮೈದಾನು, ಇದರಿಂದ ಬಹಳ ತೊಂದರೆ ಅನೇಕ ತೊಂದರೆಯಾಗುವುದು. ಒಂದು ವೇಳೆ ಇದನ್ನು ಕೇಳಿದರೆ ತಾವು ಕೊಡಬಾರದಾಗಿ ಗವರ್ನರ ಪ್ರಭುಗಳು ಮನವಿ ಮಾಡಿಕೊಳ್ಳುವುದಾಗಿ ತಿಳಿಸಿದರು. ಉಪಾಧ್ಯಕ್ಷರ ಸಕಾರಣಯುಕ್ತವಾದ ವಾದವನ್ನು ಸಭೆಯವರು ಒಪ್ಪಿ ನಗರಸಭೆಗೆ ಯೋಗ್ಯವಾದ ಸ್ಥಳವನ್ನು ದಯಪಾಲಿಸಬೇಕೆಂದು ಬರೆದರು. ಇಷ್ಟು ವ್ಯಾಖ್ಯಾನಗಳಲ್ಲಿ ಹೆಚ್ಚಿನದೇನೂ ಮಾಡಲಿಲ್ಲ. ಬಾಕಿ ವಿಷಯಗಳಲ್ಲಿ ಇದ್ದಂತೆಯೇ ಮಂಜೂರಾದುವು. ಇದರ ಪ್ರತಿಯು ಸರಕಾರದ ಒಪ್ಪಿಗೆಗಾಗಿ ಕಳುಹಿಸಬೇಕೆಂದಾಯಿತು.

ಮಂಗಳೂರು ಹಿಂದೂ ಆರ್ಯಸಮಾಜದಲ್ಲಿ ಮೊದಲು ನಿರ್ಣಯಿಸಲ್ಪಟ್ಟಂತೆ ಇದೇ ತಾ ೧೫ ಆದಿತ್ಯವಾರ ಸಾಯಂಕಾಲ ಗಂಟೆ ೫ಕ್ಕೆ ಪಾಂಡೇಶ್ವರ ಕೊರಗಪ್ಪಶೆಟ್ಟರ ಮನೆಯಲ್ಲಿ ಹೋಮ, ಪ್ರಾರ್ಥನೆ, ಭಜನೆ ಮತ್ತು ಭಾಷಣವು ನೆರವೇರಿ ಕಿಂಚಿತ್ ಫಲಾಹಾರದ ನಂತರ ಸಭಾಂತ್ಯವಾಯಿತು.

## ಶಾಸನಸಭೆಯಲ್ಲಿ ಲಾರ್ಡ್ ವಿಲ್ಲಿಂಗ್ಡನ್ನರ ಭಾಷಣ.

ಸಿಮ್ಲಾ, ತಾ. ೧೬.

ವೈಸರಾಯರಾದ ಲಾರ್ಡ್ ವಿಲ್ಲಿಂಗ್ಡನ್ನರು ಉಭಯ ಶಾಸನಸಭೆಗಳ ಸಂಯುಕ್ತ ಸಮಾವೇಶದಲ್ಲಿ ಈ ದಿನ ಒಂದು ಗಂಟೆಯ ಕಾಲ ಭಾಷಣಮಾಡಿದರು. ಹಿಂದೂ ದೇಶದ ಸಂಬಂಧವಾಗಿ ವಿದ್ಯಮಾನಗಳ ಪರಿಶೀಲನೆ ಯನ್ನು ಸಮಗ್ರವಾಗಿಯೂ ಸಂಗ್ರಹರೂಪದಿಂದಲೂ ಮಾಡಿ ದರು. ಪರಕೀಯ ರಾಷ್ಟ್ರಗಳ ಸಂಬಂಧ, ದ್ವೀಪಾಂತರ ಗಳಲ್ಲಿರುವ ಭಾರತೀಯರು, ವ್ಯಾಪಾರ ಪರಿಸ್ಥಿತಿಗಳು, ಸಿವಿಲ್ ಏವಿಯೇಶನ್ (ವಿಮಾನ ಪ್ರಪಂಚ) ಬ್ರಾಡ್ ಕಾಸ್ಟಿಂಗ್ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿದರು. ಭಾರತೀಯರು ಹೊಸ ರಾಜ್ಯಾಂಗರಚನೆಯನ್ನು ಅದ ರಿಸಿ ಕಾರ್ಯಗತಮಾಡಬೇಕೆಂದೂ ಅದರಿಂದ ಭಾರ ತಕ್ಕೆ ಬಹಳ ಹಿತವಿದೆಯೆಂದೂ ತಿಳಿಸಿದರು. ಬ್ರಿಟಿಷ ಸರಕಾರಗಳೆಲ್ಲಾ ಟ್ರಿಬ್ಯುನಲ್ ಲಾ ಮಸೂದೆಗೆ ಸರ್ವಾನು ಮತದಿಂದ ಬೆಂಬಲರಾಗಿರುವುದರಿಂದಲೂ ಅದು ಶಾಸನ ಗ್ರಂಥದಲ್ಲಿ ಮುಂದೆಯೂ ಇರಬೇಕೆಂದೂ ಅದನ್ನು ಶಾಸನವನ್ನಾಗಿ ಮಾಡಲು ತಾನು ತನ್ನ ವಿಶೇಷಾಧಿಕಾರ ವನ್ನು ಪ್ರಯೋಗಿಸುವನೆಂದೂ ಹೇಳಿದರು. "ಆ ಮಸೂ ದೆಯು ಅತ್ಯಗತ್ಯ. ಹೊಸ ಸರಕಾರವು ಹೊಸ ವಿಧಾ ನಗಳನ್ನು ಹೊಂದಿಕೊಂಡು ಸ್ಥಿರವಾಗಿಯೂ ಸುರಕ್ಷಿತ ವಾಗಿಯೂ ಕೆಲಸಮಾಡಬೇಕಾದರೆ ಈ ಶಾಸನದಿಂದ ಉಂಟಾಗುವ ಭದ್ರತೆಯು ಅತ್ಯವಶ್ಯಕ" ಎಂದರು.

ಮುಂದೆ ಬರಲಿರುವ ವೈಸರಾಯರ ವಿಷಯವಾಗಿ ಲಾರ್ಡ್ ವಿಲ್ಲಿಂಗ್ಡನ್ನರು ಭಾಷಣಮಾಡುತ್ತಾ, ಲಾರ್ಡ್ ಲಿನ್ಲಿತ್‌ಗೋವರು ಹೊಸ ರಾಜ್ಯಾಂಗರಚನೆಯನ್ನು ಜಾರಿಗೆ ತರುವರೆಂದೂ ಅವರು ರಾಜ್ಯಾಂಗವಿಚಾರ ಗಳಲ್ಲಿ ಬಹು ಪರಿಣತರೆಂದೂ, ವ್ಯವಹಾರಕುಶಲರೆಂದೂ ಹೇಳಿ ಅವರನ್ನು ಪ್ರಶಂಸಿಸಿದರು.

ತನ್ನ ಭಾಷಣದಲ್ಲಿ ಲಾರ್ಡ್ ವಿಲ್ಲಿಂಗ್ಡನ್ನರು ಕೆಲವು ವಿಷಯಗಳನ್ನುಲ್ಲೇಖಿಸಿ "ನನ್ನ ವೈಸರಾಯ ಪದವಿಯ ಅವಧಿಯಲ್ಲಿ ಅಶೋಕ ಮಹಾಚಕ್ರವರ್ತಿಯ ಕಾಲದಿಂದಲೂ ನಡೆಯುತ್ತಿದ್ದ ಅನೇಕ ಶತಮಾನಗಳ ಪ್ರಯತ್ನವು ಸಫಲವಾಗಿ ಕಾರ್ಯರೂಪಕ್ಕೆ ಬಂದಿತು. ಹೊಸದಾಗಿ ಜಾರಿಗೆ ಬರುವ ಹೊಸ ರಾಜಕೀಯ ಸುಧಾ ರಣೆಗಳು, ಭಾರತೀಯ ಇತಿಹಾಸದಲ್ಲಿ ಮೊದಲನೇ ಸಾರಿ, ಇಡೀ ಭಾರತವನ್ನು ಒಂದೇ ಆಡಳಿತದ, ಒಂದೇ ಸರಕಾರದ ಅಧೀನದಲ್ಲಿ ತರುತ್ತದೆ. ಅಶೋಕನ ಕಾಲ ದಿಂದಲೂ ಭಾರತವನ್ನು ಐಕ್ಯ ಪ್ರಭುತ್ವಕ್ಕೆ ತರುವ ಪ್ರಯತ್ನವು ನಡೆಯುತ್ತಿತ್ತು. ಈಗ ಅದು ಸಫಲವಾ ಯಿತು ಎಂದು ಲಾರ್ಡ್ ವಿಲ್ಲಿಂಗ್ಡನ್ನರವರು ಹೇಳಿ ದರು.

## ಮುಸೋಲಿನಿಯವರ ನಿರ್ಧಾರ

"ಜಿನೀವಾದಲ್ಲಿ ಬ್ರಿಟಿಷರು ಮತ್ತು ಫ್ರೆಂಚರು ಮಾಡಿದ ಘೋಷಣದಿಂದುಂಟಾದ ಪರಿಸ್ಥಿತಿಯನ್ನು ನಮ್ಮ ಮಂತ್ರಿಮಂಡಲವು ಎರಡೂವರೆ ತಾಸುಗಳ ಪರ್ಯಂತರ ಆಲೋಚಿಸಿತು. ಜನವರಿಯ ಇಟಾಲೋ ಫ್ರೆಂಚ್ ಒಪ್ಪಂದಗಳ ಬಗ್ಗೆ ಲಾವಲರು ಆಡಿದ ಆದರಣೆಯ ಮಾತುಗಳಿಗಾಗಿ ನಾವು ತೃಪ್ತಿ ಸೂಚಿಸುತ್ತೇವೆ. ಇಟಲಿಯು ಆ ಒಪ್ಪಂದಗಳ ರೀತಿಯ ಸ್ನೇಹವನ್ನು ಇಟಲಿ ಮತ್ತು ಫ್ರಾನ್ಸಿನ ಹಿತಗಳಿಗೆ ಮಾತ್ರವೇ ಎಂದು ಹೇಳುವು ದಿಲ್ಲ. ಇಡೀ ಯೂರೋಪಿನ ಸಹಕಾರಕ್ಕಾಗಿಯೇ ಎಂದು ನಾವು ಒಪ್ಪುತ್ತೇವೆ. ಇಟಲಿ, ಎಬಿಸೀನಿಯಾ ವ್ಯವಹಾರದಲ್ಲಿ ರಾಜಿಯ ಯಾವ ಪರಿಹಾರಕ್ಕೂ ಅವಕಾಶ ವಿಲ್ಲ. ಇಟಲಿಯು ಎಲ್ಲಾ ಪ್ರಯತ್ನಗಳನ್ನು ಮಾಡಿದೆ, ಸ್ವಾರ್ಥತ್ಯಾಗ ಮಾಡಿದೆ. ಆದರೆ, ರಾಜಿಯ ಮಾತು ಮಾತ್ರ ಇಲ್ಲ. ಇಟಲಿಯ ವಾದವು ಅಪ್ರತಿಹತವಾದುದು, ಇಟಲಿಯ ವಾದವು ನ್ಯಾಯವಾದುದೆಂದು ನಾವು ಸಾರಿ ಸಾರಿ ಹೇಳುತ್ತೇವೆ" ಎಂದು ಮುಸೋಲಿನಿಯವರು ಮೊನ್ನೆ ಮಂತ್ರಿಮಂಡಲದಲ್ಲಿ ಹೇಳಿದರು.

## ವಿಷಪ್ರಯೋಗದಿಂದ ಮರಣ

ಕಲ್ಕತ್ತದ ಶ್ರೀ ಸುಬೋಧ ಕೃಷ್ಣಬಾಸು ಎಂಬವರ ಇಬ್ಬರು ಮಕ್ಕಳು ಊಟಮಾಡುತ್ತಿದ್ದಾಗ ಕೂಡಲೆಯೇ ಮೂರ್ಛೆಗೊಂಡರು. ಒಬ್ಬ ಮಗನ ಪ್ರಾಯ ೬ ವರ್ಷ ಇನ್ನೊಬ್ಬನಿಗೆ ೮ ವರ್ಷ. ಅವರ ಮೂರು ವರ್ಷ ಪ್ರಾಯದ ಮಗುವು ಊಟಮಾಡಿದ ಐದು ನಿಮಿಷಗಳಲ್ಲಿ ತೀರಿಕೊಂಡಿತು. ತಂದೆತಾಯಿಗಳು ಮಕ್ಕಳೊಡನೆ ಊಟಮಾಡದಿದ್ದುದರಿಂದ ಬದುಕಿಕೊಂಡರು. ಅವರ ಅಂದಿನ ಆಹಾರವನ್ನೆಲ್ಲಾ ರಸಾಯನಶಾಲೆಗೆ ಪರೀಕ್ಷೆ ಗಾಗಿ ಕಳುಹಿಸಲಾಗಿದೆ.

## ಶ್ರೀಮತಿ ಕಮಲಾನೆಹರುರವರು.

ಬರ್ಲಿನ್, ಸಪ್ಟಂಬರ, ೧೫,

ಶ್ರೀಮತಿಯವರ ಸಾವಕಾಶ ದೇಹಸ್ಥಿತಿಯು ಉತ್ತಮ ಗೊಳ್ಳುತ್ತಿದೆ. ಎದೆಯಲ್ಲಿ ಹೆಚ್ಚಾಗಿ ನೋವು ಕಾಣಿಸುತ್ತಿ ರುವ ಕಾರಣ, ಹೆಚ್ಚುಹೆಚ್ಚಾಗಿ ಉಸಿರಾಡಲು ಅವಕಾಶ ವಾಗುತ್ತಿದೆ. ಶರೀರದ ಉಷ್ಣವು ಹಿಂದಿನಂತೆ ಕಡಮೆ ಯಾಗಿದೆ. ಕಮಲಾರವರು ಆಹಾರವನ್ನು ಈಗ ಹೆಚ್ಚಾಗಿ ತೆಗೆದುಕೊಳ್ಳುತ್ತಿರುವರು.

## ಮದ್ರಾಸು ಕೌನ್ಸಿಲಿನ ಜೀವಾವಧಿ ಹೆಚ್ಚಿತು

ಮದರಾಸು ನ್ಯಾಯವಿಧಾಯಕ ಸಭೆಗೆ ಮಾನ್ಯ ಮದ ರಾಸು ಗವರ್ನರರು ತಾ. ೬ನೇ ನವಂಬರ ೧೯೩೬ರ ವರೆಗೆ ಜೀವದಾನ ಮಾಡುತ್ತಾ, "ಬೇಗನೇ ಬರಲಿರುವ ರಾಜಕೀಯ ಮಾರ್ಪಾಟುಗಳ ದೃಷ್ಟಿಯಿಂದಲೂ, ಹೊಸ ಕೌನ್ಸಿಲು ಸ್ಥಾಪಿತವಾದರೆ ಅದರ ಪೂರ್ಣ ಜೀವಾವಧಿ ವರೆಗೆ ನಡೆಯುವುದು ಅಸಂಭವವಾದುದರಿಂದಲೂ ಅದಕ್ಕೆ ಜೀವದಾನಮಾಡಲಾಗಿದೆ" ಎಂದರು.

## ವೈಮಾನಿಕರು ಆನೆಗಳ ಗುಂಪಿಗಾಹುತಿ ಯಾಗುತ್ತಿದ್ದರು!

ಬುಲಾವಾಯೋ ಎಂಬಲ್ಲಿ ಭಾರತೀಯ ವೈಮಾನಿಕ ರಾದ ವಿಲಾಲ್ ಪೋರ್ಟ್‌ನವಾಲಾ ಮತ್ತು ದಸ್ತೂರ್ ಎಂಬವರ ವಿಮಾನವು ಇಳಿಯಿತು. ಅಷ್ಟರಲ್ಲಿ ಬಳಿಯ ಕಾಡಿನಿಂದ ಆನೆಗಳ ಒಂದು ದೊಡ್ಡ ಹಿಂಡು ಬಂದು ಅವರನ್ನು ಉಪದ್ರವಿಸುವುದರಲ್ಲಿತ್ತು. ವೈಮಾನಿಕರು ಒಡನೆ ವಿಮಾನವನ್ನು ಮೇಲೆ ಹಾರಿಸಿ ತಪ್ಪಿಸಿಕೊಂಡರು. ಇವರ ವಿಮಾನವು ನಾಲ್ಕನೇ ಸಲದ್ದಾಗಿ ಬುಲವಾಯೋ ಎಂಬಲ್ಲಿ ಬಿತ್ತು.

## ಹಿಂದೂದೇಶದಲ್ಲಿ ದೊಡ್ಡದೊಂದು ಎಣ್ಣೆಯ ಗನಿ.

### ೭೦೦ ವರ್ಷಗಳಿಗೆ ಬೇಕಾಗುವಷ್ಟು ಎಣ್ಣೆಯು ಅದರಲ್ಲಿ ಉತ್ಪನ್ನವಾಗುವುದು.

ಹಿಂದೂದೇಶದಲ್ಲಿ ಧಾರಾಳ ಎಣ್ಣೆಯುಳ್ಳ ಮಹ ತ್ವದ ಎಣ್ಣೆ ಗನಿಗಳನ್ನು ಶೋಧಕರು ಕಂಡುಹಿಡಿದಿ ದ್ದಾರೆ. ಇವುಗಳಿಂದ ಒದಗುವ ಎಣ್ಣೆಯು ಹಿಂದೂ ಸ್ಥಾನಕ್ಕೆ ೬೦೦ ವರ್ಷಗಳಿಗೆ ಸಾಕಾಗುವುದು. ಈ ಗನಿ ಗಳನ್ನು ಉಪಯೋಗವಾಗಿ ನಡೆಸಲು ಕಂಪೆನಿಗಳು ಸ್ಥಾಪನೆ ಯಾಗುತ್ತವೆ. ಈ ಕಾರ್ಯಕ್ಕೆ ೧ ಕೋಟಿ ರೂಪಾಯಿ ವೆಚ್ಚ ತಗಲುವುದು. ವರ್ಷ ಒಂದಕ್ಕೆ ೫ ಕೋಟಿ ರೂಪಾಯಿಗಳನ್ನು ಹಿಂದೂದೇಶದಲ್ಲಿ ಉಳಿಸಬಹುದು.

## ಹಿಟ್ಲರರ ಭಾಷಣ.

### ಲಿಥೋನಿಯಾ ಮತ್ತು ಮೆಮಲ್.

ನ್ಯೂರೆಂಬರ್ಗ, ಸಪ್ಟಂಬರ ೧೫

ಹಿಟ್ಲರರು ರೀಚ್‌ಸ್ಟಾಗ್ ಕಟ್ಟಡಕ್ಕೆ ಬಂದೊಡನೆಯೇ ಕರತಾಡನಯಿಂತಹ ಜಯಕಾರವಾಯಿತು. ರೀಚ್‌ಸ್ಟಾಗ್ ಕಟ್ಟಡವು ಸ್ವಸ್ತಿಕಾ ಧ್ವಜಗಳಿಂದ ಅಲಂಕೃತವಾಗಿತ್ತು. ಹಿಟ್ಲರರ ಭಾಷಣವೀಯುತ್ತಾ—"ನಮಗೆ ಒಂದೇ ಒಂದು ಮಾರ್ಗವಿದೆ. ನಮಗೆ ಶಾಂತಿಯಲ್ಲಿ ಅತ್ಯಂತ ಪ್ರೀತಿ ಇದೆ. ನಾವು ನಮ್ಮ ಸೈನ್ಯವನ್ನು ರಚಿಸಿರುವುದು ಇತರ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಹರಣಮಾಡುವುದಕ್ಕಲ್ಲ. ನಮ್ಮ ಸ್ವಾತಂತ್ರ್ಯವನ್ನು ಸಂರಕ್ಷಣಮಾಡಿಕೊಳ್ಳಲಿಕ್ಕೆ. ನಮಗೆ ಸಂಬಂಧಿಸದ ವ್ಯವಹಾರಗಳಲ್ಲಿ ಪ್ರವೇಶಿಸಲು ನಮಗೆ ಇಷ್ಟವಿಲ್ಲ. ಆದಕ್ಕೆ ನಮ್ಮನ್ನು ಯಾರೂ ಎಳೆ ಯಲೂ ಬಾರದು.

ಮೆಮಲ್ ಪ್ರಾಂತ್ಯದ ವಿಚಾರವನ್ನೆತ್ತಿ ನಾವು ಹೇಳುವ ಮಾತಿದು. ಶಾಂತವಾದ ಮೆಮಲನ್ನು ಲಿಥ್ವಾನಿಯಾ ೧೯೨೩ರಲ್ಲಿ ಹರಣಮಾಡಿದೆ. ಮೆಮಲಿನ ಜನರು ಅನೇಕ ವರ್ಷಗಳಿಂದ ದಬ್ಬಾಳಿಕೆಗೆ ಗುರಿಮಾಡಲ್ಪಟ್ಟಿದ್ದಾರೆ. ಜರ್ಮ ನಿಯು ಇದಕ್ಕೆ ಗಮನವೀಯಬೇಕು. ಪರರಾಷ್ಟ್ರಗಳಿಗೆ ಮಾಡಿದ ಪ್ರಾರ್ಥನೆಗಳೆಲ್ಲಾ ವ್ಯರ್ಥವಾದುವು. ಮೆಮಲಿನ ನಾಗರಿಕರನ್ನು ಅಪರಾಧಿಗಳಂತೆ ಕಡೆಯಾಗಿ ಕಾಣುತ್ತಿ ದ್ದಾರೆ. ಲಿಥ್ವೇನಿಯಾ ಸರಕಾರಕ್ಕೆ ಮಾಡಿದ ಪ್ರತಿಯೊಂದು ಪ್ರಾರ್ಥನೆಯೂ ವ್ಯರ್ಥವಾಗಿದೆ. ಆಗಾಗ ಜುಲಾಯಿ ಗಳಿಗೆ ನಡೆಯುತ್ತಿರುವ ಸಿದ್ಧತೆಗಳೆಲ್ಲಾ ಅಹಿತಕರ ರೀತಿಯವು. ನೇಶನ್ ಲೀಗ್ ಸಂಸ್ಥೆಗೆ ಪ್ರಾರ್ಥಿಸುತ್ತೇನೆ. ಅನಂತರ ವಿವಾದಕ್ಕೆ ಈಡಾಗುವ ಅಗ್ರಹಾರದ ಸಂಗತಿ ಗಳನ್ನು ತಪ್ಪಿಸಬೇಕೆಂದು.

ಹಿಟ್ಲರರು ಕುತೂಹಲಕಾರಕವಾದ ರಷ್ಯಾದ ವಿಷಯವಾಗಿ ಹೇಳಿದ್ದೇನೆಂದರೆ—"ರಷ್ಯಾವು ಇತರ ದೇಶಗಳ ರಾಜ ಕೀಯಗಳಲ್ಲಿ ಪ್ರವೇಶಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ಏನೇ ಆಗಲಿ, ಜರ್ಮನಿಯಲ್ಲಿ ನಾಜಿಗಳಿಂದ ಉಂಟಾದ ಎಚ್ಚರಿಕೆಯನ್ನು ಪ್ರತಿಬಂಧಿಸಲು ರಷ್ಯಾ ದವರು ನಡೆಸುವ ಬಾಲ್ಶೆವಿಕ್ ಉದ್ರೇಕಗಳನ್ನು ಪರಿ ಣಾಮಕಾರಿಯಾಗಿ ತಪ್ಪಿಸಲು ನಾವು ಸಿದ್ಧರಾಗಿದ್ದೇವೆ. ಫ್ರಾನ್ಸ್ ಪಾಕ್ಟಿನ ಪ್ರಕರಣದಲ್ಲಿ ಸೋವಿಯೆಟ್ ಸರಕಾ ರದ ಉತ್ತರವು ತೃಪ್ತಿಕರವಾಗಿದೆ.

ಯೆಹೂದ್ಯರು ಜರ್ಮನ್ ಬಹಿಷ್ಕಾರ ಚಳುವಳಿ ಯನ್ನು ಪುನಃ ಆರಂಭಿಸಿದ್ದಾರೆ. ಜರ್ಮನಿಯ ಯೆಹೂ ದ್ಯರು ಪುನಃ ಚುರುಕಾಗಿದ್ದಾರೆ. ಈ ಯೆಹೂದ್ಯರು ತಮ್ಮ ಚಳವಳಿಯನ್ನು ನಿಲ್ಲಿಸದಿದ್ದರೆ ಪುನಃ ಕ್ರೂರವಾದ ಕಾನೂನುಗಳನ್ನು ಮಾಡಿ ಅವರನ್ನು ಪ್ರತಿಬಂಧಿಸ ಬೇಕಾಗುತ್ತದೆ" ಎಂಬುದಾಗಿ ಹಿಟ್ಲರರು ಭಾಷಣವನ್ನು ಮುಗಿಸಿದರು.

(ಮೆಮಲ್ ಪ್ರಾಂತ್ಯವು ೯೪೩ ಚದರಮೈಲಿ ವಿಸ್ತೀರ್ಣ ವುಳ್ಳದು; ಜನಸಂಖ್ಯೆ ೧೪೬,೦೦೦ ೧೯೧೪ನೇ ಇಸ ವಿಯ ಯುದ್ಧಕ್ಕೆ ಪೂರ್ವದಲ್ಲಿ ಇದು ಜರ್ಮನಿಗೆ ಸೇರಿತ್ತು. ಆದರೆ ವರ್ಸೇಲ್ಸ್ ಒಪ್ಪಂದದಂತೆ ಲಿಥ್ವಾನಿಯ ರಾಷ್ಟ್ರಕ್ಕೆ ೧೯೨೩ನೇ ಫೆಬ್ರವರಿ ೧೬ನೇ ತಾರೀಕಿನಲ್ಲಿ ಸೇರಿತು. ಈ ಪ್ರಾಂತ್ಯವು ಪುನಃ ಜರ್ಮನಿಗೇ ಸೇರ ಬೇಕೆಂಬುದು ಜರ್ಮನಿಯ ಆಕಾಂಕ್ಷೆ.]

## ಮುಂಬೈಯಲ್ಲಿಯ ಬೆಳ್ಳಿ, ಚಿನ್ನದ ಮಾರ್ಕೆಟ್

ಮುಂಬೈ, ಸೆ ೧೬.

ಬೆಳ್ಳಿಯ ಮಾರ್ಕೆಟು ರೂ. ೬೭—೧—೦ರಲ್ಲಿ ಆರಂ ಭವಾಯಿತು. ೬೬—೧೪—೦ ವರೆಗೂ ಇಳಿಯಿತು. ಶುದ್ಧವಾದ ಬೆಳ್ಳಿ ೬೬—೧೨—೦. ೧ನೇ ಸೆಟಲ್‌ಮೆಂಟ್ ೬೬—೧೩—೦. ೨ನೇ ಸೆಟಲ್‌ಮೆಂಟ್ ೬೭—೧—೦. ಚಿನ್ನದ ವ್ಯಾಪಾರವು ಶಾಂತ ರೀತಿಯಿಂದಿದೆ. ಶುದ್ಧ ವಾದ ಚಿನ್ನ ೩೪—೯—೬. ೧ನೇ ಸೆಟಲ್‌ಮೆಂಟ್ ೩೪—೧೩—೬. ೨ನೇ ಸೆಟಲ್‌ಮೆಂಟ್ ೩೪—೧೩—೯.

## ವಿಶೇಷ ವಾರ್ತೆಗಳು

ಕಲ್ಕತ್ತಾ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ೧೬ ವರ್ಷಕ್ಕೆ ಕಡಮೆ ವಯಸ್ಸಿನವರೂ ಕೊಡಬಹುದು. ಮೊನ್ನೆ ನಡೆದ ಕಲ್ಕತ್ತಾ ವಿಶ್ವವಿದ್ಯಾಲಯದ ಸೆನೇಟ್ ಮೀಟಿಂಗಿನಲ್ಲಿ ಈ ಮೇಲಿನ ನಿರ್ಧಾರವಾಯಿತು. ಈ ವರ್ಷದ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಕೂಡಲು ೫೦ ಜನ ಬಾಲಕರಿಗೆ ಅವಕಾಶ ಕೊಡಬೇಕೆಂದು ತೀರ್ಮಾನವಾಗಿದೆ.

ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಸ್ವಯಂಸೇವಕ ದಳವನ್ನು ಪುನರ್ಘಟಿಸಲು ಬಹಳ ಪ್ರಯತ್ನ ನಡೆ ಯುತ್ತಿದೆ. ಇದಕ್ಕಾಗಿಯೇ ಮೂವರನ್ನು ನೇಮಕ ಮಾಡಲಾಗುವುದು.

ಅಲಹಾಬಾದಿನಲ್ಲಿ ಮೊನ್ನೆ ದಿವಸ ಒಂದು ಬಾಂಬ್ ಆಸ್ಫೋಟನವುಂಟಾಗಿ ಒಬ್ಬ ಕಾನ್‌ಸ್ಟೇಬಲನಿಗೆ ಬಲವಾದ ಗಾಯವಾಗಿದೆ. ಒಂದು ಸಿಗರೇಟ್ ಟಿನ್ ಅಲ್ಲಿ ಹಾಗೆ ಇದ್ದು ಅದನ್ನು ತೆಗೆದುಕೊಳ್ಳಲು ಹೋದಾಗ ಆಸ್ಫೋ ಟನವುಂಟಾಯಿತು.

ಕೊಲಾರಾ ಅಪ್ಪರ್‌ಟೆರಿಯಲ್ಲಿ ರೆಕಾರ್ಡ್ ಆಗಿರು ವುದರ ಆಧಾರದ ಮೇಲೆ ಈ ಸಂಗತಿ ತಿಳಿದಿದೆ. ಈ ಋತುವಿನಲ್ಲಿ ಸುಮಾರು ೩೦ ಕೋಟಿ ಟನ್‌ಗಳ ನೀರು ನೆಗರದಲ್ಲಿ ಇದ್ದಿದೆ. ಮುಂದಿನ ಮಳೆಯ ಕಾಲಕ್ಕೆ ಮುಂಚೆ ಪುನಃ ಇದರ ಅಳತೆಯನ್ನು ತೆಗೆದುಕೊಳ್ಳಲಾ ಗುವುದು.

ಕೈಗಾರಿಕೆ ಕೆಲಸಗಾರರ ಮಕ್ಕಳಿಗೆ ವಿದ್ಯಾಭ್ಯಾಸ ಮುಂ ತಾದುವನ್ನು ಮಾಡಿಸುವ ವಿಷಯವಾಗಿ ಸಲಹೆಕೊಡ ಲು ಡೆಲ್ಲಿ ಅಡ್ವೈಸರಿ ಕೌನ್ಸಿಲು ಒಂದು ಸಮಿತಿ ಯನ್ನು ನೇಮಿಸಿದೆ.

ಪಂಜಾಬ್ ಸೋಶಿಯಲಿಸ್ಟ್ ಪಾರ್ಟಿಯ ಅಧ್ಯಕ್ಷ ರಾದ ಮುನ್ಷಿ ಅಹಮದ್‌ದೀನ್‌ರವರು ರಾಜದ್ರೋಹಕರ ವಾದ ಭಾಷಣ ಮಾಡಿದರೆಂದು ದಸ್ತಗಿರಿ ಮಾಡಲ್ಪಟ್ಟಿ ದ್ದಾರೆ.

# 1936

ಮೇಲಿನ ಇಸವಿಯ
ಶಾರದಾ ಡೈರಿಗಳು
ಬೇಕೆ?
ಶಾರದಾ ಛಾಪಖಾನೆಗೆ
ಬರುವ ತಿಂಗಳಲ್ಲಿ
ಬರೆಯಿರಿ,
ಅಥವಾ
ಬನ್ನಿರಿ.

## ವ್ಯವಹಾರ ಮುಗಿಯಿತು

ಮೈಸೂರು, ಸೆ ೧೫.

ದಿವಂಗತ ವೃದ್ಧ ಓಬಾಳದ ಶ್ರೀಯುತ ಎಂ. ವೆಂಕಟ ಕೃಷ್ಣಯ್ಯನವರ ಭಾವಚಿತ್ರವನ್ನು ಮೈಸೂರು ಪೌರಸಭೆಗೆ ದಾನಕೊಡುವ ವಿಚಾರದಲ್ಲಿ ಅವರ ಸತ್ಕಾರ ಸಮಿತಿಯವರು ಮಾಡಿದ್ದ ಠರಾವಿನ ವಿಷಯದ ಮೇಲೆ ಶ್ರೀಯುತ ಬಿ. ಕೆ. ಮಾಧವರಾಯರು ಶ್ರೀಯುತ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ಮತ್ತು ಇನ್ನು ನಾಲ್ವರ ಮೇಲೆ ಇಲ್ಲಿನ ಮೊದಲನೆ ಮುನಸೀಫ್ ಕೋರ್ಟಿನಲ್ಲಿ ಸಿವಿಲ್ ವ್ಯವಹಾರ ಹೂಡಿದ್ದರಷ್ಟೆ. ಸದರಿ ಠರಾವು ಇನ್‌ವ್ಯಾಲಿಡ್ ಎಂದು ಪ್ರತಿವಾದಿಗಳು ಒಪ್ಪಿಕೊಂಡಿದ್ದ ರಿಂದ ವಾದಿಯು ವ್ಯವಹಾರವನ್ನು ಹಿಂದಕ್ಕೆ ತೆಗೆದು ಕೊಂಡರೆಂದೂ ಅದರ ಮೇಲೆ ನಿನ್ನೆ ದಿನ ವ್ಯವಹಾರ ಮುಗಿಯಿತೆಂದೂ ಗೊತ್ತಾಗಿದೆ.

## ಮಂಗಳೂರಿನಲ್ಲಿ ಪ್ರಚಂಡ ಕ್ರಿಕೆಟ್ ಮೇಚ್.

ಇದೇ ತಾ. ೧೬ನೇ ಸಂಜೆ ಮೈಲಿನಲ್ಲಿ ಮದ್ರಾಸಿನ ಕ್ರಿಕೆಟ್ ಕ್ಲಬ್ಬಿನವರಾದ ಎಂ. ಯು. ಸಿ. ಟೀಮಿನವರು ಮಂಗಳೂರಿಗೆ ಬಂದರು. ಇಲ್ಲಿಯ ಕ್ರಿಕೆಟ್ ಉತ್ಸಾಹಿ ಗಳು ಅವರನ್ನು ಸ್ವಾಗತೀಕರಿಸಿದರು. ತಾ ೧೭ನೇ ದಿನ ಬೆಳಗ್ಗೆ ಎಲೋಶಿಯಸ ಮತ್ತು ಗವರ್ನಮೆಂಟ್ ಕೊಲೇಜುಗಳ ಮಿಶ್ರ ಟೀಮಿಗೂ ಎಂ ಯು ಸಿ. ಯವರಿಗೂ ಮೇಚ್ ನಡೆದಾಗ, ಕೊಲೇಜುಗಳ ಮಿಶ್ರ ಟೀಮಿನವರು ಒಟ್ಟು ೭೫ ರನ್ಸ್ ತೆಗೆದು ಎಲ್ಲರೂ ಔಟಾದರು. ಎಂ ಯು ಸಿ ಯವರು ಒಟ್ಟು ೫೩ ರನ್ಸ್ ತೆಗೆದರು. ತಾ ೧೮ರಲ್ಲಿ ಮಂಗಳೂರಿನ ಎಚ್ ಸಿ. ಸಿ. ಯವರಿಗೂ ಎಂ. ಯು ಸಿ ಯವರಿಗೂ ಮೇಚ್ ನಡೆಯಿತು. ಎಚ್ ಸಿ ಸಿ ಯವರು ಒಟ್ಟು ೧೧೬ ರನ್ಸ್ ತೆಗೆದರು ಎಂ. ಯು. ಸಿಯವರು ೫ ವಿಕೆಟ್ ಆಡುವಾಗ ಕತ್ತಲಾದುದರಿಂದ ಮೇಚ್ ಡ್ರಾ ಆಯಿತು. ಎಂ ಯು ಸಿ ಯವರ ಒಟ್ಟು ರನ್ಸ್ ೧೧೪ ಸಿ ರಾಮಸ್ವಾಮಿ ಎಂಬವರು ಒಂದು ಸಿಕ್ಸರ್ ಹೊಡೆದರು.

## ಎಂ ಯು ಸಿ. ಟೀಮಿನ ಹೆಸರುಗಳು.

೧ ಸಿ. ಆರ್ ಗಣಪತಿ ಕೆಪ್ಟನ್ ೨. ಎಂ ವಿ ರಾಮಾಂಜುಲು. ೩ ಸಿ. ರಾಮಸ್ವಾಮಿ. ೪ ಡಿ ಪಿ ಕೇಶವನ್ ೫ ಎ ವಿ ಕೃಷ್ಣಸ್ವಾಮಿ. ೬. ಟಿ. ಕೆ ಗರುಡಾಚಾರ್ ೭ ನೀಲಕಂಠನ್ ೮. ಶಿವರಾಮನ್. ೯ ವೆಂಕಟೇಶ. ೧೦. ವರದರಾಜುಲು ೧೧ ರಾಜಗೋಪಾಲ್ ೧೨ ಟಿ. ಕಣ್ಣಯ್ಯ. ೧೩ ಪಿ ಕೃಷ್ಣಸ್ವಾಮಿ.

ಮೊದಲಿನ ಐವರು ಹಲವು ಪ್ರಸಿದ್ಧ ಮೇಚುಗಳಲ್ಲಿ ಆಡಿದವರು. ಈ ಸೀಸನ್‌ನಲ್ಲಿ ಶ್ರೀ ಟಿ ಕೆ ಗರುಡಾಚಾರ್ಯರು ೧೧೦ ವಿಕೆಟುಗಳನ್ನು ತೆಗೆ ದಿರುವರು.

ತಾ. ೧೯ರಲ್ಲಿ ನಡೆದ ಮೇಚಿನಲ್ಲಿ ಎಂ. ಸಿ. ಸಿ ಯವರು ೬೫ ರನ್ಸ್ ತೆಗೆದರು. ಎಂ. ಯು. ಸಿ.ಯ ವರು ೧೪೩ ರನ್ಸ್ ತೆಗೆದರು.

ಇದೇ ತಾ. ೨೦ ಮತ್ತು ೨೧ರಲ್ಲಿ ಮಂಗಳೂ ರವರಿಗೂ ಮದ್ರಾಸಿನವರಿಗೂ ಪ್ರಚಂಡ ಮೇಚುಗಳು ನಡೆಯುವವು. ಮಂಗಳೂರಲ್ಲಿ ಕ್ರಿಕೆಟ್ ಮೇಚ್ ನೋಡಲು ಸೇರಿದ ಜನಸಂಖ್ಯೆಯಷ್ಟನ್ನು ತಾವು ಬೇರೆ ಎಲ್ಲಿಯೂ ನೋಡಿಲ್ಲವೆಂದು ಮದ್ರಾಸಿನ ಆಟಗಾರರ ಅಭಿಪ್ರಾಯ.

### ಬಿಸಿಬಿಸಿ ವಾರ್ತೆ

ಸಪ್ಟಂಬರ, ತಾ. ೧೮

ಸಿಮ್ಲಾದ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಸರ್ ಮನ್ಮಥನಾಥ ಮುಖರ್ಜಿಯವರು ವೈಸರಾಯರ ಒಂದು ಪತ್ರವನ್ನು ಓದಿ ಹೇಳುತ್ತಾ ಅಸೆಂಬ್ಲಿಯಲ್ಲಿ ತಿರಸ್ಕೃತವಾದ ಕ್ರಿಮಿ ನಲ್ ಲಾ ಎಮೆಂಡ್‌ಮೆಂಟ್ ಬಿಲ್ಲನ್ನು ವೈಸರಾಯರು ತನ್ನ ವಿಶೇಷಾಧಿಕಾರದಿಂದ ಸರ್ಟಿಫೈ ಮಾಡಿರುವರೆಂದು ತಿಳಿಸಿದರು.

## ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S. No 595/35

ಯಂ ಸುಬ್ರಾಯ ಭಕ್ತ, ಸಾವಕಾರ ಲಕ್ಷ್ಮಣ ಭಕ್ತರ ಮಗ ಹಾಲಿ ಮಂಗ್ಳೂರು ಶಹಾರ ಪೆಂಟಲೇಂಟ ಪೇಟೆಯಲ್ಲಿರುವವ—

—ವಾದಿ.

ಮತ್ತು

ಅಪ್ಪು ಬೆಳ್ಳಂಪಾಡ ಉದ್ಯಾವರ ತಿಮ್ಮ ಬೆಳ್ಳಂಪಾಡನ, ಅಳಿಯ ಕಾಸರಗೋಡು ತಾಲೂಕು ಮಂಜೇಶ್ವರ ಮಾಗಣೆ ಕಯ್ಯಾರು ಗ್ರಾಮದ ಕೆದಂಜ ಮೂಲೆಯಲ್ಲಿರುವವ—

—ಪ್ರತಿವಾದಿ.

ಇವರೊಳಗೆ

ಸದ್ರಿ ವ್ಯಾಜ್ಯದ ವಾದಿಯ ಕಡೆಯಿಂದ ಈ ಮೂಲಕ ತಿಳಿಸುವುದೇನೆಂದರೆ

ಸದ್ರಿ ಪ್ರತಿವಾದಿಯು, ವಾದಿಗೆ ತಾರೀಕು 8–10–'32ರಲ್ಲಿ ರೂ 154–9–4ಕ್ಕೆ ಬರ ಕೊಟ್ಟ ಪ್ರೋನೋಟಿನ ಅಸಲು ಬಡ್ಡಿ ರೂಪಾ 203–10–3ನ್ನು ಬರಮಾಡಿಕೊಳ್ಳುವರೆ ಪ್ರತಿವಾದಿಯ ಮೇಲೆ ವಾದಿಯು ಸದ್ರಿ ವ್ಯಾಜ್ಯ ದಾಖಲು ಮಾಡಿ ಅ ಕುರಿತು ತಾ 28–9–35ಕ್ಕೆ ತಸ್ತಿಗೆ ಇಟ್ಟಿರುತ್ತದೆ ಆ ಕುರಿತು ಆಕ್ಷೇಪವಿದ್ದವರು ಸದ್ರಿ ಕೋರ್ಟಿನಲ್ಲಿ ಸದ್ರಿ ವ್ಯಾದೆಗೆಯೂ ಅದರ ಮುಂಚಿತವಾಗಿ ಹಾಜರಾಗಿ ವ್ಯವಹರಿಸುವರೆ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿದೆ

ಕಾಸರಗೋಡು 11–9–'35 — K Vittal Nayak, *Vakil for Pltf*

## ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No. 59/1935

ಕಡೆಕಾರು ಸೀತಾರಾಮಾಚಾರ್ಯ—ಅರ್ಜಿದಾರ

ಇವರೊಳಗೆ

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರನ ಅಣ್ಣ ಹಾಲ ವ್ಯತಪಟ್ಟ ವಿದ್ಯಾಪೂರ್ಣ ತೀರ್ಥ ಸ್ವಾಮಿಯವರು ತಾರೀಕು 6–5–33ಲ್ಲಿ ಬರದಿಟ್ಟ ವೀಲು ಮೇರೆಗೆ ಸದ್ರಿಯವರು ತೀರ್ಥರಿಗೆ People's Bank Ltd. Fixed deposit No 80–21 dated 11–5 33ಲ್ಲಿ ರೂಪಾ 1000–0–0 ವ ಆ ಬಾಬ್ತು ಬಡ್ಡಿ ಸದ್ರಿ ತೀರ್ಥರಿಗೆ People's Bank Ltd, Fixed deposit No 18-22 dated 26–8–33ಲ್ಲಿ ರೂಪಾ 700–0–0 ವ ಆ ಬಾಬ್ತು ಬಡ್ಡಿ ಹೈದರಬಾದ್ (Decan) ಪೋಸ್ಟ್ ಆಫೀಸಿನಲ್ಲಿ Savings Bank account No 66742–Ledger Folio No 262/63ಕ್ಕೆ ತಾ 15–5–34ರಲ್ಲಿ ಇಟ್ಟ ರೂಪಾ 750–0–0 ವ ಆ ಬಾಬ್ತು ಬಡಿ ಕೂಡಾ—ಸದ್ರಿ ವ್ಯತರು ಬರದಿಟ್ಟ ವೀಲು ಪ್ರಕಾರ ವಸೂಲು ಪಡೆಯಲಿಕ್ಕೆ ಅರ್ಜಿದಾರರು ಹಕ್ಕುದಾರನಾಗಿ ಆ ಮೇರೆಗೆ ಸದ್ರಿ ಹಣ ಬಡ್ಡಿ ವಸೂಲು ಪಡೆಯುವರೆ ಸೆಂಕ್ಷನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಕೊಟ್ಟ ಸದ್ರಿ ಅರ್ಜಿ ವ್ಯವಹರಣೆಯು ತಾ 7–10 35ಕ್ಕೆ ತಸ್ತಿಗೆ ಇಟ್ಟಿರುವುದರಿಂದ ಆಕ್ಷೇಪ ಹೇಳತಕ್ಕವರು ಸದ್ರಿ ತಸ್ತಿ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದು

16–9 35 Udipi — P Padmanabha Rao, *Vakil for Petitioner*


ಪಿ ವಿ. ಉಪಾಧ್ಯಾಯ, ಬಿ ಎ. ಎಲ್. ಎಲ್, ಬಿ.

ಇವರಿಂದ ಬರೆಯಲ್ಪಟ್ಟ

"ಒಂದೇ ತಿಂಗಳಲ್ಲಿ ಇಂಗ್ಲಿಷ್"

ಎಂಬ ಇಂಗ್ಲಿಷ್ ಸುಲಭ ಸ್ವಯಂಬೋಧಿನಿಯ ಪ್ರಥಮ ಆವೃತ್ತಿಯ ಎಲ್ಲ ಪ್ರತಿಗಳೂ ಕಳೆದ ಒಂದೇ ವರುಷದೊಳಗೆ ವಿಕ್ರಯವಾಗಿ ಬಹಳ ಮಟ್ಟಿಗೆ ಸುಧಾರಿಸಲ್ಪಟ್ಟ ಎರಡನೇ ಆವೃತ್ತಿಯ ಪ್ರತಿಗಳು ಈಗ ಮುದ್ರಣದಲ್ಲಿವೆ ತಾ 15–10–1935ರ ವಳಗೆ 50 ಯಾ ಜಾಸ್ತಿ ಪ್ರತಿಗಳಿಗೆ ಆರ್ಡರು ಕೊಡುವ ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ದರದ ಕಮಿಶನ್ ಕೊಡಲಾಗುವುದು ಮಾತ್ರವಲ್ಲದೆ ಅವರ ವಿಳಾಸವನ್ನು ಪುಸ್ತಕದಲ್ಲಿಯೂ ಕರಪತ್ರ ಜಾಹೀರಾತುಗಳಲ್ಲಿಯೂ ಕೊಡಲಾಗುವುದು

ಕರ್ನಾಟಕದ ಪುಸ್ತಕ ವ್ಯಾಪಾರಿಗಳು ತ್ವರೆ ಮಾಡಬೇಕು.

ಪಂಡಿತ ಕೆ. ಆದಿರಾಜಯ್ಯ, ಕಾರ್ಕಳ (ದ ಕ.)



[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ವ ಎಟ್ಟಾಗ ವಿಕೆಯು ನೀವುದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕಡಡೇ ಗರ್ಭ ಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ದಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳನಾಣಸಾಹಿದಾ ಕಾಪೇ - ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭ ಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪–೦–೦ ವಿ ಪಿ ಅಣೆ ೪

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ಸಿರಜ, S M C



# For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

## ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

**Estimates Submitted without obligation**

**ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.**

**Electric fans, Household appliances, Table lamps,**

**Very Attractive chandeliers and other fittings**

**Everything in Electricity**

**Goods supplied on approval and guarantee of Manufacture**

***First class Goods First class Work First class Attendance***

**An Enquiry at our Electrical Show Rooms will cost you Nothing**

**And**

**Will gain You excellent Service.**

**The Canara Public Conveyance Company Ltd., Kodialbail, Mangalore.**

# ಟೌನ್ ಹಾಲ್

**೧೧-೯-೧೯೩೫ನೆಯ ದಿನ ಶ್ರೀಮದ್ಯುವ ರಾಜರವರು ತಮ್ಮ ಅಮೃತಹಸ್ತದಿಂದ ಪುಟ್ಟಣ್ಣ ಶೆಟ್ಟಿ ನಗರ ಭವನದ ಪ್ರವೇಶೋತ್ಸವವನ್ನು ನೆರವೇರಿಸಿದರು.**

ಬೆಂಗಳೂರು ಈಗಾಗಲೇ ಪ್ರಖ್ಯಾತ ನಗರವೆನಿಸಿದೆ. ದಕ್ಷಿಣಾ ಪಥದ ನಂದನವನವೆಂದು ಅನೇಕರು ಅದನ್ನು ಕರೆಯುತ್ತಾರೆ. ನಗರವು ದಿನೇ ದಿನೇ ಬೆಳೆಯುತ್ತಿದೆ. ಬೆಳವಣಿಗೆಯು ಬರೀ ಪ್ರಜಾಭಿವೃದ್ಧಿಯಲ್ಲಿ ಇಲ್ಲ. ವ್ಯಾಪಾರ, ಕೈಗಾರಿಕೆ, ಕಲೆ ಇವೆಲ್ಲ ದೃಷ್ಟಿಗಳಿಂದಲೂ ಊರು ಮುಂದುವರಿಯುತ್ತಿದೆ.

೨೫ ವರ್ಷಗಳ ಹಿಂದಿನ ಬೆಂಗಳೂರಿಗೂ ಇಂದಿನ ಬೆಂಗಳೂರಿಗೂ ಸಂಬಂಧವೇ ಇಲ್ಲ. ಆಗ ಬೆಂಗಳೂರನ್ನು ಕಂಡಿದ್ದವರು ಈಗ ಬೆಂಗಳೂರಿಗೆ ಬಂದರೆ "ಇದು ಯಾವ ಊರು" ಎಂದು ಕೇಳಬೇಕಾಗುತ್ತದೆ. ನಗರದ ರೂಪವೇ ಬದಲಾಯಿಸಿ ಹೋಗಿದೆ. ಸೌಂದರ್ಯ ದೃಷ್ಟಿಯಿಂದಂತೂ ನಗರವು ಬಹಳ ಚನ್ನಾಗಿದೆ. ಒಂದು ಮನೆಯಂತೆ ಇನ್ನೊಂದು ಮನೆಯಿಲ್ಲ ಗುಡಿಸಲುಗಳಿಂದ ಅರಮನೆಗಳವರಿಗೆ ಭವನಗಳೂ ವಸತಿಗಳೂ ಇವೆ. ನಗರ ಮಧ್ಯದಲ್ಲಿ ಸಣ್ಣ ಪುಟ್ಟ ವನಗಳಿವೆ, ಕ್ರೀಡಾ ಕ್ಷೇತ್ರಗಳಿವೆ; ವಾಹನ ಕ್ಷೇತ್ರಗಳಿವೆ ರಾಜವೀಥಿಗಳು, ದೀಪಮಾಲಿಗಳು ಕಣ್ಣಿಗೆ ಹಬ್ಬ ಮಾಡುತ್ತವೆ ನೀರಿನ ಸೌಕರ್ಯವಂತೂ ಹೇಳತೀರದು ತಿಪ್ಪಗೊಂಡನಹಳ್ಳಿ ಅಥವಾ ವಾಣೀವಿಲಾಸ ಸಾಗರವೇ ನಗರದ ಶೀರ್ಘ ಸೌಕರ್ಯಕ್ಕಾಗಿ ನಿರ್ಮಾಣವಾಯಿತು.

ಅಠಾರಾ ಕಚೇರಿ, ಹೊಸ ಪಬ್ಲಿಕ್ ಆಫೀಸ್ ಶೇಷಾದ್ರಿ ಸ್ಮಾರಕ ಭವನ, ಒಕ್ಕಲಿಗರ ಸಂಘದ ಭವನ ಇವುಗಳನ್ನು ಬಿಟ್ಟರೆ ದೊಡ್ಡ ದೊಡ್ಡ ಭವನಗಳು ಬೆಂಗಳೂರಲ್ಲಿ ಕಡಿಮೆಯಾಗಿತ್ತು. ಈಗಲೋ ಕೆಂಪೇಗೌಡನ ರಸ್ತೆಯಲ್ಲಿ ಎಷಿಯಾಟಿಕ್ ಅಷೂರೆನ್ಸ್ ಕಂಪೆನಿ, ಪಬ್ಲಿಕ್ ಸಂಘ, ಶ್ರೀ ವೀರಣ್ಣನವರ ನಾಟಕಶಾಲೆ ಇತ್ಯಾದಿಗಳಿದ್ದವು. ಆದರೆ ನರಸಿಂಹ ರಾಜಾ ರಸ್ತೆಯಲ್ಲಿ ಎದ್ದ ಭವನವೊಂದು ಬೆಂಗಳೂರಿನ ಚಿತ್ತಾಕರ್ಷಕಸ್ಥಾನವಾಗಿ ಪರಿಣಮಿಸಿದೆ ಅದಾವುದು? ಸರ್ ಪುಟ್ಟಣ್ಣಶೆಟ್ಟರ ಟೌನ್ ಹಾಲ್!

ಇದು ಮೂರು ಅಂತಸ್ತಿನ ಮಹಲು ೧ ಲಕ್ಷ ೭೫ ಸಾವಿರ ರೂ ಗಳ ವೆಚ್ಚವಾಗಿದೆ ಹೊರಗಿನ ಗೋಡೆಗಳು ಹೊರಗಿನ ಕಂಬಗಳು ಇವೆಲ್ಲ ಸ್ಥಳದ ಕಲ್ಲಿನಿಂದಲೇ ನಿರ್ಮಾಣವಾಗಿವೆ ಮೇಲ್ಛಾವಣಿಯು ಮಂಗಳೂರು ಹಂಚಿನದು ಉಕ್ಕಿನ ಟ್ರಸ್‌ಗಳ ಮೇಲೆ ನಿಂತಿದೆ. ಹಂಚಿನ ಹೊದಿಕೆ ಒಳಗಿನ ಗೋಡೆಗಳೆಲ್ಲ ಮೆಷಿನ್ ಇಟ್ಟಿಗೆಯಿಂದಾಗಿವೆ. ಚೆನ್ನಾಗಿ ನಯಗಾರಿಯಾಗಿದೆ ಒಳಛಾವಣಿಗೆ ಅಸ್ ಬೆಸ್ಟಾಸ್ ಹೊದಿಸಿದೆ ಅದಕ್ಕೆ ದಂತಚ್ಛಾಯೆಯ ಬಿಳಿಯ ಬಿಳಿಯ ಬಣ್ಣ ಅದಕ್ಕೊಪ್ಪುವಂತೆ ಗೋಡೆಗಳಿಗೆ ಕೆನೆ ಬಣ್ಣ ಕೊಡಲಾಗಿದೆ

ಇನ್ನು ದೀಪಗಳ ಮಾತು ಭವನವೆಲ್ಲ ವಿದ್ಯುತ್ತಿನ ದೀಪಮಾಲೆಗಳಿಂದಲಂಕೃತವಾಗಿದೆ ತಂತಿ ಎಲ್ಲಿ ಹರಿಯುವುದೋ ಕಾಣುವುದೇ ಇಲ್ಲ ಒಳಗೇ ಹರಿದು ಅಲ್ಲಲ್ಲಿ ದೀಪವಿರುವ ಕಡೆ ಮಾತ್ರ ಹೊರಬೀಳುವುದು. ನೇತಾಡುವ ದೀಪಗಳಾದರೋ ನೇತ್ರಾನಂದಕರವಾಗಿವೆ ಗಾಜು ಬುಡ್ಡಿಗಳೊಳಗೆ ಬ್ರಾಸ್ ಕ್ರೋಮಿಯಂ ಪ್ಲೇಟು, ಹೊರಗೆ ವರ್ಣ ಚಿತ್ರಗಳು ದೀಪದ ಕಿರಣಗಳು ಕಣ್ಣು ಕೋರೆಯುವಂತಿಲ್ಲ ಮಧುರ ಕಿರಣಗಳು ಮಹಲಿನಲ್ಲೆಲ್ಲ ಪ್ರಸರಿಸುವುವು.

ಮಹಡಿ ಹತ್ತಲು ಹಾಕಿರುವ ಮೆಟ್ಟಲುಗಳೆಲ್ಲ ಕಲ್ಲಿನ ಹಲಗೆಗಳು. ಗ್ಯಾಲರಿಗಳೆಲ್ಲ ಉಕ್ಕಿನವು. ಮೇಲೆ ಕಾಂಕ್ರೀಟ್ ಹಾಕಿದ ನೆಲ. ಒಟ್ಟಿನಲ್ಲಿ ಕಟ್ಟಡದ ವಾಸ್ತುವೈಭವವು ವಿಸ್ಮಯವನ್ನುಂಟುಮಾಡುತ್ತದೆ.

ನರಸಿಂಹ ರಾಜಾರಸ್ತೆ. ನರಸಿಂಹ ರಾಜಾ ಟವಲ್ಸ್‌ವಾರ್ಡಿನ ಮೂಡಲ ತುದಿಯಲ್ಲಿ ಎತ್ತರವಾದ ಕ್ಷೇತ್ರದಲ್ಲಿ ಮಾರ್ಕೆಟಿಗೆ ಎದುರಾಗಿ ನಿಂತಿದೆ ಈ ಭವನ. ಮಾರ್ಕೆಟಿನಿಂದ ಈ ಭವನಕ್ಕೆ ಸುಮಾರು ಎರಡು ಫರ್ಲಾಂಗಿರಬಹುದು.

ಈ ಭವನದಲ್ಲಿ ಸಭಾ ಮಂಟಪವೊಂದಿದೆ. ೬೦ ಅಡಿ ಅಗಲ ೧೧೦ ಅಡಿ ಉದ್ದವಿದೆ. ಅಂಚುಗಳಲ್ಲಿ ಎರಡು ಹಂತದ ಗ್ಯಾಲರಿಗಳಿವೆ. ಎರಡೂ ಪಕ್ಕಗಳಲ್ಲಿ ಉದ್ದಕ್ಕೆ ೮ ಅಡಿ ಅಗಲದ ಬಾಲ್ಕನಿಗಳಿವೆ. ಅಂಕು ೧೮೦೦ ಮಂದಿ ಸುಖವಾಗಿ ಈ ಸಭಾ ಮಂಟಪದಲ್ಲಿ ಕೂಡಬಹುದು.

ಕಟ್ಟಡದ ಆಕಾರವೆಷ್ಟು ಗೊತ್ತೆ? ೧೩ ಸಾವಿರ ಚದರ ಅಡಿ. ಕಟ್ಟಡವು ಇಷ್ಟು ಕ್ಷೇತ್ರದ ಮೇಲೆ ಎದ್ದಿದೆ ಭೂಮಿಯ ಮಟ್ಟದ ಮೇಲೆ ೭ ಅಡಿ ಇದೆ. ಅದರ ಮೇಲೆ ಕಟ್ಟಡವು ನಿಂತಿದೆ ಭವನದ ಸರಾಸರಿ ಎತ್ತರ ೬೦ ಅಡಿಗಳಿವೆ.

ಈ ಭವನನಿರ್ಮಾಣವು ೧೯೩೩ನೇ ಮಾರ್ಚ ೩ನೇ ದಿನಗಳಲ್ಲಿ ಮೊದಲಾಯಿತು ತಾರೀಕು ೧೧-೯-೧೯೩೫ನೇ ಧಿನ ದಿನ ಶ್ರೀಮದ್ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರರವರು ಈ ಭವನ ಪ್ರವೇಶೋತ್ಸವವನ್ನು ನೆರವೇರಿಸಿದರು

ಈ ಭವನವು ಸಾರ್ವಜನಿಕ ಉಪನ್ಯಾಸಗಳಿಗಾಗಿಯೂ ನಿರ್ಮಾಣವಾಗಿದೆ. ಭವನದ ಹಿಂಭಾಗದಲ್ಲಿ ಕೊಂಚ ಅನುಕೂಲ ಮಾಡಿಕೊಂಡರೆ ನಾಟಕ ಶಾಲೆಯನ್ನಾಗಿ ಸಹ ಉಪಯೋಗಿಸಿಕೊಳ್ಳಬಹುದು. ಈ ಭವನಕ್ಕಾಗಿ ಸರ್ ಕೆ ಪಿ ಪುಟ್ಟಣ್ಣ ಶೆಟ್ಟರವರು ೮೫,೦೦೦ ರೂಪಾಯಿಗಳನ್ನು ಕೊಟ್ಟರು ಬೆಂಗಳೂರು ಪೌರಸಭೆಯವರು ೨೫,೦೦೦ ರೂಪಾಯಿಗಳನ್ನು ಕೊಟ್ಟರು ಉಳಿದ ಹಣವನ್ನು ಸರಕಾರದವರು ಹಾಕಿಕೊಂಡರು ಅಂತೂ ಬೆಂಗಳೂರಿನ ಶೋಭೆಗೆ ತಕ್ಕ ಭವನವೊಂದು ನಿರ್ಮಾಣವಾದುದನ್ನು ಕಂಡು ಯಾರಿಗೆ ತಾನೆ ಸಂತೋಷವಾಗದು?

### ಸರ್ ಶೆಟ್ಟರು

ರಾಜಸಭಾಭೂಷಣ, ದಿವಾನ ಬಹದ್ದೂರ್, ಸರ್ ಕೃಷ್ಣರಾಜಪುರ ಪಲ್ಲಿಗೊಂಡ ಪುಟ್ಟಣ್ಣ ಶೆಟ್ಟಿ ಸಿ ಐ ಇ, ಇವರು ಬೆಂಗಳೂರಿನ ವೃದ್ಧಪಿತಾಮಹರು ಅಷ್ಟೇಕೆ ಮೈಸೂರಿಗೇ ವೃದ್ಧಪಿತಾಮಹರು ಅವರ ಕಾರ್ಯಕ್ಕೆ ಅವರು ಹಿರಿಯರು ಇಲ್ಲಿ ಅವರ ಜೀವನ ಚರಿತ್ರೆ ಬರೆಯಲು ಪ್ರಯತ್ನಪಟ್ಟಿಲ್ಲ ಅದು ಸಾಧ್ಯವೂ ಇಲ್ಲ

ಇವರು ಬೆಂಗಳೂರಿನ 'ಟೌನ್ ಹಾಲ್' ಕಟ್ಟುವುದಕ್ಕಾಗಿ ೮೫,೦೦೦ ರೂಪಾಯಿಗಳನ್ನು ಕೊಟ್ಟರು ಇದಕ್ಕೆ ಮೊದಲೇ ಅವರು ವಿಕ್ಟೋರಿಯಾ ಆಸ್ಪತ್ರೆಗೆ ಹೊಂದಿಕೊಂಡಂತೆಯೇ ಚಿಕಿತ್ಸೆ ಪಡೆಯುವವರಿಗಾಗಿ ಒಂದು 'ಡಿಸ್‌ಪೆನ್ಸರಿ' ಯನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟರು. ಅವರ ದಾನ ಧರ್ಮ ಪರೋಪಕಾರಗಳ ಪಟ್ಟಿಯನ್ನು ಸಹ ಇಲ್ಲಿ ಮಂಡಿಸಲು ಉದ್ದೇಶವಿಲ್ಲ ಸರ್ ಪುಟ್ಟಣ್ಣ ಶೆಟ್ಟರ ಜೀವನದಲ್ಲಿ ನಾನಾ ಘಟ್ಟಗಳ ಸೂಕ್ಷ್ಮ ಪರಿಚಯವನ್ನು ಮಾತ್ರ ವಾಚಕರಿಗೆ ಮಾಡಿಕೊಡಲಾಗಿದೆ ಈ ಅಂಶಗಳನ್ನು ಇಟ್ಟುಕೊಂಡು ವಿಸ್ತಾರವಾಗಿ ಅವರ ವಿಚಾರವಾಗಿ ಬರೆಯಬೇಕಾಗಿದೆ

ಇವರು ೧೮೫೬ನೆಯ ವರ್ಷ ಹುಟ್ಟಿದರು ಚರಿತ್ರಾರ್ಹವಾದ ಭಾರತ ಸ್ವಾತಂತ್ರ್ಯ ಸಂಗ್ರಾಮ ಸಿದ್ಧತೆಯಾಗುತ್ತಿರುವ ಕಾಲವದು. ೧೮೫೭ನೆಯ ವರ್ಷವು ಭಾರತ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದುದು. ಪುಟ್ಟಣ್ಣ ಶೆಟ್ಟರು 'ಓನಾಮ'ಗಳನ್ನು ಮುಗಿಸಿ ವೆಸ್ಲಿಯನ್ ಹೈಸ್ಕೂಲು, ಸೆಂಟ್ರಲ್ ಕಾಲೇಜುಗಳ ಪ್ರವೇಶ ಮಾಡಿದರು ಅವರ ಬಾಲ್ಯ ಮತ್ತು ಶಿಕ್ಷಣ ಪಡೆದ ಕಾಲದ ವಿವರಗಳನ್ನು ತಿಳಿಯಲು ಕನ್ನಡಿಗರೆಲ್ಲರೂ ಕುತೂಹಲಿಗಳಾಗಿರುವುದೆಂಬುದನ್ನು ಹೇಳಲೇಕೆ?

೬೦ ವರ್ಷಗಳ ಹಿಂದೆ ಶೆಟ್ಟರು ಮೈಸೂರು ಸರಕಾರದಲ್ಲಿ ಉದ್ಯೋಗಕ್ಕೆ ಸೇರಿದರು!

(ಮುಂದಿನ ಪುಟಕ್ಕೆ ಮುಂದುವರಿದುದು.)


WARNING

ಉದರವೇದನೆಯಿರುವವರಿಗೆ ಎಚ್ಚರಿಕೆ!

ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಈ ಕೆಂಪು ಮುದ್ರೆಯಿದೆಯೋ ನೋಡಿ.

ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಇರುವ ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಮೇಲಿನ ಮುದ್ರೆಯು ಅದರ ತಳಭಾಗದಲ್ಲೂ ಇದೆ.




ಎಂಬ ಸಹಿಯು ಸೀಲ್, ಬಿಲ್ಲೆ ಮುಖಾದಿಲೆಗಳ ಮೇಲಿದೆ

ಮಾರ್ಟಿನ್ ಎಂಡ್ ಹೆರಿಸ್, ಲಿಮಿಟೆಡ್.

15 ಸಂಕೀರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು



ಅಜೀರ್ಣ, ಆಮ್ಲ, ಅಗ್ನಿಮಾಂದ್ಯ ವಾಕರಿಕೆ, ಎದೆಯುರಿ, ಜಠರಾಗ್ನಿ ಮತ್ತು ಉದರ ಬಾಧೆಗಳ ಹಲವು ರೋಗಗಳನ್ನು ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಅದ್ಭುತಕರವಾಗಿಯೂ ಗುಣಪಡಿಸುವುದರ ಫಲವಾಗಿ ಮಾರ್ಕೆಟಿಗೆ ಹಲವು ನಕಲಿ ಮಾಲುಗಳು ಬಂದಿವೆ ಆದುದರಿಂದ Alex C. Maclean ಎಂಬ ದಸ್ಕತ್ತಿರುವ ಮೂಲವಸ್ತುವನ್ನೇ ಪಡೆಯುವಂತೆ ಎಚ್ಚರಿಕೆ

ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಅನುಕೂಲವಾದ ಸೂತ್ರಗಳ ಮೇಲೆ ಆಧರಿಸಿಟ್ಟು ತಯಾರಿಸಲಾಗುತ್ತದೆ. ಯಾವ ಬಗೆಯ ಅಸಮರ್ಪಕತೆಯೂ, ಅಶುದ್ಧತೆಯೂ ಅದನ್ನು ಪರಿಪೂರ್ಣ ನಿಷ್ಪ್ರಯೋಜಕವನ್ನಾಗಿ ಮಾಡುವುದು ಖಂಡಿತ. ಕೆಲವು ನಕಲಿ ದಗಾಬಾಜರ ಕೃತ್ಯವನ್ನು ಗಮನಿಸುವಾಗ ಮೆಕ್‌ಲೀನ್ಸ್ ಲಿಮಿಟೆಡ್‌ನವರು ತಮ್ಮ ತಯಾರಿಕೆಯಲ್ಲಿಟ್ಟ ಜಾಗ್ರತೆಯು ಅವುಗಳ ತಯಾರಿಯಲ್ಲಿ ಇಲ್ಲವೆಂದು ವ್ಯಕ್ತವಾಗುತ್ತದೆ. ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನಲ್ಲಿ ಅತ್ಯುತ್ಕೃಷ್ಟ ಸಾರವನ್ನೇ ಪ್ರಯೋಗಿಸಲಾಗಿದೆ. ಅದರ ಮಿಶ್ರಣ ಕಾರ್ಯವನ್ನು ಅನುಭವಿಕರಾದ ಕೆಮಿಸ್ಟರು ಆರೋಗ್ಯ ಸೂತ್ರಗಳನ್ನು ಲಕ್ಷಿಸಿಯೇ ಮಾಡುವರು

ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಎಚ್ಚರಿಕೆ. Alex C. Maclean ಎಂಬ ದಸ್ಕತ್ತಿದೆಯೋ ನೋಡಿ ಅದನ್ನು ಬಿಡಿಯಾಗಿ ಮಾರುವುದಿಲ್ಲ ಬಾಟ್ಲಿಯಲ್ಲಿ ಪೌಡರ ರೂಪದಲ್ಲಿ ಮಾರಲಾಗುತ್ತದೆ ಪ್ರತೀಕ ಕೆಮಿಸ್ಟರಿಂದಲೂ ಗಳೇ, ಸ್ಟೋರುಗಳಲ್ಲಾಗಲೀ ದೊರೆಯದೆ ಕಷ್ಟವಾದರೆ–

ಮಾರ್ಟಿನ್ ಎಂಡ್ ಹೆರಿಸ್, ಲಿಮಿಟೆಡ್

ಇಲ್ಲಿಗೆ ಬರೆಯಿರಿ.



# ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಸಲಾದುದು.

## ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ದೀರ್ಘಶ್ವಾಸ, ಗುಂಡಿಗೆಳೆದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0. 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗುವಂತೆ ಮದ್ದುಗಳೂ ಇವೆ.

# WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassanand Kadur districts.
2. Coorg, South Canara, Shimoga and Chitaldrug districts
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purnaih Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ



ಐಹಿಡಾಯಿಟ್ಟ
'ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ
೫೦ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫ್ರಾಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪.
ಸ್ಟಾಕಿಸ್ಟ್ — ಶಾ ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

THE 1935 MODEL

## HEAVY DUTY TRUCK



# For Your Haulage

U. SUBRAYA NAYAK,
FORD DEALER
SHIMOGA—AND—MANGALORE.

# Now For Sale.

**Poholatum (Balm)** (German make) This is a home remedy for Rheumatism, Asthma Sciatica, Lumbago, Insect bites, Herpes Wounds Cuts Colds Headache It is a complete substitute for the domestic medicine chest Try once this unequalled remedy In ½oz tin As 3/- In oz jar As 12/-

**Superior Red Balm** For relieving pains in muscles and on skin Directions for use with the bottle Price As 12 – only

**Wurmteufel** Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms children and adults try this unique remedy and be freed from your ailment Price As 10 per packet

**Pocket Inhaler** For coughs and hoarseness headache, catarrh colds use this inhaler and you will be relieved immediately Price per inhaler As 6 & As 8

**Po-Ho Fluid** For Asthma colds, indigestion toothache lumbago a sure remedy in all cases Price As 6 and Re 1/ per phial

**Cough Cure** An infallible remedy for coughs of all kinds bronchitis hoarseness Particulars in bottle Price As 12/ for 3 oz bottle

**The New Curative Earth** A Radium cure for incurable diseases

**Mithra Toilet Soaps**—Scientifically prepared German soaps, excellent for health Price As 1 3 2 6 3/- 4

## Basel Mission Book Depot

Mangalore, Branches in Codialbail, Hubli, Calicut

## Our Dasara Special Number for 1935

will be out in the first week of October,
with attractive illustrations by twenties!
with instructive & interesting articles by dozens!
Double coloured photos a Speciality!
CONTRIBUTIONS BY REPUTED WRITERS!
PRICE AS 2 ONLY
It would pay you to advertise your goods in this Popular Number
*Apply for advertisement rates to —*
Advertisement Manager,
The Swadeshabhimani Dasara Special 1935,
CAR STREET MANGALORE.

## ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ಬಾತ್ಮೀದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

### ಸಮಸ್ತ ಹೊಟೇಲು ವ್ಯವಸಾಯ ಬಂಧುಗಳೇ, ಇತ್ತ ಸ್ವಲ್ಪ ಲಕ್ಷ್ಯಕೊಡುವಿರಾ?

ಕಳೆದ ಎಷ್ಟೋ ವರ್ಷಗಳಿಂದ ತಮ್ಮ ವ್ಯಾಪಾರಗಳಲ್ಲಿ ವ್ಯಾಪಾರಿಯುಂದಿಯ ಅವಸ್ಥೆ, ಬೇಜವಾಬ್ದಾರಿ ಮನುಷ್ಯರು ಈ ಧಂಧೆಗೆ ಸಿಲುಕಿ ವ್ಯವಸಾಯದಲ್ಲಿ ಬಾಲಾಗಿಯೇ ನಿಂತ ಈ ದುಷ್ಟ ಪರಿಣಾಮಗಳಿಂದ ಹೆಚ್ಚಿನ್ನಾಗಿ ಏರಿಸಿದ ದುಕಾನುಗಳ ಬಾಡಿಗೆಯೂ, ಮುನಿಸಿಪಾಲಿಟಿಯ ಪೋಲೀಸು ಲೈಸನ್ಸ್ ಫೀಸು ಎಲ್ಲಕ್ಕಿಂತಲೂ ಕಳೆದ ಎರಡು ವರ್ಷಗಳಿಗಿಂತ ಹಿಂದೆ ಇದ್ದ ರೂ. ೩—೮—೦ ಫೀಸಿತ್ತು. ಅದು ಕ್ರಮೇಣ ಹೆಚ್ಚಾಗಿ ಅಂದರೆ ರೂಪಾಯಿ ೧೩—೮—೦ ಪರಿಯಂತರ ಹೆಚ್ಚಿಸಿದಂತಾ ಪೋಲೀಸ್ ಲೈಸನ್ಸ್ ಕಾಯಿದೆಯು ಯಾ ಅಂಥಾ ಕಾಯಿದೆ ಹೊರಡುವ ಸಮಯದಲ್ಲಾಗುವಂಥಾ ಕಷ್ಟವು ಇದೇ ರೀತಿ ಅನೇಕ ವಿಷಯಗಳಲ್ಲಿ ದಿವಸಾಗಲೂ ಘಟನೆಯಾಗುತ್ತಿದ್ದ ನಮ್ಮ ಈ ವ್ಯಾಪಾರವರ್ಗವು (ಹೊಟೇಲ ವ್ಯವಸಾಯ ಬಂಧು) ಕುಳಾಲಿನಿಂದ ಸಿದ್ಧಮಾಡುತ್ತಿರುವರೇ? ಏನು? ಆದರೂ ಈ ಸಮಾಜಮಧ್ಯದಲ್ಲಿ ಇಷ್ಟರವರೆಗೆ ಸಂಘಟನೆಯಿಲ್ಲದ್ದರಿಂದ ಕಳೆದ ಒಂದೆರಡು ವರ್ಷಗಳ ಹಿಂದೆ ಎಂದರೆ ಜನವರಿ ತಿಂಗಳಲ್ಲಿ ಲೋಕಮತಕ್ಕನುಸಾರವಾಗಿ ಯಾ ತಮ್ಮ ಅಭಿಪ್ರಾಯವೇನಿದೆಯೆಂಬುದಾಗಿ ಪೋಲಿಸ್ ಲೈಸನ್ಸಿನ ಹೊಸ ಕಾಯಿದೆಯು ಆ ಸಮಯ ಜಾಹೀರಾತಾಗಿದ್ದು ತಮ್ಮ ಜನಾಂಗದವರೂ ಸ್ವಲ್ಪ ವಿರೋಧವಮಾಡಿದರೂ ಸಹ ತಮ್ಮ ಸಂಘಶಕ್ತಿಯ ಅಭಾವದಿಂದ ಅದು ಆ ಕಾಯಿದೆ ಹೇಗಿತ್ತೋ ಹಾಗೆಯೇ ಪಾಸಾಯಿತು. ಅದರ ವಿಷಯ ನಮಗೆಲ್ಲರಿಗೂ ಗೊತ್ತಿದ್ದುದೇ ಸರಿ; ಇದನ್ನು ನಾವು ಎಲ್ಲರೂ ಅನುಭವಿಸುತ್ತಲೂ ಇದ್ದೇವೆ. ಹಾಗೆಯೇ ಈ ವರ್ಷದಲ್ಲಿ ತಮ್ಮ ವ್ಯಾಪಾರದೊಳಗೆ ಕೈಹಾಕಿದ "ಬಖಾಲೆ ಮಸೂದೆ" ಕಾಯಿದೆಯು ಲೋಕಮತವೇನಿದೆ ಎಂದು ತಿಳಿಯುವ ಬಗ್ಗೆ ಪ್ರಸಿದ್ಧವಾಗಿರುತ್ತ, ಈ ಕಾಯಿದೆಯು ಬಹುಜನ ನೌಕರರ ವರ್ಗದ ಹಿತಚಿಂತಕರಾದ ಶ್ರೀಯುತ ಬಖಾಲೆಯವರ ಸುಬುದ್ಧಿಯಿಂದ ಹಿತಸಾಧನೆಗಳಿಂದ ತಮ್ಮ ವ್ಯಾಪಾರವು ಎಷ್ಟರವರೆಗೆ ಸಂರಕ್ಷಣೆಯಾಗುತ್ತದೆಯೋ ಇದಾಗಲೂ ನೋಡುವುದಕ್ಕೆ ಆತುರಪಡುವುದಿಲ್ಲವೇ? ಈಗ ಬದಲಾಯಿಸುವ ಕಾಲಕ್ಕೆ ಅನುಸಾರವಾಗಿ ನೌಕರರ ಹಿತವರ್ಗದ ಸಂಬಂಧ ಅವಶ್ಯವಾಗಿ ರಕ್ಷಣೆಮಾಡಬೇಕು. "ಬಖಾಲೆಯವರ ಕಾಯಿದೆ"ಯ ಹಾಗೆ ಅದರ ಈ ಕಾಯಿದೆಗಳು ಎಷ್ಟೋ ಸುಧಾರಣೆಯಾಗದಿದ್ದರೆ ಹೇಗಿತ್ತೋ ಹಾಗೆಯೇ ಪಾಸಾದರೆ ಸಣ್ಣ ಸಣ್ಣ ವ್ಯಾಪಾರಿವರ್ಗಕ್ಕೆ ತ್ರಾಸ ಮತ್ತು ನಿರುಪಾಯಸ್ಥಿತಿ ಇಂಥಾ ವ್ಯಾಪಾರಕ್ಕೆ ಯಾ ಧಂಧೆಯನ್ನು ಬಿಡುವಂಥ ಸಮಯವು ಬರಬಹುದು. ಈ ದೊಡ್ಡ ಶಹರದಲ್ಲಿ ತಿರುಗಾಡುವಂಥಾ ದಿಕ್ಕಾರಿಯ ಯುದ್ಧದಲ್ಲಿ ಇನ್ನು ಎಷ್ಟೋ ಸಾವಿರ ಜನರು ಕೆಲಸವಿಲ್ಲದ ಈ ಮುಂಬಾಯಿ ನಗರದಲ್ಲಿ ತಿರುಗಾಡಬೇಕಾದೀತು. ಆದುದರಿಂದ ಬಹುಜನಸಮಾಜಕ್ಕೆ ಹಿತವಾಗಲಿಕ್ಕಿಲ್ಲ. ಮುಂಬಾಯಿ ನಗರದಲ್ಲಿ ಅನೇಕ ವ್ಯಾಪಾರ ಯಾ ಕಾರ್ಮಗಾರ ಸಂಘವಿದ್ದು, ತಮ್ಮ ಹಿತದೃಷ್ಟಿಯಿಂದ ಅಣ್ಣತಮ್ಮಂದಿರಂತೆ, ಸಹೋದರರ ಹಾಗೆ ಹೇಗೆ ಕೂಡಿಕೊಂಡಿರುತ್ತಾರೋ ಹಾಗೆಯೇ ಮುಂಬಾಯಿ, ಮದರಾಸು, ಕಲ್ಕತ್ತಾ, ಪೂನೆ, ಕರ್ನಾಟಕ ಇತರ ಎಲ್ಲಾ ಭಾಗಗಳಲ್ಲಿ ಸ್ಥಾಪಿತವಾದ ಕಾರ್ಮಗಾರರ ಐಕ್ಯತೆಮಾಡುವ ಘೋಷಣೆಯು ಸ್ತುತ್ಯವಾಗಿರುತ್ತದೆ ಯಾ ಅಭಿನಂದನೀಯವಾಗಿರುತ್ತದೆ. ಹಾಗೆಯೇ ಹೊಟೇಲ ಮಾಲಿಕರೆಲ್ಲರೂ ಐಕ್ಯತೆಯ ಸಂಘವು ಇಷ್ಟರವರೆಗೆ ಅಸ್ತಿತ್ವದಲ್ಲಿ ಇಲ್ಲದಿರುವುದರಿಂದ ಕಾರ್ಮಗಾರರ ವರ್ಗದವರನ್ನೂ ಒಂದೇ ರೀತಿಯಿಂದ ಮಾಡಿರುವ ಮಾಗಣೆಯ ಕುರಿತು ವಿಚಾರವಾದರೂ ಹೇಗೆ ಮಾಡುವಿರಿ? ತಾತ್ಪರ್ಯವೇನೆಂದರೆ ಇಷ್ಟೇ ಈ ಕಾಯಿದೆ ಇದ್ದಕಿದ್ದಹಾಗೆಯೇ ಪಾಸಾದರೆ ಅದರ ಪರಿಣಾಮವೇನಾಗುವುದು? ಇದು ನಮ್ಮೊಳಗಿನ ಸುಶಿಕ್ಷಿತ, ಸಧನದ ವ್ಯಾಪಾರಿಯೆಂದೆನಿಸಿಕೊಳ್ಳುವ ವರ್ಗವು ಮುಂದೆ ಬಂದು ತಮ್ಮ ವ್ಯಾಪಾರಸಂಘಟನೆಯ ಚಳವಳಿಮಾಡಿ ಈ ಎಲ್ಲಾ ಅಡಚಣೆಗಳಿಂದ ದಾರಿಯನ್ನು ಮಾಡುತ ಎರಡೂ ಕಡೆಗಳಲ್ಲಿ ಹಿತಸಂಬಂಧ ರಕ್ಷಣೆಮಾಡುವುದಕ್ಕೆ ಶ್ರೇಯ ಸಂಪಾದನೆ ಗಳಿಸುವಿರೋ? ಎಂದು ತಿಳಿಸುವ ವ್ಯವಸಾಯಬಂಧುಗಳ ಪೈಕಿ ಒಬ್ಬನಾಗಿದ್ದು, ನಾವೆಲ್ಲರೂ ಹಿತದೃಷ್ಟಿಯಿಂದ ಒಂದೇ ಮನಸ್ಸಿನಿಂದ ಐಕ್ಯತೆಯಿಂದ ತಮ್ಮ ತಮ್ಮ ಸಂಘಟನೆಯ ಗೋಸ್ಕರ (All India Hotel Owners' Association) ಅಖಿಲ ಭಾರತ ಹೊಟೇಲುಮಾಲಿಕರ ಸಂಘ ಎಂಬ ಹೆಸರಿಟ್ಟು, ಆದಷ್ಟು ಬೇಗನೇ ಸ್ಥಾಪಿಸಿ ನಮ್ಮ ಶಾಂತಿಯನ್ನು ಪೂರ್ತಿಗೊಳಿಸಬೇಕಾಗಿ ಸಂಬುಧ,

ನಾಗೇಶ ಅಚ್ಯುತ ಶೆಟ್ಟಿ,
ಮಾಲಿಕ, ಸ್ಪೆಷಲ್ ದರ್ಬಾರ್ ಹಿಂದೂ ಹೊಟೇಲ್,
ಬಾಟ್ಲಿವಾಲಾ ಬಾಗ್ ಸಂಸಾನ ಚೌಕಿ,
ಗೋಕುಲದೇವ್ [illegible], ಮುಂಬಾಯಿ ನಂಬ್ರ 13.

## ಎಲ್ಲಾ ಪಂಚಾಯತ ಬೋರ್ಡುಗಳಿಗೆ.

ಚಿಕ್ಕ ಪಂಚಾಯತುಗಳ ಕಾರ್ಯಕ್ಷೇತ್ರದೊಳಗಣ ಹಳ್ಳಿಪಡೆಯ ರಸ್ತೆಗಳ ಬಹಾಪಡೆಯ ಬಗ್ಗೆ ಪಂಚಾಯತುಗಳಿಗೆ ಕೊಡುವ ಬಗ್ಗೆ (ಇಂಡಿಯಾ ಸರಕಾರದವರು ಗ್ರಾಮಾಭಿವೃದ್ಧಿಗೆ ಈ ವರುಷ ಪ್ರತ್ಯೇಕಿಸಿಟ್ಟ ಹಣದಿಂದ ಈ ಸಂಸ್ಥಾನಕ್ಕೆ ಕೊಟ್ಟ ೧೪ ಲಕ್ಷ ರೂಪಾಯಿಗಳಿಂದ) ೧೫ ಲಕ್ಷ ರೂಪಾಯಿಗಳನ್ನು ಗವರ್ನಮೆಂಟಿನವರು ಮದ್ರಾಸ್ ಲೋಕಲ್ ಬೋರ್ಡು ಇನ್ಸ್ಪೆಕ್ಟರರ ತಾಬೆಗೆ ತಾ. ೧೫—೬—೩೫ನೇ ನಂಬ್ರ ೩೭೧೧ನೇ ಹುಕುಂ ಮೇರೆಗೆ ಕೊಟ್ಟಿರುತ್ತಾರೆಂತ ಈಗ ತಾನೇ ತಿಳಿದುಬಂದಿದೆ. ಸಾಧ್ಯವಿರುವ ಮಟ್ಟಿಗೆ ಎಲ್ಲಾ ಪಂಚಾಯತುಗಳಿಗೂ ಈ ಹಣದ ಪ್ರಯೋಜನವು ಸಿಗುವಂತೆ ಮಾಡಬೇಕೆಂದೂ ಈ ಹಣ ಉಪಯೋಗಿಸುವ ರಸ್ತೆಗಳಿಗೆ ಜುಬಿಲಿ ರಸ್ತೆಗಳೆಂದು ಕರೆಯಲ್ಪಡಬೇಕೆಂದೂ ಯಾವ ಯಾವ ಕಾಮಗಾರಿಗೆ ಈ ಗ್ರಾಂಟು ಉಪಯೋಗಿಸಲು ಉದ್ದೇಶಿಸಿದೆ ಎಂಬುದರ ಪಟ್ಟಿಯನ್ನು ವಿವರ ಸಮೇತ ಗವರ್ನಮೆಂಟಿಗೆ ಕಳುಹಿಸುವುದಲ್ಲದೆ ಎಷ್ಟು ಹಣ ಖರ್ಚಾಯಿತು ಎಂಬುದರ ಕುರಿತು ತಾ ೧೫—೧೧—೩೫ರೊಳಗೆ ವ ನಂತರ ತಾ ೧೫—೪—೩೬ರ ವರೆಗೆ ಸಹ ಇನ್ಸ್ಪೆಕ್ಟರರು ರಿಪೋರ್ಟುಮಾಡಬೇಕೆಂದೂ ಆಜ್ಞಾಪಿಸಿದ್ದಾರೆ.

ಈ ಗ್ರಾಂಟು ಸಿಕ್ಕಬೇಕಾದರೆ ಪಂಚಾಯತ ಫಂಡಿನಿಂದ ಅರೆವಾಸಿ ಖರ್ಚುಮಾಡಬೇಕೆಂಬ ನಿರ್ಬಂಧವಿಲ್ಲ. ಕಾಮಗಾರಿಯ ಪೂರಾ ಹಣ ಸರಕಾರದಿಂದಲೇ ಸಿಕ್ಕುತ್ತದೆ. ಸಿಕ್ಕುವುದು ಮಾತ್ರ ಕಾಮಗಾರಿಯು ಆಖೈರಿಯಾದ ನಂತರವೇ ಆ ವರೆಗೆ ಕೈಯಿಂದ ಹಾಕಿಕೊಳ್ಳಬೇಕಷ್ಟೆ.

ನಮ್ಮ ಜಿಲ್ಲೆಯ ಎಲ್ಲಾ ಪಂಚಾಯತುಗಳಿಗೂ ಇಂತಹ ಅಪರೂಪದ ಅಮೌಲ್ಯವಾದ ಸಂದರ್ಭವನ್ನು ಕಳಕೊಳ್ಳದೆ ಈಗಲೇ ಈ "ಜುಬಿಲಿ ರಸ್ತೆ" ಯಾವುದೆಂಬ ಸಂಕಲ್ಪವನ್ನು ಮಾಡಿ ಆ ಬಗ್ಗೆ ಎಷ್ಟುಮಟ್ಟಿಗೆ ಬೇಕೆಂತ ನಿರ್ಣಯಮಾಡಿ ಕಳುಹಿಸಿಕೊಡಬೇಕು. ನಿರ್ಣಯದಲ್ಲಿ ಕಾಮಗಾರಿ ಯಾವುದೆಂಬ ವಿವರವು ಸ್ಪಷ್ಟ ತಿಳಿಯುವಂತೆ ಕಾಣಿಸಬೇಕು. ಬಹಳ ದೊಡ್ಡ ಕಾಮಗಾರಿಯನ್ನು ಕೈಕೊಳ್ಳಬೇಕೆಂತ ಯೋಚಿಸಿದರೆ, ಅಷ್ಟು ಹಣ ಒಂದೊಂದೇ ಪಂಚಾಯತಕ್ಕೆ ಸಿಕ್ಕುವುದೇ ಅನುಮಾನಕ್ಕೆ ಬಂದೀತು. ಸಾಮಾನ್ಯವಾಗಿ ಸರಾಸರಿ ರೂಪಾಯಿ ೫೦೦ ಒಂದೊಂದು ಪಂಚಾಯತಕ್ಕೆ ಸಿಕ್ಕುತ್ತದೋ ಏನೋ. ಈ ಕುರಿತು ಯಾವುದೊಂದು ಅಂದಾಜು ಇದುವರೆಗೆ ಇನ್ಸ್ಪೆಕ್ಟರರು ಪ್ರಕಟಿಸಿದಂತೆ ತೋರುವುದಿಲ್ಲ. ಪ್ರಕಟಿಸಿದ ನಂತರವೇ ನೋಡೋಣವೆಂದರೆ ವ್ಯರ್ಥಕಾಲ ಕಳೆದು ಹೋದೀತೋ ಎಂಬ ಅಂಜಿಕೆ. ಆದುದರಿಂದ ಜಾಗ್ರತೆ ಅಗಲಿ ನಮ್ಮ ಪಂಚಾಯತುಗಳು ಈಗಲೇ ಎಚ್ಚರದಿಂದ ಈ ಕಾರ್ಯದ ಆರಂಭಮಾಡುವುದು ಅವಶ್ಯ.

ಕುಂದಾಪುರ, ಉಡುಪಿ ತಾಲೂಕುಗಳಲ್ಲಿ ಪಂಚಾಯತುಗಳಿಗೆ ಎಸ್ಟಿಮೇಟುಗಳನ್ನು ತಯಾರಿಸಿ ಕೊಡುವ ಬಗ್ಗೆ ಪ್ರತ್ಯೇಕ ಓವರ್ಸಿಯರುಗಳಿದ್ದಾರೆ ಮಂಗಳೂರು ತಾಲೂಕಿಗೆ ಅದೇ ರೀತಿ ಸದ್ಯದಲ್ಲಿಯೇ ನೇಮಕವಾಗುತ್ತದೆ. ಹೀಗಾಗಿ ಎಸ್ಟಿಮೇಟುಗಳು ಜರೂರಿನಿಂದ ಆಗುವ ಏರ್ಪಾಡು ಇದೆ ಆ ವಿಷಯದಲ್ಲಿ ಸಂಕೋಚಬೇಡ.

ಖಾಸಗಿ ಜನರಿಂದ ಭೂಸಂಪಾದನೆಯ ಅಗತ್ಯವುಳ್ಳ ಕಾಮಗಾರಿಯನ್ನು ಕೈಕೊಳ್ಳದೆ ಇದ್ದರೆ ವಾಸಿ. ರಿಜಿಸ್ಟ್ರಿಯಿಂದಾದ ಪತ್ರದಾನಿಕೊಡಲಿಕ್ಕೆ ಸಿದ್ಧವಿರುವ ಸಂಗತಿಗಳಲ್ಲಿ ಮಾತ್ರ ಆಗಬಹುದು.

ನಿಜವಾಗಿಯೂ ಜನರಿಗೆ ಅಗತ್ಯವಿರುವ ಮುಖ್ಯ ಬಹುಜನರ ಅನುಕೂಲತೆ ವ ಸೌಕರ್ಯಗಳಿಗೆ ಸಹಾಯಕವಾದ ಮಾರ್ಗಗಳನ್ನು ಮಾಡಿಸಬೇಕು. ಹೊಸರಸ್ತೆ, ಅಲ್ಲಿಂದ ಬರುವ ಹಣಕ್ಕೆ ಇಲ್ಲೊಂದು ದಾರಿಮಾಡಿ, ಕೆರೆಂದು ಹಾಸ್ಯಕ್ಕೂ ಅಪವಾದಕ್ಕೂ ಗುರಿಯಾಗದಂತೆ ತುಂಬಾ ವಿವೇಚನೆಯಿಂದ ಕಾಮಗಾರಿಗಳನ್ನು ನಿರ್ಧರಿಸಬೇಕೆಂಬುದು ಬೇರೆ ಹೇಳಬೇಕಾಗಿಲ್ಲವಷ್ಟೆ.

ಪುತ್ತೂರು, 7—9—'35 } ಮೊಳಹಳ್ಳಿ ಶಿವರಾವ್,
ಪ್ರಸಿಡೆಂಟು ಡೆಲಿಗೇಟ್ (ಪಂಚಾಯತ)
ದ. ಕ. ಜಿಲ್ಲಾ ಬೋರ್ಡ್.

## ಜಿಲ್ಲಾ ಭೂಮಾಲಿಕರ ಸಂಘದ ವಾರ್ಷಿಕ ವರದಿ.

ಇದೇ ತಾ. ೬—೯—೩೫ರಲ್ಲಿ ಮಂಗಳೂರು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಶ್ರೀ ಜೆರೋಮ್ ಎ. ಸಲ್ದಾನರ ಅಧ್ಯಕ್ಷತೆಯಲ್ಲಿ ಕೂಡಿದ ಜಿಲ್ಲಾ ಭೂಮಾಲಿಕರ ಸಂಘದ ವಾರ್ಷಿಕ ವರದಿ.

ಹಿಂದಿನ ಸಭೆ ಸೇರಿದ ತಾ. ೨೪—೯—೩೪ರಿಂದ ಈ ಸಭೆಯ ತಾರೀಕಿನ ವರೆಗೆ (೬—೯—೩೫) ಸಂಘದ ಕೆಲಸದ ವಿಷಯವಾಗಿ ಕಾರ್ಯದರ್ಶಿಯವರು ಸಭೆಯ ಮುಂದೆ ಇಟ್ಟ ವರದಿ ಮತ್ತು ೬ ಸಮಯದ ಲೆಕ್ಕದ ಪಟ್ಟಿ ಕೂಡಾ ಓದಿ ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿರುತ್ತದೆ. ಸದರಿ ಲೆಕ್ಕಪತ್ರಗಳನ್ನು ಪರಿಶೀಲಿಸುವರೆ ಶ್ರೀ ಮೊಳಹಳ್ಳಿ ಶಿವರಾಯರನ್ನು ಆಡಿಟರರಾಗಿ ನೇಮಕ ಮಾಡಲಾಯಿತು.

ಸಂಘದ ಕಾರ್ಯಕಾರಿ ಮಂಡಳಿಗೆ ಈ ಕೆಳಗಿನ ಮೆಂಬರರನ್ನು ನೇಮಿಸಲಾಯಿತು.

ಶ್ರೀಗಳಾದ (೧) ಎ. ಬಿ. ಶೆಟ್ಟಿ, ಎಂ. ಎಲ್. ಸಿ (೨) ಕೆ ಆರ್. ಕಾರಂತರು, (೩) ಜೆರೋಮ್ ಎ. ಸಲ್ದಾಂಘಾರು, (೪) ಮೂಲ್ಕಿ ರಾಮಕೃಷ್ಣ ಪೂಂಜರು, (೫) ಮೂಡಬಿದ್ರಿ ಶಂಕರನಾರಾಯಣರಾಯರು, (೬) ಡಾಕ್ಟರ್ ಕೆ ಏಕ್ಕಲ ಶೆಟ್ಟಿ (೭) ಎಂ. ಎಸ್ ಅಧಿಕಾರಿಗಳು, (೮) ಕೆ ಬಿ. ಜಿನರಾಜ ಹೆಗ್ಡೆರು (೯) ಬೈಲೂರು ವಾಸುದೇವರಾಯರು, (೧೦) ಕೆ ಜಗನ್ನಾಥ ಬಲ್ಲಾಳರು, (೧೧) ಬ್ರಹ್ಮಾವರ ತಮ್ಮಣ್ಣಬಾಂದ್ರ (೧೨) ಬಿಜೂರು ಸೂರಪ್ಪಯ್ಯ ಹೆಬ್ಬಾರರು, (೧೩) ಕೃಷ್ಣರಾಯ ಕೊಡಗಿಯವರು, (೧೪) ಪಿಂಡಿಗೆ ಮುದ್ದಾಲಿಂಗಭಟ್ಟರು, (೧೫) ಗಣೇಶ ನಾರಾಯಣಸೈಗಳು, (೧೬) ಮೊಳಹಳ್ಳಿ ಶಿವರಾಯರು, (೧೭) ಬೆಳ್ತಂಗಡಿ ಮಂಗೇಶರಾಯರು, (೧೮) ಎಂ. ವಿಠಪ್ಪ ರೈಗಳು, (೧೯) ವಿಥೆ ನಾರಾಯಣ ಭಟ್ಟ (೨೦) ಎಂ ಎಸ್ ಶ್ರೀಪತಿರು ಎಂ ಎಲ್ ಸಿ (೨೧) ಯು ಪಿ ಸುಬ್ರಹ್ಮಣ್ಯಭಟ್, ಎಂ ಎಲ್ ಸಿ, (೨೨) ಖಾನ್ ಬಹದೂರ್ ಮಹಮ್ಮದ್ ಶಮ್ನಾಡ್ ಸಾಹೇಬ್ ಎಂ ಎಲ್ ಸಿ

ಮೇಲೆ ಹೆಸರು ಕಾಣಿಸಿದವರ ಪೈಕಿ ಶ್ರೀ ಎ ಬಿ ಶೆಟ್ಟರನ್ನು ಸಂಘದ ಅಧ್ಯಕ್ಷರನ್ನಾಗಿಯೂ, ಶ್ರೀ ಕೆ. ಆರ್ ಕಾರಂತರನ್ನು ಕಾರ್ಯದರ್ಶಿ ಮತ್ತು ಖಜಾಂಚಿಯನ್ನಾಗಿಯೂ ನೇಮಿಸಲಾಯಿತು.

ಸದ್ಯಕ್ಕೆ ನಮ್ಮ ಜಿಲ್ಲೆಗೆ ಬರಲಿಕ್ಕಿರುವ ಮಾನ್ಯ ಲ್ಯಾಂಡು ಮೆಂಬರರ ಕಾರ್ಯ ಸಂದರ್ಶನದ ಕುರಿತು ಅಗತ್ಯವುಳ್ಳ ಏರ್ಪಾಡು ಮಾಡಲಿಕ್ಕೂ, ಸಂಘದ ಇತರ ಯಾವತ್ತೂ ಜರೂರಿ ಕೆಲಸಗಳನ್ನು ಮಾಡುವರೆಯೂ ಈ ಕೆಳಗಿನ ಉಪಸಮಿತಿಯನ್ನು ನೇಮಿಸಲಾಯಿತು.

೧ ಅಧ್ಯಕ್ಷರು, ೨ ಕಾರ್ಯದರ್ಶಿಯವರು ೩ ಮೊಳಹಳ್ಳಿ ಶಿವರಾಯರು, ೪ ಮೂಡಬಿದ್ರೆ ಶಂಕರನಾರಾಯಣರಾಯರು ೫ ಜೆರೋಮ್ ಎ ಸಲ್ದಾಂಘಾರು.

## ವಿದ್ಯಾವಿಹೀನ ಜಗತ್ತು.

ಮಿ। ಎಂ ಎಲ್. ಜೇಕ್ಸರ ಅಭಿಪ್ರಾಯದ ಮೇರೆಗೆ ಜಗತ್ತು ಇನ್ನೂ ಸಾತ್ವಿಕ ಜ್ಞಾನವನ್ನು ಹೊಂದಿಲ್ಲ. ಮಿಲ್ ಹಿಲ್ ಶಾಲೆಯ ಮುಖ್ಯೋಪಾಧ್ಯಾಯರಾದ ಇವರು ಚಾರ್ಟರ್ ರೋಟರಿ ಕ್ಲಬ್ಬಿನಲ್ಲಿ ಭಾಷಣಮಾಡುವಾಗ, ಇದರ ಮರ್ಮವನ್ನು ತಿಳಿಸಿದರು. "ಜಗತ್ತು ಹೀನಾವಸ್ಥೆಯನ್ನು ಪಡೆದಿದ್ದರೆ ಅದೀಗ ಸರಿಯಾದ ವಿದ್ಯಾಭ್ಯಾಸವನ್ನು ಪಡೆಯದಿದ್ದುದರ ಕಾರಣವಾಗಿ. ವಿದ್ಯಾಭ್ಯಾಸದ ಅಮೋಘವಾದ ಧ್ಯೇಯವು ಪರೀಕ್ಷೆಗಳಿಂದಾಗಿ ಕೆಟ್ಟುಹೋಗಬಹುದು. ಜಾಣರೂ ವಿಚಕ್ಷಣರೂ ಆದ ತರುಣರನ್ನು ಕೆಲಸಕ್ಕೆ ಹಚ್ಚುವುದನ್ನು ಬಿಟ್ಟು ಚತುರರು ಎಂಬ ಭಾವನೆಯಿಂದಲೇ ಅವರನ್ನು ಇನ್ನೂ ಹೆಚ್ಚಿನ ವಿದ್ಯಾ ವ್ಯಾಸಂಗಕ್ಕೆ ಹಚ್ಚುಮಾಡಿ ಅವರ ದೇಹವನ್ನೇ ಕೆಡಿಸುವರು. ಕೆಲಸದಲ್ಲಿದ್ದ ಅಭಿರುಚಿಯು ಅವರಿಂದ ಮಾಯವಾಯಿತು. ಹೆಚ್ಚು ಕಲಿತವರು ಮೈಮುರಿದು ಕೆಲಸ ಮಾಡಲು ಒಪ್ಪುವುದಿಲ್ಲ. ಶಿಕ್ಷಣವನ್ನು ಪಡೆದ ಎಷ್ಟು ಜನರು ತಾನೇ ಆರೋಗ್ಯದಿಂದಿದ್ದಾರೆ? ಅವರ ದೇಹವನ್ನು ಪುಷ್ಟೀಕರಿಸಲು ನಾವು ಅವರಿಗೆ ವ್ಯಾಯಾಮಶಾಲೆಯನ್ನು ನಿರ್ಮಿಸಿದ್ದೇವೆ. ಅವು ಅಂಗಪ್ರತ್ಯಂಗಗಳನ್ನು ಪುಷ್ಟೀಕರಿಸುತ್ತವೆ ವಿನಹ ದೇಹವನ್ನು ನಿರ್ಮಲವಾದ ರೀತಿಯಲ್ಲಿಡಲು ಕಲಿಸುವುದಿಲ್ಲ" ಎಂದೇ ಅವರ ಭಾಷಣದ ಸಾರಾಂಶ.

## ವಿಜ್ಞಾನಶಾಸ್ತ್ರದ ಪ್ರತಿಭೆ
### ಹಳೇ ಪೈಂಟನ್ನು ತೆಗೆಯುವ ಹೊಸ ವಿಧಾನ.

ಮೊದಲು, ಹಳೇ ಪೈಂಟನ್ನು ಒರಸಿ ತೆಗೆಯಬೇಕಾಗಿತ್ತು. ಅದಕ್ಕೆ ಹೆಚ್ಚು ಸಮಯವೂ ಶ್ರಮವೂ ಬೇಕಾಗಿತ್ತು. ಈಗ ಹಾಗಲ್ಲ. ವಿಜ್ಞಾನ ಶಾಸ್ತ್ರವು ಹೊಸ ವಿಧಾನವೊಂದನ್ನು ನಮ್ಮ ಕಣ್ಣ ಮುಂದಿರಿಸಿದೆ. ವಿಜ್ಞಾನ ಯುಗವು ಮನುಷ್ಯನಿಗೆ ತನ್ನ ಕಾರ್ಯಚಟುವಟಿಕೆಗಳಲ್ಲಿ ಎಷ್ಟು ಸರಳತೆಯನ್ನು ತಂದೊಡ್ಡಿದೆ ಎಂಬುದನ್ನು ಇದು ಸಮರ್ಥಿಸುತ್ತಿದೆ. ಹಳೇ ಪೈಂಟಿನ ಮೇಲೆ ಒಂದು ದ್ರಾವಕವನ್ನು ಬ್ರಶ್ಶಿನ ಮೂಲಕ ಚೆನ್ನಾಗಿ ಉಜ್ಜಿದರೆ ಸಾಕು. ಕೆಲವು ಕ್ಷಣಗಳ ನಂತರ ಶೀಘ್ರದಲ್ಲೇ ಮುಗುಳಿದ ಸ್ಪಂಜಿನಿಂದ ಒರಸಿದರೆ ಹಳೇ ಪೈಂಟು ಬಹು ಸುಲಭವಾಗಿ ಹೋಗುತ್ತದೆ.

## ರೈಲುಬಂಡಿಗಳ ಸಮಯ.

| ಗಾಡಿಗಳು | ಹೊರಡುವ ಘಂಟೆ | ತಲ್ಪುವ ಘಂಟೆ |
|---|---|---|
| ಮೈಲು | ಬೆಳಗ್ಗೆ 9 50 | ಸಂಜೆ 4 20 |
| ಮಿಕ್ಸೆಡ್ | ,, 5-55 | ರಾತ್ರಿ 8-50 |
| ಫಾಸ್ಟ್ ಪೆಸೆಂಜರ್ | ಮ. 12-45 | ಮ 2 40 |
| ಶಟಲ್ | ಸಂಜೆ 5 25 | ಬೆಳಗ್ಗೆ 9-25 |
| ಕಾಂಞಂಗಾಡ್ ಪೆಸೆಂಜರು | ಬೆ 8 25 | ಮ 1 20 |
| ಕಾಸರಗೋಡು ಪೆಸೆಂಜರು | ಸಂಜೆ 3 20 | ಸಂಜೆ 6-15 |


# ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ,
## ಲಿಮಿಟೆಡ್.

ಮುಖ್ಯ ಕಚೇರಿ.—ಮದ್ರಾಸು.

ಪೋಸ್ಟು ಬಾಕ್ಸ್ ನಂಬ್ರ 182.

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಓಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರಣೆ, ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಹು ಕಡಿಮೆ. ಪಾಲಿಸಿಯ ಶರತ್ತುಗಳು ಆಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ.

ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

### ಬೇಕಾಗಿದ್ದಾರೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು.

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೋ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಸೆಕ್ರೆಟರಿ, ಕೂರ್ಗ್ ಲೋಕಲ್‌ಬೋರ್ಡ್ ಓಫ್ ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ C/o ಕೂರ್ಗ್ ಕೋ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು.

(3) ವೈ. ಶ್ರೀನಿವಾಸಯ್ಯ, ಕಮಿಶನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೋ-ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು.

## ನಾಯಕ್ ಬ್ರದರ್ಸರ
# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗಾಗಿ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

## ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ




Distributors for South Kanara —

**Raghavendra Ranga Pai, Car Street, Mangalore.**

ಇಂದೇ ಆರಂಭಿಸಿರಿ!

ಪ್ರಸಿದ್ಧ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಲಿಕ್ಕೆ

[illegible]

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತಂಭ.

ಆರೋಗ್ಯಕ್ಕೆ ಕವಚವು

32 [illegible] 1

[illegible]

ಕಾಮಶಾಸ್ತ್ರವನ್ನೋದಿರಿ.

Agents — Shah Company [illegible]
, Pearl & Sons [illegible]

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

### ಸಾಮಾನ್ಯ ವಿಜ್ಞಾನ

| ಚರಿತ್ರೆ ಮತ್ತು ಕಥೆಗಳು. | ರೂ | ಅ | ಪೈ | ಸಾಮಾನ್ಯ ವಿಜ್ಞಾನ. | | | |
|---|---|---|---|---|---|---|---|
| | | | | ಎರಡನೇ ದರ್ಜೆ | 0 | 3 | 0 |
| ನಾಲ್ಕನೇ ದರ್ಜೆ | 0 | 6 | 0 | ಮೂರನೇ ,, | 0 | 3 | 0 |
| ಮೂರನೇ ,, | 0 | 4 | 6 | ನಾಲ್ಕನೇ ,, | 0 | 6 | 0 |
| ಎರಡನೇ ,, | 0 | 4 | 0 | ಐದನೇ ,, | 0 | 5 | 0 |
| ಸಮಾಜಶಾಸ್ತ್ರ. | | | | | | | |
| ಐದನೇ ದರ್ಜೆ | 0 | 8 | 0 | | | | |
| ನಾಲ್ಕನೇ ,, | 0 | 8 | 0 | ಆರನೇ ದರ್ಜೆ | 0 | 4 | 0 |
| ಮೂರನೇ ,, | 0 | 2 | 6 | ಏಳನೇ ,, | 0 | 5 | 0 |
| | | | | ಎಂಟನೇ ,, | 0 | 6 | 0 |

### ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಜೇನು ಸತ್ತು ಕಾಗೆ ಬಡವಾಯಿತು
ಮೊಣಸಿನ ಕಾಳಪ್ಪ
ಅಗಸನ ಮುದ್ದೆ
ಇಲಿಗಳ ಧಕ್ಕೆ ದೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ಶಿವರಾಮ ಕಾರಂತ ವಿರಚಿತ

# ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಅಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ

ಕ್ರೌನ್ ⅛ ಆಕಾರದ ೧೮೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

## ಶಾರದಾ ಛಾಪಖಾನೆ, ಮಂಗಳೂರು.

# ನಡೆದ ಕತೆಗಳು.

## True Stories.

೬ ಮುಗಿಸುವ ಸಮಯ—ಮೂರೇ ನಿಮಿಷಗಳು.

*All Rights Reserved.*

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೊರಗೆ ತೋರಿಸುವುದೇ 'ನಡೆದ ಕತೆಗಳು'—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು; ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.]

ಪುಸ್ತಕ ೩—೬.

### ಭೂತಬಾಧೆ.

ಬಂಟ್ವಾಳ ವಾಸುದೇವರಾಯರು ಶ್ರೀ ಅಂಬಾ ಪ್ರಸಾದಿಕ ದೇವಸ್ಥಾನದ ಹಿಂಗಡೆಯಲ್ಲಿರುವ ಅದ್ದೊಂದು ಸಣ್ಣ ಹಿತ್ತಿಲು ಮನೆಗಳನ್ನು ೧೩೦೦ ರೂಪಾಯಿ ಕ್ರಯಕ್ಕೆ ಪಡೆದುಕೊಂಡು ತನ್ನ ಸಂಸಾರರಥವನ್ನು ಅಲ್ಲಿ ನಡೆಸಲಾರಂಭಿಸಿದರು.

ಅವರ ಸಂಸಾರವೆಂದರೆ—ಒಬ್ಬಳು ಪತ್ನಿ, ಒಂದು ಮಗು ಮತ್ತು ಅವರ ಅಕ್ಕ. ಕೋರ್ಟಿನ ಬಾಗಲು ಕಾದು, ಹಲಕೆಲವು ಅರ್ಜಿಗಳನ್ನು ಬರೆದು ಕೊಟ್ಟು, ಹುಟ್ಟಿ ಬಂದ ಹಣದಿಂದ ವಾಸುದೇವರಾಯರು ಸಂಸಾರವನ್ನು ನಡೆಸುತ್ತಿದ್ದರು.

ಅವರಿಗೆ ಒಂದು ಹುಚ್ಚು. ಹೆಚ್ಚು ಹಾಲು ಕೊಡುವ, ಪುಷ್ಟವೂ ಒಳ್ಳೆಯ ಜಾತಿಯವುಗಳೂ ಆದ ದನಗಳನ್ನಾರಿಸಿ ಮನೆಯಲ್ಲಿ ಸಾಕುವುದು, ಹಾಲು ಮಾರಿ, ತನ್ನ ಸ್ವಂತದ ವೆಚ್ಚಗಳನ್ನು ಸುಧಾರಿಸಿಕೊಳ್ಳುವುದು.

ಫರಂಗಿಪೇಟೆ ಸ್ಕೂಲ್ ಮಾಸ್ಟರ್ ರಘುನಾಥ ಬಾಳಿಗರಿಂದ ಅವರು ಒಂದು ದನವನ್ನು ೯೬ ರೂಪಾಯಿಗಳಿಗೆ ಪಡೆದರು. ಹೊತ್ತಿಗೆ ೧೮ ಕುಡುತೆ ಹಾಲು ಕೊಡುವ ಆ ದನಕ್ಕೆ ತಾನು ಕೊಟ್ಟ ಬೆಲೆಯು ಕಡಿಮೆಯಾಯಿತೆಂದೇ ಹಿಗ್ಗಿ ವ್ಯಾಪಾರದಲ್ಲಿ ಗೆದ್ದುದಕ್ಕಾಗಿ ಆನಂದಿತರಾದರು. ಅದನ್ನು ತನ್ನ ಹಟ್ಟಿಯಲ್ಲಿ ಕಟ್ಟಿ, ಅದನ್ನು ಚೆನ್ನಾಗಿ ಆರೈಕೆ ಮಾಡುವ ಜವಾಬ್ದಾರಿಕೆಯನ್ನು ಪತ್ನಿ ಗಂಗಾಬಾಯಿಯವರಿಗೆ ಕೊಟ್ಟರು.

ಇಲ್ಲಿ ಶ್ರೀಮತಿ ಗಂಗಾಬಾಯಿಯವರ ಅಲ್ಪ ಪರಿಚಯವನ್ನು ಮಾಡಿಕೊಡಲಾಗಿದೆ.

ಗಂಗಾಬಾಯಿಯವರು ವಕೀಲ ಅನಂತಕೃಷ್ಣರವರ ದತ್ತ ಪುತ್ರಿ. ಬಾಲ್ಯದಲ್ಲಿ ಕಷ್ಟನಷ್ಟಗಳೇನೆಂದು ಪೂರ್ಣ ತಿಳಿದವರು. ಮನೆಗೆಲಸದಲ್ಲಿ ಪರಿಣತರೆಂದು ಮನೆಯವರ ಮೆಚ್ಚುಗೆಯನ್ನು ಪಡೆದವರು. ಆದರೆ ಅಂತಹ ಹೆಸರನ್ನು ಕಾಪಾಡಿಕೊಳ್ಳುವ ಅವಶ್ಯಕತೆಯು ಅವರಿಗೆ ಮುಂದಕ್ಕೆ ಕಾಣಲಿಲ್ಲ. ವಕೀಲರ ಮನೆಗೆ ಹೋದಂದಿನಿಂದ, ಅವರ ಮೇಲೆ ಅಲ್ಲಿಯ ಸುಖವಾತಾವರಣದ ವರ್ಚಸ್ಸು ಬಿದ್ದು, ಮನೆಯ ಒಂದೊಂದೆ ಕೆಲಸವು ಮರೆತು ಹೋಗಿ, ಕೊನೆಗೆ ಔದಾಸೀನ್ಯದ ಸುಂದರ ವಿಗ್ರಹದಂತಾದರು.

ಅವರಿಗೆ ವಾಸುದೇವರಾಯರೊಡನೆ ವಿವಾಹವು ನಡೆದ ಒಂದು ವರ್ಷದಲ್ಲೇ—ವಾಸುದೇವರಾಯರಿಗೆ ವಿಜಯ ಶ್ರೀ ಬೇಂಕಿನಲ್ಲಿದ್ದ ಸರಾಫರ ಕೆಲಸವು ಹೋಗಿ ಕಷ್ಟಗಳು ಬಂದುಬಿಟ್ಟುವು. ಆದರೆ ಸಂಸಾರಬಾಧೆಯು ಗಂಗಾಬಾಯಿಯವರನ್ನು ಮನೆಗೆಲಸಗಳಲ್ಲಿ ಉತ್ತೇಜಿಸಲಿಲ್ಲ; ಬದಲಿಗೆ ಅವರಿಗೆ ಜಡ್ಡು ಏರಿತು.

ಇಂತಹ ಹೆಂಗಸೊಬ್ಬಳ ಹೊಣೆಗಾರಿಕೆಗೆ ಪುಷ್ಟವಾಗಿದ್ದ ಆ ದನವು ಬಂತು.

ವಾಸುದೇವರಾಯರು ಹಿತ್ತಿಲು ಮನೆಗಳನ್ನು ಪಡೆದುಕೊಳ್ಳುವಾಗಲೇ ಹಲವರು ಹಲವು ರೀತಿಯಿಂದ ಅವರಿಗೆ ಎಚ್ಚರವಿತ್ತರು. "ಯಾಕೆ ವಾಸುದೇವರಾಯರೇ, ಆ ಹಿತ್ತಿಲನ್ನು ಪಡೆದಿರಿ? ಆ ಹಿತ್ತಿಲಲ್ಲಿ ದನಗಳು ಬಾಳುವುದಿಲ್ಲ. ಅಲ್ಲದೆ ಆ ಮನೆಯಲ್ಲಿ ಇಬ್ಬರ ಮರಣಗಳೂ ಸಂಭವಿಸಿದ್ದ ಕತೆಯಿದೆ. ಪಂಜುರ್ಲಿ ಭೂತವೊಂದರ ದೃಷ್ಟಿಯು ಆ ಸ್ಥಳದಲ್ಲಿದೆ" ಎಂದೆನ್ನುತ್ತಿದ್ದರು. ಅವರ ನುಡಿಗಳನ್ನು ಪುಷ್ಟೀಕರಿಸುವಂತೆ ಹಿತ್ತಿಲು ಮನೆಗಳ ಸುತ್ತಲೂ ಕೆಸರು, ಕಸದ ರಾಶಿ, ದೊಡ್ಡ ತೋಡುಗಳೂ ಇದ್ದು, ಅಲ್ಲಿ ಅನಾರೋಗ್ಯವು ಮನೆಮಾಡಿಕೊಂಡಿದೆಯೆನ್ನಲು ಬೇರೆ ಸಾಕ್ಷಿಯೇ ಅಗತ್ಯವಿರುತ್ತಿದ್ದಿಲ್ಲ.

ದನವು ಮನೆಗೆ ಬಂದ ಒಂದೆರಡು ದಿನಗಳ ತನಕ ಗಂಗಾಬಾಯಿಯವರ ಆರಂಭೋತ್ಸಾಹವಿತ್ತು. ರಾಶಿ ರಾಶಿ ಇದ್ದ ಹುಲ್ಲು, ಹಿಂಡಿಗಳನ್ನು ದನಕ್ಕೆ ಹಾಕಿ ಅದನ್ನು ಪೋಷಿಸುವ ಕರ್ತವ್ಯವನ್ನು ಪಾಲಿಸಿದರೆನ್ನಿ.—ಆದರೆ ದನವು ಹಳೆತಾದಂತೆ ಅಮ್ಮನವರ ಉತ್ಸಾಹವೂ ಕುಂದಿತು. ಕಡೆಕಡೆಗೆ ಆ ದನಕ್ಕೆ ಆಹಾರ ನೀರುಗಳು ಒಂದು ರಾತ್ರಿಯಿಂದ ಇನ್ನೊಂದು ರಾತ್ರೆಗೆ ಸಿಗುವ ದುರ್ದೈವವೊದಗಿತು. ವಾಸುದೇವರಾಯರು ರಾತ್ರೆ ಮನೆಗೆ ಬಂದು 'ದನಕ್ಕೆ ಗಂಜಿನೀರು ತಿಂಡಿ ಹುಲ್ಲುಗಳನ್ನು ಮೂರುಸಲವೂ ಕೊಟ್ಟೆಯೋ?' ಎಂದು ಕೇಳಿದರೆ 'ಹೌದು, ಈ ಹೊತ್ತು ಲಕ್ಷ್ಮಿ ಚೆನ್ನಾಗಿ ತಿಂದುಕುಡಿದಿದ್ದಾಳೆ' ಎಂಬ ಉತ್ತರವು ಬಂದೇ ಬರುತ್ತಿತ್ತು. ಹೀಗೆಯೇ ಎರಡು ತಿಂಗಳುಗಳು ಕಳೆದುವು. ಪಾಪ, ಆ ದನವು ಮೈಯ ಮಾಂಸವನ್ನು ಹೇಗೆ ರಕ್ಷಿಸಿಕೊಂಡೀತು! ಹಸಿವು ಬಾಯಾರಿಕೆಗಳಿಂದ ಹಗಲಿಡೀ ಬಳಲಿ ಬೆಂಡಾಗಿ ಅದಕ್ಕೆ ಸಾಕೋ ಸಾಕಾಯಿತು. ತನ್ನ ಮಾನವ್ಯತಾಚರಣೆಯಲ್ಲೇ ಗಂಗಾಬಾಯಿಯವರನ್ನು ಶಪಿಸಿ ಕ್ಷೀಣವಾಗುತ್ತಾ ಬಂತು.

ಒಂದು ದಿನ ದನದ ದೇಹದಾರ್ಢ್ಯತೆಯತ್ತ ವಾಸುದೇವರ ಲಕ್ಷ್ಯವು ಹರಿಯಿತು. ಬೆಚ್ಚಿಬಿದ್ದರು! 'ಈ ದನದ ಎಲುಬುಗಳೆಲ್ಲ ಹೀಗೆ ಮೇಲೆ ಏಳಲು ಕಾರಣವೇನು?' ಎಂದು ಪತ್ನಿಯೊಡನೆ ಪ್ರಶ್ನಿಸಿ ಸಮಸ್ಯೆಗೊಳಗಾದರು. ಆಗ ಗಂಗಾಬಾಯಿಯವರ ಬಾಯಿ ತೆರೆಯಿತು. 'ಈ ಹಿತ್ತಿಲಿನಲ್ಲಿ ಒಂದೇ ಒಂದು ದನವೂ ಬಾಳುವುದಿಲ್ಲ ಎಂದು ಪೊಳ್ಳಿ ಶಾಸ್ತ್ರಿ ಕೂಡಾ ಹೇಳಲಿಲ್ಲವೇ?— ಅದೇ ಭೂತದ ಬಾಧೆಯಾಗಿರಬೇಕು, ಇಲ್ಲದಿದ್ದರೆ ಅಷ್ಟು ಚೆನ್ನಾಗಿದ್ದ ದನವು ಹೀಗಾಗಬೇಕೇ?'—ವಾಸುದೇವರಾಯರು ದನದ ಮೈಸವರುತ್ತಾ ನಿಂತುಕೊಂಡು ಯೋಚನಾನಿಮಗ್ನರಾಗಿ 'ಹೌದಾಗಿರಬಹುದು, ಹಾಗಾದರೆ ನಮಗೆ ಈ ದನ ಬೇಡ! ಇದನ್ನು ಮಾರಿಬಿಡೋಣ' ಎಂದರು. ಹಾಗೂ ಕಾಣದ ಭೂತದ ಬಾಧೆಯು ದನವನ್ನು ಮಾರಿಸಿಬಿಟ್ಟಿತು.

ವಾಸುದೇವರಾಯರ ಸಹೋದರಿ ಕಲ್ಯಾಣಮ್ಮ ಮನೆಗೆಲಸಗಳಲ್ಲಿ ಮಾತ್ರ ಮನಸಿಟ್ಟು, ಮಿಕ್ಕುಳಿದ ಆಗುಹೋಗುಗಳನ್ನೆಲ್ಲ ಮೌನತೆಯಿಂದಲೇ ಗ್ರಹಿಸಿ 'ಸುಮ್ಮನೆ ಭೂತವನ್ನು ದೂರುವುದು; ಇವಳಿಗೆ ಜಡ್ಡು ಏರಿದೆಯಾದರೆ ಯಾರೇನು ಮಾಡಬೇಕು? ಆ ದನಕ್ಕೆ ಹೊತ್ತುಹೊತ್ತಿಗೆ ಹುಲ್ಲು ನೀರುಗಳನ್ನು ಕೊಡದೆ ಅದನ್ನು ಕೈಯ ಪ್ರಯೋಜನಕ್ಕಿಲ್ಲದಂತೆ ಮಾಡಿದಳು. ದನಕರುಗಳೆಂದರೇನು, ಹುಡುಗಾಟಿಕೆಯೇ? ನಮ್ಮ ಮಕ್ಕಳನ್ನು ಸಾಕಿ ಸಲಹುವಂತೆ ಅವುಗಳನ್ನು ಜಾಗ್ರತೆಯಿಂದ ಸಾಕಬೇಕು. ಈ ಮನೆಯೂ ಲಕ್ಷಣದ್ದಲ್ಲವಂತೆ. ಇಬ್ಬರು ಈ ಮನೆಯಲ್ಲೇ ತೀರಿಕೊಂಡರಂತೆ. ಮನುಷ್ಯರು ಮನೆಗಳಲ್ಲಿ ಸಾಯದೆ ದಾರಿ ಮೇಲೆ ಸಾಯಬೇಕೆ? ಆಲಸ್ಯದಷ್ಟು ದೊಡ್ಡ ಭೂತಬಾಧೆಯಿಲ್ಲ!' ಎಂದು ಸ್ವಗತ ನೆನೆಯುತ್ತ, ಆರಾಮ ಕುರ್ಚಿಯನ್ನು ಕಾಯುತ್ತಿರುವ ಗಂಗಮ್ಮನನ್ನು ವಕ್ರದೃಷ್ಟಿಯಿಂದ ನೋಡಿ ಕೈಮುರಿಯುತ್ತಿದ್ದರು.

ವ. ಪಾ.

---

# ನಗಬಾರದು.

[ಸ್ವಕಪೋಲಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ಉಪಾಧ್ಯಾಯ:—ಮುತ್ತುಗಳು ಎಲ್ಲೆಲ್ಲಿ ಸಿಕ್ಕುತ್ತವೆ?
ಹುಡುಗ.—ಸಮುದ್ರದಲ್ಲಿ ಮತ್ತು ಸಿನೇಮಾ ನಟಿಯರಲ್ಲಿ ಹೇರಳ ಸಿಕ್ಕುತ್ತವೆ ಸಾರ್!

\+ + + +

ಬುದ್ಧಿವಂತ.—ಕನ್ನಡ ಭಾಷೆಯಲ್ಲಿ 'ಲ'ಕಾರಕ್ಕೂ 'ಳ'ಕಾರಕ್ಕೂ ಭೇದವಿಲ್ಲ.
ಹೆಡ್ಡ.—ಹಾಗಾದರೆ, ಕಲ್ಲು, ಕಳ್ಳು, ಹುಲಿ-ಹುಳಿ, ಕಾಲು ಕಾಳು ಇವುಗಳಿಗೆ ಒಂದೇ ಅರ್ಥವೇನು?

\+ + + +

ಮಿಶನರಿ ಪ್ರಚಾರ.—ಸ್ವರ್ಗ ಸಿಕ್ಕಬೇಕಾದರೆ ಏನೇನು ಮಾಡಬೇಕು ಗೊತ್ತೊ?
ಸಭಿಕ:—ಹೌದು, ಕುತ್ತಿಗೆಗೆ ಹಗ್ಗ ಕಟ್ಟಿಕೊಂಡು, ಒಂದು ಮರಕ್ಕೆ ತೂಗಾಡಬೇಕು. ಅರ್ಧಗಳಿಗೆಯಲ್ಲಿಯೇ ಸ್ವರ್ಗ!

\+ + + +

ಮಾಸ್ತರ್.—ನೇಪೋಲಿಯನನ ವಿಷಯ ಮೂರು ಶಬ್ದಗಳಲ್ಲಿ ಹೇಳು ನೋಡೋಣ.
ಹುಡುಗ.—ನೇಪೋಲಿಯನನು ಹುಟ್ಟಿದನು, ಸುಮಾರು ಕೆಲಸಮಾಡಿದನು, ಕಡೇಗೆ ಸತ್ತನು ಸಾರ್!

\+ + + +

ಪ್ರಶ್ನೆ.—ತರ್ಕದಲ್ಲಿ ಗೆಲ್ಲಕಕ್ಕವರು ಯಾರು?
ಉತ್ತರ.—ಕುತರ್ಕ ಮಾಡಕಕ್ಕವರು.

\+ + + +

ಒಬ್ಬ.—ಎಲ್ಲಿ ಜಗಳವಾಗುತ್ತದೋ ಅಲ್ಲಿಗೆ ಹೋಗಬೇಕು ತುಂಬಾ ಪ್ರಯೋಜನವಿದೆ.
ಇನ್ನೊಬ್ಬ.—ಅದು ಹೇಗೆ?
ಒಬ್ಬ.—ನಮಗೆ ಸಾಕ್ಷಿಗೆ ಕರೆಯುವರು, ಕೈತುಂಬಾ ಭತ್ತೆ ಕೊಡುವರು, ಕೂತಲ್ಲಿ ರಗಳೆಯಿಲ್ಲದೆ ದಿನದೂಡಬಹುದಲ್ಲಾ!

\+ + + +

ಉಪಾಧ್ಯಾಯ.—ಮೋಟರ್ ಓಡುವ ಒಂದು ಚಿತ್ರ ಬರೆ. (ಹುಡುಗನು ಸುಮ್ಮನೆ ಕುಳಿತನು)
ಉಪಾಧ್ಯಾಯ.—ಯಾಕೊ, ಚಿತ್ರ ಬಿಡಿಸುವುದಿಲ್ಲಾ?
ಹುಡುಗ.—ಮೋಟರ್ ಈಗ ಓಡುವುದಿಲ್ಲ. ಮತ್ತು ಅಕ್ಷರಗಳನ್ನು ಬರೆಯಬಹುದು ಹೊಂತು ಚಿತ್ರ ಬರೆಯಲಾಗುವುದೇ?

\+ + + +

ಭಿಕ್ಷುಕ.—ಸ್ವಾಮಿ, ಏನಾದರೂ ಧರ್ಮ ಕೊಡಿರಿ.
ಸಾಹುಕಾರ.—ಧರ್ಮವೆಂಬುದು ಒಂದು ವಸ್ತುವಲ್ಲ, ಅದನ್ನು ಕೊಡುವುದೆಂದರೆ ಹೇಗೊ ಮೂರ್ಖಾ?

\+ + + +

ಸಾಹುಕಾರ.—ಇದು ಸಾಬೂನು ಅಂದರೆ ಸಾಬೂನೋ? ಕಲ್ಲಿನ ಹಾಗಿದೆ. ಅಷ್ಟು ಒಳ್ಳೆಯದು!
ಗಿರಾಕಿ.—ಹಾಗಾದರೆ, ನನಗೆ ಕೊಡಬೇಡಿ ಸ್ವಾಮಿ, ನಾನು ಆ ಕಲ್ಲನ್ನು ತಲೆಗೆ ಹೊಡೆದುಕೊಳ್ಳುವುದೇ?

\+ + + +

ಒಬ್ಬ.—ಅಂಗಡಿಯಲ್ಲಿ ಯಜಮಾನರು ಯಾವ ದಿವಸ ಹೆಚ್ಚಾಗಿ ಇರುವುದಿಲ್ಲಾ?
ಇನ್ನೊಬ್ಬ.—ಹುಲಿಯ ವೇಷಗಳನ್ನು ಯಾವ ದಿವಸ ಹಾಕಿಕೊಂಡು ಬರುತ್ತಾರೋ ಆ ದಿವಸ. ಹೌದೋ ಅಲ್ಲವೋ?

\+ + + +

ಮೊದಲನೇಯವ:—ಈ ಸರ್ತಿ ಚೌತಿಯ ಸಮಯದಲ್ಲಿ ಹಾಕಿದ ವೇಷಗಳಲ್ಲಿ, ಸೊಗಸಾದ ಮತ್ತು ಭಯಂಕರ ವೇಷಗಳು ಯಾವುವು?
ಎರಡನೇಯವ:—ಸೊಗಸಾದ ವೇಷವೆಂದರೆ 'ಸನ್ಯಾಸಿವೇಷ' ಮತ್ತು ಭಯಂಕರ ವೇಷವೆಂದರೆ 'ಆವೇಶ'ವೇ ಸರಿ.

\+ + + +

ಒಬ್ಬ.—ಏಕಾದಶಿ ಯಾವ ವಾರದಲ್ಲಿ ಬರುತ್ತದೆ?
ಇನ್ನೊಬ್ಬ:—ವಾರವೇನೋ ನಾನರಿಯೆ. ಆದರೆ ದಶಮಿಯ ಮರುದಿವಸ, ಅಥವಾ ದ್ವಾದಶಿಯ ಮುಂಚಿನ ದಿವಸ ಬರುತ್ತದೆ.

\+ + + +

ಈತ.—ಜವಹರ್‌ಲಾಲ್ ಎಂದರೆ ಯಾರು? ಅವರ ವಿಷಯ ನಿನಗೇನು ಗೊತ್ತುಂಟು?
ಆತ:—ಅವರ ತಂದೆಯವರ ಹೆಸರು ನನಗೆ ಗೊತ್ತಿಲ್ಲ; ಗೊತ್ತಿದ್ದರೆ ಇಂಥವರ ಮಗ ಎಂದು ಥಟ್ಟನೆ ಹೇಳುತ್ತಿದ್ದೆ ಮಿತ್ರಾ.

\+ + + +

ಗಿರಾಕಿ.—ಕಾಫಿಗೆ ಖಂಡಿಗೆ ದರ ಹೇಗೆ ಉಂಟು ಸ್ವಾಮಿ?
ಸಾಹುಕಾರ:—ನಾವು ರಖಂ ವ್ಯಾಪಾರಿಗಳು, ದಯವಿಟ್ಟು ಚಿಲ್ಲರೆ ವ್ಯಾಪಾರಿಗಳಲ್ಲಿ ಹೋಗಿ ಕೇಳಿರಿ.

\+ + + +

ಈತ.—ದಾಸಯ್ಯನವರು 'ಹೊಟ್ಟೆಹುಣ್ಣಾಗು'ವಂತೆ ನಗಿಸುವರು. ಅವರ ಹಾಸ್ಯ ಕೇಳಬೇಕೆಂದಿದ್ದರೆ ಬಾ, ಇವತ್ತು ಹೋಗೋಣ.
ಆತ:—ನನಗೆ ಮೊನ್ನೆ ತಲೆಗೆ ಒಂದು ಹುಣ್ಣಾಗಿ ವಾಸಿಯಾಗುವರೇ ಕಷ್ಟವಾಗಿದೆ. ಈಗ ಪುನಃ ಹೊಟ್ಟೆಗಾದರೆ ಸಾಯಬೇಕಾದೀತು. ಆದುದರಿಂದ ನಾನು ಬರುವುದಿಲ್ಲ.

\+ + + +

ಮಾಸ್ತರ್:—ಎರಡೆರಡು ಎಷ್ಟು?
ಕಿಟ್ಟು:—ನಾಲ್ಕು ಸರ್. (೨+೨)
ಮಾಸ್ತರ್.—ಮೂರ ಮೂರೆ?
ಕಿಟ್ಟು.—ಆರು ಸರ್ (೩+೩)

K. Achutha Pai.

ಮೇಸ್ತ್ರು.—ಲೋ! ಕಿಟ್ಟು ಶ್ವಾಸಕೋಶ ಎಲ್ಲಿದೆ?
ಕಿಟ್ಟು.—ಮೂಗಿನಲ್ಲಿದೆ ಸಾರ್.
ಮೇಸ್ತ್ರು.—ಅದು ಹೇಗೋ?
ಕಿಟ್ಟು:—ಮೂಗಿನಲ್ಲಿ ಶ್ವಾಸಕೋಶ ಬರುತ್ತದೆ ಸಾರ್.

\+ + + +

ಉಪಾಧ್ಯಾಯ:—ಲೋ, ರಾಮ ನೀರು ಎಲ್ಲಿಂದ ಬರುತ್ತದೆ?
ರಾಮ.—ಮೂಗಿನಿಂದ.
ಉಪಾಧ್ಯಾಯ.—ಅದು ಹೇಗೋ?
ರಾಮ.—ನಶ್ಯ ಹಾಕಿದರೆ.

\+ + + +

ಉಪಾಧ್ಯಾಯ.—(ಹುಡುಗನಿಗೆ) ಚಕ್ರ! ನಿನಗೆ ಕಣ್ಣು ಕಾಣುವುದಿಲ್ಲವೇ?
ಹುಡುಗ.—ಇಲ್ಲ. ನಿಮ್ಮ ಕನ್ನಡಕ ಕೊಡಿ ಸಾರ್.

\+ + + +

ಇನ್ಸ್‌ಪೆಕ್ಟರು ಸ್ಕೂಲಿಗೆ ಬಂದು ಒಬ್ಬ ಹುಡುಗನಿಗೆ:—ಬೆತ್ತಗಳು ಎಲ್ಲಿ ಸಿಗುತ್ತವೆಯೋ?
ಹುಡುಗ:—ಮೇಸ್ತ್ರ ಮೇಜಿನಲ್ಲಿ ಸಾರ್.

× × × ×

ಇನ್ಸ್‌ಪೆಕ್ಟರ್.—ತೈಮೂರ್ ಲಿಂಗನಷ್ಟು ಕೆಟ್ಟವರು ಇದ್ದಾರೇನಯ್ಯ?
ಹುಡುಗ.—ಇದ್ದಾರೆ.
ಇನ್ಸ್‌ಪೆಕ್ಟರ್.—ಯಾರು?
ಹುಡುಗ:—ನಮ್ಮೇಸ್ತ್ರು.
ಇನ್ಸ್‌ಪೆಕ್ಟರ್:—ಯಾತಕ್ಕೆ?
ಹುಡುಗ:—ಅವರು ಹೊಡೀತಾರೆ ಸಾರ್.

ರಘುರಾಮ ಕಾಮತ್.

---


1933ರ ನಮ್ಮ ವಸರಾ ಸಂಚಿಕೆಯು ಒಕ್ಟೋಬರ ಪ್ರಥಮ ವಾರದಲ್ಲಿ ಸಚಿತ್ರವಾಗಿ ಅತ್ಯಂತ ಸುಂದರವಾಗಿ ಹೊರಡುವುದು.

?

ಬೆಲೆ ಆಣೆ 2.

ಜಾಹೀರಾತುಗಳನ್ನು ಕೂಡಲೇ ಕೊಡಿರಿ.




**ನವರತ್ನ ದ್ರಾಕ್ಷಾಸವ,** ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಬಂದಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರ ಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1-8-0 ೬ ಔನ್ಸ್ ರೂ 0 14 0

**ನವರತ್ನ ಅಶೋಕಾರಿಷ್ಟ:** ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

**ಆಯೊಡ್ಯಾಸ್ಡ್ ಸರ್ಸಪರಿಲ್ಲಾ** ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧ, ಚರ್ಮವ್ಯಾಧಿಗಳಲ್ಲಿಯೂ ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

4 ಔನ್ಸ್ ರೂ 1 0—0 ೬ ಔನ್ಸ್ ರೂ 1—6—0

ದಕ್ಷಿಣ ಕನ್ನಡದ ಏಜಂಟರು. ಪೊಪ್ಯುಲರ ಸ್ಟೋರ್ಸ್, ಮಂಗಳೂರು.

## ಗುಣದಿಂದ ಗಣನೀಯವೆನಿಸಿವೆ!-




ದಕ್ಷಿಣ ಕನ್ನಡದ ಏಜಂಟರು —

ಪೊಪ್ಯುಲರ್ ಸ್ಟೋರ್ಸ್. ರಥಬೀದಿ, ಮಂಗಳೂರು

## 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು

### ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ಸಾಧನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗುವಿಕೆ, ಸೊಂಟ ನೋವು, ಕೈಕಾಲು ಒತ್ತುವುದು ಮಲಬದ್ಧತೆ, ಚಳಿಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನು ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿ ಮನಸ್ಸಂತೋಷ ಶಕ್ತಿಯನ್ನು ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

### ಬಾಲಗ್ರಹ ಗುಟಿಕೆ

ಮಕ್ಕಳ ಬೇಷ್ಟಿ, ಕಫ, ಕೆಮ್ಮು, ಉಬ್ಬಸ ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರ ಗುರು ಶಬ್ದ ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ 3 ಬಾಟ್ಲಿಗಳಿಗೆ ರೂ 1-12-0

ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0—॥

### ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ ಪುರಾಣ ಜ್ವರ ಕಫ ಜ್ವರ ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಬರತಕ್ಕ ಪ್ರದೇಶಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1 8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13

### ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಪ್ಪಿ 1ಕ್ಕೆ ರೂ 2-8-0 ಮಾತ್ರ

**ಎಮ್ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು**

ನಮ್ಮ ಔಷಧಿ ಸಿಕ್ಕುವ ಸ್ಥಳಃ- ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ ಕಾಸರಗೋಡು ಡಾ। ಶ್ರೀನಿವಾಸ ಪೈ ಪುತ್ತೂರು ಮೆಸರ್ಸ್ ಮುಲ್ಲರ ಪಟೇಲ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ.
ಮೆಸರ್ಸ್ ಕಾಮತ ಎಂಡ್ ಕೊ, ತಾರಾಹೌಸ್ ಗಿರ್ಗಾಂವ್, ಬೇಕ್‌ರೋಡ್ ಮುಂಬಾಯಿ, ನಂ 4 ದಿ ವೆಂಕ್ಟಟ ಹೋಟೆಲ್, ಮಡಿಕೇರಿ ಕೂರ್ಗ ರಾಜ್ ಫಾರ್ಮಸಿ ಸಾಗರ

## ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

# ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯಮಾಪನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

## ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ ——— ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ— ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

# The Canara Banking Corporation Udipi, Ltd.

**Head office:—UDIPI,** S K. (Incorporated in British India) TEL.-'BANKING' **ESTD. 1906.**

**Branches:—1 Udipi, 2 Coondapoor, 3. Car Street, Mangalore, 4 Shimoga, 5. Madras** (George-Town), **6 Bunder Mangalore, 7 Mercara** (North Coorg), **& 8 Virarajendrapet** (South Coorg)

## SAVINGS BANK ACCOUNTS.

From 1st September 1935 arrangement for withdrawal by cheques can be made.

## ಸೇವಿಂಗ್ಸ್ ಬೇಂಕ್ ಲೆಕ್ಕ.

1935ನೇ ಸಪ್ಟಂಬರ 1ನೇ ತಾರೀಕಿನಿಂದ ಚೆಕ್ಕಿನ ಮೂಲಕ ಹಣವನ್ನು ಹಿಂತೆಗೆಯು ವಂತೆ ಮಾಡಲಾಗುವುದು

---

Regd)

# ಅಮೃತಾಂಜನ

ಎಲ್ಲಾ ನೋವುಗಳಿ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಂ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

## ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಭರವಸ ಕೊಡುತ್ತೇವೆ

## ಅಮೃತಾಂಜನ ಡಿಪ್ರೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

---

## NOTICE./

The last date for submitting tenders for the construction of the proposed Bombay Life Building at Udipi has been extended to Monday the 30th September 1935 and tenders will be received till 4 P M on that day

**Kochikar Brothers,**
*Madras Branch Secretaries,*
Bombay Life Assurance Co, Ltd,
Udipi, S K 18-9-1935

---

TO INSURE OR TO REPRESENT

*CONSULT* -

## The Bombay Life Assurance Company Ltd.

ESTD 1908

Offer
(1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra
(5) Increased rate of Bonuses
(6) Accident Risk on a small extra payment

**Attractive Rates of Commissions & Bonuses to Agents**

*For particulars apply to any of our Offices*

**Kochikar Brothers,** Branch Secretaries.

OFFICES (1) Esmail Bldg, Lalmchawl, Bombay No 2 (2) P B. 337, Mount Road, Madras.
(3) Visveshwarapuram Circle, Bangalore City (4) Hazur Road, Calicut
(5) Car Street, Mangalore, S. K (6) Udipi, (S. India).

---

## ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರುಮಾಡಿದ ಅಮೋಘ ಔಷಧ ಇದು ಗರ್ಭಕೋಶದೊಳಗಣ ಎಲ್ಲಾ ತರದ ನಂಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಪ್ರಮಾಣದಲ್ಲಿ ನಿಲ್ಲಿಸುವುದು ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತಿರುಗಿ ಬರುವವು

## ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ.

ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲೋಪತಿಕ್ ಔಷಧಗಳೂ, ಶಾಸ್ತ್ರೋಕ್ತ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಪೌಂಟನ್ ಪೇನು ಶಾಯಿಗಳೂ ತಯಾರಾಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ —

ವೆಂಕಟ್ರಾಯ ಅಣ್ಣಪ್ಪ ಬಾಳಿಗ— ಮೆನೇಜಿಂಗ್ ಡೈರೆಕ್ಟರ್,

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ.

ಹೆಡ್ ಆಫೀಸು ಮತ್ತು ಕಾರಖಾನೆ –ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋಗಳು.–(1) ರಥಬೀದಿ ಮಂಗಳೂರು. (2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್‌ಟೌನ್ ಮದ್ರಾಸು (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

**Karnataka Chemical and Pharmaceutical Works, Ltd., Udipi. (South India)**

Edited, Printed & Published By A. S. Kamath at the Sharada Press. Car Street. Mangalore.

ವಾರ್ಷಿಕ ಚಂದಾ 2 ರೂಪಾಯಿ

ಬಿಡಿ ಸಂಚಿಕೆ 1 ಆಣೆ.

Registered No. M. 498

ಟಪ್ಪಾಲು ಹಾಸಲು ಸೇರಿ ರೂ. 2-18-0.

for Quality Snuff
H. Rama Rao and Sons
High Class Snuff Manufacturers
Mangalore S. I.
ASK FOR
RAMA SNUFF
The charm of Snuff Users

# ಸ್ವದೇಶಾಭಿಮಾನಿ

SWADESHABHIMANI

LIFE ASSURANCE
IS
NO EXPENSE
BUT
AN INVESTMENT
Safeguard yourself & your family TODAY
Buy a policy in the
THE BOMBAY LIFE
Kochikar Brothers,

ESTABLISHED 1906

(ಕೀರ್ತಿಶೇಷ ಬಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ದೇವತೆಗಳು ರತ್ನಗಳ ಸಾಗರವ ಮಥಿಸಲು ಸುರರಿಗದರಿಂ । ಹರ ಸವಾಜಕೆ ಮುಕ್ತಿ ವಿಷದಿ ಸುರ ತ ...

ಗರಳಕೆ ಜಿದರೆ ಸ ಧಿಯ .. । ಸುರೆತು ಕ್ಷುದ ರ ತೆರದಿ ಕುಳಿತರೆ । ದೆರಳ ಬ .. ರೆ ತೆರೆದು. ಧೀರರ ನಿಶ್ಚಿತಾರ್ಥವನ ... ॥

ಪುಸ್ತಕ ೨೯.

ಮಂಗಳೂರು ತಾ. ೨೭ನೇ ಶುಕ್ರವಾರ ಸಪ್ಟಂಬರ ೧೯೩೫ (27-9-'35)

ಸಂಚಿಕೆ ೩೯

10

## ಚೆಲುವೆಯರ ವಿಗ್ರಹ.



ಈ ಭಾವಚಿತ್ರವು ಹಲವು ವಿಗ್ರಹಗಳದ್ದಾಗಿರುತ್ತದೆ. ಸ್ತ್ರೀಸೌಂದರ್ಯವನ್ನು ಭಾವಭರಿತವಾಗಿ ಪ್ರದರ್ಶಿಸಿರುವ ನೈಜಸೊಬಗನ್ನು ಇದರಲ್ಲಿ ಕಾಣಬಹುದು. ಒಬ್ಬೊಬ್ಬಳು ಸ್ತ್ರೀಯು ಒಂದೊಂದು ಬಗೆಯ ವಿಶಿಷ್ಟ ಚೆಲುವಿಕೆಯಿಂದ ಸುಶೋಭಿತಳಾಗಿರುವುದು ಕಂಡುಬರುತ್ತದೆ.

## ಚಕ್ರ

(All Rights Reserved)

ಶ್ರೀಮಾನ್ ಎನ್. ಎಸ್. ಸುಬ್ಬರಾಯರು, ಎಂ. ಎ., (ಕ್ಯಾಂಟಬ್) ಬಾರ್-ಅಟ್-ಲಾ ಇವರಿಗೆ ಸಾಯ್ಬನು ಅರ್ಪಿಸುವ ನಮಸ್ಕಾರಗಳು

ಸ್ವಾಮಿ, ಇದೇ ಡಿಸೆಂಬರ ತಿಂಗಳಲ್ಲಿ ಮುಂಬಯಿ ಪಟ್ಟಣದಲ್ಲಿ ನಡೆಯಲಿರುವ ೨೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ತಮ್ಮನ್ನು ಅಧ್ಯಕ್ಷರನ್ನಾಗಿ ಆರಿಸಲಾಗಿದೆಯೆಂದು ಕೇಳಿ ಅತ್ಯಂತ ಸಂತೋಷವೆನಿಸಿತು

× × × × × ×

ತಾವು ಘನ ವಿದ್ವಾಂಸರೂ, ವಿದ್ಯಾ ಸೇವಾದಕ್ಷರೂ ಆಗಿ, ಸಕಲ ಭಾರತದ ವಿದ್ವನ್ಮಂಡಲಿಯಲ್ಲಿ ಮನ್ನಣೆ ಪಡೆದಿರುವ ಮಹನೀಯರು. ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಈ ಉತ್ಸವಕ್ಕೆ ಯೋಗ್ಯರನ್ನೇ ಆರಿಸಿದುದಕ್ಕಾಗಿ ಆನಂದಿತರಾಗಿರುವೆನು.

× × × × × ×

ಆಯಾಯ ಸ್ಥಾನಕ್ಕೆ ಆಯಾಯ ವ್ಯಕ್ತಿಗಳನ್ನು ಹಚ್ಚುವುದರಲ್ಲಿ ಕನ್ನಡಿಗರು ಯಾರಿಗಿಂತಲೂ ಹಿಂದಿಲ್ಲವೆಂಬುದು ಖರೆಯಾದರೂ, ಅವರು ತಮ್ಮ ಹಲವು ಬಗೆಯ ದೌರ್ಬಲ್ಯಗಳನ್ನು ಹೋಗಲಾಡಿಸುವರೆ ಎಷ್ಟರ ಯತ್ನ ಮಾಡುವುದಿಲ್ಲವೆಂದು ತಮಗೆ ತಿಳಿಯಬಯಸುವೆನು.

× × × × × ×

ಕರ್ನಾಟಕ ಏಕೀಕರಣ, ಕರ್ನಾಟಕ ಪತ್ರಪ್ರಸ್ತುತಿ ವರ್ಗೀಕರಣ, ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ— ಮೊದಲಾದ ಉಪಯುಕ್ತ ಸಮಸ್ಯೆಗಳನ್ನು ಪರಿಶೀಲಿಸುವ ಮಹತ್ಕಾರ್ಯಭಾರವು ಅವರ ಮೇಲಿದ್ದಾಗ್ಯೂ ಈ ವಿಷಯಗಳ ಕಡೆ ನಮ್ಮ ಜನರು ಹೆಚ್ಚು ಲಕ್ಷ್ಯವನ್ನು ಹರಿಸುವುದು ಗೋಚರವಾಗುವುದಿಲ್ಲ. ಇವುಗಳಲ್ಲಿ ಒಂದು ವಿಷಯದ ಪೂರ್ತಿಕೆಗಾದರೂ ತಾವು ಕೈಹಚ್ಚಿ ತಮ್ಮ ಅಧ್ಯಕ್ಷತೆಯ ದಿನದ ಸ್ಮರಣೆಯನ್ನು ಕನ್ನಡ ನಾಡಿನಲ್ಲಿ ಚಿರಸ್ಥಾಯಿಯನ್ನಾಗಿ ಮಾಡಬೇಕೆಂದು ಬೇಡುವೆನು

× × × × × ×

ಕರ್ನಾಟಕ ಸಾಹಿತ್ಯಪರಿಷತ್ತಿನ ಉತ್ಸವವೆಂದರೇನೆಂದು ತಮ್ಮ ಅವಗಾಹನೆಗೆ ಇಷ್ಟರ ವರೆಗೆ ಬಂದಿಲ್ಲವೆಂದು ಊಹಿಸಿರುವೆ— ನನ್ನ ಊಹನೆಯು ಸತ್ಯವೆಂದಾದರೆ—ಈ ಸಲದ ಪರಿಷತ್ತಿನಲ್ಲಿ ಹಲಕೆಲವು ಠರಾವುಗಳಾಗಿ, ಹಲಕೆಲವು ಲೇಖಕರ ಪ್ರಬಂಧಗಳನ್ನು ಸಭೆಯಲ್ಲಿ ಓದಿ ಸಭೆಯು ಕೊನೆಗಾಣುವುದೆಂದು ಮೊದಲೇ ಖಂಡಿತವಾಗಿ ಹೇಳಿಬಿಡುವೆನು.

× × × × + ×

ನನ್ನ ಕವಿತೆ ಉತ್ತಮ, ನನ್ನ ಕಥೆಯು ಉತ್ಕೃಷ್ಟ ಎಂದು ಕೊಚ್ಚಿ ತಂತಮ್ಮ ಹೆಸರಿನ ವ್ಯಾಪಕತೆಗಾಗಿ ಮಾತ್ರ ಹಲಕೆಲವರು ಪೇಚಾಡುತ್ತಿರುವುದನ್ನು ಪರಿಷತ್ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿದ ಪುಣ್ಯವನ್ನು ಕಟ್ಟಿಕೊಳ್ಳದಿದ್ದರು ಈ ಅಭ್ಯಾಸವೊಂದು ಸಾಕು, ನಮ್ಮವರು ಇತರ ಪ್ರಯೋಜನಕಾರಿ ಕೆಲಸಗಳಿಗೆ ಮನಸ್ಸು ಮಾಡಬೇಕೆಂದು ಬೋಧಿಸಬೇಕೆಂದು ತಮಗೆ ಸೂಚಿಸಲಿಚ್ಛಿಸುವೆನು

× × × × + ×

ಸಾಯ್ಬನಲ್ಲಿ ಇರುವುದೇ ವಿಮರ್ಶೆಯ ಬಾಣ—ಅವನು ಕಂಡದ್ದನ್ನು ಕಂಡಂತೆ, ವ್ಯಂಗ್ಯವಾಗಿ ಧೈರ್ಯದಿಂದ ಹೇಳುವವನೆಂದು ಕನ್ನಡಿಗರಿಗೆ ತಿಳಿದಿದೆ. ಹಾಗಿರುವಾಗ ನಾನು ಈ ಸೂಚನೆಗಳನ್ನು ಉದ್ಧಟತನದಿಂದ ಕೊಟ್ಟೆನೆಂದು ತಿಳಿಯಬಾರದು. ಇದು ವಿಮರ್ಶೆಯಲ್ಲ— ಸತ್ಯಸಂಗತಿಯಾಗಿದೆ

× × × × × ×

ದೊಡ್ಡ ದೊಡ್ಡ ಸಾಹಿತಿಗಳೆಂಬುವರು ನಮ್ಮ ಕನ್ನಡ ನಾಡಿನಲ್ಲಿ ಕಡಿಮೆಯಿಲ್ಲವೆಂದು ತಾವು ಅರಿತಿರಬಹುದು. ಆದರೆ, ಇಂತಹ ಸಾಹಿತಿಗಳಲ್ಲಿ ಬಹುಪಕ್ಷದವರು ಕನ್ನಡ ಪತ್ರಿಕೆಗೊಂದು ಲೇಖನ ಕಳುಹಿಸಿರೆಂದು ಹೇಳಿ ನೂರಾರು ಕಾರ್ಡುಗಳನ್ನು ಬಿಟ್ಟರೂ ಬಾಯಿಬಿಚ್ಚದವರಲ್ಲ. ಕಳ್ಳ ಕಾರ್ಡುಗಳನ್ನು ಪೇಪರ್ ಬಾಸ್ಕೆಟ್‌ನಲ್ಲಿ ಹಾಕುವ ಸಾಹಿತಿಗಳು ಎಷ್ಟು ಜಾಣರೆಂಬೂ ಕನ್ನಡದ ಎಂತಹ ಉದ್ಧಾರಕರ್ತೃಗಳೆಂದೂ ತಾವೇ ನಿರ್ಣಯಿಸಿಕೊಳ್ಳಬಹುದು

× × × × × ×

ದಶಂಬರ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಠರಾವು ಮಾಡುವಂತೆ ಹೇಳಿರಿ. ಅದೇನೆಂದರೆ, ಕನ್ನಡ ಸಾಹಿತಿಗಳು ಜೀವಂತವಿರುವ ಕನ್ನಡ ಪತ್ರಿಕೆಗಳಿಗೆಲ್ಲ ವರ್ಷಕ್ಕೆ ಆರು ಲೇಖನಗಳನ್ನಾದರೂ ಬರೆದುಕೊಡಬೇಕು (ಧರ್ಮಾರ್ಥ!) ಈ ಒಂದು ಠರಾವಾದರೆ, ಕನ್ನಡಿಗರಲ್ಲಿ ಎಷ್ಟು ನಿಜವಾದ ಸೇವಕರಿರುವರೆಂದು ಬರುವ ವರ್ಷ ತಿಳಿದುಬಂದೀತು!

'ಸಾಯ್ಬ'.


# ಅವನಿಗೆ ನಾನೇ ಮೊಲೆಯುಣ್ಣಿಸುತ್ತೇನೆ

ತನ್ನ ಮಗುವಿಗೆ ತಾನೇ ಮೊಲೆಯುಣ್ಣಿಸುವಂತೆ ಪ್ರತಿಯೊಬ್ಬ ತಾಯಿಯೂ ಸಿದ್ಧಳಿರಬೇಕು ಮಗುವಿನ ಆರೋಗ್ಯಪಾಲನೆಗೂ, ಅದು ಬಾಲರೋಗಗಳಿಗೆ ತುತ್ತಾಗದಂತೆಯೂ ಅದಕ್ಕೆ ಸ್ವಾಭಾವಿಕವಾಗಿ ಮೊಲೆಯುಣ್ಣಿಸಬೇಕು ಎದೆಹಾಲು ನಿಮ್ಮ ಮಗುವಿಗೆ ಸಮರ್ಪಕವಾದ ಆಹಾರವಾಗಿದೆ ಇದು ಮಗುವಿನ ಸೂಕ್ಷ್ಮ ಜೀರ್ಣಶಕ್ತಿಗೆ ತಕ್ಕುದಾದ ಆಹಾರವಾಗಿದೆ. ಮಗುವಿನ ಆರೋಗ್ಯಕರ ಬೆಳವಣಿಗೆಗೂ ವೃದ್ಧಿಗೂ ಸಾಧಕವಾದ ಪೌಷ್ಟಿಕ ಸಾರವು ಇದರಲ್ಲಿದೆ

'ಓವಲ್ಟಿನ್' ಪಾನೀಯವನ್ನು ಮಗು ಜನಿಸುವ ಮೊದಲೂ, ಹುಟ್ಟಿ ಬೆಳೆಯುತ್ತಿರುವಾಗಲೂ ಅನುಕ್ರಮವಾಗಿ ಸೇವಿಸುತ್ತಾ ಇದ್ದರೆ, ಎದೆ ಹಾಲು ನಿಶ್ಚಿತವಾಗಿ ವೃದ್ಧಿಹೊಂದುತದೆ ಅಲ್ಲದೆ ತಾಯಿಯ ಬಲ ಮತ್ತು ಚೈತನ್ಯವು ಕಾಪಾಡಲ್ಪಡುತ್ತದೆ 'ಓವಲ್ಟಿನ್' ಎಂಬುದ ಪ್ರಕೃತಿಸಿದ್ಧ ಆಹಾರ ಇದನ್ನು, ಬೆಳೆದ ಬಾರ್ಲಿ ಬೀಜ, ದನದ ಕೆನೆ ಹಾಲು ಮತ್ತು ಕೊಕ್ಕೊಗಳಿಂದ ತಯಾರಿಸಲಾಗುತ್ತದೆ ಆರೋಗ್ಯ, ಶಕ್ತಿ ಮತ್ತು ಚೈತನ್ಯ ರಕ್ಷಣೆಗೆ ಇದು ಅತ್ಯಮೂಲ್ಯ ಪಾನಕ ಪಡೆಯ ಬೇಕ ತಾಜಾ ಓವಲ್ಟಿನನ್ನೇ ಪಡೆಯಿರಿ ನಕಲಿಗಳನ್ನು ತ್ಯಜಿಸಿರಿ

'ಮ್ಮ ಚಹಾಕ್ಕೆ ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

## ಓವಲ್‌ಟಿನ್

ಟೋನಿಕ್ ಆಹಾರ ಪಾನಕ.

# OVALTINE

ತಾಯಂದಿರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕೊಟ್ಟು ಸಾಕುವಂತೆ ಸಹಕರಿಸುತ್ತದ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ —ಜೇಮ್ಸ್ ರ್‍ಯಾಟ್ ಕಂ 8 ರಸಲ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಯಿ ಮದ್ರಾಸ

OV/301



# ತಯಾರಾಗಿದೆ!

ಗೌ. ಹ. ಎ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

**ಸಮಾಜಶಾಸ್ತ್ರ**

ಅಥವಾ

**ಸೋಶಿಯೊಲೊಜಿ.**

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ಗವರ್ನಮೆಂಟ್ ಪಠ್ಯಕ್ರಮಾನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜ ಶಾಸ್ತ್ರವು ಮುದ್ರಣಕ್ಕೆ ಸಿದ್ಧವಿದೆ.

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುವು.

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.



BUY
**ADVERTISED GOODS.**



Estd 1920] THE [1920ರಲ್ಲಿ ಸ್ಥಾಪಿತವಾದದ್ದು

# Kanara Enterprise Ltd.,

PUTTUR

## ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

### ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935.

**G. N. Lakshman Pai,**
*Secretary.*

# ಪತ್ರಿಕಾಪ್ರಪಂಚ:

## ಶಿಕ್ಷಣವು ಸುಲಭವಾಯಿತು.

"Teacher's Journals"ನಲ್ಲಿ ಡಾ॥ ಬೆಬಿನ ವಿಹಾರಿ ಬೆನರ್ಜಿಯವರು ಶಿಕ್ಷಣದ ಕುರಿತಾಗಿ ಬರೆಯುತ್ತಾ—ಪ್ರಾಚೀನ ಶಿಕ್ಷಣಕ್ರಮವನ್ನೂ, ಅರ್ವಾಚೀನ ಮತ್ತು ಆಧುನಿಕ ಶಿಕ್ಷಣಕ್ರಮಗಳನ್ನೂ ಪರಿಶೀಲಿಸಿದರೆ ಆಧುನಿಕ ಶಿಕ್ಷಣಕ್ರಮದ ಕುಂದುಕೊರತೆಗಳಿಗೆ ವಿದ್ಯಾರ್ಥಿಗಳು ಹೇಗೆ ಜೊತೆಗಾರರಲ್ಲವೆಂದು ತಿಳಿದುಬರುವುದು, ವಿದ್ಯಾರ್ಥಿಗಳಿಗೆ ಅಖಿಲ ಭಾರತೀಯ ಪರೀಕ್ಷೆಗೆ ನಿಲ್ಲಲು ಶಕ್ತಿಯೇ ಇರುವುದಿಲ್ಲ. ಒಬ್ಬ ಡಾಕ್ಟರರ ಬಿ ಎಸ್. ಸಿ. ಅಸಿಸ್ಟಾಂಟರೊಬ್ಬರಿಗೆ ಆಮ್‍ಸ್ಟರ್‍ಡೇಮ್ ದೇಶವು ಎಲ್ಲಿದೆಯೆಂದು ಗೊತ್ತಿಲ್ಲವೆಂದಿರುವರೆಂದು ಲೇಖಕನಿಗೆ ಆ ಡಾಕ್ಟರರು ಹೇಳಿದರು. ಆಮ್‍ಸ್ಟರ್‍ಡೇಮಿನ ಸುದ್ದಿಯಂತಿರಲಿ,—ಹಿಂದೂದೇಶದಲ್ಲಿರುವ ಪ್ರಮುಖ ನಗರಗಳು ಎಲ್ಲೆಲ್ಲಿವೆಯೆಂದು ಎಷ್ಟು ಗ್ರಾಜುವೇಟರಿಗೆ ತಿಳಿದಿದೆ?

ನಾವು ಕಳೆದುಕೊಂಡಿರುವ ನಮ್ಮ ವಿದ್ಯೆಯ ಅಂತಸ್ತನ್ನು ಪುನರಾರ್ಜಿಸಬೇಕಾದರೆ ಶಿಕ್ಷಣಕ್ರಮಗಳಲ್ಲಿ ಸುವ್ಯವಸ್ಥೆಗಳು ಸಂಘಟಿಸಿ ಬರಬೇಕಲ್ಲದೆ, ಪರೀಕ್ಷೆಗಳ ಅಂತಸ್ತನ್ನೂ ಮೇಲ್ಪಟ್ಟಕ್ಕೇರಿಸಬೇಕಾಗಿದೆ. ಗ್ಲಾಸ್ಗೋ ಯೂನಿವರ್ಸಿಟಿ ಕಮಿಶನ್‍ನ ವರದಿಯೊಂದರಲ್ಲಿ ಸರ್ ಫೈಕೆಲ್ ಸಾಡ್ಲರ್‍ರವರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಪರಿಶೀಲಿಸಲ್ಪಟ್ಟ ಕೆಲವು ಪರೀಕ್ಷಾಪತ್ರಗಳ ಉದಾಹರಣೆಗಳನ್ನು ಕೊಟ್ಟು, ಅವುಗಳು ಯಾವ ರೀತಿಯ ಮನೋಭಾವದಿಂದ ನೋಡಲ್ಪಟ್ಟವೆಯೆಂದು ತಿಳಿಸಿರುವರು. ತಪ್ಪುತಪ್ಪಾಗಿ ಬರೆದ ವಿದ್ಯಾರ್ಥಿಯೊಬ್ಬನಿಗೆ ೩೦ರಿಂದ ೩೦ ಮಾರ್ಕುಗಳನ್ನು ಕೊಡಲಾಯಿತು. ಇಂಗ್ಲಿಷಿನಲ್ಲಿ ಎಂದೂ ಕಾಣಲಾರದ Caughted, devoured ing, lefting, 'howler', 'shoulded', ಮೊದಲಾದ ಶಬ್ದಗಳನ್ನು ಬರೆದ ಹುಡುಗರೂ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಿರುವರು ಪರೀಕ್ಷೆಗಳೇನೆಂದು ಇದರಿಂದ ವ್ಯಕ್ತ.

ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ಯೋಗ್ಯವಲ್ಲ. ಆಯೋಗ್ಯರನ್ನೂ ಕೂಡಾ ಡಿಗ್ರಿಗಳ ಇಂದ್ರಜಾಲದಿಂದ ಪ್ರೌಢ ಶಿಕ್ಷಣದ ಪ್ರವಾಹಕ್ಕೆಳೆದುಕೊಂಡುದರಿಂದಾಗಿ ಮನೆ ಕೈಗಾರಿಕೆಗಳನ್ನು ಶಿಕ್ಷಿತವರ್ಗದವರು ದುರ್ಲಕ್ಷಿಸುವಂತಾಗಿದೆ. ಪರಿಣಾಮವಾಗಿ, ನಿರುದ್ಯೋಗಿಗಳ ಸೈನ್ಯವು ದಿನೇ ದಿನೇ ವೃದ್ಧಿಗೊಂಡವಾಗುತ್ತಿದೆ. ಅಲ್ಲದೆ ದೇಶದಲ್ಲಿ ಅಶಾಂತಿ, ಅಸಂತೃಪ್ತಿಗಳ ತರಂಗತರಂಗಗಳೇ ಮೇಲೆ ಮೇಲೆ ಏಳುತ್ತಾ ಇವೆ. ಆದುದರಿಂದ ಶಿಕ್ಷಣಸೂತ್ರಗಳು ಬಲವಾಗಿರಲಿ; ಪರೀಕ್ಷೆಗಳು ನಿರ್ದಾಕ್ಷಿಣ್ಯಮಯವಾಗಿರಲಿ; ಶಿಸ್ತನ್ನು ಕಾಪಾಡಲಿ, ವಿದ್ಯೆಗೆ ಪ್ರಾಚೀನದ ಬೆಲೆಯು ಬರಲಿ, ದೇಶಿಗರ ಲಕ್ಷ್ಯವು ಇತರ ಕುಶಲ ವಿದ್ಯೆಗಳತ್ತ ಹರಿಯಲಿ. ಅವರು ತಮ್ಮ ಇಷ್ಟದ ತನಕದ ಶಕ್ತಿಗಳನ್ನು ತಿಳಿದು ವರ್ತಿಸುವಂತಾಗಲಿ. ಈಗಿನ ಶಿಕ್ಷಣಕ್ರಮನಿಯಮಗಳು ಬಂಗಾರವನ್ನು ಗೋರಿಗೂರಿಸಲ್ಪಟ್ಟವೆ, ಕೈಗಾರಿಕೆಗಳು ಮೂಲೆಗುಂಪಾಗಿವೆ" ಎಂದಿರುವರು.

## ಲೇಡಿ ವಿದ್ಯಾಬೆಹಾನ್ ರಾಮನ್‌ಬಾಯಿ ನೀಲಕಾಂತರವರು.

'The Indian Ladies' Magazine'—ಲೇಡಿ ನೀಲಕಾಂತರವರ ಜೀವನಚರಿತ್ರೆಯ ಅಂಶವನ್ನು ಪ್ರಕಟಿಸಿ ಹೀಗೆ ಹೇಳಿದೆ—"ಸ್ತ್ರೀಯರು ಪುರುಷಸಮಾನ ಹಕ್ಕುಬಾಧ್ಯತೆಗಳನ್ನು ಹೊಂದಬೇಕೆಂಬ ಚಳವಳಕ್ಕೆ ಯೋಗ್ಯತೆಯನ್ನು ಲೇಡಿ ವಿದ್ಯಾಬೆಹಾನ್ ಇವರು ತಮ್ಮ ಜೀವನದಲ್ಲಿ ತಂದಿರುವರು. ಅವರು ತನ್ನ ವಿವಾಹಾನಂತರ ವಿದ್ಯಾರ್ಜನೆಮಾಡಿದರು. ಗುಜರಾಥಿನ ಯುನಿವರ್ಸಿಟಿಯ ಪ್ರಥಮ ಲೇಡಿ ಗ್ರಾಜುವೇಟರಾಗುವ ಭಾಗ್ಯವು ಅವರಿಗೆ ದೊರೆಯಿತು. ಅವರ ಸಾಮಾಜಿಕ ಸೇವೆಯು ಬರೇ ಕಣ್ಣುಕಟ್ಟಿಗಾಗಿರಲಿಲ್ಲ. ಅವರ ಪ್ರಾಂತ್ಯದ ಪ್ರತಿಯೊಂದು ಸಾಮಾಜಿಕ ಸಂಸ್ಥೆಯಲ್ಲೂ ಅವರ ಸೇವೆಯುದೆ" ಎಂದು ಡಾ॥ ರೆಡ್ಡಿಯವರು ಲಕ್ನೋವಿನ ೧೯೩೪ರ ಅಖಿಳ ಭಾರತ ಮಹಿಳಾ ಪರಿಷತ್ತಿನಲ್ಲಿ ಭಾಷಣ ಮಾಡುತ್ತಾ ಹೇಳಿದರು. ಲೇಡಿ ವಿದ್ಯಾಬೆಹಾನ್‌ರವರು ಹಲವುಮಂದಿಗಳನ್ನರ್ಪಿಸಿ ಮಾಡಿದ ಸಮಾಜಸೇವೆಯೆಷ್ಟೆಂದು ಇದರಿಂದ ತಿಳಿದುಬರುವುದು.

ಲೇಡಿಯವರು ಅಹ್ಮದಾಬಾದಿನ ಮುನಿಸಿಪಾಲಿಟಿಯ ವೈಸ್‌ಚೆಯರ್‌ಮೇನರು, ಅಹ್ಮದಾಬಾದಿನ ಮ್ಯುನಿಸಿಪಿಲ್ ಶಾಲಾ ಬೋರ್ಡಿನ ಕಮಿಟಿಯ ಅಧ್ಯಕ್ಷರು, ಗುಜರಾಥ್ ದೇಶಭಾಷಾ ಸಂಘದ ಒಸರರ ಸೆಕ್ರೆಟರಿಗಳು, ಗುಜರಾಥ್ ಲೇಡಿಸ್ ಕ್ಲಬ್ಬಿನ ಕೋಶಾಧಿಕಾರಿಗಳು ಮತ್ತು ಸೆಕ್ರೆಟರಿಗಳು, ಅಲ್ಲದೆ ಇನ್ನಿತರ ಅನೇಕ ಸಂಸ್ಥೆಗಳಲ್ಲಿ ಅವರು ಸದಸ್ಯರು, ಕೋಶಾಧಿಕಾರಿಗಳು, ಸೆಕ್ರೆಟರಿಗಳು ಮತ್ತು ಅಧ್ಯಕ್ಷರು. ಮೇಲಿನ ಸಂಸ್ಥೆಗಳಲ್ಲಿ ಅವರು ಸ್ತ್ರೀ ಸಂಬಂಧವಾದ ಸಮಸ್ಯೆಗಳ ಕುರಿತು ಭಾಷಣಮಾಡಿ ಎಷ್ಟು ಸಮರ್ಪಕವಾಗಿ ವಾದಿಸುವರೆಂದರೆ—ಅವರ ಪ್ರತಿವಿರೋಧಿಗಳು ಕೂಡಾ ತಮ್ಮ ವಾದವನ್ನು ಹಿಂತೆಗೆದು ಅದರ ಅರ್ಥಪೂರ್ಣವೂ ಭಾವಪ್ರಚೋದಿತವೂ ಆದ ಪ್ರತಿಪಾದನೆಗಳಿಗೆ ಶಿರಬಾಗಿಸುವರು. ಅಸ್ಪೃಶ್ಯತಾ ನಿವಾರಣೆಯ ಸಮಸ್ಯೆಯು ಈಗ ಜಗತ್ತನ್ನೇ ಆಕರ್ಷಿಸಿರುತ್ತದೆ. ಆದರೆ ಈ ಚಳವಳವು ಪ್ರಾರಂಭವಾಗುವುದಕ್ಕಿಂತ ಎಷ್ಟೋ ಕಾಲದ ಹಿಂದೆ ಲೇಡಿಯವರ ಸಂಸಾರದಲ್ಲಿ ಅಸ್ಪೃಶ್ಯತೆಯ ಸುದ್ದಿಯೇ ಇರಲಿಲ್ಲ. ಅವರು ಹರಿಜನ ಮಕ್ಕಳನ್ನು ಸಮಾನದೃಷ್ಟಿಯಿಂದ ಪಾಲಿಸುವುದಲ್ಲದೆ, ತನ್ನ ಕುಟುಂಬದಲ್ಲಿ ಅವರಿಗೆ ಯೋಗ್ಯ ಶಿಕ್ಷಣವನ್ನು ನಿರ್ಭೀದಬುದ್ಧಿಯಿಂದ ದಾನವಮಾಡುತ್ತಿರುವರು.

ಲೇಡಿ ವಿದ್ಯಾಬೆಹನ್‌ರವರು ತನ್ನ ಗಂಡ ಸರ್, ರಾಮನ್‌ಭಾಯಿಯವರು ವಿಧಿವಶರಾದನಂತರ, ದಿವಂಗತರ ಹೆಜ್ಜೆಗಳನ್ನನುಸರಿಸಿಯೇ ನಡೆದು ಸಾರ್ವಜನಿಕ ಸೇವಾಸಕ್ತರಾಗಿರುವರು.

ಲೇಡಿ ವಿದ್ಯಾಬೇಹನರು ಸರಳತೆಯಲ್ಲಿ ಅಗ್ರಗಣ್ಯರು. ಅವರು ಬಿಳಿ ಖಾದಿಯನ್ನು ಧರಿಸುವರು. ಅವರು ಆಭರಣಗಳನ್ನು ತೊಡುವುದಿಲ್ಲ. ಅವರು ರಿಸ್ಟ್ ವಾಚನ್ನು ಕೂಡಾ ಇಟ್ಟುಕೊಳ್ಳುವುದಿಲ್ಲ. ತನ್ನ ಕಾರ್ಯಕ್ರಮಗಳನ್ನು ದೊಡ್ಡ ದೊಡ್ಡ ಬ್ಲೋಕುಗಳಲ್ಲಿ ಅವರು ಬರೆದಿಡುವುದೂ ಇಲ್ಲ. ಅವರು ಎಲ್ಲವನ್ನೂ ತನ್ನ ಚಿತ್ತದಲ್ಲೇ ಇಟ್ಟುಕೊಂಡು ಎಲ್ಲಾ ಕಾರ್ಯಕ್ರಮಗಳಿಗೂ ಕ್ಲಪ್ತತೆಯಿಂದಲೇ ಗಮನಿಸುವರು.

ಚಾರಿತ್ರ್ಯಪೂರ್ಣವಾದ ಹಲವು ವಿಶಿಷ್ಟಗುಣಗಳು ಲೇಡಿ ವಿದ್ಯಾಬೇಹನರಲ್ಲಿವೆ. ಭಾರತೀಯ ಸ್ತ್ರೀಯರಿಗೆ ಅವರು ಆದರ್ಶಪ್ರಾಯರೆಂದೇ ನಾವು ಹೇಳುವೆವು.

## ಚಡಿಕೊಡುವ ಕ್ರಮವು ರದ್ದಾಗಬೇಕು

'Twentieth Century' ಎಂಬ ಪತ್ರಿಕೆಯಲ್ಲಿ ಶ್ರೀ ಒರ್ ಪಿ ಲೋಧಿಮರ ಎಂಬವರು ಈ ರೀತಿ ಹೇಳಿರುವರು

ಭಾರತವರ್ಷದಲ್ಲಿನ ಜೈಲುಗಳಲ್ಲಿ ಚಡಿಕೊಡುವ ಕ್ರಮವನ್ನು ಪೂರ್ಣವಾಗಿ ರದ್ದುಗೊಳಿಸುವ ಸೂಚನೆಯು ಮುಂಬಂದರೆ, ಒಡನೆ ಆ ಕುರಿತು ಪಲವು ಅಭಿಪ್ರಾಯಗಳು ಪ್ರಕಟವಾಗಿ, ಅಂತಹ ಸೂಚನೆಗೆ ಒತ್ತಾಟವು ಆರಬಹುದು. ಆದರೂ ಧ್ಯೆಯ ಪೂರ್ವಕವಾಗಿ ಒಂದು ಕ್ರಮವನ್ನನುಸರಿಸಿದರೆ ಹಿತವಿದೆಯೆಂದು ಕಂಡುಬರುತ್ತದೆ. ಇಲ್ಲಿಯೂ ಕವಿತಾ ವಿರೋಧವಿರಬಹುದು. ಧೈರ್ಯಪೂರ್ಣ ಸಾಹಸಗಳಿಗೆ ವಿರುದ್ಧಪಕ್ಷಗಳು ಅಧಿಕ. ಹೀಗಿರುವುದರಿಂದ ಸಾಮಾನ್ಯವಾದ ಮಧ್ಯಮ ಸೂತ್ರವೊಂದನ್ನು ಪ್ರಯೋಗಕ್ಕೆ ಹಾಕಬಾರದೇ? ಚಡಿ ಹೊಡೆಯುವ ಕ್ರಮವು ನಿಲ್ಲಬೇಕೆಂದೇ ಇಲ್ಲ, ಆದರೂ ಅದರ ಪ್ರಯೋಗವನ್ನು ಮಾತ್ರ ವಿಶಾಲ ವಿಷಯಗಳತ್ತ ಒಯ್ದುರಬಾರದೇ? ಈ ಕೆಳಗಿನ ಸೂತ್ರಗಳಿಗನುಸಾರವಾಗಿ ಚಡಿ ಹೊಡೆಯುವ ಶಿಕ್ಷೆಯನ್ನು ಕೈಗೆ ಹಚ್ಚಿಕೊಂಡರಾಗದೇ?

(೧) ಚಡಿಹೊಡೆಯುವುದನ್ನು ಒಂದು ವಿಶಿಷ್ಟ ಶಿಕ್ಷೆಯನ್ನಾಗಿ ವಿಧಿಸಬೇಕು. ಅದನ್ನು ಸಾಮಾನ್ಯ ತಪ್ಪುಗಳಿಗೆ ಪ್ರಯೋಗಿಸಬಾರದು. (೨) ಬಾಲರೂ ಪ್ರೌಢವಯಸ್ಕರೂ ಎಲ್ಲಾ ಸಂದರ್ಭಗಳಲ್ಲಿ ಈ ಶಿಕ್ಷೆಗೆ ಗುರಿಪಡಿಸಲ್ಪಡಬಾರದು, ಯಾವ ತಪ್ಪಿಗಾಗಿ ಚಡಿಹೊಡೆಯಬೇಕೆಂದು ಪ್ರತ್ಯೇಕವಾಗಿ ವಿಧಿಸಬೇಕು; ಈ ವಿಧಾಯಕ ಪಟ್ಟಿಯಲ್ಲಿ ಹಿಂಸ್ರಮಯವಾಗಿ ಕಳ್ಳತನ, ವ್ಯಭಿಚಾರ, ಅಪ್ರಾಕೃತಿಕ ದುರ್ನಡತೆ (ಪುರುಷರ ಸಂಬಂಧವಾಗಿ) ಇವುಗಳಿಗೆಲ್ಲ ಚಡಿಯೇಟುಗಳನ್ನು ವಿಧಿಸಬಹುದು. ಮನೆಗೆ ಕನ್ನಹಾಕುವ ಅಪಾದನೆಯು ಈ ಮೇಲಿನ ಕೆಟ್ಟ ನಡತೆಗಳಷ್ಟು ದೊಡ್ಡದಲ್ಲ. ಆದುದರಿಂದ ಇದನ್ನು ಸಣ್ಣ ತಪ್ಪುಗಳ ಸಾಲಿನಲ್ಲಿ ನಿಲ್ಲಿಸಬಹುದು. ಪ್ರಾಯಸ್ಥನೊಬ್ಬನಿಗೆ ೧೫ ಚಡಿಗಳಿಗಿಂತ ಹೆಚ್ಚನ್ನು ಕೊಡಬಹುದು; ಅಪ್ರಾಯಸ್ಥನಿಗೆ ೮ ಚಡಿಗಳಿಗಿಂತ ಹೆಚ್ಚು ಕೊಡಬಾರದು.

## ಗ್ರಂಥಭಂಡಾರದ ಉಪಯೋಗ.

ಅಮೇರಿಕಾದಲ್ಲಿ ಕೂಡಾ ಅನೇಕ ನಗರಗಳಿಗೂ ಗ್ರಾಮಗಳಿಗೂ ಸಾರ್ವಜನಿಕ ಗ್ರಂಥಭಂಡಾರಗಳಿಲ್ಲ. ಆದರೆ ಈ ನ್ಯೂನ್ಯತೆಯನ್ನು ಹೋಗಲಾಡಿಸುವುದಕ್ಕಾಗಿ ಅಲ್ಲಿಯ ಲೈಬ್ರರಿ ಎಸೋಸಿಯೇಶನ್ನಿನವರು ಈ ಪ್ರಯತ್ನಮಾಡುತ್ತಿರುವರು. ತಮ್ಮ ದೇಶದ ಪ್ರತಿಯೊರ್ವನಿಗೂ ಗ್ರಂಥಭಂಡಾರವು ಪ್ರಯೋಜನಕಾರಿಯಾಗಬೇಕೆಂದು ಸಾಧಿಸುತ್ತಿರುವರು. The Indian Library Journal" ಎಂಬುದರಲ್ಲಿ ಈ ರೀತಿ ಪ್ರಕಟಿಸಲಾಗಿದೆ—ಗ್ರಂಥಭಂಡಾರದ ಉಪಯೋಗ ಮಾಡದಿರುವ ಶೇಕಡಾ ೬೦ದಷ್ಟು ಜನರು ಹಳ್ಳಿಪ್ರಾಂತ್ಯಗಳಲ್ಲಿರುವರು. ೩೫೦೦ ಜನಸಂಖ್ಯೆಯು ಕೂಡಾ ಇಲ್ಲದಿರುವ ಸ್ಥಳಗಳಲ್ಲಿ ಇಂತಹವರಿರುವರು. ಅಮೇರಿಕಾದಲ್ಲಿ ೪೭ ಮಿಲ್ಲಿಯ ಜನರು ಅಂದರೆ ಶೇಕಡಾ ೪೫ರಷ್ಟು ಜನರು ಗ್ರಂಥಾಲಯಗಳ ಪ್ರಯೋಜನವನ್ನು ಮಾಡಿಕೊಳ್ಳದೆಯೇ ಇರುವರು.

ಸಂಯುಕ್ತ ಅಮೆರಿಕಾದ ೩೦೯೩ ಪ್ರಾಂತ್ಯಗಳಲ್ಲಿ ೧೧೩೫ ಪ್ರಾಂತ್ಯಗಳಿಗೆ ಗ್ರಂಥಾಲಯಗಳೇ ಇಲ್ಲ. ಹಳ್ಳಿಗಳೇ ಈ ೨ ಮಿತಿಯಲ್ಲಿರುವುದಲ್ಲ. ಅನೇಕ ನಗರಗಳಿಗೂ ಕೂಡಾ ಸಾರ್ವಜನಿಕ ಗ್ರಂಥಾಲಯಗಳಿಲ್ಲ. ಇದಕ್ಕೆ ಸಾರ್ವಜನಿಕರಲ್ಲಿ ಓದಿನ ಪ್ರೀತಿಯು ಇಲ್ಲದಿರುವುದು ಒಂದು ಕಾರಣವಾಗಿದೆ. ಗ್ರಾಮಗಳ ೫೪ ಮಿಲ್ಲಿಯ ಜನರು ಗ್ರಂಥಾಲಯಗಳನ್ನು ಕಂಡೂ ಇಲ್ಲ.

ಲೈಬ್ರರಿ ಎಕ್ಸ್‌ಟೆನ್ಶನ್ ಕಮಿಟಿಯವರು ಹೊರಡಿಸಿರುವ ವರದಿಯಲ್ಲಿನ ಮೇಲಿನ ವಿಷಯವನ್ನರಿತು ಕಂಗೆಟ್ಟು ಅಮೆರಿಕನ್ ಲೈಬ್ರರಿ ಎಸೋಸಿಯೇಶನಿನವರು ಯುನೈಟೆಡ್ ಸ್ಟೇಟ್ಸ್ ಮತ್ತು ಅಮೆರಿಕಾಗಳಲ್ಲಿ ಪ್ರತಿ ಜನಕ್ಕೂ ಪ್ರಯೋಜನಕ್ಕೆ ಗ್ರಂಥಾಲಯಗಳು ಲಭ್ಯವಾಗಬೇಕೆಂದು ನಿರ್ಣಯಿಸಿ ಆ ಬಗ್ಗೆ ಕೆಲಸಮಾಡುತ್ತಿರುವರು.

## ದೇಶಸಂಚಾರಿಯ ಅನುಭವ

ಶ್ರೀಮತಿ ಎಸ್ ಎನ್ ರಾಯ್ ಎಂಬವರು ಅಖಿಳ ಭಾರತ ಸ್ತ್ರೀ ಸಮ್ಮೇಳನದ ನಾಯಕಿಯರಲ್ಲೊಬ್ಬರು. ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಗಳ ಪತ್ನಿ. ಇವರು ಈಗ ಪೌರ್ವಾತ್ಯ ದೇಶಗಳನ್ನು ಸುತ್ತಿಕೊಂಡು ಅಮೇರಿಕದ ಮೂಲಕ ಲಂಡನಿಗೆ ಹೋಗಿದ್ದರೆ. ಇವರು ಒರಿಯವನ್ನು ಹೊಕ್ಕಾಗ, ಇವರಿಗೆ ಸ್ವಾಗತವೀಯಲು ಬಂದಿದ್ದ ನಾನಾ ಸ್ತ್ರೀ ಸಂಸ್ಥೆಯವರು ಒಂದು ಸ್ವಾಗತಕೂಟವನ್ನು ನಡೆಸಿದರು. ಶ್ರೀಮತಿ ರಾಯ್‌ಯವರು ತಮ್ಮ ಸಂಚಾರದಲ್ಲಿ ಪಡೆದ ಅನುಭವಗಳನ್ನು ಕುರಿತು ಅಲ್ಲಿ ಒಂದು ಉಪನ್ಯಾಸವನ್ನು ಕೊಟ್ಟರು.

"ಜಪಾನಿನಲ್ಲಿ ಸ್ತ್ರೀಯರಿಗೆ ರಾಜಕೀಯ ಹಕ್ಕುಬಾಧ್ಯತೆಗಳು ಇಲ್ಲದಿರುವುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಆದರೂ, ಅಲ್ಲಿ ಸ್ತ್ರೀಯರು ಯಾವ ಬಗೆಯ ಪಾರತಂತ್ರ್ಯದಲ್ಲೂ ನರಳುತ್ತಿರುವುದಿಲ್ಲ. ಸ್ತ್ರೀ ಅಕ್ಷರಸ್ಥರ ಸಂಖ್ಯೆ ಶೇಕಡಾ ೯೮ರಷ್ಟಿದೆ. ಕೂಲಿಮಾಡುವವರ ಮಗಳೂ ಅಷ್ಟೇನೂ ಗೋಳಾಗಿಲ್ಲ. ಭಾರತಕ್ಕಿಂತ ಎಷ್ಟೋ ಮೇಲು. ಅಲ್ಲಿ ನೋಡುವಲ್ಲಿ ಬಡವರು ಶ್ರೀಮಂತರೆಂಬ ಭೇದವು ಅಷ್ಟು ಹೆಚ್ಚಾಗಿಲ್ಲ".

"ಅಮೇರಿಕದಲ್ಲಿ ಮತ್ತೊಂದು ವಿಚಿತ್ರ ಸಂಗತಿಯನ್ನು ಕಂಡೆ. ಭಾರತೀಯರ ವಿಷಯವಾಗಿ ವಾಸ್ತವಾಂಶವನ್ನು ತಿಳಿದುಕೊಳ್ಳಬೇಕೆಂಬ ಮಹದಾಕಾಂಕ್ಷೆಯು ಅಲ್ಲಿಯವರಿಗಿದ್ದರೂ, ಅವರಿಗೆ ಸಮರ್ಪಕವಾಗಿ ಯಾವ ವಿಚಾರವೂ ತಿಳಿದಿಲ್ಲ. ಅಲ್ಪ ಸ್ವಲ್ಪ ತಿಳಿದಿರುವುದೂ ಶುದ್ಧ ಅಸಂಬದ್ಧವಾದ ಸುಳ್ಳು ಸಮಾಚಾರಗಳೇ." ಎಂದು ಹೇಳಿ, ಭಾರತದ ವಿಚಾರವನ್ನಿತ್ತು ಹೀಗೆಂದರು—

"ನಮ್ಮ ನಾಡಿನ ಕತೆಯೇ ಮಹತ್ತರವಾಗಿದೆ. ಸ್ತ್ರೀಯರ ಸಾಮಾಜಿಕ ಅನಾನುಕೂಲ್ಯಗಳು ಬಹಳವಾಗಿ ಇದ್ದೇ ಇವೆ. ರಾಜಕೀಯ ಕೊರತೆಗಳು ಅಸಂಖ್ಯಾತವಾಗಿವೆ. ಈಗ ಸದ್ಯದಲ್ಲಿ ನಮ್ಮ ಗಮನವನ್ನು ಗಣಿಗಳಲ್ಲಿ ದುಡಿಯುತ್ತಿರುವ ಕೂಲಿ ಸ್ತ್ರೀಯರ ಉದ್ಧಾರದ ಕಡೆ ಕೊಡುತ್ತಿರುವೆವು. ಕೆಲವು ರಾಜಕೀಯ ಅವಕಾಶಗಳ ಅಭಾವದಿಂದ ನಮ್ಮ ಕೆಲಸವು ಮುಂದುವರಿಯದೆ ಕಡೆಯಾಗಿದೆ.

ನೂತನ ಸುಧಾರಣೆಗಳಲ್ಲಿ ಸ್ತ್ರೀಗೂ ಚುನಾವಣೆಯ ಹಕ್ಕು ಸಮಾನವಾಗಿ ಕೊಡಲಾಗುತ್ತದೆಂದು ನಾವು ನಂಬಿದ್ದೆವು. ಆದರೆ ಅದು ನಿರಾಶೆಯಲ್ಲಿ ಕೊನೆಗಾಣಬೇಕಾಯಿತು. ಈಗ ಒಳ್ಳೆಯ ಹಕ್ಕುಗಳು ಏನೂ ಸಮರ್ಪಕವಾಗಿಲ್ಲ. ಸಾಧುವಾಗಿಯೂ ಇಲ್ಲ. ಗಂಡಸರು ಕೋಮುವಾರು ಚುನಾವಣೆಯ ವಿದ್ವೇಷಕ್ಕೆ ಸಿಕ್ಕಿ ನಾಶ ಹೊಂದುತ್ತಿದ್ದಾರೆ. ಈ ಬಗೆಯ ವಿಭಕ್ತ ಚುನಾವಣೆಯು ನಮಗೆ ಬೇಕಿಲ್ಲವೆಂದೂ, ಅವಿಭಕ್ತ ಚುನಾವಣೆಯೇ ಕ್ಷೇಮಕಾರಿಯೆಂದೂ ನಾವು ಮಾಡಿದ ಪ್ರಾರ್ಥನೆಯು ವ್ಯರ್ಥವಾಯಿತು. ಈ ವಿಚಾರದಲ್ಲಿ ನಿರ್ದಾಕ್ಷಿಣ್ಯವಾಗಿ ಸರಕಾರದ ಈ ವರ್ತನವನ್ನು ನಾವು ಖಂಡಿಸುತ್ತೇವೆ".

"ವಿಶ್ವಕರ್ಣಾಟಕ"

## ರಷ್ಯದಲ್ಲೇನಾಗುತ್ತಿದೆ?

ವಿಜ್ಞಾನಯುಗದಲ್ಲಿ ವೈಮಾನಿಕರ ಸಾಹಸವು ಉಲ್ಲೇಖನೀಯವಾಗಿದೆ. ಶತ್ರು ನಿವಾಕಗ್ನೆಯ್ಯಲೂ ವರ್ತಮಾನವನ್ನು ಕೊಂಡೊಯ್ಯಲೂ ವಿಮಾನಗಳು ಫಲಕಾರಿಯಾಗುತ್ತವೆ. ಆದಕ್ಕಾಗಿ ಸೋವಿಯಟ್ ರಷ್ಯವು ತನ್ನ ವಿಮಾನಬಲವನ್ನು ವೃದ್ಧಿಗೊಳಿಸುವುದರಲ್ಲಿ ನಿರತವಾಗಿದೆ. ಜಗತ್ತಿನಲ್ಲಿ ಎಲ್ಲಿಯೂ ಕೇಳಿಕೇಳದ ವಿಮಾನಗಳನ್ನೂ ಬೆಲೂನುಗಳನ್ನೂ ಸಿದ್ಧಪಡಿಸಿರುವರು. ಹಟ್ಟೇಳ್ ರಷ್ಯದ ವಿಮಾನಸಂಸ್ಥೆಗಳವರು ಇತ್ತೀಚೆಗೆ ಆಶ್ಚರ್ಯಕರ ನೋಟಗಳನ್ನು ಜನತೆಗೆ ತೋರಿಸಿದ್ದಾರೆ. ಮೊನ್ನೆ ತಾನೇ ಮೊಸ್ಕೊಪಟ್ಟಣದ ಬಳಿ ಇರುವ ತಿಮ್ಕ್ಯ ಎಂಬಲ್ಲಿ ಆರು ಮಂದಿ ತರುಣಿಯರು ವಿಮಾನದಲ್ಲಿ ಕುಳಿತು ೩೨,೦೦೦ ಅಡಿ ಮೇಲಕ್ಕೆ ಹೋಗಿ ಅಲ್ಲಿಂದ ಅಮ್ಲಜನಕ ವಿರಹಿತ ಬೆಲೂನುಗಳನ್ನು ಹಿಡಿದು ಭೂಮಿಗೆ ನೆಗೆದರು. ಹಾಗೆಯೇ ಏನೊಂದೂ ಹಾನಿಯಿಲ್ಲದೆ ಕೆಳಗಿಳಿದು ಬಂದರು. ವಿಸ್ಮಯಜನಕ ಸಾಹಸ ಇದು!

ಸೋವಿಯಟ್ ರಷ್ಯದ ಸಂಶೋಧನ ಶಾಖೆಯವರಲ್ಲಿ ಕೆಲವರು ಆಕಾಶಗಾಮಿಗಳಾಗಿ ಬಹು ಮೇಲಕ್ಕೆ ಹೋಗಿ ಅಲ್ಲಿಯ ಹವಾ ಪರಿಸ್ಥಿತಿಯನ್ನು ಕಂಡುಹಿಡಿದಿದ್ದಾರೆ. ೧೯೩೩ರಲ್ಲಿ ಕಮೋಂಡರ್ ಪ್ರೊಕೊಫಿಎಫ್ ಎಂಬವನು '1-B18' ಎಂಬ ಬೆಲೂನಿನ ಮೂಲಕ ಆಕಾಶದಲ್ಲಿ ೬೦,೩೩೫ ಅಡಿ ಎತ್ತರಕ್ಕೆ ಹೋಗಿದ್ದುದು ತಿಳಿದ ವಿಷಯ. ಇವನು ಪುನಃ ಅದೇ ಬೆಲೂನಿನ ಮುಖಾಂತರ ಅಗಾಧವಿಶ್ವದ ಪೂರ್ಣ ಪರಿಚಯಮಾಡಿಕೊಳ್ಳಲು ೩ ಗಂಟೆಗಳೊಳಗೆ ೧೦ ಮೈಲು ಮೇಲಕ್ಕೆ ಹೋದನೆಂದೂ, ಹಾಗೆಯೇ ಏನೊಂದೂ ಅಪಾಯ ಸಂಭವಿಸದೆ ತನಗೆ ಬೇಕಾದ ವಿಷಯಗಳಲ್ಲಿ ಶೋಧಿಸಿ, ಪುನಃ ಭೂಮಿಗೆ ತಲುಪಿದನೆಂದೂ ತಿಳಿದುಬಂದಿದೆ. ಈತನು ತಾನು ನೋಡಿ ತಿಳಿದಿದ್ದ ಹಲವು ವಿಷಯಗಳನ್ನು ತನ್ನ ಸಂಘದವರಿಗೆ ತಿಳಿಸಿರುವನು.

ಹಿಂದೂದೇಶದ ಜನಸಂಖ್ಯೆಯು ರಷ್ಯಕ್ಕಿಂತ ಇಮ್ಮಡಿಯಿದ್ದರೂ ರಷ್ಯದಲ್ಲಿದ್ದಷ್ಟು ವಿಮಾನಗಳು ಇಲ್ಲಿಲ್ಲ. ಬಂಗಾಳವು ರಷ್ಯದ ಮೂರನೇ ಒಂದಂಶದಷ್ಟಿದ್ದರೂ ಅದೇ ಗಣನೆಯ ಮೇರೆಗೆ ಅಲ್ಲಿ ವಿಮಾನಗಳಿಲ್ಲ. ಸ್ವದಲ್ಲಿ ನಿಪುಣರೂ, ಚಾಣಾಕ್ಷರೂ ಆಗಿರುವ ನೂರಾರು ನೌಕಾ ಶಾಸ್ತ್ರಜ್ಞರುಗಳಿರುವರು. ಆದರೆ ಹಿಂದೂದೇಶದಲ್ಲಿ ಅಂಥವರು ಇರುವುದು ಅತಿ ವಿರಳ. ಇಷ್ಟು ಸಂಪತ್ಸಮೃದ್ಧಿಯಿಂದೊಡಗೂಡಿದ ಹಿಂದೂ ದೇಶವು ಇಂತಹ ಶೋಚನೀಯ ಸ್ಥಿತಿಗೆ ಬರಲು ಕಾರಣವೇನು? ಎಂಬುದನ್ನು ವಿಚಾರಿಸಿದ್ದಲ್ಲಿ, ಸರಕಾರದವರ ಪ್ರೋತ್ಸಾಹವು ಲೇಶಮಾತ್ರವೂ ಇಲ್ಲದಿರುವುದೇ ಅದರ ಕಾರಣವೆಂದು ತಿಳಿದುಬರುತ್ತದೆ. ಆದರೆ, ಸರಿಯಾಗಿ ಪರ್ಯಾಲೋಚಿಸಿದ್ದಲ್ಲಿ, ಅದು ಸತ್ಯವಲ್ಲವೆಂಬುದಾಗಿ ತೋರುತ್ತದೆ. ಏಕೆಂದರೆ ಹಿಂದೂ ನಿವಾಸಿಗರು ಅಂತಹ ವಿದ್ಯೆಯನ್ನು ಗಳಿಸಲು ಉತ್ಸುಕರೇ? ಅವರಲ್ಲಿ ತಮ್ಮ ದೇಶದಲ್ಲಿ ಇಂತಹ ಸಂಸ್ಥೆಗಳು ಇರಬೇಕೆಂಬ ಕಾಂಕ್ಷೆಯಾದರೂ ಇದೆಯೇ? ಹಾಗಿದ್ದಲ್ಲಿ ಅವರಿಗೆ ತರಬೇತಿಯನ್ನು ಕೊಡಲು ಎಷ್ಟು ಇಂಜನೀಯರಿಂಗ್ ಕಾಲೇಜುಗಳು ಇಲ್ಲಿ ಏರ್ಪಟ್ಟಿವೆ? ಎಂದು ಪ್ರಶ್ನಿಸಿದ್ದಲ್ಲಿ ನಿರುತ್ತರವೇ ಈ ಪ್ರಶ್ನೆಗಳನ್ನು ಉತ್ತರಿಸುವುದು. ಎಂದಾಗ ಸರಕಾರದವರನ್ನು ಗೊಡ್ಡುವಾದಗಳಿಂದ ದೂರಿ ಪ್ರಯೋಜನವೇನು?

'Modern Review'


# 1936

ಮೇಲಿನ ಇಸವಿಯ

ಶಾರದಾ ಡೈರಿಗಳು

ಬೇಕೆ?

ಶಾರದಾ ಛಾಪಖಾನೆಗೆ

ಬರುವ ತಿಂಗಳಲ್ಲಿ

ಬರೆಯಿರಿ,

ಅ ಥ ವಾ

ಬನ್ನಿರಿ.

# ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

## ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

# ಜಾಹೀರಾತು.

ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—
ನಮ್ಮ ಧಾರ್ಮಿಕ ಆಲಯದಲ್ಲಿ ಯೋಗ್ಯ ವಿದ್ವಾಂಸರುಗಳಿಂದ ರಚಿಸಲ್ಪಟ್ಟ ಗ್ರಂಥಗಳ ಆಧಾರದಿಂದ ಶಾಸ್ತ್ರೀಯ ಸ್ವಾನುಭವಹೊಂದಿದ ಎಲ್ಲಾ ಔಷಧ ಮಾತ್ರೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಈ ಉದ್ದೇಶಕ್ಕೆ ಎಲ್ಲಾ ಆಯುರ್ವೇದಿಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾತ್ರ—
ಸಂಸ್ಥೆ, ಕೊಡಿಯಾಲಬೈಲ್, ಮಂಗಳೂರು

ಚಿತ್ರಾಸಹಿತ ಸಮೇತ
## ಋಗ್ವೇದೀ ಸಂಧ್ಯಾವಂದನೆ
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ.
ಬೆಲೆ ಆಣೆ 8.
30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

# ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ—ಅದು ಪೂರ್ಣವಾದ ಟೋನಿಕ್ ಆಹಾರ. ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.
ರೂ. 3–4–0 ಮತ್ತು ರೂ. 1–12–0.

ತಯಾರಿಸುವವರು: ಆಯುರ್ವೇದಾಶ್ರಮ, ಪೋ. ಬಾಕ್ಸ್ 287, ಮದರಾಸು.
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಜಾತುಕುಟ್ಟಿ ವೈದ್ಯರ
## ವಿಶೂಚಿಕಾ ಸಂಹಾರಿ
Vishuchika Samhari
(PILCO)
ಕಾಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಪಟ್ಟ 1ಕ್ಕೆ ರೂ. 1–0–0

## ಗುಹ್ಯರೋಗ ನಿವಾರಿಣೀ ತೈಲ
Anti-Veneraei Oil
(A. V. Oil)
ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ದ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ದೇಹಪುಷ್ಟಿಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು:
8 ಔನ್ಸಿನ ಬಾಟ್ಲ 1ಕ್ಕೆ ರೂ. 2–8–0.
ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

## ಸೈಂಟಿಫಿಕ್ ಸ್ವರ್ಣಾಭರಣಗಳು
(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟವೆ.)
ಹೈಕೋರ್ಟ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟವೆ.
ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.

[ಹೊಸ ಕೆಟಲಾಗು ಧರ್ಮಾರ್ಥ]
ವಿಳಾಸ:—
The Scientific Gold Bangles Co., Ltd.
Head Office:—43, Byragimatam Street,
Post Box No. 203, Madras.

# ವಜ್ರಗಳು —— ವಜ್ರಗಳು

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.




ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲ್ಯು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

## ಸಾವಕಾರ ಶ್ರೀನಿವಾಸ ರಂಗ ಪೈ,
ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1868ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

# ಮೇಹಧ್ವಂಸಿನಿ. (ರಿಜಿಸ್ಟರ್ಡ)

ಪ್ರಮೇಹವು ಯೌವನಮದದ ಪ್ರಾಪ್ತಿಯು. ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.

ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ. ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ. ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಣ್ಣು, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ:—ದೊಡ್ಡ ಬಾಟ್ಲಿಗೆ ರೂ. 4. ಮಧ್ಯಮ 2–4–0. ಚಿಕ್ಕದು 1–2–0.
ತಯಾರಿಸುವವರು:— ಲಸ್ಕರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:— ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ' ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

# ಅಬಿಸೀನಿಯ

ಅಲ್ಲಿನವರು ತಮ್ಮ ದೇಶವನ್ನು ಇಥಿಯೋಪಿಯವೆಂದು ಕರೆವರು. ಇದರ ಸುತ್ತಲೂ ಬ್ರಿಟಿಷ, ಫ್ರೆಂಚ, ಇಟಲಿ ರಾಜ್ಯಗಳ ಅಧಿಕಾರದೊಳಗಿರುವ ಪ್ರದೇಶಗಳಿವೆ. ಯುರೋಪೀಯ ರಾಷ್ಟ್ರಗಳೇ ಈ ರಾಜ್ಯವನ್ನು ಪ್ರತ್ಯೇಕಿಸಿ ಕೊಟ್ಟಿದ್ದು, ಅದರ ಗಡಿಗಳನ್ನು ಸರಿಯಾಗಿ ನಿರ್ಧರಿಸದೆ, ಆಗಾಗ ಆ ಗಡಿಗಳು ಅತ್ತಿತ್ತ ಸರಿದಂತೆ ತೋರಲೂ ಅವಕಾಶವುಂಟಾಗಿದೆ. ಸುತ್ತಲೂ ಪರ್ವತಗಳು, ಬೇಕಾದಷ್ಟು ಭಿನ್ನ ಪ್ರಕೃತಿಯ ಪ್ರದೇಶಗಳು ಸೇರಿ ಈ ರಾಜ್ಯವಾಗಿರುವುದರಿಂದ, ಈ ರಾಜ್ಯವು ತೀರ ಹಿಂದುಳಿದಿದೆಯೆನ್ನಬಹುದಾದರೂ, ಸಾಧ್ಯವಾಗುವಷ್ಟು ಚೆನ್ನಾಗಿ ಅದನ್ನು ಮುಂದೆ ತರಲು ಯೋಗ್ಯವಾದ ಸಾಧನೆಯನ್ನು ಈಗಣ ಅರಸರು ಮಾಡುತ್ತಿರುವರು. ಅತಿ ಪುರಾತನ ರೀತಿ ನೀತಿ ನಂಬಿಕೆಗಳೇ ಇನ್ನೂ ಅಲ್ಲಿ ರೂಢಿಯಲ್ಲಿವೆ, ಗುಲಾಮ ಪದ್ಧತಿಯು ಕೆಲವೇ ವಾರಗಳ ಹಿಂದೆ ತಾನೆ ರದ್ದಾಗುವಂತೆ ಪ್ರಯತ್ನಗಳಾಗಿವೆ. ಈಗ ಈ ಈ ರಾಜ್ಯವನ್ನೆ ನುಗ್ಗಿ ಧ್ವಂಸಗೊಳಿಸಲು ಇಟಲಿಯು ಸಿದ್ಧವಾಗಿದೆ. ಇಟಲಿಯು ಯುದ್ಧ ಸನ್ನಾಹ ಸಿದ್ಧತೆಯಲ್ಲಿ ಅತಿ ಸುಸಜ್ಜಿತವಾಗಿರುವ ಯುರೋಪೀಯ ರಾಷ್ಟ್ರಗಳಲ್ಲೊಂದಾಗಿರುವುದರಿಂದ ಅತಿ ಭಯಂಕರ ಉತ್ಪಾತಗಳುಂಟಾಗಲು ಅತ್ಯನುಕೂಲವಾಗಿ, ಅತ್ಯಾಧುನಿಕ ರೀತಿಯಲ್ಲಿ ಯುದ್ಧವು ನಡೆಯಲು ಆತಂಕವಿಲ್ಲ.

ಇಟಲಿಗೆ ಈ ಆತ್ಯಾಸೆ ಏತಕ್ಕುಂಟಾಗಿದೆ? ೫೦೦೦ ವರ್ಷಗಳಿಂದಲೂ ಸ್ವತಂತ್ರವಾಗಿರುವ ಈ ರಾಜ್ಯವು, ಇಡೀ ಆಫ್ರಿಕದಲ್ಲಿ ಸ್ವತಂತ್ರವಾಗಿರುವ ಇದೊಂದೇ ರಾಜ್ಯವು, ಕರೀ ಜನಗಳ ಆದಿ ರಾಜ್ಯವು ಇದೇಕೆ ಇಟಲಿಯ ಬಾಯಿಗೆ ತುತ್ತಾಗಬೇಕಾಗಿದೆ? ಎಂಬುದಕ್ಕೆ ಮೂರು ಕಾರಣಗಳನ್ನು ಕೊಡುತ್ತಾರೆ.

ಮೊದಲಾಗಿ, ಸಾಮ್ರಾಜ್ಯಲಾಲಸೆ ಪ್ರಾಚೀನ ಕಾಲದಲ್ಲಿ ರೋಮನ್ ಸಾಮ್ರಾಜ್ಯವು ವಿಶೇಷ ಕೀರ್ತಿ ಹೊಂದಿದ್ದಿತೆಂದು ಈಗಲೂ ಇತಿಹಾಸದಲ್ಲಿ ಸ್ಥಾನ ಪಡೆದೇ ಇದೆ. ಅದೇ ಪುನಃ ಒಂದು ಸಾಮ್ರಾಜ್ಯವು ಸ್ಥಾಪನೆಹೊಂದುವಂತಾಗಬೇಕೆಂದು ಜನರಲ್ಲಿ ಆಸೆ ಉಂಟಾಗಿದೆ. ಉತ್ಸಾಹ, ಸಾಧನೆ, ಎಲ್ಲವೂ ಈ ದಿಕ್ಕಿಗೇ ನಡೆದಿವೆ. ಕಳೆದ ಮಹಾಯುದ್ಧದಲ್ಲಿ ಕರಾರುಪತ್ರದಲ್ಲಿ ಒಪ್ಪಂದವಾಗುವಾಗ, ಮಿತ್ರ ರಾಷ್ಟ್ರವಾದ ಇಟಲಿಗೆ ಆಫ್ರಿಕದಲ್ಲಿದ್ದ ಆಗಣ ಜರ್ಮನ್ ವಸಾಹತುಗಳಲ್ಲಿ ಸಾಕಷ್ಟು ಅಂಶವೇನೂ ದೊರೆಯಲಿಲ್ಲ. ಇಷ್ಟು ವರ್ಷಗಳಲ್ಲೂ ಇನ್ನೂ ಕೆಲವು ಮರುಪ್ರದೇಶಗಳೇ ಮಾತ್ರ ಸಿಕ್ಕಿವೆ ಹೊರತು ಸಂಪನ್ನ ಪ್ರಾಂತ್ಯಗಳೊಂದೂ ಇಲ್ಲ. "ಇಥಿಯೋಪಿಯದ ಭಾಗ್ಯವು ಈಶ್ವರದತ್ತವಾಗಿ ಇಟಲಿಯ ಕೈಯಲ್ಲಿದೆ" ಎಂದೇ ಇಟಲಿಯ ರಾಜಕಾರಣಪುರುಷರು ಆಡುತ್ತಿರುವರು.

ಈ ರಾಜ್ಯವು, ಸಾಮಾನ್ಯವಾಗಿ ತಿಳಿದು ಬಂದಂತೇನೂ ಅನಾರೋಗ್ಯಕರವಾಗಿರುವ ಪ್ರದೇಶವಲ್ಲ. ಕಾಡುಗಳಿರಬಹುದು, ಜ್ವರವಿರಬಹುದು, ಹಾಗೆಂದು ವಸತಿಗೆ ಅಯೋಗ್ಯವಾಗಿಲ್ಲ. ಏಕೆಂದರೆ, ಚಳಿಗಟ್ಟಿರುವ ಹಿಮಪ್ರದೇಶಗಳೂ ಯುರೋಪೀಯ ಹವಾಗುಣವುಳ್ಳ ವಿಸ್ತಾರವಾದ ಪ್ರದೇಶಗಳೂ ಅಲ್ಲಿವೆ, ಅವುಗಳಂತೆ ತೀರ ಭಯಂಕರ ಉಷ್ಣವಾಗಿರುವ ಪ್ರದೇಶಗಳೂ ಇವೆ. ಇದ್ದಲು, ಕಬ್ಬಿಣ, ಗಂಧಕ, ತಾಮ್ರ, ಚಿನ್ನವೇ ಮೊದಲಾಗಿರುವ ಖನಿಜಗಳನ್ನು ಬೇಕಾದಷ್ಟು ಅಗೆದು ತರಲು ಅನುಕೂಲವಾಗಿದೆ. ಸಾಮ್ರಾಜ್ಯಸ್ಥಾಪಕರಿಗೆ ಇಂಥಹ ಸಂಪತ್ತು ಅತ್ಯಾವಶ್ಯಕವಾಗಿದೆ. ಈಗಾಗಲೆ, ಕಾಫಿ, ಚರ್ಮ, ದಂತ, ಹುನುಗು, ಉಷ್ಟ್ರಪಕ್ಷಿಯ ಗರಿಗಳು, ಗೋಂದು, ಮೇಣ ಮೊದಲಾದುವನ್ನು ಅಲ್ಲಿಂದ ಧಾರಾಳವಾಗಿ ರಫ್ತು ಮಾಡುತ್ತಾರೆ. ಎಲ್ಲಕ್ಕೂ ಹೆಚ್ಚಿನದಾಗಿ ಚಿಮಿಣಿ (ಚಿಮಿಣಿ) ಎಣ್ಣೆಯು ಎಷ್ಟೋ ಭಾಗಗಳಲ್ಲಿ ಬೇಕಾದಷ್ಟು ಇದೆ. ಇಟಲಿಗೇ ಎಂದೇನು, ಯಾವ ರಾಜ್ಯಕ್ಕಾದರೂ ಇಂತಹ ಸಂಪತ್ತು ದೊರೆತರೆ ಬೇಡವೆಂದಿದೆಯೆ?

ಎರಡನೆದಾಗಿ, ಇಟಲಿಯ ವಸಾಹತುಗಳು ಸಮೀಪವೇ ಇವೆ. ಇರಿಟ್ರಿಯಾ, ಮತ್ತು ಸೋಮಾಲಿಲೇಂಡ್ ಎಂಬಿವೇ ಎರಡು ವಸಾಹತುಗಳೊಳಗೆ ಪ್ರಯಾಣ ಮಾಡಲು ಫ್ರೆಂಚರ ಅಧೀನತೆಯಲ್ಲಿರುವ ಸೀರು ಮಾರ್ಗವೇ ಹೊರತು ಇಟಲಿಗೆ ಬೇರೆ ಹಾದಿಯಿಲ್ಲವಾಗಿದೆ. ಇವೆರಡರ ನಡುವೆ ರೈಲು ಹಾಕಲು ೧೯೦೬ರಲ್ಲಿ ಇಟಲಿಗೆ ಅಧಿಕಾರಸಮ್ಮತಿಯನ್ನು ಇಂಗ್ಲೆಂಡೂ ಫ್ರಾನ್ಸೂ ಕೊಟ್ಟಿವೆ. ಆದರೆ ರೈಲುಮಾರ್ಗವಾಗಿಲ್ಲ, ಇಥಿಯೋಪಿಯವನ್ನು ಸ್ವಸೇನಾವಶದಲ್ಲಿರಿಸದೆ ಈ ಮಾರ್ಗವನ್ನು ಮಾಡಲಾಗುವುದಿಲ್ಲವೆಂದು ಇಟಲಿಯ ಹೇಳಿಕೆ.

ಮೂರನೆಯದಾಗಿ, ಇಟಲಿಯ ಈಗಣ ರಾಜತಂತ್ರದಂತೆ, ಆಗಾಗ ಒಂದೊಂದು ಯುದ್ಧವಾಗದೆ, ಜನರಲ್ಲಿ ಸ್ವದೇಶ ಪ್ರೇಮ, ಸಾಮ್ರಾಜ್ಯ ಸ್ಥಾಪನಾಕಾಂಕ್ಷೆ ಮೊದಲಾದುವನ್ನು ಉಚಿತಗೊಳಿಸಲೂ, ಉಳಿಸಲೂ ಬೆಳೆಸಲೂ ಅಸಾಧ್ಯವಾಗಿದೆ ಎಂದೇ ನಂಬುಗೆಯಿದೆ. ೧೮೯೬ರಲ್ಲಿ ಇಂತಹದೊಂದು ಯುದ್ಧವಾಗಿ, ಎಡೋವಾ ಎಂಬಲ್ಲಿ ಇಟಲಿಯ ಸೇನೆಯೆಲ್ಲ ಅಬಿಸೀನಿಯದವರಿಗೆ ಆಹಾರವಾಗಿ ಹೋಯಿತು. ಕಾಡುಜನಗಳೇ ಸೇರಿ, ಆಗಣ ರಾಜರ ಅಧಿನಾಯಕತ್ವದಲ್ಲಿ, ಇಟಲಿಯ ದಂಡನ್ನು ಧ್ವಂಸ ಮಾಡಿತ. ಕರೀ ಬಣ್ಣದ ಬರ್ಬರ ಜನಗಳು ಯುರೋಪಿಯನರನ್ನು ಧ್ವಂಸಗೊಳಿಸಿದರೆ ಧರೆ ಏನಪಕೀರ್ತಿ ಎಂಬೀ ವ್ಯಥೆಯು ಇನ್ನೂ ಇಟಲಿಯ ಹೃದಯದಲ್ಲಿದೆ. ಇದಕ್ಕೆ ಪ್ರತೀಕಾರ ಸ್ವರೂಪವಾಗಿ, ಈಗೊಂದು ಸಲ ಅಬಿಸೀನಿಯದವರನ್ನು ನೆಲಸಮಮಾಡವಷ್ಟು ಪ್ರಬಲವಾಗಿ ಸೋಲಿಸಿದರೆ, ಆ ಗಾಯವು ಮಾಯಬಹುದೆಂದು ಇಟಲಿಯವರ ನಂಬಿಕೆ. ಆಗ ತಾನ ಜನಾಂಗದ ಮಾನವು ಉಜ್ವಲವಾಗುವುದೆಂಬ ಆಸೆ. ಇದೇ ಸಮಯೋಚಿತ ಯುದ್ಧಕ್ಕೆಳೆಯ ಬೇಕೆಂದೂ ಅಲ್ಲಿನವರ ಕಾರ್ಯ.

ಯುರೋಪಿಯ ಮತ್ತು ಇತರ ಪ್ರಮುಖ ರಾಷ್ಟ್ರಗಳು ಈ ವಿಷಯದಲ್ಲಿ ಏನಾದರೊಂದು ಬಗೆಯ ಸಂಬಂಧವುಳ್ಳವರೇ ಎಂಬುದನ್ನು ಎಣಿಸಿದರೆ, ಇಟಲಿಯ ಲಾಲಸೆಗೆ ಅವುಗಳ ಪ್ರತಿಕ್ರಿಯೆ ಹೀಗಿದೆ ಎಂಬುದನ್ನು ತಿಳಿಯಲು ಅನುಕೂಲವಾಗುವುದು. ಮುಖ್ಯವಾಗಿ ಇಂಗ್ಲೆಂಡಿಗೂ ಜಾಪಾನಿಗೂ ಈ ದೇಶದಲ್ಲಿ ಹೆಚ್ಚಿನ ಪ್ರಯೋಜನವಿದೆ.

ಇಜಿಪ್ತ ಮತ್ತು ಸುಡಾನ್ ದೇಶಗಳಲಿ ಇಂಗ್ಲೆಂಡಿನ ಅಧಿಕಾರವು ಪ್ರಬಲವಾಗಿದೆ; ಅವುಗಳಲ್ಲಿನ ಪ್ರದೇಶಗಳ ಭೂಮ್ಯುತ್ಪನ್ನಗಳು ನೀಲನದಿಯ ನೀರ ಮೇಲೆ ಆಧರಿಸಿಕೊಂಡಿರುವುವು. ನೀಲನದಿಯ ನೀರಿಗೆ ಹೆಚ್ಚಳವುಂಟಾಗಿ ನೆರೆಯೇರುವಂತೆ ಮಾಡುವ ತ್ಸಾನಾಸರೋವರವು ಅಬಿಸೀನಿಯದಲ್ಲಿದೆ. ಈ ನೀರು ಸರಾಗವಾಗಿ ದೊರೆವಂತಾಗಲು ಅಬಿಸೀನಿಯದ ಸ್ನೇಹವು ಅಗತ್ಯವಾಗಿದೆ. ಈಗ ತಾನೆ, ಆ ಸರೋವರಕ್ಕೆ ಒಂದು ಅಣೆಕಟ್ಟನ್ನು ಕಟ್ಟುತ್ತಿರುವರು, ಇಲ್ಲಿಂದ ತಾನೆ ನೀರು ಸುಡಾನ್ ಪ್ರದೇಶದ ಹತ್ತೀ ಬೆಳೆಗೆ (ಅದು ವೆಂಚೆಸ್ಟರಿಗಾಗಿ) ಬೇಕಾಗಿದೆ. ಆ ನೀರು ದೊರೆಯದಿದ್ದರೆ, ಸುಡಾನ್ ಪ್ರಾಂತ್ಯದ ಹೊಯಿಗೆಯಿಂದೇನು ಲಾಭವಾದೀತು?

ಕಳೆದ ಐದು ವರ್ಷಗಳಿಂದಲೂ ಜಾಪಾನು ಈ ರಾಜ್ಯದಲ್ಲಿ ಕಾಲಿಟ್ಟು, ತನ್ನ ವ್ಯಾಪಾರವನ್ನು ಸಾಗಿಸಿ ಬೆಳೆಸಿತಂದಿದೆ. ೧೯೩೨ರಲ್ಲಿ ಇಂಡಿಯದಿಂದ ಅಬಿಸೀನಿಯಕ್ಕೆ ಆಮದಾಗುತ್ತಿದ್ದ ಸರಕು ನೂರರಲ್ಲಿ ೫೭ರಂತಿದ್ದಿತು, ಜಾಪಾನಿನಿಂದ ಬರೀ ೧೨ ಮಾತ್ರ ಇದ್ದಿತು. ಈಗ ಜಾಪಾನಿನಿಂದ ನೇಕಡಾ ೮೦ರಷ್ಟು ಬಟ್ಟೆ ಬರೆಗಳೇ ಅಲ್ಲಿಗೆ ಆಮದಾಗುತ್ತಿವೆ. ಅಲ್ಲಿಯ ರಾಜನು ಜಾಪಾನಿನಿಂದ ವರ್ತಕರ ಪ್ರತಿನಿಧಿಗಳನ್ನು ಕರೆಸಿಕೊಂಡು, ಅಲ್ಲಿ ೬,೫೦,೦೦೦ ಎಕ್ರೆ ಸ್ಥಳವನ್ನು ಹತ್ತಿ ಬೆಳೆಯಿಸಲು ಜಾಪಾನಿಗೆ ಕೊಟ್ಟು, ಹಲವು ಸಾವಿರ ಜಾಪಾನೀಯರು ಅಲ್ಲಿ ಬಂದು ನೆಲಸುವಂತೆ ಮಾಡಲೂ ಒಪ್ಪಂದ ಕರಾರು ಮಾಡಿರುವರು. ಅದಾಗಲ್ಲದೆ, ಉಭಯ ಜನಾಂಗಗಳೊಳಗೆ ವಿವಾಹಗಳೂ ಆಗಬಹುದೆಂದೂ ಸಹ ಕರಾರಾಗಿದೆ.

ಇಟಲಿಯ ಆ ಜಾಪಾನಿನ ಕರಾರು, ಇವುಗಳ ನಡುವೆ ಇಂಗ್ಲೆಂಡಿನ ಮತ್ಸರಗಳು ಸಿಕ್ಕಿಬಿದ್ದರು. ತ್ಸಾನಾ ಸರೋವರದ ೧೯೦ ಗಾಗಿ ಅಬಿಸೀನಿಯದೊಡನೆ ನೇರದೆ ನಿರ್ವಾಹವಿಲ್ಲ, ಆದರೆ ಅದರೊಡನೆ ಜಾಪಾನಿನ ಹತ್ತೀ ಬೆಳೆಗೂ ಪ್ರೋತ್ಸಾಹವಾಗುತ್ತಿದೆ. ಇಟಲಿಗೆ ಅನುಕೂಲವಾದರೆ, ಲೀಗಿನ ರಗಳೆಗಳೂ ಇವೆ. ಮಾತ್ರವಲ್ಲ, ಜಗತ್ತಿನಲ್ಲಿ ಅಬಿಸೀನಿಯದ ಮೇಲೆ ಇದು ಅನ್ಯಾಯವಾದ ದಬ್ಬಾಳಿಕೆ ಎಂಬ ಅಭಿಪ್ರಾಯವನ್ನು ಇದಿರಾಗಬೇಕಾಗುತ್ತಿದೆ. ಜಾಪಾನು ಅಬಿಸೀನಿಯದೊಡನೆ ಸೇರಿ ಇತ್ತ ಯುದ್ಧರಂಗಕ್ಕೆ ಬರಲು, ಚೀನದಲ್ಲೇ ಸಾಕಷ್ಟು ಕೆಲಸವದಕ್ಕೆ ಉಳಿದೇ ಇದೆ. ಇಟಲಿಯು ಅಬಿಸೀನಿಯದಲ್ಲಿ ಮಾಡಲೆಳಸಿರುವ ಕಾರ್ಯವನ್ನು ಜಾಪಾನು ಚೀನದಲ್ಲಿ ಮಾಡುತ್ತಲೇ ಇದೆಯಷ್ಟೆ. ಚೀನದ ಸಮೀಪ್ಯವೇ ಜಾಪಾನಿಗೆ ಹೆಚ್ಚಿನಲ್ಲಿದೆ, ಅಬಿಸೀನಿಯದ ಸಾರೂಪ್ಯವಲ್ಲ.

ಈಗ ತಾನೆ, ಮುಂದಣ ಹೆಜ್ಜೆಯಿಡುವ ವೇಳೆ ಬಂದಿದೆ. ಇಷ್ಟರ ತನಕ ಅಲ್ಲಿ ಮಳೆಗಾಲವಿದೆ. ಇಥಿಯೋಪಿಯದ ದಂಡು ಅಷ್ಟು ಹಿಂದುಳಿದದೆಯಾದರೂ ವ್ಯರ್ಥವಲ್ಲ, ಇಟಲಿಯದೆಲ್ಲ ಅತ್ಯಾಧುನಿಕ ಮಾದರಿಯ ಸನ್ನಾಹವಾಗಿದೆ. ಆದರೆ, ಯುದ್ಧರಂಗಕ್ಕೆ ಬಹು ದೂರದಿಂದ ಮಾತ್ರ ಈ ಸನ್ನಾಹವು ಸೇರಬೇಕಾಗಿದೆ. ಯುದ್ಧಕ್ರಮವು ಕಾಡಾಡಿಗಳ ಅಲ್ಲಲ್ಲಿ ಗುಂಪುಕಟ್ಟಿ ನಡೆಸ ಯುದ್ಧವಾಗುವುದು. ಕರೀ ಜನರು ಅತಿ ಧೀರರೆಂದು ಜಗತ್ತಿನಲ್ಲೆಲ್ಲ ಖ್ಯಾತರು, ಅವರ ಸ್ತ್ರೀಯರೂ ಅವರಂತೆಯೇ ಪುರುಷಸಮಾನರಾಗಿ ಕಾದಾಡುವವರು. ಅವರಲ್ಲಿ ಧೈರ್ಯವಿದೆ, ದೇಶವಾತ್ಸಲ್ಯವಿದೆ, ನೈತಿಕ ಬಲವಿದೆ. ಆದರೂ ವಿಜ್ಞಾನಶಾಸ್ತ್ರದ ಪ್ರಬಲ ಶಕ್ತಿಯ ಎದುರು ಅವರೆಷ್ಟು ದಿನ ಕಾದಾಡುವರೋ ಎಂಬ ಸಂದೇಹವಿದೆ. ಪ್ರಕೃತಿಯೇ ಅವರನ್ನು ಸಂರಕ್ಷಿಸಬಹುದು, ದೇವರ ಇಚ್ಛೆಯೇ ಇವರಿಗೆ ಆಧಾರ.


**N.I.P.**

ಬ್ರೇಂಡ್ ಎಂಬ ಹೈಗ್ರೇಡ್

**ಪೆಟ್ರೋಲ್,**

**ಚಿಮಿಣಿ ಎಣ್ಣೆ ಮತ್ತು**

**ಡೀಸೆಲ್ ಎಣ್ಣೆ**

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲೂ ಜವಾಬ್ದಾರೀ ಏಜಂಟರಿಂದ ವಿಕ್ರಯಿಸಲ್ಪಡುತ್ತದೆ.

ಏಜನ್ಸಿ ಶರ್ತಗಳಿಗಾಗಿ ಕೆಳಗಣವರಿಗೆ ಬರೆಯಿರಿ –

**INTERNATIONAL OIL Co. Ltd.**

"JIJI HOUSE," RAVELIN ST., FORT,

**BOMBAY.**



## ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

**ಕ್ಷಯ ಸಂಹಾರಿ**

**KSHAYA SAMHARI**

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ದೇಹಪುಷ್ಟಿ ಗುಂದುವಿಕೆ, ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನಸ್ಖಲನ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು.

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4–8–0. 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿಮುಖೋದ ವರ್ಣಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

**The Uplifting Banking Corporation, Ltd. Bombay.**

**ದಿ ಅಪ್‌ಲಿಫ್ಟಿಂಗ್ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಬೊಂಬಾಯಿ.**

ಒಂದು ಸಲ ಮಾತ್ರ ರೂ. ೮ ತೆತ್ತಲ್ಲಿ-

1. ಮೆಂಬರನು ವಿಮೆಯಾಗಿಸಲ್ಪಡುವನು.
2. ವರುಷದೊಳಗೆ ಮದುವೆ ಮಾಡಿಕೊಂಡರೆ ಸಹಾಯ ಸಿಗುವುದು.
3. ಲಾಭಾಂಶ ಸಿಗುವ ಅನೇಕ ಸಂದರ್ಭಗಳಿವೆ.
4. ಬ್ಯಾಂಕ ಬಡ್ಡಿಗಿಂತ ಹೆಚ್ಚಿನ ಹಣ ಬಡ್ಡಿ ಸಮೇತ ವಾಪಸು ಸಿಗುವುದು.

ಚೀಫ್ ಏಜಂಟ್ ಉಡುಪಿ ಡಾಕ್ಟರ ಕೆ. ಶಿವರಾಯರಿಂದ ಹಣ ಸಲ್ಯಾಸಿ ಪಡೆಯಬಹುದು.

**ಸಬ್ ಏಜಂಟರು ಬೇಕು.**

---

**ಸಪಟ ಲೋಶನ್**

ಗಜಕರ್ಣ, ಹುಡುಗಜ್ಜಿ, ನಾಯಟಿ, ಇಸಬು ಮುಂತಾದ ಚರ್ಮ ರೋಗಗಳ ಮೇಲೆ ೩೪ ತಾಸಿನಲ್ಲಿ ಗುಣಮಾಡುವ ರಾಮಬಾಣ ಔಷಧಿ. ವಸ್ತ್ರಕ್ಕೆ ಕಲೆ ಬೀಳುವುದಿಲ್ಲ. ಬಾಟ್ಲಿ ೧ಕ್ಕೆ ಕಿಮ್ಮತ್ತು ೦-೬-೦. ಟ ಖರ್ಚು ಬೇರೆ. ಶಿಫಾರಸ್ಸಿನ ಇಂಗ್ಲೀಷ ಯಾ ಮರಾಠಿಯಲ್ಲಿ ಮಾಡಬೇಕು.

Sapat & Company, (S M)
Kalbadevi Road Bombay.

---

# ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ.

ವಿ-ಮೊ-ಲ

**VIM-O-LA**

**ಅಮೆರಿಕಾದ ಜೀವಸಾರ ವಸ್ತು.**

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲ ಕಾರೀ ಔಷಧಿ. ಹೊಟ್ಟೆಯಲ್ಲಿ ಬಿಂದಿ ನಂತೇಳುವ ವಾಯುವನ್ನೂ, ಅಜೀರ್ಣ ವನ್ನೂ ಕೂಡಲೇ ಗುಣಪಡಿಸುತ್ತದೆ. ನರ ಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯ ನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೊಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆ ಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

**"Vimola Depot"**

*Manufactured by*

American Herbal Products Co., Sole representatives for above medicine.

**The National Kanara News Agency,**
Sir Phirozsha Metha Road,
Fort Bombay.

---

**Shiromani Narayanacharya & Co.,**
Silk Lace & Cloth Manufacturers
*Choukhamba Benares City*

THIS MAN
OUR CUSTOMER

ಕೃಷ್ಣರಾಯರು:—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು. ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಧರಿಸಿರುವೆನು.

ಆನಂದರಾಯರು:—ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ.

ಕೃಷ್ಣರಾಯರು:—"ಅದರ ಕ್ರಯವೆಷ್ಟು?"

ಆನಂದರಾಯರು:—ಎಲ್ಲಾ ಕಡೆಗಳಿಗಿಂತ ಕೇವಲ 25 ಟಕಾ ಕಡಿಮೆ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ. ಕ್ರಯಕ್ಕೆ ತಕ್ಕ ಮಾಲು ಬಂದೀತು. ಜರಿ, ರಂಗು ಕೂಡಲಾದ ಶೀರೆಗಳು ಸಿಗುತ್ತವೆ. 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ. ದಡಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ. 45ರಿಂದ 150ರ ವರೆಗೆ, 16 ಮೊಳ ಪಡಲ್ಕಾಸಿನ ಶೀರೆ 1ಕ್ಕೆ ರೂ. 10ರಿಂದ 55ರ ವರೆಗೆ ರವಿಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ, ಬುಟ್ಟಿದಾರಿದ ರವಿಕೆ ಕಣ 1ಕ್ಕೆ ರೂ 8ರಿಂದ 10ರ ವರೆಗೆ 8 ಮೊಳದ ಸರಮಡಿ 1ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ ಜರಿ ಮಡಿ 1ಕ್ಕೆ ರೂ. 10ರಿಂದ 35ರ ವರೆಗೆ 5 ಮೊಳದ ಶಮಾಲ 1ಕ್ಕೆ ರೂ. 4ರಿಂದ 16ರ ವರೆಗೆ 6 ಮೊಳದ ಪಟಕಾ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ಮ್ಯಾಲುಗಳ ಕ್ರಯದ ಪಟ್ಟಿ ಇದೆ. 1 ಅಕ್ಷರ ಸ್ಪಷ್ಟವಿದ್ದು ಆರ್ಡರು ಕೊಡುವವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕಾಣಿಕೆಯಾಗಿ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ಕೇಳಿರಿ.

**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್**

---

**ಮುಂಬ್ಯಾಯಲ್ಲಿ—**

— ಸ್ವದೇಶಾಭಿಮಾನಿಯು ಬಿಡಿಸಂಚಿಕೆಗಳು ಸಿಗುವ ಸ್ಥಳ:

The National Kanara News Agency,
Sir Phirosha Metha Road,
Fort Bombay.

9/8

---

**೧೦೦ ರೂಪಾಯಿ ಬಹುಮಾನ**
**(ಮ್ಯಾಜಿಕ್ ಉಂಗುರ)**

ಬಹು ಶಕ್ತಿಯುತವಾದುದು; ಅಲ್ಲದೆ ಕಾಂತಿ ಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯಾಪಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ದೊಡ್ಡಂಥ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ವಾಪಸು ಮಾಡಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ, ಬೆಲೆ ರೂ. ೩ ಮಾತ್ರ.

೧೨.೫.೩. Bengal Mesmarism House
5-7 Panchpota, Bengal (s.n.)

---

**New Era Technical School.**
Near Market Square, Udipi.

Commercial classes-approved by the Madras Government-New session opens in June.

**ನ್ಯೂ ಈರಾ ಟೆಕ್ನಿಕಲ್ ಸ್ಕೂಲ್**
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)
ಇಲ್ಲಿ ಟ್ಯಾಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.


## ಮಂಗಳೂರಿನ ಪೇಟೆಧಾರಣೆ.

| ಸಾಮಗ್ರಿಗಳು | ಇಂದ | ವರೆಗೆ |
|---|---|---|
| | ರೂ. ಆ | ರೂ. ಆ |
| ರಾಶಿ ಅಕ್ಕಿ ... | 3—10 | 3—14 |
| ಮುಸ್ಟಕ ... | 4—0 | 4—8 |
| ಗುಡ್ಡು ... | 3—12 | 4—2 |
| ಊರ ಅವ್ವಲ್ ಬೆಳ್ತಿಗೆ ... | 4—10 | 5—0 |
| ರಂಗೂನು ಬೆ. ಗೋ. ೧ಕ್ಕೆ .. | 6—4 | 6—14 |
| ಎಲ್ಲೂರು ಬೆ. ಗೋ. ೧ಕ್ಕೆ ... | 4—4 | 4—8 |
| ಗೋದಿ ಗೋಣಿ ೧ಕ್ಕೆ ... | 10—0 | 12—8 |
| ತೊಗರಿ ಗೋಣಿ ೧ಕ್ಕೆ ... | 10—8 | 11—0 |
| ಹುರುಳಿ ಗೋಣಿ ೧ಕ್ಕೆ .. | 7—8 | 7—10 |
| ಕಡಲೆ ಗೋಣಿ ೧ಕ್ಕೆ ... | 7—8 | 10—8 |
| ತೊಗರಿಬೇಳೆ ಗೋಣಿ ೧ಕ್ಕೆ ... | 10—0 | 17—0 |
| ಉದ್ದು ಗೋಣಿ ೧ಕ್ಕೆ ... | 8—0 | 8—8 |
| ಹೆಸರು ಗೋಣಿ ೧ಕ್ಕೆ .. | 9—4 | 9—12 |
| ಕಾಡುಬೆಲ್ಲ ಖಂಡಿ ೧ಕ್ಕೆ | 40—8 | 41—8 |
| ಉಪ್ಪು ಗೋಣಿ ೧ಕ್ಕೆ ... | 4—10 | 5—0 |
| ಕೊಬ್ರಿ ಖಂಡಿ ೧ಕ್ಕೆ .. | 48—0 | 55—0 |
| ಕೊಬ್ರಿ ಹೋಳಿ ಖಂಡಿ ೧ಕ್ಕೆ ... | 23—8 | 24—0 |
| ಎಳ್ಳೆಣ್ಣೆ ಖಂಡಿ ೧ಕ್ಕೆ .. | 30—0 | 31—4 |
| ಕೊಬ್ರಿ ಎಣ್ಣೆ ಮಣ ೧ಕ್ಕೆ ... | 4—4 | 5—4 |
| ಎಳ್ಳೆಣ್ಣೆ ಮಣ ೧ಕ್ಕೆ .. | 5—2 | 6—0 |
| ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ. | 5—8 | 5—12 |
| ಮೋರಿಸ ಸಕ್ಕರೆ ಮ. ೧ಕ್ಕೆ. | 3—11 | 3—12 |
| ಮೆಣಸು ... | 8—8 | 5—0 |
| ಸಾಸಿವೆ ಮುಡಿ ೧ಕ್ಕೆ ... | 5—12 | 6—0 |
| ಕಾಳುಮೆಣಸು ಖ. ೧ಕ್ಕೆ ... | 100—0 | 110—0 |
| ಮೆಂತ್ಯೆಬೀಜ ಮಣ೧ಕ್ಕೆ ... | 34—0 | 35—0 |
| ಗೇರುಬೀಜ ಮು. ೧ಕ್ಕೆ .. | 4—8 | 4—12 |
| ಕಬ್ಬಿಣ ಖಂಡಿ ೧ಕ್ಕೆ ... | 39—0 | 39—8 |
| ತಾಂಬ್ರತಗಡು ಮ. ೧ಕ್ಕೆ ... | 10—4 | 10—5 |
| ತಾಂಬ್ರಪಾತ್ರಗಳು ಮ. ೧ಕ್ಕೆ | 11—0 | 12—0 |
| ಜೀರಿಗೆ ಸೇರು ೧ಕ್ಕೆ ... | 17—0 | 18—0 |
| ಹಿತ್ತಾಳೆ ತಗಡು ಮ. ೧ಕ್ಕೆ ... | 8—12 | 9—0 |
| ಶಿವಸು ೧ಕ್ಕೆ ... | 22—6 | 22—8 |
| ಮುಂಡುಹುಳಿ ಖಂಡಿ ೧ಕ್ಕೆ | 20—0 | 25—8 |
| ಸೀಲೋನ್ ಕಾಫಿ ಖಂಡಿ ೧ಕ್ಕೆ | 160—0 | 170—0 |
| ಪ್ಲಾಂಟ್ ಕಾಫಿ ಖಂಡಿ ೧ಕ್ಕೆ ... | 210—0 | 215—0 |
| ಮುರಿಕೇರಿ ಹಲಸು ... | 24—0 | 25—8 |
| ಸೆಲೇಕ್ಷನ್ ಹಲಸು ... | 28—0 | 30—0 |


LOOK SHARP! LOOK AHEAD

**Murdeshwar's Banking Institute.**

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

**Ladies are also admitted.**

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

*For further particulars apply to:—*

D. R. Murdeshwar,
Dip. Econ, F. R. Econ; S. (Lond.)
Principal.
Gunapathy High School Street,
Mangalore.

---

# ಬೇಕಾಗಿದ್ದಾರೆ

ನಮ್ಮ ಕಂಪೆನಿಗೆ ಕನ್ನಡನಾಡಿನಲ್ಲಿ ಏಜಂಟರುಗಳು ಬೇಕಾಗಿರುವರು. ಅವರಿಗೆ ಕನ್ನಡ ಮತ್ತು ಇಂಗ್ಲೀಷ್‌ಗಳ ಪರಿಚಯವಿರಬೇಕು. ವ್ಯಾಪಾರದಲ್ಲಿ ಸರಿಯಾದ ಅನುಭವವೂ ಇರಬೇಕು. ಪ್ರೌಢ ನುಡಿಗಳಿಂದ ಜನರ ಮನವೊಲಿಸುವ ವಿಚಕ್ಷಣಶಾಲಿಗಳಾಗಿರಬೇಕು. ತಿಂಗಳಿಗೆ ಕಡಿಮೆಯಿಲ್ಲದೆ ೧೦೦೦ ರೂಪಾಯಿಗಳ ನಮ್ಮ ಮಾಲನ್ನು ತಪ್ಪದೆ ವಿಕ್ರಯಿಸಬೇಕು, ಯಾವಾಗ ಬೇಕಾದರೂ ಒಂದು ಸಾವಿರ ರೂಪಾಯಿಗಳ ಮಾಲನ್ನು ಕೊಡುತ್ತೇವೆ. ಎಷ್ಟು ಖರ್ಚಾಗುತ್ತದೋ ಅಷ್ಟನ್ನು ವಿಕ್ರಯಿಸಿ, ಉಳಿದುವುಗಳನ್ನು ಹಿಂದೆ ಕೊಟ್ಟು ಬೇರೆಯವುಗಳನ್ನು ಪಡೆಯಬಹುದು. ಏಜಂಟರಾಗುವವರು 1025 ರೂ. ಗಳ ನಗದು ಜಾಮೀನ್ ಕೊಡಬೇಕು. ಆ ಹಣಕ್ಕೆ ನೇಕಡಾ ೬ರಂತೆ ಬಡ್ಡಿಯನ್ನು ಕಂಪೆನಿಯು ಕೊಡುವುದು. ಏಜಂಟರಾಗುವವರಿಗೆ ರೂ. 50 ಸಂಬಳ, 20 ರೂಪಾಯಿ ಬತ್ತೆ, ಹೆಚ್ಚು ಮಾಲು ವಿಕ್ರಯಿಸಿದರೆ ತಕ್ಕ ಬೋನಸ್ ಕೊಡಲಾದೀತು. ವ್ಯಾಪಾರವು ತಿಂಗಳಿಗೆ ಸಾವಿರ ರೂಪಾಯಿಗಳಿಗೆ ಕಡಿಮೆಯಾಗಲೇ ಬಾರದು. ಹೆಚ್ಚಿನ ವಿವರಗಳಿಗೆ—

S. U. Narayanacharya & Co.,
Embroidery Silk Manufacturers,
Benares City.

9/8


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಆಶ್ವೀಜ ಶು|| ೧ ಶನಿವಾರದಿಂದ ಆಶ್ವೀಜ ಶು|| ೭ ಶುಕ್ರವಾರದ ಪರ್ಯಂತದ ಪಂಚಾಂಗ. (೧೯೩೫ನೇಯ ಕನ್ಯಾ ನಿರಾಯಣ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ವಿಶೇಷ |
|---|---|---|---|---|---|---|---|
| 28 | ಶನಿ | ೧ | ೪೮ | ಹಸ್ತ | ೪೬ | ೧೧ | ನವರಾತ್ರಿ |
| 29 | ರವಿ | ೨ | ೪೩ | ಚಿತ್ತಾ | ೫೩ | ೧೨ | |
| 30 | ಸೋಮ | ೩ | ೫೫ | ಸ್ವಾತಿ | ೫೬ | ೧೪ | |
| 1 | ಮಂಗಳ | ೪ | ೫೬ | ವಿಶಾಖಾ | ೬೦ | ೧೪ | |
| 2 | ಬುಧ | ೫ | ೫೬ | ಅನುರಾಧಾ | ೬೦ | ೧೫ | |
| 3 | ಗುರು | ೬ | ೫೫ | ಅನುರಾಧಾ | ೩೫ | ೧೬ | |
| 4 | ಶುಕ್ರ | ೭ | ೫೪ | ಜ್ಯೇಷ್ಠಾ | ೨ | ೧೭ | |

# ಇಟಲಿಯು ತನ್ನ ಛಲವನ್ನು ಬಿಡುವಹಾಗಿಲ್ಲ.

**ಇಟಲಿಯಿಂದ ಸೈನಿಕರ ತಂಡಗಳು ಆಫ್ರಿಕಾದಲ್ಲಿ ಬಂದು ಇಳಿಯುತ್ತಿವೆ. ಅಬಿಸೀನಿಯದ ತರುಣಸೈನಿಕರ ಯುದ್ಧದ ಉತ್ಸಾಹದಿಂದ ಯುದ್ಧವು ಪ್ರಾರಂಭವಾಗಲು ಕಾರಣಗಳಿವೆ**

## ಜನಾಂಗಸಭೆಯ ಕಾರ್ಯವು ವ್ಯರ್ಥವಾಗಬಹುದು!

## ಎಲ್ಲೆಲ್ಲೂ ಘೋರಯುದ್ಧದ ಸಿದ್ಧತೆಗಳು ನಡೆಯುತ್ತಿವೆ.

### ಬ್ರಿಟನು ತಮ್ಮ ಭದ್ರತೆಗಾಗಿ ತಕ್ಕ ಸಿದ್ಧತೆಗಳನ್ನು ಮಾಡುತ್ತಿದೆ.

### ಅಬಿಸೀನಿಯಾವನ್ನು ದಣಿಸಲು ಇಟಲಿಗೆ ಸಬ್‌ಮೆರೀನುಗಳು ಅಗತ್ಯವೆ?

ಫ್ರಾನ್ಸು ಈಗ ಬಿಕ್ಕಟ್ಟಿನ ಸದುಸ್ಥಿಯಲ್ಲಿ ಸಿಲುಕಿಕೊಂಡಿರುವುದೆಂದು ಆಂಗ್ಲೇಯರೊಬ್ಬನ ಹೇಳಿಕೆ "ಅದ್ಭುತ ಒಬಾರ್ ಪತ್ರಿಕೆ"ಯಲ್ಲಿ ಅವನು ಈ ರೀತಿ ತನ್ನ ಅಭಿಪ್ರಾಯವನ್ನು ಸೂಚಿಸುತ್ತಾನೆ – "ಯಾರ ಗೊಡವೆಗೂ ನಾವು ಹೋಗುವವರಲ್ಲ – ಎಂಬ ಜರ್ಮನಿಯು ಫ್ರಾನ್ಸಿನ ಮೇಲೆ ಹೊಂಚುಹಾಕುತ್ತಲಿದೆ ಸಂದಿಗ್ಧ ಸಮಯವು ಸನ್ನಿಹಿತವಾದೊಡನೆಯೇ ತನ್ನ ಘೋರರೂಪವನ್ನು ತೋರಿ ಫ್ರಾನ್ಸನ್ನು ನುಂಗುವುದರಲ್ಲಿದೆ ಆಗ ಆಂಗ್ಲೇಯರ ಬೆಂಬಲವಿಲ್ಲದೆ ಅದು ಜೀವಿಸುವುದು ಕಷ್ಟ ಆಂಗ್ಲೇಯರ ಬೆಂಬಲವು ಫ್ರಾನ್ಸಿಗೆ ಬೇಕಾದರೆ ಇಟಲಿಯ ದರ್ಪವನ್ನು ಕೊನೆಗಾಣಿಸಲು ಅದು ಆಂಗ್ಲೇಯರ ಪಕ್ಷವನ್ನು ವಹಿಸಬೇಕು ಒಂದು ವೇಳೆ ಫ್ರಾನ್ಸು ಅದಕ್ಕೊಪ್ಪದೆಯಿದ್ದರೆ, ಅಬಿಸೀನಿಯಾ ಜೊತೆನೆ ದೀರ್ಘಕಾಲ ಯುದ್ಧ ಮಾಡಿದ ಇಟಲಿಗೆ ಫ್ರಾನ್ಸನ್ನು ಜರ್ಮನಿಯ ದವಡೆಯೊಳಗಿಂದ ರಕ್ಷಿಸಲು ಸಾಧ್ಯವಾದೀತೆ? ನಿಶ್ಚಯವಾಗಿಯೂ ಇಲ್ಲ! ಅದರಿಂದ ಇಟಲಿಯ ಮೈತ್ರಿಯನ್ನು ಬೆಳೆಸಿದರೆ ಫ್ರಾನ್ಸಿನ ಅವಸ್ಥೆಯು ಶೋಚನೀಯವಾದೀತು. ಅಂತೂ ಜರ್ಮನಿಯು ಇಟಲಿ ಅಬಿಸೀನಿಯಾಗಳ ಯುದ್ಧದ ಪೂರ್ವದಲ್ಲೇ ಫ್ರಾನ್ಸಿನ ಮೇಲೆ ಧಾಳಿ ನಡೆಸಿದರೆ, ಆಗ ಇಟಲಿಯು ಫ್ರಾನ್ಸಿಗೆ ಸಹಾಯವೀಯಲು ಸಿದ್ಧವಿದೆಯೋ ಎಂಬ ಇನ್ನೊಂದು ಪ್ರಶ್ನೆ.

× × × × × ×

ಇನ್ನೊಂದು ಉತ್ತರವು ಫ್ರಾನ್ಸಿನ ಜೀವವನ್ನೇ ಹಿಂಡುವುದರಲ್ಲಿದೆ ಆಂಗ್ಲೇಯರ ಸಲಹೆಯನ್ನು ತಿರಸ್ಕರಿಸಿ ಇಟಲಿಯನ್ನು ಅಬಿಸೀನಿಯಾದ ಮೇಲೆ ದಂಡೆತ್ತಿ ಹೋಗಲು ಬಿಟ್ಟುಬಿಟ್ಟರೆ ಇದರ ಪರಿಣಾಮವಾಗಿ ಬೇರೆಡೆಗಳಲ್ಲಿ ಇತರ ಜನಾಂಗಗಳೊಳಗೆ ಯುದ್ಧವು ಪ್ರಾರಂಭವಾಗಬಹುದು ಹೆಚ್ಚಾಗಿ ಇದು ಆಫ್ರಿಕದಲ್ಲೇ ಸಂಘಟಿಸಬಹುದು. ಕಾರಣ, ಅನೇಕ ಜನಾಂಗದವರು ಅಲ್ಲಿ ತಮ್ಮ ವಸಾಹತುಗಳನ್ನು ನಿರ್ಮಿಸಿರುತ್ತಾರೆ ಎಲ್ಲರ ಕೋಪಕ್ಕೆ ಗುರಿಯಾದ ಫ್ರಾನ್ಸು, ಇವರ ನಡುವೆ ಸಿಲುಕಿ ಬೆಂದು ಬಸವಳಿದು ಹೋಗದೇ? ಒಂದು ಕಡೆಯಿಂದ ಜರ್ಮನಿಯ ಉಪಟಳ, ಇನ್ನೊಂದು ಕಡೆಯಿಂದ ಆಫ್ರಿಕದ ಇನ್ನಿತರ ಜನಾಂಗದವರ ಬಾಧೆ ಹೀಗೆ ಉಭಯಪಕ್ಷಗಳಿಂದಲೂ ಏಟುಗಳನ್ನು ತಿನ್ನುವಾಗ್ಯೂ ಇಟಲಿಗೆ ಅವನ್ನು ಕಾಪಾಡುವಷ್ಟು ತ್ರಾಣವಿದೆಯೇ? ಅಬಿಸೀನಿಯಾದೊಡನೆ ಹೋರಾಡಿ ನಿರ್ಬಲವಾದ ಇಟಲಿಯು ಫ್ರಾನ್ಸಿನ ದುಃಖದಲ್ಲಿ ಸಹಭಾಗಿಯಾಗುವುದಾದರೂ ಹೇಗೆ? ಇವೆಲ್ಲವನ್ನೂ ಪರ್ಯಾಲೋಚಿಸುವಾಗ, ಇಂಗ್ಲೆಂಡು ಫ್ರಾನ್ಸಿನ ಭಾಗ್ಯ ಅಥವಾ ದೌರ್ಭಾಗ್ಯವನ್ನು ತನ್ನ ಕೈಮುಷ್ಟಿಯಲ್ಲಿ ಹಿಡಿದುಕೊಂಡಿದೆ ಎಂಬುದರಲ್ಲಿ ಸಂಶಯವಿಲ್ಲ ಇಂಗ್ಲೆಂಡು ಕೈಬಿಟ್ಟರೆ ಫ್ರಾನ್ಸಿನ ಸರ್ವನಾಶ ಇಲ್ಲವಾದರೆ, ಅದರ ಭಾಗ್ಯೋದಯ ಬರುವ ಜನಾಂಗ ಸಂಘದ ಸಭೆಯಲ್ಲಿ ಇಂಗ್ಲೆಂಡು ಫ್ರಾನ್ಸಿನ ನಿರ್ಣಯವನ್ನು ತಿಳಿಯಲಪೇಕ್ಷಿಸುತ್ತದೆ ಅದರ ನಂಬಿಗೆ ಒಂದೇ ಸ್ವರ, "ಇಟಲಿಯ ದರ್ಪವನ್ನು ಮುರಿಯಲು ನಮ್ಮೊಡನೆ ಸಹಕರಿಸದಿದ್ದರೆ ಮುಂದೆ ನಿಮಗೆ ವಿಪತ್ತು ಒದಗಿದಾಗ ನಾವು ಬೆಂಬಲವೀಯಲಿಕ್ಕಿಲ್ಲ ಇದು ನಿಶ್ಚಯ!

× × × × × ×

ತನ್ನನ್ನು ಕಷ್ಟಗಳಿಂದ ವಿಮುಕ್ತನನ್ನಾಗಿ ಮಾಡಲು ಇಂಗ್ಲೆಂಡಿನ ವಿನಹ ಮತ್ತಾರಿಗೂ ಸಾಧ್ಯವಿಲ್ಲವೆಂದು ಇಂಗ್ಲೆಂಡನ್ನು ಸೇರಿದರೆ ಜನಾಂಗಸಂಘದ ಹೇಳಿಕೆಯ ಮೇರೆಗೆ, ಬ್ರಿಟನರ ಅಧಿಪತ್ಯದಲ್ಲಿದ್ದ ಸುಯೆಜ್ ಕಾಲುವೆಯನ್ನು ಬಂದುಮಾಡಿ ತಮ್ಮ ನಾವಿಕದಳದಿಂದ ಇಟಲಿಯ ನಾವಿಕದಳವನ್ನು ಮುಂದೆ ಹೋಗಗೊಡದಂತೆ ಸಾಧಿಸಬಹುದು, ಭೂಮಧ್ಯ ಸಾಗರದಿಂದಾಗಿ ಬರುವ ಇಟಲಿಯ ನೌಕಾಸೈನ್ಯವು ಬಹು ಬಿಗುವಾಗಿದ್ದರು, ಇಂಗ್ಲೆಂಡು ಫ್ರಾನ್ಸುಗಳ ಒಕ್ಕಟ್ಟಿನ ಫಲವಾಗಿ ಅದಕ್ಕೆ ಮುಂದರಿಯಲು ಸಾಧ್ಯವಾಗಲಿಕ್ಕಿಲ್ಲ ಇದರಿಂದಾಗಿ ಅಬಿಸೀನಿಯಾವನ್ನು ನೌಕಾಸೇನೆಯಿಂದಾಗಿ ಮುತ್ತುಸಬೇಕೆಂಬ ಅವರ ಹವಣಿಕೆಯು ನಿಷ್ಪ್ರಯೋಜನವಾಗುವುದು

× × × × × ×

ಹೀಗಾದರೆ ಬ್ರಿಟಿಷ ಮತ್ತು ಫ್ರಾನ್ಸ್ ಜನಾಂಗಕ್ಕೆ ಇನ್ನೊಂದು ಕಾರ್ಯಭಾಗಕ್ಕೆ ಕೈಯೊಡ್ಡಬೇಕಾಗಿ ಬರುವುದು. ಇದನ್ನೆಲ್ಲವನ್ನು ತಿಳಿದ ಇಟಲಿಯು ಅಬಿಸೀನಿಯವು ತಮಗೆ ಸ್ವಲ್ಪ ಸ್ಥಳವನ್ನು ಬಿಟ್ಟುಕೊಡುವುದಾದರೆ ನಾವು ನಮ್ಮ ಯುದ್ಧವನ್ನು ನಿಲ್ಲಿಸುವವರಾಗಿ ಹೇಳಲೂ ಸಾರು ಆದರೆ ಅಬಿಸೀನಿಯಕ್ಕೆ ಇದು ಒಲ್ಲದು ಉಭಯ ಪಕ್ಷೀಯ ಕ್ಷೇಮಕ್ಕಾಗಿ ಅಬಿಸೀನಿಯವು ಇದಕ್ಕೆ ತನ್ನ ಒಪ್ಪಿಗೆಯನ್ನು ಕೊಡುವುದು ಎಷ್ಟೋ ಒಳಿತಾಗಿಯುತ್ತಿದೆ ಒಪ್ಪಿಗೆ ಕೊಡದೆ ಇದ್ದರೆ ಇಟಲಿಯು ಸುಮ್ಮನೆ ಕುಳಿತುಕೊಳ್ಳಲಾರದು, ಒಂದುವೇಳೆ ಅಬಿಸೀನಿಯಕ್ಕೆ ಯಾರೂ ಸಹಾಯ ಕೊಡದಿದ್ದಲ್ಲಿ ಬಲವಂತ ಇಟಲಿಯು ಅಬಿಸೀನಿಯಾವನ್ನು ಧ್ವಂಸಗೊಳಿಸಿ ತನ್ನ ಸತ್ತೆಯನ್ನು ಅಲ್ಲಿ ಸ್ಥಾಪಿಸುವುದು. ಇದರಿಂದಾಗಿ ಉಳಿದ ರಾಷ್ಟ್ರಗಳಿಗೆ ತುಂಬಾ ಹಾನಿಯೊದಗುವುದು ಯುದ್ಧದಲ್ಲಿ ಮಡಿದವರೇನೊ ವೀರಸ್ವರ್ಗವನ್ನೈದುವ, ಉಳಿದವರು ಎಂಥಾ ಪ್ರಕಾರ ತಮ್ಮ ಜೀವಿತವನ್ನು ತೋರಿಸದೆ ಬಿಡಲಾರರು!

× × × × × ×

ಫ್ರಾನ್ಸ್ ಇಂಗ್ಲೆಂಡಿನ ಪಕ್ಷವನ್ನು ಸೇರಿದ್ದಲ್ಲಿ ಇಷ್ಟೆಲ್ಲಾ ಭಯಂಕರ ಅನಾಹುತಗಳು ತಲೆದೋರದೆ ಫ್ರಾನ್ಸು ಇಂಗ್ಲೆಂಡೊಂದೇ ಇಟಲಿಯನ್ನು ಎದುರಿಸಲು ಸಿದ್ಧವಿಲ್ಲ ಇಟಲಿಯ ಪ್ರಚಂಡ ಸೈನ್ಯವನ್ನು ತಡೆಗಟ್ಟಲು ಇಂಗ್ಲೆಂಡಿಗೆ ಧೈರ್ಯಸಾಲದು ಒಂದುವೇಳೆ ಅಷ್ಟು ಸಾಹಸ ಮಾಡಿದರೂ ಅದು ತನಗಾಗಿಯೇ ಮುಂದರಿಯದು ಅದ್ದರಿಂದ ಇಟಲಿ ಅಬಿಸೀನಿಯಾಗಳೊಳಗಿನ ಯುದ್ಧವು ಇಂಗ್ಲೆಂಡ ಫ್ರಾನ್ಸ್ ದೇಶಗಳ ಮೇಲೆ ಹೊಂದಿಕೊಂಡಿದೆ ಫ್ರಾನ್ಸ್ ಒಪ್ಪದಿದ್ದರೆ ನಿರೀಕ್ಷಿತ ಅಪಘಾತಗಳು ಸಂಭವಿಸುವವು ಒಪ್ಪಿದರೆ ಯುರೋಪಖಂಡದಲ್ಲಿ ಎಲ್ಲವೂ ಶಾಂತವಾಗುವುದರಲ್ಲಿ ಸಂದೇಹವಿಲ್ಲ, ಇದಲ್ಲದೆ ಫ್ರಾನ್ಸಿಗೆ ಭವಿಷ್ಯದಲ್ಲಿ ಒಂದು ಊರುಗೋಲು ಸಿಕ್ಕಿದಹಾಗೆ ಆಯಿತು ಆದರೆ ಇಟಲಿಯು ತನ್ನ ಕಾರ್ಯಭಾಗದಲ್ಲಿ ಹಾನಿಯನ್ನು ತಂದೊಡ್ಡಿದ ಫ್ರಾನ್ಸಿನ ಮೇಲೆ ರೇಗಿಬೀಳಬಹುದು ಅಬಿಸೀನಿಯಾದ ಹಟ್ಟಿದಗಿಸಲು ಹೇರಳ ಧನವನ್ನು ವ್ಯಯಮಾಡಿ ಸಿದ್ಧಗೊಳಿಸಿದ ಸೈನ್ಯವನ್ನೂ ಸಮರಸನ್ನಾಹವನ್ನೂ ನಷ್ಟಗೊಳಿಸಬೇಕೆಂದರೆ ಯಾರಿಗೆ ತಾನೇ ಹೊಟ್ಟೆಯುರಿ ಬರಲಿಕ್ಕಿಲ್ಲ? ಹಾಗಾದರೆ ಅಬಿಸೀನಿಯದ ಸಂಧಾನದ ಯುದ್ಧವು ಹೋಗಿ ಇದೊಂದು ಪ್ರಚಂಡ ಯುದ್ಧವೇ ಸಂಭವಿಸಬಹುದು ಕಾರಣ, ಫ್ರಾನ್ಸಿನ ಮೇಲೆ ಇಟಲಿಯು ಧಾಳಿನಡೆಸಿದರೆ ಉಳಿದ ರಾಷ್ಟ್ರಗಳವರು ಅದಕ್ಕೆ ಸಹಾಯವನ್ನೀಯಲು ಬರಬೇಕಾಗುತ್ತದೆ. ಜಗತ್ತೇ ಯುದ್ಧಕಾಪ್ರಾಣ್ಯದಲ್ಲಿ ಸೇರಬೇಕಾದೀತು!

× × × × × ×

ದೀರ್ಘದರ್ಶಿಗಳು ಇಟಲಿಯು ತನ್ನ ಆತ್ಮಘಾತವನ್ನು ತಾನೇ ಮಾಡಿಕೊಳ್ಳುತ್ತದೆಂಬುದಾಗಿ ಭಾವಿಸದೆ ಬಿಡಲಿಕ್ಕಿಲ್ಲ ಇಲ್ಲವಾದರೆ ಅಷ್ಟು ದೊಡ್ಡ ಒಕ್ಕಟ್ಟಾದ ಜನಾಂಗಗಳ ಸೈನ್ಯಗಳೊಡನೆ ಇಟಲಿಯು ಹೋರಾಡುವುದು ಸರಿಯೇ? ಸಾಧ್ಯವೆ? ಅದು ಇಟಲಿಗೆ ಆನೆಯೊಂದು ಇಲಿಯು ಸಿಂಹದೊಡನೆ ಯುದ್ಧಕ್ಕೆ ತೆರಳಿದ ಹಾಗೆ ಆದೀತು. ಆದುದರಿಂದ ಬೇರಾವ ಅಗಾಧವೂ ನಗಣ್ಯವೂ ಆದ ಉದ್ದೇಶವೂ ಸಾಹಸವೂ ಇಲ್ಲದೆ ಇಟಲಿಯು ಹಾಗೆ ಮಾಡಲಿಕ್ಕಿಲ್ಲ ಆದರೆ, ಕೆಲವೊಂದು ವೇಳೆ ಹಾಗೆ ತಿಳಿವಿಲ್ಲದೆ ಕೋಪಾತಿರೇಕದಿಂದ ಹಾಗೆ ಮಾಡಿ ಪತನವನ್ನೈದುವುದೂ ಉಂಟು ಒಂದೊಂದು ಸಲ ಅದರಲ್ಲಿ ಜಯವು ಲಭಿಸುವುದೂ ಉಂಟು. ಹಾಗಾಗದಿರಲಿಕ್ಕಿಲ್ಲವೆಂದು ಭರವಸೆ. ಆದರೆ ಮಾತ್ರ, ಫ್ರಾನ್ಸಿಗೂ ಅದಕ್ಕೆ ಬೆಂಬಲವಿತ್ತ ಇಂಗ್ಲೆಂಡಿಗೂ ತುಂಬಾ ಹಾನಿಯಿದೆ

---

## ಪಂಜಾಬಿನ ಕಾಂಗ್ರೆಸ್ಸಿನವರು ೧ ಲಕ್ಷ ರೂಪಾಯಿಗಳನ್ನು ಗಳಿಸುವರು.

### ಮುಂದಿನ ಚುನಾವಣೆಯ ಖರ್ಚಿಗಾಗಿ.

ನ್ಯಾಯವಿಧಾಯಕ ಸಭೆಯ ಚುನಾವಣೆಯಲ್ಲಿ ಭಾಗವಹಿಸಬೇಕೆಂಬ ನಿರ್ಣಯವನ್ನು ಅ। ಭಾ। ಕಾಂಗ್ರೆಸ್ಸ ಕಮಿಟಿಯ ಸಮ್ಮತದ ಮೇಲೆ ಆಧರಿಸಿ ಅಲ್ಲಿನ ಪ್ರಾಂತಿಕ ಕಾ। ಕಮಿಟಿಯವರು ಮಾಡಿರುತ್ತಾರೆ ಈ ಕಾರ್ಯಕ್ಕೆ ಬೇಕಿನ ಹಣವು ಬೇಕಾಗಿರುವುದರಿಂದ ೧ ಲಕ್ಷ ರೂಪಾಯಿಗಳನ್ನು ಒಟ್ಟುಗೂಡಿಸಲು ನಿರ್ಧಾರವನ್ನು ಮಾಡಿರುವರು

---

## ಬಂಕಿಯ ಮೇಲೆ ನಡೆದನು!

### ಅಗ್ನಿನಾರಾಯಣನೇನೊ

ಖುದಾಬಕ್ಷ ಎಂಬ ೨೯ ವರ್ಷ ಪ್ರಾಯದ ಕಾಶ್ಮೀರಿಯೊಬ್ಬನು ಈಗ ಇಂಗ್ಲೆಂಡಿನಲ್ಲಿರುವನು. ಭಾರತದ ಅನೇಕ ಭಾಗಗಳಲ್ಲಿ ಬೆಂಕಿಯ ಮೇಲೆ ನಡೆಯುವ ಅದ್ಭುತ ಕೌಶಲವನ್ನು ಇವನು ಕೆಲವು ಜನ ಇಂಗ್ಲೀಷ ಪಂಡಿತರೆದುರ ಮಾಡಿ ತೋರಿಸುವನು. ಸರ್ರೆ ಜಿಲ್ಲೆಯ ಕಾರ್ಲಟನ್ ಎಂಬ ಊರಿನಲ್ಲಿ ಈ ತಿಂಗಳು ೧೭ನೇ ತಾರೀಕಿನ ದಿನ ಈ ಅಗ್ನಿಪರೀಕ್ಷೆಯು ನಡೆಯಿತು [illegible] ಉದ್ದವಾದ ಒಂದು ಗುಳಿಯನ್ನು ಅಗೆದು ಅದರಲ್ಲಿ ಎರಡು ಟನ್ ಗಂಧದೆಯನ್ನು ಹಾಕಿದ್ದ ಖುದಾಬಕ್ಷನು ಮೊದಲು ಕೆಲವು ದಿನಗಳ ತನಕ ಉಪವಾಸ ಮಾಡಿ ಅಗ್ನಿಕುಂಡವನ್ನು ಪ್ರವೇಶಿಸುವಾಗ ಪದ್ಧತಿಯಂತೆ ಅರಸಿನ ಬಣ್ಣದ ಉಡುಗೆಯನ್ನು ಧರಿಸಿದನು ಬೆಂಕಿಯ ಮೇಲೆ ಖುದಾಬಕ್ಷನ ನಿಧಾನವಾಗಿ ದೇಹಾದಷ್ಟು ಸಲ ನಡೆದನು. [illegible] ಆಂಗ್ಲ ಡಾಕ್ಟರರು ಇವನ [illegible] ನೋಡಿದರು

---

## ಭಯಂಕರ ಮಲೇರಿಯಾ!

### 1 ಮಿಲ್ಲಿಯ ಜನರು ಸಾಯುತ್ತಿರುವರು

ಹಿಂದೂದೇಶದಲ್ಲಿ ಮಲೇರಿಯಾದಿಂದಾಗಿ ವರ್ಷಂಪ್ರತಿ ಒಂದು ಮಿಲ್ಲಿಯ ಜನರು ಸಾಯುತ್ತಿರುವರು ಮಲೇರಿಯಾವನ್ನು ನಿರ್ಮೂಲಗೊಳಿಸುವ ಪ್ರಯತ್ನಗಳು ಎಲ್ಲಾ ಕಡೆಗಳಲ್ಲಿ ನಡೆಯುತ್ತಿವೆ. ಅನೇಕ ತರದ ಔಷಧಗಳನ್ನು ಕಂಡುಹಿಡಿದಿದ್ದಾರೆ ಆದರೆ ಮರಣ ಸಂಖ್ಯೆಯು ಕಡಿಮೆಯಾಗುದಿಲ್ಲ ಇದರ ಕಾರಣವೇನು? ಸೊಳ್ಳೆಗಳೇ ಮಲೇರಿಯಾ ಜ್ವರಕ್ಕೆ ಮುಖ್ಯ ಕಾರಣವೆಂದು ಇಂಗ್ಲಾಂಡಿನ ಪ್ರಸಿದ್ಧ ರೊನಾಲ್ಡ್ ರೋಸ್ ಎಂಬ ಮಹನೀಯರು ಕಂಡುಹಿಡಿದಿರುವರು. ಹಿಂದೂದೇಶದ ಯಾವತ್ತೂ ಹಳ್ಳಿಗಳಲ್ಲಿ ಶುಚಿತ್ವದ ಕತ್ವದ ಮಹತ್ವವು ತಿಳಿಯದೆ ಎಲ್ಲೆಲ್ಲಿಯೂ ಕರಂಡಿಯ ಕಸ್ಟೂಲಗಳು ರಾಶಿಬಿದ್ದು ಸೊಳ್ಳೆ ಸೃಷ್ಟಿಯಾಗುತ್ತದೆ. ಜನರ ಅಲಕ್ಷ್ಯವೇ ಇದಕ್ಕೆ ಕಾರಣವಾಗಿದೆ ಸೊಳ್ಳೆಗಳ ನಾಶವಾದರೆ ಮಲೇರಿಯಾವು ತಪ್ಪುವುದು, ಜನರು ಶುಚಿತ್ವದ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡತಕ್ಕದು ಎಂದು ಡಾ। ಎಂ. ಓ. ಟಿ. ಅಯ್ಯಂಗಾರರು ಬೆಂಗಳೂರಿನಲ್ಲಿ ಕೊಟ್ಟ ಭಾಷಣದ ಸಾರಾಂಶ. ಇವರು ಬಂಗಾಳ ಸರಕಾರದ ಮಲೇರಿಯಾ ಇಲಾಖೆಯವರು.

---

ಎಬಿಸೀನಿಯಾದಲ್ಲಿ ಸಾಮಾನ್ಯ ಶಿಕ್ಷೆಗೊಳಗಾಗಿದ್ದ ಎಲ್ಲಾ ಕೈದಿಗಳನ್ನು ಬಿಡುಗಡೆಮಾಡಲಾಗಿದೆ. ಅವರೆಲ್ಲರೂ ಸೈನ್ಯಕ್ಕೆ ಸೇರಬೇಕೆಂಬುದು ಒಂದು ಶರ್ತ, ಈಗ ೫೦,೦೦೦, ಸೈನಿಕರಾಗಿರೇವರು ಒಟ್ಟು ಒಂದು ಮಿಲ್ಲಿಯ ಸೈನಿಕರ ಸಂಗ್ರಹವಾಗಿರುತ್ತದೆ

---

## ಶಾಹಿದ್‌ಗಂಜ್ ದಿನಾಚರಣೆ.

### ಲಾಹೋರಿನಲ್ಲಿ ೧ ಲಕ್ಷ ಮುಸ್ಲಿಮರ ಮೆರವಣಿಗೆ.

**ಸರ್ಕಾರಾಧಿಕಾರಿಗಳ ಪ್ರಕಟನೆ!**

**ಪೋಲೀಸರು ಸಶಸ್ತ್ರರಾಗಿಯೇ ಸಿದ್ಧರಿದ್ದರು!**

ಇದೇ ತಾ ೨೦ರಲ್ಲಿ ಬಂದ ವಾರ್ತೆಯಿಂದಾಗಿ, ಲಾಹೋರಿನಲ್ಲಿ ಶಾಹಿದ್‌ಗಂಜ್ ದಿನಾಚರಣೆಯನ್ನು ಅಲ್ಲಿಯ ಮುಸ್ಲಿಮರು ಪ್ರಚಂಡ ಮೆರವಣಿಗೆಯನ್ನು ಮಾಡಿಯೂ ಭಾಷಣಗಳನ್ನು ಜರಗಿಸಿಯೂ, ಕರಾವು ಮಾಡಿಕೊಂಡೂ ಆಚರಿಸಿದರೆಂದೂ ತಿಳಿದುಬರುತ್ತದೆ. ಒಂದು ಲಕ್ಷವನ್ನು ಮೀರಿದ ಮುಸ್ಲಿಮರು ಮೆರವಣಿಗೆ ಹೊರಟರು ಮೆರವಣಿಗೆಗಾರರು ಒಂದೆರಡು ಮೈಲುಗಳ ವರೆಗೂ ಇದ್ದರು ಎಲ್ಲೆಲ್ಲೂ ಕಪ್ಪು ಪತಾಕೆ! ಎಲ್ಲೆಲ್ಲೂ ತಲೆಬಿಟ್ಟುಕೊಂಡ ಮೆರವಣಿಗೆಗಾರರು, ಮೆರವಣಿಗೆಯು ನೋಟಗೇಟನ್ನು ದಾಟಿಹೋಯಿತು, ದುರ್ಘಟನೆಗಳನ್ನು ಮೊದಲೇ ನಿರೀಕ್ಷಿಸಿಕೊಂಡಿದ್ದ ಅಧಿಕಾರಿಗಳು ಸೈನಿಕರನ್ನೂ ಪೋಲೀಸರನ್ನೂ ಡ್ಯೂಟಿ ಮೇಲೆ ನಿಲ್ಲಿಸಿದ್ದರು. ಲಾಹೋರಿನ ಕೋಟ್ವಾಲಿಯಲ್ಲಿ ಇದೇ ದಿನ ಪೋಲೀಸ ಪಹರೆಯಿತ್ತು ಇದೇ ಸ್ಥಳದಲ್ಲಿ ಜುಲೈ ತಿಂಗಳಲ್ಲಿ ಪೋಲೀಸರು ಗುಂಡು ಹಾರಿಸಿದುದು ಮೆರವಣಿಗೆಯು ಚೌಕಿಗೆ ಒಂದು ಮುಟ್ಟುವುದಕ್ಕೆ ೬ ತಾಸುಗಳು ಬೇಕಾದುವು ಭಾಷಣವಾಗುವಲ್ಲೆಲ್ಲಾ ಧ್ವನಿವ್ಯಾಪಕವನ್ನಿಟ್ಟಿದ್ದರು

ಇಷ್ಟು ದೊಡ್ಡ ಸಭೆಯನ್ನು ನಾವು ತಮ್ಮ ಜನ್ಮಧಾರಭ್ಯ ಲಾಹೋರಿನಲ್ಲಿ ನೋಡಲೇ ಇಲ್ಲವೆಂದು ಹಿರಿಯರು ಕೆಲವರು ಹೇಳಿದರು ಸಿಖ್ ಗುರುದ್ವಾರದ ಬಳಿಯಿಂದ ಹೋಗುವಾಗ ಗುರುದ್ವಾರದ ಬಾಗಿಲನ್ನು ತೆರೆದಿಡಬಾರದೆಂದು ಮೆರವಣಿಗೆಯ ಮುಂದಾಳುಗಳು ಸಿಖ್ಖರಿಗೆ ತಿಳಿಸಿದರು ಅವರು ಅದಕ್ಕೆ ಒಪ್ಪಲಿಲ್ಲ ಗಲಾಟೆಯಾಗಲಿದ್ದಾಗ ಪೋಲೀಸರು ಬಂದು ಇತ್ತಂಡಗಳನ್ನು ಸಮಾಧಾನಗೊಳಿಸಿ ಬಾಗಿಲನ್ನು ಮುಚ್ಚಿಸಿದರು ಅನೇಕ ಸಿಖ್ಖರು ಶಸ್ತ್ರಧಾರಿಗಳಾಗಿಯೇ ನಿಂತಿದ್ದರು ಈ ಮೆರವಣಿಗೆಯು ಕೆಲವರನ್ನು ರೇಗಿಸಿ, ಎಲ್ಲಿ ಹೊಡೆದಾಟವಾಗುತ್ತದೋ ಎಂಬ ಭಯವಿತ್ತು ಆದರೆ ಎಲ್ಲವೂ ಸಮಾಧಾನಪೂರ್ವಕವಾಗಿ ನಡೆದುಹೋಯಿತು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲೂ ಪೋಲೀಸ್ ಅಧಿಕಾರಿಗಳೂ ಜತನದಲ್ಲೇ ಇದ್ದರು

ಮುಸ್ಲಿಮರ ಪ್ರಚಂಡ ಸಭೆಯೊಂದು ಜರಗಿತು ಪೀರ್ ಜಮಾತ್ ಅಲಿಷಾಹರೆಂಬವರು ಭಾಷಣಮಾಡಿ ಮುಂದಿನ ವರ್ತನೆಯು ಹೇಗಿರಬೇಕೆಂದು ಸಭೆಯೊಡನೆ ಕೇಳಿಕೊಂಡರು ತಾನು ಪಂಜಾಬ್ ಮತ್ತು ಗಡಿನಾಡುಗಳಲ್ಲಿ ಸಂಚರಿಸುವಾಗ ಜನರ ತಮ್ಮ ಸಹಕಾರವನ್ನು ಈ ಚಳವಳಕ್ಕೆ ಕೊಡುವುದಾಗಿ ವಾಗ್ದಾನವಿತ್ತರೆಂದೂ ಅಖಿಲ ಭಾರತ ಮುಸ್ಲಿಮರ ಒಂದು ಪರಿಷತ್ತನ್ನು ಜರಗಿಸಿ ಅವರೆಲ್ಲರ ಸಲಹೆಗಳನ್ನು ಸಂಗ್ರಹಿಸಬೇಕೆಂದೂ ಅದಾದ ನಂತರವೇ ನಿಶ್ಚಿತ ಕಾರ್ಯಕ್ರಮವು ಹೊರಗಾಗುವುದೆಂದೂ ಪ್ರಕಟಿಸಿದರು

ಸರಕಾರವು ಸಿಖ್ಖರೂ ತಮಗೆ ಶಾಹಿದ್‌ಗಂಜ್ ಮಸೀದಿಯನ್ನು ಬಿಟ್ಟುಕೊಡಬೇಕು – ಜುಲಾಯಿಯಲ್ಲಿ ಪೋಲೀಸರ ಗುಂಡುಗಳಿಂದ ಮರಣಹೊಂದಿದವರ ಕುಟುಂಬಿಕರಿಗೆ ಪರಿಹಾರದ್ರವ್ಯವನ್ನು ಕೊಡಬೇಕು – ಸರಕಾರವು ಇಷ್ಟರ ತನಕ ಕೈದುಮಾಡಿದ ಮುಸ್ಲಿಂ ಧುರೀಣರನ್ನೆಲ್ಲಾ ಬಿಡುಗಡೆ ಮಾಡಬೇಕು – ನಿರ್ಬಂಧ ಶಾಸನಗಳಿಗೊಳಗಾದ ಮುಖಂಡರ ಮೇಲಿನ ಕಟ್ಟಪ್ಪಣೆಯನ್ನು ಹಿಂತೆಗೆದು ಅವರನ್ನು ಬಿಡುಗಡೆ ಮಾಡಬೇಕು ಎಂದು ಮುಸ್ಲಿಮರ ಹೇಳಿಕೆ

---

## 4 ಜನರಿಗೆ ಮರಣದಂಡನೆ.

### ಬಸ್ಸು ಮಾಲಿಕನೊಬ್ಬನ ಕೊಲೆ!

ಸಿಲೋನಿನ ಬಿ ಎಂ ಆರ್, ಬಸ್ ಕಂಪೆನಿಯ ಮನೇಜರರಾದ ಥೋಮಸ್ ಪೀರೇರಾ ಎಂಬವರನ್ನು ಕೊಂದ ಮೊಕದ್ದಮೆಯ ವಿಚಾರಣೆಯು ಮೊನ್ನೆ ನಡೆದು, ನಾಲ್ಕು ಜನರಿಗೆ ಮರಣದಂಡನೆ ವಿಧಿಸಲಾಯಿತು. ಈ ಘೋರಕೃತ್ಯವು ನಡೆದುದು ಕಳೆದ ವರ್ಷ. ಇದರಲ್ಲಿ ೭ ಜನ ಅಪಾದಿತರಿದ್ದರು ಇಬ್ಬರಿಗೆ ಮಾಫಿಯಾಗಿದೆ. ಇದರಲ್ಲಿ ಹೆಚ್ಚಿನವರು ಆ ಕಂಪೆನಿಯ ಭೃತ್ಯರು, ಇವರಿಗೂ ಮನೇಜರರಿಗೂ ಯಾವದೋ ಪರಸ್ಪರ ವೈಮನಸ್ಯದಿಂದ ಉಂಟಾದ ಘಟನೆಯಿದು

# ಅಲ್ಲಲ್ಲಿಯ ವಾರ್ತೆಗಳು.

**೫ ತಿಂಗಳುಗಳಿಂದ ಮಳೆಯು ಇಲ್ಲ:—** ಸಿಲೋನಿನ ಬಂದರವೆ ಎಂಬಲ್ಲಿ, ಕಳೆದ ಐದು ತಿಂಗಳುಗಳಿಂದ ಮಳೆಯು ಇಲ್ಲದೆ ಕ್ಷಾಮವು ತಲೆದೋರಿದೆ. ಅಲ್ಲಿನ ಮುನಿಸಿಪಾಲಿಟಿಯವರು ಈಗ ದಿನಂಪ್ರತಿ ಒಂದು ಗಂಟೆ ಮಾತ್ರ ಜನರಿಗೆ ನೀರನ್ನು ಒದಗಿಸುತ್ತಾರೆ. ಈ ಕಷ್ಟವನ್ನು ನಿವಾರಿಸಲು ಯೋಗ್ಯ ಸಿದ್ಧತೆಗಳು ನಡೆಯುತ್ತಿವೆ.

\+ + + +

**ವಿಜ್ಞಾನ ಪರಿಷತ್ತು:—** ಅಖಿಲಭಾರತ ವಿಜ್ಞಾನ ಪರಿಷತ್ತು ಈ ಬಾರಿ ಇಂದೋರಿನಲ್ಲಿ ೧೯೩೬ನೇ ಜನವರಿ ತಾ. ೨ರಲ್ಲಿ ಜರಗುವುದು.

\+ + + +

**ಗಾಯನ ಪರಿಷತ್ತು:—** ಇದು ಈ ಬಾರಿ ಅಲ್ಲಹಾಬಾದಿನಲ್ಲಿ ಜರಗುವುದು. ಪಾಶ್ಚಾತ್ಯ ರೀತಿಯಲ್ಲಿ ಹಿಂದೀಯ ಗಾಯನಗಳ ಮೈಸೂರಿನ ಶ್ರೀ ವೆಂಕಟಗಿರಿಯಪ್ಪ ಮತ್ತು ವಿ. ನರಸಿಂಗರಾವ್ ಇವರು ಪ್ರದರ್ಶನಗಳನ್ನು ಮಾಡುವರು. ಇವರು ಈ ಪರಿಷತ್ತಿನ ಮೈಸೂರಿನ ಪ್ರತಿನಿಧಿಗಳಾಗಿ ಹೋಗುವರು

\+ + + +

**ಕುರುಬರ ಜಟಾಪಟಿ:—** ಅಹಮ್ಮದಾಬಾದಿನ ಒಂದು ಹಳ್ಳಿಯಲ್ಲಿ ಕೆಲವು ಕುರುಬರಲ್ಲಿ ಪರಸ್ಪರ ವೈಷಮ್ಯವುಂಟಾಗಿ, ಮಾರಾಮಾರಿಯಾಗಿ ಕೆಲವರು ಮಡಿದಿರುವರು

\+ + + +

**ಐದು ಜನರು ಮೃತರಾದರು:—** ಬೊಂಬಾಯಿಯ ಕಲ್ಯಾಣವೆಂಬಲ್ಲಿ ಐವರು ರೈಲ್ವೆ ಮಾರ್ಗವನ್ನು ದಾಟುತ್ತಿರುವಾಗ, ರಭಸದಿಂದ ಬರುವ ಒಂದು ಇಲೆಕ್ಟ್ರಿಕ್ ಟ್ರೈನಿನ ಅಡಿಯಲ್ಲಿ ಬಿದ್ದು ಮೃತರಾದರು ಇವರೊಳಗೆ ಇಬ್ಬರು ಹೆಂಗುಸರು

\+ + + +

**ಸ್ತ್ರೀಯೋರ್ವಳ ನಿರ್ಲಕ್ಷತೆ:—** ಜಾನಕಿಬಾಯಿ ಎಂಬ ಓರ್ವ ಮಾರವಾಡಿ ಸ್ತ್ರೀಯಳು, (ಕಲ್ಕತ್ತದಲ್ಲಿ) ತನ್ನ ಮೋಟಾರು ಕಾರನ್ನು ನಿರ್ಲಕ್ಷತೆಯಿಂದ ಓಡಿಸಿ, ಒಬ್ಬ ಕೂಲಿಯವನನ್ನು ಜಖಂಗೊಳಿಸಿದಳು ಮೊಕದ್ದಮೆ ನಡೆದು ಇವಳಿಗೆ ರೂಪಾಯಿ ೧೨೦ರ ದಂಡ ವಿಧಿಸಲಾಯಿತು. ಕಲ್ಕತ್ತೆಯಲ್ಲಿ ಇಂಥಾ ಘಟನೆಯು ಇದೆ ಪ್ರಥಮದು

\+ + + +

**ನಗರ ಶಾಸಕರು ಸೆರೆಯೊಳಗಾದರು:—** ಕರಾಚಿಯಲ್ಲಿ, ಸಿ ಐ ಡಿ ಪೋಲೀಸಿನವರು ಕ್ರಿಮಿನಲ್ ಅನ್ಯಾಯಕ್ಕಾಗಿ ಆರು ಮಂದಿ ಸದ್ಗೃಹಸ್ಥರನ್ನು ಸೆರೆಹಿಡಿದಿದ್ದಾರೆ ಇವರಲ್ಲಿ ಇಬ್ಬರು ಅಲ್ಲಿಯ ನಗರಸಭೆಯ ಸದಸ್ಯರು

\+ + + +

**ಶಾಂತಿಗಾಗಿ:—** ದಿಲ್ಲಿಯಲ್ಲಿ, ಕ್ರಿಮಿನಲ್ ಪೀನಲ್ ಕೋಡಿನ ೧೪೪ ಕ್ರಮವನ್ನು ಜ್ಯಾರಿಗೆ ತಂದಿರುವರು. ಕಾರಣ ಬರುವ ರಾಮಿಲ್ಲಾ ಹಬ್ಬದ ದಿವಸಗಳಲ್ಲಿ ಕ್ಷೋಭೆ ನಡೆಯದ ಹಾಗೆ ಇದು ಇನ್ನು ಒಂದು ತಿಂಗಳವರೆಗೆ ಜ್ಯಾರಿಯಲ್ಲಿರುವುದು

\+ + + +

**ಭಿಕ್ಷುಕರಲ್ಲಿ ಗಲಾಟೆ:—** ಕರಾಚಿಯಲ್ಲಿ ಭಿಕ್ಷುಕರ (ಮುಸ್ಲಿಮ ಫಕೀರರು) ಎರಡು ತಂಡಗಳಿಗೆ ಮಾತುಕತೆಗಳು ನಡೆದು, ಘನತರದ ಮುಷ್ಟಿಯುದ್ಧವು ನಡೆಯಿತು. ಲಾಠಿ ಪ್ರಯೋಗವು ಆಗಿತ್ತು ಹಲವರು ಜಖಂಗೊಂಡಿರುವರು ವಿಚಾರಣೆಯು ನಡೆಯುತ್ತಿದೆ.

\+ + + +

**ಕಳ್ಳಿಕೋಟೆಯ ಓಲ್ಲವನಾ ಎಂಬ ಹಳ್ಳಿಯಲ್ಲಿ ಒಂದು ಪುರಾತನ ಗವಿ:—** ಕಲ್ಲಿನ ಕಲ್ಪನೆಯಲ್ಲಿ ಕಾಣಸಿಕ್ಕಿದೆ. ತುಂಬಾ ಜನರು ಇದನ್ನು ನೋಡಲು ಹೋಗುತ್ತಿರುವರು. ಹೀಗೆ ಇಲ್ಲಿಯ ಮಕ್ಕಡಾ ಎಂಬ ಬೇರೊಂದು ಹಳ್ಳಿಯಲ್ಲಿ ಇನ್ನೊಂದು ಗವಿಯು ಸಿಕ್ಕಿದೆ.

**ಲೈಸೆನ್ಸು ಇಲ್ಲದ ೯ ಕೋವಿಗಳು:—** ಸಬ್ ಇನ್ಸ್‌ಪೆಕ್ಟರ್ ವಿಶ್ವನಾಥ ನಾಯಕರೆಂಬವರು ಮಧುರೆಯ ತಿರುಮ್ಮರು ಮೆಟ್ಟುಪತ್ತಿ ಎಂಬ ಹಳ್ಳಿಯಲ್ಲಿ ವಶಪಡಿಸಿಕೊಂಡಿದ್ದಾರೆ.

\+ + + +

**೩೮ ಮನೆಗಳ ನಿರ್ನಾಶ:—** ಸಿಂಧ್ ದೇಶದ ಶಹಾಮಕಾರಿ ಎಂಬ ಹಳ್ಳಿಯಲ್ಲಿ ಬೆಂಕಿಯ ಅನಾಹುತಕ್ಕೆ ಒಳಗಾಗಿ ನಾಶವಾದವು. ಹಲವರು ಮನೆಯಿಲ್ಲದೆ ನಿರ್ಗತಿಕರಾಗಿ ಅಲೆದಾಡುತ್ತಿರುವರು.

\+ + + +

**ಆಕಳುಗಳ ಚೋರಿ:—** ಹೈದರಾಬಾದಿನ ಮಹಾರಾಷ್ಟ್ರಲ್‌ಪುರ ಎಂಬ ಹಳ್ಳಿಯಲ್ಲಿ, ಆಕಳುಗಳನ್ನು ಎಬ್ಬಿಸುವ ಚೋರರ ಹಾವಳಿಯು ನಡೆಯುತ್ತಿದೆ ಹಲವುಕಡೆ ದನಕರುಗಳು ನಾಶವಾಗಿವೆ

\+ + + +

**ನೆರೆಯವರೊಡನೆ:—** ಮಾತುಕತೆಯಿಂದಾಗಿ ಬಂಕುರಾ ಎಂಬಲ್ಲಿ, ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟಿನ ಮೇರೆಗೆ ಒಬ್ಬ ಯುವಕನ ದಸ್ತಗಿರಿಯು ನಡೆದು, ಎರಡು ವರ್ಷದ ಸಜೆಯು ವಿಧಿಸಲಾಯಿತು

\+ + + +

**ಹಲವರನ್ನು ರಕ್ಷಿಸಿದ ಬ್ರಾಹ್ಮಣನೋರ್ವನ ಶಕ್ತಿಯು, ತನ್ನ ಘಾತುಕದ ಮೇಲೆ ನಡೆಯಲಿಲ್ಲ:—** ಈ ಘಟನೆಯು ಬಂಗಾಳ ಗೌರಂಡೆಯೆಂಬಲ್ಲಿ ನಡೆಯಿತು ರಾಸವಂದನು ಒಬ್ಬ ಉಚ್ಚಜಾತಿಯ ಬ್ರಾಹ್ಮಣನು ಸರ್ಪದ ಕಡಿತದಿಂದ ರಕ್ಷಿಸುವ ಅಪಾರ ಶಕ್ತಿಯು ಇವನಲ್ಲಿತ್ತು. ಇವನು ಹಲವರನ್ನು ತನ್ನ ಶಕ್ತಿಯಿಂದ ರಕ್ಷಿಸಿದ್ದನು. ಮೊನ್ನೆ ಅವನು ರಾಮಾಯಣ ಪಠನ ಮಾಡುತ್ತಿರುವಾಗ, ಅವನಿಗೆ ಒಂದು ಸರ್ಪವು ಕಡಿಯಿತು. ತನ್ನ ಅಪಾರ ಶಕ್ತಿಯ ಗರ್ವದಿಂದ ಇವನು ಇದರ ಲಕ್ಷ್ಯವನ್ನು ಮಾಡಲಿಲ್ಲ. ಆದರೆ ಮರುದಿವಸವೇ ಮೃತನಾದನು.

\+ + + +

**ಡಕಾಯಿತರನ್ನು ಸೆರೆಹಿಡಿಯಲಾಯಿತು:—** ಶಿಕಾರಪುರದಲ್ಲಿ ಪೋಲೀಸ ಅಧಿಕಾರಿಗಳು ಕೆಲವು ಭಯಂಕರ ಡಕಾಯಿತರನ್ನು ಸೆರೆಹಿಡಿದಿದ್ದಾರೆ ಇವರು ಹಿಂದೆ ಹಲವು ಕಡೆಗಳಲ್ಲಿ ಧಾಳಿ ನಡೆಸುವರು.

\+ + + +

**೪ ರೂಪಾಯಿಗಳಿಂದ ೮ ಆಣೆಗಳಿಗೆ:—** ತಗ್ಗಿಸಿದ ಸೈಕಲ್ ಟೀಕ್ಸನ್ನು ತಿನ್ನವೆಲ್ಲಿ ಮ್ಯುನಿಸಿಪಾಲಿಟಿಯು ಠರಾವು ಮಾಡಿತಷ್ಟೆ. ಮದ್ರಾಸು ಸರಕಾರವು ಇದನ್ನು ಖಂಡನೆಮಾಡಿದೆ

\+ + + +

**ಭಗವದ್ಗೀತೆ ವಾಚನ:—** ಕಟ್ಟಕಿನ ಜಗನ್ನಾಥ ಎಂಬಲ್ಲಿ ಕೆಲವು ಬ್ರಾಹ್ಮಣರು ನಡೆಸುತ್ತಿರುವ ಸಮಯದಲ್ಲಿ ತಲೆಮೇಲಿದ್ದ ಶಿಲೆಯ ಸಿಂಹವೊಂದು ಕೆಳಗೆ ಬಿದ್ದು ಒಬ್ಬನು ಮೃತನಾಗಿರುವನು ಇದು ಒಂದು ಕೋತಿಯಿಂದಾಗಿ ಉಂಟಾದ ದುರ್ಘಟನೆಯು

\+ + + +

ಮಲಬಾರಿನ ೯೫೦ ಗೂರ ಎಂಬಲ್ಲಿ ತಿಜಾ ಕುಟುಂಬದ ಐವರ ಸೇವಿಸಿದ ತಿಂಡಿಯಲ್ಲಿ ಅಡಕವಾಗಿರುವ ವಿಷದ ಪ್ರಭಾವದಿಂದ ಮೃತರಾದರು ಇನ್ನೂ ಇಬ್ಬರು ಪಜ್ಞೆ ತಪ್ಪಿ ಬಿದ್ದಿರುವರು ವಿಚಾರಣೆಯು ನಡೆಯುತ್ತಿದೆ

---

ಶೀತದಿಂದ ದೂರವಾಗಿರಿ:

ಸಾಂಬಕ್ ಸಸ್ಯಜನ್ಯ ಲೇಪನವನ್ನುಪಯೋಗಿಸಿರಿ.

ರಾತ್ರಿ ಮಲಗುವ ಮೊದಲು ಸಾಂಬಕನ್ನು ಎದೆಗೆ ತಿಕ್ಕಿ ಕೆಟ್ಟ ಶೀತವನ್ನೂ ಚಳಿಯನ್ನೂ ಓಡಿಸಿರಿ. ನಿಮ್ಮ ದೇಹದ ಶಾಖವು ಸಾಂಬಕನ್ನು ನೀರುಮಾಡಿ, ನೀವು ಅದನ್ನು ಉಚ್ಛ್ವಾಸುತ್ತಿರುವಾಗ ನಿಮ್ಮ ಕಟ್ಟಿದ ಶ್ವಾಸವು ಸರಿಯಾಗುವುದು ಘಾಯ, ಎಕ್ಜಿಮಾ, ಕಜ್ಜಿ ಮೊದಲಾದುವುಗಳಿಗೆ ಸಾಂಬಕನ್ನುಪಯೋಗಿಸಿರಿ

1 ರೂಪಾಯಿ ಅಥವಾ ರೂ. 2–4–0ಕ್ಕೆ ಎಲ್ಲಾ ಔಷಧಿ ವಿಕ್ರಯಗಾರರಲ್ಲೂ ದೊರೆಯುತ್ತದೆ.

ಝಾಂಬಕ್

Zam Buk

ಗೋಡ್ರೇಜರ ಭಾರತಸಿದ್ಧವಾದ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಅನುಕರಿಸುತ್ತಿರುವರು.

ಗೋಡ್ರೆಜ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ ಜೀವಾಣು ರೋಗ ಶಾಸ್ತ್ರಜ್ಞರೂ ಆದ ಒಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೋಡ್ರೆಜ್ ಸಾಬೂನುಗಳನ್ನು ಅನುಕರಣ ಮಾಡಲು ಪ್ರಾರಂಭಿಸಿದರು

ಗೋಡ್ರೆಜ್

ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪೆರಿಮೆಂಟಲ್ ಕೆಮಿಸ್ಟ್ರಿ ಮೈಕ್ರೊಸ್ಕೊಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

**ಡಾ| ಔಫ್ರೆಚ್ಟ್ ಎಂಬವರು:—** "ನಾನು ಗೋಡ್ರೆಜ್ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು. ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಪ್ಟೊಕೊಕಸ್ ಮತ್ತು ಸ್ಟೆಫಿಲೊಕಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

**ಹೆರ್ ಕಾರ್ಲ್ ಗುಸುರ್ಗ್ ಎಂಬವರು.—** "ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸೆಕ್ರೆಟರಿ ಕೆಮಿಕಲ್ ಎನಲೆಸರರಾದ

**ಮೇಜರ್ ಡಿಕೆನ್‌ಸನ್‌ರವರು.—** "ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

**ಡಾ| ಎಂ. ಎ. ಅನ್ಸಾರಿ, ಎಂ ಡಿ ಎಂ. ಎಸ್ ರವರು:—** "ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ. ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು

ಫೆಕ್ಟರಿ:— **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ.

ಸೋಲ್ ಏಜಂಟರು:— **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

**121** ಎಸ್‌ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

# ನೋಟೀಸು.

## Attur Vaikunta Prabhu Bank, Mangalore

### ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ನಗದ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ, ಕೊಡದೆ ಈ ವರೆಗೆ ಬಾಕಿಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗಿಯೂ ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1935ನೇ ಅಕ್ಟೋಬರ 4ನೇ ಶುಕ್ರವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸ್ಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಸಲ್ಲಾಯಿಸಿ, ಬಿಡಿಸಿಕೊಂಡು ಹೋಗದಿದ್ದರೆ, ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1935ನೇ ಅಕ್ಟೋಬರ 5ನೇ ಶನಿವಾರ, ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 2 ಘಂಟೆಗೆ ಬಹಿರಂಗವಾಗಿ ಏಲಂ ಮಾಡುವೆವು

| | ಸಾಲದ ನಂಬ್ರ ಮತ್ತು ಅಡವಿಟ್ಟ ತಾ | ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ | ಒಡವೆ ತೂಕ |
|---|---|---|---|
| 1 | 264 / 10-2-33 | ಪಾಂಡುರಂಗ ಪ್ರಭು, S/o ರಘಳಪ್ಪ ಪ್ರಭು, ತೋಕೂರು ಜೋಗಟ್ಟೆ ಸುರತ್ಕಲ್ | 27 |
| 2 | 963 / 22-5-33 | ಅಣ್ಣಪ್ಪ ಶ್ಯಾನುಭಾಗ, S/o ಮುಕುಂದ ಶಾನುಭಾಗ ಹೂವಮಾರ್ಕೇಟು ಮಂಗಳೂರು | 45 |
| 3 | 1175 / 13-6-33 | ತುಕ್ರ ಶೆಟ್ಟಿ, S/o ರಾಮ ಶೆಟ್ಟಿ, ಸೂರಂಜೆ ಗ್ರಾಮ ಮಂಗಳೂರು ತಾಲೂಕು | 25 |
| 4 | A 201 / 5—3—34 | ಅಬ್ದುಲ್ಲಾ ಬ್ಯಾರಿ S/o ಬಾವ ಬ್ಯಾರಿ, ಮರವೂರು ಗ್ರಾಮ ಪಣಂಬೂರು | 13 |
| 5 | A 562 / 23-5-34 | ತನಿಯಪ್ಪ S/o ಮುಂಡಪ್ಪ ಬಲ್ಮಠ ಮಂಗಳೂರು | 7 |
| 6 | A 598 / 28-5-34 | ವೆಂಕಟನಾರಾಯಣ ಹೊಳ್ಳ S/o ಕೆ ಕೇಶವಯ್ಯ ಹೊಳ್ಳ, ತ್ರಿಪುಲೇಶ್ವರ ದೇವಸ್ಥಾನದ ಬಳಿ ಮಂಗಳೂರು | 15 |
| 7 | A 859 / 4-7-34 | ಇಬ್ರಾಹಿಂಖಾನ್, ಡಿಸ್ಟ್ರಿಕ್ಟ್ ಕೋರ್ಟ್ ಎಟೆಂಡರ್ ಮಂಗಳೂರು | 13 |
| 8 | A 871 / 6-7-34 | ಕೂಸ ಪೂಜಾರಿ N/o ಕೊರಗ ಪೂಜಾರಿ ಮರಕಡ ಗ್ರಾಮ ಪಣಂಬೂರು | 6 |
| 9 | A 888 / 10 7 34 | ಪೂವಪ್ಪ ಶೆಟ್ಟಿ N/o ನಾಗಶೆಟ್ಟಿ ಕೊಡಿಯಾಲ್‌ಬೈಲು ಮಂಗಳೂರು | 7 |
| 10 | A 941 / 19-8-34 | ಬೆಯ್ಯಬ್ಯಾರಿ S/o ಪಕೀರ ಬ್ಯಾರಿ ಬೋರ್ಕಟ್ಟೆ ಪಣಂಬೂರು | 7 |
| 11 | A 1084 / 11-8 34 | ಕೆ ಸುಬ್ಬ S/o ಐತ ಬಿಳ್ಳಿ ಮಂಗಳೂರು | 10 |
| 12 | A 1096 / 13-8-34 | ತಿಮ್ಮಪ್ಪ S/o ಬಿ ಶೇಷಪ್ಪ ರಾಮರಕ್ಷಗಲ್ಲಿ ಮಂಗಳೂರು | 18 |
| 13 | A 1103 / 14-8 34 | ಬಸಪ್ಪ G S/o ವಂಕರ ಪೂಜಾರಿ ಬಾಳ್ ಭಾಗ್ ಕೊಡಿಯಾಲ್‌ಬೈಲು | 12 |
| 14 | A 1146 / 19 8-34 | ಗುರುವ, N/o ಬಬ್ಬು ಪನೆಕಾಯುವವ, ಉರ್ವ ಚಿಲಿಂಬಿ ಮಂಗಳೂರು | 4 |
| 15 | A 1183 / 22-8-34 | ಜೆ ಆನಂದ S/o ಕೋಟಿ ಪೋಟ್ಟು, ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸ್ಕೂಲಾಮಾಸ್ತರ್ ಮಂಗಳೂರು | 16 |
| 16 | A 1185 / 22-8-34 | ಪೋಕರ್ಬ ಬ್ಯಾರಿ, S/o ಅಬ್ದುಲ್‌ಖಾದ್ರಿ ಬ್ಯಾರಿ ಗೋಳಿಕಟ್ಟೆ ಬಜಾರ್ ಮಂಗಳೂರು | 15 |
| 17 | A 1310 / 9-9-34 | ಗುರುವಪ್ಪ, S/o ರಾಮ ಪೂಜಾರಿ ಉರ್ವ ಮಂಗಳೂರು | 5 |
| 18 | A 1321 / 11-9-34 | ಕೆ ತಿಮ್ಮಪ್ಪಯ್ಯ, S/o ಕೆ. ರಾಮಪ್ಪಯ್ಯ ಬೋಳಾರ ಮಂಗಳೂರು | 5 |
| 19 | A 1332 / 13-9-34 | ಜೆ, ಮೈಂದಪ್ಪ, N/o ಮೊಂಡಪ್ಪ ಪೂಜಾರಿ, ಜಪ್ಪಿನಮೊಗರು ಗ್ರಾಮ ಕಂಕನಾಡಿ ಪೋಸ್ಟು | 8 |
| 20 | A 1338 / 14-9-34 | ರಾಮ ಮೂಲ್ಯ, ಪಾವೂರು ಬೋರ್ಡ್ ಶಾಲಾ ಹೆಡ್‌ಮಾಸ್ಟರ್, ಪಾವೂರು ಗ್ರಾಮ | 15 |
| 21 | A 1341 / 14-9-34 | ಶೇಕ್ ಉಮ್ಮರ್ ಸಾಹೇಬ್ S/o ಶೇಕ್ ಫಕೀರ್ ಸಾಹೇಬ್ ಮಂಜಲ್‌ಬೈಲು ಮಂಗಳೂರು | 9 |
| 22 | A 1367 / 17-9 34 | ಅಬ್ದುಲ್ಲಾ ಬ್ಯಾರಿ, S/o ಇಸ್ಮಾಯಿಲ್ ಬ್ಯಾರಿ, ಬೋಳಿಯಾರು ಗ್ರಾಮ ಬಂಟ್ವಾಳ | 6 |
| 23 | A 1435 / 26-9-34 | ಕೃಷ್ಣಪ್ಪ, S/o ಚೋಮ ಬೆಳ್ಚಾಡ, ಕೂರ್ನಾಡು ಗ್ರಾಮ ಮಂಗಳೂರು ತಾಲೂಕು | 8 |
| 24 | A 1468 / 3 10 34 | ಬಾಬು ಬ್ಯಾರಿ, S/o ರಹಿಮಾನ್ ಸಾಹೇಬ್, ಮರವೂರು ಗ್ರಾಮ ಮಂಗಳೂರು ತಾಲೂಕು | 8 |
| 25 | A 1480 / 5-10-34 | ತಿಮ್ಮಪ್ಪ N/o ಐತ ಪೂಜಾರಿ ಪಾವೂರು ಗ್ರಾಮ, ಮಂಗಳೂರು ತಾಲೂಕು. | 13 |
| 26 | A 1534 / 15-10-34 | ಶೇಕ್ ಅಮದ್, S/o ಅಜಮುದ್ದೀನ್ ಸಾಹೇಬ್ ಅತ್ತಾವರ ಮಂಗಳೂರು | 18 |
| 27 | A 1539 / 16-10-34 | ಅಬ್ದುಲ್‌ರೈಮಾನ್, S/o ಶೇಕ್ ಅಬ್ದುಲ್ ರೈಮಾನ್, ಬೋಳಾರ ಮಂಗಳೂರು | 5 |
| 28 | A 1702 / 14-11-34 | ಮುಂಗಿ ಬಾಯಿ D/o ರತನ್ ಜೀ ಶೇಟ್ ಸಮುಗಾರಗಲ್ಲಿ, ಮಂಗಳೂರು | 5 |
| 29 | A 1742 / 23-11-34 | ಪಕ್ರಾಜಿ ಬ್ಯಾರಿ, S/o ಇದ್ದಬ್ಯಾರಿ, ಬೋಳಿಯಾರು ಗ್ರಾಮ, ಬಂಟ್ವಾಳ | 10 |
| 30 | A 1899 / 18-12-34 | ಮೊಯಿದಿನ ಬ್ಯಾರಿ, S/o ಶುಕ್ರ ಬ್ಯಾರಿ, ಅಡ್ಯಪಾಡಿ ಗ್ರಾಮ, ಗುರುಪುರಪೋಸ್ಟು | 6 |
| 31 | 43 / 6-1-34 | ದಯಾನಂದ ಶೇಟ್, S/o ಕೃಷ್ಣ ಶೇಟ್, ಗೋಳಿಕಟ್ಟೆ ಬಜಾರ್, ಮಂಗಳೂರು | 35 |
| 32 | 115 / 17-1-34 | ಎಸ್ ವೆಂಕಟ್ರಾವ್, S/o ರಾಮಚಂದ್ರಯ್ಯ, ಕುಳ್ಳಿ ಗ್ರಾಮ, ಸುರತ್ಕಲ್ ಪೋಸ್ಟು | 8 |
| 33 | 193 / 29 1 34 | ಕೃಷ್ಣಪ್ಪ, S/o ತಿಮ್ಮಪ್ಪ ಶೆಟ್ಟಿ ಮಂಗಳೂರು | 10 |
| 34 | 305 / 17 2 34 | ಮಂಜಪ್ಪ ಶೆಟ್ಟಿ, N/o ಕುಂಞಪ್ಪ ಶೆಟ್ಟಿ, ಕೆಂಜಾರು ಗ್ರಾಮ ಬಜಪೆ ಪೋಸ್ಟು | 5 |
| 35 | 345 / 26 2-34 | ಪೂವಾಕ್ D/o ಕೊರಗ ದೇರೆಬೈಲು, ಮಂಗಳೂರು ತಾಲೂಕು, | 10 |
| 36 | 874 / 5-6-34 | ಎ ಸ್ಯಾಬಾನ್ B/o ಕೆ ಮೊಹಿದಿನ್, ಗೋಳಿಕಟ್ಟೆ ಬಜಾರ್ ಮಂಗಳೂರು | 22 |
| 37 | 973 / 21-6-34 | ಮಾಮು ಬ್ಯಾರಿ, S/o ಅಸನೆ ಬ್ಯಾರಿ ಕೆಂಜಾರು ಗ್ರಾಮ ಬಜಪೆ ಪೋಸ್ಟು | 22 |
| 38 | 1156 / 26 7 34 | ಕೆ ತಿಮ್ಮಪ್ಪಯ್ಯ, S/o ಕೆ ರಾಮಪ್ಪಯ್ಯ, ಬೋಳಾರ ಮಂಗಳೂರು | 180 |
| 39 | 1197 / 4-8-34 | ಪಾಂಡುರಂಗ ಪ್ರಭು, S/o ರಘಳಪ್ಪ ಪ್ರಭು, ತೋಕೂರು ಜೋಗಟ್ಟೆ, ಸುರತ್ಕಲ್. | 25 |
| 40 | 1247 / 16-8-34 | ಜುಲಿಯಾನ್ ಸೋಜ, S/o ದೂಜೆ ಸೋಜ, ವೆಂಕಟ್ರಮಣ ದೇವಸ್ಥಾನ ಬಳಿ, ಮಂಗಳೂರು | 24 |
| 41 | 1303 / 25-8 34 | ಎ ಸ್ಯಾಬಾನ್, B/o ಕೆ ಮೊಹಿದಿನ್, ಗೋಳಿಕಟ್ಟೆ ಬಜಾರ್, ಮಂಗಳೂರು | 25 |
| 42 | 165 / 22-2 35 | ಸೇಕಾಲಿ ಬ್ಯಾರಿ S/o ಮುಹಮುದ್‌ಜಿ ವರ್ತಕರು, ಪುತ್ತೂರು ತಾಲೂಕು, | 350 |
| 43 | 405 / 10-3-34 | ಎ ಕೃಷ್ಣರಾವ್ S/o ಎ ಮಂಗೇಶರಾವ್, ಮೆಕ್ಯಾನಿಕ್, ಸಿ ಪಿ ಸಿ, ಕಂಪನಿ ಮಂಗಳೂರು | 35 |

ತಾ.27—9—1935
ಎ ವಿ ಪಿ ಬೇಂಕ್,
ಮಂಗಳೂರು,

A. V. Prabhu,
ಪ್ರೊಪ್ರೈಟರ್.

# ಇಂಗ್ಲಾಂಡಿನಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯು ಏರುತ್ತಿದೆ.

## ವಿಶ್ವವಿದ್ಯಾಲಯಗಳನ್ನು ಸೇರುವವರ ಸಂಖ್ಯೆಯು ಕಡಮೆಯಾಗಿಲ್ಲ.

### ಹಲವರು ಅಲ್ಲಿನ ಕಾರ್ಖಾನೆಗಳಲ್ಲಿ ತರಬೇತು ಹೊಂದುವರೆ ಬಂದಿದ್ದಾರೆ.

### ಶ್ರೀ ಪಿ ಆರ್. ರಾಯರು—ಹಿಂದೀಯರಿಗೆ ಪಾಶ್ಚಾತ್ಯ ಕಾರ್ಖಾನೆಗಳಲ್ಲಿ ತರಬೇತು.

ಇಂಗ್ಲಾಂಡಿನಲ್ಲಿ ಈಗ ಬೇಸಿಗೆ ರಜೆಗೆ ಮುಚ್ಚಲ್ಪಟ್ಟ ಹಲವು ವಿಶ್ವವಿದ್ಯಾಲಯಗಳು ಪುನಃ ತೆರೆಯುವ ಸಮಯ ಇಲ್ಲಿಗೆ ತೆರಳುವ ಹಡಗುಗಳಿಂದ ತಂಡ ತಂಡ ವಿದ್ಯಾರ್ಥಿಗಳ ಸಂಖ್ಯೆಯು ಇಳಿಯುತ್ತಿದೆ ಲಂಡನಿನ ಹೊಸ್ಟೇಲುಗಳೆಲ್ಲಾ ತುಂಬಿ ಹೋಗಿವೆ ಇಂಗ್ಲಾಂಡಿನಲ್ಲಿದ್ದ ಹಿಂದೀಯರು ಪಾಶ್ಚಾತ್ಯದ ಇನ್ನೂ ಹಲವು ವಿದ್ಯಾಪೀಠಗಳಿಗೆ ತೆರಳಿರುವರು ಇಂಗ್ಲೆಂಡನ್ನು ಸೇರಿದವರ ಸಂಖ್ಯೆ ಸುಮಾರು ೬೦೦ ಸರಕಾರಿ ವೇತನಗಳನ್ನು ಪಡೆದ ವಿದ್ಯಾರ್ಥಿಗಳು ತುಂಬಾ ಇದ್ದಾರೆ ಕಾರ್ಖಾನೆಗಳಲ್ಲಿ ತರಬೇತು ಹೊಂದಲು ಸುಮಾರು ೧೫೦ ವಿದ್ಯಾರ್ಥಿಗಳಿರುವರು

ಹಿಂದೂದೇಶವು ತನ್ನ ರೈಲ್ವೆ ಮಿಲ್ಲುಗಳಿಗೆ ಮತ್ತು ವಿದ್ಯುಚ್ಛಕ್ತಿಗೆ ಬೇಕಾದ ಸರ್ವ ಸಾಮಗ್ರಿಗಳನ್ನು ಇಂಗ್ಲಾಂಡಿನಿಂದಲೆ ಪಡೆಯುತ್ತಿದೆ ಆದರೆ ಅಕ್ಕ ಕಡೆಯುವರು, ಈಗ ಪ್ರತಿಫಲವಾಗಿ ನೆಟ್ಟು ವಿದ್ಯಾರ್ಥಿಗಳನ್ನು ತರಬೇತು ಮಾಡಲು ಸಿದ್ಧವಿರಲಿಲ್ಲ ಆದರೆ ಇತ್ತೀಚೆಗೆ ಅವರು ನಮ್ಮ ಈ ಶರ್ತಕ್ಕೆ ಒಪ್ಪಿದ ಹಾಗೆ ಕಾಣುತ್ತದೆ. ಇಂಗ್ಲಾಂಡಿನಲ್ಲಿ ಈಗ ಸುಮಾರು ೧೭೦ ಕಾರ್ಖಾನೆಗಳು ಹಿಂದೀಯರಿಗೆ ತೆರೆಯಲ್ಪಟ್ಟಿವೆ ಎಂಬ ಸುದ್ದಿ ಇದೆ ಈ ವಿಷಯ ನಮ್ಮ ರೈಲ್ವೆ ಫ್ಯಾನೆನ್ಸ ಕಮಿಶನರಾದ ಪಿ. ಆರ್. ರಾಯರೊಡನೆ ಕೆಲವು ಪ್ರಶ್ನೆಗಳು ಕೇಳಲಾಯಿತು. ಹಿಂದೀಯ ಸರಕಾರವು ತನ್ನ ಹಲವು ಇಲಾಖೆಗಳಿಗೆ ಬೇಕಾದ ಕಬ್ಬಿಣದ ಮತ್ತು ಸಾಮಗ್ರಿಗಳನ್ನು ಈ ಕಾರ್ಖಾನೆಗಳಿಂದ ಕರಿಸುವಾಗ ಅವರು ನಮಗೆ ಇದಕ್ಕೆ ಪ್ರತಿಫಲವಾಗಿ ಹಿಂದೀಯ ವಿದ್ಯಾರ್ಥಿಗಳ ತರಬೇತನ್ನು ತಮ್ಮ ಕಾರ್ಖಾನೆಯಲ್ಲಿ ವಹಿಸಬೇಕೆಂಬ ಶರ್ತದಲ್ಲಿ ವ್ಯಾಪಾರ ನಡೆಸಬೇಕೆಂಬ ಸೂಚನೆಯನ್ನು ಕೊಟ್ಟಿದ್ದಾರೆ. ಶ್ರೀ ಪಿ ಆರ್ ರಾಯರು, ಸರಕಾರವು ಈಗ ಮೇಲಿನ ಸೂಚನೆ ಪ್ರಕಾರ ನಡೆಯುತ್ತಿದೆ ಹಲವು ಸಂಸ್ಥೆಗಳು ನಮ್ಮ ಈ ಶರ್ತಕ್ಕೆ ಒಪ್ಪಿರುತ್ತವೆ ಇಂಡಿಯಾದ ಕಮಿಶನರ್ ವರದಿ ಪ್ರಕಾರ, ವ್ಯಾಪಾರವು ಕಡಿಮೆಯಾದಾಗ್ಯೂ ಅಲ್ಲಿನ ಕಾರ್ಖಾನೆಗಳಲ್ಲಿ ಹಲವು ವಿದ್ಯಾರ್ಥಿಗಳಿಗೆ ತರಬೇತು ಹೊಂದಲು ಅವಕಾಶ ಕೊಟ್ಟಿರುತ್ತಾರೆ ಎಂದರು

# ಲಾಹೋರಿನಲ್ಲಿ ಭಯಂಕರ ಕೊಲೆ!

### ಕೊಲೆಮಾಡಿ, ಹಣವನ್ನು ಸುಟ್ಟರು.

ಲಾಹೋರು ಸಪ್ಟಂಬರ ತಾ ೨೩

ಇದು ಕಾಸೂರ ಎಂಬ ಲಾಹೋರಿನ ಒಂದು ಹಳ್ಳಿಯಲ್ಲಿ ನಡೆದ ಘೋರ ಕೃತ್ಯ ಸಾಹುಕಾರ ಚೂನಿಲಾಲನು ಧನಾಢ್ಯ ವರ್ತಕನೊಬ್ಬನು. ನಿನ್ನೆ ರಾತ್ರಿ ಇವನ ಮಲಗಿರುವ ಸಮಯ ಯಾರೋ ಡಕಾಯಿತರು ಇವನನ್ನು ಮಲಗಿದ್ದಲ್ಲೆ ಕಡಿದು, ಇವನು ಮಲಗಿದ್ದ ಮಂಚಕ್ಕೂ ಹಾಸಿಗೆಗೂ ಬೆಂಕಿ ಹಾಕಿ, ಮನೆಯಲ್ಲಿದ್ದ ರೂ ೧೫೦೦ ಹಿಡಿದು ಪಲಾಯನ ಮಾಡಿದ್ದಾರೆ ಹಣವು ಸುಟ್ಟುಹೋದುದರಿಂದ ಅವನನ್ನು ಗುರುತಿಸಲು ಬಹಳ ಕಷ್ಟವಾಯಿತು


[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)**

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಸ್ರಾವವು ಬಂದಾಗುವುದು ಇದನಂತರ ಏನು ಮಾಡಿದರೂ [illegible] ಬೇಕಾದರೆ ಪೂರಾ ವಿಚಾರ ಮಾಡಿ ಔಷಧ [illegible] ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೇವಾಡಾಹಿಯ ಹಾಗೇ ಈ ಚೂರ್ಣದಿಂದ ಯಾವ ತರದ [illegible] ಗುಣಕಾರಿ [illegible] ಕಿಮ್ಮತ್ತು ರೂ ೪—೦—೦ ವಿ ಪಿ ಖರ್ಚು

ವಿಳಾಸ—ಸಂಜೀವಿನೀ ಔಷಧಾಲಯ ಮು ಪೋ ಮಿರಜ, S M C

## ಅನುಕ್ರಮಣಿಕೆ.


ಕಥಕ್ರ . . . ೨
ಸಾಹಿತ್ಯ ಸಂಗ್ರಹ . . ೩
ಅಜಿಸೀನಿಯ . . . . ೫
ಇಟೆಲಿಯು ತನ್ನ ಛಲವನ್ನು ಬಿಡುವ ಹಾಗಿಲ್ಲ ೬
ಅಲ್ಲಲ್ಲಿಯ ವಾರ್ತೆಗಳು . . ೮
ಇಂಗ್ಲಾಂಡಿನಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯು ಏರುತ್ತಿದೆ, ೯
ಆಯುರ್ವೇದೋದ್ಧಾರ . . . ೧೦
ಅಗ್ರಲೇಖ
ಸ್ಫುಟವಿಚಾರಗಳು ,,
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೨
ಡಿಸ್ಟ್ರಿಕ್ಟ್ ಬೋರ್ಡು ಸಭೆ ೧೩
ಕ್ರಿಸ್ತ ಭೂಖಂಡ . ೧೪
ವಿವಿಧ ಸಮಾಚಾರಗಳು. . ೧೬
ನಡೆದ ಕತೆಗಳು, ನಗೆಬಾರೆಡು ೧೮



## ಸ್ವದೇಶಾಭಿಮಾನಿ

ತಾ. ೨೭ನೇ ಶುಕ್ರವಾರ ಸಪ್ಟಂಬರ '೩೫


# ಆಯುರ್ವೇದೋದ್ಧಾರ

'ಹಿಂದೀ ವೈದ್ಯಕಕ್ಕೂ, ವಿಲಾಯತಿ ವೈದ್ಯಕಕ್ಕೂ ಯುದ್ಧವಾಗಿಯೇ' ಇದೆ ಎಲ್ಲೋಪತಿಯು ಆಯುರ್ವೇದವನ್ನು ನುಂಗಿಕೊಂಡೇ ಬರುವಾಗ, ಆಯುರ್ವೇದವು ಹಿನ್ನೆಟ್ಟುತ್ತಿರುವುದು ಅಪಹಾಸ್ಯಕರವಾಗಿದೆ

ಆಯುರ್ವೇದವು ಹೀಗೆ ಅಸ್ತಮೊಂದುತ್ತಿರುವುದಕ್ಕೆ, ಆಯುರ್ವೇದದ ಹೆಸರಲ್ಲಿ, ಅದರ ಭಕ್ತರೆಂಬವರೇ ಮಾಡುತ್ತಿರುವ ಪಿತೂರಿಗಳಾಗಿವೆ ಮೊದಲನೆದಾಗಿ, 'ತ್ರಿದೋಷ'ಗಳನ್ನು ಗಳಹುವುದಕ್ಕೆ ಇವರಲ್ಲೇ ಕೆಲವರು ತೊಡಗಲು, ವಿರೋಧೀಪಕ್ಷವಂತೂ ಅದೇ ಸಮಯವೆಂದು ಅಷ್ಟು ಭಾಗವನ್ನೆ ಕಡೆಬೇಳಿಸಿತು ನಾಡಿವಿಜ್ಞಾನವು ಸರಿಯಲ್ಲೆಂದು ಎದೆಗಿಡುವ ಆ ನಳಿಗೆಯನ್ನ ಆಯುರ್ವೇದ ಶಾಸ್ತ್ರಿಗಳು ಬಳಸತೊಡಗಿದರು ಶಸ್ತ್ರಕ್ರಿಯೆಯ ಅಭ್ಯಾಸವಾಗಲಿ, ಪ್ರತ್ಯಕ್ಷ ಜ್ಞಾನವಾಗಲಿ ಇಲ್ಲದೆ ವೈದ್ಯಕ್ಕೆ ಕೈಹಚ್ಚಿ ಅದೊಂದು ವಿಭಾಗವೆ' ಆಯುರ್ವೇದದಲ್ಲಿ ಇಲ್ಲವೆಂಬ ಸುಳ್ಳು ಭಾವನೆಯೂ ಜನರಲ್ಲಿ ಮಾಡುವಂತಾಯಿತು ನಿದಾನದ ಮಾಹಿತಿಯಿಲ್ಲದೆಯೂ, ಆಗಾಗ ಮಾಡಿಕೊಡಬಹುದಾಗಿರುವ ಕಷಾಯ ಕ್ವಾಥಾದಿಗಳನ್ನು ಮಾಡುವ ಬದಲಾಗಿ ಬಾಟ್ಲೀ ಮದ್ದುಗಳನ್ನೆ ಪ್ರಚಾರಕ್ಕೆ ತಂದೂ, ನಮ್ಮದೂ ವಿಲಾಯತಿಯ ಮಾದರಿಯದೆಂದು ಹೇಳತೊಡಗಿ ಆಯುರ್ವೇದದ ಮಹತ್ವವೇ ಕೆಟ್ಟಿತು ಪರಂಪರೆಯಾಗಿ ಅಂಧಶ್ರದ್ಧೆಯಂತಹ ಭಾಗ್ಯದಿಂದ ವೈದ್ಯರು ಹುಟ್ಟಿ ಬೆಳೆದೂ, ಈಗ ವೈದ್ಯಶಾಲೆಗಳಲ್ಲಿ ಅತ್ತ ಯುರೋಪಿಯವೂ ಅಲ್ಲ, ಇತ್ತ ಆರ್ಯವೂ ಅಲ್ಲದ ಮಾದರಿಯಲ್ಲಿರುವ ದೇಶೀಯ ವೈದ್ಯ ಶಾಲೆಗಳಲ್ಲಿ ಅಭ್ಯಾಸಮಾಡಿ ವೈದ್ಯರು ಚಿಕಿತ್ಸೆಗೆ ಕೈಹಚ್ಚಿ ಆಯುರ್ವೇದದ ಪ್ರಭಾವ ಪೂರಯಿಕೆ ಸಂಪತ್ತುಗಳಿಗೆ ಕುಂದನ್ನು ತಂದರು

ಇನ್ನಿದಕ್ಕೆ ಸಮಾಪ್ತಿಯನ್ನು ಮಾಡಲು, ರಿಜಿಸ್ಟ್ರೇಶನ್ ಒಂದಿದೆ, ಮದ್ರಾಸಿನಲ್ಲಿ ಇಂಡಿಯನ್ ಮೆಡಿಕಲ್ ಬೋರ್ಡು ಸ್ಥಾಪನೆ ಹೊಂದಿದೆ" ಈ ಮಾತುಗಳಲ್ಲಿ ಕೋಲನಾಡದಲ್ಲಿ ನೆರೆದ ಆಯುರ್ವೇದ ವಿಶ್ವವಿದ್ಯಾಲಯದಲ್ಲಿ ಆಚಾರ್ಯರಾಗಿರುವ ಎಮ್. ಆರ್. ಸ್ವಾಮಿಯವರು ಭಾಷಣಮಾಡಿದರು.

ಸಮಾಜದ ಕ್ಷೇಮಸಾಧನೆಯ ಸೇವೆಗಾಗಿ ಸಮಾಜದ ಒಂದಂಗವಾಗಿಯೇ ವೈದ್ಯರಿರುವರು. ಹಿಂದೀ ಸಮಾಜದಲ್ಲಿ ವೈದ್ಯರಿಗೆ ನಿಯುಕ್ತವಾದ ಸ್ಥಾನವಿದೆ. ಎಲ್ಲೋಪತಿಯಲ್ಲಿ ವಿಜ್ಞಾನವು ಹಿಂದೆ, ವ್ಯಾಪಾರವು ಮುಂದೆ ಹೀಗೆ ಡಾಕ್ಟರರಿಗೆ ಬಲಕೊಟ್ಟಿವೆ. ಡಾಕ್ಟರುಗಳು ಆಯುರ್ವೇದ ಕ್ರಮಗಳಿಗೆ ಕೈಹಚ್ಚಿ ಕೃತಾರ್ಥರಾಗಬಹುದೆಂದು ನಂಬಿ, ಆಯುರ್ವೇದಕ್ಕೆ ಹಾಳು ಹೆಸರನ್ನು ತರುವುದು ಯೋಗ್ಯವಾಗಿಲ್ಲ.

ಆಯುರ್ವೇದವು ಪುರಾತನ; ಆಧುನಿಕವಲ್ಲ, ಹುಳಿತುಹೋಗಿದೆ, ಎಂದು ಹೇಳಿ, ಹುಸು ಪ್ರಮಾಣಗಳಲ್ಲಿ ಕೆಲವು ಗಾಯ ಹಾಕಲೂ, ಹೆರಿಗೆ ಕೆಲಸ ಕಲಿಸಲೂ ಗರ್ಭಶಾಸ್ತ್ರವನ್ನು ಅದಕ್ಕೆ ಕೂಡಿಸಲೂ 'ಪ್ರಯತ್ನಗಳಾಗುತ್ತಿವೆ! ವೈದ್ಯ ಶುಶ್ರೂಷೆಯ ಕಾರ್ಯಭಾಗವನ್ನು ಹೆಚ್ಚಿಸಿ, ಸರ್ಜನರ ಕಡಿತದ ಕಾರ್ಯಭಾರವನ್ನು ಕಡಿಮೆಮಾಡುವುದು ಅಗತ್ಯವಾಗಿದೆ ಎಂದು ಡಾ| ಕ್ರೊಂಪಟನ್ ಬರ್ನಾಲರವರು ಹೇಳಿರುವುದು ಯಥಾರ್ಥವಾಗಿದೆ

ಜಗತ್ಪ್ರಸಿದ್ಧ ಬರ್ನಾರ್ಡ್ ಶಾರವರು ಬರೆವಂತೆ,-ನಮ್ಮ ಡಾಕ್ಟರುಗಳು ಅತ್ಯಲ್ಪ ವ್ಯವಹಾರಜ್ಞಾನವೂ ಇಲ್ಲದೆ ಅತ್ಯುಚ್ಚ ಪದವಿಗಳನ್ನು ಸಂಪಾದಿಸಲೂ ಆಸ್ಪದಕೊಡಲಾಗಿದೆ, ನಮ್ಮ ವ್ಯಾಗಳನ್ನು ಬ್ರೆಡ್ ಕಡಿದಂತೆ ಕೆತ್ತುವುದಕ್ಕೆ ಕಲಿಯುತ್ತಾರೆ' ಆದರೂ, ಹೊರಗಣ ಹೆಸರನ್ನು ನೋಡಿಯೆ ನಾವು ಇವರಿಂದ ಮೋಸವಾದವಂತಾದರೂ, ವೈದ್ಯರನ್ನು ದೂರುತ್ತೇವೆ, ಅವರು ಶಸ್ತ್ರೋಪಚಾರದಲ್ಲಿ ಅಜ್ಞಾನಿಗಳು ಎನ್ನುತ್ತೇವೆ

ಸರಕಾರವು ಈಗ ಕುಲಕ್ರಮವಾಗಿ ಬಂದಿರುವ ವೈದ್ಯರನ್ನು B ತರಗತಿಗೆ ಸೇರಿಸಿ, ಖಾಸಗಿ ವೈದ್ಯಶಾಲೆಗಳನ್ನು ಅಲ್ಲಿ ಬೇಕಾದ ಸರಂಜಾಮುಗಳೂ ವ್ಯವಸ್ಥೆಯೂ ಇಲ್ಲವೆಂದು ಮುಚ್ಚಿಸಲು ಪ್ರಯತ್ನಿಸುವುದು ಶೋಚನೀಯವಾಗಿದೆ A ಮತ್ತು B ತರಗತಿಗಳೆಂಬುವಲ್ಲಿ, Bಯಲ್ಲಿ ಗುರುಗಳೂ Aಯಲ್ಲಿ ವಿದ್ಯಾರ್ಥಿಗಳಾದವರೂ ಸೇರುವಂತಾದುದು ಯಾವ ನ್ಯಾಯ? ಗುರುಗಳು ದೇವರಿಗೆ ಸಮಾನರೆಂದು ಪೂಜಾರ್ಹರಾಗಿರುವ ಈ ದೇಶದಲ್ಲಿ, ಶಿಷ್ಯಕೋಟಿಯ ಕೆಳಗೆ ಅಪವಾದೀಕಾಗಿ ಬಂದಿರುವ ಈ ವರ್ಗ ವಿಭಜನೆಯ ಅರ್ಥವೇನು?

ಆದುದರಿಂದಲೆ' ವೈದ್ಯರ ಗಳು ತಮ್ಮ ಸ್ವಾತಂತ್ರ್ಯವನ್ನೂ ವಿದ್ಯಾಗೌರವವನ್ನೂ ಸಂರಕ್ಷಣೆ ಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿದೆ ಡಾಕ್ಟರುಗಳ ಕೂಟದ ತೀರ್ಮಾನಗಳಂತೆ ಅವರಿರುವ ದಿನಗಳು ಬಂದಿರುವುದಕ್ಕೆ ಸಾಧು ಸ್ವಭಾವವುಳ್ಳ ವೈದ್ಯರ ವಿನಯಶೀಲತೆಯೆ ಕಾರಣವಾಗಿದೆ

ತುಸು ತುಸು ತಟಕುಗಳಂತೇನೋ ಎಲ್ಲೋಪತಿಯ ಯಾ ಇತರ ವಿಲಾಯತಿ ಕ್ರಮಗಳ ಪರಿಚಯ ಮಾಡಿಕೊಟ್ಟು ಆಯುರ್ವೇದ ಶಾಸ್ತ್ರದಲ್ಲಿ ಪಾರಂಗತರೆಂದ ಕೊಲಜಿನಿಂದ ವೈದ್ಯರನ್ನು ಕಲ್ಪಿಸಿಕೊಡುವುದರಿಂದ, ಮೂಲ ಆಯುರ್ವೇದದ ಮೌಲಿಕತೆಯೂ ನಿರ್ಮಲತ್ವವೂ ಗೌರವವೂ ಕೆಡುತ್ತಿವೆ ಆಯುರ್ವೇದವೆಂದರೆ ಎಂತಹದೆಂದು ಹೇಳಲು ಈ ಬಗೆಯ ವೈದ್ಯರನ್ನು ಕಂಡರೆ ತಿಳಿದೇ ಬರಲಾರದು ಧನ್ವಂತರಿಯ ರಾಜತ್ವದೊಳಗೆ ಇಂತಹ ದಾಳಿ ಹತ ವವರನ್ನ ತಡೆಯಬೇಕಾದುದು ವೈದ್ಯರ ಕರ್ತವ್ಯ ಅಪಹಾಸ್ಯವನ್ನು ಸಹಿಸಿಯಾದ ಬಳಿಕವೂ, ಈ ದಾಳಿಗೆ ತಲೆಯೊಡ್ಡಿಯೂ ನಿಂದು, ಧನ್ವಂತರಿಗೂ ನಿಂದೆಯನ್ನುಂಟುಮಾಡುವವರು ಎಂತಹ ವೈದ್ಯರೆಂದು ಸಂಭಾವನೆ ಹೊಂದಬಹುದು?

ಧನ್ವಂತರಿಯು ಈ ಮಿತ್ರರ ಸಂಕಟದಿಂದ ಪಾರಾಗುವಂತೆ ವೈದ್ಯರು ಪ್ರಯತ್ನಿಸಬೇಕಾಗಿದೆ.

ಇಷ್ಟು ಸ್ಪಷ್ಟವಾಗಿ ಭಾಷಣಮಾಡಿದುದರಿಂದ, ಆಯುರ್ವೇದದ ಪ್ರಚಾರವು ಸದ್ಯದಲ್ಲಿ ಯಾವ ಗಂಡಾಂತರಕ್ಕೊಳಪಟ್ಟಿದೆ ಎಂಬುದನ್ನು ಅವರು ಪ್ರಕಟಿಸಿದ ಹಾಗಾಗಿದೆ ವೈದ್ಯರೇನಂತೆ?

---

### ಮಲೇರಿಯಾ ಜ್ವರವು

ಉಂಟಾಗುವ ಕಾರಣಗಳೂ ಅದರ ನಿವಾರಣೆಯ ಕ್ರಮವೂ ಸರ್ವರಿಗೂ ತಿಳಿದೇ ಇವೆ. ಆದರೂ, ಅದರ ಹಾವಳಿಯೇನೂ ಕಡಿಮೆಯಾಗಿಲ್ಲ. ಕಾರಣವೆಂದರೆ ಅದರ ಹುಟ್ಟಡಗಿಸಲು ಮಾಡಬೇಕಾಗಿರುವ ಪ್ರಯತ್ನಗಳಿಗೆ ಅಗತ್ಯವಿರುವಷ್ಟು ಹಣವು ಕೂಡಿಬರುತ್ತಿಲ್ಲ ಹಣವಿದ್ದಿದ್ದರೆ ಮಲೇರಿಯದ ಹೆಸರನ್ನೆ ಅಳಿಸಬಹುದಾಗಿದ್ದಿತೆಂದು ಪ್ರಸಿದ್ಧ ಸರಕಾರೀ ಮತ್ತು ಖಾಸಗಿ ಡಾಕ್ಟರರು ಅಭಿಪ್ರಾಯಪಡುತ್ತಾರೆ ಮಿಕ್ಕವರ ಮಾತಿರಲಿ, ಸೈನಿಕರಿರುವಲ್ಲಿ ಸಹ ಸೊಳ್ಳೆಗಳನ್ನು ವಿನಾಶಗೊಳಿಸಲು ಅಗತ್ಯವಾಗಿರುವ ಸಾಧನಗಳಿಗೆ ಬೇಕಾಗುವಷ್ಟು ಹಣವು ದೊರೆವುದಿಲ್ಲ ಹೋಗಲಿ ನೀರಾವರಿ ಕೆಲಸಗಳನ್ನಾದರೂ ನೂತನ ಪ್ರಾರಂಭಿಸುವಾಗ, ಆರೋಗ್ಯ ಶಾಖೆಯವರು ಅವನ್ನು ಸೆಂಕ್ಷನುಮಾಡುವಂತೆ ಎಚ್ಚರವಿಟ್ಟರೆ ಅದರಿಂದ ತಾನೆ ಪ್ರಯೋಜನವುಂಟು ನೀರು ಹರಿದುಹೋಗುವಂತೆ ಪ್ರಯತ್ನಗಳು ನಡೆದರೆ, ಸೊಳ್ಳೆಗಳ ಹುಟ್ಟು ಕಡಮೆಯಾಗುವುದು ಇದುವರೆಗೆ ಜ್ಯಾರಿಯಲ್ಲಿರುವ ನೀರಾವರಿ ಕೆಲಸಗಳಿಂದ ಆರೋಗ್ಯಕ್ಕೆ ಈ ಭಾಗದಲ್ಲಿ ಉಂಟಾಗುವ ಹಾನಿಯನ್ನು ಈಗ ನಿವಾರಿಸಬೇಕಾದರೆ ೨½ ಕೋಟಿ ರೂಪಾಯಿ ಬೇಕಾಗುವುದಂತೆ ತೋಟಗಳಲ್ಲಿ ಕೆಲಸಮಾಡುವ ಬಡಜನಗಳ ಆರೋಗ್ಯವೆಲ್ಲವು ಈ ಜ್ವರಬಾಧೆಯಿಂದ ಕೆಡುತ್ತಲಿದೆ ತೋಟದ ಸಾಹುಕಾರರು ಈ ವಿಷಯದಲ್ಲಿ ತಾವೇ ನಿವಾರಣೋಪಾಯ ಮಾಡಬೇಕೆಂದು ಕಾನೂನು ಉಂಟಾಗಿದ್ದರೆ ಎಷ್ಟು ಚೆನ್ನಾಗಿತ್ತು? ಜನರಲ್ಲದರೂ ಮುನಿಸಿಪಾಲಿಟಿಗಳ ಸ್ವಚ್ಛತೆಯ ಕಡೆಗೆ ದೃಷ್ಟಿ ಹರಿಸಿದ್ದರೆ ಸಾಕಷ್ಟು ಉಪಕಾರವಾಗುತ್ತಿತ್ತು ಒಲಿಂಪನಲ್ಲಿ ಕಳೆದ ವರ್ಷ ಎಂಟು ಲಕ್ಷ ಜನರೇ ಈ ರೋಗದಿಂದ ಸತ್ತರು, ಅದು ಅಂಟುರೋಗವಾಗಿ ಹರಡಿದ ಕಾರಣ ಇಂಡಿಯದಲ್ಲಿ,-ಪ್ರತಿ ವರ್ಷ ಹತ್ತು ಲಕ್ಷ ಎಂದರೆ ಕನಿಷ್ಠ ಸಂಖ್ಯೆಯಾಗಿ, ಈ ಜ್ವರಕ್ಕೆ ತುತ್ತಾಗುತ್ತದೆ ಅಲಕ್ಷ್ಯವೇ ರೋಗಕಾರಣ

### ಕಸಗೂಡುಗಳು

ಊರ ನಿರ್ಮಲತೆಯ ವಿಷಯದಲ್ಲಿ ಜನಗಳಿಗೆ ಸಾಕಷ್ಟು ಉತ್ಸಾಹವಿಲ್ಲ ಮುನಿಸಿಪಾಲಿಟಿಯು ಎಚ್ಚರವಾಗಿಯೂ ಇಲ್ಲ ಎಂದ ಮಹಾತ್ಮಾಜಿಯವರು ಸಂತಾಪಗೊಳ್ಳುವರಷ್ಟೆ ಮಧುರಾ ಜಿಲ್ಲೆಯ ಮ್ಯುನಿಸಿಪಾಲಿಟಿಯವರು ಕಸಗೂಡಗಳನ್ನು ಯಾರಿಗೆ ಬೇಕೋ ಅವರ ಮನೆಯ ವರಾಂಡದಲ್ಲಿ ಇರಿಸಿ ತಾವೇ ಶುಚಿಗೊಳಿಸುವರಾಗಿ ತಿಳಿಸಿದರು. ಬಹಳ ಕಡಿಮೆ ಜನರಿಗೆ ಇವು ಬೇಕಾದವು ಕಸವಿಲ್ಲವೆಂದಲ್ಲಿ, ಈ ಗೂಡುಗಳ ಬೇಡವೆಂದು' ಮ್ಯುನಿಸಿಪಾಲಿಟಿಯು ಗೂಡಗಳನ್ನಿಟ್ಟು ಸ್ವಂತ ಖರ್ಚಿನಿಂದ ಅವನ್ನು ಶುಚಿಮಾಡುವವೆಂದರೂ ಅವು ಬೇಡವಾಗಿವೆ ಗೂಡುಗಳಿಗೇನಾದರೂ ಹಾನಿಯಾದೀತೆಂದು ಬೆದರಿಯಲ್ಲ, ಅವನ್ನು ಶುಚಿಗೊಳಿಸುವ ಜನರು ಆ ದಾರಿಯಾಗಿ ಬಂದು ಮನೆಗಳ ಬಳಿ ಸುಳಿದು ಅಸ್ಪೃಶ್ಯತೆಯ ಮಲಿನತೆಯನ್ನು ವಾತಾವರಣದಲ್ಲಿ ಸುಳಿಯಿಸಿ ಹಾನಿಯನ್ನುಂಟುಮಾಡುವರೆಂದೇ ಜನಗಳ ಅಂಜಿಕೆಯಂತೆ ನಿರ್ಮಲತೆಗೂ ಧರ್ಮಜೀವನಕ್ಕೂ ಗಂಟಿಲ್ಲವೆ? ಮಡಿಯಾಗಿರಲಿಚ್ಛಿಸುವವರಿಗೆ ಕಸಹರಡಿಸಿಯೇ ಮಡಿ ಕಾಪಾಡಿಕೊಳ್ಳಬೇಕಾಗಿದೆಯೆ? ಸುತ್ತಲೂ ನರಕವನ್ನು ಹಬ್ಬಿಸಿಟ್ಟು ನಡುವೆ ಜೀವಿಸಿದರೆ ಅದು ದೇವಲೋಕದ ಜೀವನಕ್ರಮವಾಯಿತೆ?

### ತಲೆಗೆ ಎರೆದ ನೀರು

ಕಾಲುಬುಡದ ವರೆಗೂ ಹರಿದಿಳಿಯುವುದು. ಇಂಡಿಯಾ ಸರಕಾರವು ಕ್ರಿಮಿನಲ್ ಕಾನೂನಿನ ತಿದ್ದುಪಡಿಗಾಗಿ ಎರಡುಸಲ ಪ್ರಯತ್ನಿಸಿ, ಅದು ಅಸೆಂಬ್ಲಿಯಿಂದ ತಿರಸ್ಕೃತವಾಗಲು ಕೊನೆಗೆ ಗವರ್ನರ್ ಜನರಲರ ಶಿಫಾರಸಿನಿಂದಲೇ ಸಬಲವಾಗಿ ನಿಲ್ಲುವಂತೆ ಮಾಡಿಕೊಂಡಿತು. ಆ ಆಕ್ಟು ಈ ದೇಶದ ಯಾವ ಪ್ರಾಂತ್ಯಕ್ಕೆ ಬೇಕಾದರೂ ಅನ್ವಯಿಸುವಂತೆ ರಚಿತವಾಗಿದೆ ಈಗ ಮುಂಬಾಯಿ ಸರಕಾರವು ಅಲ್ಲಿನ ಕೌನ್ಸಿಲಿನಲ್ಲಿ ಅಂತಹದೊಂದು ಕಾನೂನಿನ ಮಸೂದೆಯನ್ನು ಮಂಜೂರಾತಿಗಾಗಿ ಇದಿರು ತಂದಿದೆ ಕಾಯಿದೇಭಂಗ ಚಳವಳವು ಇದ್ದಾಗ ತಾನೆ ಇಂತಹ ಆಕ್ಟನ್ನು ಆ ಸರಕಾರವು ಜ್ಯಾರಿಗೆ ತಂದಿದ್ದಿತು ಈಗ ಆ ಚಳವಳವಿಲ್ಲ ಆದರೆ, ಪುನಃ ಅದು ತಲೆಯೆತ್ತಿದರೆ? ಸರ್ಟಿಫಿಕೇಟು ಮೂಲಕ ಜೀವಧಾರಣೆ ಮಾಡಿಕೊಂಡಿರುವ ಇಂಡಿಯಾ ಆಕ್ಟು ಇಲ್ಲವೆ? ಅದು ಮುಂಬಾಯಿ ಸಂಸ್ಥಾನಕ್ಕೆ ಅನ್ವಯಿಸಲಾರದೆ? ಹಾಗಿದ್ದರೂ ಈ ಮಸೂದೆಯೇಕೆ? ಯುಕ್ತ ಪ್ರಾಂತ್ಯದವರು ತೀವ್ರ ನಿರಾಕರಣೆಯ ಚಳವಳವಿದ್ದಾಗ ಒಂದು ಇಂತಹ ಕಾನೂನು ಉಂಟುಮಾಡಿಕೊಂಡಿದ್ದರು ಈಗ ಆ ಚಳವಳವೇನೂ ಇಲ್ಲವಾದರೂ, ಹಿಂದಣ ಕಾನೂನನ್ನೆ ಇನ್ನೂ ಐದು ವರ್ಷಗಳ ತನಕ ಊರ್ಜಿತವಾಗಿರಬೇಕೆಂದು ಹೊಸ ಪ್ರಯತ್ನಗಳಾಗುತ್ತಿವೆ ಪ್ರಾಂತಿಕ ಸರಕಾರಗಳ ಅಭಿಪ್ರಾಯ ಕೇಳಿಕೊಂಡೇ ಎಸೆಂಬ್ಲಿಯ ಮುಂದೆ ಮಸೂದೆಯನ್ನಿಟ್ಟಿದ್ದರಾಗಿ ಅಂದಿನ ಹೇಳಿಕೆಯಿತ್ತು ಆ ಕಾನೂನು ಎಂತಾ ಆಗಿದೆ, ಇನ್ನೇಕೆ ಹೋದಹೋದಲ್ಲೆಲ್ಲ ಹೊಸ ಕಾನೂನುಗಳು? ಹೊಸ ಕಾನೂನಿನಿಂದ ಅಧಿಕಾರಗಳು ದೊರೆತಂತೆ, ಅವುಗಳ ದುರುಪಯೋಗವೂ ಹೆಚ್ಚುವುದುಂಟು ಎಂದು ಇತಿಹಾಸದ ಪಾಠವಾಗಿದೆ ಎಂದೇ ಪತ್ರಿಕೆಗಳ ಟೀಕೆ.

---


**Notice to subscribers and Advertisers of the**

# Swadeshabhimani.

On account of the Vijaya Dasami Holiday, there will be no publication of our weekly on 4-10-35 In its stead a Dasara Special Number will be sent free to all of our subscribers

## ಸ್ವದೇಶಾಭಿಮಾನಿಯ

**ಚಂದಾದಾರರೂ ಜಾಹೀರಾತುದಾರರೂ ಗಮನಿಸಬೇಕು.**

ವಿಜಯ ದಶಮಿಯ ರಜಾ ಸಂಬಂಧವಾಗಿ ತಾ. 4-10-'35ನೇ ದಿನ ಸ್ವದೇಶಾಭಿಮಾನಿಯ ನಿತ್ಯ ಸಂಚಿಕೆಯು ಹೊರಡುವುದಿಲ್ಲ. ಅದರ ಸ್ಥಾನದಲ್ಲಿ ಅತ್ಯಂತ ಸುಂದರವಾದ ವಿಶೇಷ ಸಂಚಿಕೆಯೊಂದನ್ನು ನಮ್ಮ ವಾಚಕರೆಲ್ಲರಿಗೂ ದಸರಾ ಕಾಣಿಕೆಯಾಗಿ ಕಳುಹಿಸಲಾಗುವುದು ಚಂದಾದಾರರಲ್ಲದವರು 0-2-0 ಆಣೆಗಳ ಅಂಚೆ ಚೀಟು ರವಾನಿಸಿದ್ದಲ್ಲಿ ಈ ವಿಶೇಷ ಸಂಚಿಕೆಯನ್ನು ಕಳುಹಿಸಲಾಗುವುದು.

# ಮಂಗಳೂರು.

ಇದೇ ತಾ. ೨೯ರಿಂದ ಶ್ರೀ ಕೃಷ್ಣ ಸಿನೆಮಾದಲ್ಲಿ ಕಿಂಗ್‌ಕೊಂಗ್ ಎಂಬ ಭಯಂಕರ ಚಲಚ್ಚಿತ್ರವನ್ನೂ ಅದರೊಡನೆ ಕ್ವೆಟ್ಟಾ ಭೂಕಂಪಹಾವಳಿಯ ಚಿತ್ರವನ್ನೂ ಪ್ರದರ್ಶಿಸಲಿರುವರು. ಈ ಪ್ರದರ್ಶನವನ್ನು ಕ್ವೆಟ್ಟಾ ಭೂಕಂಪನಿಧಿಯ ಸಹಾಯಾರ್ಥವಾಗಿ ಮಾಡಲಾಗುವುದು. ಕಿಂಗ್‌ಕೊಂಗ್ ಚಲಚ್ಚಿತ್ರವೆಂದರೆ ಮೊನ್ನೆ ಮಂಗಳೂರಿಗೆ ಬಂದು ಆಬಾಲವೃದ್ಧರನ್ನು ಬೆರಗುಗೊಳಿಸಿದ ಭಯಾನಕ ಚಿತ್ರ. ಅಂತಹ ಚಿತ್ರವು ಇಷ್ಟರ ತನಕವೂ ಚಲಚ್ಚಿತ್ರ ಪ್ರಪಂಚಕ್ಕೆ ಬಂದಿರುವುದಿಲ್ಲ. ಎರಡನೆಯ ಕ್ವೆಟ್ಟಾಭೂಕಂಪ ಹಾವಳಿಯ ಚಿತ್ರದಲ್ಲಿ ಶ್ರೀಯುತ ಬಾಬೂ ರಾಜೇಂದ್ರಪ್ರಸಾದರು ಬಡವರಿಗೆ ಸಹಾಯಮಾಡುತ್ತಿರುವುದನ್ನೂ, ಬಿದ್ದಿರುವ ಮನೆಮಂದಿರಗಳ ರಾಶಿ ರಾಶಿಯನ್ನೂ ನೋಡಬಹುದು. ಬೇಗನೇ 'ರಶೀದ್' ಎಂಬ ಚಿತ್ರವು ಬರುವುದು. ಇದು ಮದನ ಥಿಯೇಟರಿನವರು ತಯಾರಿಸಿದುದು. ಬೇಗಂ ಕಜ್ಜನ್, ಮುಹಮ್ಮದ್ ಹುಸೈನ್, ಯೂಸುಫ್ ಎಫೆಂದಿ, ಜಗದೀಶ ಬಿ. ವಿ. ಮುಹಾಜಬಿನ್ ಮೊದಲಾದವರು ಅಭಿನಯಿಸಿರುವರು. ತಾ. ೪ರಿಂದ "ಎಮರ್ಜೆನ್ಸಿಕೋಲ್" ಎಂಬ ಆರ್ ಕೆ ಓ ಕಂಪೆನಿಯವರ ಚಿತ್ರವು ಬರುವುದು.

ಹಿಂದೂಸ್ಥಾನ ಸಿನೇಮ ಕಂಪೆನಿಯ ಹತ್ತಿರಕ್ಕೆ ಮೊನ್ನೆ ತಾನೇ ವರ್ಗಾಯಿಸಲ್ಪಟ್ಟ ಸಿಟಿ ಆರ್ಯಸಮಾಜ ಮಂದಿರದಲ್ಲಿ ಇದೇ ತಾ ೨೯-೯-೩೫ನೇ ಆದಿತ್ಯವಾರ ಸಂಜೆ ೬ ಗಂಟೆ ಆಕ್ಕೆ ಭಜನೆ ಹೋಮಾದಿ ನಿತ್ಯಕರ್ಮಗಳು ನೆರವೇರಿ, "ಹಿಂದೂ ಧರ್ಮದ ಅಂಧರೂಢಿಗಳ ಪರಿಣಾಮ" ವೆಂಬ ವಿಷಯದಲ್ಲಿ ಅಂದಿನ ಸಭಾಧ್ಯಕ್ಷ ಶ್ರೀ ರಂಗರಾವ್ ಹಟ್ಟಿಯಂಗಡಿಕಾರರ ಉದಾತ್ತಭಾಷಣವು ಜರಗಿ ಮಂಗಳಗೀತಾ ನಂತರ ಸಭಾಂತ್ಯವಾಯಿತು.

ಮಂಗಳೂರಿನ ಬ್ರಹ್ಮಸಮಾಜದ ೬೫ನೇ ವಾರ್ಷಿಕೋತ್ಸವದ ಪ್ರಯುಕ್ತ ಇದೇ ತಾ ೨೯ನೇ ಸಪ್ಟಂಬರದಿಂದ ಈ ಕೆಳಗಿನ ಕಾರ್ಯಕ್ರಮಗಳನ್ನು ಮೊದಲ್ಗೊಂಡು ಬ್ರಹ್ಮಮಂದಿರದಲ್ಲಿ ಜರಗುವುದು. ತಾ ೨೯ನೇ ಸಪ್ಟಂಬರ ಆದಿತ್ಯವಾರ ಪ್ರಾತಃಕಾಲ ೭ ಗಂಟೆಗೆ ಭಜನೆ ೭-೩೦ಕ್ಕೆ ದೇವಾರಾಧನೆ, ಸಾಂವತ್ಸರಿಕ ಉಪಾಸನೆಯು ಸಾಯಂಕಾಲ ೪-೩೦ಕ್ಕೆ ದಿವಂಗತ ಸ್ವಾಮಿ ಈಶ್ವರಾನಂದರ (ಕೆ ರಂಗರಾಯರ) ತೈಲಚಿತ್ರದ ಅನಾವರಣ ಮತ್ತು ಸಾಮಾಜಿಕ ಸಭೆ ಉ ರಘುನಾಥಯ್ಯ ಮೆಮೋರಿಯಲ್ ಹೋಲಿನಲ್ಲಿ. ತಾ. ೩೦ನೇ ಸಪ್ಟಂಬರ ಸೋಮವಾರ ಪ್ರಾತಃಕಾಲ ೭ ಗಂಟೆಗೆ ಕೌಟುಂಬಿಕ ಆರಾಧನೆ, (ಸುಬ್ಬಕೃಷ್ಣಯ್ಯನವರಲ್ಲಿ,) ಸಾಯಂಕಾಲ ೬-೩೦ಕ್ಕೆ ಇಂಗ್ಲಿಷಿನಲ್ಲಿ ಭಾಷಣ ಸುಬ್ಬಕೃಷ್ಣಯ್ಯನವರಿಂದ ೧ನೇ ಒಕ್ಟೋಬರ ಮಂಗಳವಾರ ಪ್ರಾತಃಕಾಲ ೭ ಗಂಟೆಗೆ ಕೌಟುಂಬಿಕ ಆರಾಧನೆ, (ಗಂಗೊಳ್ಳಿ ಕೃಷ್ಣರಾಯರಲ್ಲಿ,) ಸಾಯಂಕಾಲ ೬ ಗಂಟೆಗೆ ಸಂಕೀರ್ತನೆ ೨ನೇ ಒಕ್ಟೋಬರ ಬುಧವಾರ ಪ್ರಾತಃಕಾಲ ೭ ಗಂಟೆಗೆ ಕೌಟುಂಬಿಕ ಆರಾಧನೆ, (ಪಂಡಿತ ವೆಂಕಟರಾಯರಲ್ಲಿ, ಬೋಳಾರ) ಸಾಯಂಕಾಲ ೬-೩೦ಕ್ಕೆ ವಿವಿಧ ಮತಸ್ಥರ ಧರ್ಮಗ್ರಂಥಗಳ ಅಧ್ಯಯನವು ತಾ ೩ನೇ ಒಕ್ಟೋಬರ ಗುರುವಾರ ಪ್ರಾತಃಕಾಲ ೭ ಗಂಟೆಗೆ ಕೌಟುಂಬಿಕ ಆರಾಧನೆ (ಎಸ್ ಶ್ರೀನಿವಾಸನವರಲ್ಲಿ,) ಸಾಯಂಕಾಲ ೪-೩೦ಕ್ಕೆ ಸ್ತ್ರೀಯರ ಸಭೆ ೬ ಗಂಟೆಗೆ ಧರ್ಮ ಸಂಭಾಷಣೆ ಮತ್ತು ಸಂಗೀತಸಭೆಯು ದಿನ ತಾ ೪ನೇ ಒಕ್ಟೋಬರ ಶುಕ್ರವಾರ ಪ್ರಾತಃಕಾಲ ೭ ಗಂಟೆಗೆ ಕೌಟುಂಬಿಕ ಆರಾಧನೆ, (ಯು ಮಂಜಪ್ಪನವರಲ್ಲಿ,) ಸಾಯಂಕಾಲ ೬-೩೦ಕ್ಕೆ ವಿದ್ಯಾರ್ಥಿಗಳಿಗೆ ಇಂಗ್ಲಿಷಿನಲ್ಲಿ ಭಾಷಣ, ಸುಬ್ಬಕೃಷ್ಣಯ್ಯನವರಿಂದ. ತಾ. ೫ನೇ ಒಕ್ಟೋಬರ ಶನಿವಾರ ಪ್ರಾತಃಕಾಲ ೬ ಗಂಟೆಗೆ ಉಷಾಸಂಕೀರ್ತನೆ, ಮತ್ತು ೭ ಗಂಟೆಗೆ ಸಮಾಜ ಸ್ಥಾಪನೆಯ ದಿನ, ಎಮ್ ಅಣ್ಣಪ್ಪನವರ ಉಪನ್ಯಾಸ ಸಾಯಂಕಾಲ ೬-೩೦ಕ್ಕೆ ವಿವಿಧ ಮತಗಳ ಭಕ್ತರ ಚರಿತ್ರೆ. ತಾ. ೬ನೇ ಒಕ್ಟೋಬರ ಆದಿತ್ಯವಾರ ಪ್ರಾತಃಕಾಲ ೭-೩೦ಕ್ಕೆ ದೇವಾರಾಧನೆ, ಹೊಸವರ್ಷದ ಬಗ್ಗೆ ಕೃತಜ್ಞತಾ ಸಮರ್ಪಣೆ ಯು ಮಂಜಪ್ಪನವರಿಂದ, ಸಾಯಂಕಾಲ ೪ ಗಂಟೆಗೆ ಬಾಲಕರ ಪಾರಿತೋಷಕವು, ಮತ್ತು ೫-೩೦ಕ್ಕೆ ಹರಿಕಥೆ, ಶ್ರೀ ಸುಬ್ಬಕೃಷ್ಣಯ್ಯನವರಿಂದ, ಶಾಂತಿವಚನ, ಕೌಟುಂಬಿಕ ಆರಾಧನೆ ವಿನಹಾ ಬೇರೆ ಕಾರ್ಯಗಳು ಸಮಾಜದ ಮಂದಿರದಲ್ಲಿ ನಡೆಯುವುವು.

ಮಂಗಳೂರಿನ ಯೂನಿವರ್ಸಿಟಿ ಎಕ್ಸ್‌ಟೆಂಶನ್ ಬೋರ್ಡಿನ ಆಶ್ರಯದಲ್ಲಿ ಇದೇ ತಾ. ೨೮ನೇ ಶನಿವಾರ (ನಾಳೆ) ೫-೩೦ಕ್ಕೆ ಸೈಂಟ್ ಎಲೋಸಿಯಸ್ ಕೊಲ್ಲೇಜಿನ ಎಕಿಬಿಟ ಹೋಲಿನಲ್ಲಿ ಒಂದು ಸಭೆಯು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಯುತ ಕಣ್ಣಪ್ಪ ಎಂ ಎ ಎಲ್, ಟಿ ಇವರ ಅಧ್ಯಕ್ಷತೆಯಲ್ಲಿ ಜರಗುವುದು. "ಪ್ರಾಥಮಿಕ ಶಿಕ್ಷಣದಲ್ಲಿ ಆಧುನಿಕ ಕ್ರಮ"ವೆಂಬ ಕುರಿತಾಗಿ ಭಾಷಣ ಮಾಡುವರು. ಸರ್ವರಿಗೂ ಸುಸ್ವಾಗತ.

ಇದೇ ತಾ ೨೮ ೯ ೩೫ನೇ ಶನಿವಾರದಿಂದ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ನವರಾತ್ರಿ ಪೂಜಾರಂಭವಾಗುವುದು.

ಇದೇ ತಾ. ೨೨ರಲ್ಲಿ ಗವರ್ನಮೆಂಟ್ ಕೊಲೇಜಿನ ಕರ್ನಾಟಕ ಸಭಾದಿನವು ಬಹು ಸಂಭ್ರಮದಿಂದ ನೆರವೇರಿತು.

ಇದೇ ತಾ ೨೪ರಿಂದ ಇಲ್ಲಿಯ ಕೊಂಗ್ರೆಸ್ ಕಮಿಟಿಯವರಿಂದ ಗಾಂಧಿಸಪ್ತಾಹ ಆಚರಿಸಲ್ಪಡುತ್ತಿದೆ. ತಾ ೨೪ರಲ್ಲಿ ಮೈದಾನಿನಲ್ಲಿ ಭಾಷಣಗಳಾದುವು, ಬೆಳಗ್ಗೆ ಪ್ರಭಾತಫೇರಿ ನಡೆಯಿತು.

ಸುಮಾರು ೧ ಲಕ್ಷ ಹಂಚನ್ನು ಮಂಗಳೂರಿನಿಂದ ಒಯ್ಯುತ್ತಿದ್ದ ೨ ಮಚ್ವೆಗಳು ಅಳಿವೆಯ ಬಾಗಿಲಲ್ಲಿ ನೀರುಪಾಲಾದುವು. ಸುಮಾರು ೪೦೦೦ ರೂಪಾಯಿ ನಷ್ಟವೆಂದು ಅಂದಾಜು.

ರೆವರೆಂಡ್ ವೆಂಬರರಾದ ಮಿ। ಐ ಸಿ ಎಫ್ ಥೋಮಸ್‌ರವರು ನಮ್ಮ ಜಿಲ್ಲೆಯಲ್ಲಿ ತಾ. ೨೩ರಿಂದ ೨೮ರ ವರೆಗೆ ಸಂಚಾರಕ್ಕೆ ಹೊರಟಿರುವರು.

ಉಡುಪಿಯ ಮುನಿಸಿಪಾಲಿಟಿಯು ಕಚೇರಿಯನ್ನು ಮಂಜೇಶ್ವರಕ್ಕೆ ಒಯ್ಯದೆ ಅಲ್ಲಿಯೇ ಇರಿಸುವ ಮತ್ತು ಮಂಗಳೂರಿನ ಸ್ತ್ರೀಯರ ಶಾಲೆಯನ್ನು ಉಡುಪಿಗೆ ಒಯ್ಯದೆ ಮಂಗಳೂರಲ್ಲೇ ಇರಿಸಬೇಕೆಂಬ ಜಿಲ್ಲಾ ಬೋರ್ಡಿನ ನಿರ್ಣಯಗಳನ್ನು ಸರಕಾರವು ಮನ್ನಿಸಿರುವುದಿಲ್ಲ.

ಇಲ್ಲಿಯ ಪೊಲೀಸ್ ಠಾಣೆಯಲ್ಲಿ ಮೊದಲೊಮ್ಮೆ ಕೆಲಸಕ್ಕಿದ್ದ ಒಬ್ಬ [illegible] ಪ್ರಭುಗಳ ಜೊತೆಗೂಡಿ [illegible] ಇದೇ ತಾ ೨೫ರಲ್ಲಿ [illegible] ಎನವು ಸಿಕ್ಕಿರುತ್ತದೆ.

ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ವಿಜಯದಶಮಿ ಸಮಾರಂಭವು ಇದೇ ಒಕ್ಟೋಬರ ತಾ ೪ರಿಂದ ೬ರ ವರೆಗೆ ಆಚರಿಸಲ್ಪಡುವುದು. ಹಳೆಯ ವಿದ್ಯಾರ್ಥಿಗಳು ಸಹಕರಿಸಬೇಕಾಗಿ ಕೋರಲಾಗಿದೆ.

ಇದೇ ತಾ ೨೯-೯-೩೫ ಸಂಜೆ ಇಲ್ಲಿಯ ಟಿಪ್ಪುಸ್ ಕ್ಲಾಸಸ್ ವಿಭಾಗದ ವಾರ್ಷಿಕೋತ್ಸವವು ಜಿಲ್ಲಾ ಕಲೆಕ್ಟರರಾದ ಮಿ। ಗೇಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ನಿವೃತ್ತ ಜಸ್ಟಿಸ್ ಇ ಆಟಿರ್ ಮತ್ತು ದಿವಾನ್ ಬಹದ್ದೂರ್ ಎಸ್ ಸುಬ್ಬರಾಯರ ಭಾವಚಿತ್ರಗಳ ಅನಾವರಣವೂ ಆದುವು.

ಶ್ರೀ ಕಾರ್ಕಳ ಸದಾಶಿವರಾವ ಬಿ ಎ ಎಂ ಎಲ್ ಇವರು ಪಬ್ಲಿಕ ಪ್ರೋಸಿಕ್ಯೂಟರಾಗಿ ನೇಮಕಹೊಂದಿರುವರು.

## ವಿಮಾ-ವಾಣಿಜ್ಯ ಬೆಂಗಳೂರು ಮಾಸಪತ್ರಿಕೆ

ಸಂಪಾದಕರು — ಶ್ರೀ ಜೆ ಜಿ ದೊಡ್ಡಬೀರಪ್ಪನವರು.

ಜೀವವಿಮೆ ಬ್ಯಾಂಕಿಂಗ್ ವ್ಯಾಪಾರ ಇವುಗಳಿಗೆ ಮೀಸಲಾಗಿಡಲ್ಪಟ್ಟಿರುವ ಸಚಿತ್ರ ಮಾಸಪತ್ರಿಕೆಯು ಆಧುನಿಕ ಕನ್ನಡ ನಾಡಿನಲ್ಲಿ ಇದೊಂದೇ. 'ವಿಮಾ-ವಾಣಿಜ್ಯ' ವೆಂಬ ಅದರ ಹೆಸರಿನಿಂದಲೇ ಅದರ ಉದ್ದೇಶಗಳು ಸ್ವಯಂವ್ಯಕ್ತ. ಕನ್ನಡನಾಡಿನಲ್ಲಿ ವಿಮಾ-ವಾಣಿಜ್ಯಗಳು ತೀರ ಶೈಶವಾವಸ್ಥೆಯಲ್ಲಿವೆ. ಅವುಗಳಿಗೆ ಯೋಗ್ಯ ಪ್ರಚಾರಬಲವು ಇಲ್ಲದಿರುವುದೇ ಈ ಸ್ಥಿತಿಗೆ ಕಾರಣವೆಂದು ಹೇಳಬಹುದು. ನಮ್ಮ ನಾಡಿನಲ್ಲಿ ವಿಮೆಯ ಮಹತ್ತಿಕೆಯ ಪ್ರಸಾರವಾಗಬೇಕಾದರೆ ಮೊದಲು ಸುಶಿಕ್ಷಿತರು ವಿಚಾರಿಸಿ ಅಶಿಕ್ಷಿತರನ್ನು ಸುಸಂಸ್ಕೃತರನ್ನಾಗಿ ಮಾಡಬೇಕು. "ಧರ್ಮ ಸತ್ಕಾರ್ಯ ಮಹತ್ತುತ್ವಗಳು ಸಾಮ್ರಾಜ್ಯ ಕೀರ್ತಿ ಮತ ಸಾಹಸ ಅಭ್ಯುದಯ ಭೂತ ವರ್ತಮಾನ ಭವಿಷ್ಯಗಳೆಲ್ಲವೂ ಮಿಗತೆಯ ಮಹಾಶಕ್ತಿಯಲ್ಲಿ ಅಡಗಿವೆ" ಎಂಬ ಅರ್ಥವ ವೇದದ ಆಧಾರ ತತ್ವವು ವಿಚಾರಣೀಯವಿದೆ. ಜನತೆಯು ಮಿಗತೆಗಾರರಂಭಿಸಬೇಕಾದರೆ ಈಗಿನ ಕಾಲದಲ್ಲಿ ವಿಮೆಯೊಂದೇ ರಾಜಮಾರ್ಗ. ವಾಣಿಜ್ಯದ ಕುರಿತಾಗಿ ಹೇಳುವುದಾದರೂ ಇದೇ ಮಾತು. ವಾಣಿಜ್ಯದಿಂದಲೇ ಜಗತ್ತು ನಡೆಯುತ್ತಿದೆ. ವ್ಯಾಪಾರವಿಲ್ಲದಿದ್ದರೆ ಬದುಕೇ ಇಲ್ಲ ಎಂದಿರುವಾಗ ಈ ವಿಷಯವು ಕೂಡಾ ಎಷ್ಟು ಪ್ರಾಮುಖ್ಯವಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಇಂತಹ ಸಂದಿಗ್ಧವಿಷಯಗಳ ಪ್ರಚಾರ ಕಾರ್ಯಕ್ಕಾಗಿ ಹೊರಟಿರುವ 'ವಿಮಾ ವಾಣಿಜ್ಯ'ಕ್ಕೆ ಸುಸ್ವಾಗತವನ್ನು ಬಯಸದಿರುವ ಕನ್ನಡಿಗರಾರು?

# ತಾಲೂಕುಗಳಿಂದ.

ಪುತ್ತೂರು — ಬಿಸಿಲ್ ಫಂಡ್‌ನ ಜಿಲ್ಲಾ ಅಭಿವೃದ್ಧಿಗಾಗಿ ಈ ಸಂಘದ ವಿಶೇಷ ಮಹಾಸಭೆಯೊಂದನ್ನು ಇದೇ ಒಕ್ಟೋಬರ ೫ ೧ನೇ ಮಂಗಳವಾರ ಅಪರಾಹ್ನ ಘಂಟೆ ೨-೩೦ಕ್ಕೆ ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಿರುತ್ತದೆ. ಸದರಿ ಸಭೆಗೆ ಸಂಘದ ಮೆಂಬರರೆಲ್ಲರೂ ಅಗತ್ಯ ಬರಬೇಕಾಗಿ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಕುಂಭಾಶಿ—ಶ್ರೀಯುತ ಕುಂಭಾಶಿ ರಂಗನಾಥ ಉಪಾಧ್ಯಾಯರ ಧರ್ಮಪತ್ನಿಯೂ, ಕುಂಭಾಶಿ ಬೋರ್ಡ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಟಿ ಎಲ್ ಉಡುಪ ಇವರ ಪ್ರಿಯ ಭಗಿನಿಯೂ ಆದ ಶ್ರೀ ಶಾರದೆ ಎಂಬವರು ಕಳೆದ ತಾ ೧೬-೯-೩೫ನೇ ಸೋಮವಾರ ಪೂರ್ವಾಹ್ನ ೫ ಗಂಟೆಗೆ ಗಂಡುಕೂಸನ್ನು ಹಡೆದು, ಅದೇ ದಿನ ಅಪರಾಹ್ನ ೫ ಗಂಟೆಗೆ ತನ್ನ ೧೭ನೇ ವಯಸ್ಸಿನಲ್ಲಿ ದಿವಂಗತರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯ [illegible] ಕುಟುಂಬಕ್ಕೆ ಸಮಾಧಾನವನ್ನೂ [illegible] ರೋಗ್ಯವನ್ನೂ ಶ್ರೀದೇವರು ಅನುಗ್ರಹಿಸಲೆಂದು ಪ್ರಾರ್ಥನೆ.

ಉಡುಪಿ—ತಾ ೨೧ನೇ [illegible] ಸಾಯಂಕಾಲ ೫-೩೦ಕ್ಕೆ ಕಾಲೇಜ್ ಬೋರ್ಡ್ ಹೈಸ್ಕೂಲಿನಲ್ಲಿ [illegible] ಕಳೆದ ವರ್ಷದ [illegible] ಡಿಸ್ಟ್ರಿಕ್ಟ್ ಎಜುಕೇಶನಲ್ ಆಫೀಸರರು [illegible] ಅಧ್ಯಕ್ಷರ ಭಾಷಣಾದಿ [illegible] ವಿದ್ಯಾರ್ಥಿಗಳಿಗೆ ಬಹುಮಾನಗಳ [illegible]

[illegible] ಶ್ರೀ ಕೃಷ್ಣಸ್ವಾಮಿ [illegible] ಸಂಬಂಧ [illegible]

[illegible] ಮಾನ್ಯ ಮದ್ರಾಸ [illegible] ಅಪವಾದಗಳನ್ನು ತಿಳಿಯುವಂತೆ ದಪ್ಪಟೀಕಾ [illegible] ಸಂದರ್ಭವೀಯಬೇಕೆಂದು ಬರೆದ [illegible] ಈ ವರೆಗೆ ಉತ್ತರವೇ ಇಲ್ಲದಿದ್ದಾಗ್ಯೂ ಕಳೆದ [illegible] ಸರಕಾರದ ಪ್ರಕಟಣೆ ಸಂಬಂಧವಾಗಿ ಮಾನ್ಯ ಮದ್ರಾಸ್ ಗವರ್ನರ್ ಧೊರೆಗಳವರಲ್ಲಿಗೆ ದಪ್ಪಟೀಕಾನನ್ನು [illegible] ಬೇಕೆಂದು [illegible] ಸಭೆಯಲ್ಲಿ [illegible] ಮಾನ್ಯ ಗವರ್ನರ್ ಧೊರೆಗಳ ಪ್ರೈವೆಟ್ ಸೆಕ್ರೆಟರಿಗಳಿಗೆ [illegible] ಸದರಿ ದಪ್ಪಟೀಕಾನ [illegible] ಅವರ ತಾ ೧೯ನೇ [illegible] ಮಾನ್ಯ ಗವರ್ನರ ಧೊರೆಗಳು [illegible] ಉಡುಪಿ ಮ್ಯುನಿಸಿಪಾಲಿಟಿಯ [illegible] ದಪ್ಪಟೀಕಾನನ್ನು ಭೇಟಿ ಕೊಟ್ಟು [illegible] ಪ್ರಯೋಜನವಾಗಲಿಕ್ಕಿಲ್ಲವೆಂದು ದಪ್ಪಟೀಕಾನನ್ನು ತಿರಸ್ಕೃತಮಾಡಿರುವರು. ಇದೇ ಉಡುಪಿ ಮಹಾಜನರು ಸಾರ್ವಜನಿಕ ಸಭೆ [illegible] ಬೋರ್ಡ್ [illegible] ಅನೇಕ [illegible] ಮ್ಯುನಿಸಿಪಾಲಿಟಿಯನ್ನು [illegible] ಜನಹಿತವನ್ನು [illegible] ಯೋಜನೆಯನ್ನು [illegible] ಪಂಚಾಯತ ಬೋರ್ಡನ್ನಾದರೂ [illegible] ಪ್ರಯತ್ನಪಟ್ಟರು, ಮದ್ರಾಸು ಕೌನ್ಸಿಲಿನಲ್ಲಿ ಈ ಬಗ್ಗೆ ಚರ್ಚೆ ಪ್ರಶ್ನೆಗಳು ನಡೆದಿದ್ದು ಕೌನ್ಸಿಲಿನ ನಮ್ಮ ಜಿಲ್ಲೆಯ ಪ್ರತಿನಿಧಿಗಳೊಡಗೂಡಿದ ನಮ್ಮ ಅಹವಾಲುಗಳನ್ನು ಮಾನ್ಯ ಗವರ್ನರರಾದರೂ ಕಿವಿಯಾರೆ ಕೇಳಿಕೊಳ್ಳುವ ದಪ್ಪಟೀಕಾನ ಅವಕಾಶ ಕೊಡದಿದ್ದ ಬಗ್ಗೆ ತುಂಬಾ ವಿಷಾದವುಂಟಾಗಿದೆ. ಮಹಾಸಭೆ [illegible] ಈ ಬಗ್ಗೆ ನಿಷೇಧ ಹೊರಡಿಸುವ, ಜಿಲ್ಲಾ ಬೋರ್ಡಿನವರೂ ಈ ಬಗ್ಗೆ ನಿರ್ಣಯಮಾಡುವ ಹಾಗೂ ಉಡುಪಿಯ ಪ್ರತಿನಿಧಿಗಳು ಜಿಲ್ಲಾ ಬೋರ್ಡ್ ಮದ್ರಾಸು ಕೌನ್ಸಿಲಿನ ಪ್ರತಿನಿಧಿಗಳು ಈ ಕುರಿತು ಏನು ಮಾಡುವರೆಂದು ನಿರೀಕ್ಷಿಸಲಾಗದೆ ಮಾನ್ಯ ಸರಕಾರವು ಕೊನೆಗೆ ತೀರ್ಮಾನವನ್ನು ಹೇಗೆ ಮಾಡುವುದಿದ್ದರೂ, ದಪ್ಪಟೀಕಾನ ಮೂಲಕ ಪಟ್ಟಣಿಗರ ಅಂಟೋಣವನ್ನು ತಿಳಿಯಾಕೆಯಾದರೂ ಕೇಳುವುದರಲ್ಲಿ ನ್ಯಾಯವಿತ್ತು. ಉಡುಪಿ ಮಹಾಜನರು ಇನ್ನೇನು ಮಾಡಿಯಾರು?

ಶ್ರೀ ಬೈಲೂರು ವಾಸುದೇವರಾವ್ ಬಿ ಎ, ಬಿ ಎಲ್, ಎಡ್ವೊಕೇಟ್, ಇವರು ತಾಲೂಕು ಕೊಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಿರುತ್ತಾ ಲೋಕಲ್ ಬೋರ್ಡ್ ಸರ್ಕಲಿಗೆ ಕಾಂಗ್ರೆಸ್ ಉಮೇದ್ವಾರರು ಜಿಲ್ಲಾ ಸಿವಿಲ್ ಬೋರ್ಡಿನಿಂದ ಆರಿಸಲ್ಪಟ್ಟಿರುತ್ತಾ ಸ್ವತಂತ್ರ ನೇಶನಲಿಸ್ಟ್ ರೀತ್ಯಾ ಕೋರ್ಟ್ ಸರ್ಕಲಿಗೆ ಉಮೇದ್ವಾರಿಕೆಯನ್ನು ಪ್ರಕಟಿಸಿರುತ್ತಾರೆ. ಇದು ಕಾಂಗ್ರೆಸ್ ನೀತಿಗೆ ಸರಿಯೋ ಎಂಬುದಾಗಿ ಜಿಲ್ಲಾ ಕಮಿಟಿಯವರಾಗಲಿ ಪ್ರಾಂತಿಕ ಕಮಿಟಿಯವರಾಗಲಿ ನಿಷ್ಕರ್ಷಿಸಬೇಕಿದ್ದಿದೆ. ಕೊಂಗ್ರೆಸ್ ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಭಾಗವಹಿಸುವುದು ಹೊಸತಾಗಿರುತ್ತ, ಕೊಂಗ್ರೆಸ್ ಕಮಿಟಿಯು ಆಗಿಂದಾಗ ವಿವೇಚನೆಮಾಡಿ ಜನತೆಗೆ ಸರಿಮಾರ್ಗವನ್ನು ತೋರಿಸಬೇಕಾಗಿರುತ್ತದೆ.

### ಕೊಪ್ಪ ಸಮಾಚಾರ

ಈ ಪ್ರಾಂತ್ಯದಲ್ಲಿ ೫ ೬ ದಿನಗಳಿಂದ ಮಳೆಯು ಸುತರಾಂ ಇರುವುದಿಲ್ಲ. ರಸ್ತೆಗಳೆಲ್ಲಾ ಚೆನ್ನಾಗಿ ಒಣಗಿ ಪ್ರಯಾಣಕ್ಕೆ ಬಹಳ ಅನುಕೂಲವಾಗಿರುತ್ತದೆ. ಕಾಯಿಲೆಗಳು ಏನೂ ಇಲ್ಲದೆ ಜನರೆಲ್ಲಾ ಆರೋಗ್ಯವಾಗಿರುತ್ತಾರೆ. ಹವವೂ ಬಹಳ ಅನುಕೂಲವಾಗಿರುತ್ತದೆ.

ಇಲ್ಲಿಯ ಶಂಕರ ಮೋಟರ್ ಕಂಪೆನಿಯ ಮಾಲೀಕರೂ ಮ್ಯಾನೇಜಿಂಗ [illegible] ಆದ ಮಿ। ರಾ ಎಂ ಎಸ್ ದಾವೇಗೌಡರು ಅವರ ತಂದೆಯವರಾದ ಶ್ರೀಮಾನ್ ಸಿದ್ದೇಗೌಡರ ಹೆಸರಿನಲ್ಲಿ ಕಟ್ಟಿಸುತ್ತಿರುವ ಫ್ರೀ ಮಂದಿರ (ಟೌನ್ ಹಾಲ್)ದ ಕೆಲಸವು [illegible] ಭಾಗ ಪೂರೈಸಿರುತ್ತದೆ. ಇದರ ಆರಂಭೋತ್ಸವವು ನವಂಬರ್ ತಿಂಗಳಲ್ಲಿ ನಡೆಯಬಹುದೆಂದು ತಿಳಿದುಬಂದಿರುತ್ತದೆ. ಅಲ್ಲದೇ ಅವರು ಇಲ್ಲಿಯ ವಿದ್ಯಾರ್ಥಿಗಳ ಅನುಕೂಲಕ್ಕೆ ಧರ್ಮಾರ್ಥವಾಗಿ ಒಂದು ವಿದ್ಯಾರ್ಥಿನಿಲಯವನ್ನು (ಹೈಸ್ಕೂಲ್ ಕಟ್ಟಡಕ್ಕೆ ಅಭಿಮುಖ) [illegible] ವನ್ನು ಹಾಕಿಸುವವರಿದ್ದಾರೆಂದು ತಿಳಿದುಬಂದಿದೆ.

ಶೃಂಗೇರಿ ಜಗದ್ಗುರುಗಳು ಆರೋಗ್ಯದಲ್ಲಿರುತ್ತಾರೆ. ಈ ಸಾರಿ ಶೃಂಗೇರಿಯಲ್ಲಿ ನವರಾತ್ರಿ ಉತ್ಸವಗಳು ಬಹಳ ವಿಜೃಂಭಣೆಯಿಂದ ನಡೆಯಬಹುದಾಗಿ ಊಹಿಸಲಾಗಿದೆ. ಈ ಸಮ್ಯದ ಶ್ರೀಮಠದ ಏಜಂಟರು ಮಿ। ರಾ। ಪಿ ರಾಘುರಾಮಯ್ಯರು ಅಲ್ಲಿಯ ಅನೇಕ ಏರ್ಪಾಡುಗಳನ್ನು ಬಹಳ ಉತ್ಸಾಹದಿಂದ ಮಾಡುತ್ತಾ ಇದ್ದಾರೆ.

ಈಗಾಗಲೇ ನವರಾತ್ರಿಯ ಸಮ್ಯದ ಶೃಂಗೇರಿ ಶಾರದಾಂಬೆಯವರ ಮತ್ತು ಜಗದ್ಗುರುಗಳವರ ದರ್ಶನಾರ್ಥವಾಗಿ ಹೊರಗಿನಿಂದ ಬರುವ ಯಾತ್ರಾರ್ಥಿಗಳ ಪ್ರಯಾಣ ಸೌಕರ್ಯಕ್ಕಾಗಿ ಶಂಕರ್ ಕಂಪೆನಿಯವರು ಸ್ಪೆಷಲ್ ಏರ್ಪಾಡುಗಳನ್ನು ಬಹಳ ಶ್ರಮದಿಂದ ಮಾಡುತ್ತಿರುವರು. ಹವವೂ ಕೂಡಾ ಬಹಳ ಅನುಕೂಲವಾಗಿರುತ್ತದೆ. ಈಗಾಗಲೇ ಪಟ್ಟಣಗಳಿಂದ ಶೃಂಗೇರಿಗೆ ಹೋಗುವ ಯಾತ್ರಾರ್ಥಿಗಳ ಸಮೂಹವು ಹೆಚ್ಚುತ್ತಲಿದೆ.

### ಚಾರ್ಮಾಡಿ.

ಇದೇ ತಿಂಗಳ ತಾ ೨೪ನೇ ಪ್ರಾತಃಕಾಲ ಚಿಕ್ಕಮಗಳೂರಿನಿಂದ ಬಂದಿರುವ M. Y. 8703 ನಂಬ್ರದ ಬಸ್ಸು ಚಾರ್ಮಾಡಿ ಗಡಿಯಿಂದ ಸುಮಾರು ೪ ಮೈಲು ದೂರದಲ್ಲಿ ಒಂದು ಟರ್ನಿಂಗಿನಲ್ಲಿ ಸ್ಟೀರಿಂಗಿನ ಒಂದು ಬೋಲ್ಟು ತುಂಡಾದುದರಿಂದ ಪಾರಿತಪ್ಪಿ ಬಲಬದಿಗೆ ಜಾರಿತು. [illegible] ಬಸ್ಸು ಪ್ರಯಾಣಿಕರ ಸಮೇತ ಸುಮಾರು ೫೦ ಅಡಿ ಕೆಳಗೆ ಭಯಂಕರವಾದ ಕಾಡಿನ ಮಧ್ಯಕ್ಕೆ ಬೀಳುವುದರಲ್ಲಿತ್ತು. ಆದರೆ ಅದೃಷ್ಟವಶಾತ್ ಒಂದು ಕಲ್ಲಿನ ಬಲದಿಂದಲೇ ಎದುರಿನ ಚಕ್ರವು ಸಿಕ್ಕಿ ನಿಂತುದರಿಂದ ಅನೇಕರ ಪ್ರಾಣ ಉಳಿಯಿತು. ಆದರೂ ಪ್ರಯಾಣಿಕರಲ್ಲಿ ಒಬ್ಬ ಮುದುಕಿಗೆ ಸ್ವಲ್ಪ ಮಾತ್ರ ಪೆಟ್ಟು ತಗಲಿದೆ. ಒಂದು ದನೆಯಷ್ಟು ಚಕ್ರ ಮುಂದುವರಿಯುತ್ತಿದ್ದರೆ ಪ್ರಯಾಣಿಕರ ಹಾಗೂ ಬಸ್ಸಿನ ಕುರುಹು ಸಹ ದೊರೆಯುತ್ತಿದ್ದಿಲ್ಲ. ದೇವರೇ ಎಲ್ಲವನ್ನೂ ಕಾಪಾಡಿದನು.

# ಅಬಿಸೀನಿಯಾವು ಸಂಧಿಯ ಶರ್ತ ಗಳನ್ನು ಸ್ವೀಕರಿಸಿರುತ್ತದೆ.

## ಚಕ್ರಾಧಿಪತ್ಯದಧಿಕಾರವು ಮಾತ್ರ ತನಗೆ ಬೇಕೆಂದಿದೆ.

## ಜಿನೀವಾದಲ್ಲಿ ನಿರಾಶಾಜನಕ ವಾತಾವರಣವು ಹರಡಿದೆ!

### ಜಿನೀವಾದಲ್ಲಿ ಎಲ್ಲಾ ರಾಷ್ಟ್ರಗಳು ಕಂಗೆಟ್ಟಿವೆ!

"ನಾನೇನು ಗುಡ್ಡಬೆಟ್ಟಗಳ ಸಂಗ್ರಾಹಕನೇ?—ಅಷ್ಟು ಹೆಡ್ಡನೇ?"—ಮುಸ್ಸೋಲಿನಿ.

ಇಟಲೀ ಅಬಿಸೀನಿಯಾಗಳ ಯುದ್ಧ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಜಿನೀವಾದಲ್ಲಿ ನೆರೆದುಬಂದ ಪಂಚ ರಾಷ್ಟ್ರ ಧುರೀಣರ ಪರಿಷತ್ತಿನ ಸಲಹೆಗಳನ್ನು ಸೀನಿಯರ್ ಮುಸ್ಸೋಲಿನಿಯವರು ತಿರಸ್ಕರಿಸಿರುವರು. ಜಿನೀವಾದ ಪರಿಷತ್ತು ಶಿಫಾರಸು ಮಾಡಿದ ಕೆಲವು ಶರ್ತಗಳು ತನಗೆ ಬೇಕೆಂದು ಇಟಲಿಯು ನಿರ್ದಾಕ್ಷಿಣ್ಯವಾಗಿ ಹೇಳಿದೆ. ಮುಸ್ಸೋಲಿನಿಯವರು ಒಬ್ಬ ಪತ್ರಿಕಾ ಪ್ರತಿನಿಧಿಯೊಡನೆ ಮಾತನಾಡುತ್ತಾ,—"ಜಿನೀವದ ಸಭಿಕರು ನಾನು ಗುಡ್ಡಬೆಟ್ಟಗಳ ಸಂಗ್ರಾಹಕನೆಂದು ಭಾವಿಸುವಂತಿದೆ—ನಾನೇನು ಅಷ್ಟು ಹೆಡ್ಡನೇ? ನನಗೆ ಜಿನೀವದಿಂದ ಯಾವ ಸೂಚನೆಯೂ ಆಗತ್ಯವಿರುವುದಿಲ್ಲ" ಎಂದು ಹೇಳಿರುವರು. ಅವರು ಇಷ್ಟು ಹೇಳಿದ ಮೇಲೂ ಪಂಚಧುರೀಣರು ತಮ್ಮ ಸಲಹೆಗಳನ್ನು ಇಟಲಿಗೆ ಕೊಟ್ಟರು. ಅವುಗಳು ತಿರಸ್ಕೃತವಾಗಿರುವುದನ್ನು ಕೇಳಿ ಇಡೀ ಯೂರೋಪು ಖಂಡವು ದಿಗಿಲುಬಿದ್ದಿದೆ.

ಇಟಲಿಯ ಮಂತ್ರಿಮಂಡಲವು ಮೊನ್ನೆ ಜರಗಿ "ಜಿನೀವಾ ಪರಿಷತ್ತಿನ ಸಲಹೆಗಳು ಎಷ್ಟು ಮಾತ್ರಕ್ಕೂ ಸ್ವೀಕಾರ ಯೋಗ್ಯವಾಗಿಲ್ಲ —ನಮಗೆ ಸಿಗುವುದಾದರೆ ಈ ಕೆಳಗಣ ಸೌಕರ್ಯಗಳು ಸಿಗಲಿ" ಎಂದರು.

ಅಬಿಸೀನಿಯಾದ ಸೈನಿಕರು ಪೂರ್ಣವಾಗಿ ನಿಶ್ಶಸ್ತ್ರಧಾರಿಗಳಾಗಬೇಕು, ಅಬಿಸೀನಿಯಾದ ಸೈನ್ಯವನ್ನು ಇಟಲಿಯು ಮೇಲ್ವಿಚಾರಣೆ ನೋಡಿ, ಪುನರ್ರಚಿಸಬೇಕು, ಅಡಿಸ್ ಅಬಾಬಾದ ಪಶ್ಚಿಮದಿಂದ ಉತ್ತರ ದಕ್ಷಿಣಗಳ ಭಾಗದಲ್ಲಿ ರುವ ಪ್ರದೇಶವನ್ನು ಇಟಲಿಗೆ ಬಿಟ್ಟುಕೊಡಬೇಕು. ಆ ಮೂಲಕ ಎರಿಟ್ರಿಯಾ ಮತ್ತು ಇಟಾಲಿಯನ್ ಸೋಮಾಲಿಲ್ಯಾಂಡಿನ ಸಂಬಂಧವಾಗಬೇಕು. ಅಬಿಸೀನಿಯಾದ ಉಳಿದ ಭಾಗಗಳು ಇಟಲಿಯ ವಶಾಧೀನದಲ್ಲಿ ತೆರೆಯಲ್ಪಡಬೇಕು" ಈ ಕೋರಿಕೆಗಳಿಗೆಲ್ಲ ಅಬಿಸೀನಿಯಾವು ಒಪ್ಪುವಂತಿಲ್ಲ.

ಸರ್ ಸಾಮುವೇಲ್ ಹೋರರು ಸರ್ ಎರಿಕ್ ಡ್ರೈಮಂಡ್ ಎಂಬ ರಾಯಭಾರಿಯ ಮೂಲಕ ಸೀನಿಯರ್ ಮುಸ್ಸೋಲಿನಿಯವರಿಗೊಂದು ಪತ್ರವನ್ನು ರವಾನಿಸಿದರು. ಅದನ್ನು ಬಹು ರಹಸ್ಯವಾಗಿ ಓದಲಾಯಿತು.

ತಾವು ತಮ್ಮ ನ್ಯಾಯಪ್ರಕಾರವಾಗಿಯೇ ತಮ್ಮ ಕೋರಿಕೆಗಳನ್ನು ಮುಂದಿರಿಸಿರುವೆವೆಂದು ಇಟಲಿಯ ರಾಜಾಧಿಕಾರಿಗಳು ಹೇಳುತ್ತಿರುವರು.

ಜಿನೀವಾದಲ್ಲಿ ನಿರಾಶೆಯು ದಟ್ಟವಾಗಿ ಹರಡಿದೆ. ಇಟಲಿಯ ಪತ್ರಕ್ಕೆ ಕೊನೆಯದಾಗಿ ಒಂದು ಉತ್ತರವನ್ನು ಕೊಟ್ಟು, ಆ ಮೇಲೆ ಮುಂದಿನ ವಿಚಾರವನ್ನು ನಿರ್ಣಯಿಸಿಕೊಳ್ಳಲಾಗುವುದು.

### ಬ್ರಿಟಿಷ ಮಂತ್ರಿಮಂಡಲದ ಅವಸರದ ಸಭೆ!—ಎಲ್ಲರೂ ಹಾಜರಿದ್ದರು.

ಮಂತ್ರಿವರ್ಯರಾದ ಸ್ಟಾನ್ಲಿ ಬಾಲ್ಡ್ವಿನ್ನರೂ, ರಾಮ್ಸೆ ಮೆಕ್ಡೊನಾಲ್ಡರೂ ಇನ್ನಿತರ ಮಂತ್ರಿಗಳೂ ಅದೇ ತಾರೀಖಿನಲ್ಲಿ ಒಂದು ಅವಸರದ ಸಭೆಯನ್ನು ಜರಗಿಸಿ, ಇಟಲಿ ಅಬಿಸೀನಿಯಾ ಪ್ರಶ್ನೆಗಳ ಕುರಿತಾಗಿ ಆಲೋಚಿಸಿಕೊಂಡರು. ಸರ್ ಸಾಮುವೇಲ್ ಹೋರರು ಮಂತ್ರಿಗಳೊಡನೆ ರಹಸ್ಯವಾಗಿ ಮಾತನಾಡಿದರು. ಹೋಂ ಸೆಕ್ರೆಟರಿಗಳಾದ ಸರ್ ಜೋನ್ ಸೈಮನರೂ ಹಾಜರಿದ್ದರು. ಸಭೆಯು ಒಂದು ತಾಸಿನೊಳಗೆ ಅಂತ್ಯವಾಯಿತು.

---

### ಕಾಫಿಯ ಮೇಲೆ ತೆರಿಗೆ ವಿಧಿಸುವರು.

ಕಾಫಿಯ ಮೇಲೆ ತೆರಿಗೆ ವಿಧಿಸುವ ಠರಾವು ಶಾಸನ ಸಭೆಯಲ್ಲಿ ಬಹಳ ಚರ್ಚೆಯನಂತರ ಮಂಜೂರಾಯಿತು. ಇದರಿಂದ ಕಾಫಿ ಪ್ಲಾಂಟರರ ಕಷ್ಟಸುಧಾರಣೆಯಾಗುವುದೆಂದು ಊಹೆ. ಯಾಕೆಂದರೆ ಕಾಫಿಯ ವಿಷಯ ಪಾಶ್ಚಾತ್ಯ ದೇಶಗಳಲ್ಲಿ ಪ್ರಸಾರಣೆಯನ್ನು ಈ ಹಣದಿಂದ ಸರಕಾರವು ನಡೆಸಲು ನಿರ್ಧರಿಸಿದೆ. ಪ್ರಸಾರಣೆ ಹಿಂದೂಸ್ಥಾನದಲ್ಲೂ ಮಾಡಿದರೆ ಒಳ್ಳೆಯದೆಂದು ಕೆಲವರ ಮಾತು.

---

### ಬೆಂಗಾಲ ಮೊಕದ್ದಮೆಯು—

ವಿಚಾರಣೆಯು ಈಗ ಜಬಲ್‌ಪುರದಲ್ಲಿ ನಡೆಯುತ್ತಿದೆ. ಕೊಲೆ, ದಂಗೆ ಹೊಡೆಯುವುದು, ಇವೇ ಮೊದಲಾದ ಆರೋಪಣೆಗಳಿಗಾಗಿ ಸಂಬಂಧಪಟ್ಟ ಸೈನಿಕರ ವಿಚಾರಣೆ ಆಗುವುದು. ಇದನ್ನು ವಿಚಾರಿಸಲು ೯ ಜನರ ಕೂಟವು ಜಸ್ಟಿಸಿನಿಂದು ನಿರ್ಮಿಸಲ್ಪಟ್ಟಿದೆ.

(ಬೆಂಗಾಲು ಜಬಲ್‌ಪುರದಲ್ಲಿರುವುದು. ಕೆಲವು ಸಮಯದ ಹಿಂದೆ, ಇಲ್ಲಿ ಕೆಲವು ಸೈನಿಕರು ಹಳ್ಳಿಗರ ಮೇಲೆ ಧಾಳಿಯನ್ನು ನಡೆಸಿದ್ದರು.)

---

### ಮದ್ರಾಸಿನ ಪ್ರವೀಣ ದಲಾಲರರ ಮೇಲೆ ಮೊಕದ್ದಮೆ

#### ೨ ಲಕ್ಷ ರೂಪಾಯಿಗಳ ದುರ್ವಿನಿಯೋಗ

ಸೆಪ್ಟಂಬರ ೨೪

ಮದ್ರಾಸಿನ ಸುಪ್ರಸಿದ್ಧ ಜೇಮ್ಸ್ ಟೋಡ್ ಕಂಪೆನಿ ಎಂಬ ದಲಾಲ ಸಂಸ್ಥೆಯ ಮೇಲಿನ ಮೊಕದ್ದಮೆಯನ್ನು ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಿಂದ ಮಾನ್ಯ ಇಬ್ಬರು ಅಲಿಗಳು ವಿಚಾರಿಸುತ್ತಿರುತ್ತಾರೆ. ಇದರ ವಿವರಗಳು ಹೀಗಿವೆ.

ಮೇಲಿನ ಸಂಸ್ಥೆಯ ಮುಖ್ಯ ಪಾಲುಗಾರರಾದ ಮೆಸ್ ಇವಟ್ ರೆಂಬವರ ಕೂಡೆ ೩ ಬಾಲಕೃಷ್ಣನ್ ಎಂಬವರು ಕಳೆದ ಏಪ್ರಿಲ್ ೨೨ ರಲ್ಲಿ ೫೫,೦೦೦ ಕ್ರಯ ಬಾಳುವ ೫೭ ಸರಕಾರಿ ಭದ್ರತೆ ಪತ್ರಗಳನ್ನೂ, ಮತ್ತು ಅದೇ ತಿಂಗಳ ೨೨ ರಲ್ಲಿ ೨೫,೦೦೦ ರೂಪಾಯಿ ಕ್ರಯ ಬಾಳುವ ಶೇಕಡಾ ೬೯ ಸರಕಾರಿ ಭದ್ರತೆ ಪತ್ರಗಳನ್ನೂ ಮತ್ತು ೫೭,೩೦೦ ಕ್ರಯ ಬಾಳುವ ಶೇಕಡಾ ೫೦ ಸರಕಾರಿ ಭದ್ರತೆ ಪತ್ರಗಳನ್ನೂ, ಮಾರಿ ಬಂದ ಮೊಬಲಗಿನಿಂದ ಶೇಕಡಾ ೩೫ ಸರಕಾರಿ ಭದ್ರತೆ ಪತ್ರಗಳನ್ನು ಪಡೆಯಲು ಕೊಟ್ಟಿದ್ದರು. ಬದಲೆ ಮೆಸ್ ಇವರಿಬ್ಬರು ಮೇಲಿನ ಭದ್ರತೆಗಳನ್ನು ಮಾರಿ ವಸೂಲಾದ ಹಣವನ್ನು ಬಾಲಕೃಷ್ಣನವರ ಬೇಳಿಕೆ ಮೇರೆಗೆ ಶೇಕಡಾ ೩ರ ಭದ್ರತೆಗಳನ್ನು ಪಡೆಯದೆ ತಮ್ಮ ಸ್ವಂತ ಉಪಯೋಗಕ್ಕೆ ತೆಗೆದಿರುವರು.

ಹೀಗೆಯೇ ಮದ್ರಾಸಿನ ಸುಪ್ರಸಿದ್ಧ ವಕೀಲರರಾದ ಫೆಬ್ರುವರಿ ತಿಂಗಳಲ್ಲಿ ಕೆ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ಯರು ಇವರೊಡನೆ ಒಟ್ಟು ರೂ ೪೫ ೦೦೦ ಶೇಕಡಾ ೩ರ ಸರಕಾರಿ ಭದ್ರತೆ ಪತ್ರಗಳನ್ನೂ ಮತ್ತು ನಗದು ರೂಪಾಯಿ ೩೦,೦೦೦ ಕೊಟ್ಟು ರೂ ೭೫ ೦೦೦, ಶೇಕಡಾ ೩ರ ಸರಕಾರಿ ಭದ್ರತೆ ಪತ್ರಗಳನ್ನು ಪಡೆಯಲು ಕೊಟ್ಟಿದ್ದರು. ಇಲ್ಲಿ ಈ ಸಂಸ್ಥೆಯು ಭದ್ರತೆ ಪತ್ರಗಳನ್ನು ಮಾರಿ, ಶೇಕಡಾ ೩ರ ಭದ್ರತೆ ಪತ್ರಗಳನ್ನು ಪಡೆಯಲು, ಇನ್ನು ರೂ ೬ ೫೦೦ ಬೇಕೆಂದು ಅಯ್ಯಂಗಾರರವರಿಗೆ ತಿಳಿಸಿ, ಅವರಿಂದ ಹಣವನ್ನು ಪಡೆದು ಇವೆಲ್ಲವನ್ನು ಸಂಸ್ಥೆಯ ಉಪಯೋಗಕ್ಕೆ ತೆಗೆಯಲಾಗಿದೆ.

ಇವರು ಹೀಗೆ ಮಾಡಲು ಯಾವುದೋ ವಹಿವಾಟಿನಲ್ಲಿ ಉಂಟಾದ ೩ ಲಕ್ಷ ರೂಪಾಯಿ ನಷ್ಟವು. ವಿಚಾರಣೆಯು ನಡೆಯುತ್ತಿದೆ.

---

### ಮಾರ್ಗೋಪಾಯಗಳಿಗೆ ೩೦ ಲಕ್ಷ ರೂಪಾಯಿಗಳು.

ಪ್ರಾಂತಿಕ ಸರಕಾರಗಳು ತಮ್ಮ ಮಾರ್ಗೋಪಾಯಗಳನ್ನು ವೃದ್ಧಿಪಡಿಸಲು ತಮಗೆ ಧನಸಹಾಯವಾಗಬೇಕೆಂದು ಇಂಡಿಯಾ ಸರಕಾರಕ್ಕೆ ಕಳುಹಿಸಿದ ಮನವಿಯು ಸ್ವೀಕರಿಸಲಾಯಿತು. ಮೇಲಿನ ೩೦ ಲಕ್ಷ ರೂಪಾಯಿಗಳಲ್ಲಿ ಅರೆವಾಸಿಯು ನಮ್ಮ ಮದ್ರಾಸು ಸರಕಾರಕ್ಕೆ ಸಲ್ಲುವುದು. ಇದನ್ನು ನಮ್ಮ ಸರಕಾರವು ಈಗ ದೇಶಸ್ಥಿತಿಯಲ್ಲಿ ರಸ್ತೆ ಮತ್ತು ಸಂಕಗಳ ದುರುಸ್ತಿಯಲ್ಲಿಯೂ, ಕೆಲವು ಹೊಸ ರಸ್ತೆಗಳ ರಚನೆಯಲ್ಲೂ ವ್ಯಯಿಸುವುದು. ಮೇಲಿನ ೩೦ ಲಕ್ಷಗಳಲ್ಲಿ ೧೫ ಲಕ್ಷ ರೂಪಾಯಿ, ಮಾರ್ಗಗಳ ರಿಪೇರಿಗಳ ಮೇಲೆ ವ್ಯಯವಾಗುವುದು.

---

### ಹಳ್ಳಿಗಳು ಸಂಪೂರ್ಣ ನೀರಿನಲ್ಲಿ ಮುಳುಗಿದುವು

ಬಿಹಾರಿನ ರಾಂಚಿ ಎಂಬಲ್ಲಿ, ಮಳೆಯ ಕಾರಣದಿಂದ ನದಿಗಳಲ್ಲಿ ನೆರೆಯುಂಟಾಗಿ ಹಲವು ಹಳ್ಳಿಗಳು ನೀರು ಪಾಲಾದುವು. ರೈಲ್ವೆ ಮಾರ್ಗವು ಕಡಿದು ಹೋಗಿದೆ. ರಕ್ಷಣಾಕೆಲಸವನ್ನು ಸರಕಾರವು ಮತ್ತು ಇನ್ನು ಇತರ ಸಂಸ್ಥೆಗಳು ನಡೆಸುತ್ತಿವೆ. ಹಲವರು ಮನೆಗಳಿಲ್ಲದೆ ಅಲೆದಾಡುತ್ತಿರುವರು.

---

### ಅಜ್ಜಂಪುರ.

ಇದೇ ತಾ ೨೫ನೇ ದಿನ ಅಜ್ಜಂಪುರದ ಕೋಆಪರೇಟಿವ್ ಸೊಸೈಟಿ ಅನ್‌ಲಿಮಿಟೆಡ್—ಇವರಲ್ಲಿ ಸೊಸೈಟಿಯ ಅಧ್ಯಕ್ಷರಾದ ಶ್ರೀ ಶೇಕ್ರು ಎಸ್ ಸಿದ್ದಪ್ಪನವರ ತೈಲ ಚಿತ್ರವನ್ನು ಅನಾವರಣಮಾಡಲಾಯಿತು. ಅಂದಿನ ಸಮಾರಂಭಕ್ಕೆ ಕಡೂರು ಜಿಲ್ಲಾ ಬೋರ್ಡಿನ ವ್ಯಾಟಿ ಅಧ್ಯಕ್ಷರಾದ ಶ್ರೀ ಹೊಸಕೊಪ್ಪ ಕೃಷ್ಣರಾಯರು ಅಧ್ಯಕ್ಷರಾಗಿದ್ದರು.

---

### ಲಾಹೋರಿನಲ್ಲಿ ಹಿಂದೂ ಮುಸ್ಲಿಮರ ಪರಸ್ಪರ ಬಹಿಷ್ಕಾರ

ಲಾಹೋರಿನಲ್ಲಿ ಮೊನ್ನೆಯಿಂದ ಒಂದು ವಿಚಿತ್ರವಾದ ಬಹಿಷ್ಕಾರಕ್ರಮವು ಪ್ರಾರಂಭವಾಗಿದೆ. ಅಲ್ಲಿಯ ಡಿಲ್ಲಿ ಗೇಟಿನ ಬಳಿಯ ಮುಸ್ಲಿಮರು ಹಿಂದೂಗಳನ್ನು ಬಹಿಷ್ಕರಿಸಿದರು. ಹಿಂದೂಗಳಿಗೆ ಯಾವ ಸರಕುಗಳನ್ನೂ ವಿಕ್ರಯಿಸಬಾರದೆಂದು ನಿರ್ಣಯಿಸಿಕೊಂಡರು. ಇದರ ಪ್ರತೀಕಾರವಾಗಿ ಆ ಹಿಂದೂಗಳು ಕೆಲವರು ಒಂದಾಗಿ ಮುಸ್ಲಿಮರಿಗೆ ಹಿಂದೂಗಳಿಂದ ಸರಕುಸಾಮಗ್ರಿಗಳನ್ನು ವಿಕ್ರಯಿಸಬಾರದಾಗಿ ತೀವ್ರ ಘೋಷಿಸಿಕೊಂಡರು. ಹೀಗಾದುದರಿಂದ ಹಿಂದೂಗಳಿಗೆ ಆಗತ್ಯವಾದ ಕಾಯಿಪಲ್ಲೆಗಳು ಸಿಗಲಿಲ್ಲ. ಮುಸ್ಲಿಮರಿಗೆ ಅವುಗಳನ್ನು ಅಂಗಡಿಗಳಿಗೊದಗಿಸುವ ಹಿಂದೂಗಳು ಸಿಗಲಿಲ್ಲ. ಡೆಪ್ಯುಟಿ ಕಮಿಷನರರಿಗೆ ಎರಡು ಪಕ್ಷಗಳವರ ಮನವಿಗಳೂ ಹೋಗಿವೆ.

---

### ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಕ್ರಿಮಿನಲ್ ಲೋ ಎಮೆಂಡ್ ಮಸೂದೆ.

ಈ ಮಸೂದೆಯು ಈಗ ಇಲ್ಲಿ ಚರ್ಚಿಸಲ್ಪಡುತ್ತಿದೆ. ಅಧಿವೇಶನದ ಸಮಯ ಹಲವು ಪ್ರೇಕ್ಷಕರು ಬಂದಿದ್ದರು.

---

## Latest News.

ಮುಂಬಯಿಯ ಲೇಬರ್ ಲೀಡರರಾದ ಶ್ರೀ ಆರ್. ಎಸ್. ನಿಂಬ್ಕಾರ್‌ರವರಿಗೆ ಮದ್ರಾಸಿನಲ್ಲಿ ಆರು ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ. ಇವರು ಆಕ್ಷೇಪಕರ ಭಾಷಣ ಮಾಡಿದರೆಂಬುದೇ ಇವರ ಮೇಲಿನ ಆಪಾದನೆ.

ಶಾಸನ ಸಭೆಯಲ್ಲಿ ಕ್ರಿಮಿನಲ್ ಲೋ ಶಾಸನದ ಕುರಿತಾಗಿ ಚರ್ಚೆಯದ್ದಾಗ ಶ್ರೀ ಬಿ ಜೆ ದೇಸಾಯಿಯವರು ಅದನ್ನು ಖಂಡಿಸಿ ಸರಕಾರವು ಇಂತಹ ಶಾಸನಗಳನ್ನು ಇಟ್ಟುಕೊಳ್ಳುವುದು ಪೂರ್ಣ ಅನ್ಯಾಯವೆಂದರು. ೧೯೩೨ರ ಆ ಶಾಸನವನ್ನು ಪುನರ್ರಚಿಸಬೇಕೆಂದು ಅವರು ವಾದಿಸಿದರು.

ನವಂಬರ ತಾ. ೬ನೇ ದಿನ ಡ್ಯೂಕ್ ಒಫ್ ಗ್ಲಾಸೆಸ್ಟರ್‌ರವರು ಲೇಡಿ ಆಲಿಸ್ ಸ್ಕೋಟ್ ಎಂಬವರನ್ನು ವಿವಾಹವಾಗುವರು.

ಇಟಲಿ ಅಬಿಸೀನಿಯಾ ಸಮಸ್ಯೆಯ ಕುರಿತು ಪಂಚಧುರೀಣರು ಬರೆದಿಟ್ಟ ವರದಿಯು ಪರಿಶೀಲಿಸಲ್ಪಡುತ್ತಿದೆ. ಮುಸೋಲಿನಿಯವರು ಸಮಾಧಾನಗೊಂಡ ಚಿಹ್ನೆಯಿಲ್ಲ. ಬ್ರಿಟಿಷ ಮಂತ್ರಿಮಂಡಲವು ತಾ. ೨೪ನೇ ದಿನ ಪುನಃ ಜರಗಿತು.

ಕಲ್ಕತ್ತೆಯ ಕಾಳೀಘಾಟ್ ದೇವಸ್ಥಾನದ ಪ್ರಾಣಿಬಲಿ ನಿಷೇಧಕ್ಕಾಗಿ ಮರಣಾಂತ ಉಪವಾಸವ್ರತ ತೊಟ್ಟಿರುವ ಶ್ರೀ ಪಂಡಿತ ರಾಮಚಂದ್ರ ಶರ್ಮರ ಮೇಲೆ ಆರೋಪ ಹೊರಿಸಿ ಕೆಲವರು ಅರ್ಜಿ ಮಾಡಿರುವರು. ಪೋಲೀಸರು ತನಿಖೆ ನಡೆಸುತ್ತಿರುವರು. ಈ ಉಪವಾಸದಿಂದಾಗಿ ಮಹಾಕ್ಷೋಭೆಯಾಗುವುದೆಂದು ಅರ್ಜಿದಾರರ ಹೇಳಿಕೆ. ಮುಂಬಾಯಿಯ ಪ್ರಾಣಿದಯಾಪರ ಸಂಘದವರು ಶರ್ಮರನ್ನು ಪ್ರೋತ್ಸಾಹಿಸಿ ಕಲ್ಕತ್ತಾ ಪೋಲೀಸರಿಗೆ ತಂತಿಬಿಟ್ಟರು.

ಶಾಸನಸಭೆಯಿಂದ ತಿರಸ್ಕರಿಸಲ್ಪಟ್ಟ ಈ ಮಸೂದೆಯು ವ್ಯಾಸರಾಯರಿಂದ ಸರ್ಟಿಫೈ ಮಾಡಿ ಕೌನ್ಸಿಲ್ ಆಫ್ ಸ್ಟೇಟಿನ ಮುಂದಿಟ್ಟಿದ್ದಾರೆ. ಸರಕಾರವು ಇದರ ಆಗತ್ಯದ ಕುರಿತಾಗಿ ಹಲವು ಕಾರಣಗಳನ್ನು ಕೊಟ್ಟಿದ್ದಾರೆ. ಕೌನ್ಸಿಲ್ ಆಫ್ ಸ್ಟೇಟಿನ ಹಲವು ಸದಸ್ಯರು ಈ ಮಸೂದೆಯು ಈಗ ಆಗತ್ಯವಿಲ್ಲವೆಂಬ ಅಭಿಪ್ರಾಯಗೊಳ್ಳುತ್ತಾರೆ. ಈ ಮಸೂದೆಯನ್ನು ಸರ್ ಫಿರೋಜ್ ಸೇಠ್ನಾರವರು ವಿರೋಧಿಸಿದ್ದಾರೆ. ಅಬ್ದುಲ್ ಹಫೀಜ್‌ರೆಂಬವರು ಇದನ್ನು ಎತ್ತಿಹಿಡಿದಿರುವರು. ಪಂಡಿತ ಸಪ್ರೂರೆಂಬವರು ಇನ್ನೊಬ್ಬ ಸದಸ್ಯರು ಪ್ರಜಾಪ್ರಭುತ್ವ ಘೋಷಣೆಗೆ ಇದು ವಿರೋಧಕರವಾದ್ದು. ಈ ಮಸೂದೆಯು ಆಗತ್ಯವಿಲ್ಲವೆಂದು ಭಾಷಣವಿತ್ತಿರುವರು.

ತಿರಸ್ಕರಿಸಲ್ಪಟ್ಟ ಈ ಮಸೂದೆಯನ್ನು ಸರಕಾರವು ಮಂಜೂರುಮಾಡುವುದು ನ್ಯಾಯವಲ್ಲವೆಂದು ಮುಜಾಫ್ಫರದ ಮಹಮ್ಮದ್ ನೂರಿವಾಡಿಯವರು ತಿಳಿಸಿದರು ಮತ್ತು ಕೆಲವರು ಕೆಲವು ಪ್ರಾಂತಿಕ ಸರಕಾರಗಳ ಸೂಚನೆಗಳ ಪ್ರಕಾರ, ಸಾಧಾರಣ ನ್ಯಾಯದಲ್ಲಿರುವ ಕ್ರಮಗಳು ಈ ಸಂದಿಗ್ಧ ಸಮಯದಲ್ಲಿ ಉಪಯೋಗಕ್ಕೆ ಬಾರದಿರುವುದರಿಂದ ಈ ಮಸೂದೆ ಬೇಕಾಗಿದೆಯೆಂದೂ ಇದನ್ನು ಮಂಜೂರುಮಾಡುವುದು ನ್ಯಾಯವೆಂದೂ ಸೂಚಿಸಿದರು.

ಸಭೆಯು ಮುಂದರಿಯಿತು. ಚರ್ಚೆಯು ಮುಂದರಿಯುವುದು.

---


ಬೆಂಗಳೂರು ನಗರಕ್ಕೆ ದಸರದ ವೇಳೆ ಬರುವ ಅಭ್ಯಾಗತರ ಅನುಕೂಲತೆಗಾಗಿ

ಪ್ರಸಿದ್ಧಿ ಹೊಂದಿದ

**ಶಾಸ್ತ್ರಿಗಳ ಹೊಟೇಲು ಮತ್ತು ರೆಸ್ಟೋರೆಂಟ್**

ಎಲ್ಲಾ ಸೌಕರ್ಯಗಳನ್ನು ಕೊಡುತ್ತದೆ.

ಅವರ ಪ್ರತಿನಿಧಿಗಳು ರೈಲ್ವೇ ಸ್ಟೇಶನ್‌ಗಳಲ್ಲಿ ಕಾಯುವರು.

ಇಚ್ಛಿಸುವ ಅತಿಥಿಗಳನ್ನು ಸ್ವಾಗತೀಕರಿಸುವರು.

ತಮ್ಮ ಭಾರೀ ಗಿರಾಕಿಗಳಿಂದ ಬರಲಿರುವ ಬೇಡಿಕೆಗಳ ದೃಷ್ಟ್ಯಾ ಅತ್ತ ಹೋಗುವವರು ಹೊಟೇಲಿಗೆ ತಂತಿಬಿಡಬೇಕೆಂದು ಅಪೇಕ್ಷೆ.

ಇತರ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

*The General Manager,*
SASTRY'S HOTEL & RESTAURANT,
Chickpet, Bangalore City.

## ನೋಟೀಸು.

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ**

R. I. A. No. 1657/1935
in O P No. 100/1934

ಸ್ವಿತ ಸರಾಫ ಮಂಜುನಾಥ ಕಮ್ತಿರಿಗೆ ಬರತಕ್ಕ ಸಾಲಗಳ ಕುರಿತು ಕೊಡೋಣಾದ ಸಕ್ಸೆಶನ್ ಸರ್ಟಿಫಿಕೇಟಿನ ಬಾಬಿನಲ್ಲಿ.

ಕೆ ನರಸಿಂಹ ಕಮ್ತಿ, ಸರಾಫ ಮಂಜುನಾಥ ಕಮ್ತಿರ ಮಗ, ಕುಟುಂಬದ ಯಜಮಾನನೆ ಆಡಳ್ತೆದಾರ ಕಾಸರಗೋಡು ಕಸಬೆಯಲ್ಲಿರುವವ—ಅರ್ಜಿದಾರ

ಮೇಲೆ ಹೆಸರು ಕಾಣಿಸಿದ ಅರ್ಜಿದಾರಗೆ ಕೊಡೋಣಾದ ಸಕ್ಸೆಶನ್ ಸರ್ಟಿಫಿಕೇಟನ್ನು ಇನ್ನೂ ಕೆಲವು ಸಾಲಗಳ ಮಟ್ಟಿಗೆ ಮುಂದರಿಸಿ ತನಗೆ ಸರ್ಟಿಫಿಕೇಟು ಎಕ್ಸ್ಟೆಂಡ್ ಮಾಡಿ ಕೊಡಬೇಕೆಂತ ಮೇಲ್ಪಣಿಸಿದ ಅರ್ಜಿದಾರನು ಈ ಕೋರ್ಟಿನಲ್ಲಿ ದಾಖ್ಲೆ ಮಾಡಿದ ಅರ್ಜಿಯು ತಾ 9-10-1935ಕ್ಕೆ ತನ್ಕಿಗೆ ಇಟ್ಟಿರುವುದರಿಂದ ಆ ವಿಷಯದಲ್ಲಿ ಆಕ್ಷೇಪವುಳ್ಳವರು ಸದ್ರಿ ತಾರೀಕಿಗೆ ಮುಂಚಿತವಾಗಿ ತಮ್ಮ ಆಕ್ಷೇಪಗಳನ್ನು ದಾಖ್ಲೆಮಾಡತಕ್ಕದ್ದೆಂತ ಈ ಮೂಲಕ ತಿಳಿಸೋಣಾಗಿಯದೆ.

Kasaragod, 19-9-1935 | P Ananda Rao, Vakil for Petitioner


AMURAL




**Beware of Imitations**

It is the only German Preparation testified by the Berlin City Laboratory.

Read and be convinced by the following

**CERTIFICATE**

City Laboratories Prof Dr Wolfson Berlin W

The chemical and bacteriological examinations of 'Amural Tablets have proved a quick destruction of Gonococcoi and Spermatozoa, while in no case any irritating effect was observed on the mucous membrane The abundant production of foam carries the antiseptic ation into all folds—a security for the effect.

I can confirm that Amural-Tablets comply with the four demands which should be made on such a preparation 'to be readily soluble, to be harmless, to be absolutely effective, and not to hurt the sentimentality of the client.

Signed Prof Dr Wolfsohn

Sold everywhere or ask from Sole Agents for India
**Madan Trading Co.,**
185, Princess St, Bombay.



# ಮೈಸೂರು ದಸರಾ ಮಹೋತ್ಸವ

**28-9-1935ರಿಂದ** **7-10-1935ರ ವರೆಗೆ**

**ಅತೀ ಚಿತ್ತಾಕರ್ಷಕ ದೃಶ್ಯಗಳು!** **ಅತೀ ವಿಜೃಂಭಣೆಯ ಉತ್ಸವಗಳು!!**

**ಅತೀ ವಹಸ್ಸದ ವಸ್ತುಪ್ರದರ್ಶನ!!**

## ಮೈಸೂರಿಗೆ ಈ ಬಾರಿಯೇ ಹೊರಡಿರಿ.



ಮೈಸೂರಿನ ಆಫೀಸು ಮತ್ತು ವಿಶ್ರಾಂತಿಗೃಹ

ಬೆಳಿಗ್ಯೆ ಮಂಗಳೂರಿನಿಂದ **5-30**ಕ್ಕೆ ಹೊರಟರೆ ಸಾಯಂಕಾಲ ಗಂಟೆ 5ಕ್ಕೇನೇ ತಲಪುವ ಅತೀ ಶೀಘ್ರ ಸರ್ವೀಸು ಇದೆ. ಅಲ್ಲದೆ, ಬೆಳಿಗ್ಯೆ ಗಂಟೆ **6, 7, 9-30, 11, 11-30**ಕ್ಕೆ ಹೊರಟು ಮಡಿಕೇರಿಯಲ್ಲಿ ನಿಂತು, ಮರುದಿನ ಬೆಳಿಗ್ಯೆ ಮಡಿಕೇರಿಯಿಂದ ಹೊರಟು ಮೈಸೂರಿಗೆ ಮಧ್ಯಾಹ್ನವೇ ತಲಪುವ ಏರ್ಪಾಡು ಕೂಡ ಇದೆ.

ಮಡಿಕೇರಿಯಲ್ಲಿ ಉಳಕೊಳ್ಳಲಿಕ್ಕೆ ವಿಶ್ರಾಂತಿಗೃಹವೂ, ಊಟದ ಬಗ್ಯೆ ಉತ್ತಮ ಹೊಟೇಲೂ ಇರುತ್ತವೆ

## ಅಲ್ಲದೆ ಇತರ
## ಸ್ಪೆಶಲ್ ಸರ್ವಿಸುಗಳೂ ಇವೆ.

ಮೈಸೂರಿನಲ್ಲಿ ಉಳಕೊಳ್ಳಲು ವಿಶಾಲವಾದ ಬಂಗ್ಲೆಯೂ ಊಟದ ಸೌಕರ್ಯಗಳೂ ಇವೆ.

## ಮೈಸೂರಿನ

ಭವ್ಯವಾದ ಅರಮನೆಗಳು ಮನೋಹರವಾದ ಉದ್ಯಾನಗಳು

ಐತಿಹಾಸಿಕ ಶ್ರೀರಂಗಪಟ್ಟಣದ ಪ್ರಾಚೀನ ನೋಟಗಳು

ಕೃಷ್ಣರಾಜಸಾಗರದ ತರತರದ ಬಣ್ಣದ ಬೆಳಕಿನಿಂದ ಕಂಗೊಳಿಸುವ

## ಬೃಂದಾವನ.

ಮೈಸೂರಿನ ಅಧಿಷ್ಠಾತ್ರೀ ದೇವಿಯಾದ
ಶ್ರೀ ಚಾಮುಂಡೇಶ್ವರೀ ದೇವಸ್ಥಾನ,
ನೀರಿನಿಂದ ಬೆಂಕಿಯನ್ನು ಉಂಟುಮಾಡುವ
ವಿದ್ಯುದುತ್ಪಾದನೆಯ ಶಿವಸಮುದ್ರ

ಇವೆಲ್ಲವನ್ನು ನೋಡುವ ಅತ್ಯಂತ ಆನಂದಕರ
ಸಂದರ್ಭವನ್ನು ಕಳಕೊಳ್ಳಬೇಡಿರಿ



ಕೃಷ್ಣರಾಜಸಾಗರ

1 ಪ್ರವೇಶದ್ವಾರ    2 ಅಣೆಕಟ್ಟಿನ ಒಂದು ಹತ್ತಿರದ ದೃಶ್ಯ
3 ಬೃಂದಾವನ    4 ಅಣೆಕಟ್ಟಿನ ದೂರದ ದೃಶ್ಯ

ನಿಮ್ಮ ಪ್ರಯಾಣದ ಅನುಕೂಲತೆಗಳಿಗಾಗಿ ನಮ್ಮೊಡನೆ ಕೇಳಿರಿ

***The Joint Managers,***
**The Joint Booking Office, Kodialbail.**



ಪಿ ವಿ. ಉಪಾಧ್ಯಾಯ ಬಿ ಎ ಎಲ್ ಎಲ್, ಬಿ.

ಇವರಿಂದ ಬರೆಯಲ್ಪಟ್ಟ

## "ಒಂದೇ ತಿಂಗಳಲ್ಲಿ ಇಂಗ್ಲಿಷ್"

ಎಂಬ ಇಂಗ್ಲಿಷ್ ಸುಲಭ ಸ್ವಯಂಬೋಧಿನಿಯ ಪ್ರಥಮ ಆವೃತ್ತಿಯ ಎಲ್ಲ ಪ್ರತಿಗಳೂ ಕಳೆದ ಒಂದೇ ವರುಷದೊಳಗೆ ವಿಕ್ರಯವಾಗಿ ಬಹಳ ಮಟ್ಟಿಗೆ ಸುಧಾರಿಸಲ್ಪಟ್ಟ ಎರಡನೇ ಆವೃತ್ತಿಯ ಪ್ರತಿಗಳು ಈಗ ಮುದ್ರಣದಲ್ಲಿವೆ ತಾ 15 10-1935ರ ವಳಗೆ 50 ಯೂ ಜಾಸ್ತಿ ಪ್ರತಿಗಳಿಗೆ ಆರ್ಡರು ಕೊಡುವ ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ದರದ ಕಮಿಶನ್ ಕೊಡಲಾಗುವುದು ಮಾತ್ರವಲ್ಲದೆ ಅವರ ವಿಳಾಸವನ್ನು ಪುಸ್ತಕದಲ್ಲಿಯೂ ಕರಪತ್ರ ಜಾಹೀರಾತುಗಳಲ್ಲಿಯೂ ಕೊಡಲಾಗುವುದು

ಸೂಚನೆ:- ಕರ್ನಾಟಕದ ಪುಸ್ತಕ ವ್ಯಾಪಾರಿಗಳು ತ್ವರೆ ಮಾಡಬೇಕು.

ಪಂಡಿತ ಕೆ. ಆದಿರಾಜಯ್ಯ, ಕಾರ್ಕಳ (ದ. ಕ.)


### ರೈಲುಬಂಡಿಗಳ ಸಮಯ.

| ಗಾಡಿಗಳು | ಹೊರಡುವ ಘಂಟೆ | ತಲಪುವ ಘಂಟೆ |
|---|---|---|
| ಮೈಲು | ಬೆಳಿಗ್ಗೆ 9 50 | ಸಂಜೆ 4 20 |
| ಎಕ್ಸ್ಪ್ರೆಸ್ | ,, 5 55 | ರಾತ್ರಿ 8 50 |
| ಫಾಸ್ಟ್ ಪೆಸೆಂಜರ್ | ಮ. 12 45 | ಮ. 2 40 |
| ಶಟಲ್ | ಸಂಜೆ 5 20 | ಬೆಳಿಗ್ಗೆ 9-25 |
| ಕಾಂಞಂಗಾಡ್ ಪೆಸೆಂಜರು | ಬೆ 8 25 | ಮ 1-20 |
| ಕಾಸರಗೋಡು ಪೆಸೆಂಜರು | ಸಂಜೆ 3 20 | ಸಂಜೆ 6-15 |


1935ರ ನಮ್ಮ ದಸರಾ ಸಂಚಿಕೆಯು ಒಕ್ಟೋಬರ ಪ್ರಥಮ ವಾರದಲ್ಲಿ ಸಚಿತ್ರವಾಗಿ ಅತ್ಯಂತ ಸುಂದರವಾಗಿ ಹೊರಡುವುದು.

? 

ಬೆಲೆ ಆಣೆ 2.
ಜಾಹೀರಾತುಗಳನ್ನು ಕೂಡಲೇ ಕೊಡಿರಿ.

# ಕ್ವೆಟ್ಟಾ ಭೂಕಂಪ!!!

## ಸರಕಾರದ ಕಾರ್ಯವೃತ್ತಾಂತಗಳ ಕುರಿತಾಗಿ ವಿಚಾರಣೆಯಾಗಬೇಕೆಂದು ಒತ್ತಾಯ.

### ಆರೋಪಣೆಗೆ ಎದುರಾಗಿ ಉತ್ತರ!

ಈ ಸಲದ ಶಾಸನಸಭೆಯಲ್ಲಿ ಸರಕಾರದ ಪ್ರಥಮ ವಿಜಯ.

ಕಳೆದ ಗುರುವಾರ ಸಿಮ್ಲಾದ ಶಾಸನಸಭೆಯಲ್ಲಿ ವಿೂರಿದ ಸಂಖ್ಯೆಯಲ್ಲಿ ನೋಟಕರು. ಶ್ರೀ॥ ರಾಜುರವರು ಕ್ವೆಟ್ಟಾ ಭೂಕಂಪದ ವಿಚಾರವಾಗಿಯೂ,ಸರಕಾರವು ಭೂಕಂಪ ಕಷ್ಟನಿವಾರಣೆಗಾಗಿ ಮಾಡಿದ ಕಾರ್ಯವೃತ್ತಾಂತಗಳ ಕುರಿತಾಗಿಯೂ ತಂದ ಠರಾವು ಒಂದರ ಪರಿಣಾಮವಾಗಿ ಅನೇಕರಿಗೆ ಎಸೆಂಬ್ಲಿಯ ಕಾರ್ಯಕಲಾಪಗಳಲ್ಲಿ ಆಸಕ್ತಿ ಹೆಚ್ಚಿತು

ಶ್ರೀ॥ ರಾಜುರವರ ಠರಾವು ಹೀಗಿದ್ದಿತು: ಬ್ರಿಟಿಷ ಬಲೂಚಿಸ್ಥಾನದಲ್ಲಿ ಆದ ಭೂಕಂಪದಿಂದ ನೊಂದವರ ಕಷ್ಟನಿವಾರಣೆಗಾಗಿ ಸರಕಾರವು ತಕ್ಕ ವ್ಯವಸ್ಥೆಯನ್ನು ಮಾಡಿರುತ್ತದೋ ಇಲ್ಲವೋ,—ಜನರನ್ನು ಬದುಕಿಸುವುದಕ್ಕೂ, ಗಾಯಗೊಂಡವರನ್ನೂ ಭೂಮಿಯಡಿ ಹುದುಗಿ ಹೋದವರನ್ನೂ, ಸರಿಯಾಗಿ ಆರೈಕೆ ನೋಡುವುದಕ್ಕೂ, ಜನರ ಆಸ್ತಿಪಾಸ್ತಿಗಳನ್ನು ಸುರಕ್ಷಿತವಾಗಿಟ್ಟು ಅವುಗಳನ್ನು ಅವುಗಳ ಯಜಮಾನರಿಗೇನೆ ಕೊಡುವುದಕ್ಕೂ ತಕ್ಕ ವ್ಯವಸ್ಥೆಗಳನ್ನು ಭಾರತಸರಕಾರವು ಮಾಡಿದೆಯೋ ಎಂದು ತಿಳಿದುಕೊಳ್ಳುವುದಕ್ಕೂ ಅಧಿಕಾರಿ ಮತ್ತು ಅನಧಿಕಾರಿಗಳ ಒಂದು ಸಮಿತಿಯನ್ನೇರ್ಪಡಿಸಬೇಕು" ಎಂದು ಇತ್ತು

ಇದಲ್ಲದೆ ಭಾರತದ ಆರ್ಥಿಕ ವ್ಯವಸ್ಥೆಯ ಕುರಿತಾಗಿ ವಿಚಾರಿಸುವುದಕ್ಕಾಗಿ ಸರಕಾರವು ಸರ್. ಒಟ್ಟೋ ನೇಮಿಯರ್ ಎಂಬವರನ್ನು ನೇಮಕ ಮಾಡಿದುದಕ್ಕಾಗಿ ಶ್ರೀ॥ ಲಕ್ಷ್ಮೀಕಾಂತ ಮೈತ್ರ ಮತ್ತು ಡಾ॥ ಪ್ರಮಥನಾಥ ಬೆನರ್ಜಿಗಳು ಒಂದು ಎಡ್ಜರ್ನ್‌ಮೆಂಟ್ ಠರಾವನ್ನು ತಂದಿದ್ದುದರಿಂದ ಜನರ ಕುತೂಹಲವು ಮತ್ತೂ ಅಧಿಕವಾಗಿತ್ತು. ಇದೇ ಪ್ರಶ್ನೆಯ ಮೇಲೆ ಶ್ರೀ॥ ಎಂ. ಎಸ್. ಆಣೆಯವರೂ ಒಂದು ಎಡ್ಜರ್ನ್‌ಮೆಂಟ್ ಠರಾವನ್ನು ತಂದಿದ್ದರು. ಅದನ್ನವರು ಕೊನೆಗೆ ಹಿಂತೆಗೆದಿದ್ದರು.

ಡಾ॥ ಬೆನರ್ಜಿ ಮತ್ತು ಮೈತ್ರರ ಠರಾವುಗಳನ್ನು ಮೇಲೆತ್ತಿದೊಡನೆ ಅಧ್ಯಕ್ಷರು ಅದನ್ನು ತಡೆದರು. ಲೋ ಮೆಂಬರರು ಅದು ಕೂಡದೆಂದರು. ಹಿಂದಿನ ದಿನ ಅಂತಹ ವಿಷಯದ ಮೇಲಿದ್ದ ಠರಾವು ಹಿಂತೆಗೆಯಲ್ಪಟ್ಟಿರುವುದರಿಂದ ಅದನ್ನು ಪುನ. ಎತ್ತುವುದು ಅಸಮರ್ಪಕವೆಂದು ಸರಕಾರಿ ಪಕ್ಷದವರು ವಾದಿಸಿದರು.

ಸಂಜೆ ೫ ಗಂಟೆಗೆ ಕಾಂಗ್ರೆಸ್ ಪಕ್ಷೀಯರು ಕ್ವೆಟ್ಟಾ ಭೂಕಂಪದ ಕುರಿತಾದ ವಿವಾದವನ್ನು ನಿಲ್ಲಿಸಬೇಕೆಂದು ಕೇಳಿಕೊಂಡರು. ವೋಟು ತೆಗೆಯಲಾಗಿ ೬೫ ಮಂದಿ ಬೇಡವೆಂದೂ ೫೭ ಜನರು ಬೇಕೆಂದೂ ಆಗಿ,ಆ ಠರಾವು ಬಿದ್ದು ಹೋಯಿತು ಮೂಲ ಠರಾವಿಗೆ ೬೧ ಜನರ ಸ್ವೀಕಾರವೂ ೫೭ ಮಂದಿಯ ತಿರಸ್ಕಾರವೂ ಇತ್ತು ಸರಕಾರವು ಗೆದ್ದಿತು ಟ್ರೆಜರಿ ಬೆಂಚಿನವರು ಸರಕಾರದ ಜಯವನ್ನು ಕಂಡು ಜಯಘೋಷವೆತ್ತಿದರು ವಿರುದ್ಧ ಪಕ್ಷದವರು 'ನಾಚಿಕೆ' ನಾಚಿಕೆ'' ಎಂದು ಪ್ರತ್ಯುತ್ತರವಿತ್ತರು

## ಜನಾಂಗಸಭೆಯ ಶಾಂತಿ ರಕ್ಷಣೆಯ ಕೊನೆಯ ಪ್ರಯತ್ನಗಳು ನಿಷ್ಫಲವಾದುವು.

### ಇಟಲಿಯು ಬ್ರಿಟಿಷರು ಮತ್ತು ಫ್ರೆಂಚರು ಕೊಟ್ಟ ಶರ್ತಗಳನ್ನು ತಿರಸ್ಕರಿಸಿದೆ.

ಯುದ್ಧ ಸನ್ನಾಹವಾಗುತ್ತಲಿದೆ'

ಮುಸೊಲೊನಿಯು ಕೇಳಿದ ಎಬಿಸೀನಿಯದ ಕೆಲವು ಪ್ರಾಂತ್ಯಗಳನ್ನು ಎಬಿಸೀನಿಯಾ ಸರಕಾರವು ಬಿಟ್ಟುಕೊಟ್ಟಲ್ಲಿ ಅದಕ್ಕೆ ಪ್ರತಿಫಲವಾಗಿ ಬ್ರಿಟಿಷರು ಮತ್ತು ಫ್ರೆಂಚರು ತಮ್ಮ ವಶದಲ್ಲಿ ಎಬಿಸೀನಿಯಾದ ಹತ್ತಿರವಿರುವ ಕೆಲವು ಪ್ರಾಂತ್ಯಗಳನ್ನು ಕೊಡಲು, ಮೊದಲು ಸಿದ್ಧರಿರಬೇಕು ಎಂದು ಜನಾಂಗಸಭೆಯವರು ನಿರ್ಮಿಸಿದ ೫ ಸದಸ್ಯರ ಕಮಿಟಿಯ ನಿರ್ಣಯಗಳಲ್ಲಿ ಒಂದಾಗಿರಬೇಕೆಂದು ಸಲಹೆ ಎಬಿಸೀನಿಯಾವು ಕಮಿಟಿಯ ನಿರ್ಣಯಗಳ ಕುರಿತು ಆಲೋಚಿಸಲು ಸಿದ್ಧವಿದೆ ಆದರೆ ಈಗ, ಸರ್ವವು ಬ್ರಿಟನರ ಕೈಯಲ್ಲಿದೆ ಇನ್ನೊಂದು ಮಹಾಯುದ್ಧದ ಘಟನೆಯು ಇವರ ಮೇಲೆ ಹೊಂದಿಕೊಂಡಿದೆ ಈ ಸಮಯದಲ್ಲಿ ಬ್ರಿಟನಿನ ವರ್ತನೆಯನ್ನು ನಿರ್ಣಯಿಸಲು, ಬ್ರಿಟಿಷ ಸರಕಾರದ ಹಲವು ಸಭೆಗಳು ಸೇರುತ್ತಿವೆ ಮುಂದಕ್ಕೆ ಏನಾಗುವುದೆಂದು ನೋಡಲಿವೆ —

ಇತ್ತಲಾಗಿ ಮುಸೊಲೊನಿಯು ಜನಾಂಗಸಭೆಯ ಯಾವತ್ತೂ ನಿರ್ಣಯಗಳನ್ನು ಒಪ್ಪುವ ಹಾಗಿಲ್ಲ ಯಾಕೆಂದರೆ ಅವುಗಳಿಂದ ಇಟಲಿಗೆ ಯಾವ ಪ್ರಯೋಜನವೂ ಇಲ್ಲ ತಾನು ಯುದ್ಧಮಾಡಿಯೇ ತನ್ನ ಇಚ್ಛೆಯನ್ನು ಕೈಗೊಳ್ಳುವುದೇ ಇಟಲಿಯ ಮುಖ್ಯ ಉದ್ದೇಶವೆನ್ನುತ್ತಾರೆ ಸರ್ವಸಿದ್ಧತೆಗಳು ನಡೆಯುತ್ತಿವೆ 'ಜನಾಂಗಸಭೆಯ ನಿರ್ಣಯಗಳನ್ನು ನೋಡಿದಲ್ಲಿ ನಾನು ಓರ್ವ ನಿರ್ಜನ ಮಳಲುಪ್ರದೇಶಗಳನ್ನು ಒಟ್ಟುಗೂಡಿಸುವವನಾಗಿ ಭಾಸವಾಗುತ್ತದೆ ಪೂರ್ವ ಆಫ್ರಿಕದಲ್ಲಿ ನಮಗೆ ಸ್ಥಳವು ಸಿಕ್ಕಲೇಬೇಕು' ಎಂದು ಮುಸೊಲಿನಿಯ ಹೇಳಿಕೆ.

ಜನಾಂಗ ಸಭೆಯವರು, ಇಷ್ಟು ದಿವಸ ಹೆಣಗಾಡಿ,ಕೆಲವು ನಿರ್ಣಯಗಳನ್ನು ಮಾಡಿರುವರು ಇವುಗಳನ್ನು ಅವರು ಎಬಿಸೀನಿಯಾದವರಿಗೂ ಇಟಲಿಯವರಿಗೂ ತಿಳಿಸಿರುವರು ಎಬಿಸಿನಿಯಾವು ಇವುಗಳ ಕುರಿತು ಆಲೋಚಿಸಲು ಸಿದ್ಧವಿದೆ ಆದರೆ ಇಟಲಿಗೆ ಅವು ಸಮಂಜಸವಲ್ಲ. ತಾವು ಕೊಡುವ ನಿರ್ಣಯಗಳನ್ನು ಇತರ ಜನಾಂಗದವರು ಒಪ್ಪುವರಾದರೆ, ಇಟಲಿಯು ಯುದ್ಧ ಯೋಜನೆಗಳನ್ನು ಹಿಂದೆಗೆಯಲು ಸಿದ್ಧವಿದೆ ಆದುದರಿಂದ ಯುದ್ಧವು ಸಂಭವಿಸುವುದು ಈಗ ಬ್ರಿಟನಿನ ಮೇಲೆ ಹೊಂದಿಕೊಂಡಿದೆ ಇಷ್ಟರವರೆಗೆ ನಡೆದ ಘಟನೆಗಳನ್ನು ಪರೀಕ್ಷಿಸಿದ್ದಲ್ಲಿ ಇನ್ನೊಂದು ಮಹಾಯುದ್ಧವು ಸಂಭವಿಸುವುದರಲ್ಲಿ ಏನೂ ಸಂಶಯವಿಲ್ಲವೆಂದು ಕಾಣುತ್ತದೆ

ಇಟಲಿಯು ತಾನಾಗಿಯೆ ಜನಾಂಗ ಸಭೆಯನ್ನು ತ್ಯಜಿಸುವುದಿಲ್ಲ. ಇತರ ಜನಾಂಗದವರು, ತಮ್ಮನ್ನು ತಿರಸ್ಕರಿಸಿದಲ್ಲಿಯೂ, ತಮ್ಮ ಎದುರಾಗಿ ನಿರ್ಣಯಗಳನ್ನು ಮಾಡಿದರೆಯೂ, (ಜರ್ಮನಿಯು ಪುನಃ ಯುದ್ಧ ಸನ್ನಾಹಗೊಳ್ಳಲು,—ಜನಾಂಗಸಭೆ ಅವರ ಮೇಲೆ ತಿರಸ್ಕಾರ ಮಸೂದೆಯನ್ನು ತಂದಿದ್ದರು.) ಇದೇ ರೀತಿ ಇಟಲಿಯ ವಿಷಯವಾಗಿ ಜನಾಂಗ ಸಭೆಯವರು ನಿರ್ಣಯಿಸಿದಲ್ಲಿ,ಇಟಲಿಯು ಜನಾಂಗ ಸಭೆಯನ್ನು ತ್ಯಜಿಸುವುದರಲ್ಲಿ ದೇ-ಯುದ್ಧ ಯೊಡ್ಡುವುದು ಎಂದು ಇಟಲಿ ಸರಕಾರದ ಹೇಳಿಕೆ ಅವರು ಈಗ ಯುದ್ಧ ಪ್ರಾರಂಭಿಸಲು ಸಮಯವನ್ನು ಎದುರು ನೋಡುತ್ತಿರುವರು.

ನಿಮ್ಮ ಕಂಠನಾಳವು ಬಾಧಿಸುತ್ತಿದೆಯಾದರೆ

ರೋಗನಿವಾರಕ ಶಕ್ತಿಯುಳ್ಳ ಶ್ವಾಸೋಚ್ಛ್ವಾಸಕರ ಪೆಪ್ಸ್ ಬಿಲ್ಲೆಗಳನ್ನು ಸೇವಿಸುವುದನ್ನು ಮರೆಯದಿರಿ.

ಕಂಠನಾಳವು ನೋವೆದ್ದು ಬಾಧೆಯಾಗುತ್ತಿದೆಯಾದರೆ ಪೆಪ್ಸ್ ಅದನ್ನು ಶೀಘ್ರದಲ್ಲೇ ಗುಣಪಡಿಸುತ್ತದೆ ಆಗಾಗ್ಗೆ ಪೆಪ್ಸನ್ನು ಚೀಪಿರಿ

ಎಲ್ಲಾ ಔಷಧಿ ವಿಕ್ರಯಗಾರರಲ್ಲೂ ರೂ ೧ಕ್ಕೆ ಸಿಗುತ್ತದೆ

ಪೆಪ್ಸ್

PEPS


## ಸ್ವಸ್ತಿಕ್ ಓಯಿಲ್ ಮಿಲ್ಸ್ ಲಿಮಿಟೆಡ್

ಇದರ ಡೈರೆಕ್ಟರರೂ, ಜನರಲ್ ಮೆನೆಜರರೂ ಆದ ಶ್ರೀ ಸಿ ಎಸ್ ಪಟೇಲರವರು ಅಖಿಳಭಾರತ ಪ್ರವಾಸಕ್ಕೆ ಹೊರಟಿದ್ದು ಇದೇ ಒಕ್ಟೋಬರ ತಾ ೪,೫ ಮತ್ತು ೬ನೇ ದಿನಗಳಲ್ಲಿ ಮಂಗಳೂರಲ್ಲಿ ಸಂಚರಿಸಿ ತಮ್ಮ ಏಜಂಟರುಗಳನ್ನು ಸಂದರ್ಶಿಸುವರು

ಶ್ರೀ॥ ಸಿ ಎಸ್. ಪಟೇಲರವರು.

ಸ್ವಸ್ತಿಕ್ ಓಯಿಲ್ ಮಿಲ್ಸ್ ಎಂದರೆ ಮುಂಬಾಯಿಯ ವಾಡಲದಲ್ಲಿ ೧೯೧೮ರಲ್ಲಿ ಸ್ಥಾಪಿತವಾದ ಅತಿ ದೊಡ್ಡ ಭಾರತೀಯ ಕೈಗಾರಿಕೆಯ ಮಂದಿರ ಇವರ ಸರಕುಗಳು ಪ್ರಪಂಚಖ್ಯಾತವಾಗಿವೆ ಎಣ್ಣೆ, ಸಾಬೂನು, ಟೊಯಿಲೆಟ್‌ಗಳನ್ನು ತಯಾರಿಸುವ ಭಾರತೀಯ ಕಂಪೆನಿಗಳಲ್ಲಿ ಇದೇ ಅತಿ ದೊಡ್ಡದೆಂದು ಹೆಸರುಗೊಂಡಿದೆ ಇದಕ್ಕೆ ಸ್ವಂತ ರೈಲ್ವೆ ಇದೆ. ೨೫,೦೦೦ ಚದರ ಗಜಗಳಷ್ಟು ವಿಸ್ತೀರ್ಣದ ಸ್ವಂತ ಭೂಮಿಯಲ್ಲಿ ಮಿಲ್ ಇದೆ. ದಿನಕ್ಕೆ ೧೫೫ ಟನ್ ಬೀಜಗಳ ಎಣ್ಣೆ ತೆಗೆಯುತ್ತಾರೆ. ಇವರ ಜಾಲಾಬು ಎಣ್ಣೆಯು ಅತ್ಯುತ್ಕೃಷ್ಟವೆಂದು ಖ್ಯಾತಿಗೊಂಡಿದೆ. ಇದನ್ನು-ಆಸ್ಪತ್ರೆಗಳಲ್ಲೂ ಕೂಡಾ ಉಪಯೋಗಿಸುತ್ತಾರೆ. ಈ ಮಿಲ್ಲಿನಲ್ಲಿ ಅನೇಕ ಬಗೆಯ ಆಧುನಿಕ ಯಂತ್ರೋಪಕರಣಗಳಿವೆ. ತಜ್ಞರಾದ ಕೆಲವು ರಾಸಾಯನಿಕರು ಮಿಲ್ಲಿನ ಸರಕುಗಳ ಗುಣಾವಗುಣಗಳನ್ನು ಪರೀಕ್ಷಿಸುತ್ತಲೇ ಇರುವರು. ಕಂಪೆನಿಗೆ ೧೨ ಲಕ್ಷದಿಂದ ೧೫ ಲಕ್ಷದ ಮೂಲ ಭಂಡವಾಳವಿದೆ. ಶ್ರೀ॥ ಅಂಬಾಲಾಲ್ ಸರಾಭಾಯಿ, ಕಸ್ತೂರ ಭಾಯಿ ಲಾಲ್ ಭಾಯಿ, ಸರ್ ಪುರುಷೋತ್ತಮದಾಸ್ ಠಾಕೂರ್ ದಾಸ್, ಎಫ್. ಇ. ದಿನ್ಶಾ ಮೊದಲಾದವರು ಈ ಕಂಪೆನಿಯ ಡಿರೆಕ್ಟರರು

## ಮೈಸೂರು.

ದಸರಾ ಮಹೋತ್ಸವಕ್ಕಾಗಿ ಬಹಳ ರಭಸದಿಂದ ಪಟ್ಟಣವೆಲ್ಲವೂ ಸಿಂಗರಿಸಲ್ಪಡುತ್ತಿದೆ. ಮಹಾರಾಜರ ಜಂಬೂಸವಾರಿ ಮೆರವಣಿಗೆಯು ಬರುವ ರಸ್ತೆಯಲ್ಲಿ ವಿದ್ಯುದ್ದೀಪ ಮಾಲಿಗಳು ಹಾಕಲ್ಪಟ್ಟಿವೆ. ಈ ಸಲ ವಸ್ತುಪ್ರದರ್ಶನವು ಬಹಳ ವಿಶೇಷ ರೀತಿಯಿಂದ ನಡೆಯುವ ಹಾಗಿದೆ. ಪ್ರದರ್ಶನದಲ್ಲಿ ಜಪಾನಿನವರು ಹೆಚ್ಚು ಅಂಗಡಿಗಳನ್ನು ಪಡೆಕೊಂಡಿರುತ್ತಾರೆ. ಟಪ್ಪಾಲು ಇಲಾಖೆಯವರೂ ತಮ್ಮ ಪ್ರದರ್ಶನವನ್ನು ಮಾಡುವರು.— ಈ ವರ್ಷ ಮೈಸೂರಿನ ಹವಾಸ್ಥಿತಿಯು ಸಹ ಉತ್ತಮವಾಗಿರುವುದರಿಂದ ಬಹಳ ಮಂದಿ ಪ್ರೇಕ್ಷಕರು ಬರಬಹುದೆಂದು ನಂಬಲಾಗಿದೆ. ಈಗಾಗಲೇ ಜನಗಳು ದಸರಾಮಹೋತ್ಸವವನ್ನು ನೋಡಲು ಬರುವುದಕ್ಕೆ ಪ್ರಾರಂಭವಾಗಿದೆ ಮುಖ್ಯವಾಗಿ ಈ ಸಲದ ದಸರಾ ಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಬಹುದೆಂಬ ಅಭಿಪ್ರಾಯವು ಇಲ್ಲಿಯ ಜನಗಳಲ್ಲಿದೆ


## ಭಯಂಕರ ಹೊಟ್ಟೆ ನೋವಿದ್ದ ರಾತ್ರಿಗಳು.

ಹಲವು ವರ್ಷಗಳ ತನಕ ಉದರವೇದನೆಗೊಳಗಾಗಿ ನಿದ್ದೆಕೆಟ್ಟು ಅಸಹನೀಯ ಕಷ್ಟಕ್ಕೆ ತುತ್ತಾಗಿದ್ದರೂ ಈಗ ನಿಶ್ಚಿಂತೆ ಉಂಡು ತಿಂದು ಮಲಗಲು ಸಾಧ್ಯವಾಗುವುದೆಂದರೆ ಎಂತಹ ಸುಖ!...

ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನುಪಯೋಗಿಸಿ ಅದೃಷ್ಟಶಾಲಿಯಾದೆನೆಂದು ಮಿ॥ T—ಇವರು ಬರೆಯುತ್ತಾರೆ—

"ಹಲವು ವರ್ಷಗಳಿಂದ ಹೊಟ್ಟೆನೋವಿನಿಂದ ಸಂಕಷ್ಟಪಟ್ಟು ಕಂಡು ಕೇಳಿದ ಮದ್ದುಗಳನ್ನುಪಯೋಗಿಸಿದೆ, ಆದರೆ ಯಾವ ಪ್ರಯೋಜನವೂ ಆಗಲಿಲ್ಲ ಕಡೆಗೆ ನಿಮ್ಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಉಪಯೋಗಿಸಿದೆ, ಈಗ ಯಾವ ಉಪದ್ರವವೂ ಇಲ್ಲದೆ ಯಾವುದನ್ನೂ ತಿನ್ನಲು ಶಕ್ತನಾಗಿರುವೆ ಎಷ್ಟೋ ರಾತ್ರಿಗಳಲ್ಲಿ ನಾನು ಅಸಹನೀಯ ವೇದನೆಯನ್ನು ಸಹಿಸಿ, ಬೆವರು ಸುರಿಸಿ ಮಲಗಿ ದಿನದೂಡಿದೆ, ನಿಮ್ಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನುಪಯೋಗಿಸಿದಂದಿನಿಂದ ನಾನು ಸುಖವಾಗಿ ನಿದ್ರಿಸುತ್ತಿರುವೆನು. ನನಗೆ ದೊರೆಯುವ ಎಲ್ಲಾ ಸಂದರ್ಭಗಳಲ್ಲೂ ನಾನು ನಿಮ್ಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಶಿಫಾರಸು ಮಾಡುತ್ತಿರುವೆನು. ನನ್ನನ್ನು ಬಾಧಿಸಿದ ರೋಗದಲ್ಲಿ ನರಳುವವರನ್ನು ಕಂಡು ನನಗೆ ವ್ಯಥೆಯಾಗುತ್ತದೆಯಾದುದರಿಂದ,ನಾನು ಮುಂದಕ್ಕೂ ನಿಮ್ಮ ಔಷಧಿಯನ್ನು ಶಿಫಾರಸು ಮಾಡುವುದನ್ನು ಮರೆಯೆನು.

ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ, ಆದರೆ ಕೆಲವು ಅಂಗಡಿಗಳಲ್ಲಿ ಉಪಯೋಗವಿಲ್ಲದ ನಕಲಿ ಮಾಲುಗಳನ್ನು ಪಡೆದು ಮೋಸಹೋಗಬೇಡಿರಿ, ಕೆಳಗಿನ ಮುದ್ರೆಯಿರುವ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಜಾಗ್ರತರಾಗಿರಿ, ಮುದ್ರೆ ಚಿತ್ರ ಬಿಲ್ಲೆಗಳ

ಎಂಬ ಸಹಿಯು ಇದೆ

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಲು ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

15 ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—

ಇವರಿಗೆ ಬರೆಯಿರಿ



# WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ

ಐಪಿಡಾಯಿಟ್ಸ್
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ,
೪೫ ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫ್ರೊಸ್ಫರಸ್ ಗುಳಿಗೆಗಳು.
ಅಶಕ್ತರು [illegible]
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪,
ಸ್ಟೋಕಿಸ್ಟ್ — ಶಾ ಕಂಪನಿ, ಮಂಗಳೂರು,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ,

THE 1935 MODEL
# HEAVY DUTY TRUCK



## For Your Haulage

U. SUBRAYA NAYAK,
FORD DEALER
SHIMOGA—AND—MANGALORE.

# Now For Sale.

**Poholatum (Balm)** (German make) This is a home remedy for Rheumatism, Asthma, Sciatica, Lumbago, Insect bites, Herpes, Wounds, Cuts, Colds, Headache It is a complete substitute for the domestic medicine chest Try once this unequalled remedy In ½oz tin As 3/- In oz jar As. 12/-

**Superior Red Balm** For relieving pains in muscles and on skin. Directions for use with the bottle Price As 12/- only

**Wurmteufel** Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms, children and adults, try this unique remedy and be freed from your ailment Price As 10 per packet.

**Pocket Inhaler** For coughs and hoarseness, headache, catarrh, colds use this inhaler and you will be relieved immediately Price per inhaler As 6/- & As 3/-

**'Po-Ho Fluid'** For Asthma, colds, indigestion, toothache lumbago, a sure remedy in all cases Price As. 6/- and Re. 1/- per phial

**Cough Cure** An infallible remedy for coughs of all kinds bronchitis, hoarseness. Particulars in bottle. Price As. 12/- for 3 oz bottle

**The New Curative Earth** A Radium cure for incurable diseases

**Nithra Toilet Soaps**—Scientifically prepared German soaps, excellent for health Price As. 1/3, 2/6, 3/-, 4.

**Basel Mission Book Depot**
Mangalore, Branches in Codialbail, Hubli, Calicut

## Our Dasara Special Number for 1935

will be out in the first week of October,
with attractive illustrations by twenties!
with instructive & interesting articles by dozens!
Double coloured photos a Speciality!
CONTRIBUTIONS BY REPUTED WRITERS!
PRICE AS. 2 ONLY
It would pay you to advertise your goods in this Popular Number
*Apply for advertisement rates to* —
Advertisement Manager,
The Swadeshabhimani Dasara Special 1935,
CAR STREET MANGALORE

## ಸ್ತ್ರೀಯರು ನರ್ತಿಸಬಾರದು.
### ಢಕ್ಕಾದಲ್ಲಿ ಸ್ತ್ರೀಯರ ಖಂಡನೆ.

"ಸ್ತ್ರೀಯರಿಗೆ ಸ್ವಾತಂತ್ರ್ಯವೀಯಬೇಡಿ"—ತನಗೆ ಅದರಿಂದ ಕೆಡುಕು ಉಂಟೆಂದು ಯಾವುದೋ ಪುರಾಣ ಗ್ರಂಥದಲ್ಲಿ ಓದಿದ ನೆನಪುಬರುತ್ತದೆ. ಆದರೆ ನಾವು ಆ ಪುರಾಣವಾದವನ್ನು ಕಿವಿಮೇಲೆ ಹಾಕಿಕೊಳ್ಳುವವರಲ್ಲವೆನ್ನಿ!—ನಮ್ಮ ಸ್ತ್ರೀಯರು ಸ್ವಾತಂತ್ರ್ಯವನ್ನು ಪಡೆದಷ್ಟು ನಮಗೆ ಸಂತೋಷ! (ನಾವು ಬಳಿ ಕೊಟ್ಟಷ್ಟು ಅವರಿಗೂ ಸಂತೋಷವೆ!) ಅವರಿಗೆ ಸ್ವಾತಂತ್ರ್ಯ ಕೊಟ್ಟುದರಿಂದಾಗಿಯಲ್ಲವೇ ಅವರು ಇಂದು ತಪ್ಪುಬಪ್ಪು ಸುಸಾರವಾಗಿ ಠರಾವುಗಳನ್ನು ಬರೆದು ಖಂಡನೆಗೆ ತೊಡಗಿರುವರು. ಢಕ್ಕಾದಲ್ಲಿ ಪೆಸನ್ನೆ ಸುನೀತಿ ಸಂಘದ ತೃತೀಯ ವಾರ್ಷಿಕೋತ್ಸವವು ಜರಗಿತು. ಹಲವು ಠರಾವುಗಳಾದುವು. ಕೊನೆಗೆ ಪ್ರೌಢವಯಸ್ಕರಾದ ತರುಣಿಯರು ಬಹಿರಂಗವಾಗಿ ನರ್ತಿಸಬಾರದೆಂಬ ಠರಾವಾಯಿತು. ನರ್ತನವೇ ತಮ್ಮ ಬಾಳಿನ ಉದ್ಯೋಗವನ್ನಾಗಿಟ್ಟುಕೊಂಡವರಿಗೆ ಇವರು ಯಾವ ಕೆಲಸವನ್ನು ಕೊಡುವರೆಂದು ಠರಾವು ಮಾಡಿಕೊಳ್ಳಲಿಲ್ಲ!

---

## ಮಕ್ಕಳನ್ನು ಸಲಹದಿರುವವರೂ ಇದ್ದಾರೆ!

ಅದೇನೂ ಸುಳ್ಳು ವಾರ್ತೆಯಲ್ಲ!—ಸೋವಿಯಟ್ ರಷ್ಯದಲ್ಲಿರುವ ಸತ್ಯ ಸಂಗತಿ. ಅಲ್ಲಿ ೧೯೩೩ರಲ್ಲಿ ೧೪,೨೦೦ ತಂದೆಗಳು ತಮಗೆ ಹುಟ್ಟಿದ ಮಕ್ಕಳನ್ನು ಅವರಿಗೆ ಜೀವನಾಂಶವನ್ನೀಯದೆ, ಸಾಕಿ ಸಲಹಲು ಕೂಡ ಲಕ್ಷ್ಯವಹಿಸದೆ ಎಲ್ಲೆಲ್ಲಿ ಅಲೆದಾಡಿದರೆಂದು ತಿಳಿದುಬರುತ್ತದೆ. ೧೯೩೪ರಲ್ಲಿ ೨ ಲಕ್ಷಕ್ಕೆ ಮೀರಿದ ತಂದೆಗಳು ಹೀಗೆಯೇ ಮಾಡಿದರಂತೆ. ಇಂತಹವರಿಗೆಲ್ಲ ಕಡಮೆಯೆಂದರೆ ಒಂದೊಂದು ವರ್ಷದ ಕಾರಾಗೃಹವಾಸವನ್ನು ವಿಧಿಸಲಾಗಿದೆ.

---

## ಇವನಿಗೆ ನಮ್ಮ ಅಭಿವಂದನೆಗಳು!

ಏಕೆಂದರೆ ಇವನು ಯುವಕರನ್ನೂ ಸೋಲಿಸಿದನು. ಲೆಫ್ಟಿನೆಂಟ್ ಕರ್ನಲ್ ಫ್ರಾಂಕ್ ಹೆರಿಸ್ ಎಂಬ ೬೦ ವರ್ಷ ಪ್ರಾಯದ ಮುದುಕನೊರ್ವನು ಟನ್ ಬ್ರಿಜವೆಲ್ಸ್ ಎಂಬಲ್ಲಿಂದ ಬೆಳಿಗ್ಗೆ ೫ ಗಂಟೆಗೆ ಕಾಲ್ನಡೆಯಿಂದಲೇ ಹೊರಟು ಮಧ್ಯಾಹ್ನ ೩ ಗಂಟೆಗೆ ೩೩ ಮೈಲುಗಳಷ್ಟು ದೂರವಿರುವ ಲಂಡನ್ ನಗರವನ್ನು ತಲಪಿ ಅಲ್ಲಿ ಅವನನ್ನು ಸ್ವಾಗತೀಕರಿಸಲಿದ್ದ ಹುಡುಗರನ್ನು ಕಂಡು "ಈಗಿನ ಯುವಕರು ಒಂದೆರಡು ಮೈಲು ನಡೆಯಬೇಕಾದರೂ ಮೋಟರು ಹತ್ತಿ ಓಡುತ್ತಾರೆ. ಇದು ಅವರ ದೌರ್ಬಲ್ಯ" ಎಂದು ಮುಂತಾಗಿ ತಿಳಿಸಿ ಮುಂದರಿಸಿದನು.

---

## ಇದು ನಿಜವಾಗಿಯೂ ಘೋರ ತಪ್ಪು!

ಪೂನೆಯಲ್ಲಿ ಮಹಮ್ಮದ ಇಸಾಕ ಎಂಬವನು ಓರ್ವ ವೇಶ್ಯಾಸ್ತ್ರೀಯ ಮೂಗನ್ನು ಸಣ್ಣ ಚೂರಿಯಿಂದ ಕತ್ತರಿಸಿ ಕೊಯ್ದಿರುವನು. ಮೆಜಿಸ್ಟ್ರೇಟರು ೧೫ ತಿಂಗಳುಗಳ ಶಿಕ್ಷೆ ವಿಧಿಸಿದರು. ೯೦ ರೂಪಾಯಿ ದಂಡವನ್ನೂ ವಿಧಿಸಿರುವರು. ದಂಡಕೊಡದಿದ್ದರೆ ಪುನಃ ೩ ತಿಂಗಳ ಶಿಕ್ಷೆ! ಪಾಪ! ಹೇಗಾದರೂ ಮಾಡಿ ಪೌಡರ್ ಹಚ್ಚಿ ಅವಳು ತನ್ನ ಮೂಗಿನ ಸೌಂದರ್ಯದಿಂದ ದಿನಹರಣ ಮಾಡುತ್ತಿದ್ದಳು. ಈಗ ಆ ಮೂಗಿನ ತುಂಡೇ ಹೋಗಿದೆಯೇ? ಅವಳ ಹರಿಗಿನ ಹುದಿಯೂ ಅವನಿಗೆ ಕಾಣಲಿಲ್ಲವೇ ಹಾ! ದುರ್ದೈವವೇ! ಅವನ ಮೂಗನ್ನಾದರೂ ಅವಳಿಗೆ ಕೊಡುವಂತಾಗಿದ್ದರೆ?

---

## ಎಲ್ಲಿ ಕೇಳಿದರೂ ಇದೇ ರೋಗ!

ಅದೇನು?—ವಿಷಭುಂಜಕರ ಹಠಯೋಗ! ಕಲ್ಕತ್ತದಲ್ಲಿ ಹಠಯೋಗಿಗಳೊಬ್ಬರು ತಮ್ಮ ಚಮತ್ಕಾರದಿಂದ ಕೆಪಿಟಲ್ ಸಿನೇಮಾದಲ್ಲಿ ಜನರು ಕೊಟ್ಟುದನ್ನು ತಿಂದರಂತೆ. ಕಲ್ಲು, ಮುಳ್ಳು, ಕಬ್ಬಿಣ, ಸೂಜಿ ಮೊದಲಾದುವುಗಳನ್ನೂ ಒಂದು ದೊಡ್ಡ ಹಾವನ್ನೂ ಜನರು ತಿನ್ನಲು ಕೊಟ್ಟರು. ಪಾಪ! ಹಠಯೋಗಿಗಳಿಗೆ ಹಸಿದಿರಬಹುದು—ಒಂದನ್ನೂ ಬಿಡದೆ ನುಂಗಿದರು. ಜೀರ್ಣವಾಗಿದೆಯೋ ಇಲ್ಲವೋ ತಿಳಿದುಬಂದಿಲ್ಲ.

---

## ಮುಂಬಾಯಿ ಕೆನರಾ ವಿದ್ಯಾದಾಯಿನಿ ಫ್ರೀ ನೈಟ್ ಸ್ಕೂಲ್.

ಈ ಶಾಲೆಯ ೨ನೇ ವಾರ್ಷಿಕೋತ್ಸವವು ಮಿ। ಎ. ಪಿ. ಬೊಡುಕರರವರ ಅಧ್ಯಕ್ಷತೆಯಲ್ಲಿ ಇದೇ ತಾ. ೨೯ರಲ್ಲು ನೇಟಿವ್ ಟೀ ಎಂಡ್ ಸ್ಪೋರ್ಟ್‌ಪ್ರೇಕರ್ಸ್ ಎಸೋಸಿಯೇಷನ್ ಹೋಲಿನಲ್ಲಿ ಜರಗುವುದು.

---

# ಜ್ಞಾನಾನಂದ

[ನಮ್ಮ ವಾಚಕರು ಜ್ಞಾನಾರ್ಜನೆಮಾಡುವುದರೊಡನೆ ಆನಂದವನ್ನೂ ಹೊಂದಲೆಂದು "ಜ್ಞಾನ-ಆನಂದ"ಗಳನ್ನೊಂದುಗೂಡಿಸಿ ಈ ಪುಟವನ್ನು ತೆರೆಯಲಾಗಿದೆ. ಜಗತ್ತಿನ ವಿನೋದಪೂರ್ಣ ವಿಷಯಗಳನ್ನು ಸಂಗ್ರಹಿಸಿ ಈ ಪುಟಗಳಲ್ಲಿ ಕೊಡಲಾಗುವುದು.—ಸಂ.]

## ಒಂದು ತಪ್ಪಿನಲ್ಲಿ ಎರಡು ಗುಟ್ಟು ಹೊರಗೆ!

ಅದು ಹೇಗೆಂದು ಈ ವಾರ್ತೆಯು ತಿಳಿಸುವುದು. ಬಂಗಾಳ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಬಿಲ್ಲಿನ ಮೇರೆಗೆ ಕಲ್ಕತ್ತದ ಮಿಸ್ ಪ್ರಫುಲ್ಲ ಮುಖರ್ಜಿ ಎಂಬ ೧೮ ವರ್ಷ ಪ್ರಾಯದ ತರುಣಿಯೋರ್ವಳನ್ನು ಪೋಲೀಸರು ಸೆರೆಹಿಡಿಯ ಹೋದರು. ಆದರೆ ಅವಳು ಅವರ ಕೈಗೆ ಸಿಗಲಿಲ್ಲ! ಇತ್ತೀಚೆಗೆ ಅವಳನ್ನು ಮತ್ತು ಕೆಲವರೊಡನೆ ಸೆರೆಹಿಡಿಯಲಾಯಿತು. ಅವಳಿಗೆ ಆಶ್ರಯವಿತ್ತವರ ಮನೆಯಲ್ಲಿ ಶೋಧನೆ ನಡೆಸಿದಾಗ ಅನೇಕ ಬಾಂಬುಗಳು ದೊರೆತುವಂತೆ! ಅವಳು ತಲೆತಪ್ಪಿಸಿಕೊಂಡುದರಿಂದ ಒಂದೇ ತಪ್ಪು ಎರಡು ಅಪಾದನೆಗಳನ್ನು ಹೊರಗೆ ತಂದಿತು.

---

## ಪ್ರಪಂಚದಲ್ಲಿ ಅತಿ ದೊಡ್ಡ ವಿಗ್ರಹ ಯಾವುದು?

—ಎಂದರೆ ಬೇಲೂರು ಗುಮ್ಮಟೇಶ್ವರನನ್ನು ತೋರಿಸುವವರಿರಬಹುದೇನೋ! ಅವರು ತಪ್ಪಿದ್ದರೆನ್ನಿ! ಜಪಾನ್ ದೇಶದ ನಾರಾ ಪಟ್ಟಣದಲ್ಲಿ ಒಂದು ಬೌದ್ಧ ದೇವಾಲಯವುಂಟು. ಅಲ್ಲಿಯ ಬೌದ್ಧವಿಗ್ರಹದಷ್ಟು ದೊಡ್ಡ ವಿಗ್ರಹವು ಪ್ರಪಂಚದ ಯಾವ ಭಾಗದಲ್ಲೂ ಇರುವುದಿಲ್ಲ. ಇದು ೭೩೩ ವರ್ಷಗಳ ಪೂರ್ವದಲ್ಲಿ ರಚಿಸಲ್ಪಟ್ಟಿರುವುದು. ಇದನ್ನು ತಯಾರಿಸುವುದಕ್ಕಾಗಿ ೪೩೭ ಟನ್ನುಗಳಷ್ಟು ಬ್ರಾಂಜು, ೨೮೮ ಪೌಂಡು ಬಂಗಾರ, ೩ ಟನ್ನುಗಳಷ್ಟು ಮೇಣ, ೧೬೫೪ ಪೌಂಡು ಪಾದರಸಗಳು ಬೇಕಾಗಿದ್ದುವು. ವಿಗ್ರಹದ ಮುಖ ೧೬ ಅಡಿ ಅಗಲ ೯½ ಅಡಿ ಮೂಗಿನ ಉದ್ದ ೩೦ ಅಂಗುಲಗಳು ಬಾಯಿಯ ಅಗಲ ೩ ಅಡಿ ೧ ಅಂಗುಲ ಹೆಬ್ಬೆಟ್ಟಿನ ಸುತ್ತಳತೆ ೫೮ ಅಂಗುಲಗಳು. ವಿಗ್ರಹದ ಎತ್ತರ ೫೩ ಅಡಿ! ಯಾಕೆ ಮಾಡಿದರೆಂದು ಪ್ರಶ್ನೆಯಾಗಬೇಕು!

---

## ನೆಪೋಲಿಯನನು ೧೮೧೩ನೇ ಇಸವಿ—

ಮೇ ತಾ ೧೮ರಲ್ಲಿ ತನ್ನ ಪೋಲೀಸ್ ದಳದ ಮುಖ್ಯಸ್ಥನಾದ ಫೌಚ್ ಅಥವಾ ಡ್ಯೂಕ್ ಒಫ್ ಒಟ್ರೊಂಟೋ ಎಂಬವನಿಗೆ ಕೈಬರಹದಲ್ಲಿ ಬರೆದ ಒಂದು ಪತ್ರವು ಖಾರ್‌ಕೋಫ್ ಎಂಬಲ್ಲಿನ ಸೆಂಟ್ರಲ್ ಲೈಬ್ರರಿಯಲ್ಲಿ ಕಾಣಸಿಕ್ಕಿರುತ್ತದೆ. ಜರ್ಮನಿಯಲ್ಲಿ ತನ್ನ ಸಾಹಸವನ್ನು ಮುಂದೊತ್ತುವ ಕೊನೆಯ ಯತ್ನದ ವೇಳೆ ಅವಸರಪತ್ರವನ್ನು ಬರೆದಿದ್ದನು. ಅದರಲ್ಲಿ ಹೀಗಿತ್ತು— "ಪ್ರಶ್ಯಾ ಸಾಮ್ರಾಜ್ಯವನ್ನು ಹೇಗಾದರೂ ಆಕ್ರಮಿಸಬೇಕೆಂದು ನಿಶ್ಚಯಿಸಿರುವೆನೆಂದು ನಿಮಗೆ ಈ ಮೂಲಕ ತಿಳಿಯಬಯಸುವೆನು. ಆ ದೇಶದ ನಾಯಕರನ್ನಾಗಿ ನಿಮ್ಮನ್ನು ನಾನು ನೇಮಕಮಾಡಲಿರುವೆ; ನನಗೆ ಲುಸೆನಾ (ಸ್ಪೈನ್) ನಲ್ಲಿ ದೊರೆತ ವಿಜಯದಿಂದ ನಾನೀಗ ಸ್ಪೈನನ್ನು ಎಲ್ಪಿನಿಂದ ಹಿಂದೋಡಿಸಲು ಶಕ್ತನಾಗಿರುವೆ. ನೀವು ಒಂದು ನಿಮಿಷವನ್ನೂ ಕಳೆದುಕೊಳ್ಳದೆ, ಒಡನೆ ಉತ್ತರವಿತ್ತು ಈ ವಿಷಯ ನಿಮ್ಮ ಅಭಿಪ್ರಾಯವೇನೆಂದು ತಿಳಿಸಿರಿ. ನಿಮಗೆ ಬೇಕಾದ ನಂಬಿಗಸ್ಥರಾದ ಇಬ್ಬರ ದೂತರನ್ನು ನೀವು ಆರಿಸಿಕೊಳ್ಳಿ, ಜರ್ಮನ್ ಭಾಷೆಯನ್ನರಿಯುವ ಜನರನ್ನೇ ಆರಿಸಿರಿ. ನಿಮ್ಮ ವಿಧೇಯತೆಯಲ್ಲಿಗೆ ಈ ನಿರೂಪವು ದೊರೆತರೆ ನಾನು ಸಂತೋಷಿತನಾಗುವೆನು. ದೇವರು ನಿಮಗೆ ಸಹಾಯ ಮಾಡಲಿ. ನಾನು ನಿಮ್ಮ ಅದೃಷ್ಟವನ್ನು ಆತನ ವಶವಿತ್ತಿರುವೆನು" ನೆಪೋಲಿಯನ್. ಫೌಚ್ ಎಂಬ ಈ ಪೋಲೀಸ್ ಅಧಿಕಾರಿಯು ೧೮೦೯ರಿಂದ ೧೮೧೫ರ ವರೆಗೆ ಈ ಸ್ಥಾನದಲ್ಲಿದ್ದನು. ಇಷ್ಟು ಆತಿಗಳನ್ನು ಕಟ್ಟಿಕೊಂಡವರಿಗೂ ಮರಣವಿದೆಯೇ!

---

## ದೇವರಿಗೇತಕ್ಕಯ್ಯಾ ಮದುವೆ?

—ಆದರೂ ಆ ಪರಮಾತ್ಮನಿಗೆ ತಪ್ಪಿಲ್ಲ. ಕುಮಾರಿಯರನ್ನು ವಿವಾಹ ಮಾಡಿದ ಕತೆಯಿದೆ. ಅಹಮ್ಮದಾಬಾದ್ ನಗರದ ಉಪಾಸಕ ಬಾಬರೆಂಬವರು ತನ್ನ ಇಬ್ಬರು ಹೆಣ್ಮಕ್ಕಳನ್ನೂ ಶ್ರೀ ಕೃಷ್ಣಮೂರ್ತಿಗೆ ಲಗ್ನಮಾಡಿ ಆ ಹುಡುಗಿಯರು ಆಜನ್ಮ ಬ್ರಹ್ಮಚರ್ಯವ್ರತಧಾರಿಗಳಾಗಿಯೇ ಇರಬೇಕೆಂದು ಆಜ್ಞೆಕೊಟ್ಟರು. ಈ ವಿಷಯ ಕೋರ್ಟಿಗೆ ಹೋಯಿತು. ಕಾಶಿಯ ಮತ್ತು ಗಂಗೂ ರವರನ್ನು ಹೀಗೆ ಕಾಯಿದೆವಿರೋಧವಾಗಿ ದೇವರಿಗೆ ಲಗ್ನಮಾಡಿದ ದಕ್ಕಾಗಿ ಅಹಮ್ಮದ ನಗರದ ಮೆಜಿಸ್ಟ್ರೇಟರು ಉಪಾಸಕ ಬಾಬರವರಿಗೆ ರೂ. ೧೦೦ ದಂಡವಿಧಿಸಿರುವರು.

---

## ಒಂದು ವಿಚಿತ್ರ ಸತ್ಯ!

ಫಿಲಿಪ್ಪಿನ ದ್ವೀಪದ ಡಾ। ಫ್ರಾಂಕ್ಸಿ ಲಾಬ್ಯಾಕ್ ರವರು ಹಿಂದೂದೇಶದಲ್ಲಿನ ವಿದ್ಯಾಭ್ಯಾಸಕ್ರಮ ಮತ್ತು ಅವುಗಳ ಪರಿಣಾಮವೇನೆಂದು ಕೇಳಿ ಹೀಗೆ ಹೇಳುತ್ತಾರೆ—"ರಷ್ಯಾದಲ್ಲಿ ೧೯೨೧ರಲ್ಲಿ ಕೇವಲ ೩೮ ಜನರು ವಿದ್ಯಾವಂತರಾಗಿದ್ದರು. ೧೯೩೧ರಲ್ಲಿ ಕೇವಲ ೯೨ ಜನರು ವಿದ್ಯಾವಂತರಾದರು. ಹತ್ತು ವರ್ಷಗಳಲ್ಲಿ ಕೇವಲ ೫೪ ಜನರನ್ನು ಅಧಿಕ ವಿದ್ಯಾವಂತರನ್ನಾಗಿ ಮಾಡಿತು. ೧೯೩೩ರೊಳಗೆ ಅಲ್ಲಿ ಅನಕ್ಷರಸ್ಥರಿಲ್ಲದಂತೆ ಮಾಡುವದೆಂದು ಸರಕಾರದ ನಂಬಿಕೆ. ಹಿಂದೂದೇಶದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಕೇವಲ ಒಬ್ಬರಂತೆ ಅಕ್ಷರಸ್ಥರು ಹೆಚ್ಚಿರುವರು. ನೂರಕ್ಕೆ ೯೨ ಮಂದಿ ಅನಕ್ಷರಸ್ಥರು. ಇದೇ ರೀತಿಯಲ್ಲಿ ನಮ್ಮ ವಿದ್ಯೆಯು ಮುಂದರಿಯುವುದಾದರೆ ಇನ್ನು ೯೩೦ ವರ್ಷಗಳ ನಂತರ ಭಾರತೀಯರಲ್ಲಿ ಎಲ್ಲರೂ ಅಕ್ಷರಸ್ಥರಾಗುವರು." ಇದು ಒಂದು ವಿಚಿತ್ರಸತ್ಯವೆಂದು ನಾವು ನಾವೇ ತಲೆಬಾಗಿಸುವ.

---

## ಗಂಗಾ ಮತ್ತು ಯಮುನಾ ನದಿಗಳ ಪಾವಿತ್ರ್ಯದ ರಹಸ್ಯವೇನು?

ಉಡುಪಿ ತಾಲೂಕು ಬೋರ್ಡು ಜಿಮ್ಖಾನಾ ಕಮಿಟಿ ಯವರ ಶಾಲೆಗಳೊಳಗಿನ ಕ್ರಿಕೆಟ್ ಪಂದ್ಯಾಟಗಳು ಕಳೆದ ವಾರದಿಂದ ಜರಗುತ್ತಲಿವೆ. ... ಆಟವು ಉಡುಪಿ ಬೋರ್ಡು ಹೈಸ್ಕೂಲ್ ಮತ್ತು ಕ್ರಿಶ್ಚನ್ ಹ್ಯಾಸ್ಕ್ಯೂಲುಗಳೊಳಗೂ ಸೀ ಎಸ್ ಉಡುಪಿ ಬೋ! ಹೈಸ್ಕೂಲ್ ಮತ್ತು ಕಲ್ಯ... ವಿಬಾಗ್ರಿಸ್ ಹೈಸ್ಕೂಲುಗಳೊಳಗೂ ಜರಗತಕ್ಕದ್ದಿದೆ.

ಜಿಲ್ಲಾ ಹರಿಜನ ಸೇವಾ ಸಂಘದ ಕಡೆಯಿಂದ ಇಲ್ಲಿನ ಬೋ! ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪಂಚಮ ವಿದ್ಯಾರ್ಥಿಗಳಿಗೆ (ಸುಮಾರು ೨೧) ಮಧ್ಯಾಹ್ನದ ಊಟದ ಏರ್ಪಾಟು ತಾ ೮ರಿಂದ ಮೊದಲಾಗಿದೆ. ಶ್ರೀ ನಂ ಕಿಲ್ಲೆಯವರೇ ಸ್ವತಃ ಆರಂಭಮಾಡಿದರು.

**ಬಸರೂರು:**—ಶ್ರೀ ಬಿ ಜಗನ್ನಾಥ ಹೆಗ್ಡೆ ಬಿ ಎ. ಇವರು ಬೆಂಗಳೂರಿನ ಇಂಡಿಯನ್ ರಿಸರ್ಚ್ ಇನ್ಸ್ಟಿಟ್ಯೂಟಿನಲ್ಲಿ ಕಳೆದ ಎರಡು ವರ್ಷಗಳಿಂದ ರಸಾಯನ ಶಾಸ್ತ್ರದಲ್ಲಿ ತರ್ಬೇತಿ ಹೊಂದುತ್ತಲಿದ್ದು ಇತ್ತೀಚೆಗೆ ಮದ್ರಾಸು ಸರಕಾರದಿಂದ ಇಂಗ್ಲೆಂಡಿನಲ್ಲಿ ಗಾಜಿನ ಕೈಗಾರಿಕೆಯಲ್ಲಿ ತರ್ಬೇತಿ ಹೊಂದುವರೆ ಸ್ಕಾಲರ್‌ಶಿಪ್ ಪಡೆದು ಇವರು ಇಂಗ್ಲೆಂಡಿಗೆ ತೆರಳುವ ಸಂದರ್ಭದಲ್ಲಿ ಬಸರೂರು ಯುವಕರ ಪ್ರೋತ್ಸಾಹದಿಂದ ಸದ್ರಿಯವರಿಗೆ ವಿದಾಯವನ್ನೀಯಲು ಸ್ಥಳೀಕ ಹಿಂದೂ ಶಾಲೆಯಲ್ಲಿ ಕಳೆದ ತಾ ೨೯ನೇ ದಿನ ಶ್ರೀ ಬಿ ವಿ ಭಟ್ ಜೋಯಿಸರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ ಸೇರಿತು. ಕಾರ್ಯಕ್ರಮದಂತೆ ಶ್ರೀಗಳಾದ ಬಿ ನಾರಾಯಣರಾಯರು, ಲೋಕಲ್ ಫಂಡ್ ಕಟ್ಟೊತ್ತುರಕೆ ಶಂಕರಶೆಟ್ಟಿ ಮತ್ತು ಮಥಾಯಸ್, ಬಿ. ಶಿವರಾಮ ಶೆಟ್ಟಿ ಮೊದಲಾದವರು ರಾ! ಹೆಗ್ಡೇರ ಅಪ್ರತಿಮ ಕ್ರಿಯಾಶಕ್ತಿ, ಅಸಾಧಾರಣ ಪ್ರತಿಭೆ, ಅನುಪಮ ಕುಶಲತೆ, ಮುಂತಾದ ಉಜ್ವಲಗುಣಗಳನ್ನು ಶ್ಲಾಘಿಸಿ, ಇವರಿಗೆ ವೇತನವನ್ನು ದಯಪಾಲಿಸಿದ ಮಾನ್ಯ ಸರಕಾರವನ್ನು ಅಭಿನಂದಿಸಿ, ಶ್ರೀಯುತರು ಪಾಶ್ಚಿಮಾತ್ಯ ವ್ಯಾಸಂಗವನ್ನು ಕೊನೆಗೊಳಿಸಿ ಮಾತೃಭೂಮಿಗೆ ಬಂದ ತರುವಾಯ ಮಾಡತಕ್ಕ ಭಾವೀ ಕರ್ತವ್ಯಗಳ ಕುರಿತು ಅಮೋಘ ಸೂಚನೆಗಳನ್ನಿತ್ತು ಭಾಷಣವನ್ನಿತ್ತರು. ರಾ! ಹೆಗ್ಡೇರು ಧನ್ಯವಾದದ ಸೂಚನೆಗಳನ್ನು ಅಂಗೀಕರಿಸಿ, ತನ್ನನ್ನು ಈ ರೀತಿ ಸತ್ಕರಿಸಿದುದಕ್ಕೆ ಆಭಾರವನ್ನು ಸೂಚಿಸಿ ಮಾತನಾಡಿದರು. ಅಧ್ಯಕ್ಷರ ಭಾಷಣದ ತರುವಾಯ ಆತಿಥಿಸತ್ಕಾರದೊಡನೆ ಸಭಾಂತ್ಯವಾಯಿತು.

**ಮೂಲ್ಕಿ:**—ಇದೇ ತಾ ೧೨ನೇ ಶನಿವಾರ ಅಪರಾಹ್ನ ಗಂಟೆ ೪-೩೦ಕ್ಕೆ ಮಂಗಳೂರಿನ ಗವರ್ನಮೆಂಟ್ ಕಾಲೇಜಿನ ಪ್ರೊಫೇಸರ್ ಶ್ರೀ ಕೆ. ವೆಂಕಟ್ರಾವ್, ಎಂ ಎ. ಎಲ್ ಟಿ ಇವರು "ಭಕ್ತಿಮಾರ್ಗದ ತಿಳುವಳಿಕೆಯ ಅವಶ್ಯಕತೆ" ಎಂಬ ವಿಷಯವನ್ನೆತ್ತಿಕೊಂಡು ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಭಾಷಣಮಾಡಲಿರುವರು.

ಇದೇ ತಾ. ೭—೧೦—೩೫ನೇ ಸೋಮವಾರ ಸಾಯಂ ಗಂಟೆ ೭ಕ್ಕೆ ಇಲ್ಲಿಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ಎಂದಿನಂತೆ ಶ್ರೀ ಶಾರದಾ ಪೂಜೆಯು ಯಥಾವಿಧಿಯಾಗಿ ಆಚರಿಸಲ್ಪಟ್ಟಿತು.

ಸ್ಥಳೀಕ ಯೂನಿಯನ್ ಕ್ಲಬ್ ಇದೇ ಕಳೆದ ತಾ ೧೯ರಲ್ಲಿ ಇಂಡಿಯನ್ ಸೊಸೈಟೀಸ್ ಆಕ್ಟು ಪ್ರಕಾರ ರಜಿಸ್ಟ್ರಿ ಮಾಡಲ್ಪಟ್ಟಿರುತ್ತದೆ ಎಂದು ತಿಳಿದುಬರುತ್ತದೆ.

ಸ್ಥಳೀಕ ಕೇಂದ್ರದಿಂದ ೧೯ ಮಂದಿ ಹಿಂದೀ ಪ್ರಾಥಮಿಕ ಪರೀಕ್ಷೆಗೂ ೬ ಮಂದಿ ಮಾಧ್ಯಮಿಕ ಪರೀಕ್ಷೆಗೂ ಕುಳಿತಿರುವರು. ಪರೀಕ್ಷೆ ಆದ ಮೇಲೆ ಹಿಂದೀ ಅಧ್ಯಾಪಕರಾದ ಶ್ರೀ ವಿ ಆರ್. ಉದ್ಯಾವರ್, ಬಿ ಎ, ಇವರಿಂದೊಡಗೂಡಿ ಒಂದು ಛಾಯಾಚಿತ್ರ ತೆಗೆಸಲಾಯಿತು.

ದಸರಾ ಉತ್ಸವವು ಸ್ಥಳೀಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗಿತು.

**ಹೊಸದುರ್ಗ:**—ಇಲ್ಲಿಯ ಬೋ! ಹಾ! ಎ! ಶಾಲೆಯಲ್ಲಿ ಪ್ರತಿವರ್ಷದಲ್ಲಿಯೂ ಕೊಂಡಾಡುವಂತೆ ದಸರಾ ಮಹೋತ್ಸವವು ಈ ವರ್ಷವೂ ಇದೇ ತಾ ೪ರಿಂದ ೭ರ ವರೆಗೆ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ನಾಲ್ಕು ದಿನಗಳಲ್ಲಿಯೂ ಮಕ್ಕಳ ವಿವಿಧ ವಿನೋದಗಳು ಅಂಗಸಾಧನೆ, ಲಾತಿ, ಲೇಜಿಂ ಡ್ರಿಲ್ ಪ್ರಯೋಗ ಇವುಗಳ ಪ್ರದರ್ಶಿಸಲ್ಪಟ್ಟವು. ಶಾಲಾ ಮಕ್ಕಳ ಕೆಲಸದ ಪ್ರದರ್ಶನವೂ ಜರಗಿತು. ಈ ಸಂದರ್ಭದಲ್ಲಿ ಶಾಲಾ ವರ್ಧಂತ್ಯುತ್ಸವವೂ ಜರಗಿಸಲ್ಪಟ್ಟಿತು. ಎಲ್ಲಾ ರಾತ್ರಿಗಳಲ್ಲಿಯೂ ಕನ್ನಡ, ಹಿಂದೀ ಮತ್ತು ಇಂಗ್ಲೀಷ್ ನಾಟಕಗಳನ್ನು ಸಹ ಶಾಲಾ ಮಕ್ಕಳು ಅಭಿನಯಿಸಿ ತೋರಿಸಿದರು.

ಕೆಲವು ದಿನಗಳ ಹಿಂದೆ ತೀರ್ಪ ಬಾಕಿ ಮಾಡಿಕೊಂಡಿರುವ ತಪ್ಪಿನ ಮೇಲೆ ಇಲ್ಲಿಂದ ಕೈದುಮಾಡಿ ಮಂಗಳೂರಿಗೆ ಒಯ್ಯಲ್ಪಟ್ಟ ಕೋಟ್ಟೆಯಿಲ್ / ಉಣ್ಣಾರನ್ ನಂಬರ್... ಅಸ್ವಸ್ಥನಾಗಿದ್ದು ಜಿಲ್ಲಾ ಕಲೆಕ್ಟರರು ಅವನನ್ನು ಬಂಧವಿಮೋಚನೆ ಮಾಡಿರುವರಾಗಿ ತಿಳಿದುಬರುತ್ತದೆ.

ಇಲ್ಲಿಂದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರಿಕೆಗೆ ಸ್ಥಾನಾರ್ಥಿಗಳಾದ ಶ್ರೀ ಗಳಾದ ಕಾರ್ತವೋತ್ತು ಕುಂಞಂಬು ನಾಯರೂ ಕೆ ಪಿ ನಾರಾಯಣವಾರ್‌ಇವರೂ, ಬಿ. ಆನಂತ ತಂತ್ರಿಯವರೂ ಉಮೇದ್ವಾರರಾಗಿರುತ್ತಾರೆಂಬ ವದಂತಿ ಇದೆ. ತ್ರಿಕರಿಪ್ಪೂರಿನಲ್ಲಿ ಉತ್ಸಾಹಿ ಕೊಂಗ್ರೆಸ್ ಪ್ರವರ್ತಕರಾದ ರಾ! ಉಣ್ಣಿಕೃಷ್ಣನ್ ತಿರುಮುಂಬು ಎಂಬವರೂ ಜನಾಬ್ ಮಹಮ್ಮದ್ ಕಿರೋಲ್ ಸಾಹೇಬರೂ ಸ್ಥಾನಾರ್ಥಿಗಳಾಗಿರುವರೆಂದು ಸುದ್ದಿಯಿದೆ.

**ಮೂಡಬಿದ್ರೆ:**—ಈ ಸೆಂಟರಿನ ಉಪಾಧ್ಯಾಯರ ಸಂಘದ ಪೂರಣೇಯ ಸಭೆಯು ಕಳೆದ ತಾ ೨೮ನೇ ಶನಿವಾರ ಬೋರ್ಡು ಹುಡುಗರ ಶಾಲೆಯಲ್ಲಿ ತೋಡಾರ ಏಡೆಡ್ ಶಾಲೆಯ ಮುಖ್ಯೋಪಾಧ್ಯಾಯರಾದ ರಾ! ವಿ. ಟಿ ಬನ್ನೂರರವರ ಅಧ್ಯಕ್ಷತೆಯಲ್ಲಿ ಜರಗಿತು.

**ಪುತ್ತೂರು**—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ ೭—೧೦—೩೫ನೇ ಚಂದ್ರವಾರ ಪೂರ್ವಾಹ್ನ "ಶ್ರೀ ಶಾರದಾ ಪೂಜೆ"ಯು ಜರಗಿತು. ಊರ ಗೃಹಸ್ಥರೂ ವಿದ್ಯಾರ್ಥಿಗಳೂ ಕೂಡಿ ಸಾಧಾರಣ ೧೫೦ ಜನರು ನೆರೆದಿದ್ದರು.

ಸದರಿ ದಿನ ಅಪರಾಹ್ನ ಪುತ್ತೂರು ರೇಂಜ್ ಶಾಲಾ ಸೀನಿಯರ್ ಡಿಪ್ಯುಟಿ ಇನ್ಸ್ಪೆಕ್ಟರರಾದ ರಾ! ಬಿ ವಿ ವೆಂಕಟರಮಣ, ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಶ್ರೀಮತಿ ತಾಳಿಪ್ಪಾಡಿ ಪದ್ಮಾವತಿ ಕುಮಾರಿಯವರಿಂದ "ದ್ರೌಪದೀವಸ್ತ್ರಾಪಹರಣ" ಎಂಬ ಹರಿಕಥೆಯು ಮನೋರಂಜಕವಾಗಿ ಅಭಿನಯಿಸಲ್ಪಟ್ಟಿತು.

**ಅಜೆಕಾರು**—ಇಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ಪಂಚಾಯತ ಬೋರ್ಡಿಗೆ ಮು! ರಾ! ಕೆ ದೇಜುಶೆಟ್ಟಿ ಅಧ್ಯಕ್ಷರಾಗಿಯೂ ಮು! ರಾ! ಎ ಗಣಪತಿ ತಂತ್ರಿಯವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರು.

ಅಂಡಾರ ಶಾಲೆಯಲ್ಲಿ ತಾರೀಕು ೨—೧೦—೩೫ರಲ್ಲಿ ಶ್ರೀ ಶಾರದಾ ಪೂಜೆಯೂ ರಾತ್ರಿ ತಾಳಮದ್ದಳೆಯು ಜರಗಿರುವುದು.

**ಬೆಳ್ತಂಗಡಿ**—ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨—೧೦—೩೫ನೇ ಬುಧವಾರ "ಶ್ರೀ ಸರಸ್ವತೀ ಪೂಜೆಯು" ಯಥಾ ವಿಧಿಯಂತೆ ಜರಗಿತು.

ಇಲ್ಲಿ ಹಾವಳಿಮಾಡುತ್ತಿದ್ದ ನರಭಕ್ಷಕನು ಇನ್ನೂ ತಲೆದೋರಿರುವನು! ಬೇಟೆಗಾರರಿಗೆ ಸುಸಂದರ್ಭ.

**ಕಾರ್ಕಳ**—ಜಿಲ್ಲೆಯೊಳಗಣ ಸ್ವಸಮಾಜಸ್ಥರಲ್ಲಿ ಜನ ಜಾಗೃತಿ ಮತ್ತು ಸಮಾಜ ಸಂಘಟನೆಯ ಪ್ರಚಾರಾರ್ಥವಾಗಿ ಹೊರಟ ಶ್ರೀ ಪದ್ಮಸಾಲಿ ಯಾನೆ ಶೆಟ್ಟಿಗಾರ ವೈಶ್ಯ ಸಮಾಜ ಸೇವಾ ಯುವಕ ಸಂಘದ ಮತ್ತು ತೀರ್ಥಹಳ್ಳಿ ಸೇವಾ ಸಂಘದ ಪ್ರತಿನಿಧಿಗಳು ಇದೇ ತಾ ೧ ಮತ್ತು ೨ರಲ್ಲಿ ಅನುಕ್ರಮವಾಗಿ ಕಲ್ಯಾಣಪುರ ಮತ್ತು ಉಡುಪಿಯನ್ನು ಸಂದರ್ಶಿಸಿದರು.

ಇಲ್ಲಿಯ ಶ್ರೀ ವೀರಭದ್ರ ನಿಲಯದ ನವರಾತ್ರಿ ಮಹೋತ್ಸವಗಳೂ, ತಾ. ೪ರಲ್ಲಿ ತೀರ್ಥಹಳ್ಳಿ ಶ್ರೀ ಪದ್ಮಸಾಲಿ ಸಮಾಜ ಸೇವಾಸಂಘಗಳ ಪ್ರತಿನಿಧಿಗಳ ಸ್ವಾಗತವು ಯುವಕ ಸಂಘದ ಉತ್ಸಾಹದಿಂದ ವಿಜೃಂಭಣೆಯಿಂದ ನೆರವೇರಿಸಲಾಯಿತು.

**ಮುಲ್ಕಿ**—ಮುಲ್ಕಿನಿವಾಸಿಗಳ ಮಹಾಸಭೆಯು ಇದೇ ತಾ ೬—೧೦—೩೫ನೇ ಆದಿತ್ಯವಾರ ಗಂಟೆ ೫ಕ್ಕೆ ಎಡ್ವೊಕೇಟ್ ಶ್ರೀ ಕೇ. ಬಿ. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಸ್ವೀಕೃತವಾದುವು. (೧) ಡಿಸ್ಟ್ರಿಕ್ಟ್ ಬೋರ್ಡಿನವರು ತಾರೀಕು ೨೬-೯-೩೫ರಲ್ಲಿ ಮಾಡಿದ ೪೯ನೆಯ ಠರಾವಿನ ಪ್ರಕಾರ ಮುಲ್ಕಿಯ ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡುವಂತೆ ಬೋರ್ಡಿಗೆ ಹುಕುಮನ್ನು ದಯಪಾಲಿಸುವಂತೆ ಮುಖ್ಯಮಂತ್ರಿಗಳಾದ ಶ್ರೀ! ಬೊಬ್ಬಿಲಿರಾಜರನ್ನು ಮುಲ್ಕಿನಿವಾಸಿಗಳ ಈ ಮಹಾಸಭೆಯು ಪ್ರಾರ್ಥಿಸುತ್ತದೆ. (೨) ಮುಲ್ಕಿಯಲ್ಲಿ ಆರು ಪ್ರಾಥಮಿಕ ಶಾಲೆಗಳಿದ್ದು ೩೦೦೦ಕ್ಕಿಂತ ಹೆಚ್ಚಿಗೆ ಜನಸಂಖ್ಯೆಯುಳ್ಳ ಮೇಲಿನ ಠರಾವಿನಂತೆ ಹಾಯರ್ ಎಲಿಮೆಂಟರಿ ಶಾಲೆಯನ್ನು ಮುಲ್ಕಿಯಲ್ಲಿ ಬೋರ್ಡಿನ ಪ್ರೆಸಿಡೆಂಟರು ತೆರೆಯದೆ ಕೊಡಪೂರಿನಲ್ಲಿ ತೆರೆವುದನ್ನು ಈ ಮಹಾಸಭೆಯು ಖಂಡಿಸುತ್ತದೆ. (೩) ಅನೇಕ ವರ್ಷಗಳಿಂದಲೂ ಮುಲ್ಕಿಯಲ್ಲಿ ಪೋಲಿಂಗ್‌ಸ್ಟೇಶನ್ ಮಾಡಿದ್ದರೂ ಈಗ ಕೊಡಪೂರಿಗೆ ಸಾಗಿಸುವ ಯತ್ನವನ್ನು ಸರಕಾರದ ಮುಂದೆ ಕೆಲವು ಸ್ವಾರ್ಥಿಗಳು ಇಟ್ಟಿರುವುದನ್ನು ಈ ಮಹಾ ಸಭೆಯು ಖಂಡಿಸುವುದಲ್ಲದೆ ಸರಕಾರವು ಪೋಲಿಂಗ್ ಸ್ಟೇಶನನ್ನು ಈ ಮುಲ್ಕಿಯಲ್ಲಿಯೇ ಇರಗೊಡಿಸುವಂತೆ ಈ ಮಹಾಸಭೆಯು ಸರಕಾರವನ್ನು ಪ್ರಾರ್ಥಿಸುತ್ತದೆ. (೪) ಸರಕಾರವು ಮುಲ್ಕಿನಿವಾಸಿಗಳ ಅಭಿಪ್ರಾಯವನ್ನು ಕೇಳದೆ ಕೆಲವು ಸ್ವಾರ್ಥಿಗಳ ಯತ್ನಗಳಿಗೆ ಎಡೆಕೊಡಬಾರದಾಗಿ ಈ ಮಹಾಸಭೆಯು ಬೇಡಿಕೊಳ್ಳುತ್ತದೆ. (೫) ಈ ಠರಾವುಗಳನ್ನು ಸರಕಾರಕ್ಕೂ ಆಯಾಯ ಸಂಬಂಧಪಟ್ಟ ಅಧಿಕಾರಿಗಳಿಗೂ ಪತ್ರಿಕೆಗಳಿಗೂ ಕಳುಹಿಸಿ ಸಾಧಿಸುವ ಅಧಿಕಾರವನ್ನು ಈ ದಿನದ ಮಹಾಸಭೆಯು ಅಧ್ಯಕ್ಷರಿಂದ ಎಡ್ವೊಕೇಟ್ ಶ್ರೀ! ಕೇ. ಬಿ. ಕಾರಂತರಿಗೆ ಕೊಟ್ಟಿದೆ.

**ಕೆದಿಂಜೆ**—ಇಲ್ಲಿಯ ದಿ ಗ್ರಂಥಿಕ ಕ್ಲಬ್ಬಿನ ವಾರ್ಷಿಕೋತ್ಸವವು ಮು! ರಾ! ಕೆ ಮಹಾಬಲ ಹೆಗ್ಡೆ ಬಿ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ತಾ ೬—೧೦—೩೫ರಲ್ಲಿ ನಡೆಯಿತು.

**ಸುರತ್ಕಲ್**— ವರ್ಷಂಪ್ರತಿ ನವರಾತ್ರಿಯ ಸಮಯ ಇಲ್ಲಿಯ ಇಷ್ಟ ವಿದ್ಯಾದಾಯಿನೀ ಶಾಲೆಯಲ್ಲಿ ಆಚರಿಸಲ್ಪಡುವ ಶ್ರೀ ಸರಸ್ವತೀ ಪೂಜಾ ಮಹೋತ್ಸವವು ಈ ವರ್ಷ ಇದೇ ಕಳೆದ ತಾ. ೪ರಿಂದ ೬ರ ವರೆಗೆ ಸೇವೆ, ಭಜನೆ, ಪೂಜೆ ಇತ್ಯಾದಿ ಕಾರ್ಯಕ್ರಮಗಳಿಂದ ಅತ್ಯಂತ ವೈಭವದಿಂದ ನೆರವೇರಿತು.

**ವೈರಪ್ಪಾಡಿ** — ಇಲ್ಲಿಯ ಶ್ರೀ ವೆಂಕಟ್ರಮಣ ಮೂಲ ಪಾಠಶಾಲಾ ಮಂದಿರದಲ್ಲಿ ನವರಾತ್ರ್ಯುತ್ಸವದ ಸಂಬಂಧವಾಗಿ ಇದೇ ಕಳೆದ ತಾ ೫ನೇ ದಿನ ಬೆಳಿಗ್ಗೆ ಶಾಸ್ತ್ರೋಕ್ತ ಶ್ರೀ ಶಾರದಾ ಪೂಜೆ, ಮಧ್ಯಾಹ್ನ ಗಂಟೆ ೩ಕ್ಕೆ ಮುಲ್ಕಿ ಯೂನಿಯನ ಕ್ಲಬ್ಬಿನ ಗೌ! ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಭಾರತೀ ವಾಚನಾಲಯದ ವರ್ಧಂತ್ಯುತ್ಸವ, ಶ್ರೀ! ಬಿ. ವಿ. ಕೃಷ್ಣಯ್ಯನವರ ಸುರಮ್ಯವಾದ ಹರಿಕಥೆ, ರಾತ್ರಿ ಭಜನೆ ಕೀರ್ತನೆಗಳೇ ಇತ್ಯಾದಿ ಸಮಾರಂಭಗಳು ಜನಮನೋರಂಜಕವಾಗಿ ಜರಗಿದುವು.

---

# ಮಂಗಳೂರು.

**ನಮ್ಮ ದಸರಾ ಸಂಚಿಕೆಗಳೆಲ್ಲಾ ಕಳೆದ ವರ್ಷದಂತೆ ಈ ವರ್ಷವೂ ಅನೀರಿಕ್ಷಿತವಾಗಿ ವಿಕ್ರಯಿಸಲ್ಪಟ್ಟಿವೆ. ತಾ. ೧೫ರ ನಂತರ ಅಂಚೆಚೀಟು ಕಳುಹಿಸುವವರಿಗಾಗಲೀ, ಈ ಸಂಚಿಕೆಯನ್ನು ಅಪೇಕ್ಷಿಸಿದವರಿಗಾಗಲೀ ಇದು ಸಿಗಲಾರದು**

ಮೆನೇಜರ್.

"ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ತರಬೇತು ಹೊಂದಿ, ತರಬೇತಿಯ ಅಂತ್ಯದ ಪರೀಕ್ಷೆಯಲ್ಲಿ ಈವರೆಗೆ ಪಾಸಾಗದಿದ್ದವರು ೧೯೩೬ನೇ ಇಸವಿ ಮಾರ್ಚಿಯಲ್ಲಿ ಜರಗುವ ಪರೀಕ್ಷೆಯ ಬಗ್ಗೆ ರೂ. ೩/ರನ್ನು ಯಾವುದಾದರೂ ಸರಕಾರಿ ಖಜಾನೆಯಲ್ಲಿ ಕಟ್ಟಿ ಖಜಾನಾ ರಶೀದಿಯನ್ನು ಟ್ರೈನಿಂಗ್ ಶಾಲಾ ಮುಖ್ಯೋಪಾಧ್ಯಾಯರಿಗೆ ಇದೇ ತಿಂಗಳ ತಾ ೩೦ರ ಒಳಗೆ ಮುಟ್ಟುವಂತೆ ಕಳುಹಿಸತಕ್ಕದ್ದು" ಎಂದು ಶಾಲಾ ಮುಖ್ಯೋಪಾಧ್ಯಾಯರು ತಿಳಿಸುತ್ತಾರೆ.

"ಹಿಂದೂಸ್ಥಾನದಲ್ಲಿ ಹರಿಜನಸೇವಕ ಸಂಘವು ಸ್ಥಾಪಿತವಾಗಿ ೧೯೩೪ನೇ ಸಪ್ಟಂಬರ್ ತಿಂಗಳಿಗೆ ಒಂದು ವರ್ಷವು ಸಂದುಹೋಯಿತು. ಆ ವರ್ಷದ ಲೆಕ್ಕವನ್ನೂ ಕೆಲಸದ ವರದಿಯನ್ನೂ ಈ ತಿಂಗಳ ೧೫ನೇ ತಾರೀಕಿನ ಒಳಗೆ ಕಳುಹಿಸಿಕೊಡಬೇಕೆಂದು ಸೆಂಟ್ರಲ್ ಬೋರ್ಡಿನಿಂದ ಹುಕುಮು ಬಂದಿರುತ್ತದೆ. ಆದ್ದರಿಂದ ಅವನ್ನೆಲ್ಲಾ ಪರಿಶೀಲಿಸುವ ಹಾಗೂ ಮುಂದಿನ ಯೋಜನೆಯನ್ನು ನಿಶ್ಚೈಸುವ ಮತ್ತು ಅಧ್ಯಕ್ಷರ ಅನುಮತಿಯಿಂದ ಇತರ ಇರುವುದಾದರೆ ಯೋಗ್ಯ ವಿಷಯಗಳನ್ನು ಚರ್ಚಿಸುವ ಸಲುವಾಗಿ ತಾ. ೩—೧೦ ೩೫ನೇ ಆದಿತ್ಯವಾರ ಸಾಯಂ ೫ ೩೦ ಗಂಟೆಗೆ ನಮ್ಮ ಜಿಲ್ಲಾ ಹರಿಜನಸೇವಕ ಸಂಘದ ಸಭೆಯು ... ಕೂಡಲಿಕ್ಕಿದೆ. ... ತಪ್ಪದೆ ಬರಬೇಕಾಗಿ ವಿನಂತಿ" ಎಂದು ... ಸಂಘದ ... ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮಂಗಳೂರು ಕೋ-ಓಪರೇಟಿವ್ ಟೌನ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಇದೇ ೩ ... ನೇ ಆದಿತ್ಯವಾರ ... ಗಂಟೆ ... ಕ್ಕೆ ಬ್ಯಾಂಕ ಆಫೀಸಿನಲ್ಲಿ ಜರಗುವುದು.

ನಮ್ಮ ಜಿಲ್ಲೆಯಲ್ಲಿ ಯೋಗ್ಯ ರೀತಿಯಿಂದ ರಾಷ್ಟ್ರಭಾಷೆಯಾದ ಹಿಂದೀ ಪ್ರಚಾರವನ್ನು ... ಆವಶ್ಯಕವಿದೆ. ಆದ್ದರಿಂದ ನಾವು ಇದೇ ತಿಂಗಳ ತಾರೀಕು ೩೦ರಿಂದ ಬರುವ ಅಕ್ಟೋಬರ ತಾ. ೩೦ ವರೆಗೆ ಹಿಂದೀ ಪ್ರಚಾರ ಸಮಾರಂಭವನ್ನು ಆಚರಿಸುವೆವು ... ಪ್ರೋತ್ಸಾಹವನ್ನೂ ಸಹಾಯವನ್ನೂ ಕೊಡಬೇಕಾಗಿ ವಿನಂತಿಯಿದೆ. ಕಾರ್ಯಕ್ರಮ—ತಾ. ೧೯—೧೦ ೩೫ನೇ ಶನಿವಾರ ಬೆಳಿಗ್ಗೆ ಘಂಟೆ ೩೦ರಿಂದ ... ವರೆಗೆ ಹಿಂದೀಯಲ್ಲಿ ವ್ಯಾಖ್ಯಾನ ಸ್ಪರ್ಧೆ. ಅದೇ ದಿನ ... ಘಂಟೆ ೩೦ಕ್ಕೆ (ಟಿಕೇಟಿಲ್ಲದೆ) ... ಹಿಂದೀ ನಾಟಕ. ... ೧೦—೩೫ನೇ ರವಿವಾರ ಸಾಯಂ ಗಂಟೆ ೪ ೩೦ಕ್ಕೆ ಸಭೆ ಮತ್ತು ಕೆಲವು ... ಭಾಷಣಗಳು ... ದಿನಗಳಲ್ಲಿ ... ಹಿಂದೀ ಪ್ರಚಾರ ಸಭೆಕ್ಕೆ ಸದಸ್ಯರನ್ನು ಸೇರಿಸುವ ಕಾರ್ಯ. ಎಲ್ಲಾ ಕಾರ್ಯಕ್ರಮಗಳು ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ ಜರಗಲ್ಪಡುವುವು ಎಂದು ವಿ ಟಿ ಕುಮಾರ್ ಮತ್ತು ... ರಾವ್ (... ಕಾರ್ಯದರ್ಶಿಗಳು, ದ. ಕ ಜಿಲ್ಲಾ ಹಿಂದೀ ಪ್ರಚಾರ ಸಂಘ) ಇವರು ತಿಳಿಸುತ್ತಾರೆ.

ಇದೇ ಕಳೆದ ತಾರೀಕು ೫ ಮತ್ತು ೬ನೇ ದಿನಗಳಲ್ಲಿ ಶಂಕರನಾಡಿ ಹಿಂದೂ ಶಾಲೆಯ ೧೪ನೇ ವಾರ್ಷಿಕೋತ್ಸವವು ವಕೀಲ ಶ್ರೀಯುತ ರಂಗರಾವ್ ಕಲವೇರಿಯವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು.

ಶ್ರೀ ಕೃಷ್ಣ ಸಿನೇಮಾದಲ್ಲಿ ತಾ. ೧೧ರಿಂದ ಸಾಗರ ಕಂಪೆನಿಯ ಮೋಡ್ ಕೇಬ್ ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತದೆ. ಚಾರ್ಲಿಯೂ ಇದರಲ್ಲಿ ಮುಖ್ಯ ಅಭಿನಯಗಾರ. ತಾ. ೧೬ರಿಂದ ಯುನೈಟೆಡ್ ಆರ್ಟಿಸ್ಟ್ಸ್ ಬುಲ್‌ಡೋಗ್ ಡ್ರಮ್ಮಂಡ್ ಎಂಬ ಚಿತ್ರವು ಪ್ರದರ್ಶಿಸಲ್ಪಡಲಿದೆ. ಫುಟ್‌ಲೈಟ್ ಸ್ಟ್ರೀಟ್ ತಾ ೧೯ರಿಂದ ಪ್ರಾರಂಭ.

ನವಂಬರ ಮೊದಲನೆಯ ವಾರದಿಂದ ಶ್ರೀ ಕೃಷ್ಣ ಸಿನೆಮಾದಲ್ಲಿ ಕೊಂಕಣಿಭಾಷೆಯ ಮೋಹುಕ್ರಿಸ್ತನ ಜೀವನ ಚರಿತ್ರೆಯು ಪ್ರದರ್ಶಿಸಲ್ಪಡಲಿದೆ.

[ ೧೪ನೇ ಪುಟವನ್ನು ನೋಡಿರಿ ]

# ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ಪತ್ರಿಕಾದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

## ಆಗಾಮಿ ಕರ್ನಾಟಕ ಕವಿ ಸಮ್ಮೇಳನ.

ಮುಂಬಾಯಿಯಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದವಿಗೆ ಶ್ರೀ ಎನ್. ಎಸ್. ಸುಬ್ಬರಾಯರನ್ನು ಆರಿಸಿದುದು ಸರ್ವ ವಿಧದಿಂದಲೂ ಯೋಗ್ಯವಾಗಿದೆ. ಇನ್ನು ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆಯಲಿರುವ ಕವಿಸಮ್ಮೇಳನಾದಿ ಪಂಕ್ತಿಗಳಿಗೆ ಅಧ್ಯಕ್ಷರನ್ನಾರಿಸುವ ವಿಧಾನವಾವುದೋ ತಿಳಿಯದು. ಆದರೆ ಅಯಾಚಿತವಾದ ಒಂದು ಸೂಚನೆಯನ್ನು ಕರ್ನಾಟಕ ಮಹಾಜನರ ಮುಂದಿರಿಸಿ, ಒಬ್ಬ ಹಿರಿಯ ಸಾಹಿತ್ಯಭಕ್ತರಿಂಗೆ ಜನತೆಯಿಂದ ಯೋಗ್ಯವಾಗಿ ಸಲ್ಲತಕ್ಕ ಪುರಸ್ಕಾರದ ಕರ್ತವ್ಯಭಾಗ್ಯತೆಯನ್ನುಂಟು ಮಾಡಿ ಸಮಾಧಾನಗೊಳ್ಳುವೆವು.

ಶ್ರೀ ಎಂ. ಎನ್. ಕಾಮತರು ಕನ್ನಡ ಸಾಹಿತ್ಯದ ವಿವಿಧಾಂಗಗಳಲ್ಲಿ ಅವಿರತವಾಗಿ ದುಡಿದ, ದುಡಿಯುತ್ತಿರುವ ಸಾಹಿತಿಗಳು. ಅವರ ಪತ್ರಿಕಾ ಲೇಖನಗಳು, ಕವಿತೆಗಳು, ಕತೆಗಳು, ನಾಟಕ ಕಾದಂಬರಿಗಳೆಲ್ಲ ಜನರಿಗೆ ತಿಳಿದವುಗಳು. ಸಹಜವಾಗಿ ತಿಳಿಯಾದ ಅವರ ಹಾಸ್ಯಯುಕ್ತ ವಕ್ತೃತ್ವವನ್ನು ಒಮ್ಮೆ ಕೇಳಿದರೆ ಅದು ಮನಸ್ಸಿನಿಂದ ಅಳಿಯಲಾರದು. ಜನರ ಮನಸ್ಸನ್ನು ಹಿಡಿದವುಗಳಲ್ಲಿ ಅವರ ಕವಿತೆಗಳು ಹೆಚ್ಚಿನವುಗಳು. ಅವರಿಂದ ಕವಿತಾಸ್ಫೂರ್ತಿಯನ್ನು ಪಡೆದವರು ಅನೇಕರು. ಇರಲಿ. ಇಂತಹ ಕವಿಯನ್ನು ಕವಿಸಮ್ಮೇಳನದ ಅಧ್ಯಕ್ಷತೆಗೆ ಆರಿಸಿಕೊಂಡು ಸಾಹಿತ್ಯ ಪರಿಷತ್ತು ಅವರನ್ನೂ ಮನ್ನಿಸುವ ಮೂಲಕ ಸ್ವಯಂಮಾನಿತವಾಗುವುದೆಂದು ಹೇಳಬಹುದು. ತಕ್ಕ ಅಧಿಕಾರಿಗಳು ಈ ಕುರಿತು ವಿಚಾರಿಸಿ ತಮ್ಮ ಕರ್ತವ್ಯವನ್ನು ಪೂರೈಸುವುದು ವಿಹಿತವೆನ್ನುವೆವು.

ಎನ್. ಬಿ. ಮತ್ತು ಎಸ್. ಆರ್.

## ಕನ್ನಡ ಸಾಹಿತ್ಯ ಸಮ್ಮೇಳನ.

(೨೧ನೇ ಅಧಿವೇಶನ, ಮುಂಬಾಯಿ)

ಸ್ವಾಗತ ಸಮಿತಿ.

ಕನ್ನಡ ಸಾಹಿತ್ಯ ಸಮ್ಮೇಳನದ ೨೧ನೆಯ ಮುಂಬಾಯಿ ಅಧಿವೇಶನವು ಬರುವ ಡಿಸೆಂಬರ ೨೯, ೩೦ ಮತ್ತು ೩೧ನೇ ತಾರೀಖುಗಳ ದಿವಸಗಳಲ್ಲಿ ಜರುಗುವುದು. ಅಧಿವೇಶನವು ಕೂಡತಕ್ಕ ಸ್ಥಳ, ಪ್ರಾರಂಭವಾಗುವ ವೇಳೆ ಮುಂತಾದ ಇತರ ತಪಶೀಲುಗಳನ್ನು ಕ್ರಮೇಣ ಪ್ರಸಿದ್ಧಿಸಲಾಗುವುದು.

### ಪ್ರತಿನಿಧಿಗಳು.

"ಕರ್ನಾಟಕ ಸಾಹಿತ್ಯ ಸಮ್ಮೇಳನದ ಉದ್ದೇಶಗಳನ್ನು ಅಂಗೀಕರಿಸಿ ನಿಯಮಾನುಸಾರವಾಗಿ ಸಮ್ಮೇಳನದ ಕಾರ್ಯಗಳಲ್ಲಿ ಭಾಗವಹಿಸಲು ಇಚ್ಛಿಸುವವರನ್ನು ಸ್ವಾಗತ ಮಂಡಳಿಯು ಸಮ್ಮೇಳನದ ಬಗ್ಗೆ ಪ್ರತಿನಿಧಿಗಳೆಂದು ಅಂಗೀಕರಿಸಬಹುದು. ಇಂಥ ಪ್ರತಿನಿಧಿಗಳು ಸ್ವಾಗತಮಂಡಳಿಯು ವಿಧಿಸಿರುವ ರುಸುಮನ್ನು (ಫೀಯನ್ನು) ಕೊಟ್ಟು ಅದರ ಕಟ್ಟುಪಾಡಿಗೆ ಒಳಪಟ್ಟಿರತಕ್ಕದ್ದು. ಇಂತಹ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಷಣ ಮಾಡುವದು, ಪ್ರಬಂಧಗಳನ್ನೋದುವುದು, ನಿರ್ಣಯಗಳನ್ನು ಸೂಚಿಸುವದು ಮೊದಲಾದ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಲು ಅರ್ಹರಾಗುವರು.

### ಫೀಗಳು

ಪುರುಷ ಪ್ರತಿನಿಧಿಗಳ ಬಗ್ಗೆ ರೂ. ೩, ಸ್ತ್ರೀ ಪ್ರತಿನಿಧಿಗಳ ಬಗ್ಗೆ ಆಣೆ ೮ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳ ಬಗ್ಗೆ ೮ ಆಣೆ, ಹೀಗೆ ಪ್ರತಿನಿಧಿತ್ವದ ಫೀಯನ್ನು ಗೊತ್ತುಪಡಿಸಿರುತ್ತದೆ. ಪ್ರೇಕ್ಷಕರಾದ ಪುರುಷರಿಗೆ ಮತ್ತು ಸ್ತ್ರೀಯರಿಗೆ ಯಾವತ್ತು ಅಧಿವೇಶನದ ಬಗ್ಗೆ ಅನುಕ್ರಮವಾಗಿ ಒಂದು ರೂಪಾಯಿ ಮತ್ತು ೮ ಆಣೆ. ಹೀಗೆ ಫೀಯನ್ನು ಗೊತ್ತುಮಾಡಲಾಗಿದೆ. ಪ್ರತಿನಿಧಿಗಳೆಂದಾಗಲೀ ಪ್ರೇಕ್ಷಕರೆಂದಾಗಲೀ ಸಮ್ಮೇಲನಕ್ಕೆ ಬರಲಿಚ್ಛಿಸುವವರು ಪೋಸ್ಟಲ್ ಮನಿಯಾರ್ಡರ್ ರೂಪದಲ್ಲಿ ಮಾತ್ರ ಅವಶ್ಯಕ ಫೀಯ ಸಹಿತವಾಗಿ ಡಿಸೆಂಬರ ೧ನೇ ತಾರೀಖಿನೊಳಗಾಗಿ ಅರ್ಜಿಗಳನ್ನು ಕಳುಹಿಸಬೇಕು. ಫೀಯು ಮುಟ್ಟಿದ ಬಗ್ಗೆ ಪಾವತಿಗಳನ್ನು ಕಳುಹಿಸಲಾಗುವುದು.

## ಸಭಾಗೃಹದಲ್ಲಿ ಸ್ಥಳಕ್ರಮ ಯೋಜನೆ.

ಈ ಕೆಳಗಿನಂತೆ ಸ್ಥಾನಕ್ರಮ ಯೋಜನೆಯು ಗೊತ್ತುಪಡಿಸಲ್ಪಟ್ಟಿದೆ:—

(೧) ಸನ್ಮಾನ್ಯ ಅತಿಥಿಗಳು
(೨) ದೇಣಿಗೆ ಕೊಟ್ಟವರು.
(೩) ಪ್ರತಿನಿಧಿಗಳು.
(೪) ಸ್ವಾಗತ ಸಮಿತಿಯ ಸಭಾಸದರು.
(೫) ಪ್ರೇಕ್ಷಕರು.

## ಸಮ್ಮೇಲನದ ಕಾರ್ಯಗಳಲ್ಲಿ ಅಂಗ ವಹಿಸುವುದು

ಸ್ವಾಗತಸಮಿತಿಯ ಸಭಾಸದರಿಗೆ ಮತ್ತು ಪ್ರತಿನಿಧಿಗಳಿಗೆ ಮಾತ್ರ ಸಮ್ಮೇಲನದ ಚರ್ಚೆ ಮತ್ತು ಕಾರ್ಯಗಳಲ್ಲಿ ಭಾಗವಹಿಸಲಿಕ್ಕೆ ಅಧಿಕಾರವಿರುವುದು.

## ಪ್ರತಿನಿಧಿಗಳ ಬಗ್ಗೆ ವಾಸಸ್ಥಳ ಮತ್ತು ಭೋಜನದ ವ್ಯವಸ್ಥೆ.

ಪ್ರತಿನಿಧಿಗಳನ್ನು ಯಾವತ್ತರನ್ನೂ ಒಂದೇ ಕಟ್ಟಡದಲ್ಲಿ ಇಡು ಸಾಧ್ಯವಾಗದಿದ್ದರೆ ಒಂದಕ್ಕೊಂದು ಸಮೀಪವಾಗಿರುವ ಅನೇಕ ಕಟ್ಟಡಗಳಲ್ಲಿ ಇಳಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗುವುದು. ಸ್ತ್ರೀ ಪ್ರತಿನಿಧಿಗಳ ಬಗ್ಗೆ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳ ಬಗ್ಗೆ ವಿಂಗಡವಾದ ವಾಸಸ್ಥಳಗಳ ಯೋಜನೆಯು ಮಾಡಲ್ಪಡುವುದು. ಸಹಕುಟುಂಬ ಆಗಮಿಸುವ ಪ್ರತಿನಿಧಿಗಳ ಬಗ್ಗೆ ಪ್ರತ್ಯೇಕ ವ್ಯವಸ್ಥೆಯು ಮಾಡಲ್ಪಡುವುದು. ಇಳಿದುಕೊಳ್ಳುವ ಮತ್ತು ಭೋಜನದ ಬಗ್ಗೆ ವೆಚ್ಚವು ಪ್ರತಿಯೊಂದು ವ್ಯಕ್ತಿಗೆ ಪ್ರತಿದಿನಕ್ಕೆ ರೂ. ೨-೮-೦ ಆಗುವುದೆಂದು ಅಂದಾಜು ಮಾಡಲಾಗಿದೆ. ಪ್ರತ್ಯಕ್ಷ ವೆಚ್ಚವು ಇದಕ್ಕೂ ಕಡಿಮೆಯಾದರೆ ಆ ಪ್ರಕಾರ ಹಣವು ತಿರುಗಿಕೊಡಲ್ಪಡುವುದು. ಈ ವಿಷಯದಲ್ಲಿ ಚಿಕ್ಕ ಮಕ್ಕಳ ಬಗ್ಗೆ ಯೋಗ್ಯ ಸವಲತ್ತು ಕೊಡಲ್ಪಡುವುದು. ಪ್ರತಿನಿಧಿಗಳ ಬಿಡಾರದಲ್ಲಿ ಸ್ಥಳವನ್ನು ಪಡೆಯಲಿಕ್ಕೆ ಇಚ್ಛಿಸುವವರು ತಾವು ಉಳಿಯಲು ಯೋಚಿಸಿರುವ ಅವಧಿಯ ಸಂಪೂರ್ಣ ರಕಮನ್ನು ಮುಂಗಡವಾಗಿ ಕಳುಹಿಸಬೇಕು. ಈ ರಕಮು ಮುಟ್ಟಿದ ನಂತರ ಸ್ಥಳವು ಕಾಯ್ದಿಡಲ್ಪಡುವುದು. ಈ ಅವಶ್ಯಕ ರಕಮಿಲ್ಲದೆ ಬಂದ ಅರ್ಜಿಗಳನ್ನು ವಿಚಾರಕ್ಕೆ ತೆಗೆದುಕೊಳ್ಳಲಾಗುವುದಿಲ್ಲ. ಇಂಥ ರಕಮನ್ನು ಪೋಸ್ಟಲ್ ಮನಿಯಾರ್ಡರ್ ರೂಪದಲ್ಲಿ ಮಾತ್ರ ಕಳುಹಿಸಬೇಕು.

## ವಾಹನಗಳ ಅನುಕೂಲತೆಗಳು.

ಪ್ರತಿನಿಧಿಗಳನ್ನು ರೈಲ್ವೇ ಸ್ಟೇಶನಿನಿಂದ ಪ್ರತಿನಿಧಿಗಳ ಬಿಡಾರಗಳಿಗೆ ಮತ್ತು ಈ ಬಿಡಾರಗಳಿಂದ ಸಭಾಗೃಹಕ್ಕೆ ಮತ್ತು ಅಲ್ಲಿಂದ ಹಿಂದಿರುಗಿ ಬಿಡಾರಗಳಿಗೆ ತಲ್ಪಿಸುವ ವಾಹನಗಳ ವ್ಯವಸ್ಥೆಯನ್ನು ಮೂರು ದಿನಗಳ ಬಗ್ಗೆ ಪುಕ್ಕಟೆಯಾಗಿ ಮಾಡಲಾಗುವುದು. ಇತರ ಪ್ರಸಂಗಗಳಲ್ಲಿ ವಾಹನಗಳನ್ನು ಉಪಯೋಗಿಸಬೇಕಾದ್ದಲ್ಲಿ ಆಯಾ ಪ್ರಸಂಗದ ಪ್ರಕಾರ ವೆಚ್ಚದ ಆಕಾರಿಸಲ್ಪಡಬಹುದಾದ ರಕಮನ್ನು ಸಂಬಂಧಪಟ್ಟ ಜನರು ಕೊಡಬೇಕಾಗುವುದು.

## ಮನರಂಜನೆ.

ಸಮ್ಮೇಲನವು ನಡೆಯತಕ್ಕ ಮೂರು ದಿವಸಗಳಲ್ಲಿ ನಾಟಕ, ಗಾಯನ, ವಿವಿಧ ಮನರಂಜನ ಕಾರ್ಯ ಮುಂತಾದ ರೂಪಗಳಲ್ಲಿ ಮನರಂಜನೆಯ ಸಾಧನಗಳನ್ನು ಪೂರೈಸುವ ವ್ಯವಸ್ಥೆಯು ಮಾಡಲ್ಪಡುವುದು. ಪ್ರತಿನಿಧಿಗಳು ಮತ್ತು ಇತರರು ಇವುಗಳಿಗೆ ಪ್ರೇಕ್ಷಕರಾಗಲಿಚ್ಛಿಸಿದರೆ ತಿಕೀಟುಗಳನ್ನು ಕೊಂಡುಕೊಳ್ಳಬೇಕಾಗುವುದು.

## ಕರ್ನಾಟಕ ಕಲಾ ಕೌಶಲ್ಯ ಪ್ರದರ್ಶನ.

ಡಿಸೆಂಬರ ೨೫ನೇ ತಾರೀಖಿನಿಂದ ೩೧ನೇ ತಾರೀಖಿನ ವರೆಗೆ ಸಾಂಗಗೊಳಿಸಲು ಯೋಚಿಸಿದ ಕರ್ನಾಟಕ ಕಲಾ ಕೌಶಲ್ಯ ಪ್ರದರ್ಶನವು ಬೇರೊಂದು ಕಟ್ಟಡದಲ್ಲಿ ಕಲಾಭಿಮಾನಿಗಳ ಪ್ರದರ್ಶನಕ್ಕಾಗಿ ತೆರೆದಿಡಲ್ಪಡುವುದು. ಕಲಾಕೌಶಲ್ಯಗಳ ವಸ್ತುಗಳನ್ನು ಪ್ರದರ್ಶಿಸುವುದರ ಹೊರತಾಗಿ ಗಾಯನ, ವಾದನ ಕಾರ್ಯಕ್ರಮಗಳ ಯೋಜನೆಯು ಸಹ ಪ್ರದರ್ಶನಭವನದಲ್ಲಿ ಮಾಡಲ್ಪಡುವುದು. ಈ ಪ್ರದರ್ಶನದಲ್ಲಿ ಹೆಸರಿಗೆ ಮಾತ್ರ ಪ್ರವೇಶ ಫೀಯನ್ನು ಆಕಾರಿಸಲಾಗುವುದು. ಈ ಬಗ್ಗೆ ತಿಕೀಟುಗಳು ಆ ಸ್ಥಳದಲ್ಲಿಯೇ ದೊರೆಯುವುವು. ಪ್ರದರ್ಶನದ ಸನ್ಮಾನ್ಯ ವ್ಯವಸ್ಥಾಪಕರು ಈ ವಿಷಯದಲ್ಲಿ ಬೇರೊಂದು ಸಮಾಚಾರ ಪತ್ರಿಕೆಯನ್ನು ಪ್ರಸಿದ್ಧಿಸಲಿರುವರು.

## ಸಮ್ಮೇಳನಕ್ಕೆ ಗ್ರಂಥಗಳನ್ನು ಸಾದರ ಮಾಡುವುದು.

ಬೆಂಗಳೂರು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಈ ಮೊದಲೇ ತಮ್ಮ ಸಮಾಚಾರ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿದಂತೆ ಪ್ರಶಂಸಾಪತ್ರ, ಪಾರಿತೋಷಕ ಮುಂತಾದ ಮಾನಗಳನ್ನು ಪಡೆಯುವುದಕ್ಕಾಗಿ ತಮ್ಮ ಗ್ರಂಥಗಳನ್ನು ಸಮ್ಮೇಳನಕ್ಕೆ ಸಾದರಮಾಡಲಿಚ್ಛಿಸುವ ಗ್ರಂಥಕಾರರು ಬೆಂಗಳೂರು ಸಾಹಿತ್ಯ ಪರಿಷತ್ತಿನ ಕಡೆಗಾಗಲೀ ಮುಂಬಾಯಿಯ ಸ್ವಾಗತ ಸಮಿತಿಯ ಕಡೆಗಾಗಲೀ ತಮ್ಮ ತಮ್ಮ ಗ್ರಂಥಗಳನ್ನು ಈ ತಿಂಗಳ ಕೊನೆಯ ಒಳಗಾಗಿ ಆದಷ್ಟು ಬೇಗನೇ ಕಳುಹಿಸಿಕೊಡಬೇಕು. ಇಂತಹ ಗ್ರಂಥಕರ್ತರು ಅಥವಾ ಬರಹಗಾರರು ಸಮ್ಮೇಲನಕ್ಕೆ ಪ್ರತಿನಿಧಿಗಳೆಂದು ಸೇರುವುದು ಅವಶ್ಯವಾಗಿದೆ.

### ವಿನಂತಿ

ಬರುವ ಡಿಸೆಂಬರದಲ್ಲಿ ಜರಗತಕ್ಕ ಸಾಹಿತ್ಯ ಸಮ್ಮೇಲನವು ಕನ್ನಡ ವಾಙ್ಮಯದ ಇತಿಹಾಸದಲ್ಲಿ ಅಪ್ರತಿಮವಾದದ್ದಿರುತ್ತದೆ. ಕರ್ನಾಟಕದಿಂದ ಅತಿ ದೂರವಾದದ್ದೆಂದೆನಿಸುವ ಮುಂಬಾಯಿ ಪಟ್ಟಣದಲ್ಲಿ ಕನ್ನಡಿಗರು ಕನ್ನಡ ಸಾಹಿತ್ಯ ಸಮ್ಮೇಲನವನ್ನು ಜರಗಿಸುವುದೆಂದರೆ ಅದೊಂದು ಅಪೂರ್ವ ಸಾಹಸವೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಮ್ಮೇಲನದ ಮುಖ್ಯ ಕಾರ್ಯಾಂಶವು ಕನ್ನಡ ಭಾಷೆ ಮತ್ತು ವಾಙ್ಮಯ ಮುಂತಾದವುಗಳ ಬಗ್ಗೆ ವಿಚಾರ ವಿನಿಮಯ ಮತ್ತು ಚರ್ಚೆಗಳ ರೂಪದಲ್ಲಿ ಇರುವುದಾದರೂ, ಈ ಭಾಷೆಯ ಮತ್ತು ವಾಙ್ಮಯದ ವರ್ಚಸ್ಸಿನ ವ್ಯಾಪ್ತಿಯನ್ನು ಬೆಳೆಸುವ ಮುಂತಾದ ಮಹತ್ವದ ಪ್ರಶ್ನೆಗಳು ಸಮ್ಮೇಲನದ ಲಕ್ಷ್ಯವನ್ನು ತಕ್ಕಮಟ್ಟಿಗೆ ಎಳೆಯುವ ಸಂಭವವಿದೆ. ಹಿಂದೂಸ್ಥಾನದ ಹೆಬ್ಬಾಗಿಲೆಂದೆನಿಸಿದ ಮುಂಬಾಯಿಯಂತಹ ಪಟ್ಟಣದಲ್ಲಿ ಈ ಸಮ್ಮೇಲನವು ಜರುಗತಕ್ಕದ್ದಿರುವುದರಿಂದ ಈ ಪಟ್ಟಣದ ಅನೇಕ ದಿಶೆಗಳಲ್ಲಿಯ ಬೆಳವಣಿಗೆಯನ್ನು ಸ್ವತಃ ಕಣ್ಣಿನಿಂದ ನೋಡುವ ಸುಸಂಧಿಯು ಒದಗಿಬಂದಿದೆ. ಮುಂಬಾಯಿ ಶಹರದ ಮಾಹಿತಿಯ ಸಚಿತ್ರ ಕೈಪಿಡಿಗಳು ಇಂಗ್ರೇಜಿ ಮತ್ತು ಕನ್ನಡ ಭಾಷೆಗಳಲ್ಲಿ ತಯಾರಾಗುತ್ತಿದ್ದು ಅವು ಕ್ಷಿಪ್ರದಲ್ಲಿಯೇ ಅಲ್ಪ ಬೆಲೆಗೆ ದೊರಕುವುವು. ಪರಸ್ಥಳದ ಶಿಕ್ಷಕರು ಮತ್ತು ಪ್ರೊಫೇಸರರು ತಮ್ಮ ತಮ್ಮ ವಿದ್ಯಾರ್ಥಿಗಳ ಹಿತದ ದೃಷ್ಟಿಯಿಂದ ಅವರ ಬಗ್ಗೆ ಈ ಭವ್ಯ ಪಟ್ಟಣವನ್ನು ಮತ್ತು ಅದರ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದಕ್ಕಾಗಿ ಶೈಕ್ಷಣಿಕ ಪ್ರವಾಸಗಳ ಯೋಜನೆಯನ್ನು ಮಾಡಬಹುದು. ಸಾರಾಂಶವೇನೆಂದರೆ ಈ ಶೋಭಾಯಮಾನವಾದ ಪಟ್ಟಣವನ್ನು ನೋಡುವುದೆಂದರೆ ಅದೊಂದು ಶಿಕ್ಷಣದ ಭಾಗವೇ ಎನಿಸುವುದು. ಈ ವಿಷಯದಲ್ಲಿ ಪ್ರತಿನಿಧಿಗಳಿಗೆ ಶಕ್ಯವಿರುವ ಯಾವತ್ತೂ ಅನುಕೂಲತೆಗಳನ್ನು ಒದಗಿಸಿಕೊಡಲಾಗುವದು.

ಸಮ್ಮೇಲನದ ದಿನಗಳಲ್ಲಿ ಸ್ವಾಗತ ಸಮಿತಿಯ ಪ್ರಮುಖ ಸಭಾಸದರು ಪ್ರತಿನಿಧಿಗಳೊಡನೆ ಸಂಪೂರ್ಣವಾಗಿ ಬೆರೆತು ಅವರ ಸ್ನೇಹಸಂಪಾದನೆ ಮಾಡುವುದಕ್ಕಾಗಿ ಮುಕ್ತ ವಿಚಾರವಿನಿಮಯ ಮಾಡಿ ಪರಸ್ಪರ ಸಾಮಾನ್ಯ ಪ್ರಶ್ನೆಗಳ ವಿಷಯಗಳಲ್ಲಿ ಏಕಾಭಿಪ್ರಾಯವುಳ್ಳವರಾಗುವದಕ್ಕಾಗಿ, ಪಟ್ಟಣದಲ್ಲಿಯ ತಮ್ಮ ಬಿಡಾರಗಳನ್ನು ಬಿಟ್ಟು ಪ್ರತಿನಿಧಿಗಳ ಬಿಡಾರಗಳಲ್ಲಿ ವಾಸಿಸುವರು. ಆದುದರಿಂದ ಯಾವತ್ತು ಪ್ರತಿನಿಧಿಗಳು ಪ್ರತಿನಿಧಿಗಳ ಬಿಡಾರಗಳಲ್ಲಿ ವಾಸಿಸುವುದು ಸರ್ವ ದೃಷ್ಟಿಯಿಂದ ಇಷ್ಟವಾಗಿರುವುದು.

ಕೊನೆಯ ವಿನಂತಿಯೇನೆಂದರೆ, ವಿಶ್ವಕರ್ನಾಟಕದ ಯಾವತ್ತು ಕನ್ನಡಿಗರು ಪ್ರತಿನಿಧಿಗಳೆಂದು ಮತ್ತು ಪ್ರೇಕ್ಷಕರೆಂದು ಬಹು ಸಂಖ್ಯೆಯಿಂದ ಸೇರಿ ಸಮ್ಮೇಲನವನ್ನು ಯಶಸ್ವಿಯಾಗಿ ಸಾಂಗಗೊಳಿಸಿ ಮಾತೃಭಾಷೆಯಾದ ಕನ್ನಡ ಭಾಷೆಯ ಸೇವೆಯನ್ನು ಯಥಾಶಕ್ತಿ ಮಾಡಬೇಕು.

೯ನೇ ಪುಟದಿಂದ ಮುಂದುವರಿದುದು

ಸಮಾಜದ ಪ್ರಮುಖರಿಗೂ ಶ್ರೀಮಂತರಿಗೂ ಮಾತ್ರ ಶಿಕ್ಷಣದ ಹಕ್ಕಿರುವುದಲ್ಲ. ಅದು ಸಮಸ್ತರಿಗೂ ಧರ್ಮಾರ್ಥವಾಗಿ ದೊರೆಯಬೇಕು. ಕೊಡುವ ಸಂಬಳದ ಆಧಾರದ ಮೇಲೆ ಅದು ಹೊಂದಿಕೊಂಡು ವೈಯಕ್ತಿಕ ವಿಷಯವಾಗಿರದೆ, ಪ್ರಾಥಮಿಕ ವಿದ್ಯಾಭ್ಯಾಸವು ಸಾಮೂಹಿಕ ಹಕ್ಕಾಗಿರಬೇಕು. ಇದಕ್ಕಾಗಿ ದೇಶದ ಆಡಳಿತಗಾರರು ತಮ್ಮ ಆದಾಯವನ್ನು ವೆಚ್ಚಮಾಡಬೇಕು. ಇದು ಪ್ರತಿಯೊಬ್ಬ ನಾಗರಿಕನ ಹಕ್ಕಾಗಿರಬೇಕು. ಚೀನಾದಲ್ಲಿ ಪ್ರಥಮದ್ದಾಗಿ ತಲೆಯೆತ್ತಿದ ಈ ವಿಧದ ಚಳವಳವು ಪಾಶ್ಚಾತ್ಯದೇಶಗಳ ಚಳವಳದೊಡನೆ ಸಂದರ್ಭಗಳಲ್ಲಿಟ್ಟರೆ ಅತ್ಯಲ್ಪ ವಿಷಯವೆಂದು ಗೋಚರಿಸುವುದಾದರೂ ಚೀನೀಯರ ಈ ಯತ್ನವು ಶ್ಲಾಘ್ಯವಾಗಿದೆ.

ಪ್ರಸ್ತುತದಲ್ಲಾದ ಯೋಜನೆಯು ಬರೀ ಪ್ರಾರಂಭ ಮಾತ್ರ. ಆದರೆ, ಇದು ಘನವಾದ ಆರಂಭ. ಚೀನಾದ ಅತ್ಯುನ್ನತ ನಗರವಾದ ಶಂಘೈಯಲ್ಲಿ ನಿರಕ್ಷರತೆಯು ಶೀಘ್ರವಾಗಿ ನಾಶವಾಗಲಿರುವುದು. ಅಧಿಕಾಂಶ ಜನರು ಈಗ ಓದುಬರಹ ಬಾರದವರಾಗಿರುವರಾದರೂ ಅವರು ಬೇಗನೇ ವಿದ್ಯಾರ್ಜನೆ ಮಾಡುವ ಸುಯೋಗವು ಬರಲಿರುವುದು. ಶಿಕ್ಷಣ ಪಡೆಯಲರ್ಹರಾದ ನಿರಕ್ಷರಸ್ಥರನ್ನೆಲ್ಲ ದಾಖಲುಮಾಡಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳ ದಿನನಿತ್ಯದ ಉದ್ಯಮಗಳಿಗೆ ಬಾಧೆಬಾರದಂತೆ ಆಯಾಯ ವಿದ್ಯಾರ್ಥಿಯ ಸಮಯಾನುಕೂಲತೆಯನ್ನು ಲಕ್ಷಿಸಿ ಕಾಲನಿಯಮಗಳ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ. ವಿದ್ಯಾರ್ಥಿಗಳು ಸಂಬಳ ಕೊಡಲಿಕ್ಕಿರುವುದಿಲ್ಲ. ಬದಲು, ೨೫ ಸೆಂಟ್ಸ್‌ಗಳಿಂದ ೫ ಡಾಲರುಗಳ ವರೆಗೆ ದಂಡ ವಿಧಿಸಲಾಗುತ್ತಿದೆ. ಕ್ರಮಪ್ರಕಾರ ಶಾಲೆಗೆ ಬರದವರಿಗೆಲ್ಲ—ಯಾವ ಭೇದವೂ ಇಲ್ಲದೆ ದಂಡ ವಿಧಿಸಲಾಗುತ್ತದೆ. ದಿನಕ್ಕೆ ಒಟ್ಟು ಆರು ಕ್ಲಾಸುಗಳು ನಡೆಸಲ್ಪಡುತ್ತವೆ. ಒಂದೊಂದು ಕ್ಲಾಸು ೫೦ ನಿಮಿಷಗಳ ವರೆಗೆ ನಡೆಯುತ್ತದೆ. ಎಂದರೆ ದಿನಕ್ಕೆ ೬೦೦ ಮಂದಿಗೆ ಶಿಕ್ಷಣವು ಸಿಗುತ್ತದೆ. ೬,೦೦೦ ಮಂದಿ ಶಿಕ್ಷಣಹೊಂದುವರಾಯಿತು. ಒಂದು ತರಗತಿಯು ಎರಡು ತಿಂಗಳುಗಳ ವರೆಗೆ ಇದೆ. ಇಷ್ಟು ಅವಧಿಯೊಳಗೆ ಚೀನೀಯ ವಿದ್ಯಾರ್ಥಿಗಳು ೬೦೦ ಚೀನೀಯ ಅಕ್ಷರಗಳನ್ನರಿಯುವರು. ಇದೇ ಅವರ ಆಧಾರಭೂತ ಶಿಕ್ಷಣ. ಈ ಕ್ರಮದಂತೆ ವರ್ಷಕ್ಕೆ ೪೦೦,೦೦೦ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವನ್ನು ಮುಗಿಸುವರು.

ಹೀಗೆ ಸಂಪಾದಿಸಿದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮತ್ತೂ ಮುಂದರಿಸುವುದು ಆಯಾಯ ವಿದ್ಯಾರ್ಥಿಯ ಕರ್ತವ್ಯವಾಗಿದೆ. ೬೦೦ ಅಕ್ಷರಾಭ್ಯಾಸ ಮಾಡುವುದೆಂದರೆ ಬರೀ ಅಲ್ಪವಾಯಿತೆನ್ನಬಹುದು. ಆದರೆ ಈ ಅಕ್ಷರಗಳನ್ನು ಆಧರಿಸಿಕೊಂಡು ಇತರ ಸಣ್ಣ ಸಣ್ಣ ಕೃತಿಗಳನ್ನೂ ಈ ವಿದ್ಯಾರ್ಥಿಗಳಿಗೊದಗಿಸಿಕೊಡುವ ವ್ಯವಸ್ಥೆಯನ್ನು ಅಲ್ಲಿನ ವಿದ್ಯಾಧಿಕಾರಿಗಳು ಮಾಡಿರುವರೆಂದು ನಾವು ಊಹಿಸಿರುವೆವು.

---

ಜಿ. ಕೆ. ಬೆಟಗೇರಿ, ಬಿ. ಎ. ಎಲ್. ಎಲ್. ಬಿ.
ಎ. ಶೇಷನ್,
ಎಚ್. ಎಸ್. ಕಲ್ಮಾಡ,
ಸಾಮಾನ್ಯ ಗೌರವ ಕಾರ್ಯದರ್ಶಿಗಳು
೪, ದ್ವಾರಕದಾಸ ಮನ್ಶನ್ಸ್, ಬೆನಾಮ್ ಹಾಲ್ ಲೇನ್,
ಗಿರಗಾಂವ, ಮುಂಬಾಯಿ ೪.


ಬೆಂಗಳೂರು ನಗರಕ್ಕೆ ದಸರದ ವೇಳೆ ಬರುವ ಅಭ್ಯಾಗತರ ಅನುಕೂಲತೆಗಾಗಿ

ಪ್ರಸಿದ್ಧಿ ಹೊಂದಿದ

**ಶಾಸ್ತ್ರಿಗಳ ಹೋಟೇಲು ಮತ್ತು ರೆಸ್ಟೋರೆಂಟ್**

ಎಲ್ಲಾ ಸೌಕರ್ಯಗಳನ್ನು ಕೊಡುತ್ತದೆ.

ಅವರ ಪ್ರತಿನಿಧಿಗಳು ರೈಲ್ವೇ ಸ್ಟೇಶನ್‌ಗಳಲ್ಲಿ ಕಾಯುವರು.
ಇಳಿಸುವ ಅತಿಥಿಗಳನ್ನು ಸ್ವಾಗತೀಕರಿಸುವರು.

ತಮ್ಮ ಭಾರೀ ಗಿರಾಕಿಗಳಿಂದ ಬರಲಿರುವ ಬೇಡಿಕೆಗಳ ದೃಷ್ಟ್ಯಾ ಅತ್ತ ಹೋಗುವವರು ಹೋಟೇಲಿಗೆ ತಂತಿಬಿಡಬೇಕೆಂದು ಅಪೇಕ್ಷೆ.

ಇತರ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.—

*The General Manager,*
SASTRY'S HOTEL & RESTAURANT,
Chickpet, Bangalore City.

## TENDER NOTICE.

Sealed tenders are invited by the undersigned up to 2 P M. on the 30th October 1935 for the work of 'Constructing a bridge over Ialkal river.' Approximate cost excluding girders is Rs 48,000/-. Conditions of contract, plan, specifications etc, will be supplied at a cost of Rs 15/- per set. These documents can be seen in the District Board Engineer's Office on working days between 11 A. M and 4 P M

Mangalore, 1-10-35 } Sd/ P. S Barboza, District Board Engineer, S K

## TENDER NOTICE

Sealed tenders are invited by the undersigned up to 2 P. M on the 30th October 1935 for the work of 'Constructing a bridge over Vasrehole stream' Approximate cost excluding girders is Rs 17,200, Conditions of contract plan, specifications etc, will be supplied at a cost of Rs 15/- per set These documents can be seen in the District Board Engineer's Office on working days between 11 A. M and 4 P. M.

Mangalore, 1-10-35 } *Sd/* P S Barboza, District Board Engineer, S K


## ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ಯ್ಕಾಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರೂ ಆಮದು ಮಾಡುತ್ತಿರುವರು.

ಗೊಡ್ರೆಜ್ ಟ್ಯ್ಕಾಲಿಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಸಂಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ: ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

# ಗೊಡ್ರೆಜ್

## ವೆಜಿಟೇಬಲ್ ಟ್ಯ್ಕಾಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸಪೆರಿಮೆಂಟಲ್ ಕೆಮಿಸ್ಟ್ರಿ,

ಮೈಕ್ರೊಸ್ಕೊಪಿ ಎಂಡ್ ಬೆಕ್ಟೆರಿಯೊಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

**ಡಾ| ಔಫ್ರೆಕ್ಟ್ ಎಂಬವರು:**—"ನಾನು ಗೊಡ್ರೆಜ್ ವೆಜಿಟೇಬಲ್ ಟ್ಯ್ಕಾಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ ಅಭಿಪ್ರಾಯದಂತೆ ಅವುಗಳು ಸ್ಟೆಪ್ಟೊಕೊಕಸ್ ಮತ್ತು ಸ್ಟೆಫಿಲೊಕೊಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯುಳ್ಳ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

**ಹೆರ್ ಕಾರ್ಲ್ ಉಸುರ್ಸ್ ಎಂಬವರು.**—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ ಎನಲೈಸರಾದ

**ಮೋಜರ್ ಡಿಕೆನ್‌ಸನ್‌ರವರು** — ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

**ಡಾ| ಎಂ. ಎ. ಅನ್ಸಾರಿ, ಎಲ್ ಡಿ ಎಂ ಎಸ್ ರವರು**—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ. ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಅದರ ಪರಿಶುದ್ಧತೆಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು

ತಯಾರಿ — **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು **ನಾದಿರ್ ಷಾ ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.



# ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ

## ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು.

## Motor Accessories Of Approved Manufacture Always in Stock.

| | | |
|---|---|---|
| **Exide Batteries Uncharged** | ... | **Rs. 20-0-0** |
| **Fully Charged** | | **Rs. 24-0-0** |
| **Genuine Lockheed Hydraulic Brake fluid Quart tins factory Sealed** | | **Rs. 2-8-0** |
| **Genuine Lockheed** | **" locally filled** | **Rs. 2-0-0** |

**All Hydraulic Brake parts held in stock and available at Bombay Prices less 5% discount.**

**Chevrolet Springs of approved American Make available at less than Bombay Prices**

Brake liners, Automobile lamp bulbs, Bronze bushings and bars, Bolts and Nuts of S. A E threads, Special tools, Drilling Machines, Spanner sets of all types.

**An Enquiry with us will save you money**

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು, ಮಂಗಳೂರು

**The Canara Public Conveyance Company Ltd., Kodialbail, Mangalore.**

## ಮಂಗಳೂರು ವಾರ್ತೆ.

ತಾ. ೬ರಲ್ಲಿ ಮಲ್ಲಿಗುಡ್ಡೆಯ ಮೂರು ದಾರಿಗಳು ಕೂಡುವಲ್ಲಿ, ರಾತ್ರಿ ಬಟ್ಟೆಯೊಂದು ಮೋಟರು ಕಾರಿನ ಅಡಿಯಲ್ಲಿ ಬಿದ್ದು ನರಳುತ್ತಿದ್ದನು. ಮೋಟರನ್ನು ಅಲ್ಲೇ ಬಿಟ್ಟು ಓಡಿದ್ದರು. ಯಾರ ಮೋಟರು, ಯಾರು ಬಿಟ್ಟು ಹೋದರು ಎಂದು ತಿಳಿದುಬಂದಿಲ್ಲ. ತನಿಖೆ ನಡೆಯುತ್ತಿದೆ.

ಮಂಗಳೂರಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಬೇಕೆಂದು ಕೆಲವು ತರುಣರ ಸಾಹಸವು ನಡೆಯುತ್ತಿದೆ. ಇದರಲ್ಲಿ ಊರ ಪ್ರಮುಖ ಕನ್ನಡಿಗರನ್ನು ಸೇರಿಸುವ ಯತ್ನವು ನಡೆಯುತ್ತಿದೆ.

ತಾ. ೬—೧೦—೩೫ನೇ ಆದಿತ್ಯವಾರ ದಿನ ಮಧ್ಯಾಹ್ನ ಕೂಡಿದ ಕಾಂಗ್ರೆಸ್ ಸಿವಿಲ್ ಬೋರ್ಡಿನಲ್ಲಿ ಮಂಜೂರಾದ ಮುಖ್ಯ ನಿರ್ಣಯಗಳು: ೧. ಕಾಂಗ್ರೆಸ್ ಕಡೆಯಿಂದ ಚುನಾವಣೆಯಾದ ಅಥವಾ ಚುನಾಯಿಸಲ್ಪಡಬೇಕಾಗಿರುವ ಉಮೇದ್ವಾರರ ಹೊರತು ಇತರ ಎಲ್ಲಾ ಉಮೇದ್ವಾರರ ವಂತಿಗೆ ಹಣವನ್ನು ಅವರವರಿಗೆ ವಾಪಾಸು ಕೊಡುವರೆ ಕಾರ್ಯದರ್ಶಿ ಶ್ರೀ ಸೂರಪ್ಪಯ್ಯನವರಿಗೆ ಅಧಿಕಾರ ಕೊಡಲಾಯಿತು. ೨. ಕಾಂಗ್ರೆಸ್ ಪಕ್ಷದಿಂದ ನಿಲ್ಲುವ ಹರಿಜನ ಉಮೇದ್ವಾರರು ವಂತಿಗೆ ಹಣ ರೂ. ೨೫ನ್ನು ಕೊಡುವುದು ಅಗತ್ಯವಿಲ್ಲವೆಂದು ನಿರ್ಣಯಿಸಲಾಯಿತು.

### ಜಿಲ್ಲಾ ಬೋರ್ಡ್ ಚುನಾವಣೆ

ಈ ಕೆಳಗೆ ಹೆಸರಿಸಲಾಗಿರುವ ಉಮೇದ್ವಾರರನ್ನು ಕಾಂಗ್ರೆಸ್ ಕಡೆಯಿಂದ ಆಯಾಯ ಸರ್ಕಲುಗಳಿಗೆ ಆರಿಸಲಾಗಿದೆ. ದೇಶಸೇವೆಗಾಗಿಯೇ ಇರುವ ಕಾಂಗ್ರೆಸಿನ ಗೌರವದ ಕಡೆಗೆ ದೃಷ್ಟಿ ಇಟ್ಟು ಎಲ್ಲಾ ದೇಶಾಭಿಮಾನಿಗಳೂ ಕಾಂಗ್ರೆಸ್ ಉಮೇದ್ವಾರರಿಗೂ ಸಂಪೂರ್ಣ ಸಹಾಯ ಮಾಡಬೇಕಾಗಿ ಕೇಳಿಕೊಳ್ಳುತ್ತದೆ. ರಾಷ್ಟ್ರ ಸಭೆಗೂ, ರಾಷ್ಟ್ರಧ್ವಜಕ್ಕೂ ಎಲ್ಲೆಲ್ಲೂ ಗೌರವಸಿಗುವಂತೆ ಮಾಡಿರಿ!

ಮಂಗಳೂರು ತಾಲೂಕು—ಮಂಗಳೂರು. ಡಾಕ್ಟರ್ ಕೆ. ವಿಠ್ಠಲಶೆಟ್ಟಿ, ಅಧ್ಯಕ್ಷ: ಮುನಿಸಿಪಲ್ ಕೌನ್ಸಿಲ್. ಕೋಟೆಕಾರ್ ಶ್ರೀ ಉಳ್ಳಾಲ ಗೋವಿಂದ ಕಿಣಿ, ಸುರತ್ಕಲ್ ಶ್ರೀ ಕೋಚಣ್ಣಶೆಟ್ಟಿ, ಬಂಟವಾಳ ಶ್ರೀ ಬಿ. ವೈಕುಂಠಬಾಳಿಗ. ಮೂಲ್ಕಿ ಶ್ರೀ ಎ. ಬಿ. ಶೆಟ್ಟಿ, ಯಂ. ಎಲ್. ಸಿ. ಮಂಗಳೂರು ಮುಸಲ್ಮಾನ ಸ್ಥಾನಕ್ಕೆ ಶ್ರೀ ಬಿ. ಎಲ್. ಅಹಮ್ಮದ್.

ಕಾರ್ಕಳ ತಾಲೂಕು—ಕಾರ್ಕಳ ಶ್ರೀ ಕೆ. ಸದಾಶಿವಭಟ್, ಎಸ್. ಎಮ್. ಎಲ್. ಎ. ವೇಣೂರು ಶ್ರೀ ಶ್ರೀವರ್ಮಶೆಟ್ಟಿ. ಮೂಡಬಿದ್ರೆ ಶ್ರೀ ಧರ್ಮಸಾಮ್ರಾಜ್ಯ.

ಉಡುಪಿ ತಾಲೂಕು—ಉಡುಪಿ ಶ್ರೀ ಡಾಕ್ಟರ್ ಪಿ. ಜಿ. ಆಚಾರ್. ಹಿರಿಯಡ್ಕ ಶ್ರೀ ಬಿ. ಕೃಷ್ಣಯ್ಯ ಹೆಗಡೆ, ಬ್ರಹ್ಮಾವರ ಶ್ರೀ ಬೆಳಂಜೆ ಕೃಷ್ಣಯ್ಯಹೆಗಡೆ. ಕೋಟ ಶ್ರೀ ಮಂಜುನಾಥ ಶ್ಯಾನುಭಾಗ. ಕಾಪು ಶ್ರೀ ಕೆ. ಅನಂತಶೆಟ್ಟಿ. ಕಟಪಾಡಿ ಶ್ರೀ ಉಪೇಂದ್ರ ಶ್ರೀನಿವಾಸ ನಾಯಕ. ಕಟಪಾಡಿ ಕ್ರಿಶ್ಚನ್ ಸ್ಥಾನಕ್ಕೆ ಶ್ರೀ ಎ. ಸಿ. ಗೊನ್ಸಾಲ್ವಿಸ್. ಉಡುಪಿ ಸ್ತ್ರೀಯರ ಸ್ಥಾನಕ್ಕೆ ಶ್ರೀಮತಿ ಮನೋರಮಾಬಾಯಿ ಮಂಜುನಾಥನಾಯ್ಕ.

ಕುಂದಾಪುರ ತಾಲೂಕು—ಕುಂದಾಪುರ ಶ್ರೀ ಎಂ. ಪುಂಡಲೀಕ ಕಾಮತ್. ಬಸ್ರೂರು ಶ್ರೀ ಬಿ. ಶಿವರಾಮಶೆಟ್ಟಿ. ಬೈಂದೂರು ಶ್ರೀ ಕೆ. ವೆಂಕಪ್ಪಶೆಟ್ಟಿ. ಶಂಕ್ರೆ ಶ್ರೀ ಎಚ್. ಸೂರಪ್ಪಯ್ಯ. ಸ್ತ್ರೀಯರ ಸ್ಥಾನಕ್ಕೆ ಶ್ರೀಮತಿ ಸುಶೀಲಾಬಾಯಿ ಉಡುಪ.

ಕಾಸರಗೋಡು ತಾಲೂಕು—ಕುಂಬಳೆ ಶ್ರೀ ಖಂಡಿಗೆ ಕೃಷ್ಣಭಟ್ಟ. ಮಂಜೇಶ್ವರ ಶ್ರೀ ಅಮ್ಮೆಂಬಳ ಕೃಷ್ಣರಾವ್. ಹೊಸದುರ್ಗ ಶ್ರೀ ಕುನ್ನಂಬುನಾಯರ್. ಮುಳಿಯಾರ್ ಶ್ರೀ ಡಾಕ್ಟರ್ ಸಿ. ವಿಠ್ಠಲಭಂಡಾರಿ.

ಪುತ್ತೂರು ತಾಲೂಕು— ಪುತ್ತೂರು ಶ್ರೀ ಎಚ್. ಪುಂಡರೀಕಭಟ್. ಕೊಕ್ಕಡ ಶ್ರೀ ಎಮ್. ಶಿವರಾವ್. ಸುಳ್ಯ ಶ್ರೀ ಎಸ್. ಚೆನ್ನಪ್ಪಗೌಡ. ಬೆಳ್ಳಂಗಡಿ ಶ್ರೀ ಬಿ. ಮಂಗೇಶರಾವ್. ಇನ್ನುಳಿದ ಸ್ಥಾನಗಳಿಗೆ ಸದ್ಯದಲ್ಲೇ ಉಮೇದ್ವಾರರನ್ನು ಆರಿಸಲಾಗುವುದು ಎಂದು ಸೂರಪ್ಪಯ್ಯ ಹಲ್ಸನಾಡು, (ಕಾರ್ಯದರ್ಶಿ) ಇವರು ತಿಳಿಸುತ್ತಾರೆ.

ಟ್ರೈನಿಂಗ್ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಪರೀಕ್ಷೆಯು ೧೯೩೬ರ ಮಾರ್ಚ ೧೬, ೧೭, ಮತ್ತು ೧೮ರಲ್ಲಿ ನಡೆಯುವುದು. ಒಮ್ಮೆ ನಿರುತ್ತೀರ್ಣರಾಗಿರುವವರು ರೂಪಾಯಿ ೫ನ್ನು ಇದೇ ನವಂಬರ ತಾ. ೧೮ರೊಳಗೆ ರವಾನಿಸಿ ಪರೀಕ್ಷೆಗೆ ಹಾಜರಾಗಿ ರವಾನಿಸಬೇಕು. ಆ ತಾರೀಕಿನ ನಂತರ ಹಣವನ್ನು ಸ್ವೀಕರಿಸಲಾಗುವುದಿಲ್ಲ ಎಂದು ಗವರ್ನಮೆಂಟ್ ಕೊಲೇಜಿನ ಹೆಡ್ ಮಾಸ್ತರರಾದ ಶ್ರೀ ಎಂ. ರಾಮಚಂದ್ರ ಪೈಗಳು ತಿಳಿಸುತ್ತಾರೆ.

ಇದೇ ತಾ. ೧೬ರಲ್ಲಿ ದ. ಕ. ಜಿಲ್ಲಾ ಬೋರ್ಡ್ ಸದಸ್ಯರ ಒಂದು ವಿಶೇಷ ಸಭೆಯು ಉಪ್ಪಿನಂಗಡಿಯಲ್ಲಿ ಮಧ್ಯಾಹ್ನ ಗಂಟೆ ೧೨-೩೦ಕ್ಕೆ ಜರಗಲಿರುವುದು.

## ಮಾನ್ಯ ಗವರ್ನರರ ಕಾರ್ಯಕ್ರಮ.

ಮಾನ್ಯ ಗವರ್ನರು ಪತ್ನಿಸಮೇತರಾಗಿ ಇದೇ ೧೪ನೇ ಬೆಳಗ್ಗೆ ಗವರ್ನಮೆಂಟ್ ಕಾಲೇಜಿನಲ್ಲಿ ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಮತ್ತು ದ. ಕ. ಜಿ. ಬೋರ್ಡಿನ ಮಾನಪತ್ರಗಳನ್ನು ಸ್ವೀಕರಿಸಿ, ಶ್ರೀ ಲಕ್ಷ್ಮೀನಾರಾಯಣ ಸ್ವಾಮಿಜಿಯವರಿಗೆ ರಾವ್ ಸಾಹೇಬ್ ಸನದನ್ನೂ, ಚಿತ್ರವಿಶಿಗಳ ರಜತೋತ್ಸವ ಪದಕಗಳನ್ನೂ ಕೊಡುವರು. ಅನಂತರ ಹಂಚಿನ ಕಾರ್ಖಾನೆ ಮೊದಲಾದವುಗಳನ್ನು ಸಂದರ್ಶಿಸಿ, ಪೂರ್ವಾಹ್ನ ಘಂಟೆ ೧೨-೩೦ಕ್ಕೆ ಕಲೆಕ್ಟರ ಬಂಗ್ಲೆಯಲ್ಲಿ ಮಹಮ್ಮದೀಯರ ಮತ್ತು ಕ್ರೈಸ್ತರ ಡೆಪ್ಯುಟೇಶನುಗಳನ್ನು ಸ್ವೀಕರಿಸುವರು. ಅಪರಾಹ್ನ ಘಂಟೆ ೪-೩೦ಕ್ಕೆ ಗವರ್ನಮೆಂಟ್ ಕಾಲೇಜನ್ನು ಸಂದರ್ಶಿಸುವರು. ತಾ. ೧೫ನೇ ಮಂಗಳವಾರ ಬೆಳಗ್ಗೆ ಘಂಟೆ ೧೦ ಕ್ಕೆ ಕೆನರಾ ಹೈಸ್ಕೂಲನ್ನು ಸಂದರ್ಶಿಸಿ ಲೈಬ್ರರಿ ಮತ್ತು ಮ್ಯೂಸಿಯಮ್ ಕಟ್ಟಡ ತೆರೆಯುವರು. ಅನಂತರ ಡಿಪ್ರೆಸ್ಡ್ ಕ್ಲಾಸಸ್ ಮಿಶನನ್ನು ಸಂದರ್ಶಿಸಿ ಕಲೆಕ್ಟರರ ಬಂಗ್ಲೆಯಲ್ಲಿ ಭೇಟಿಕೊಡುವರು. ಇಂದು ಅಪರಾಹ್ನ ಘಂಟೆ ೫ಕ್ಕೆ ಡಿಸ್ಟ್ರಿಕ್ಟ್ ಜಡ್ಜರು ತನ್ನ ಬಂಗ್ಲೆಯಲ್ಲಿ ಮಾನ್ಯ ಗವರ್ನರರಿಗೂ ಅವರ ಪತ್ನಿಯರಿಗೂ ಗಾರ್ಡನ್ ಪಾರ್ಟಿ ಕೊಡುವರು. ತಾ. ೧೬ನೇ ಬೆಳಗ್ಗೆ ಘಂಟೆ ೮-೩೦ಕ್ಕೆ ಮಾನ್ಯ ಗವರ್ನರರು ವೆನ್‌ಲೋಕ್ ಆಸ್ಪತ್ರೆ ಮೊದಲಾದುವನ್ನು ಸಂದರ್ಶಿಸುವರು. ಪೂರ್ವಾಹ್ನ ಘಂಟೆ ೧೧ ೧೫ಕ್ಕೆ ಉಪ್ಪಿನಂಗಡಿಗೆ ಹೋಗಿ ಕುಮಾರಧಾರ ಸಂಕವನ್ನು ತೆರೆಯುವರು. ಇಲ್ಲಿ ಸ್ಕೌಟರ ಪ್ರದರ್ಶನವಿರುವುದು. ತಾ. ೧೭ನೇ ಗುರುವಾರ ಬೆಳಗ್ಗೆ ಘಂಟೆ ೭-೩೦ಕ್ಕೆ ಮೂಡಬಿದ್ರೆಗೆ ತಲಪಿ ಅಲ್ಲಿಯ ಜೈನ ದೇವಸ್ಥಾನಗಳನ್ನು ಸಂದರ್ಶಿಸುವರು. ಘಂಟೆ ೧೦-೧೫ಕ್ಕೆ ಕಾರ್ಕಳಕ್ಕೆ ತಲಪಿ ಗುಮ್ಮಟ ಪ್ರತಿಮೆಯನ್ನು ನೋಡುವರು. ಇಂದು ಸಂಜೆ ಘಂಟೆ ೫ಕ್ಕೆ ಕೂಳೂರಿಗೆ ಹೋಗಿ ೬ ಘಂಟೆಯ ವರೆಗೆ ಅಲ್ಲಿ ನಡೆವ ಕಂಬಳ ನೋಡುವರು. ತಾ ೧೮ನೇ ಬೆಳಗ್ಗೆ ಲೋಂಚಿನಲ್ಲಿ ಬಂದರವನ್ನು ಸುತ್ತಾಡುವರು. ಆ ಮೇಲೆ ಘಂಟೆ ೧೦-೩೦ಕ್ಕೆ ಸೈಂಟ್ ಎಲೋಸಿಯಸ್ ಕೊಲೇಜಿಗೆ ಹೋಗುವರು. ಸಂಜೆ ಘಂಟೆ ೫ಕ್ಕೆ ಮಂಗಳೂರು ಪಟ್ಟಣಿಗರ ಗಾರ್ಡನ್ ಪಾರ್ಟಿಯು ಕಲೆಕ್ಟರರ ಬಂಗ್ಲೆಯಲ್ಲಿ ಜರಗುವುದು. ಘಂಟೆ ೬-೩೦ಕ್ಕೆ ಮಂಗಳೂರಿಂದ ಹೊರಟುಹೋಗುವರು

## Canara Bank Limited, City-Mangalore.

ಕೆನರಾ ಬೇಂಕ್, ಲಿಮಿಟೆಡ್,

ಸಿಟಿ-ಮಂಗಳೂರು.

### ನೋಟೀಸು

ಮಂಗಳೂರು ಶಹಾರು ಹಂಪನಕಟ್ಟೆ ವಿಟ್ಠಪ್ಪನಾಯ್ಕರ ಮಗ ಎಚ್. ಶ್ರೀನಿವಾಸ ನಾಯ್ಕರು ಚಿನ್ನಾಭರಣಗಳ ಈಡಿನ ಮೇಲೆ ಈ ಕೆಳಗೆ ನಮೂದಿಸಿದ ಸಾಲಗಳನ್ನು ಪಡಕೊಂಡಿರುವಲ್ಲಿ ಸದರಿ ಸಾಲಗಳ ಬಡ್ಡಿ ಐವೇಜನ್ನು ವ್ಯಾದೆಗೆ ಕೊಡದೆ ಇದ್ದುದರಿಂದ ಆ ಕುರಿತು ಅವರ ವಿಳಾಸಕ್ಕೆ ಬಿಟ್ಟ ಟಪ್ಪಾಲು ರಿಜಿಸ್ತ್ರಿ ನೋಟೀಸುಗಳು ಅವರು ಮೃತಪಟ್ಟಿರುತ್ತಾರಾಗಿ ತಿರಿಗಿ ಬಂದಿರುವುದರಿಂದ ಈ ಗಜೇಟು ನೋಟೀಸು ಮೂಲಕ ತಿಳಿಯಪಡಿಸುವುದೇನಂದರೆ—ಸದರಿ ಮೃತ ಶ್ರೀನಿವಾಸನಾಯ್ಕರ ಕಾಯದೆಶೀರ ವಾರಿಸ್ದಾರರು ಬೇಂಕಿಗೆ ಸಮಾಧಾನಕರವಾದ ದಾಖಲೆಯನ್ನು ಕೊಟ್ಟು ಸದರೀ ಸಾಲಗಳ ಬಾಬ್ತು ಬಹಾ ಅಸಲು ಬಡ್ಡಿ ನೋಟೀಸ ಖರ್ಚು ಕೂಡಾ ಕೆತ್ತು, ಅಡವಿಟ್ಟ ಆಭರಣಗಳನ್ನು ಇದೇ ಬರುವ 1935ನೇ ನವಂಬರ ತಾ. 1ರ ವಳಗೆ ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ, ಸದರಿ ನಗಗಳನ್ನು 1935ನೇ ನವಂಬರ ತಾ. 8ನೇ ಶುಕ್ರವಾರ ಮಧ್ಯಾಹ್ನ 2 ಗಂಟೆಯ ಹೊತ್ತಿಗೆ ಬೇಂಕಿನ ಡೊಂಗರಕೇರಿ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಲೋನು ನಂಬ್ರ 515/32, ಅಡವಿಟ್ಟ ತಾರೀಕು 25-11-'32, ಸಾಲದ ಮೊಬಲಗು ರೂ. 110/ ಏಲಂ ತಾರೀಕು ವರೆಗೆ ಬಡ್ಡಿ ಖರ್ಚು ಕೂಡಾ ರೂಪಾಯಿ 8-15-5.

ಲೋನು ನಂಬ್ರ 205/33, ಅಡವಿಟ್ಟ ತಾರೀಕು 8-8-'33, ಸಾಲದ ಮೊಬಲಗು ರೂ. 220/. ಏಲಂ ತಾರೀಕು ವರೆಗೆ ಬಡ್ಡಿ ಖರ್ಚು ಕೂಡಾ ರೂಪಾಯಿ 18-0-7, ಮತ್ತು ಈ ನೋಟೀಸಿನ ಖರ್ಚು ಸಹಾ.

ಕೆನರಾ ಬೇಂಕ್, ಲಿಮಿಟೆಡ್, ಸಿಟಿ ಮಂಗಳೂರು 9-10 1935.

M. Mukunda Kini, *Agent.*

ಇದೇ ತಾ. ೧೪ರಲ್ಲಿ ಮಂಗಳೂರಿಗೆ ಬಂದು, ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂದರ್ಶಿಸಲಿರುವ ಮಾನ್ಯ ಮದ್ರಾಸು ಗವರ್ನರರಾದ

**ಲೋರ್ಡ್ ಎರ್ಸ್ಕಿನ್‌ರವರೂ ಅವರ ಪತ್ನಿಯವರೂ.**

## ಈಗ ಬಂದ ವಾರ್ತೆ.

### ಬ್ರಿಟನಿಗೆ ಫ್ರಾನ್ಸು ಕೊಟ್ಟ ಉತ್ತರವು ದ್ವಯಾರ್ಥಯುಕ್ತವಾದುದು.

ಬ್ರಿಟನಿಗೆ ಫ್ರಾನ್ಸಿನ ಸಹಾಯವು ಸಿಗುವುದೋ ಎಂದು ಕೇಳಿದುದಕ್ಕೆ ಫ್ರಾನ್ಸು ಉತ್ತರವಾಗಿ ತನ್ನನ್ನು ಜರ್ಮನಿಯು ಗಡಿನಾಡಿನಲ್ಲಿ ಸೈನ್ಯಸಂಗ್ರಹಮಾಡಲು ಅಡ್ಡಿ ಮಾಡದಿದ್ದರೆ ತಾನು ಸಹಾಯ ನೀಡುವೆನೆಂದು ಹೇಳುತ್ತಿರುವುದಾಗಿ ತಿಳಿದುಬಂದಿದೆ. ಇದರಿಂದಾಗಿ ಬ್ರಿಟನ್ನಿನ ಚಿಂತೆಯು ಹೆಚ್ಚಿದೆ.

### ಅಬಿಸೀನಿಯದಲ್ಲಿ ವಿಷಗಾಳಿ.

ಅಡಿಸ್ ಅಬಾಬ, ತಾ. ೮.

ಅಬಿಸೀನಿಯದಲ್ಲಿ ಇಟೆಲಿಯ ಸೈನಿಕರು ವಿಷಗಾಳಿ ಉಪಯೋಗಿಸುವರೆಂದು ತಿಳಿದುಬಂದಿದೆ. ಎಬಿಸೀನಿಯದ ಕಮಾಂಡರರು ಎರಿಟ್ರಿಯಾದತ್ತ ಸೈನ್ಯವನ್ನು ಮುನ್ನಡೆಸುತ್ತಿರುವರು. ೫೦,೦೦೦ ಯೋಧರು ಇಟೆಲಿಯವರನ್ನು ಪ್ರತಿಭಟಿಸಲಿರುವರು.

ಇಟೆಲಿಯವರು ಆಕ್‌ಸುಂ, ಅಡೋವಾ, ಅಡಿಗ್ರಟ್ ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡರು. ಅದರೂ ಎಬಿಸೀನಿಯನರು ಹಿಂದೆ ಹಿಂದೆಯೇ ಸರಿಯುತ್ತಿರುವರು. ಮುಂದೆ ಮುಂದೆ ಸಾಗುವ ಇಟೆಲಿಯ ಸೈನಿಕರು ಗುಡ್ಡ ಕಾಡುಗಳನ್ನು ಹತ್ತಿ ಚೆನ್ನಾಗಿ ದಣಿಯಬೇಕೆಂಬ ಉದ್ದೇಶದಿಂದ ಎಬಿಸೀನಿಯನರು ಹಲವೆಡೆಗಳಲ್ಲಿ ದೊಡ್ಡ ದೊಡ್ಡ ಕಂದಕಗಳನ್ನು ತೋಡಿ, ಅವುಗಳನ್ನು ಮರದ ಗೆಲ್ಲುಗಳಿಂದಲೂ ಸೊಪ್ಪುಗಳಿಂದಲೂ ಮುಚ್ಚಿ ಭೂಮಿಯಂತೆ ಮಾಡಿದರು.

ಇಟೆಲಿಯನರ ಕೆಲವು ಟೇಂಕುಗಳೂ ನೂರಾರು ಸೈನಿಕರೂ ಅತ್ಯುತ್ಸಾಹದಿಂದ ಮುಂದರಿಯುತ್ತಿದ್ದಾಗ ಈ ಮೋಸದ ದಾರಿಯಲ್ಲಿ ಮುಂದರಿದು ಕಂದಕಗಳೊಳಗೆ ಟೇಂಕ್‌ಗಳ ಸಹಿತ ಬಿದ್ದು ಹೇಳಹೆಸರಿಲ್ಲದಂತೆ ನಾಶವಾದರು.

### ಪೋಲೀಸ್ ಅಧಿಕಾರಿಯ ಕೊಲೆ

### ಗ್ರಾಮಸ್ಥರ ದಸ್ತಗಿರಿ.

ಅಮೃತಸರದಿಂದ ೨೫ ಮೈಲು ದೂರದಲ್ಲಿರುವ ಧಾರೀದಿಯೋ ಎಂಬಲ್ಲಿ ಸಬ್ ಇನ್ಸ್‌ಪೆಕ್ಟರರಾದ ಪಂಡಿತ ರಂಗನಾಥರೆಂಬವರನ್ನು ಕೆಲವು ಜನಗಳು ಬಡಿದುಕೊಂದಿರುವರು. ಒಬ್ಬ ತರುಣಿಯ ವಿವಾಹದ ಕುರಿತಾಗಿದ್ದ ವಿವಾದವೊಂದನ್ನು ಪರಿಹರಿಸಿ ಮಾರಾಮಾರಿಯನ್ನು ತಡೆಯುವುದಕ್ಕಾಗಿ ಅವರು ಅತ್ತ ತೆರಳಿದ್ದರು. ಸಬ್ ಇನ್ಸ್‌ಪೆಕ್ಟರಿದ್ದರೂ, ಜಗಳವಾಗಿ ಸುಮಾರು ೧೫ ಮಂದಿ ಜಮಾಗೊಂಡರು. ಅವರೊಡನೆ ಸಬ್ ಇನ್ಸ್‌ಪೆಕ್ಟರರನ್ನು ಕೊಂದುಹಾಕಲಾಯಿತು. ಪೋಲೀಸ್ ಸುಪರಿಂಟೆಂಡೆಂಟರೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ಫೋಜಿನೊಂದಿಗೆ ಅತ್ತ ತೆರಳಿ ೧೩ ಮಂದಿ ಹಳ್ಳಿಗರನ್ನು ಸೆರೆಹಿಡಿದಿರುವರು.

### ಕೆಲಸವಿಲ್ಲದೆ ಕಂಗೆಟ್ಟ ಪರಿಣಾಮ.

ನೆಲ್ಲೂರಿನ ಸೆಶ್ಶನ್ ಜಡ್ಜರ ಕೋರ್ಟಿಗೆ ೨೪ ವರ್ಷ ಪ್ರಾಯದ ಒಬ್ಬ ತರುಣನು ತಪ್ಪೊಪ್ಪಿ ವಿಚಾರಣೆಗೊಳಗಾದನು. ಶಿವರಾಮನ್ ಎಂಬ ಈ ತರುಣನು ಸಾವಿರ ತರಗತಿಯ ವರೆಗೆ ವಿದ್ಯೆ ಕಲಿತನು. ಆದರೆ ಬಡತನದ ಬೇಗೆಯಿಂದ ಮುಂದೆ ಅವನಿಗೆ ಕಲಿಯಲಿಕ್ಕಾಗಲಿಲ್ಲ. ಅವನು ೩ ತಿಂಗಳ ಹಿಂದೆ ಒಬ್ಬನ ಸೈಕಲನ್ನು ಕದ್ದು ಅಂಗಡಿಯವನಿಗೊಬ್ಬನಿಗೆ ರೂ. ೨೨-೧೨-೦ಕ್ಕೆ ವಿಕ್ರಯಿಸಿ ಹುಟ್ಟಿಬಂದ ಹಣದಿಂದ ಕೆಲವು ದಿನಗಳನ್ನು ಕಳೆದನು. ಸೈಕಲಿನ ಯಜಮಾನನಿಗೆ ಇದು ತಿಳಿದು ಬಂದಾಗ ಅವನು ಪೋಲೀಸರಿಗೆ ತಿಳಿಸಿದನು. ಶಿವರಾಮನನ್ನು ಸೆರೆಹಿಡಿದರು. ವಿಚಾರಣೆಯಾಗಿ ಅವನು ತನ್ನ ತಪ್ಪನ್ನು ಒಪ್ಪಿಕೊಂಡನು. ಅವನಿಗೆ ೩೫ ರೂಪಾಯಿ ಜುಲುಮಾನೆಯನ್ನೂ, ಕೋರ್ಟು ಮುಗಿಯುವ ವರೆಗೆ ಶಿಕ್ಷೆಯನ್ನೂ ವಿಧಿಸಲಾಯಿತು.

### ಅಮೇರಿಕಾ ಮೈಲ್ ವಿಮಾನವು ಹುಡಿಯಾಯಿತು

### ೧೨ ಮಂದಿ ಮೃತರಾದರು.

ಕೆಲಿಫೋರ್ನಿಯಾದಿಂದ ನ್ಯೂಯೋರ್ಕಿಗೆ ಹಾರುತ್ತಿದ್ದ ದೊಡ್ಡ ವಿಮಾನವೊಂದು ಕೆಳಗೆ ಬಿದ್ದು ಹುಡಿಯಾಯಿತು. ೧೨ ಮಂದಿ ಮೃತರಾದರು. ಇವರಲ್ಲಿ ೯ ಮಂದಿ ಪ್ರಯಾಣಿಕರು.

# WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purnaih Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ

ಐಟಿಡಾಯಿಡ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫ್ರೋಸ್ಪರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪.
ಏಜೆಂಟ್ಸ್— ಬಾ ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

THE 1935 MODEL

## HEAVY DUTY TRUCK



For Your Haulage

U SUBRAYA NAYAK,
FORD DEALER
SHIMOGA——AND——MANGALORE.

# Now For Sale.

**Poholatum (Balm)** (German make) This is a home remedy for Rheumatism Asthma, Sciatica Lumbago, Insect bites, Herpes, Wounds Cuts, Colds Headache It is a complete substitute for the domestic medicine chest Try once this unequalled remedy In ½oz tin As 8/ In oz jar As 12/-

**Superior Red Balm** For relieving pains in muscles and on skin Directions for use with the bottle Price As 12 —only

**Wurmteufel** Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms children and adults try this unique remedy and be freed from your ailment Price As 10 per packet

**Pocket Inhaler** For coughs and hoarseness headache catarrh colds use this inhaler and you will be relieved immediately Price per inhaler As 6 As 8

**Po Ho Fluid** For Asthma colds indigestion toothache, lumbago, a sure remedy in all cases Price As 6 and Re 1/ per phial

**Cough Cure** An infallible remedy for coughs of all kinds bronchitis hoarseness Particulars in bottle Price As 12 - for 8 oz bottle

**The New Curative Earth** A Radium cure for incurable diseases

**Mithra Toilet Soaps**—Scientifically prepared German soaps excellent for health Price As 1/3, 2/6, 3/-, 4

## Basel Mission Book Depot

Mangalore, Branches in Codialbail, Hubli Calicut

## ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು!

ಸದುಪಯೋಗ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

# ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ      ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯನಿರ್ಣಯದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ   ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

## ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. —— ಯಥೋಚಿತವಾದ ಪುರಸ್ಕಾರಗಳಿವೆ —— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ–ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

## ... ದಿನಗಳ ಉಪವಾಸವು ಕೊನೆಗಂಡಿತು.

ಕಲ್ಕತ್ತಾ, ಒಕ್ಟೋಬರ ೬

ಕಲ್ಕತ್ತದ ಕಾಳಿಘಾಟ್ ದೇವಸ್ಥಾನದಲ್ಲಿ ಪೂಜೆಯು ...ಯುವಾಗ ಪ್ರಾಣಿಬಲಿಯು ನಡೆಯುತ್ತಿರುವುದನ್ನು ...ಸುವುದಕ್ಕಾಗಿ ಪಂಡಿತ ರಾಮಚಂದ್ರ ಶರ್ಮರೆಂಬ ...ು ಸಪ್ಟಂಬರ ತಾ. ೫ರಲ್ಲಿ ಆಮರಣಾಂತ ಉಪವಾಸ ...ವನ್ನು ಹಿಡಿದಿದ್ದರು. ಅವರೊಡನೆ ಎಷ್ಟೆ ಪ್ರಾರ್ಥಿಸಿ ...ಂದರೂ ನಿರರ್ಥಕವಾಗದೆ ಕೊನೆಗೆ ಅಲ್ಲಿಯ ...ಗರೀಕರಲ್ಲಿ ಕೆಲವರು ಪಂಡಿತ ಮಾಲವೀಯರ ಮರೆ ...ೋಗಿ ಅವರು ಈ ವಿಷಯದಲ್ಲಿ ಕೈಹಾಕಬೇಕೆಂದು ...ಕೊಂಡರು. ಅದೇ ಮೇರೆಗೆ ಪಂಡಿತ ಮಾಲವೀ...ರು ಶರ್ಮರವರನ್ನು ಕಂಡು ಸುದೀರ್ಘ ಚರ್ಚೆ ...ಡೆಸಿದರು. ಏನೇ ಆಗಲಿ, ಬಲಿಯು ನಿಲ್ಲಿಸಲ್ಪಡದೆ ...ನು ಅನ್ನ ತಿನ್ನೆನೆಂದು ಶರ್ಮರು ಹೇಳಿದರು. ಕಡೆಗೆ ...ಂಡಿತ ಮಾಲವೀಯರು ವಾಗ್ದಾನಮಾಡಿ ತಾನು ಇನ್ನು ... ವರ್ಷದೊಳಗೆ ಈ ಪ್ರಾಣಿಬಲಿಯನ್ನು ನಿಲ್ಲಿಸಲು ...ಯತ್ನಮಾಡುವೆನೆಂದು ಶರ್ಮರಿಗೆ ಆಶ್ವಾಸನೆಯಿತ್ತರು. ...ಲ್ಲದೆ ಪ್ರಕೃತಕ್ಕೆ ಉಪವಾಸವನ್ನು ಕೊನೆಗಾಣಿಸುವುದು ...ರ್ಥಕವಾಗಿಯೂ, ನ್ಯಾಯವಾಗಿಯೂ, ಸಮಂಜಸ...ಾಗಿದೆಯೆಂದೂ ಬರೆದುಕೊಟ್ಟರು. ಅದೇ ಮೇರೆಗೆ ...ರ್ಮರು ಈ ದಿನ ಉಪವಾಸವನ್ನು ಬಿಟ್ಟರು. ಡಾ। ...ಾಗೋರರು ಶರ್ಮರಿಗೊಂದು ಸಂದೇಶವನ್ನು ಕಳು...ಿ "ನಿಮ್ಮ ಸಾಹಸವು ಶ್ಲಾಘ್ಯ. ನೀವು ಇನ್ನೂ ಬಾಳ...ಬೇಕು. ನಿಮ್ಮ ಪವಿತ್ರ ಜೀವನದಲ್ಲಿ ಎಷ್ಟೋ ...ತ್ಕಾರ್ಯಗಳು ಕೈಗೂಡಿಸಲಿವೆ. ನಿಮ್ಮ ಯತ್ನ...ಲ್ಲಿ ನಾನೂ ನನ್ನ ಸಹಕಾರವನ್ನು ನೀಡುವೆನು" ಎಂದು ...ಸಿರುವರು

---

## ಸೀರೆಗಳಿಗೆ ಗೆದ್ದಲು ಹಿಡಿಯಿತು!
## ಎಂ. ಎಂಡ್ ಎಸ್. ಎಮ್ ರೈಲ್ವೆ ಕಂಪೆನಿಯವರು ನಷ್ಟಕೊಡಬೇಕು

ಕೋಳನಾಡ, ಒಕ್ಟೋಬರ ೩

ಕೋಳನಾಡದ ವಸ್ತ್ರವ್ಯಾಪಾರಿಯೊಬ್ಬನು ಅಹ್ಮದಾ...ಾದಿನಿಂದ ಒಂದು ಬೇಲ್ ಸೀರೆಗಳನ್ನು ಆಮದುಮಾಡಿ...ನು. ಆ ಬೇಲ್ ಕೋಳನಾಡ್ ರೈಲ್ವೇ ಸ್ಟೇಶನಿಗೆ ...ಂದಿತು. ಅದು ಅಲ್ಲಿಗೆ ತಲಪುವಾಗ ಆ ಇಡೀ ...ಲ್ ಒದ್ದೆಯಾಗಿ ಅದರಲ್ಲಿದ್ದ ಸೀರೆಗಳನ್ನು ಗೆದ್ದಲು ...ಂದಿದ್ದಿತು. ಇದನ್ನು ಕಂಡು ಆ ವ್ಯಾಪಾರಿಯು ...ಪಡೆಯಲಿಲ್ಲ. ತನ್ನಿಮಿತ್ತ ರೈಲ್ವೆ ಕಂಪೆನಿಯವರು ಆ ಸರ...ಕನ್ನು ವಿಕ್ರಯಿಸಿದರು. ಜಾಹೀರಾತು ಖರ್ಚು ಮೊದ...ಲಾದುವುಗಳನ್ನು ಕಳೆದು ಉಳಿದಿದ್ದ ರೂ ೫೩—೧೩—೦ ...ನ್ನು ವ್ಯಾಪಾರಿಗೆ ಕೊಡಲಿದ್ದರು. ಈ ವ್ಯವಹಾರವು ಕೋರ್ಟಿಗೆ ಹೋಯಿತು. ಡಿಸ್ಟ್ರಿಕ್ಟ್ ಮುನ್ಸೀಫರಲ್ಲಿ ವಿಚಾರಣೆಯು ನಡೆದು ರೈಲ್ವೆ ಕಂಪೆನಿಯವರು ತಮ್ಮ ಸರಕು ತುಂಬಿಸಿಡುವ ಕೋಣೆಯನ್ನು ಶುದ್ಧವಾಗಿಡದಿರುವುದರಿಂದಾಗಿಯೂ ಅವರು ಕಟ್ಟಡವನ್ನು ಕಳೆದ ೩ ವರ್ಷಗಳಿಂದ ದುರುಸ್ತಿಪಡಿಸದಿರುವುದರಿಂದಲೂ, ಅವರು ಕರ್ತವ್ಯಪರಾಙ್ಮುಖರಾದುದರಿಂದಲೂ ವ್ಯಾಪಾರಿಗೆ ನಷ್ಟವಾದುದರಿಂದ ಈ ಮೊಕದ್ದಮೆಯ ಖರ್ಚಿಗೆ ಕಂಪೆನಿಯೇ ನಷ್ಟಕ್ಕೆ ಹೊಣೆಯಾಗಿದೆಯೆಂದು ತೀರ್ಮಾನಿಸಿದರು. ಕಂಪೆನಿಯು ಕೋರ್ಟು ಖರ್ಚು ಸಮೇತ ನಷ್ಟಕೊಡಬೇಕಾಗಿ ಬಂದಿದೆ.

---

## ಕಲ್ಲಿಕೋಟೆ — ಮಂಗಳೂರುಗಳೊಳಗೆ ಟೆಲಿಫೋನ್.

ಮಂಗಳೂರು, ಕಲ್ಲಿಕೋಟೆ, ಕಣ್ಣಾನೂರು, ತಲಿಚೇರಿಗಳನ್ನು ಟ್ರಂಕ್ ಟೆಲಿಫೋನ್ ಮೂಲಕ ಸಂಯೋಜಿಸುವ ಕೆಲಸವು ಆರಂಭವಾಗಿದೆ. ಕಲ್ಲಿಕೋಟೆಯಲ್ಲಿ ಲೈನ್‌ಹಾಕಲು ಪ್ರಾರಂಭಿಸಿರುವರು

---

## ಬ್ರಿಟನಿನ ಮಾರ್ಗಗಳಲ್ಲಾದ ಅಪಘಾತಗಳು

ಸಪ್ಟಂಬರ ತಿಂಗಳಲ್ಲಿ ಬ್ರಿಟನಿನಲ್ಲಿ ೧೪೩ ಜನರು ಮಾರ್ಗಗಳಲ್ಲಿ ಅಪಘಾತಗಳಿಗೆ ತುತ್ತಾದರು. ೪೫೫೦ ಜನರು ಘಾಯಗೊಂಡರು. ಕಳೆದ ವರ್ಷದ ಸಪ್ಟಂಬರದಲ್ಲಿ ೪೮೮೯ ಜನರು ಘಾಯಗೊಂಡಿದ್ದರು. ೧೩೩ ಮಂದಿ ಮರಣಹೊಂದಿದರು.

---

## ಮುಂಬಯಿಯ ನಿವಾಸಿಕರಲ್ಲಿ ವಿನಂತಿ.

ಮುಂಬಾಯಿಯಲ್ಲಿ ಮರಾಠೀ ದೈನಂದಿನ ಪತ್ರಿಕೆಯಾದ "ನವಾಕಾಲ್" ಎಂಬ ವರ್ತಮಾನ ಪತ್ರಿಕೆಯಲ್ಲಿ ಕೊಟ್ಟ ಜಾಹೀರನ್ನು ಕನ್ನಡದಲ್ಲಿ ಅನುವಾದಿಸಿ ಕರ್ನಾಟಕ ಪ್ರತಿನಿಧಿಯಾದ ನಾನು ಕಳುಹಿಸಿರುವೆನು. ಆದರೆ ಆ ಜಾಹೀರಿಗೆ ನಾನೇ ಜವಾಬ್ದಾರ ಯಾ ಜವಾಬ್ದಾರಿಯಾಗಿರುವೆನಲ್ಲದೆ, ಮರಾಠಿ ಭಾಷೆಯಲ್ಲಿ ಕೊಟ್ಟ ಜಾಹೀರುದಾರರಾದ ಶ್ರೀ ನಾಗೇಶ ಅಚ್ಯುತ ಶೆಣೈಯವರು ಜವಾಬ್ದಾರರಲ್ಲವೆಂದು ಎಲ್ಲರೂ ತಿಳಿಯತಕ್ಕದ್ದು.

ವಿ. ಎಸ್. ಕಿಬ್ರೂರ್‌ಕರ್.

---

## ಬಸ್ಸಿನಲ್ಲಿ ಸ್ಫೋಟನ!
## ಎಂಟು ಮಂದಿ ಘಾಯಗೊಂಡರು!

ಪಂಚಲೀಪಟ್ಟಣ ಒಕ್ಟೋ. ೫

ಮಂಜಲೂರು ಎಂಬಲ್ಲಿಗೆ ಶಂಶಾ ಅಹ್ಮದ್ ಎಂಬವನು ಬಸ್ಸಿನ ಮೂಲಕ ಗಂಧಕವನ್ನೂ ಸಿಡಿಮದ್ದು ಸಿದ್ಧತೆಗೆ ಬೇಕಾದ ಪುಡಿಗಳನ್ನೂ ಕೊಂಡೊಯ್ಯುತ್ತಿದ್ದನು. ಬಸ್ಸು ಒಂದು ಕಡೆ ನಿಂತಲ್ಲಿ ಪೆಟ್ರೋಲ್ ಟ್ಯಾಂಕಿ ಇದ್ದುದರಿಂದ ಸ್ಫೋಟನಗೊಂಡು ಎಂಟು ಮಂದಿ ಘಾಯಗೊಂಡರು. ಬಸ್ಸು ಸುಟ್ಟುಹೋಯಿತು. ಧರ್ಮರಾಜುಲು ಎಂಬ ಬಸ್ ಕಂಡಕ್ಟರನು ನಿರಾಶಾಸ್ಥಿತಿಯಲ್ಲಿರುವನು. ಡ್ರೈವರನು ಕೆಲವು ಸ್ತ್ರೀಯರನ್ನೂ ಮಕ್ಕಳನ್ನೂ ಬದುಕಿಸಿ ತಾನು ಹೊರಗೆ ಹಾರಿದನು. ಆ ಪುಡಿಗಳ ಕಟ್ಟಿಗೆ ಬೀಡಿಯ ಬೆಂಕಿಯು ಬಿದ್ದುದರಿಂದಲೇ ಈ ಅನಾಹುತವುಂಟಾಯಿತು. ಎಲ್ಲರನ್ನೂ ಸರಕಾರೀ ಆಸ್ಪತ್ರೆಗೊಯ್ಯಲಾಗಿದೆ. ಶಂಶಾ ಅಹಮ್ಮದನು ಬದುಕುವಂತಿಲ್ಲ. ಮುನಿಸಿಪಲ್ ಕಮಿಶನರರೂ ಇತರರೂ ಘಾಯಗೊಂಡವರ ಶುಶ್ರೂಷೆಗೆ ವ್ಯವಸ್ಥೆ ಮಾಡಿರುವರು

---

## ಎವರೆಸ್ಟ್ ಪರ್ವತಾರೋಹಕರು ಹಿಂತಿರುಗಿದರು.

ಎವರೆಸ್ಟ್ ಪರ್ವತಾರೋಹಣ ಮಾಡಲು ಕಟಿಬದ್ಧರಾಗಿ ಬಂದಿದ್ದ ಯುರೋಪಿಯನರ ತಂಡವು ಬಂದ ದಾರಿಗೆ ಹಿಂದಿರುಗಿದೆ. ದಳಪತಿ ರಾದ ... ಶಿಪ್ಟನ್ನರು ಪತ್ರಿಕಾ ಪ್ರತಿನಿಧಿಗಳಿಗೆ ವಿವರವನ್ನು ತಿಳಿಸುತ್ತಾ "ನಾವು ಬರುವ ವರ್ಷ ಮಿ। ಹಗ್ ರಟ್ಲೆಜ್ ಇವರ ಮುಂದಾಳ್ತನದಲ್ಲಿ ಪುನಃ ಪರ್ವತಾರೋಹಣಮಾಡಲು ಬರುವೆವು. ಈಗಿನ ಪಯಣಗಳು ತೃಪ್ತಿಕರವಾಗಿಲ್ಲ. ನಾವು ೨೬ ಗಿರಿಗಳನ್ನು ಹತ್ತಿದೆವು. ಒಟ್ಟು ೨೦,೦೦೦ ಅಡಿಗಳಷ್ಟು ಮೇಲೆ ಹೋದೆವು. ಬಹು ಎತ್ತರವೆಂದರೆ ೨೪,೦೦೦ ಅಡಿ ಮೇಲೆ ಮಾತ್ರ ಹೋದೆವು. ೧೯೩೩ರ ಸಾಹಸದಲ್ಲಿ ೨೮ ಸಾವಿರ ಅಡಿ ಮೇಲೆ ಹೋಗಿದ್ದೆವು. ಎವರೆಸ್ಟ್ ಪರ್ವತದ ಸುತ್ತಲಿರುವ ಹೊಸ ದೇಶವನ್ನು ನಾವು ಕಂಡುಹಿಡಿದಿರುವೆವು. ಮೌರಿಸ್ ವಿಲ್ಸನರ ಶವವು ದೊರಕಿದುದು. ಮಾತ್ರ ನಮ್ಮ ಅದ್ಭುತ ಸಾಹಸದ ದಾಖಲೆ. ಬೇರೇನೂ ಸಾಧ್ಯವಾಗಲಿಲ್ಲ" ಎಂದರು

---

## ೨,೦೦,೦೦೦ ರೂಪಾಯಿಗಳ ನಷ್ಟ.

ಮುಂಬಾಯಿ, ಒಕ್ಟೋ. ೫

ಮುಂಬಯಿಯ ಸೆವ್ರಿಯಲ್ಲಿ ಬೆಂಕಿಯೆದ್ದು ಸುಮಾರು ೩೦೦ ೦೦೦ ರೂಪಾಯಿಗಳಷ್ಟು ಕ್ರಯಬಾಳುವ ಹತ್ತಿಯು ಸುಟ್ಟುಹೋಯಿತು. ಫಯರ್ ಬ್ರಿಗೇಡುಗಳು ಸ್ಥಳಕ್ಕೆ ಹೋಗಿ ಸಾಹಸಪಟ್ಟರೂ ಹೇರಳ ನಷ್ಟವನ್ನು ತಡೆಯಲಾಗಲಿಲ್ಲ. ದಾಸ್ತಾನು ಇಟ್ಟಿದ್ದ ೨೭೦೦ ಬೇಲು ಹತ್ತಿಯನ್ನು ಬೆಂಕಿಯಿಂದ ತಪ್ಪಿಸಲಾಯಿತು. ಇದೂ ಸುಡುತ್ತಿದ್ದರೆ ಮತ್ತೂ ೫,೦೦,೦೦೦ ರೂಪಾಯಿಗಳಷ್ಟು ನಷ್ಟವಾಗುತ್ತಿತ್ತು. ವಿಮೆ ಇಳಿಸಿದ್ದುದರಿಂದ ನಷ್ಟವು ಮಾಲಕರಿಗಾಗಲಿಲ್ಲ

---

## ದೇವರ ಮೇಲಿನ ಆಭರಣಗಳನ್ನು ಕದ್ದರು.

ನೆಲ್ಲೂರು, ಒಕ್ಟೋ. ೬

ಇಲ್ಲಿಯ ಸ್ಟೋನ್ ಹೌಸ್ ಪೇಟೆ ಎಂಬಲ್ಲಿರುವ ಶ್ರೀ ಕನ್ನಿಕ ಪರಮೇಶ್ವರಿ ದೇವಸ್ಥಾನದ ವಿಗ್ರಹದ ಮೈ ಮೇಲಿದ್ದ ೩೦೦ ರೂ ಬೆಲೆಬಾಳುವ ಆಭರಣಗಳು ಕಾಣೆಯಾಗಿವೆ. ದಸರಾ ಮಹೋತ್ಸವವಾರಂಭವಾಗುವಾಗ ಈ ವಿಷಯ ವು ತಿಳಿದು ಬಂತು. ಪೋಲೀಸರು ವಿಚಾರಿಸುತ್ತಿರುವರು.

---

## ಮೋಟರ್ ಕಾರಿನ ಮೇಲೆ ಬಿದ್ದರು!
## ವಕೀಲರೂ 'ಹಿಂದೂ' ಪ್ರತಿನಿಧಿಗಳೂ ಬದುಕಿದರು.

ರಾಮನ್ನಾಡ್, ಒಕ್ಟೋಬರ ೪

ಮಧುರೆಯ ವಕೀಲರಾದ ಶ್ರೀ ಕೆ ಆರ್ ವೆಂಕಟ್ರಮಣ ಅಯ್ಯರ್ ಎಂಬವರು ರಾಮನ್ನಾಡಿನ ಜೋಯಿಂಟ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಶ್ರೀ ಮುತ್ತುರಾಮಲಿಂಗಂ ತೇವರ್ ಎಂಬ ಕೊಂಗ್ರೆಸ್ ಪಕ್ಷೀಯರ ಪರವಾದ ಖಟ್ಲೆಯಲ್ಲಿ ವ್ಯವಹರಿಸಿ ಮುಗಿಸಿ ರೈಲ್ವೇ ಸ್ಟೇಶನಿನ ಲೆವಲ್ ಕ್ರಾಸಿಂಗ್‌ನಲ್ಲಿ ತೇವರರ ಮೋಟರಿನಲ್ಲಿ ಹಿಂದೂ ಪತ್ರಿಕೆಯ ಪ್ರತಿನಿಧಿಯೊಡನೆ ಹೋಗುತ್ತಿದ್ದಾಗ ಕೆಲವು ಎತ್ತಿನ ಗಾಡಿಗಳು ಅವರ ಮೋಟರಿನ ಎದುರು ಬಂದವು. ಕಾರಿನ ಡ್ರೈವರನು ಕಾರನ್ನು ನಿಲ್ಲನೆ ನಡೆಸುತ್ತಿದ್ದಾಗ ಗಾಡಿಯವರು ಹಲವರು ಥಟ್ಟನೆ ಧುಮುಕಿ ಮೋಟರ್ ಕಾರಿಗೆ ಕಲ್ಲೆಸೆದು "ಕೊಲ್ಲಿರಿ! ಕೊಲ್ಲಿರಿ!" ಎಂದು ಬೊಬ್ಬಿಟ್ಟರು. ಅವರು ಮುತ್ತಿಗೆ ಹಾಕುವುದರೊಳಗಾಗಿ ಡ್ರೈವರನು ಥಕ್ಕನೆ ಮೋಟರನ್ನು ವೇಗವಾಗಿ ಓಡಿಸಲಾರಂಭಿಸಿದನು. ಅವರ ಬೆನ್ನಹತ್ತಿ ಧರಿದಾಯಗಾರರು ಬಂದರು ದರೂ ಅವರು ಹಿಂದುಳಿಯ ಬೇಕಾಯಿತು. ಡ್ರೈವರನ ಕೌಶಲ್ಯವಿಲ್ಲದಿದ್ದರೆ ಕಾರಿನಲ್ಲಿದ್ದವರ ಗತಿ ಬೇರೆ ಆಗುತ್ತಿತ್ತು. ಪೋಲೀಸರು ತನಿಖೆ ನಡೆಸುತ್ತಿರುವರು

---

## ಬೆಳಗಾಂವ

ಮಂಗಳೂರು ಸಿಟಿ ಆರ್ಯಸಮಾಜದ ಕಾರ್ಯಕರ್ತರೂ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಸಂಪಾದಕರೂ ಆಗಿರುವ ಶ್ರೀ ಬಿ ಎಲ್ ವಿದ್ಯಾರ್ಥಿಯವರು ಇದೇ ತಾ ೧೮ರಲ್ಲಿ ಬೆಳಗಾಂವಿಗೆ ಬಂದಿದ್ದು, ತಾ ೨ನೇ ಬುಧವಾರ ಇಲ್ಲಿಯ ಕೊಂಗ್ರೆಸ್ ಕೆಲಸಗಾರರು ಏರ್ಪಡಿಸಿದ್ದ "ಗಾಂಧೀ ಜಯಂತಿ"ಯ ನಗರ ಸಂಕೀರ್ತನೆಯಲ್ಲಿ ಭಾಗವಹಿಸಿದ್ದರಲ್ಲದೆ, ಸಾರ್ವಜನಿಕ ಸಭೆಯಲ್ಲಿ "ಗಾಂಧೀಜೀಯವರ ಜೀವನ ತತ್ವ, ಅವರ ಕಾರ್ಯದ ಅನುಕರಣೆ, ಅಹಿಂಸಾ ತತ್ವದ ನೆವದಿಂದ ಹಿಂದೂಗಳಲ್ಲಿ ಬೇರೂರಿದ ದಂಗೆಕೋರತನ" ಮೊದಲಾದ ವಿಷಯಗಳ ಕುರಿತು ಭಾಷಣವಿತ್ತರು.

ತಾ ೩ರಲ್ಲಿ, ಸಂಜೆ ಘಂಟೆ ೬ರಿಂದ ೧೦ರ ವರೆಗೆ ಇಲ್ಲಿನ ಸತ್ಯಮಠ ಮಂದಿರದಲ್ಲಿ ಶ್ರೀ ವಿದ್ಯಾರ್ಥಿಯವರು ಒಂದು ಹರಿಕಥಾ ಪ್ರಸಂಗವನ್ನು ಪೂರೈಸಿ ವರ್ತಮಾನ ಕಾಲದ ಹಿಂದೂ ಸಮಾಜವು ಬಲಶಾಲಿಯಾಗಬೇಕಾದರೆ ಹಿಂದೂ ಸಂಘಟನೆ ಪಥವೇ ವಿವಾಹ, ಜಾತಿ ಭೇದ ನಿವಾರಣೆ, ಬಾಲ್ಯ ವಿವಾಹ ನಿಷೇಧ ಇತ್ಯಾದಿಗಳ ಕುರಿತು ಉತ್ತಮ ರೀತಿಯಲ್ಲಿ ವಿವರಿಸಿದರು. ಊರ ಜನರು ತುಂಬಾ ನೆರೆದಿದ್ದರು

---

## ಹಿಂದೂ ಮುಸ್ಲಿಮ್ ಭೇದಭಾವವು ಉಲ್ಬಣಗೊಂಡಿದೆ.

ಸಂಯುಕ್ತ ಪ್ರಾಂತ್ಯದ ಸರಕಾರವು ಪೋಲೀಸ ಆಡಳಿತ ವರದಿಯಲ್ಲಿ ಪ್ರಾಂತ್ಯದ ಸ್ಥಿತಿಯನ್ನು ವಿವರಿಸುತ್ತಾ, ಹಿಂದೂ ಮುಸ್ಲಿಮರೊಳಗಿನ ಭೇದಭಾವವು ಉಲ್ಬಣಗೊಂಡಿದೆಯೆಂದೂ, ೧೯೩೩ರಲ್ಲಿ ೮ ಸಲ ಹಿಂದೂ ಮುಸ್ಲಿಮ್ ಗಲಾಟೆಯಾಗಿರುವಾಗ ಈ ವರ್ಷ ೩೫ ಸಲ ನಡೆದುದು ವಿಷಾದಕರವೆಂದೂ, ಇಂತಹ ಪರಿಸ್ಥಿತಿಯು ಪ್ರಾಂತ್ಯದ ಶಾಂತತೆಗೆ ವಿಘ್ನಕಾರಿಯಾದುದರಿಂದ ಇದರ ನಿವಾರಣೆಗಾಗಿ ಜನರೂ ಪತ್ರಿಕೆಗಳೂ ಅದಷ್ಟು ಸಾಹಸಪಡಬೇಕಾಗಿಯೂ ಕೇಳಿಕೊಂಡಿದೆ. ರಾಜಕೀಯ ತಪ್ಪಿತರುಗಳು ಈ ಪ್ರಾಂತ್ಯದಲ್ಲಿ ೧೯೩೩ರಲ್ಲಿ ೮೩೩ ... ರಲ್ಲಿ ೮೩ ಮಾತ್ರ

---

## ಆಕಾಶಬಾಣಗಳು ಸಿಡಿದುವು!
## 4 ಮಂದಿ ಮೃತರಾದರು!

ಮಿಮೆನ್‌ಸಿಂಗ್ ಒಕ್ಟೋ ೬

ಇಲ್ಲಿಯ ಒಬ್ಬನು ೬೦ ಆಕಾಶಬಾಣಗಳನ್ನು ಒಂದು ಕುಕ್ಕೆಯಲ್ಲಿ ಹಾಕಿಟ್ಟಿದ್ದನು. ಅವುಗಳಲ್ಲಿ, ಒಂದು ಬಾಣವು ಆಕಸ್ಮಾತ್ತಾಗಿ ಸಿಡಿಯಿತು. ಒಡನೆ ಇಡೀ ಕುಕ್ಕೆಯಲ್ಲಿನ ಸಿಡಿಮದ್ದುಗಳು ಸ್ಫೋಟನಗೊಂಡು ಮನೆಯೊಳಗಿದ್ದ ಆರು ಮಂದಿ ಘಾಯಗೊಂಡರು. ಅವರಲ್ಲಿ ನಾಲ್ವರು ಸ್ವಲ್ಪ ಹೊತ್ತಿನಲ್ಲಿ ಮರಣಹೊಂದಿದರು. ಉಳಿದವರು ನಿರಾಶಾಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿರುವರು.

---

ತಿರುವಾಂಕೂರಿನ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿನವರು ಕೊಲರಾ ರೋಗಬಾಧೆಯ ವರದಿಯನ್ನು ಪ್ರಕಟಿಸಿ, ಒಟ್ಟು ೧೨೪೩ ಮಂದಿ ಈ ರೋಗಕ್ಕೆ ತುತ್ತಾದರೆಂದು ಗೊತ್ತುಪಡಿಸಿರುವರು.

---

## ಕುರುಡಿಯು ಕಳ್ಳಿ ಅಪರಾಧಿತನಿಗೆ ಸೆರೆ ವಿಧಿಸಿದಳು.

ಆಗೋಸ್ತು ತಾ ೩ನೇ ರಾತ್ರಿ ೧೦ ಗಂಟೆಗೆ ತಿನ್ನೆವೆಲ್ಲಿಯ ಗೋಮತಿ ಅಮ್ಮಾಳ್ ಎಂಬ ಕುರುಡಿಯು ತನ್ನ ಸಣ್ಣ ಮನೆಯಲ್ಲಿ ಕುಳಿತಿದ್ದಾಗ ಅವಳ ಬಾಯಿಯ ಒಳ ಒಂದು ಕೈಯು ಬಂತು. ಅವಳು ಒಡನೆ ಬೊಬ್ಬಿಟ್ಟಳು. ಕೈಯು ಅವಳನ್ನು ಹಿಡಿಯಿತು. ಅಷ್ಟರಲ್ಲಿ ಅವಳು ಆ ಕೈಯ ಎರಡು ಬೆರಳುಗಳನ್ನು ಕಚ್ಚಿ ಗಾಯಗೊಳಿಸಿದಳು. ಆ ಕೈಯು ಕಂದಸ್ವಾಮಿ ಪಿಳ್ಳೆ ಎಂಬವನದಾಗಿತ್ತು. ಪಿಳ್ಳೆಯು ಮುದುಕಿಯ ಎಡಗಿವಿಯನು ಕತ್ತರಿಸಿ ಅದರಲ್ಲಿದ್ದ ಆಭರಣವನ್ನು ಒಯ್ದನು. ಪೋಲೀಸರು ಪತ್ತೆ ನಡೆಸಿ ಸ್ವಾಮಿಯನ್ನು ಹಿಡಿದು ವಿಚಾರಿಸಿದರು. ಅವನ ವಶವಿದ್ದ ಭಂಗಾರವು ಸಿಕ್ಕಿತು. ಆದರೆ ತಾನು ತಪ್ಪಿತಸ್ಥನಲ್ಲವೆಂದನು. ಅವನ ಎರಡು ಬೆರಳುಗಳನ್ನೇ ತಾನು ಕಚ್ಚಿರುವೆನೆಂದು ಮುದುಕಿಯು ಹೇಳಿದ ಆಧಾರದ ಮೇಲೆ ಅವರು ಪಿಳ್ಳೆಯ ಬೆರಳುಗಳನ್ನು ಪರೀಕ್ಷಿಸಲಾಗಿ ಅವುಗಳು ಮನುಷ್ಯನ ಹಲ್ಲುಗಳಿಂದ ಕಚ್ಚಲ್ಪಟ್ಟಿರುವುದು ನಿಜವೆಂದು ತಿಳಿದುಬಂತು. ಪಿಳ್ಳೆಗೆ ೬ ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು

---

## ಪೋಲೀಸನಿಗೆ ಗುಂಡುಹಾಕಿದರು.

ಕಲ್ಕತ್ತ, ಒಕ್ಟೋ. ೩

ಇಲ್ಲಿಯ ಬದರ್‌ಪುರದಲ್ಲಿ ಫಜಲ್ ಷಹಾನೆಂಬ ಪಂಜಾಬಿ ಪೋಲೀಸನು ಕಾವಲು ನೋಡುತ್ತಿದ್ದಾಗ, ಅವನ ಕಾಲಿಗೆ ಎರಡು ಗುಂಡುಗಳು ಬಿದ್ದುವು. ಯಾರು ಬಿಟ್ಟರೆಂದು ತಿಳಿಯಲಾಗಲಿಲ್ಲ. ಅವನೊಡನೆ ಅಲ್ಲೇ ಪಹರೆ ಮಾಡುತ್ತಿದ್ದ ಅಬ್ದುಲ್ ಜಬ್ಬರ್ ಎಂಬ ಪೋಲೀಸನು ಮಾತ್ರ ತಪ್ಪಿಸಿಕೊಂಡಿರುವನು

---

## ಪಂಡಿತ ಜವಾಹರಲಾಲರು.

ತಾ ೨೮—೯ ರಲ್ಲಿ ಬೆಡನ್‌ವೀಲರ್‌ನಿಂದ ಹೀಗೆ ಬರೆದಿರುವರು —

ನಾನು ಬಿಡುಗಡೆಹೊಂದಿರುವುದಕ್ಕಾಗಿ ನನಗೆ ದೇಶದ ಹಲವೆಡೆಗಳಿಂದ ಬಂದಿರುವ ಸಂದೇಶಗಳನ್ನು ಓದಿನೋಡುವಷ್ಟು ಕೂಡಾ ಬಿಡುವಿಲ್ಲದೆ ಹೋಯಿತು. ನಾನು ನೆಟ್ಟಗೆ ಇತ್ತ ಬಂದುಬಿಟ್ಟೆ. ನನ್ನ ಅಲ್ಲಹಾಬಾದಿನಿಂದ ನನಗೆ ಇನ್ನೂ ಸಂದೇಶಗಳು ಬರುತ್ತಿವೆಯೆಂದೂ ಎಷ್ಟೋ ಈ ಮೊದಲೇ ಬಂದಿವೆಯೆಂದೂ ತಿಳಿದುಬಂದಿದೆ. ಇವುಗಳನ್ನು ನೋಡಿ ಈಗ ನನ್ನ ದೇಶಬಾಂಧವರಿಗೆ ನನ್ನ ಮೇಲಿರುವ ಪ್ರೀತಿಯೆಷ್ಟೆಂದು ತಿಳಿದು ಆನಂದಿತನಾಗಿರುವೆನು. ಸರ್ವರೂ ಬಳಿಗಿರುವ ಕಷ್ಟದ ವೇಳೆಯಲ್ಲಿ ಸರ್ವರೂ ಅನ್ಯೋನ್ಯಭಾವದಿಂದಿರುವುದು. ಸ್ವಲ್ಪವೇ ನಾನು ಪ್ರತ್ಯಪ್ರತ್ಯೇಕ ಪತ್ರಗಳನ್ನು ಬರೆಯದಿರುವುದಕ್ಕೂ ಇಷ್ಟು ತಡವಾಗಿ ವಂದನೆಗಳನ್ನು ಅರ್ಪಿಸುದುದಕ್ಕೂ ನನ್ನನ್ನು ಕ್ಷಮಿಸಲಾಗಲಿ. ಹಿಂದಿನ ಮೈತ್ರಿಯು ಮುಂದೂ ಇರುವುದು. ಏನಾದರೂ, ಅದು ಅಲ್ಲೇ ಇರುವುದು.

---

## ವಿಮಾನವು ಧ್ವಂಸವಾಯಿತು.

ಕಂಪ್ಲ ಎಂಬಲ್ಲಿ ಹಂಸ್ರೋ ಎಂಬ ವಿಮಾನವು ಎನ್ ಟೆಬ್ಬೆ ಎಂಬ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಾಗ ನೆಗೆದು ಭೂಮಿಗೆ ಹೊಡೆದು ಪುಡಿಯಾಯಿತು. ಅದರಲ್ಲಿದ್ದ ಪ್ರಯಾಣಿಕರು ೧೫ ಅಡಿಗಳ ಕೆಳಗೆ ಕೂಡಲೇ ಹಾರಿದರು.

---

## ಪುರಾಣಪುರುಷರನ್ನು ನಿಂದಿಸಿದುದಕ್ಕಾಗಿ ನಿಷೇಧಸಭೆ.

ರಾಜಮಂಡ್ರಿಯಲ್ಲಿ ಶ್ರೀ ಕಾಶಿ ಕೃಷ್ಣಾಚಾರ್ಯರವರ ಅಧ್ಯಕ್ಷತೆಯಲ್ಲೊಂದು ಮಹಾಸಭೆಯು ಜರಗಿ ಕೆಲವು ತೆಲುಗು ಬರಹಗಾರರು ರಾಮ, ಹರಿಶ್ಚಂದ್ರ, ಸಾವಿತ್ರಿ, ಸತ್ಯವಾನ್, ಸೀತಾ ಚಂದ್ರಮತಿ ಮೊದಲಾದ ಪುಣ್ಯಪುರುಷರನ್ನು ನಿಂದಿಸಿ, ಅವರ ಮೇಲೆ ಅಲ್ಲಸಲ್ಲದ ಆರೋಪಗಳನ್ನು ಹೊರಿಸಿದುದಕ್ಕಾಗಿ ಠರಾವು ಮಾಡಿ ಖಂಡಿಸಿದರು.

---

## ಉಡುಪಿಗೆ ಮುನಿಸಿಪಾಲಿಟಿ

ಮದ್ರಾಸು, ಒಕ್ಟೋಬರ ೪

ಉಡುಪಿಯನ್ನು ನವಂಬರ ೧ರಿಂದ ಮುನಿಸಿಪಾಲಿಟಿಯನ್ನಾಗಿ ಮಾಡಬೇಕೆಂದು ಸರಕಾರವು ನಿರ್ಣಯಿಸಿದೆ.

# ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು - ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ— (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

## ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.






Distributors for South Kanara —

**Raghavendra Ranga Pai, Car Street, Mangalore.**

ಕುಂದಾಪುರ ಪ್ರವರ್ತಕರು:—ಕಾಮತ್ ಸ್ವದೇಶೀ ಎಂಪೋರಿಯಂ

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ

ಜೀವನದ [illegible] ದಲ್ಲಿ [illegible] ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

[illegible] ರೋಗ್ಯಕ್ಕೆ [illegible] ಕವಚವು

[illegible] 2 [illegible] 1

[illegible]

[illegible]

—Shah Company MANGALORE
Pearl & Sons MANGALORE

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.


ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

## ಸಾಮಾನ್ಯ ವಿಜ್ಞಾನ.

**ಚರಿತ್ರೆ ಮತ್ತು ಕಥೆಗಳು.**

| | ರೂ | ಅ | ಪೈ |
|---|---|---|---|
| ನಾಲ್ಕನೇ ದರ್ಜೆ | 0 | 6 | 0 |
| ಮೂರನೇ ,, | 0 | 4 | 6 |
| ಎರಡನೇ ,, | 0 | 4 | 0 |

**ಸಾಮಾನ್ಯ ವಿಜ್ಞಾನ.**

| | | | |
|---|---|---|---|
| ಎರಡನೇ ದರ್ಜೆ | 0 | 3 | 0 |
| ಮೂರನೇ ,, | 0 | 3 | 0 |
| ನಾಲ್ಕನೇ ,, | 0 | 6 | 0 |
| ಐದನೇ ,, | 0 | 5 | 0 |

**ಸಮಾಜಶಾಸ್ತ್ರ.**

| | | | |
|---|---|---|---|
| ಐದನೇ ದರ್ಜೆ | 0 | 3 | 0 |
| ನಾಲ್ಕನೇ ,, | 0 | 8 | 0 |
| ಮೂರನೇ ,, | 0 | 2 | 6 |
| ಆರನೇ ದರ್ಜೆ | 0 | 4 | 0 |
| ಏಳನೇ ,, | 0 | 5 | 0 |
| ಎಂಟನೇ ,, | 0 | 6 | 0 |

## ಅಜ್ಜ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅರ್ಗಣೆ ಮುದ್ದೆ.
ಇಲಿಗಳ ಥಕ್ಕ ಥೈ.
ಅಂಗಳ ದುಗ್ಗ.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೆಯ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

## ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

# ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.

ದಪ್ಪಗಿನ ಅಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ¼ ಆಕಾರದ ೧೮೩ ಪುಟಗಳು

ಉತ್ತಮ ಕರಡ ಹಾಸ್ಯ.

ಬೆಲೆ. 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

# ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು]

ಉಪಾಧ್ಯಾಯ.—(ಹುಡುಗರ ಮನೆ ಕೋಪಿಯನ್ನು ನೋಡುತ್ತಾ) ರಂಗಾ, ನಿನ್ನ ಅಕ್ಷರಗಳು ಚೆನ್ನಾಗಿಲ್ಲದ್ದರಿಂದ ಕಡಮೆ ಮಾರ್ಕುಗಳನ್ನು ಕೊಟ್ಟಿದ್ದೇನೆ. ಹೆಚ್ಚಿಗೆ ಮಾರ್ಕುಗಳು ಸಿಕ್ಕಬೇಕಾದ್ರೆ ಇದಕ್ಕಿಂತಲೂ ಉತ್ತಮವಾಗಿ ಬರಿಯಬೇಕು, ತಿಳಿಯಿತೇ?

ಹುಡುಗ—ನಿನ್ನೆ ನೀವೇ ಹೇಳಿದ್ದಲ್ಲ ಸಾರ್, "ಅತಿಆಶೆ ಗತಿಗೇಡು" ಯಾವಾಗಲೂ ಅತಿ ಆಶೆ ಮಾಡಬಾರದು ಎಂತ. ನನಗೆ ಸಿಕ್ಕಿದ ಮಾರ್ಕುಗಳೇ ಸಾಕು ಸರ್. ಅದರಲ್ಲಿಯೇ ತೃಪ್ತಿ.

\+ + + +

ಯಜಮಾನ—ಎಲೋ, ಮೇಜಿನ ಮೇಲೆ ಇದ್ದ ಪುಸ್ತಕ ಏನಾಯ್ತೋ?

ಆಳು.—ತಾವು ಹೇಳಿದ್ದಲ್ಲ ಬುದ್ಧಿ ಪೋಸ್ಟು ಮಾಡಲಿಕ್ಕೆ

ಯಜಮಾನ—ಥೂ! ಕತ್ತೆ ಕಾಗ್ದವನ್ನು ಪೋಸ್ಟು ಮಾಡಲಿಕ್ಕೆ ಹೇಳಿದ್ದಲ್ಲವೇ?

ಆಳು—ಅಲ್ಲ ಬುದ್ಧಿ, ಬುಕ್‌ಪೋಸ್ಟು ಮಾಡಿ ಬಾ ಎಂತ ತಾವೇ ಹೇಳಿದ್ದೀರಿ

\+ + + +

ಮೇಸ್ಟ್ರು—ಛೀ ಮೂಢಾ, ನಿನ್ನ ವಯಸ್ಸಿನಲ್ಲಿ ನಾನು ಚೆನ್ನಾಗಿ ಲೆಕ್ಕಗಳನ್ನು ಮಾಡುತ್ತಿದ್ದೆನು

ಹುಡುಗ—ಇರಬಹುದು ಸರ್ ನಿಮ್ಮ ಮೇಸ್ಟ್ರು ಬಹಳ ಗಟ್ಟಿಗರಾಗಿದ್ದಿರಬಹುದು.

\+ + + +

ಸಾಲಗಾರ—ಏನಯ್ಯಾ, ನಿಮ್ಮ ಮನೆಗೆ ತಿರುಗಿ ತಿರುಗಿ ಸಾಕಾಯಿತು ಈಗ ಖಂಡಿತವಾಗಿ ಕೊಟ್ಟೇ ತೀರಬೇಕು

ಬಾಕಿಗಾರ—ರಾಯರೇ ನಾಡದು ನಾಯಂಕಾಲ ಆರು ಗಂಟೆಗೇ ಬಂದರೆ ಪುನಃ ಯಾವಾಗ ಬರಬೇಕೆಂದು ಖಂಡಿತವಾಗಿ ಹೇಳುತ್ತೇನೆ.

\+ + + +

ಜಡ್ಜಿ—(ಕೈದಿಗೆ) ಎಲೋ, ನೀನೇ ತಪ್ಪಿತಸ್ಥನೆಂತ ಖಂಡಿತವಾಗಿ ನನಗೆ ತೋರುತ್ತದೆ ಏನಾದರೂ ಹೇಳಲಿಕ್ಕಿದೆಯೋ?

ಕೈದಿ—ಸ್ವಾಮಿ ತಮ್ಮ ಬುದ್ಧಿಗಿಂತಲೂ ಮೇಲು ನನ್ನ ಬುದ್ಧಿಯೋ ನನ್ನದು ಕೂಡಾ ತಮ್ಮ ಅಭಿಪ್ರಾಯದಂತೆಯೇ?

\+ + + +

ತಂದೆ—ಮಗೂ, ಶಾಲೆಯಲ್ಲಿ ಪ್ರಥಮತ ದೇವರ ಪ್ರಾರ್ಥನೆ ಮಾಡುವುದು ಏತಕ್ಕೆ?

ಮಗ—ಮೇಸ್ಟ್ರು ಹೊಡೆಯಬಾರದಾಗಿ ದೇವರ ಪ್ರಾರ್ಥನೆ ಮಾಡುವುದು ಅಪ್ಪಾ

P Rama Rao.

ಒಬ್ಬ—ಟಿಕೇಟಿನ ದರಗಳು ಹೇಗಿವೆ ಸ್ವಾಮಿ?

ನಾಟಕದ ಮೆನೇಜರ—ಒಂದು ರೂಪಾಯಿ, ಎಂಟು ಆಣೆ ಮತ್ತು ನಾಲ್ಕು ಆಣೆಗಳು

ಒಬ್ಬ—ಮೂರು ದುಡ್ಡಿನ ಒಂದು ಟಿಕೇಟು ಕೊಡಿ, ಯಾವುದಾದರೂ ಒಂದು ಮೂಲೆಯಲ್ಲಿ ನಿಂತು ನೋಡುತ್ತೇನೆ ಸ್ವಾಮಿ

\+ + + +

ಗಂಡ—ಲೇ, ನೀನು ಇರುವ ತನಕ ಸುಖವಿಲ್ಲ, ನೀನು ಸತ್ತಮೇಲಾದರೂ ಸಿಕ್ಕಬಹುದು

ಹೆಂಡತಿ—ನನಗೂ ಹಾಗೇ ಆಗಿದೆ ನೋಡಿ

\+ + + +

ಜಡ್ಜ—ನೀನು ಅಪ್ಪನನ್ನು ಕೊಂದುದಕ್ಕೆ ನಿನಗೆ ಶಿಕ್ಷೆ ವಿಧಿಸುತ್ತೇನೆ. ಶಿಕ್ಷೆಯನ್ನು ಅನುಭವಿಸಿಬಂದ ಮೇಲಾದರೂ ಅಂಥ ಕೆಲಸ ಮಾಡಬೇಡ ತಿಳಿಯಿತೇ?

ಅಪರಾಧಿ:—ತಿಳಿಯಿತು ಬುದ್ಧಿ! ಆದರೆ ಆ ಶಿಕ್ಷೆ ಯಾವುದು?

ಜಡ್ಜ:—'ಫಾಶಿ' ಶಿಕ್ಷೆ ಅಷ್ಟೆ!

\+ + + +

ಗಿರಾಕಿ.—ಸಾಹುಕಾರರೇ ಎಲ್ಲಿಗೆ ಹೋಗಿದ್ದೀರಿ?

ಸಾಹುಕಾರ.—ವಸೂಲಿಗೆ ಹೋಗಿದ್ದೆ, ಆದರೆ ಸಿಕ್ಕಿದ್ದೆಂದರೆ 'ವ' ತೆಗೆದರೆ ಉಳಿಯುವಂಥಾದ್ದು.

\+ + + +

ಮೆಜಿಸ್ಟ್ರೇಟ—ನಿನಗೆ ೧೦ ವರ್ಷಗಳ ಕಠಿಣ ಸಜೆ ವಿಧಿಸಿದ್ದೇನೆ

ಕಳ್ಳ—ಕದಿಯುವುದು ನನ್ನ ಮಾಮೂಲ್ ಹಕ್ಕಾಗಿದೆ, ಮೊನ್ನೆ ತಾವು ಮಾಮೂಲ್ ಹಕ್ಕಿಗಾಗಿ ಒಬ್ಬನನ್ನು ಬಿಟ್ಟಿದ್ದೀರಿ ಹಾಗೇ ನನ್ನನ್ನೂ ಕೂಡಾ ಬಿಟ್ಟರಾಗದೆ?

\+ + + +

ಒಬ್ಬ—ನೀನು ಸೂರ್ಯಸ್ನಾನ ಮಾಡುವುದು ಯಾವ ಕಾಲದಲ್ಲಿ?

ಇನ್ನೊಬ್ಬ—ಹೆಚ್ಚಾಗಿ ಮಳೆಗಾಲದಲ್ಲಿ!

\+ + + +

ಮಗ—ಅಪ್ಪಾ, ನನಗೊಂದು ಕಾಗ್ದದ ತುಂಡು ಕೊಡುವಿರಾ?

ತಂದೆ—ನಿನಗಲ್ಲದೆ ಮತ್ತಾರಿಗೆ ಕೊಡಲಿ ಮಗೂ?

ಮಗ—ಹಾಗಾದರೆ, ಅರಸರ ಮೋಹರು ಇದ್ದದ್ದು, ಇಡೀ ಕಾಗ್ದದಲ್ಲಿ ೫, ೫ ಎಂತ ಬರೆದದ್ದು, ಒಂದು ಕಾಗ್ದದ ತುಂಡು ಕೊಡಿ

\+ + + +

ಸಾಹುಕಾರ—ಪ್ರತಿಯೊಂದು ಪತ್ರಿಕೆಯ ಸಂಪಾದಕರು, "ಏನಾದರೂ ಬರೆದು ಕಳುಹಿಸಿರಿ ಈ ಸರ್ತಿ ಪ್ರಕಟಿಸುತ್ತೇವೆ" ಎಂದು ನನಗೆ ಬರೆಯುತ್ತಾರೆ

ಸ್ನೇಹಿತ—ನೀವು ಏನನ್ನು ಬರೆದು ಕಳುಹಿಸಬೇಕಂತೆ?

ಸಾಹುಕಾರ ಬರೇ ಜಾಹೀರಾತು

\+ + + +

ಉಪಾಧ್ಯಾಯ—ಲೋ, ಕತ್ತೆ, ನಾಯಿ, ಹೊಲೆಯಾ ಯಾಕೋ ನೀನು ಪಾಠ ಓದಿಕೊಂಡು ಬರಲಿಲ್ಲ?

ವಿದ್ಯಾರ್ಥಿ—ಒಮ್ಮೆಲೇ ನಾನು ಕತ್ತೆ, ನಾಯಿ, ಹೊಲೆಯಾ ಹೇಗಾಗೋದು ಸರ್?

\+ + + +

ಈತ—ಏನು ಕೋಪವನ್ನು ಸಂಪೂರ್ಣವಾಗಿ ಬಿಟ್ಟಿದ್ದೇನೆ

ಆತ—ಹೇಗೆ ಬಿಟ್ಟೆ?

ಈತ.—ಹೇಗೆ ಬಿಟ್ಟರೆ ನಿನಗೇನು? ನಡಿ ನೋಡುವಾ ಅತ್ತಲಾಗೆ

\+ + + +

ಗಿರಾಕಿ—ಸ್ವಾಮಿ, ಪಂಡಿತರೇ ನೀವು ಎಷ್ಟು ಜನರನ್ನು ಕೊಂದಿದ್ದೀರಿ?

ಪಂಡಿತರು—ಇಷ್ಟರ ತನಕ ಯಾರನ್ನೂ ಕೊಲ್ಲಲಿಲ್ಲ

ಗಿರಾಕಿ—ಹಾಗಾದರೆ, ನೀವು ಪಂಡಿತರಲ್ಲ, ಯಾಕೆ ಗೊತ್ತೋ?—'ಶತ ಹತ್ಯೇನ ಪಂಡಿತ' ನೂರು ಜನರನ್ನಾದರೂ ಕೊಂದ ಬಳಿಕ ಪಂಡಿತರಾಗಬಹುದು

\+ + + +

ಅವನು—ಟುವೆಲಿಗೆ ಏನು ಕ್ರಯ ಸ್ವಾಮಿ?

ಇವನು—ಒಂದಾಣೆ

ಅವನು—ಟುವೆಲು ಒಂದಾಣೆಯಷ್ಟು ದೊಡ್ಡದು ಇಲ್ಲವಲ್ಲಾ!

ಇವನು—ಹಾಗಾದರೆ, ಎಂಡಾಣೆದ್ದು ಸಣ್ಣ ಬೆಳ್ಳಿಯ ಪಾವಲಿ ಕೊಟ್ಟುಬಿಡು

\+ + + +

ಉಪಾಧ್ಯಾಯ—ನೀನು ಸತ್ಯ ಇದ್ದುದ್ದನ್ನು ಹೇಳಿದರೆ ನಿನಗೆ ಹೊಡೆಯುವುದಿಲ್ಲ

ವಿದ್ಯಾರ್ಥಿ.—ನಾನು ಹೇಳುತ್ತಿದ್ದೆ ಸರ್, ಆದರೆ, ನಾನು ಮೌನವ್ರತವನ್ನು ಹಿಡಿದಿದ್ದೇನಲ್ಲಾ

\+ + + +

ಒಬ್ಬ—ಏನಾದರೂ ಮುರಿದು ಹೋದರೆ ಬೇರೆ ಹಾಕಿಸಿಕೊಡುತ್ತೇನೆ ಎಂದು ನಿಮ್ಮ ಸೈಕಲು ತೆಗೆದುಕೊಳ್ಳುವಾಗ ಹೇಳಿದ್ದಿರಲ್ಲ?

ಇನ್ನೊಬ್ಬ—ಹೌದು

ಒಬ್ಬ—ಹಾಗಾದರೆ, ನನ್ನ ಕಾಲು ಗಂಟು ಮುರಿದು ಹೋಗಿದೆ. ಬೇರೆ ಕೊಡಿ

K Achutha Pai

## ವೈಕುಂಠವಾಸಿ ಮೊಕ್ತೇಸರ ಶ್ರೀ ಕಾರ್ಕಳ ವೆಂಕಟ್ರಾಯ ಪ್ರಭುಗಳವರು,

ಇನ್ನೊಂದು ಖಾನೆಸುಮಾರಿಯ ಕಾಲಕ್ಕೆ ತಮ್ಮ ಸಂಖ್ಯಾಬಲ ಹೆಚ್ಚಾಗಿದೆ ಎಂದು ತೋರಿಸಿಕೊಳ್ಳುವುದಕ್ಕಾಗಿಯೋ ಯಾವ ಮತದವರೂ ಅಸ್ಪೃಶ್ಯರನ್ನು ಸೇರಿಸಿಕೊಳ್ಳುವ ಹಾಗಿಲ್ಲ ಧರ್ಮ-ಮತ—ಎಂಬುದರ ಶಬ್ದಾರ್ಥ ಜ್ಞಾನವಾದರೂ ಉಳ್ಳ ಯಾವನೂ ಸಾಮಾಜಿಕ ನ್ಯೂನತೆಗಳಿಗಾಗಿ ಮತಾಂತರ ಹೊಂದಲಾರನು; ಅಥವಾ ಇಂತಹನನ್ನು ತನ್ನ ಮತಕ್ಕೆ ಸೇರಿಸಿಕೊಂಡು ಆಂತಹನು ಉದ್ಧಾರ ಹೊಂದಲಾರನು ಬೆದರಿಕೆ ತೋರಿಸಿ, ಅಥವಾ ಮುಂದೆ ಮಹಾ ವಿಪತ್ತನ್ನು ತರುವೆವೆಂದು ಈಗ ಬೆದರಿಸಿ ಮೇಲ್ಜಾತಿಯವರನ್ನು ಒತ್ತಾಯಗೊಳಿಸುವುದು ಸಲ್ಲದು, ಅದಕ್ಕಾಗಿ ಸ್ವಜಾತಿಯ ಹಾಗೂ ಸ್ವಸಮಾಜದ ಮೇಲ್ಮೆಯನ್ನು ಸಾಧಿಸಲು ಯಾವನು ಪ್ರಯತ್ನಿಸುವನೋ ಅವನು ತನ್ನ ಸ್ಥಾನವನ್ನು ಬಿಟ್ಟುಕೊಡದೆ ಸ್ವಧರ್ಮ ಪಾಲಿಸಲೂ ಹೆಚ್ಚಿನ ಸೌಕರ್ಯಗಳಿಗಾಗಿ ಹೋರಾಡುತ್ತಲೂ ಇರುವನಾದರೆ ಮಾತ್ರ, ಏಳಿಗೆಯು ಸಾಧ್ಯವಾಗಿದೆ ಹೊರತು,-ಪರಂಪರಾಗತವಾಗಿಯೂ ಮಜ್ಜಾಗತವಾಗಿಯೂ ಇರುವ ಸ್ವಧರ್ಮವನ್ನು ತ್ಯಜಿಸಬೇಕೆಂದು ಪ್ರಯತ್ನಿಸಿದರೆ, ಅದೆಂದಿಗೂ ಸಂಪೂರ್ಣ ಸಾಧ್ಯವಾಗುವಂತಿಲ್ಲ.

**ಮಾನನೀಯ ಮದ್ರಾಸು ಗವರ್ನರವರು**

ನಮ್ಮ ಜಿಲ್ಲೆಯನ್ನು ಸಂದರ್ಶಿಸಲು, ಪತ್ನೀಯುಕ್ತರಾಗಿಯೂ ಪರಿವಾರ ಸಮೇತರಾಗಿಯೂ ದಯೆಮಾಡಿಸಿರುವರು ಸ್ಥಳೀಯ ಸಂಸ್ಥೆಗಳ ಬಿನ್ನವಗಳನ್ನು ಲಾಲಿಸಿ, ಸರಕಾರದ ಧೋರಣೆಗೆ ತಕ್ಕಂತಹ ಉತ್ತರಗಳನ್ನು ಅಪ್ಪಣೆ ಕೊಡಿಸಿ, ಪ್ರಾಮುಖ್ಯ ದೃಶ್ಯ ಸಂಘ ಕಾರ್ಖಾನೆಗಳನ್ನು ನೋಡಿ, ಈ ಜಿಲ್ಲೆಯ ಸದ್ಯಸ್ಥಿತಿಗೆ ಒಂದು ಅಂದಾಜನ್ನು ಕಟ್ಟುವರು ಸರಕಾರದ ಧೋರಣೆಯು ಅಷ್ಟು ಬದಲಾಗಿಲ್ಲವೆಂದೇ ತೋರುವಂತೆ ಉತ್ತರಕೊಡ ಬಂದಾಗಲಾದರೂ ಮುಂದಸ್ಥಿತವಾಗಿಯೂ ಮನನೀಯದಂತೆಯೂ, ಆದುವುದರಿಂದ, ಅರಿಕೆಗಳು ನಿರಾಕರಣ ಹೊಂದಿದವರೂ ಆಶಾಭಂಗವಾದುದಕ್ಕೆ ಮನಸ್ಸು ಕಳವಳಿಸುವಂತಿಲ್ಲ, ಪ್ರಭುಗಳು ವಿನಯಸಂಪನ್ನರೂ ಸಹಾನುಭೂತಿಯುತರೂ ಆಗಿರುವರೆಂದು ಅವರನ್ನು ಕಂಡರೇ ವಿದಿತವಾಗುತ್ತಿದೆ ಬೋರ್ಡು ಮ್ಯುನಿಸಿಪಾಲಿಟಿಗಳು ಸಹಾಯ ಕೇಳಬಹುದಾದಲ್ಲಿ ಇನ್ನೂ ಅಂದಾಜುಗಳು ಸರಿಯಾಗಿಲ್ಲವೆಂದೂ, ಅಂದಾಜುಗಳನ್ನು ಸರಿಮಾಡಿ ಒಪ್ಪಿಸಿರುವ ಪ್ರಸಂಗಗಳಲ್ಲಿ ಸರಕಾರದ ನಿಯಮಗಳು ಇವುಗಳಿಗೆ ಅನುಕೂಲವಾದುವಲ್ಲ ಎಂದೂ ತಿಳಿದುಬಂದಿದೆ ಈ ಸಲ ಜನರೊಳಗೆ ಹೆಚ್ಚಿನ ಚಟವಟಿಕೆಗಳಿದ್ದು ನಾಗರಿಕರೂ ಒಳ್ಳೇ ಶಿಸ್ತಿನಲ್ಲಿ ವಿನಯದಿಂದಿದ್ದು ಪೋಲೀಸರೂ ಈ ಸಂದರ್ಶನದ ಉತ್ಸವಗಳನ್ನು ನೆರವೇರಿಸಿರುವರು

**ಶ್ರೀ॥ ದ. ರಾ. ಬೇಂದ್ರೆಯವರು**

ಇಲ್ಲಿನ ತನಕ ಪುತ್ತೂರಿಂದ ದಯಮಾಡಿಸಿದರು ಕೆನರಾ ಹೈಸ್ಕೂಲಿನಲ್ಲಿ ಇವರು ಮಾಡಿರುವ ಭಾಷಣವು, ಹೊಸ ಕವನಗಳನ್ನು ಕುರಿತಾಗಿ ಕಂಡುಬರುವ ತೀಕ್ಷ್ಣ ವಿಮರ್ಶೆಗಳನ್ನು ತಕ್ಕಷ್ಟು ಸಮಾಧಾನಗೊಳಿಸುವುದಕ್ಕಾಗಿಯೂ, ಇನ್ನೂ ಆಕ್ಷೇಪಗಳಿದ್ದಲ್ಲಿ ಅವುಗಳನ್ನು ಹೋಗಲಾಡಿಸ ವುದಕ್ಕಾಗಿಯೂ ಆಗಿದ್ದಿತು ಹೊಸ ಕವಿತೆಗಳ ಯಥಾರ್ಥ ತತ್ವವನ್ನು ವಿವರಿಸಿ, ಅದನ್ನು ಆಕ್ಷೇಪಿಸುವುದರಲ್ಲಿ ಕೂಡ ಯಾವ ಮನೋಭಾವವಿದ್ದರೆ ಚೆನ್ನಾಗುವುದು ಎಂದು ಓದುಗರಿಗೂ ವಿಮರ್ಶಕರಿಗೂ ವಿವರಿಸಿರುವರು ಹೊಸ ಕವನಕ್ಕೆ ಕೈಹಚ್ಚುವವರೂ ಈ ತತ್ವಗಳನ್ನು ತಿಳಿದು ತಮ್ಮ ರಚನೆಗಳನ್ನು ಪ್ರಕಟಿಸಿದರೆ ಉತ್ತಮವಾಗುವುದೆಂಬುದರಲ್ಲಿ ಸಂದೇಹವಿಲ್ಲ ತತ್ವ ರಚನೆ-ವಿಮರ್ಶೆಗಳು ಒಂದೇ ದೃಷ್ಟಿಯಿಂದ ನಡೆವಂತಾದರೆ, ಸಾಹಿತ್ಯಕ್ಷೇತ್ರದಲ್ಲಿ ತೊಡಕಿರದು ವಿಮರ್ಶಕರೆಲ್ಲರೂ ಪುರಾತನವಾದಿಗಳಾಗಿಲ್ಲ, ಅಥವಾ ಹಳತುದೇ ಶಾಶ್ವತವಾಗಿರಲೆನ್ನುವವರೂ ಅಲ್ಲ. ಕೃತಿಗಳು ಬಾಳುವ ಯೋಗ್ಯತೆಯುಳ್ಳವಾಗಿ, ವಾಚನಾಭಿರುಚಿಯನ್ನು ಜನರಲ್ಲಿ ಬೆಳೆಸುವಂತಾಗಲೆಂದೇ ಅವರಲ್ಲಿ ಕೆಲವರಾದರೂ ಸೂಚಿಸುವವರು ಅಂತೂ, ರಾ॥ ಬೇಂದ್ರೆಯವರು ವಿಮರ್ಶೆಯ ಸಮಸ್ಯೆಯನ್ನು ಕೂಲಂಕಷ ವಿವರಿಸಿರುವುದಕ್ಕೆ ಅವರಿಗೆ ಧನ್ಯವಾದಗಳು

**ಕಾಂಗ್ರೆಸ್ ಅಧ್ಯಕ್ಷರು**

ಮದ್ರಾಸಿಗೆ ದಯೆಮಾಡಿಸಿರುವರು ಕಾರ್ಪೊರೇಶನಿನ ಪರವಾಗಿ ಅವರಿಗೆ ಒಂದು ಮಾನಪತ್ರವು ಸಲ್ಲದ ಹಾಗೆ, ಕೆಲವರ ದುರಾಗ್ರಹದಿಂದ ನಿರ್ಣಯವಾಗಿದ್ದರೂ, ಮೂವತ್ತು ಸಾವಿರ ಜನರು ಅವರನ್ನು ರೈಲ್ವೆ ಸ್ಟೇಶನಿನಿಂದ ಮೆರವಣಿಗೆಯಾಗಿ ಸ್ವಾಗತೀಕರಿಸಿಕೊಂಡರು ಜನರಲ್ಲಿ ರಾಷ್ಟ್ರಸಭೆಯಲ್ಲಿರುವ ಭಕ್ತಿಯು ಯಾವ ಪ್ರಕಾರದಲ್ಲೂ ಕಡಿಮೆಯಾಗಿಲ್ಲವೆಂದೇ ಈ ಸಂಭ್ರಮವು ಸೂಚಿಸುತ್ತಿದೆ ಸ್ವಾತಂತ್ರ್ಯಸಿದ್ಧಿಗಾಗಿಯೂ ಜನದ ಬಡ ನಿವಾರಣೆಗಾಗಿಯೂ ಬಾಬು ರಾಜೇಂದ್ರ ಪ್ರಸಾದರು ಬಹಳವಾಗಿ ಪರಿಶ್ರಮಪಟ್ಟವರು, ಈ ಮಧ್ಯೆ ಕಾಂಗ್ರೆಸ್ಸಿನಲ್ಲಿ ಇತ್ತೀಚೆಗೆ ಉಂಟಾಗಿರುವ ಪಂಗಡಗಳನ್ನು ಜಾಗೂ ಪ್ರವೀಣತೆಯಿಂದಲೂ ವಿವೇಕದಿಂದಲೂ ನಡೆಸಿಬರುವುದರಲ್ಲಿ ಜಾಣ್ಮೆಯನ್ನು ಪ್ರದರ್ಶಿಸಿ ಇನ್ನಷ್ಟು ಕೀರ್ತಿಯನ್ನು ಸಂಪಾದಿಸಿಕೊಂಡಿರುವರು ಕಾಂಗ್ರೆಸ್ ಸಭೆ ಎಂಬುದು ಬರೀ ಒಂದು ಪಂಗಡ ಮಾತ್ರವೇ ಅಲ್ಲ, ಕನಿಷ್ಠ ತರಗತಿಯ ಜನ ಸರ್ವಾಂಶವೂ ಸಮಸ್ತರನ್ನೂ ಏಕಪ್ರಕಾರವಾಗಿ ಲಕ್ಷಿಸಿ ನಡೆಸುವುದಕ್ಕೂ ಸಮಸ್ತ ಸಮಾಜಗಳನ್ನು ಏಕಪ್ರಕಾರವಾಗಿ ಒಂದುಗೂಡಿಸಿ ನಡೆಸುವುದಕ್ಕೂ ಈ ಸಭೆಯೇ ಬಾಧ್ಯವಾಗಿದೆ ಜನಾಂಗದ ಐಕ್ಯತೆಗೂ ಪೂರ್ಣ ಸ್ವರಾಜ್ಯಕ್ಕೂ ಹೋರಾಡುವ ಈ ಸಂಸ್ಥೆಯ ಮೇಲೆ ಜನಗಣದ ವಿಶ್ವಾಸವು ತುಂಬ ಇದೆ ಎಂದು ಈ ಮೆರವಣಿಗೆಯ ಸಂಭ್ರಮವು ತೋರಿಸಿಯದೆ

# ಮಂಗಳೂರು.

ಇದೇ ತಿಂಗಳ ತಾ. ೧೯ನೇ ಬೆಳಗ್ಗೆ ಗಂಟೆ ೯-೩೦ಕ್ಕೆ ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ ಜರಗಲಿರುವ ಹಿಂದೀ ಭಾಷಣಸ್ಪರ್ಧೆಗೆ ಈ ಮೊದಲು ಕೊಟ್ಟಿರುವ ಹತ್ತು ವಿಷಯಗಳಲ್ಲಿ ಈ ಕೆಳಗಿನ ಮೂರು ವಿಷಯಗಳು ಮಾತ್ರ ಇಡಲ್ಪಟ್ಟಿವೆ—(೧) ಲೋಕಮಹಾಪುರುಷ್, (೨) ಸ್ವದೇಶಿ ಪ್ರಚಾರ, (೩) ಸಮಾಜಕೀ ಬುರಿ ಪ್ರಥಾಯೆ ಎಂದು ಕೆ ದೇವಪ್ಪ ಆಳ್ವ ಹಿಂದೀ ಪ್ರಚಾರಕರು ಇವರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ವೈದ್ಯಕೀಯ ಸಂಘದ ಒಂದು ಸಭೆಯು ಇದೇ ತಾ ೧೯ರಲ್ಲಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಜರಗಲಿದೆ ಶ್ರೀ ಎಂ ಉಮೇಶರಾವ್, ಎಲ್ ಎಂ ಎಂಡ್ ಎಸ್ ಇವರು ಭಾಷಣ ಕೊಡುವರು

ಈಗಾಗಲೇ ಮಂಗಳೂರಿನಲ್ಲಿ ಸ್ಥಾಪಿತವಾದ "ದಿ ಎಂಡ್ರೂಸಿಯಾ ಕೆಮಿಕಲ್ ಕಂಪೆನಿ"ಯು ಕಳೆದ ತಾ ೧೪-೧೦-೪೫ನೇ ಆದಿತ್ಯವಾರ ಸಾಯಂಕಾಲ ೪ ಗಂಟೆಗೆ ಶ್ರೀಮಾನ್ ಬಿ ಶ್ರೀನಿವಾಸರಾವ್ ಬಿ ಎ ಬಿ ಇ ನಿವೃತ್ತ ಡಿ ಬೋ ಇಂಜಿನಿಯರ್ ಇವರ ಅಧ್ಯಕ್ಷತೆಯಲ್ಲಿ ಪುರಪ್ರಮುಖರ ಸಭೆ ಕೂಡಿಸಿ "ನಕ್ಷರಿ ಡ್ರಾಪ್ಸ್" ಎಂಬ ಸರ್ವರೋಗನಾಶಿನೀ ಸ್ವದೇಶಿ ಔಷಧದ ಉಪಕಾರವು ಇಲ್ಲಿನ ಜನರಿಗಾಗಲೆಂದು ಧರ್ಮ ಔಷಧಾಲಯವೊಂದು ಪ್ರಾರಂಭಿಸಿತು ನೆರೆದವರಿಗೆ ಉಪಹಾರ ಸತ್ಕಾರಾದಿಗಳು ಮುಗಿದ ನಂತರ ಸಭಿಕರಲ್ಲಿ ಕೆಲವರ ಭಾಷಣಗಳಾದುವು ಸದಾ ಬಂಧು ಸಮಾನವಾದೀ ಸಿದ್ಧೌಷಧದ ವಿಷಯವಾಗಿ ಶ್ರೀ ಎಂ ಪಾಯಸ್ ಇವರು ಸ್ವಾನುಭವದಿಂದ ಸ್ಫೂರ್ತಿದಾಯಕವಾಗಿ ಹಾಗೂ ಹೃದಯಂಗಮವಾಗಿ ಭಾಷಣಮಾಡಿ "ನಾನಿಂದು ಜೀವಿತವಾಗಿರಲು ಇದೇ ಔಷಧವು ನನಗೆ ನೆರವಾಯಿತು ಎಂದು ಕೊನೆಗೆ ಒತ್ತಿಹೇಳಿದರು ಅಧ್ಯಕ್ಷರ ಸಂಕ್ಷಿಪ್ತಭಾಷಣವು ಕೊನೆಗೆ ಮುಗಿದನಂತರ ಕಾರ್ಯದರ್ಶಿ ಮಂಡಳಿಯು ಸರ್ವರಿಗೂ ಧನ್ಯವಾದಗಳನ್ನರ್ಪಿಸಿ ಮುಂದೆ ಈ ನಾಡಿನಲ್ಲಿ ಜನೋಪಕಾರ ಮಾಡಲಿರುವ ಸಂಸ್ಥೆಗೆ ಸದಾ ಅನುಕೂಲವಾಗಲೆಂದು ವಿನಂತಿಮಾಡಿದರು ಗಣಪತಿಯ [illegible] ಗಾನ ಶ್ರವಣ ಆದಾಗ ಸಂಸ್ಥೆಯ ಬಹುಮಾನಾರ್ಹವಾದ ಒಳ್ಳೆ ಒಂದು ಗ್ರೂಪ್ ಫೋಟೋ ತೆಗೆದು ಅಂದಿನ ಸಭೆ ವಿಸರ್ಜನೆಯಾಯಿತು

ತಾ ೧೨-೧೦-೪೫ಕ್ಕೆ ಅಂತ್ಯವಾಗುವ ವಾರದ ಮಂಗಳೂರು ನಗರ ಸಭೆಯ ಆರೋಗ್ಯ ವಾರ್ತೆಯು ವರದಿಯಿಂದ ತಿಳಿದುಬರುವದೇನೆಂದರೆ [illegible] ಮುನಿಸಿಪಾಲಿಟಿಯೊಳಗೆ ಒಟ್ಟು [illegible] ಜನನಗಳೂ ಆಗಿವೆ

ಪವಿತ್ರ ಯಾತ್ರಾಸ್ಥಳವಾದ [illegible] ದೇವಸ್ಥಾನದಿಂದ ಶ್ರೀ ಕೋದಂಡರಾಮ ಸ್ವಾಮಿಯ ದೇಗುಲವನ್ನು ಜೀರ್ಣೋದ್ಧಾರಗೈಯಲು ಮಂಗಳೂರಿನ ಸುಜನಿಯರನೇಕರು ಉದಾರಚಿತ್ತದಿಂದ ಧನಸಹಾಯ ಮಾಡಲು ಒಪ್ಪಿರುವ ವಿಷಯವು ಸರ್ವರಿಗೂ ತಿಳಿದ ಸಂಗತಿಯಾಗಿದೆ ಅವರೆಲ್ಲರ ಹೆಸರುಗಳನ್ನೂ ಮೊದಲೊಮ್ಮೆ ಸದ್ರಿ ಫಂಡಿನ ಕಾರ್ಯದರ್ಶಿಗಳಾದ ಶ್ರೀ [illegible] ಸರ್ವೋತ್ತಮ ಪೈಗಳವರು ಸೂಚಿಸಿದ ಮೇರೆಗೆ ಪ್ರಕಟಿಸಿದ್ದೇವೆ ಇಂದು ಅವರು ಮಾಡಿದ ಧನಸಹಾಯವು ಒಟ್ಟು ಎಷ್ಟೆಂದು ಈ ಕೆಳಗೆ ತಿಳಿಸಲಾಗಿದೆ ಸ್ಥಳದ ಅಭಾವದಿಂದಾಗಿ ಅವರ ಹೆಸರುಗಳನ್ನು ಈ ಸಲ ಪ್ರಕಟಿಸಲಾಗಲಿಲ್ಲ ಮಂಗಳೂರಿನವರಲ್ಲದೆ ಬಾಕಿ ಪಲ ಕಡೆಗಳಿಂದ ಧನಸಂಚಯವಾಗಿದ್ದು ಅದನ್ನೂ ಕೆಳಗೆ ನಮೂದಿಸಿದ್ದೇವೆ—

| | | |
|---|---|---|
| ಮಂಗಳೂರು | ರೂ | ೧೪ ೨೪೪ |
| ಬಂಟ್ವಾಳ | | ೧ ೨೦೦ |
| ಉಡುಪಿ | | ೩,೧೦೦ |
| ಪುತ್ತೂರು | | ೨ ೦೦೦ |
| ಹಳೆಮಂಗಳೂರು | | ೫೦೦ |

ದೇವಸ್ಥಾನದ ಹಿಂಬದಿಯಲ್ಲಿರುವ ಬಾಲಿ ಸ್ಥಳವನ್ನು ರಾಜಾ ಆಫ್ ರಾಮ್ನಾಡ್ ಮತ್ತು ಪಂಚಾಯತ ಬೋರ್ಡಿನಿಂದ ಕ್ರಯಕ್ಕೆ ಪಡೆಕೊಂಡಿರುತ್ತದಾಗಿಯೂ, ಅದರ ಮೊಬಲಗನ್ನು ಅಲ್ಲಿಯ ಮಿಜಾರು ಅಣ್ಣಪ್ಪ ಅನಂತ ಪೈಗಳವರು ಕೊಡುವುದಾಗಿ ವಾಗ್ದಾನಮಾಡಿರುವುದಾಗಿಯೂ ಸದ್ರಿ ಫಂಡಿನ ಕಾರ್ಯದರ್ಶಿಯವರು ತಿಳಿಸುತ್ತಾರೆ

ಕೋರ್ಟಿಕಾರ್ ಸರ್ಕಲಿನಲ್ಲಿ ಮಹಮ್ಮದಿಯರಿಗಾಗಿ ಪ್ರತ್ಯೇಕಿಸಲ್ಪಟ್ಟ ಸ್ಥಾನಕ್ಕೆ, ಬರುವ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಶ್ರೀ ಎಚ್. ಎಚ್ ಮಡೆಯರ್‌ರವರು ಉಮೇದ್ವಾರರಾಗಿ ನಿಲ್ಲುತ್ತಾರೆಂದು ತಿಳಿದುಬರುತ್ತದೆ

ಕಳೆದ ತಾ. ೧೪ನೇ ಆದಿತ್ಯವಾರ, [illegible] ರಜೆಯ ಮೇಲೆ ಬಂದಿರುವ ನಮ್ಮ ನಗರದ ಪ್ರಸಿದ್ಧ ಅಟಿಗಾರರಾದ ಶ್ರೀ ಮಂಜುನಾಥ ಸುವರ್ಣರಿಗೆ ಅವರ ಮಿತ್ರರು ಒಂದು ಭೋಜನಸತ್ಕಾರವಿತ್ತು ಗೌರವಿಸಿದರು

ನಮ್ಮ ಘನಾಸ್ಪ ಗವರ್ನರರು, ಪತ್ನೀ ಪರಿವಾರ ಸಹಿತ ತಾ ೧೪ರ ಬೆಳಗ್ಗೆ ಇಲ್ಲಿಗೆ ದಯಮಾಡಿಸಿ, ಗವರ್ನಮೆಂಟ್ ಕಾಲೇಜಿನ ಭವನದಲ್ಲಿ ಮ್ಯುನಿಸಿಪಾಲಿಟಿಯ ಡಿ ಬೋರ್ಡಿನ ಮಾನಪತ್ರಗಳನ್ನು ಸ್ವೀಕರಿಸಿದರು ಶ್ರೀ ಲಕ್ಷ್ಮೀನಾಥ ಸ್ವಾಮಿಜಿಯವರಿಗೆ ರಾವ್ ಸಾಹೇಬ್ ಸನ್ನದನ್ನೂ, ಇತರರಿಗೆ ಯುದ್ಧ ಪದಕಗಳನ್ನೂ ದಯಪಾಲಿಸಿದರು, ಮತ್ತೆ ಮೆಸರ್ಸ ಎ ಅಲ್ಬುಕರ್ಕ ಎಂಡ್ ಸನ್ಸರ ಹಂಚಿನ ಕಾರ್ಖಾನೆ, ಮೆಸರ್ಸ ಪಿ ಎಫ್. ಎಕ್ಸ್ ಸಾಲ್ಡಾನಾ ಆಂಡ್ ಸನ್ಸರ ಕಾಫಿ ವರ್ಕ್ಸ, ಕಾಮನ್‌ವೆಲ್ತ ಹೊಸಯಿಂ ಫ್ಯಾಕ್ಟರಿಗಳನ್ನು ಸಂದರ್ಶಿಸಿ ಮಹಮ್ಮದೀಯ, ಕ್ರೈಸ್ತ ಡೆಪ್ಯುಟೇಶನುಗಳನ್ನು ಬರಮಾಡಿಕೊಂಡು ಸಂಜೆ ಗವರ್ನಮೆಂಟ್ ಕಾಲೇಜಿನಲ್ಲಿ ಕೆಲವು ಬಹುಮಾನಗಳನ್ನೂ, ಪದಕಗಳನ್ನೂ ಹಂಚಿದರು, ಅಂದು ಗವರ್ನರರ ಪತ್ನಿಯವರು, ಇಲ್ಲಿಯ ಉಪಾಧ್ಯಾಯಿನಿಯರ ಟ್ರೈನಿಂಗ್ ಶಾಲೆಯನ್ನು ಸಂದರ್ಶಿಸಿದರು ತಾ ೧೫ರಲ್ಲಿ ಬೆಳಗ್ಗೆ ಗಂಟೆ ೧೦-೩೦ಕ್ಕೆ ಕೆನರಾ ಹೈಸ್ಕೂಲಿನ ಪುಸ್ತಕ ಭಂಡಾರ ಮತ್ತು ಮ್ಯೂಸಿಯಮ್ಮಿನ ಶಿಲಾ ಕಟ್ಟಡವನ್ನು ತೆರೆದರು ಕಲೆಕ್ಟರರ ಬಂಗಲೆಯಲ್ಲಿ ಕೆಲವು ಸದ್ಗೃಹಸ್ಥರ ಭೇಟಿಯನ್ನು ಮಾಡಿದರು ಮಿಲಾಗ್ರಿಸ್ ಶಾಲೆ ಮತ್ತು [illegible] ಸಂದರ್ಶಿಸಿದರು ಗವರ್ನರ ಪತ್ನಿಯವರು ಸೈಂಟ್ ಜೋಸೆಫ್ಸ ಮಹಿಳೆಯ ಕೈಗಾರಿಕೆ ಮಹಿಳಾ ಸಭೆ ಸೈಂಟ್ ಎಲೋಶಿಯಸ ಕಾಲೇಜು ಲೇಡಿ ಗೋಷನ್ ಆಸ್ಪತ್ರೆಗಳನ್ನು ಸಂದರ್ಶಿಸಿದರು ಗವರ್ನರರು ಪತ್ನಿ ಸಹಿತ ಸಂಜೆ ನಮ್ಮ ಡಿ ಜಡ್ಜರಲ್ಲಿ ಗಾರ್ಡನ್ ಪಾರ್ಟಿಯಲ್ಲಿ ಭಾಗವಹಿಸಿದರು ತಾ ೧೬ರಲ್ಲಿ ಗವರ್ನರರು ವೆನ್‌ಲಾಕ್ ಆಸ್ಪತ್ರೆಯನ್ನು ಸೈಂಟ್ ಜೋಸೆಫರ ಕೈಗಾರಿಕೆ ಸಂಸ್ಥೆಯನ್ನೂ ಸಂದರ್ಶಿಸಿದರು ಬೆಳಗ್ಗೆ ಗಂಟೆ ೧೧ಕ್ಕೆ ಗವರ್ನರರು ಪತ್ನಿ ಸಹಿತ ಉಪ್ಪಿನಂಗಡಿಗೆ ತೆರಳಿ ಕುಮಾರಧಾರಾ ನದಿಯ ಸೇತುವೆಯನ್ನು ತೆರೆದರು ತಾ ೧೭ರಲ್ಲಿ ಮೂಡಬಿದರೆಯ ಜೈನಬಸದಿ ಅರಮನೆಗಳ ಸಂದರ್ಶನವನ್ನೂ ಅನಂತರ ಕಾರ್ಕಳ ಗೋಮಟೇಶ್ವರನ ದರ್ಶನವನ್ನೂ ಹಿರಿಯಂಗಡಿ ಜೈನಸ್ತಂಭದ ನೋಟವನ್ನೂ [illegible] ನೋಡಿದರು ತಾ ೧೮ರ ಶುಕ್ರವಾರದಲ್ಲಿ ಗವರ್ನರರು ಪತ್ನೀಸಹಿತ [illegible] ಫಾದರ್ ಮುಲ್ಲರರ ಸಂಸ್ಥೆ ಮತ್ತು ಕುಷ್ಠರೋಗಿಗಳ ಆಸ್ಪತ್ರೆಯ ಸಂದರ್ಶನ, ಅನಂತರ ಗವರ್ನರರು ಸೈಂಟ್ ಆ ಕಾಲೇಜನ್ನು ಸಂದರ್ಶಿಸಿ ಬಹುಮಾನ ಹಂಚುವರು [illegible] ಹೈಸ್ಕೂಲಿನ ಸಂದರ್ಶನ ಗವರ್ನರರ ಪತ್ನಿಯವರು ಅಂದು ಸೈಂಟ್ ಆಗ್ನೆಸ್ ಕಾಲೇಜ್ ಮತ್ತು ಕಾನ್ವೆಂಟ್ ಸೈಂಟ್ ಎನ್ಸ್ ಕಾನ್ವೆಂಟನ್ನು ಸಂದರ್ಶಿಸುವರು [illegible] ಗವರ್ನರ್ ದಂಪತಿಗಳಿಗೆ ನಮ್ಮ ಕಲೆಕ್ಟರರ ಬಂಗಲೆಯಲ್ಲಿ ಗಾರ್ಡನ್ ಪಾರ್ಟಿ ರಾತ್ರಿ ಮಾನ್ಯ ಗವರ್ನರ್ ಸಾಹೇಬರು ಮಂಗಳೂರನ್ನು ಬಿಟ್ಟು ಕೊಟ್ಟಾಯತ್ತಕ್ಕೆ ತೆರಳುವರು

## ಡಿ ಬೋರ್ಡ್ ಮತ್ತು ಮಂಗಳೂರು ಮುನಿಸಿಪಾಲಿಟಿಯ ಬಿನ್ನಹಗಳಿಗೆ ಗವರ್ನರರ ಉತ್ತರ

ಮ್ಯುನಿಸಿಪಾಲಿಟಿಯ ಮತ್ತು ಡಿಸ್ಟ್ರಿಕ್ಟ ಬೋರ್ಡಿನ ಮಾನಪತ್ರಗಳೆರಡಕ್ಕೂ ಒಟ್ಟಿಗೆ ಮಾನ್ಯ ಗವರ್ನರರು ಒಂದು ಉತ್ತರವನ್ನು ದಯಪಾಲಿಸುವಲ್ಲಿ ಮೊದಲಾಗಿ ಮಂಗಳೂರಿನ ಪ್ರಾಕೃತಿಕ ಸೌಂದರ್ಯವನ್ನೂ ಪ್ರಜೆಗಳ ಆದರಾತಿಥ್ಯಪೂರ್ವಕವಾದ ಸುಸ್ವಾಗತವನ್ನೂ ಉಚಿತ ವಚನಗಳಿಂದ ಅಭಿನಂದಿಸಿದರು ಮುನಿಸಿಪಾಲಿಟಿಯ ಅರಿಕೆಗಳಲ್ಲಿ ಮೊದಲನೆಯದಾದ ಆ ವಿಶೇಷ ಪ್ರಾತಿನಿಧ್ಯದ ಪ್ರಶ್ನೆಯನ್ನು ಕುರಿತು, ಪ್ರಾಂತಿಕ ಸರಕಾರವು ಇದುವರೆಗೆ ಒಂದು ನಿಶ್ಚಯಕ್ಕೆ ಬಂದಿಲ್ಲವಾಗ್ಯೆ, ಅಂತಹ ನಿಶ್ಚಯಕ್ಕೆ ಬರುವಾಗ ನಮ್ಮ ಸರಕಾರವು ಈ ಅರಿಕೆಗಳನ್ನು ನೆನಪಿಸಲ್ಪಡುವ(?) ರಾಷ್ಟ್ರೀಯ ಡಿಲಿಮಿಟೇಶನ್ ಕಮಿಟಿಗೆ ಯೋಗ್ಯ ಸೂಚನೆಗಳನ್ನೇ ಕೊಡುವುದಾಗಿಯೂ ಎರಡನೆಯದಾದ ಟೌನ್ ಹಾಲಿನ ಕುರಿತು, ಅಗತ್ಯವುಳ್ಳ ಫಂಡನ್ನು ಪ್ರಥಮತ ಸಂಗ್ರಹಿಸಿಕೊಂಡು ಸರಕಾರಕ್ಕೆ ತಿಳಿಸಿದ್ದಲ್ಲಿ, ಕಟ್ಟಡಕ್ಕೆ ಅಗತ್ಯವುಳ್ಳ ಸ್ಥಳವನ್ನು ಕೊಡುವ ಕುರಿತು ವಿಚಾರ ಮಾಡಲಾದೀತಾಗಿಯೂ, ಮೂರನೆಯದಾದ ಕುಡಿಯುವ ನೀರಿನ ಸರಬರಾಯಿ ವಿಷಯದಲ್ಲಿ ಸರಕಾರದ ಸಹಾಯವನ್ನು ಅಷ್ಟಾಗಿ ಅಪೇಕ್ಷಿಸುವ ಬದಲು ಆರ್ಥಿಕ ಪರಿಸ್ಥಿತಿಯನ್ನನುಸರಿಸಿ ಸಾಲಕ್ಕಾಗಿ(?) ಮನವಿ ಮಾಡಿದ್ದಲ್ಲಿ ನೋಡಲಾದೀತಾಗಿಯೂ, ನಾಲ್ಕನೆಯದಾದ ರಸ್ತೆಗಳ ಕುರಿತು ಆಗಲೇ ಆಲೋಚನೆಯಾಗಿದೆಯಾಗಿಯೂ, ಭಟ್ಟಕಳದಲ್ಲಿ [illegible] ಕ್ಕೆಯ ಜಾಡ್ಯದ ಕುರಿತು ಸಂತಾಪವನ್ನು ಸೂಚಿಸಿ ಧೂಳಿನ ಹಾವಳಿಯನ್ನು ನಿಲ್ಲಿಸುವ ಬಗೆಗೆ ರಸ್ತೆಗಳನ್ನು ಹಾರುಮಾಡುವ ಮ್ಯುನಿಸಿಪಾಲಿಟಿಯ ಆ ಯೋಜನೆಗೆ ಅಗತ್ಯವುಳ್ಳ ಸಾಲವನ್ನು ಮ್ಯುನಿಸಿಪಾಲಿಟಿಯು [illegible] ಯನ್ನನುಸರಿಸಿ ಆದ [illegible] ಕೊಡಿಸುವ ಆಲೋ[illegible] ಅಪ್ಪಣೆಕೊಡಿಸಿದ [illegible] ಳೂರು ಮ್ಯುನಿಸಿಪಾಲಿಟಿಯಲ್ಲಿ [illegible] ಗಳಂತ ಕೌನ್ಸಿಲು ಮತ್ತು ಕಮಿಷನರರೊಳಗೆ ಕಲಹವಾಗಲಿ ವೈಮನಸ್ಯವಾಗಲಿ ಇಲ್ಲದೆ, ಕೆಲಸವು ಸುಸೂತ್ರವಾಗಿಯೇ ಸಾಗುತ್ತಿರುವ ಸಂಗತಿಯನ್ನು ಎತ್ತಿ ಹಿಡಿದು ಮಾನ್ಯ ಗವರ್ನರರು ಅದನ್ನು ಚೆನ್ನಾಗಿಯೇ ಶ್ಲಾಘಿಸಿದರು

ಡಿಸ್ಟ್ರಿಕ್ಟ ಬೋರ್ಡಿನ ಅನೇಕ ಅರಿಕೆಗಳಲ್ಲಿ ಜಿಲ್ಲೆಯ ಶೋಚನೀಯ ಪರಿಸ್ಥಿತಿಯ ವಿಷಯವಾದ ಮೊದಲನೆಯ ಅವರ ಆ ಹೃದಯದ್ರಾವಕ ವರ್ಣನೆಗೆ ಅತ್ಯಂತ ಪಶ್ಚಾತ್ತಾಪವನ್ನು ಸೂಚಿಸುವುದರೊಂದಿಗೆ ಆ ವರ್ಣನೆಯಲ್ಲಿ ಕೊಂಚಮಟ್ಟಿಗೆ ಅತಿಶಯೋಕ್ತಿಯೂ ಇರುವುದಾಗಿ ತಮಗೆ ಕಂಡುಬರುವುದಾಗಿಯೂ ಪ್ರಪಂಚಮಯವಾದ ಆರ್ಥಿಕ ಮುಗ್ಗಟ್ಟಿನಲ್ಲಿ ಈ ಜಿಲ್ಲೆಯ ಮುಗ್ಗಟ್ಟೂ ಒಂದಾಗಿದ್ದರೂ, ಅನುಕೂಲವಿದ್ದಷ್ಟು ಮಟ್ಟಿಗೆ ಸೌಕರ್ಯಗಳನ್ನು ತಮ್ಮ ಸರಕಾರವು ಕೊಡದೆಯೇನೂ ಇಲ್ಲವಾಗಿಯೂ ಕಾಲ ಸುಕ್ರಮವಾಗಿ ನಡೆಯಬೇಕಾಗಿರುವ ರಿಟ್ರೆಂಚ್‌ಮೆಂಟು ಕ್ರಮದ ವಿಷಾದನೀಯವಿದ್ದರೂ [illegible] ಗಳಿದ್ದೇ ಇವೆಯಾಗಿಯೂ ರಿಜರ್ವ ಕಾಡುಗಳ ಕುರಿತು ೧೯೩೦ನೆಯ ಇಸವಿಯಲ್ಲಿ ಸರಕಾರದವರು ತೋರಿದ್ದ ಆ ರಿಯಾಯತಿಗಳನ್ನು ಪ್ರಜೆಗಳೇ ಉಪಯೋಗಕ್ಕೆ ತಂದುಕೊಳ್ಳದೆ ಹೋದ ಬಳಿಂದ ಅವನ್ನು ಹಿಂತೆಗೆಯಬೇಕಾಗಿ ಬಂದ ವಿಷಯ [illegible] ಕಾಡುಮೃಗಗಳ ಹಾವಳಿಗೆ ಸಾಕಷ್ಟು ಕೋವಿ ಲೈಸನ್ಸುಗಳ ಪರಿಯೋಜನವು ಆಗಲೇ ದೊರಕಿರುವುದರಿಂದ ಅದನ್ನೇ [illegible] ಸಾಧ್ಯ [illegible] ಮುಂದೆ ಆಲೋಚನೆ [illegible] ವಿಷಯವು ಮತ್ತು ಆಲೋಚಿಸತಕ್ಕದೇ ಆದ್ದ ಸಾಧ್ಯವಾದ ಮಟ್ಟಿಗೂ ಹಾಗೆ ಆಲೋಚಿಸಲ್ಪಡುವುದಾಗಿಯೂ ಮಂಗಳೂರಿಂದ ಉಡುಪಿಗೆ ರೈಲುಮಾರ್ಗದ ವಿಚಾರವು ಪ್ರಾಂತಿಕ ಸರಕಾರದ ಅಧಿಕಾರವನ್ನು ಮೀರಿದ ದಾಗಿಯೂ ರಸ್ತೆಗಳ ಮತ್ತು ಸೇತುವೆಗಳ ವಿಚಾರವಾಗಿ ಸರಕಾರದಿಂದ ಪ್ರತ್ಯೇಕ ಆಲೋಚಿಸಲ್ಪಡಲಾಗುತ್ತಿರುವ ಶ್ರೀ [illegible] ಪವರ್ ಯೋಜನೆಯ ಕುರಿತು ಅದೊಂದು ನಿಶ್ಚಯಕ್ಕೆ ಬಂದಾಗ ಇತರ ಜಿಲ್ಲೆಗಳೊಡನೆ ಈ ಜಿಲ್ಲೆಯ ಅವಶ್ಯಕತೆಯ [illegible] ಆಲೋಚಿಸಲಾದೀತಾಗಿಯೂ, ಮಂಗಳೂರಿಂದ [illegible] ಈ ಜಿಲ್ಲೆಯನ್ನು ನೋಡಬೇಕಾದರೆ [illegible] ಬದಲು ಇತರ ಜಿಲ್ಲೆಗಳಿಂದಲೂ [illegible] ವೃದ್ಧಿಯಲ್ಲೇ [illegible] ಈ ಜಿಲ್ಲೆಯವರು [illegible] ಅಗತ್ಯವುಳ್ಳ ದ್ರವ್ಯವನ್ನು ಹೊಂದಿಸಿಕೊಂಡೂ ಸಾಧ್ಯವಿದ್ದಲ್ಲಿ ಇತರ [illegible] ಗಳನ್ನು ತಗ್ಗಿಸಿ ಖರ್ಚ ಕಡಿಮೆ ಮಾಡಿಕೊಂಡೂ ಏರ್ಪಾಟು ಮಾಡಿಕೊಳ್ಳತಕ್ಕದ್ದಾಗಿಯೂ ಬೋರ್ಡ ಶಾಲೆಗಳಿಗೆ ಬೇಕಿದ್ದ ಕಟ್ಟಡಗಳ ವಿಷಯದಲ್ಲಿ ಅಗತ್ಯವುಳ್ಳ ಗ್ರಾಂಟುಗಳ ಕುರಿತು ಸರಕಾರಕ್ಕೆ ಯಾವ [illegible] ಮನವಿಯೂ ಇದುವರೆಗೆ ಬಾರದಿದ್ದುದರಿಂದಲೇ [illegible] ವಿದೆಯಾಗಿ, ಆ ತರ ಮನವಿ ಬಂದಲ್ಲಿ ಮುಂದೆ ಆಲೋಚಿಸಲಾದೀತಾಗಿಯೂ, ಮುಂತಾಗಿ ಪ್ರತ್ಯುತ್ತರವನ್ನು ದಯಪಾಲಿಸಿದ್ದಾರೆ

ಸ್ಥಳೀಯ ಶ್ರೀ ಕೃಷ್ಣ ಸಿನೇಮಾ ಮಂದಿರದಲ್ಲಿ ಬರುವ ತಾ ೧೯ರಿಂದ ದಿ ಫ್ರೂಟ್ ಫೈಟ್ ಪೆಡ್ಲರ್ ಎಂಬ ಅತ್ಯುಜ್ವಲ ಚಿತ್ರವು ಪ್ರದರ್ಶಿಸಲ್ಪಡುತ್ತದೆ. ಈ ಚಿತ್ರದಲ್ಲಿ ಉಚ್ಛವರ್ಗದ ನಟನಟಿಯರು ಪಾತ್ರವಹಿಸುವರು. ತಾ ೨೪ರಿಂದ ಯುನಿವರ್ಸಲಿನವರ 'ಪ್ರೈವೇಟ್ ಟ್ರೆಜರು' ಎಂಬ ಸೀರಿಯಲ್ ಚಿತ್ರವೂ, ತಾ ೨೫ರಿಂದ 'ಮೊಗಲ್ ಕೀ ಮೌಜ್' ಎಂಬ ಇಂಪೀರಿಯಲ್ ಚಿತ್ರವೂ, ತಾ ೨೮ರಿಂದ 'ಲೈಫ್ ಆಫ್ ಜೀಸಸ್' ಎಂಬ [illegible] ಮಾತಾಡುವ ಚಿತ್ರವೂ ಪ್ರದರ್ಶಿಸಲ್ಪಡಲಿರುವುದು

ಮಂಗಳೂರು ಕೋ ಆಪರೇಟಿವ್ ಟೌನ್ ಬ್ಯಾಂಕಿನ ವರ್ಷಾವಧಿ ಮಹಾ ಸಭೆಯು ಇದೇ ತಿಂಗಳ ತಾ. ೨೧ನೇ ಆದಿತ್ಯವಾರ ಮಧ್ಯಾಹ್ನ ಗಂಟೆ ೩ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಜರಗುವುದು.

# ತಾಲೂಕುಗಳಿಂದ

[illegible] ಶಾಲೆಯಲ್ಲಿ ಶ್ರೀ ಶಾರದಾ ಪೂಜೆಯನ್ನು [illegible] ಪಟೇಲ್ ಕೃಷ್ಣನ್‌ನಾಯರ್‌ರವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿಸಲಾಯಿತು

**ಚೆಂಬುಗ್ರಾಮ**—ಸಂಪಾಜೆಗೆ ಸೇರಿದ್ದಲ್ಲಿರುವ ಚೆಂಬುಶಾಲೆಯಲ್ಲಿಯೂ ತಾರೀಖು ೬-೧೦-೪೫ರಲ್ಲಿ ಶಾರದಾ ಪೂಜೆಯು ಮಡಿಕೇರಿ ಸರ್ಕಲಿನ ಸ್ಕೂಲ್ ಸುಪರ್‌ವೈಸರರ ಅಧ್ಯಕ್ಷತೆಯಲ್ಲಿ ಆಡಂಬರದಿಂದ ಆಚರಿಸಲ್ಪಟ್ಟಿತು.

**ಪುತ್ತೂರು**—ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲ್ಕುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರ್ಷ ೧೯೪೫ನೇ ಇಸವಿ ನವಂಬರ ತಿಂಗಳು ೧ನೇ ತಾರೀಕಿನಿಂದ ಅದೇ ತಿಂಗಳ ೨೬ನೇ ತಾರೀಕಿನ ವರೆಗೆ ಜರಗುವುದು ಅಂದರೆ ಸಂತೆಯು ಕಾರ್ತಿಕ ಪೌರ್ಣಮಿ ದಿವಸ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆಯ ದಿವಸ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ದಿವಸದ ತನಕ ಜರಗುವುದು ಸಂತೆಗೆ ಬಂದ ಪ್ರತಿಯೊಂದು ಜಾನುವಾರಿನ ಮೇಲೆ ಎರಡಾಣೆ ಫೀಸು ವಸೂಲು ಮಾಡಲಾದೀತು ಎಂದು ಆ ಎಚ್ ಎಸ್ ಅಬ್ರಹಾಮ್ ರವರು ಡಿವಿಜನಲ್ ಆಫೀಸರರು ತಿಳಿಸುತ್ತಾರೆ

**ಪಡುಬಿದ್ರೆ**—ಸ್ಥಳೀಯ [illegible] ಮಂದಿರದಲ್ಲಿ ಎಂದಿನಂತೆ ನಡೆಯಬೇಕಾದ [illegible] ಮಹೋತ್ಸವದ ಮಂಗಲೋತ್ಸವವೂ ಸಜ್ಜನ ಪ್ರದೀಪ ವಾಚನಾ ಮಂದಿರದ ಜನ್ಮೋತ್ಸವವೂ ವಿಜಯ ದಶಮಿಯ ಉತ್ಸವವೂ ಏಕರೀತಿಯಿಂದ ನಡೆದಿರುತ್ತದೆಂಬುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ

**ಹೊಸದುರ್ಗ**—ಬರುವ ಡಿ ಬೋ ಚುನಾವಣೆಯಲ್ಲಿ ಈ ಸರ್ಕಲಿನ [illegible] ರಿಜರ್ವ ಸ್ಥಾನಕ್ಕೆ [illegible] ಗ್ರಾಮದ ಯಂ [illegible] ಎಂಬವರು ಉಮೇದ್ವಾರರಾಗಿ ನಿಲ್ಲುವರೆಂದು ತಿಳಿದುಬಂದಿದೆ

**ಕುಂದಾಪುರ**—ಇಲ್ಲಿಯ ಕರ್ನಾಟಕ ಸಂಘ ಸಂಘದ [illegible] ಸಭೆಯು ತಾ ೧೪ ೧೦ ೪೫ರಲ್ಲಿ [illegible] ಕಂಟೀವಾರ್ ಬಿ ಎ ಎಲ್ ಟಿ [illegible] ಅಧ್ಯಕ್ಷತೆಯಲ್ಲಿ ಜರಗಿತು [illegible] ಸಂಘದ ಕಾರ್ಯದರ್ಶಿಗಳಾದ ಶ್ರೀ ಎಚ್ [illegible] ಸಭೆಯ ವರದಿಯನ್ನು ಓದಿ [illegible] ಶ್ರೀ ಗೋಪಾಲಕೃಷ್ಣ ಅಡಿಗರು [illegible] ಸಂಸ್ಕೃತಿಯು" [illegible] ಮಾಡಿದರು [illegible] ಕನ್ನಡ ಪಂಡಿತರಾದ [illegible] ಶ್ರೀ [illegible] "[illegible] ಕನ್ನಡ ಸಾಹಿತ್ಯ" ಎಂಬ ವಿಷಯದಲ್ಲಿ ಉದಾತ್ತವಾದ ಶೈಲಿಯಿಂದ ಕನ್ನಡ ಸಾಹಿತ್ಯಕ್ಕೆ [illegible] ಪ್ರಕೃತ ನಾವು ವಾಙ್ಮಯದಲ್ಲಿ ಕೈಕೊಳ್ಳಬೇಕಾದ ಕಾರ್ಯಭಾಗವನ್ನು ಸೂಚಿಸಿ ಸುಮಾರು ಮುಕ್ಕಾಲು ಗಂಟೆಯ ವರೆಗೆ ಉದ್ಬೋಧಕ ಭಾಷಣವನ್ನು ಮಾಡಿದರು. ಪ್ರಕೃತ ವಿಷಯದಲ್ಲಿ ಹಲವರು ಮಾತಾಡಿದ ಮೇಲೆ ಇಲ್ಲಿಯ ವಕೀಲರಾದ ಶ್ರೀ [illegible] ಎನ್ ಹೆಬ್ಬಾರ್ ಬಿ ಎ ಬಿ ಎಲ್ ರವರೂ ವಕೀಲರಾದ ಶ್ರೀ ನರಸಿಂಹ ಕಾಮತರೂ ಸಂದರ್ಭೋಚಿತವಾದ ಭಾಷಣಗಳನ್ನು ಮಾಡಿದರು ಅನಂತರ ಅಧ್ಯಕ್ಷರು ಅರ್ಥಗರ್ಭಿತವಾದ ಉಪಸಂಹಾರ ಭಾಷಣವನ್ನು ಮಾಡಿದರು ನೆರೆದ ಸಭಿಕರಿಗೂ ಸಭಾಧ್ಯಕ್ಷರಿಗೂ ಸಂಘದ ಪರವಾಗಿ ಕಾರ್ಯದರ್ಶಿಗಳ ಧನ್ಯವಾದವನ್ನರ್ಪಿಸಿದ ತರುವಾಯ ಸಭೆಯು ಅಂತ್ಯವಾಯಿತು ಮುಂದಿನ ಸಭೆಯು ತಾರೀಕು ೨೮ ೧೦ ೪೫ನೇ ಭಾನುವಾರ ಇಲ್ಲಿಯ ವಕೀಲರಾದ ಮ. ರಾ. ಎ ವಿ ಎನ್ ಹೆಬ್ಬಾರ್ ಬಿ ಎ ಬಿ ಎಲ್ ರವರ ಅಧ್ಯಕ್ಷತೆಯಲ್ಲಿ ಜರಗುವುದು ಶ್ರೀ [illegible] ಪಾಂಡುರಂಗ ಭಟ್ಟ ಭಿಷಗ್ರತ್ನ ಇವರು "ಆಯುರ್ವೇದವೂ ಪ್ರಾಚೀನ ಮತ್ತು ಆಂಗ್ಲ ಚಿಕಿತ್ಸಾಕ್ರಮವೂ" ಎಂಬ ವಿಷಯದಲ್ಲಿ ಭಾಷಣವನ್ನು ಮಾಡುವರು ಭಾಷಾಭಿಮಾನಿಗಳೆಲ್ಲರೂ ಸಹಕರಿಸಬೇಕಾಗಿ ಕಾರ್ಯದರ್ಶಿಗಳ ವಿನಂತಿ

(೧೪ನೇ ಪುಟವನ್ನು ನೋಡುವುದು)

# ಘನಮಾನ್ಯ ಗವರ್ನರರಿಗೆ ಅರ್ಪಿಸಲಾದ ಬಿನ್ನಪಗಳು.

**ಮಹಾಮಾನ್ಯ ಮದ್ರಾಸು, ಫೋರ್ಟ್ ಸೈಂಟ್ ಜೋರ್ಜ್ ಗವರ್ನರರು ಲೊರ್ಡ್ ಎರ್ಸ್ಕಿನ್ ಶ್ರೀಮಂತರು ಜಿ. ಸಿ. ಐ. ಇ. ಇವರ ದಿವ್ಯ ಸನ್ನಿಧಾನದಲ್ಲಿ—**

ಕೆನರಾ ಹೈಸ್ಕೂಲಿನ ಸಂಬಂಧವನ್ನುಳ್ಳ ಪ್ರತಿಯೊಬ್ಬರ ಪರವಾಗಿ, ನಮ್ಮ ಅಧಿಪತ್ಯಾಧಿಪತಿಗಳು ನಮ್ಮಲ್ಲಿಗೆ ಇದೇ ಪ್ರಥಮ ಸಲ ದಯಮಾಡಿಸಿರುವ ಚಿರಸ್ಮರಣೀಯವಾಗಿರುವ ಈ ಸಂದರ್ಭದಲ್ಲಿ, ತಮ್ಮ ಸವಾರಿಯನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತೀಕರಿಸುತ್ತೇವೆ. ಈ ವಿದ್ಯಾಶಾಲೆಯು ಬಾಲ್ಯಕಾಲದಲ್ಲಿ ಇದರ ಶ್ರೇಯೋಭಿವೃದ್ಧಿಗಳಿಗೂ ಇದರ ಇಂದಿನ ಯೋಗ್ಯತೆಗೆ ನಡೆಸಿ ತಂದ ಮೂಲಪ್ರೇರಣೆಗಳಿಗೂ ಇತರರಿಗಿಂತ ಹೆಚ್ಚಾಗಿ ಕಾರಣ ಪುರುಷರಾಗಿದ್ದವರ ಸ್ಮಾರಕವಾಗಿ ಇಲ್ಲಿ ನಿರ್ಮಾಣ ಹೊಂದಿರುವ ಈ ಮಂದಿರವನ್ನು ತಮ್ಮ ದಿವ್ಯಹಸ್ತದಿಂದ ಉದ್ಘಾಟನವಾಡಲು ತಾವು ವಿಶೇಷ ಸಹೃದಯತೆಯಿಂದ ಒಪ್ಪಿದುದಕ್ಕಾಗಿ ನಾವು ಕಡುಂಬ ಕೃತಜ್ಞತರಾಗಿದ್ದೇವೆ. ಮಂದಿರದ ಕೆಳ ಅಂತಸ್ತಿನಲ್ಲಿ ಈ ಶಾಲೆಯ ಗ್ರಂಥ ಭಂಡಾರವಿದೆ, ಮಾಳಿಗೆಯಲ್ಲಿ ನಮ್ಮ ಹಿಂದಣ ವಿದ್ಯಾರ್ಥಿಗಳೂ ಪ್ರೋತ್ಸಾಹಕರೂ ಸಹಾನುಭೂತಿಯಿಂದಲೂ ಔದಾರ್ಯದಿಂದಲೂ ಶೇಖರಿಸಿ ನಮಗೆ ಒದಗಿಸಿಕೊಟ್ಟಿರುವ ಮತ್ತು ಈ ಅಧಿಪತ್ಯದ ಇತರ ಯಾವ ವಸ್ತುಸಂಗ್ರಹಾಲಯದಲ್ಲೂ ಕಾಣಸಿಗದಂತಹ ಅಪೂರ್ವ ವಸ್ತುಗಳ ಸಂಗ್ರಹವನ್ನು ಇಡಲಾಗಿದೆ. ಹೈಸ್ಕೂಲಿನ ಮೇಲಣ ಮೂರು ತರಗತಿಗಳಲ್ಲಿ ನಾನೂರಕ್ಕೆ ಮಿಕ್ಕಿರುವ ವಿದ್ಯಾರ್ಥಿಗಳು ವಾಚನಾಲಯದ ಸದುಪಯೋಗದ ಸದಭ್ಯಾಸವನ್ನು ಇಲ್ಲಿ ಮಾಡಿಕೊಳ್ಳುವರಾಗಿಯೂ ಈ ಹೈಸ್ಕೂಲಿನಲ್ಲಿ ಮತ್ತು ರಸ್ತೆಯಾಚೆಯಿದ್ದು ಇದೇ ಆಡಳಿತಕ್ಕೊಳಪಟ್ಟಿರುವ ಹೆಮ್ಮಕ್ಕಳ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪ್ರತಿ ವರ್ಷವೂ ಶಿಕ್ಷಣಹೊಂದುತ್ತಿರುವವರಾಗಿಯೂ ಇರುವ ೧೪೦೦ ವಿದ್ಯಾರ್ಥಿಗಳಲ್ಲಿ ಜ್ಞಾನಾರ್ಜನೆಯ ಕುತೂಹಲವು ಫಲಕ್ಕೆ ಬರುವಂತೆ ಈ ವಸ್ತು ಸಂಗ್ರಹವು ಪ್ರೇರೇಪಿಸುವುದಾಗಿ ನಾವು ನಿರೀಕ್ಷಿಸುತ್ತೇವೆ. ಕಟ್ಟಡಗಳಿಗಾಗಿ ಸರಕಾರವು ಕೊಡುತ್ತಿದ್ದ ಸಹಾಯ ದ್ರವ್ಯಕ್ಕೆ ಹಾಕಿದ್ದ ತಡೆಯನ್ನು ಇತ್ತೀಚೆಗೆ ತಾನೆ ಎತ್ತಿರುವ ಪ್ರಯುಕ್ತವೂ ಈ ಸ್ಮಾರಕಮಂದಿರಕ್ಕಾಗಿ ಬೇಕಾಗುವಷ್ಟು ಹಣವನ್ನು ವಂತಿಗೆಯೆತ್ತಿ ಕೂಡಿಸಲು ನಮಗೆ ಅನುಕೂಲವಾದ ಕಾರಣವೂ, ಈ ಕಟ್ಟಡಕ್ಕಾಗಿ ಸಹಾಯದ್ರವ್ಯವನ್ನೇನೂ ನಾವು ಹಳೆಯ ಬು ಸರಕಾರವನ್ನು ಬೇಡಿಸಿಲ್ಲ. ಕೆಳಗಣ ಅಂತಸ್ತಿನ ತಳವು ೨೪೦೦ ಚದರಡಿಗಳಾಗಿಯೂ ಮಾಳಿಗೆಯ ತಳವು ೧೮೩೦ ಚದರಡಿಗಳಾಗಿಯೂ ಇವೆ. ಕೆಳಗಣ ಮತ್ತು ಮೇಲಣ ಅಂತಸ್ತುಗಳೂ, ಇಕ್ಕಡೆಗಳಲ್ಲಿನ ಕಕ್ಷೆಗಳೂ, ದೊಡ್ಡ ಸಾಲೆಯೂ ಒಟ್ಟು ಸುಮಾರು ೧೧೦೦೦ ರೂಪಾಯಿ ವೆಚ್ಚದಿಂದ ಕಟ್ಟಲಾಗಿವೆ. ಮೇಲಂತಸ್ತನ್ನು ಆಧರಿಸಿರುವ ಫೆರೋಕೊಂಕ್ರೀಟ್ ಎಂಬ ಲೋಹಶಿಲಾ ಘಟಿತವಾಗಿ ವೈಶ್ಯಲೇಪಹೊಂದಿರುವ ಸ್ತಂಭಗಳೂ ಮಾಡೂ ಮಂಗಳೂರು ಪಟ್ಟಣದಲ್ಲಿ ಅತ್ಯುನ್ನತವಾದುವುಗಳೊಳಗೇ ಗಣನೆಗೆ ಬರುವುವು. ಸರಕಾರದ ಇಮಾರತಿನ ಇಲಾಖೆಯವರಾಗಲಿ, ಸ್ಥಳೀಯ ಬೋರ್ಡು ಸಂಸ್ಥೆಗಳಾಗಲಿ, ಈ ಮಂದಿರನಿರ್ಮಾಣಕ್ಕಾಗಿ ಆದ ಧನವ್ಯಯವು ಮಿತಿಮೀರಿತೆಂದು ತೋರಿಸಿಕೊಡಲು ಅಶಕ್ತರೆಂದೇ ನಾವು ಧೈರ್ಯದಿಂದ ಹೇಳಬಹುದಾಗಿದೆ. ವಿದ್ಯಾರ್ಥಿವೇತನಗಳನ್ನು ಕೊಡುವ ಎ. ಸುಬ್ರಾಯ ಮೆಮೋರಿಯಲ್ ಫಂಡಿನ, ಮತ್ತು ವಿದ್ಯಾರ್ಥಿನೀ ವೇತನಗಳನ್ನು ಕೊಡುವ ಎಂ ಉಪೇಂದ್ರಪ್ಪೈ ಮೆಮೋರಿಯಲ್ ಫಂಡಿನ ಆಫೀಸುಗಳು ಇಕ್ಕಡೆಗಳಲ್ಲಿನ ಕಕ್ಷೆಗಳಲ್ಲಿವೆ. ನಮ್ಮಲ್ಲಿ ಹಿಂದೆ ಕಲಿತವರೊಳಗೆ ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ಲಂಡನಿನಲ್ಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಏಳು ಮಂದಿಯೂ, ಇಂಡಿಯನ್ ಮೆಡಿಕಲ್ ಸರ್ವೀಸಿನಲ್ಲಿ ಸ್ಥಾನಪಡೆದವರಲ್ಲಿ ಹದಿನಾಲ್ಕು ಮಂದಿಯೂ, ಹೈಕೋರ್ಟಿನಲ್ಲಿ ಪದವಿಪಡೆದವರೊಬ್ಬರೂ, ರೈಲ್ವೆಗಳ ಫೈನೇನ್ಶಿಯಲ್ ಕಮಿಶನರರೊಬ್ಬರೂ, ಇಂಡಿಯದ ಡೆಪ್ಯೂಟಿ ಹೈಕಮಿಶನರರಾಗಿ ಲಂಡನಿನಲ್ಲಿ ಒಬ್ಬರೂ ಇದ್ದಾರೆ. ಮದ್ರಾಸಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ನಮ್ಮ ಜಿಲ್ಲೆಗೆ ಮೀಸಲಾಗಿರುವ ಎರಡೂ ಸ್ಥಾನಗಳಲ್ಲಿ ಸದಸ್ಯರಾಗಿರುವವರು ನಮ್ಮ ಹಳೆಯ ವಿದ್ಯಾರ್ಥಿಗಳೆಂದೆನ್ನಲು ನಾವು ಹೆಚ್ಚಳಪಡುತ್ತೇವೆ. ಈ ಜ್ಞಾನಮಂದಿರವು ಪ್ರಭುಗಳ ದಿವ್ಯಹಸ್ತದಿಂದ ಉದ್ಘಾಟನವಾಗುವ ಈ ಸುಮುಹೂರ್ತವು, ಪ್ರಕೃತಿವಿಜಯದಲ್ಲಿಯೂ ರೋಗರುಜಾ ನಿವಾರಣಾದಿಗಳಲ್ಲೂ ಸಾಂಪತ್ತಿಕ ಶಕ್ತಿಗಳ ಮತ್ತು ಸಾಮಾಜಿಕ ಸಮಸ್ಯೆಗಳ ಅಧ್ಯಯನದಲ್ಲೂ ನವಭೂಮಿಯನ್ನು ಕಂಡುಕೊಳ್ಳುವ ಜಗದ್ವಿಖ್ಯಾತ ಸಂಶೋಧಕರೂ ನಮ್ಮಲ್ಲಿ ಶಿಕ್ಷಣಹೊಂದುತ್ತಿರುವವರಲ್ಲಿ ಮುಂದೆ ತಲೆಯೆತ್ತುವಂತಾಗುವ ನವಯುಗವನ್ನೇ ಪ್ರಾರಂಭಿಸುವುದಾಗಿ ನಾವು ಹಾರೈಸುತ್ತೇವೆ.

ಇಂತು ಪ್ರಭುಗಳ ವಿಶ್ವಾಸಾಕಾಂಕ್ಷಿಗಳಾಗಿರುವ

**ಕೆನರಾ ಹೈಸ್ಕೂಲ್ ಕೌನ್ಸಿಲಿನ ಸದಸ್ಯರು**

ಕೆನರಾ ಹೈಸ್ಕೂಲ್, ಮಂಗಳೂರು, ೧೮—೧೦—'೩೫.

## ಜಿಲ್ಲಾ ಬೋರ್ಡಿನ ಬಿನ್ನಪ.

ಜಿಲ್ಲಾ ಬೋರ್ಡಿನ ಪರವಾಗಿ,—ಹೃತ್ಪೂರ್ವಕವಾಗಿರುವ ಸುಸ್ವಾಗತವಿರಲಿ.

೨. ಈ ಋತುವಿನಲ್ಲಿ ಇತ್ತ ಬಂದರೆ, ನಮ್ಮ ನಿಜ ಸ್ಥಿತಿಯು ಪರಾಂಬರಿಕೆಗೆ ಬರ ಮಂತಿಲ್ಲ. ನಾವೆಲ್ಲ ಕಷ್ಟಮಯವಾದ ಕೃಷಿಜೀವಿಗಳಾಗಿ, ಸಾಲದ ಭಾರದಿಂದ ಬಾಗಿದ್ದೇವೆಂಬುದು ನಮ್ಮ ಜಿಲ್ಲೆಯನ್ನು ಈಗ ಸಂದರ್ಶಿಸುವರೆ ತಾನೆ ತಿಳಿಯುವ ಹಾಗಿಲ್ಲ. ಎಷ್ಟೋ ವರ್ಷಗಳಿಂದ ಆರ್ಥಿಕ ಮುಗ್ಗಟ್ಟು, ಅದರ ಮೇಲೆ ಈಚೆಗೆ ತಾನೆ ಏರಿಸಿದುವ ಕೀರ್ದಿ, ಮುಖ್ಯ ವ್ಯಾಪಾರ ವಸ್ತುಗಳಾಗಿರುವ ಅಕ್ಕಿ ತೆಂಗುಗಳ ಇಳಿದರ,—ಇವುಗಳಿಂದ ಜನರ ಕಲೆ ಯೆತ್ತದಷ್ಟು ಜೋರಾಗಿ ಜನರೆಲ್ಲ ದರಿದ್ರರಾಗುತ್ತ ಬಂದಿರುತ್ತಾರೆ.

೩. ವರ್ಷಕ್ಕೆ ೧೩೦ ಇಂಚು ಮಳೆ ಸುರಿಯುವುದೇನೋ ನಿಜ, ನೆಲವೆಲ್ಲ ಏರುತಗ್ಗು, ಬಂದಿಯಂತಹ ಬಯಲು, ಈ ಧಾರಾಳ ಮಳೆ ಸುರಿದು ಫಲವತ್ತಾಗಿ ಮಾಡುವ ಗೊಬ್ಬರವನ್ನು ವ್ಯರ್ಥವಾಗಿ ಸಮುದ್ರಕ್ಕೊಯ್ಯುವುದೇ ವಿನಾ ಬೇರೆ ಇಲ್ಲ. ಬೇಸಿಗೆಯಲ್ಲಿ ಮಳೆ ನೀರನ್ನು ಕೂಡಿಸಿಡಲು ನೀರಾಶ್ರಯವೇ ಇಲ್ಲ, ಆಗ ತಾನೆ ನೆಲವೊಣಗಿ, ಜನಜಾನುವಾರುಗಳಿಗೆ ಅನ್ನನೀರುಗಳಿಗೆ ತತ್ವಾರವಾಗುವುದು. ಈ ವರ್ಷದ ನೀರಾವರಿ (ಬಲ್ಲಿಕೆ) ಕೆಲಸಗಳಿಗೆಂದು ಸರಕಾರವು ದಯಪಾಲಿಸುವ ದೊಡ್ಡ ಮೊಬಲಗಿನಲ್ಲಿ, ನಮಗೆ ಸಹಾಯವೇನೂ ಸಿಗಲಾರದಿರುವಂತಾದುದು ಶೋಚನೀಯ.

೪. ವಿಸ್ತಾರವಾದ ಪ್ರದೇಶವೆಲ್ಲ ಕಾಡು ಆವರಿಸಿದೆ. ಅದರ ಬಳಿಯಲ್ಲಿ ನೂರಾರು ಹಳ್ಳಿಗಳು ಇವೆ. ಕಾಡಿನಿಂದ ಕಿಂಚಿತ್ತೂ ಪ್ರಯೋಜನ ಪಡೆದ ಹಳ್ಳಿಗರು ಕಾಡು ಮೃಗಗಳ ಬಾಧೆಗೀಡಾಗಿ, ಗ್ರಾಮಗಳನ್ನು ತೊರೆಯುತ್ತ ಪಾಳುಗೆಡಹುತ್ತಿದ್ದಾರೆ. ಕಾಡು ಬಾಬ್ತು ಸರಕಾರವನ್ನು ಪದೇ ಪದೇ ಕಾಡಿದ್ದೇವೆ. ಉಪಯೋಗವಾಗಿಲ್ಲ. ತಾವು ಈ ಸಂಕಟಗಳಿಂದ ನಮ್ಮನ್ನು ಪಾರಾಗಿಸಬೇಕಾಗಿ ತಮ್ಮ ದಯೆಯನ್ನೇ ಕಾಯುತ್ತಿದ್ದೇವೆ.

೫. ಈ ಗಟ್ಟ—ಕಾಡುಗಳ ನೆರೆಯಲ್ಲಿಯೇ ಮಲೆ ಜ್ವರದ ಶಾಶ್ವತ ನೆಲೆ. ಕ್ವಿನೀನನ್ನು ಸರಕಾರವು ವಿತರಣೆಗೊಳಿಸುತ್ತಿರುವುದಕ್ಕಾಗಿ ನಾವು ಸರಕಾರವನ್ನು ವಂದಿಸಿ ಕೃತಜ್ಞತೆ ಸಲ್ಲಿಸುತ್ತೇವೆ. ಆದರೆ, ಇನ್ನೂ ವೈದ್ಯಕೀಯ ಸಹಾಯವು ಬೇಕಾಗಿದೆ. ಮಲೆಜ್ವರವನ್ನು ಇದಿರಾಗಿ ನಿರ್ಮೂಲಿಸಬೇಕಾಗಿದೆ. ಗ್ರಾಮಾಭ್ಯುದಯ ಸಾಧನೆಯಲ್ಲಿ ಮಲೆಜ್ವರ ನಿರ್ಮೂಲನಕ್ಕೆಂದು ಸರಕಾರವು ಕೊಡುವ ಧನದಲ್ಲಿ ಒಂದು ಅಲ್ಪಾಂಶವಾದರೂ ಚಿರ ಮಲೇರಿಯಾ ಪೀಡಿತವಾದ ಈ ಜಿಲ್ಲೆಗೆ ಸಿಗಲಾರದಂತಾದುದು ಶೋಚನೀಯ. ಬೋರ್ಡು ದುರ್ಬಲವಾಗಿರುವ ಈ ಕಾಲದಲ್ಲಿ ಸರಕಾರವು ಈ ಭಾಗದಲ್ಲಿ ನೆರವಾಗದಿದ್ದರೆ ಜ್ವರನಿವಾರಣೆಗಾಗಿ ನಾವು ಮಾಡಬೇಕಾಗಿರುವ ಸಾಧನೆಗಳು ಸಾಗಲಾರವು.

೬. ಮೂಡುಕರೆ ಪ್ರಾಂತ್ಯದಂತಿರದೆ ಇಲ್ಲಿ ಹೊಳೆಗಳು ಹರಿದು ದೇಶವೆಲ್ಲ ಅಲ್ಲಲ್ಲಿ ತೋಡಿದಂತಾಗಿದೆ. ಮಳೆಗಾಲದಲ್ಲಿ ಪ್ರಯಾಣವು ಬಲು ಕಷ್ಟ. ಈ ಅಧಿಪತ್ಯದ ಇತರ ಯಾವ ಪ್ರಾಂತ್ಯಕ್ಕಿಂತಲೂ ಹೆಚ್ಚಾಗಿ ಮಲಬಾರು ಮತ್ತು ನಮ್ಮ ಜಿಲ್ಲೆಗೆ ಸೇತುವೆಗಳು ಹೆಚ್ಚು ಬೇಕಾಗಿವೆ. ಆದರೂ ನಮ್ಮ ಜಿಲ್ಲೆಯು ಕಡೆಗೆ ದುರ್ಲಕ್ಷ್ಯವೇ ಏಕೆಂದು ಗೋಚರಿಸುವಂತಾಗಿದೆ. ಸಂಚಾರಕ್ಕೆ ಅನುಕೂಲತೆಗಳು ಕಡಿಮೆಯಾಗಿವೆ. ಮಂಗಳೂರಿಂದ ಈಚೆಗೆ ರೈಲ್ವೆ ಇಲ್ಲ. ಉಡ್ಪಿ ವರೆಗೆ ರೈಲುಮಾರ್ಗ ಹಾಕುವುದಾಗಿ ಅಂದಾಜುಗಳಿದ್ದಿತ ದರೂ ನಾಲ್ಕು ವರ್ಷಗಳ ಹಿಂದೆ ಸಾಧ್ಯವೇ ಎಂಬಂತಿದ್ದ ಆ ರೈಲು ಮಾರ್ಗವು ಈಗ ತಿರಸ್ಕೃತವಾಗಿ ಹೋಗಿದೆ! ಅಲ್ಲಲ್ಲಿ ಕೆಲವು ರಾಜಕೀಯ ಪರಿಸ್ಥಿತಿಗೆ ಅನುಕೂಲವಾಗುವಂತಹ ಸೇತುವೆಗಳ ಮಟ್ಟಿಗೆ ಶಿಫಾರಸು ಆಗಿದೆ ನಿಜ. ವ್ಯಾಪಾರ ಮತ್ತು ಸಂಚಾರಾನುಕೂಲತೆಗಳಿಗಾಗಿ ಹೆಚ್ಚಿನ ಹೆದ್ದಾರಿಗಳ ಬಡಾವಣೆಗೆ ಅಗತ್ಯ ಧನಸಹಾಯವು ನಮಗೆ ಒದಗಬೇಕಾಗಿದೆ.

೭. ಮೋಟಾರು ವಾಹನಗಳ ತೆರಿಗೆ ಕಾನೂನಿನ ಫಲವಾಗಿ ನಮಗಾಗಿರುವ ನಷ್ಟ ಬಹಳ. ಎರಡು ವರ್ಷಗಳಲ್ಲಿ, ಸರಕಾರವು ರೂ. ೧೬೬೦೦೦ ಮತ್ತು ರೂ. ೧೩೫೦೦೦ನ್ನು ಈ ಬಾಬಿನಲ್ಲಿ ಪಡೆದು, ನಮಗೆ ಬರೇ ರೂ ೩೫೦೦೦ ಮತ್ತು ರೂ. ೩೦೩೫೩ ಮಾತ್ರ ಕೊಟ್ಟಿದೆ. ನಮ್ಮ ಜಿಲ್ಲೆಯಿಂದ ವಸೂಲಾಗುವ ತೆರಿಗೆಯ ಕಾಲಂಶವು ಮಾತ್ರ ನಮಗೆ ಸಿಗುವಂತಾದರೆ ಏನೆನ್ನಬೇಕು? ಬೋರ್ಡುಗಳ ಆಕ್ಟಿನ ತಿದ್ದುಪಾಟಿನಿಂದಾಗಿ ವರ್ಷಕ್ಕೆ ರೂ. ೩೩೦೦೦ ಇನ್ನೂ ಕಡಿಮೆಯಾಗಿಯೆ ನಮ್ಮ ಆಯವನ್ನು ಇಳಿಸಲಾಗಿದೆ. ನಮ್ಮ ನಷ್ಟಕ್ಕೆ ಸಂದಾಯವಾಗಿ ಸರಕಾರವು ಇನ್ನಷ್ಟು ಹೆಚ್ಚಿನ ಮೊಬಲಗನ್ನು ನಮಗೆ ದಯಪಾಲಿಸಬೇಕೆಂದು ಒತ್ತಿ ಹೇಳಿಕೊಳ್ಳುತ್ತೇವೆ.

೮. ಮುಗ್ಗಟ್ಟು ಹೆಚ್ಚುತ್ತ ಬಂದಂತೆ, ಬೋರ್ಡಿನ ಕಾರ್ಯಭಾರಕ್ಕೆ ಇನ್ನಷ್ಟು ಹೆಚ್ಚು ಕೂಡಿಸಲಾಗಿದೆ ಮಾತ್ರವಲ್ಲ, ಸಮರ್ಪಕವಾಗಿ ಆಯವು ಹೆಚ್ಚಲು ಅವಕಾಶವೂ ಇಲ್ಲವಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ವ್ಯಯವು ಏರುತ್ತ ಬರುತ್ತಿದೆ, ಕಾನೂನೇ ಉಪಾಧ್ಯಾಯರ ತಲಬನ್ನು ಏರಿಸಿಯದೆ. ೧೯೩೪ ತಾಲೂಕು ಬೋರ್ಡುಗಳು ಮುಕ್ತಾಯವಾದಾಗ ಬೋರ್ಡು ತೆರಬೇಕಾಗಿದ್ದ ರೂ. ೩೪೯೭೩ಕ್ಕೆ ಕೂಡಿಸಿ ತಾಲೂಕು ಬೋರ್ಡು ಶಾಲೆಗಳ ಸಲುವಾಗಿಯೂ ರೂ. ೪೦೫೩೨ನ್ನು ಈ ಬೋರ್ಡು ತೆರಬೇಕಾಯಿತು. ಬಂಪ್ತಿ ವರ್ಷದಲ್ಲಿ ರೂ ೩೬೩೪೦ ವ್ಯಯವೇ ಹೆಚ್ಚುವಂತೆ ವಿದ್ಯಾಫಂಡಿನ ಸ್ಥಿತಿ ನಿಂತಿದೆ. ಸರಕಾರವು ಕನಿಕರದಿಂದ ನಮ್ಮ ಆರ್ಥಿಕಸ್ಥಿತಿ ಸ್ಥಿಮಿತಿಗೆ ಬರುವಂತೆ ಉಪಾಯ ಒದಗಿಸದಿದ್ದರೆ ಕಾನೂನು ನಿರ್ದೇಶಿಸುವ ಕರ್ತವ್ಯಗಳನ್ನಾದರೂ ಬೋರ್ಡು ನಿರ್ವಹಿಸಲಾಗದಂತಿದೆ. ಇಂತಹ ಮಹದಾಪತ್ತಿನಿಂದ ಬೋರ್ಡನ್ನು ತಾವೇ ಅಭಯವನ್ನಿತ್ತು ಸಂರಕ್ಷಿಸಬೇಕಾಗಿದೆ.

೯. ಸವ[illegible] ಹೆದ್ದಾರಿಗಳಿಗಾಗಿ ಧಾರಾಳ ಹಣ ಬೇಕಾಗಿದೆ. ಎಷ್ಟೋ ರಸ್ತೆಗಳನ್ನು ಅವುಗಳ ಪ್ರಾಮುಖ್ಯತೆ ನೋಡಿ ಎರಡನೆ ಕ್ಲಾಸಿನಲ್ಲಿ ಸೇರಿಸಬೇಕಾಗಿದೆ. ಮುಖ್ಯ ರಾಜರಸ್ತೆಗಳು (ಮೈಸೂರು ಮಡಿಕೇರಿಗೆ ಹೋಗುವವು) ಸಹಾ ರಾಜರಸ್ತೆಗಳಂತೆ ಇಲ್ಲ. ಅಲ್ಲಿಂದ ಬೋಡುಮಾರ್ಗದ ತನಕ (೧೪ ಮೈಲು) ಇರುವ ದಸೆ ಹಾಳು. ಕಲೆಕ್ಟರರೂ ಇಂಜಿನಿಯರರೂ ಈ ಮಾರ್ಗಕ್ಕಾಗಿ ಹೆಚ್ಚಿನ ಹಣ ಬೇಕೆಂದು ಸುಂಬಾ ಶಿಫಾರಸು ಮಾಡಿದರೂ ಸರಕಾರವು ಇನ್ನೂ ಹಣ ಅನುಕೂಲಿಸಿಕೊಟ್ಟಿಲ್ಲ. ರಾಜರಸ್ತೆ ಎಷ್ಟೋ ಹಾಳಾಗಿದೆ ಎಂದೇ ವಿಮರ್ಶಗಳಾಗಿವೆ. ರೋಡ್ ಡೆವಲಪ್ ಮೆಂಟ್ ಫಂಡಿಗೆ ಈ ಜಿಲ್ಲೆಯಿಂದ ತೆತ್ತ ಹಣ ಧಾರಾಳ ದೊರೆತುದು ವಿರಳ. ಈ ವಿಚಾರವನ್ನು ತಾವೇ ಪರ್ಯಾಲೋಚಿಸಬೇಕಾಗಿ ಒಪ್ಪಂಬಿ.

೧೦. ಬೋರ್ಡು ಸೆಕೆಂಡರಿ ಶಾಲೆಗಳಿಗಾಗಿ ರೂಪಾಯಿ ೧೩೩೦೦೦ ವ್ಯಯಿಸುತ್ತದೆ. ಸರಕಾರವು ರೂ ೧೩೧೫೦ ಮಾತ್ರ ೧೦ ವರ್ಷಗಳ ಹಿಂದೆ ನಿರ್ಧರಿಸಿದಂತೆ ಸಹಾಯಧನವಾಗಿ ತೆರುತ್ತಿದೆ. ಇತರ ಜಿಲ್ಲಾ ಬೋರ್ಡುಗಳಿಗೆ ಅವು ಇವಕ್ಕೂ ಕಡಿಮೆ ಶಾಲೆಗಳನ್ನು ನಡೆಸುತ್ತಬಂದರೂ ಸರಕಾರವು ಕೊಡುವ ಹಣಕ್ಕಿಂತ ಸೇರ ಕಡಿಮೆ. ನಮ್ಮ ಶಾಲೆಗಳು ಯಾವ ಭಾಗದಲ್ಲೂ ಕಡಿಮೆಯಾಗಿಲ್ಲ ಎಂದು ರಿಪೋರ್ಟುಗಳಿಂದ ವ್ಯಕ್ತವಾಗುವುದು. ಎಷ್ಟೋ ಶಾಲೆಗಳಿಗೆ ಸ್ಥಳ ಸಂಕೋಚವಾಗಿದೆ. ಕಟ್ಟಡದ ಬಗ್ಗೆ ಗ್ರಾಂಟು ಕೊಡುವುದನ್ನು ಸರಕಾರವು ತಡೆದುದರಿಂದ ಈಗ ಬೋರ್ಡು ನಿರುಪಾಯವಾಗಿದೆ.

೧೧. ಮೇಲಣ ನಮ್ಮ ಕೊರತೆಗಳನ್ನು ಮೇಧಾವರಿಸಿ ಸಹಾನುಭೂತಿಯಿಂದ ನಮ್ಮ ಕೋರಿಕೆಗಳಲ್ಲಿ ಕೆಲವನ್ನಾದರೂ ಸಲ್ಲಿಸಿದಲ್ಲಿ ತಮ್ಮ ಸಂದರ್ಶನೆಯ ನೆನಪು ಚಿರಕಾಲಕ್ಕೂ, ಅಧಿಪತ್ಯದಲ್ಲಿ ಒಂದು ಮೂಲೆ ಸೇರಿರುವ ಈ ಜಿಲ್ಲೆಯಲ್ಲಾದರೂ ಚಿರಕಾಲಕ್ಕೂ ಬಾಳುವಂತಾಗುವುದೆಂದು ಭರವಸೆಯಿಂದ ವಿನಂತಿಸಿಕೊಳ್ಳುತ್ತೇವೆ.

ಮಾನನೀಯರಾಗಿರುವ ತಮಗೂ ತಮ್ಮ ಕುಟುಂಬಕ್ಕೂ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಪುನಃ ಸಮರ್ಪಿಸಿ ತಮಗೆಲ್ಲ ಸುಖಾರೋಗ್ಯಗಳಿರಲೆಂದು ಬಯಸುತ್ತೇವೆ. ಇಂತು,

ಸದಾ ಸದ್ಭಕ್ತಿಯುಕ್ತ—

**ಜಿಲ್ಲಾಬೋರ್ಡು ಮೆಂಬರರು.**

## ಮ್ಯುನಿಸಿಪಲ್ ಕೌನ್ಸಿಲಿನ ಬಿನ್ನಪ.

ವ್ಯಾಪಾರದಲ್ಲಿ ಧೀರರಾಗಿರುವ ನಮ್ಮೂರವರ ಸಾಹಸದಿಂದ ತಾನೆ ಮೈಸೂರು ಕೊಡಗುಗಳ ಕಾಫಿಯು ಪಶ್ಚಿಮ ಯುರೋಪುಗಳಿಗೂ, ಅಂತೆಯೇ ಮೊಝಾಂಬಿಕ್ ಪ್ರದೇಶದ ಗೇರುಬೀಜವು ನ್ಯೂಯೋರ್ಕಿನ ಹೋಟೇಲುಗಳಿಗೂ ತಲಪುವಂತಾಗಿದೆ, ಅಂತೆಯೇ ನಮ್ಮೂರ ಗದ್ದೆಗಳ ಆವೆಮಣ್ಣಿನ ಹಂಚುಗಳು ಕೆನಿಯಾ ಟೆಂಗನೀಕದಲ್ಲಿನ ಮನೆಮಾಡುಗಳನ್ನು ಹೊದ್ದು ಕಾಪಾಡುತ್ತಿವೆ.

ಆದರೆ, ಅಧಿಪತ್ಯದ ಮೂಲೆಯಲ್ಲಿರುವ ನಮ್ಮ ಜಿಲ್ಲೆಯನ್ನು ಸರಕಾರವು ಕಡೆಗಣಿಸ ತ್ತಿದೆಯಲ್ಲ ಎಂದೇ ನಮ್ಮ ಊರು ನಮ್ಮ ಅಗತ್ಯಾನುಕೂಲತೆಗಳನ್ನು ಲಕ್ಷ್ಯಕ್ಕೆ ತಂದುಕೊಂಡಂತೇನೂ ತೋರುತ್ತಿಲ್ಲ. ಈ ಭಾವವು ತಮ್ಮ ಆಳಿಕೆಯಲ್ಲಿ ತೊಲಗಿಹೋಗುವಂತಹ ಪರಿವರ್ತನವನ್ನು ನಾವು ನಿರೀಕ್ಷಿಸುತ್ತೇವೆ.

ಮದ್ರಾಸು ಕೌನ್ಸಿಲಿನಲ್ಲಿ, ನಮ್ಮ ನಗರಕ್ಕೊಂದು ಸ್ಥಾನಬೇಡವೇ? ಉಗಾಂಡದ ಕಾಡುಗಳಲ್ಲಿ ಹೇಗೆಯೋ ಲಾಡನಿನ ಜನನಿಬಿಡವಾಗಿರುವ ಕ್ಷೇತ್ರಗಳಲ್ಲೂ ನಮ್ಮೂರವರು ಇರುವರಲ್ಲವೇ? ಹೆಮ್ಮಕ್ಕಳಿಗಾಗಿ ಮೊದಲನೆ ತರಗತಿಯ ಕಾಲೇಜು ನಮ್ಮ ಜಿಲ್ಲೆಯಲ್ಲಿದೆ, ನಮ್ಮ ನಗರಕ್ಕೊಂದು, ನಮ್ಮ ಮಹಿಳೆಯರಿಗೊಂದು ಹೀಗೆ ಎರಡು ಸ್ಥಾನಗಳು ನಮಗೆ ಕೌನ್ಸಿಲಿನಲ್ಲಿ ಸಿಗಬೇಕಾಗಿವೆ. ಜಿಲ್ಲೆ, ಭಾಷೆ ಸಂಸ್ಕೃತಿ ಎಲ್ಲವೂ ಬೇರೆ ಬೇರೆಯಾಗಿರುವ ಮಲಬಾರಿನೊಡನೆ ನಮ್ಮನ್ನು ಸಹಕುಟುಂಬಿಗಳಂತೆ ಮಾಡಿ, ಚುನಾವಣೆ ಮಾಡುವ ಕ್ರಮಬಂದರೆ, ನಮಗೆ ಪ್ರಾತಿನಿಧ್ಯವೇ ಇಲ್ಲದಂತಾಗುವುದು. ಬೇರೆ ಯಾವ ಉಪಾಯವೂ ಇಲ್ಲದಿರುವಲ್ಲಿ ನಮಗೊಂದು ಹೆಚ್ಚಿನ ಸ್ಥಾನವನ್ನಾದರೂ ಮದರಾಸು ಕೊರ್ಪೊರೇಶನ್ನಿನಲ್ಲಿ ಕೂಡಿಸಿಕೊಡಬೇಕೆಂದು ಹಾರಯಿಕೆ.

ನಮಗೊಂದು ನಗರ ಸಭಾ ಮಂದಿರವು ಅಗತ್ಯವಾಗಿದೆ. ಸಹಾನುಭೂತಿಯಿಂದ ನಮ್ಮ ಕಲೆಕ್ಟರರು ಅಲ್ಲಲ್ಲಿ ಚೆಲ್ಲಿಹೋಗಿರುವ ವಿಕ್ಟೋರಿಯ ಎಡ್ವರ್ಡ್ ಸ್ಮಾರಕ ಫಂಡುಗಳನ್ನು ಒಂದುಗೂಡಿಸಿರುವುದರಿಂದ ನಗರ ಸಭೆ, ನಾಟಕ ಸಾರ್ವಜನಿಕ ಸಭಾದಿಗಳ ಸಲುವಾಗಿ ಒಂದು ಮಂದಿರವನ್ನು ನಿರ್ಮಾಣವಾಡಬೇಕೆಂದಿದ್ದೇವೆ. ಯೋಗ್ಯ ಸ್ಥಳವನ್ನು ನಮಗೆ ಸರಕಾರವು ಒದಗಿಸಿಕೊಟ್ಟರೆ, ನಮ್ಮೂರವರಿಗೆ ಸಲ್ಲತಕ್ಕ ಒಂದು ಕರ್ತವ್ಯವಾಡಲು ನಮಗೆ ಅನುಕೂಲವಾಗುವುದೆಂದು ನಮ್ಮ ಪ್ರಾರ್ಥನೆ.

ಇಲ್ಲಿ [illegible]ವಾಗಿದೆ. ಶುದ್ಧ ನೀರಿನ ಸರಬರಾಯಿ ನಮಗೆ ಬೇಕಾಗಿದೆ. ಇದಕ್ಕಾಗಿ ಎಲ್ಲ ಅಂದಾಜು ಮಾಡಲಾಗಿದೆ. ಅದು [illegible] ವಿವೆ. ಸರಕಾರದ ಸಹಾಯವು ತಪ್ಪಿದ್ದ ಕಾರಣ ಅದರ ಪ್ರಸ್ತಾಪವೇ ಮರೆಯಾಗಿದೆ. ಈಗ ಗ್ರೇಂಟುಗಳನ್ನು ಕೊಡಲು ಸರಕಾರವು ಒಪ್ಪಿರುವ ಪ್ರಯುಕ್ತ ನೀರು ಸರಬರಾಯಿಗಾಗಿ ತಗಲುವ ಖರ್ಚಿನ ಅರೆವಾಸಿಯನ್ನು ಸರಕಾರವು ನಮಗೆ ಸಹಾಯವಾಗಿಯೂ ಉಳಿದುದನ್ನು ಸುಲಭ ದರದಲ್ಲಿ ಸಾಲವಾಗಿಯೂ ಕೊಟ್ಟರೆ ಉಪಕಾರವಾಗುವುದು.

ಇದರ ಜತೆಗೆ ಉತ್ತಮ ಚರಂಡಿಗಳನ್ನು ತೋಡಿಸಿ, ಸಿಮೆಂಟುಗಾರೆ ಹಾಕಿ ಊರ ಕೊಳೆಯನ್ನೆಲ್ಲ ನಿರ್ಮೂಲಗೊಳಿಸುವಂತೆ ಹರಿಯಗೊಡಬೇಕೆಂದಿರುವೆವು. ಇದಕ್ಕೆ ಹೆಚ್ಚು ಹಣಬೇಕು, ಇದರ ಸಹಾಯಕ್ಕೂ ಸರಕಾರವೇ ಕೈಗೊಡಬೇಕಾಗಿದೆ.

ಕ್ರಯರೋಗವು ಹಬ್ಬುತ್ತಿದೆ. ಹೆದ್ದಾರಿಗಳಿಂದ ದೂಳೇಳದಂತೆ ಮಾರ್ಗಗಳನ್ನೆಲ್ಲ ಕಾರುಬಳಿದು ಸಿಮೆಂಟಿನಿಂದ ಲೇಪಿಸಬೇಕೆಂದಿರುವೆವು. ಹತ್ತು ಮೈಲು ರಸ್ತೆಯನ್ನು ಹೀಗೆ ಮಾಡಲು ಸುಮಾರು ೩ ಲಕ್ಷ ರೂಪಾಯಿಯನ್ನು ಸುಲಭ ಕಂತುಗಳಲ್ಲಿ ಅಲ್ಪ ಬಡ್ಡಿಯಲ್ಲಿ ಹಿಂತೆರುವಂತೆ ಸರಕಾರವು ನಮಗೆ ಸಾಲ ಕೊಡಬೇಕಾಗಿದೆ. ಎಲ್ಲ ಮಾರ್ಗಗಳೂ ಹೀಗೆಯೇ ಗಾರೆಯಿಂದ ಲೇಪಗೊಳ್ಳುವ ಹಾಗೆ ಸರಕಾರವು ಒಂದು ದೊಡ್ಡ ಮೊಬಲಗನ್ನು ನಮಗೆ ಸಹಾಯದಾಗಿ ಕೊಡಬೇಕಾಗಿದೆ.

ಇಂತು ಸಕುಟುಂಬ ದೀರ್ಘಾಯುಗಳಾಗಿಯೂ ಸಂಪನ್ನರಾಗಿಯೂ ತಾವೂ ತಮ್ಮ ಧರ್ಮಪತ್ನಿಯವರೂ ಬಾಳುವಂತೆ ಹರಸುವ

**ಮ್ಯುನಿಸಿಪಲ್ ಕೌನ್ಸಿಲ್ ಮೆಂಬರರು.**

## ಅಲ್ಲಹಾಬಾದಿನಲ್ಲಿ ಅರ್ಧ—ಕುಂಭ ಜಾತ್ರೆ.

ಇದು ಇಲ್ಲಿ ಬೇಗನೆ ಜರಗುವುದು. ಸುಮಾರು ೪,೦೦,೦೦೦ ಯಾತ್ರಿಕರು ಬರಲಿರುವರು ಜನಸ್ತೋಮವು ವಿಪರೀತ ಹೆಚ್ಚಿದ ಕಾರಣ ಊರಿನ ಆರೋಗ್ಯವು ಕೆಡುವಂತಿದೆ. ರೋಗಪೀಡಿತರಾದ ಯಾತ್ರಿಕರು ಇದಕ್ಕೆ ಕಾರಣಭೂತರು ಇದನ್ನು ತಡೆಯಲು ತಕ್ಕ ಯೋಜನೆಗಳನ್ನು ಸಂಯುಕ್ತ ಪ್ರಾಂತ್ಯಗಳ ಸರಕಾರದವರು ಮಾಡಲಿರುವರು ಈ ಸಮಯದಲ್ಲಿ ಹೆಚ್ಚಾಗಿ ಕಾಲೇರಾ, ಸಿಡುಬು, ಇವೇ ಮೊದಲಾದ ಅಂಟುರೋಗಗಳು ತಲೆದೋರುವುವು. ಅಂತಹ ರೋಗಪೀಡಿತರನ್ನು ಜನಸಂದಣಿಯಿಂದ ವಿಂಗಡಿಸಿ, ರೋಗವು ಹರಡದಂತೆ ಮಾಡುವರು ಇನ್ನೂ ಕೆಲವು ರೋಗಗಳು ನೀರಿನ ಸರಬರಾಯಿಯಿಂದಲೆ ಬರುವಂತಾಗಿವೆ. ನಳ್ಳಿಯ ನೀರನ್ನು ಸ್ವಚ್ಛಗೊಳಿಸುವ ಏರ್ಪಾಡನ್ನು ಮಾಡಿದ್ದಾರೆ ಆಹಾರಾದಿ ವಸ್ತುಗಳ ಮಾರಾಟವು ಅತೀ ಸ್ವಚ್ಛ ತರದಲ್ಲಿ ನಡೆಯಲು ನಿಬಂಧನೆಗಳನ್ನು ಮಾಡುವರು ಹನ್ನೆರಡು ವರ್ಷಕ್ಕೊಮ್ಮೆ ಜಂಗುವ ಸಮಾರಂಭವಿದು ಈಗ ಇದಕ್ಕೆ ಬಹಳ ತಯಾರಿಗಳು ನಡೆಯುತ್ತಾ ಇವೆ ರೈಲ್ವೆ ಕಂಪೆನಿಯವರು ಹಲವು ಸ್ಪೆಶಲ್ ಟ್ರೈನುಗಳನ್ನು ನಡೆಯಿಸುವರು ಇದು ಮಾತ್ರವಲ್ಲದೆ, ಈ ಹಬ್ಬಕ್ಕಾಗಿ ಸ್ಪೆಶಲ್ ಸ್ಟೇಶನುಗಳನ್ನೂ ನಿರ್ಮಿಸಿರುವರು

---

## ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 881/1935

R. I. A No. 752/1935.

ಮೆಣ್ಣ ಭಂಡಾರಿ—ವಾದಿ

ಮತ್ತು

ಅಣ್ಣು ಹೆಗ್ಡೆ ಸಹಾ—ಪ್ರತಿವಾದಿರು

ಇವರೊಳಗೆ

ಸದರಿ ದಾವೆಯು 1ನೇ ಪ್ರತಿವಾದಿ ಕಾರ್ಕಳ ತಾಲೂಕು ಹೆರ್ಮುಂಡೆ ಗ್ರಾಮದ ಉರ್ಬಿಲಬೆಟ್ಟು ಎಂಬಲ್ಲಿರುವ ಬಾಬಣ್ಣ ಹೆಗ್ಡೆಯ ಮಗ ಅಣ್ಣು ಹೆಗ್ಡೇರಿಗೆ ತಿಳಿಯಪಡಿಸುವುದೇನೆಂದರೆ —

ನೀವು ನಿಮ್ಮ ಹೆಂಡತಿ ಈ ದಾವೆಯ 2ನೇ ಪ್ರತಿವಾದಿಳ ಕೂಡುವಿಕೆಯಿಂದ ವಾದಿಗೆ ತಾ 25-9-1934ರಲ್ಲು ರೂಪಾಯಿ 100/-ಕ್ಕೆ ಬರಕೊಟ್ಟ ದಿಮಾಂಡು ಪ್ರೊಮಿಸರಿ ನೋಟಿನ ಹಣಗಳನ್ನು ಭರಮಾಡಿಕೊಳ್ಳುವರೆ ವಾದಿಯು ಹೂಡಿದ ಮೇಲಿನ ದಾವೆಯು ಮತ್ತು ನಿಮ್ಮ ಬಾಬ್ತು ಸ್ಥಿರಾಸ್ತಿಯನ್ನು ಜಡ್ಜ್‌ಮೆಂಟಿಗೆ ಮುಂಚೆ ಜಪ್ತಿ ಮಾಡಬೇಕಾಗಿ ಬರಕೂಡ ಅರ್ಜಿ ಕೂಡ ತಾರೀಖು 31 10 1935ಕ್ಕೆ ತಿಷ್ಯೆರು ತಕ್ಕಿಗೆ ಈ ಕೋರ್ಟಿನಲ್ಲಿ ಇಡಲ್ಪಟ್ಟಿದೆ ಆದುದರಿಂದ ಸದ್ರಿ ದಿವಸ ಪೂರ್ವಾಹ್ನ 10 ಗಂಟೆಗೆ ನೀವು ಈ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಆ ಕುರಿತು ಏನಾದರೂ ಆಕ್ಷೇಪವಿದ್ದರೆ ಜ್ಯಾಹೀರುಮಾಡಿಕೊಳ್ಳಬಹುದು ಇದಕ್ಕೆ ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯನ್ನು ಮತ್ತು ಸದ್ರಿ ಅರ್ಜಿಯನ್ನು ಕೂಡ ತೀರ್ಮಾನಿಸಲಾದೀತು ತಿಳಿದಿರಲಿ

(ಕೋರ್ಟಿನವರ ಹುಕುಂ ಪ್ರಕಾರ)

ಕಾರ್ಕಳ 13—10—35 | ಬೈಕಾಡಿ ವಾಸುದೇವರಾವ್ ಎಡ್ವಕೇಟ್

---

## ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S 369/1933 R. I. A. 938/1935

ಅರ್ಜಿದಾರ-ಶ್ರೀನಿವಾಸ ನ್ಯಾಕ ನೇರ್ಲಕಟ್ಟೆ

ಎದ್ರಿರು-ಶಿವಪ್ಪ ಶೆಟ್ಟಿ ಕೂಡಾ

ಸದ್ರಿ ಅರ್ಜಿಯ ಎದ್ರಿಳು

1 ಶಿವಪ್ಪ ಶೆಟ್ಟಿ, 2 ಮುತ್ತಮ್ಮ ಶೆಟ್ತಿ, 3 ವೆಂಕಮ್ಮ ಶೆಟ್ತಿ, 4 ಸೂರಮ್ಮ ಶೆಟ್ತಿ, 5 ಅಕ್ಕಣ್ಣೆ ಶೆಟ್ತಿ—ಕೆಂಚನೂರು ಸುಬ್ಬಯ್ಯ ಶೆಟ್ರ ಮಕ್ಕಳು

8 ವಿಟ್ಠಲ ಶೆಟ್ಟಿ, 9 ಮ್ಯಾನರ ತುಂಗಮ್ಮ 2ನೇ ಪ್ರತಿವಾದಿ ಮಕ್ಕಳು

10 ಶಂಕ್ರಯ್ಯ ಶೆಟ್ಟಿ, 11 ಮಂಜಮ್ಮ ಶೆಟ್ತಿ, 12 ಸುಬ್ಬಣ್ಣ ಶೆಟ್ಟಿ, 13 ಮ್ಯಾನರು ನರಸಿಂಹ 14 ಸದಿಯಮ್ಮ, 15 ಪಾರ್ವತಿ, 16 ಸೀತಮ್ಮ—3ನೇ ಪ್ರತಿವಾದಿ ಮಕ್ಕಳು

17 ಮ್ಯಾನರು ಮುಕಾಂಬ ,18 ಅಮ್ಮಮ್ಮ 19 ಗೌರಿ 4ನೇ ಪ್ರತಿವಾದಿ ಮಕ್ಕಳು

20 ಮ್ಯಾನರ ಸರಸ್ವತಿ 5ನೇ ಪ್ರತಿವಾದಿ ಮಗಳು

ಇವರಿಗೆ

ಸದ್ರಿ ನಂಬರಿನಲ್ಲಿ ಪರ್ಸನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 28 10-1935ಕ್ಕೆ ಇಟ್ಟಿರುತ್ತದೆ ಆ ಕುರಿತ ನಿಮ್ಮದೇನಾದರೂ ಆಕ್ಷೇಪವಿದ್ರೆ ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

Coondapoor 13—10—1935 } K. Narasimha Kamath *Pleader for Petitioner*

---

ನಿಮ್ಮ ಪಾದವು ನೋವುಗೊಂಡರೆ ಬಾತುಕೊಂಡರೆ

ನಮ್ಮಜನ್ನೆ ಕೇಳಬಾರದ

ಸಾಂಬಕನ್ನು ಉಪಯೋಗಿಸಿರಿ

ಒಡೆ ನೋವುಗೊಂಡ, ಹುಡಿಹುಡಿಗೊಂಡ, ಪಾದಗಳಿಗೂ ಬಾತುಕೊಂಡ ಸಂಧುಗಳಿಗೂ ಸಾಂಬಕ್‌ನ ಸಮಾನವಾದ ಲೇಪವಿಲ್ಲ ನಿಮ್ಮ ಪಾದಗಳ ಮೇಲೆ ಸರಿಯಾಗಿ ದಿನರಾತ್ರಿ ತಿಕ್ಕಿ ಅದು ಬಹಳ ಗುಣಕಾರಿಯಾದುದು ಆನೋಭವಾದುದು ಒಡೆ ಚರ್ಮವನ್ನು ಹೋಕ್ಕ ಉರಿ, ಗಾಯಗಳನ್ನು ನಿವಾರಿಸುತ್ತದೆ ಗಾಯಗಳನ್ನು ಪಾದದ ಒಡೆತಗಳನ್ನೂ ಗುಣಗೊಳಿಸುತ್ತದೆ ಪಾದಗಳನ್ನು ಮೃದುಗೊಳಿಸುತ್ತದೆ ಊತ ಚರ್ಮರೋಗ ಮೊದಲಾದುವುಗಳನ್ನೆಲ್ಲ ಹೋಗಲಾಡಿಸುತ್ತದೆ ಒಂದು ಪೆಟ್ಟಿಗೆಯನ್ನು ಪಡೆದು ನೋಡಿ ಒಂದು ಪೆಟ್ಟಿಗೆಗೆ ಒಂದು ಅಥವಾ ರೂ 2-4-0ರಂತೆ ಎಲ್ಲಾ ಔಷಧಿ ವಿಕ್ರಯಗಾರರಲ್ಲೂ ವಿಕ್ರಯಿಸಲ್ಪಡುತ್ತದೆ

ಸಾಂಬಕ್

Zam-Buk

---

# ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ.

**The Canara Public Conveyance Co., Ltd., Kodialbail Mangalore.**

**The Sakaleshwara Motor Service Ltd., Saklaspur.**

## ವಿಮಾನ ಸಂಚಾರದಲ್ಲಿ ತರುಣಿಯರಿಗೆ ಕಲಿಸಬೇಕು.

ಕಲ್ಕತ್ತಾ, ಅಕ್ಟೋಬರ ೧೦.

ಬಂಗಾಳಿ ತರುಣಿಯರನ್ನು ವಿಮಾನ-ಸಂಚಾರದಲ್ಲಿ ತರಬೇತುಗೊಳಿಸುವ ಕ್ರಮವು ಕಲಿಯುತ್ತಿದೆ. ದಂಡದ್ವಾರದಲ್ಲಿ ಒಬ್ಬಳು ತರುಣಿಯು ಮಾತ್ರ ಈ ಬಗ್ಗೆ ಶಿಕ್ಷಣ ಹೊಂದುತ್ತಿರುವಳು. ಒಬ್ಬ ಬಂಗಾಳಿ ಹುಡುಗನಿಗೂ ಹುಡುಗಿಗೂ ವೈಮಾನಿಕ ಶಿಕ್ಷಣವನ್ನು ಕೊಡಬೇಕೆಂದು ರೂ. ೧೦೦ರಂತೆ ವೇತನವನ್ನೂ ಕೊಡಬೇಕೆಂದು ನಿರ್ಧಾರವಾಗಿದೆ.

## ಜರ್ಮನಿಯು ಜನಾಂಗಸಭೆಯನ್ನು ಪೂರ್ಣವಾಗಿಬಿಟ್ಟಿತು.

ಜಿನೀವಾ, ಅಕ್ಟೋಬರ ೧೨.

ಜರ್ಮನಿಯು ಜನಾಂಗಸಭೆಗೆ ಕೊಡಬೇಕಾಗಿದ್ದ ೩೦೪,೦೦೦ ಪೌಂಡುಗಳನ್ನು ಜನಾಂಗಸಭೆಗೆ ಪಾವತಿ ಮಾಡಿದೆ. ಇದೇ ತಾ ೨೧ಕ್ಕೆ ಅದರ ೨ ವರ್ಷಗಳ ಅವಧಿಯು ಮುಗಿಯುವುದು. ಇನ್ನು ಜರ್ಮನಿಯು ಕಾನೂನು ಪ್ರಕಾರವಾಗಿ ಲೀಗಿನಿಂದ ಹೊರಗೆ ನಿಲ್ಲಬಹುದು.

## ಭೀಷಣ ಬಿರುಗಾಳಿ!

ಪೇಶಾವರ, ಅಕ್ಟೋಬರ ೧೨

ಪೇಶಾವರ ಜಿಲ್ಲೆಯ ಸಬ್ ಡಿವಿಜನಿನ ಸ್ವಾಬಿಯಿಂದ ಬಂದ ಸುದ್ದಿಯಿಂದ ತಿಳಿದುಬಂದುದೇನಂದರೆ ಅಲ್ಲಿ ಕಳೆದವಾರ ಭೀಷಣ ಬಿರುಗಾಳಿಯು ರಾತ್ರಿ ಹಗಲು ಬೀಸಿತು. ಅನೇಕಾನೇಕ ದನಕರುಗಳು ಪ್ರಾಣಬಿಟ್ಟವು. ಪೈರುಪಚ್ಚೆಗಳು ನಾಶವಾದುವು.

## ಶ್ರೀಮತಿ ಕಮಲಾ ನೆಹರುಗಳ ಪರಿಸ್ಥಿತಿ.

ಆನಂದಭವನಕ್ಕೆ ಬಡೆನ್ ವೀಲರ್‌ನಿಂದ ಬಂದಿರುವ ಪತ್ರದಿಂದ ಹೀಗೆ ತಿಳಿದುಬರುತ್ತದೆ. ಸಪ್ಟಂಬರ ಅಂತ್ಯದಲ್ಲಿ ಕಮಲಾ ನೆಹರುಗಳ ಪರಿಸ್ಥಿತಿಯು ಅಷ್ಟು ನೆಟ್ಟಗಿರಲಿಲ್ಲ. 106 ಡಿಗ್ರಿಗಳಷ್ಟು ಜ್ವರವಿತ್ತು. ದಿನಕ್ಕೆ ಒಂದು ಸಲ 95 ಡಿಗ್ರಿಗಿಳಿಯುತ್ತಿತ್ತು. ಜ್ವರವು ಹೀಗೆ ಒಮ್ಮೆಲೆ ವಿಪರೀತವಾಗುತ್ತಿದ್ದುದರಿಂದ ಸ್ವಲ್ಪ ಚಿಂತೆಗೆ ಕಾರಣವಿತ್ತು. ಅವರ ನರಗಳ ಬಡಿತವು ಸರಿಯಾಗಿದೆ. ಕೆಮ್ಮು ಇಲ್ಲ. ಕಮಲಾ ನೆಹರುರವರು ಒಪರೇಶನ್ ಚಿಕಿತ್ಸೆಗೊಳಗಾಗಬೇಕಾದೀತೋ ಎಂದು ವಿಚಾರಿಸಲಾಯಿತು. ಅಂತಹ ಚಿಕಿತ್ಸೆಯು ಅಗತ್ಯವಾಗುವುದಿಲ್ಲವೆಂದು ಡಾಕ್ಟರರು ಅಭಿಪ್ರಾಯಪಟ್ಟಿರುವರು.

## ಸಿದ್ದಾಪುರ

ಮಂಗಳೂರಿನಿಂದ ಇಲ್ಲಿಗೆ ಬಂದಿದ್ದ ಶ್ರೀಯುತ ಬಿ ಲಕ್ಷ್ಮಣದೇವ ವಿದ್ಯಾರ್ಥಿಯವರು ಇಲ್ಲಿಯ ವೆಂಕಟರಮಣ ದೇವಸ್ಥಾನದಲ್ಲಿ ಕೆಲವು ದಿನಗಳಿಂದ ಹರಿಕೀರ್ತನೆಗಳನ್ನು ಮಾಡುತ್ತಿದ್ದಾರೆ. ಜನಸಮೂಹವು ದಿನೇ ದಿನೇ ಹೆಚ್ಚು ಹೆಚ್ಚಾಗಿ ಬರುತ್ತಿದೆ. ಕೆಲವು ಕೀರ್ತನೆಗಳನ್ನು ಮಾಡಿ ಶ್ರೀಯುತರು ಇಲ್ಲಿಂದ ಹುಬ್ಬಳ್ಳಿ ಕಡೆಗೆ ಹೋಗಲಿರುವರು. ಇವರ ಕೀರ್ತನೆಗಳು ತೀರಾ ಅರ್ಥಸಹಿತವಿದ್ದು, ಈಗಿನ ಕಾಲದ ಸಾಮಾಜಿಕ ಧಾರ್ಮಿಕ ಹಾಗೂ ರಾಜಕೀಯ ವಿಷಯಗಳ ಸುಧಾರಣೆಗನುಸರಿಸಿಯೇ ನಡೆಯುತ್ತಿವೆ.

## ಸಂಕದ ಮೇಲಿಂದ ಹಾರಿದಳು
### ಗಂಡನ ಮನೆಗೆ ಹೋಗಲು ಮನಸ್ಸಿರಲಿಲ್ಲ.

ಅಹ್ಮದಾಬಾದ ಅಕ್ಟೋಬರ ೧೩

ಒಬ್ಬಳು ಹರಿಜನ ತರುಣಿಯನ್ನು ಅವರ ಸಂಬಂಧಿಕರು ಅಹ್ಮದಾಬಾದ್ ಪ್ರಾಂತಿಕ ರೈಲು ಮೂಲಕ ಕೊಂಡೊಯ್ಯುತ್ತಿದ್ದರು. ಅವರ ಕಣ್ಣುತಪ್ಪಿಸಿ ಅವಳು ರೈಲಿನಿಂದ ಕೆಳಗೆ ಹಾರಿದಳು. ರೈಲು ಸಂಕದ ಮೇಲೆ ಓಡುತ್ತಿತ್ತು. ಅವಳು ಸಂಕದ ಮೇಲಿನಿಂದ ಕೆಳಗೆ ನೀರಿಗೆ ಬಿದ್ದುಬಿಟ್ಟಳು. ರೈಲನ್ನು ನಿಲ್ಲಿಸಿ ತರುಣಿಯನ್ನು ಹಿಡಿಯಲಾಯಿತು. ಅವಳೀಗ ಸಿವಿಲ್ ಆಸ್ಪತ್ರೆಯಲ್ಲಿ ವಿಷಮಾವಸ್ಥೆಯಲ್ಲಿರುವಳು.

## ...ಶ್ವರಾಯರ ಕ್ವೆಟ್ಟಾ ಭೂಕಂಪ ನಿಧಿ.

... ೪೩,೦೦,೮೦೦ ದಷ್ಟರಲ್ಲಿ ನಿಂತಿದೆ.

## ಗೇಸ್ ಇರುವ ಭೂಭಾಗ.

ಡಾ॥ ಬಿ. ಕೆ. ಘೋಷ್‌ರವರು ಅಹ್ಮದಾಬಾದಿನ ಕೆಲವು ಕಡೆಗಳಲ್ಲಿನ ಭೂಮಿಗಳನ್ನು ಪರೀಕ್ಷಿಸಿ ಅಲ್ಲಿ ಗೇಸ್ ಇರುವ ಭೂಮಿಯು ಇದೆಯೆಂದೂ, ಬಹುಶಃ ಎಣ್ಣೆ ಮೊದಲಾದ ಖನಿಜಗಳು ಅಲ್ಲಿ ಸಿಗುವುದು ನಿಶ್ಚಯವೆಂದೂ ಒರೆದಿರುವರು. ಇಲ್ಲಿ ದೊಡ್ಡ ಕೈಗಾರಿಕೆ ಕೇಂದ್ರವನ್ನು ಸ್ಥಾಪಿಸಲಿರುವರು.

## ಪಂಜಾಬಿನಲ್ಲಿ ಮತಕಲಹ ನಿವಾರಣೆಗಾಗಿ ಯತ್ನ.

ಪಂಜಾಬ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಡಾ॥ ಸತ್ಯಪಾಲರು ತನ್ನ ಬಿಡುಗಡೆಯಾದೊಡನೆ ಲಾಹೋರಿಗೆ ಹೋಗಿ ಅಲ್ಲಿ ನಡೆಯುತ್ತಿರುವ ಹಿಂದೂ ಮುಸ್ಲಿಮ್ ಕಲಹ ನಿವಾರಣೆಗಾಗಿ ಸಾಹಸಪಡ ತೊಡಗಿರುವರು. ಅವರು ಎರಡು ಮತಗಳ ಮುಖಂಡರ ಪರಿಷತ್ತು ಒಂದನ್ನು ಕರೆದು ದೇಶಹಿತ ದೃಷ್ಟಿಯಿಂದ ಈ ಅಂತಃಕಲಹವನ್ನು ನಿರ್ಮೂಲಿಸಬೇಕೆಂದು ಕೇಳಿಕೊಂಡಿರುವರು. ತಾ ೫ರಲ್ಲಿ ಪರಿಷತ್ತು ನಡೆಯಿತು.

## ಅತ್ತೆಯನ್ನು ಕೊಂದುದಕ್ಕಾಗಿ— ನೇಕಾರನಿಗೆ ಜೀವಾವಧಿ ಶಿಕ್ಷೆ.

ಕಡಪಾ ಒಕ್ಟೋಬರ ೧೧

ಜಮ್ಮಲಮಡಗು ತಾಲ್ಲೂಕಿನಲ್ಲಿ ಒಬ್ಬ ನೇಕಾರನು ತನ್ನ ಅತ್ತೆಯ ಮೇಲೆ ಸಿಟ್ಟಾಗಿ, ಅವಳು ತನ್ನ ಪಾಲಿನ ಭೂಮಿಯನ್ನು ಬಿಟ್ಟುಕೊಡದಿದ್ದುದಕ್ಕಾಗಿ ಅವಳ ತಲೆಗೆ ಒಂದು ದೊಡ್ಡ ಕಲ್ಲಿನಿಂದ ಹೊಡೆದು ಕೊಂದನು. ತಾನು ಆ ಕೃತ್ಯ ನಡೆಸುತ್ತಿದ್ದಾಗ ಭ್ರಾಂತನಾಗಿದ್ದನೆಂದು ಆವನು ವಾದಿಸಿದರೂ ಜಡ್ಜರು ಅವನಿಗೆ ಗಡಿಪಾರು ಶಿಕ್ಷೆಯನ್ನು ವಿಧಿಸಿದರು.

## ಸಂಯುಕ್ತ ಗೌಡಸಾರಸ್ವತಬ್ರಾಹ್ಮಣರ ಪರಿಷತ್ತಿನ ಸ್ವಾಗತಸಮಿತಿಯು.

ಶ್ರೀ ಬಿ ಎಸ್ ಎನ್ ಕಾಮತ್ ಎಂ ಎಲ್ ಸಿ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿದೆ. ಪರಿಷತ್ತು ಇದೇ ತಾ ೨೬ ೨೭ ತಾರೀಕಲ್ಲು ಮುಂಬಯಿಯಲ್ಲಿ ಜರಗುವುದು. ಕಲಾಪ್ರದರ್ಶನವಿರುವುದು. ಶ್ರೀ ವಿ ಜಿ ದಳವಿ ಬಾರ್ ಎಟ್ ಲಾರವರೂ ಭಾಷಣಮಾಡಲಿರುವರು. ಗೌಡಸಾರಸ್ವತರೊಳಗಿರುವ ವಿವಿಧ ಮಠಗಳ ಐಕ್ಯವೇ ಈ ಪರಿಷತ್ತಿನ ಮೂಲೋದ್ದೇಶ. ಸ್ವಾಗತ ಸಮಿತಿಗೆ ವೈಸ್ ಚೇರ್‌ಮೇನರನ್ನಾಗಿ ಡಾ॥ ಅಮ್ಮೆಂಬಳ ಸದಾನಂದ ಪೈಗಳನ್ನು ಆರಿಸಲಾಗಿದೆ. ಅಲ್ಲದೆ ಅವರಲ್ಲಿ ಡಾ॥ ಎ ವಿ ಬಾಳಿಗಾ ಎಫ್ ಆರ್ ಸಿ ಎಸ್ ಡಾ। ಸುಜೀರ್ ಸಂಜೀವರಾವ ಎಂ ಬಿ ಬಿ ಎಸ್ ಶ್ರೀ ಆರ್ ಕೆ ಪ್ರಭು ಕೊಟ್ಟಿಕಾರ್ ಪದ್ಮನಾಭ ಪೈ ಉಡುಪಿಯ ಅಚ್ಯುತರಾವ್ ಟಿಪ್ಪಾಪುರ ಸಾರಸ್ವತರೂ ಇರುವರು.

## ಮದ್ರಾಸಿಗೆ ಬಾಬೂರಾಜೇಂದ್ರ ಪ್ರಸಾದರವರ ಆಗಮನ.

ಇವರು ಮೊನ್ನೆ ತಾ ೧೪ರಲ್ಲು ಮದ್ರಾಸಿಗೆ ಬಂದಿರುವರು. ಅಲ್ಲಿಯವರು ಇವರನ್ನು ಬಹಳ ಸಂಭ್ರಮದಿಂದ ಸ್ವಾಗತೀಕರಿಸಿದರು. ಸಾಧಾರಣ ೫೦೦೦ ಮೇಲೆ ಅಲ್ಲಿಯ ಮುಖಂಡರು ಇವರನ್ನು ಎದುರುಗೊಳ್ಳಲು ಮದ್ರಾಸಿನ ಸೆಂಟ್ರಲ್ ಸ್ಟೇಶನಿನಲ್ಲಿ ನೆರೆದಿದ್ದರು. ನಗರವು ತಳಿರುತೋರಣಗಳಿಂದ ಅಲಂಕೃತವಾಗಿತ್ತು. ಇವರೊಡನೆ ಶ್ರೀಮತಿ ಸರೋಜಿನಿ ದೇವಿಯವರೂ, ಆಚಾರ್ಯ ಕೃಪಲಾನಿ, ಜೈರಾಮದಾಸ ದೌಲತರಾಮ ಮತ್ತು ಪಟ್ಟಾಭಿ ಸೀತಾರಾಮಯ್ಯನವರೂ ಬಂದಿರುವರು. ಇವರು ಅಲ್ಲಿನ ಸುಪ್ರಸಿದ್ಧ ಅಮೃತಾಂಜನದ ಮಾಲೀಕರೂ ಆಂಧ್ರಪತ್ರಿಕೆಯ ಸಂಪಾದಕರೂ ಆದ ಶ್ರೀ ನಾಗೇಶ್ವರರಾವ್ ಪಂತಲುರವರ ನಿಲಯದಲ್ಲಿ ಇಳಿಯುವರು.

## ಬೆಳಗಾಂವಿನಲ್ಲಿ ಭಯಂಕರ ಅತ್ಯಾಚಾರ!
### ಕನ್ನಡಿಗರ ದುರದೃಷ್ಟ

ತಾ ೨ ೧೦-೩೫ನೇಯ ದಿನ ಇಲ್ಲಿಯ ನಾಡಹಬ್ಬದ ನಿಮಿತ್ತವಾಗಿ ರಾತ್ರಿ ೭॥ ಗಂಟೆಗೆ ಇಲ್ಲಿಯ ಮರಾಠಿ ಹೆಣ್ಮಕ್ಕಳ ಶಾಲೆಯಲ್ಲಿ ಸಭೆಯಾಯಿತು. ಬೆಂಗಳೂರಿನ ವಿಖ್ಯಾತ ಸಾಹಿತಿಗಳಾದ ಶ್ರೀ ಎಂ ಆರ್ ಶ್ರೀನಿವಾಸಮೂರ್ತಿಗಳು ವ್ಯಾಖ್ಯಾತರಾಗಿದ್ದರು. ಪ್ರೊ॥ ಬಸವನಾಳರು ಆ ದಿನದ ಸಭೆಯ ಅಧ್ಯಕ್ಷರಾಗಿದ್ದರು. ರಾತ್ರಿ ೯ ಗಂಟೆಯ ಸುಮಾರಿಕ್ಕೆ ಸಭೆಯು ಮುಕ್ತಾಯವಾಯಿತು. ನೆರೆದ ಜನರು ಸಭೆಯ ಕೆಲಸ ತೀರಿದ ಕೂಡಲೇ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಪ್ರೊ॥ ಬಸವನಾಳರು ಪ್ರೊ॥ ವಿ ಜಿ ಕುಲಕರ್ಣಿಯವರ ಕೂಡ ಸಭಾಸ್ಥಾನವನ್ನು ಬಿಟ್ಟು ಹೊರಗೆ ಬಂದು ಯಾವ ದಾರಿಯಿಂದ ಹೋಗಬೇಕೆಂಬದನ್ನು ವಿಚಾರಮಾಡುತ್ತಿರುವಷ್ಟರಲ್ಲಿ ಯಾವನೊಬ್ಬ ಪುಂಡನು ಅವರನ್ನು ಬಲವಾಗಿ ತಲೆಯ ಮೇಲೆ ಬಡೆದನು. ಏನೂ ತಿಳಿಯದವರಾಗಿ ಪ್ರೊ॥ ಬಸವನಾಳರು ಒದರಿದ್ದರಿಂದ ಸ್ವಲ್ಪ ದೂರದಲ್ಲಿಯೇ ಹೋಗುತ್ತಿದ್ದ ಜನರು ಸಭೆಗೆ ಬಂದ ಕಾಲೇಜು ವಿದ್ಯಾರ್ಥಿಗಳು ಓಡಿಬಂದು ಆ ಪುಂಡನನ್ನು ಹಿಡಿದರು. ಅಷ್ಟರಲ್ಲಿ ಆತನ ಇನ್ನೊಬ್ಬ ಸಂಗಾತಿಯು ಪ್ರೋ॥ ಬಸವನಾಳರ ಬೆನ್ನಮೇಲೆ ತೀಕ್ಷ್ಣಶಸ್ತ್ರದಿಂದ ಪ್ರಹಾರಮಾಡುವ ಪ್ರಯತ್ನಮಾಡಿದನು. ಆದರೆ ಸುದೈವದಿಂದ ಅವರ ಅಂಗಿಕೋಟುಗಳೇ ಹರಿದುಹೋದುವು. ಬೆನ್ನಿಗೆ ಸ್ವಲ್ಪ ಗಾಯವಾಗಿದೆ. ಅಷ್ಟರಲ್ಲಿ ದೂರದಲ್ಲಿ ನಿಂತಿದ್ದ ಶ್ರೀ ಜೋಶಿ ನಾರಾಯಣರಾಯರಂಥವರೂ ಬಂದು ಆ ಪುಂಡರನ್ನು ವಿದ್ಯಾರ್ಥಿಗಳ ಕೈಯೊಳಗಿಂದ ಬಿಡಿಸಿದರಂತೆ. ಆಗ ಬಸವನಾಳರಿಗೆ ಗಾಯವಾಗಿದ್ದು ಅತ್ತ ಲಕ್ಷ್ಯದಲ್ಲಿ ಬಾರಲಿಲ್ಲವಾದುದರಿಂದ ಆ ಪುಂಡರನ್ನು ಬಿಟ್ಟುಬಿಟ್ಟರು. ಅಲ್ಲಿಯೇ ಭುವನೇಶ್ವರಿ ಮುದ್ರಣಾಲಯದಲ್ಲಿ ಸ್ವಲ್ಪ ವಿಶ್ರಾಂತಿ ದೊರೆತ ಮೇಲೆ ಬಸವನಾಳರನ್ನು ಅವರ ಮನೆಗೆ ಮುಟ್ಟಿಸಲಾಯಿತು. ಗಾಯವನ್ನು ಡಾಕ್ಟರರು ಪರೀಕ್ಷಿಸಲು ಚಿಂತೆಗೆ ವಿಷಯವಾದಂಥ ಸಂದರ್ಭವಿಲ್ಲೆಂದು ತಿಳಿದುಬಂದಿದೆ. ಗಾಯವಾದ ಸ್ಥಳದಲ್ಲಿ ಸ್ವಲ್ಪ ವೇದನೆಯಾಗುತ್ತದೆಯೆಂದು ತಿಳಿಯುತ್ತದೆ. ಅಂಗಿಗಳು ಮತ್ತು ಬಸವನಾಳರಿಗೆ ಕಳಿಸಲ್ಪಟ್ಟ ಭಯಸೂಚಕ ಪತ್ರಗಳೂ ಪೋಲೀಸರ ಕಡೆಗೆ ವಿಚಾರಣೆಗಾಗಿ ಕಳಿಸಲ್ಪಟ್ಟವೆಯೆಂದೂ ತಿಳಿದುಬರುತ್ತದೆ.

(ಅರುಣೋದಯ)

## ತಾಲೂಕು ವರ್ತಮಾನ.

**ಉಡುಪಿ**—ಸ್ಥಳೀಯ ಜಿಮ್ಖಾನಾ ಕಮಿಟಿಯ ಪರವಾದ ಕ್ರಿಕೆಟ್ ಪಂದ್ಯಾಟಗಳಲ್ಲಿ ಜೂನಿಯರ್ಸ್ ಕಪ್ ಕ್ರಿಶ್ಚನ್ ಹೈಸ್ಕೂಲಿಗೂ, ಸೀನಿಯರ್ಸ್ ಕಪ್ ಸ್ಥಳೀಯ ಬೋರ್ಡ್ ಹೈಸ್ಕೂಲಿಗೂ ದೊರೆತಿವೆ. ಎರಡನೆಯವರಿಗೆ ಈ ಕಪ್ ಬಿಡದೆ ಮೂರನೆಯ ಸಲ ದೊರಕಿರುವುದರಿಂದ ಖಾಯಂ ಆಗುತ್ತದೆ.

ಇದೇ ನವರಾತ್ರಿ ಮಹೋತ್ಸವವು ಇಲ್ಲಿನ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿಸಲ್ಪಟ್ಟಾಗ, ಕನೆಯ ದಿನ ಸ್ಥಳೀಯ ಉಡುಪಿ ಜಿಮ್ನೇಸಿಯಮಿನವರ ಆಟಗಳ ಪ್ರದರ್ಶನಗಳಿದ್ದುವು. ಆ ಪೈಕಿ ಶ್ರೀ ಕೆ ವಿ ಶೆಟ್ಟಿ ಎಂಬ ಯುವಕರು ಹಿಂದಣ ವರ್ಷ ಅಂಗಸೌಂದರ್ಯಕ್ಕೆ ಬಹುಮಾನಿತರಾಗಿದ್ದುದಲ್ಲದೆ ಅನಂತರವೂ ಪರಿಶ್ರಮಪಡುತ್ತ ಈಗ್ಗೆ ಒಂದು ಟನ್ ಭಾರವಾದ ಜನಭರಿತ ಮೋಟಾರು-ಕಾರನ್ನು ಯಶಸ್ವಿಯಾಗಿ ತಮ್ಮ ದೇಹದ ಮೇಲಿಂದ ದಾಟಿಸಿದುದೂ ಒಂದು ಇಂಚು ದಪ್ಪವಾದ ಕಬ್ಬಿಣದ ಸರಳನ್ನು ಕೈಯಿಂದಲೇ ಬೇಕಾದಂತೆಲ್ಲ ಬಗ್ಗಿಸಿ ಕೈಗೆ ಸುತ್ತಿಕೊಂಡುದೂ ಆಶ್ಚರ್ಯವನ್ನುಂಟುಮಾಡಿದೆ. ನಮ್ಮೂರಲ್ಲಿ ಇದುವರೆಗೆ ಅಂಗಸಾಧನೆಯಿಂದಾಗಿ ಇಂತಹ ಅದ್ಭುತ ಸಾಹಸಯುಕ್ತವಾದ ಫೀಟ್ಸನ್ನು ಯಾರೂ ಮಾಡಿದ್ದಿಲ್ಲ. ಇವರು ಇನ್ನೂ ಅಧಿಕರೀತಿಯಲ್ಲಿ ಪ್ರಯೋಗಗಳನ್ನು ಮಾಡಿ ಕೀರ್ತಿಯನ್ನು ಪಡೆಯಲೆಂದು ಹಾರೈಸಲಾಗುತ್ತದೆ.

ಈಗ್ಗೆ ಕಳೆದುಹೋದ ಗಾಂಧಿಜಯಂತಿ ಕಾಲದಲ್ಲಿ ನಮ್ಮ ತಾಲೂಕು ಕಾಂಗ್ರೆಸ್ ಕಮಿಟಿಯವರಾಗಲೀ ಕಾಂಗ್ರೆಸ್ ಧುರೀಣರಾಗಲೀ ಬೇರೆ ಮಂದಿಗಳಾಗಲೀ ತಲೆಗೊಡಲಿಲ್ಲ. ಅಂದು ಮಹಾತ್ಮಗಾಂಧಿಯವರೂ ಬಾಬೂರಾಜೇಂದ್ರ ಪ್ರಸಾದರೂ ಇಲ್ಲಿಗೆ ಚಿತ್ತೈಸಿದ್ದಾಗ ಸಂಭ್ರಮದಲ್ಲಿ ಭಾಗವಹಿಸಿ ಮುಂದೆ ಬಂದ ಮಹನೀಯರೆಲ್ಲಿ? ಅಖಿಲ ಭಾರತದಲ್ಲೆಲ್ಲಾ ಜಯಂತಿಯ ಉತ್ಸವ ವಿಜೃಂಭಣೆಗಳಾಗಿರಲು ಇಲ್ಲಿ ಅದರ ಗಂಧವು ಕೂಡ ಇದ್ದಿಲ್ಲ. ಸದ್ಯ ನಡೆಯಲಿರುವ ಜಿಲ್ಲಾ ಬೋರ್ಡ್ ಚುನಾವಣೆಗಾಗಲಿ ಕಾಂಗ್ರೆಸಿನವರು ಸಿವಿಲ್ ಬೋರ್ಡಿನವರು ಇತರ ನಿಂತವರು ಹಂಬಲಿಸುತ್ತಿರಲು ಕಾಂಗ್ರೆಸ್ಸಿನ ಸಮಗ್ರ ಭಾರತದ ಅಧಿನಾಯಕರಾಗಿರುವ ಬಾಬೂರಾಜೇಂದ್ರ ಪ್ರಸಾದರ ದಿನಕ್ಕೆ ದೋಷವಂತ್ಯ ಮಹಾತ್ಮರಿಗೆ ಮನ್ನಣೆಯಿಲ್ಲ? ಈ ತರಾರನ್ನು ಓಟುಗಳಿಗಾಗಿ ಅಡಬೇಡುವುದೇ ಹೊರತು, ಇವರ [illegible] ಜನತೆಯ ಉಮೇದ್ವಾರರ ಉತ್ತರವೇನು?

## ಹರಿಜನರಿಗೆ ಹೊಡೆದರು
### ಮಂತ್ರವಾದಿಗಳೆಂಬ ಶಂಕೆ

ಅಹಮ್ಮದಾಬಾದ್ ಅಕ್ಟೋಬರ ೧೩

ಖರೋಡದ ಕಾಸೋರ್ ಎಂಬಲ್ಲಿ ೫ ಮಂದಿ ಹರಿಜನ ಸ್ತ್ರೀಪುರುಷರಿಗೆ ಕೆಲವು ಸವರ್ಣ ಹಿಂದೂಗಳು ಒಟ್ಟುಗೂಡಿ ಬಡೆದರು. ಹರಿಜನರು ಮಂತ್ರವಾದಿಗಳಾಗಿ ದನಕರುಗಳಿಗೆ ರೋಗರುಜಿನಗಳನ್ನು ಕೊಡುತ್ತಿದ್ದರೆಂಬ ಶಂಕೆಯೇ ಈ ಹೊಡೆತಕ್ಕೆ ಕಾರಣ. ಪೆಟ್ಟು ತಿಂದವನನ್ನು ಸ್ಟೇಟ್ ಡಿಸ್ಪೆನ್ಸರಿಗೆ ಕೊಂಡೊಯ್ಯಲಾಗಿದೆ. ಪೋಲೀಸರು ತನಿಖೆ ನಡಿಸುತ್ತಿರುವರು.


**KANNADA**
Savings Certificates
can be cashed
even before maturity.

Full Particulars from—
CANARA BANK LTD

OFFICES AT —

| | |
|---|---|
| Bombay—Fort | Mangalore—City, |
| Bombay—Mandvi, | Mangalore—Bunder, |
| Hubli, | Kasaragod, |
| Calicut, | Puttur, |
| Cochin, | Buntwal, |
| Ernakulam, | Karkala, |
| Alleppey, | Coondapoor, |
| Bangalore, | Udipi, |
| Davangere, | & |
| Chickmagalur, | Gangoli |

AVAILABLE IN DENOMINATIONS OF
Rs. 10/ UPWORDS

**TOTAL YIELD RS 4-6-0% P A.**

Paid once half yearly at 3½% p a
with an additional 1½% p a on maturity
If Left To Accumulate
**RS. 100/-**
Will Amount to
**RS. 122-13-6**

Estd 1906

**CANARA BANK**
LIMITED

| Subscribed Capital | | Paid up Capital |
|---|---|---|
| 6,00,000 | | 3,31,000 |
| Reserves | Deposits | Working Capital |
| 4,50,000 | 58,62,000 | 78,49,000 |

# WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassan and Kadur districts.
2. Coorg, South Canara, Shimoga and Chitaldrug districts
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY



ಡಾಕ್ಟರ ವಾಮನ ಗೋಪಾಳರವರ

ಅಯೋಡಾಯಿಜ್ಡ್
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೫೦ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳ್ವರು
ಡಾ॥ ಗೌತಮ ರಾವ್
ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨
ಕೆಮಿಸ್ಟ್ಸ [illegible], ಮಂಗಳೂರು
(ಸಚಿತ್ರಪತ್ರಕ್ಕಾಗಿ ಇಂಗ್ಲಿಷ್ ಅಥವಾ ಮರಾಠಿಯಲ್ಲಿ



THE 1935 MODEL

# HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA—AND—MANGALORE.



# Now For Sale.

**Poholatum (Balm)** (German make) This is a homo remedy for Rheumatism Asthma Sciatica Lumbago Insect bites, Herpes Wounds Cuts Colds Headache It is a complete substitute for the domestic medicine chest Try once this unequalled remedy In 1oz tin Rs 3/- In oz. jar As 12 -

**Superior Red Balm** For relieving pains in muscles and on skin Directions for use with the bottle Price As 12 -only

**Wurmteufel** Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms children and adults try this unique remedy and be freed from your ailment Price As 10 per packet

**Pocket Inhaler** For coughs and hoarseness headache catarrh colds use this inhaler and you will be relieved immediately Price per inhaler A[illegible] As 8

**Po-Ho Fluid** For asthma colds and [illegible] toothache lumbago, a sure remedy in all cases Price As 6 and Re 1/ per phial

**Cough Cure** (An infallible remedy for coughs of all kinds bronchitis hoarseness Particulars in bottle Price As 12 for 3 oz bottle

**The New Curative Earth** A Radium cure for incurable diseases

**Mithra Toilet Soaps**—Scientifically prepared German soaps excellent for health Price As 1 5 2 6 3/ 4

## Basel Mission Book Depot

Mangalore, Branches in Codialbail, Hubli Calicut



# ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

# ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

## ವರ್ಷ ಒಂದರ ರೂಪಾಯಿ/10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

# ಬಾಹ್ಯ ಪ್ರಪಂಚ

ಬಲ್ಗೇರಿಯಾದಲ್ಲಿ ಕ್ರಾಂತಿಕಾರರನ್ನು ದಣಿಸಲು ಮಾರ್ಶೆಲ್ ಲಾ ವನ್ನು ಜ್ಯಾರಿಗೆ ತಂದಿರುವರು. ಕಾರಣ ಒಂದು ಹೊಸ ಪಕ್ಷವು ಅಲ್ಲಿ ಹೊರಬಿದ್ದಿದೆ. ಈಗಿನ ಸರಕಾರವನ್ನು ಮುಗುಚಿ ಹಾಕುವುದು, ಅಲ್ಲಿಯ ಅರಸರ ಕೊಲೆಮಾಡುವುದು, ಇವೇ ಮೊದಲಾದ ಕ್ರಾಂತಿಯ ಉದ್ದೇಶಗಳು ಈ ಪಕ್ಷದ್ದು. ಸರಕಾರದವರು ಇವನ್ನು ತಿಳಿದು, ಈ ಪಂಗಡದ ಮುಖಂಡರನ್ನು ಮತ್ತು ಈ ಪಕ್ಷಕ್ಕೆ ಸಂಬಂಧವುಳ್ಳ ಹಲವು ಜನರನ್ನು ಕೈದು ಮಾಡಿರುತ್ತಾರೆ. ಇದರ ಮುಖ್ಯ ಮಂತ್ರಿಯವರ ಹೇಳಿಕೆ ಪ್ರಕಾರ ಈ ಪಕ್ಷವು ವೃದ್ಧಿಯಾದಲ್ಲಿ ಸರಕಾರದ ನಿರ್ಣಯವೂ, ಅರಸರ ಕೊಲೆಯೂ, ಮತ್ತು ಇನ್ನು ಇದರ ಮಹನೀಯರು, ಮೃತ್ಯುವಶರಾಗುತ್ತಿದ್ದರೆಂದು ಈ ಭಯಂಕರ ಘಟನೆಯನ್ನು ನಿಲ್ಲಿಸಲು ಮಾರ್ಶೆಲ್ ಲಾ ವನ್ನು ಜ್ಯಾರಿಗೆ ತಂದಿರುವರು.

ಜರ್ಮನಿಯು ಆಸ್ಟ್ರೀಯದೊಡನೆ ರಾಜಪ್ರಸ್ತಾಪಗಳನ್ನು ನಡೆಸುತ್ತಿದೆ ಎಂಬ ವರ್ತಮಾನವು ಯುರೋಪು ಖಂಡದ ಹಲವು ಕಡೆಗಳಲ್ಲಿ ಹಬ್ಬಿದೆ. ನಿವೃತ್ತ ಚಾನ್ಸಲರಾದ ವೊನ್ ಪೇಪನರು ಈ ಕಾರ್ಯದಲ್ಲಿ ಹಿಟ್ಲರರ ಅಪ್ಪಣೆ ಮೇರೆಗೆ ಹೆಚ್ಚಿನ ಪ್ರಯತ್ನಗಳನ್ನು ಮಾಡುವರೆಂದು ಒಂದು ವಾರ್ತೆ. ಇನ್ನು ೫ ವರ್ಷಗಳ ತನಕ ಇವರೊಳಗೆ ಯಾವ ತರದ ಕ್ಷೋಭೆ ಉಂಟಾಗದೆ, ವ್ಯಾಪಾರ ವಹಿವಾಟುಗಳು ಸಾಂಗವಾಗಿ ನಡೆಯುವಂತೆ ಮಾಡುವುದು ಜರ್ಮನಿಯವರ ಮುಖ್ಯ ಉದ್ದೇಶ. ಈ ವಿಚಾರದಲ್ಲಿ ಆಸ್ಟ್ರೀಯಾ ದೇಶದ ಜನರಲ್ ದೊಂಬ್ರನೆಂಬವರು, ತರ್ಕಿಸಲು ಜರ್ಮನಿಗೆ ಖುದ್ದಾಗಿ ಬಂದಿದ್ದರು. ಆಸ್ಟ್ರೀಯನಾದವರಿಗೆ ಇದರಲ್ಲಿ ಸಮ್ಮತವೆ ಇರುವುದು. ಆದರೆ ಕೆಲವರ ಮನಸ್ಸಿಗೆ ಇದು ಒಪ್ಪದು. ಇನ್ನು ಕೆಲವರು ಜರ್ಮನಿಯಲ್ಲಿ ಈ ಯಾವ ವಿಚಾರವು ನಡೆಯಲಿಲ್ಲವೆನ್ನುತ್ತಿದ್ದಾರೆ.

ಫ್ರೆಂಚರ ಪಶ್ಚಿಮ ಆಫ್ರಿಕಾದಲ್ಲಿ, ಹೇರಳ ಭಂಗಾರ ಉಂಟೆಂದು ತಿಳಿದು ಬಂದಿದೆ. ಇದರಿಂದ ಹೆಚ್ಚು ಐಶ್ವರ್ಯ ಗಳಿಸಬಹುದೆಂದು ತಿಳಿಯಲಾಗಿದೆ. ಭಂಗಾರವಿರುವ ಪ್ರದೇಶವು ಬಹಳ ವಿಶಾಲವಾಗಿದ್ದು, ಖಂಡಗಳಲ್ಲಿ ಹೆಚ್ಚಿನ ಭಂಗಾರವೆ ಇರುವುದೆಂದು ಕಂಡುಹಿಡಿದಿದ್ದಾರೆ. ಇಲ್ಲಿ ಖನಿಗಳನ್ನು ನಿರ್ಮಿಸಲು ಒಂದು ದೊಡ್ಡ ಸಂಸ್ಥೆಯನ್ನು ನಿರ್ಮಾಣ ಮಾಡಬೇಕಾಗಿ ಸೂಚನೆಗಳಿವೆ. ಫ್ರೆಂಚ ಸರಕಾರದವರು, ಅವರು ಅಲ್ಲಿನ ಮಂತ್ರಿಯವರಿಗೆ ಈ ಸ್ಥಳದ ಪರೀಕ್ಷೆಯನ್ನು ಕೂಡಲೇ ಪ್ರಾರಂಭಿಸುವಂತೆ ಆಜ್ಞೆಯನ್ನು ಕೊಟ್ಟಿದ್ದಾರೆ. ಈ ಕಾರ್ಯವು ಬೇಗನೆ ಪ್ರಾರಂಭವಾಗುವುದು ಮತ್ತು ಈ ಶೋಧನೆಯು ಜಯಶೀಲವಾದರೆ, ಅಲ್ಲಿ ಬೇಗನೆ ಒಂದು ದೊಡ್ಡ ಸಂಸ್ಥೆಯು ಸೃಷ್ಟಿಸಲಾಗುವುದು.

ಇಷ್ಟರ ವರೆಗೆ ಬ್ರಿಟಿಷ ವರ್ತಕರ ಕೈಯಲ್ಲಿದ್ದ ಇರೆಕ್ ರೈಲ್ವೆ ಕಂಪೆನಿಯು ಇರೆಕ್ ಸರಕಾರಕ್ಕೆ ಕೊಡಲ್ಪಡುವುದು. ಇರೆಕ್ ಸರಕಾರದವರು ಇದಕ್ಕೆ £೪೦೦,೦೦೦ ಕ್ರಯ ಕೊಡಲು ಒಪ್ಪಿರುವರು. ಇದರಲ್ಲಿ £ ೩೦೦ ೦೦೦ ಕ್ಷೇಮನಿಧಿ ಕೂಡಿಕೊಂಡಿದೆ. ಆದರೆ ಅಲ್ಲಿನವರಿಗೆ ರೈಲ್ವೆಯ ವಿಷಯ ಅರಿವು ಸ್ವಲ್ಪ ಕಡಿಮೆಯಾದ ಕಾರಣ ಕೆಲವು ಬ್ರಿಟಿಷ, ಪರಿಣತರನ್ನು ಕೆಲಸದಲ್ಲಿ ಇಟ್ಟುಕೊಳ್ಳುವರು.

ಜರ್ಮನಿಯ ಪ್ರಸಾರಣಾ ಸಚಿವರಾದ ಡಾ. ಗೋಬೆಲ್ಸರು, ನ್ಯೂರೆಂಬರ್ಗ ಎಂಬಲ್ಲಿ ನಡೆದ ನಾಜಿಗಳ ಕೊಂಗ್ರೆಸ್ಸಿನಲ್ಲಿ, ಸೋವಿಯಟ್ ರಷ್ಯಾವನ್ನು ಖಂಡಿಸಿ ಭಾಷಣ ಮಾಡಿದರು. ಸೋವಿಯಟಿನ ನಾಯಕನಾದ ಸ್ಟೇಲಿನನು ಮುಂಚೆ ಕಳ್ಳರ ಮುಖಂಡನಾಗಿದ್ದನೆಂದೂ, ಇವನು ಹಲವು ಬ್ಯಾಂಕುಗಳಿಗೆ ಕನ್ನಕೊಡೆದಿರುವನೆಂದೂ ಲೆನಿನ್ ಮತ್ತು ಲಿಟವಿನೊ (ಇವರು ಸೋವಿಯಟ್ ಸರಕಾರದ ದೊಡ್ಡ ಮಹನೀಯರು) ಎಂಬವರು ಕದ್ದ ವಸ್ತುಗಳನ್ನು ಪಡೆಯುತ್ತಿದ್ದರೆಂಬ ಹಲಕೆಲವು ವಿಷಯಗಳನ್ನು ತಮ್ಮ ಭಾಷಣದಲ್ಲಿ ತಿಳಿಸಿದರು.

ಇಂಪೀರಿಯಲ್ ಏಯರ್‌ವೇಸಿನ 'ಹೆನೊ' ಎಂಬ ವಿಮಾನವೊಂದು ಭೂಮಿಗೆ ಇಳಿಯುವ ಸಮಯ, ಅದರ ಚಕ್ರದ ಟಾಯರು ಒಡೆಯಲಾಗಿ ನೆಲಕ್ಕೆ ಢಕ್ಕೆ ಬಡೆಯಿತು. ಒಳಗಿದ್ದ ಪ್ರಯಾಣಿಕರಿಗೆ ಯಾವ ತರದ ಬಾಧೆ ಆಗಲಿಲ್ಲ.

ಹೀಗೆಯೆ ಆಸ್ಟ್ರೇಲಿಯಾದ ಮೆಲ್‌ಬೋರ್ನಿಗೆ ಹೊರಟ ಇನ್ನೊಂದು ವಿಮಾನವು "ಕ್ಲಿಲೆಂಡರ್ ಐಲೆಂಡ್" ಎಂಬಲ್ಲಿ ಬಿದ್ದು, ಹಲವು ಜನರು ಮೃತರಾಗಿರುವರು.

ಅಮೇರಿಕಾದಲ್ಲಿ ಇನ್ನೊಂದು ವಿಮಾನವು ಢಿಕ್ಕಿ ಬಡೆದು ಹದಿನೆಂಟು ಜನರು ಮೃತರಾದರು.

ಜಪಾನಿನವರು ಸೆಂಕ್ಷನ್‌ಗಳಲ್ಲಿ ಭಾಗವಹಿಸದಿದ್ದರೂ ಇಟೆಲಿಗೆ ಬೇಕಾದ ಯುದ್ಧ ಪ್ರಕರಣಗಳನ್ನು ಒದಗಿಸುವುದಿಲ್ಲವೆಂಬ ನಂಬಿಗೆಯು ಹಲವು ಕಡೆಗಳಲ್ಲಿ ಇದೆ. ಆದರೆ, ನಿತ್ಯ ವ್ಯಾಪಾರವು ಯಾವ ರೀತಿಯಲ್ಲಿ ಕೂಡಾ ನಿಲ್ಲಿಸಲಾಗಲಿಕ್ಕಿಲ್ಲ. ಇಟೆಲಿಯು ಯುದ್ಧಾಧೀನವಾದುದರಿಂದ, ಅವರ ದೇಶೀಯ ವ್ಯಾಪಾರವು ಹೆಚ್ಚಾಗಿ ಜಪಾನರ ಕೈ ಸೇರುವಂತಿದೆ.

ಮೆಮೆಲ್ ಮಹಾಯುದ್ಧದ ಮೊದಲು ಜರ್ಮನಿಯವರ ಒಂದು ಪ್ರಾಂತ್ಯವಾಗಿದ್ದಿತು. ಆದರೆ, ೧೯೧೯ರಲ್ಲಾದ ಒಪ್ಪಂದ ಪ್ರಕಾರ, ಇದು ಲೂಥಿನಿಯಾನಕ್ಕೆ ಕೊಡಲಾಯಿತು. ಇಲ್ಲಿ ಒಂದು ಏಳ್ವಿಯಕ್ಕೆ ಮಿಕ್ಕಿ ಜರ್ಮನರಿರುವರು. ೧,೩೧೩೦೦ ಓಟುಗಳಿದ್ದುವು. ಇದರಲ್ಲಿ ೧೩೦,೦೦೦ ಮಾತ್ರ ಉಪಯೋಗವಾಯಿತು. ೨೯ ಪ್ರತಿನಿಧಿಗಳ ಸ್ಥಾನಗಳಲ್ಲಿ ೨೪ ಸ್ಥಾನಗಳು ಜರ್ಮನಿಯವರಿಗೆ ಸಿಕ್ಕಿತು.

ಲೇಬರ್ ಪಾರ್ಟಿಯ ಚೆಯರ್‌ಮೆನರಾಗಿರುವ ಲೆನ್ಸ್ ಬರಿಯವರು ತಮ್ಮ ಸ್ಥಾನವನ್ನು ತ್ಯಜಿಸಿರುವರು. ಕಾರಣ ಸೆಂಕ್ಷನ್‌ಗಳ ವಿಷಯ ವಿವಾದ. ಇವರ ಬದಲು, ಮೇಜರ್ ಅಟ್ಲಿ ಎಂಬವರು ಬಂದಿರುವರು.

ನಮ್ಮ ಮಾನ್ಯ ಚಕ್ರವರ್ತಿಗಳ ನಾಲ್ಕನೇ ಪುತ್ರರಾದ ಡ್ಯೂಕ್ ಆಫ್ ಕೆಂಟರವರಿಗೆ ಒಂದು ಗಂಡು ಮಗುವು ಜನಿಸಿರುತ್ತದೆ. ಈ ಮಗುವಿಗೆ ಸಿಂಹಾಸನದ ಹಕ್ಕಿನಲ್ಲಿ ಏಳನೇ ಸ್ಥಾನವು ದೊರಕುವುದು. ಈ ವರ್ತಮಾನವನ್ನು ತಂತಿ ಮೂಲಕ ಸಂಡ್ರಿಂಗ್ಹಾಮ್‌ನಲ್ಲಿ ವಾಸಿಸುತ್ತಿದ್ದ ಮಾನ್ಯ ಚಕ್ರವರ್ತಿ ತಿಳಿಸಲಾಯಿತು.

# ಹಿಂದೂದೇಶ.

ಸಂಯುಕ್ತ ಪ್ರಾಂತ್ಯದಲ್ಲಿ ಕೊಂಗ್ರೆಸ್ಸಿನವರು ಯಾವತ್ತೂ ಚುನಾವಣೆಗಳಲ್ಲಿ ಭಾಗವಹಿಸಬೇಕೆಂಬ ಠರಾವು ಮಂಜೂರಾಗಿದೆ.

ಸಂಯುಕ್ತ ಪ್ರಾಂತದ, ಕಾಂಗ್ರೆಸ್ಸಿನವರು ಗ್ರಾಮಾಭ್ಯುದಯ ಕೆಲಸವನ್ನು ಈ ಕೆಳಗಿನ ರೀತಿಯಲ್ಲಿ ನಡೆಯಿಸುವರು. (೧) ಪ್ರೌಢ ಶಿಕ್ಷಣ (೨) ಸಣ್ಣ ಹುಡುಗಿಯರಿಗೆ ಶಾಲೆಗಳನ್ನು ನಿರ್ಮಿಸುವುದು (ಹತ್ತು ವರ್ಷದ ಕೆಳಗಿನವರಿಗೆ) (೩) ಗ್ರಾಮದ ಹಲವು ಕಡೆಗಳಲ್ಲಿ ವೈದಿಕ ಸಹಾಯ ದೊರಕುವಂತೆ ದವಾಖಾನೆಗಳ ನಿರ್ಮಾಣ (೪) ಪತ್ರಿಕೆಗಳ ಮೂಲಕ ವರ್ತಮಾನ ಪ್ರಸಾರಣಾ ಕಾರ್ಯ (೫) ಗ್ರಾಮದ ಅಭಿವೃದ್ಧಿಯನ್ನು ನೋಡೋಣ ಮುಖ್ಯತವಾಗಿ ಆರೋಗ್ಯದಲ್ಲಿ (೬) ವಸ್ತ್ರವನ್ನು ನೇಯುವುದು (೭) ಮನೆ ಕೈಗಾರಿಕೆಗಳನ್ನು ಸಾಂಗವಾಗಿ ನಡೆಸುವುದು ಮತ್ತು (೮) ಹಳ್ಳಿಗರಿಗೆ ಸರಕಾರದ ವಿಷಯ ಜ್ಞಾನವನ್ನು ಕೊಡುವುದು. ಪ್ರತಿ ಒಂದು ಹಳ್ಳಿಯಲ್ಲಿ ಒಂದೊಂದು ಆಶ್ರಮವನ್ನು ಹನ್ನೊಂದು ಜನರು (ಸುಶಿಕ್ಷಿತರಾದವರು) ನೋಡಿಕೊಳ್ಳುವರು. ಈ ಆಶ್ರಮದವರು ವಾರಕ್ಕೆ ಒಂದಾವರ್ತಿ ಸೇರಿ, ಹಳ್ಳಿಗರ ಕಮಿಟಿಗಳನ್ನು ನಿರ್ಮಿಸಿ, ಕಾರ್ಯವನ್ನು ಮಾಡಬೇಕು. ಅಲ್ಲಹಾಬಾದಿನ ಹಲವು ಹಳ್ಳಿಗಳಲ್ಲಿ ಈ ರೀತಿ ಗ್ರಾಮಾಭ್ಯುದಯ ಕೆಲಸವು ನಡೆಯುತ್ತಿರುವುದು.

ಹೈದರಾಬಾದಿನ ಸರಕಾರದಲ್ಲಿ ಹಸ್ಲಿ ೧೩೪೫ ಬಜೆಟ ಪ್ರಕಾರ, ೧೬ ೪೬ ಲಕ್ಷ ರೂಪಾಯಿಗಳ ಉಳಿತಾಯವಾಗುವುದು. ಕಳೆದ ವರ್ಷದ ಉಳಿತಾಯವು ೧೬೨ ಲಕ್ಷ ರೂಪಾಯಿ. ಈ ವರ್ಷದ ಆದಾಯವು, ರೂ ೮೫೫ ೯೨ ಲಕ್ಷ ವೆಚ್ಚ ರೂ. ೮೩೯.೪೬ ಲಕ್ಷ. ಈ ವೆಚ್ಚದಲ್ಲಿ ರೂ ೧೫ ಲಕ್ಷ ಬರಗಾಲಕ್ಕೆ ಕ್ಷೇಮನಿಧಿಯಾಗಿ ಬಿಂಗಡಿಸಲ್ಪಟ್ಟಿದೆ. ಮತ್ತು ೧೪೬೮ ಸಾಲಗಳ ಮರುಪಾವತಿಗೆ ಇರಿಸಿದ್ದಾರೆ. ಈ ವರ್ಷಕ್ಕೆ ಯಾವ ತರದ ತೆರಿಗೆಯನ್ನು ವಿಧಿಸುವುದಿಲ್ಲ. ವೆಚ್ಚದಲ್ಲಿ ರೂ. ೭೨.೪೩ ಲಕ್ಷ ಕೆಪಿಟಲ್ ಎಕ್ಸ್‌ಪೆಂಡಿಚರ್ ಆಗಿರುವುದು. ರೂ. ೭ ಲಕ್ಷವನ್ನು ರೈಲ್ವೆ ಹೊಸ ಮಾರ್ಗಗಳನ್ನು ನಿರ್ಮಿಸಲು ವ್ಯಯಿಸಲ್ಪಡುವುದು. ರೂ. ೧೯ ಲಕ್ಷವನ್ನು ಮಾಗೋಪಾಯಗಳ ದುರುಸ್ತಿಗೂ ರಚನೆಗೂ ಬಿಂಗಡಿಸಿದ್ದಾರೆ.

ನಿಜಾಮರ ರಜತೋತ್ಸವವನ್ನು ಮುಂದುವರಿಸಲಾಯಿತು. ಇದು ಡಿಸೆಂಬರ ತಾ ೨೩ಕ್ಕೆ ಪ್ರಾರಂಭವಾಗಿ ಜನವರಿ ೩ರ ತನಕ ನಡೆಯಬೇಕಾಗಿತ್ತು. ಆದರೆ ಹಲವು ಕಾರಣಗಳಿಂದ ಇದನ್ನು ಫೆಬ್ರವರಿ ಅಖೈರಿಗೂ ಮಾರ್ಚಿನ ಪ್ರಾರಂಭದಲ್ಲಿ ಮುಂದುವರಿಸಲಾಯಿತು.

ನವಗೊಂಗ ಕಂಟೋನಮೆಂಟನ್ನು, ಚಕ್ರಪುರ ದರ್ಬಾರಿಗೆ ಒಪ್ಪಿಸಬೇಕೆಂಬ ವಿಚಾರ ತೀರ್ಮಾನವಾಯಿತು. ನವಗೊಂಗ ಚಕ್ರಪುರದವರಿಗೆ ಒಪ್ಪಿಸಲಾಯಿತು.

ಪೂನೆಯ ............ ವರ್ಣಾಶ್ರಮ ಸ್ವರಾಜ್ಯ ಸಂಘದ ಅಧ್ಯಕ್ಷರಾದ ಶ್ರೀ ವಿ. ಬಿ ದಾವರೆ ಇವರನ್ನು ಪಿ ಕೋ. ೧೨೪ ಪ್ರಕರಣದ ಪ್ರಕಾರ (ರಾಜದ್ರೋಹಕ್ಕೆ) ಕೈದುಮಾಡಲಾಯಿತು.

ಸಂಯುಕ್ತ ಪ್ರಾಂತ್ಯದಲ್ಲಿ ಹಿಂದೂಮುಸ್ಲಿಮರಲ್ಲಿ ಪರಸ್ಪರ ಮೈತ್ರಿಯು ಇಲ್ಲವೆಂಬುದು ಅಲ್ಲಿನ ಸರಕಾರದ ಪೋಲೀಸ ರಿಪೋರ್ಟಿನಿಂದ ಭಾಸವಾಗುತ್ತದೆ. ಗತ ವರ್ಷದಲ್ಲಿ ೬೦ ಜಾತಿವೈಷಮ್ಯ ದಂಗೆಗಳು ನಡೆದುವು. (೧೯೩೩ರಲ್ಲಿ ೮ ದಂಗೆಗಳು ಮಾತ್ರ ನಡೆದಿದ್ದುವು) ಮಾನ್ಯ ಗವರ್ನರರು ಈ ವಿಷಯ ಬಹಳ ದುಃಖಿತರಾಗಿ, ಈ ಕಲಂಕವನ್ನು ತೆಗೆದುಹಾಕಲು ಅಲ್ಲಿನ ಮುಖಂಡರ ಕೂಡೆ ಆಜ್ಞಾಪಿಸಿರುವರು.

ಬರ್ಮಾ ದೇಶದ ಕೈಕಾಯಿ ಎಂಬಲ್ಲಿ ಭೂಕಂಪವಾಯಿತು. ವಿಶೇಷ ಹಾನಿಯೇನೂ ಉಂಟಾಗಲಿಲ್ಲ. ಕೆಲವು ಕಟ್ಟೋಣಗಳ ಗೋಡೆಗಳಲ್ಲಿ ಬಿರುಕು ಬಿದ್ದಿವೆ.

ಕ್ವೆಟ್ಟಾದಲ್ಲಿ, ಮೊನ್ನೆ ಭೂಮಿಯು ಸ್ವಲ್ಪ ನಡುಗಿ, ಒಂದು ಗೋಡೆಯು ಕುಸಿದು ಬಿದ್ದು, ಆರು ಜನರು ಮಣ್ಣುಪಾಲಾದರು. ಇವರನ್ನು ಕೂಡಲೇ ಮಣ್ಣಿನಡಿಯಿಂದ ತೆಗೆಯಲಾಗಿ, ೪ ಜನರು ಮಡಿದಿರುವರು. ಇಬ್ಬರಿಗೆ ವಿಶೇಷ ಜಖಂ ಆಗಿದೆ.

ಮುಂಬಾಯಿಯ ಸಿವ್ರಿ ಎಂಬಲ್ಲಿ ಒಂದು ಹತ್ತಿಯ ಗೋದಾಮಿಗೆ ಬೆಂಕಿ ತಗಲಿ, ರೂ ೨೦೦,೦೦೦ ನಷ್ಟವಾಗಿದೆ. ಹತ್ತು ಫಯರ್ ಬ್ರಿಗೇಡ್ ಎಂಜಿನುಗಳು ಕೆಲಸ ಮಾಡಿ ಬೆಂಕಿಯನ್ನು ತಣಿಸಿತು. ಆ ಗೋದಾಮಿನಲ್ಲಿ ೪೭೦೦ ಬೇಲು ಹತ್ತಿಯು ದಾಸ್ತಾನು ಇತ್ತು. ಒಟ್ಟು ಮೌಲ್ಯ ರೂ ೩೦೦,೦೦೦ ೧೫೦೦ ಬೇಲು ಹತ್ತಿಯು ಸುಟ್ಟು ನಾಶವಾಯಿತು.

ಲಾಹೋರಿನಿಂದ ಕಾಶ್ಮೀರದ ಶ್ರೀನಗರಕ್ಕೆ ವಿಮಾನ ಸಂಚಲನವು ಪ್ರಾರಂಭವಾಗುವುದು.

ಬರ್ಮಾದ ಮಿಮೆನ್‌ಸಿಂಗ್ ಎಂಬಲ್ಲಿ ಸಿಡಿಮದ್ದು ತಯಾರಿಸುವವನ ಮನೆಯಲ್ಲಿ ಒಂದು ಭಯಂಕರ ಸ್ಫೋಟನವುಂಟಾಗಿ, ೪ ಜನರು ಮೃತರಾದರು ಮತ್ತು ಹಲವರು ಜಖಂಗೊಂಡಿರುವರು.

ಅಮೃತಸರದ ಧಾರೀಯಾ ಎಂಬಲ್ಲಿ ಸಬ್ ಇನ್ಸಪೆಕ್ಟರ್ ಪಂಡಿತ ರಂಗರಂಗ ಎಂಬವರನ್ನು ಒಂದು ಮದುವೆಯ ಸಮಯದಲ್ಲಿ ಕೊಲೆಮಾಡಿರುವರು. ಆ ಹಳ್ಳಿಯ ಒಬ್ಬ ಹುಡುಗಿಯ ಮದುವೆಯ ವಿಚಾರದಲ್ಲಿ ಇತ್ತಂಡದವರೊಳಗೆ ಚರ್ಚೆ ಇದ್ದುದರಿಂದ, ಮದುವೆಯ ದಿನ ಅವರೊಳಗೆ ಜಗಳವಾಗಿದ್ದು, ಈ ಕೊಲೆಯು ನಡೆಯಿತು. ಇನ್ನು ಹಲವರಿಗೆ ಘಾಯಗಳಾಗಿವೆ.

ಮದ್ರಾಸು ಗವರ್ನರರು ಮಂಗಳೂರಿನಿಂದ ಕೊಟ್ಟಿಗೆ ಪ್ರಯಾಣ ಬೆಳೆಸುವರು. ಇದರ ಉಪಚಾರಾರ್ಥವಾಗಿ, ಹಲವು ಸಲಕರಣೆಗಳನ್ನು ಬಹಳ ಸಡಗರದಿಂದ ನಡೆಯುತ್ತಿವೆ.

ಕೆಲಸಗಾರರ ಸಂಗಡದ ಪ್ರತಿನಿಧಿಗಳಾಗಿರುವ ಶ್ರೀ ಎಂ. ಎನ್ ಜೋಶಿಯೆಂಬವರು ಜಿನೇವಾದ ಕಡೆಗೆ ಹೊರಟಿರುವರು. ಇವರು, ಅಲ್ಲಿ ನಡೆಯುವ ಇಂಟರ್‌ನೇಶನಲ್ ಲೇಬರ್ ಕೋನ್ಫರೆನ್ಸಿನಲ್ಲಿ ಭಾಗವಹಿಸಲಿರುವರು. ಅಲ್ಲಿ ಅವರು ಹಲವು ಕಾನ್ಫರೆನ್ಸ್‌ಗಳಲ್ಲಿ ಭಾಗವಹಿಸಬೇಕಾಗಿರುವುದು.

ಹಿಂದೂದೇಶದ ಹಲವು ಹಡಗಗಳನ್ನು ಆಸ್ಪತ್ರೆಗಳನ್ನಾಗಿ ಮಾಡಿ, ಪೂರ್ವ ಆಫ್ರಿಕಕ್ಕೆ (ಎಬಿಸೀನಿಯಾಕ್ಕೆ) ಕಳುಹಿಸಲು ಸಿದ್ಧಮಾಡಿದ್ದಾರೆ. S S. "ಎಲ್ಲೋರಾ" ಮತ್ತು S S. "ವೆರ್‌ಸೋಲಾ" ಎಂಬ ಎರಡು ಹಡಗುಗಳನ್ನು ಆಸ್ಪತ್ರೆಗಳನ್ನಾಗಿ ಮಾಡಿದ್ದಾರೆ. ಇವುಗಳು ಅತ್ತಕಡೆ ಹೋಗಲು ಸಿದ್ಧವಿವೆ. ಇನ್ನೂ ಹಲವು ಹಡಗಗಳು ತಯಾರಿಯಲ್ಲಿವೆ. ಕಲ್ಕತ್ತಾದಿಂದ ಹಲವು ಹಡಗಗಳನ್ನು ಈ ಕಾರ್ಯಕ್ಕೆ ಕರೆದಿದ್ದಾರೆ.

ಬೊಂಬಾಯಿಯಲ್ಲಿ ಕಾಂಗ್ರೆಸ್ಸಿನ ಸೋಷಲಿಷ್ಟ ಪಂಗಡದ ಸಭೆಯು ನಡೆಯುತ್ತಿರುವಾಗ ಬಹಳ ಕ್ಷೋಭೆಯುಂಟಾಗಿ ಕೆಲವು ದೀಪಗಳನ್ನು ಆರಿಸಿದರು. ಠರಾವುಗಳು ಕತ್ತಲೆಯಲ್ಲೇ ಪಾಸಾದುವು.

ಈರೋಡಿನ ನಗರ ಸಭೆಯವರು, ಅಲ್ಲಿಗೆ ಬರಲಿರುವ ಶ್ರೀ ಬಾಬೂ ರಾಜೇಂದ್ರ ಪ್ರಸಾದರವರಿಗೆ ಒಂದು ಮಾನಪತ್ರವನ್ನು ಅರ್ಪಿಸಲು ನಿರ್ಧರಿಸಿರುವರು.

ಪಂಚಾಯತು ಬೋರ್ಡುಗಳಿಗೆ ರಿಜಿಸ್ಟ್ರಾರ ಜನರಲರ ನೇಮಕವಾಗಬೇಕೆಂಬ ಸೂಚನೆಯನ್ನು ಕಾಂಗ್ರೆಸ್ಸ ಮುಖಂಡರಾದ ವಿರಾಮದಾಸ ಪಂತಲುರವರು ಇಂದ್ಯೂರ್ ಪೇಟೆಯಲ್ಲಿ ನಡೆದ ಪಂಚಾಯತ ಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ ಮಾಡಿರುವರು.

ವಿಲಿಯಮ್ಸ್ IVರ ಕಾಲದ ಕೆಲವು ನಾಣ್ಯಗಳು, ಬೆಂಗಳೂರಿನ ಒಬ್ಬ ಕೂಲಿಯಾಳಿಗೆ ದೊರಕಿವೆ ಎಂಬ ವದಂತಿ ಇದೆ.

ಮೈಸೂರು ನ್ಯಾಯವಿಧಾಯಕ ಸಭೆಯವರು, ಮಿಸ್ಟರ್ ಬೋರ್ಡ ರೆಗ್ಯುಲೇಶನ್ ಅನ್ನು ತಿದ್ದುವದಿಸುವ ಒಂದು ಹೊಸ ಬಿಲ್ಲನ್ನು ಮಂಜೂರು ಮಾಡಿರುವರು. ಈ ಬಿಲ್ಲು ಇನ್ನು ... ದಿ ಚೇರ್ಮನ್‌ಗಳಿಂದ ಉಂಟಾಗುವ ಯಾವತ್ತು ನಷ್ಟಗಳಿಗೂ ಮತ್ತು ಹಣದ ದುರ್ವಿನಿಯೋಗಗಳಿಗೂ ಸದಸ್ಯರುಗಳನ್ನು ಜವಾಬ್ದಾರರನ್ನಾಗಿ ಮಾಡುವುದು.

ಮೈಸೂರು ನ್ಯಾಯವಿಧಾಯಕ ಸಭೆಯ ಚುನಾವಣೆಗೆ ಸುಧಾರಣೆಯನ್ನು ಗಳಿಸಲು ಕೆಲವು ಹೊಸ ನಿಬಂಧನೆಗಳ ಮೇಲೆ ಬಹಳ ಚರ್ಚೆಯು ನಡೆಯಿತು. ಕೆಲವು ಸದಸ್ಯರು ನ್ಯಾಯವಿಧಾಯಕ ಸಭೆಯ ವ್ಯವಸ್ಥೆಯಲ್ಲಿ ಹಲವು ಸುಧಾರಣೆಗಳನ್ನು ಸೂಚಿಸಿರುವರು. ಇನ್ನು ಮುಂದಿನ ಚುನಾವಣೆಯು ಜಾತಿಭೇದದ ಪ್ರಕಾರ ನಡೆಯಬೇಕೆಂಬ ಸೂಚನೆಯನ್ನು ಕೆಲವು ಅಬ್ರಾಹ್ಮಣ ಸದಸ್ಯರು ಮಾಡಿರುವರು.

ಮೈಸೂರಿನ ದಸರಾ ವಸ್ತು ಪ್ರದರ್ಶನದ ಬಹುಮಾನ ಹಂಚೋಣ ಸಮಾರಂಭವು ಯುವರಾಜರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಬಾಹೀರಾತಿನ ವಿಷಯದಲ್ಲಿ ವರ್ತಕರು ಹೆಚ್ಚಿನ ಗಮನಕೊಡಬೇಕಾಗಿ ಸೂಚಿಸಿದರು. ವರ್ತಕರೇ ಬರುವ ವರ್ಷ ಎಚ್ಚರಿಕೆ.


ಶಾರದಾ ಕ್ಯಾಲೆಂಡರು ಶಾರದಾ ಕ್ಯಾಲೆಂಡರು

ಆನಂದರಾಯರು — ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ಕಳುಹಿ ಕ್ರಯಕ್ಕೆ ತಕ್ಕ ಮಾಲು ಖಂಡಿತ ಜರಿ, ರಂಗು ಹೊದಲಾದ ಶೀರೆಗಳು ಸಿಗುತ್ತವೆ 18 ಮೊಳ ಉದ್ದ 2¼ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ಪದಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪದಲು ಸಹ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಿಕೆ ಕಣಕ್ಕೆ ರೂ 1 8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಿಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ. 8 ಮೊಳದ ಸ್ಕಾರ್ಫ್ 1ಕ್ಕೆ ರೂ 7ರಿಂದ 15ರ ವರೆಗೆ 6 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಟಾಂಬರ 1ಕ್ಕೆ ರೂ. 4ರಿಂದ 16ರ ವರೆಗೆ 6 ಮೊಳದ ಪಮ್ಮರಿ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ವಸ್ತುಗಳ ಕ್ರಯದ ಪಟ್ಟಿ, ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.**



LOOK SHARP! LOOK AHEAD

### Murdeshwar's Banking Institute.

Pioneer Institute on the West Coast

Opens out Careers for Business men Graduates, Under graduates and S S L C s and also for those who have not passed any University examination

Coaches students for the Specialised Banking Courses (C A, I B & C, A I I B) and also for Accountancy, Secretarial, and Insurance Courses (L A A, A C R A, F C R A, F I S A, A C I I etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

**Ladies are also admitted**

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

*For further particulars apply to —*

D R Murdeshwar,
Dip Econ, F R Econ, S. (Lond)
Principal
Ganapathy High School Street,
Mangalore.


ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಆಶ್ವೀಜ ಬ| ೧೪ ಶನಿವಾರದಿಂದ ಕಾರ್ತಿಕ ಶು| ೫ ಶುಕ್ರವಾರದ ವರೇಗಿನ ಪಂಚಾಂಗ. (೧೬ನೇಯ ತುಲಾ ಬೊಂತೆಲ್)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೌರಮಾನ | ವಿಶೇಷ |
|---|---|---|---|---|---|---|---|
| 26 | *ಶನಿ | ೧೪ | ೨೨ | ಹಸ್ತಾ | ೫ | ೯ | *ಜಾಗರಣ ಕೃಷ್ಣ ಚತುರ್ದಶಿ |
| 27 | ರವಿ | ೩೦ | ೨೬ | ಚಿತ್ರಾ | ೧೦ | ೧೦ | |
| 28 | ಸೋಮ | ೧ | ೨೯ | ಸ್ವಾತಿ | ೧೪ | ೧೧ | |
| 29 | ಮಂಗಳ | ೨ | ೩೧ | ವಿಶಾಖಾ | ೧೮ | ೧೨ | |
| 30 | ಬುಧ | ೩ | ೩೧ | ಅನುರಾಧಾ | ೨೦ | ೧೩ | |
| 31 | ಗುರು | ೪ | ೩೦ | ಜ್ಯೇಷ್ಠಾ | ೨೧ | ೧೪ | |
| 1 | ಶುಕ್ರ | ೫ | ೨೮ | ಮೂಲಾ | ೨೦ | ೧೫ | |

# ಈ ವಾರದ ಯುದ್ಧವಾರ್ತೆಗಳು.

(ಮುಂದುವರಿದುದು.)

ಅಕ್ಟೋಬರ್ ತಾ. ೧೮.

ಇಟಲಿಯನರು ಯಾವ ದಿವಸ ಮುಂದು ವರಿದು ಅಧಿಕ್ರಮಿಸುವರು ಎಂದು ಹೇಳಲು ಅಸಾಧ್ಯ. ಮಕಾಲೆಯನ್ನು ಹಿಡಿಯುವುದು ಇವರು ಖಚಿತಮಾಡಿದ್ದಾರೆ. ಎಥಿಯೋಪಿಯಾನರು, ಯುದ್ಧದ ಈಗಿನ ಸ್ಥಿತಿಯು ತಾವು ಗೆಲ್ಲುವಂತೆ ಮಾಡಬಹುದು ಎಂದು ಹೇಳುತ್ತಿರುವರು. ಎಥಿಯೋಪಿಯಾನರಿಗೆ ಮಲ್ಲಾಯಲು ಇಷ್ಟರವರೆಗೆ ಅಪ್ಪಣೆ ದೊರಕಲಿಲ್ಲ.

ಮುಸಲೋನಿಯ ಇನ್ನೊಬ್ಬ ಮಗನು, ತನ್ನ ಅಣ್ಣನಂತೆ ಮೃತ್ಯುಗೆ ತುತ್ತಾಗುತ್ತಿದ್ದನು. ಅಂತರಿಕ್ಷದಲ್ಲಿ ಸಂಚರಿಸುತ್ತಿರುವಾಗ ಅಬಿಸೀನಿಯಾದ ಸೈನಿಕರು ಈತನ ವಿಮಾನದ ಮೇಲೆ ಫಿರಂಗಿಗಳಿಂದ ಗುಂಡುಗಳ ಮಳೆಯನ್ನು ಸುರಿಸಿದರು. ಆದರೆ ತನ್ನ ಅಣ್ಣನಂತೆ ಅದೃಷ್ಟವಶಾತ್ ಇವನಿಗೆ ಹಾನಿಯು ಉಂಟಾಗಲಿಲ್ಲ.

ಅಕ್ಟೋಬರ ತಾ. ೧೯

ಎಥಿಯೋಪಿಯಾ ಯುದ್ಧರಂಗವು ಸ್ವಲ್ಪ ಶಾಂತವಿದೆ. ಕೆಲವು ಚಿಲ್ಲರೆ ಬಡಿದಾಟ ನಡೆದಿವೆ. ಇಟಲಿಯಾನರು ದೊಡ್ಡದೊಂದು ಅಧಿಕ್ರಮದ ಸಿದ್ಧತೆಯಲ್ಲಿ ಮಗ್ನರಾಗಿರುತ್ತಾರೆ. ಎಲ್ಲೆಲ್ಲೂ ಮಾರ್ಗೋಪಾಯಗಳನ್ನು ರಚಿಸುತ್ತಿರುವರು. ಸೇರಿನ ಸರಬರಾಯಿ ಕೆಲಸವು ಬಿರುಸಾಗಿ ನಡೆಯುತ್ತಿದೆ. ೧೨೫ ಬಾವಿಗಳನ್ನು ತೋಡಿರುವರು, ೫ ದೊಡ್ಡ ಕೆರೆಗಳನ್ನು ನಿರ್ಮಿಸಿದ್ದಾರೆ.

ಆದರೆ ಇವರ ವಿಮಾನಗಳು ಅಂತರಿಕ್ಷದಲ್ಲಿ ಸಂಚರಿಸಿ, ಅಬಿಸೀನಿಯಾದವರನ್ನು ದಿಗಿಲುಗೊಳಿಸುತ್ತಿದೆ.

ಜನರಲ್ ಡಿಬೋನೋರವರು ಇಟಲಿಯನರು ವಶೀಕರಿಸಿದ ಪ್ರಾಂತ್ಯಗಳಲ್ಲಿ ಗುಲಾಮರಿಗೆ ಸ್ವಾತಂತ್ರ್ಯಕೊಟ್ಟಿರುತ್ತಾರೆ (ಅಬಿಸೀನಿಯಾವು ಗುಲಾಮಗಿರಿಯಿಂದ ತುಂಬಿದೆ).

ಅತ್ರಿಕಾದ ಹವಾಗುಣವು ಅನೇಕ ಜನ ಇಟಲಿಯಾನ ಸೈನಿಕರನ್ನು ನಿರುತ್ಸಾಹಿಗಳಾಗಿ ಮಾಡುತ್ತಿದೆ. ಪ್ರಥಮದಲ್ಲಿದ್ದ ಇವರಲ್ಲಿನ ಚಟುವಟಿಕೆ ಬಿದ್ದುಹೋದಂತೆ ಭಾಸವಾಗುತ್ತದೆ.

ಅಕ್ಟೋಬರ ತಾ. ೨೦

ಇಟಲಿಯಾನರು ಎಬಿಸೀನಿಯಾದ ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಂದ ಮುಂದುವರಿಯುತ್ತಿರುವರೆಂದು ಈ ಮೊದಲೇ ತಿಳಿಸಿದ್ದೇವಷ್ಟೆ. ಇತ್ತಲಾಗಿ ಉತ್ತರದಲ್ಲಿ ಎಡೋವಾದಿಂದ ಮುಂದುವರಿದು ಮಕಾಲೆ ಪ್ರಾಂತ್ಯವನ್ನು ಹಿಡಿಯುವ ಪ್ರಯತ್ನಗಳು ಆಗುತ್ತಿವೆ. ಸಂಗ್ರಾಮಶೂರರು ಆದ ಎಥಿಯೋಪಿಯಾನರು ಈ ಮಲ್ಲಾಯುಕೆಯನ್ನು ಖಂಡಿಸಬೇಕೆಂದಿದ್ದಾರೆ. ಇಟಲಿಯಾನರಿಗೆ ಈ ಕಾರ್ಯವೇನೂ ಅಷ್ಟು ಸುಲಭಕರವಾದುದಲ್ಲ. ಸೈನ್ಯದಳವು ಎಡೋವಾದಿಂದ ಮಕಾಲೆಕಡೆಗೆ ಮುಂದುವರಿಯುತ್ತಿದೆ. ಇತ್ತಲಾಗೆ ದಕ್ಷಿಣದಲ್ಲಿ ಅಂದರೆ ಓಗಾಡನ್ ಪ್ರಾಂತ್ಯದಲ್ಲಿ ಇಟಲಿಯಾನರು ಅಂತರಿಕ್ಷದಿಂದ ಅಧಿಕ್ರಮವನ್ನು ಮಾಡಿದರು. ತುಂಬಾ ಜನರು ಗೇಸಿನ ಪ್ರಯೋಗದಿಂದಲೂ, ಬೋಂಬಿನ ಸ್ಫೋಟನಗಳಿಂದಲೂ ಮಡಿದಿರುವರು. ಇಲ್ಲಿಂದ ಸ್ವಲ್ಪ ಮುಂದೆ ಹರಾರಿನಲ್ಲಿ ತಂಡೋಪತಂಡ ಎಥಿಯೋಪಿಯಾನರು ಕೂಡಿಯುತ್ತಾರೆ. ಘಟನೆಗಳನ್ನೆಲ್ಲಾ ಪರಿಶೀಲಿಸಿದ್ದಲ್ಲಿ ಒಂದು ಮಹಾಸಮರ ಬೇಗನೆ ಪ್ರಾರಂಭವಾಗುವಂತಿದೆ. ದೈವವಶಾತ್ ಇಟಲಿಯವರಿಗೆ ಕೆಲವುಕಡೆ ಮಲೇರಿಯಾವು ಬಾಧಿಸುತ್ತಿದೆ. ಉತ್ತೇಜನ ಕೊಡಲು ಮುಸಲೋನಿಯವರು ಯುದ್ಧರಂಗಕ್ಕೆ ತೆರಳುವರೆಂದು ವಾರ್ತೆ ಇದೆ.

ಅಕ್ಟೋಬರ್ ತಾ. ೨೧,

ಎಬಿಸೀನಿಯಾದ ದಕ್ಷಿಣ ದಿಕ್ಕಿನಲ್ಲಿ ಸಮರವು ನಡೆಯುತ್ತಿದೆ. ಇಟಲಿಯಾನರು ಯುದ್ಧ ಕುಶಲವಾದ ಕೆಲವು ಪ್ರದೇಶಗಳನ್ನು ಹಿಡಿದಿರುವರು. ಎಥಿಯೋಪಿಯಾನರಲ್ಲಿ ಹೆಚ್ಚು ಅನಾಹುತಗಳು ಉಂಟಾಗಿವೆ. ಇಟಲಿಯವರು ಅಂತರಿಕ್ಷದಿಂದ ಧಾರಳ ಬೋಂಬಿನ ಉಪಯೋಗವನ್ನು ಮಾಡಿರುತ್ತಾರೆ. ವಿಮಾನಗಳಿಗೆ, ಮೆಶೀನು ಗುಂಡುಗಳಿಂದ ಹೊಡೆದಿಕ್ಕಿದರೂ, ಅವು ಅಪಾಯಗಳಿಗೆ ತುತ್ತಾಗದೆ, ಸುರಕ್ಷಿತವಾಗಿ ತಪ್ಪಿಸಿಕೊಂಡಿವೆ. ಈ ಸಮರವು ಹಲವು ಎಥಿಯೋಪಿಯಾನರನ್ನು ಭೀತಿಮಯರನ್ನಾಗಿ ಮಾಡಿ, ತಮ್ಮ ದೇಶವನ್ನು ತ್ಯಜಿಸಿ, ಇಟಲಿಯವರ ಕಡೆ ಸೇರುವಂತೆ ಮಾಡಿದೆ. ಹಲವು ಪ್ರಾಂತ್ಯಗಳನ್ನು ಇವರು ಇಟಲಿಯಾನರಿಗೆ ಬಿಟ್ಟುಕೊಟ್ಟಿರುವರು. ಹೀಗೆ ದಕ್ಷಿಣದ ದಾಂಗೇರಿ ಎಂಬಲ್ಲಿ ಕದನವು ನಡೆಯಿತು. ಎಥಿಯೋಪಿಯಾನರ ಇಲ್ಲಿನ ಪರಿಸ್ಥಿತಿಯು ಅಷ್ಟು ಕೆಡಲಾಗಿಲ್ಲ. ವೆಶೀನ ಗನ್ನುಗಳ ದಿಂದ ಇಟಲಿಯಾನರನ್ನು ಹಿಂಸಿಸುತ್ತಿದ್ದಾರೆ. ಆದರೆ ಇಟಲಿಯಾನರ ದಂಡು ಮುಂದುವರಿಯುತ್ತಿದೆ. ಇಲ್ಲಿ ಶಿಲ್ಲವೆ ಎಂಬ ಪ್ರಾಂತ್ಯವನ್ನು ಇಟಲಿಯಾನರು ವಶೀಕರಿಸಿದ್ದಾರೆ. ಇದು ನೀರಿರುವ ಸ್ಥಳವಾದದರಿಂದ ಇಟಲಿಯಾನರಿಗೆ ಇದರಿಂದ ಹೆಚ್ಚು ಉಪಯೋಗವುಂಟು.

ಇತ್ತಲಾಗೆ ಉತ್ತರದಲ್ಲಿ ಸಂಗ್ರಾಮವೇನೂ ನಡೆಯದಿದ್ದರೂ, ಇಟಲಿಯಾನರು ಅಕ್ಸಮ್ ಅದಿಗ್ರಾಟ ಎಡೋವಾದಲ್ಲಿ ಸೈನ್ಯದಳಗಳನ್ನು ಶೇಖರಿಸುತ್ತಿರುವರು.

ಇಟಲಿಯಾನರು ವಶೀಕರಿಸಿದ ಪ್ರಾಂತ್ಯಗಳಲ್ಲಿ ತಮ್ಮ ಸರಕಾರದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಲಂಡನ್‌ನಲ್ಲಿ ಭಾರತೀಯರಿಂದ ಒಬ್ಬ ಡಾಕ್ಟರರು ಎಥಿಯೋಪಿಯಾದವರ ವೈದ್ಯಕೀಯ ಸ್ಥಿತಿಯನ್ನು ನೋಡಿ ಕನಿಕರಪಟ್ಟು, ರೆಡ್ ಕ್ರಾಸ್ ಸೊಸೈಟಿಗೆ ಸೇರಬೇಕೆಂಬ ತಮ್ಮ ಇಚ್ಛೆಯನ್ನು ತಿಳಿಸಿರುವರು. ಇವರು ಬೇಗನೆ ಅಲ್ಲಿಗೆ ತೆರಳುವರು.

ಹಿಂದುಸ್ಥಾನದಿಂದ, ಮುಂಬಾಯಿಯ ವಿವೇಕಾನಂದ ಸೊಸೈಟಿಯವರು ರೂಪಾಯಿ ೫೦೦ ಕ್ರಯಬಾಳುವ ಬೆಡ್ಡುಗಳನ್ನು, ಕಸ್ತೂರಿಬಾಯಿ ಸರಕಾರ್ ಮತ್ತು ಗಾಂಧಿ ಕಂಪೆನಿಯವರು ೫೫ ಪಟ್ಟಿಗೆ ಔಷಧಿಗಳನ್ನು ನಮ್ಮ ಮಾನ್ಯ ವೈಸರಾಯರು ಅಧ್ಯಕ್ಷರಾಗಿರುವ ರೆಡ್ ಕ್ರಾಸ್ ಸೊಸೈಟಿ ಮೂಲಕ ಎಥಿಯೋಪಿಯಾಕ್ಕೆ ಕಳುಹಿಸಿಕೊಟ್ಟಿರುವರು.

---

## ಬಾಬು ರಾಜೇಂದ್ರ ಪ್ರಸಾದರು

ಇವರು ದಕ್ಷಿಣ ಹಿಂದೂಸ್ಥಾನದ ಆರ್ಕೋಟು, ವೆಲ್ಲೂರು, ವಾಲಾಜಾ, ರಾಮ್ನಾಡ, ತ್ರಿಚಿನಾಪಳ್ಳಿ, ತಿನ್ನವೆಲ್ಲಿ, ದಕ್ಷಿಣ ತಂಜಾವೂರು, ಉತ್ತರ ತಂಜಾವೂರು, ಸೇಲಂ, ದಕ್ಷಿಣ ಆರ್ಕೋಟು ಇವೇ ಮೊದಲಾದ ಸ್ಥಳಗಳನ್ನು ಸಂದರ್ಶಿಸಲಿರುವರು. ಕೊಂಗ್ರೆಸ್ಸಿನ ಪರವಾಗಿ ಭಾಷಣಗಳನ್ನೂ, ಹಣಸಂಚಯವನ್ನೂ ಮಾಡುವರು.

## ಪಾರ್ಲಿಮೆಂಟಿನ ಮಹಾ ಚುನಾವಣೆಯು

ಬರುವ ನವಂಬರ ತಾ. ೧೪ಕ್ಕೆ ನಡೆಯುವುದೆಂದು ಮುಖ್ಯ ಮಂತ್ರಿಗಳಾದ ಮಿ। ಬಾಲ್ಡ್ವಿನ್ನರ ಪ್ರಕಟಣೆ. ಆ ಚುನಾವಣೆಯ ಫಲವು ಏನಾಗಬಹುದೆಂದು ಕೂಲಿಗಾರರ ಪಕ್ಷದ ಈಗಿನ ದುರ್ಬಲ ಪರಿಸ್ಥಿತಿಯಲ್ಲಿ ನೀವು ಊಹಿಸಬಹುದು. 'ಕನ್ಸರ್ವೇಟಿವ್' ಪಕ್ಷದವರ ಪ್ರಾಬಲ್ಯ ಹೆಚ್ಚಾಗಬಹುದು. ಇದರ ಪರಿಣಾಮವು ಭರತಖಂಡದ ಮೇಲೆ ಬಹಳ ಮಟ್ಟಿಗೆ ವಿಷಾದಕರವಾಗುವುದು.

# ಈ ವಾರದ ತಂತಿಗಳು.

## ಫ್ರಾನ್ಸಿನ ಪೆರಿಸ್ ನಗರದಲ್ಲಿ ಸಂಧಿ ಪ್ರಸ್ತಾಪಗಳು ನಡೆಯುತ್ತಿವೆ.

ಸೆಂಕ್ಷನು ವಿಚಾರದಲ್ಲಿ ಜಿನೇವಾವು ಮುಂದುವರಿಯುತ್ತಿರುವಾಗ, ಇತ್ತಲಾಗೆ ಫ್ರಾನ್ಸಿನವರು, ಇಟಲಿಯವರ ಕೂಡೆ ಸಂಧಿಪ್ರಸ್ತಾಪಗಳನ್ನು ಬೆಳೆಸುತ್ತಿರುವರು. ಇಷ್ಟರ ವರೆಗೆ ಸೂಚನೆಗಳು ಮಾತ್ರ ಕೊಡಲಾಗಿವೆ. ಮುಸೋಲಿನಿ, ತಾನು ಈ ಮೊದಲು ಜನಪದ ಮಂಡಳದ ಮುಂದಿರಿಸಿದ ಕೇಳಿಕೆಯನ್ನು ಸ್ವಲ್ಪ ತಿದ್ದುಪಡಿಸಲು ಸಿದ್ಧನಿರುವನೆಂದೂ, ಅವನ ಶರ್ತಗಳಿಗೆ ಫ್ರಾನ್ಸು ಮತ್ತು ಇತರ ಜನಾಂಗಗಳು ಒಡಂಬಡಲೂ ಬಹುದು ಎಂಬ ವಾರ್ತೆಯು ಬಂದಿದೆ. ಈ ಶರ್ತಗಳ ಪ್ರಕಾರ ಎಬಿಸೀನಿಯಾದ ಕೆಲವು ಪ್ರಾಂತ್ಯಗಳನ್ನು ಮುಸೋಲಿನಿಗೆ ಕೊಡಲಾಗುವುದು ಮತ್ತು ಎಬಿಸೀನಿಯಾದ ಅರಸರಿಗೆ ಇದರ ಬದಲಾಗಿ ಫ್ರೆಂಚರ ಮತ್ತು ಬ್ರಿಟಿಷರ ಅಧೀನದಲ್ಲಿರುವ ಕೆಲವು ಪ್ರಾಂತ್ಯಗಳನ್ನು ಕೊಡಲಾಗುವುದೆಂದು ನಾವು ತಿಳಿಯುತ್ತೇವೆ.

## ಬಾಬು ರಾಜೇಂದ್ರ ಪ್ರಸಾದರ ಮದ್ರಾಸಿನ ಸಂಚಾರ.

ಮದ್ರಾಸಿನ ಕೊಂಗ್ರೆಸ್ ಕಾರ್ಯಕ್ರಮವನ್ನು ಮುಗಿಸಿ ಬಾಬೂಜಿಯವರು ಕಾಂಜೀವರಂ, ಚಂಗಲಪೇಟೆ ಮಧುರಾ, ಪಾಲಮ್‌ಕೋಟ್ಟಾಗಳಿಗೆ ಪ್ರಯಾಣಬೆಳೆಸಿದರು. ಕಾಂಜೀವರಂದಲ್ಲಿ ಬಾಬೂ ರಾಜೇಂದ್ರ ಪ್ರಸಾದರ ಭಾಷಣದ ತಾತ್ಪರ್ಯ—"ಸ್ವಾತಂತ್ರ್ಯ ದೇವತೆಯ ಆರಾಧನೆಯು ಮನಃಪೂರ್ವಕ ಮಾಡಿದಲ್ಲಿ ನಾವು ಬಯಸಿದ ಸ್ವರಾಜ್ಯವು ದೊರಕುವುದರಲ್ಲಿ ಸಂದೇಹವಿಲ್ಲ. ಇತರ ದೇವಾಲಯಗಳನ್ನು ಸಂದರ್ಶಿಸುವಂತೆ ಸ್ವಾರ್ಥಗಳನ್ನು ಬಿಟ್ಟು ದರಿದ್ರರಾಗಿ, ನಿಷ್ಠರಾಗಿ ಅವರ ಸೇವೆಯನ್ನು ಮಾಡಿರಿ. ತಮ್ಮ ಸರ್ವಸ್ವವನ್ನು ದೇಶಸೇವೆಗೆ ಒಪ್ಪಿಸಿ ಅರ್ಪಿಸಿದ ಈ ಸ್ವಾತಂತ್ರ್ಯ ದೇವತೆಯ ದೇವಾಲಯವನ್ನು ನಿತ್ಯವೂ ಸಂದರ್ಶಿಸಿರಿ." ಜನಸ್ತೋಮವು ಇವರನ್ನು ಸ್ವಾಗತೀಕರಿಸಲು ಶಕ್ತಿಮೀರಿ ನೆರೆದಿತ್ತು. ಭಾಷಣಗಳು ಒಂದು ನೂರು ಸಾವಿರ ಶ್ರೋತೃಗಳ ಆಕರ್ಷಕವಾದವು.

ಚಂಗಲಪೇಟೆಯಲ್ಲಿ ಕಾಂಗ್ರೆಸ್ ಸಭೆಯವರಿಗೆ ಶಿಫಾರಸು ಮಾಡಿಯೂ ಗ್ರಾಮಭ್ಯುದಯದ ಮಹತ್ವದ ವಿಷಯವೂ, ಭಾರತೀಯ ಐಕ್ಯದ ವಿಷಯವೂ ಇವೇ ಮೊದಲಾದ ದೇಶಹಿತ ಸೂಚಕ ವಿಷಯಗಳ ಮೇಲೆ ಭಾಷಣಮಾಡಿದರು.

ಹೀಗೆ ಪಾಲಮ್‌ಕೋಟ್ಟಾದಲ್ಲಿಯೂ ಮಧುರಾದಲ್ಲಿಯೂ ಇವರ ಗಂಭೀರ ಭಾಷಣಗಳಾದುವು. ಎಲ್ಲೆಲ್ಲೂ ಕಾಂಗ್ರೆಸ್ ಸಭಾಪತಿಯ ಸ್ವಾಗತಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು.

---

## ಮದ್ರಾಸು ಪ್ರಾಂತ್ಯದಲ್ಲಿ ಹೊಗೆಸೊಪ್ಪಿನ ಮೇಲೆ ತೆರಿಗೆ

ನಮ್ಮಲ್ಲಿ ಹೊಗೆಸೊಪ್ಪಿನ ಉಪಯೋಗವು ಅನೇಕ ಬಗೆಯಲ್ಲಿ ಆಗುತ್ತಿದೆ. ಇದರ ಮೇಲೆ ತೆರಿಗೆ ವಿಧಿಸಿದರೆ ಸರಕಾರಕ್ಕೆ ತುಂಬಾ ಹಣವು ಗಳಿಸುವುದೆಂದು ಕೆಲವು ವಿದ್ವಾಂಸರು ತಿಳಿದು, ಹೀಗೆ ಸೊಪ್ಪಿನ ಮೇಲೆ ತೆರಿಗೆ ವಿಧಿಸುವ ಹೊಸ ಕಾನೂನನ್ನು ಜ್ಯಾರಿಗೆ ತರಲಿರುವರು. ಇದರಿಂದ ಹೊಗೆಸೊಪ್ಪನ್ನು ಯಾವದೇ ರೂಪದಲ್ಲಿ ವಿಕ್ರಯಿಸುವವರು, ಜಿಲ್ಲಾ ಕಲೆಕ್ಟರರಿಂದ ಲೈಸನ್ಸು ಪಡಕೊಳ್ಳಬೇಕಾಗುವುದು. ಲೈಸನ್ಸು ಪಡಕೊಂಡ ವಿನಹ ಹೊಗೆಸೊಪ್ಪಿನ ವ್ಯಾಪಾರವನ್ನು ಮಾಡಿದವರ ಮೇಲೆ ದಸ್ತಗಿರಿ ನಡಿಸಲಾಗುವುದು. ಹೊಗೆಸೊಪ್ಪನ್ನು ಬೆಳೆಯುವವರಿಗೆ ಈ ಕಾನೂನು ತಾಗುವುದಿಲ್ಲ.

---

## ಶಾಂತತೆಯು ತಲೆದೋರುವುದೆ?

## ಫ್ರಾನ್ಸು ಲೀಗಿನ ಯಾವತ್ತೂ ಕ್ರಮಗಳನ್ನು ಅನುಸರಿಸಲು ಸಿದ್ಧವಿದೆ

## ಮೆಡಿಟರೇಯನ್ ಸಮುದ್ರದಲ್ಲಿ ಬ್ರಿಟಿಷರ ಮೇಲೆ ಅಭಿಕ್ರಮವಾದರೆ.

### ಮಿಲಿಟರಿ ಸೆಂಕ್ಷನುಗಳನ್ನು ಜ್ಯಾರಿಗೆ ತರುವುದಿಲ್ಲ.

### ಸುಯೇಜ ಕಾಲುವೆಯನ್ನು ಮುಚ್ಚುವುದಿಲ್ಲ.

ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರ ಮೇಲೆ ಅಭಿಕ್ರಮ ನಡೆದರೆ ಫ್ರೆಂಚರು ಅವರಿಗೆ ಬೆಂಬಲ ಕೊಡಲಿಕ್ಕೆ ಸಿದ್ಧರಿರುತ್ತಾರೆಂದು ಅಲ್ಲಿನ ಸರಕಾರವು ಒಪ್ಪಿರುತ್ತದೆ.

ಬ್ರಿಟಿಷ ಸರಕಾರವು ಮಿಲಿಟರಿ ಸೆಂಕ್ಷನುಗಳ ಕುರಿತು ಆಲೋಚನೆ ಮಾಡುವುದಿಲ್ಲ. ಸುಯೇಜ ಕಾಲುವೆಯನ್ನು ಎಷ್ಟಕ್ಕೂ ಮುಚ್ಚಲಾರರು.

ಯಾವತ್ತೂ ಕಾರ್ಯವನ್ನು ಜನಪದ ಮಂಡಳದ ಸದಸ್ಯ ಜನಾಂಗದವರ ಒಕ್ಕಟ್ಟಿನಲ್ಲೆ ನಡೆಯಿಸುವುವು.

ಬ್ರಿಟಿಷರು ಮೆಡಿಟರೇನಿಯನ್ ಸಮುದ್ರದಲ್ಲಿ ತಮ್ಮ ನೌಕಾಬಲವನ್ನು ಕೆಳಗಿನ ಶರ್ತದಲ್ಲಿ ತಗ್ಗಿಸಲು ಸಿದ್ಧವಿದೆ.

ಇಟೇಲಿಯವರು ಅಲ್ಲಿಯೇ ಲಿಬಿಯಾ ಎಂಬಲ್ಲಿ ಇರಿಸಿದ ಸೈನ್ಯದಂಡನ್ನು ಹಿಂತೆಗೆಯಬೇಕು. ಬ್ರಿಟಿಷರ ಮೇಲೆ ಇಟಲಿಯಾನ ಪತ್ರಿಕೆಗಳು ನಡೆಸುವ ದಾಳಿಯು ನಿಲ್ಲಿಸಬೇಕು.

ಇಟಲಿಯು ಇದಕ್ಕೆ ಸಿದ್ಧವಿದೆಯೆಂದು ಕೆಲದರು ಹೇಳುತ್ತಿರುವರು. ಇದನ್ನು ನೋಡಿ ಇಸ್ಸಿಂದ ಮಹಾಯುದ್ಧವನ್ನು ಸ್ಥಾಪಿಸುವ ಇಚ್ಛೆಯು ಮುಸಲೋನಿಗೆ ಇಲ್ಲವೆಂದು ಭಾಸವಾಗುತ್ತದೆ. ಬ್ರಿಟಿಷರ ಓರ್ವ ಪ್ರತಿನಿಧಿಗಳು ಸಂಧಿಪ್ರಸ್ತಾಪಕ್ಕಾಗಿ ಈಗ ರೋಮ್ ನಗರದಲ್ಲಿರುವುದರಿಂದ ಈ ಸಮರ ಈಗಲೆ ಕೊನೆಗಾಣುವುದೆ ಎಂದು ನೋಡಬೇಕು.

ಎಬಿಸೀನಿಯಾ ವಿಚಾರವಾಗಿ—ಸೆಂಕ್ಷನುಗಳು ಜ್ಯಾರಿಗೆ ಬರುವುದಾದರೂ ಅಮೇರಿಕಾದವರು ಇಟೇಲಿಯವರಿಗೆ ಎಣ್ಣೆಯನ್ನು ಕಳುಹಿಸಿಕೊಡುತ್ತಾ ಇದ್ದಾರೆ. ಮಿಲಿಟರಿ ಸೆಂಕ್ಷನುಗಳ ಸಿದ್ಧತೆಗಳು ಎಂಬಂತೆ ಬ್ರಿಟಿಷರ ಸ್ಥಿತಿಗತಿಯಲ್ಲಿ ಭಾರಿ ಸಿದ್ಧತೆಗಳ ನಡೆಯುತ್ತಿದೆ.

---

## ಈಗ ಬಂದ ವಾರ್ತೆ.

## LATEST NEWS

ತಾ ೨೩—೧೦—೩೫

### ಬ್ರಿಟಿಷ ಪಾರ್ಲಿಮೆಂಟಿನ ಅಧಿವೇಶನ.

ಈ ದಿವಸ ಮಧ್ಯಾಹ್ನ ೨-೪೫ಕ್ಕೆ ಹೌಸ್ ಒಫ್ ಕೋಮನ್ಸ್ ಸಭೆಯ ಸೇರಿತು. ಸರಕಾರದ ಎಲ್ಲಾ ಸಚಿವರೂ ಅಧ್ಯವರ್ಗದವರೂ ನೆರೆದಿದ್ದರು. ಈ ದಿವಸ ಯುರೋಪಿಯನ್ ಯುದ್ಧ ವಿಚಾರವೂ ಇಟೇಲಿ—ಎಬಿಸೀನಿಯಾ ಯುದ್ಧದ ವಿಚಾರವೂ ಬಹಳ ಚರ್ಚೆಯು ನಡೆಯಿತು. ಬಹಿರ ವ್ಯವಸ್ಥೆಯ ಸಚಿವರಾದ ಸಾಮ್ಯುವೆಲ್ ಹೋರರ ಭಾಷಣದಿಂದ ಇನ್ನೊಂದು ಮಹಾಯುದ್ಧವು ಎಷ್ಟಕ್ಕೂ ತಲೆದೋರದೆಂದೂ ವ್ಯಕ್ತವಾಗುತ್ತದೆ, ಅವರಲ್ಲೂ ಫ್ರೆಂಚ ಮತ್ತು ಬ್ರಿಟಿಷ ಪ್ರತಿನಿಧಿಯು ಈಗ ಮುಸೋಲಿನಿಯ ಕೂಡೆ ಸಂಧಿ ಪ್ರಸ್ತಾಪ ನಡೆಸುತ್ತಿರುವರೆಂಬ ವರ್ತಮಾನವು ಸತ್ಯವಾದರೆ ಈಗ ತಲೆದೋರಿದ ಚಳವಳವು ಬೇಗನೆ ಶಾಂತವಾಗಬಹುದು. ಇಟಲಿಯವರಿಗೆ ಅಬಿಸೀನಿಯಾ ಹೆಚ್ಚಿನಂಶವನ್ನು ಕೊಡುವ ವ್ಯವಸ್ಥೆಗಳನ್ನು ಮಾಡುವರೆಂದೂ, ಮುಸಲೋನಿಯು ಫ್ರೆಂಚರೂ ಮತ್ತು ಬ್ರಿಟಿಷರ ಶರ್ತಗಳನ್ನು ಸ್ವಲ್ಪ ಬದಲಾವಣೆಗಳನ್ನು ಮಾಡಿ ಒಪ್ಪುವನೆಂದೂ ಅಬಿಸೀನಿಯಾ ಯುದ್ಧವನ್ನು ನಿಲ್ಲಿಸುವನೆಂದು ಬಲವಾದ ವರ್ತಮಾನವಿದೆ. ಎಬಿಸೀನಿಯಾದಿಂದ ಯಾವತ್ತೂ ವಿಶೇಷತರದ ಘಟನೆಗಳ ವರ್ತಮಾನವು ಬರಲಿಲ್ಲ.

## ಮುಸೋಲಿನಿಯ ಸಿದ್ಧತೆಗಳು.

ಮುಸೋಲಿನಿಯು ತಾನು ಕೈಕೊಂಡ ಈ ಕಾರ್ಯದಲ್ಲಿ ಅನುಸಂಕಟಗಳನ್ನು ಮುಂದಾಗಿಯೇ ತಿಳಿದವನಾಗಿ ಈ ಕೆಳಗಿನ ರೀತಿ ಸರ್ವಸಿದ್ಧನಾಗಿರುವನು. ಸುಯೇಜ ಕಾಲುವೆಯನ್ನು ಮುಚ್ಚಿದರೂ ಕೂಡ, ಅವನು ಹೆದರುವ ಹಾಗಿಲ್ಲ.

ಜುಲೈ ಮತ್ತು ಅಗೋಸ್ತು ತಿಂಗಳುಗಳಲ್ಲಿ ಅಮೇರಿಕಾದಿಂದ ಇಟಲಿಗೆ ಕ್ರಮದಲ್ಲಿರುವ ರತ್ತಿನ ಅರು ಪಾಲಷ್ಟು ತಾಂಬ್ರವು ರಫ್ತಾಗಿದೆ

ಅಲ್ಲಿನ ಸ್ಟೆಂಡಾರ್ಡ ಒಯಿಲ್ ಕಂಪೆನಿಯವರು ಸೆಂಕ್ಷನುಗಳು ಜ್ಯಾರಿಗೆ ಬರುವ ಸ್ವಲ್ಪ ಮೊದಲು, ವಿಮಾನಗಳಿಗೆ ಬೇಕಾಗುವ ೧೮೦೦ ಟನ್ ಪೆಟ್ರೋಲನ್ನು ಇಂಟ್ರಿಯಾಕ್ಕೆ ಕಳುಹಿಸಿರುವರು.

ಈ ವರ್ಷದ ಮೊದಲಿನ ಆರು ತಿಂಗಳುಗಳಲ್ಲಿ ೧೯೩೪ರಲಕ್ಕಿಂತ ಹೆಚ್ಚಿನ ಪೆಟ್ರೋಲಿಯಮ್ ಸಾಮಾನುಗಳನ್ನು, ರೋಮೇನಿಯಾದವರು ಇಟಲಿಗೆ ರಫ್ತು ಮಾಡಿರುತ್ತಾರೆ.

ಜರ್ಮನಿಯಿಂದ ಧಾರಾಳವಾಗಿ ಕಲ್ಲಿದ್ದಲು ಇಟಲಿಗೆ ಸಾಗಿಸುತ್ತಿದ್ದಾರೆ

ಬಲ್ಗೇರಿಯಾದಿಂದ ಧಾರಳ ಗೋಧಿಯನ್ನು ಕಳುಹಿಸಿಕೊಟ್ಟಿದ್ದಾರೆ

ಜೆಕ್ಕೋಸ್ಲೋವಿಯಾದಿಂದ ಯುದ್ಧ ಸಾಮಗ್ರಿಗಳೂ ಬೆಲ್ಜಿಯಮ್‌ದಿಂದ ಉಕ್ಕು ಇಟಲಿಗೆ ಧಾರಾಳವಾಗಿ ರಫ್ತಾಗಿವೆ

### ಸೆಂಕ್ಷನುಗಳು.

ಎಡನ್‌ರ ಸೂಚನೆ ಪ್ರಕಾರ ಸೇಂಕ್ಷನುಗಳನ್ನು ಜ್ಯಾರಿಗೆ ತರಲು, ಜನಪದ ಮಂಡಳವು ನಿರ್ಧರಿಸಿತು. ಇಟಲಿಯವರೊಡನೆ ವ್ಯಾಪಾರ ಬಹಿಷ್ಕಾರವು ಬೇಗನೆ ಜ್ಯಾರಿಗೆ ಬರುವುದು ಎಲ್ಲಾ ಜನಾಂಗಗಳು (ಜನಪದ ಮಂಡಳದ) ಈ ಸೆಂಕ್ಷನುಗಳಲ್ಲಿ ಕೂಡುವ ಹಾಗಿದೆ

---

## ಮಹಾತ್ಮಾ ಗಾಂಧಿಯವರೂ ಎಬಿಸೀನಿಯಾದ ಯುದ್ಧವೂ.

"ಎಥಿಯೋಪಿಯಾದವರ ಅಹಿಂಸಾ ಧರ್ಮವನ್ನು ಆಚರಿಸಿದರೆ ಅವರಿಗೆ ಯುದ್ಧ ಸಾಮಗ್ರಿಗಳೂ, ಯಾರ ಬೆಂಬಲವೂ ಬೇಡವಾಗುವುದು" ಎಂದು ಮಹಾತ್ಮಾಜಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ ಬರೆದಿರುವರು. ಇದರಲ್ಲಿ ಇವರು ಕೆಳಗಿನ ಮೂರು ಪ್ರಶ್ನೆಗಳನ್ನು ವಿಚಾರಿಸಿ ಹೀಗೆನ್ನುತ್ತಿರುವರು.

ಉತ್ತಮ ರೀತಿಯಲ್ಲಿ ಆಯುಧ ಪಾಣಿಗಳಾಗದೆ ಇರುವ ಎಬಿಸೀನಿಯ್ಯಾ, ಸಕಲ ನವ ಯುದ್ಧೋಪಕರಣಗಳಿಂದ ಕೂಡಿದ ಇಟಲಿಯಾನರ ಮುಂದೆ, ಅಹಿಂಸಾಧರ್ಮವನ್ನು ಆಚರಿಸಿದರೆ ಏನಾಗುವುದು''? ಇದಕ್ಕೆ ಇವರ ಉತ್ತರ

"ಎಬಿಸೀನಿಯಾದವರು ಜನಾಂಗಸಭೆಯವರೊಡನೆಯೂ ಮತ್ತು ಇನ್ನು ಇತರ ಯಾವ ಜನಾಂಗದ ಕೂಡೆ ಬೆಂಬಲಕ್ಕಾಗಿ ಮೊರೆಯಿಡಬಾರದು ಇವರು ಯಾವ ತರದಲ್ಲೂ ಹಂಬಲಿಸಬಾರದು ಆಗ್ಗೆ ಯುದ್ಧಾತುರಾಗಿ ಮುಂದಕ್ಕೆ ಬಂದಿರುವ ಇಟಲಿಯಾನರು, ಅಶಸ್ತ್ರರೂ, ಮತ್ತು ಅಹಿಂಸೆಗಳೂ ಆದ ಎಥಿಯೋಪಿಯಾನರ ಮೇಲೆ ಹೇಗೆ ಕೀಗಿಸುವರು? ಇವರೊಡನೆ ಇವರು ಸತ್ಯಾಗ್ರಹವೆಂಬ ಅಮೂಲ್ಯ ಸೂತ್ರವನ್ನು ಉಪಯೋಗ ಮಾಡಬೇಕು ಆಗ್ಗೆ ಇಟಲಿಯನಾನರು, ಜನರಲ್ಲಿದ ಎಬಿಸೀನಿಯಾವನ್ನು ಅಭಿಕ್ರಮಿಸಿದಂತಾಗುವುದು ಎಬಿಸೀನಿಯಾದವರನ್ನು ಸದೆಬಡಿದು, ಇವರ ಪ್ರಜೆಗಳನ್ನಾಗಿ ಮಾಡಿ, ಅಬಿಸೀನಿಯಾದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಇವರ ಮುಖ್ಯ ಉದ್ದೇಶ''

"ಜಗತ್ತಿನಲ್ಲಿ ಪ್ರಖ್ಯಾತರಾದ ಬ್ರಿಟಿಷರಿಗೆ ಈ ಪ್ರಸಂಗವು ಒದಗಿದರೆ, ಅವರು ಅಹಿಂಸಾಧರ್ಮವನ್ನು ಆಚರಿಸಿದರೆ ಸಾರ್ಥಕವಾಗುವುದೇ?'' ಇದಕ್ಕೆ ಗಾಂಧಿಜಿಯವರು ಬ್ರಿಟಿಷರು ನಿಜವಾಗಿ ಅಹಿಂಸಾಧರ್ಮವನ್ನು ಆಚರಿಸಿದರೆ, ಅವರು ಚಕ್ರಾಧಿಪತ್ಯದ ಕೀರ್ತಿಯನ್ನು ಎಲ್ಲೆಲ್ಲೂ ಸಾರ ವಂತಾಗುವುದು ಅವರು ಯುದ್ಧದ ಸಕಲ ಆಯುಧಗಳನ್ನು ತ್ಯಜಿಸಬೇಕು ಇದರಿಂದ ಪ್ರತಿಕೂಲಿಸುವ ನೀತಿಯ ಬಲವು ಇಟಲಿಯಾನರು ಗೆಲಿಡಿಸಿ ಅವರು ಯುದ್ಧವನ್ನು ಬಯಲಿಗೆ ಒತ್ತಿ ಶಾಂತರಾಗುವಂತೆ ಮಾಡುವುದು''

---

## ಗಂಟಲು ನೋವನ್ನು ಗುಣಪಡಿಸಿರಿ.

ಶ್ವಾಸೋಚ್ಛ್ವಾಸದ ಪೆಪ್ಸನ್ನು ಬಾಯಿಯಲ್ಲಿ ಕರಗಿಸಿ ಕೆಟ್ಟ ಗಂಟಲು ನೋವನ್ನು ನಿವಾರಿಸಿರಿ ಪೆಪ್ಸ್ ವಿಷಹಾರಿ ಹಿತಕರವಾದ ಧೂಮವು, ಗಂಟಲನ್ನು ಸಂತೈಸಿ, ಆದಕ್ಕೆ ಕ್ರಿಮಿನಾಶಕ ಸ್ನಾನವನ್ನು ಕೊಡುವುದು ನೋವಿನ ನಿವಾರಣೆ, ಮತ್ತು ಶ್ವಾಸಕೋಶದ ಉರಿಯನ್ನು ಪೆಪ್ಸ್ ನಿಲ್ಲಿಸುವುದು ಪೆಪ್ಸ್ ಯಾವತ್ತೂ ಮುಖ್ಯಳಿಸ ವ ಔಷಧಿಗಳಿಂದ ಶ್ರೇಷ್ಠಕರವಾದುದು. ಎಲ್ಲಾ ವ್ಯಾಪಾರಸ್ಥರಲ್ಲಿ ಬಾಟ್ಲಿ ಒಂದಕ್ಕೆ ರೂ ೧೧೦ ದೊರಕುತ್ತದೆ.

ಪೆಪ್ಸ್ ವಿಷಹಾರಿ ಶ್ವಾಸನೀಯ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್

PEPS

---

## "ಮೇಲೆ ಮೇಲೆ ವೇದನೆಗೊಳ್ಳುತ್ತಿದ್ದೆ."

ಎರಡು ವರ್ಷಗಳ ವರೆಗೆ ಉದರ ವೇದನೆಯಿಂದ ಕಷ್ಟಪಟ್ಟು, ಆಸ್ಪತ್ರೆಯ ಚಿಕಿತ್ಸೆಯಾದನಂತರವೂ ಅದು ಗುಣವಾಗದಿದ್ದು ನೊಂದುಕೊಳ್ಳುವಾಗ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್‌ನ ಒಂದೇ ಒಂದು ಬಾಟ್ಲಿಯಿಂದ ಶೀಘ್ರ ಗುಣವಾಯಿತೆಂದರೆ ಅದೊಂದು ವಿಚಿತ್ರವೆಂದು ನೀವು ಭಾವಿಸಲಾರಿರಾ? ಆದರೂ ಮಿ W E H. ರವರು ಅವರ ನುಡಿಗಳಿಂದಲೇ ವ್ಯಕ್ತಪಡಿಸಿರುವುದನ್ನು ಓದಿರಿ —

ನಾನು ಆಸ್ಪತ್ರೆಯಲ್ಲಿದ್ದೆ, ಎರಡು ಸಲ ಎಕ್ಸ್‌ರೇ ನಡೆಸಿದರು ಎರಡು ವರ್ಷಗಳಿಂದ ಉದರವೇದನೆಯಿಂದ ಬಳಲುತ್ತಿದ್ದೆ, ಒಮ್ಮೊಮ್ಮೆ, ಮೇಲೆ ಮೇಲೆ ವೇದನೆಯಾಗುತ್ತಿತ್ತು. ಅಷ್ಟರಲ್ಲಿ ಒಬ್ಬ ಗೆಳೆಯರು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಉಪಯೋಗಿಸೆಂದು ಹೇಳಿದರು. ಅದು ಅದ್ಭುತವನ್ನೇ ನಡೆಸಿತು. ಒಂದು ಬಾಟ್ಲಿಯ ಹುಡಿಯನ್ನು ತೆಗೆದುಕೊಂಡೊಡನೆ ನನಗೆ ಬಹು ಸ್ವಾಸ್ಥ್ಯವು ಲಭಿಸಿತು. ಮುಂದಕ್ಕೆ ನಾನು ಅದನ್ನು ಇಟ್ಟುಕೊಳ್ಳದಿರೆನು ಹೊಟ್ಟೆನೋವೆಂದ ಕಷ್ಟಪಡುತ್ತಿರುವವರಿಗೆಲ್ಲ ಅದನ್ನು ಶಿಫಾರಸು ಮಾಡುವೆನು

ಯಾವ ರೀತಿಯ ಹೊಟ್ಟೆಯ ಬಾಧೆಯಿಂದ ಕಷ್ಟಪಡುತ್ತಿರುವಿರೇನು, ನಿಮಗೆ ಮಿ H, ರವರಿಗೆ ದೊರೆತ ಸುಖ ದೊರೆಯುವುದು, ಆದರೆ ಕೆಲವು ಅಂಗಳ ಪಾಸಿಗಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ, ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ ಸೀಲು, ರಕ್ಷಾಪತ್ರ, ಮತ್ತು ಬಿಲ್ಲೆಗಳ ಮೇಲೆ

*Alex. C. Maclean*

ಎಂಬ ದಸ್ಕತು ಇದೆ ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮೊರಿಸನ್ ಎಂಡ್ ಹೆರಿಸ್ ಲಿಮಿಟೆಡ್,

15 ಸೆಕ-ರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು— ಇವರಿಗೆ ಬರೆಯಿರಿ,

ಬಿಲ್ಲೆಗಳ ರವಾನೆಯಿಂದ ವಿಕ್ರಯಿಸಲ್ಪಡುತ್ತದೆ.



---

# -HAIL & CO-

## HALFTONE & LINE BLOCK MAKERS

Cinema Colour Slides & Designs A Speciality

### RATES FOR HALF-TONE & LINE BLOCKS

| | | | | | |
|---|---|---|---|---|---|
| Half-Tone Block on Copper | | 0 | 8 | 0 | per sq inch |
| " " | Minimum size | 4 | 0 | 0 | per block |
| " Zinc | | 0 | 6 | 0 | per sq inch |
| " | Minimum size | 3 | 0 | 0 | per block |
| Line block on Copper | | 0 | 10 | 0 | per sq inch |
| " " | Minimum size | 5 | 0 | 0 | per block |
| " on Zinc | | 0 | 4 | 0 | per sq inch |
| " " | Minimum size | 2 | 0 | 0 | per block |

*Minimum Size 8 Sq inches and under*

For Vignetting works extra two annas per sq inch Designs of any kind are executed either us wash drawing or in Line

Kindly Note—Glossy print of P. O P. or Bromide are advisable for reproduction.

State size of blocks as also metal and the purpose for which it is required as we have to use our descrition in the selection of screen. (Fine, Medium, Rough)

*Terms:*—Liberal Commission will be allowed to the printers and continued customers Half the amount of order is payable in advance and the balance on delivery or V. P P

HAIL & CO.,

HALF-TONE & LINE BLOCK MAKERS, 70/1 Chickpet, BANGALORE CITY

---

## ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 862/1935

ಕ ಕಮಲಾಕ್ಷ ಕಮ್ತಿ ಸರ್ವೋತ್ತಮ ಅನಂತ ಕಮ್ತಿರ ಮಗ ಕಾಸರಗೋಡು ತಾಲ್ಲೂಕು ಕಾಸರಗೋಡ ಕಸಬಾ — ವಾದಿ

ಮತ್ತು

ಗಣಪತಿ ಶ್ಯಾನಭಾಗ-ಸುಬ್ರಾಯ ಶ್ಯಾನಭಾಗರ ಮಗ-ಪುತ್ತೂರು ತಾಲೂಕು ಪುತ್ತೂರು ಕಸಬಾ-ಪ್ರತಿವಾದಿ

ಇವರೊಳಗೆ

ಪ್ರತಿವಾದಿಯು. ಕಾಸರಗೋಡು ಕಸಬೆಯಲ್ಲಿ ಮೋಡರ್ನ್ ರೆಸ್ಟೋರೆಂಟ್ ಎಂಬ ಹೆಸರಿನಿಂದ ಕಾಫಿ ಹೋಟೇಲಿನ ವ್ಯಾಪಾರ ನಡೆಸುತ್ತಿದ್ದ ಸಮಯ ವಾದಿಯ ಅಂಗಡಿಯಲ್ಲಿ ನಡಿಸಿದ ಲೇವಾದೇವಿಯಲ್ಲಿ ಪ್ರತಿವಾದಿಯಿಂದ ಬಹಾ ಅಸಲು ಬಡ್ಡಿ ರೂಪ್ಯಾ 205 4-2ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಖು 4-11-1935ಕ್ಕೆ ತನ್ನಿ ಬಗ್ಗೆ ಇಡೋಣಾಗಿಯದೆ ಆ ದಿವಸ ಪ್ರತಿವಾದಿಯು ಹಾಜರಾಗುವರೆ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

21-10-35 ಕಾಸರಗೋಡು | H Srinivasa Kamath, *Vakil for Plaintiff.*

# ಪತ್ರಿಕಾಪ್ರಪಂಚ:

## ಚಹಾಪಾನವು ಹಿತಕರವೋ.

ಕಾಫಿ ಮತ್ತು ಚಾ ಕುಡಿತದಲ್ಲಿ ಮನುಷ್ಯನ ಹೃದಯ ಚಲನವೂ, ನರಗಳೂ ಉತ್ತೇಜನದಾಯಕವು. ಎಷ್ಟು ಉತ್ತಮ ರೀತಿಯಲ್ಲಿ ತಯಾರಿಸಿದರೂ ಚಹಾಪಾನದಿಂದಾಗಿ ಅಜೀರ್ಣ ಎದೆಬತೆಯುವುದು, ತಲೆತಿರುಗುವಿಕೆ ಮತ್ತು ನರಗಳ ಸಂಬಂಧವಾದ ರೋಗಗಳು ತಲೆದೋರುವುವು. ಬಳಲಿ ವಿಶ್ರಾಂತಿಯನ್ನು ಕೋರುವ ಮೆದುಳಿಗೆ ಚಹಾ ಪಾನದಿಂದಾಗಿ ಶಕ್ತಿಯು ಬರುವುದು ಚಹಾದಲ್ಲಿ ಕೆಫಿನ್ ಎಂಬ ವಿಷದ್ರಾವಕವು ಸೇರಿಕೊಂಡಿರುವುದು ಒಂದೊಂದು ಕಪ್ ಚಹಾದಲ್ಲಿ ೫ರಿಂದ ೮ gr.ನ ವರೆಗೆ ಕೆಫಿನ್ ಇರಲು ಸಾಧ್ಯವಿದೆ ಈ ೫ ಯಾ ೮ gr ಕೆಫಿನ್ ವಿಷದಿಂದಾಗಿ ಚಾ ಪಾನಿಗಳಿಗೆ ಮೆದುಳಿನ ಸಂಬಂಧವಾದ ರೋಗ, ಕೋಪ ಬರುವಿಕೆ ಜೀರ್ಣ ಸಂಬಂಧವಾದ ರೋಗಗಳು, ಇನ್ನು ಅನೇಕ ತರದ ರೋಗಗಳು ಸಂಭವಿಸುವವು

ಚಾಪಾನವು ಹಿಂದೂಸ್ಥಾನದಲ್ಲಿ ಇತ್ತೀಚೆಗೆ ವಾಡಿಕೆಗೆ ಬಂದ ದುರಭ್ಯಾಸವಾಗಿರುತ್ತದೆ ಇದರ ಮೊದಲು ಭಾರತೀಯರು ಆರೋಗ್ಯವಂತರೂ ಬಲಿಷ್ಠರೂ ಆಗಿ ಬಾಳಿದರು ಆಗ ಅವರು ಗಂಜಿಯನ್ನೂ ಹಾಲನ್ನೂ ಸೇವಿಸುತ್ತಿದ್ದರು ಈಗ ಚಹಾಪಾನದಿಂದಾಗಿ, ಸಾಧಾರಣ ಎಲ್ಲರೂ ಜೀರ್ಣ ರೋಗದಿಂದಲೂ ಇನ್ನಿತರ ನರಗಳ ಮತ್ತು ಮೆದುಳಿನ ಸಂಬಂಧವಾದ ರೋಗಗಳಿಂದಲೂ ಬಳಲುತ್ತಿದ್ದಾರೆ ಚಹಾದಲ್ಲಿ ಟೆನಿನ್ ಎಂಬ ವಿಷವೇ ಹೊಟ್ಟೆಯ ರೋಗ ಕಾರಣವಾದುದು ಚಾ ಪಾನಿಗಳಿಗೆ ಪ್ರಾರಂಭದಲ್ಲಿ ನಿದ್ದೆ ಬಾರದಿರುವಿಕೆ ಮತ್ತು ಹಸಿವಿಲ್ಲದಿರುವಿಕೆಯು ತಲೆದೋರುವುದು ಕೊನೆಗೆ ಜೀರ್ಣಕೋಶವು ಹಾಳಾಗಿ ಹೃದಯ ಸಂಬಂಧವಾದ ರೋಗಗಳು ಉಂಟಾಗಿ ಕಠಿಣ ತರದ ಸಂಕಷ್ಟಗಳನ್ನು ಅನುಭವಿಸುವರು ಚಾ ಪಾನ ಮಾಡಿದ ಕ್ಷಣವೇ ಮನುಷ್ಯನು ಉತ್ತೇಜನಗೊಳ್ಳುವನು, ಆದರೆ ಇದರಿಂದ ಅಷ್ಟೇ ನಿಸ್ತೇಜನವುಂಟಾಗುವುದು. ಈ ಹಾನಿಗಳು ಚಾ ಕೊಕೋ, ಕಾಫಿ ಮುಂತಾದ ಘಾತಕವಾದ ಪಾನಕಗಳಿಂದ ಬರುವವು ಭಾರತೀಯರು ತಮ್ಮ ಪೂರ್ವಪದ್ಧತಿಯನ್ನು ಅನುಸರಿಸುವುದು ಹಿತಕರ

Evils of Tea Drinking, (by P C Ray)
Modern Review for October

## ಭೂವ್ಯವಸಾಯದಲ್ಲಿ ವಿದ್ಯುಚ್ಛಕ್ತಿಯ ಉಪಯೋಗ

ಹಿಂದೂದೇಶದಲ್ಲಿ ಭೂವ್ಯವಸಾಯದಲ್ಲಿ ವಿದ್ಯುಚ್ಛಕ್ತಿಯ ಉಪಯೋಗವು ಬಹಳ ಕಡಿಮೆ ಕೊಯಮುತ್ತೂರಿನ ಕೆಲವು ಹಳ್ಳಿಗಳಲ್ಲಿ ಮಾತ್ರ ನೀರನ್ನು ಸೇದುವುದಕ್ಕೆ ಕೆಲವು ಪಂಪುಗಳು ಇದರ ಸಹಾಯದಿಂದ ನಡೆಯುತ್ತಿವೆ ಒಟ್ಟು ನೂರು ಪಂಪುಗಳು ನಡೆಯುತ್ತಿವೆ ಆದರೆ ವಿದ್ಯುಚ್ಛಕ್ತಿಯನ್ನು ವ್ಯವಸಾಯದಲ್ಲಿ ಹಲವು ಬಗೆಯಲ್ಲಿ ಉಪಯೋಗ ಮಾಡಬಹುದು ಇದರಿಂದ ಭೂವ್ಯವಸಾಯವು ಬಲೋರೀತಿಯಲ್ಲಿ ನಡೆದು ಅಭಿವೃದ್ಧಿಯನ್ನು ಹೊಂದುವುದು ಆದರೆ ಈಗ ಇರುವ ವಿದ್ಯುಚ್ಛಕ್ತಿಯ ದರದಿಂದ ಭೂವ್ಯವಸಾಯವನ್ನು ಬಹಳ ಕಡಿಮೆ ಕರ್ಚಿನಲ್ಲಿ ನಡೆಸುವುದು ಸಾಧ್ಯವೆಂದು ನೋಡಬಿಡದೆ ಕಾಲಕ್ರಮೇಣ ಇದು ಸಾಧ್ಯವಾದೀತೆಂದು ಆಶೆ ವಿದ್ಯುಚ್ಛಕ್ತಿಯನ್ನು ವ್ಯವಸಾಯ ಕಾರ್ಯಗಳಲ್ಲಿ ೩೩೦ ರೀತಿಗಳಲ್ಲಿ ಉಪಯೋಗಿಸಬಹುದೆಂದೂ ಸಂಯುಕ್ತ ಅಮೇರಿಕಾದಲ್ಲಿ ಸಾಗುವಳಿಗೋಸ್ಕರ ವರ್ಷ ಒಂದರ ೧೬,೬೫,೦೦೦,೦೦೦ ಯೂನಿಟ್ ವಿದ್ಯುಚ್ಛಕ್ತಿಯು ಖರ್ಚಾಗುವುವೆಂದೂ ಗದ್ದೆ ಹೂಡುವುದು, ಬೆಳೆಕೊಯ್ಯುವುದು, ನೀರು ಹಾಯಿಸುವುದು ಗರಗಸಗಳನ್ನು ನಡೆಸುವುದು, ಸಾಮಾನುಗಳನ್ನು ಅತ್ತ ಇತ್ತ ಒಯ್ಯೋಣ, ಕೋಳಿಗಳನ್ನು ಸಾಕುವುದು, ಅವುಗಳ ಮರಿಮಾಡುವುದು ಇವೇ ಮೊದಲಾದ ಕೃಷಿಗೆ ಸಂಬಂಧವಾದ ಸಕಲ ಕಾರ್ಯಗಳಲ್ಲಿ ವಿದ್ಯುಚ್ಛಕ್ತಿಯ ಉಪಯೋಗ ಮಾಡಿ ಇದರ ಪರಿಣಾಮ ನೋಡಬೇಕಾಗಿಯೂ ಅಲ್ಲಿನ ಸರಕಾರದ ಕಟ್ಟಪ್ಪಣೆಯಾಗಿದೆ ಎಂದು ಜೆ ಬಿ ಚಾರ್ಡಿನರೆಂಬವರು "ಸ್ಯಾಂಟಿಟಿಕ್ ಅಮೆರಿಕಾ" ಎಂಬುದರಲ್ಲಿ ತಿಳಿಸುತ್ತಾರೆ ಹೀಗೆ ಪರಿಶೋಧಿಸಿ, ವಿದ್ಯುಚ್ಛಕ್ತಿ ಉಪಯೋಗದಿಂದ ಉಂಟಾಗಬಹುದಾದ ಉಪಕಾರವನ್ನು ಅಲ್ಲಿನ ರೈತರಲ್ಲಿ ಯೋಗ್ಯ ರೀತಿ ತಿಳಿಸುತ್ತಾರೆ

The Hindu

## ಜಗದ್ವಿಖ್ಯಾತ ಗಾಮಾ.

ಈತನ ವಿಷಯ ಮದ್ರಾಸಿನ 'ಹಿಂದೂ' ಪತ್ರಿಕೆಯ ವಾರಪತ್ರಿಕೆಯಲ್ಲಿ ಎಲ್ ಎಸ್. ಬೀಟಿಂಗ್ಸ್ ಎಂಬವರು ಹೀಗೆ ಬರೆದಿರುವರು

ಗುಲಾಂ ಮಹಮ್ಮದ್ ಯಾನೆ ಗಾಮಾ ಎಂದು ಇವನ ಸಂಪೂರ್ಣ ಹೆಸರು ಪ್ರಾಯ ೪೦ ವರ್ಷ ಪಾಟಿಯಾಲ ಮಹಾರಾಜರ ಆಶ್ರಯಪೋಷಿತನಾಗಿ ದಿವಸಕ್ಕೆ ರೂಪಾಯಿ ೧೦೦ ಕಲಬು ಪಡೆಯುತ್ತಿದ್ದಾನೆ. ಮುತ್ತಿನ ಭಸ್ಮ, ಏಳು ಕೋಳಿಗಳ ಸೂಪು, ಒಂದೂವರೆ ಸೇರು ಬಾದಾಮಿನ ಹಾಲು, ೫ ಸೇರು ಹಾಲು, ಅರ್ಧಸೇರು ತುಪ್ಪ, ಬಂಗಾರದ ಎಲೆಗಳು, ಒಳ್ಳೆಮೊಳಸಿನಿಂದ ಕೂಡಿದ ಮಾಂಸ, ಇವು ಇವನ ಪಂದ್ಯಾಟಕ್ಕೆ ತರಬೇತಿನ ಪ್ರತಿ ದಿನದಲ್ಲಿ ತಿನ್ನುವ ಆಹಾರ ಆದರೆ, ಇತರ ದಿನಗಳಲ್ಲಿ ಎರಡುವರೆ ಸೇರು ಗೋದಿಯ ಬ್ರೆಡ್ ಮತ್ತು ಮಾಂಸ, ಮೂರು ಸೇರು ತುಪ್ಪ ಮತ್ತು ಹಾಲು, ಕಾಲುಸೇರು ಬಾದಾಮಿನ ಹಾಲು ಮತ್ತು ಮೊಸರು ಇವನ ಆಹಾರವಾಗಿದೆ ಪ್ರತಿನಿತ್ಯವೂ ಇವನು ೫೦೦೦ ಬೈಟಕಗಳನ್ನೂ ೧೫೦೦ ದಂಡುಗಳನ್ನೂ ತೆಗೆಯುವನು ಒಂದು ದಿನಕ್ಕೆ ೯ ಯಾ ೧೦ ಮೈಲು ಓಡುವನು ಇವನ ಆರೋಗ್ಯವು ಇಷ್ಟರ ವರೆಗೆ ಕೆಡಲಿಲ್ಲ

ಹಿಂದೂದೇಶದಲ್ಲಿ ಈತನನ್ನು ಸೋಲಿಸುವ ಜಟ್ಟಿಗಳು ಇಲ್ಲ ದಮಕ್ಷಿನಲ್ಲದೆ ಪಾಶ್ಚಾತ್ಯದೇಶಗಳಲ್ಲಿ ಕುಸ್ತಿ ಪಂದ್ಯಾಟವನ್ನು ನಡೆಸಿ ದೊಡ್ಡ ಪಾಶ್ಚಾತ್ಯ ಕುಸ್ತಿಗರನ್ನು ಸೋಲಿಸಿ ಇವನು ಜಗತ್ತಿನಲ್ಲಿ ಕುಸ್ತಿಪಂದ್ಯಾಟಗಳಲ್ಲಿ ಮೊದಲನೇ ಸ್ಥಾನವನ್ನು ಪಡೆದಿರುವನು ಇವನು ಭಾರತೀಯ ಪುತ್ರನಾದುದರಿಂದ ಇವನೊಡನೆ ಪಂದ್ಯಾಟ ನಡೆಸಲು ಪಾಶ್ಚಾತ್ಯವೀರರ ಹಿಂಜರಿಯುತ್ತಿದ್ದರು ಫ್ರಾನ್ಸ್ ಇಂಗ್ಲೆಂಡ್ ಟರ್ಕಿ ಇಟಲಿ ರಷ್ಯ ಅಮೇರಿಕಾ ಜಪಾನ ಇವೇ ಮೊದಲಾದ ದೇಶಗಳಲ್ಲಿ ಅಲ್ಲಿನ ಪ್ರವೀಣ ಜಟ್ಟಿಗಳನ್ನು ಸೋಲಿಸಿ ಬಹಳ ಕೀರ್ತಿಯನ್ನು ಪಡೆದಿರುವನು ಇವನಿಗಿಂತ ಮುಂಚೆ ಪಾಶ್ಚಾತ್ಯರಲ್ಲಿ ಜಬಿಸ್ಕೋ ಎಂಬವನು ಅಲ್ಲಿನ ಜಟ್ಟಿಗಳಲ್ಲಿ ಪ್ರಥಮಸ್ಥಾನದಲ್ಲಿದ್ದನು ಗಾಮನು ಜೆಬಿಸ್ಕೋನನ್ನು ಬರೇ ಎರಡು ನಿಮಿಷಗಳಲ್ಲಿ ಸೋಲಿಸಿಬಿಟ್ಟಿರುವನು ಗಾಮನಿಗೆ "ರುಸ್ತುಮ್ ಇ ಜಮಾನ್" ಎಂಬ ಬಿರುದು ಸಿಕ್ಕಿದೆ

## ರಸಾಯನಶಾಸ್ತ್ರವೂ ಜರ್ಮನಿಯೂ

ರಸಾಯನಶಾಸ್ತ್ರದ ಆಧಾರದಿಂದ ಜರ್ಮನಿಯು ತನಗೆ ಬೇಕಾದ ಕಾರಣಸಾಮಗ್ರಿಗಳನ್ನು Raw Materials ಪಡೆಯುತ್ತದೆ ಅವರಿಗೆ ಕಾರಣಸಾಮಗ್ರಿಗಳು ಹೆಚ್ಚಾಗಿ ಹೊರಗಣ ದೇಶಗಳಿಂದ ಬರಬೇಕಾಗಿತ್ತು ಆದರೆ ವಿಶ್ವಯುದ್ಧ ಪ್ರಪಂಚದಲ್ಲಿ ಇತರ ಜನಾಂಗದವರ ಪ್ರತಿಯೋಗಗಳಿಂದಾಗಿ ಇವರ ವ್ಯಾಪಾರಕ್ಕೆ ಬೆಟ್ಟದ ಹಾನಿಯುಂಟಾಗಿದೆ ಹೊರಗಿನ ವ್ಯಾಪಾರವು ಇವರೊಡನೆ ಆದಮುಗಿದ್ದ ಹೆಚ್ಚುಕಡಿಮೆ ಇಲ್ಲದೆ ಆ ಅವ ಮಗಳಿಗೆ ತಕ್ಕುದಾದ ದಷ್ಟು ಈಗ ಇಲ್ಲವಾಗಿದೆ [illegible] ತಂದು ಅವುಗಳಿಂದ ನಿರ್ಮಿಸಿದ ವಸ್ತುಗಳಿಗೆ ಮಾರುಕಟ್ಟೆ ಇಲ್ಲದಾಗಿದೆ ಈ ಸ್ಥಿತಿಯು ಅವರ ಕಾಲದ ಪ್ರವೃತ್ತಿಯನ್ನು ಕಾರಣಸಾಮಗ್ರಿಗಳನ್ನು ತಮ್ಮಲ್ಲಿಯೇ ನಿರ್ಮಿಸುವ ಕಡೆಗೆ ಸೆಳೆದು ಬಹಳ ಮುಂದುವರಿದ ಇರುವ ರಸಾಯನ ಶಾಸ್ತ್ರಿಗಳು ಈ ಸಾಮಗ್ರಿಗಳ ಸೃಷ್ಟಿಯನ್ನು ಸಾಧ್ಯವಾಗುವಂತೆ ಮಾಡಲು ಕಾರಣವಾಯಿತು. ಇವರ ಪರಿಶ್ರಮದಿಂದಾಗಿ ಸೃಷ್ಟಿಯ ಸಹಾಯದಿಂದ ದೊರೆವ ಅನೇಕ ವಸ್ತುಗಳನ್ನು ಅಲ್ಲಿನವರು ಕೆಲವು ದ್ರಾವಕಗಳನ್ನೂ ಪುಡಿಗಳನ್ನೂ ಮಿಶ್ರಮಾಡಿ ಕಲ್ಪಿಸಬಲ್ಲರು ಈ ರೀತಿಯಲ್ಲಿ ಸಾಮಗ್ರಿಗಳನ್ನು ತಯಾರಿಸಲು ದೊಡ್ಡ ದೊಡ್ಡ ಕಾರ್ಖಾನೆಗಳ ನಡೆಯುತ್ತಿವೆ ರಸ್ತೆಗಳನ್ನು ಇಡುವದಕ್ಕಾಗಿ ಜರ್ಮನಿಯು ತನಗೆ ಈಗ ಬೇಕಾಗುವ ಹತ್ತಿ, ನಾರು, ರಬ್ಬರು, ಪೆಟ್ರೋಲ್, ಎಣ್ಣೆ ಇತ್ಯಾದಿಗಳ ಆಮದುಗಳ ಪೂರೈಸೇ ಒಂದಂಶವನ್ನು ಪರಾ ತಗ್ಗಿಸುವುದರಲ್ಲಿ ಏನೂ ಸಂದೇಹವಿಲ್ಲ. ಇಷ್ಟು ಮಾತ್ರವಲ್ಲ ಮರದ ತೊಗಟೆಗಳಿಂದ ತಮಗೆ ಬೇಕಾಗುವ ಉಣ್ಣೆ, ರೇಶಿಮೆ ನೂಲುಗಳನ್ನು ಮಾಡಬಲ್ಲರು ಇವರಿಗೆ ಈ ಪದಾರ್ಥಗಳು ಹೆಚ್ಚಾಗಿ ಹಿಂದೂದೇಶದಿಂದ ಹೋಗುತ್ತಿದ್ದವು ಹಿಗ್ಗೆಯೆ ಜರ್ಮನಿಯವರ ಸಹಾಯ ಪಡೆದು ಇಟಲಿಯವರು ಕೂಡ ತಮಗೆ ಬೇಕಾಗುವ ಯಾವತ್ತು ಕಾರಣಸಾಮಗ್ರಿಗಳನ್ನು ತಯಾರಿಸಬಹುದು ಅದರಿಂದ ಈಗ ಇವರ ಮೇಲೆ ಹೂಡಿದ ವ್ಯಾಪಾರಗಳ ಸೋಲ್ಲಮಗಳಿಂದ ಏನೂ ಫಲವು ಆಗದು. ಹೀಗೆಯೇ ಜಪಾನಿನವರು ರೇಶ್ಮೆ, ಉಣ್ಣೆ ಮೊದಲಾದುವುಗಳನ್ನು ರಚಿಸುವ ಹಲವು ಯೋಜನೆಗಳನ್ನು ಕಂಡುಹಿಡಿದಿರುವರು

ಹೀಗೆ ಮುಂದುವರಿಯುತ್ತಿರುವ ಜರ್ಮನಿಯವರು ತಮಗೆ ಬೇಕಾಗುವ ಯಾವತ್ತು ಕಾರಣಸಾಮಗ್ರಿಗಳನ್ನು ತಮ್ಮ ದೇಶದಲ್ಲಿ ನಿರ್ಮಿಸಿ, ತಮ್ಮ ಸ್ವದೇಶದ ಹಣವು ಹೊರಗೆ ಹೋಗದಂತೆ ಮಾಡುವರು ಇತ್ತೀಚೆಗೆ ನಡೆದ ವ್ಯಾಪಾರ ಒಪ್ಪಂದಗಳಿಂದಾಗಿ ಹಿಂದೂ ದೇಶದವರು ಇವರಿಂದ ಹೆಚ್ಚಿನ ಸಾಮಗ್ರಿಗಳನ್ನು ಪಡೆಯುವಹಾಗಿಲ್ಲ ಇದರಿಂದ ಅವರಿಗೂ ಹಿಂದೂದೇಶದವರಿಗೂ ಪರಸ್ಪರ ವ್ಯಾಪಾರಸಂಬಂಧವು ನಿಂತುಹೋಗುವುದು ತನಗೆ ಬೇಕಾಗುವ ಕಾರಣಸಾಮಗ್ರಿಗಳನ್ನು ಪಡೆಯಲು ಇದಕ್ಕೆ ಹಣವು ಎಲ್ಲಿಂದ ದೊರಕುವುದು? ಇವರ ಹಣವು ಹೊರಗೆ ಸುರಿಯುವುದು ಅದಕ್ಕೋಸ್ಕರ ಸ್ವದೇಶದ ರಕ್ಷಣೆಗಾಗಿ ಇವರು ರಸಾಯನಶಾಸ್ತ್ರದ ಕಡೆಗೆ ತಿರುಗಿರುವರು ಇದನ್ನು ಇತರ ಜನಾಂಗದವರು ತಿಳಿದು ಅದರಂತೆ ವರ್ತಿಸುವರೆ ಹೆಚ್ಚಿನ ಕಾರಣಗಳಿವೆ ಹೀಗಿರುವಾಗ ಹಿಂದೂದೇಶ, ಆಫ್ರಿಕಾ, ಇವೇ ಮೊದಲಾದ ಕಾರಣಸಾಮಗ್ರಿಗಳನ್ನು ಒದಗಿಸುವ ದೇಶಗಳ ಗತಿ ಏನು? ಈಗ ಜ್ಯಾರಿಯಲ್ಲಿರುವ ಒಟ್ಟಾವಾ ಒಪ್ಪಂದ ಮತ್ತು ಇನ್ನಿತರ ನಿರ್ಬಂಧಗಳನು ಬೇಗನೆ ತೆಗೆಯದಿದ್ದರೆ ಮೇಲೆ ಹೇಳಿದ ದೇಶಗಳ ಪರಿಸ್ಥಿತಿ ವಾಗಿ ಹಿಂದೂಸ್ಥಾನದ ವ್ಯಾಪಾರವು ಕೆಟ್ಟುಹೋಗುತ್ತದೆ ಜರ್ಮನಿಯಲ್ಲಿ ತಲೆದೋರಿದ ಈ ಆಲೋಚನೆಯು ಬಾಲ್ಯಾವಸ್ಥೆಯಲ್ಲಿ ಇರುವಾಗಲೇ ಇದಕ್ಕೆ ತಕ್ಕ ಸುವ್ಯವಸ್ಥೆಗಳನ್ನು ಮಾಡುವುದು ಉಚಿತ

Madras Mail

## ಮಲೇರಿಯಾ ನಿವಾರಣ ಕ್ವಿನೀನು.

ಹಿಂದೂದೇಶಕ್ಕೆ ವರ್ಷಕ್ಕೆ ೧೪ ೩೦೦ ೦೦೦ ಪೌಂಡು ಕ್ವಿನೀನು ಉಪಯೋಗಿಸಲ್ಪಡುತ್ತದೆ ಇದರಲ್ಲಿ ಮೂರನೇ ಒಂದಂಶವು ಇಲ್ಲಿಯೇ ತಯಾರಾಗುತ್ತದೆ ಆದರೆ ಹೆಚ್ಚಿನ ಅಂಶವು ಒಂದರ ಸಾಧಾರಣ ೨೫ ಲಕ್ಷ ರೂಪಾಯಿ ಕ್ರಯಬಾಳುವ ಕ್ವಿನೀನು ನಮಗೆ ಹೊರಗಣ ದೇಶಗಳಿಂದ ಬರುತ್ತದೆ ಕ್ವಿನೀನು ತಯಾರಿಸುವ ಕೈಗಾರಿಕೆಯು ಈಗ ದಿನೇ ದಿನೇ ನಮ್ಮಲ್ಲಿ ವೃದ್ಧಿಹೊಂದುತ್ತಿದೆ ಮಲೇರಿಯಾ ಜ್ವರಕ್ಕೆ ಇದಕ್ಕಿಂತ ದಿವ್ಯ ಔಷಧವು ಇನ್ನೊಂದಿಲ್ಲ ಮಲೇರಿಯಾದಿಂದ ಭಾರತೀಯ ದಶಲಕ್ಷಗಟ್ಟಲೆ ಜನ ನರಳುತ್ತಿರುವರು ಇದೇ ಭೂಮಂಡಲದಲ್ಲಿ ಮಿಲ್ಲಿಯನರು ಮಲೇರಿಯಾ ಜ್ವರದಿಂದ ಸಾಯುತ್ತಿರುವರು ಇವರಲ್ಲಿ ಒಂದು ಮಿಲ್ಲಿಯನರು ನಮ್ಮ ಭರತಖಂಡದಲ್ಲೇ ಮರಣಹೊಂದುತ್ತಿರುವರು ಸಾಧಾರಣ ನೂರು ಮಿಲ್ಲಿಯ ಜನರು ಈ ಮಲೇರಿಯಾ ಜ್ವರದಿಂದ ಹಿಂದೂದೇಶದಲ್ಲಿ ನರಳುತ್ತಿರುವರು ತಲಾ ಒಂದರ ೧೧೦ gr ಕ್ವಿನೀನಿನ ಪ್ರಕಾರ ನಮ್ಮ ಭರತಖಂಡಕ್ಕೆ ವರ್ಷ ಒಂದರ ೧ ೫೦೦ ೦೦೦ ಪೌಂಡು ಕ್ವಿನೀನು ಆಗಬೇಕು ನಮಗೆ ಒದಗುವ ೩೦೦,೦೦೦ ಪೌಂಡು ಕ್ವಿನೀನಿಗೂ ಇದಕ್ಕೂ ಎಷ್ಟು ವ್ಯತ್ಯಾಸವಿದೆ ನೋಡಿ. ಅದ ಪ್ರಯುಕ್ತ, ಕ್ವಿನೀನು ತಯಾರಿಸುವ ಈ ಉದ್ಯಮವು ಶ್ರೇಯಸ್ಕರವಾಗಿ ಬಾಳುವುದರಲ್ಲಿ ಏನೂ ಸಂದೇಹವಿಲ್ಲ ರೋಗನಿವಾರಣೆಗಳ ಮೇಲೆ ಸರಕಾರದ ೬೨ ಮಿಲ್ಲಿಯ ಪೌಂಡು ಹಣವನ್ನು ವೆಚ್ಚಮಾಡುತ್ತಿರುವ (ಇದರಲ್ಲಿ ೨ ಮಿಲ್ಲಿಯ ಮಲೇರಿಯಾ ನಿವಾರಣೆಗೆ) ಬ್ರಿಟಿಷ ಸಾಮ್ರಾಜ್ಯವು ಕ್ವಿನೀನಿಗಾಗಿ ನಮ್ಮ ಭರತಖಂಡದ ಅಭ್ಯುದಯವನ್ನು ಕೋರುತ್ತಿದೆ

ಪ್ರಕೃತಿಯಿಂದ ಕ್ವಿನೀನು ದಕ್ಷಿಣ ಅಮೇರಿಕದಲ್ಲಿ ಸಿಂಕೋನಾ ಎಂಬ ಮರದ ತೊಗಟೆಯಿಂದ ಕಂಡುಹಿಡಿದಿದ್ದರು ಇಲ್ಲಿಂದ ಬೀಜಗಳನ್ನು ಡಚ್ಚರು ಜಾವಾ ದ್ವೀಪಗಳಿಗೆ ತಂದು ಹೋಗಿ ಅಲ್ಲಿ ಬೆಳೆಯುವಂತೆ ಮಾಡಿ ಈಗ ಇಡೀ ಜಗತ್ತಿಗನೇ ಬೇಕಾಗುವಷ್ಟು ಕ್ವಿನೀನ ಕೊಡುವ ಅದರ ನಂತರ ಈ ದ್ವೀಪಗಳಿಂದ ಬರುತ್ತದೆ ಹಿಂದೂದೇಶಕ್ಕೆ ಇದರ ಬೀಜಗಳನ್ನು ಬಿತ್ತಿ ಸಿಂಕೋನಾ ಮರಗಳನ್ನು ಬೆಳೆಸಿ ಹದ್ದು ತೊಗಟೆಗಳನ್ನು ಸಿದ್ಧಗೊಳಿಸಿ ಈ ಕೆಲಸವನ್ನು ಜಾಗಕ್ಕೆ ತರಲು ಸಾಧ್ಯವಾದ ದ ಪ್ರಕಾರಗಳು ತಾಗಿದವು ಈಗ ಈ ಸಿಂಕೋನಾ ಮರಗಳು ದಕ್ಷಿಣ ಹಿಂದೂದೇಶದ ನೀಲಗಿರಿಯಲ್ಲಿಯೂ ಬಂಗಾಳದ ಹತ್ತಿರ ಮುಂಗಿಪ್ಪೂ ಎಂಬಲ್ಲಿಯೂ ಧಾರಾಳವಾಗಿ ಬೆಳೆಯುತ್ತಿವೆ

Cinchona Plantation and Factories,
Dr Maitra Sen Dsc.
Modern Review October


## ವಿಕಸಿತ ರೋಜಾ ಹೂವಿನಂತೆ

ಆಕೆಯ ನಿರ್ಮಲ ಮುಖವರ್ಣವು ಬೆಳಗುತ್ತಿತ್ತು

ಪ್ರಖ್ಯಾತ ಜಗದ್ವಿಖ್ಯಾತರಾದ ಮೊಗಲ ಮಹಾರಾಣಿ ನೂರ್ ಜಹಾನಳ ಹೆಸರು ಯಾರಿಗೆ ಗೊತ್ತಿಲ್ಲ? ಆಕೆಯ ಸೌಂದರ್ಯವು ಪಾಸರಲು ಸೌಂದರ್ಯದಲ್ಲಿ ಮಾರುಗೊಳಿಸುವ ಸುವಾಸನೆಯುಳ್ಳ ಪರಿಮಳ ದ್ರವ್ಯಗಳನ್ನು ತಯಾರಿಸುವುದಕ್ಕೆ ಉದಾರ ರಾಜಪೋಷಣೆಯಿತ್ತಳು. ನೂರ್ ಜಹಾನ್ ಬೇಗಮಳ ಸೃಷ್ಟಿಯು ಹೊಸ ಶ್ರೀಮಂತರ ಭೋಗದ ಮಾರ್ಗವಾಯಿತು, ಆಕೆ ಕಾಲದ ಇಂದು ಅಫಘಾನ್ ಪರಿಮಳ ದ್ರವ್ಯಗಳಿಗೆ ಬಂದಿದೆ ಅವುಗಳ ಸೊಗಸು, ಸುವಾಸನೆ, ಇನ್ನೆಲ್ಲೂ ಇಲ್ಲ

ಮೊಗಲ ರಾಜಾಂತಃಪುರದ ಸೌಂದರ್ಯ ನೂರ್ ಜಹಾನಳು ಸುಪ್ರಸಿದ್ಧ ಸೌಂದರ್ಯ ಶಾಲೆಯಲ್ಲಿ ಮುಗಿದಿದ್ದರು ಈಗ ನಿಮ್ಮ ಸೌಂದರ್ಯದಲ್ಲಿ ನಿಮಗೆ ಅಸಂತೃಪ್ತಿಯಿದೆಯೇ? ಹಾಗಾದರೆ ಪಟದ ಅಫಘನ್ ಸ್ನೋ ಉಪಯೋಗಿಸಿ ಚರ್ಮಕ್ಕೆ ಒಳ್ಳೆಯ ಬಣ್ಣ ಬರುವದನ್ನು ಬೆಸ್ತಾಗಿಟ್ಟು ವೃದ್ಧಿಪಡಿಸುತ್ತದೆ ಕಪ್ಪುಕಲೆಯನ್ನೆಲ್ಲ ತೊಲೆದುಹಾಕುತ್ತದೆ ಸಹಜವಾದ ಯಾವ ಒಳ್ಳೆ ಮೈ ವರ್ಣವು ಇದೆಯೋ ಅದನ್ನು ಉಳಿಸುತ್ತದೆ ಎಲ್ಲಾ ಮಳಿಗೆಗಳಲ್ಲಿ ಸಿಗುತ್ತದೆ

ಪಟೆನ್ ವಾಲಾ ಇವರ

| ಕೆಮಿಸ್ಟ್ಸ್ ಮಳಿಗೆಗಳಲ್ಲಿ ಸಿಗುತ್ತದೆ. | AFGHAN Snow | ಆಸಿಯಾ ಖಂಡದಲ್ಲೆಲ್ಲಾ ಮಾರಲ್ಪಡುತ್ತದೆ. |
|---|---|---|

ಇ ಎಸ್. ಪಟೆನ್ ವಾಲಾ, ಗಲ್ಲಿ ೧೪, ಅಬ್ದುಲ್ ರಹಿಮಾನ್ ಸ್ಟ್ರೀಟ್, ಮುಂಬೈ

## ಅನುಕ್ರಮಣಿಕೆ.


ನೋಟಗಳು ೩
ಯುದ್ಧಕರಂ ೪
ಮುಸೋಲಿನಿಯ ಸಿದ್ಧತೆಗಳು ೪
ಪತ್ರಿಕಾಪ್ರಪಂಚ ೬
ಈ ವಾರದ ಯುದ್ಧವಾರ್ತೆಗಳು ೫
ಹಿಂದೂ ರಮಣಿಯರು ಮನುಷ್ಯರಲ್ಲೊಂದು ಸೊತ್ತು ೭
ಶಾಂತತೆಯು ತಲೆದೋರುವುದೋ? ೬
ಅಗ್ರಲೇಖ
ಶಾಲೆಗಳ ಸಂಖ್ಯೆ ೧೦
ಸ್ಫುಟವಿಚಾರಗಳು ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ಸಂಪಾದಕರ ಟಪ್ಪಾಲುಪೆಟ್ಟಿಗೆ ೧೨
ವಿವಿಧ ವಿಷಯಗಳು ೧೪
ಚ್ಛಸಜ ೧೮


# ಸ್ವದೇಶಾಭಿಮಾನಿ.

ತಾ. ೨೫ನೇ ಶುಕ್ರವಾರ ಅಕ್ಟೋಬರ '೩೫

## ಶಾಲೆಗಳ ಸಂಖ್ಯೆ.

"ಉತ್ತಮ ಶಾಲೆಗಳು ಕೆಲವೇ ಇರಲಿ, ಅಸಮಾಧಾನಕರ ಸ್ಥಿತಿಯ ಶಾಲೆಗಳನ್ನು ಕಿತ್ತು ಹಾಕಿರಿ" ಎನ್ನುವದೊಂದು ಗುಲ್ಲು ಗದ್ದಲವಾಗಿ ಕೇಳಿಸುತ್ತಲಿದೆ. ಯೋಗ್ಯತೆ ಹೆಚ್ಚಲಿ, ಅದಕ್ಕಾಗಿ ಕೆಲವೇ ಶಾಲೆಗಳಿಗಾಗಿ ತುಂಬ ಖರ್ಚು ಮಾಡಿದರೆ ಸಾಕು, ಅಯೋಗ್ಯ ಶಾಲೆಗಳಿಗಾಗಿ ಖರ್ಚುಮಾಡುವ ಹಣ ಉಳಿಸಿರಿ ಎನ್ನುವ ಪಂಥ ಈ ಸುಧಾರಕರದು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆಯುವ ಹಕ್ಕು ಪ್ರತಿಯೊಂದು ಮಗುವಿಗೂ ಜನ್ಮಸಿದ್ಧವಾಗಿದೆ. ಅದಕ್ಕಾಗಿ ಮೂಲ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಹರಡಿಸಬೇಕೆಂದು ನವನಾಗರಿಕರು ಚಳವಳಿಸುತ್ತಿದ್ದಾರೆ. ಇವರ ಚಳವಳಕ್ಕೆ ಈ ಸುಧಾರಕರ ಉಪಾಯವು ಎದುರು ನಿಂತಿದೆ. ನಮ್ಮ ದೇಶದಂತಹ ವಿಸ್ತಾರ ಭೂಭಾಗದಲ್ಲಿ ನೇಕಡಾ ೯೦ ಮಂದಿ ಹಳ್ಳಿಗಳಲ್ಲಿ ಚದರಿಕೊಂಡು ಜೀವಿಸುತ್ತಿರುವಾಗ, ಆಯಾ ಹಳ್ಳಿಯ ಸ್ಥಿತಿಗೆ ತಕ್ಕಂತೆ ಒಂದೊಂದು ಶಾಲೆಯಾದರೂ ಒಂದೊಂದು ಹಳ್ಳಿಯಲ್ಲಿ ಇನ್ನೂ ಇರದಿರುವಾಗ, 'ನಮ್ಮಲ್ಲಿ ಹಣವಿಲ್ಲ, ಇದ್ದುದರೊಳಗೇ ಹಂಚೋಣ, ಯೋಗ್ಯರಿಗೆ ಕೊಡೋಣ, ಅಯೋಗ್ಯರನ್ನು ಬಿಡೋಣ' ಎಂದು ಶಿಕ್ಷಣ ಖಾತೆಯು ಮಾತಾಡಿದರೆ, ಕೆಲವೇ ಮಂದಿ ಯೋಗ್ಯರೆಂಬವರನ್ನು ಜೀವಂತವಿರಿಸಿ, ಅವರಲ್ಲಿ ಒಬ್ಬೊಬ್ಬರಿಗೆ ನೂರರಂತೆ ಅಯೋಗ್ಯರೆಂಬವರನ್ನು ಮರಣೋನ್ಮುಖರಾಗುವಂತೆ ಕಾಲಕ್ಕೊಪ್ಪಿಸಬಿಡುವುದು ನ್ಯಾಯವೆ? ಶಿಕ್ಷಣ ಖಾತೆಗೆ ಜನತೆಯೆಲ್ಲ ಶಿಕ್ಷಿತರಾಗಿರುವಂತೆ ಪ್ರಯತ್ನಿಸಲೇಬೇಕೆಂಬ ಜವಾಬುದಾರಿಯು ಇಲ್ಲವೆ? ಶಿಕ್ಷಣವೆಂಬುದು ಬೆಳೆಯುವ ವಿಷಯವಾಗಿದೆಯಷ್ಟೆ. ಅಜ್ಜನ ಕಾಲದ ಖರ್ಚಿನಲ್ಲಿ ಈಗಲೂ ಮನೆತನ ನಡೆಯಬೇಕೆನ್ನುವವರು, ಆ ಕಾಲದಲ್ಲಿ ತಾವು ಇನ್ನೂ ಇದ್ದಾರೆಂದೂ ಈ ಕಾಲಕ್ಕೆ ಸಲ್ಲತಕ್ಕವರೇ ಅಲ್ಲವೆಂದೂ ಹೆಸರು ಪಡೆಯರೇ? ಏಡೆಡ್ ಶಾಲೆಗಳು ಜನಸೇವೆಗಾಗಿ ಎಂದಿನಿಂದಲೂ ಸಾಧಿಸಿರುವುವು. ಈ ಶಾಲೆಗಳಿಗೆ ಕಿಂಚಿತ್ತು ಸಹಾಯವನ್ನು ನೀಡಿರೆಂದರೆ,—'ಶಾಲೆಯ ಸಾಮಾನ್ಯ ಸ್ಥಿತಿಯು ಸರಕಾರಿಯಾಗಿ ಸಮಾಧಾನಕರವಾಗಿದೆ' ಎಂದೇ ಹೆಚ್ಚಾಗಿ ಬರೆಯಲಾಗುವ ಶರಾಗಳನ್ನು ನೋಡಿ, ಹೆಚ್ಚಿಗೆ ಕೊಡಲು 'ಕೋಡು' ಬರುವುದಿಲ್ಲ ಎನ್ನುತ್ತಾರೆ.

'ತೃಪ್ತಿಕರ' ಎಂದಾಗುವ ಶಾಲೆಗೆ ಶಿಕ್ಷಣವು ತೃಪ್ತಿಕರವಾಗಿ ಸಲ್ಲಬೇಕಾದರೆ, ಕಟ್ಟೋಣ ಸರಂಜಾಮುಗಳೂ, ಉಪಾಧ್ಯಾಯರೂ, ಮಕ್ಕಳ ಮನೆತನವೂ, ಅಂತು ವಾತಾವರಣವೇ ತೃಪ್ತಿಕರವಾಗಿರಬೇಕು. ಇಂತಹ ವಾತಾವರಣವನ್ನು ಉಂಟುಮಾಡಲು ಎಷ್ಟು ಹೆಣಗಾಟ, ಎಷ್ಟು ಖರ್ಚು, ಎಷ್ಟು ಜನಬಲಬೇಕು? ಇದಕ್ಕೆ ಬೇಕಾಗುವ ಮೊಬಲಗು ಎಲ್ಲಿಂದ ಬರಬೇಕು? ಇದ್ದುದರಲ್ಲಿ ಇರುವಷ್ಟು ಚೆನ್ನಾಗಿ, ಸೇವಾಧರ್ಮವನ್ನು ಅಂಗೀಕರಿಸಿ ದುಡಿಯುವ ಶಿಕ್ಷಕರಿಗಾಗಲಿ, ಶಾಲಾಸ್ಥಾಪಕರಿಗಾಗಲಿ, ಅಥವಾ ಶಿಕ್ಷಣವು ಯಾವ ಅನ್ನವನ್ನು ಒದಗಿಸಲಾರದಿದ್ದರೂ ಮನುಷ್ಯರಾಗಿರುವ ಪರ್ಯಂತ ಬೇಕಾಗಿದೆ ಎಂದು ಶಿಕ್ಷಣಹೊಂದಲು ಮಕ್ಕಳನ್ನು ಶಾಲೆಗಳಿಗೆ ಕಳುಹುವ ಬಡ ಗ್ರಾಮಸ್ಥರಿಗಾಗಲಿ, ಈ ಮುಗ್ಗಟ್ಟಿನ ದಿನಗಳಲ್ಲಿ, ಈ ಮೊಬಲಗನ್ನೆಲ್ಲ ಒದಗಿಸಿಕೊಳ್ಳಲು ಯಾವ ಕುಬೇರನ ಭಂಡಾರ ತಾನೆ ಉಂಟಾಗಬಲ್ಲದು? ಸರಕಾರವು ಎಲ್ಲಕ್ಕೂ ಮೊದಲು ಶಿಕ್ಷಣವೆಂದರಿತು ವರ್ತಿಸಿದರೇ ಮಾತ್ರ ಇದು ಸಾಧ್ಯವಾದೀತಲ್ಲದೆ ಅದುವರೆಗೆ ತೊಟ್ಟು ನೀರಿನ ಸಹಾಯದಿಂದ 'ಅತೃಪ್ತಿ' ಹೊರತು ಮತ್ತೇನು ಉಂಟಾದೀತು? ಹಾಗಾದುದೇ, ಆ ಶಾಲೆಯನ್ನು ಕೊಡೆದು ಹಾಕಿರೆಂದರೆ ಹೇಗಾದೀತು? ತಮ್ಮ ಕರ್ತವ್ಯದ ನಿಜ ಪರಿಚಯ, ಸಹಾನುಭೂತಿಯಿಂದ ಆಡಳಿತ, ಕೋಡುಗಳ ತಿದ್ದುಪಡಿ ಇಷ್ಟು ಸಾಧ್ಯವಾಗಿಲ್ಲದೆ, ಯಾವಾಗಲೂ 'ಅತೃಪ್ತಿ'ಯೇ ಊರ್ಜಿತವಾಗಿರುವುದಿಲ್ಲವೇ?

## ಸ್ಫುಟವಿಚಾರಗಳು.

**ಸ್ಥಳೀಯ ಬೋರ್ಡು ಸದಸ್ಯರ ಕರ್ತವ್ಯ**

ತಮ್ಮನ್ನು ಚುನಾಯಿಸಿ ಬೋರ್ಡುಗಳಿಗೆ ಕಳಿಸಿದ ಮತದಾರರ ಹಿತವನ್ನು ಸಾಧಿಸುವುದೊಂದೇ ಸದಸ್ಯರ ಕರ್ತವ್ಯ. ಪಂಚಾಯತಿಯಲ್ಲಾದರೆ ಪಂಚಾಯತದ, ಮ್ಯುನಿಸಿಪಾಲಿಟಿಯಲ್ಲಾದರೆ ಆ ಮ್ಯುನಿಸಿಪಾಲಿಟಿಯ, ಅಂತೆಯೇ ಜಿಲ್ಲಾ ಬೋರ್ಡಿನಲ್ಲಾದರೆ ಅಂತಹ ಬೋರ್ಡಿನ ಮತದಾರರ ಹಿತವನ್ನುಂಟುಮಾಡಲು ಕೈಲಾದ ಪ್ರಯತ್ನಗಳನ್ನು ಮಾಡುವುದು ಅಂತಹ ಸದಸ್ಯರ ಪ್ರಥಮ ಧರ್ಮ. ಇದನ್ನೆ ಚುನಾವಣೆ ಹೊಂದಿದ ಮರುದಿನದಿಂದ ಮರೆತು, ಇಡೀ ರಾಷ್ಟ್ರದ ರಾಜಕಾರಣದಲ್ಲಿ ಕೈಯಿಕ್ಕಿ, ಮುಂದಾಳುಗಳಾಗಿ ಮೆರೆಯಲಿಚ್ಛಿಸಿ, ತಮ್ಮನ್ನು ಯಾರು ಚುನಾಯಿಸಿದರೋ ಆ ಮತದಾರರನ್ನೆ ಮರೆಯುತ್ತಾ ಕಾಲಹರಣ ಮಾಡುತ್ತಿರುವವರಿಗೇನೆನ್ನಬೇಕು? ಕನ್ನ ಚಿಕ್ಕ ಪಂಚಾಯತ ಅಲ್ಲೇ ನಾರುತ್ತಿದೆ, ಇಡೀ ಸಾಮ್ರಾಜ್ಯದ ಮೇಲ್ಮೆಗಾಗಿ ಪಕ್ಷ ಹಿಡಿದು ಉದ್ಧಾರಕನಾಗುವರೇ? ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಾಗುವವರು ಕೌನ್ಸಿಲು ಎಸೆಂಬ್ಲಿ ಮೊದಲಾದುವುಗಳಲ್ಲೂ ಸದಸ್ಯರಾಗುವುದೂ ಅಷ್ಟು ಹಿತಕರವಾಗಿಲ್ಲ. ವಂಶ ಸಂಸ್ಥೆಗಳಲ್ಲಿ ಸೇರಬೇಕೆಂಬ ಆತುರವು ನಮ್ಮ ಮೆಂಬರುಗಳಲ್ಲಿ ಇರುವ ವರೆಗೆ, ಅವರೇಕೆ ಇಂತಹ ಸೂಚನೆಗಳನ್ನು ಅಂಗೀಕರಿಸಿ, ಮ್ಯುನಿಸಿಪಾಲಿಟಿ ಅಥವಾ ಬೋರ್ಡುಗಳಲ್ಲಿನ ತಮ್ಮ ಸ್ಥಾನಗಳನ್ನು ತ್ಯಜಿಸುವರು? ಆದರೆ, ಮತದಾರರೇ ಈ ವಿಷಯವಾಗಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವ ತನಕ ಸದಸ್ಯರು ಮತದಾರರ ಹೆಗಲ ಮೇಲೆಯೆ ಸವಾರರಾಗುವುದು ತಪ್ಪಲಾರದು.

**ಡಾ। ಅಂಬೇಡ್ಕರರ ಸಿಡಿಗುಂಡು**

ಇಡೀ ದೇಶದಲ್ಲಿ ಪ್ರತಿಧ್ವನಿತವಾಗಿದೆ. ಕೆಲವು ಮುಖಂಡರು ಅವರು ಮತಾಂತರ ಹೊಂದಲು ಇಚ್ಛಿಸಿರುವುದು ನ್ಯಾಯವೆಂದೂ ಉತ್ತಮೋಪಾಯವೆಂದೂ, ಕೆಲವರು ಅದು ಕೇವಲ ಡಂಭ ಪ್ರದರ್ಶನವೆಂದೂ, ಇನ್ನೂ ಕೆಲವರು ಹಾಗೆ ಮಾಡಿ ಕೆಡಬೇಡಿರೆಂದೂ, ಮತ್ತೂ ಕೆಲವರು ತಮ್ಮ ಮತವನ್ನು ಅಂಗೀಕರಿಸಿರೆಂದೂ ಡಾಕ್ಟರರಿಗೆ ತಂತೀವಾರ್ತೆಗಳನ್ನು ಕಳುಹಿರುತ್ತಾರೆ. ಹಿಂದು 'ಮಡಿ'ತನಕ್ಕೆ ಇದೊಂದು ನೋಟೀಸು ಎಂದು ಸನಾತನಿಗಳಿಗೂ, ಅಸ್ಪೃಶ್ಯರಿಗೆ ಇದೇ ಮೋಕ್ಷ ಮಾರ್ಗ ಎಂದು ಮತಾಂತರಕ್ಕಾಗಿ ಸಿದ್ಧರಾದವರಿಗೂ ಈ ವಾರ್ತೆಗಳು ಸೂಚಿಸಿವೆ. ಆದರೆ, ೫೦೦೦ ವರ್ಷ ಬೆಳೆದ ರೂಢಿಯನ್ನು ಐದು ವರ್ಷಗಳ ತನಕ ಎಷ್ಟು ಮುರಿಯಬಹುದೊ, ಅದರ ನೂರು ಪಾಲು ಸುಧಾರಣೆ ಈಗಾಗಲೆ ಆಗಿಯೇ ಇದೆ ಎಂಬುದನ್ನು ಡಾ। ಅಂಬೇಡ್ಕರರು ತಿಳಿದುಕೊಂಡರೆ, ಇನ್ನು ಒಂದು ತಲಾಂತರದೊಳಗೆ ಖಂಡಿತವಾಗಿಯೂ ಹಿಂದೂ ಸಮಾಜವು ಅವರೆಣಿಸಿದಷ್ಟು ಅಖಂಡವಾಗಬಹುದೆಂದೂ ಅವರೇ ಭವಿಷ್ಯ ಹೇಳಬಹುದು. ಇಡೀ ಹಿಂದೂ ಸಮಾಜವನ್ನು ಅಖಂಡವಾಗಿ, ತಮ್ಮ ಸ್ಥೈರ್ಯ ಸಹನೆಗಳ ಮೂಲಕ ಘಟಿಸಿ ತರುವ ಕೀರ್ತಿಯೂ ಅವರದೇ ಆಗುವುದು. ಅಸ್ಪೃಶ್ಯ ಮುಖಂಡರು ಸ್ವಸಮಾಜೋದ್ಧಾರಕ್ಕೆ ತಮ್ಮ ತನುಮನಧನಗಳನ್ನು ವಿನಿಯೋಗಿಸುವುದರಿಂದ ಉಂಟಾಗುವ ಸತ್ಪರಿಣಾಮವು, ಸಮಾಜವನ್ನು ಸಮಾಜಾಂತರದೊಳಗೆ ಬೆರಸಿಕೊಂಡಲ್ಲಿ ಉಂಟಾಗುವುದುಂಟೆ? ಇಷ್ಟರಲ್ಲೇ ಈ ಧೀರರು ಸಮಾಜೋದ್ಧಾರ ಪ್ರಯತ್ನಗಳಲ್ಲಿ ದಣಿದು, ಬೆಂಡಾಗಿ, ನಿರಾಶರಾದಂತೆ ತೋರಿಸಿಕೊಂಡುದು ಅವರಿಗೆ ಒಪ್ಪತಕ್ಕದ್ದಲ್ಲ.

**ಮೆಣಸಿನ ಕಾಟ.**

ಮೆಣಸಿಗೆ ಐದು ವರ್ಷಗಳಿಂದ ಕುತ್ತ ಹಿಡಿದಿದೆ. ಖಂಡಿಗೆ ೬೦೦ ರೂಪಾಯಿಯಿದ್ದ ಅದರ ಬೆಲೆ ೧೨೦ಕ್ಕೆ ಇಳಿದಿದೆ. ಮಲಬಾರು ಜಿಲ್ಲೆಯ ಪ್ರಕೃತಿಯುಳ್ಳ ನಮ್ಮ ತೆಂಕು ಕಡೆಯ ತಾಲೂಕಿನವರಿಗೆ ಮೆಣಸು ಮುಖ್ಯ ಬೆಳೆ. ಇಲ್ಲಿ ಅದು ಬಾಗಾಯತು ಉತ್ಪನ್ನವೆಂದಾಗಿ ಅದರ ಮೇಲೆ ಅಧಿಕ ಕಂದಾಯ ಇದೆ. ಈ ತೋಟಗಳ ಹತ್ತಿರದ ಕಾಡು ಪರಂಬೋಕು ಜಮೀನಿಗೂ ಈ ತೋಟದವರೇ ಕಂದಾಯ ತೆರಬೇಕಾಗಿದೆ. ಮೆಣಸಿನ ಬೆಲೆ ಏರಿನಲ್ಲಾಗಿದ್ದರೆ ಇದರ ಕಂದಾಯ ಕಡಿಮೆಯಾಗುತ್ತಿತ್ತು. ಈ ಜಿಲ್ಲೆಯ ಇತರ ತರಮ್ಗಳಲ್ಲೇ ಇದು ಸೇರಿ ಅತ್ಯಧಿಕ ಕಂದಾಯ ತೆರಬೇಕಾಗಿದೆ. ಉತ್ಪನ್ನದ ನೂರಕ್ಕೆ ೨೦ ಆದರೂ ಕಂದಾಯ ಇನ್ನಷ್ಟು ಹೆಚ್ಚಾಗಿದೆ. ತೆರಲಾರದಿರುವಲ್ಲಿ, ಆಸ್ತಿ ಜಪ್ತಿ, ಸೊತ್ತು ಜಪ್ತಿ, ಕಂದಾಯದಾರರಿಗೆ ಸೆರೆಮನೆ. ಇಂತಹದೊಂದು ಶೋಚನೀಯ ವೃತ್ತಾಂತವು ಪ್ರಕಟವಾಗಿದೆ. ಈ ದುಸ್ಥಿತಿಯಲ್ಲಿ ಕಂದಾಯದಾರನಿಗೆ ಜೈಲು ಗತಿಯಾಗಿ, ಜೈಲಿಗೆ ತಂದ ಎರಡೇ ದಿನಗಳಲ್ಲಿ ಅವನ ತಲೆಗೆಟ್ಟಿತು, ಅವನು ಬಿದ್ದು ಪಕ್ಷವಾತವಾಯಿತು. ಡಿವಿಜನಲ್ ಆಫೀಸರರು ಜೈಲನ್ನು ರದ್ದುಮಾಡಲಾರದಾದರು, ದಯಾಳುಗಳಾದ ಜಿಲ್ಲಾ ಕಲೆಕ್ಟರರೇ ಸ್ವತಃ ಜೈಲಿಗೆ ಚಿತ್ತೈಸಿ ಕಂದಾಯದಾರನನ್ನು ನೋಡಿ ಖುಲಾಸುಪಡಿಸಿದರು. ಮಹಾಶಯನು ಈಗ ಗುಣಹೊಂದುತ್ತಿರುವನು, ಎಂದಿಗೆ ಪೂರ್ಣ ಗುಣಹೊಂದುವನೋ ತಿಳಿದಿಲ್ಲ' ಈ ವೃತ್ತಾಂತವನ್ನು ಜಿಲ್ಲಾ ಭೂಮಾಲಿಕರ ಸಂಘದ ಕಾರ್ಯದರ್ಶಿಗಳು ಪ್ರಕಟಿಸಿರುವರು. ಹೊಸದುರ್ಗ ಮಾಗಣೆಯು ಕೀರ ಇಂತಹ ಕಂದಾಯ ಬಾಕಿಯಿರುವವರಿಂದಲೇ ತುಂಬಿದೆ. ತೆರಬಲ್ಲರೆ? ಬೆಳೆ ಕಡಿಮೆ, ಬೆಲೆಯಿಲ್ಲ. ಕಂದಾಯಕ್ಕೂ ಉತ್ಪತ್ತಿಗೂ ದಾಮಾಷಾಯವಿಲ್ಲ. ಸರಕಾರವು ಇದನ್ನಿಷ್ಟು ವಿಮರ್ಶಿಸಿದರೆ ಪ್ರಜಾಕ್ಷೇಮವಾಗುವುದು.

**ರಾಷ್ಟ್ರಸಭೆಯ ಕಾರ್ಯಕಾರೀ ಸಮಿತಿ**

ಮದ್ರಾಸಿನಲ್ಲಿ ಸೇರಿತು. ಎಲ್ಲ ಇತರ ರಾಜಕೀಯ ಪಂಗಡಗಳು ಈ ಅಧಿವೇಶನದಿಂದ ಪಡೆಯಬೇಕೆಂದಿದ್ದ ಫಲಿತಾಂಶವನ್ನೇನೂ ಪಡೆಯಲಾರದಾದುವು. "ಅಧಿಕಾರವನ್ನು ಅಂಗೀಕರಿಸಬೇಕೇ ಬೇಡವೇ?" ಎಂಬೀ ಪ್ರಶ್ನೆಗೆ "ಇನ್ನು ಎಷ್ಟೋ ಸಮಯವಿದೆ; ಮುಂದಣ ರಾಷ್ಟ್ರಸಭಾಧಿವೇಶನದಲ್ಲಿ ನೋಡೋಣ" ಎಂದು ತೀರ್ಮಾನವಾಯಿತು. ಮದ್ರಾಸಿನಲ್ಲಿ ನಡೆದ ಎಸೆಂಬ್ಲಿ ಚುನಾವಣೆಯಲ್ಲಿ ಕೊಂಗ್ರೆಸ್ ಪಕ್ಷವು ಎಲ್ಲೆಲ್ಲಿಯೂ ಗೆದ್ದುದನ್ನು ನೋಡಿ, ಜಸ್ಟಿಸ್ ಪಕ್ಷವು ಈಗಲೆ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ಹೇಗೂ ಮುಂದಣ ಚುನಾವಣೆಯಲ್ಲಿ ಕೊಂಗ್ರೆಸ್ಸಿಗೆ ಅಷ್ಟು ಮಹತ್ವ ಬರಬಾರದೆಂದು ಸಾಧನೆ ಮಾಡಬೇಕೆಂದಿದೆ. ಚುನಾವಣೆಗಳು ಮದ್ರಾಸಿನಲ್ಲೇ ಮೊದಲು ಪ್ರಾರಂಭವಾಗಬಹುದೆಂದೂ ಅಂಜಿಕೆಯಿದೆ. ಎಂದಿನಂತೆ ಕೊಂಗ್ರೆಸ್ ಪಕ್ಷಕ್ಕೆ ಜಯವಾದರೆ, ಅಧಿಕಾರವು ಕೊಂಗ್ರೆಸ್ ಸದಸ್ಯರಾದ ಮಂತ್ರಿಗಳ ಪಾಲಿಗೆ ಹೋಗುವುದೇ ಅಥವಾ ಅವರು ಅದನ್ನು ನಿರಾಕರಿಸಿದಲ್ಲಿ ತಮಗೇ ಇವೇ ಹದಿನೈದು ವರ್ಷಗಳಲ್ಲಿರುವಂತೆ ಉಳಿದೀತೇ ಎಂಬೊಂದು ಪ್ರಶ್ನೆಗೆ ಈ ಅಧಿವೇಶನದಲ್ಲಿ ಉತ್ತರ ದೊರೆಯಲಿಲ್ಲ. ಜಸ್ಟಿಸ್ ಪಕ್ಷವನ್ನು ಸುತ್ತುಬಳಸಿರುವ ಅಂಧಕಾರವು ಹಾಗೆಯೆ ಉಳಿಯಿತಾದರೂ, ಇದರ ತೀರ್ಮಾನವನ್ನು ಕಾದಿದ್ದ ಕೊಂಗ್ರೆಸ್ ಪಕ್ಷೀಯರ ಮನಸ್ಸಿನ ಮಬ್ಬೂ ಸರಿಯಲಿಲ್ಲ.

**ರಾಷ್ಟ್ರಸಭಾಧ್ಯಕ್ಷ**

ಶ್ರೀ। ಬಾಬು ರಾಜೇಂದ್ರ ಪ್ರಸಾದರು ಮದ್ರಾಸಿಗೆ ಬರುತ್ತಲೆ, ಕೊರ್ಪರೇಶನಿನ ಅಧ್ಯಕ್ಷರು ಅವರಿಗೊಂದು ಮಾನಪತ್ರವನ್ನೊಪ್ಪಿಸಬೇಕಾಗಿ ಕೊರ್ಪರೇಶನಿನ ಸಭೆಯಲ್ಲಿ ಬಂದ ಸೂಚನೆಯು ಜಸ್ಟಿಸ್ ಪಕ್ಷದ ಮೆಂಬರರ ಬಹುಮತದಿಂದ ತಳ್ಳಿಹಾಕಲಾಗಿತ್ತು. "ಅವರು ರಾಜಕೀಯ ಚಳವಳಕ್ಕಾಗಿ ಬರುತ್ತಾರೆ" ಎಂದು ಆಕ್ಷೇಪ. ಇದಕ್ಕೆ ಮುಂಚಾಯಿಯ ಮೇಯರ ಶ್ರೀ। ನರಿಮನ್‌ರವರು ಬರುತ್ತಾರೆಂದು ತಿಳಿದ ಕೂಡಲೆ ಅವರಿಗೊಂದು ಮಾನಪತ್ರವನ್ನು ಒಪ್ಪಿಸಲು ಸೂಚನೆ ಬಂದೂ ಮಂಜೂರಾಯಿತು. ಇವರೂ ಕೇವಲ ರಾಜಕೀಯ ಸ್ಥಿತಿಯನ್ನು ಪರ್ಯಾಲೋಚನೆ ಮಾಡುವ ಸಭೆಗಾಗಿಯೆ ಬಂದವರು. ಆದರೆ ಅದನ್ನು ಜಸ್ಟಿಸ್ ಪಕ್ಷದವರು ಏಕೆ ಎದುರಿಸಲಿಲ್ಲವೊ ತಿಳಿಯದು. ಇರಲಿ. ಅವರಿಗೆ ಈ ವಿಷಯವನ್ನು ಒರೆದಾಗ,—ನಮ್ಮ ಅಧ್ಯಕ್ಷರಿಗೆ ಮಾನಪತ್ರ ಕೊಡಲು ಆಕ್ಷೇಪಿಸಿದವರು ಅದನ್ನು ನನಗೆ ಕೊಡುವುದರಲ್ಲಿ ನನ್ನ ಆಕ್ಷೇಪವಿದೆ ಎಂದು ಅವರು ಸ್ವೀಕರಿಸಲೇ ಇಲ್ಲ. ಬಾಣ ಸರಿ!

**ಹೊಸ ಪಾರ್ಲಿಮೆಂಟು.**

ಇದೇ ವಾರದಲ್ಲಿ ಸೇರುವ ಪಾರ್ಲಿಮೆಂಟಿನಲ್ಲಿ, ಹೊಸ ಪಾರ್ಲಿಮೆಂಟು ಚುನಾವಣೆಗಾಗಿ ವಿಶೇಷ ಪ್ರಯತ್ನಗಳಾಗುವಂತೆ ತೋರುತ್ತಿದೆ. ಇಂಡಿಯಾ ಆಕ್ಟು ಮಂಜೂರಾಗುವ ತನಕ ಪಾರ್ಲಿಮೆಂಟನ್ನು ಮುಕ್ತಾಯಗೊಳಿಸಿ ಹೊಸ ಪಾರ್ಲಿಮೆಂಟಿನ ಚುನಾವಣೆಗಳಾಗುವುದನ್ನು ತಡೆಯಲಾಗಿದ್ದಿತು. ಇಷ್ಟರಲ್ಲೆ ಎಂತೂ ಅಬಿಸೀನಿಯ ಇಟಲಿಗಳೊಳಗಣ ಯುದ್ಧವನ್ನು ಕುರಿತಾಗಿ ಬ್ರಿಟಿಷ ಮುತ್ಸದ್ದಿಗಳು ಜನಾಂಗಸಂಘದಲ್ಲಿ ನಡೆಸಿದ ರಾಜತಂತ್ರ ಮೊದಲಾದುವಕ್ಕೆ ಅವರನ್ನೀಗಲೆ ಜಗತ್ತೆಲ್ಲವೂ ಕೊಂಡಾಡುತ್ತಿರುವಾಗಲೇ, ಚುನಾವಣೆಗೆ ಪ್ರಾರಂಭಿಸಿದರೆ, ತಮ್ಮ ಕೀರ್ತಿಧ್ವಜವು ಇನ್ನೂ ಮೆರೆಯುವಂತೆ ಚುನಾವಣೆಯಾದೀತಾಗಿ ಕನ್ಸರ್ವೇಟಿವರು ಖಂಡಿತ ತಿಳಿದಿರುವರು. ಲೇಬರ್ ಪಕ್ಷದ ಬೆಂಬಲವು ಕಡಿಮೆ, ಚುನಾವಣೆಯಾದಲ್ಲಿ ಹೇಗಾದರೂ ೧೫೦ ಮೆಂಬರರ ಅಧಿಕ ಸಂಖ್ಯೆಯು ತಮ್ಮ ಪಕ್ಷಕ್ಕೆ ಸಲ್ಲುವುದಾಗಿಯೂ ತಾವೇ ಅಧಿಕಾರಾರೂಢರಾಗಬಹುದಾಗಿಯೂ ಅವರ ನಂಬಿಕೆ. ಸೆಂಕ್ಷನುಗಳನ್ನು ಜಾರಿಗೆ ತರುವ ಮತ್ತು ಥಳ್ಳನೆ ಕಿಡಿ ಹಾರಿ ಯುರೋಪಿನಲ್ಲೆಲ್ಲ ಮಹಾಯುದ್ಧವು ಉಂಟಾಗುವ ಪ್ರಸಂಗವು, ಫ್ರಾನ್ಸಿನ ಅತಿರೇಕ ಇಟಲಿ ಪಾಕ್ಷಿಕ್ಯದ ದೆಸೆಯಿಂದ ದೂರಗೊಳ್ಳುವ ಹಾಗಿಲ್ಲ. ಹಾಗಾದಲ್ಲಿ ಇದೇ ಪಾರ್ಲಿಮೆಂಟು ಬ್ರಿಟಿಷ ಧೋರಣೆಯನ್ನು ಕಾರ್ಯರೂಪಕ್ಕೆ ತರಬೇಕಾಗುವುದರಿಂದಲೂ, ಈಗಲೆ ಚುನಾವಣೆಯು ಅಗತ್ಯವೆನಿಸಿದೆ. ನವಂಬರಿನಲ್ಲೇ ಬೇರೆ ಪಾರ್ಲಿಮೆಂಟು ಸೇರುವುದು.

# ಮಂಗಳೂರು.

ಬೋಳಾರದಲ್ಲಿದ್ದ ಡೆಪ್ಯು ಮುನಿಸಿಫಲ್ ಆಸ್ಪತ್ರೆಯ ಡಾಕ್ಟರ್, ಬಿ. ಕೆ. ಪಿ ಶರ್ಮಾ ಇವರ ನಿವಾಸ ಗೃಹವಾದ "ಆಯುರ್ವೇದ ಭವನವು" ಡೆಪ್ಯು ಮುಹರ್ರಮೀ ಕಟ್ಟೆಯ ಬಳಿ, ರೈಲ್ವೇ ಮೇಲಿನ ೧ನೇ ಸಂಕದ ದಕ್ಷಿಣದಲ್ಲಿರುವ ಗೃಹಕ್ಕೆ ಒಯ್ಯಲ್ಪಟ್ಟಿರುವುದು.

೧೮-೧೦-೩೫ನೇ ಶುಕ್ರವಾರ ಹರಿಜನ ಆಯುರ್ವೇದಿಕ್ ಧರ್ಮಾಸ್ಪತ್ರೆಗೆ ಎಂಬ್ರೊಯಿಡಾ ಕೆಮಿಕಲ್ ಕಂಪೆನಿಯವರು ಸೆಂಪಲ್ ಆಗಿ ಕೊಟ್ಟ ನೆಕ್ಟರ್ ಡ್ರಾಪ್ಸ್ ಪೆಕೆಟಿನಲ್ಲಿ ರೂ ೫೦ ಲಕ್ಷ ಕುಪ್ಪನ್ ದೊರೆತಿರುತ್ತದೆ ಅದನ್ನು ಸದ್ರಿ ಡಾಕ್ಟರವರು ಅದರ ಫಂಡಿಗೆಯೇ ಕೊಟ್ಟಿರುತ್ತಾರೆ

ಮೊನ್ನೆ ಮಂಗಳವಾರ ಸ್ಥಳೀಕ ಕೆನರಾ ಹೈಸ್ಕೂಲಿನ ಮತ್ತು ಸೈಂಟ್ ಎಲೋಸಿಯಸ್ ಕೊಲೇಜುಗಳ ಜೂನಿಯರ್ ಕ್ರಿಕೇಟು ಟೀಮುಗಳಲ್ಲಿ ಪಂದ್ಯಾಟ ನಡೆದು ಎರಡನೆಯವರು ಜಯಶೀಲರಾಗಿರುವರು ಕೊನೆಯದಾಗಿ, ಗಣಪತಿ ಹೈಸ್ಕೂಲಿನವರಿಗೂ ಸೈಂಟ್ ಎಲೋಸಿಯಸ್ ಕೊಲೇಜಿನವರಿಗೂ ಬೇಗನೇ ಪಂದ್ಯಾಟ ನಡೆಯುವುದು

ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀಗಳಾದ ಎ ಬಿ. ಶೆಟ್ಟಿ ಮತ್ತು ಇವರ ಸಹಾಯಕರಾದ ಶ್ರೀಗಳಾದ ಶ್ರೀನಿವಾಸ ಬಾಳಿಗರು ಕಳೆದುಹೋದ ಈಗಿನ ಬಿ ಬೊ ನ ಜೀವಮಾನದಲ್ಲಿ ಮಾಡಿದ ಕಾರ್ಯಕ್ಕಾಗಿ ಶಿಫಾರಸು ಸೂಚನೆಗಳು ಮೊನ್ನೆ ಜರಗಿದ ಬೋರ್ಡಿನ ಸಭೆಯ ಮುಂದೆ ಬಂದು ಮಂಜೂರಾದವು. ಅದೆ ದಿವಸ ರಾತ್ರಿ ಶ್ರೀ ಎ. ಬಿ ಶೆಟ್ರು ತಮ್ಮ ಬೋರ್ಡಿನ ಎಲ್ಲ ಸದಸ್ಯರಿಗೆ ಒಂದು ಮಹಾ ಔತಣವನ್ನು ಕೊಟ್ಟರು

ಕೆನರಾ ಹೈಸ್ಕೂಲಿನ ಸಂಪೂರ್ಣ ಕ್ಲಬ್ಬಿನವರು ಮೈಸೂರಿನಿಂದ ಬಂದ ಶ್ರೀಗಳಾದ ಬೇಂದ್ರೆಯವರಿಗೆ ಒಂದು ವಿಹಾರ ಕೂಟವನ್ನು ಮಾಡಿದರು ಕವಿಗಳು ಕ್ಲಬ್ಬಿನವರಿಗೆ ತಮ್ಮ ಕೆಲವು ಹೊಸ ಕಾವ್ಯಗಳನ್ನು ಓದಿ ಹೇಳಿದರು

ಮೊನ್ನೆ ಜರಗಿದ ಡಿ ಬೊ ಸಭೆಯಲ್ಲಿ ಅಡಂ ಆಡಿಟ ವರದಿಯು ಮಂಜೂರಾಯಿತು

ಕಳೆದ ಶುಕ್ರವಾರದಿಂದ ಕೆಲವು ದಿವಸಗಳ ವರೆಗೆ ಆರಿದ ವಿಷಯ ಸುರಿಯಿತು. ಗಾಳಿ ಮಳೆಯಿಂದ ಕರಾವಳಿಯ ಮಂಜಿಸ್ಟೀವ ಯಾನ ಸಂಚಾರಕ್ಕೆ ತೊಂದರೆಗಳುಂಟಾಗಿವೆ

ದಕ್ಷಿಣ ಕನ್ನಡಿಗರಾದ ಶ್ರೀ ಗೋವಿಂದ ಪಿ ರಾಮದಾಸ ಭಟ್ಟ ಎ ಕೆ ವಾಸುದೇವಾಚಾರ್ಯ (ದ್ವೈತ ವೇದಾಂತ ಮಧ್ಯಮ ಪರೀಕ್ಷೆಯಲ್ಲಿಯೂ) ಪಡುಬಿದ್ರೆ ಸುಬ್ರಹ್ಮಣ್ಯ ರಾಮಚಾರ್ಯರ (ವ್ಯಾಕರಣ ಮಧ್ಯಮ ಪರೀಕ್ಷೆಯಲ್ಲಿ) ಪಿ ಲಕ್ಷ್ಮೀನಾರಾಯಣ ಅಡಿಗರ (ಜೋತಿಷ್ಯ ಮಧ್ಯಮ ಪರೀಕ್ಷೆಯಲ್ಲಿ) ... ಗೋಪಾಲಕೃಷ್ಣ ಭಟ್ಟರು (ಪ್ರಾಚೀನ ನ್ಯಾಯ ಉತ್ತಮ ಪರೀಕ್ಷೆಯಲ್ಲಿ) ಪಡುಬಿದ್ರೆ ವಿಠ್ಠಲದಾಸಾಚಾರ್ಯರು (ದ್ವೈತ ವೇದಾಂತ ಉತ್ತಮ ಪರೀಕ್ಷೆಯಲ್ಲಿ) ಲಕ್ಷ್ಮೀನಾರಾಯಣ ಉಪಾಧ್ಯಾಯರು (ಜೋತಿಷ್ಯ ಉತ್ತಮ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ) ಮೈಸೂರು ಶ್ರೀಮನ್ಮಹಾರಾಜರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಉತ್ತೀರ್ಣರಾದುದಲ್ಲದೆ, ಮಹಾರಾಜರಿಂದ ತಮ್ಮ ಬುದ್ಧಿ ಕೌಶಲ್ಯಕ್ಕಾಗಿ ಯೋಗ್ಯ ಬಹುಮಾನಗಳನ್ನು ಪಡೆದಿರುವರು. ಹೀಗೆಯೇ ದಕ್ಷಿಣ ಕನ್ನಡಿಗರು ಮುಂದಕ್ಕೂ ಹೊರಗಿನ ದೇಶಗಳಿಗೆ ಹೋಗಿ, ಕೀರ್ತಿಗಳಿಸಲೆಂದು ನಮ್ಮ ಇಚ್ಛೆ

ಇಂಟರ್ ಸ್ಕೂಲ್ ಕ್ರಿಕೇಟು ಪಂದ್ಯಾಟಗಳು -- ಈ ರೀತಿಯಲ್ಲಿ ನಡೆದಾವು ಗಣಪತಿ ಹೈಸ್ಕೂಲು ಕೆನರಾ ಹೈಸ್ಕೂಲು (ಎರಡನೆಯವರು ಗೆದ್ದರು) ಪುತ್ತೂರು ಬೋರ್ಡು ಹೈಸ್ಕೂಲು ಗಣಪತಿ ಹೈಸ್ಕೂಲು (ಪುತ್ತೂರಿನವರು ಸೋತುಹೋದರು) ಕೊನೆಯ ಪಂದ್ಯವು ಗಣಪತಿ ಹೈಸ್ಕೂಲಿನವರು--ಸೈಂಟ್ ಎಲೋಸಿಯಸ್ ಕೊಲೇಜಿನವರಿಗೂ ನಡೆದು ಕೊಲೇಜಿನವರು ಗೆದ್ದರು

ಅಲ್ಬುಕರ್ಕ ಕಪ್ಪು--ಪಂದ್ಯಾಟವು ಕಾಲೇಜುಗಳಲ್ಲಿ ಗವರ್ನಮೆಂಟ್ ಕೊಲೇಜಿನವರೂ, ಸೈಂಟ್ ಎಲೋಸಿಯಸ್ ಕೊಲೇಜು--ಎಂ ಸಿ ಸಿ. ಯಲ್ಲಿ--ಎಂ. ಸಿ ಸಿ ಯವರೂ, ಎಚ್. ಸಿ ಸಿ.--ಎಂ ಸಿ ಸಿ ಯಲ್ಲಿ ಎಚ್. ಸಿ. ಸಿ. ಯವರೂ, ವೈ. ಎಂ. ಸಿ. ಎ --ಸೈಂಟ್ ಎಲೋಸಿಯಸ್ ಕಾಲೇಜು--ವೈ. ಎಂ ಸಿ ಎ. ಯವರೂ ಜಯಶೀಲರಾಗಿರುವರು ಸದ್ಯದಲ್ಲೇ ಎಚ್. ಸಿ ಸಿ ಯವರಿಗೂ ಸೈಂಟ್ ಎಲೋಸಿಯಸ್ ಕಾಲೇಜಿಗೂ, ಎಂ. ಸಿ ಸಿ ಮತ್ತು ವೈ ಎಂ ಸಿ ಎ. ಯವರೊಳಗೂ, ಗವರ್ನಮೆಂಟ್ ಕಾಲೇಜಿನವರಿಗೂ ಎಚ್ ಸಿ. ಸಿ. ಯವರಿಗೂ ಪಂದ್ಯಾಟ ನಡೆಯುವುದು.

---

# ತಾಲೂಕುಗಳಿಂದ.

**ಮೂಲ್ಕಿ**--ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆಯಲ್ಲಿ, ನವರಾತ್ರಿ ಸಂಬಂಧ ತಾರೀಖು ೪--೧೦ ೩೫ರಲ್ಲಿ ಶ್ರೀ ಸರಸ್ವತೀ ಸ್ಥಾಪನೆಯಾಗಿ ಕ್ರಮವಾಗಿ ಮೂರು ದಿವಸಗಳಲ್ಲಿ ಭಜನೆ ಪೂಜಾದಿಗಳು ನಡೆದು, ತಾ ೬--೧೦--೩೫ರಲ್ಲು ರಾತ್ರಿ ಗಂಟೆ ೮ಕ್ಕೆ ಶ್ರೀ ಶಾರದಾ ಪೂಜೆಯು ಯಶಸ್ವಿಯಾಗಿ ನೆರವೇರಿತು ಶಾಲಾಮಂದಿರವು ತೋರಣಗಳಿಂದಲೂ ಮಂಟಪವು ವಿವಿಧ ಹೂವಾಲೆಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದುವು

ಹಿಂದೆ ಪ್ರಚುರಪಡಿಸಿದಂತೆ ಮಂಗಳೂರು ಗವರ್ನಮೆಂಟ್ ಕೊಲೇಜಿನ ಪ್ರೊಫೆಸರ್ ಶ್ರೀ ಕೆ ವೆಂಕಟ್ರಾವ್ ಎಂ ಎ ಎಲ್ ಟಿ ರವರು ಇದೇ ಕಳೆದ ತಾರೀಖು ೧೨--೧೦--೩೫ನೇ ಶನಿವಾರ ಅಪರಾಹ್ನ ಗಂಟೆ ೪ ೩೦ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ "ಭಕ್ತಿ" ಎಂಬ ವಿಷಯವನ್ನೆತ್ತಿಕೊಂಡು, ಸುಸ್ರಾವ್ಯವಾದ ಹಾಡುಗಳು ಸಾಧುಸತ್ಪುರುಷರ ಸಂದೇಶಗಳು ಕಥೆಕವನಗಳು ಇತ್ಯಾದಿ ಉದಾತ್ತವಿಚಾರಗಳನ್ನೊಳಗೊಂಡ ವ್ಯಾಖ್ಯಾನವನ್ನು ಸುಮಾರು ೨ ೧/೨ ತಾಸುಗಳ ವರೆಗೆ ಅಡೆತಡೆಯಿಲ್ಲದೆ ಮಾಡಿದರು ಪ್ರೇಕ್ಷಕರಮುದಾಯವು ಸಾಕಷ್ಟು ಇತ್ತು ಭಾಷಣವು ತುಂಬಾ ಶ್ಲಾಘನೀಯ ವಾಗಿತ್ತು ಕೂಡಿದ್ದ ಸರ್ವರೂ ಆನಂದತುಂದಿಲರಾದರು. ಕ್ಲಬ್ಬಿನ ಕಾರ್ಯದರ್ಶಿಯವರು ಭಾಷಣಕರ್ತರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟುದಲ್ಲದೆ ಅವರಿಗೆ ಸಂಸ್ಥೆಯ ಕಡೆಯಿಂದ ಹೃತ್ಪೂರ್ವಕ ಧನ್ಯವಾದವನ್ನಿತ್ತರು ಕ್ಲಬ್ಬಿನಲ್ಲಿ ಜರಗಿತು ಬರುವ ಸಭೆಯನ್ನು ತಾರೀಖು ೨೩--೧೧--೩೫ಕ್ಕೆ ಫರಂಗಿಪೇಟೆಯಲ್ಲಿಯೇ ಜರಗಿಸಬೇಕಾಗಿ ನಿರ್ಣಯಿಸಿ ಅಧ್ಯಕ್ಷರ ಭಾಷಣದೊಂದಿಗೆ ಸಭೆಯು ಮುಗಿಯಿತು

**ಪಾಲಡ್ಕ**--ಒಕ್ಕಲಿಗರ ಸಹಕಾರ ಸಮಿತಿಯ ಮಾಸಿಕ ಸಭೆಯು ಸ್ಥಳೀಕ ಚರ್ಚಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಉರವರ ಸಹಕಾರದೊಡನೆ ನಡೆಯಿತು ವ್ಯವಸ್ಥಾಪಕರಾದ ಶ್ರೀ ಬಿ ಟಿ. ಲೈಗರು ಸಮಿತಿಯ ಕಾರ್ಯಕಲಾಪಗಳನ್ನು ವಿವರಿಸಿದರು ಶ್ರೀ ಬಿ ಸೀತಾರಾಮರಾಯರ ಭಾಷಣವಾಗಿ ಅಧ್ಯಕ್ಷರ ಉಪನ್ಯಾಸವು ಜರಗಿತು. ಹಲವರು ಸಂಘದ ನಿಯಮಗಳಿಗೊಪ್ಪಿ ಮೆಂಬರರಾದರು

**ಮುನಿಯಾಲು**--ಈ ಪ್ರಾಂತ್ಯದಲ್ಲಿ ಹಿಂದೀ ಕ್ಲಾಸುಗಳನ್ನು ಶ್ರೀ ಡಿ ಆರ್ ಕರಿಕಟ್ಟೆಯವರು ತೆರೆದಿರುವರು ಅನೇಕರು ಸೇರಿದ್ದಾರೆ ಕಡ್ತಲ ಮುಂತಾದಿಯಲ್ಲಿಯೂ ಹಿಂದೀ ಕ್ಲಾಸುಗಳು ಜರಗಿಸಲ್ಪಡುವುವು

**ಮೂಡಬಿದ್ರೆ**-- ಈ ಸೆಂಟರಿನ ಉಪಾಧ್ಯಾಯರ ಸಂಘದ ನಾಲ್ಕನೇ ಸಭೆಯು ಇದೇ ತಾ ೧೯ --೩೫ರಲ್ಲಿ ಬಾಸೆಲ ಅರಮನೆಯಲ್ಲಿ ಕಾಕೋಡೆ ಹಾ। ಎ। ಶಾಲಾ ಮುಖ್ಯೋಪಾಧ್ಯಾಯರಾದ ಮ॥ ರಾ॥ ರಾ॥ ಪಿ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ೧೯ ಶಾಲೆಗಳ ೫೦ ಮಂದಿ ಅಧ್ಯಾಪಕರು ಹಾಜರಿದ್ದರು ದಿಗಂಬರ ಜೈನ ಹಾ। ಎ। ಶಾಲಾ ಮಾಸ್ತರರಾದ ಮ॥ ರಾ॥ ರಾ॥ ಎಂ ಶ್ರೀಪಾಲ ಜೈನರವರು ಜನೇ ಕ್ಲಾಸಿನ ಮಕ್ಕಳಿಗೆ ಇಂಗ್ಲಿಷ್ ಸಂಭಾಷಣೆಯಲ್ಲಿ ಒಂದು ನೋಟಸಾಗಿ ಮಾಡಿದರು ಧ್ಯಾಪಕರಾಗಿರುವ ಶ್ರೀ ಎಚ್. ದೇವರಾವ್, ಬಿ ಎ, ಎಲ್ ಟಿ. ಯವರು ಜಿಲ್ಲೆಯೊಳಗಣ ಸೆಕೆಂಡರಿ ಶಾಲಾ ಸಹಾಯಾಧ್ಯಾಪಕರ ಪರವಾಗಿ ನಿಲ್ಲುವ ಸಕ್ಕೆಯವರಾದಿರುತ್ತಾರೆ. ಇವರು ಉತ್ಸಾಹೀ ತರುಣರೂ ಸಮರ್ಥ ಅಧ್ಯಾಪಕರೂ ಆಗಿದ್ದು, ಸಮಗ್ರ ಸೆಕೆಂಡರಿ ಶಾಲೆಗಳ ಅಧ್ಯಾಪಕರ ಯೋಗ್ಯ ಹಾಗೂ ನ್ಯಾಯಾರ್ಥವಾದ ಸಂಕಷ್ಟಗಳನ್ನು, ಅಹವಾಲೆಗಳನ್ನೂ ಸದರಿ ಕೌನ್ಸಿಲಿನಲ್ಲಿ ಮುಂದೊತ್ತಿ ಅಧ್ಯಾಪಕವರ್ಗದಲ್ಲಿ ಸ್ವಾರ್ಥತ್ಯಾಗಗಳನ್ನುಂಟುಮಾಡುವ ಧೋರಣೆಯುಳ್ಳವರಾಗಿದ್ದಾರೆ. ಮೇಲಾಗಿ ವಿದ್ಯಾರ್ಥಿಗಳಲ್ಲಿ ಅಭ್ಯಾಸಕ್ರಮವನ್ನು ಅಭಿವರ್ಧಿಸುವ ಹವಣಿಕೆಯವರೂ ಇದ್ದಾರೆ.

ತಾರೀಖು ೧೩ಕ್ಕೆ ಸ್ಥಳೀಯ ಡಿ ಮು ಕೋರ್ಟಿನ ಸಿಬ್ಬಂದಿಯ ಪರವಾಗಿ ನಿವೃತ್ತರಾಗಲಿದ್ದ ಶ್ರೀ ಕೆ ದುಗ್ಗಪ್ಪಯ್ಯನವರಿಗೆ ವಿದಾಯವೀಯಲು ಸತ್ಕಾರಕೂಟವು ಜರಗಿತ್ತು. ಸಭೆಗೈದವರು, ತಮ್ಮ ೩೫ ವರ್ಷಗಳ ಸರ್ವೀಸಿನಲ್ಲಿ ೨--೩ ವರ್ಷಗಳ ಮಟ್ಟಿಗೆ ಮಾತ್ರ ಪದವೃದ್ಧಿಯಿದ್ದು ಹೆಚ್ಚಿನ ಅವಧಿಯನ್ನು ಆಮಿನರಾಗಿಯೇ ಕಳೆದವರಾಗಿ ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಿ ಜನಪ್ರಿಯರೂ ಆಗಿದ್ದರು

ಈಚೆಗೆ ಒಂದು ವಾರ ಧಾರಾ ಮಳೆಗಾಳಿಗಳ ನಿಮಿತ್ತ ನೈಕ ಗೆ ಬಹಳ ಅಡಚಣೆಯಾಗಿದೆ ಮೇಲಾಗಿ ತಾರೀಖು ೨೧--೨೨ರಲ್ಲಿ ಏರಿಕ ಮಳೆಯಿಂದ ನೆರೆ ಕೂಡ ಕಂಡಿತ್ತು ಕಡಿವಾಣ ಪೈರು ಸಿದ್ಧವಾದ ಪೈರು ಕಾಕವಾಗುವವು ಮುಂದೆ ಮತ್ತೆ ಒಂದರಲ್ಲಿ ನೂರಾರ ಮನೆಗಳ ಸಹಾಯದ ರಕ್ಷಿಸಿಕೊಳ್ಳಲು ೩ ೪ ದಿನಗಳಿಂದ ಒಪ್ಪದ ದಡದ ಎಂಬದಿಯಲ್ಲಿ ಆಶ್ರಯ ಹೊಂದಿದೆ



ಒಕ್ಟೋಬರು ತಾರೀಕು ೧೬ರಲ್ಲು ಸನ್ಯಾಸ್ತ ಮದ್ರಾಸು ಗವರ್ನರರಿಂದ ಕೌಮುಡ್ಕಿ ಉಪ್ಪಿನಂಗಡಿ ಕುಮಾರಧಾರ ಸೇತುವೆ

ಅಧ್ಯಕ್ಷರಾದ ರಾ ಬ ಜೋಗಪ್ಪ ಶಾಮುರಾವ್‌ರವರು ಶ್ರೀಮಾನ್ ವೆಂಕಟ್ರಯರಿಗೆ ಹೂಮಾಲೆ ಹಾಕಿ ಗೌರವಿಸಿದರು ಭಾಷಣವು ಹರಿಕಥಾರೂಪದಲ್ಲಿದ್ದು ಇಂಪಾದ ಮತ್ತು ಬೋಧಪ್ರದವಾದ ಹಾಡುಗಳಿಂದ ಸಭಿಕರಿಗೆ ನವಚೇತನವನ್ನುಂಟುಮಾಡುವ ರೀತಿಯಲ್ಲಿತ್ತು. ನಮ್ಮ ಊರಿನವರಾದ ಶ್ರೀ ಬಸ್ರುರು ಮುಕುಂದರಾಯ ಎಂ ಬಿ ಬಿ ಎಸ್ ರವರಿಗೆ ಡೆಲ್ಲಿಯಲ್ಲಿ ಕೆಲಸವಾಗಿದೆ ಎಂದು ಕೇಳಿ ಸಂತೋಷಪಡುತ್ತೇವೆ

ಶಿಶುಸಪ್ತಾಹ ಸಮಾರಂಭವು ಇದೇ ಬರುವ ತಾರೀಖು ೨೦ರಿಂದ ೨೬ರ ವರೆಗೆ ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು

**ಇಚ್ಲಂಪಾಡಿ**--ತಾ ೧೯--೧೦ ೩೫ನೇ ಬುಧವಾರ ಕುಂಬಳೆ ಶ್ರೀ ಗೋಪಾಲಕೃಷ್ಣ ಸ್ಕೌಟುದಳದ ಸ್ಕೌಟುಮಾಸ್ತರರಾದ ಕೆ ದೇವಪ್ಪ ಶೆಟ್ಟಿಯವರು ತಮ್ಮ ಬಾಲವೀರರೊಂದಿಗೆ ಇಚ್ಲಂಪಾಡಿ ಮನೆಗೆ ಹೋಗಿ ಕೇಂಪ್‌ಫಯರ್ ಮಾಡಿ ತಮ್ಮ ಚಟುವಟಿಕೆಗಳನ್ನು ತೋರಿಸಿ, ರಾತ್ರೆ ಕಾರಿಂಜ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆದ ಯಕ್ಷಗಾನ ಸಭೆಯನ್ನು ಕಂಡು ಮರುದಿನ ಮ॥ ರಾ॥ ಇಚ್ಲಂಪಾಡಿ ಪಟೇಲ್ ತಿಮ್ಮಪ್ಪ ರೈಗಳು ಒದಗಿಸಿದ ಊಟೋಪಚಾರಾದಿ ಸತ್ಕಾರಗಳನ್ನು ಪಡೆದು ಹಿಂತಿರುಗಿದರು. ರಾ॥ ಪಟೇಲರಂತಹ ಉತ್ಸಾಹಿಗಳೂ, ಶ್ರೀ ಶೆಟ್ಟಿಯವರಂತಹ ಸ್ಕೌಟ್‌ಮಾಸ್ತರರೂ ಕೆಲಸಮಾಡಿದರೆ ಸ್ಕೌಟುದಳವು ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ

**ಫರಂಗಿಪೇಟೆ**--ಈ ಸೆಂಟರಿನ ಉಪಾಧ್ಯಾಯರ ಮಾಸಿಕಸಭೆಯು ತಾ. ೧೯ರಲ್ಲು ಪಜೀರು ಶಾಲಾ ಹೆಡ್ ಮಾಸ್ತರ್ ಮ॥ ವಾಸ್ಕೆತೆನಾರಾಯಣರವರ ಅಧ್ಯಕ್ಷತೆ ಹಾರವನ್ನು ಕೊಟ್ಟರು. ಬರುವ ಸಭೆಯು ತಾರೀಖು ೨೩ ೧೧--೩೫ಕ್ಕೆ ಬೋರ್ಡು ಹುಡುಗರ ಶಾಲೆಯಲ್ಲಿ ಜರಗಲ್ಪಡುವುದೆಂದು ಈ ಮೂಲಕ ತಿಳಿಸೋಣವಾಗಿದೆ

**ಅಜೆಕಾರು**--ಇಲ್ಲಿಯ ಬೋಧಕರ ಸಂಘದ ಪ್ರಥಮ ಸಭೆಯು ತಾ ೨೬--೧೦--೩೫ನೇ ಶನಿವಾರ ಸ್ಥಳೀಯ ಶಾಲೆಯಲ್ಲಿ ಜರಗುವುದು

ವರಂಗದಲ್ಲಿ ಹೊಸ ಪಂಚಾಯತಬೋರ್ಡು ಮ ... ಜಿಲ್ಲಾ ಪಂಚಾಯತ ಆಫೀಸರು ಒಂದು ಸ್ಕೀಮ್ ವುದು ಸ್ವತಂತ್ರವೇ ಸರಿ ಕಾರ್ಯಕಲಾಪಗಳ ನೋಡಲಿವೆ

**ಫಲಿಮಾರು** ಡಾಕ್ಟರ್ ... ನಂದಿಯಾರದ ಹುಂಗಾರಕಟ್ಟೆಯ ರೂರಲ್ ಡಿಸ್ಪೆನ್ಸರಿ ಫಲಿಮಾರು ಕೇಂದ್ರಕ್ಕೆ ವರ್ಗಾಯಿಸಲ್ಪಟ್ಟಿದ್ದು ಇದೇ ತಾ ೧೮ ೧೦--೩೫ನೇ ಶುಕ್ರವಾರ ಈ ಆಸ್ಪತ್ರೆಯ ಪ್ರಾರಂಭೋತ್ಸವವು ಹೆಚ್ಚಿನ ವೈಭವದಿಂದ ಜರಗಿತು ಈ ಸಮಾರಂಭಕ್ಕೆ ಆಸುಪಾಸಿನ ಗ್ರಾಮಸ್ಥರೆಲ್ಲಾ ಬಂದು ಭಾಗಿಗಳಾಗಿದ್ದರು. ಇಂದು ನೈಸೂರಿನ ಕೀರ್ತನ ಭೂಷಣರಾದ ವೇ। ಶ್ರೀಪಾದದಾಸ ಹಂಪೆಯವರು ಅಧ್ಯಕ್ಷಸ್ಥಾನವನ್ನು ವಹಿಸಿ ವೈದ್ಯಕೀಯ ಆವಶ್ಯಕತೆಯ ಕುರಿತು ತಮ್ಮ ಅಮೋಘವಾದ ಭಾಷಣವನ್ನು ಮಾಡಿದರು ಮಾನ್ಯ ಜಿಲ್ಲಾ ಬೋರ್ಡಿನವರು ಈ ರೂರಲ್ ಡಿಸ್ಪೆನ್ಸರಿಯನ್ನು ತೆರೆಯುವರೆ ಸಹಾಯಮಾಡಿದುದಕ್ಕೆ ಊರವರ ವಂದನೆಗಳು ಅರ್ಪಿಸಲ್ಪಟ್ಟವು. ಬಂದಂಥ ಅತಿಥಿಗಳಿಗೆ ತಿಂಡಿ ಕಾಫಿ ಹಂಚಲ್ಪಟ್ಟು ಸಾಯಂಕಾಲ ೬ ಗಂಟೆಯ ಸಮಯಕ್ಕೆ ಸಭೆಯು ವಿಸರ್ಜನೆಯಾಯಿತು

**ಉಡುಪಿ**--ಡಿಸ್ಟ್ರಿಕ್ಟ್ ಸೆಕೆಂಡರಿ ಕೌನ್ಸಿಲಿನ ಸದಸ್ಯತನಕ್ಕೆ ಸ್ಥಳೀಯ ಬೋರ್ಡ್ ಹೈಸ್ಕೂಲಿನ ಸಹಾಯ

ಮಾನ್ಯ ಸ ಕೆ ದ ... ದಿಂದ ... ಗೊಂಡ ಮ್ಯುನಿಸಿಪಾಲಿಟಿಯೊಡನೆ ... ಇದು ನವ ... ರಿಂದ ಜ್ಯಾರಿಗೆ ಬರುವುದಾಗಿದೆ ಇದನ್ನು ... ಉತ್ತರದಿಂದ ಬರೆಯಲು ... ಕೇಳ ... ಸ್ಥಳೀಯ ... ಸಂಸ್ಥೆ ಯಾಗಿರುವ ಈ ಮ್ಯುನಿಸಿಪಲ್ ಆಡಳಿತೆಯುಂಟಾದುದು ಸ್ಥಳೀಯ ಜನರ ... ಅವರಿಂದಲೇ ಅರಸಲಾದ ಪ್ರತಿನಿಧಿಗಳಿಂದ ... ಅಥವ ಕಡಿತೆ ನಡೆಸಲ್ಪಡತಕ್ಕದೆಂದು ... ಮಹಾಜನರ ತಿಳಿಯಬೇಕಾಗಿದೆ ... ಕಾಲದಲ್ಲಿ ... ಡ್ಯೂಟಿಗಳು ... ಜನತೆಯು ತೆರುವ ತೆರಿಗೆ ... ಯಥಾರ್ಥವಾದ ಅತ್ಯಾವಶ್ಯಕವಾದ ರೀತಿಯಲ್ಲಿ ... ನಿಯುಕ್ತ ಹಾಗೂ ಜನತಾಸೇವಾಯೋಗ್ಯರಾದವರನ್ನೇ ... ಬ್ಯಾರಿಯು ...

## ಚಾಮರಾಜಪೇಟೆ

... ವಾರದ ... ನೇ ... ತ್ಸವವು ಸರ್ ಕೆ ಪುಟ್ಟಣ್ಣ ಚೆಟ್ಟಿ ... ಕೆ ಟಿ ಸಿ. ಐ ಇ ಇವರ ಅಧ್ಯಕ್ಷತೆಯಲ್ಲಿ ಒಕ್ಟೋಬರ್ ತಾ ೧೮ನೇ ಶುಕ್ರವಾರ ಅಪರಾಹ್ನ ಗಂಟೆ ೫--೩೦ಕ್ಕೆ ಎವೆನ್ಯೂ ರೋಡಿನ ಹೋಟೆಲಿನಲ್ಲಿ ಜರಗಿತು ಈ ಉತ್ಸವ ಸಮಾರಂಭದಲ್ಲಿ ... ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ವೈ ಚಿಂತಾಮಣಿಯವರು ... ಮೋಹನ ... ಆನಂದದ ಸಮಾರಂಭವನ್ನು ಮಾಡಿದರು.

---

# ಹಿಂದೂ ರಮಣಿಯರು ಮನುಷ್ಯರ ಗೊಂದು ಸೊತ್ತು

## ಇನ್ನೂ ೫೦೦ ವರುಷಗಳ ಹಿಂದಣ ದೆಸೆಯಲ್ಲಿಯೇ ಉಳಿದಿದ್ದಾರೆ

### ಲಿಂಗಭೇದವಿದ್ದಲ್ಲಿ ಸರಿಸಮಾನ ಹಕ್ಕುಗಳಿರಬಾರದೇ

ಶ್ರೀಮತಿ ಕಮಲಾದೇವಿಯವರು ಮದ್ರಾಸಿನ ವಿಶ್ವವಿದ್ಯಾಲಯಗಳ ಯುವಕರಿಗೆ ಕೊಟ್ಟ ಭಾಷಣದ ಸಾರಾಂಶ:—

ಹಿಂದೂದೇಶವು ದಿನೇ ದಿನೇ ಅಧಃಪತನವನ್ನು ಹೊಂದುತ್ತಿದೆ. ಅದನ್ನು ಉದ್ಧರಿಸುವ ಕಾರ್ಯಭಾಗವನ್ನು ನಾವೆಲ್ಲರೂ ವಹಿಸಿಕೊಳ್ಳಬೇಕೆಂಬ ಘಂಟಾಘೋಷವು ಅಷ್ಟದಿಕ್ಕುಗಳಿಂದಲೂ ಕೇಳಬರುತ್ತಿದೆ. ಆದರೆ, ಅದನ್ನು ಏಳಿಗೆಗೆ ತರುವ ವಿಧಾನವು ಯಾವುದು? ಯಾವುದನ್ನು ನಿರ್ಮೂಲಗೊಳಿಸಿದರೆ ತಾನೆ ನಮ್ಮವರ ಏಳಿಗೆಗೆ ತಳಹದಿಯನ್ನು ಹಾಕಿದ ಹಾಗೆ ಆಗುತ್ತದೆ ಎಂಬುದನ್ನು ಮೊದಲು ಯೋಚಿಸುವುದು ಅಗತ್ಯ. ಹಲವರು ಅನೇಕ ವಿಧಗಳನ್ನು ಸೂಚಿಸಬಹುದು. ಆದರೆ ನಾವು ಇಷ್ಟು ಶೋಚನೀಯ ಅವಸ್ಥೆಗೆ ಬರಲು ನಮ್ಮಲ್ಲಿರುವ ಭೇದಗಳೇ ಕಾರಣ. ಒಂದನೆಯದಾಗಿ ಹೆಣ್ಣು ಗಂಡುಗಳಿಗೆ ಸಮಾಜದಲ್ಲಿ ಸಂಸಮಾನ ಹಕ್ಕಿಲ್ಲ. ಎರಡನೆಯದಾಗಿ ಜನತೆಯಲ್ಲಿ ಐಕ್ಯಮತ್ಯವಿಲ್ಲ. ಮೂರನೆಯದಾಗಿ ವರ್ಣಾನುಬಂಧ ಕಲಹ. ಇವುಗಳನ್ನು ಕಿತ್ತೊಗೆದೆವೆಂದರೆ ಭಾರತವು ನಿಜವಾಗಿಯೂ ಉನ್ನತಿಯನ್ನೈದುವುದರಲ್ಲಿ ಸಂದೇಹವಿಲ್ಲ.

ಮಹಿಳೆಯರಿಂದಲೇ ಲೋಕವು ವೃದ್ಧಿಯನ್ನೈದುವುದು, ಅವರೇ ದೇಶದ ಅಡಿಗಲ್ಲಾಗಿರುವವರು ಎಂಬ ಮಾತನ್ನು ನಾನೊಲ್ಲೆ. ಕಾರಣ, ಗಂಡಸರ ಸಹಾಯವಿಲ್ಲದೆ ಹೆಂಗಸರು ಯಾವ ಕೆಲಸವನ್ನೂ ಸ್ವಗತ ಮಾಡಲಾರರು. ಪ್ರಸಿದ್ಧ ಪುರುಷರೊಬ್ಬರು ಹೇಳಿರುವರು "The hand that rocks the cradle rules the world" ಇವರ ವಾದವು ತಪ್ಪಲ್ಲ. ಸರಿಯಾಗಿ ಪರ್ಯಾಲೋಚಿಸಿದ್ದಲ್ಲಿ, ತಾಯಿಯು ಸಣ್ಣ ಕೂಸಿನಿಂದ ದೊಡ್ಡವನಾಗುವ ವರೆಗೆ ಮಕ್ಕಳನ್ನು ಪೋಷಿಸಿ, ಅವರನ್ನು ಸನ್ಮಾರ್ಗಕ್ಕೆ ತರುತ್ತಾರೆ. ಭವಿಷ್ಯದಲ್ಲಿ ಅವರೇ ದೇಶೋದ್ಧಾರಕರಾಗುವವರು. ಮಕ್ಕಳಲ್ಲಿ ಆ ಸ್ಫೂರ್ತಿಯನ್ನು ತುಂಬಿದವರು ತಾಯಂದಿರು. ಆದ್ದರಿಂದ ಹೆಂಗಸರು ದೇಶೋದ್ಧಾರಕರು ದೇಶನಿರ್ಮಾಣಕರು ಎಂಬುದರಲ್ಲಿ ಸತ್ಯಾಂಶವಿರುವುದು.

ಹಿಂದೂ ರಮಣಿಯರ ಪ್ರಸ್ತುತ ಅವಸ್ಥೆಯನ್ನು ನೋಡಿದರೆ ಅವರಿಂದ ಈ ಕಾರ್ಯಭಾಗವು ಸಾಧ್ಯವಿದೆಯೇ? ಮೊದಲಿಗಿಂತಲೂ ಗಹನವಾದ ರೀತಿಯಲ್ಲಿ ಅವರು ದೇಶೋನ್ನತಿಯನ್ನು ಗೈಯಲು ಸಮರ್ಥರೇ? ಇಲ್ಲ, ಸಾಧ್ಯವಿಲ್ಲ. ಅವರೆಲ್ಲರೂ ಅಜ್ಞಾನಾಂಧಕಾರದಲ್ಲಿ ಮುಳುಗಿರುವಾಗ ಅವರ ಸರ್ವ ಹಕ್ಕುಗಳನ್ನೂ ನಿರ್ಮೂಲಗೊಳಿಸಿರುವಾಗ ಅವರಿಂದ ಈ ಕೆಲಸವು ಸಾಧ್ಯವಿಲ್ಲ. ಹಲವು ಐಶ್ವರ್ಯವಂತ ಮನೆತನದವರು ಶಿಕ್ಷಣವನ್ನು ಪಡೆದರೆ ಇಡೀ ದೇಶವೇ ನಾಗರಿಕವಾಯಿತೇ? ಈ ನಾಗರಿಕ ತರುಣಿಯರನ್ನು ಕಂಡು ಎಲ್ಲರೂ ದೇಶವು ಉನ್ನತಿಯನ್ನು ತಳೆಯಿತು ಎಂದರೂ ಶೇಕಡಾ ೩ರಷ್ಟು ರಮಣಿಯರು ಜನಾಂಗದಲ್ಲಿ ಮುಂದೊತ್ತಿ ಬಂದರೆ ದೇಶದ ಎಲ್ಲಾ ರಮಣಿಯರು ಮುಂದೊತ್ತಿ ಬಂದ ಹಾಗಾಯಿತೇ? ಶೇಕಡಾ ೯೭ ಮಂದಿ ಹೆಂಗಸರಿಗೆ ಸಂಪೂರ್ಣ ಹಕ್ಕುಗಳಿಲ್ಲ. ಗಂಡಸರ ಗುಲಾಮರಾಗಿ ಜೀವನವನ್ನು ನಡೆಸಬೇಕು. ಒಂದಿಷ್ಟು ಸ್ವಾತಂತ್ರ್ಯವು ಇಲ್ಲ. ಇವರ ಅವಸ್ಥೆಯನ್ನು ನೋಡಿದರೆ ತಾನೇ ಜನಾಂಗವು ಉನ್ನತಿಯನ್ನು ಪಡೆದಿಲ್ಲವೆಂದು ಖಚಿತವಾಗುವುದು.

ಇದಕ್ಕೆಲ್ಲ ಕಾರಣವು ಮೊದಲಾಗಿ ಬಡತನ. ದಿನ ನಿತ್ಯವೂ ಹೊಟ್ಟೆಪಾಡಿನ ಯೋಚನೆಯೊಂದನ್ನೇ ಮಾಡುವವರಿಗೆ ಬಾಹ್ಯಪ್ರಪಂಚದ ಗೊತ್ತುಗುರಿಯಾದರೂ ತಿಳಿಯುವುದು ಹೇಗೆ? ಬಡತನದಿಂದ ನೊಂದ ಜೀವಕ್ಕೆ ಮತ್ತಾವುದೂ ಬೇಡ. ಜಗತ್ತೆಲ್ಲವೂ ಶೂನ್ಯವಾಗಿ ಕಾಣುವುದು. ಅದಕ್ಕೆ ದೇವರಸೃಷ್ಟಿಯನ್ನು ಅಲ್ಲಗಳೆಯುವುದು. ಅದು ಅಂತಹ ಜೀವಕ್ಕೆ ಮುಂದೊತ್ತಿಬರುವ ದಾರಿಯಾದರೂ ಇದೆಯೇ? ಜ್ಞಾನವು ಇರಬೇಕು. ಜ್ಞಾನಸಂಪಾದನೆಗೆ ಸಕಲ ವಿದ್ಯಾಭ್ಯಾಸ ಬೇಕು. ಆದರೆ ಸಾಧ್ಯವೇ ಬಡವರಿಗೆ? ಹಾಗಾದರೆ ಸೃಷ್ಟಿಸೌಂದರ್ಯದ ವೈಚಿತ್ರ್ಯ, ಜೀವನದ ವೈಶಿಷ್ಟ್ಯತೆ, ತಮ್ಮ ಕರ್ತವ್ಯದ ಪಥ, ಇವೆಲ್ಲವೂ ಅವರಿಗೆ ಗೊತ್ತಾಗುವ ಬಗೆ ಹೇಗೆ? ಎರಡನೆಯದಾಗಿ, ಸ್ತ್ರೀಯರ ಮೇಲೆ ಸಮಾಜದ ಆಕ್ರೋಶ. ವಿದ್ಯಾಲಯಗಳನ್ನು ಏರ್ಪಡಿಸಿದ್ದರಿಂದ ಸ್ತ್ರೀಯರನ್ನು ಮುಂದಕ್ಕೆ ತಂದಂತಾಗುವುದಿಲ್ಲ. ಅವರಿಗೂ ಸರಿಸಮಾನ ಹಕ್ಕುಗಳನ್ನು ಕೊಡಬೇಕು. ದೇವಸೃಷ್ಟಿಯಲ್ಲಿ ಪಕ್ಷಪಾತವಿಲ್ಲ. ಹಾಗಾದರೆ ಮಾನವಜಾತಿಯಲ್ಲೇಕೆ ಅದಕ್ಕೆ ಪ್ರಾಮುಖ್ಯತೆ?

ಒಂದು ಕಾಲದಲ್ಲಿ ಹೆಂಗುಸರೇ ರಾಜ ಧುರೀಣರಾಗಿದ್ದರೂ ಗಂಡಸರನ್ನು ತಮ್ಮ ಸ್ವಾಮಿತದಲ್ಲಿಟ್ಟು ಆಳುತ್ತಿದ್ದರೂ ಆಗ ಇಬ್ಬರಿಗೂ ಸಂಸಮಾನ ಹಕ್ಕುಗಳಿದ್ದವೆಂದೂ ಹೇಳಬಹುದು. ಆದರೆ ಮಗದೊಂದು ಕಾಲದಲ್ಲಿ ಹೆಂಗಸರು ಪುರುಷರ ಆಟಗೊಂಬೆಗಳಂತಾದರೂ ಅವರಿಗೆ ಯಾವ ಹಕ್ಕೂ ಇಲ್ಲದಂತಾಯಿತು. ಈಗ ಬಹಳ ವಿಚಿತ್ರ ಅವಸ್ಥೆಯು ಅವರಿಗೆ ಒದಗಿದೆ ಎನ್ನಬಹುದು. ಆಂಗ್ಲ ವಿದ್ಯಾಭ್ಯಾಸದ ಗಂಧವನ್ನು ಹೀರಿದ್ದರಿಂದ ಮನೆಗೆಲಸ ಮಾಡುವುದು ಒತ್ತಟ್ಟಿಗಿರಲಿ ತಮ್ಮ ಮಕ್ಕಳನ್ನು ಕೂಡ ಕೆಲಸಕ್ಕಿಟ್ಟ ಆಳು ನೋಡಬೇಕು. ಅವರ ಅಂತಿಮ ಅವಸ್ಥೆಯೆಂದರೆ ತಮ್ಮ ಹಕ್ಕುಗಳಿಗಾಗಿ ಕಾದಾಡುವುದು. ಇಷ್ಟರ ವರೆಗೆ ಕಾದಾಟವಾಡುದೇ ವಿನಹ ಅವರಿಗೆ ಅದರಿಂದಾಗಿ ಬಂದ ಫಲವಾದರೂ ಏನೊಂದಿಲ್ಲ. ಹಿಂದೂದೇಶದ ರಮಣಿಯರು ಕೇವಲ ಒಂದು ಸೊತ್ತಿನ ಹಾಗಾಗಿದ್ದಾರೆ. ಪ್ರಥಮತಃ ಅದು ತಂದೆಯ ಬಳಿಯಲ್ಲಿದ್ದು ನಂತರ ಗಂಡನ, ಸತ್ತನೆಂದರೆ ಅವಳ ಪೇಚಾಟವು ಬಹಳ. ಬೆಳಿಗ್ಗೆ ಎದ್ದಾಗ ಅವಳು ಎದುರು ಇರಬಾರದು. ಕೆಲಸಕ್ಕೆ ಹೋಗುವಾಗ ಅವಳ ಮುಖವು ಕಾಣಿಸಬಾರದು. ಕಸಬರಿಕೆಯ ಹಾಗೆ ಮನೆಯ ಮೂಲೆಯಲ್ಲಿ ಅವಳ ವಾಸವಿರಬೇಕು. ಒಂದೇ ಊಟ ಮಾಡಬೇಕು. ತಲೆಯನ್ನು ಬೋಳಿಸಬೇಕು. ಹಾಗೂ ಹೀಗೂ ಜಾರಿಗೆ ನಡೆದಳೆಂದರೆ ಬಂತು ಅವಳ ಮೇಲೆ ಅಪವಾದ. ನೀಚ ಹೆಂಗಸು ಮರ್ಯಾದೆ ಹೀನೆ ಎಂದು. ಇವೆಲ್ಲವೂ ಮನುಷ್ಯನು ಸ್ತ್ರೀಯರನ್ನು ತನ್ನ ಅಂಕಿತದಲ್ಲಿಡಲು ಸಮಾಜದಲ್ಲಿ ಮುಂದಕ್ಕೆ ತಂದ ಕೆಲವು ನಿಯಮಗಳು. ಇದಕ್ಕೆ ಹೇಳುವುದು ಭೇದಬುದ್ಧಿ. ಎರಡು ನಮೂನೆಯ ನಿಯಮಗಳು ಹೆಂಗಸರಿಗೊಂದು ಗಂಡಸರಿಗೊಂದು. ಇನ್ನು ಜಾತಿಯಿಂದಾಗಿ ಬರುವ ನಿಯಮಗಳೇ ಬೇರೆ. ಉತ್ತಮ ತರಗತಿಯವರು ಮಧ್ಯಮ ತರಗತಿಯವರು ಕೀಳುತರಗತಿಯವರು ಅವುಗಳಲ್ಲಿಯೂ ಕಡೆಗೆ ಉಚ್ಚ ನೀಚವೆಂಬ ಭೇದ. ನಂತರ ಅವುಗಳಲ್ಲಿ ಸಿರಿವಂತರು ಬಡವರು. ಹಾಗೆ ನಮ್ಮ ಸಮಾಜದಲ್ಲಿ ಅನೇಕಾನೇಕ ನಿಯಮಗಳು ತಲೆದೋರಿದುದರಿಂದ ನಮ್ಮ ವಿನಾಶಕ್ಕೆ ನಾವೇ ಕಾರಣರಾಗಿದ್ದೇವೆಂದು ಹೇಳಿದರೆ ಸುಳ್ಳಾಗಲಾರದು.

ಹೆಂಗಸರಿಗೆ ಸಮಾಜದಲ್ಲಿ ಕೆಲವು ವಿಪರೀತ ಧೋರಣೆಗಳನ್ನು ಅನುಸರಿಸಲಿಕ್ಕಿವೆ. ಮನುಷ್ಯನು ಮಾಡಬಹುದಾದ ಎಷ್ಟೋ ಕೆಲಸಗಳನ್ನು ಹೆಂಗಸರು ಮಾಡಬಾರದು. ಮನುಷ್ಯರು ಮಾತ್ರ ಬೀಡಿ ವಗೈರೆ ಸೇದಬಹುದು. ಹೆಂಗಸರೇಕೆ ಕೂಡದು? ಹಾಗೆಂದರೆ ಹೆಂಗಸರೂ ಬೀಡಿ ಸೇದಬೇಕೆಂದು ಇದರ ತಾತ್ಪರ್ಯವಲ್ಲ. ಮುಖ್ಯ ತಾತ್ಪರ್ಯವೆಂದರೆ ಗಂಡಸಿಗೆ ಯಾವುದು ಕೆಟ್ಟದೋ ಅದು ಹೆಂಗಸಿಗೂ ಕೆಟ್ಟದಾಗಿರಬೇಕು. ಹೆಂಗಸರು ಮಾತ್ರ ನೀತಿಗೆ ವಿರುದ್ಧವಾಗಿ ಹೋಗದೆ ತಮಗೆ ಸತೀತ್ವಕ್ಕಿಂತಲೂ ಮತ್ತಾವುದೂ ಮುಖ್ಯವಲ್ಲವೆಂದು ಭಾವಿಸಿ ಸಮಾಜವು ಹಾಕಿದ ನಿಯಮಗಳಿಗೆ ಬದ್ಧಕಂಕಣರಾಗಿ ನಡೆಯಬೇಕೇ? ಗಂಡಸರಿಗೆ ಮಾತ್ರ ಅದು ಅನ್ವಯಿಸುವುದಿಲ್ಲವೇಕೆ? ಬಹುಶಃ ಮನುಷ್ಯನು ತನ್ನ ಮನೋದೌರ್ಬಲ್ಯವನ್ನು ಅರಿತು ಶಿಷ್ಟ ಸಂಪ್ರದಾಯಗಳ ಭಾರವನ್ನು ಹೆಂಗಸಿನ ಮೇಲೆ ಹಾಕಿರಬೇಕು.

ಪರೋಕ್ಷ ಜನಾಂಗದ ನಡೆನುಡಿಗಳಿಗೆ ರೀತಿನೀತಿಗಳಿಗೆ ಮೋಹಿತರಾಗದೆ ಅವುಗಳಿಗೆ ಮೊದಲೆ ತಿಲಾಂಜಲಿಯನ್ನೀಯುತ್ತಿದ್ದರೆ ಇಷ್ಟೆಲ್ಲಾ ಅನಾಹುತಗಳನ್ನು ತಡೆಯಬಹುದಿತ್ತು. ಹಿಂದೂ ರಮಣಿಯರು ೫೦೦ ವರುಷಗಳ ಹಿಂದಣ ಅವಸ್ಥೆಯಲ್ಲಿದ್ದಾರೆ. ಇನ್ನೂ ಮುಂದೊತ್ತಿ ಬಂದಿಲ್ಲ. ಅವರಿನ್ನೂ ತಮ್ಮ ಮೊದಲಿನ ಅವಸ್ಥೆಯನ್ನು ತಾಳಿಲ್ಲ. ಯಾಕೆಂದರೆ ಆಗ ಅವರಿಗೆ ಪುರುಷರ ಸರಿಸಮಾನ ಹಕ್ಕುಗಳಿದ್ದುವು. ಹೆಂಗಸರು ಸ್ವಾತಂತ್ರ್ಯ ಕೇಳುವುದು ಗಂಡಸರನ್ನು ಬಿಟ್ಟುಬಿಡುವುದಕ್ಕಲ್ಲ. ತನ್ನ ಸತ್ತೆಯನ್ನು ನಡೆಯಿಸಿ ಎರಡು ಸೀರೆಗಳನ್ನು ತಂದುಕೊಡುತ್ತಿದ್ದ ಗಂಡನಿಗೆ ಆರು ಸೀರೆಗಳನ್ನು ತಂದುಕೊಡುವ ಅಪ್ಪಣೆಯನ್ನು ಕೊಡುವ ಅಧಿಕಾರಕ್ಕೆ ಆಶಿಸುವುದಲ್ಲ. ತನ್ನ ನಿಜವಾದ ಹಕ್ಕುಗಳನ್ನು ಕೊಳ್ಳುವುದು. ಕೆಲವು ಜನಾಂಗಗಳ ಅಭಿಮತವೆಂದರೆ ಹೆಂಗಸರ ಕೆಲಸವೆಂದರೆ ಮಕ್ಕಳನ್ನು ಹಡೆಯುವುದು. ಲೋಕದಲ್ಲಿ ಜನಸಂಖ್ಯೆಯನ್ನು ಹೆಚ್ಚಿಸುವುದು ಎಂದು. ಇದು ಶುದ್ಧ ತಪ್ಪು.

ಹೆಂಗಸರನ್ನು ಹೀಗೆ ನಿಷ್ಕಾರಣವಾಗಿ ಸಮಾಜದಲ್ಲಿ ಅಯೋಗ್ಯರನ್ನಾಗಿ ಮಾಡುವುದು ಲೋಕಕ್ಕೆ ಹಾನಿ. ಸ್ತ್ರೀಯರಿಗೆ ಅದರಿಂದ ಹಾನಿಯಾಗದಿದ್ದರೂ ಇಡೀ ಜಗತ್ತಿಗೆ ಅದರಿಂದ ಬಾಧಕವಿದೆ. ಜಗತ್ತಿನ ಆಂದೋಲನವು ಫಲಕಾರಿಯಾಗಬೇಕಾದರೆ ಸ್ತ್ರೀಯರ ಬೆಂಬಲವು ಬೇಕು. ಮೊನ್ನೆ ತಾನೇ ನಡೆದ ಚಳವಳಿಯಿಂದಾಗಿ ಹೆಂಗಸರಿಗೆ ಹೆಚ್ಚು ಸ್ವಾತಂತ್ರ್ಯ ಸಿಕ್ಕಿತು. ತುಂಬಾ ಸಂತೋಷ. ಅಷ್ಟು ಸ್ವಾತಂತ್ರ್ಯವನ್ನು ಹೊಂದಲೂ ನೂರು ಸಭೆಗಳನ್ನು ಸೇರಿಸಿ ತರ್ಕ ಮಾಡಿದ್ದಾದರೂ ಸಾಧ್ಯವಾಗುತ್ತಿರಲಿಲ್ಲ. ಆ ಚಳವಳಿಯಿಂದಾಗಿ ಎಷ್ಟು ಮುಸ್ಲಿಂ ತರುಣಿಯರು ಘೋಷ ಪದ್ಧತಿಯನ್ನು ತ್ಯಜಿಸಿ ತಮ್ಮ ದೇಶರಕ್ಷಣೆಗಾಗಿ ಹೊರಬಂದರು. ಈಗ ಅವರಲ್ಲಿ ಈ ಕ್ರಮವು ಶಿಥಿಲವಾಗುತ್ತ ಬಂದಿದೆ. ಜನತೆಯಲ್ಲಿ ಹೊಸ ಹುರುಪು ಉಂಟಾಗುತ್ತಾ ಬಂದಿದೆ. ಹೆಂಗಸರಿಗೂ ಉತ್ತೇಜನ ಕೊಟ್ಟಂತಾಗಿದೆ.

## ಗೋರಕ್ಷಣೆಯ ಮಹತ್ವ.

ಮಾತೃಭೂಮಿಯಾದ ಹಿಂದೂಸ್ಥಾನದ ಶೇಕಡಾ ೯೦ರಷ್ಟು ಜನರು ಹಳ್ಳಿಗಳಲ್ಲಿ ವಾಸಮಾಡುವವರಾಗಿಯೂ, ಇವರಲ್ಲಿ ಸಾಧಾರಣ ಮುಕ್ಕಾಲಂಶ ಜನರು ಭೂವ್ಯವಸಾಯವನ್ನು ಮಾಡಿ ತಮ್ಮ ಜೀವನವನ್ನು ನಿರ್ವಹಿಸತಕ್ಕವರು. ವ್ಯವಸಾಯವು ಹಿಂದೂದೇಶದ ಬೆನ್ನೆಲುಬಿನಂತಿರುವುದು. ಹಳ್ಳಿಗಳ ವ್ಯವಸಾಯವು ದನಕರುಗಳ ಅಭಿವೃದ್ಧಿಯ ಮೇಲೆ ಹೊಂದಿಕೊಂಡಿರುವುದೆಂಬುದು ನಿಶ್ಚಿತಾಭಿಪ್ರಾಯವು. ಹಳ್ಳಿಗಳ ಪುನರುಜ್ಜೀವನವಾಗಬೇಕಾದರೆ ದನಗಳ ರಕ್ಷಣೆಯು ಯೋಗ್ಯ ರೀತಿಯಲ್ಲಿ ನಡೆಯಬೇಕು. ಹಳ್ಳಿಗಳ ಪುನರುಜ್ಜೀವನವೇ ದೇಶೋದ್ಧಾರವು.

ಕೆಲವು ಸಮಯದ ಹಿಂದೆ ದನಗಳ ರಕ್ಷಣೆಯು ಹಳ್ಳಿಜನರ ವಿಶಿಷ್ಟವಾದ ಉಪವೃತ್ತಿಯಾಗಿದ್ದಿತು. ಅವರು ದನಕರುಗಳನ್ನು ತಮ್ಮ ಮನೆಗಳಲ್ಲಿ ಸಾಕಿ, ಅವುಗಳ ಆರೈಕೆಯ ಕಡೆಗೆ ಹೆಚ್ಚಿನ ಗಮನವನ್ನೀಯುತ್ತಿದ್ದರು. ಆದರೆ ಕಾಲವು ಬದಲಾವಣೆ ಹೊಂದಿದಂತೆ ಹಳ್ಳಿಗಳ ವೈಭವವು ಕುಗ್ಗುತ್ತಾ ಬಂದು ದನಕರುಗಳ ರಕ್ಷಣೆಯು ಅದೆಷ್ಟು ಹೀನಸ್ಥಿತಿಗೆ ಬಂದಿರುವುದೆಂಬುದು ಈ ಕೆಳಗಿನ ನಿದರ್ಶನಗಳಿಂದ ವ್ಯಕ್ತವಾಗುವುದು. ಎಲ್ಲಿ ನೋಡಿದರೂ ದುರ್ಭಿಕ್ಷೆಯ ಪರಂಪರೆ, ದೇಹ ಕ್ಷೀಣತೆ, ಅನಾರೋಗ್ಯ, ಶೇಕಡಾ ೫೦ರಂತೆ ಶಿಶುಮರಣ ಮುಂತಾದ ಕಾರಣಗಳಿಂದ ತಿಳಿಯಬಹುದು. ಪರಮಶ್ರೇಷ್ಠವಾದ ಆಹಾರವೆಂದೆಣಿಸುವ ಅಮೃತಸಮಾನವಾದ ದನದ ಹಾಲು ಸಮಸ್ತ ಜನಾಂಗದ ಮಕ್ಕಳಿಗೂ ಪ್ರಾಮುಖ್ಯವಾದ ಆಹಾರವಲ್ಲವೇ? ಇಂದಿನ ಮಕ್ಕಳೇ ಮುಂದಿನ ವೀರಪುರುಷರಾಗಬೇಕಲ್ಲವೇ? ರಾಷ್ಟ್ರದ ಭಾವೀ ಉನ್ನತಿಯು ಇಂದಿನ ಮಕ್ಕಳನ್ನೇ ಅವಲಂಬಿಸಿಕೊಂಡಿರುವುದಲ್ಲವೇ? ಆದರೆ ಜನಾಂಗದ ಏಳಿಗೆಗೆ ತಳಹದಿಯಾದ ಈ ವಿಚಾರಕ್ಕೆ ಹೆಚ್ಚಿನ ಗಮನವನ್ನೀಯದಿರುವುದು ಅದೆಷ್ಟು ಶೋಚನೀಯ.

ಹಿಂದೂದೇಶದಲ್ಲಿ ನಾಡ ದನಗಳು ಪರದೇಶಗಳ ದನಗಳಿಗಿಂತಲೂ ಹೆಚ್ಚಾಗಿ ಕಷ್ಟ ಕಾಹಿಲೆಗಳನ್ನು ತಡೆಯಬಲ್ಲ ಶಕ್ತಿಯುಳ್ಳವುಗಳಾಗಿದ್ದರೂ ಯಾವುದಾದರೊಂದು ಸಾಂಕ್ರಾಮಿಕ ರೋಗವು ಅವುಗಳನ್ನು ಹಿಡಿದೊಡನೆ ಸಾವಿರಾರು ದನಕರುಗಳು ಏಕೆ ಸಾಯುವುವು? ಎಂಬ ಪ್ರಶ್ನೆಯು ಬರುತ್ತದೆ. ಉದಾಹರಣಾರ್ಥವಾಗಿ ಕಡಪಾ ಕರ್ನೂಲು ಅನಂತಪುರ, ಮೊದಲಾದ ಜಿಲ್ಲೆಗಳಲ್ಲಿ ರಿಂಡರ್ ಪೆಸ್ಟ್ (Rindor Pest) ಅಂದರೆ "ದನಕರುಗಳ ಪ್ಲೇಗ್" ಎಂಬ ಭೀಕರ ವ್ಯಾಧಿಯು ಅನೇಕ ವೇಳೆ ತಲೆದೋರಿ ಇಡೀ ಜಿಲ್ಲೆಯ ಜಾನುವಾರುಗಳನ್ನು ಸಂಪೂರ್ಣ ನಿರ್ಮೂಲಗೊಳಿಸುವುದಾಗಿ ತಿಳಿದುಬರುತ್ತದೆ. ಹೆಚ್ಚೇಕೆ? ಕಳೆದ ಜುಲೈ ತಿಂಗಳಲ್ಲಿ ಉಡುಪಿ ಶ್ರೀ ಕೃಷ್ಣ ದೇವಸ್ಥಾನದ ಗೋಶಾಲೆಯಲ್ಲಿ ಈ ಮಹಾವ್ಯಾಧಿಯು ತಲೆದೋರಿ ನೂರಾರು ದನಕರುಗಳು ಈ ವ್ಯಾಧಿಗೆ ತುತ್ತಾಗಲಿಲ್ಲವೇ? ಈ ಭೀಕರ ಸ್ವರೂಪದ ಗೋಮರಣದ ಕಾರಣವು ಅವುಗಳ ತಳಿಯನ್ನು ಹುಟ್ಟಿಸುವುದರಲ್ಲೂ ಆಹಾರವನ್ನು ಕೊಡುವುದರಲ್ಲೂ ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಳ್ಳದಿರುವುದೇ ಎಂದು ಹೇಳಬಹುದು. ಭೂಲೋಕದಲ್ಲಿರುವ ಇತರ ಪ್ರಾಣಿಗಳಂತೆಯೇ ಪಶುವಿನ ಶರೀರವು ಕೂಡಾ ಅದರ ರಕ್ತದಲ್ಲಿರುವ ಪದಾರ್ಥಗಳನ್ನುಪಯೋಗಿಸಿ ಬೆಳೆಯುವಂತದೆ. ಅಂತಹ ರಕ್ತವನ್ನು ಸಶಕ್ತವಾಗಿಡುವುದಕ್ಕಾಗಿ ಅದಕ್ಕೆ ಉತ್ತಮವಾದ ಆಹಾರವು ಅವಶ್ಯ. ಅದರ ರಕ್ತವು ಸಶಕ್ತವಾಗಿದ್ದು ಶರೀರವೆಲ್ಲವೂ ಪೋಷಿಸಲ್ಪಡುತ್ತಿದ್ದರೆ ಯಾವ ರೋಗಕಾರಕ ಕ್ರಿಮಿಗಳೂ ಅವುಗಳ ದೇಹದೊಳಗೆ ಪ್ರವೇಶಿಸಲಾರವು. ಕಾರಣ, ಸಜೀವವಾಗಿ ಚರ್ಮಮಾಂಸವನ್ನು ದಾಟಿ ರಕ್ತವನ್ನು ಪ್ರವೇಶಿಸುವ ಪ್ರಬಲ ಶಕ್ತಿಯು ಯಾವ ರೋಗಕಾರಕ ಕ್ರಿಮಿಗಳಿಗೂ ಇರುವುದಿಲ್ಲ. ಗಾಯ ಕುರು ಮುಂತಾದುವುಗಳ ಮೂಲಕ ಪ್ರವೇಶಿಸಬಲ್ಲವು. ಅದರ ಚರ್ಮವು ಬಿಡದಿದ್ದು ಸಶಕ್ತವಾಗಿದ್ದರೆ ಯಾವ ಪ್ರಾಣಿಗೂ ರೋಗಗಳು ತಟ್ಟುವಂತಿಲ್ಲ.

ಯೂರೋಪ್ ಖಂಡದವರು ದನಗಳ ರಕ್ಷಣೆಯ ಕುರಿತು ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಳ್ಳುತ್ತಾರೆ. ಅವುಗಳ ಸಂತಾನವನ್ನು ಶ್ರೇಷ್ಠತ್ವಕ್ಕೆ ತರಬೇಕೆಂಬುದೇ ಅವರ ಪ್ರಾಮುಖ್ಯ ಧ್ಯೇಯ. ಆದ ಪ್ರಯುಕ್ತವೇ ಅವರು ದನಕರುಗಳ ಆಹಾರಕ್ಕಾಗಿ ಪ್ರತ್ಯೇಕವಾದ ಬೆಳೆಯನ್ನೇ ಬೆಳೆಯಿಸಿ ಅವುಗಳ ಆರೈಕೆಯನ್ನು ಯೋಗ್ಯ ರೀತಿಯಲ್ಲಿ ನೋಡುತ್ತಾರೆ. ಹಾಳುಬಿದ್ದ ಭೂಪ್ರದೇಶವು ಅಪರಿಮಿತವಾಗಿರುವ ಹಿಂದೂಸ್ಥಾನದಲ್ಲಿ ದನಗಳ ರಕ್ಷಣೆಯ ವಿಷಯ ಹೆಚ್ಚಿನ ಗಮನವನ್ನೀಯದಿರುವುದು ಅತ್ಯಂತ ಶೋಚನೀಯ ಸಂಗತಿಯೇ ಸರಿ.

ಗೋಮಹಾತ್ಮೆಯ ವಿಷಯವಾಗಿ ಅನೇಕಾನೇಕ ಗ್ರಂಥಗಳು ಮಹಾ ವಿದ್ವಾಂಸರಿಂದ ಬರೆಯಲ್ಪಟ್ಟಿರುವುವು ಮಾತ್ರವಲ್ಲದೆ ಗೋರಕ್ಷಣೆಯ ಮಹತ್ವವು ಅಗಾಧವಾದುದೆಂದು ಪುರಾಣೇತಿಹಾಸಗಳಿಂದ ತಿಳಿಯಬರುವುದು. ಅಪ್ರಯುಕ್ತ ಗೋರಕ್ಷಣೆಯ ವಿಷಯ ಹಿಂದೂ ಮಹಮ್ಮದೀಯ ಕ್ರೈಸ್ತರೆನ್ನುವ ಜಾತಿಭೇದಕ್ಕೆ ಆಸ್ಪದವಿಲ್ಲ. [illegible] ಶ್ರೇಷ್ಠವಾದ ಹಾಲು ಮೊಸರು, ಬೆಣ್ಣೆ ತುಪ್ಪ ಮೊದಲಾದುವುಗಳು ಯಾರಿಗೆ ತಾನೇ ಬೇಡವಾಗಿದೆ? ಆ ಮೇಲೆ ಗೋರಕ್ಷಣೆಯು ಅದೆಷ್ಟು ಮಹತ್ವದ್ದೆಂದು ಪ್ರತಿಯೊಬ್ಬನಿಗೂ ತಿಳುವಳಿಕೆಯಾಗದಿರದು. ದನಗಳ ರಕ್ಷಣೆಯು ಯೋಗ್ಯ ರೀತಿಯಲ್ಲಿ ನಡೆದರೆ ಹಳ್ಳಿಗಳ ಪುನರುಜ್ಜೀವನವಾಗಿ ದೇಶಾಭಿವೃದ್ಧಿಯಾಗಬಹುದಲ್ಲವೇ?

ಕೆ. ಕೇಶವ ಶೆಟ್ಟಿ, ಉಡುಪಿ

## ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣರ ಪರಿಷತ್ತು

ಮೊದಲು ಸೂಚಿಸಿದಂತೆ ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣರ ೧ನೇ ಪರಿಷತ್ತು ಈ ಬರುವ ದೀಪಾವಳಿ ಸಮಾರಂಭದ ಸಮಯ ಅಕ್ಟೋಬರ ತಾರೀಖು ೨೬, ೨೭ ಮತ್ತು ೨೮ರಲ್ಲಿ ಬೊಂಬಾಯಿಯ ಮುಜಾಫರ ಬಾದ್ ಹೋಲಿನಲ್ಲಿ ಶ್ರೀ ಬಾಲಕೃಷ್ಣ ಸೀತಾರಾಮ ಕಾಮತ್ ಎಮ್. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಪರಿಷತ್ತಿನೊಡನೆ ವಸ್ತುಪ್ರದರ್ಶನವನ್ನು ಮಾಡಲಿರುವರು. ಅದರ ಆರಂಭೋತ್ಸವವನ್ನು ಶ್ರೀಮತಿಗಳಾದ ಸುಂದರಿ ಬಾಯಿ ಡಿ. ಸಿರೂರ್ ಜೆ. ಪಿ. ಯವರು ಮಾಡಲಿರುವರು. ಈ ವಸ್ತುಪ್ರದರ್ಶನವು ತಾ ೨೬ರಿಂದ ಹತ್ತು ದಿನಗಳ ವರೆಗೆ ತೆರೆದಿಡಲ್ಪಡುವುದು. ಇದಕ್ಕೆ ಸಂಬಂಧಪಟ್ಟವರು ತಮ್ಮ ಸಾಮಾನುಗಳನ್ನು ಅಕ್ಟೋಬರ ತಾ ೨೦ನೇ ತಾರೀಖಿನ ಒಳಗೆ ಮುಜಾಫರಬಾದ್ ಹೋಲಿಗೆ ರವಾನಿಸಬೇಕು. ಪ್ರದರ್ಶನಕ್ಕೆ ಸಾಮಾನುಗಳನ್ನು ಕಳುಹಿಸುವವರು ಹಣವನ್ನು ತೆರಬೇಕಾಗಿಲ್ಲ. ನಮ್ಮಲ್ಲಿ ಸಿಗುವ ಎಂಟ್ರಿ ಫೋರ್ಮುಗಳಿಗೆ ಬರೆದು ಹಾಕಿದ್ದಲ್ಲಿ ಕೂಡಲೇ ರವಾನಿಸುವೆವು.

ಪರಿಷತ್ತಿನ ಸಮಯವು ಸನ್ನಿಹಿತವಾದುದರಿಂದ ಗೌಡ ಸಾರಸ್ವತ ಬ್ರಾಹ್ಮಣರು ಆದಷ್ಟು ತ್ವರೆಯಿಂದಾಗಿ ಈ ಸಂಘದ ಸದಸ್ಯರು ಅಥವಾ ಪ್ರತಿನಿಧಿಗಳಾಗಿ ಸೇರಬೇಕಾಗಿ ವಿನಂತಿ. ಸದಸ್ಯರಾಗುವವರು ರೂ. ೧ನ್ನು, ಪ್ರತಿನಿಧಿಗಳಾಗುವವರು ರೂ. ೩ನ್ನು ಕೊಡಬೇಕಾಗಿರುವುದು. ಕಾಗದ ಪತ್ರಗಳನ್ನೆಲ್ಲಾ ಸಂಘದ ಜೆನರಲ್ ಕಾರ್ಯದರ್ಶಿಗಳವರ ವಿಳಾಸಕ್ಕೆ ಬರೆಯತಕ್ಕದ್ದು.

ವಿ. ಎಸ್. ತಿಬೂರ್ಕರ್.

## WANTED.

**Matrimonial**

Wanted a beautiful accomplished girl of less than 21 years age, of high class Hindu family to marry a young man 29 years old, holding very decent position, handsome and an accomplished singer Virgin widows, no objection No dowry or caste restrictions Apply in Strictest Confidence with full details and latest photograph to

XYZ

C/o Swadeshabhimani,
Mangalore S K.


## ನೋಟೀಸು

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ**

ಕೃಷಿ ನಂಬ್ರ 705/1935

ನರಸಿಂಹ ಶೆಣೈ, ಸರಾಫ ಮಂಜುನಾಥ ಶಣೈ ಇವರ ಮಗ, ಕಾಸರಗೋಡು ಕಸಬೆಯಲ್ಲಿರುವವ–ವಾದಿ

ಮತ್ತು

ಲಕ್ಷ್ಮಿ ನಾರ್ಣಪ್ಪಯ್ಯ ಅಜ್ಜಾವರ ರಾಮಪ್ಪಯ್ಯನವರ ಮಗ, ಪುತ್ತೂರು ತಾಲ್ಲೂಕು ಅಜ್ಜಾವರ ಗ್ರಾಮದಲ್ಲಿರುವವ–ಪ್ರತಿವಾದಿ

ಮೇಲೆ ಹೆಸರು ಕಾಣಿಸಿದ ಪ್ರತಿವಾದಿಯು ವಾದಿಗೆ ತಾ 8—8—1932ರಲ್ಲು ಬರೆಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಐವಜಿನ ಬಗ್ಗೆ ವಾದಿ ಕಡೆಯಿಂದ ದಾಖಲಾದ ಮೇಲ್ಕಾಣಿಸಿದ ವ್ಯಾಜ್ಯವು ತಾ 29—10—35ಕ್ಕೆ ತನ್ನಿಗೆ ಇಟ್ಟಿರುತ್ತದೆಂತಲೂ ಪ್ರತಿವಾದಿಯು ಸದ್ರಿ ತಾರೀಕಿನಲ್ಲಿ ಈ ಕೋರ್ಟಿನ ಮುಂದೆ ಹಾಜರಾಗಿ ತನ್ನ ಉದಾಹರಣೆ ದಾಖಲೆಮಾಡದಿದ್ದರೆ ಸದ್ರಿ ವ್ಯಾಜ್ಯವನ್ನು ಎಕ್ಸ್‌ಪಾರ್ಟೀಯಾಗಿ ತೀರ್ಮಾನಿಸಲಾದೀತೆಂತಲೂ ಈ ಮೂಲಕ ತಿಳಿಸೋಣಾಗಿಯದೆ

ಕಾಸರಗೋಡು, 22–10–35 — K Kamalaksha Kamath, *Vakil for Plaintiff*


## ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ಯೊಳಿಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ಯೊಲಿಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಸಂಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರು ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

### ಗೊಡ್ರೆಜ್

### ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಟೀಂಬರ್ ಒಫ ಕೊಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ ಮೈಕ್ರೊಸ್ಕೋಪಿ ಎಂಡ್ ಬೆಕ್ಟಿರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಜ್ಞರಾಗಿರುವ

**ಡಾ। ಔಫ್ರೆಚ್ಟ್ ಎಂಬವರು** —"ನಾನು ಗೊಡ್ರೆಜ್ ವೆಜಿಟೇಬಲ್ ಟ್ಯೊಲಿಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ ಅಭಿಪ್ರಾಯದಂತೆ ಅವುಗಳು ಸ್ಟೆಫ್ಲೊಕೊಕಸ್ ಮತ್ತು ಸ್ಟಫಿಲೊಕಕಸ್ ಎಂಬ ಕ್ರಿಮಿಗಳನ್ನು ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

**ಹೆರ್ ಕಾರ್ಲ್ ಉಸುರ್ಸ್ ಎಂಬವರು.**—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳ ಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

**ಮೇಜರ್ ಹಿಕಿನ್‌ಸನ್‌ರವರ** — ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

**ಡಾ। ಎಂ ಎ ಅನ್ಸಾರಿ, ಎ ಡಿ ಎಂ ಎಸ್ ರವರು**—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿ ತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಅದರ ಪರಿಸ್ಥಿತಿ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಬಯಸುತ್ತೇನೆ ಎಂದಿರುವರು

ಫೆಕ್ಟರಿ – **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು – **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್‌ಪ್ಲನೇಡ್ ರೋಡ, ಫೋರ್ಟ ಮುಂಬಾಯಿ.



## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿಕ್ಕಮಗಳೂರು.

**ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.**

ಮುಂಬಾಯಿಯಿಂದ–ಪೂನಾ–ಬೆಳಗಾಂವ–ಧಾರವಾಡ–ಹುಬ್ಬಳ್ಳಿ ಗೋವಾ ಇವೆಲ್ಲ ಕಡೆಗಳಿಂದ,

ಮಂಗಳೂರಿಗೆ–ಪುತ್ತೂರು–ಉಡುಪಿ–ಕಾರ್ಕಳ–ಬೆಳ್ತಂಗಡಿ–ವೇಣೂರು–ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

**ಶೀಘ್ರ ಪ್ರಯಾಣ ಅನುಕೂಲ ಸೌಕರ್ಯ ಅತ್ಯಲ್ಪ ಖರ್ಚು ಸುಂದರವಾದ ನೋಟ.**

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ–ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ–ಕೈಗಾರಿಕೆಯ ಕೇಂದ್ರವಾದ ಭದ್ರಾವತಿ–ಶಿಲಾಶಿಲ್ಪದ ಬೇಲೂರು, ಹಳೇಬೀಡು–ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು–

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ.

**Chikmagalur Public Conveyance Motor Service,**

**CHIKMAGALUR.**

# ವಿವಿಧ ವಿಷಯಗಳು.

### ತಿಮಿಂಗಿಲದ

ಪ್ರತಿ ಒಂದು ಭಾಗಕ್ಕೆ ವ್ಯಾಪಾರಸಂಬಂಧವಾದ ಬೆಲೆಯುಂಟು. ಅದರ ಕುರಿಯಿಂದ ಚರ್ಮವನ್ನು ತಯಾರಿಸುತ್ತಾರೆ. ಅದರ ಕೊಬ್ಬಿನಿಂದ ಎಣ್ಣೆಯನ್ನು ತೆಗೆಯುತ್ತಾರೆ. ಅದರ ತಲೆಯಿಂದ ವಜ್ರಸರಿಯನ್ನು ಒದಗಿಸುತ್ತಾರೆ. ಅದರ ಎಲುಬುಗಳನ್ನು ಪುಡಿಮಾಡಿ ಒಳ್ಳೇ ಗೊಬ್ಬರವನ್ನು ತಯಾರಿಸುತ್ತಾರೆ ಮತ್ತು ಅದರ ಹಲ್ಲುಗಳಿಗೆ ಕೂಡ ಬೆಲೆಯಿದೆ ಅವುಗಳನ್ನು ಸರಾಫರು ಆಭರಣಗಳ ರಚನೆಯಲ್ಲಿ ಉಪಯೋಗಿಸುತ್ತಾರೆ.

### ಶೀತದಿಂದ ಜೀವದಾನ ಮಾಡುವುದು.

ಕೃತಕ ಕಠಿಣ ಶೀತದಿಂದ ಕೆನ್ಸರ್, ಕ್ಷಯ ಮೊದಲಾದ ಭಯಂಕರ ವ್ಯಾಧಿಗಳಿಗೆ ಕಾರಣವಾಗಿರುವ ಕ್ರಿಮಿಗಳನ್ನು ನಾಶಪಡಿಸಬಹುದೆಂದು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ ಈ ರೀತಿಯಲ್ಲಿ ಕ್ರಿಮಿಗಳನ್ನು ನಾಶಪಡಿಸಿ, ಮನುಷ್ಯರನ್ನು ಬದುಕಿಸುವ ಉಪಾಯಗಳ ಶೋಧನೆಯಲ್ಲಿ ಅಮೇರಿಕಾದ ಹೋಲಿವುಡ್ ಎಂಬಲ್ಲಿ ಡಾ। ರಾಲ್ಫವಿಲಾರ್ಡ ಎಂಬವರು ನಿರತರಾಗಿರುವರು ಇವರು ಶೋಧೆಯನ್ನು ಒಂದು ಕ್ಷಯಪೀಡಿತವಾದ ಕೋತಿಯ ಮೇಲೆ ನಡೆಸಿದರು, ವಾಯುವಿಲ್ಲದ ಒಂದು ಪೆಟ್ಟಿಗೆಯಲ್ಲಿ ಇರಿಸಿ, ಅದರಲ್ಲಿ ಕಠಿಣ ತರದ ಕೃತಕ ಶೀತವನ್ನು ಉಂಟುಮಾಡಿ, ಈ ಕೋತಿಯನ್ನು ನಾಲ್ಕು ದಿವಸಗಳ ತನಕ ಇಟ್ಟಿದ್ದರು ನಂತರ ಅದನ್ನು ಹೊರಗೆ ತೆಗೆದು, ಎಡ್ರೆಲಿನ್ ಮೊದಲಾದ ಔಷಧಿಗಳನ್ನು ಇಂಜಕ್ಷನ್ ಮೂಲಕ ಇದರಲ್ಲಿ ಸೇರಿಸಿ, ಹೃದಯಚಲನವು ಪ್ರಾರಂಭವಾಗುವಂತೆ ಮಾಡಿದರು, ಈಗ ಈ ಕೋತಿಯು ಆರೋಗ್ಯವಂತವಾಗಿ ಬಾಳುತ್ತಿದೆ ಇದೇ ರೀತಿ ಮನುಷ್ಯರನ್ನು ದೇಹಲಿನ ಮಹಾವ್ಯಾಧಿಗಳಿಂದ ನಿವಾರಿಸಲು ಡಾ। ವಿಲಾರ್ಡರ ಆಲೋಚನೆಯು ಉಂಟು ೩೦೦ ಮಂದಿ ರೋಗಪೀಡಿತ ಜನರು ಈ ಕಾರ್ಯಕ್ಕೆ ಮುಂದುವರಿದು ಬಂದಿರುತ್ತಾರೆ. ಆದರೆ ಇವರಿಗೆ ಸರಕಾರದ ಅಪ್ಪಣೆ ಮಾತ್ರ ಸಿಗಲಿಲ್ಲ.

### ಗ್ರಾಮೊಫೋನಿನಿಂದ ಅಂಜನವಿದ್ಯೆ

ಇಂಗ್ಲಾಂಡಿನಲ್ಲಿ ಗ್ರಾಮೊಫೋನಿನಿಂದ ಉಂಟಾಗುವ ಒಂದು ವಿಶೇಷ ತರದ ಸ್ವರದಿಂದ, ಹಲವು ಸ್ತ್ರೀಯರು ಆವೇಶಕ್ಕೆ ಬಂದು, ತಮ್ಮ ಕೆಲವು ದುರಭ್ಯಾಸಗಳನ್ನು ಕೈಬಿಡುತ್ತಿದ್ದಾರೆ ಈ ಸ್ವರವನ್ನು ಕಂಡುಹಿಡಿಯಲು ಡಾ। ರಾಡವಾನ್‌ರೆಂಬವರು ೨೦ ವರ್ಷ ಪ್ರಯಾಸಪಟ್ಟಿದ್ದಾರೆ ನರಸಂಬಂಧವಾದ ರೋಗನಿವಾರಣೆಯು ಆ ಗ್ರಾಮೊಫೋನ ಅಂಜನವಿದ್ಯೆಯಿಂದ ಸಾಧ್ಯವಾಗುತ್ತದೆ ರೋಗಿಗಳನ್ನು ಬೆಳಕಿನಿಂದ ಕೂಡಿದ ಒಂದು ಕೋಣೆಯಲ್ಲಿ ಇರಿಸಿ, ಗೋಡೆಯ ಮೇಲೆ ಚಿತ್ರಿಸಿರುವ ಎರಡು ಕಣ್ಣುಗಳ ಮೇಲೆ ಅವರ ದೃಷ್ಟಿಯನ್ನು ಇರಿಸಿ ಗ್ರಾಮಫೋನಿನಿಂದ ಈ ನವೀನ ಸ್ವರವನ್ನು ಉಂಟು ಮಾಡಿ, ಅವರು ಆವೇಶವಂತರಾಗುವಂತೆ ಮಾಡಬಹುದು

ನಿವಾರಿಸಲು ಅಸಾಧ್ಯವೆನಿಸಿದ ಕೆಲವು ನರಸಂಬಂಧ ರೋಗಗಳನ್ನು ಇದರಿಂದ ಹೋಗಲಾಡಿಸಲು ಸಾಧ್ಯವಿದೆ ಈ ರೋಗನಿವಾರಣೆಗೆ ಮೂರು ತರದ ಸ್ವರಗಳನ್ನು ಕಂಡುಹಿಡಿದಿರುವರು, ಮೊದಲನೇಯದು ಬೆಳಿಗ್ಗೆ ಎದ್ದು ಗಂಜಿ ಊಟವಾದ ನಂತರ ರೋಗಿಯನ್ನು ಕೆಂಪು ಬಣ್ಣದ ಪ್ರಕಾಶವಾನ ಕ್ರೇಣೆಯಲ್ಲಿರಿಸಿ ಅವರ ದೃಷ್ಟಿಯನ್ನು ಮೇಲೆ ಹೇಳಿದ ಕಣ್ಣುಗಳ ಮೇಲಿರಿಸಿ ಈ ಸ್ವರವನ್ನು ಗ್ರಾಮಫೋನು ಮೂಲಕ ಉಂಟುಮಾಡಲು, ರೋಗಿಯ ಮನಸ್ಸಿನೊಳಗೆ 'ಶಕ್ತಿ'ಯ ನೆನಪಾಗುವುದು ಎರಡನೇ ಸ್ವರವನ್ನು ಕೆಲಸದ ತರುವಾಯ ನೀಲವರ್ಣದ ಪ್ರಕಾಶದ ಕೋಣೆಯಲ್ಲಿ ಉಪಯೋಗಿಸಿದರೆ ವಿಶ್ರಾಂತಿಯ ನೆನಪು ಆಗುವುದು ಮೂರನೇ ಸ್ವರವನ್ನು ರೋಗಿಯು ಮಲಗುವ ಸಮಯ ಉಪಯೋಗಿಸಿದರೆ ರೋಗಿಯು ನಿದ್ರಾವಶನಾಗುವನು ಹೀಗೆ, ಈ ಮೂರು ಸ್ವರಗಳು ರೋಗಿಯಲ್ಲಿ ಶಕ್ತಿ, ವಿಶ್ರಾಂತಿ, ಮತ್ತು ನಿದ್ರೆಯನ್ನು ಉಂಟುಮಾಡುವವು

### ಆಶ್ಚರ್ಯಕರವಾದ ಕೆಲವು ಉರಗ

ಜಂತುಗಳನ್ನು ನ್ಯೂಜಿಲೆಂಡಿನಲ್ಲಿ ಕಂಡುಹಿಡಿದಿದ್ದಾರೆ ಅವು ಹಲ್ಲಿಗಳಂತೆ ಕಾಣುತ್ತವೆ ಅವುಗಳಿಗೆ ತಲೆಯ ಮೇಲೆ ಮೂರು ಕಣ್ಣುಗಳಿವೆ, ಅವುಗಳ ಉದ್ದ ಸಾಧಾರಣ ೨೦ ಇಂಚು, ಅವುಗಳ ಸೃಷ್ಟಿನಿರ್ಮಾಣದ ಕಾಲದಲ್ಲಿರುವ ಜಂತುಗಳನ್ನು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ.

### ಪಂಚವರ್ಣದ ಹಿಮವು.

ಆಸ್ಟ್ರೇಲಿಯಾದ ಆಲ್ಪ್ಸ ಪರ್ವತದ ಮೇಲೆ ಬಿದ್ದಿರುವದೆ ಈ ಪರ್ವತದ ಸ್ಯಾಂಟ್‌ಬರ್ನಾರ್ಡ ಹೊಸ್ಪಿಸ್ ಎಂಬಲ್ಲಿ ಈ ಹಿಮವು ಒಂದು ಇಂಚು ದಪ್ಪದ ಎರಡು ಧರಾಗಿ ಬಿದ್ದಿರುತ್ತದೆ.

# ವಾರ್ತಾತರಂಗ

## ಡಾ। ಅಂಬೇಡ್ಕಾರರ ನಿರ್ಧಾರವೂ ಪಂಡಿತ ಮಾಲವೀಯರೂ.

"ಹಿಂದೂ ಸಮಾಜದ ಪ್ರತಿಯೋರ್ವನು ಹರಿಜನೋದ್ಧಾರವನ್ನು ಕೈಕೊಳ್ಳುವುದು ಧರ್ಮವು ಡಾ। ಅಂಬೇಡ್ಕಾರರು ತಾವು ಮಾಡಿದ ಈ ನಿರ್ಧಾರವನ್ನು ಹಿಂದೆಗೆಯಬೇಕಾಗಿ ನಾನು ಕೋರುತ್ತೇನೆ, ಇವರ ಈ ನಿರ್ಧಾರದಿಂದ ಹರಿಜನೋದ್ಧಾರಕ್ಕೂ ಹಿಂದೂ ಧರ್ಮಕ್ಕೂ ತನಗೂ ಹಾನಿಯನ್ನು ಮಾಡಿದಂತಾಗುವುದು" ಜಗಳವಿಲ್ಲದ ಮತಗಳಿಲ್ಲ ಮನೆಗಳಿಲ್ಲ, ಕುಟುಂಬಗಳಿಲ್ಲ ಅಣ್ಣನು ತಮ್ಮಂದಿರನ್ನು ವಂಚಿಸುವನು ಮನುಷ್ಯರಲ್ಲಿ ಪರಸ್ಪರ ವಂಚನೆಗಳು ನಡೆಯುತ್ತಿವೆ ಆದುದರಿಂದ ಕೇವಲ ಕೆಲವು ವೃಂದಗಳ ಈ ಕಲಹದಿಂದ ಹಿಂದೂ ಮತವನ್ನು ದೂಷಿಸಬಾರದು, ಹಿಂದೂ ಧರ್ಮಕ್ಕಿಂತ ಮಹತ್ತರವಾದ ಧರ್ಮವು ಇನ್ನೊಂದಿಲ್ಲ. ಡಾ। ಅಂಬೇಡ್ಕಾರರು ತಮ್ಮ ನಿರ್ಧಾರದ ಕುರಿತು ಸ್ವಲ್ಪ ಆಲೋಚಿಸಲಿ ಅವರು. ಮಹಾತ್ಮಾಗಾಂಧಿಯವರೊಡನೆ, ಹರಿಜನೋದ್ಧಾರ ಕೆಲಸವು ಸಾಂಗವಾಗಿ ನಡೆಯುವಂತೆ ಮಾಡಬೇಕಾಗಿ ನಾನು ಕೋರುತ್ತೇನೆ" ಎಂಬ ಮನವಿಯನ್ನು ಪ್ರಚುರ ಪಡಿಸಿರುವರು.

## ಮದ್ರಾಸಿನಲ್ಲಿ ಶ್ರೀ। ಬಾಬುರಾಜೇಂದ್ರ ಪ್ರಸಾದರು

ಪೆರಂಬೂರು ಮತ್ತು ಸೆಂಟಿಯಾಮ ಎಂಬಲ್ಲಿ (ತಾ ೨೦) ಶ್ರೀ। ಪ್ರಸಾದರನ್ನು ಅತೀ ವಿಜೃಂಭಣೆಯಿಂದ ಸ್ವಾಗತಿಸಿದರು ಅಲ್ಲಿನ ಸಿವಾಸಿಗರ ಪರವಾಗಿಯೂ ರೈಲ್ವೆ ಯೂನಿಯನ್‌ನವರ ಪರವಾಗಿಯೂ, ಮತ್ತು ಸಂಬಿಯನ ಕಾಂಗ್ರೆಸ್ ಕಮಿಟಿಯ ಪರವಾಗಿಯೂ ಬಿನ್ನಪಗಳು ಒಪ್ಪಿಸಲ್ಪಟ್ಟವು ಬಾಬು ರಾಜೇಂದ್ರ ಪ್ರಸಾದರು ಕಾಂಗ್ರೆಸು ಭಾರತಖಂಡದ ಅಭ್ಯುದಯವನ್ನು ಧ್ಯೇಯವಾಗಿಟ್ಟು ಕಾರ್ಯಸುವಾಗ ಮಜೂರರನ್ನು ಎಂದಿಗೂ ಮರೆಯುವುದಿಲ್ಲವೆಂದೂ ಹರಿಜನೋದ್ಧಾರ ಕಾರ್ಯವು ಮದ್ರಾಸ್ ಪ್ರಾಂತ್ಯದಲ್ಲಿ ಸಾಂಗವಾಗಿ ನಡೆಯುತ್ತದೆಂದೂ ಮತ್ತು ಹರಿಜನರು ಸಾಂಘಿಕ ಘಟನೆಗಳ ತರುವಾಯ ಸ್ವಲ್ಪ ಜಾಗರೂಕರಾಗಬೇಕೆಂದೂ ತಮ್ಮ ಭಾಷಣದಲ್ಲಿ ತಿಳಿಸಿದರು

ಈ ದಿವಸ ಅಲ್ಲಿನ ಮಾಡಿಯರ ಪಾರ್ಕಿನಲ್ಲಿ ಅವರನ್ನು ಸ್ವಾಗತಿಸು ... ವ ದಂಡು ಲೇಬರ್ ಯೂನಿಯನ್ ನವರ ಇನ್ನೊಂದು ಸಭೆಯು ಜರಗಿತ್ತು. ಇಲ್ಲಿ ಇವರಿಗೆ ಬಿನ್ನಪದ ಒಟ್ಟಿಗೆ ಒಂದು ಥೈಲಿಯು ಕೊಡಲಾಯಿತು.

ಕಾಂಗ್ರೆಸ್ಸು ಭರತಖಂಡಕ್ಕೆ ಸ್ವರಾಜ್ಯವನ್ನು ಸಂಪಾದಿಸಲು ಹೋರಾಡುತ್ತಿದೆ ಸರ್ವರೂ ಇದರ ಕೂಡೆ ಸಹಕರಿಸಿ ನಾವು ಜಯ ಶೀಲರಾಗ ಬಂತೆ ಮಾಡಬೇಕು ಮಜೂರರು ಕಾಂಗ್ರೆಸ್ಸಿಗೆ ಬೆಂಬಲವನ್ನು ಕೊಡಬೇಕು ಕರಾಚಿಯಲ್ಲಿ ಮಾಡಿದ ನಿರ್ಧಾರದ ಮೇರೆಗಾಗಿ ಕೆಲಸ ತನ್ನ ಮುಂದುವರಿಯುವುದು ಕಾಂಗ್ರೆಸ್ಸು ನಿಮ್ಮ ಉದ್ಧಾರಕ್ಕಾಗಿ ಹವಣಿಸುವುದು ಎಂದೂ,

ಇಲ್ಲಿ ಎಲ್ಲಾ ಜಾತಿಯವರ ಜನರು ನೆರೆದಿರುವರು ಸ್ವರಾಜ್ಯವನ್ನು ಪಡೆಯುವ ಈ ಮಹತ್ತರದ ಕಾರ್ಯವನ್ನು ಕಾಂಗ್ರೆಸ್ಸಿನವರಿಗೆ ಬಿಟ್ಟು ಬಿಡುವ ಬದಲು ಸರ್ವರೂ ತಮಗಾಗ ವ ರೀತಿಯಲ್ಲಿ ಸ್ವತಂತ್ರಕ್ಕಾಗಿ ಸಾಧಿಸಬೇಕೆಂದೂ ಮಹಾತ್ಮಾಜೀಯವರು ೨೦ ವರ್ಷದ ಕೆಲಸವು ನಿಮಗೆ ಸ್ವತಂತ್ರವಾಗಿ ಕೆಲಸ ಮಾಡಲು ಕಲಿಸಿದೆಯೆಂದೂ ದೇಶದ ಸ್ವಾತಂತ್ರ್ಯವೇ ನಿಮ್ಮ ಆಕೆಯಾಗಬೇಕೆಂದೂ ಒಂದು ಭಾಷಣವಿತ್ತರು.

ಇದೇ ದಿವಸ ಅಲ್ಲಿನ ತಿಲಕಗಾಟನಲ್ಲಿ ಒಂದು ಮಹಾ ಸಭೆಯು ಜರಗಿತು ರೂ ೨೦೦೦ದ ಒಂದು ಥೈಲಿಯನ್ನು ಬಿನ್ನಪ ಪತ್ರವನ್ನು ಅರ್ಪಿಸಿದರು

ಕಾಂಗ್ರೆಸಿನ ೫೦ ವರ್ಷದ ಜೀವಮಾನವನ್ನು ವಿವರಿಸಿ, ಸರ್ವರೂ ಅವರವರ ಯೋಗ್ಯತೆಗಳನ್ನು ತಿಳಿದು ಕಾಂಗ್ರೆಸಿನೊಡನೆ ಸಹಕರಿಸಿ, ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾ ಯಿತು, ಬ್ರಿಟಿಷ ಸರಕಾರವು ನಮ್ಮ ನಿರ್ಬಲತೆಯಿಂದ ತನ್ನ ಕಾರ್ಯಭಾರವನ್ನು ಮುಂದುವರಿಸುತ್ತಿದೆ ಎಂದೂ, ನಾವು ಯೋಗ್ಯ ರೀತಿಯಲ್ಲಿ ನಡೆದರೆ, ನಮಗೆ ಮೋಕ್ಷ ಲಭಿಸುವುದೆಂದೂ ಭಾಷಣವಿತ್ತರು.

ಹೀಗೆ ಅದೇ ದಿವಸ ಸೈದಾ ಪೇಟೆಯಲ್ಲಿಯೂ, ಕೊದಂಬಾಕಂ ಎಂಬಲ್ಲಿ ಸ್ವಾಗತ ಸಭೆಗಳು ಸೇರಿ ಬಾಬು ರಾಜೇಂದ್ರರು ಭಾಷಣ ಮಾಡಿದರು

## ಮದ್ರಾಸು ನ್ಯಾಯವಿಧಾಯಕ ಸಭೆಯ

ಅಧಿವೇಶನಗಳು ತಾ. ೨೯ರಿಂದ ಪ್ರಾರಂಭವಾಗುವವು. ಹಲವು ಪ್ರಶ್ನೆಗಳ ಮೇಲೆ ಚರ್ಚೆ ನಡೆಯಲಿದೆ

## ಶ್ರೀ ಕಮಲಾನೆಹರುಗಳವರ ಸ್ಥಿತಿ.

ಇವರ ಆರೋಗ್ಯವು ಅಷ್ಟು ವೃದ್ಧಿ ಹೊಂದಲಿಲ್ಲವೆಂದು ಅತ್ತಕಡೆಯಿಂದ ವಾರ್ತೆ ಬಂದಿದೆ ಜ್ವರವು ಆಗಾಗ್ಗೆ ಕಲಿಡೋರುತ್ತದೆ ಶ್ವಾಸಕೋಶ ನಿರ್ಬಲತೆಯೇ ಇದಕ್ಕೆ ಕಾರಣ. ಇವತ್ತಿಗೆ ನಾಲ್ಕು ವಾರಗಳಿಂದ ಜ್ವರದ ಬಾಧೆಯಿಂದ ಸರಿಯಾಗಿ ಆಹಾರ ಸೇವಿಸಲು ಇವರಿಗೆ ಸಾಧ್ಯವಾಗಲಿಲ್ಲ ಈಗ ಸ್ವಲ್ಪ ದಣ್ಣಿನ ರಸವನ್ನು ಸೇವಿಸುತ್ತಿದ್ದಾರೆ. ಪಂಡಿತ ಜವಾಹರಲಾಲರು ಮತ್ತು ಇಂದಿರಾನೆಹರುರವರು ಈಗ ಅಲ್ಲಿರುವರು.

## ಅ। ಭಾ। ಕಾ। ಕಮಿಟಿಯ ಅಧಿವೇಶನ

ಕಳೆದ ವಾರ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನವು ಮದ್ರಾಸಿನಲ್ಲಿ ಬಾಬುರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಕ್ಕೆ ಬರಲಿರುವ ನವಸುಧಾರಣೆಯಲ್ಲಿ ಭರತ ಖಂಡದ ಆಶ್ರಿತ ರಾಜ್ಯಗಳ ರಚನೆಯ ವಿಚಾರ, ಸುಧಾರಿತ ಸರಕಾರದಲ್ಲಿ ಕಾಂಗ್ರೆಸ್ಸು ಅಧಿಕಾರಸೂತ್ರದಲ್ಲಿ ಭಾಗವಹಿಸುವ ವಿಷಯವೂ ಮತ್ತು ಇನ್ನೂ ಇತರ ಕಾಂಗ್ರೆಸು ವಿಚಾರಗಳ ಮೇಲೆ ಚರ್ಚೆಯು ನಡೆಯಿತು ಆಶ್ರಿತ ರಾಜ್ಯಗಳ ಮೇಲಿನ ಈ ಮುಂಚೆ ಕಾಂಗ್ರೆಸಿನವರು ಮಾಡಿದ ನಿರ್ಧಾರವು ಬದಲಾಯಿಸಲಿಲ್ಲ ಅಧಿಕಾರಸೂತ್ರವನ್ನು ಪಡೆಯುವ ಪ್ರಶ್ನೆಯು ಮುಂದಕ್ಕೆ ಹಾಕಲಾಯಿತು

## ಕ್ವೆಟ್ಟಾದಲ್ಲಿ ಭೂಮಿಯು ಇನ್ನೂ ಕಂಪಿಸುತ್ತಲಿದೆ.

ಕ್ವೆಟ್ಟಾದಲ್ಲಿ ಇದೇ ತಾ ೧೯ರಲ್ಲಿ ಇನ್ನೊಂದು ಭೂಕಂಪವು ಉಂಟಾಯಿತು ಇಲ್ಲಿ ಉಂಟಾದ ಕಂಪನವು ಇಲ್ಲಿಂದ ಆರು ಮೈಲು ದೂರದ ನಲಿಶ್ ಎಂಬ ರೈಲ್ವೆ ಸ್ಟೇಶನಿನ ವರೆಗೆ ಪ್ರಸರಿಸಿ ಇಲ್ಲಿ ಕಟ್ಟಡದ ಮಾಡಗಳು ಬಿದ್ದುಹೋಗಿ ಗೋಡೆಗಳಲ್ಲಿ ಬಿರುಕುಗಳು ಉಂಟಾದವು ಕ್ವೆಟ್ಟಾ ಕಂಟೋನಮೆಂಟನಲ್ಲೂ ಕಂಪನವನ್ನು ಅನುಭವಿಸಿದ್ದಾರೆ ಮನೆ ಮಠಗಳಲ್ಲಿರುವ ಜನರು ಹೊರಗೆ ಓಡಿರುವರು.

ಆಗಿಯಾದಿಕ ಕೆಲಸವು ... ಇದೆ ... ಒಡವೆಗಳನ್ನು ಮೇಲಕ್ಕೆ ತೆಗೆದಿದ್ದಾರೆ

## ಮುಂಬಯಿಯಲ್ಲಿ ಪಂಡಿತ ಕುಂಜ್ರುರವರ ಭಾಷಣ

ಸುಧಾರಿತ ಸರಕಾರದಲ್ಲಿ ಕಾಂಗ್ರೆಸ್ಸಿನವರ ಅಧಿಕಾರ ಸೂತ್ರವನ್ನು ಪಡೆಯಬೇಕೆಂದೇ ಅಭಿಪ್ರಾಯದಿಂದ ಒದಗಿದ ಮತ್ತು ಇನ್ನು ಬರುವ ಸುಧಾರಣೆಗಳ ಕುರಿತು ಪಂಡಿತ ಕುಂಜ್ರುರವರ ಮುಂಬಯಿನಲ್ಲಿ ಒಂದು ಭಾಷಣವನ್ನು ಮಾಡಿದರು

ಹೊಸ ಸಂವಿಧಾನದಲ್ಲಿ ... ಅದು ... ನಾವು ಮಂತ್ರಿಪದವಿಯನ್ನು ಸ್ವೀಕರಿಸಬೇಕು ಎಂದು ಇವರು ಸಾರಿದರು

## ಮಹಾತ್ಮಾ ಗಾಂಧಿಯವರ ಜನ್ಮದಿನ

ಸ್ಮಾರಕ ಸಮಾರಂಭವು ಲಂಡನಿನಲ್ಲಿ ಹಲವು ಕಡೆಗಳಲ್ಲಿ ಆಚರಿಸಲ್ಪಟ್ಟಿತು ಹಲವು ಭಾಷಣಗಳಾದುವು ಸಿ ಎಫ್ ಎಂಡ್ರೂಸರು ಒಂದು ಸಭೆಯಲ್ಲಿ ಹಿಂದೂ ದೇಶದ ಪರಿಸ್ಥಿತಿಯನ್ನೂ ಮಹಾತ್ಮಾಜೀಯವರ ದಿವ್ಯ ಜೀವಮಾನವನ್ನೂ ವಿವರಿಸಿ ಭಾಷಣವನ್ನು ಮಾಡಿದರು ತುಂಬಾ ಜನರು ನೆರೆದಿದ್ದರು. ಮಹಾತ್ಮಾಜೀಯವರು ಚಿರಕಾಲ ಬಾಳಲೆಂದು ಹೃತ್ಪೂರ್ವಕ ವಂದನೆಗಳು ಈ ಸಭೆಗಳ ಮುಖ್ಯ ಕಾರ್ಯಕ್ರಮವಾಗಿತ್ತು.

## ಹಿಂದೂದೇಶದ ವ್ಯವಸಾಯ

ರಕ್ಷಣೆಯನ್ನು ಮಾಡಬೇಕೆಂದು ಶ್ರೀ ಕೆ ಬಾಸುಗಳವರು ಜನಪದ ಮಂಡಳದ ಆರ್ಥಿಕ ಮತ್ತು ವ್ಯಾಪಾರಿಕ ಮಂಡಳದಲ್ಲಿ ಒಂದು ಭಾಷಣವನ್ನು ಮಾಡಿದರು ವ್ಯವಸಾಯದ ಉದ್ಧರಣೆಯು ಆದರೆ ಹಿಂದೂ ದೇಶದ ಅಭ್ಯುದಯವು ಆಗುವುದೆಂದು ಇದರ ಮುಖ್ಯವಾಗಿ ಅವರಿಗೆ ತಿಳಿಸಿದರು

## ಹರಿಜನರಿಗೆ ಒಂದು ಪತ್ರಿಕೆ

ಹರಿಜನೋದ್ಧಾರಕ್ಕಾಗಿ ಮದ್ರಾಸಿನ ಕೆಲವು ಪ್ರಮುಖರು ಕೂಡಿ ಒಂದು ಪತ್ರಿಕೆಯನ್ನು ಸ್ಥಾಪಿಸಿದ್ದಾರೆ, ಹರಿಜನರು ಈಗ ಅನುಭವಿಸುವ ಕಷ್ಟಗಳನ್ನು ಜನತೆಯ ಮುಂದೆ ತರುವುದೂ, ಹರಿಜನರಲ್ಲಿ ಬುದ್ಧಿವಿಕಾಸ ಮಾಡುವುದು ಇವೇ ಮೊದಲಾದವು ಈ ಪತ್ರಿಕೆಯ ಉದ್ದೇಶಗಳು.

# ತುಸು ನಗು

ಪೀಟರ್ ಎಂಬ ೫ ವರ್ಷದ ಚಿಕ್ಕ ಹುಡುಗನಿಗೆ ಸಭ್ಯತನದ ವಿಷಯ ಒಂದು ಪಾಠದಲ್ಲಿ, ಅವನ ತಂದೆಯು ಹೀಗೆಂದನು,—

"ನೀನು ಬಸ್ಸುಗಳಲ್ಲಿ ಸಂಚರಿಸುವಾಗ, ಸ್ಥಳ ಸಂಕೋಚವು ಒದಗಿದ ಸಮಯ ಒಬ್ಬ ಸ್ತ್ರೀಯು ಬಂದರೆ ನೀನು ಕೂಡಲೇ ಆ ಸ್ಥಳವನ್ನು ಅವಳಿಗೆ ಬಿಟ್ಟುಕೊಡಬೇಕು"

ಹೀಗೆ ಕೆಲವು ದಿನಗಳ ನಂತರ ಪೀಟರನು ತನ್ನ ತಂದೆಯೊಡನೆ ಅತನ ತೊಡೆಯ ಮೇಲೆ ಕೂತುಕೊಂಡು ಬಸ್ಸಿನಲ್ಲಿ ಎಲ್ಲಿಗೋ ಪ್ರಯಾಣಬೆಳಸುತ್ತಿದ್ದನು ಆಗ, ಒಂದು ಕಡೆಯಲ್ಲಿ ಸ್ಥಳಸಂಕೋಚವಾಗಿ ಒಬ್ಬ ತರುಣ ಸ್ತ್ರೀಗೆ ಸ್ಥಳಸಿಗದೆ ಹೋಯಿತು. ಇದನ್ನು ನೋಡಿದ ಪೀಟರನು ತನ್ನ ತಂದೆಯ ತೊಡೆಯ ಮೇಲಿಂದ ಎದ್ದು—

"ಅಮ್ಮಾ ತನ್ನ ಪೀಠವನ್ನು ಅಲಂಕರಿಸಿರಿ" ಎಂದನು

× × × × ×

ಟಿಪ್ಪಣಿಯಲ್ಲಿ ಅದರ ಕಂಡಕ್ಟರನೋರ್ವನು ಆಡ ಓದುತ್ತಿರುವ ಸಮಯ ಏನೋ ಲೆಕ್ಕವನ್ನು ಬರೆಯುವುದನ್ನು ಕಂಡು ವಿಸ್ಮಿತಳಾದ ಒಬ್ಬ ಮುದಿ ಪ್ರಯಾಣಿಕಳು

"ಏನಯ್ಯಾ, ಲಕ್ಕಾಚಾರವನ್ನು ಮನೆ ಕೇರಿದ ಮೇಲೆ ಬರೆಯಬಾರದೇ? ಇಷ್ಟೇಕೆ ಅವಸರ?

ಕಂಡಕ್ಟರನು —"ಅಮ್ಮಾ, ಹೀಗೆ ಬರೆದು ಸವೆ ಅಭ್ಯಾಸವಾಗಿದೆ ಮನೆಯಲ್ಲಿ ಬರೆದರೆ ಇನ್ನೊಂದು ಸಂಕಟವು ಒದಗುವುದು"

ಮುದುಕಿ; "ಅದು ಹೇಗೆ?"

ಕಂಡಕ್ಟರನು "ಹಾಗಾದರೆ ಕೇಳಿ ಮನೆಯಲ್ಲಿ ಲೆಕ್ಕವನ್ನು ಬರೆದರೆ ಮೇಜನ್ನು ಅಲಾಡಿಸಲು ನನ್ನ ಹೆಂಡತಿಯನ್ನು ಕರೆಯಬೇಕಾಗುವುದು

× × × × × ×

ಒಬ್ಬನು ತನ್ನ ಕಳೀನ ನಾಯಿಯನ್ನು ಕಳಕೊಂಡನು. ಅದನ್ನು ಒದಗಿಸಿಕೊಟ್ಟವರಿಗೆ ೬೦೦ ಬಹುಮಾನಾಗಿ ಕೊಡುತ್ತೇನೆಂದು ಅಲ್ಲಿನ ವಾರಪತ್ರಿಕೆಗಳಲ್ಲಿ ಪ್ರಕಟನ ಮಾಡಿದನು ಆದರೆ ಇದಕ್ಕೆ ಯಾವ ಉತ್ತರವೂ ದೊರಕದೆ ಹೋಯಿತು ಆಗ ಅವನು ಕೋಪಗೊಂಡು ಪತ್ರಿಕೆಯ ಆಫೀಸಿಗೆ ಹೋಗಿ, ಅಲ್ಲಿಯ ದಫ್ತಾರನ ಹತ್ತಿರ "ನಿಮ್ಮ ಜಾಹೀರಾತು ಮನೇಜರರನ್ನು ನೋಡಬೇಕಾಗಿದೆ" ಎಂದನು

"ಅವರು ಹೊರಗೆ ಹೋಗಿದ್ದಾರೆ"

"ಸಂಪಾದಕರು?"

"ಅವರೂ ಕೂಡ ಹೊರಗೆ ಹೋಗಿದ್ದಾರೆ"

"ಅಯ್ಯೋ ಗ್ರಹಚಾರವೇ ಎಲ್ಲರೂ ಹೊರಗೆ ಹೋಗಿರುವರೇ?"

"ಹೌದು ಎಲ್ಲರೂ ತಮ್ಮ ನಾಯಿಯನ್ನು ಹುಡುಕಿಕೊಂಡು ಹೋಗಿರುವರು"

## ಬೆಂಡಾ ಹಳ್ಳಿಗರನ್ನು ಬಿಡುಗಡೆ ಮಾಡಿದರು.

ಜಬಲ್‌ಪುರ ಬೆಂಡಾ ಹಳ್ಳಿಯಲ್ಲಿ ಆಂಗ್ಲೇಯ ಸೈನಿಕರ ಮೇಲೆ ದಾಳಿ ನಡೆಸಿದ ಹಳ್ಳಿಗರ ಮೇಲಿನ ಅಪಾದನೆಯು ವಿಚಾರಿಸಲಾಗಿ ತಕ್ಕ ಸಾಕ್ಷಿ ಇಲ್ಲದೆ ಹಳ್ಳಿಗರನ್ನು ಬಿಡುಗಡೆ ಮಾಡಿದರು


## ನೋಟೀಸು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O S 345 27 R I A 489/35

ಅರ್ಜಿದಾರ- ಶಂಕ್ರನಾರಾಯಣ ವೈಯ್ಯ

ಎದ್ರಿರು—ಕೃಷ್ಣಯ್ಯ ಸೆಟ್ಟಿ ಕೂಡಾ.

ಸದ್ರಿ ವ್ಯವಹರಣೆಯ 1ನೇ ಪ್ರತಿವಾದಿ ಕೃಷ್ಣಯ್ಯಸೆಟ್ಟಿ 2ನೇ ಅನಂತ ಸೆಟ್ಟಿ 3ನೇ ಬೆಟ್ಟಾಡಿ ಮಂಡಯ್ಯ ಸೆಟ್ಟಿ ಕೂಡಾ 3 ಜನರಿಗೆ ತಿಳಿಯಪಡಿಸುವದೇನಂದರೆ—

ಮೇಲಿನ ದಾವೆಯಲ್ಲಿ ಆದ ಡಿಕ್ರಿ ಮೇಲೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅರ್ಜಿಯು ತಾ 28—10—35ಕ್ಕೆ ತನ್ನಿಗೆ ಇಟ್ಟಿರುತ್ತದೆ ಆ ಕುರಿತು ನಿಮ್ಮ ಕಡೆಯಿಂದ ಆಕ್ಷೇಪಗಳಿದ್ದರೆ ಆ ದಿವಸ ಮೇಲಿನ ಕೋರ್ಟಿನಲ್ಲಿ ಜ್ಞಾಹೀರು ಮಾಡಿಕೊಳ್ಳತಕ್ಕದ್ದು

22-10-35 } K Venkappa Shetty
ಕುಂದಾಪುರ } Petitioner's Vakil

# WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts
3. Tumkur, Kolar, Mangalore and civil and Military Stations, Bangalore Cantonment.

Please apply, in person or by letter,

**C. H SHAMBULINGAPPA,**
The South Indian General Assurance Co. Ltd.
1, Purniah Chatram Road, Balepet,
BANGALORE CITY



ಡಾಕ್ಟರ ವಾಮನ ಗೋಪಾಳರವರ



ಬಹುಕಾಲದ
ಸಾರ್ಸಪರಿಲಾ
ಶಕ್ತಿ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸುವರೇ
ಶ್ರೇಷ್ಠ
ಡಾ॥ ಗೌತಮ ರಾವ್
ಕೇಶವರವರ
ಫಾಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಫಾರ್ಮಸ್ಯೂಟಿಕಲ್ ...
ಕೆಮಿಸ್ಟ್ಸ್ - ... ಮಂಗಳೂರು,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.



THE 1935 MODEL

# HEAVY DUTY TRUCK



## For Your Haulage

**U. SUBRAYA NAYAK,**
FORD DEALER
SHIMOGA—AND—MANGALORE.



# Now For Sale.

**Poholatum (Balm)** (German make) This is a home remedy for Rheumatism Asthma, Sciatica, Lumbago, Insect bites, Herpes, Wounds Cuts Colds Headache It is a complete substitute for the domestic medicine chest Try once this unequalled remedy In 1oz tin As 3 In oz jar As 12/-

**Supertor Red Balm** For relieving pains in muscles and on skin Directions for use with the bottle Price As 12/- only.

**Wurmteufel** Is a German remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms, children and adults try this unique remedy and be freed from your ailment Price As 10 per packet

**Pocket Inhaler** For coughs and hoarseness, headache catarrh colds use this inhaler and you will be relieved immediately Price per inhaler As 6 & As 8/-

**Po-Ho Fluid** For Asthma colds, indigestion, toothache lumbago a sure remedy in all cases Price As 6/- and Re 1 per phial

**Cough Cure** An infallible remedy for coughs of all kinds bronchitis hoarseness Particulars in bottle. Price As. 12/- for 3 oz bottle

**The New Curative Earth** A Radium cure for incurable diseases

**Mithra Toilet Soaps**—Scientifically prepared German soaps excellent for health Price As 1 3, 2 6, 3/-, 4,

## Basel Mission Book Dpot

Mangalore, Branches in Codialbail, Hubli, Calicut.



## ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ
ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

# ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

## ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

# ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ದಾಖಲೆದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲ. —ಸಂ.ಪ.]

## ಕುವೆಟ್ಟು, ಒಡಿಲ್ನಾಳ ಗ್ರಾಮಗಳ ಡಿ. ಬೋ. ವೋಟರರ ತಿದ್ದಿದ ಪಟ್ಟಿಯಲ್ಲಿ ಕುಂದುಕೊರತೆಗಳು

ಕುವೆಟ್ಟು, ಒಡಿಲ್ನಾಳಗಳ ಗ್ರಾಮಗಳ ಪಟೇಲರೇ ಗುರುವಾಯನಕೆರೆ ಪಂಚಾಯತ ಬೋರ್ಡಿನ ಅಧ್ಯಕ್ಷರು. ಇವರ ಕೆಲಸಗಳ ಅವ್ಯವಸ್ಥೆಯ ಕುರಿತಾಗಿ ಅನೇಕರು ವಸೂಲಿನ ಅರ್ಜಿಯ ಸಂಬಂಧ ತನ್ನ ದ್ವೇಷವನ್ನು ಪೂರೈಸಿಕೊಳ್ಳುವ ಉದ್ದೇಶದಿಂದ ಕುವೆಟ್ಟು ಮತ್ತು ಒಡಿಲ್ನಾಳ ಗ್ರಾಮಗಳ ಜಿಲ್ಲಾ ಬೋರ್ಡು ಓಟರರ ತಿದ್ದಿದ ಪಟ್ಟಿಯಲ್ಲಿ ...

# ಬೆಂಡಾದಲ್ಲಿ ನಡೆದ ಅತ್ಯಾಚಾರ ವಿಚಾರ

### ನಿಶ್ಶಸ್ತ್ರ ಪ್ರಾಣಿಗಳಾದ ಹಿಂದೂಗಳ ಮೇಲೆ ಸೈನಿಕರ ಅಮಾನುಷ ಆಕ್ರಮಣ.

### ಅತ್ಯಾಚಾರ ನಡೆಸಿದ ದೇಶರಕ್ಷಕರಿಗೆ ಸರಕಾರದ ಗೆಸ್ಟ್‌ಹೌಸ್.

### ಅಪಾದಿತರಿಗೆ ನ್ಯಾಯಾಧೀಶರ ಎರಡು ಬುದ್ಧಿಯ ಮಾತುಗಳು!

### ಒಬ್ಬನಿಗೆ ಟಾಪು ಶಿಕ್ಷೆಯಾಯಿತು!

ಹಲವು ದಿನಗಳ ಹಿಂದೆ ಬೆಂಡಾ ಗ್ರಾಮದಲ್ಲಿ ಕೆಲ ಮಂದಿ ಸೈನಿಕರು ನುಗ್ಗಿ ಅಲ್ಲಿಯ ಹಿಂದೂ ನಿವಾಸಿಕರನ್ನು ಅಮಾನುಷ ರೀತಿಯಲ್ಲಿ ಚಿತ್ರಹಿಂಸೆಗೆ ಗುರಿಮಾಡಿದರು. ನಿಶ್ಶಸ್ತ್ರ ಪ್ರಾಣಿಗಳಾದ ಅವರು ಸೈನಿಕರ ...

... ಜೇಮ್ಸ್ ಡವ್‌ಡಲ್ ಎಂಬವನಿಗೆ ಟಾಪು ಶಿಕ್ಷೆಯನ್ನು ಉಳಿದವರಿಗೆ ಮುಂದಿಗೆ ಕಠಿಣ ಸಜೆಯನ್ನೂ ವಿಧಿಸಿದರು. ಒಬ್ಬನನ್ನು ಮಾತ್ರ ನಿರಪರಾಧಿ ಎಂದು ಬಿಟ್ಟರು. ...

| ಅಪಾದಿತರೂ ಅವರಿಗೆ ವಿಧಿಸಲ್ಪಟ್ಟ ಶಿಕ್ಷೆಯೂ | | |
|---|---|---|
| ಜೇಮ್ಸ್ ಡವ್‌ಡಲ್ | — | ಜನ್ಮಾವಧಿ ಟಾಪು ಶಿಕ್ಷೆ |
| ಜೋರ್ಜ ಆರ್ಕ್‌ಬೋಲ್ಡ್ | — | ನಾಲ್ಕು ವರ್ಷದ ಸಜೆ |
| ಜೋರ್ಜ ಸ್ವಾನಸನ್ | — | 3 ,, ,, |
| ಥೋಮಸ್ ಬರ್ನ್ | — | 2 ,, |
| ವಿಲ್ಲಿಯಮ್ ಮುರ್ಹಾಗ್ | — | 2½ ,, ,, |
| ಜೋನ್ ಬರ್ಕ್ | — | 2 |
| ಜೋನ್ ಹೆನ್ ಕೋಕ್ | — | 18 ತಿಂಗಳ |
| ಆಲ್ಬರ್ಟ ಬೇಟ್ಸ್ | — | 18 |
| ರೋಬರ್ಟ ಕಿಂಗ್ | — | 18 |
| ಮೈಕಲ್ ಜೋನ್ಸ್ | — | 18 ,, |
| ಅರ್ನೆಸ್ಟ್ ತೋರ್ಪ್ | — | ನಿರಪರಾಧಿ ಎಂದು ಬಿಟ್ಟರು |

ಅಪರಾಧಿಗಳ ಶಿಕ್ಷಾ ವಿಚಾರವನ್ನು ತಿಳಿಯಲು ಅವಲವಿಕೆಯಿಂದ ನೆರೆದಿದ್ದರು. ಅಪರಾಧಿಗಳು ಶಾಂತಚಿತ್ತರಾಗಿ ನ್ಯಾಯಾಧೀಶರ ಶಿಕ್ಷೆಯನ್ನು ಕೇಳುವಾಗಿಲ್ಲವೆ ಸ್ವೀಕರಿಸಿದುದು ಆಶ್ಚರ್ಯ. ...

### ವಿಚಾರದ ಕುರಿತು ಪೋಲೀಸರ ವರದಿ

# ಆಕಾಶದಿಂದ!

### ಮಿತ್ತೂರಿನಲ್ಲಿ ಕಳ್ಳರಕಾಟ.

— ಗರುಡ


# KANNADA

Savings Certificates
can be cashed
even before maturity.

Full Particulars from—

CANARA BANK LTD

OFFICES AT —

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—City, Mangalore—Bunder, Kasaragod, Puttur, Buntwal, Karkala, Coondapoor, Udipi, & Gangoli

AVAILABLE IN DENOMINATIONS OF
Rs. 10/- UPWORDS

TOTAL YIELD RS 4-6-0% P.A.

Paid once half yearly at 3⅛% p. a.
with an additional 1¼% p. a. on maturity
If Left To Accumulate

RS. 100/-
Will Amount to
RS. 122-13-6

Estd 1906

CANARA BANK
LIMITED

Subscribed Capital 6,00,000 — Paid up Capital 3,81,000
Reserves 4,50,000 — Deposits 38,62,000 — Working Capital 73,49,000

# ನಾಯಕ್ ಬ್ರದರ್ಸರ

# ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ






Distributors for South Kanara —

**Raghavendra Ranga Pai, Car Street, Mangalore.**

ಕುಂದಾಪುರ ಪ್ರವರ್ತಕರು.—ಕಾಮತ್ ಸ್ವದೇಶೀ ಎಂಪೋರಿಯಂ



# 1936

ಮೇಲಿನ ಇಸವಿಯ ಶಾರದಾ ಡೈರಿಗಳು ಬೇಕೆ? ಶಾರದಾ ಛಾಪಖಾನೆಗೆ ಬರುವ ತಿಂಗಳಲ್ಲಿ ಬರೆಯಿರಿ, ಅಥವಾ



ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

## ಸಾಮಾನ್ಯ ವಿಜ್ಞಾನ.

## ಅಜ್ಜಿ ಕಥೆಗಳು (ಸಚಿತ್ರ)

| ಚರಿತ್ರೆ ಮತ್ತು ಕಥೆಗಳು. | ರೂ | ಆ | ಪೈ | ಸಾಮಾನ್ಯ ವಿಜ್ಞಾನ. | | | |
|---|---|---|---|---|---|---|---|
| | | | | ಎರಡನೇ ದರ್ಜೆ | 0 | 3 | 0 |
| ನಾಲ್ಕನೇ ದರ್ಜೆ | 0 | 6 | 0 | ಮೂರನೇ ,, | 0 | 3 | 0 |
| ಮೂರನೇ ,, | 0 | 4 | 6 | ನಾಲ್ಕನೇ ,, | 0 | 6 | 0 |
| ಎರಡನೇ ,, | 0 | 4 | 0 | ಐದನೇ ,, | 0 | 5 | 0 |
| ಸಮಾಜಶಾಸ್ತ್ರ | | | | | | | |
| ಐದನೇ ದರ್ಜೆ | 0 | 3 | 0 | | | | |
| ನಾಲ್ಕನೇ ,, | 0 | 3 | 0 | ಆರನೇ ದರ್ಜೆ | 0 | 4 | 0 |
| ಮೂರನೇ ,, | 0 | 2 | 6 | ಏಳನೇ ,, | 0 | 5 | 0 |
| | | | | ಎಂಟನೇ ,, | 0 | 6 | 0 |

ಮೂರು ಕರಡಿಗಳು
ಪೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅರಗಿನ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗ
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1



ತಯಾರಾಗಿದೆ!

ಟ್ರೈನಿಂಗ್ ವಿದ್ಯಾರ್ಥಿಗಳಿಗೆ

**ಸಮಾಜಶಾಸ್ತ್ರ**

ಅಥವಾ

**ಸೊಸಿಯೊಲೊಜಿ.**

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ. 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ಹೊಸ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು,

ಇಲ್ಲಿಗೆ ಕೂಡಲೇ ಬರೆಯಿರಿ

**ಮೆನೇಜರ್,**
ಶಾರದಾ ಛಾಪಖಾನೆ,
ಮಂಗಳೂರು.


## ರೈಲುಬಂಡಿಗಳ ಸಮಯ.

| ಗಾಡಿಗಳು. | ಹೊರಡುವ ಘಂಟೆ | ತಲಪುವ ಘಂಟೆ |
|---|---|---|
| ಮೈಲು | ಬೆಳಗ್ಗೆ 9 50 | ಸಂಜೆ 4 20 |
| ಮಿಕ್ಸಡ್ | ,, 5 55 | ರಾತ್ರಿ 8 50 |
| ಫಾಸ್ಟ್ ಪೆಸೆಂಜರ್ | ಮ. 12 45 | ಮ. 2 40 |
| ಶಟಲ್ | ಸಂಜೆ 5.25 | ಬೆಳಗ್ಗೆ 9-25 |
| ಕಾಂಞಂಗಾಡ್ ಪೆಸೆಂಜರು | ಬೆ. 8 25 | ಮ. 1-20 |
| ಕಾಸರಗೋಡು ಪೆಸೆಂಜರು | ಸಂಜೆ 8 20 | ಸಂಜೆ 6-15 |


ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೆಯ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

# ಶಾರದಾ ಛಾಪಖಾನೆ, ಮಂಗಳೂರು.

# "ವ್ಯಸನಿ"

ಕತೆಗಾರ:— ಮುಳ್ಳಣ್ಣ.

ನರಸಾಪುರ ಗುತ್ತಿನ ಶಂಕರಪ್ಪ ರೈಗಳೆಂದರೆ ಹತ್ತು ಒಕ್ಕಲಿದ್ದವರು; ಹತ್ತು ಜನರಿಗೆ ಹೇಳ ತಕ್ಕವರು. ಇವರಿಗೆ ಹಿರಿಯರಲ್ಲಿ ಭಕ್ತಿ; ದೇವರಲ್ಲಿ ವಿಶ್ವಾಸ; ಬಡವರಲ್ಲಿ ದಯೆ; ಇವರನ್ನು ಎಲ್ಲರೂ ಬಲ್ಲರು. ಆದರೆ ಇವರ ಪ್ರಸಿದ್ಧಿಗೆ ಇವಿಷ್ಟೇ ಕಾರಣಗಳಲ್ಲ ನಮ್ಮದು ಮಲೆನಾಡು. ರೈತರ ಉದ್ಯಮಕ್ಕೆ ಕಾಡುಜಂತುಗಳ ಕಾಟ ಬಹಳ. ಬಿತ್ತಿದ ಬೆಳೆ ಕೈಸೇರಬೇಕಾದರೆ ಬಿಟ್ಟ ನಡ ಮನೆಸೇರಬೇಕಾದರೆ ಅಲ್ಲಿಯವರಿಗೆ ರೈಗಳ ಸಹಾಯವು ಬೇಕಾಗಿತ್ತು. ಕಾಡು ಜಂತುಗಳ ಕಾಟ ಹೆಚ್ಚಾದೊಡನೆ ರೈಗಳಿಗೆ ಬಂದು ಮೊರೆಯಿಡುತ್ತಿದ್ದರು ಇವರೊಮ್ಮೆ ಮೃಗಯಾವಿಹಾರಕ್ಕೆ ಹೋದರೆ ಸಾಕು; ರೈತರು ಕೆಲವು ಕಾಲ ನಿಶ್ಚಿಂತೆಯಿಂದ ಬಾಳುವಂತಾಗುತ್ತಿತ್ತು.

ಶಂಕರಪ್ಪರೈಗಳಿಗೆ ತಿಮ್ಮಣ್ಣ ಭಟ್ಟರೆಂಬವರೊಬ್ಬರು ಜೀವದ ಗೆಳೆಯರು. ಅವರಿಲ್ಲದೆ ಇವರಿಗೆ ಯಾವ ಕೆಲಸವೂ ಇಲ್ಲ ಮನೆಯಲ್ಲಿ ಮಗು ಹುಟ್ಟಿದರೆ ಹೆಸರಿಡಲು ಭಟ್ಟರನ್ನು ಕೇಳಬೇಕು; ಬೆಳೆ ಕೊಯಿಲಿಗೆ ಬಂದರೆ ಕೊಯ್ಯಲು ಭಟ್ಟರು ಹೇಳಬೇಕು, ಬೇಟೆಗೆ ಹೊರಡಬೇಕಾದರೆ ಭಟ್ಟರು ತಾರಾಬಲ ನೋಡಿ ಹೇಳಬೇಕು, ಬೇಟೆಗೆ ಹೋಗುವಾಗ ಮೃಗಾವಲಿಗೆ ಭಟ್ಟರು ಬೇಕು: ಅಲ್ಲಿ ತೋರಿಸಿದ ಪೌರುಷವನ್ನು ರೈಗಳು ತಾವು ವರ್ಣಿಸುವಾಗ ಕೇಳಲು ಭಟ್ಟರು ಬೇಕು, ಅದಕ್ಕೆ ಇದಕ್ಕೆ ಎಂದಿಲ್ಲ ಎಲ್ಲಾ ವಿಷಯಕ್ಕು ಭಟ್ಟರು ಬೇಕು ಭಟ್ಟರಿಗೂ ಹಾಗೆ, ಯಾವುದಾದರೊಂದು ಸ್ವಂತ ಉದ್ಯೋಗವಾಗಲಿ, ವಿಶೇಷ ಜಮೀನಾಗಲಿ ಇಲ್ಲದಿದ್ದುದರಿಂದ ಕುಟುಂಬ ಪೋಷಣೆಗೆ ರೈಗಳ ಆಶ್ರಯವು ಬೇಕಾಗಿತ್ತು ಅವರಿಬ್ಬರ ಮೈತ್ರಿಯು ಈ ರೀತಿಯಿಂದ ಸಾಗುತಿತ್ತು

ಒಂದು ದಿನ ರೈಗಳು ತಮ್ಮ ಕೋವಿ, ಕತ್ತಿ, ಈಟಿಗಳೇ ಮೊದಲಾದ ಬೇಟೆಯ ಸಾಮಗ್ರಿಗಳನ್ನು ಉಜ್ಜುತ್ತಾ ಏನೋ ತಮ್ಮ ಪೂರ್ವದ ಪೌರುಷವನ್ನು ಭಟ್ಟರಿಗೆ ವರ್ಣಿಸುತ್ತಿದ್ದಾರೆ. ಭಟ್ಟರು ಶ್ರೋತೃಗಳಾಗಿ ಕೇಳುತ್ತಿದ್ದಾರೆ ರೈಗಳ ಎಡಬಲಗಳಲ್ಲಿ ಬೇಟೆಯ ನಾಯಿಗಳೆರಡು ನಾಲಗೆ ಹೊರಚಾಚಿ ಸೇರುತ್ತ ಮಲಗಿಕೊಂಡಿವೆ ಆಗ ಹಣ್ಣು ಮುದುಕನೊಬ್ಬನು ಬಾಡಿದ ಮುಖದಿಂದ ರೈಗಳೆಡೆಗೆ ಬಂದು "ಧನಿಗಳೇ! ನಮಗೆ ಕಾಡಿನವರ ಕಾಟದಿಂದ ಉಳಿಗಾಲವಿಲ್ಲ ತಮ್ಮ ಸೇವೆ ಮಾಡಿ ಗಂಜಿ ಕುಡಿದುಕೊಂಡಿದ್ದೆ ನನಗಿದ್ದುದು ಬಂಗಾರದಂತಹ ಎರಡೆತ್ತುಗಳು, ಅವೇ ನನ್ನ ಸರ್ವಸ್ವವಾಗಿತ್ತು ನಿನ್ನೆ ಅವುಗಳಲ್ಲೊಂದನ್ನು ಆ ಮಾರಿಯು ಆಹುತಿಗೊಂಡಿತು ಹೋದ್ದು ಹೋಯಿತು ಇನ್ನಾದರೂ ಅದರ ಭಯವಿಲ್ಲದಂತೆ ತಮ್ಮಿಂದಾಗಬೇಕು ಅದಕ್ಕಾಗಿ ತಮ್ಮೆಡೆಗೆ ಬಂದಿದ್ದೇನೆ" ಎಂದು ದೈನ್ಯದಿಂದ ಬೇಡಿಕೊಂಡನು.

ರೈಗಳಿಗೆ ಬೇಟೆಯಲ್ಲಿ ಬಹಳ ಆದರ ಬೇಟೆಗಾಗಿ ಅವರಿಗೆ ಯಾರ ಕರೆ ನೆರವುಗಳೂ ಬೇಡ. ತಾವೇ ಹೋಗತಕ್ಕವರು ಎಂದ ಮೇಲೆ ತನ್ನ ಬಡ ಒಕ್ಕಲಿಗನೊಬ್ಬನು ಹೀಗೆ ಪ್ರಾರ್ಥಿಸುವಾಗ ಒಲ್ಲೆನೆಂದು ಹೇಳುವರೇ? ಯಾವ ನೆಪವನ್ನೂ ಹೇಳದೆ, ಯಾವ ವಿಚಾರವನ್ನೂ ಮಾಡದೆ ಅವನ ಹಿಂದೆಯೇ ಭಟ್ಟರನ್ನು ಕೂಡಿಕೊಂಡು ಹೊರಟೇ ಬಿಟ್ಟರು ರೈಗಳು ಬೇಟೆಗೆ ಬರುತ್ತಾರೆಂದು ಊರೆಲ್ಲ ವಾರ್ತೆ ಹಬ್ಬಿತು. ಅವರು ಒಕ್ಕಲಿನ ಮನೆ ಸೇರುವುದರೊಳಗಾಗಿ ಎಷ್ಟೋ ತರುಣ ಉತ್ಸಾಹಿಗಳು ಬೇಟೆಗೆ ಹೋಗುವುದಕ್ಕೆ ಅಲ್ಲಿ ನೆರೆದಿದ್ದರು. ಇವರನ್ನು ಕೂಡಿಕೊಂಡು ರೈಗಳು ಕಾಡಿಗೆ ಪ್ರವೇಶಿಸಿದರು. ಮುಂದುಮುಂದಕ್ಕೆ ನಡೆಯುತ್ತಿದ್ದಂತೆ ಅವರಿಗೆ ತಮ್ಮಿಂದ ಸುಮಾರು ಹತ್ತು ಮಾರು ದೂರದಲ್ಲಿ ಹದ್ದು ಕಾಗೆಗಳ ಹಾರಾಟವು ಕಾಣಿಸಿತು, ತಟ್ಟನೆ ಆ ಕಡೆ ನಡೆದರು. ನೋಡುವುದೇನು? ಅಲ್ಲಲ್ಲಿ ಕ್ಷತವಾದ, ಮೂಗು ಬಾಯಲ್ಲಿ ರಕ್ತ ಹೊರಟ, ಬಿಟ್ಟ ಕಣ್ಣುಳ್ಳ ಎತ್ತಿನ ಶವವೊಂದು ಬಿದ್ದಿದೆ. ರೈಗಳು ಹತ್ತಿರ ಹೋಗಿ ಅದನ್ನು ಪರೀಕ್ಷಿಸಿ ನೋಡಿದರು ಒಡನೆ ಅವರ ಮುಖದಲ್ಲಿ ಉಲ್ಲಾಸವು ಇಮ್ಮಡಿಯಾಯಿತು. ಅಷ್ಟರಲ್ಲಿ ರೈಗಳ ನಾಯಿಗಳು ಕಾಡಿನಲ್ಲಿ ಸ್ವಲ್ಪ ಮುಂದಕ್ಕೆ ಹೋಗಿದ್ದು, ಅಲ್ಲಿ ಕಾಲ್ಕೆದರಿ ಬೊಗಳುತ್ತಿದ್ದುವು. ಇದರಿಂದ ರೈಗಳ ಊಹೆಗೆ ಇನ್ನಷ್ಟು ಪುಷ್ಟಿ ದೊರೆಯಿತು. ಅನುಯಾಯಿಗಳಿಗೆ "ಹುಲಿಯು ಇಲ್ಲೇ ಇದೆ, ನಿಮ್ಮಲ್ಲಿ ಇಂತಿಂಥವರು ಇಂತಹ ಸ್ಥಳದಲ್ಲಿ ನಿಲ್ಲಬೇಕು. ಇಂತಿಂಥವರು ಕಾಡಿನೊಳಗೆ ನುಗ್ಗಬೇಕು" ಎಂದು ಆಜ್ಞಾಪಿಸಿದರು. ತಾವೂ ಕಾಡಿನ ಒಂದು ಪಕ್ಕದಲ್ಲಿ ಕೋವಿಯನ್ನು ಹಿಡಿದು ನಿಂತರು ಇನ್ನೊಂದು ಪಕ್ಕದಿಂದ ಇವರಿಗಭಿಮುಖವಾಗಿ ಕಾಡಿಗೆ ನುಗ್ಗಿದ ಉತ್ಸಾಹಿಗಳು ಕಾಡನ್ನೇ ಬಾಚಿ ಮುಷ್ಟಿಯೊಳಡಗಿಸಿಕೊಂಡು ರೈಗಳೆಡೆಗೆ ಬರುತ್ತಾರೋ ಎಂಬಂತೆ ಕೋಲಾಹಲವನ್ನೆಬ್ಬಿಸಿಕೊಂಡು ಬರುತ್ತಿದ್ದರು ಇವರು ಕಾಡಿನ ಮಧ್ಯಕ್ಕೆ ಬಂದು ಸೇರಿದರು ಅಲ್ಲಿ ಒಂದು ದೊಡ್ಡ ಬಂಡೆ, ಅದಕ್ಕೆ ತಾಗಿ ಇನ್ನೂ ಕೆಲವು ಬಂಡೆಗಳು, ಸುತ್ತಲೂ ಪೊದೆಗಳು, ಒಂದೆಡೆ ಒಂದು ಮರ, ಮರಕ್ಕೆ ತಾಗಿ ಹುಲಿಯು ಮಲಗಿತ್ತು ಜಗಿರ ಬೊಬ್ಬೆಯನ್ನು ಕೇಳಿದೊಡನೆ ಗುಡುಗಿನಂತೆ ಒಮ್ಮೆ ಗರ್ಜಿಸಿ ಕಲ್ಲಸಂದಿನೊಳಕ್ಕೆ ನುಸುಳಿತು ಕಾಡಿನ ಮಧ್ಯದಿಂದ ಹುಲಿಯೋ ಹುಲಿಯೆಂಬ ಮಹತ್ತಾದ ಬೊಬ್ಬೆ. ರೈಗಳು ಸುಸಜ್ಜಿತರಾಗಿ ನಿಂತರು ಆದರೆ ಹುಲಿಯಿಲ್ಲ ಜನರ ಸದ್ದೂ ಇಲ್ಲ ಸ್ವಲ್ಪ ಹೊತ್ತಿನಲ್ಲಿ ಹುಲಿಯು ಗವಿಗೆ ಸೇರಿದೆಯೆಂದು ರೈಗಳಿಗೆ ತಿಳಿಯಿತು ಕೂಡಲೆ ಆ ಕಡೆಗೆ ಧಾವಿಸಿದರು ಗವಿಯ ಬಾಗಿಲಿಗೆ ಬೆಂಕಿಯೊಡ್ಡಲು ತನ್ನವರಿಗೆ ಆಜ್ಞಾಪಿಸಿದರು ಸ್ವಲ್ಪ ಹೊತ್ತಿನಲ್ಲಿ ಕಾಡಿನ ಮತ್ತೊಂದು ಪಕ್ಕದಿಂದ ತಿರುಗಿ ಹುಲಿಯೋ ಹುಲಿ, ಎಂಬ ಬೊಬ್ಬೆಯು ಕೇಳಿಸಿತು ಇವರು ಬೆಂಕಿಯೊಟ್ಟಿದೊಡನೆ ಗವಿಯ ಇನ್ನೊಂದು ಬಾಗಿಲಿಂದ ಹುಲಿಯು ಹೊರಟಿತ್ತು ಬೊಬ್ಬಿಟ್ಟವರನ್ನು ವಿಚಾರಿಸಿದಾಗ ಹುಲಿಯು ನೆಟ್ಟಗೆ ಇನ್ನೊಂದು ಕಾಡಿಗೆ ಓಡಿತೆಂದು ತಿಳಿಯಿತು ಹುಲಿಯನ್ನು ಕಣ್ಣಾರೆ ಕಂಡ ಹಲವರಿಗೆ ಬೇಟೆಯ ಉತ್ಸಾಹವೆಲ್ಲ ಕುಗ್ಗಿತು ಆದರೂ ರೈಗಳ ಮಾತಿಗೆ ಪ್ರತಿ ಹೇಳಲಾರದೆ ಎರಡನೆಯ ಕಾಡಿಗೂ ಮುತ್ತಿಗೆ ಹಾಕಿದರು, ಹುಲಿಯು ಹೊರಹೊರಡಬಹುದಾದ ದಾರಿಗಳಲ್ಲಿ ಹಲವರು ಆಯುಧಪಾಣಿಗಳಾಗಿ ನಿಂತರು ಹಲವರು ಕಾಡಿನೊಳ ಹೊಕ್ಕು ಕೋಲಾಹಲವೆಬ್ಬಿಸಿದರು ರೈಗಳು ಹುಲಿಯು ಯಾವಾಗ ಹೊರಡುತ್ತದೆಂದು ಹೊಂಚುಹಾಕುತ್ತಿದ್ದರು ಅಷ್ಟರಲ್ಲಿ ತಾವು ನಿಂತಲ್ಲಿಂದ ಐದಾರು ಮಾರು ದೂರದಲ್ಲಿ, ಮುದುರಿ ಮಲಗಿದ ಹುಲಿಯ ತಲೆಯಂತೆ ಪೊದೆಯ ಮರೆಯಲ್ಲಿ ಅದೇನೋ ಹೊಳೆಯಿತು ಹುಲಿಯೋ ಹೆದರಿ ಅಡಗಿ ಕುಳಿತುದು, ಹೊಡೆಯುವುದಕ್ಕೆ ಇದೇ ತಕ್ಕ ಸಮಯವೆಂದು ಗುಂಡುಹೊಡೆದೇ ಬಿಟ್ಟರು ಗುಂಡು ಹೋಗಿ ತಾಗಿದುದೇ ತಡ ಸಂಕೂ! ಎಂಬ ತಮ್ಮ ಪ್ರಿಯ ತಿಮ್ಮಣ್ಣಭಟ್ಟರ ಆರ್ತಧ್ವನಿ ಕೇಳಿಸಿತು ರೈಗಳ ಜೀವವೇ ಹಾರಿತು ಒಂದೇ ಉಸುರಿಗೆ ಅಲ್ಲಿಗೆ ನೆಗೆದರು ಏನು ಹೇಳುವುದು! ಭಟ್ಟರು ಭೂಮಿಯ ಮೇಲೊರಗಿ ಬಿಟ್ಟಿದ್ದರು ತಲೆಯಿಂದ ರಕ್ತವು ಧಾರೆಯಾಗಿ ಸುರಿಯುತ್ತಿತ್ತು ರೈಗಳಿಗೆ ಕಣ್ಣೇ ಕಾಣದು ಹೃದಯವು ಅದುರಿತು; ಕಾಲು ಕುಸಿಯಿತು; ಕುಳಿತುಬಿಟ್ಟರು ಭಟ್ಟರ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡರು. ಕಣ್ಣೀರಿಂದ ತೋಯಿಸಿದರು

ಸ್ವಲ್ಪ ಹೊತ್ತಿನಲ್ಲಿ ಅಲ್ಲಲ್ಲಿದ್ದವರು ಆ ಕಡೆಗೆ ಒಟ್ಟಾಗಿ ಬಂದು ಸೇರಿದರು. ಹುಲಿಯು ಗುಂಡು ತಾಗಿ ಬಿದ್ದಿರಬಹುದೆಂದು ಅವರ ಯೋಚನೆಯಿತ್ತು. ಆದರೆ ಅಲ್ಲಿ ಹುಲಿಯಿಲ್ಲ ರೈಗಳು ತಮ್ಮ ಜೀವದ ಗೆಳೆಯರಾದ ಭಟ್ಟರ ಮೃತದೇಹವನ್ನು ಹೃದಯಕ್ಕೆತ್ತಿಕೊಂಡು ಅಳುತ್ತಿದ್ದುದನ್ನು ಕಂಡರು. ಭಟ್ಟರ ತಲೆಯಿಂದೊಕ್ಕ ನೆತ್ತರಿಂದ ರೈಗಳ ದೇಹವು ಒದ್ದೆಯಾಗಿತ್ತು. ಬಂದವರೆಲ್ಲಾ ಕಳವಳದಿಂದಲೂ ವಿಸ್ಮಯದಿಂದಲೂ ಸ್ತಬ್ಧರಾಗಿ ನಿಂತರು ಆಗ ರೈಗಳು "ನೋಡಿದಿರಾ! ನನ್ನ ಕಣ್ಣು ಕುರುಡಾದುದರಿಂದ ಆದ ಅನಾಹುತವನ್ನು? ಇವರು ತಲೆಗೆ ಎಲವಸ್ತ್ರ ಸುತ್ತಿದ್ದುದರಿಂದ ಹುಲಿಯೆಂದೇ ಭಾವಿಸಿದೆ ಹಾ! ಹಾ! ನನ್ನ ಮನಸ್ಸಿಗೆ ಒಂದಿಷ್ಟು ತಾಳ್ಮೆಯಿರಬಹುದಿತ್ತೆ? ವಿಧಿಯು ಈ ರೀತಿ ನನ್ನನ್ನು ವಿವೇಕ ಶೂನ್ಯನನ್ನಾಗಿ ಮಾಡಬೇಕೆ? ವಿಚಾರವಿಲ್ಲದ ಈ ಕೈಗಳನ್ನು ಕೊಡುವ ವಿಧಿಯೂ ವಿಚಾರಹೀನನೆ? ಇನ್ನು ಏನು ಹೇಳಿದರೇನು? ನನ್ನ ಗೆಳೆಯನಿಗೆ ನಾನೇ ಮೃತ್ಯುವಾದೆನಲ್ಲಾ! ನಾನೇ ಗೆಳೆಯನನ್ನು ಕೊಂದ ದೋಷವನ್ನು, ಬ್ರಹ್ಮಹತ್ಯಾಪಾತಕವನ್ನು, ಆ ಹಿರಿಯರು ಕೊಡಬಹುದಾದ ಶಾಪವನ್ನು, ನಾನು ಹೇಗೆ ತಾನೇ ಕಳೆಯಲಿ? ಪೂರ್ವಜರ ಮಾತು ಎಂದೆಂದಿಗೂ ಸುಳ್ಳಾಗದು ಅವರು ಪುರಾಣಗಳಲ್ಲಿ ದುರ್ವ್ಯಸನವು ಮನುಷ್ಯನಿಗೆ ಎಂದೆಂದೂ ಶ್ರೇಯಸ್ಸನ್ನುಂಟು ಮಾಡಲಾರದೆಂದು ಸಾವಿರ ಬಾರಿ ಸಾರಿದರು—ಶ್ರೀರಾಮ, ಹರಿಶ್ಚಂದ್ರ, ನಳ, ಯುಧಿಷ್ಠಿರಾದಿಗಳ ಕಥೆಯನ್ನು ಸಾವಿರ ಬಾರಿ ನಾನು ಕೇಳಿದ್ದೆನು ಆದರೇನು ಫಲ? ಅವನ್ನು ಒಂದಿಷ್ಟಾದರೂ ಮನಸ್ಸಿಗೆ ತಂದುಕೊಂಡಿದ್ದರೆ ನಾನು ಮೃಗಯಾ ವ್ಯಸನಕ್ಕೆ ಬಲಿಯಾಗುತ್ತಿದ್ದೆನೇ? ನನ್ನಿಂದ ಈ ಅನರ್ಥಗಳು ಘಟಿಸುತ್ತಿದ್ದುವೇ? ಇಲ್ಲಿ ಎಂದೂ ಇಲ್ಲ ಒಮ್ಮೆ ನೋಡಿರಿ ಜೀವವಿದೆಯೇ? ಸ್ವಲ್ಪ ನೀರು ಹಾಕಿದರೆ ಎಚ್ಚರವಾದೀತೆ? ಒಮ್ಮೆ ಒ ದಿಷ್ಟು ನೀರ ತರ ಬಿರಿ? [illegible] ಎಂದು ಕಣ್ಣೀರು ಸುರಿಸಿದರು. ಅಲ್ಲಿದ್ದವರು ಬೇಕಾದ ಶೈತ್ಯೋಪಚಾರವನ್ನು ಮಾಡಿ ನೋಡಿದರು ಆದರೆ ಪ್ರಯೋಜನವಿಲ್ಲ ರೈಗಳಿಗೆ ಏನುಮಾಡಬೇಕೆಂದು ತೋರದು. ಕಣ್ಣೀರಿಡುವುದೊಂದೇ ಅವರ ಕೆಲಸವಾಯಿತು ಉಳಿದವರು ಅವರನ್ನು ಹಾಗೂ ಹೀಗೂ ಸಂತಯಿಸಿದರು ಭಟ್ಟರ ಮೃತದೇಹವನ್ನು ಸಾಗಿಸಿಕೊಂಡು ನೆಟ್ಟಗೆ ಭಟ್ಟರ ಮನೆಗೇ ಬಂದರು

ತಿಮ್ಮಣ್ಣ ಭಟ್ಟರಿಗೆ ಒಬ್ಬಳು ಹೆಂಡತಿಯೂ ವೃದ್ಧರಾದ ತಂದೆತಾಯಿಗಳೂ ಇದ್ದರು ಆ ತಂದೆ ತಾಯಿಗಳಿಗೆ ಮಗನು ಬೇಟೆಗೆ ಹೋದ ಸಂಗತಿಯು ಗೊತ್ತಿರಲಿಲ್ಲ ಅವರು ಎಂದಿನಂತೆ ರೈಗಳ ಮನೆಯಲ್ಲೇ ಇರಬಹುದೆಂದು ತಿಳಿದಿದ್ದರು ಸಂಜೆಯ ಹೊತ್ತು ಮುದುಕರು ಜಗಲಿಯ ಮೇಲೆ ಕುಳಿತುಕೊಂಡು ಮಗನಿಗೆ ಇನ್ನು ನಿಂತಿರುವ ಸಾವು ಕಣ್ಣು ಮುಚ್ಚುವುದರೊಳಗಾದರೂ ಭಗವಂತನು ಕಣ್ಣು ತೆರೆದಿದ್ದರೆ ಆಗ ತೃಪ್ತಿ, ಎಂದು ಏನೇನೋ ಮಾತಾಡುತ್ತಿದ್ದರು ಅಷ್ಟರಲ್ಲಿ ರೈಗಳು ಉಳಿದವರೂ ಭಟ್ಟರ ಶವವನ್ನು ಹೊತ್ತುಕೊಂಡು ಬಂದು ಜಗಲಿಯ ಮೇಲೆ ಮಲಗಿಸಿದರು. ಆ ಮೇಲೆ ರೈಗಳು ಆ ಮುದುಕರ ಕಾಲಿಗೆ ಸಾಷ್ಟಾಂಗವೆರಗಿ ಈ ಪಾಪಿಯನ್ನು ಕ್ಷಮಿಸಿ ಉದ್ಧಾರಮಾಡಬೇಕೆಂದು ಅಳುತ್ತಾ ಬೇಡಿಕೊಂಡರು ಮುಪ್ಪಿನಲ್ಲಿ ಊರುಗೋಲಿನಂತಿದ್ದ, ತಮ್ಮ ಕುಲದಭಿವೃದ್ಧಿಯು ಕಾದಿಯಂತಿದ್ದ, ಒಬ್ಬನೇ ಒಬ್ಬನಾದ ಮಗನು ಮಡಿದನೆಂದು ತಿಳಿದೊಡನೆ, ಆ ಮುದುಕರಿಬ್ಬರೂ ಮೂರ್ಛಿತರಾದರು ನೆರೆದವರೆಲ್ಲಾ ಬೇಕಾದ ಸಮಾಧಾನವನ್ನು ಹೇಳಿದರು ರೈಗಳು "ನಿಮಗೆ ಯಾವುದೊಂದು ವಿಧದಲ್ಲಿಯೂ ಕುಂದು ಬಾರದಂತೆ ನೋಡಿಕೊಳ್ಳುವೆನು ನನ್ನ ಸಂಪೂರ್ಣ ಸಂಪತ್ತೂ ನಿಮಗೆ ಅರ್ಪಿಸುವೆನು ಈ ದೇಹವನ್ನು ನಿಮ್ಮ ಸೇವೆಗೊಪ್ಪಿಸುವೆನು ಖೇದವನ್ನು ಬಿಟ್ಟು ನನ್ನನ್ನು ಉದ್ಧರಿಸಬೇಕು" ಎಂದು ಬೇಡಿಕೊಂಡರು ಏನು ಹೇಳಿದರೂ ಅವರ ದುಃಖವು ಶಾಂತವಾಗಲಿಲ್ಲ. ಊಟವಿಲ್ಲದೆ ನಿದ್ರೆಯಿಲ್ಲದೆ ಕೆಲವೇ ದಿನಗಳಲಿ ಸ್ವರ್ಗಸ್ಥರಾದರು ರೈಗಳು ಭಟ್ಟರ ಮತ್ತು ಅವರ ತಂದೆತಾಯಿಗಳ ಉತ್ತರಕ್ರಿಯೆಗಳೆಲ್ಲಾ ಸಾಂಗವಾಗಿ ನೆರವೇರುವಂತೆ ಮಾಡಿಸಿದರು

ಬಳಿಕ ದಿಕ್ಕಿಲ್ಲದ ಭಟ್ಟರ ವಿಧವೆಯು ತನ್ನ ತವರುಮನೆಗೆ ನಡೆದಳು ಆದರೆ ರೈಗಳು ಆಕೆಗೆ ಜೀವನಕ್ಕೆ ಬೇಕಾದಷ್ಟನ್ನು ಸಾಯುವವರೆಗೆ ದೊರೆಯುವಂತೆ ಮಾಡಿದರು ಆದರೂ ರೈಗಳ ಹೃದಯಕ್ಕೆ ಶಾಂತಿಯಿಲ್ಲ ನಿರಪರಾಧಿಗಳಾದ ಆ ಭಟ್ಟರನ್ನೂ ಅವರ ಮಾತಾಪಿತೃಗಳನ್ನೂ ಕೊಂದು ಬ್ರಹ್ಮಹತ್ಯಾದೋಷವನ್ನು ತಂದುಕೊಂಡೆನಲ್ಲಾ, ಇದೂ ಅಲ್ಲದೆ ಒಂದು ಕುಲವಿನಾಶಕ್ಕೇ ಕಾರಣನಾಗಿ ಕುಲಘಾತುಕನಾದೆನಲ್ಲಾ, ಎಂಬ ವ್ಯಸನವು ಅವರ ಹೃದಯವನ್ನು ಎಡೆಬಿಡದೆ ಬಾಧಿಸುತ್ತಿತ್ತು ಕೊನೆಗೆ ಅವರ ವಿನಾಶಕ್ಕೆ ಈ ವ್ಯಸನವೇ ನಿಮಿತ್ತವಾಯಿತು ವ್ಯಸನಿಗಳು ವ್ಯಸನಿಗಳಾಗಿಯೇ ಇಹಲೋಕವನ್ನು ಬಿಡಬೇಕಾಯಿತು

---

**ಹುರಿಗಜ್ಜಿ, ಬೆವರಸಾಲೆ ಮತ್ತು ಹುಣ್ಣುಗಳನ್ನು ವಾಸಮಾಡಿರಿ.**

**ವನಸ್ಪತಿಗಳಿಂದ ಕೂಡಿದ ಸಾಂಬಕ್ ಮುಲಾಮನ್ನು ಉಪಯೋಗಿಸಿರಿ.**

ನಿಮಗೆ ಹುರಿಗಜ್ಜಿ, ಬೆವರಸಾಲೆ, ಅಥವಾ ಇನ್ನು ಇತರ ಪೀಡಿಸುವ ಚರ್ಮ ವ್ಯಾಧಿಗಳು ಇದ್ದಲ್ಲಿ, ವನಸ್ಪತಿಗಳಿಂದ ಕೂಡಿದ ಸಾಂಬಕ್ ಮುಲಾಮನ್ನು ಪ್ರತಿ ದಿವಸ ತಿಕ್ಕಿ ನಿಮ್ಮ ಚರ್ಮವನ್ನು ನಿರ್ಮಲ ಮತ್ತು ಆರೋಗ್ಯಕರವನ್ನಾಗಿ ಮಾಡಿರಿ ಸಾಂಬಕ್ ಚರ್ಮದ ಒಳಗೆ ಕ್ರಿಮೀ ಸೇರಿ ವ್ಯಾಧಿಗಳನ್ನು ಉಂಟಾಗದಂತೆ [illegible] ಮಾಡುವುದು ಆದು ನೋವನ್ನು ಶಾಂತಪಡಿಸುವುದು [illegible] ಕ್ರಿಮಿಗಳನ್ನು ನಾಶಪಡಿಸುವುದು, ಮತ್ತು ಚರ್ಮವನ್ನು ರೋಗಗಳಿಂದ ರಕ್ಷಿಸುವುದು ಸಾಂಬಕ್‌ನಂತಹ ಬೇರೆ ಇನ್ನೊಂದು ಔಷಧಿಯು ಇಲ್ಲ.

ಕ್ರಯ ರೂ. 1—0—0.

ಎಲ್ಲಾ ದವಾಖಾನೆಗಳಲ್ಲಿ ದೊರಕುವುದು

**ಇದರಲ್ಲಿ ತೊಬ್ಬಿನ ಮಿಶ್ರವಿಲ್ಲ.**

**ಸಾಂಬಕ್**

**Zam Buk**

## ಎಬಿಸೀನಿಯಾ ಯುದ್ಧದ ಮೇಲೆ ಶ್ರೀ ಸುಭಾಷ್ಚಂದ್ರ ಬೋಸರ ಅಭಿಪ್ರಾಯ.

"ಇಷ್ಟರವರೆಗೆ ನಡೆದ ಘಟನೆಗಳನ್ನು ಪರಿಶೀಲಿಸಿದರೆ, [illegible] ಪ್ರಕರಣಕ್ಕೆ ಒದಗಿರುವ ಈ [illegible] ವಿರಿಸಿ [illegible] ಪ್ರಯತ್ನಿಸಿದರೆ, [illegible] ಶಾಂತಿ ಕ್ಷಣಿಕ ಅವಸ್ಥೆಯಲ್ಲಿ ಇದೆ ಎಂದು ಹೇಳಿದರೆ ಅತಿಶಯೋಕ್ತಿಯಾಗದು ಈ ಸಂದರ್ಭದಲ್ಲಿ ಬ್ರಿಟಿಷರು ಮತ್ತು ಫ್ರೆಂಚರು ಇವರಿಗೆ ಯುದ್ಧ ಸನ್ನಾಹಗಳಲ್ಲಿ ಸಹಾಯವನ್ನು ಮಾಡದೆ ಇದ್ದಲ್ಲಿ ಎಬಿಸೀನಿಯನರ ಮುಕ್ತಿಯು ಅಸಾಧ್ಯ ಆದರೆ ಈ ಎರಡೂ ಜನಾಂಗದವರು ತಮ್ಮ ಸ್ವಾರ್ಥಕಾರ್ಯಗಳಲ್ಲದೆ ಎಬಿಸೀನಿಯನರ ಜನಾಂಗದ ಅಭ್ಯುದಯ ಕಾರ್ಯಗಳಿಗೆ ಕೈಹಾಕಲಾರರು ಈಗ ತಮ್ಮ ಮೇಲೆ ಎರಬಿದಿರುವ ಇಟಲಿಯನರನ್ನು ಹೊಡೆದಟ್ಟಲು, ಬ್ರಿಟಿಷರ ಯಾ ಫ್ರೆಂಚರ ಸಹಾಯ ಹತಾಗಿ ಒಳ್ಳೆಯ ಒಡಂಬಡಬೇಕಾಗುವುದು. ಆದ್ದರಿಂದ ಬೇರೆ ಯಾವ ಹಾದಿಕಾಣದ ಎಬಿಸೀನಿಯಾದವರು ತಮ್ಮ ಸ್ವದೇಶ ರಕ್ಷಣೆಗಾಗಿ ತಂವೆ ಟೊಂಕಕಟ್ಟಿ ಹೆಣಗಾಡುತ್ತಿರುವರು"

---

**ನವರತ್ನ ದ್ರಾಕ್ಷಾಸವ,** ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1 6-0 8 ಔನ್ಸ್ ರೂ 0 14 0

**ನವರತ್ನ ಅಶೋಕಾರಿಷ್ಟ:** ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

**ಅಯೊಡ್ಯಾಸ್ಡ್ ಸರ್ಸಪರಿಲ್ಲಾ:** ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ ತೀವ್ರ ಗುಣಕಾರಿ

4 ಔನ್ಸ್ ರೂ 1—0—0 8 ಔನ್ಸ್ ರೂ 1—6 -0

ದಕ್ಷಿಣ ಕನ್ನಡದ ಏಜಂಟರು - ಪ್ರೊವಿಷ್ಯಲರ ಸ್ಟೋರ್ಸ್, ಮಂಗಳೂರು.

**BEHAR CHEMICAL WORKS,**
**Bhagalpur.**

ಬಿ. ಸಿ ರಸಾಯನಿಕ ವೈದ್ಯಶಾಲೆಯ
**ಚ್ಯವನ ಪ್ರಾಸ ಲೇಹ್ಯ**

ಮಾನವ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ, ಬುದ್ಧಿಯನ್ನು ಬೆಳೆಸುವ ಪೌಷ್ಟಿಕ ಸಾಧನ,

ಸೀತ, ನೆಗಡಿ, ಕೆಮ್ಮು ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ವಿಕಾರದ ಮೇಲೆ ಈ ದಿವ್ಯೌಷಧಿಯ ವಿಷಯವಾಗಿ ಹಳೆಯ ಋಷಿಗಳು ಇದರ ಗುಣವನ್ನು ಬಹುತೀಕವಾಗಿ ವರ್ಣಿಸಿರುವುದರಿಂದಲೂ ... ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ ಇದರಲ್ಲಿ ನಶಿಸಿದ ಸ್ನಾಯುಗಳನ್ನು ಬಲಪಡಿಸುವ ಅದ್ಭುತವಾದ ಬಲವರ್ಧಕ ಶಕ್ತಿ ಇರುವುದರಿಂದಲೂ ... ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣ ಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು.

1 ತಿಂಗಳ ಉಪಯೋಗದ ಶೀಸೆ 1ಕ್ಕೆ ರೂ 1 8-0

ಏಜೆಂಟರು — ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜ್ ಎದುರು.
ಮಂಗಳೂರು.

**New Era Technical School.**
Near Market Square, Udipi.

Commercial classes approved by the Madras Government-New session opens in June

**ನ್ಯೂ ಈರಾ ಟೆಕ್ನಿಕಲ್ ಸ್ಕೂಲ್**
ಸಂತೆಕಟ್ಟೆ, ಉಡುಪಿ
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿರುತ್ತದೆ.)
**ಇಲ್ಲಿ ಟ್ಯಾಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.**

Join our 'Special Commercial Course' as Insurance against unemployment Details may be had on application to the Manager

ನಿಮ್ಮ ಮಿತ್ರರನ್ನು
**ಸ್ವದೇಶಾಭಿಮಾನಿಯ**
ಚಂದಾದಾರರನ್ನಾಗಿ ಮಾಡಿರಿ.

## ಶಾರದಾ ಕ್ಯಾಲೆಂಡರು ಶಾರದಾ ಕ್ಯಾಲೆಂಡರು

## 12 ಸುಂದರವಾದ ಚಿತ್ರಗಳನ್ನೊಳಗೊಂಡ 1936ನೇ ಇಸವಿಯ, ಕ್ಯಾಲೆಂಡರು.

ದಶಂಬರ ತಾ. 1ರಲ್ಲಿ ವಿಕ್ರಯಕ್ಕೆ ತಯಾರಾಗುವುದು.
ಬಂದಸಾಲೆಗಳಲ್ಲಿಯೂ ಪ್ರತಿಯೊಬ್ಬರ ಮನೆಯಲ್ಲಿಯೂ
ಇಂಥ ಕ್ಯಾಲೆಂಡರು ಅತ್ಯಗತ್ಯ
ಎಲ್ಲರೂ ಕೊಂಡುಕೊಳ್ಳುವಂತೆ ಬಹಳ ಕಮ್ಮಿ ಕ್ರಯವಿಟ್ಟಿದೆ
**ಕ್ರಯ ಬರೇ ಆಣೆ 3**
**ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು**
ಸಿಗುವ ಸ್ಥಳ — ಶಾರದಾ ಛಾಪಖಾನೆ ರಥಬೀದಿ ಮಂಗಳೂರು.
ಟಪ್ಪಾಲಿನಲ್ಲಿ ಕಳುಹಿಸಬೇಕಾದರೆ, 0 4 0 ಸ್ಟಾಂಪು ರವಾನಿಸಿರಿ

ಪಿ ವಿ· ಉಪಾಧ್ಯಾಯ ಬಿ ಎ ಎಲ್ ಎಲ್, ಬಿ
ಇವರಿಂದ ಬರೆಯಲ್ಪಟ್ಟ

## "ಒಂದೇ ತಿಂಗಳಲ್ಲಿ ಇಂಗ್ಲಿಷ್"

ಎಂಬ ಇಂಗ್ಲಿಷ್ ಸುಲಭ ಸ್ವಬೋಧಿನಿಯ ಪ್ರಥಮ ಆವೃತ್ತಿಯ ಎಲ್ಲಾ ಪ್ರತಿಗಳೂ ಕಳೆದ ಒಂದೇ ವರ್ಷದೊಳಗೆ ವಿಕ್ರಯವಾಗಿ ಬಹಳ ಜನರಿಗೆ ಸಹಾಯಕವಾಗಿದೆ, ಎರಡನೇ ಆವೃತ್ತಿಯ ಪ್ರತಿಗಳು ಈಗ ಮುದ್ರಣದಲ್ಲಿವೆ ತಾ 15-10-1935ರ ವರೆಗೆ 50 ಮಾ ಚಾಸ್ತಿ ಪ್ರತಿಗಳಿಗೆ ಆರ್ಡರು ಕೊಡುವ ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ದರದ ಕಮಿಶನ್ ಕೊಡಲಾಗುವುದು. ಮಾತ್ರವಲ್ಲದೆ ಅವರ ಹೆಸರನ್ನು ಪುಸ್ತಕದಲ್ಲಿಯೂ ಕರಪತ್ರ ಜಾಹೀರಾತುಗಳಲ್ಲಿಯೂ ಕೊಡಲಾಗುವುದು

**ಕರ್ಣಾಟಕದ ಪುಸ್ತಕ ವ್ಯಾಪಾರಿಗಳು ತ್ವರೆ ಮಾಡಬೇಕು**

**ಪಂಡಿತ ಕೆ ಆದಿರಾಜಯ್ಯ, ಕಾರ್ಕಳ ದ ಕ,**

## 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

**ಧಾತುಪುಷ್ಟಿ ಲೇಹ**
(ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಪಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅಪಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

**ಬಾಲಗ್ರಹ ಗುಟಿಕೆ**

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ. 3 ಬಾಟ್ಲಿಗಳಿಗೆ ರೂ. 1-12-0.

ಅಲ್ಲದೆ ಬಾಲಗ್ರಹ ತೈಲ ಬಾಲಗ್ರಹ ದ... ದೊರೆಯುತ್ತದೆ ... ಬಾಲಗ್ರಹ ತೈಲ ... 1ಕ್ಕೆ 8 ಆಣೆ
ಬಾಲಗ್ರಹ ದ... ... 1ಕ್ಕೆ ... 1 0—

**ಮಲೇರಿಯಾ ನಿವಾರಿಣೀ**

ಮಲಬದ್ಧತೆ, ತಲೆನೋವು ... ಚಳಿ ಜ್ವರ ... ಜ್ವರ, ಗೆಡ್ಡೆ ಒಂದ ಜ್ವರ ಪುರಾಣ ಜ್ವರ ಕಫ ಜ್ವರ ..., ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟು ಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1-8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13

**ಮೇಹಕುಠಾರ**

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು. ಸೊಂಟ ನೋವು, ಮೂತ್ರ ಆಗಾಗ ಬರುವ ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ ರೂ 2—9—0 ಮಾತ್ರ.

**ಎಮ್· ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.**

ನಮ್ಮ ಔಷಧಿ ಸಿಕ್ಕುವ ಸ್ಥಳ:— ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ದಾಸ ಶ್ರೀನಿವಾಸ ಪೈ, ಪುತ್ತೂರು. ಮೆಸರ್ಸ್ ಮುಲ್ಲರ ಪಟೇಲ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ, ತಾರಾಹೌಸ್, ಗಿರಿಗಾಂವ್, ಬ್ಯಾಕ್‌ರೋಡ್ ಮುಂಬಾಯಿ ನಂ. 4. ದಿ ಪೆರ್ಮ್ಯಾಟ ಹೋಟೆಲ್, ಮಾರ್ಕೆಟ ಕಾರ್ನ್ಯ, ರಾಜ್ ಫಾರ್ಮೆಸಿ, ಸಾಗರ,

# The Canara Banking Corporation Udipi, Ltd.

**Head Office:—UDIPI, S. K** (Incorporated in British India) The BANKING' **ESTD. 1906.**

**Branches:—1. Udipi, 2. Goondapoor, 3. Car Street, Mangalore, 4. Shimoga, 5 Madras** (George Town), **6. Bunder Mangalore, 7 Mercara** (North Coorg), **& 8 Virarajendrapet** (South Coorg).

## DIPOSITS:

| 1922 | 1926 | 1930 | 1934 | 30 9 '35 |
|---|---|---|---|---|
| ರೂ 2,28,419/ | 6,48,940/ | 20,28,837/ | 24,95,829/ | **26,37,109/-** |

## SAVINGS BANK ACCOUNTS

**INTEREST allowed at 3½ %**

**Facilities** 1 Withdrawal by **CHEQUES.** 2 Production of pass books unnecessary at the time of withdrawal 3 Accounts transferred **FREE** of charge from one office to another

Regd)

# ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ

ಅಮೃತಾಂಜನ ಡಿಪೋವಿನ ಹಳೆಯ ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ಪಿಲ್ಲಿಂಗ್ ಮತ್ತು ಕ ಪೆಸಿಲು ಹಳೆ ಕಡ್ಡಿಯ ನ ಎಂಬ ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

## ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರ್ಹಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ತಿಳಿಸಬೇಕಾಗಿದೆ.

## ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು.

Telegrams PREMALATHA Bombay Phone No 6314

## The Bombay Life Assurance Company, Limited

Kochikar Brothers,

Madras Branch Secretaries and Chief Agents for Bombay City & Suburbs

**1935—OUR SILVER JUBILEE YEAR**

## ANNOUNCEMENT.

We have the pleasure to inform all our Constituents, Agents and Policyholders that we have Shifted on 30th September 1935 our Bombay Chief Agency Office from Loharchawl to "Gautam Nivas", Charni Road, Girgaum, Bombay No 4 the newly erected Building, opposite Prarthana Samaj This has been necessitated by the expansion of our business as the New Premises are very well situated and more spacious and we thus hope to render better service to our Policyholders Our Patrons & Well wishers are requested to pay a visit to the New Premises at their early convenience All correspondence and remittances should be addressed to our new Office address

Bombay, 1-10-35 KOCHIKAR BROTHERS

## ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗೋಸ್ಕರ ತಯಾರುಮಾಡಿದ ಅಮೋಘ ಔಷಧ ಇದು ಗರ್ಭಕೋಶದೊಳಗಣ ಎಲ್ಲಾ ತರದ ನಂಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಪ್ರಮಾಣದಲ್ಲಿ ನಿಲ್ಲಿಸುವುದು. ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು

## ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ

**ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ**

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲೋಪತಿಕ್ ಔಷಧಗಳೂ, ಶಾಸ್ತ್ರೋಕ್ತ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಫೌಂಟನ್ ಪೆನು ಶಾಯಿಗಳೂ ತಯಾರಾಗುತ್ತವೆ

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ –

**ವೆಂಕಟ್ರಾಯ ಅಣ್ಣಪ್ಪ ಬಾಳಿಗ— ಮೆನೆಜಿಂಗ್ ಡೈರೆಕ್ಟರ್.**

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ.

ಹೆಡ್ ಆಫೀಸು ಮತ್ತು ಕಾರಖಾನೆ –ಉಡುಪಿ, ದಕ್ಷಿಣ ಹಿಂದೂಸ್ಥಾನ.

**ವ್ಯಾಪಾರದ ಡಿಪೋಗಳು.–(1) ರಥಬೀದಿ ಮಂಗಳೂರು. (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜಟೌನ್ ಮದ್ರಾಸು (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. ೨.**

**Karnataka Chemical and Pharmaceutical Works, Ltd., Udipi. (South India)**


Edited, Printed & Published By A. S. Kamath at the Sharada Press, Car Street, Mangalore